ಮೈಸೂರ ಗೆಜೆಟ್.

ಸಂ. 39. ಸರ್ಕಾರದಿಂದ ಫಾಯಿಸ್ ಆದ್ದು. ನಂ. 11.

ಬೆಂಗಳೂರು, ಗುರುವಾರ, ಮಾರ್ಚಿ ತಾ|| 17, ಸೇ 1904.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಇಂಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ಇಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸ್‌ಗಳು.

3ನೆ ಭಾಗ—ಲೆಜಿಸಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದಪತ್ರಗಳು—ಇಲ್ಲಾ.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 11ನೆ ಮಾರ್ಚಿ 1904.

ನಂ. ಜ. 4502, ಮೊದಲನೆ ಕೌನ್ಸಿಲರ್ ವ ರೆವಿನ್ಯೂ ಕಮ್ಮಿಷನರಾದ ಮ|| ವಿ. ಪಿ. ಮಾಧವರಾವ್, ಸಿ. ಐ. ಇ., ಯವರು ಕೆಲಸದಿಂದ ನಿವೃತ್ತರಾಗುವದಕ್ಕೆ ಅಪ್ಪಣೆ ಕೊಡಲ್ಪಟ್ಟಿರುತ್ತಾರಾಗಿ, ಮ|| ಸಿ. ಶ್ರೀನಿವಾಸಯ್ಯಂಗಾರ್ ಯವರನ್ನು ಮೊದಲನೇ ಕೌನ್ಸಿಲರಾಗಿಯೂ ಮತ್ತು ರಾವ್ ಬಹದೂರ್ ಮ|| ಸಿ. ಮಾದಯ್ಯನವರನ್ನು ಎರಡನೇ ಕೌನ್ಸಿಲರಾಗಿಯೂ ಶ್ರೀಮನ್ ಮಹಾರಾಜರವರು ಮೊಕರರ್ ಮಾಡಿರುವದಲ್ಲದೆ ಸದರೀ ಯವರು 1905ನೆ ಆಗಸ್ಟ್ ವರಿವಿಗೆ ಯಾ ಶ್ರೀಮನ್ ಮಹಾರಾಜರವರು ಅಪ್ಪಣೆ ಕೊಡುವ ಪರಿಯಂತ ಕೆಲಸ ನೋಡತಕ್ಕದ್ದೆಂದು ಅಪ್ಪಣೆ ಕೊಡುತ್ತಾರೆ.

ತಾರೀಖು 12ನೆ ಮಾರ್ಚಿ 1904.

ನಂ. ಜ. 4503, ಮೈಸೂರ ಶೀಮೆಯ ಮೊದಲನೇ ಕೌನ್ಸಿಲರ್ ವ ರೆವಿನ್ಯೂ ಕಮ್ಮಿಷನರಾದ ಮ|| ವಿ. ಪಿ. ಮಾಧವರಾವ್, ಸಿ. ಐ. ಇ., ಯವರಿಗೆ ಅವರು ಕೆಲಸದಿಂದ ನಿವೃತ್ತರಾಗುವದಕ್ಕೆ ತತ್ಪೂರ್ವ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 12ನೆ ಮಾರ್ಚಿ 1904.

ನಂ. 4549, ಕೌನ್ಸಿಲಿನ ಮೆಂಬರ್ ಮತ್ತು ರೆವಿನ್ಯೂ ಕಮ್ಮಿಷನರಾದ ಮ|| ವಿ. ಪಿ. ಮಾಧವರಾವ್, ಸಿ. ಐ. ಇ., ಯವರ ರಾಜೀನಾಮೆಯನ್ನು ವಿಷಾದದೊಡನೆ ಅಂಗೀಕರಿಸುವುದರಲ್ಲಿ ಸುಮಾರು ಮೂವತ್ತನಾಲ್ಕು ವರ್ಷಗಳಷ್ಟು ದೀರ್ಘಕಾಲ ಅವರು ಮಾಡಿದ ನೌಕರಿಗಳ ಮತ್ತು ಆ ಪೈಕಿ ಕಡೆಯ ಆರು ವರ್ಷಗಳಲ್ಲಿ ಅವರು ಕೌನ್ಸಿಲಿನ ಮೆಂಬರಾಗಿದ್ದಾಗ ಅವರ ವಿಶೇಷ ತಿಳುವಳಿಕೆ ಮತ್ತು ಬಹಳ ಅನುಭವಗಳಿಂದ ಉಂಟಾದ ಅಮೂಲ್ಯವಾದ ಸಹಾಯದ ಗುಣಗ್ರಹಣವನ್ನು ಶ್ರೀಮನ್ ಮಹಾರಾಜರವರು ಲೇಖಿಸಿ ಇಡಲು ಅಪೇಕ್ಷಿಸುತ್ತಾರೆ.

ತಾರೀಖು 7ನೆ ಮಾರ್ಚಿ 1904.

ನಂ. ಲೋ. ಜೋ. ಪಿ. 1203, ಶಿವಮೊಗ್ಗ ಮತ್ತು ಚಿತ್ರದುರ್ಗದ ಡಿಸ್ಟ್ರಿಕ್ಟುಗಳಲ್ಲಿರುವ ಇದರಡೀ ಕಂಡ ಸ್ಥಳಗಳಲ್ಲಿ ನಡೆಯುವ ಕೆಳಗೆ ನಮೂದು ಮಾಡಲ್ಪಟ್ಟ ಜಾತ್ರೆಗಳ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಗಳಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮತ್ ಮಹಾರಾಜಾ ಗೌರ್ನಮೆಂಟಿನವರಿಗೆ ನಿಷ್ಕರ್ಷೆಯಾಗಿರುವದ್ದರಿಂದ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ತಾರೀಖು.	
			ಯಾವ ಲಾಗಾಯತು.	ಯಾವ ವರಿವಿಗೆ.
ಶಿವಮೊಗ್ಗಾ ಡಿಸ್ಟ್ರಿಕ್ಟ್.				
ಹುಚ್ಚರಾಯಸ್ವಾಮಿಯ ರಥೋತ್ಸವ	ಶಿಕಾರಿಪುರ ...	ಶಿಕಾರಿಪುರ ...	31—3—04	2—4—04
ಚಿತ್ರದುರ್ಗ ಡಿಸ್ಟ್ರಿಕ್ಟ್.				
ಕಲ್ಲೇಶ್ವರ ದೇವರ ಜಾತ್ರೆ ...	ಕಲ್ಲೇದೇವರ ಪುರ ...	ಜಗಳೂರು ...	4—4—04	7—4—04
ರಂಗನಾಥ ದೇವರ ಜಾತ್ರೆ ..	ಕೊರಟಿಕೆರೆ	ಡಿಟ್ಟೋ ..	18—3—04	20—3—04

ಸನ್ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ 2ನೆ ನಂಬರ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮತ್ ಮಹಾರಾಜಾ ಗವರ್ನಮೆಂಟಿನವರು, ಪ್ರತಿ ಒಂದರ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಮೇಲ್ಕಂಡ ಜಾತ್ರೆಗಳಿಗೆ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬಂದು ಸೇರುವದನ್ನು ಅಡ್ಡೀಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ಜಾತ್ರೆಗಳಿಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 9ನೆ ಮಾರ್ಚಿ 1904.

ನಂ. ಲೋ. ಜೋ. ಪಿ. 1214, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಕಂ 9383—ಪಿ. ಪ್ಲೈ 21—96ನೆ ಮತ್ತು 9384—ಪಿ. ಪ್ಲೈ. 21—96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಚಿಕ್ಕಬಾಣಾವಾರ ..	ಬೆಂಗಳೂರು	14. ತಾವರೇಕೆರೆ ..	ಮಾಗಡಿ
2. ಆಚಿಪುರ ..	ಡಿಟ್ಟೋ	15. ಕೂಡ್ಲೂರು ..	ಚನ್ನಪಟ್ಟಣ
3. ಚೋಳನಾಯಿಕನಹಳ್ಳಿ ...	ಡಿಟ್ಟೋ	16. ದೊಡ್ಡಮಳೂರು ..	ಡಿಟ್ಟೋ
4. ಯೆಣ್ಣೂರು ..	ಡಿಟ್ಟೋ	17. ಮಾಯಿನಾಯಿಕನಹಳ್ಳಿ ..	ಡಿಟ್ಟೋ
5. ತುಂಗಣಿ ..	ಕಾನಕಾನಹಳ್ಳಿ	18. ಪೂಜಾರಮ್ಮನಹಳ್ಳಿ ..	ಹೊಸಕೋಟೆ
6. ನಾರಣಘಟ್ಟ	ಆನೆಕಲ್	19. ಹೆಡಕನಹಳ್ಳಿ ...	ಡಿಟ್ಟೋ
7. ಕಾವಲ್ ಹೊಸಹಳ್ಳಿ ..	ಡಿಟ್ಟೋ	20. ಅರಳಮಲ್ಲಿಗೆ ..	ದೊಡ್ಡಬಳ್ಳಾಪುರ
8. ದೊಮ್ಮಸಂದ್ರ ..	ಡಿಟ್ಟೋ	21. ಮಾರಸಂದ್ರ ...	ಡಿಟ್ಟೋ
9. ಹಾರಗದ್ದೆ ...	ಡಿಟ್ಟೋ	22. ಕೊಡಂಗೂರು ಮತ್ತು ಹೊಸಹಳ್ಳಿ	ಡಿಟ್ಟೋ
10. ಪಿಲ್ಲಹಳ್ಳಿ ..	ನೆಲಮಂಗಲ	23. ರಂಗನಹಳ್ಳಿ ..	ಡಿಟ್ಟೋ
11. ಥಂಬೆಪಾಳ್ಯ ..	ಡಿಟ್ಟೋ	24. ದೊಡ್ಡ ಬೆಳವಂಗಲ ..	ಡಿಟ್ಟೋ
12. ಗುಂಗೊಂಡಹಳ್ಳಿ ..	ಡಿಟ್ಟೋ	25. ತಿಮ್ಮನಹಳ್ಳಿ ...	ದೇವನಹಳ್ಳಿ
13. ಹೊಸಪಾಳ್ಯ ..	ಮಾಗಡಿ	26. ನಾರಾಯಣಪುರ ...	ಡಿಟ್ಟೋ

ತಾರೀಖು 14ನೆ ಮಾರ್ಚಿ 1904.

ನಂ. ಲೋ. ಬೋ. ಪಿ. 1219, ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ಕಂಡ ಸ್ಥಳಗಳಲ್ಲಿ ನಡೆಯುವ ಕೆಳಗೆ ನಮೂದು ಮಾಡಲ್ಪಟ್ಟ ಜಾತ್ರೆಗಳ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಗಳಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ತಾರೀಖು.	
			ಯಾವ ಲಾಗಾಯ್ತು.	ಯಾವ ವರಿವಿಗೆ.
ಉಮಾಮಹೇಶ್ವರ ದೇವರ ಜಾತ್ರೆ ..	ಹಡಸಾ ಗ್ರಾಮದಲ್ಲಿರುವ ಉತ್ತಮೇಶ್ವರ.	ಕೊಪ್ಪ ..	3—4—04	7—4—04
ದುರ್ಗಮ್ಮನವರ ಜಾತ್ರೆ ...	ಬಮ್ಮಾಪುರ ...	ಡಿಟೋ ...	24—4—04	27—4—04
ರಂಗನಾಥದೇವರ ಜಾತ್ರೆ ...	ಹೊಸಹಳ್ಳಿ ..	ಕಡೂರು ...	31—3—04	4—4—04

ಸ. 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ಮಹಾರಾಜಾ ಸರ್ಕಾರದವರು ಪ್ರತಿ ಬಂದರ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಪ್ಲೇಗ್ ರೋಗ ತಗಲಿತ ಪ್ರದೇಶಗಳಿಂದ ಜನಗಳು ಮೇಲ್ಕಂಡ ಜಾತ್ರೆಗಳಲ್ಲಿ ಸೇರುವದನ್ನು ಅಡ್ಡಿಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ಜಾತ್ರೆಗಳಿಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 15ನೆ ಮಾರ್ಚಿ 1904.

ನಂ. ಲೋ. ಬೋ. ಪಿ. 1231, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ ಅನುಸರಿಸಿ 1898ನೆ ಫೆಬ್ರುವರಿ 10ನೆ ತಾರೀಖು 9333—ಮಿ. ಫೈ. 21–96ನೆ ಮತ್ತು 9334—ಮಿ. ಫೈ. 21–96ನೆ ನಂಬರು ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1 ಚಿಕ್ಕಮಲ್ಲನ ಹೊಳೆ	.. ಜಗಳೂರು	4. ಕಾಡಜ್ಜಿ	.. ದಾವಣಗೆರೆ
2. ಲೋಕಿಕೆರೆ	... ದಾವಣಗೆರೆ	5. ಹರಲಹಳ್ಳಿ	.. ಹರಿಹರ ಸಬ್ ತಾಲ್ಲೂಕ್
3. ಹಡದಿ	.. ಡಿಟೋ	6. ಕುನಗಾಲಿ	.. ಹೊಳಲಕೆರೆ

ತಾರೀಖು 15ನೆ ಮಾರ್ಚಿ 1904.

ನಂ. ಲೋ. ಬೋ. ಪಿ. 1233, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ಕಂಡ ಸ್ಥಳಗಳಲ್ಲಿ ನಡೆಯುವ ಕೆಳಗೆ ನಮೂದು ಮಾಡಲ್ಪಟ್ಟ ಜಾತ್ರೆಗಳ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಗಳಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ತಾರೀಖು.	
			ಯಾವ ಲಾಗಾಯ್ತು.	ಯಾವ ವರಿವಿಗೆ.
ದ್ಯಾವಮ್ಮನ ಜಾತ್ರೆ ..	ಅಗ್ರಹಾರ ಬಾಚಹಳ್ಳಿ	ಕೃಷ್ಣರಾಜಪೇಟೆ	10—4—04	14—4—04
ಭಾಷ್ಯಾಗಾರ್ ತೀರ್ಥಪ್ರಸಾದಾ ..	ಸಾಲಗ್ರಾಮ	ಯಡತೊರೆ	1—4—04	6—4—04

ಸ. 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರು ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ಮಹಾರಾಜಾ ಸರ್ಕಾರದವರು ಪ್ರತಿ ಬಂದರ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರಿ ಜಾತ್ರೆಗಳಲ್ಲಿ ಸೇರುವದನ್ನು ಅಡ್ಡಿಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರಿ ಜಾತ್ರೆಗಳಿಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 16ನೆ ಮಾರ್ಚಿ 1904.

ನಂ. ಲೋ. ಪೋ. ಪಿ. 1240, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಾತ್ರೆ ಯಾ ಉತ್ಸವಗಳಿಗೆ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮದರಾಸು ಗವರ್ನಮೆಂಟಿನವರು ಅಡ್ಡೀ ಪಡಿಸುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಥಾರಿಟಿ.	ಷರಾ.
				ಯಾವ ಲಾಗಾಯತು.	ಯಾವ ವರಿವಿಗೆ.		
ಚಿತ್ರೈ ಉತ್ಸವ ಮತ್ತು ಪನಗಳ ಪರಸೆ	ಮದುರೆ	...	ಮದುರೆ	5—4—04	2—5—04	ಫಸ್ಟ್ ಅಸಿಸ್ಟೆಂಟ್ ರಸಿಡೆಂಟರವರ ಎಂಡಾರ್ಸ್‌ಮೆಂಟ್ ನಂ. 424 ಪಿ., ತಾ|| 15-3-04	ಪರಸೆ ನಡಿಯುವದು ಸಹಾ ಅಡ್ಡೀ ಪಡಿಸಲ್ಪಟ್ಟಿರುತ್ತದೆ.
ಮಾರ್ಗಬಂಧು ಸ್ವಾಮಿಯ ಬ್ರಹ್ಮೋತ್ಸವ	ವಿರಿಂಚಿಪುರಂ	ವೇಲೂರು	ಉತ್ತರ ಆರ್ಕಾಡ್	19—3—04	31—3—04	ಡಿಟೋ ನಂ. 420-ಪಿ., ತಾ|| 15-3-04	ಯಾತ್ರಾರ್ಥವಾಗಿ ಹೋಗುವದು ಅಡ್ಡೀ ಪಡಿಸಲ್ಪಟ್ಟಿರುತ್ತದೆ.
ಪಂಗುನಿ ಉತ್ತಿರಂ ಉತ್ಸವ ಮತ್ತು ದನಗಳ ಪರಸೆ	ಪಳನಿ	...	ಮದುರೆ	17—3—04	10—4—04	ಡಿಟೋ ನಂ. 422 ಪಿ., ತಾ|| 15-3-04	ದನಗಳ ಪರಸೆ ನಡಿಯುವದು ಸಹಾ ಅಡ್ಡೀ ಪಡಿಸಲ್ಪಟ್ಟಿರುತ್ತದೆ.

ತಾರೀಖು 16ನೆ ಮಾರ್ಚಿ 1904.

ನಂ. ಲೋ. ಪೋ. ಪಿ. 1241, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಉತ್ಸವಗಳಿಗೆ ಮೈಸೂರು ಸಂಸ್ಥಾನ ಸಹಿತವಾಗಿ ರೋಗ ತಗಲಿದ ಪ್ರದೇಶಗಳಿಂದ ಬರಲು ಉದ್ದೇಶಿಸಿರುವ ಜನಗಳಿಗೆ ಟಿಕೆಟ್ಟುಗಳು ಕೊಡುವದನ್ನು ಇಂಡಿಯಾ ಗವರ್ನಮೆಂಟಿನವರು ಅಡ್ಡೀ ಪಡಿಸುತ್ತಾರೆ:—

ಜಾತ್ರೆ ಯಾ ಉತ್ಸವದ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ಟಿಕೆಟ್ಟುಗಳು ವಿಕ್ರಯಿಸಲ್ಪಡದೆ ಇರುವ ತಾರೀಖುಗಳು ಮತ್ತು ಸ್ಟೇಷನುಗಳು.			ಅಥಾರಿಟಿ.
				ಯಾವ ಲಾಗಾಯತು.	ಯಾವ ವರಿವಿಗೆ.	ಸ್ಟೇಷನುಗಳು.	
ಮಾರ್ಗಬಂಧು ಸ್ವಾಮಿಯ ಬ್ರಹ್ಮೋತ್ಸವ	ವಿರಿಂಚಿಪುರಂ	ವೇಲೂರು	ಉತ್ತರ ಆರ್ಕಾಡು	19—3—04	31—3—04	ಮದ್ರಾಸು ರೈಲ್ವೆಯಲ್ಲಿರುವ ಕಾಟಪಾಡಿ, ವಾಲಾಜಾರೋಡು, ತಿರುವಲಂ, ಲಟ್ಟೇರಿ, ವಿರಿಂಚಿಪುರಂ, ಕಾವನೂರು, ಗುಡಿಯಾತಂ, ಪಳತ್ತೂರು ಮತ್ತು ಮೈಲಪಟ್ಟಿ ಮತ್ತು ದಕ್ಷಿಣ ಇಂಡಿಯನ್ ರೈಲ್ವೆಯಲ್ಲಿರುವ ಚಿತ್ತೂರು, ರಾಮಾಪುರಂ, ಕಾಟಪಾಡಿ, ವೇಲೂರು, ವಾನಿಯಂಬಾಡಿ, ಕನ್ನಮಂಗಲಂ, ಮತ್ತು ಕಲಂಬೂರು	ಫಸ್ಟ್ ಅಸಿಸ್ಟೆಂಟ್ ರಸಿಡೆಂಟರವರ ಎಂಡಾರ್ಸ್‌ಮೆಂಟ್ ನಂ. 420—ಪಿ., ತಾ|| 15-3-04
ಪಂಗುನಿ ಉತ್ತಿರಂ ಉತ್ಸವ ಮತ್ತು ದನಗಳ ಪರಸೆ	ಪಳನಿ	...	ಮದುರೆ	17—3—04	10—4—04	ದಕ್ಷಿಣ ಇಂಡಿಯನ್ ರೈಲ್ವೆಯಲ್ಲಿರುವ ಅಯಲೂರ್, ವಡಮದುರೆ, ಡಿಂಡಿಗಲ್, ಅಂಬತ್ತುರೈ ಮತ್ತು ಅಮ್ಮಯ್ಯನಾಯ್ಕನೂರು *	ಡಿಟೋ 422-ಪಿ., ತಾ|| 15-3-04

* ಸೇಲಂ, ಕೊಯಿಮುತ್ತೂರು, ಉತ್ತರ ಆರ್ಕಾಡು ಮತ್ತು ನೀಲಗಿರಿ ಡಿಸ್ಟ್ರಿಕ್ಟುಗಳಲ್ಲಿ ಟಿಕೆಟ್ಟುಗಳು ವಿಕ್ರಯಿಸಲ್ಪಡುವದು ಅಡ್ಡೀ ಪಡಿಸಲ್ಪಟ್ಟಿರುತ್ತದೆ.

ತಾರೀಖು 16ನೆ ಮಾರ್ಚಿ 1904.

ನಂ. ಲೋ. ಬೋ. ಪಿ. 1242, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧ ಪಡಿಸುವದೇನಂದರೆ, ಇದರಡೀ ಕಂಡ ಉತ್ಸವಕ್ಕೆ ಮೈಸೂರು ಸಂಸ್ಥಾನ ಸಹಿತವಾಗಿ ರೋಗತಗಲಿದ ಪ್ರದೇಶಗಳಿಂದ ಬರಲು ಉದ್ದೇಶಿಸಿರುವ ಜನಗಳಿಗೆ ಟಿಕೆಟ್ಟುಗಳು ಕೊಡುವದನ್ನು ಮದರಾಸು ಗವರ್ನ್ಮೆಂಟಿನವರು ಅಡ್ಡಿಪಡಿಸುತ್ತಾರೆ:—

ಜಾತ್ರೆ ಯಾ ಉತ್ಸವದ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ಟಿಕೆಟ್ಟುಗಳು ವಿಕ್ರಯಿಸಲ್ಪಡದೆ ಇರುವ ತಾರೀಖುಗಳು ಮತ್ತು ಸ್ಟೇಷನುಗಳು.			ಅಥಾರಿಟಿ.
				ಯಾವ ಲಗಾಯತು.	ಯಾವ ವರಿವಿಗೆ.	ಸ್ಟೇಷನುಗಳು.	
ಚಿತ್ರ್ಯುತ್ಸವ ಮತ್ತು ದನಗಳ ಪರಸೆ.	ಮದುರೆ.	..	ಮದುರೆ.	5—4—04	2—5—04	ದಕ್ಷಿಣ ಇಂಡಿಯನ್ ರೈಲ್ವೆಯಲ್ಲಿರುವ ಐಯ್ಯಾಲೂರ್, ವಡಮದುರೆ, ದಿಂಡಿಗಲ್, ಅಂಬತ್ತುರೈ, ಅಮ್ಮಯ್ಯನಾಯ್ಕನೂರ್, ವಾಡಿಪಟ್ಟಿ, ಸೋಳವಂದಾನ್, ಸಮಯನಲ್ಲೂರ್, ಮದುರೆ, ತಿರುಪರಕುಂಡ್ರಂ, ತಿರುಮಂಗಲಂ, ಕಳ್ಳಿಗುಡಿ, ಪೂರ್ವಮದುರೆ, ಸಿಲೈಮಾನ್, ತಿರುಪ್ಪುವನಂ, ತಿರುಪ್ಪಚೆಟ್ಟಿ, ಮಾನಾಮದುರೆ, ಪಾರ್ತಿಬನೂರು ರೋಡು, ಪರಮಗುಡಿ, ಸತ್ತಿರಕ್ಕುಡಿ, ರಾಮನಾಡ್, ವಾಲಂತರವೈ, ಉಚ್ಚಿಪುಲಿ ಮತ್ತು ಮಂಟಪಂ.*	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎಂಡಾರ್ಸ್‌ಮೆಂಟ್ ನಂ. 424—ಪಿ., ತಾ॥ 15—3—04.

* ಶೇಲಂ, ಕೊಯಿಮುತ್ತೂರು, ನೀಲಗಿರಿ, ಉತ್ತರ ಆರ್ಕಾಡು ಮತ್ತು ಬಳ್ಳಾರಿ ಡಿಸ್ಟ್ರಿಕ್ಟುಗಳಲ್ಲಿ ಟಿಕೆಟ್ಟುಗಳು ವಿಕ್ರಯಿಸಲ್ಪಡುವದು ಅಡ್ಡಿಪಡಿಸಲ್ಪಟ್ಟಿರುತ್ತದೆ.

ತಾರೀಖು 4ನೆ ಮಾರ್ಚಿ 1904.

ನಂ. 3347—ಲೋ. ಫಂ. 78—03, ಸನ್ 1903ನೆ ಸೆಪ್ಟಂಬರ್ 9ನೆ ಮುರ್ರುಂ 30—ಲೆಜಿಸ್. 4—03ನೆ ನಂಬರ್ ಇಸ್ತಿಹಾರ್ನಾಮೆಯೊಡನೆ ಘಾಯಿಷಾದ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ 7ನೆ ಪ್ಯಾರಾದಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ತಾಲ್ಲೂಕು ಬೋರ್ಡುಗಳಿಗೋಸ್ಕರ ನೇಮಕರ್ರಾಡಲ್ಪಟ್ಟ ಮೆಂಬರುಗಳ ಪಟ್ಟಿ:—

I. ಮದ್ದಗಿರಿ ತಾಲ್ಲೂಕು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು ... ಪ್ರೆಸಿಡೆಂಟರು.
2. ತಾಲ್ಲೂಕಿನ ಅಮಲ್ದಾರರು ... .. ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಟಲ್ ಅಸಿಸ್ಟೆಂಟರು .. ಮೆಂಬರು.
4. ತುಮಕೂರಲ್ಲಿರುವ ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು .. ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5. ಮೆ॥ ವ್ಯಾಸಪೂಜೆ ಚಿಕ್ಕಣ್ಣನವರು .. .. ಡಿಟೋ
6. „ ಸ್ವಾಂದೆಹಳ್ಳಿ ಚಿಕ್ಕೆಗೌಡರು .. .. ಡಿಟೋ
7. „ ಗರಣಿ ರಾಮಾಚಾರ್ರು .. .. ಡಿಟೋ
8. „ ಹನುಮಂತಾಪುರ ವೆಂಕಟರಡ್ಡಿಯವರು .. .. ಡಿಟೋ

(f) ಕ್ಲಾಜ್ ಅನುಸರಿಸಿ.

9. „ ಪ್ಲೀಡರ್ ಅಚ್ಯುತರಾಯರು .. .. ಡಿಟೋ

(g) ಕ್ಲಾಜ್ ಅನುಸರಿಸಿ.

10. „ ಲಾಲ್ ಅಹಮದ್‌ಸಾಬರು ... . ಡಿಟೋ
11. „ ಸಂಗಣ್ಣನವರು ... . ಡಿಟೋ
12. „ ಜಿ. ಶಿವರಂಗಯ್ಯನವರು ... .. ಡಿಟೋ

2. ಕೊರಟಗೆರೆ ಸಬ್ ತಾಲ್ಲೂಕು.

ಎಕ್ಸ್ ಅಫಿಷಿಯೋ ಮೆಂಬರುಗಳು.

1.	ಸಬ್ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು	ಪ್ರೆಸಿಡೆಂಟರು.
2.	ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ರು	ವೈಸ್ ಪ್ರೆಸಿಡೆಂಟರು.
3.	ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು	ಮೆಂಬರು.
4.	ತುಮಕೂರಲ್ಲಿರುವ ಪಬ್ಲಿಕ್ ವರಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು ...	ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5.	ಮೆ|| ರಾಮಪುರ ಶಾನಭೋಗ ಹಂಪಣ್ಣಯ್ಯನವರು	ಮೆಂಬರು.
6.	,, ಕಾಂಪುರ ಸಂಜೀವಪ್ಪನವರು	ಡಿಟೋ
7.	,, ಹೊಳವನಹಳ್ಳಿ ಅಬಿದ್ ಅಲಿಸಾಹೇಬರು	ಡಿಟೋ
8.	,, ತೋವಿನಕೆರೆ ನೇಮರಾಜಶೆಟ್ಟರು	ಡಿಟೋ.

(f) ಕ್ಲಾಜ್ ಅನುಸರಿಸಿ.

9.	,, ಯಜಮಾನ್ ಶಂಕರಯ್ಯನವರು	ಡಿಟೋ

(g) ಕ್ಲಾಜ್ ಅನುಸರಿಸಿ.

10.	,, ಚನ್ನಬಸವಾರಾಧ್ಯರು	ಡಿಟೋ
11.	,, ಜವರಾಯಗೌಡರು	ಡಿಟೋ
12.	,, ಶ್ರೀವತ್ಸ ರಂಗಾಚಾರ್ರು	ಡಿಟೋ

ತಾರೀಖು 4ನೆ ಮಾರ್ಚಿ 1904.

ನಂ. 3351—ಲೋ. ಫಂ. 79—03, ಸನ್ 1903ನೆ ಸೆಪ್ಟೆಂಬರ 9ನೆ ಮರ್ಕ್ಯುಂ 30—ಲೆಜಿಸ್. 4—03ನೇ ನಂಬರ ಇಸ್ತಿಹಾರ್ನಾಮೆಯೊಡನೆ ಶಾಯಿಯಾದ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ 7ನೆ ಪ್ಯಾರಾದಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ತಾಲ್ಲೂಕು ಬೋರ್ಡುಗಳಿಗೋಸ್ಕರ ನೇಮಕರ್ಮಾಡಲ್ಪಟ್ಟ ಮೆಂಬರುಗಳ ಪಟ್ಟಿ:—

1. ಮೈಸೂರು ತಾಲ್ಲೂಕು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟರು.
2. ಅಮಲ್ದಾರು, ವೈಸ್ ಪ್ರೆಸಿಡೆಂಟರು.
3. ಸೀನಿಯರ್ ಮೆಡಿಕಲ್ ಆಫೀಸರು, ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು, ಮೆಂಬರು.

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5. ಮೆ|| ಶ್ರೀನಿವಾಸ ಜೋಯಿಸರು, ಮೆಂಬರು ಮತ್ತು ಜಮೀನ್ದಾರ್ರು.
6. ,, ಗುರುಕಾರ್ ಮಾದಪ್ಪನವರು, ಡಿಟೋ ಇನಾಂದಾರ್ರು.
7. ,, ಲಿಂಗೇಗೌಡರು, ಡಿಟೋ ಪಟೇಲರು ಮತ್ತು ಜಮೀನ್ದಾರ್ರು.
8. ,, ಅನಂತಯ್ಯನವರು, ಡಿಟೋ ಶಾನಭೋಗರು ಮತ್ತು ಜಮೀನ್ದಾರ್ರು.

(f) ಕ್ಲಾಜ್ ಅನುಸರಿಸಿ.

9. ,, ವಿ. ರಾಘವಾಚಾರ್ರು, ಡಿಟೋ ಅಡ್ವೋಕೇಟರು.

(g) ಕ್ಲಾಜ್ ಅನುಸರಿಸಿ.

10. ,, ಸುಬ್ಬಾದೀಕ್ಷಿತರು, ಡಿಟೋ ಶಾನಭೋಗರು ಮತ್ತು ಜಮೀನ್ದಾರ್ರು.
11. ,, ಶಾಮಣ್ಣನವರು, ಮೆಂಬರು, ಶಾನಭೋಗರು ಮತ್ತು ಜಮೀನ್ದಾರ್ರು.
12. ,, ನಂಜೇಗೌಡರು, ಡಿಟೋ ಜಮೀನ್ದಾರ್ರು.

2. ಗುಂಡ್ಲುಪೇಟೆ ತಾಲ್ಲೂಕು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟರು.
2. ಅಮಲ್ದಾರ್ರು, ವೈಸ್ ಪ್ರೆಸಿಡೆಂಟರು.
3. ತಾಲ್ಲೂಕಿನ ಹೆಡ್ಕ್ವಾರ್ಟರ್ಸಿನಲ್ಲಿರುವ ಡಿಸ್ಪೆನ್ಸರಿಯ ಚಾರ್ಜಿನ ಆಸ್ಪಿಟಲ್ ಅಸಿಸ್ಟೆಂಟರು, ಮೆಂಬರು.
4. ಪಬ್ಲಿಕ್‌ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು, ಮೆಂಬರು.

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5. ಮೆ|| ಕಾಳಪ್ಪನವರು, ಮೆಂಬರ್, ಪಟೇಲರು ಮತ್ತು ಜಮೀನ್ದಾರರು.
6. ,, ವಳಹಟ್ಟಿ ದೇವಪ್ಪನವರು, ಡಿಟೋ ವರ್ತಕರು ಮತ್ತು ಜಮೀನ್ದಾರರು.
7. ,, ಕೋಟಕೆರೆ ಭುಜಂಗಯ್ಯನವರು, ಡಿಟೋ ಜಮೀನ್ದಾರರು.
8. ,, ಮೊದುಗೋಡು ವೃಷ್ಟವೀರತಯ್ಯನವರು, ಡಿಟೋ ಜಮೀನ್ದಾರರು.

(f) ಕ್ಲಾಜ್ ಅನುಸರಿಸಿ.

9. ,, ಗುರುಮೂರ್ತಪ್ಪನವರು, ಡಿಟೋ ಜಮೀನ್ದಾರರು.

(g) ಕ್ಲಾಜ್ ಅನುಸರಿಸಿ.

10. ,, ಷೀರ ಸಾಹೇಬರು, ಡಿಟೋ
11. ,, ಜೊಂಮಲಾಪೂರ್ ಹುಚ್ಚಯ್ಯನವರು, ಡಿಟೋ ಪಟೇಲರು ಮತ್ತು ಜಮೀನ್ದಾರರು.
12. ,, ಬಾಚಹಳ್ಳಿ ಜಗನ್ನಾಥಯ್ಯನವರು, ಡಿಟೋ

3. ಹೆಗ್ಗಡದೇವನಕೋಟೆ.

ಎಕ್ಸ್ ಆಫಿಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟರು.
2. ಅಮಲ್ದಾರು, ವೈಸ್ ಪ್ರೆಸಿಡೆಂಟರು.
3. ತಾಲ್ಲೂಕು ಹೆಡ್‌ಕ್ವಾರ್ಟರಿನ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು, ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್‌ಡಿವಿಜನ್ ಆಫೀಸರು, ಮೆಂಬರು.

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5. ಮೆ|| ವೆಂಕಟರಾಯರು, ಮೆಂಬರ್, ಪಟೇಲರು.
6. ,, ಮಳಲಿ ಸುಬ್ಬಣ್ಣನವರು, ಡಿಟೋ
7. ,, ಲಕ್ಷ್ಮೀನಾರಣಪ್ಪನವರು, ಡಿಟೋ ಶಾನಭೋಗರು.
8. ,, ಎಂ. ಸುಬ್ಬರಾಯರು, ಡಿಟೋ ಡಿಟೋ

(f) ಕ್ಲಾಜ್ ಅನುಸರಿಸಿ.

9. ,, ಪುದುಕೋಟೆ ಸುಬ್ಬರಾಯರು, ಡಿಟೋ

(g) ಕ್ಲಾಜ್ ಅನುಸರಿಸಿ.

10. ,, ದಾಸೆ ಗೌಡರು, ಡಿಟೋ ಪಟೇಲರು.
11. ,, ರಾಜೆ ಅರಸಿನವರು, ಡಿಟೋ ಡಿಟೋ
12. ,, ಸೈಯದ್ ಅಬ್ದುಲ್‌ರಹೀಂ ಯವರು, ಡಿಟೋ ವರ್ತಕರು ಮತ್ತು ಜಮೀನ್ದಾರರು.

ತಾರೀಖು 9ನೆ ಮಾರ್ಚಿ 1904.

ನಂ. ಜ. 4377, ಮೈಸೂರ ಸರ್ವಿಸ್ ರೆಗ್ಯುಲೇಷನ್ಗಳ 221ನೆ ಆರ್ಟಿಕಲ್ ಅನುಸರಿಸಿ, ಹಂಗಾಮಿ ಸಬ್ ಅಸಿಸ್ಟೆಂಟ್ ಸರ್ಜನ್ ರಾದ ಮೆ|| ಪಿ. ಮಾಧವನ್‌ನಾಯರ್, ಎಲ್. ಎಂ. ಪ ಎಸ್., ಯವರಿಗೆ 1904ನೆ ಜನವರಿ 19ನೆ ತಾರೀಖಿನಾರಭ್ಯ 6 ತಿಂಗಳ ತಲಬು ಇಲ್ಲದ ಎಕ್ಸ್‌ಟ್ರಾರ್ಡಿನೆರಿ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 9ನೆ ಮಾರ್ಚಿ 1904.

ನಂ. ಜ. 4383—ಎಜ್ಯು., ಮೈಸೂರ ಸರ್ವಿಸ್ ರೆಗ್ಯುಲೇಷನ್ಗಳ 188ನೆ ಆರ್ಟಿಕಲ್ ಅನುಸರಿಸಿ ಚಿಕ್ಕಬಳ್ಳಾಪುರದ ಹೈ ಸ್ಕೂಲ್ ಹೆಡ್ ಮಾಸ್ಟರಾದ ಮೆ|| ಎಂ. ಬಿ. ಶ್ರೀನಿವಾಸೈಯ್ಯಂಗಾರ್ರಿಗೆ, 1904ನೆ ಫೆಬ್ರವರಿ 8ನೆ ತಾರೀಖಿನಾರಭ್ಯ ಒಂದು ವಾರದ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು. ಸದರೀ ಯವರು ರಜಾದಲ್ಲಿದ್ದ ಕಾಲದಲ್ಲಿ ಮೊದಲನೇ ಅಸಿಸ್ಟೆಂಟ್ ಮಾಸ್ಟರು ಸದರೀ ಸ್ಕೂಲ್ ಚಾರ್ಜಿನಲ್ಲಿದ್ದರು.

ತಾರೀಖು 10ನೆ ಮಾರ್ಚಿ 1904.

ನಂ. 1860—ಜಾ, ಸ್ಪೆಷಿಯಲ್ ಸಬ್ ರಿಜಿಸ್ಟ್ರಾರುಗಳ ಈ ಕೆಳಗಿನ ಕಂಡ ವರ್ಗಾವಣೆಗಳು ಹುಕುಂ ಮಾಡಲ್ಪಟ್ಟಿರುತ್ತವೆ :—

	ಹೆಸರು.	ಎಲ್ಲಿಂದ.	ಎಲ್ಲಿಗೆ.
1.	ಎಸ್. ಎ. ಸುಬ್ರಹ್ಮಣ್ಯ ಅಯ್ಯರ್ ಯವರು	ಮಂಜರಾಬಾದ್	ಕೋಲಾರ
2.	ಎ. ಶೇಷಾದ್ರಿ ಅಯ್ಯಂಗಾರ್, ಬಿ. ಎ., ಯವರು	ಕೋಲಾರ	ಕೊಪ್ಪ
3.	ಮಹಮದ್ ಇಸ್ಮಾಯಿಲ್	ಕೊಪ್ಪ	ಕೊಸಿಪೇಟೆ
4.	ಕಾಂತರಾವ್ ನಾಯುಡು ಯವರು	ಕೊಸಿಪೇಟೆ	ದಾವಣಗೆರೆ
5.	ರಾಮರಾಯರು	ದಾವಣಗೆರೆ	ತೀರ್ಥಹಳ್ಳಿ
6.	ವೆಂಕಟಸುಬ್ಬರಾವ್, ಬಿ. ಎ., ಯವರು	ತೀರ್ಥಹಳ್ಳಿ	ಬೇಲೂರು
7.	ಚಂದ್ರಶೇಖರ [illegible]	ಬೇಲೂರು	ಬಂಗಾರಪೇಟೆ
8.	ಚೆನ್ನಮಲ್ಲಪ್ಪನವರು	ಬಂಗಾರಪೇಟೆ	ಮಧುಗಿರಿ
9.	ರಾಮಸ್ವಾಮಿ ಅಯ್ಯಂಗಾರ್ರು	ಮಧುಗಿರಿ	ಮಂಜರಾಬಾದ್
10.	ಎಂ. ಚಕ್ರಪಾಣಿರಾವ್, ಬಿ. ಎ., ಯವರು	ಶಿರಾ	ಗೌರಿಬಿದನೂರು
11.	ಎನ್. ನಾರಾಯಣರಾವ್, ಬಿ. ಎ., ಯವರು	ಗೌರಿಬಿದನೂರು	ಶಿರಾ
12.	ಬಿ. ನರಸಿಂಹ ಅಯ್ಯಂಗಾರ್ರು	ಮೂಡಗೆರೆ	ನಾಗಮಂಗಲ
13.	ಬಿ. ಟಿ. ರಾಮಸ್ವಾಮಿ ಅಯ್ಯಂಗಾರ್ರು	ನಾಗಮಂಗಲ	ಮೂಡಗೆರೆ
14.	ಬಿ. ಎಂ. ರಂಗಸ್ವಾಮಿ ನಾಯುಡು, ಬಿ. ಎ., ಯವರು	ಹರಿಹರ	ಹೊನ್ನಾಳಿ
15.	ಶ್ರೀನಿವಾಸರಾವ್, ಬಿ. ಎ., ಯವರು	ಹೊನ್ನಾಳಿ	ಹರಿಹರ

ತಾರೀಖು 1ನೆ ಮಾರ್ಚಿ 1904.

ನಂ. 3457—ಲೋ. ಫಂ. 79-03, ಸನ್ 1903ನೆ ಸೆಪ್ಟೆಂಬರ್ 11ನೆ ಮುರ್ಖಂ 30—ಲೆಜಿಸ್. 4-03ನೆ ನಂಬರ್ ಇಸ್ತಿಹಾರ್ನಾಮೆಯೊಡನೆ ಪ್ರಾಸಿದ್ಧಪಡಿಸಿದ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ 7ನೆ ಪ್ಯಾರಾವಿನಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ಮೈಸೂರು ಡಿಸ್ಟ್ರಿಕ್ಟಿನ ಯಡತೊರೆ ತಾಲ್ಲೂಕು ಬೋರ್ಡಿಗೋಸ್ಕರ ಮೊಕರರ್ ಮಾಡಲ್ಪಟ್ಟ ಮೆಂಬರುಗಳ ಪಟ್ಟಿ :—

ಎಕ್ಸ್ ಅಫಿಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು .. ಪ್ರೆಸಿಡೆಂಟರು.
2. ಅಮಲ್ದಾರ್ರು .. .. .. ವೈಸ್ ಪ್ರೆಸಿಡೆಂಟರು.
3. ತಾಲ್ಲೂಕು ಹೆಡ್ ಕ್ವಾರ್ಟರ್ಸಿನಲ್ಲಿನ ಡಿಸ್ಪೆನ್ಸರಿ ಚಾರ್ಜಿನಲ್ಲಿರುವ ಆಸ್ಪತ್ರಲ್ ಅಸಿಸ್ಟೆಂಟರು ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು .. ಡಿಟ್ಟೋ

ಇತರ ಮೆಂಬರುಗಳು.

(ಎ) ಕ್ಲಾಜ್ ಅನುಸರಿಸಿ.

5. ಮೆ|| ಬಾದಾಂ ರಂಗಶೆಟ್ಟರು, ವರ್ತಕರು .. .. ಡಿಟ್ಟೋ
6. ,, ಲಕ್ಷ್ಮೀಗೌಡರು, ಜಮೀನ್ದಾರ್ರು .. .. ಡಿಟ್ಟೋ
7. ,, ಮಲ್ಲಿಕಾರ್ಜುನಯ್ಯನವರು, ವರ್ತಕರು .. .. ಡಿಟ್ಟೋ
8. ,, ಹನುಮೇಗೌಡರು, ಜಮೀನ್ದಾರ್ರು .. .. ಡಿಟ್ಟೋ

(ಬಿ) ಕ್ಲಾಜ್ ಅನುಸರಿಸಿ

9. ,, ಸುಬ್ಬರಾಯರು, ಸ್ಟಾಂಪು ವೆಂಡರು ... ... ಡಿಟ್ಟೋ

(ಸಿ) ಕ್ಲಾಜ್ ಅನುಸರಿಸಿ.

10. ,, ಸೈಯದ್ ಅಹಮದ್ ಸಾಹೇಬರು, ವರ್ತಕರು ಮತ್ತು ಜಮೀನ್ದಾರ್ರು .. ಡಿಟ್ಟೋ
11. ,, ಕೃಷ್ಣರಾಯರು, ಜಹಗೀರ್ದಾರ್ರು .. .. ಡಿಟ್ಟೋ
12. ,, ಲಿಂಗೇಗೌಡರು, ಪಟೇಲರು ಮತ್ತು ಜಮೀನ್ದಾರ್ರು .. ಡಿಟ್ಟೋ

ತಾರೀಖು 11ನೆ ಮಾರ್ಚಿ 1904.

ನಂ. ಜ. 4465, ಮೈಸೂರು ಸೀಮೆಯ ಘನವತ್ತೈದಿದ ಶ್ರೀಮನ್ ಮಹಾರಾಜರವರ ಗವರ್ನಮೆಂಟ್ ಜನರಲ್ ವ ರೆವಿನ್ಯೂ ಇಲಾಖೆಗಳ ಸೆಕ್ರೆಟೆರಿಯಟ್ ಆಫೀಸಿನ ಚಾರ್ಜನ್ನು ಮೆ|| ಎಲ್. ಅನಂತಸ್ವಾಮಿರಾವ್ ಯವರು ಮೆ|| ಬಿ. ಕೆ. ವೆಂಕಟವರದಯ್ಯಂಗಾರ್ರಿಗೆ 1904ನೆ ಮಾರ್ಚಿ 1ನೆ ತಾರೀಖಿನ ಪೂರ್ವಾಹ್ಣದಲ್ಲಿ ಒಪ್ಪಿಸಿರುತ್ತಾರೆ.

ತಾರೀಖು 11ನೆ ಮಾರ್ಚಿ 1904.

ನಂ. ಜ. 4472, ಬೆಂಗಳೂರಲ್ಲಿರುವ ಸೆಂಟ್ರಲ್ ಜೈಲ್ ಆಸ್ಪತ್ರೆಯ ಮೊದಲನೆ ಕ್ಲಾಸ್ ಆಸ್ಪಿಟಲ್ ಅಸಿಸ್ಟೆಂಟರಾದ ವಿ. ಎಸ್. ಬಾಲಸುಂದರ ಮೊದಲಿಯಾರ್ರು ತಮ್ಮ ಹೆಸರನ್ನು ಬಾಲಸುಂದರಂ ಸುಬ್ರಾಯ ಮೊದಲಿಯಾರ್ ಎಂದು ಬದಲಾಯಿಸಿಕೊಂಡಿರುತ್ತಾರಾಗಿ, ಈ ಹೆಸರೇ ಮುಂದೆ ಸರ್ಕಾರಿ ಕಾಗದಪತ್ರಗಳಲ್ಲಿ ಉಪಯೋಗಿಸಲ್ಪಡತಕ್ಕದ್ದು.

ತಾರೀಖು 15ನೆ ಮಾರ್ಚಿ 1904.

ನಂ. 3511—ಲೋ. ಫಂ. 78—03, ಸನ್ 1902ನೆ ಇಸವಿಯ IIನೆ ನಂಬರ್ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ಮತ್ತು 1903ನೆ ಸೆಪ್ಟಂಬರ್ 9ನೆ ಮುರ್ಕ್ಕಂ 30—ಲೆಜಿಸ್. 4-03ನೆ ನಂಬರ್ ಇಸ್ತಿಹಾರ್ನಾಮೆಯೊಡನೆ ಪಾಯಿಷ್ ಆದ ರೂಲುಗಳ 7ನೆ ಸೆಕ್ಷನ್ ಅನುಸರಿಸಿ ಸೀರಾ ತಾಲ್ಲೂಕು ಬೋರ್ಡು ಇದರಡೀ ಕಂಡ ಮೆಂಬರುಗಳನ್ನು ಉಂಟಾಗಿರತಕ್ಕದ್ದು:—

ಎಕ್ಸ್ ಅಫೀಷಿಯೋ ಮೆಂಬರುಗಳು.

1.	ಸೀರಾ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು ..	ಪ್ರೆಸಿಡೆಂಟರು.
2.	ತಾಲ್ಲೂಕಿನ ಅಮಲ್ದಾರ್ರು	ವೈಸ್ ಪ್ರೆಸಿಡೆಂಟರು.
3.	ಸೀರಾದಲ್ಲಿನ ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು	ಮೆಂಬರು.
4.	ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು	ಡಿಟ್ಟೋ.

ಇತರ ಮೆಂಬರುಗಳು.

(e) ಕ್ಲಾಜು ಅನುಸರಿಸಿ.

5.	ಮ|| ಅಗಳಿ ವೆಂಕಟರಾಮಯ್ಯನವರು	ಮೆಂಬರು.
6.	,, ಲಿಂಗಗೌಡರು ಪುರುಷ ಅಪ್ಪಣ್ಣಗೌಡರು	ಡಿಟ್ಟೋ.
7.	,, ದೊಡ್ಡ ಮಲ್ಲಯ್ಯನವರು	ಡಿಟ್ಟೋ.
8.	,, ಬರಗೂರ ಸಂಜುಂಡಯ್ಯನವರು	ಡಿಟ್ಟೋ.

(f) ಕ್ಲಾಜು ಅನುಸರಿಸಿ.

9.	ಸೀರಾ ಮ್ಯುನಿಸಿಪಲ್ ಬೋರ್ಡಿನ ಮೆಂಬರಾದ ಮಿಸ್ಟರ್ ಬಿ. ನಾರಣೈಯ್ಯಂಗಾರ್ರು	ಡಿಟ್ಟೋ.

(g) ಕ್ಲಾಜು ಅನುಸರಿಸಿ.

10.	ಮ|| ಬಡೇಸಾಭರು	ಡಿಟ್ಟೋ.
11.	ಕಾರೇಗೌಡರು	ಡಿಟ್ಟೋ.
12.	ದೊಡ್ಡ ರಂಗೇಗೌಡರು	ಡಿಟ್ಟೋ.

ತಾರೀಖು 16ನೆ ಮಾರ್ಚಿ 1904.

ನಂ. ಜ. 4626, ಎರಡನೇ ಕೌನ್ಸಿಲರಾದ ಮ|| ರಾವು ಬಹದೂರು, ಸಿ. ಮಾದಯ್ಯನವರಿಗೆ 2½ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ರಾವು ಬಹದೂರು ಮಾದಯ್ಯನವರು ರಜಾದಲ್ಲಿರುವ ಕಾಲದಲ್ಲಿ ಶ್ರೀಮನ್ ಮಹಾರಾಜರವರ ಗೌರ್ನಮೆಂಟ್ ರೆವಿನ್ಯೂ ವ ಜನರಲ್ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿಯವರಾದ ಮ|| ಬಿ. ಕೆ. ವೆಂಕಟವರದಯ್ಯಂಗಾರ್ ಯವರನ್ನು ಶ್ರೀಮನ್ ಮಹಾರಾಜರವರು ಎರಡನೇ ಕೌನ್ಸಿಲರಾಗಿ ಆಫೀಷಿಯೇಟಿಂಗ್ ತರೀಕು ಮೊಕರರು ಮಾಡಿರುತ್ತಾರೆ.

ಮ|| ಬಿ. ಕೆ. ವೆಂಕಟವರದಯ್ಯಂಗಾರ್ರು ಬೇರೆ ಕೆಲಸದಲ್ಲಿರುವ ಕಾಲದಲ್ಲಿ ಶ್ರೀಮನ್ ಮಹಾರಾಜರವರ ಗೌರ್ನಮೆಂಟಿನ ಮುಜರೈ ಇಲಾಖಾ ಸೆಕ್ರೆಟರಿಯವರಾದ ಮ|| ಎಲ್. ಅನಂತಸ್ವಾಮಿ ರಾಯರು ಶ್ರೀಮನ್ ಮಹಾರಾಜರವರ ಗೌರ್ನಮೆಂಟಿನ ಜನರಲ್ ವ ರೆವಿನ್ಯೂ ಇಲಾಖೆಗಳ ಸೆಕ್ರೆಟರಿಯವರಾಗಿ ಆಕ್ಟಿಂಗ್ ತರೀಕು ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಮ|| ಎಲ್. ಅನಂತಸ್ವಾಮಿ ರಾಯರು ಬೇರೆ ಕೆಲಸದಲ್ಲಿರುವ ಕಾಲದಲ್ಲಿ ಅಸಿಸ್ಟೆಂಟ್ ಸೆಕ್ರೆಟರಿಯವರಾದ ಮ|| ಎಂ. ಶ್ಯಾಮರಾಯರು ಶ್ರೀಮನ್ ಮಹಾರಾಜರವರ ಗೌರ್ನಮೆಂಟಿನ ಮುಜರೈ ಸೆಕ್ರೆಟರಿಯವರಾಗಿ ಆಕ್ಟಿಂಗ್ ತರೀಕು ಮೊಕರರು ಮಾಡಲ್ಪಟ್ಟಿರುತ್ತಾರೆ.

ತಾರೀಖು 16ನೆ ಮಾರ್ಚಿ 1904.

ನಂ. ಜ. 4632, ಮ|| ರಾವು ಬಹದೂರು ಸಿ. ಮಾದಯ್ಯನವರು ಕೌನ್ಸಿಲರಾಗಿ ಮೊಕರರು ಮಾಡಲ್ಪಟ್ಟಿರುವದ್ದರಿಂದ ಇದರಡೀ ಕಂಡ ಮೊಕರರಾತಿಗಳು ವ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

ಕೋಲಾರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಾದ ಮ|| ಎಫ್. ಇ. ಸಿ. ಕಾರ್ ಯವರು ಪೊಲೀಸ್ ಇನ್ಸ್ಪೆಕ್ಟರ್ ಜನರಲ್ರಾಗಿರತಕ್ಕದ್ದು.

ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಾದ ಮ|| ಕೆ. ಪಿ. ಪುಟ್ಟಣಶೆಟ್ಟಿಯವರು ಕೋಲಾರ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

ಹಾಸನದ ಅಫಿಷಿಯೇಟಿಂಗ್ ಡೆಪ್ಯುಟಿ ಕಮಿಷನರಾದ ಮ|| ಕೆ. ಎಸ್. ದೊರೆಸ್ವಾಮಿ ಐಯ್ಯರ್ ಯವರು ತುಮಕೂರು ಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪಟ್ಟಿರುತ್ತಾರೆ.

ಸಕಲೇಶಪುರದ ಸಬ್ ಡಿವಿಜನ್ ಆಫೀಸರರಾದ ಮ|| ಪಿ. ಆರ್. ಡಬ್ಲ್ಯು. ವೆದರಾಲ್ ಯವರು ಹಾಸನ ಡಿಸ್ಟ್ರಿಕ್ಟಿನ ಸಬ್ ಪ್ರೊಟೆಂ ಡೆಪ್ಯುಟಿ ಕಮಿಷನರಾಗಿ ಮೊಕರರು ಮಾಡಲ್ಪಟ್ಟಿರುತ್ತಾರೆ.

ತಾರೀಖು 24ನೆ ಫೆಬ್ರವರಿ 1904

ನಂ. ರೆ. 2507, ಸನ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನೆಂದರೆ, ಇದರಡಿ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರಿ ಕೆಲಸಕ್ಕೆ ಅಂದರೆ ಚಿಕ್ಕನಾಯ್ಕನಹಳ್ಳಿ ಕಸಬಾದಲ್ಲಿ ಟವನ್ ಬಡಾಯಿಸೋಣದರಿಂದ ಮನೆಗಳನ್ನು ಕಟ್ಟುವ ಬಗ್ಗೆ ಬೇಕಾಗಿರುತ್ತವೆ. ಮತ್ತು ತುಮಕೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನನ್ನನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ನಂಬರು.	ಟವನಿನ ಹೆಸರು	ಖಾತೇದಾರ್ರ ಹೆಸರು	ಸರ್ವೆ ನಂಬರು: ನಂಬರು	ಸರ್ವೆ ನಂಬರು: ವಿವರ	ಖರಾರ					ಹೊಂದಬೇಕಾಗಿರುವ ಜಮೀನು: ವಿಸ್ತೀರ್ಣ		ಹೊಂದಬೇಕಾಗಿರುವ ಜಮೀನು: ಆಕಾರ			ಚಕ್ಕುಬಂದಿ: ಪೂರ್ವ.	ಚಕ್ಕುಬಂದಿ: ಪಶ್ಚಿಮ.	ಚಕ್ಕುಬಂದಿ: ಉತ್ತರ.	ಚಕ್ಕುಬಂದಿ: ದಕ್ಷಿಣ.
					ಎ.	ಗು.	ರೂ.	ಅ.	ಪೈ.	ಎ.	ಗು.	ರೂ.	ಅ.	ಪೈ.				
1	ಚಿಕ್ಕನಾಯ್ಕನಹಳ್ಳಿ ಕಸಬಾ	ಲಿಂಗಣ್ಣಜೆಟ್ಟಿ ಗೀಣಿ ರಾಮಯ್ಯ	121/1	ಖುಷ್ಕಿ	2	22	2	4	0	2	22	2	4	0	ಸರ್ವೆ ನಂ. 121—2 ಮತ್ತು 121—3	ಹುಳಿಯಾರ ರಸ್ತೆ	ಸರ್ವೆ ನಂ. 122	ಮಾಲೇನಹಳ್ಳಿಗೆ ಹೋಗುವ ದಾರಿ ಮತ್ತು ಸರ್ವೆ ನಂ. 120
2	ಡಿಟ್ಟೋ	ವ್ಯೈಲಾರಯ್ಯ	121/2	ಖುಷ್ಕಿ	3	3	2	12	0	3	3	2	12	0	ಬ್ಯಾಲಕೆರೆಗೆ ಹೋಗುವ ದಾರಿ	ಸರ್ವೆ ನಂ. 121/1	ಸರ್ವೆ ನಂ. 122	ಸರ್ವೆ ನಂ. 121/3
3	ಡಿಟ್ಟೋ	ಲಕ್ಕಣ್ಣ	121/3	ಖುಷ್ಕಿ	6	20	6	0	0	6	20	6	0	0	ಡಿಟ್ಟೋ	ಸರ್ವೆ ನಂ. 121/1	ಸರ್ವೆ ನಂ. 121/1	ಮಾಲೇನಹಳ್ಳಿಗೆ ಹೋಗುವ ದಾರಿ ಮತ್ತು ನಂ. 120
		ಜಮಾ...	..		12	5	11	0	0	12	5	11	0	0				

ತಾರೀಖು 11ನೆ ಮಾರ್ಚಿ 1904.

ನಂ. ರೆ. 2786, ಡೆಪ್ಯುಟಿ ಕಮಿಷನರಾದ ಮ॥ ತಿ. ದೇವರಾಜೆ ಅರಸಿನವರು 1904ನೆ ಫೆಬ್ರವರಿ 27ನೆ ತಾರೀಖಿನ ಪ್ರಾತಃಕಾಲದಲ್ಲಿ ಹಾಸನದ ಡಿಸ್ಟ್ರಿಕ್ಟ್ ನ ಟ್ರೆಜರಿಯ ಚಾರ್ಜನ್ನು ಅಫೀಷಿಯೇಟಿಂಗ್ ಡೆಪ್ಯುಟಿ ಕಮಿಷನರಾದ ಮ॥ ಕೆ. ಎಸ್. ದೊರಸ್ವಾಮಿ ಅಯ್ಯರ್ ಯವರಿಗೆ ಒಪ್ಪಿಸಿರುತ್ತಾರೆ.

ತಾರೀಖು 11ನೆ ಮಾರ್ಚಿ 1904.

ನಂ. ರೆ. 2797—ರೆ. ಫೈ. 93—97, ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟ್ ಬಾಗೇಪಲ್ಲಿ ತಾಲ್ಲೂಕಿನ ಅಮಲ್ದಾರ್ರಾದ ಮ॥ ಸಿ. ನಾಗೇಶ್ವರ ಅಯ್ಯರ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 3 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

2. ಗುಡಿಬಂಡೆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ರಾದ ಜಿ. ನಾರಾಯಣರಾಯರು, ಸದರೀ ಅಮಲ್ದಾರ್ರು ರಜಾದಲ್ಲಿ ರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಬಾಗೇಪಲ್ಲಿ ತಾಲ್ಲೂಕಿನ ಅಮಲ್ದಾರ್ ವ ಮೂರನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕಾ ಮೊಕರರ್ರು ಮಾಡಲ್ಪಟ್ಟಿರುತ್ತಾರೆ.

3. ಸಿಡ್ಲಘಟ್ಟದ ತಾಲ್ಲೂಕು ಷಿರಸ್ತೇದಾರ್ರಾದ ಕನ್ನಯ್ಯಶಾಸ್ತ್ರಿಯವರು ಮೇಲ್ಕಂಡ ಕಾಲದಲ್ಲಿ ಗುಡಿಬಂಡೆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ವ ಮೂರನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕಾ ಮೊಕರರ್ರು ಮಾಡಲ್ಪಟ್ಟಿರುತ್ತಾರೆ.

ತಾರೀಖು 12ನೆ ಮಾರ್ಚಿ 1904.

ನಂ. ರೆ. 2808, ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್‌ಗಳ 183ನೆ ಆರ್ಟಿಕಲ್ ಅನುಸರಿಸಿ ಕಡೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಾದ ಮ॥ ಎಂ. ನಾರಾಯಣರಾಯರಿಗೆ 1904ನೆ ಮಾರ್ಚಿ 15ನೆ ತಾರೀಖಿನ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ 12 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

2. ಮೇಲ್ಕಂಡ ರಜಾ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಅಸಿಸ್ಟೆಂಟ್ ಕಮಿಷನರಾದ ಮ॥ ಜೆ. ಪಿ. ಡಿಸೋಜಾ ಯವರು ಸದರೀ ಡಿಸ್ಟ್ರಿಕ್ಟಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 14ನೆ ಮಾರ್ಚಿ 1904.

ನಂ.—ಫೈ. 2540—ರೆ. ಫೈ. 142—96, ಮೈಸೂರ ಸರ್ವಿಸ್ ರೆಗ್ಯುಲೇಷರ್ನಗಳ 188ನೆ ಆರ್ಟಿಕಲ್ ಅನುಸರಿಸಿ ಕಂಟ್ರೋಲರವರ ಚೀಫ್ ಅಸಿಸ್ಟೆಂಟರಾದ ಮೆ|| ಟಿ. ವೈಯ್ಯಾಪುರಿ ಚೆಟ್ಟಿಯವರಿಗೆ 1904ನೆ ಫೆಬ್ರುವರಿ 29ನೆ ತಾರೀಖಿನಾರಭ್ಯ 9 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 14ನೆ ಮಾರ್ಚಿ 1904.

ನಂ.—ರೆ. 2830—ರೆ. ಫೈ. 56—1896, ಡೆಪ್ಯುಟಿ ಕಮ್ಮಿಷನರಾದ ಮೆ|| ಹೆಚ್. ಹೆಚ್. ಸ್ಪಾರ್ಕ್ಸ ಯವರು ಬೆಂಗಳೂರು ಡಿಸ್ಟ್ರಿಕ್ಟಿನ ಟ್ರೆಜರಿ ಚಾರ್ಜನ್ನು ಸೀನಿಯರ್ ಅಸಿಸ್ಟೆಂಟ್ ಕಮ್ಮಿಷನರಾದ ಮೆ|| ಎಂ. ಚೆಂಗಯ್ಯಚೆಟ್ಟಿಯವರಿಗೆ 1904ನೆ ಫೆಬ್ರುವರಿ 16ನೆ ತಾರೀಖು ಮಧ್ಯಾಹ್ನಾತ್ಪರ ಒಪ್ಪಿಸಿರುತ್ತಾರೆ.

ತಾರೀಖು 14ನೆ ಮಾರ್ಚಿ 1904.

ನಂ.—ರೆ. 2832—ರೆ. ಫೈ. 25—1901–2, ಮೈಸೂರು ಸರ್ವಿಸ್ ರೆಗ್ಯುಲೇಷರ್ನಗಳ 188ನೆ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಅಮಲ್‌ದಾರ್ರಾದ ಮೆ|| ಎಂ. ಪಿ. ವಿಶ್ವನಾಥರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಒಂದು ತಿಂಗಳು 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

2. ಸದರೀ ರಜಾದಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ತಾಲ್ಲೂಕು ಶಿರಸ್ತೇದಾರರಾದ ಮಹಮದ್ ಸೈಯದ್‌ಷರೀಫ್ ಯವರು ಮೂರನೆ ಕ್ಲಾಸ್ ಮ್ಯಾಜಿಸ್ಟ್ರೇಟರ ಅಧಿಕಾರಗಳನ್ನು ಚಲಾಯಿಸುತ್ತಾ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ಹುಕುಂ ಬಮೋಜಿಬ್,
ಬಿ. ಕೆ. ವೆಂಕಟವರದೈಯ್ಯಂಗಾರ್,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಛಾಪಿಸಲ್ಪಟ್ಟದ್ದು [ನಂ. 11.

ಬೆಂಗಳೂರು, ಗುರುವಾರ, ಮಾರ್ಚಿ ತಾ|| 17, ಸನ್ 1904.

IIನೆ ಭಾಗ.

ಇಂಡ್ಯಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜೀಯು ಪಗೈರೆಯರಿಂದ ಹೊರಡಿಸಿದ ಇಸ್ತಿಹಾರನಾಮೆಗಳು.

ವಿದ್ಯಾಭ್ಯಾಸದ ಇಲಾಖಾ.

ನೋಟಿಫಿಕೇಷನ್—ಡಿ. ನಂ. 50.

ತಾರೀಖು 2ನೆ ಮಾಹೆ ಮಾರ್ಚಿ ಸನ್ 1904ನೆ ಇಸವಿ.

ಮೈಸೂರು ಸೀಮೆಯ ಶಾಸನದ ಇಲಾಖಾ ಡೈರೆಕ್ಟರವರ ಅಸಿಸ್ಟೆಂಟರು ಮ|| ರಾ|| ಆರ್. ನೃಸಿಂಹಾಚಾರಿ, ಎಂ. ಎ. ಯವರಿಂದ ರಚಿಸಲ್ಪಟ್ಟ "ನಗೆಗಡಲು" ಎಂಬ ಪುಸ್ತಕವು ವರ್ನಾಕ್ಯುಲರ ಮತ್ತು ಆಂಗ್ಲೋ ವರ್ನಾಕ್ಯುಲರ ಮಿಡಲ್ ಸ್ಕೂಲುಗಳಿಗೋಸ್ಕರ ಬಹುಮಾನ ಪುಸ್ತಕವಾಗಿ ನಿಯಮಿಸಲ್ಪಟ್ಟಿರುತ್ತೆ. ಇದರ ಕ್ರಯ ಪ್ರತಿಯೊಂದಕ್ಕೆ 5 ಆಣೆಗಳು. ಇದನ್ನು ಗ್ರಂಥಕರ್ತರಿಂದ ಕ್ರಯಕ್ಕೆ ಪಡೆಯಬಹುದು.

ಹೆಚ್. ಜೆ. ಭಾಭಾ,
ಇನ್ಸ್‌ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ತುಮಕೂರು ಡಿಸ್ಟ್ರಿಕ್ಟ್.

ಪ್ರಸಿದ್ಧ ಪತ್ರಿಕೆ.

ತುಮಕೂರು ಡಿಸ್ಟ್ರಿಕ್ಟ್ ಕೊರಟಗೆರೆ ಸಬ್ ತಾಲ್ಲೂಕು ಮಾವತ್ತೂರು ತಲಾವು ಅಚ್ಚುಕಟ್ಟಿಗೆ ಸೇರಿದ ಫಡ ಜಮೀನುಗಳು 1904ನೆ ಇಸವಿ ಮಾರ್ಚಿ 30ನೆ ಮಾಹೆಯಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು 157—158 ವ 159ನೆ ಪುಟಗಳಲ್ಲಿ 1904ನೆ ಮಾರ್ಚಿ 3ನೆ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಫಾಯಿಷಾಗಿ ಇದೆ.

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಡಿಪ್ಯುಟಿ ಕಮಿಷನರ್.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್, ತಾರೀಖು 12ನೆ ಮಾರ್ಚಿ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರಡಿ ಕಂಡ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ-ಶಿವಮೊಗ್ಗ ಡಿಸ್ಟ್ರಿಕ್ಟ್ ಡಿಪೋಗಳ ಬಾಬತು ಚಿಲ್ಲರೆ ಸಾಮಾನು ರೇಂಜ್ ಫಾರೆಸ್ಟ್ ಆಫಿಸರು ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರಿಂದ ನೇಮಿಸಲ್ಪಡುವ ಇತರ ಆಫಿಸರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ:—

ನಂಬರು.	ಡಿಪ್ಪೋ ಹೆಸರು.	ಹರಾಜು ತಾರೀಖು.	ಸಾಗವಾನಿ ನಾಟಾ.		ಮಸ್ನಾ ಮತ್ತು ಕಾಡುಜಾತಿ ನಾಟಾ.		ಸಾಗವಾನಿ ಬೆಲಗು ಮತ್ತು ತುಂಡುಗಳು.		ಜಂಗಲಿ ಬೆಲಗು ಮತ್ತು ತುಂಡುಗಳು.		ಕಟ್ಟಿಗೆ.	ಹೆಬ್ಬಿದರು.	ಕಿರಿಬಿದರು.	ಹರಾಜು ಮಾಡಿಸುವ ಆಫಿಸರ ಹೆಸರು.	ಷರಾ.
1	ಉಂಬಳೆಬೈಲು ..	2—4—1904	10	250	190	6,500	...	..	..	...	..	..	..	ಶಿವಮೊಗ್ಗ ರೇಂಜ್ ಆಫಿಸರವರು.	
2	ಶಿವಮೊಗ್ಗ ...	4—4—1904	25	700	50	1,400	200	..	100	...		...	..		
3	ಸಕ್ರೆಬೈಲು ..	6—4—1904	10	250	..	..	..	..	10	250	50 ಗಾಡಿಗಳು	...	...		
4	ಪುರದಾಳು ಜಂಗಲಿ ..	8—4—1904	..	..	..	..	..	..	...	..	...	...	..		
5	ಆಯನೂರು ..	9—4—1904	..	..	140	3,354	200	...	...	...	..	..	..		
6	ಕುಂಸಿ .	12—4—1904	..	..	....	...	500	...	...	...	...	...	...		
7	ಬೆಂಕಿಪುರ ..	2—5—1904	...	..	..	..	150	1,500	..	..	...	...	..	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರು	[illegible]
8	ತಲಗಡ್ಡೆ ..	5—4—1904	6	123¼	...	..	1,480	9,549	....	..	...	...	....	ಸೊರಬ ರೇಂಜ್ ಆಫಿಸರವರು.	
9	ಅರತಲಗಡ್ಡೆ ಸ್ಟೇಟ್ ಫಾರೆಸ್ಟ್	6—4—1904	..	....	..	..	1,296	7,794¼	...	..	...	...	..		
10	ಡಿಟೋ ಡಿಸ್ಟ್ರಿಕ್ಟ್ ಫಾರೆಸ್ಟ್	7—4—1904	....	..	...	....	332	2,108½	..	...	..	...	...		
11	ಸಿರಾಳಕೊಪ್ಪ ..	9—4—1904	...	..	120	2,500	124	455	...	...	..	500	2,700		
12	ಶಿಕಾರಿಪುರ ...	11—4—1904	..	..	100	2,500	390	988	..	..	..	...	350		

ಹರಾಜು ಷರತ್ತು.—15—3—95ನೆ ಮುರ್ಸ್ಸಲ್ ನಂಬರು 15229—R. F. 155-92ನೆ ಗವರ್ನಮೆಂಟ್ ನೋಟಿಫಿಕೇಷನ್ ಮೇರಿಗೆ.

ಎಂ. ವೆಂಕಟನಾರಣಪ್ಪ, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಶಿವಮೊಗ್ಗ.

ಹಾಸನ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮಾ.

ತಾರೀಖು 2ನೆ ಮಾರ್ಚಿ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಹೊಳೇನರಸೀಪುರದ ಟವುನ್ ಅಭಿವೃದ್ಧಿಗೋಸ್ಕರ ಇದಕ್ಕೆ ಲಗತ್ತಿರುವ ಷೆಡ್ಯೂಲ್ ಪಟ್ಟಿಯಲ್ಲಿ ವಿವರಿಸಿರುವ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡಿರುತ್ತೆಯಲ್ಲದೆ ಆಯಾಯ ಜಮೀನುಗಳಿಗೆ ಠರಾವಾಗಿರುವ ಪರಿಹಾರದ ಮೊಬಲಗನ್ನು ಸದರಿ ಮೊಬಲಗನ್ನು ತೆಗದುಕೊಳ್ಳಲು ತಮಗೆ ಹಕ್ಕಿರುವದಾಗಿ ತಿಳಿಸುವವರ ಹೆಸರನ್ನು ಪಟ್ಟಿಯಲ್ಲಿ ಕಾಣಿಸಿರುತ್ತೆ.

ಈ ಕೆಳಗೆ ಕಂಡ ಪಟ್ಟಿಯಲ್ಲಿ ನಮೂದಿರುವ ಜಮೀನುಗಳಿಗೆ ವಿಧಿಸಿರುವ ಕಂಪೆನ್‌ಶೇಷನ್ ಮೊಬಲಗನ್ನು ಪಡಿಯಲು ಸದರಿ ಪಟ್ಟಿಯ 3ನೆ ಕಲಂನಲ್ಲಿ ತೋರಿಸಿರುವವರಲ್ಲದೆ ಯಾರಿಗಾದರೂ ಹಕ್ಕುದಾರಿ ಇರುವಲ್ಲಿ ತಕ್ಕ ದಾಖಲಾತುಗಳೊಡನೆ ಈ ಇಸ್ತಿಹಾರ್ ತಾರೀಖು ಲಾಗಾಯತು ಮೂರು ತಿಂಗಳೊಳಗೆ ಹಾಸನ ಡಿಸ್ಟ್ರಿಕ್ಟಿನ ಜನರಲ್ ಅಸಿಸ್ಟೆಂಟ್ ಕಮಿಷನರವರಲ್ಲಿ ಹಾಜರಾಗಿ ಅವರ ಹಕ್ಕುದಾರಿಯನ್ನು ಊರ್ಜಿತ ಪಡಿಸಿಕೊಳ್ಳದೆ ಇದ್ದಲ್ಲಿ ಮೇಲ್ಕಂಡ ಪಟ್ಟಿಯ 3ನೆ ಕಲಂನಲ್ಲಿ ತೋರಿಸಿರುವವರಿಗೇನೆ ಮೊಬಲಗನ್ನು ಪಾವತಿ ಮಾಡುತ್ತೆ ನಂತರ ಬರುವ ತಕರಾರುಗಳನ್ನು ಅಂಗೀಕರಿಸಲಾರೆವು.

ಷೆಡ್ಯೂಲ್.

ನಂಬರು	ಜಮೀನು ತಪ್ಸೀಲ್ ಮತ್ತು ವಿಸ್ತೀರ್ಣ.	ಠರಾಯಿಸಿರುವ ಪರಿಹಾರದ ಮೊಬಲಗು.	ಮೊಬಲಗು ಪಡಿಯಲು ಹಕ್ಕಿರುವದಾಗಿ ಹೇಳುವವರ ಹೆಸರು ಮತ್ತು ಅವರ ಹಕ್ಕಿನ ತರಹಾ.
1	26 × 8 = 208 ಸಲಿ ಗಜ ವಿಸ್ತೀರ್ಣವುಳ್ಳ ಖಾಲಿ ನಿವೇಶನ. (ಖಾತೇದಾರ ಚಳ್ಳಿ)	13—0—0	ಶ್ರೀನಿವಾಸಾಚಾರ್ರು, ಕ್ರಯದಾರ್ರಾಗಿ
2	19—4—1900ನೆ ಮುರ್ರ್ಕಂ ಮೈಸೂರ ಗೆಜೆಟ್ಟಿನಲ್ಲಿ 34 ಮತ್ತು 35ನೆ ಕೇಸುಗಳಾಗಿ ಘಾಯಿಷಾಗಿರುವ ಗೊರವ ಮತ್ತು ಗೊರವೈದ್ಯನ ಬಾಬಿತು ಮನೆ ಮತ್ತು ಹಿತ್ತಲು. (ಖಾತೆ ಪ್ರೋಪರೈಯರ್ ಧರ್ಮ ಶಿಂಗಯವರ ಹೆಸರಿನಲ್ಲಿದೆ)	76—4—0	1. ಮೈಲಾರಿ 2. ನಿಂಗಿ ಪ್ರಸಕ್ತವಾದ ಜಮೀನು ಎರಡು ತಾಕುಗಳ ಕ್ರಯದಾರ್ರಾಗಿ
3	19—4—1900ನೆ ಮುರ್ರ್ಕಂನೆ ಬಾಬತು ಮೈಸೂರ ಗೆಜೆಟ್ಟಿನಲ್ಲಿ 9ನೆ ನಂಬರು ಕೇಸಾಗಿ ನೋಟಿಫಿಕೇಷನ್ ಸಿಸಿ ಘಾಯಿಷಾಗಿರುವ ಜಮೀನು ಸರ್ವೆ ನಂಬರು 94 (ಪೈಕಿ 1) ಖಾತೆ ಪುಟ್ಟನರಸಿಹ್ಮಯ್ಯನ ಹೆಸರಿನಲ್ಲಿದೆ.	222—8—0	ಖಾದ್ರಿಶೆಟ್ಟಿ, ಕ್ರಯದಾರನಾಗಿ

ಕೆ. ಮತ್ತಾಕ್ಸ್,
ಫಾರ್ ಡೆಪ್ಯುಟಿ ಕಮಿಷನರ್.

ತಾರೀಖು 10ನೆ ಮಾರ್ಚಿ 1904.

ಸಕ್ಕಲ ಜನಗಳಿಗೂ ತಿಳಿಯುವ ಬಗ್ಯೆ (ಇದರಿಂದ ಪ್ರಕಟಿಸಲ್ಪಡುವದೇನಂದರೆ, ಇದರಡಿ ಕಂಡ ತಖ್ತೆಯಲ್ಲಿನ ಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿಗ್ರಾಮದ ಪೈಕಿ $\frac{1}{3}$ ಮೂರನೆ ಒಂದುಭಾಗ ವೃತ್ತಿಯನ್ನು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡದರಬಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರರು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜ್ ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ಲುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಖ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜ್ ಮವುಕೂಫ್ ಮಾಡಲ್ಪಡತಕ್ಕದ್ದು.

7. ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿಮಾಡಿ, ಹರಾಜನ್ನು ಡೆಪ್ಯುಟಿ ಕಮಿಷನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದುಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲಿನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲೀ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ಲುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ಗೌರನ್ಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ. ಅಂಥಾ ಅಪ್ಪೀಲಿನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿ	ಗ್ರಾಮ	ಜೋಡಿದಾರನ ಹೆಸರು	ಅಂದಾಜಾ ಬೀಜವರಿ		ಅಂದಾಜಾ ಹುಟ್ಟುವಳಿ ಯಾ ಬೇರೀಜು			ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ	ಹರಾಜು ತಾರೀಖು ವಗ್ಯೆರೆ
ಹಾಸನಾ	ಹೊಳೇನರಸೀಪುರ	ಕಸಬಾ	ಜೋಡಿ ಹರಳಹಳ್ಳಿ	ಸುಬ್ರಾಯ ವಗ್ಯೆರೆ	ಎ.	ಗು.	ರೂ.	ಆ.	ಪೈ.	ರೂ. ಆ. ಪೈ.		ತಾಲ್ಲೂಕು ಕಚೇರಿ ರೂಬರೂಬು ಜನರಲ್ ಅ॥ ಕಮಿಷನರವರು 10—5—1904ನೆ ಮಂಗಳವಾರದಲ್ಲಿ ಹರಾಜು ಹಾಕಿಸುತ್ತಾರೆ.
				ಖುಷ್ಕಿ ..	457	14	267	12	0	183—0—0	246— 6—0 ಏಕಾರಿ ಸಾಲ್ ಲಾಗಾಯಿತು ಶುಭಕೃತುವರಿಗೆ	
				ತರಿ ..	11	29	11	8	0			
				ಬಾಗಾಯತು ...	0	9	1	0	0		1— 8—0 ಪ್ರೊಸೆಸ ಫೀ	
				ಪರಂಪೋಕು ...	47	1	0	12	0			
				ಜಮಾ ..	516	13	281	0	0		247-14-0	
				ಈ ಗ್ರಾಮದ ಪೈಕಿ ⅓ ಭಾಗ ವೃತ್ತಿ.								

ತಾರೀಖು 10ನೆ ಮಾರ್ಚಿ 1904.

ಸಕಲ ಜನಗಳಿಗೂ ತಿಳಿಯುವ ಬಗ್ಗೆ (ಇದರಿಂದ ಪ್ರಕಟಿಸಲ್ಪಡುವದೇನಂದರೆ, ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತಿ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀಗ್ರಾಮವು ಇದರಡೀ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು ಮತ್ತು ಸದರೀ ತಾರೀಖಿನಲ್ಲಿ ಪಗ್ಲೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಾಸ್ತಿ ದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನು ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರರು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗಿನ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ ಇಡಬೇಕಾಗಿರುತ್ತೆ. ಕ್ರಯದ ಮೊಬಲಗಿನ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ಲುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುಖ್ತಾಲೀಕರ ತರ್ಫ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುಖ್ತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥ ರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲೆ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂಚಿತವಾದ್ದ ಪಾವತಿ ಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜ್ ಮುಲ್ತವಿ ಮಾಡಲ್ಪಡತಕ್ಕದ್ದು.

7. ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿಮಾಡಿ, ಹರಾಜನ್ನು ಡೆಪ್ಯುಟಿ ಕಮಿಷನರವರು ಖಾಯಂ ಮಾಡಿದ ಕೂಡಲೆ ಗ್ರಾಮವು ಆತನ ಸ್ವಾಧೀನ ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ ಮಾಡಲ್ಪಟ್ಟು, ಡೆಪ್ಯುಟಿ ಕಮಿಷನರವರಿಂದ ರುಜು ಮೊಹರ ಮಾಡೋಣವಾದ ಬಂದು ಸರಟಫಿಕೇಟ ಆತನಿಗೆ ಕೊಡಲ್ಪಡುವದು. ತಪಶೀಲಿನಲ್ಲಾಗಲಿ ಅಂದಾಜು ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ತಿಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ಲುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ಗೌರ್ನಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಾಗಿರುತ್ತಾರೆ. ಅಂಥಾ ಅಪ್ಪೀಲನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಜಿಲ್ಲೆ.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ಜಮೀನಿನ ವಿವರ.	ಎ.	ಗು.	ಕಂದಾಯದ ಒಟ್ಟು ಬೀಜವರಿ	ಸರ್ಕಾರದ ಕಂದಾಯದ ವಿವರ	ರೂ.	ಆ.	ಪೈ.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.	ರೂ.	ಆ.	ಪೈ.	ಹರಾಜು ತಾರೀಖು ವಗೈರೆ.
ಹಾಸನ	ಹಾಸನ	ಸಾಲಗಾಮೆ	ಜೋಡಿ ನಾರಾಯಣಪುರ	ವೆಂಕಟನಾರಾಯಣಭಟ್ಟ ವಗೈರೆ	ಖುಷ್ಕಿ ...	853	5	[illegible]	ಕ್ವೇಟರೆಂಟ	346	0	0	ಬಾಕ್ಯರ	120	8	1	ಹಾಸನದ ತಾಲ್ಲೂಕು ಕಛೇರಿಯಲ್ಲಿ 10-5-04ನೇ [illegible]
					ತರಿ ...	59	34		ಲೋಕಲ ಫೀಜು	55	12	3	ಪ್ರಸ್ತ	392	15	2	
					ಬಾಗಾಯತು	28	17						ಕಭಾಕ್ತಿತು	401	12	3	
					ಬಂಜರು ...	117	35		ಜುಮ್ಲಾ	401	12	3	ಜುಮ್ಲಾ ...	915	3	6	
					ಜುಮ್ಲಾ ...	1059	11						ಪ್ರೊಸೆಸ್ ಫೀ	1	0	0	
														916	3	6	

ಕೆ. ದೊರಸಾಮಿ ಅಯ್ಯರ್,
ಡೆಪ್ಯುಟಿ ಕಮಿಷನರ.

ಜಪ್ತಿ ಸ್ಥಿರಸ್ವತ್ತಿನ ಹರಾಜಿನ ಇಸ್ತಿಹಾರ ಮತ್ತು ಬರಹಮೂಲಕವಾದ ನೋಟೀಸ್.

"ಲ್ಯಾಂಡು ರೆವಿನ್ಯೂ ಕೋಡಿನ 171ನೆ ಪ್ರಕರಣದ ಪ್ರಕಾರ."

ಅದರಡಿ ವಿವರಿಸಿರುವ ನಾರಾಯಣಭಟ್ಟ ವಗೈರೆ 9 ಜನರ ಸ್ವತ್ತು ಸದರಿ ನಾರಾಯಣಭಟ್ಟ ವಗೈರೆ 9 ಜನರಿಂದ ಬರಬೇಕಾದ (605-6-6) ಮೊಬಲಗಿನ ಸರಕಾರದ ಕಂದಾಯಕ್ಕೋಸ್ಕರ ಜಪ್ತಾಗಿರುವದ್ದರಿಂದ ಮತ್ತು ಸದರಿ ಸ್ವತ್ತಿನ ಹರಾಜಿನಿಂದ ಸದರಿ ಮೊಬಲಗನ್ನು ಸದರಿ ಜಪ್ತಿ ಹರಾಜಿನಿಂದ ಉಂಟಾದ ಎಲ್ಲಾ ನ್ಯಾಯವಾದ ಲಗಾಯ್ತುಗಳು ಮತ್ತು ಖರ್ಚುಗಳ ಸಮೇತವಾಗಿ ವಸೂಲು ಮಾಡೋಣ ಜರೂರಾಗಿರುವದ್ದರಿಂದ 1904ನೆ ಇಸವಿ ಏಪ್ರೈಲ್ ಮಾಹೆ 20ನೆ ದಿನ ದಿವಿ 11 ಘಂಟೆಯಲ್ಲಿ ಸಕಲೇಶಪುರದ ಸಬ್ ಡಿವಿಜನ್ ಆಫೀಸರವರು ಮಂಜರಾಬಾದು ತಾಲ್ಲೂಕು ಜೋಡಿ ಆಲವಳ್ಳಿ ಗ್ರಾಮದಲ್ಲಿ ಹರಾಜುಮೂಲಕವಾಗಿ

ಯೂ, ನಿರಾತಂಕವಾಗಿಯೂ ಇದರಡಿ ವಿವರಿಸಿರುವ ಸ್ವತ್ತಿನಲ್ಲಿ ಸದರಿ ನಾರಾಯಣಭಟ್ಟ ವಗೈರೆ ಹಕ್ಕು ಬಾಧ್ಯತೆ ಮತ್ತು ಪ್ರಯೋಜನ ಇವನ್ನು ಮತ್ತೂ ಈಗ ಕಾನೂನಿಗೆ ಅನುಸಾರವಾಗಿ ಸದರಿ ನಾರಾಯಣಭಟ್ಟ ವಗೈರೇರು ತಮ್ಮ ಸ್ವಂತ ಫಾಯಿದೆಗೋಸ್ಕರ ಹಕ್ಕು ಬಾಧ್ಯತೆ ಮತ್ತು ಪ್ರಯೋಜನ ಅಥವಾ ಇವುಗಳ ಪೈಕಿ ಯಾವದನ್ನಾದರೂ ಅಥವಾ ಅವುಗಳಿಂದ ಹುಟ್ಟುವ ಆದಾಯವನ್ನು ವಿಲೇವಾರಿ ಮಾಡುವದಕ್ಕೋಸ್ಕರ ಚಲಾಯಿಸಬಹುದಾದ ಪ್ರತಿ ಅಧಿಕಾರವನ್ನು ಸಹ ಚಾಕಸವಾಲುದಾರನಿಗೆ ಖರೀದಿ ಮಾಡುತ್ತಾರೆಂಬುದಾಗಿ ಈ ಮೂಲಕವಾಗಿ ನೋಟೀಸು ಕೊಟ್ಟಿರುತ್ತದೆ :—

[illegible]	[illegible]	[illegible]	[illegible]	[illegible]	ಬಾಬು	ಎಕರೆ.	ಆಕಾರ.	ಸರಕಾರಕ್ಕೆ ಬರತಕ್ಕ ಬಾಕಿ ಕಂದಾಯ ಸೆಸ್ಸು ವಗೈರೆ.	[illegible]	[illegible]
1 ಜೋಡಿ ಬಿಲುವ ... ಗ್ರಾಮ	5,000—0—0		...		ಗ್ರಾಮ ಬಂಜರ್...	141—13	2 - 0 - 0	ವಿಶಾಲ 121- 13-6	[illegible]	[illegible]
					ಖುಷ್ಕಿ	134— 8	21—4—0	ಹಾಲ್ 241-12-6		
					ತರಿ	115—25	389—0—0	ಒಟ್ಟು 241—12-6		
					ತೋಟ..	1—11	0 - 4 - 0			
							412—8—0	605— 6— 6		
							ನೋಟೀಸು ಫೀ..	2— 0 - 0		
								607— 6 — 6		
							ಹರಾಜು ತಾರೀಖು ವರೆಗೆ ಬಡ್ಡಿ ಬರಬೇಕು			

ಗ್ರಾಮದ ಜಮೀನು ಆಬಾದು ಬಗ್ಗೆ ಗ್ರಾಮವನ್ನೇ ರೀಡು ಮಾಡಿಕೊಂಡು ಸರ್ಕಾರದಿಂದ ಕಂತುವಾರಾಗಿ ಕೊಟ್ಟಿರುವ ಸಾಲದ ಬಾಬಿನ 6,000- 0—0 ಒಟ್ಟು ಜಮಾ 6,607 - 6—6.

ಇದರಹೊರತು ಈ ಬಗ್ಗೆ ವಿಧಾಯಕವಾದಂತೆ ಮುಂದೆ ಹರಾಜು ತಾರೀಖು ವರಿಗೆ ಲೆಕ್ಕಾಚಾರದರೀತ್ಯಾ ಆಗುವ ಬಡ್ಡಿಯು ಸಹ ಬರಬೇಕಾಗಿದೆ.

ಷರಾ :- ಸದರಿ ನಾರಾಯಣಭಟ್ಟ ವಗೈರೆ ಬಾಧ್ಯತೆಯನ್ನು ಕುರಿತು ಅಥವಾ 3ನೆ ಯಾವರು ಬರಬೇಕೆಂಬುವ ಹಕ್ಕುಗಳು ಲಾಗವಡಗಳು ಅಥವಾ ಪ್ರಯೋಜನ ಇವುಗಳಲ್ಲಿ ಯಾವದರ ಸಲುವಳಿಯನ್ನ ಕುರಿತಾದರೂ ಬರವಸೆಯನ್ನು ಕೊಟ್ಟಿರುವದಿಲ್ಲಾ.

ಜಿ. ರಾಮಸ್ವಾಮಯ್ಯ,
ಫಾರ್ ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು 5ನೆ ಮಾರ್ಚಿ 1904.

ಸನ್ 1904ನೆ ಇಸವಿ ಫೆಬ್ರುವರಿ ತಾರೀಖು 25ನೆ ಮೈಸೂರ ಗೆಜೆಟ್ 2ನೆ ಭಾಗದ 149-150-151ನೆ ಪುಟಗಳಲ್ಲಿ ಪ್ರಕಟವಾಗಿರುವ ಇಸ್ತಿಹಾರ್ನಾಮೆಯಲ್ಲಿ ನಮೂದಿರುವ ಶಿವಮೊಗ್ಗಾ ಡಿಸ್ಟ್ರಿಕ್ಟು ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ದಿವಾರ್‍ಸಾಗಿ ನಿಂತಿರುವ ದಸ್ತಾವೇಜುಗಳನ್ನ ಇಸ್ತಿಹಾರ್ನಾಮೆಯು ಗೆಜೆಟ್ಟಿನಲ್ಲಿ ಪ್ರಕಟವಾದ ತಾರೀಖು ಲಾಗಾಯಿತು ಒಂದು ತಿಂಗಳು ಅವಧಿಯೊಳಗೆ ವಾಪಸು ಪಡೆಯದಿದ್ದಲ್ಲಿ ನಾಶಪಡಿಸಿಬಿಡುತ್ತಾರೆ ಸಂಗತಿ ಈ ಮೂಲಕ ತಿಳಿಸಿರುತ್ತದೆ.

ಎಂ. ಎಸ್. ನಾರಾಯಣರಾವ್, ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

ಕಡೂರು ಡಿಸ್ಟ್ರಿಕ್ಟು.

ನೋಟಿಸ್.

ಸನ್ 1904ನೆ ಇಸವಿ ಮಾರ್ಚಿ ತಾರೀಖು 10, ಚಿಕ್ಕಮಗಳೂರು.

ಮೂಡಿಗೆರೆ ತಾಲ್ಲೂಕಿನಲ್ಲಿ ಇರುವ ತಮ್ಮ ಬಾಳೂರು ಕಾಫಿ ಯಸ್ಟೇಟಿಗೆ ಕೆಲವು ಕಾಡು ದನಗಳ ಗುಂಪುಗಳು ಬಂದು ಕೆಡಕು ಮಾಡುತ್ತವೆ ಎಂತಲೂ ಅವುಗಳನ್ನ ಹಿಡಿದು ದೊಡ್ಡಿಗೆ ಕಳುಹಿಸುವದಕ್ಕೆ ಅಸಾಧ್ಯವಾಗಿ ಇರುತ್ತೆಂತಲೂ, ಸದರಿ ಎಸ್ಟೇಟ್ ಮೆ|| ಜರಲ್ಡ್ ಅಟ್‌ಕಿನ್ಸ್ ಸಾಹೇಬರವರು ಫಿರ್ಯಾದು ಮಾಡಿದ್ದರಮೇಲೆ ಸದರಿ ಜಾನುವಾರುಗಳ ಮಾಲೀಕರುಗಳು ಅವುಗಳನ್ನ ಕಟ್ಟಿ ಹಾಕಿಕೊಳ್ಳದೆ ಹೋದಲ್ಲಿ ಅವುಗಳನ್ನು ನಾಶ ಪಡಿಸುವ ಬಗ್ಗೆ ಲೈಸೆನ್ಸು ಕೊಡಲ್ಪಡುತ್ತೆ ... [illegible]
ನೋಟಿಸು ಕೊಟ್ಟಿದೆ ... [illegible]

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಬೆಂಗಳೂರು ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1903—1904ನೆ ಇಸವಿ ಮಿ॥ ಅರ್ಜೀ ನಂಬರ 318.

ಮೃತಪಟ್ಟ ನೀಲಕಂಠರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ಕಿಲ್ಲೆಯಲ್ಲಿ ಬಕ್ಷಿ ಭೀಮರಾಯರ ಮಕ್ಕಳು ಅರಮನೆ ಮುಸಾಹೇಬ್ ರಾಮರಾಯರ ಮನೇಲಿ ಇರುವ 1ನೆ ದತ್ತೂರಾವ್, 2ನೆ ಅಮೃತರಾವ್ ಮೈನರ್, ತಾಯಿ ನೆಕ್ಸ್ಟ್‌ಫ್ರೆಂಡ್ ಗಾರ್ಡಿಯನ್ ದ್ವಾರಕಾಬಾಯಿ, ಮೃತಪಟ್ಟ ಸದರೀ ನೀಲಕಂಠರಾಯರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ತುಮಕೂರು ವಾಸಸ್ಥರಾಗಿ ಮೃತಪಟ್ಟ ನೀಲಕಂಠರಾಯರ ಜಿಂದಗಿ ಬಗ್ಗೆಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ದತ್ತೂರಾವ್, 2ನೆ ಅಮೃತರಾವ್ ಮೈನರ್, ಗಾರ್ಡಿಯನ್ ದ್ವಾರಕಾಬಾಯಿ ಅರ್ಜಿಯನ್ನು ಸರ್ 1904ನೆ ಇಸವಿ ಏಪ್ರಿಲ್ ತಿಂಗಳು ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನೀಲಕಂಠರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1904ನೆ ಇಸವಿ ಮಾರ್ಚಿ ತಿಂಗಳು 8ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಮ್ಮ ದಸ್ತಖತ್ತೂಡನೆ ಕೊಡೋಣಾಗಿದೆ.

ಎಸ್. ಆರ್. ಸುಬ್ರಾಯ ಅಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗೆ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1903—1904ನೆ ಇಸವಿ ಮಿ॥ ಅರ್ಜೀ ನಂಬರ 287.

ಬೇಕಿಪುರದಲ್ಲಿ ಇದ್ದು ಮೃತಪಟ್ಟ ಅಕ್ಕಮಂಚೆ ರುದ್ರಣ್ಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು 1. ಅಕ್ಕಮಂಚೆ ರಾಚಪ್ಪ ಬಿನ್ ಪರಮಪ್ಪಾಜಿ ಇವನ ತಮ್ಮ ಈರಾ ಮೈನರ್, ಗಾರ್ಡಿಯನ್ 1ನೆ ಅರ್ಜೀದಾರ್ ಶಿವಮೊಗ್ಗಾ ತಾಲ್ಲೂಕು ಬಿದರೆ ಮಾ॥ ಗುರುಪುರ, ಮೃತಪಟ್ಟ ಸದರೀ ರುದ್ರಣ್ಣನವರಿಗೆ ಚಿಕ್ಕದೊಡ್ಡಪ್ಪನ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗಾ ತಾಲ್ಲೂಕು ಬಿದರೆ ಮಾ॥ ಗುರುಪುರ, ಸ್ಥಳದ 1ನೆ ರಾಚಪ್ಪ, 2ನೆ ಈರ, ಇವರು ಬೇಕಿಪುರದ ವಾಸಸ್ಥರಾಗಿ ಮೃತಪಟ್ಟ ಅಕ್ಕಮಂಚೆ ರುದ್ರಣ್ಣನವರ ಜಿಂದಗಿ ಬಗ್ಗೆಯಾಗಿ ಬರತಕ್ಕ 1,563—0—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೆ ಇಸವಿ VIIನೆ ನಂಬರ್ ರೆಗ್ಯುಲೇಷನ್ ಮೇರೆಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಅಕ್ಕಮಂಚೆ ರಾಚಪ್ಪ, 2ನೆ ಈತನ ತಮ್ಮ ಈರ ಇವರ ಅರ್ಜಿಯನ್ನು ಸರ್ 1904ನೆ ಇಸವಿ ಮಾರ್ಚಿ ತಿಂಗಳು ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರುದ್ರಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1904ನೆ ಇಸವಿ ಫೆಬ್ರುವರಿ ತಿಂಗಳು 25ನೆ ತಾರೀಖಿನಲ್ಲಿ ಕೋರ್ಟಿನ ಮೊಹರಿನಿಂದ ನಮ್ಮ ದಸ್ತಖತ್ತೂಡನೆ ಕೊಡೋಣಾಗಿದೆ.

ಸರ್ 1903—1904ನೆ ಇಸವಿ ಮಿ॥ ಅರ್ಜೀ ನಂಬರ್ 289.

ಶಿವಮೊಗ್ಗದಲ್ಲಿ ವಾಸವಾಗಿದ್ದು ಮೃತಪಟ್ಟ ಬೂದಿಹಾಳ್ ಮಲ್ಲಪ್ಪ ಈತನ ತಮ್ಮ ನಿಂಗಣ್ಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಭೀಮಕ್ಕ, ಮಲ್ಲಪ್ಪನ ಹೆಂಡತಿ, ಶಿವಮೊಗ್ಗ ವಾಸಿ, ಮೃತಪಟ್ಟ ಸದರೀ ಬೂದಿಹಾಳ್ ಮಲ್ಲಪ್ಪ-ನಿಂಗಣ್ಣನವರಿಗೆ ಮಲ್ಲಪ್ಪನಿಗೆ ಹೆಂಡತಿ, ನಿಂಗಣ್ಣನಿಗೆ ಅತ್ತಿಗೆ ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗ ಸ್ಥಳದ ಭೀಮಕ್ಕನು, ಶಿವಮೊಗ್ಗ ವಾಸಸ್ಥ

ರಾಗಿ ಮೃತಪಟ್ಟ ಮಲ್ಲಪ್ಪ ಮತ್ತು ನಿಂಗಂಣನವರ ಜಿಂದಗಿ ಬಗ್ಯಾಗಿ ಬರತಕ್ಕ 633—5—10 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೆ ಇಸವಿ VIIನೆ ನಂಬರ್ ರೆಗ್ಯುಲೇಷರ್ ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಛೀಮಕ್ಕನ ಅರ್ಜಿಯನ್ನು ಸರ್ 1904ನೆ ಇಸವಿ ಮಾರ್ಚಿ ತಿಂಗಳು ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಲ್ಲಪ್ಪ ಮತ್ತು ನಿಂಗಂಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1904ನೆ ಇಸವಿ ಮಾರ್ಚಿ ತಿಂಗಳು 2ನೆ ತಾರೀಖಿನಲ್ಲಿ ಕೋರ್ಟಿನ ಮೋಹರನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸರ್ 1903—1904ನೆ ಇಸವಿ ಮಿ|| ಅರ್ಜೀ ನಂಬರ್ 290.

ಶಿವಮೊಗ್ಗ ತಾಲ್ಲೂಕು ಗಾಜನೂರು ಮಾಗಣೆ ಮತ್ತೂರಲ್ಲಿ ಮೃತಪಟ್ಟ ಕೃಷ್ಣಾವಧಾನಿಗಳವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್‍ರು ರಾಮಸ್ವಾಮಿ ಬಿ॥ ಕೃಷ್ಣಾವಧಾನಿ ಮೈನರ್, ಗಾರ್ಡಿಯನ್ ತಾಯಿ ಚನ್ನಮ್ಮ, ಶಿವಮೊಗ್ಗ ತಾಲ್ಲೂಕು ಗಾಜನೂರು ಮಾಗಣೆ ಮತ್ತೂರು ವಾಸಿ, ಮೃತಪಟ್ಟ ಸದರೀ ಕೃಷ್ಣಾವಧಾನಿಗಳವರಿಗೆ ದತ್ತು ಮಗನು ಆಗಬೇಕೆಂಬ ಹಕ್ಕುದಾರ ಮೇಲೆ ಮತ್ತೂರು ಸ್ಥಳದ ರಾಮಸ್ವಾಮಿ ಬಿ॥ ಕೃಷ್ಣಾವಧಾನಿ ಮೈನರ್, ಗಾರ್ಡಿಯನ್ ತಾಯಿ ಚನ್ನಮ್ಮನವರು, ಮತ್ತೂರು ವಾಸಸ್ಥರಾಗಿ ಮೃತಪಟ್ಟ ಕೃಷ್ಣಾವಧಾನಿಗಳ ಜಿಂದಗಿ ಬಗ್ಯಾಗಿ ಬರತಕ್ಕ 28—4—0 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೆ ಇಸವಿ VIIನೆ ನಂಬರ್ ರೆಗ್ಯುಲೇಷರ್ ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಮಸ್ವಾಮಿ ಮೈನರ್, ಗಾರ್ಡಿಯನ್ ತಾಯಿ ಚನ್ನಮ್ಮನವರ ಅರ್ಜಿಯನ್ನು 1904ನೆ ಇಸವಿ ಮಾರ್ಚಿ ತಿಂಗಳು ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಾವಧಾನಿಯವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1904ನೆ ಇಸವಿ ಮಾರ್ಚಿ ತಿಂಗಳು 5ನೆ ತಾರೀಖಿನಲ್ಲಿ ಕೋರ್ಟಿನ ಮೋಹರನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ವೆಂಕಟವರದ ಅಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜಿ.

ಚಿಕ್ಕಮಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1903—1904ನೆ ಇಸವಿ ಅರ್ಜೀ ನಂಬರ್ 460.

ಮೃತಪಟ್ಟ ಸಾವಿತ್ರಮ್ಮನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್‍ರು ಕಡೂರು ಡಿಸ್ಟ್ರಿಕ್ಟ್ ತರಿಕೆರೆ ತಾಲ್ಲೂಕು ತರಿಕೆರೆ ಕಸಬಾದಲ್ಲಿರುವ ಸುಬ್ಬಮ್ಮ ಕೋಂ ಕ್ರಿಷ್ಣಪ್ಪ, ಮೃತಪಟ್ಟ ಸಾವಿತ್ರಮ್ಮನವರಿಗೆ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ತರಿಕೆರೆ ಕಸಬಾದಲ್ಲಿ ವಾಸಸ್ಥರಾಗಿ ಮೃತಪಟ್ಟ ಸಾವಿತ್ರಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸರ್ 1901ನೆ ಇಸವಿ 7ನೆ ರೆಗ್ಯುಲೇಷರ್ ಪ್ರಕಾರ ಸರಟಿಫಿಕೇಟ್ ಬಗ್ಗೇ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬ್ಬಮ್ಮನವರ ಅರ್ಜಿಯನ್ನು ಸರ್ 1904ನೆ ಇಸವಿ ಏಪ್ರೆಲ್ ತಿಂಗಳು ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಾವಿತ್ರಮ್ಮನಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1904ನೆ ಇಸವಿ ಮಾರ್ಚಿ ತಿಂಗಳು 4ನೆ ತಾರೀಖಿನಲ್ಲಿ ಕೋರ್ಟಿನ ಮೋಹರನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ಪರಮಶಿವ ಅಯ್ಯರ್,
ಸಬ್ ಜಡ್ಜಿ.

ಮೈಸೂರ ಗೆಜೆಟ್.

ನಂ. 39] ಸರ್ಕಾರದಿಂದ ಪ್ರಾಂಬಿಷ'ಆದ್ದು. [ನಂ. 11.

ಬೆಂಗಳೂರು, ಗುರುವಾರ, ಮಾರ್ಚ್ ತಾ॥ 17, ಸ॥ 1904.

IIIನೆ ಭಾಗ.

ಲೆಜಿಸ್ಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಅವ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೇಟಿವ್ ಇಲಾಖೆ.

ನಂಬರು 76. ಲೆಜಿಸ. 10—03, ತಾರೀಖು 21ನೇ ಡಿಶಂಬರ್ 1903.

ಇಸ್ತಿಹಾರು.

ಗವರ್ನಮೆಂಟಿನವರ ಆಲೋಚನೆಯಲ್ಲಿರುವ, ಸಂರಕ್ಷಕ ಮತ್ತು ಸಂರಕ್ಷಣೆಯೊಳಗಿರುವವನು—ಇವರಿಗೆ ಸಮ್ಮಂಧಪಟ್ಟ ನಿಬಂಧನೆಯನ್ನು ಬಟ್ಟುಪಡಿಸಿ ತಿದ್ದುಪಾಟು ಮಾಡುವ ಬಗ್ಗೆ ಉಂಟಾದ ರೆಗ್ಯುಲೇಷನಿನ ಈ ಕೆಳಗೆ ಬರುವ ಮುಸವಿದಾ ನಕಲನ್ನೂ, ಮತ್ತು ಉದ್ದೇಶಗಳು ಕಾರಣಗಳು—ಇವುಗಳ ವಿವರವನ್ನೂ ಸಮಸ್ತ ಜನಗಳ ತಿಳುವಳಿಕೆಗೋಸ್ಕರ ಪ್ರಕಟಿಸಲ್ಪಟ್ಟಿರುತ್ತೆ.

ಕೆ. ಯಸ. ಸಿ.
ಫಾರ್ ಸೆಕ್ರೆಟರಿ,
ಜನರಲ್ ಮತ್ತು ರೆವಿನ್ಯೂ ಡಿಪಾರ್ಟ್‌ಮೆಂಟ್,
ಮೈಸೂರು ಗವರ್ನಮೆಂಟ್.

190—ನೇ ವರುಷದ ಸಂರಕ್ಷಕರನ್ನು ಮತ್ತು ಸಂರಕ್ಷಣೆಯೊಳಗಿರುವವರನ್ನು ಕುರಿತ ರೆಗ್ಯುಲೇಷನ್.

ವಿಷಯಸೂಚಿಕೆ.

1ನೇ ಅಧ್ಯಾಯ.

ಅವತರಣಿಕೆ.

ಪ್ರಕರಣಗಳು.

1. ಹೆಸರು, ವ್ಯಾಪ್ತಿ, ಮತ್ತು ಅಮಲ್‌ಮರು.
2. ರದ್ದಿಯಾತಿ.
3. ಅರ್ಥವಿವರಣೆಗಳು.
4. ಈ ರೆಗ್ಯುಲೇಷನಿನ ಉದ್ದೇಶಗಳ ಬಗ್ಗೆ ಕೆಳಗಿನ ಕೋರ್ಟುಗಳಿಗೆ ಡಿಸ್ಟ್ರಿಕ್ಟ್ ಕೋರ್ಟಿನ ಅಧಿಕಾರ ಕೊಡೋಣ.

2ನೇ ಅಧ್ಯಾಯ.

ಸಂರಕ್ಷಕರ ನೇಮಕ ಮತ್ತು ವಿಧಿಸಿ ತೀರಿಸೋಣ.

5. ಯುರೋಪಿಯನ್ ಬ್ರಿಟಿಷ್ ಸಬ್‌ಜೆಕ್ಟುಗಳ ಸಂಗತಿಯಲ್ಲಿ ಸಂರಕ್ಷಕನನ್ನು ನೇಮಿಸುವದನ್ನು ಕುರಿತು ಮಾತಾಪಿತೃಗಳಿಗೆ ಇರುವ ಅಧಿಕಾರ.
6. ಇತರ ಸಂಗತಿಗಳಲ್ಲಿ ನೇಮಿಸುವ ಅಧಿಕಾರ.
7. ಸಂರಕ್ಷಣೆ ಬಗ್ಗೆ ಹುಕುಂ ಕೊಡಲು ಕೋರ್ಟಿನವರ ಅಧಿಕಾರ.
8. ಹುಕುಮಿನಬಗ್ಗೆ ಅರ್ಜಿ ತರುವದಕ್ಕೆ ಅರ್ಹರಾಗಿರುವ ಮನುಷ್ಯರು.
9. ಅರ್ಜಿಯನ್ನು ಅಂಗೀಕರಿಸುವ ಅಧಿಕಾರ ಇರುವ ಕೋರ್ಟು.
10. ಅರ್ಜಿಯ ನಮೂನೆ.
11. ಅರ್ಜಿಗಳು ದಾಖಲಾದನಂತರ ವ್ಯವಹರಣೆ.
12. ಅಪ್ರಾಯಸ್ಥನನ್ನು ಹಾಜರು ಮಾಡುವಹಾಗೆ ಮತ್ತು ಆತನ ದೇಹದ ಸೊತ್ತಿನ ಕಾಪಾಡುವಿಕೆಬಗ್ಗೆ ಹಂಗಾಮಿ ಹುಕುಂ ಕೊಡುವ ಅಧಿಕಾರ.
13. ಹುಕುಂ ಕೊಡುವದಕ್ಕೆ ಮೊದಲು ಸಾಕ್ಷಿ ವಿಚಾರಿಸಿಕೊಳ್ಳೋಣ.
14. ಬೇರೆ ಬೇರೆ ಕೋರ್ಟುಗಳಲ್ಲಿ ಏಕಕಾಲದಲ್ಲಿ ವ್ಯವಹರಣೆಗಳು.
15. ಕೆಲವು ಸಂರಕ್ಷಕರನ್ನು ನೇಮಿಸುವಿಕೆ ಯಾ ವಿಧಿಸಿ ತೀರಿಸೋಣ.

16. ಕೋರ್ಟಿನವರ ಅಧಿಕಾರ ಸರಹದ್ದಿನ ಹೊರಗೆ ಇರುವ ಸೊತ್ತಿನಬಗ್ಗೆ ರಕ್ಷಕನ ನೇಮಕ ಯಾ ವಿಧಿಸಿ ತಿಳಿಸೋಣ.
17. ರಕ್ಷಕನನ್ನು ನೇಮಕ ಮಾಡುವಲ್ಲಿ ಕೋರ್ಟಿನವರು ಆಲೋಚಿಸತಕ್ಕ ವಿಷಯಗಳು.
18. ಉದ್ಯೋಗ ಪ್ರಯುಕ್ತವಾಗಿ ಡೆಪ್ಯುಟಿ ಕಮಿಷ್ಷನರನ್ನು ಮೊಕರರು ಮಾಡೋಣ ಯಾ ವಿಧಿಸಿ ತಿಳಿಸೋಣ.
19. ಕೆಲವು ಸಂಗತಿಗಳಲ್ಲಿ ಕೋರ್ಟಿನವರು ಸಂರಕ್ಷಕನನ್ನು ನೇಮಿಸಕೂಡದು.

3ನೇ ಅಧ್ಯಾಯ.

ಸಂರಕ್ಷಕರ ಕೆಲಸಗಳು ಹಕ್ಕುಗಳು ಮತ್ತು ಜವಾಬ್ದಾರಿಗಳು.

ಸಾಧಾರಣ.

20. ಸಂರಕ್ಷಕ ಮತ್ತು ಸಂರಕ್ಷಣೆಯಲ್ಲಿರುವವರೊಳಗೆ ಇರುವ ಭರವಸವುಳ್ಳ ಸಮ್ಮಂಧ.
21. ಅಪ್ರಾಯಸ್ಥರು ಸಂರಕ್ಷಕರಾಗಿ ಕೆಲಸ ನಡಿಸುವದಕ್ಕೆ ಯೋಗ್ಯರೊ ಎಂಬದು.
22. ಸಂರಕ್ಷಕನ ಪ್ರತಿಫಲ.
23. ಸಂರಕ್ಷಕನಾಗಿ ಡೆಪ್ಯುಟಿ ಕಮಿಷ್ಷನರ ಮೇಲ್ವಿಚಾರಣೆ.

ದೇಹ ರಕ್ಷಕ.

24. ದೇಹರಕ್ಷಕನ ಕೆಲಸಗಳು.
25. ಸಂರಕ್ಷಣೆಯೊಳಗಿರುವವನ ಕಾವಲನ್ನು ಕುರಿತು ರಕ್ಷಕನ ಹಕ್ಕು.
26. ಸಂರಕ್ಷಣೆಯಲ್ಲಿರುವವನನ್ನು ಅಧಿಕಾರ ಸರಹದ್ದಿನ ಹೊರಗೆ ತೆಗದುಕೊಂಡು ಹೋಗೋಣ.

ಆಸ್ತಿ ರಕ್ಷಕನು.

27. ಆಸ್ತಿ ರಕ್ಷಕನ ಕೆಲಸಗಳು.
28. ಮರಣಶಾಸನ ಪ್ರಕಾರ ಇರುವ ಸಂರಕ್ಷಕನ ಅಧಿಕಾರಗಳು.
29. ಕೋರ್ಟಿನವರು ನೇಮಿಸಿದ ಯಾ ವಿಧಿಸಿ ಹೇಳಿದ ಆಸ್ತಿ ರಕ್ಷಕನ ಅಧಿಕಾರಗಳ ಪರಿಮಿತ.
30. 28 ನೇ ಯಾ 29 ನೇ ಪ್ರಕರಣಕ್ಕೆ ವಿರೋಧವಾಗಿ ಮಾಡೋಣಾದ ಪರಭಾರೆಗಳ ನಿಷ್ಫಲತೆ.
31. 29 ನೇ ಪ್ರಕರಣದಪ್ರಕಾರ ಪರಭಾರೆಗಳನ್ನು ಆಗುವಂತೆ ಮಾಡುವದನ್ನು ಕುರಿತು ನಡವಳಿಕೆ.
32. ಕೋರ್ಟಿನವರಿಂದ ನೇಮಕಪಟ್ಟ ಯಾ ವಿಧಿಸಿ ಹೇಳಲ್ಪಟ್ಟ ಆಸ್ತಿ ರಕ್ಷಕನ ಅಧಿಕಾರಗಳನ್ನು ಬದಲಾಯಿಸೋಣ.
33. ಸಂರಕ್ಷಣೆಯಲ್ಲಿರುವವನ ಆಸ್ತಿಯ ಆಡಳಿತವನ್ನು ಕುರಿತು ಕೋರ್ಟಿನವರ ಅಭಿಪ್ರಾಯವನ್ನು ಕೇಳುವದಕ್ಕೆ ನೇಮಕಪಟ್ಟ ಯಾ ವಿಧಿಸಿ ತಿಳಿಸಲ್ಪಟ್ಟ ಸಂರಕ್ಷಕನ ಹಕ್ಕು.
34. ಕೋರ್ಟಿನವರಿಂದ ನೇಮಕಪಟ್ಟ ಯಾ ವಿಧಿಸಿ ಹೇಳಲ್ಪಟ್ಟ ಆಸ್ತಿ ರಕ್ಷಕನ ಬದ್ಧತೆಗಳು.
35. ಕಾರ್ಯನಿರ್ವಾಹದ ಪತ್ರ ಬರಕೊಂಡಲ್ಲಿ ಸಂರಕ್ಷಕನ ಮೇಲೆ ವ್ಯಾಜ್ಯ.
36. ಎಡ್ಮಿನಿಸ್ಟ್ರೇಶನ ಬಾಂಡ ಯಾನೆ ಕಾರ್ಯ ನಿರ್ವಾಹದ ಪತ್ರ ಇಲ್ಲದ ಸಂಗತಿಯಲ್ಲಿ ಸಂರಕ್ಷಕನಮೇಲೆ ವ್ಯಾಜ್ಯ.
37. ಸಂರಕ್ಷಕನು ಟ್ರಸ್ಟಿಯಾಗಿ ಇರುವಲ್ಲಿ, ಆತನ ಸಾಧಾರಣ ಬದ್ಧತೆ.

ಸಂರಕ್ಷಕನ ಉದ್ಯೋಗದ ಅಂತ್ಯ.

38. ಸಮುದಾಯವಾದ ಸಂರಕ್ಷಕರು ಇದ್ದಲ್ಲಿ ಒಬ್ಬನ ಮರಣದನಂತರ ಉಳಿದವರ ಹಕ್ಕು.
39. ಸಂರಕ್ಷಕನನ್ನು ಉದ್ಯೋಗದಿಂದ ತಪ್ಪಿಸೋಣ.
40. ಸಂರಕ್ಷಕನ ವಿಮೋಚನೆ.
41. ಸಂರಕ್ಷಕನ ಉದ್ಯೋಗ ನಿಂತು ಹೋಗೋಣ.
42. ಮೃತಪಟ್ಟ ವಿಮೋಚನೆ ಹೊಂದಿದ ಯಾ ಉದ್ಯೋಗದಿಂದ ತಪ್ಪಿಸಲ್ಪಟ್ಟ ಸಂರಕ್ಷಕನ ನಂತರ ಬರತಕ್ಕವನ ಮೊಕರರಾತಿ.

4ನೇ ಅಧ್ಯಾಯ.

ಉಪ ನಿಯಮಗಳು.

43. ಸಂರಕ್ಷಕರ ನಡತೆಯನ್ನು ಯಾ ವ್ಯವಹರಣೆಗಳನ್ನು ಕ್ರಮಪಡಿಸುವಬಗ್ಗೆ ಹುಕುಮುಗಳು ಮತ್ತು ಸಬರೀ ಹುಕುಂಗಳ ಜಾರಿ.
44. ಸಂರಕ್ಷಣೆಯಲ್ಲಿರುವವನನ್ನು ಅಧಿಕಾರ ಸರಹದ್ದಿನ ಹೊರಗೆ ತೆಗದುಕೊಂಡು ಹೋಗುವದರ ದಂಡನೆ.
45. ತಾತ್ಸಾರಮಾಡುವವರ ದಂಡನೆ.
46. ಡೆಪ್ಯುಟಿ ಕಮಿಷ್ಷನರುಗಳು ಮತ್ತು ಕೆಳಗಿನ ಕೋರ್ಟಿನವರು ರಿಪೋರ್ಟ ಮಾಡೋಣ.
47. ಹುಕುಮುಗಳು ಅಪ್ಪೀಲ ಮಾಡಬಹುದಾಗಿರುವದು.
48. ಬೇರೆ ಹುಕುಮುಗಳ ಆಖೈರಾತಿ.
49. ಖರ್ಚು.
50. ನೇಮಗಳನ್ನು ಏರ್ಪಡಿಸಲು ಚೀಫ್‌ಕೋರ್ಟಿನವರ ಅಧಿಕಾರ.
51. ಕೋರ್ಟಿನವರಿಂದ ಮೊದಲೇ ನೇಮಕಪಟ್ಟ ಸಂರಕ್ಷಕರಿಗೆ ಈ ರೆಗ್ಯುಲೇಶನ ಪ್ರಯೋಗಿಸತಕ್ಕದಾಗಿರುವದು.
52. ಸಿವಿಲ ಪ್ರೊಸಿಜ್ಯೂರ ಕೋಡಿನ 31ನೇ ಅಧ್ಯಾಯದ ತಿದ್ದುಪಾಟು.

ಷೆಡ್ಯೂಲ ಪಟ್ಟಿ:—ರದ್ದಾದ ಚಟ್ಟಗಳು.

ಮುಸ್ವದಾ.

190 — ನೇ ವರುಷದ ನೇ ನಂಬರಿನ ರೆಗ್ಯುಲೇಷನ್.

ಸಂರಕ್ಷಕ ಮತ್ತು ಸಂರಕ್ಷಣೆಯಲ್ಲಿರುವವನನ್ನು ಕುರಿತ ನಿಬಂಧನೆಯನ್ನು ಒಟ್ಟುಪಡಿಸಿ ತಿದ್ದುಪಾಟು ಮಾಡುವಬಗ್ಗೆ ಆದ ರೆಗ್ಯುಲೇಷನ್.

ಸಂರಕ್ಷಕ ಮತ್ತು ಸಂರಕ್ಷಣೆಯಲ್ಲಿರುವವನನ್ನು ಕುರಿತ ನಿಬಂಧನೆಯನ್ನು ಒಟ್ಟುಪಡಿಸಿ ತಿದ್ದುಪಾಟು ಮಾಡುವದು ಯುಕ್ತವಾಗಿರುವದರಿಂದ, ಘನವನ್ನು ಹೊಂದಿದ ಶ್ರೀಮನ್ಮಹಾರಾಜಾ ಸಾಹೇಬರವರು ಇದರಡಿ ಕಂಡಂತೆ ನಿರ್ಣಯಿಸುವ ದೇನೆಂದರೆ:—

1 ನೇ ಅಧ್ಯಾಯ.

ಅವತರಣಿಕೆ.

ಹೆಸರು, ವ್ಯಾಪ್ತಿ ಮತ್ತು ಅವಲಂಬನ.

1. (1) ಈ ರೆಗ್ಯುಲೇಷನ್, 190 ನೇ ವರುಷದ ಸಂರಕ್ಷಕರ ಮತ್ತು ಸಂರಕ್ಷಣೆಯೊಳಗಿರುವವರ ರೆಗ್ಯುಲೇಷನ್ ಎಂಬದಾಗಿ ಕರೆಯಲ್ಪಡಬಹುದು.

(2) ಅದು ಮೈಸೂರು ಸ್ಟೇಟ್ಗೆಲ್ಲಾ ವ್ಯಾಪಿಸುತ್ತದೆ. ಮತ್ತು

(3) ಅದು 190 ನೆ ವರುಷದ 1ನೆ ತಾರೀಖಿನಲ್ಲಿ ಜಾರಿಯಲ್ಲಿ ಬರತಕ್ಕದ್ದು.

ರದ್ದಿಯಾತಿ.

2. (1) ಸದರೀ ತಾರೀಕಿನಲ್ಲಿ ಮತ್ತು ಆ ತಾರೀಕಿನಿಂದ, ಶೆಡ್ಯೂಲ್ಪಟ್ಟಿಯಲ್ಲಿ ನಮೂದಿಸಲ್ಪಟ್ಟ ನಿಬಂಧನೆಗಳು ಸದರೀ ಪಟ್ಟಿಯ ಮೂರನೇ ಮದ್ದಿನಲ್ಲಿ ತೋರಿಸಿದಷ್ಟರಮಟ್ಟಿಗೆ ರದ್ದಾಗತಕ್ಕದ್ದು.

(2) ಆದರೆ ಅಂತಾ ಯಾವದಾದರೂ ನಿಬಂಧನೆಗಳ ಮೇರೆಗೆ ಉಂಟಾದ ನಮಸ್ತ ಪ್ರೊಸೀಡಿಂಗ್ಸುಗಳು, ಕೊಡಲ್ಪಟ್ಟ ಸರ್ಟಿಫಿಕೇಟುಗಳು, ನಿಯಮಿಸಿದ ಎಲೋವೆನ್ಸ (ರುಸುಂ) ಗಳು, ಹೊರಿಸಲ್ಪಟ್ಟ ಬದ್ಧತೆಗಳು, ಮತ್ತು ಮಾಡಲ್ಪಟ್ಟ ಅರ್ಜಿಗಳು, ನೇಮಕಗಳು, ಹುಕುಂಗಳು ಮತ್ತು ನೇಮಗಳು ಕೂಡುವಷ್ಟರಮಟ್ಟಿಗೆ, ಈ ರೆಗ್ಯುಲೇಷನಿನ ಮೇರೆಗೆ ಅವುಗಳು ಪ್ರತಿ ಒಂದು ಉಂಟಾದ್ದಾಗಿ, ಕೊಡಲ್ಪಟ್ಟದ್ದಾಗಿ, ನಿಯಮಿಸಲ್ಪಟ್ಟದ್ದಾಗಿ, ಹೊರಿಸಲ್ಪಟ್ಟದ್ದಾಗಿ, ಮತ್ತು ಮಾಡಲ್ಪಟ್ಟದ್ದಾಗಿ ಎಣಿಸಲ್ಪಡತಕ್ಕವು; ಮತ್ತು

(3) ಅಂತಾ ನಿಬಂಧನೆಗಳ ಪೈಕಿ ಯಾವದಕ್ಕಾದರೂ ದಾಖಲೆ ತೋರಿಸುವ ಯಾವ ನಿಬಂಧನೆ ಯಾ ದಸ್ತೈವಜು, ಸಾಧ್ಯ ಇರಬಹುದಾದಷ್ಟರಮಟ್ಟಿಗೆ, ಈ ರೆಗ್ಯುಲೇಷನಿಗೆ ಯಾ ಸಂಬಂಧಿಸುವ ಅದರ ಅಂಶಕ್ಕೆ, ದಾಖಲೆ ತೋರಿಸುತ್ತದೆಂಬದಾಗಿ ಅರ್ಥ ಮಾಡಲ್ಪಡತಕ್ಕದ್ದು.

ಅರ್ಥ ವಿವರಣೆಗಳು.

3. ಈ ರೆಗ್ಯುಲೇಷನಿನಲ್ಲಿ ಪ್ರಮೇಯದಿಂದಾಗಲೀ ಸಂದರ್ಭದಿಂದಾಗಲೀ ವಿರೋಧವಾದ್ದೇನಾದರೂ ಇದ್ದರೇನೇ ಅಲ್ಲದೆ—

(1) "ಅಪ್ರಾಪ್ತವಯಸ್ಕ" ಅಂದರೆ ಹದಿನೆಂಟುವರುಷದ ವಯಸ್ಸನ್ನು ಪೂರೈಸದೆ ಇರುವ ಮನುಷ್ಯನೆಂಬ ಅರ್ಥ:

(2) "ಸಂರಕ್ಷಕ" ಅಂದರೆ ಒಬ್ಬ ಅಪ್ರಾಪ್ತವಯಸ್ಕನ ದೇಹದ ಯಾ ಆತನ ಆಸ್ತಿಯ ಅಥವಾ ದೇಹ ಮತ್ತು ಆಸ್ತಿ ಇವೆರಡರ ಪರಾಮರಿಕೆ ತೆಗದುಕೊಳ್ಳುವ ಮನುಷ್ಯನೆಂಬ ಅರ್ಥ:

(3) "ವಾರ್ಡು" ಯಾನೆ "ರಕ್ಷಣೆಯೊಳಗಿರುವವ" ಅಂದರೆ, ಯಾವಾತನ ದೇಹದ ಯಾ ಆಸ್ತಿಯ ಯಾ ಇವೆರಡರಬಗ್ಗೆ ಸಂರಕ್ಷಕನಿರುತ್ತಾನೋ, ಅಂತಾ ಅಪ್ರಾಪ್ತವಯಸ್ಕನೆಂಬ ಅರ್ಥ:

(4) "ಡಿಸ್ಟ್ರಿಕ್ಟ ಕೋರ್ಟ" ಅಂದರೆ ಈ ರೆಗ್ಯುಲೇಷನಿನ ನಿಯಮಗಳಿಗೂ, 1884ನೇ ವರುಷದ ಮೈಸೂರು ಚೀಫ್ ಕೋರ್ಟ ರೆಗ್ಯುಲೇಷನಿನ 12ನೆ ಪ್ರಕರಣದ ನಿಯಮಗಳಿಗೂ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವ್ಯಾ ಇತರ ಅವುಗಳಂತಾ ನಿಬಂಧನೆಯ ನಿಯಮಗಳಿಗೂ ಸಹಾ ಒಳಪಟ್ಟು ಒಂದು ಡಿಸ್ಟ್ರಿಕ್ಟ ಜಡ್ಜಿಯ ಅಧ್ಯಕ್ಷತೆಯುಳ್ಳ ಕೋರ್ಟೆಂದು ಅರ್ಥ:

(5) "ಕೋರ್ಟ" ಅಂದರೆ ಸಂರಕ್ಷಕನಾಗಿ ನೇಮಿಸಿ ಯಾ ಸಂರಕ್ಷಕನಾಗಿರುವದಾಗಿ ವಿಧಿಸಿ ತಿಳಿಸತಕ್ಕ ಹುಕುಂ ಬಗ್ಗೆ ಒಂದು ಅರ್ಜಿಯನ್ನು ಅಂಗೀಕರಿಸಲಿಕ್ಕೆ ಈ ರೆಗ್ಯುಲೇಷನಿನ ಮೇರೆಗೆ ಅಧಿಕಾರ ಇರುವ ಡಿಸ್ಟ್ರಿಕ್ಟ ಕೋರ್ಟ ಎಂತಲೂ ಮತ್ತು ಅಂತಾ ಅರ್ಜಿಗನುಗುಣವಾಗಿ ಸಂರಕ್ಷಕನು ನೇಮಿಸಲ್ಪಟ್ಟಲ್ಲಿ ಯಾ ವಿಧಿಸಿ ಹೇಳೋಣವಾದಲ್ಲಿ ಹಾಗೆ ಸಂರಕ್ಷಕನನ್ನು ನೇಮಿಸಿದ ಯಾ ವಿಧಿಸಿ ಹೇಳಿದ ಕೋರ್ಟ ಎಂಬದಾಗಿಯೂ, ಅಥವಾ ಸಂರಕ್ಷಣೆಯಲ್ಲಿರುವವನ ದೇಹಸಂಬಂಧವಾದ ಯಾವದೊಂದು ವಿಷಯದಲ್ಲಿಯಾದರೂ ತಾತ್ಕಾಲಿಕವಾಗಿ ಸದರೀ ಸಂರಕ್ಷಣೆಯಲ್ಲಿರುವವನು ವಾಡಿಕೆಯಾಗಿ ವಾಸವಾಗಿರುವ ಸ್ಥಳದಲ್ಲಿ ಅಧಿಕಾರವಿರುವ ಡಿಸ್ಟ್ರಿಕ್ಟ ಕೋರ್ಟ ಎಂಬದಾಗಿ ಕೂಡ ಅರ್ಥವಾಗುತ್ತದೆ:

(6) "ಡೆಪ್ಯುಟಿ ಕಮಿಷನರ" ಅಂದರೆ ಒಂದು ಡಿಸ್ಟ್ರಿಕ್ಟಿನ ರೆವಿನ್ಯು ಆಡಳಿತವನ್ನು ನಡಿಸುವ ಮುಖ್ಯ ಉದ್ಯೋಗಸ್ಥನೆಂತ ಅರ್ಥವಾಗಿದ್ದು, ಈ ರೆಗ್ಯುಲೇಷನಿನ ಎಲ್ಲಾ ಯಾ ಯಾವದಾದರೂ ಉದ್ದೇಶಗಳ ಬಗ್ಗೆ ಒಂದು ಸ್ಥಳಿಕ ಪ್ರದೇಶದ ಯಾ ಜನವರ್ಗದಬಗ್ಗೆ, ಸರಕಾರಿ ಗೆಜೆಟಿನಲ್ಲಿ ಪ್ರಕಟನೆಯದ್ವಾರಾ ಗವರ್ನಮೆಂಟಿನವರು ಹೆಸರು ಹೇಳಿ ಆಗಲೀ ಉದ್ಯೋಗಮೂಲಕವಾಗಿ ಆಗಲಿ ನೇಮಿಸಬಹುದಾದ ಯಾವ ಉದ್ಯೋಗಸ್ಥನನ್ನು ಕೂಡಾ ಅಡಗಿಸಿಕೊಳ್ಳುತ್ತದೆ:

(7) "ಯುರೋಪಿಯನ್ ಬ್ರಿಟಿಷ್ ಸಬ್ಜೆಕ್ಟ್" ಅಂದರೆ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನಲ್ಲಿ ಅರ್ಥ ವಿವರಿಸಲ್ಪಟ್ಟಂತೆ ಒಬ್ಬ ಯುರೋಪಿಯನ್ ಬ್ರಿಟಿಷ್ ಸಬ್ಜೆಕ್ಟ್ ಎಂಬ ಅರ್ಥ ಇದ್ದು ಯುರೋಪಿಯನ್ ವಂಶದ ಯಾವ ಕ್ರಿಸ್ತುಮತದವನನ್ನಾದರೂ ಸೇರಿಸಿಕೊಳ್ಳುತ್ತದೆ :

(8) "ನಿರ್ದೇಶಿಸೋಣಾದ" ಅಂದರೆ ಈ ರೆಗ್ಯುಲೇಷನಿಗೆ ಅನುಗುಣವಾಗಿ ಚೀಫ್ ಕೋರ್ಟಿನವರಿಂದ ಏರ್ಪಡಿಸೋಣಾದ ನೇಮಗಳಿಂದ ನಿರ್ದೇಶಿಸೋಣಾದ ಎಂಬ ಅರ್ಥ.

ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರ ಡಿಸ್ಟ್ರಿಕ್ಟು ಕೋರ್ಟಿನ ಅಧಿಕಾರವನ್ನು ಕೆಳಗಿನ ಕೋರ್ಟಿಗೆ ಕೊಡೋಣ.

4. (1) ಗವರ್ನಮೆಂಟಿನವರು, ಈ ರೆಗ್ಯುಲೇಷನಿನ ಪ್ರಕಾರ ಒಂದು ಡಿಸ್ಟ್ರಿಕ್ಟು ಕೋರ್ಟಿಗೆ ಇರುವ ಕೆಲಸಗಳನ್ನು ಸದರೀ ಕೋರ್ಟಿಗೆ ಅಂತಸ್ತಿನಲ್ಲಿ ಕೆಳಗಿರುವ ಯಾವ ಕೋರ್ಟಿಗೆ ಆಗಲೀ ಸರ್ಕಾರಿ ಗೆಜಟನಲ್ಲಿ ಇಸ್ತಿಹಾರ ಮೂಲಕ ವಹಿಸಬಹುದು, ಮತ್ತು ಅಂಥಾ ಇಸ್ತಿಹಾರನ್ನು ರದ್ದು ಮಾಡಬಹುದು ಅಥವಾ ಬದಲಾಯಿಸಬಹುದು.

(2) ಹಾಗೆ ಅಧಿಕಾರ ಕೊಡಲ್ಪಟ್ಟ ಯಾವ ಕೆಳಗಿನ ಕೋರ್ಟಾಗಲೀ, ಅದರ ಅಧಿಕಾರದ ಸ್ಥಳಿಕ ಹದ್ದುಗಳೊಳಗೆ, ಸದರೀ ಡಿಸ್ಟ್ರಿಕ್ಟು ಕೋರ್ಟಿಗೆ ಈ ರೆಗ್ಯುಲೇಷನಿನ ಪ್ರಕಾರ ಕೊಡಲ್ಪಟ್ಟ ಎಲ್ಲಾ ಅಧಿಕಾರಗಳನ್ನು ನಡಿಸುವದರಲ್ಲಿ, ಸದರೀ ಡಿಸ್ಟ್ರಿಕ್ಟು ಕೋರ್ಟಿನೊಂದಿಗೆ ಏಕೋನ್ಮುಖವಾದ ಅಧಿಕಾರವನ್ನುಂಟಾಗಿರತಕ್ಕದ್ದು, ಮತ್ತು ಸದರೀ ಡಿಸ್ಟ್ರಿಕ್ಟು ಕೋರ್ಟಿಗೆ ಸಮ್ಮಂಧಪಟ್ಟ ಈ ರೆಗ್ಯುಲೇಷನಿನ ನಿಯಮಗಳು ಅಂಥಾ ಕೆಳಗಿನ ಕೋರ್ಟಿಗೆ ಅದು ಒಂದು ಡಿಸ್ಟ್ರಿಕ್ಟು ಕೋರ್ಟೆಂಬಂತೆ ಪ್ರಯೋಗವಾಗತಕ್ಕದ್ದು ;

ಆದರೆ 47ನೇ ಪ್ರಕರಣದಲ್ಲಿ ಸಮೂದ್ಮಾಡಲ್ಪಟ್ಟ ಅಂಥಾ ಕೆಳಗಿನ ಕೋರ್ಟಿನ ಯಾವ ಹುಕುಮಿನಮೇಲಾಗಲೀ ಅಪೀಲು ಡಿಸ್ಟ್ರಿಕ್ಟು ಕೋರ್ಟಿಗೇನೇ ಇರಬೇಕು ಹೊರ್ತು ಚೀಫ್ ಕೋರ್ಟಿಗೆ ಇರಕೂಡದು.

(3) ಹಿಂದಿನಕಡೇ ಉಪ ಪ್ರಕರಣದಂತೆ ಆದ ಒಂದು ಕೆಳಗಿನ ಕೋರ್ಟಿನ ಹುಕುಮಿನ ಮೇಲೆ ಅಪೀಲಿನಲ್ಲಿ ಡಿಸ್ಟ್ರಿಕ್ಟು ಕೋರ್ಟಿನಿಂದ ಮಾಡಲ್ಪಟ್ಟ ಹುಕುಮು, ಸಿವಿಲ್ ಪ್ರೊಸೀಡ್ಯೂರ್ ಕೋಡಿನ 647ನೆ ಪ್ರಕರಣದಿಂದ ಪ್ರಯೋಗಿಸಲ್ಪಟ್ಟಂತೆ ಇರುವ ಸದರೀ ಕೋಡಿನ X L VIನೇ ಮತ್ತು X L VIIನೇ ಅಧ್ಯಾಯಗಳ ನಿಯಮಗಳಿಗೆ ಒಳಪಟ್ಟು, ಕಡೇದಾಗಿರತಕ್ಕದ್ದು.

(4) ಈ ರೆಗ್ಯುಲೇಷನಿನ ಪ್ರಕಾರವಾದ ಯಾವ ಆಡಳಿತಗಳನ್ನಾಗಲೀ ಕೆಳಗಿನ ಕೋರ್ಟಿನಿಂದ ಡಿಸ್ಟ್ರಿಕ್ಟು ಕೋರ್ಟಿನವರು ಹಿಂದಕ್ಕೆ ಬರಮಾಡಿಕೊಂಡು, ತಾವೇ ಫೈಸಲು ಮಾಡಬಹುದು, ಅಥವಾ, ಸದರೀ ಡಿಸ್ಟ್ರಿಕ್ಟು ಕೋರ್ಟಿನ ಅಧಿಕಾರದ ಸ್ಥಳಿಕ ಹದ್ದುಗಳೊಳಗೆ ಸ್ಥಾಪಿಸಲ್ಪಟ್ಟದ್ದು ಅಂಥಾ ಆಡಳಿತಗಳನ್ನು ಫೈಸಲು ಮಾಡುವ ಅಧಿಕಾರವನ್ನುಂಟಾಗಿರುವ ಮತ್ತೊಂದಂತಾ ಕೋರ್ಟಿಗೆ ಕಳುಹಿಸಬಹುದು.

(5) (1)ನೇ ಉಪಪ್ರಕರಣದಲ್ಲಿ ಕಂಡ ಇಸ್ತಿಹಾರಿನಲ್ಲಿ ಪ್ರತ್ಯೇಕವಾಗಿ ಯಾವದೊಂದು ಕೆಳಗಿನ ಕೋರ್ಟನ್ನಾಗಲೀ ಅಥವಾ ಯಾವ ಸ್ಥಳಿಕ ಪ್ರದೇಶದಲ್ಲಿಯಾದರೂ ಇರುವ ಅಂತಾ ಕೋರ್ಟುಗಳ ವರ್ಗವನ್ನಾಗಲೀ ಸೂಚಿಸಬಹುದು.

(6) ಯಾವ ಸಿವಿಲ್ ಕೋರ್ಟು, ಯಾವ ನಿಬಂಧನೆಯ ಉದ್ದೇಶಗಳ ಬಗ್ಗಾದರೂ ಒಂದು ಡಿಸ್ಟ್ರಿಕ್ಟು ಕೋರ್ಟಿನ ಕೆಳಗಾಗಲೀ ಅಥವಾ ಅದರ ಅಧೀನಕ್ಕೆ ಒಳಪಟ್ಟು ಇದೆಯೊ, ಅಂಥಾ ಕೋರ್ಟು ಈ ಪ್ರಕರಣದ ಉದ್ದೇಶಗಳಿಗೋಸ್ಕರ ಅಂತಸ್ತಿನಲ್ಲಿ ಒಂದು ಡಿಸ್ಟ್ರಿಕ್ಟು ಕೋರ್ಟಿಗೆ ಕೆಳಗಿನದಾಗಿರತಕ್ಕದ್ದು.

2ನೇ ಅಧ್ಯಾಯ.

ಸಂರಕ್ಷಕರ ನೇಮಕ ಮತ್ತು ವಿಧಿಸಿ ತೆಗೆಸೋಣ.

ಯುರೋಪಿಯನ್ ಬ್ರಿಟಿಷ್ ಸಬ್ಜೆಕ್ಟುಗಳ ಸಂಗತಿಯಲ್ಲಿ ರಕ್ಷಕನನ್ನು ನೇಮಿಸುವದನ್ನು ಕುರಿತು ಮಾತಾಪಿತರುಗಳಿಗೆ ಇರುವ ಅಧಿಕಾರ.

5. (1) ಅಪ್ರಾಯಸ್ಥನು ಒಬ್ಬ ಯುರೋಪಿಯನ್ ಬ್ರಿಟಿಷ್ ಸಬ್ಜೆಕ್ಟು ಆಗಿರುವ ಸಂಗತಿಯಲ್ಲಿ, ಆತನ ದೇಹದ ಯಾ ಆಸ್ತಿಯ ಯಾ ಇವೆರಡರನ್ನು ಕುರಿತು ತನ್ನ ಮರಣದ ನಂತರ ಜಾರಿಯಲ್ಲಿ ಬರಬೇಕಾದ ವಿಲ್ ಎಂಬ ಮರಣಶಾಸನ ಯಾ ಇತರ ದಸ್ತಾವೇಜಿನ ಮೂಲಕವಾಗಿ ಒಬ್ಬ ಸಂರಕ್ಷಕನನ್ನು ಯಾ ಸಂರಕ್ಷಕರನ್ನು,—

(*a*) ಅಪ್ರಾಯಸ್ಥನ ತಂದೆ, ಅಥವಾ,

(*b*) ತಂದೆ ಮೃತಪಟ್ಟಿದ್ದರೆ ಯಾ ಕೆಲಸ ನಡಿಸಲು ಅಯೋಗ್ಯನಾದರೆ ತಾಯಿಯು, ನೇಮಿಸಬಹುದು.

(2) ಸಂರಕ್ಷಕರು (1) ನೇ ಉಪಪ್ರಕರಣದ ಪ್ರಕಾರ ತಂದೆ ತಾಯಿಗಳಿಬ್ಬರಿಂದಲೂ ನೇಮಕಪಟ್ಟವರಾಗಿದ್ದರೆ ಅವರು ಸಮುದಾಯವಾಗಿ ನಡಕೊಳ್ಳತಕ್ಕದ್ದು.

ಇತರ ಸಂಗತಿಯಲ್ಲಿ ನೇಮಿಸುವ ಅಧಿಕಾರದ ವಿನಾಯಿತಿ.

6. ಅಪ್ರಾಯಸ್ಥನು ಒಬ್ಬ ಯುರೋಪಿಯನ್ ಬ್ರಿಟಿಷ್ ಸಬ್ಜೆಕ್ಟು ಅಲ್ಲದ ಸಂಗತಿಯಲ್ಲಿ ಆತನ ದೇಹದ ಯಾ ಆಸ್ತಿಯ ಯಾ ಇವೆರಡರಬಗ್ಗೆ ಒಬ್ಬ ಸಂರಕ್ಷಕನನ್ನು ನೇಮಿಸುವದರ ಕುರಿತು ಆತನು ಒಳಪಡುವ ಕಾನೂನು ಮೇರೆಗೆ ಸಿಂಧುವಾಗಿರುವ ಅಧಿಕಾರವನ್ನು ತೆಗದು ಹಾಕುವಂತಾದ್ದಾಗಲೀ ಕುಂದು ಪಡಿಸುವಂತಾದ್ದಾಗಲೀ ಈ ರೆಗ್ಯುಲೇಷನಿನಲ್ಲಿ ಏನೊಂದು ಇರುವದಿಲ್ಲ.

ಸಂರಕ್ಷಣೆಬಗ್ಗೆ ಹುಕುಂ ಕೊಡಲು ಕೋರ್ಟಿನವರ ಅಧಿಕಾರ.

7. (1) (a) ಒಬ್ಬ ಅಪ್ರಾಯಸ್ಥನ ದೇಹದ ಯಾ ಸೊತ್ತಿನ ಯಾ ಇವೆರಡರಬಗ್ಗೆ ಸಂರಕ್ಷಕನನ್ನು ನೇಮಿಸಿ, ಅಥವಾ

(b) ಅಂತಾ ಸಂರಕ್ಷಕನೆಂಬದಾಗಿ ಒಬ್ಬ ಮನುಷ್ಯನನ್ನು ವಿಧಿಸಿ ಹೇಳಿ,

ಒಂದು ಹುಕುಂ ಮಾಡುವದು ಸದರೀ ಅಪ್ರಾಯಸ್ಥನ ಕ್ಷೇಮಕ್ಕೆ ಎಂದು ಕೋರ್ಟಿನವರು ಅಭಿಪ್ರಾಯ ಪಟ್ಟರೆ ಅವರು ಅದೇಮೇರೆಗೆ ಹುಕುಂ ಮಾಡಬಹುದು.

(2) ಈ ಪ್ರಕರಣದಮೇರಿನ ಒಂದು ಹುಕುಮು, ಮರಣಶಾಸನದ ಯಾ ಇತರ ದಸ್ತಾವೇಜಿನ ಮೂಲಕ ನೇಮಿಸಲ್ಪಡದೆ ಇರುವ ಅಥವಾ ಕೋರ್ಟಿನವರಿಂದ ನೇಮಿಸಲ್ಪಡದೆ ಯಾ ವಿಧಿಸಿ ಹೇಳಲ್ಪಡದೆ ಇರುವ ಯಾವ ಸಂರಕ್ಷಕನನ್ನಾದರೂ ಕೆಲಸದಿಂದ ನಿವೃತ್ತಿ ಪಡಿಸುತ್ತೆಂಬದಾಗಿ ಅರ್ಥವಾಗತಕ್ಕದ್ದು.

(3) ಒಬ್ಬ ಸಂರಕ್ಷಕನು ಮರಣಶಾಸನದ ಯಾ ಇತರ ದಸ್ತಾವೇಜಿನ ಮೂಲಕ ನೇಮಕ ಪಟ್ಟಿರುವಲ್ಲಿ ಯಾ ಕೋರ್ಟಿನವರಿಂದ ನೇಮಕಪಟ್ಟಲ್ಲಿ ಯಾ ವಿಧಿಸಿ ಹೇಳಲ್ಪಟ್ಟಲ್ಲಿ, ಹಾಗೆ ನೇಮಕಪಟ್ಟ ಯಾ ವಿಧಿಸಿ ಹೇಳಲ್ಪಟ್ಟ ಸಂರಕ್ಷಕನ ಅಧಿಕಾರಗಳು ಈ ರೆಗ್ಯುಲೇಷನಿನ ನಿಯಮಗಳ ಮೇರೆಗೆ ನಿಂತುಹೋಗುವವರೆಗೆ ಆತನಿಗೆ ಬದಲಾಗಿ ಮತ್ತೊಬ್ಬ ಮನುಷ್ಯನನ್ನು ಸಂರಕ್ಷಕನಾಗಿ ನೇಮಿಸುವ ಯಾ ವಿಧಿಸಿ ಹೇಳುವ ಒಂದು ಹುಕುಮನ್ನು ಮಾಡಕೂಡದು.

ಅಂತಾ ಹುಕುಮಿನಬಗ್ಗೆ ಅರ್ಜಿ ತರುವದಕ್ಕೆ ಅರ್ಹರಾಗಿರುವ ಮನುಷ್ಯರು.

8. ಹಿಂದಿನಕಡೇ ಪ್ರಕರಣಪ್ರಕಾರ ಒಂದು ಹುಕುಂ—

(a) ಅಪ್ರಾಯಸ್ಥನ ಸಂರಕ್ಷಕನಾಗುವಬಗ್ಗೆ ಅಪೇಕ್ಷಿಸುವವನ ಯಾ ಹಕ್ಕುದಾರನೆಂದು ಹೇಳಿಕೊಳ್ಳುವವನ ಅಥವಾ

(b) ಅಪ್ರಾಯಸ್ಥನ ಯಾವ ಬಂಧುವಿನ ಯಾ ಸ್ನೇಹಿತನ, ಅಥವಾ

(c) ಅಪ್ರಾಯಸ್ಥನು ವಾಡಿಕೆಯಾಗಿ ವಾಸವಾಗಿರುವ ಯಾ ಆತನ ಆಸ್ತಿ ಇರುವ ಡಿಸ್ಟ್ರಿಕ್ಟಿನ ಯಾ ಇತರ ಸ್ಥಳೀಕ ಪ್ರದೇಶದ ಡೆಪ್ಯುಟಿ ಕಮಿಷನರಿನ, ಅಥವಾ

(d) ಅಪ್ರಾಯಸ್ಥನ ವರ್ಗದವರ ಮೇಲೆ ಅಧಿಕಾರ ಇರುವ ಡೆಪ್ಯುಟಿ ಕಮಿಷನರಿನ ಅರ್ಜಿಯಮೇಲೆ, ಹೊರ್ತು ಅನ್ಯಥಾ ಮಾಡೋಣಾಗಕೂಡದು.

ಅರ್ಜಿಯನ್ನು ಅಂಗೀಕರಿಸುವ ಅಧಿಕಾರ ಇರುವ ಕೋರ್ಟು.

9. (1) ಅಂತಾ ಅರ್ಜಿಯು ಅಪ್ರಾಯಸ್ಥನ ದೇಹದ ರಕ್ಷಣೆ ಕುರಿತಾಗಿದ್ದರೆ ಅದನ್ನು ಅಪ್ರಾಯಸ್ಥನು ವಾಡಿಕೆಯಾಗಿ ವಸಿಸುವ ಸ್ಥಳದಲ್ಲಿ ಅಧಿಕಾರವಿರುವ ಡಿಸ್ಟ್ರಿಕ್ಟು ಕೋರ್ಟಿಗೆ ಮಾಡತಕ್ಕದ್ದು.

(2) ಅರ್ಜಿಯು ಅಪ್ರಾಯಸ್ಥನ ಸೊತ್ತನ್ನು ಕುರಿತು ರಕ್ಷಕನಾಗುವಬಗ್ಗೆ ಆಗಿದ್ದರೆ ಅದನ್ನು ಸದರೀ ಅಪ್ರಾಯಸ್ಥನು ವಾಡಿಕೆಯಾಗಿ ವಾಸವಾಗಿರುವ ಪ್ರದೇಶದಲ್ಲಿ ಸ್ಥಳೀಕ ಅಧಿಕಾರ ಇರುವ ಡಿಸ್ಟ್ರಿಕ್ಟು ಕೋರ್ಟಿಗಾಗಲಿ, ಆತನ ಸೊತ್ತು ಇರುವ ಒಂದು ಸ್ಥಳದಲ್ಲಿ ಸ್ಥಳೀಕ ಅಧಿಕಾರ ಇರುವ ಒಂದು ಡಿಸ್ಟ್ರಿಕ್ಟು ಕೋರ್ಟಿಗಾಗಲಿ ಮಾಡತಕ್ಕದ್ದು.

(3) ಅಪ್ರಾಯಸ್ಥನ ಸೊತ್ತನ್ನು ಕುರಿತು ರಕ್ಷಕನಾಗುವಬಗ್ಗೆ ಮಾಡುವ ಅರ್ಜಿಯನ್ನು ಅಪ್ರಾಯಸ್ಥನು ವಾಡಿಕೆಯಾಗಿ ವಾಸವಾಗಿರುವ ಸ್ಥಳದಲ್ಲಿ ಅಧಿಕಾರವಿಲ್ಲದ ಒಂದು ಡಿಸ್ಟ್ರಿಕ್ಟು ಕೋರ್ಟಿಗೆ ಮಾಡಿದ್ದಲ್ಲಿ, ಆ ಕೋರ್ಟಿನವರು ಸದರೀ ಅರ್ಜಿಯನ್ನು ಸ್ಥಳೀಕ ಅಧಿಕಾರವಿರುವ ಇತರ ಯಾವದಾದರೂ ಡಿಸ್ಟ್ರಿಕ್ಟು ಕೋರ್ಟಿನವರಿಂದ ಹೆಚ್ಚು ನ್ಯಾಯ ಯಾ ಅನುಕೂಲತೆಯಿಂದ ಫೈಸಲು ಆದೀತಾಗಿ ಎಣಿಸುವದಾದರೆ, ಅದನ್ನು ವಾಪಸು ಮಾಡಬಹುದು.

ಅರ್ಜಿಯ ನಮೂನೆ.

10. (1) ಮನವಿಯು ಡೆಪ್ಯುಟಿ ಕಮಿಷನರು ಮಾಡುವವಲ್ಲವಾದರೆ ಅದು, ಒಂದು ದಾವೆ ಅರ್ಜಿಯು ಸಹಿ ಮತ್ತು ದೃಢಪಡಿಸುವಿಕೆ ಕುರಿತು ಸಿವಿಲ ಪ್ರೊಸಿಡ್ಯೂರ್ ಕೋಡಿನಿಂದ ನಿರ್ದೇಶಿಸೋಣಾದ ರೀತಿಯಲ್ಲಿ ಸಹಿಮಾಡಲ್ಪಟ್ಟು ದೃಢಪಡಿಸಿದ ಒಂದು ಅರ್ಜಿಯಾಗಿರಬೇಕಲ್ಲದೆ, ಅದರಲ್ಲಿ ನಿಶ್ಚೈಸಿಕೊಳ್ಳಲಿಕ್ಕೆ ಆಗುವಷ್ಟುಮಟ್ಟಿಗೆ ನಮೂದ್ಮಾಡಲ್ಪಡಬೇಕಾದ್ದು ಏನಂದರೆ ;—

(a) (ಅಪ್ರಾಯಸ್ಥ) ಆಸಾಮಿಯ ಹೆಸರು, ಲಿಂಗ, ಮತ, ಹುಟ್ಟಿದ ದಿನ ಮತ್ತು ವಾಡಿಕೆಯಾದ ವಾಸಸ್ಥಾನ,

(b) ಅಪ್ರಾಯಸ್ಥ ಆಸಾಮಿಯು ಹೆಣ್ಣಾಗಿದ್ದರೆ, ಆಕೆಗೆ ಮದುವೆಯಾಗಿದೆಯೋ, ಆಗಿದ್ದರೆ ಆಕೆಯ ಗಂಡನ ಹೆಸರು ಮತ್ತು ಪ್ರಾಯ ;

(c) ಅಪ್ರಾಯಸ್ಥನ ಸೊತ್ತು (ಏನಾದರೂ ಇದ್ದರೆ), ಅದರ ಸ್ವಭಾವ, ಇರುವ ಸ್ಥಳ ಮತ್ತು ಅಂದಾಜು ಮೌಲ್ಯ ;

(d) ಅಪ್ರಾಯಸ್ಥನ ದೇಹದ ಯಾ ಸೊತ್ತಿನ ಕಾವಲು ಯಾ ಸ್ವಾಧೀನತೆ ಇಟ್ಟುಕೊಂಡಿರುವ ಮನುಷ್ಯನ ಹೆಸರು ಮತ್ತು ವಾಸಸ್ಥಾನ ;

(e) ಅಪ್ರಾಯಸ್ಥನಿಗೆ ಯಾವ ಯಾವ ಸಮೀಪದ ಬಂಧುಗಳು ಇರುತ್ತಾರೆಂಬದು ಮತ್ತು ಅವರು ಎಲ್ಲಿ ವಾಸವಾಗಿರುತ್ತಾರೆಂಬದು ;

(f) ಸದರಿ ಅಪ್ರಾಪ್ತವಯಸ್ಕನು ಒಳಪಟ್ಟಿರುವ ಕಾನೂನು ಮೇರೆಗೆ ನೇಮಿಸಲಿಕ್ಕೆ ಹಕ್ಕು ಇರುವ ಯಾ ಉಯಿಲಿನಂತೆ ಹೇಳುವ ಮನುಷ್ಯನು ಅಪ್ರಾಪ್ತವಯಸ್ಕನ ದೇಹದ ಯಾ ಆಸ್ತಿಯ ಯಾ ಇವೆರಡರ ರಕ್ಷಕನಾಗಿ, ಯಾರನ್ನಾದರೂ ನೇಮಕ ಮಾಡಿದ್ದಾನೋ ಎಂಬುದು ;

(g) ಅಪ್ರಾಪ್ತವಯಸ್ಕನ ದೇಹದ ಯಾ ಸೊತ್ತಿನ ಯಾ ಇವೆರಡರ ರಕ್ಷಕನಾಗುವದನ್ನು ಕುರಿತು ಸದರಿ ಕೋರ್ಟಿಗಾಗಲಿ ಯಾ ಬೇರೆ ಯಾವ ಕೋರ್ಟಿಗಾಗಲಿ ಯಾವಾಗಲಾದರೂ ಅರ್ಜಿ ಮಾಡೋಣಾಗಿದೆಯೋ, ಮಾಡೋಣಾಗಿದ್ದರೆ, ಯಾವಾಗ, ಯಾವ ಕೋರ್ಟಿಗೆ ಮತ್ತು ಹ್ಯಾಗೆ ಫೈಸಲು ಆಯಿತೆಂಬುದು ;

(h) ಅರ್ಜಿಯು, ಅಪ್ರಾಪ್ತವಯಸ್ಕನ ಸಂರಕ್ಷಕನ ನೇಮಕದ ಸಂಬಂಧವಾಗಿಯು ಯಾ ವಿಧಿಸಿ ತಿಳಿಸೋಣವು ಆತನ ದೇಹದ ಬಗ್ಗೆಯೋ ಸೊತ್ತಿನ ಬಗ್ಗೆಯೋ ಯಾ ಇವೆರಡರ ಬಗ್ಗೆಯೋ ಎಂಬುದು ;

(i) ಅರ್ಜಿಯು ಒಬ್ಬ ಸಂರಕ್ಷಕನನ್ನು ನೇಮಿಸುವ ಬಗ್ಗೆ ಇರುವ ಸಂಗತಿಯಲ್ಲಿ, ಸಂರಕ್ಷಕನಾಗಿ ಯೋಚಿಸಲ್ಪಟ್ಟವನ ಯೋಗ್ಯತೆಗಳು ;

(j) ಅರ್ಜಿಯು ಸಂರಕ್ಷಕನನ್ನು ವಿಧಿಸಿ ಹೇಳುವಬಗ್ಗೆ ಆಗಿದ್ದ ಸಂಗತಿಯಲ್ಲಿ, ಆತನ ಹಕ್ಕು ಯಾವ ಸಬಬುಗಳ ಮೇಲೆ ಆದರಿಸಲ್ಪಡುತ್ತದೆಂಬುದು ;

(k) ಅರ್ಜಿ ಮಾಡಲಿಕ್ಕೆ ಸಬಬುಗಳು ; ಮತ್ತು

(l) ನಿರ್ದೇಶಿಸೋಣಾಗುಬಹುದಾದಂತಾ ಅಥವಾ ಅರ್ಜಿಯು ಸ್ವಭಾವದಿಂದ ತೋರಿಸಬೇಕಾದ್ದು ಅವಶ್ಯ ಆಗುವಂತಾ ಇತರ ತಪಶೀಲುಗಳು (ಇದ್ದರೆ).

(2) ಅರ್ಜಿಯನ್ನು ಡೆಪ್ಯುಟಿ ಕಮ್ಮಿಷನರು ಮಾಡುವದಾದರೆ, ಅದು ಕೋರ್ಟಿನ ವಿಳಾಸಕ್ಕೆ ಬರೆದ ಒಂದು ಪತ್ರರೂಪವಾಗಿ ಇದ್ದು ಟಪ್ಪಾಲ್ ದ್ವಾರಾ ಅಥವಾ ಅನುಕೂಲವಾಗಿ ತೋರುವ ಇತರ ರೀತಿಯಲ್ಲಿ ಕಳುಹಿಸಲ್ಪಡತಕ್ಕದ್ದು ; ಮತ್ತು ಅದರಲ್ಲಿ ಸಾಧ್ಯವಾದ ಮಟ್ಟಿಗೆ (1) ನೇ ಉಪಪ್ರಕರಣದಲ್ಲಿ ನಮೂದಿರುವ ತಪಶೀಲುಗಳು ಅಡಗಿರತಕ್ಕದ್ದು.

(3) ಸದರಿ ಅರ್ಜಿಯ ಸಂಗಡ, ಸಂರಕ್ಷಕನಾಗತಕ್ಕವನಿಗೆ ಹಾಗೆ ಸಂರಕ್ಷಕನಾಗಿ ನಡೆಕೊಳ್ಳಲಿಕ್ಕೆ ಇಷ್ಟ ಇರುವ ದಾಗಿ ಒಂದು ದೃಢಪತ್ರಿಕೆ ಇರತಕ್ಕದ್ದು, ಮತ್ತು ಈ ದೃಢಪತ್ರಿಕೆಗೆ ಆತನು ರುಜು ಹಾಕತಕ್ಕದ್ದು. ಮತ್ತು ಕನಿಷ್ಠ ಪಕ್ಷಕ್ಕೆ ಎರಡು ಸಾಕ್ಷಿಗಳ ಸಾಕ್ಷಿ ಇರತಕ್ಕದ್ದು.

ಅರ್ಜಿಗಳು ದಾಖಲಾದ ನಂತರ ನಡಿಸತಕ್ಕ ವ್ಯವಹರಣೆ.

11. ಸದರಿ ಅರ್ಜಿಯಮೇಲೆ ಮುಂದಿನ ವ್ಯವಹರಣೆ ನಡಿಸುವದಕ್ಕೆ ಸಬಬು ಇರುವದಾಗಿ ಕೋರ್ಟಿನವರಿಗೆ ಸಮಾಧಾನವಾದ್ದಲ್ಲಿ, ಸದರಿ ಅರ್ಜಿಯ ವಿಚಾರಣೆಬಗ್ಗೆ ಒಂದು ದಿವಸವನ್ನು ನಿಶ್ಚೈಸಿ, ಅರ್ಜಿ ದಾಖಲಾದ್ದನ್ನು ಕುರಿತು ಮತ್ತು ಅದನ್ನು ತನಿಖೆಬಗ್ಗೆ ನಿಶ್ಚೈಸಿದ ತಾರೀಕು ನಮೂದಿಸಿ ಒಂದು ನೋಟೀಸನ್ನು —

(a) ಸಿವಿಲ್ ಪ್ರೊಸಿಜ್ಯೂರ್ ಕೋಡಿನಲ್ಲಿ ನಿಬಂಧಿಸೋಣಾದ ರೀತಿಯಲ್ಲಿ—

(i) ಅಪ್ರಾಪ್ತವಯಸ್ಕನ ಪಿತೃವರು ಮೈಸೂರು ಸೀಮೆಯೊಳಗೆ ಇದ್ದರೆ ಅವರಮೇಲೆ,

(ii) ಸದರಿ ಅಪ್ರಾಪ್ತವಯಸ್ಕನನ್ನು ಯಾ ಆತನ ಸೊತ್ತನ್ನು ಕಾವಲಿನಲ್ಲಿ ಯಾ ಸ್ವಾಧೀನತೆಯಲ್ಲಿ ಇಟ್ಟುಕೊಂಡಿರುವದಾಗಿ ಅರ್ಜಿಯಲ್ಲಿ ಯಾ ಕಾಗದದಲ್ಲಿ ಹೇಳೋಣಾದ ಮನುಷ್ಯನು ಇದ್ದರೆ ಆತನಮೇಲೆ,

(iii) ಸಂರಕ್ಷಕನಾಗಿ ನೇಮಿಸಲ್ಪಡಬೇಕೆಂತ ಯಾ ವಿಧಿಸಿ ಹೇಳಬೇಕೆಂತ ಅರ್ಜಿಯಲ್ಲಿ ಯಾ ಪತ್ರದಲ್ಲಿ ಅಪೇಕ್ಷಿಸೋಣಾದ ಮನುಷ್ಯನೇ ಅರ್ಜಿದಾರನಲ್ಲದ ಸಂಗತಿಯಲ್ಲಿ ಅಂಥಾ ಮನುಷ್ಯನಮೇಲೆ ಮತ್ತು,

(iv) ಸದರಿ ಅರ್ಜಿ ಕುರಿತು ವಿಶೇಷ ನೋಟಿಸು ಕೊಡತಕ್ಕದೆಂತ ಕೋರ್ಟಿನವರು ಅಭಿಪ್ರಾಯಪಡುವ ಇತರ ಮನುಷ್ಯನಮೇಲೆ

ಸಹಾ ಸಾದರು ಮಾಡಿಸತಕ್ಕದ್ದು ; ಮತ್ತು

(b) ಕೋರ್ಟಿನ ಬಹಿರಂಗವಾದ ಒಂದು ಸ್ಥಳದಲ್ಲಿ ಮತ್ತು ಅಪ್ರಾಪ್ತವಯಸ್ಕನ ವಾಸಸ್ಥಾನಕ್ಕೆ ಹಚ್ಚಿಸತಕ್ಕದ್ದು, ಮತ್ತು ಈ ರೆಗ್ಯುಲೇಷನಿಗೆ ಅನುಗುಣವಾಗಿ ಚೀಫ್‌ಕೋರ್ಟಿನವರು ಮಾಡಿದ ನೇಮಗಳಿಗೆ ಒಳಪಟ್ಟು, ಕೋರ್ಟಿನವರಿಗೆ ಯುಕ್ತ ತೋರುವ ರೀತಿಯಲ್ಲಿ ಪ್ರಸಿದ್ಧಿಸತಕ್ಕದ್ದು.

ಅಪ್ರಾಪ್ತವಯಸ್ಕನನ್ನು ಹಾಜರು ಮಾಡುವ ಬಗ್ಗೆ ಮತ್ತು ಆತನ ದೇಹದ ಮತ್ತು ಸೊತ್ತಿನ ಕಾಪಾಡುವಿಕೆಬಗ್ಗೆ ಹಂಗಾಮಿ ಹುಕುಂ ಕೊಡುವ ಅಧಿಕಾರ.

12. (1) ಅಪ್ರಾಪ್ತವಯಸ್ಕನ ಕಾವಲು ಇಟ್ಟುಕೊಂಡಿರುವ ಮನುಷ್ಯನು ಇದ್ದರೆ, ತಾವು ನೇಮಿಸುವ ಸ್ಥಳ ಮತ್ತು ಕಾಲದಲ್ಲಿ ಮತ್ತು ತಾವು ನೇಮಿಸುವ ಮನುಷ್ಯನ ಮುಂದೆ ಸದರಿ ಅಪ್ರಾಪ್ತವಯಸ್ಕನನ್ನು ಹಾಜರು ಪಡಿಸುವಂತೆ ಕೋರ್ಟಿನವರು ಆತನನ್ನು ಆಜ್ಞಾಪಿಸಬಹುದು ; ಮತ್ತು ಸದರಿ ಅಪ್ರಾಪ್ತವಯಸ್ಕನ ದೇಹದ ಯಾ ಸೊತ್ತಿನ ತಾತ್ಕಾಲಿಕವಾದ ಕಾವಲು ಮತ್ತು ಕಾಪಾಡುವಿಕೆಬಗ್ಗೆ ತಮಗೆ ಯುಕ್ತ ತೋರುವ ಮೇರೆಗೆ ಹುಕುಂ ಮಾಡಬಹುದು.

(2) ಸದರಿ ಅಪ್ರಾಪ್ತವಯಸ್ಕ ಆಸಾಮಿಯು ಬಹಿರಂಗವಾಗಿ ಕಾಣಿಸಿಕೊಳ್ಳಲಿಕ್ಕೆ ಬಲಾತ್ಕಾರ ಪಡಿಸಕೂಡದ ಒಂದು ಹೆಂಗಸಾಗಿದ್ದರೆ, ಆಕೆಯನ್ನು ಹಾಜರ ಪಡಿಸತಕ್ಕಬಗ್ಗೆ (1) ನೇ ಉಪಪ್ರಕರಣದಮೇರೆಗೆ ಕೊಟ್ಟ ಹುಕುಮಿನಲ್ಲಿ ಆಕೆಯು ಸ್ವಾದೇಶದ ಚಾಲ ಮತ್ತು ರೀತಿಗೆ ತಕ್ಕ ಹಾಗೆ ಹಾಜರು ಪಡಿಸಬೇಕೆಂಯದಾಗಿ ನಮೂದಿರತಕ್ಕದ್ದು.

(3) ಈ ಪ್ರಕರಣದಲ್ಲಿ ಇರುವಂಥಾ ಯಾವದರಿಂದಾದರೂ—

(a) ಒಬ್ಬ ಅಪ್ರಾಯಸ್ಥಳು ಅವಳ ಹತ್ತು ವರ್ಷ ಇದ್ದರೆ ಅವರ ಸಮ್ಮತಿಯೊಡನೆ ಗಂಡನ ಕಾವಲಿನಲ್ಲಿ ಇರುವಂತವಳಾಗಿದ್ದರೇನೆ ಹೊರ್ತು ತಾನು ಆಕೆಯ ಗಂಡನೆಂಬ ಸಬಬಿನಮೇಲೆ ಅವಳ ಸಂರಕ್ಷಕನಾಗಿರತಕ್ಕವನೆಂತ ಸಾಧಿಸುವ ಮನುಷ್ಯನ ಕಾವಲಿನಲ್ಲಿ ಹಂಗಾಮಿಯಾಗಿ ಆದರೂ ಅಂತಾ ಅಪ್ರಾಯಸ್ಥಳನ್ನು ಇಡಲಿಕ್ಕೆ ಕೋರ್ಟಿನವರಿಗೆ ಅಧಿಕಾರ ಉಂಟಾಗುವದಿಲ್ಲ, ಅಥವಾ

(b) ಒಬ್ಬ ಅಪ್ರಾಯಸ್ಥನ ಸ್ವೊತ್ತಿನ ಹಂಗಾಮಿಯಾದ ಕಾವಲು ಮತ್ತು ಸಂರಕ್ಷಣೆಯ ಅಧಿಕಾರ ಕೊಡಲ್ಪಟ್ಟ ಯಾವ ಮನುಷ್ಯನಿಗಾದರೂ, ಸದರಿ ಸೊತ್ತಿನ ಪೈಕಿ ಎಷ್ಟನ್ನಾದರೂ ಅಂಶವನ್ನು ಸ್ವಾಧೀನತೆಯಲ್ಲಿ ಇಟ್ಟುಕೊಂಡಿರುವಂತಾವನಿಂದ ಅದನ್ನು ಕ್ರಮವಾಗಿ ಕಾನೂನುಪ್ರಕಾರಹೊರ್ತು, ಅನ್ಯಥಾ ತಪ್ಪಿಸಲಿಕ್ಕೆ ಅಧಿಕಾರ ಉಂಟಾಗುವದಿಲ್ಲ.

ಹುಕುಂ ಕೊಡುವ ಮೊದಲು ರುಜುವಾತು ವಿಚಾರಿಸಿಕೊಳ್ಳೋಣ.

13. ಅರ್ಜಿಯ ವಿಚಾರಣೆಬಗ್ಗೆ ನಿಶ್ಚೈಸೋಣಾದ ದಿವಸದಲ್ಲಿ, ಅಥವಾ ಅನಂತರ ಕೂಡುವಷ್ಟು ಬೇಗನೆ, ಕೋರ್ಟಿನವರು ಸದರಿ ಅರ್ಜಿಗೆ ಆಧಾರವಾಗಿ ಯಾ ಅದಕ್ಕೆ ವಿರೋಧವಾಗಿ ಕೊಡಬಹುದಾದ ರುಜುವಾತನ್ನು ತೆಗದುಕೊಳ್ಳತಕ್ಕದ್ದು.

ಬೇರೆಬೇರೆ ಕೋರ್ಟುಗಳಲ್ಲಿ ಏಕಕಾಲದಲ್ಲಿ ವೆವಹರಣೆಗಳು.

14. ಒಬ್ಬ ಅಪ್ರಾಯಸ್ಥನ ಸಂರಕ್ಷಕನ ನೇಮಕದಬಗ್ಗೆ ಯಾ ವಿಧಿಸಿ ತಿಳಿಸೋಣದಬಗ್ಗೆ ವೆವಹರಣೆಗಳು ಒಂದರಕ್ಕಿಂತ ಹೆಚ್ಚು ಕೋರ್ಟುಗಳಲ್ಲಿ ಆರಂಭಿಸಲ್ಪಟ್ಟು ಇದ್ದರೆ, ಆ ಪ್ರತಿಒಂದು ಕೋರ್ಟಿನವರು ಇತರ ಕೋರ್ಟು ಯಾ ಕೋರ್ಟುಗಳಲ್ಲಿ ನಡಿಯುವ ವೆವಹರಣೆಗಳ ಸಂಗತಿ ತಿಳಿಯುತ್ತಲೇನೆ ತಮ್ಮ ಮುಂದೆ ನಡಿಯುತ್ತಿರುವ ವೆವಹರಣೆಯನ್ನು ನಿಲ್ಲಿಸಿಡತಕ್ಕದ್ದು. ಮತ್ತು ಆ ಮೊಕದ್ದಮೆ ಕುರಿತು ಚೀಫ ಕೋರ್ಟಿಗೆ ರಿಪೋರ್ಟು ಮಾಡತಕ್ಕದ್ದು, ಮತ್ತು ಚೀಫ ಕೋರ್ಟಿನವರು ಸದರಿ ಅಪ್ರಾಯಸ್ಥನ ಸಂರಕ್ಷಕನ ನೇಮಕದ ಯಾ ವಿಧಿಸಿ ತಿಳಿಸುವಿಕೆಯ ಕುರಿತ ವೆವಹರಣೆಯು ಸದರಿ ಕೋರ್ಟುಗಳ ಪೈಕಿ ಯಾವ ಕೋರ್ಟಿನವರಮುಂದೆ ನಡಿಯತಕ್ಕದ್ದೆಂಬದನ್ನು ಇತ್ಯರ್ಥಿಸತಕ್ಕದ್ದು.

ಬೇರೆಬೇರೆ ಸಂರಕ್ಷಕರನ್ನು ನೇಮಿಸುವಿಕೆ ಯಾ ವಿಧಿಸಿ ತಿಳಿಸೋಣ.

15. (1) ಅಪ್ರಾಯಸ್ಥನು ಒಳಪಡುವ ಕಾನೂನು ಪ್ರಕಾರ ಆತನ ದೇಹದ ಯಾ ಸೊತ್ತಿನ ಯಾ ಇವೆರಡರಬಗ್ಗೆ ಇಬ್ಬರು ಯಾ ಹೆಚ್ಚು ಸಂರಕ್ಷಕರನ್ನು ಇಡಬಹುದಾಗಿದ್ದರೆ, ಕೋರ್ಟಿನವರು ತಮಗೆ ಯುಕ್ತ ತೋರಿದರೆ ಅವರನ್ನು ನೇಮಿಸಲೂ ವಿಧಿಸಿ ಹೇಳಲೂಬಹುದು.

(2) ಯುರೋಪಿಯನ್ ಬ್ರಿಟಿಷ ಸಬ್‌ಜಕ್ಟು ಆದ ಒಬ್ಬ ತಂದೆಯು ತನ್ನ ಮರಣದನಂತರ ಜಾರಿಗೆ ಬರತಕ್ಕ ಒಂದು ವಿಲ್ (ಮರಣಶಾಸನ) ಯಾ ಇತರ ದಸ್ತಾವೇಜಿನ ಮೂಲಕ ತನ್ನ ಅಪ್ರಾಯಸ್ಥ ಮಗುವಿನ ಸಂರಕ್ಷಕನನ್ನು ನೇಮಿಸಿ ಸತ್ತುಹೋದಲ್ಲಿ, ಕೋರ್ಟಿನವರು ಸದರಿ ತಂದೆಯು ಮೊಕರ್ರರು ಮಾಡಿದ ಸಂರಕ್ಷಕನ ಜೊತೆಗೆ ಸಹರಕ್ಷಕಳಾಗಿ ತಾಯಿಯನ್ನು ನೇಮಿಸಬಹುದು.

(3) ಯುರೋಪಿಯನ್ ಬ್ರಿಟಿಷ ಸಬ್‌ಜಕ್ಟು ಆದ ಒಬ್ಬ ತಾಯಿಯು ಅವಳ ಅಪ್ರಾಯಸ್ಥ ಮಗುವಿನ ತಂದೆಯ ಅಸಮರ್ಥತೆಯ ಕಾಲದಲ್ಲಿ ತನ್ನ ಮರಣದ ನಂತರ ಜಾರಿಗೆ ಬರತಕ್ಕ ಒಂದು ವಿಲ್ ಯಾ ಇತರ ದಸ್ತಾವೇಜಿನಮೂಲಕ ಸದರಿ ಮಗುವಿನ ಸಂರಕ್ಷಕನನ್ನು ನೇಮಿಸಿ ಸತ್ತುಹೋದಲ್ಲಿ, ಕೋರ್ಟಿನವರು, ಸದರಿ ತಂದೆಯು ಕೆಲಸ ನೋಡಲಿಕ್ಕೆ ಶಕ್ತನಾದರೆ, ಆತನನ್ನು ಸದರಿ ಮಗುವಿನ ಒಬ್ಬನೇ ಸಂರಕ್ಷಕನಾಗಿ ಆಗಲೀ ತಾಯಿಯು ನೇಮಿಸಿದ ಸಂರಕ್ಷಕನ ಸಂಗಡ ಸಹ ರಕ್ಷಕನಾಗಿ ಆಗಲೀ ತಮಗೆ ಯುಕ್ತವಾಗಿ ತೋರುವಂತೆ ನೇಮಕ ಮಾಡಬಹುದು.

(4) ಒಬ್ಬ ಅಪ್ರಾಯಸ್ಥನ ದೇಹದ ಮತ್ತು ಸೊತ್ತಿನಬಗ್ಗೆ ಪ್ರತ್ಯೇಕ ರಕ್ಷಕರನ್ನು ನೇಮಿಸಬಹುದು ಯಾ ವಿಧಿಸಿ ಹೇಳಬಹುದು.

(5) ಒಬ್ಬ ಅಪ್ರಾಯಸ್ಥನಿಗೆ ಬೇರೆಬೇರೆ ಆಸ್ತಿಗಳು ಇದ್ದರೆ ಅವುಗಳ ಪೈಕಿ ಯಾವದೊಂದಕ್ಕೆ ಯಾ ಒಂದರಕಿಂತ ಹೆಚ್ಚು ಆಸ್ತಿಗಳಿಗೆ ಪ್ರತ್ಯೇಕ ರಕ್ಷಕರನ್ನು ಕೋರ್ಟಿನವರು, ಯುಕ್ತ ತೋರಿದರೆ, ನೇಮಿಸ ಯಾ ವಿಧಿಸಿ ಹೇಳಬಹುದು.

ಕೋರ್ಟಿನವರ ಅಧಿಕಾರ ಸರಹದ್ದಿನ ಹೊರಗೆ ಇರುವ ಸೊತ್ತಿನಬಗ್ಗೆ ಸಂರಕ್ಷಕನ ನೇಮಕ ಯಾ ವಿಧಿಸಿ ತಿಳಿಸೋಣ.

16. ಕೋರ್ಟಿನವರು ತಮ್ಮ ಅಧಿಕಾರ ಸರಹದ್ದಿನ ಸ್ಥಳಿಕ ಎಲ್ಲೆಗಳ ಹೊರಗೆ ಇರುವ ಆಸ್ತಿಬಗ್ಗೆ ಸಂರಕ್ಷಕನನ್ನು ನೇಮಿಸಿದರೆ ಯಾ ವಿಧಿಸಿ ಹೇಳಿದರೆ, ಆ ಆಸ್ತಿ ಇರುವ ಸ್ಥಳದಲ್ಲಿ ಅಧಿಕಾರ ಇರುವ ಕೋರ್ಟಿನವರು ಸದರಿ ಸಂರಕ್ಷಕನನ್ನು ನೇಮಿಸಿ ಯಾ ವಿಧಿಸಿ ಹೇಳಿ ಮಾಡಿದ ಹುಕುಮಿನ ಒಂದು ಧೃಢಪಡಿಸೋಣಾದ ನಕಲು ಹಾಜರು ಪಡಿಸಿದಲ್ಲಿ ಅವನನ್ನು ಕ್ರಮವಾಗಿ ನೇಮಿಸಲ್ಪಟ್ಟ ಯಾ ವಿಧಿಸಿ ಹೇಳಲ್ಪಟ್ಟವನಾಗಿ ಅಂಗೀಕಾರ ಮಾಡಿಕೊಳ್ಳತಕ್ಕದ್ದು; ಮತ್ತು ಹುಕುಮನ್ನು ಜಾರಿಯಲ್ಲಿ ತರತಕ್ಕದ್ದು.

ಸಂರಕ್ಷಕನನ್ನು ನೇಮಕ ಮಾಡುವದರಲ್ಲಿ ಕೋರ್ಟಿನವರು ಆಲೋಚಿಸತಕ್ಕ ವಿಷಯಗಳು.

17. (1) ಒಬ್ಬ ಅಪ್ರಾಯಸ್ಥನ ಬಗ್ಗೆ ಸಂರಕ್ಷಕನನ್ನು ನೇಮಿಸುವಾಗ್ಯೆ ಯಾ ವಿಧಿಸಿ ಹೇಳುವಾಗ್ಯೆ ಕೋರ್ಟಿನವರು, ಈ ಪ್ರಕರಣದ ನಿಯಮಗಳಿಗೊಳಪಟ್ಟು, ಸದರಿ ಅಪ್ರಾಯಸ್ಥನು ಒಳಪಡುವ ನಿಬಂಧನೆಗೆ ಅನುಸಾರವಾಗಿ, ಸದರಿ ಅಪ್ರಾಯಸ್ಥನಿಗೆ ಆ ವಿದ್ಯಮಾನಗಳಲ್ಲಿ ಏನು ಕ್ಷೇಮಕರವಾಗಿರುತ್ತೆಂಬದನ್ನು ಆಲೋಚಿಸಿ ಅದಕ್ಕನುಗುಣವಾಗಿ ನಡಕೊಳ್ಳತಕ್ಕದ್ದು.

(2) ಸದರಿ ಅಪ್ರಾಯಸ್ಥ ಆಸಾಮಿಗೆ ಯಾವದು ಕ್ಷೇಮಕರವಾಗಿದ್ದೀತೆಂಬದನ್ನು ಆಲೋಚಿಸುವಾಗ್ಯೆ, ಸದರಿ ಅಪ್ರಾಯಸ್ಥ ಆಸಾಮಿಯ ವಯಸ್ಸು, ಲಿಂಗ ಮತ್ತು ಮತ, ನಿಶ್ಚಯಿಸಲ್ಪಟ್ಟ ಸಂರಕ್ಷಕನ ಯೋಗ್ಯತೆ ಮತ್ತು ಸಾಮರ್ಥ್ಯ, ಅವರಿಬ್ಬರಿಗೂ ಇರುವ ಸಂಬಂಧ, ಮೃತಪಟ್ಟ ಹೆತ್ತವರ ಅಪೇಕ್ಷೆ ಏನಾದರೂ ಇದ್ದರೆ ಅದು, ಮತ್ತು ಅಪ್ರಾಯಸ್ಥನಿಗೆ ಯಾ ಆತನ ಆಸ್ತಿಗೆ ಈಗ ಆಗತಕ್ಕ ಸಂರಕ್ಷಕನಿಗೆ ಪ್ರಕೃತ ಯಾ ಮೊದಲು ಇರಬಹುದಾದ ಸಂಬಂಧ—ಇವುಗಳನ್ನೆಲ್ಲಾ ಕೋರ್ಟಿನವರು ಆಲೋಚನೆಗೆ ತೆಕ್ಕೊಳ್ಳತಕ್ಕದ್ದು.

(3) ಅಪ್ರಾಯಸ್ಥನು ತಾನೆ ವಿವೇಕವಾಗಿ ಚುನಾಯಿಸಿಕೊಳ್ಳುವಷ್ಟು ವಯಸ್ಸು ಉಳ್ಳವನಾಗಿದ್ದರೆ ಕೋರ್ಟಿನವರು ಅಂಥಾ ಚುನಾವಣೆಯನ್ನು ಆಲೋಚಿಸಬಹುದು.

(4) ಯುರೋಪಿಯನ್ ಬ್ರಿಟಿಷ ಸಬ್ಜೆಕ್ಟುಗಳಾದ ಮಾತಾ ಪಿತೃಗಳು ಅಪ್ರಾಯಸ್ಥನ ದೇಹ ಸಂರಕ್ಷತ್ವವನ್ನು ಉಂಟಾಗಿರಬೇಕೆಂತ ಇಬ್ಬರು ಒಬ್ಬರಿಗೊಬ್ಬರು ವಿರೋಧವಾಗಿ ವಿವಾದಿಸುವದಾದರೆ, ಮಾತಾಪಿತೃಪ್ರತಿ ಒಬ್ಬರಿಗೂ ಈ ಹಕ್ಕು ಇರುವದಿಲ್ಲ; ಆದರೆ ಇತರ ಎಲ್ಲಾ ಸಂಗತಿಗಳು ವಿರೋಧವಿಲ್ಲದಿರುವಂತಾ ಸಂದರ್ಭದಲ್ಲಿ, ಅಪ್ರಾಯಸ್ಥ ಆಸಾಮಿಯು ಹೆಣ್ಣಾಗಿದ್ದರೆ ಯಾ ಎಳೆ ವಯಸ್ಸಿನ ಗಂಡಾಗಿದ್ದರೆ ಸದರಿ ಆಸಾಮಿಯನ್ನು ತಾಯಿಯು ಸ್ವಾಧೀನವ್ತು, ಆ ಆಸಾಮಿಯು ವಿದ್ಯಾಭ್ಯಾಸಪಡೆದು ಕಷ್ಟಕೆಲಸ ಮಾಡಲಿಕ್ಕೆ ತರ್ಬೀತಿ ಹೊಂದತಕ್ಕ ಪ್ರಾಯವುಳ್ಳ ಗಂಡಾಗಿದ್ದರೆ, ಆತನನ್ನು ತಂದೆಯು ಸ್ವಾಧೀನವ್ತೊ, ಮಾಡತಕ್ಕದ್ದು.

(5) ಯಾವ ಮನುಷ್ಯನನ್ನಾದರೂ ಕೋರ್ಟಿನವರು ಆತನ ಮನಸ್ಸಿಗೆ ವಿರೋಧವಾಗಿ ಸಂರಕ್ಷಕನಾಗಿ ನೇಮಿಸಲೂಕೂಡದು ವಿಧಿಸಿ ಹೇಳಲೂಕೂಡದು.

ಉದ್ಯೋಗ ಪ್ರಯುಕ್ತವಾಗಿ ಡೆಪ್ಯುಟಿ ಕಮ್ಮಿಷನರನ್ನು ಮೊಕರ್ರರು ಮಾಡೋಣ ಯಾ ವಿಧಿಸಿ ತಿಳಿಸೋಣ.

18. ಕೋರ್ಟಿನವರು ಒಬ್ಬ ಡೆಪ್ಯುಟಿ ಕಮ್ಮಿಷನರನ್ನು ಆತನ ಉದ್ಯೋಗ ಪ್ರಯುಕ್ತವಾಗಿ ಒಬ್ಬ ಅಪ್ರಾಯಸ್ಥನ ದೇಹದ ಯಾ ಸೊತ್ತಿನ ಯಾ ಇವೆರಡರ ಸಂರಕ್ಷಕನಾಗಿ ನೇಮಿಸಿದಲ್ಲಿ ಯಾ ವಿಧಿಸಿ ಹೇಳಿದಲ್ಲಿ ಆತನನ್ನು ನೇಮಿಸುವ ಯಾ ವಿಧಿಸಿ ಹೇಳುವ ಹುಕುಮಿನಮೇರೆಗೆ, ತಾತ್ಕಾಲಿಕವಾಗಿ ಸದರಿ ಉದ್ಯೋಗದಲ್ಲಿರುವವನು, ಸದರಿ ಅಪ್ರಾಯಸ್ಥನ ದೇಹದ ಯಾ ಸೊತ್ತಿನ ಯಾ ಇವೆರಡರಕ್ಕೆ ಸಂರಕ್ಷಕನಾಗಿ, ಆಯಾ ಸಂಗತ್ಯಾನುಸಾರವಾಗಿ ನಡಕೊಳ್ಳತಕ್ಕದ್ದೆಂತ ಮತ್ತು ಹಾಗೆ ನಡಕೊಳ್ಳಲಿಕ್ಕೆ ಆತನಿಗೆ ಅಧಿಕಾರವಿರುವದಾಗಿ ಎಣಿಸಲ್ಪಡತಕ್ಕದ್ದು.

ಕೆಲವು ಸಂಗತಿಗಳಲ್ಲಿ ಕೋರ್ಟಿನವರು ಸಂರಕ್ಷಕನನ್ನು ನೇಮಿಸಕೂಡದು.

19. (*a*) ಅಪ್ರಾಯಸ್ಥಳು ಮದುವೆಯಾದ ಹೆಂಗಸು ಆಗಿದ್ದು ಗಂಡನು ಕೋರ್ಟಿನವರ ಅಭಿಪ್ರಾಯದಲ್ಲಿ ಅವಳ ದೇಹ ರಕ್ಷಕನಾಗಲಿಕ್ಕೆ ಅಯೋಗ್ಯನಲ್ಲವಾದರೆ, ಅಥವಾ

(*b*) ಯುರೋಪಿಯನ್ ಬ್ರಿಟಿಷ ಸಬ್ಜೆಕ್ಟುಗಳನ್ನು ಕುರಿತು ಈ ರೆಗ್ಯುಲೇಷನಿನ ನಿಯಮಗಳಿಗೆ ಒಳಪಟ್ಟು, ಅಪ್ರಾಯಸ್ಥನ ತಂದೆಯು ಜೀವಂತನಾಗಿದ್ದು, ಅಪ್ರಾಯಸ್ಥನ ದೇಹರಕ್ಷಣೆಯ ಕೆಲಸಕ್ಕೆ ಅಯೋಗ್ಯನಲ್ಲವಾಗಿ ಕೋರ್ಟಿನವರು ಅಭಿಪ್ರಾಯಪಟ್ಟರೆ, ಅಂಥಾ ಅಪ್ರಾಯಸ್ಥನಿಗೆ ಒಂದು ದೇಹರಕ್ಷಕನನ್ನು ನೇಮಿಸಲಿಕ್ಕೆ ಯಾ ವಿಧಿಸಿ ಹೇಳಲಿಕ್ಕೆ ಆಗಲಿ ಕೋರ್ಟಿನವರಿಗೆ ಈ ಅಧ್ಯಾಯದ ಯಾವ ನಿಯಮದಿಂದಲಾದರೂ ಅಧಿಕಾರ ಉಂಟಾಗುವದಿಲ್ಲ.

3 ನೇ ಅಧ್ಯಾಯ.

ಸಂರಕ್ಷಕರ ಕರ್ತವ್ಯಗಳು, ಹಕ್ಕುಗಳು ಮತ್ತು ಜವಾಬ್ದಾರಿಗಳು.

ಸಾಧಾರಣ.

ರಕ್ಷಕ ಮತ್ತು ರಕ್ಷಿತರೊಳಗೆ ಇರುವ ಭರವಸೆಯುಳ್ಳ ಸಮ್ಮಂಧ.

20. (1) ಒಬ್ಬ ಸಂರಕ್ಷಕನು ತನ್ನ ಸಂರಕ್ಷಣೆಯೊಳಗಿರುವವನಿಗೆ ಭರವಸೆಯುಳ್ಳ ಸಮ್ಮಂಧದಲ್ಲಿ ಇರುತ್ತಾನೆ ಮತ್ತು ತನ್ನನ್ನು ನೇಮಿಸಿದ ವಿಲ್ಲು ಯಾ ಬೇರೆ ದಸ್ತಾವೇಜು ಏನಾದರೂ ಇದ್ದರೆ ಅದರಿಂದ ಯಾ ಈ ರೆಗ್ಯುಲೇಷನಿನಿಂದ ನಿಬಂಧಿಸಿದಮೇರೆಗೆ ಇದದೇನೆ ಹೊರ್ತು, ಸಂರಕ್ಷಕನು ತನ್ನ ಉದ್ಯೋಗಮೂಲಕವಾಗಿ ಸ್ವಂತ ಪ್ರಯೋಜನ ಪಡಕೊಳ್ಳಕೂಡದು.

(2) ಒಬ್ಬ ಸಂರಕ್ಷಕನಿಗೆ ತನ್ನ ಸಂರಕ್ಷಣೆಯೊಳಗಿರುವವನಲ್ಲಿರುವ ಭರವಸೆಯುಳ್ಳ ಸಂಬಂಧವು; ರಕ್ಷಿತನ ಅಪ್ರಾಯಸ್ಥತೆಯು ಕಳದಕೂಡಲೆಯಾಗಲಿ ಯಾ ಆ ಬಳಿಕ ಬೇಗನೆಯಾಗಲಿ, ಅಂಥಾ ರಕ್ಷಿತನ ಸೊತ್ತನ್ನು ಸದರಿ ಸಂರಕ್ಷಕನಾದರೂ, ಸಂರಕ್ಷಕನ ಸೊತ್ತನ್ನು ರಕ್ಷಿತನಾದರೂ, ಕ್ರಯಕ್ಕೆ ಪಡಕೊಂಡು ಇದ್ದರೆ, ಅಂಥಾ ಕೊಂಡುಕೊಳ್ಳುವಿಕೆಗಳಿಗೂ ಮತ್ತು ಸಾಧಾರಣವಾಗಿ ಸಂರಕ್ಷಕನ ಪ್ರೇರೇಪಕವಾದ ಪ್ರಾಬಲ್ಯವು ಇರುತ್ತಲಿರುವಾಗ್ಯೆ ಅಥವಾ ಆ ಪ್ರಾಬಲ್ಯವು ಪ್ರಾಚೀನವಾಗುವದಕ್ಕೆ ಮುಂಚೆಯೇ ಅವರೊಳಗೆ ನಡೆಯುವ ಎಲ್ಲ ಲೇವಾದೇವಿಗಳಿಗೂ ವ್ಯಾಪಿಸುವದಲ್ಲದೆ ಅವುಗಳನ್ನು ಬಾಧಿಸುತ್ತದೆ.

ಅಪ್ರಾಯಸ್ಥರು ಸಂರಕ್ಷಕರಾಗಿ ಕೆಲಸ ನಡಿಸಲು ಯೋಗ್ಯರೋ ಎಂಬದು.

21. ಒಬ್ಬ ಅಪ್ರಾಯಸ್ಥನು, ತನ್ನ ಸ್ವಂತ ಹೆಂಡತಿ ಯಾ ಮಗುವಿನ ಅಥವಾ ತಾನು ಒಂದು ಅವಿಭಕ್ತ ಹಿಂದು ಕುಟುಂಬದ ಆಡಳಿತೆ ನೋಡುವ ಮೆಂಬರನಾಗಿರುವಲ್ಲಿ, ಅಂಥಾ ಕುಟುಂಬದ ಇನ್ನೊಬ್ಬ ಅಪ್ರಾಯಸ್ಥ ಮೆಂಬರನ ಹೆಂಡತಿ ಯಾ ಮಗು ವಿನಹ ಬೇರೆ ಯಾವ ಅಪ್ರಾಯಸ್ಥನ ಸಂರಕ್ಷಕನಾಗಿರಲಿಕ್ಕೂ ಅಯೋಗ್ಯನಾಗಿರುತ್ತಾನೆ.

ಸಂರಕ್ಷಕನಿಗೆ ಪ್ರತಿಫಲವು.

22. (1) ಕೋರ್ಟಿನವರಿಂದ ನೇಮಕಪಟ್ಟಂಥಾ ಯಾ ವಿಧಿಸಿ ತಿಳಿಸಲ್ಪಟ್ಟಂಥಾ ಒಬ್ಬ ಸಂರಕ್ಷಕನು, ತನ್ನ ಕರ್ತವ್ಯಗಳನ್ನು ನೆರವೇರಿಸುವದರಲ್ಲಿ ತೋರಿಸಿದ ಶ್ರದ್ಧೆಗೂ ತೆಗದುಕೊಂಡ ಶ್ರಮಕ್ಕೂ ಕೋರ್ಟಿನವರು ಯುಕ್ತವೆಂದು ಎಣಿಸುವ ಪ್ರತಿಫಲವನ್ನು, (ಆದೇಸಾದರೂ ಇದ್ದರೆ) ಪಡಕೊಳ್ಳಲಿಕ್ಕೆ ಅರ್ಹನಾಗಿರುತ್ತಾನೆ.

(2) ಒಬ್ಬ ಗವರ್ನಮೆಂಟು ಆಫೀಸರನು, ಅಂಥಾ ಆಫೀಸರಾಗಿರುವದರ ಪ್ರಯುಕ್ತ, ಸಂರಕ್ಷಕನಾಗಿ ಹಾಗೆ ನೇಮಕಪಟ್ಟರೆ ಯಾ ವಿಧಿಸಿ ತಿಳಿಸಲ್ಪಟ್ಟರೆ, ಅಂಥಾ ಪ್ರತಿಫಲವು, ಗವರ್ನಮೆಂಟಿನವರು ಸಾಧಾರಣ ಯಾ ವಿಶೇಷ ಹುಕುಮಿನಿಂದ ವಿಧಿಸುವವಮೇರೆಗೆ, ಸಂರಕ್ಷಣೆಯಲ್ಲಿರುವವನ ಆಸ್ತಿಯಿಂದ ಗವರ್ನಮೆಂಟಿನವರಿಗೆ ಪಾವತಿ ಆಗತಕ್ಕದ್ದು.

ಸಂರಕ್ಷಕನಾಗಿರುವ ಡೆಪ್ಯುಟಿ ಕಮ್ಮಿಷನರ ಮೇಲ್ವಿಚಾರಣೆ.

23. ಒಬ್ಬ ಅಪ್ರಾಯಸ್ಥನ ದೇಹದ ಯಾ ಆಸ್ತಿಯ, ಅಥವಾ ಇವೆರಡರ ಸಂರಕ್ಷಕನಾಗಿ ಕೋರ್ಟಿನವರಿಂದ ನೇಮಕಪಟ್ಟ ಯಾ ವಿಧಿಸಿ ತಿಳಿಸಲ್ಪಟ್ಟ ಒಬ್ಬ ಡೆಪ್ಯುಟಿ ಕಮ್ಮಿಷನರನು ತನ್ನ ಸಂರಕ್ಷಣೆಯಲ್ಲಿರುವವನ ಸಂರಕ್ಷಣೆಗೆ ಸಮ್ಮಂಧಪಟ್ಟ ಎಲ್ಲಾ ಸಂಗತಿಗಳಲ್ಲಿ ಗವರ್ನಮೆಂಟಿನವರ, ಅಥವಾ ಗವರ್ನಮೆಂಟಿನವರು ಸರ್ಕಾರಿ ಗೆಜೆಟಿನಲ್ಲಿ ಪ್ರಕಟಣೆಮೂಲವಾಗಿ ಈ ಪರದಲ್ಲಿ ನೇಮಿಸುವ ಅಧಿಕಾರಸ್ಥನ ಮೇಲ್ವಿಚಾರಕ್ಕೆ ಒಳಪಟ್ಟಿರತಕ್ಕದ್ದು.

ದೇಹರಕ್ಷಕ.

ದೇಹ ರಕ್ಷಕನ ಕೆಲಸಗಳು.

24. ಸಂರಕ್ಷಣೆಯಲ್ಲಿರುವವನ ದೇಹರಕ್ಷಕನು ಆತನ ಕಾವಲನ್ನುಳ್ಳವನಾಗಿದ್ದು, ಆತನ ಆರೈಕೆ, ಆರೋಗ್ಯ ಮತ್ತು ವಿದ್ಯಾಭ್ಯಾಸ ಇವುಗಳಿಗೂ ಮತ್ತು ಆತನು ಒಳಪಡುವ ನಿಬಂಧನೆಪ್ರಕಾರ ಅವಶ್ಯವಿರುವ ಇತರ ವಿಷಯಗಳಿಗೂ ಮನಸ್ಸು ಕೊಡಬೇಕು.

ರಕ್ಷಿತನ ಕಾವಲನ್ನು ಕುರಿತು ರಕ್ಷಕನ ಹಕ್ಕು.

25. (1) ಸಂರಕ್ಷಣೆಯಲ್ಲಿರುವವನೊಬ್ಬನು ತನ್ನ ದೇಹರಕ್ಷಕನ ಕಾವಲನ್ನು ಬಿಟ್ಟುಹೋದರೆ, ಅಥವಾ ಕಾವಲಿಂದ ತಪ್ಪಿಸಲ್ಪಟ್ಟರೆ, ಅವನು ಮರಳಿ ತನ್ನ ರಕ್ಷಕನ ಕಾವಲಿಗೆ ಬರುವಂಥಾದ್ದು ರಕ್ಷಿತನ ಕ್ಷೇಮಲಾಭಕ್ಕೆ ಆಗುವದು ಎಂತ ಕೋರ್ಟಿನವರು ತಿಳುಕೊಳ್ಳುವ ಪಕ್ಷದಲ್ಲಿ, ಆತನು ಮರಳಿ ಬರಬೇಕೆಂತ ಕೋರ್ಟಿನವರು ಅಪ್ಪಣೆ ಕೊಡಬಹುದು, ಮತ್ತು ಆ ಅಪ್ಪಣೆಯನ್ನು ಜಾರಿಯಲ್ಲಿ ತರುವದಕ್ಕೋಸ್ಕರ ರಕ್ಷಿತನನ್ನು ದಸ್ತಗಿರಿ ಮಾಡಿಸಬಹುದು ಮತ್ತು ಸಂರಕ್ಷಕನ ಸ್ವಾಧೀನಕ್ಕೆ ಒಪ್ಪಿಸಬಹುದು.

(2) ಸಂರಕ್ಷಣೆಯಲ್ಲಿರುವವನನ್ನು ದಸ್ತಗಿರಿ ಮಾಡುವದಕ್ಕೋಸ್ಕರ ಕೋರ್ಟಿನವರು ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 100ನೇ ಪ್ರಕರಣದಿಂದ ಒಬ್ಬ ಒಂದನೇ ಕ್ಲಾಸು ಮೆಜಿಸ್ಟ್ರೇಟಿಗೆ ಕೊಡೋಣಾಗಿ ಇರುವ ಅಧಿಕಾರವನ್ನು ನಡಿಸಬಹುದು.

(3) ಒಬ್ಬ ಸಂರಕ್ಷಣೆಯಲ್ಲಿರುವವನು ತನ್ನ ಸಂರಕ್ಷಕನ ಮನಸ್ಸಿಗೆ ವಿರೋಧವಾಗಿ ತನ್ನ ಸಂರಕ್ಷಕನಲ್ಲದ ಇನ್ನೊಬ್ಬನ ಸಂಗಡ ವಾಸವಾಗಿದ್ದ ಸಂಗತಿಯಿಂದ ಮಾತ್ರ ಸಂರಕ್ಷಕನ ಉದ್ಯೋಗವು ಅಂತ್ಯವಾಗುವದಿಲ್ಲ.

ರಕ್ಷಿತನನ್ನು ಅಧಿಕಾರ ಸರಹದ್ದಿನ ಹೊರಗೆ ತೆಗೆದುಕೊಂಡು ಹೋಗೋಣ.

26. (1) ಕೋರ್ಟಿನವರಿಂದ ನೇಮಿಸಲ್ಪಟ್ಟ ಯಾ ವಿಧಿಸಿ ಹೇಳಲ್ಪಟ್ಟ ಒಬ್ಬ ದೇಹರಕ್ಷಕನು, ಡೆಪ್ಯುಟಿ ಕಮ್ಮಿಷನರೇ ಆಗಲಿ, ವಿಲ್ಲು ಯಾ ಇತರ ದಸ್ತಾವೇಜಿನ ಮೂಲಕ ನೇಮಕಪಟ್ಟ ರಕ್ಷಕನೇ ಆಗಲಿ ಅಲ್ಲದೆ ಇದ್ದರೆ, ತನ್ನನ್ನು ನೇಮಿಸಿದ ಯಾ ವಿಧಿಸಿ ಹೇಳಿದ ಕೋರ್ಟಿನವರ ಅಪ್ಪಣೆ ಶಿವಾಯಿ ಸದರಿ ಸಂರಕ್ಷಣೆಯಲ್ಲಿರುವವನನ್ನು ನಿರ್ದೇಶಿಸೋಣಾದ ಉದ್ದೇಶಗಳ ಬಗ್ಗೆ ಹೊರತು ಆ ಕೋರ್ಟಿನ ಅಧಿಕಾರ ಸರಹದ್ದಿನ ಹೊರಗೆ ತೆಗದುಕೊಂಡು ಹೋಗಕೂಡದು.

(2) (1) ನೇ ಉಪಪ್ರಕರಣದ ಮೇರೆಗೆ ಕೋರ್ಟಿನವರು ಕೊಡುವ ಅಪ್ಪಣೆಯು ವಿಶೇಷವಾಗಿರಲೂ ಸಾಧಾರಣವಾಗಿರಲೂಬಹುದು, ಮತ್ತು ಅದು ಕೊಡಲ್ಪಡುವ ಹುಕುಮಿನಲ್ಲಿ ವಿವರಿಸಲ್ಪಡಬಹುದು.

ಆಸ್ತಿ ರಕ್ಷಕನು.

ಆಸ್ತಿ ರಕ್ಷಕನ ಕರ್ತವ್ಯಗಳು.

27. ಒಬ್ಬ ಸಂರಕ್ಷಣೆಯಲ್ಲಿರುವವನ ಆಸ್ತಿ ರಕ್ಷಕನು, ಸದರಿ ಆಸ್ತಿಯ ವಿಷಯದಲ್ಲಿ ಒಬ್ಬ ಸಾಧಾರಣ ಜಾಣತನದ ಮನುಷ್ಯನು ಅದು ತನ್ನ ಸ್ವಂತದ್ದಾಗಿದ್ದರೆ ಅದನ್ನು ಕುರಿತು ಎಷ್ಟು ಜಾಗ್ರತೆಯಲ್ಲಿ ನಡಕೊಳ್ಳುತ್ತಿದ್ದನೊ, ಅಷ್ಟು ಜಾಗ್ರತೆಯಲ್ಲಿ ನಡಕೊಳ್ಳಲಿಕ್ಕೆ ಬದ್ಧನಾಗಿರುತ್ತಾನೆ, ಮತ್ತು ಸದರಿ ಆಸ್ತಿಯನ್ನು ಬರಮಾಡಿಕೊಳ್ಳಲಿಕ್ಕೆ, ಯಾ ಅದರ ರಕ್ಷಣೆ ಯಾ ಉಪಯೋಗಕ್ಕೆ ನ್ಯಾಯವಾಗಿ ಮತ್ತು ಯುಕ್ತವಾಗಿರುವ ಎಲ್ಲಾ ಕೆಲಸಗಳನ್ನು ಈ ಅಧ್ಯಾಯದ ನಿಯಮಗಳಿಗೆ ಒಳಪಟ್ಟು ಮಾಡಬಹುದು.

ವಿಲ್ಲಿನಿಂದ ನೇಮಿಸಲ್ಪಟ್ಟ ಸಂರಕ್ಷಕನ ಅಧಿಕಾರಗಳು.

28. ಒಂದು ವಿಲ್ಲಿನಿಂದ ಯಾ ಇತರ ದಸ್ತಾವೇಜಿನಿಂದ ಒಬ್ಬ ಸಂರಕ್ಷಕನು ನೇಮಿಸಲ್ಪಟ್ಟಿರುವಲ್ಲಿ, ಅವನು ಈ ರೆಗ್ಯುಲೇಷನಿನ ಮೇರೆಗೆ ಸಂರಕ್ಷಕನೆಂದು ವಿಧಿಸಿ ಹೇಳಲ್ಪಟ್ಟು ಹಾಗೆ ವಿಧಿಸಿ ಹೇಳಿದ ಕೋರ್ಟಿನವರು ಅವನಿಗೆ ಬರಹಮೂಲಕ ಒಂದು ಹುಕುಮಿನಿಂದ, ಸದರಿ ದಸ್ತಾವೇಜಿನಲ್ಲಿರುವ ಕಟ್ಟಿಗೆ ವಿರೋಧವಾಗಿ, ಸದರಿ ಹುಕುಮಿನಲ್ಲಿ ನಮೂದಿಸಿದ ಯಾವದೊಂದು ಸ್ಥಿರಾಸ್ತಿಯನ್ನು, ಅದರಲ್ಲಿ ವಿಧಿಸಿದ ರೀತಿಯಲ್ಲಿ ವಿಲೆಮಾಡಬಹುದೆಂದು ಆಜ್ಞಾಪಿಸಿದ ವಿನಹಾ, ತನ್ನ ಸಂ-

ರಕ್ಷಣೆಯಲ್ಲಿರುವವನ ಸ್ಥಿರಾಸ್ತಿಯನ್ನು ಅಡವು ಬರಕೊಡಲಿಕ್ಕೂ ಅದರಮೇಲೆ ಸಾಲ ಹೊರಿಸಲಿಕ್ಕೂ, ಕ್ರಯ, ದಾನ, ಬದಲಾಯಿಸುವಿಕೆಯಿಂದ ಯಾ ಬೇರೆ ವಿಧವಾಗಿ ಪರಭಾರೆ ಮಾಡಲಿಕ್ಕೂ ಅವನಿಗಿರುವ ಸ್ವತಂತ್ರವು ಸದರಿ ದಸ್ತಾವೇಜಿನಲ್ಲಿ ಕಂಡುಬರಬಹುದಾದ ಯಾವ ನಿರ್ಬಂಧಕ್ಕೆ ಆಗಲೀ ಒಳಪಡುತ್ತದೆ.

ಕೋರ್ಟಿನವರು ನೇಮಿಸಿದ ಯಾ ವಿಧಿಸಿ ಹೇಳಿದ ಆಸ್ತಿ ರಕ್ಷಕನ ಅಧಿಕಾರಗಳ ಪರಿಮಿತ.

29. ಬಿಟ್ಟು ಪೆವ್ಯುಟಿ ಕಮಿಷನರು ಅಲ್ಲದೆ ಅಥವಾ ವಿಲ್ಲಿನಿಂದ ಯಾ ಇತರ ದಸ್ತಾವೇಜಿನಿಂದ ನೇಮಿಸಲ್ಪಟ್ಟ ಸಂರಕ್ಷಕನಲ್ಲದೆ, ಬಿಟ್ಟು ರಕ್ಷಿತನ ಆಸ್ತಿ ರಕ್ಷಕನಾಗಿ ಬೇರೆ ಮನುಷ್ಯನು ಕೋರ್ಟಿನವರಿಂದ ನೇಮಿಸಲ್ಪಟ್ಟಲ್ಲಿ ಯಾ ವಿಧಿಸಿ ಹೇಳಲ್ಪಟ್ಟಲ್ಲಿ, ಆತನು ಸದರಿ ಕೋರ್ಟಿನವರ ಪೂರ್ವಭಾವಿಯಾದ ಅಪ್ಪಣೆ ಇಲ್ಲದೆ—

(a) ತನ್ನ ಸಂರಕ್ಷಣೆಯಲ್ಲಿರುವವನ ಸ್ಥಿರ ಆಸ್ತಿಯ ಯಾವಭಾಗವನ್ನಾದರೂ ಅಡವು ಬರಕೊಡಲೂ, ಅದರ ಮೇಲೆ ಸಾಲ ಹೊರಿಸಲೂ, ಕ್ರಯ, ದಾನ, ಬದಲಾಯಿಸುವಿಕೆಯಿಂದ ಯಾ ಬೇರೆ ವಿಧವಾಗಿ ಪರಭಾರೆ ಮಾಡಲೂ ಕೂಡದು; ಅಥವಾ

(b) ಸದರಿ ಆಸ್ತಿಯ ಯಾವಭಾಗವನ್ನಾದರೂ ಐದು ವರುಷಕ್ಕಿಂತ ಹೆಚ್ಚಿನ ಮಾಯಿದೆಗೆ ಅಥವಾ ರಕ್ಷಿತನು ಅಪ್ರಾಯಸ್ಥ ವಯಸ್ಸು ದಾಟುವ ತಾರೀಕಿಗೆ ಮೀರಿ ಒಂದು ವರುಷಕ್ಕಿಂತ ಹೆಚ್ಚಿನ ಸಮಯಕ್ಕೆ ವ್ಯಾಪಿಸುವ ಯಾವದೊಂದು ಮಾಯಿದೆಗೂ, ಗೇಣಿಗೆ ಕೊಡಲೂಕೂಡದು.

28ನೇ ಯಾ 29ನೇ ಪ್ರಕರಣಕ್ಕೆ ವಿರೋಧವಾಗಿ ಮಾಡಿದ ಪರಭಾರೆಗಳು ರದ್ದು ಆಗೋಣ.

30. ಹಿಂದಿನ ಕಡೇ ಎರಡು ಪ್ರಕರಣಗಳ ಪೈಕಿ ಯಾವದೊಂದಕ್ಕೂ ವಿರೋಧವಾಗಿ ಬಿಟ್ಟು ಸಂರಕ್ಷಕನು ಮಾಡಿದ ಸ್ಥಿರಾಸ್ತಿಯ ವಿಲೆವಾರಿಯು ಅದರಿಂದ ಬಾಧಕ ಪಡುವ ಇತರ ಯಾವನೊಬ್ಬ ಮನುಷ್ಯನ ಅಪೇಕ್ಷೆಮೇರೆಗೆ ರದ್ದಾಗಬಹುದು.

29ನೇ ಪ್ರಕರಣ ಮೇರೆಗೆ ಪರಭಾರೆಗಳನ್ನು ಆಜ್ಞಾಪಿಸುವದನ್ನು ಕುರಿತು ನಡವಳಿಕೆ.

31. (1) ಅವಶ್ಯವಾದ ಯಾ ರಕ್ಷಿತನಿಗೆ ಪ್ರತ್ಯಕ್ಷ ಪ್ರಯೋಜನದ ಸಂಗತಿಯಲ್ಲಿ ಅಲ್ಲದೆ, 29ನೇ ಪ್ರಕರಣದಲ್ಲಿ ನಮೂದಿಸಿದ ಯಾವ ಕೃತ್ಯಗಳನ್ನು ಆದರೂ ನಡಿಸುವದಕ್ಕೆ ಕೋರ್ಟಿನವರು ಸಂರಕ್ಷಕನಿಗೆ ಅಪ್ಪಣೆ ಕೊಡಕೂಡದು.

(2) ಅಪ್ಪಣೆ ಕೊಡಲ್ಪಟ್ಟು ಇರುವ ಹುಕುಮಿನಲ್ಲಿ, ಅಂತಾ ಅವಶ್ಯಕತೆಯಾಗಲಿ ಅಥವಾ ಸಂಗತ್ಯಾನುಸಾರವಾಗಿ ಪ್ರಯೋಜನವಾಗಲಿ ಇಂತಾದ್ದೆಂಬದು ನಮೂದಿಸಿರತಕ್ಕದ್ದು, ವಿಲೆ ನಡಿಸಲು ಅಪ್ಪಣೆ ಕೊಡಲ್ಪಟ್ಟ ಆಸ್ತಿಯ ತಪಸೀಲು ಮತ್ತು, ಕೋರ್ಟಿನವರಿಗೆ ಸದರಿ ಅಪ್ಪಣೆಗೆ ಕೂಡಿಸಿ ನಮೂದಿಸಲು ಯುಕ್ತವೆಂತ ತೋರುವ ಶರ್ತಗಳು ಯಾವದಾದರೂ ಇದ್ದರೆ ಅವುಗಳು, ಕೂಡಾ ನಮೂದಿಸಿರಬೇಕು; ಮತ್ತು ಸದರಿ ಹುಕುಂ ಕೋರ್ಟಿನ ಜಡ್ಜಿಯ ಸ್ವಂತ ಕೈ ಬರಹದಿಂದ ಬರೆಯಲ್ಪಟ್ಟು ತಾರೀಖು ಮತ್ತು ದಸ್ತಕತ್ ಸಹಾ ಉಳ್ಳದ್ದಾಗಿ ಇರತಕ್ಕದ್ದು, ಅಥವಾ ಯಾವದಾದರೂ ಸಬಬಿನಿಂದ ಆತನು (ಜಡ್ಜಿಯು) ಸದರಿ ಹುಕುಮನ್ನು ಸ್ವತಃ ಬರಿಯಲಾರದಿದ್ದಲ್ಲಿ; ಅದು ಜಡ್ಜಿಯು ಹೇಳಿದ ರೀತಿ ಬರಿಯಲ್ಪಡಬೇಕಲ್ಲದೆ ಅದಕ್ಕೆ ಸದರಿ ಜಡ್ಜಿಯೇ ತಾರೀಖು ನಮೂದಿಸಿ ದಸ್ತಕತ್ತು ಹಾಕಿರತಕ್ಕದ್ದು.

(3) ಸದರಿ ಅಪ್ಪಣೆಗೆ ಬೇರೆ ಶರ್ತಗಳ ಸಂಗಡ ಈ ಕೆಳಗಿನವುಗಳನ್ನು ಕೋರ್ಟಿನವರು ತಮ್ಮ ಇಷ್ಟಾನುಸಾರ ಸೇರಿಸಬಹುದು, ಅವು ಯಾವವೆಂದರೆ:—

(a) ಕೋರ್ಟಿನವರ ಅಪ್ಪಣೆ ಪಡಕೊಂಡ ವಿನಹಾ ಮಾರಾಟವು ಸಂಪೂರ್ಣವಾಗಕೂಡದು;

(b) ಈ ರೆಗ್ಯುಲೇಷನಿಗನುಗುಣವಾಗಿ ಚೀಫ್ ಕೋರ್ಟಿನವರು ಮಾಡಿದ ನೇಮಗಳಿಗೆ ಒಳಪಟ್ಟು, ಕೋರ್ಟಿನವರು ಅಪ್ಪಣೆ ಕೊಡುವವಮೇರೆಗೆ ಯೋಚಿಸಲ್ಪಟ್ಟ ವಿಕ್ರಯವನ್ನು ಕುರಿತು ಇಸ್ತಿಹಾರನ್ನು ಪ್ರಕಟಿಸಿದಬಳಿಕ, ಕೋರ್ಟಿನವರು ನಮೂದಿಸುವ ಕಾಲದಲ್ಲಿ ಮತ್ತು ಸ್ಥಳಗಳಲ್ಲಿ ಸದರೀ ಕೋರ್ಟಿನವರ, ಯಾ ಕೋರ್ಟಿನವರಿಂದ ಆ ಬಗ್ಗೆ ಗಿಯೇ ನೇಮಿಸಲ್ಪಟ್ಟ ಮನುಷ್ಯನ ಸಮಕ್ಷಮದಲ್ಲಿ ಬಹಿರಂಗವಾಗಿ ವಿಕ್ರಯವಾಗುವಲ್ಲಿ ಎಲ್ಲವರಕ್ಕಿಂತಲೂ ಹೆಚ್ಚು ಬೆಲೆಗೆ ಕೇಳುವವನಿಗೆ ಕೊಡಲ್ಪಡತಕ್ಕದ್ದು;

(c) ಗೇಣಿ ಮುಂಗಡವಾಗಿ ಸಿಕ್ಕುತ್ತದೆಂಬ ಸಂಗತಿ ಆಲೋಚಿಸಿ ಗೇಣಿಗೆ ಕಟ್ಟಕೊಡಕೂಡದು, ಅಥವಾ ಕೋರ್ಟಿನವರು ಅಪ್ಪಣೆ ಕೊಡುವಷ್ಟು ವರುಷಗಳ ಮಾಯಿದೆ ಬಗ್ಗೆ ಮತ್ತು ಅಂತಾ ಗೇಣಿಗೆ ಮತ್ತು ಶರ್ತಗಳಿಗೆ ಒಳಪಟ್ಟು ಗೇಣಿಗೆ ಬಿಟ್ಟು ಕೊಡತಕ್ಕದ್ದು;

(d) ಅಪ್ಪಣೆ ಮೇರೆಗೆ ನಡಿಸಿದ ಕೃತ್ಯದಿಂದ ಸಿಕ್ಕಿದ ಹುಟ್ಟುವಳಿಯನ್ನು ಪೂರಾ ಆಗಲಿ ಯಾ ಅದರ ಯಾವ ಅಂಶವನ್ನು ಆಗಲಿ ಕೋರ್ಟಿನಿಂದ ಖರ್ಚು ಮಾಡಲ್ಪಡತಕ್ಕ ಬಗ್ಗೆ ಯಾ ನಿರ್ದೇಶಿಸಲ್ಪಟ್ಟ ಸೆಕ್ಯೂರಿಟಿಗಳೊಳು ಪ್ರಾಮಿಸರಿ ಪತ್ರಗಳ ರೂಪವಾಗಿ ಇಡತಕ್ಕ ಬಗ್ಗೆ ಯಾ ಕೋರ್ಟಿನವರು ಅಪ್ಪಣೆ ಕೊಡುವಮೇರೆಗೆ ಇತರ ರೀತಿಯಲ್ಲಿ ವಿಲೆವಾರಿ ಮಾಡತಕ್ಕ ಬಗ್ಗೆ ಸಂರಕ್ಷಕನು ಅದನ್ನು ಕೋರ್ಟಿನಲ್ಲಿ ವಸೂಲ್ ಕೊಡತಕ್ಕದ್ದು.

(4) 29ನೇ ಪ್ರಕರಣದಲ್ಲಿ ಹೇಳಿದ ಒಂದು ಕೃತ್ಯವನ್ನು ಮಾಡಲು ಬಿಟ್ಟು ಸಂರಕ್ಷಕನಿಗೆ ಅಪ್ಪಣೆ ಕೊಡುವದಕ್ಕೆ ಮೊದಲು, ಹಾಗೆ ಅಪ್ಪಣೆ ಅಪೇಕ್ಷಿಸಿ ಬರಕೊಂಡ ಅರ್ಜಿ ಕುರಿತು ಸದರೀ ಸಂರಕ್ಷಣೆಯಲ್ಲಿರುವವನ ಯಾವನಾದರೂ ಸಂಬಂಧಿಗೆ ಯಾ ಸ್ನೇಹಿತಗೆ ನೋಟಿಸ ತಲ್ಪತಕ್ಕದ್ದೆಂತ ಕೋರ್ಟಿನವರು ಅಭಿಪ್ರಾಯ ಪಡುವದಾದರೆ, ಅಂಥವನಿಗೆ ಕೋರ್ಟಿನವರು ನೋಟಿಸ ಕೊಡಬಹುದು, ಮತ್ತು ಸದರೀ ಅರ್ಜಿಯನ್ನು ಎದುರಿಸಲು ಹಾಜರಾಗಿರುವವನ ಹೇಳಿಕೆಯನ್ನು ಕೇಳಿ ಅವನ ವಾಗ್ಮೂಲ ಬರಕೊಳ್ಳತಕ್ಕದ್ದು.

ಕೋರ್ಟನವರು ನೇಮಿಸಿದ ಯಾ ವಿಧಿಸಿ ಹೇಳಿದ ಆಸ್ತಿರಕ್ಷಕನ ಅಧಿಕಾರಗಳ ಏರ್ಪಾಡು.

32\. ಒಬ್ಬ ಸಂರಕ್ಷಣೆಯೊಳಗಿರುವವನ ಆಸ್ತಿರಕ್ಷಕನು ಕೋರ್ಟನವರಿಂದ ನೇಮಿಸಲ್ಪಟ್ಟು ಇದ್ದರೆ ಯಾ ವಿಧಿಸಿ ಹೇಳಲ್ಪಟ್ಟಿದ್ದರೆ ಮತ್ತು ಅಂಥಾ ಸಂರಕ್ಷಕನು ಡೆಪ್ಯುಟಿ ಕಮಿಶನರಲ್ಲವಾದರೆ, ಸದರಿ ಸಂರಕ್ಷಣೆಯೊಳಗಿರುವವನ ಪ್ರಯೋಜನಾರ್ಥವಾಗಿಯೂ ಆತನು ಒಳಪಟ್ಟಿರುವ ಕಾನೂನಿಗೆ ಅಸಂಗತವಾಗದೆಯೂ ಇರುವದಾಗಿ ಕೋರ್ಟನವರು ಆಲೋಚಿಸಬಹುದಾದ ರೀತಿಯಲ್ಲಿ ಮತ್ತು ಅಷ್ಟರಮಟ್ಟಿಗೆ ಆತನ ಆಸ್ತಿ ಕುರಿತು ಸದರಿ ಆಸ್ತಿ ರಕ್ಷಕನ ಅಧಿಕಾರಗಳನ್ನು ಆಗಿಂದಾಗ್ಯೆ ಹುಕುಂ ದ್ವಾರಾ ವಿವರಿಸಲೂ, ಮಿತಪಡಿಸಲೂ ಯಾ ವಿಸ್ತರಿಸಲೂ ಬಹುದು.

ಹಾಗೆ ನೇಮಿಸಲ್ಪಟ್ಟ ಯಾ ವಿಧಿಸಿ ಹೇಳಲ್ಪಟ್ಟ ಸಂರಕ್ಷಕನು ರಕ್ಷಿತನ ಆಸ್ತಿಯ ಆಡಳಿತವನ್ನು ಕುರಿತು ಕೋರ್ಟನವರ ಅಭಿಪ್ರಾಯವನ್ನು ಕೇಳುವ ಹಕ್ಕು.

33\. (1) ಕೋರ್ಟನವರಿಂದ ನೇಮಿಸಲ್ಪಟ್ಟ ಯಾ ವಿಧಿಸಿ ಹೇಳಲ್ಪಟ್ಟ ಒಬ್ಬ ಸಂರಕ್ಷಕನು, ತನ್ನ ಸಂರಕ್ಷಣೆಯೊಳಗಿರುವವನ ಆಸ್ತಿಯ ಆಡಳಿತ ಸಂಬಂಧವಾಗಿ ಯಾ ಪರಿಪಾಲನಾರ್ಥವಾಗಿ ಯಾವದಾದರೂ ಪ್ರಸ್ತುತದ ಸಂಗತಿಯಲ್ಲಿ ತನ್ನನ್ನು ನೇಮಿಸಿದ ಯಾ ವಿಧಿಸಿ ಹೇಳಿದ ಕೋರ್ಟನವರ ಅಭಿಪ್ರಾಯ ಆಲೋಚನೆ ಯಾ ಅಪ್ಪಣೆ ಇವನ್ನು ಪಡಕೊಳ್ಳುವ ಬಗ್ಗೆ ಅರ್ಜಿ ಮೂಲಕ ಅಪೇಕ್ಷಿಸಬಹುದು.

(2) ಸದರಿ ಸಂಗತಿಯು (ಸಮ್ಮರಿಯಾಗಿ) ಅವಸರವಾಗಿ ಇತ್ಯರ್ಥಪಡಿಸಲಿಕ್ಕೆ ಯೋಗ್ಯವಾದದ್ದೆಂತ ಕೋರ್ಟನವರು ಅಭಿಪ್ರಾಯಪಟ್ಟರೆ, ಸದರೀ ಅರ್ಜಿಗೆ ಸಂಬಂಧ ಇರುವಂತವರ ಪೈಕಿ ಕೋರ್ಟನವರು ಯುಕ್ತವೆಂದು ತಿಳಕೊಳ್ಳುವಂಥಾ ಜನರಿಗೆ ಸದರೀ ಅರ್ಜಿಯ ನಕಲನ್ನು ಜಾರಿ ಮಾಡಿಸತಕ್ಕದ್ದು ಮತ್ತು ಅವರು ತನಿಖೆ ಸಮಯದಲ್ಲಿ ಹಾಜರು ಇರಬಹುದು.

(3) ಸಂರಕ್ಷಕನು ಸಂಗತಿಗಳನ್ನು (ಪ್ರಮಾಣಿಕ) ಒಳ್ಳೆ ಇರಾದೆಯಿಂದ ಅರ್ಜಿಯಲ್ಲಿ ಹೇಳಿದ್ದು, ಕೋರ್ಟನವರು ಕೊಟ್ಟ ಅಭಿಪ್ರಾಯ, ಆಲೋಚನೆ ಯಾ ಅಪ್ಪಣೆ ಮೇರೆಗೆ ನಡಕೊಂಡಲ್ಲಿ, ಆತನ ಸ್ವಂತ ಜವಾಬ್ದಾರಿ ಇರುವಷ್ಟರಮಟ್ಟಿಗೆ, ಅರ್ಜಿಯ ವಿಷಯವನ್ನು ಕುರಿತು ಆತನು ಸಂರಕ್ಷಕನಾಗಿ ನಡಿಸತಕ್ಕ ಕೆಲಸಗಳನ್ನು ಸರಿಯಾಗಿ ನಡಿಸಿರುವದಾಗಿ ಎಣಿಸತಕ್ಕದ್ದು.

ಕೋರ್ಟನವರಿಂದ ನೇಮಿಸಲ್ಪಟ್ಟ ಯಾ ವಿಧಿಸಿಹೇಳಲ್ಪಟ್ಟ ಆಸ್ತಿರಕ್ಷಕನ ಬದ್ಧತೆಗಳು.

34\. ಒಬ್ಬ ಸಂರಕ್ಷಣೆಯೊಳಗಿರುವವನ ಆಸ್ತಿ ರಕ್ಷಕನು ಕೋರ್ಟನವರಿಂದ ನೇಮಿಸಲ್ಪಟ್ಟಲ್ಲಿ ಯಾ ವಿಧಿಸಿಹೇಳಲ್ಪಟ್ಟಲ್ಲಿ, ಮತ್ತು ಅಂತಾ ರಕ್ಷಕನು ಡೆಪ್ಯುಟಿ ಕಮಿಶನರಲ್ಲವಾದರೆ ಆತನು-

(a) ಕೋರ್ಟನವರಿಂದ ಅಪೇಕ್ಷಿಸಲ್ಪಟ್ಟರೆ, ನಿರ್ದೇಶಿಸೋಣಾದ ನಮೂನೆಗೆ ಕೂಡಿದ ಮಟ್ಟಿಗೆ ಅನುಸಾರವಾಗಿ, ಆತನು ಸರ್ವತ್ರ ಜವಾಬ್ದಾರನು; ಸದರಿ ರಕ್ಷಣೆಯೊಳಗಿರುವವನ ಆಸ್ತಿ ಕುರಿತು ಆತನು ಪಡಕೊಳ್ಳಬಹುದಾದ್ದಂತಾದ್ದಕ್ಕೆ ಸರಿಯಾಗಿ ಲೆಕ್ಕ ಕೊಡುವದಾಗಿ ಬದ್ಧಪತ್ರ ಕೊಂಡು, ತಾತ್ಕಾಲಿಕ ಜಡ್ಜಿಯಾಗಿರುವಂತವನ ಉಪಯೋಗಾರ್ಥವಾಗಿ, ಕೋರ್ಟನ ಜಡ್ಜಿಗೆ ಒಂದು ಪತ್ರ ಬರಕೊಡತಕ್ಕದ್ದು;

(b) ಕೋರ್ಟನವರಿಂದ ಅಪೇಕ್ಷಿಸೋಣಾದರೆ, ತಾನು ಕೋರ್ಟನವರಿಂದ ನೇಮಿಸಲ್ಪಟ್ಟ ಯಾ ವಿಧಿಸಿ ಹೇಳಲ್ಪಟ್ಟ ತಾರೀಖಿನಿಂದ ಆರು ತಿಂಗಳೊಳಗೆ, ಯಾ ಕೋರ್ಟನವರು ಅಪ್ಪಣೆ ಕೊಡುವ ಮೇರೆಗೆ ಅಂತಾ ಬೇರೆ ಮುದತಿಯೊಳಗೆ, ಪಟ್ಟಿಯನ್ನು ಒಪ್ಪಿಸಿಕೊಡುವ ತಾರೀಖಿನವರೆಗೆ ಸದರಿ ರಕ್ಷಿತನಿಗೆ ಸೇರಿದ ಸ್ಥಿರ ಆಸ್ತಿಯನ್ನು ಆತನ ಬಗ್ಗೆ ತನ್ನ ವಶ ಬಂದಿರುವ ಹಣವನ್ನು ಮತ್ತು ಬೇರೆ ಚರ ಆಸ್ತಿಯನ್ನು ಮತ್ತು ಆ ತಾರೀಖಿಗೆ ಸದರಿ ರಕ್ಷಿತನಿಗೆ ಸಲ್ಲ ಬರತಕ್ಕ ಯಾ ಆತನಿಂದ ಹೊರಗೆ ಸಲ್ಲತಕ್ಕ ಸಾಲಗಳನ್ನು ಸಹ ನಮೂದಿಸಿ ಒಂದು ತಖ್ತೆಯನ್ನು ಕೋರ್ಟಿಗೆ ಒಪ್ಪಿಸತಕ್ಕದ್ದು;

(c) ಕೋರ್ಟನವರಿಂದ ಅಪೇಕ್ಷಿಸೋಣಾದರೆ, ತನ್ನ ಲೆಕ್ಕ ಪತ್ರಗಳನ್ನು ಕೋರ್ಟನವರು ಆಗಿಂದಾಗ್ಯೆ ಅಪ್ಪಣೆ ಕೊಡುವ ನಮೂನೆಯಲ್ಲಿ ಮತ್ತು ಕಾಲಗಳಲ್ಲಿ ಕೋರ್ಟನಲ್ಲಿ ತೋರಿಸತಕ್ಕದ್ದು;

(d) ಕೋರ್ಟನವರಿಂದ ಅಪೇಕ್ಷಿಸೋಣಾದರೆ, ಆ ಲೆಕ್ಕಗಳ ಮೇರೆಗೆ ತನ್ನಿಂದ ಸಲ್ಲತಕ್ಕ ಶಿಲ್ಕು ಬಾಕಿಯನ್ನು ಯಾ ಆ ಪೈಕಿ ಕೋರ್ಟನವರು ಅಪ್ಪಣೆ ಕೊಡುವಷ್ಟನ್ನು, ಸದರಿ ಕೋರ್ಟನವರು ಆಜ್ಞಾಪಿಸುವ ಸಮಯದಲ್ಲಿ ಕೋರ್ಟನಲ್ಲಿ ಪಾವತಿ ಮಾಡತಕ್ಕದ್ದು; ಮತ್ತು

(e) ಸದರಿ ಸಂರಕ್ಷಣೆಯೊಳಗಿರುವವನ ಆಸ್ತಿಯ ಹುಟ್ಟುವಳಿಯಿಂದ ಕೋರ್ಟನವರು ಆಗಿಂದಾಗ್ಯೆ ಅಪ್ಪಣೆ ಕೊಡುವಷ್ಟು ಅಂಶವನ್ನು, ಸದರಿ ರಕ್ಷಿತನ ಮತ್ತು ಅವನ ಆಶ್ರಯದಲ್ಲಿರುವ ಮನುಷ್ಯರ ಸಂರಕ್ಷಣೆ, ವಿದ್ಯಾಭ್ಯಾಸ ಮತ್ತು ಅಭಿವೃದ್ಧಿ ಬಗ್ಗೆ ಮತ್ತು ಆತನಿಗೆ ಯಾ ಸದರಿ ಮನುಷ್ಯರ ಪೈಕಿ ಯಾರಿಗಾದರೂ ಸಂಬಂಧಿಸಬಹುದಾದ ಆಚರಣೆಗಳನ್ನು ನಡಿಸುವ ಬಗ್ಗೆ ವಿನಿಯೋಗಿಸತಕ್ಕದ್ದು; ಮತ್ತು ಕೋರ್ಟನವರು ಅಪ್ಪಣೆ ಕೊಟ್ಟ ಪಕ್ಷದಲ್ಲಿ, ಸದರಿ ಆಸ್ತಿಯನ್ನು ಪೂರಾ ಆಗಲಿ ಯಾ ಅದರ ಅಂಶವನ್ನು ಆಗಲಿ ಉಪಯೋಗಿಸತಕ್ಕದ್ದು.

ಕಾರ್ಯನಿರ್ವಾಹದ ಕುರಿತು ಪತ್ರ ಬರಕೊಂಡಲ್ಲಿ ರಕ್ಷಕನಮೇಲೆ ವ್ಯಾಜ್ಯ.

35\. ಸಂರಕ್ಷಣೆಯೊಳಗಿರುವವನ ಆಸ್ತಿ ಸಮ್ಬಂಧದಲ್ಲಿ ತಾನು ಪಡಕೊಳ್ಳಬಹುದಾದ್ದನ್ನು ಕುರಿತು ಕ್ರಮವಾಗಿ ಲೆಕ್ಕ ಒಪ್ಪಿಸುವದಾಗಿ, ಕೋರ್ಟನವರಿಂದ ನೇಮಿಸಲ್ಪಟ್ಟ ಯಾ ವಿಧಿಸಿ ಹೇಳಲ್ಪಟ್ಟ ರಕ್ಷಕನು ಪತ್ರ (ಕರಾರು) ಬರಕೊಟ್ಟಲ್ಲಿ, ಸದರಿ ಕರಾರಿನ ಶರತ್ತುಗಳಿಗೆ ಆತನು ತಪ್ಪಿ ನಡಕೊಂಡದ್ದಾಗಿ ಕೋರ್ಟನವರು ಮನವಿ ಮೂಲಕ ಕೊಡಲ್ಪಟ್ಟ ಅರ್ಜಿಯ ಮೇಲೆ ಸಮಾಧಾನಪಟ್ಟಲ್ಲಿ, ಜಾಮೀನು ಕುರಿತು ಅಂತಾ ಕೋರ್ಟನವರು ಯುಕ್ತವೆಂತ ತಿಳಕೊಳ್ಳುವ ಶರ್ತುಗಳಮೇಲೆ, ಯಾ ಪಡಕೊಂಡ ಹಣವನ್ನು ಕೋರ್ಟಿಗೆ ಪಾವತಿ ಮಾಡುವಂತೆ ನಿರ್ಬಂಧಿಸಿ, ಅಥವಾ ಇತರ ವಿಧವಾಗಿ, ಸದರೀ ಪತ್ರದ ಹಕ್ಕನ್ನು ಬೇರೊಬ್ಬ

ಯೋಗ್ಯನಾದ ಮನುಷ್ಯನಿಗೆ ಕೋರ್ಟಿನವರು ಒಪ್ಪಿಸಿಕೊಡಬಹುದು ; ಮತ್ತು ಹಾಗೆ ಕೊಟ್ಟಲ್ಲಿ, ಸದರಿ ಮನುಷ್ಯನು ಆ ಪತ್ರವು ಸದರಿ ಕೋರ್ಟಿನ ಜಡ್ಜಿಯ ಹೆಸರಿನಲ್ಲಿ ಇಲ್ಲದೆ ತನ್ನ ಹೆಸರಲ್ಲೇ ಇದ್ದರೆ ಹ್ಯಾಗೋ ಅದೇ ರೀತಿಯಲ್ಲಿ ಸದರಿ ಪತ್ರದ ಮೇಲೆ ವ್ಯಾಜ್ಯವಾಡಲು ಹಕ್ಕುಳ್ಳವನಾಗಿರತಕ್ಕದ್ದು. ಮತ್ತು ಸದರಿ ಕರಾರು ತಪ್ಪಿ ನಡೆದ ಬಾಬಿನಲ್ಲಿ ಬರಬೇಕಾದ್ದನ್ನು ಸಂರಕ್ಷಣೆಯೊಳಗಿರುವವನ ಪಾರುಪತ್ಯಗಾರನಾಗಿ (ಟ್ರಸ್ಟಿ) ವಸೂಲುಮಾಡಿಕೊಳ್ಳಲಿಕ್ಕೂ ಹಕ್ಕುದಾರನಾಗಿರತಕ್ಕದ್ದು.

ಕಾರ್ಯನಿರ್ವಾಹದ ಕುರಿತು ಪತ್ರ ಇಲ್ಲದ ಸಂಗತಿಯಲ್ಲಿ ರಕ್ಷಕನಮೇಲೆ ವ್ಯಾಜ್ಯ.

36. (1) ಕೋರ್ಟಿನವರಿಂದ ನೇಮಿಸಲ್ಪಟ್ಟ ಯಾ ವಿಧಿಸಿ ಹೇಳಲ್ಪಟ್ಟ ಸಂರಕ್ಷಕನು ಮೇಲೆ ಹೇಳಿದ ಮೇರೆಗೆ ಒಂದು ಪತ್ರವನ್ನು ಬರಕೊಡದೆ ಇರುವ ಸಂಗತಿಯಲ್ಲಿ, ಯಾವನೊಬ್ಬ ಮನುಷ್ಯನಾದರೂ, ಸಮೀಪದ ಸ್ನೇಹಿತನೆಂಬ ಆಧಾರದಮೇಲೆ, ಸದರಿ ಸಂರಕ್ಷಣೆಯೊಳಗಿರುವವನು ಅಪ್ರಾಯಸ್ಥನಾಗಿರುವ ಯಾವ ಕಾಲದಲ್ಲಾದರೂ, ಮೇಲೆ ಹೇಳಿದ ಶರ್ತಗಳಂತೆ, ಸದರಿ ಸಂರಕ್ಷಕನಮೇಲೆ, ಯಾ ಆತನು ಮೃತಪಟ್ಟ ಸಂಗತಿಯಲ್ಲಿ ಆತನ ಪ್ರತಿನಿಧಿಯಮೇಲೆ, ಸದರಿ ಸಂರಕ್ಷಣೆಯೊಳಗಿರುವವನ ಆಸ್ತಿಯ ಬಾಬತ್ತು ಆತನು ಪಡಕೊಂಡಿರುವಂತಾದ್ದರ ಲೆಕ್ಕಾಚಾರದ ಬಗ್ಗೆ, ಕೋರ್ಟಿನವರ ಅಪ್ಪಣೆ ಪಡಕೊಂಡು ವ್ಯಾಜ್ಯ ದಾಖಲು ಮಾಡಬಹುದು ; ಮತ್ತು, ಆ ವ್ಯಾಜ್ಯಮೂಲಕ ಸದರಿ ಸಂರಕ್ಷಕನಿಂದ ಯಾ ಸಂಗತ್ಯಾನುಸಾರವಾಗಿ ಅವನ ಪ್ರತಿನಿಧಿಯಿಂದ ಪಾವತಿಯಾಗತಕ್ಕದ್ದೆಂದು ನಿರ್ಣಯಿಸಲ್ಪಟ್ಟ ಮೊಬಲಗನ್ನು, ಸಂರಕ್ಷಣೆಯಲ್ಲಿರುವವನ ಪಾರುಪತ್ಯಗಾರನಾಗಿ ವಸೂಲುಮಾಡಿಕೊಳ್ಳಬಹುದು.

(2) (1)ನೇ ಉಪಪ್ರಕರಣದ ನಿಯಮಗಳು, ಸಂರಕ್ಷಕನಮೇಲೆ ಮಾಡಿದ ವ್ಯಾಜ್ಯಕ್ಕೆ ಸಂಬಂಧಿಸುವಷ್ಟರಮಟ್ಟಿಗೆ, ಸಿವಿಲ್ ಪ್ರೊಸಿಡ್ಯೂರ್ ಕೋಡಿನ, ಈ ರೆಗ್ಯುಲೇಷನಿನಿಂದ ತಿದ್ದಲ್ಪಟ್ಟ 440ನೇ ಪ್ರಕರಣದ ನಿಯಮಗಳಿಗೆ ಒಳಪಡತಕ್ಕದ್ದು.

ಟ್ರಸ್ಟಿಯಾಗಿರುವ ರಕ್ಷಕನ ಸಾಧಾರಣ ಜವಾಬ್ದಾರಿ.

37. ಯಾವ ಪರಿಹಾರಕ್ಕೆ, ಅದು ಹಿಂದಿನ ಕಡೇ ಎರಡು ಪ್ರಕರಣಗಳ ಪೈಕಿ ಯಾವದೊಂದರಲ್ಲಿಯಾಗಲಿ ಸ್ಪಷ್ಟವಾಗಿ ನಿರ್ದೇಶಿಸಲ್ಪಡದೆ ಇದ್ದಾಗ್ಯೂ, ಇತರ ಯಾವ ಪ್ರಯೋಜನ ಪ್ರತಿಗ್ರಾಹೀತನಿಗೆ (Beneficiary) ಅಥವಾ ಅವನ ಪ್ರತಿನಿಧಿಗೆ ತನ್ನ ಟ್ರಸ್ಟಿಯ ಅಥವಾ ಅವನ ಪ್ರತಿನಿಧಿಯ ಮೇಲೆ ಹಕ್ಕು ಇರುತ್ತದೆಯೋ ಅಂತಾ ಪರಿಹಾರವನ್ನು, ಒಬ್ಬ ಅಪ್ರಾಯಸ್ಥನು ಅಥವಾ ಅವನ ಪ್ರತಿನಿಧಿಯು ತನ್ನ ಸಂರಕ್ಷಕನಿಂದ ಅಥವಾ ಅವನ ಪ್ರತಿನಿಧಿಯಿಂದ ಹೊಂದತಕ್ಕದ್ದಲ್ಲವೆಂದು ಸದರಿ ಪ್ರಕರಣಗಳ ಪೈಕಿ ಯಾವದೊಂದರ ನಿಯಮವನ್ನೂ, ಅನ್ವಯಿಸಕೂಡದು.

ಸಂರಕ್ಷಕನ ಉದ್ಯೋಗದ ಅಂತ್ಯ.

ಸಹರಕ್ಷಕರ ಪೈಕಿ ಉಳಿದವನ ಹಕ್ಕು.

38. ಇಬ್ಬರು ಯಾ ಹೆಚ್ಚುಮಂದಿ ಸಹರಕ್ಷಕರ ಪೈಕಿ ಒಬ್ಬನು ಮೃತನಾದರೆ, ಕೋರ್ಟಿನವರು ಪುನಹ ನೇಮಿಸುವತನಕ ಸದರಿ ಸಂರಕ್ಷಣೆಯ ಉದ್ಯೋಗವು ಉಳಿದವನ ಯಾ ಉಳಿದವರಲ್ಲಿಯೇ ಪ್ರವರ್ತಿಸುತ್ತದೆ.

ಸಂರಕ್ಷಕನನ್ನು ಉದ್ಯೋಗದಿಂದ ತಪ್ಪಿಸೋಣ.

39. ಸಂಬಂಧಪಟ್ಟ ಯಾವನೊಬ್ಬ ಮನುಷ್ಯನ ಅರ್ಜಿಯ ಮೇಲಾಗಲಿ, ತಮ್ಮ ಸ್ವಂತ ಅಭಿಪ್ರಾಯದಮೇಲೆ ಆಗಲಿ ಕೋರ್ಟಿನವರು, ಈ ಕೆಳಗಣ ಸಬಬುಗಳ ಪೈಕಿ ಯಾವದಕ್ಕಾದರೂ ನಿಮಿತ್ತನಾದರೂ, ಕೋರ್ಟಿನವರಿಂದ ನೇಮಿಸಲ್ಪಟ್ಟ ಯಾ ವಿಧಿಸಿ ಹೇಳಲ್ಪಟ್ಟ ಅಥವಾ ವಿಲ್ಲಿನಿಂದ ಯಾ ಬೇರೆ ದಸ್ತಾವೇಜಿನಿಂದ ನೇಮಿಸಲ್ಪಟ್ಟ ಒಬ್ಬ ಸಂರಕ್ಷಕನನ್ನು ಕೆಲಸದಿಂದ ತಪ್ಪಿಸಬಹುದು ; ಅವು ಯಾವವೆಂದರೆ :—

(a) ತನಗೆ ಭರವಸದಮೇಲೆ ಒಪ್ಪಿಸಿದ ಸ್ಥಿತಿಯನ್ನು ದುರುಪಯೋಗ ಮಾಡಿದರೆ ;

(b) ತನ್ನ ಭರವಸದ ಕೆಲಸಗಳನ್ನು ಯಾವಾಗಲು ನಡಿಸದೆ ಇದ್ದರೆ ;

(c) ತನ್ನ ಭರವಸದ ಕೆಲಸಗಳನ್ನು ನಡಿಸಲು ಅಯೋಗ್ಯನಾದರೆ ;

(d) ತನ್ನ ರಕ್ಷಣೆಯಲ್ಲಿರುವವನನ್ನು ದುರ್ಮಾದರಣೆ ಮಾಡಿದರೆ ಅಥವಾ ಆತನನ್ನು ಸರಿಯಾಗಿ ಪರಾಮರಿಸುವದರಲ್ಲಿ ಉಪೇಕ್ಷಿಸಿದರೆ ;

(e) ಈ ರೆಗ್ಯುಲೇಷನಿನ ಯಾವ ನಿಯಮವನ್ನು ಅಥವಾ ಕೋರ್ಟಿನವರ ಯಾವ ಹುಕುಮನ್ನು ಹಟದಿಂದ ಅಲಕ್ಷ್ಯ ಮಾಡಿದರೆ ;

(f) ತನ್ನ ರಕ್ಷಿತನ ಸಂರಕ್ಷಕನಾಗುವದಕ್ಕೆ ಅಯೋಗ್ಯನಾಗಿ ಮಾಡುವ ಕೆಟ್ಟ ನಡತೆಯುಳ್ಳವನೆಂತ ಕೋರ್ಟಿನವರು ಅಭಿಪ್ರಾಯ ಪಡುವಂತೆ ಒಂದು ತಪ್ಪು ಸಾಬೀತು ಪಟ್ಟರೆ ;

(g) ತನ್ನ ಕೆಲಸಗಳನ್ನು ಪ್ರಮಾಣಿಕತೆಯಿಂದ ಮಾಡುವದಕ್ಕೆ ಬಾಧಕ ಉಂಟುಮಾಡುವಂತಾ ಸ್ವಪ್ರಯೋಜನ ಆತಗೆ ಇದ್ದರೆ ;

(h) ಕೋರ್ಟಿನ ಅಧಿಕಾರದ ಸ್ಥಳೀಕ ಎಲ್ಲೆಗಳೊಳಗೆ ವಾಸಮಾಡುವದನ್ನು ಬಿಟ್ಟರೆ ;

(i) ಆಸ್ತಿ ರಕ್ಷಕನಾಗಿರುವವನ ಸಂಗತಿಯಲ್ಲಿ, ಆತನು ದಿವಾಳಿ ತೆಗೆದರೆ, ಯಾ ನಾದಾರಾದರೆ ;

(j) ಅಪ್ರಾಯಸ್ಥನು ಒಳಪಡುವ ಕಾನೂನು ಮೇರೆಗೆ ಸಂರಕ್ಷಕನ ರಕ್ಷಣೆಯು ನಿಂತು ಹೋಗುವ ಕಾರಣ, ಯಾ ನಿಂತು ಹೋಗಲಿಕ್ಕೆ ಗುರಿಯಾಗುವ ಕಾರಣದಿಂದ :

ಪರಂತು ವಿಲ್ಲಿನಿಂದ ಯಾ ಬೇರೆ ದಸ್ತಾವೇಜಿನಿಂದ ನೇಮಿಸಲ್ಪಟ್ಟ ಒಬ್ಬ ಸಂರಕ್ಷಕನನ್ನು, ಅವನು ಈ ರೆಗ್ಯುಲೇಷನಿನ ಮೇರೆಗೆ ವಿಧಿಸಿ ಹೇಳಲ್ಪಟ್ಟಿದ್ದಾಗ್ಯೂ ಇಲ್ಲದಿದ್ದಾಗ್ಯೂ, ಈ ಕೆಳಗಣ ಸಬಬುಗಳ ಮೇಲೆ ಕೆಲಸದಿಂದ ತಪ್ಪಿಸಕೂಡದು, ಅವು ಯಾವವೆಂದರೆ—

(a) ಸಂರಕ್ಷಕನನ್ನು ನೇಮಿಸಿದ ಮನುಷ್ಯನು ಮೃತಪಟ್ಟನಂತರ ಬಾಧಕ ಉಂಟುಮಾಡುವ ಸ್ವಪ್ರಯೋಜನವು ಹುಟ್ಟಿಗರೆ ವಿನಹಾ, ಅಥವಾ ಬಾಧಕ ಉಂಟುಮಾಡುವ ಸ್ವಪ್ರಯೋಜನವು ಇರುವದು ಗೊತ್ತಾಗದೆ ಸದರಿ

ಮನುಷ್ಯನು ನೇಮಕವನ್ನು ಮಾಡಿದನೆಂದು ಮತ್ತು ಸ್ಥಾಪಿಸಿದನೆಂದು ತೋರಿಸಲ್ಪಟ್ಟರೆ ವಿನಹಾ, (g) ಕಲಮಿನಲ್ಲಿ ನಮೂದಿಸಿದ ಸಬಬು; ಅಥವಾ

(b) ಸದರಿ ಸಂರಕ್ಷಕನು, ಸಂರಕ್ಷಕನ ಕೆಲಸಗಳನ್ನು ನಿರ್ವಹಿಸುವದು, ಕೋರ್ಟಿನವರ ಅಭಿಪ್ರಾಯದಲ್ಲಿ, ಅವನಿಗೆ ಅಸಾಧ್ಯವಾಗುವಂತೆ ಬೇರೆ ವಾಸಸ್ಥಾನವನ್ನು ಮಾಡಿಕೊಂಡ ವಿನಹಾ, (h) ಕಲಮಿನಲ್ಲಿ ನಮೂದಿಸಿದ ಸಬಬು.

ಸಂರಕ್ಷಕನ ವಿಮೋಚನೆ.

40. (1) ಕೋರ್ಟಿನವರಿಂದ ನೇಮಿಸಲ್ಪಟ್ಟ ಯಾ ವಿಧಿಸಿ ಹೇಳಲ್ಪಟ್ಟ ಒಬ್ಬ ಸಂರಕ್ಷಕನು ತನ್ನ ಕೆಲಸವನ್ನು ಬಿಡುವದಕ್ಕೆ ಅಪೇಕ್ಷಿಸುವದಾದರೆ, ತನ್ನನ್ನು ನಿವಾರಣ ಮಾಡಬೇಕಾಗಿ ಆತನು ಕೋರ್ಟಿಗೆ ಅರ್ಜಿ ಕೊಡಬಹುದು.

(2) ಸದರಿ ಅರ್ಜಿ ಕೊಡಲು ತಕ್ಕ ಕಾರಣ ಉಂಟೆಂತ ಕೋರ್ಟಿನವರು ತಿಳಕೊಂಡರೆ, ಅವನನ್ನು ನಿವಾರಣ ಮಾಡತಕ್ಕದ್ದು, ಮತ್ತು ಅರ್ಜಿ ಕೊಡುವ ಸಂರಕ್ಷಕನು ಡೆಪ್ಯುಟಿ ಕಮಿಶನರಾದರೆ, ಮತ್ತು ನಿವಾರಣ ಮಾಡಬೇಕಾಗಿ ಅವನು ಅರ್ಜಿ ಕೊಡುವದನ್ನು ಗವರ್ನಮೆಂಟಿನವರು ಒಪ್ಪಿದಲ್ಲಿ, ಕೋರ್ಟಿನವರು ಯಾವ ಸಂಗತಿಯಲ್ಲಾದರೂ ಅವನನ್ನು ನಿವಾರಣ ಮಾಡತಕ್ಕದ್ದು.

ಸಂರಕ್ಷಕನ ಉದ್ಯೋಗ ನಿಂತುಹೋಗುವದು.

41. (1) ಒಬ್ಬ ದೇಹರಕ್ಷಕನ ಅಧಿಕಾರಗಳು ಈ ಕೆಳಗಣ ಕಾರಣಗಳಿಂದ ನಿಂತುಹೋಗುತ್ತವೆ—

(a) ಆತನು ಮೃತಪಟ್ಟದ್ದರಿಂದ ಯಾ ಆತನನ್ನು ಕೆಲಸದಿಂದ ತಪ್ಪಿಸಿದ್ದರಿಂದ ಯಾ ನಿವಾರಣ ಮಾಡಿದ್ದರಿಂದ;

(b) ರಕ್ಷಣೆಯೊಳಗಿರುವವನು ಪ್ರಾಪ್ತವಯಸ್ಕನಾಗುವದರಿಂದ;

(c) ರಕ್ಷಣೆಯೊಳಗಿರುವ ಹುಡುಗಿಯು ಹೆಂಗಸಾಗಿದ್ದರೆ, ಆಕೆಯ ದೇಹರಕ್ಷಕನಾಗಲು ಅಯೋಗ್ಯನಲ್ಲದ ಗಂಡನಿಗೆ ಆಕೆಯು ಮದುವೆಯಾಗುವದರಿಂದ, ಅಥವಾ ರಕ್ಷಕನು ಕೋರ್ಟಿನವರಿಂದ ನೇಮಿಸಲ್ಪಟ್ಟದ್ದರೆ ಯಾ ವಿಧಿಸಿ ಹೇಳಲ್ಪಟ್ಟದ್ದರೆ, ಕೋರ್ಟಿನವರ ಅಭಿಪ್ರಾಯದಲ್ಲಿ, ಹಾಗೆ ಅಯೋಗ್ಯನಲ್ಲದ ಗಂಡನಿಗೆ ಆಕೆಯು ಮದುವೆಯಾಗುವದರಿಂದ ; ಅಥವಾ

(d) ರಕ್ಷಣೆಯೊಳಗಿರುವವನ ತಂದೆಯು ಆತನ ದೇಹರಕ್ಷಕನಾಗಲು ಅಯೋಗ್ಯನಾದ ಸಂಗತಿಯಲ್ಲಿ, ಸದರಿ ತಂದೆಯ ಅಯೋಗ್ಯತೆಯು ನಿಂತುಹೋಗುವದರಿಂದ, ಅಥವಾ ಸದರಿ ತಂದೆಯು ಹಾಗೆ ಅಯೋಗ್ಯನೆಂತ ಕೋರ್ಟಿನವರು ತಿಳಿದುಕೊಂಡಿದ್ದರೆ, ಕೋರ್ಟಿನವರ ಅಭಿಪ್ರಾಯದಲ್ಲಿ ಆತನ ಅಯೋಗ್ಯತೆಯು ನಿಂತುಹೋಗುವದರಿಂದ.

(2) ಆಸ್ತಿ ರಕ್ಷಕನ ಅಧಿಕಾರಗಳು ಈ ಕೆಳಗಣ ಕಾರಣಗಳಿಂದ ನಿಂತುಹೋಗುತ್ತವೆ—

(a) ಆತನು ಮೃತಪಟ್ಟದ್ದರಿಂದ, ಆತನನ್ನು ಕೆಲಸದಿಂದ ತಪ್ಪಿಸಿದರಿಂದ ಯಾ ನಿವಾರಣ ಮಾಡಿದ್ದರಿಂದ;

(b) ರಕ್ಷಣೆಯೊಳಗಿರುವವನು ಪ್ರಾಪ್ತವಯಸ್ಕನಾಗುವದರಿಂದ.

(3) ಯಾವ ಕಾರಣದಿಂದಲಾದರೂ ಒಬ್ಬ ಸಂರಕ್ಷಕನ ಅಧಿಕಾರಗಳು ನಿಂತುಹೋದರೆ, ರಕ್ಷಿತನಿಗೆ ಸೇರಿ ಇದ್ದು ಸಂರಕ್ಷಕನ ಸ್ವಾಧೀನದಲ್ಲಿ ಯಾ [illegible]ಯಲ್ಲಿ ಇರುವ ಆಸ್ತಿಯನ್ನು, ಅಥವಾ ರಕ್ಷಿತನ ಪ್ರಕೃತದ ಯಾ ಮುಂಚಿನ ಆಸ್ತಿಗೆ ಸಂಬಂಧಿಸುವಂಥಾದ್ದಾಗಿ ಸಂರಕ್ಷಕನ ಸ್ವಾಧೀನದಲ್ಲಿ ಯಾ [illegible] ಯಾವದಾದರೂ ಲೆಕ್ಕಗಳನ್ನು, ತಾವು ಅಪ್ಪಣೆ ಕೊಡುವ ಮೇರೆಗೆ ಒಪ್ಪಿಸುವಂತೆ, ಸದರಿ ಸಂರಕ್ಷಕನನ್ನು ಯಾ ಅವನು ಮೃತಪಟ್ಟರೆ ಅವನ ಪ್ರತಿನಿಧಿಯನ್ನು ಕೋರ್ಟಿನವರು ಆಜ್ಞಾಪಿಸಬಹುದು.

(4) ಕೋರ್ಟಿನವರು ಅಪ್ಪಣೆ ಕೊಟ್ಟಿರುವ ಮೇರೆಗೆ ಅವನು ಸದರಿ ಆಸ್ತಿಯನ್ನು ಯಾ ಲೆಕ್ಕಗಳನ್ನು ಒಪ್ಪಿಸಿದ್ದಲ್ಲಿ, ತದನಂತರ ಗೋಚರವಾಗಬಹುದಾದಂಥಾ ಮೋಸದ ಪಕ್ಷದಲ್ಲಿ ಹೊರತು, ಆತನ ಸಮಸ್ತ ಬದ್ಧತೆಗಳಿಂದ ಆತನನ್ನು ವಿಮೋಚನೆ ಪಡಿಸಿರುವದಾಗಿ ಕೋರ್ಟಿನವರು ವಿಧಿಸಿ ಹೇಳಬಹುದು.

ಮೃತಪಟ್ಟ ವಿಮೋಚಿಸಲ್ಪಟ್ಟ ಯಾ ಕೆಲಸದಿಂದ ತೆಗೆದುಹಾಕಲ್ಪಟ್ಟವನ ಬದಲಾಗಿ ಸಂರಕ್ಷಕನನ್ನು ನೇಮಿಸೋಣ.

42. ಕೋರ್ಟಿನವರಿಂದ ನೇಮಿಸಲ್ಪಟ್ಟ ಯಾ ವಿಧಿಸಿ ಹೇಳಲ್ಪಟ್ಟ ಒಬ್ಬ ಸಂರಕ್ಷಕನು ವಿಮೋಚಿಸಲ್ಪಟ್ಟರೆ, ಅಥವಾ ರಕ್ಷಿತನು ಒಳಪಡುವ ಕಾನೂನು ಮೇರೆಗೆ ಸಂರಕ್ಷಕನು ಕೆಲಸ ನೋಡಲು ಹಕ್ಕುದಾರನಾಗಿರುವದು ನಿಂತುಹೋದರೆ, ಅಥವಾ ಅಂತಾ ಯಾವನೊಬ್ಬ ಸಂರಕ್ಷಕನು ಅಥವಾ ವಿಲ್ಲಿನಿಂದ ಯಾ ಬೇರೆ ದಸ್ತಾವೇಜಿನಿಂದ ನೇಮಿಸಲ್ಪಟ್ಟ ಸಂರಕ್ಷಕನು ಕೆಲಸದಿಂದ ತಪ್ಪಿಸಲ್ಪಟ್ಟರೆ ಯಾ ಮೃತಪಟ್ಟರೆ, ಅಥವಾ ಕೋರ್ಟಿನವರು, ತಮ್ಮ ಸ್ವಂತ ಅಭಿಪ್ರಾಯದ ಮೇರೆಗೆ, ಯಾ IIನೆ ಅಧ್ಯಾಯದಂತೆ ಅರ್ಜಿ ಮಾಡಲ್ಪಟ್ಟಲ್ಲಿ, ರಕ್ಷಿತನು ಇನ್ನೂ ಅಪ್ರಾಪ್ತವಯಸ್ಕನಾಗಿದ್ದರೆ, ಇನ್ನೊಬ್ಬನನ್ನು ಆತನ ದೇಹದ, ಯಾ ಸಂಗತ್ಯಾನುಸಾರವಾಗಿ, ಆಸ್ತಿಯ ಯಾ [illegible] ಸಂರಕ್ಷಕನಾಗಿ ನೇಮಿಸಬಹುದು ಯಾ ವಿಧಿಸಿ ಹೇಳಬಹುದು.

4ನೆ ಅಧ್ಯಾಯ.

ಉಪನಿಯಮಗಳು.

ಸಂರಕ್ಷಕರ ನಡತೆಯನ್ನು ಯಾ ವ್ಯವಹಾರಗಳನ್ನು ಕ್ರಮಪಡಿಸುವ ಬಗ್ಗೆ ಹುಕುಂಗಳು ಮತ್ತು ಸದರಿ ಹುಕುಂಗಳ ಜಾರಿ.

43. (1) ಕೋರ್ಟಿನವರು, ಸಂಬಂಧಪಟ್ಟ ಯಾವನೊಬ್ಬನ ಅರ್ಜಿ ಮೇಲೆ ಆಗಲಿ ಯಾ ತಾವಾಗಿಯೇ ಆಗಲಿ, ಕೋರ್ಟಿನವರಿಂದ ನೇಮಕ ಮಾಡೋಣಾದ ಯಾ ವಿಧಿಸಿ ತಿಳಿಸೋಣಾದ ಯಾವನೊಬ್ಬ ಸಂರಕ್ಷಕನ ನಡತೆ ಯಾ ವ್ಯವಹಾರಗಳನ್ನು ಕ್ರಮಪಡಿಸುವಂತಾ ಹುಕುಂ ಕೊಡಬಹುದು.

(2) ಯಾವನೊಬ್ಬ ರಕ್ಷಿತನ ಕುರಿತು ಒಬ್ಬನಕ್ಕಿಂತ ಹೆಚ್ಚುಮಂದಿ ಸಂರಕ್ಷಕರು ಇದ್ದು ರಕ್ಷಿತನ ಕ್ಷೇಮವನ್ನು ಕುರಿತ ಪ್ರಶ್ನೆಯಲ್ಲಿ ಅವರು ಏಕಮತವಾಗದೆ ಹೋದರೆ, ಅವರ ಪೈಕಿ ಯಾರಾಗಲಿ ಕೋರ್ಟಿನವರ ಅನುಜ್ಞೆ ಬಗ್ಗೆ ಕೋರ್ಟಿಗೆ ಮನವಿ ಮಾಡಿಕೊಳ್ಳಬಹುದು, ಮತ್ತು ಕೋರ್ಟಿನವರು ವಿವಾದದಲ್ಲಿರುವ ಸಂಗತಿ ಕುರಿತು ತಮಗೆ ಯುಕ್ತವೆಂದು ತೋರುವ ಹುಕುಂ ಕೊಡಬಹುದು.

(3) (1)ನೇ ಯಾ (2)ನೇ ಉಪಪ್ರಕರಣಕ್ಕನುಗುಣವಾಗಿ ಮಾಡತಕ್ಕ ಒಂದು ಹುಕುಮಿನ ಉದ್ದೇಶವು ಕಾಲವಿಳಂಬದಿಂದ ನಿಷ್ಫಲವಾಗೀತಾದ ಪಕ್ಷದಲ್ಲಿ ವಿನಹ ಕೋರ್ಟಿನವರು, ಹುಕುಂ ಕೊಡುವದಕ್ಕೆ ಮುಂಚಿತವಾಗಿ, ಅದರ ಬಗ್ಗೆ ಆದ ಅರ್ಜಿ ವಿಷಯವಾಗಿ, ಯಾ ಸಂಗತ್ಯಾನುಸಾರವಾಗಿ ಹುಕುಂ ಕೊಡಬೇಕೆಂದು ಕೋರ್ಟಿನವರ ಅಭಿಪ್ರಾಯವಿರುವ ವಿಷಯವಾಗಿ ಒಂದು ನೋಟೀಸನ್ನು, (1)ನೇ ಉಪಪ್ರಕರಣಕ್ಕನುಗುಣವಾದ ಸಂಗತಿಯಲ್ಲಾದರೆ ಸದರಿ ಸಂರಕ್ಷಕನಿಗೂ, (2)ನೇ ಉಪಪ್ರಕರಣಕ್ಕನುಗುಣವಾದ ಸಂಗತಿಯಲ್ಲಾದರೆ ಮನವಿ ಮಾಡಿಕೊಳ್ಳದಿರುವ ಸಂರಕ್ಷಕನಿಗೂ, ಕೊಡುವಂತೆ ವಿಧಿಸತಕ್ಕದ್ದು.

(4) (1)ನೇ ಯಾ (2)ನೇ ಉಪಪ್ರಕರಣದ ಮೇರೆಗೆ ಮಾಡಿದ ಹುಕುಮಿಗೆ ಅವಿಧೇಯವಾಗಿ ನಡಕೊಂಡ ಸಂಗತಿಯಲ್ಲಿ, ಸಿವಿಲ್ ಪ್ರೊಸಿಡ್ಯೂರ್ ಕೋಡಿನ 492ನೇ ಅಥವಾ 493ನೇ ಪ್ರಕರಣ ಪ್ರಕಾರ ಕೊಡಲ್ಪಟ್ಟ ಇಂಜಂಕ್ಷನ್ ಜಾರಿ ನಡಿಸುವ ರೀತಿಯಲ್ಲಿ, (1)ನೇ ಉಪಪ್ರಕರಣಕ್ಕೊಳಪಟ್ಟ ಸಂಗತಿಯಲ್ಲಾದರೆ, ಸದರಿ ಸಂರಕ್ಷಕನು ಪ್ರತಿವಾದಿಯಾಗಿಯೂ ರಕ್ಷಿತನು ವಾದಿಯಾಗಿಯೂ, (2)ನೇ ಉಪಪ್ರಕರಣಕ್ಕೊಳಪಟ್ಟ ಸಂಗತಿಯಲ್ಲಾದರೆ ಮನವಿ ಮಾಡಿಕೊಂಡ ಸಂರಕ್ಷಕನು ವಾದಿಯಾಗಿಯೂ ಇನ್ನೊಬ್ಬ ಸಂರಕ್ಷಕನು ಪ್ರತಿವಾದಿಯಾಗಿಯೂ ಇದ್ದರೆ ಹ್ಯಾಗೋ ಹಾಗೆಯೇ, ಸದರಿ ಹುಕುಮಿನ ಜಾರಿ ನಡಿಸಲ್ಪಡಬಹುದು.

(5) (2)ನೇ ಉಪಪ್ರಕರಣಕ್ಕೊಳಪಟ್ಟ ಸಂಗತಿಯಲ್ಲಿ ವಿನಹಾ, ಈ ಪ್ರಕರಣದ ಯಾವ ನಿಯಮವೂ, ಉದ್ಯೋಗ ಪ್ರಯುಕ್ತವಾಗಿ ಸಂರಕ್ಷಕನಾಗಿರುವ ಡಿಪ್ಯೂಟಿ ಕಮಿಷನರಿಗೆ ಪ್ರಯೋಗವಾಗುವದಿಲ್ಲ.

ಅಧಿಕಾರ ಸರಹದ್ದಿನ ಹೊರಗೆ ರಕ್ಷಿತನನ್ನು ತೆಗೆದುಕೊಂಡು ಹೋದರೆ ದಂಡನೆ.

44. ಒಬ್ಬ ರಕ್ಷಿತನ ಕುರಿತು ಕೋರ್ಟಿನವರು ತಮ್ಮ ಅಧಿಕಾರವನ್ನು ಚಲಾಯಿಸುವದರಲ್ಲಿ ಆತಂಕಪಡಿಸುವ ಉದ್ದೇಶದಿಂದ ಯಾ ಆತಂಕ ಉಂಟಾಗುವ ಹಾಗೆ, 26ನೇ ಪ್ರಕರಣದ ನಿಯಮಗಳಿಗೆ ವಿರೋಧವಾಗಿ, ಕೋರ್ಟಿನವರಿಂದ ನೇಮಿಸೋಣಾದ ಯಾ ವಿಧಿಸಿ ತಿಳಿಸೋಣಾದ ಒಬ್ಬ ಸಂರಕ್ಷಕನು ಆತನನ್ನು ಸದರಿ ಕೋರ್ಟಿನವರ ಅಧಿಕಾರಸ್ಥಳಗಳ ಎಲ್ಲೆಗಳ ಹೊರಗೆ ತೆಗೆದುಕೊಂಡು ಹೋದರೆ ಸದರಿ ಸಂರಕ್ಷಕನು ಸದರಿ ಕೋರ್ಟಿನವರ ಆಜ್ಞೆಯ ಮೂಲಕ, ಒಂದು ಸಾವಿರ ರೂಪಾಯಿಗೆ ಮೀರದ ಜುಲುಮಾನೆಗೆ, ಯಾ ಸಿವಿಲ್ ಜೈಲಿನಲ್ಲಿ ಆರುತಿಂಗಳಿಗೆ ವ್ಯಾಪಿಸಬಹುದಾದ ಒಂದು ಅವಧಿಗೆ ಕೈದು ಶಿಕ್ಷೆಗೆ, ಗುರಿಯಾಗತಕ್ಕದ್ದು.

ಅಲಕ್ಷ್ಯ ಮಾಡಿದರೆ ದಂಡನೆ.

45. (1) ಈ ಕೆಳಗಣ ಸಂಗತಿಗಳಲ್ಲಿ, ಅಂದರೆ :—

(a) ಒಬ್ಬ ಅಪ್ರಾಯಸ್ಥನನ್ನು ಕಾವಲಿನಲ್ಲಿಟ್ಟುಕೊಂಡಿರುವ ಮನುಷ್ಯನು, 12ನೇ ಪ್ರಕರಣದ (1) ನೇ ಉಪಪ್ರಕರಣಕ್ಕನುಗುಣವಾದ ಒಂದು ಅನುಜ್ಞೆಗೆ ಅನುಸಾರವಾಗಿ, ಆತನನ್ನು ಹಾಜರು ಮಾಡಲಿಕ್ಕೆ ಯಾ ಹಾಜರು ಮಾಡಗೊಡಿಸಲಿಕ್ಕೆ ತಪ್ಪಿದರೆ, ಅಥವಾ 25ನೇ ಪ್ರಕರಣದ (1)ನೇ ಉಪಪ್ರಕರಣಕ್ಕನುಗುಣವಾದ ಒಂದು ಹುಕುಮಿಗೆ ಅನುಸಾರವಾಗಿ ಅಪ್ರಾಯಸ್ಥನು ತನ್ನ ಸಂರಕ್ಷಕನ ಕಾವಲಿಗೆ ಮರಳಿ ಹೋಗುವಂತೆ ಬಲಾತ್ಕರಿಸಲಿಕ್ಕೆ ತನ್ನಿಂದ ಕೂಡುವಷ್ಟು ಪ್ರಯತ್ನ ನಡಿಸದೆ ಹೋದರೆ, ಅಥವಾ

(b) ಕೋರ್ಟಿನವರಿಂದ ನೇಮಕ ಮಾಡೋಣಾದ ಯಾ ವಿಧಿಸಿ ತಿಳಿಸೋಣಾದ ಒಬ್ಬ ಸಂರಕ್ಷಕನು, 34ನೇ ಪ್ರಕರಣದ (b) ಕಲಮಿನ ಮೇರೆಗೆ ಯಾ ಸದರಿ ಕಲಮಿನಿಂದ ನಿಯಮಿತವಾದ ಕಾಲದೊಳಗಾಗಿ, ಆ ಕಲಮಿನಂತೆ ವಿಧಿಸಲ್ಪಟ್ಟ ಒಂದು ಸ್ಟೇಟಮೆಂಟನ್ನು ಕೋರ್ಟಿನವರಿಗೆ ಒಪ್ಪಿಸಲಿಕ್ಕೆ, ಅಥವಾ ಅದೇ ಪ್ರಕರಣದ (c) ಕಲಮಿಗೆ ಅನುಸಾರವಾಗಿರುವ ಅನುಜ್ಞೆ ಪ್ರಕಾರ ಲೆಕ್ಕಗಳನ್ನು ತೋರಿಸಲಿಕ್ಕೆ, ಅಥವಾ ಅದೇ ಪ್ರಕರಣದ (d) ಕಲಮಿಗೆ ಅನುಸಾರವಾಗಿರುವ ಒಂದು ಅನುಜ್ಞೆ ಪ್ರಕಾರ ಸದರಿ ಲೆಕ್ಕಗಳ ಮೇಲೆ ಆತನಿಂದ ಸಲ್ಲತಕ್ಕ ಬಾಕಿಯನ್ನು ಕೋರ್ಟಿನಲ್ಲಿ ಪಾವತಿ ಮಾಡಲಿಕ್ಕೆ, ತಪ್ಪಿದರೆ, ಅಥವಾ

(c) ಸಂರಕ್ಷಕನಾಗಿರುವದು ನಿಂತುಹೋದ ಒಬ್ಬ ಮನುಷ್ಯನು ಅಥವಾ ಅಂಥಾ ಮನುಷ್ಯನ ಪ್ರತಿನಿಧಿಯು, 41ನೇ ಪ್ರಕರಣದ (3)ನೇ ಉಪಪ್ರಕರಣದಂತಾದ ಒಂದು ಅನುಜ್ಞೆಗನುಸಾರವಾಗಿ ಯಾವ ಸೊತ್ತನ್ನಾಗಲಿ, ಲೆಕ್ಕಗಳನ್ನಾಗಲಿ ಒಪ್ಪಿಸಲಿಕ್ಕೆ ತಪ್ಪಿದರೆ,

ಸದರಿ ಮನುಷ್ಯ ಯಾ, ಸಂಗತ್ಯಾನುಸಾರವಾಗಿ, ಸಂರಕ್ಷಕನು ಯಾ ಪ್ರತಿನಿಧಿಯು, ಕೋರ್ಟಿನ ಹುಕುಮು ಮೂಲಕ 100 ರೂಪಾಯಿಗೆ ಮೀರದ ಜುಲುಮಾನೆಗೂ, ಆ ಆಜ್ಞೆಯನ್ನು ಅಲಕ್ಷ್ಯ ಮಾಡುವ ಪಕ್ಷದಲ್ಲಿ ಹಾಗೆ ಅಲಕ್ಷಿಸಿದ ಮೊದಲನೇ ದಿವ

ನಡ ನಂತರ ಜಾಮೀನನ್ನು ಒಪ್ಪಿಸದೇ ಇರುವ, ಪ್ರತಿ ಒಂದು ದಿವಸಕ್ಕೆ ಹತ್ತು ರೂಪಾಯಿಗೆ ಮೀರದೆಯೂ, ಪರಂತು ಒಟ್ಟಿನಲ್ಲಿ ಮೂರು ಸಾವಿರ ರೂಪಾಯಿಗೆ ಮೀರದ ಜಾಮೀನಿಗೂ, ಮತ್ತು ಅಪ್ರಾಪ್ತವಯಸ್ಕನನ್ನು ಹಾಜರು ಮಾಡುವದಕ್ಕೆ ಯಾ ಪೋಷಣೆಗೊಳಿಸುವದಕ್ಕೆ ಯಾ ಆತನು ಪಾಠಶಾಲೆಗೆ ಹೋಗುವಂತೆ ವ್ಯವಸ್ಥೆ ಕಲ್ಪಿಸುವದಕ್ಕೆ ಯಾ ಸ್ಟೇಟುಮೆಂಟನ್ನು ಒಪ್ಪಿಸುವದಕ್ಕೆ ಯಾ ಲೆಕ್ಕಗಳನ್ನು ತೋರಿಸುವದಕ್ಕೆ ಯಾ ಬಾಕಿಯನ್ನು ಪಾವತಿ ಮಾಡುವದಕ್ಕೆ ಯಾ ಆಸ್ತಿಯನ್ನು ಒಪ್ಪಿಸಿಕೊಡುವದಕ್ಕೆ, ಆಯಾ ಸಂಗತ್ಯಾನುಸಾರವಾಗಿ, ಕೈಕೊಳ್ಳುವವರೆಗೂ ಸಿವಿಲ್ ಕೈದಿನಲ್ಲಿ ಇಡಲ್ಪಡುವದಕ್ಕೆ ಗುರಿಯಾಗತಕ್ಕದ್ದು.

(2) (1)ನೇ ಉಪಪ್ರಕರಣಕ್ಕನುಗುಣವಾಗಿ ಒಂದು ಒಪ್ಪಿಗೆಯನ್ನು ಕೊಟ್ಟದರಿಂದ ಕೈದಿನಿಂದ ಬಿಡಲ್ಪಟ್ಟ ಮನುಷ್ಯನು ಕೋರ್ಟಿನವರಿಂದ ನಿಯಮಿಸಲ್ಪಟ್ಟ ಕಾಲದೊಳಗಾಗಿ ಸದರಿ ಒಪ್ಪಿಗೆಯನ್ನು ನೆರವೇರಿಸಲಿಕ್ಕೆ ತಪ್ಪಿದರೆ, ಕೋರ್ಟಿನವರು ಆತನನ್ನು ಪುನಹಾ ದಸ್ತಗಿರಿ ಮಾಡಿಸಿ ಸಿವಿಲ್ ಜೈಲಿಗೆ ಪುನಹಾ ರವಾನಿಸಬಹುದು.

ಡೆಪ್ಯುಟಿ ಕಮಿಷನರುಗಳು ಮತ್ತು ಕೆಳಗಿನ ಕೋರ್ಟುಗಳು ರಿಪೋರ್ಟು ಮಾಡೋದು.

46. (1) ಈ ರೆಗ್ಯುಲೇಷನ್ ಮೇರೆ ಯಾವದಾದರೂ ವ್ಯವಹರಣೆಯಲ್ಲಿ ಹುಟ್ಟುವ ಯಾವದಾದರೂ ಸಂಗತಿಯನ್ನು ಕುರಿತು, ಕೋರ್ಟಿನವರು ಡಿಪ್ಯುಟಿ ಕಮಿಷನರಿಂದಾಗಲಿ ತಮ್ಮ ಕೆಳಗಿನ ಯಾವ ಕೋರ್ಟುಗಳಿಂದಾಗಲಿ ರಿಪೋರ್ಟು ತರಿಸಿಕೊಳ್ಳಬಹುದು, ಮತ್ತು ಆ ರಿಪೋರ್ಟನ್ನು ರುಜುವಾತಾಗಿ ಎಣಿಸಬಹುದು.

(2) ಸದರಿ ರಿಪೋರ್ಟನ್ನು ತಯಾರಿಸುವ ಬಗ್ಗೆ ಡೆಪ್ಯುಟಿ ಕಮಿಷನರಾಗಲಿ, ಸಂಗತ್ಯಾನುಸಾರವಾಗಿ, ಕೆಳಗಿನ ಕೋರ್ಟಿನ ಜಡ್ಜಿಯಾಗಲಿ, ತನಗೆ ಅವಶ್ಯವೆಂದು ತೋರುವ ವಿಚಾರಣೆಯನ್ನು ನಡಿಸತಕ್ಕದ್ದು, ಮತ್ತು ಸದರಿ ವಿಚಾರಣೆ ಬಗ್ಗಾಗಿ ಸಿವಿಲ್ ಪ್ರೊಸಿಜ್ಯೂರ್ ಕೋಡಿನಿಂದ ಸಾಕ್ಷಿಕೊಡುವ ವಿಷಯವಾಗಿ ಯಾ ದಸ್ತಾವೇಜು ಹಾಜರು ಮಾಡುವ ವಿಷಯವಾಗಿ, ಸಾಕ್ಷಿಯನ್ನು ಹಾಜರಾಗಿರುವದಕ್ಕೆ ಬಲಾತ್ಕರಿಸಲು ಕೋರ್ಟಿನವರಿಗೆ ಕೊಡೋಣಾದ ಯಾವ ಅಧಿಕಾರವನ್ನಾದರೂ ನಡಿಸಬಹುದು.

ಅಪ್ಪೀಲ್ ಮಾಡಬಹುದಾದ ಹುಕುಮುಗಳು.

47. ಡಿಸ್ಟ್ರಿಕ್ಟ್ ಕೋರ್ಟಿನವರಿಂದ ಕೊಡೋಣಾದ ಈ ಕೆಳಗಿನ ಹುಕುಂಗಳ ಮೇಲೆ ಚೀಫ್ ಕೋರ್ಟಿಗೆ ಅಪ್ಪೀಲ್ ಇರತಕ್ಕದ್ದು,—

(a) 7ನೇ ಪ್ರಕರಣ ಪ್ರಕಾರ ಒಬ್ಬ ಸಂರಕ್ಷಕನನ್ನು ನೇಮಿಸಿ ಯಾ ವಿಧಿಸಿಹೇಳಿ ಯಾ ನೇಮಿಸಲು ಯಾ ವಿಧಿಸಿ ಹೇಳಲು ನಿರಾಕರಿಸಿ ಕೊಟ್ಟ ಹುಕುಂ; ಅಥವಾ

(b) 9ನೇ ಪ್ರಕರಣದ (3)ನೇ ಉಪಪ್ರಕರಣ ಪ್ರಕಾರ, ಒಂದು ಅರ್ಜಿಯನ್ನು ವಾಪಸು ಮಾಡುವದು; ಅಥವಾ

(c) 25ನೇ ಪ್ರಕರಣ ಪ್ರಕಾರ, ಒಬ್ಬ ರಕ್ಷಿತನು ಆತನ ಸಂರಕ್ಷಕನ ಕಾವಲಿಗೆ ವಾಪಸು ಹೋಗುವ ಬಗ್ಗೆ ಹುಕುಂ ಕೊಡುವದು ಯಾ ಕೊಡಲು ನಿರಾಕರಿಸುವದು; ಅಥವಾ

(d) 26ನೇ ಪ್ರಕರಣದ ಮೇರೆಗೆ, ಒಬ್ಬ ಸಂರಕ್ಷಕನೆಯಲ್ಲಿರತಕ್ಕವನನ್ನು ಕೋರ್ಟಿನ ಅಧಿಕಾರ ಸರಹದ್ದಿನ ಹೊರಗೆ ತೆಗೆದುಕೊಂಡು ಹೋಗಲಿಕ್ಕೆ ಅಪ್ಪಣೆಯನ್ನು ನಿರಾಕರಿಸುವದು ಅಥವಾ ಆ ಬಗ್ಗೆ ಶರ್ತುಗಳನ್ನು ವಿಧಿಸುವದು; ಅಥವಾ

(e) 28ನೇ ಯಾ 29ನೇ ಪ್ರಕರಣ ಪ್ರಕಾರ, ಆ ಪ್ರಕರಣದಲ್ಲಿ ಸೂಚಿಸಿರುವ ಒಂದು ಕೃತ್ಯವನ್ನು ನಡಿಸಲಿಕ್ಕೆ ಸಂರಕ್ಷಕನಿಗೆ ಅಪ್ಪಣೆಯನ್ನು ನಿರಾಕರಿಸುವದು; ಅಥವಾ

(f) 32ನೇ ಪ್ರಕರಣದ ಪ್ರಕಾರ, ಒಬ್ಬ ಸಂರಕ್ಷಕನ ಅಧಿಕಾರಗಳನ್ನು ವಿವರಿಸುವದು, ಮಿತಪಡಿಸುವದು ಯಾ ವಿಸ್ತರಿಸುವದು; ಅಥವಾ

(g) 39ನೇ ಪ್ರಕರಣ ಪ್ರಕಾರ, ಒಬ್ಬ ಸಂರಕ್ಷಕನನ್ನು ತೆಗೆದುಹಾಕುವದು; ಅಥವಾ

(h) 40ನೇ ಪ್ರಕರಣ ಪ್ರಕಾರ, ಒಬ್ಬ ಸಂರಕ್ಷಕನನ್ನು ನಿವಾರಣೆ ಮಾಡಲಿಕ್ಕೆ ನಿರಾಕರಿಸುವದು; ಅಥವಾ

(i) 43ನೇ ಪ್ರಕರಣ ಪ್ರಕಾರ, ಒಬ್ಬ ಸಂರಕ್ಷಕನ ನಡತೆಯನ್ನು ಯಾ ವ್ಯವಹರಣೆಯನ್ನು ಕ್ರಮಪಡಿಸುವದು ಯಾ ಸಹ ರಕ್ಷಕರೊಳಗೆ ವ್ಯಾಜ್ಯದಲ್ಲಿರುವ ವಿಷಯವನ್ನು ವ್ಯವಸ್ಥೆಪಡಿಸುವದು ಯಾ ಹುಕುಮಿನ ಜಾರಿ ನಡಿಸುವದು; ಅಥವಾ

(j) 44ನೇ ಯಾ 45ನೇ ಪ್ರಕರಣ ಪ್ರಕಾರ, ದಂಡನೆಯನ್ನು ಹೊರಿಸುವದು.

ಬೇರೆ ಹುಕುಮುಗಳ ಅಖೈರಾತಿ.

43. ಹಿಂದಿನ ಕಡೇ ಪ್ರಕರಣದಲ್ಲಿ ಮತ್ತು ಸಿವಿಲ್ ಪ್ರೊಸಿಜ್ಯೂರ್ ಕೋಡಿನ 622ನೇ ಪ್ರಕರಣದಲ್ಲಿ ನಿಬಂಧಿಸೋಣಾದ ಮೇರೆಗೆ ಹೊರತು, ಈ ರೆಗ್ಯುಲೇಷನಿನ ಮೇರೆಗೆ ಮಾಡಿರುವ ಯಾವ ಹುಕುಂ ಆದರೂ ಅಖೈರಾಗಿರತಕ್ಕದ್ದು, ಮತ್ತು ವ್ಯಾಜ್ಯ ಮೂಲಕವಾಗಲಿ ಯಾ ಇತರ ವಿಧದಿಂದಾಗಲಿ ವಿವಾದಕ್ಕೆ ಗುರಿಯಾಗತಕ್ಕದ್ದಲ್ಲ.

ಖರ್ಚುಗಳು.

49. ಒಬ್ಬ ಸಂರಕ್ಷಕನನ್ನು ಯಾ ಇತರ ಮನುಷ್ಯನನ್ನು ಸಿವಿಲ್ ಜೈಲಿನಲ್ಲಿ ಪೋಷಿಸುವ ಖರ್ಚು ಸಹಿತ ಈ ರೆಗ್ಯುಲೇಷನಿನಂತಹ ಯಾವದಾದರೂ ವ್ಯವಹರಣೆಯ ಖರ್ಚು, ಚೀಫ್ ಕೋರ್ಟಿನವರು ಈ ರೆಗ್ಯುಲೇಷನಿಗನುಗುಣವಾಗಿ ಮಾಡಿರುವ ನಿಯಮಗಳಿಗೆ ಒಳಪಟ್ಟು, ಸದರಿ ವ್ಯವಹರಣೆ ನಡೆದ ಕೋರ್ಟಿನವರ ಇಷ್ಟಾನುಸಾರವಾಗಿರತಕ್ಕದ್ದು.

50. (1) ನೇಮಗಳನ್ನು ಏರ್ಪಡಿಸಲು ಈ ರೆಗ್ಯುಲೇಷನಿನಿಂದ ಸ್ಪಷ್ಟವಾಗಿ ಯಾ ಅರ್ಥಾನುಸಂಬಂಧವಾಗಿ ಕೊಡೋಣಾದ ಬೇರೆ ಇತರ ಅಧಿಕಾರದೊಂದಿಗೆ ಚೀಫ್‌ಕೋರ್ಟಿನವರು ಈ ಕೆಳಗಿನ ಸಂಗತಿಗಳನ್ನು ಕುರಿತು ಸದರೀ ರೆಗ್ಯುಲೇಷನಿಗೆ ಅನುಗುಣವಾಗುವಂತಾ ನೇಮಗಳನ್ನು ಏರ್ಪಡಿಸಬಹುದು—

ನೇಮಗಳನ್ನು ಏರ್ಪಡಿಸಲು ಚೀಫ್‌ಕೋರ್ಟಿನವರ ಅಧಿಕಾರ.

(*a*) ಡೆಪ್ಯುಟಿ ಕಮಿಷನರುಗಳಿಂದ ಮತ್ತು ಕೆಳಗಿನ ಕೋರ್ಟುಗಳಿಂದ ಯಾವ್ಯಾವ ಸಂಗತಿಗಳಲ್ಲಿ ಮತ್ತು ಯಾವ್ಯಾವ ಕಾಲದಲ್ಲಿ ರಿಪೋರ್ಟುಗಳನ್ನು ತರಿಸಿಕೊಳ್ಳಬೇಕೆಂಬುವದು ;

(*b*) ಸಂರಕ್ಷಕರಿಗೆ ಕೊಡತಕ್ಕ ಎಲೋವೆನ್ಸಗಳ ಕುರಿತು ಮತ್ತು ಅವರಿಂದ ಪಡಕೊಳ್ಳತಕ್ಕ ಜಾಮೀನು ಕುರಿತು ಮತ್ತು ಯಾವ್ಯಾವ ಸಂಗತಿಗಳಲ್ಲಿ ಅಂಥಾ ಎಲೋವೆನ್ಸಗಳು ಕೊಡತಕ್ಕದ್ದೆಂಬುವದು ;

(*c*) 28 ಮತ್ತು 29ನೇ ಪ್ರಕರಣಗಳಲ್ಲಿ ಸೂಚಿಸಿರುವ ಕೃತ್ಯಗಳನ್ನು ನಡಿಸಲು ಅಪ್ಪಣೆ ಕೇಳಿ ಸಂರಕ್ಷಕರು ಬರಕೊಳ್ಳುವಂತಾ ಅರ್ಜಿಗಳ ಬಾಬಿನಲ್ಲಿ ಅನುಸರಿಸತಕ್ಕ ಕ್ರಮ ;

(*d*) 34ನೇ ಪ್ರಕರಣದ (*a*), (*b*), (*c*), ಮತ್ತು (*d*) ಕಲಮುಗಳಲ್ಲಿ ನಮೂದಿಸಲ್ಪಟ್ಟಂತಾ ಅನುಜ್ಞೆಗಳನ್ನು ಯಾವ್ಯಾವ ಸಂಗತಿಗಳಲ್ಲಿ ಮಾಡತಕ್ಕದ್ದೆಂಬುವದು ;

(*e*) ಸಂರಕ್ಷಕರು ಒಪ್ಪಿಸಿದ ಮತ್ತು ತೋರಿಸಿದ ಸ್ಟೇಟಮೆಂಟುಗಳನ್ನು ಮತ್ತು ಲೆಕ್ಕಗಳನ್ನು ಜೋಪಾನದಲ್ಲಿ ಇಡುವದು ;

(*f*) ಸಂಬಂಧಪಟ್ಟ ಮನುಷ್ಯರು ಸದರಿ ಸ್ಟೇಟಮೆಂಟುಗಳನ್ನು ಮತ್ತು ಲೆಕ್ಕಗಳನ್ನು ನೋಡುವದು ;

(*g*) ಸಂರಕ್ಷಣೆಯಲ್ಲಿರುವವರಿಗೆ ಸೇರಿದ ಹಣವಿನ ಮತ್ತು ಹಣವಿನ ಬಗ್ಗೆ ಇರುವ ಸೆಕ್ಯೂರಟಿಗಳ ಕಾವಲು ;

(*h*) ಸಂರಕ್ಷಣೆಯಲ್ಲಿರುವವರಿಗೆ ಸೇರಿದ ಹಣವನ್ನು ಯಾವ ತರದ ಸೆಕ್ಯೂರಟಿಗಳ ರೂಪವಾಗಿ ಇಡಬಹುದೆಂಬುವದು;

(*i*) ಕೋರ್ಟಿನವರು ಯಾರಬಗ್ಗೆ ಸಂರಕ್ಷಕರನ್ನು ನೇಮಿಸಿದ್ದಾರೋ ಯಾ ವಿಧಿಸಿ ಹೇಳಿದ್ದಾರೋ ಅಂತಾ ಸಂರಕ್ಷಣೆಯಲ್ಲಿರುವವರ ವಿದ್ಯಾಭ್ಯಾಸವನ್ನು ಕುರಿತು, ಅಂತಾ ಸಂರಕ್ಷಕರು ಡಿಪ್ಯುಟಿ ಕಮಿಷನರುಗಳಲ್ಲ ವಾಗಿದ್ದರೆ;

(*j*) ಸಾಮಾನ್ಯವಾಗಿ ಈ ರೆಗ್ಯುಲೇಷನಿನ ಉದ್ದೇಶಗಳನ್ನು ನೆರವೇರಿಸುವಲ್ಲಿ ಕೋರ್ಟಿನವರ ನಡವಳಿಕೆ ಕುರಿತು.

(2) (1) ನೇ ಉಪ ಪ್ರಕರಣದ (*a*) ಮತ್ತು (*i*) ಕಲಮುಗಳ ಮೇರೆಗೆ ಮಾಡಲ್ಪಟ್ಟ ನೇಮಗಳು, ಗವರ್ನಮೆಂಟಿನವರಿಂದ ಮಂಜೂರು ಮಾಡಲ್ಪಡುವವರೆಗೆ, ಫಲಿತಾರ್ಥವುಳ್ಳವುಗಳಾಗಿರಲಿಕ್ಕಿಲ್ಲ ; ಅದಲ್ಲದೆ ಈ ಪ್ರಕರಣಕ್ಕನುಗುಣವಾದ ಯಾವ ನೇಮವೂ ಸರಕಾರಿ ಗಜೇಟಿನಲ್ಲಿ ಪ್ರಕಟಿಸಲ್ಪಡುವವರೆಗೆ ಫಲಿತಾರ್ಥವುಳ್ಳದ್ದಾಗಿರಕೂಡದು.

51. ಈ ರೆಗ್ಯುಲೇಷನಿನಿಂದ ರದ್ದು ಮಾಡಲ್ಪಟ್ಟ ಯಾವದಾದರೂ ನಿಬಂಧನೆ ಮೇರೆಗೆ ಒಂದು ಸಿವಿಲ್ ಕೋರ್ಟಿನವರಿಂದ ನೇಮಿಸಲ್ಪಟ್ಟ ಯಾ ಕಾರ್ಯನಿರ್ವಾಹಣ ಸರ್ಟಿಫಿಕೇಟು ಕೊಡಲ್ಪಟ್ಟ ಒಬ್ಬ ಸಂರಕ್ಷಕನು, ನಿರ್ದೇಶಿಸಲ್ಪಡಬಹುದಾದ ಮೇರೆಗೆ ವಿನಹಾ, ಅವನು 2ನೇ ಅಧ್ಯಾಯದ ಮೇರೆಗೆ ನೇಮಿಸಲ್ಪಟ್ಟು ಯಾ ವಿಧಿಸಿ ತಿಳಿಸಲ್ಪಟ್ಟದ್ದರೆ ಹ್ಯಾಗೋ ಹಾಗೆಯೇ, ಈ ರೆಗ್ಯುಲೇಷನಿನ ನಿಯಮಗಳಿಗೂ ಮತ್ತು ಅದಕ್ಕನುಗುಣವಾಗಿ ಏರ್ಪಟ್ಟ ನೇಮಗಳಿಗೂ ಒಳಪಟ್ಟಿರತಕ್ಕದ್ದು.

ಕೋರ್ಟಿನವರಿಂದ ಮೊದಲೇ ನೇಮಕಪಟ್ಟ ಸಂರಕ್ಷಕರಿಗೆ ಈ ರೆಗ್ಯುಲೇಷನಿನ ಪ್ರಯೋಗ.

52. ಸಿವಿಲ್ ಪ್ರೊಸಿಡ್ಯೂರ್ ಕೋಡಿನ 31ನೇ ಅಧ್ಯಾಯವನ್ನು ಇದರಡಿ ಕಾಣಿಸಿದಂತೆ ತಿದ್ದುಪಾಟು ಮಾಡತಕ್ಕದ್ದು ; ಅಂದರೆ :—

ಸಿವಿಲ್ ಪ್ರೊಸಿಡ್ಯೂರ ಕೋಡಿನ 31ನೇ ಅಧ್ಯಾಯದ ತಿದ್ದುಪಾಟು.

A.—ಸದರಿ ಕೋಡಿನ 140ನೇ ಪ್ರಕರಣಕ್ಕೆ ಈ ಕೆಳಗೆ ಬರುವದನ್ನು ಸೇರಿಸತಕ್ಕದ್ದು ; ಯಾವದಂದರೆ :—

" ಒಬ್ಬ ಅಪ್ರಾಯಸ್ಥನಿಗೆ, ಆ ಪರವಾಗಿ ತಕ್ಕ ಅಧಿಕಾರ ಇರುವ ಅಧಿಕಾರಸ್ಥರಿಂದ ಮೊಕರರೂರು ಮಾಡಲ್ಪಟ್ಟ ಯಾ ವಿಧಿಸಿ ತಿಳಿಸಲ್ಪಟ್ಟ ಒಬ್ಬ ಸಂರಕ್ಷಕನು ಇರುತ್ತಿದ್ದರೆ, ಸದರಿ ಅಪ್ರಾಯಸ್ಥನ ತರಫಿನಿಂದ ಅಂಥಾ ಸಂರಕ್ಷಕನಲ್ಲದೆ ಬೇರೆ ಯಾರಾದರೂ, ಕೋರ್ಟಿನವರು ಅಂಥಾ ಸಂರಕ್ಷಕನಿಗೆ ನೋಟೀಸು ಕೊಟ್ಟು ವ್ಯಾಜ್ಯ ದಾಖಲು ಮಾಡುವದನ್ನು ಕುರಿತು ಆತನಿಗಿರಬಹುದಾದ ಯಾವದಾದರೂ ಆಕ್ಷೇಪಣೆಗಳನ್ನು ಕೇಳಿಕೊಂಡು ಅಪ್ಪಣೆಕೊಟ್ಟ ವಿನಹಾ, ಸದರಿ ಅಪ್ರಾಯಸ್ಥನ ತರಫಿನಿಂದ ವ್ಯಾಜ್ಯ ದಾಖಲು ಮಾಡಕೂಡದು, ಮತ್ತು, ಅಪ್ರಾಯಸ್ಥನಬಗ್ಗಾಗಿ ವ್ಯಾಜ್ಯ ದಾಖಲುಮಾಡುವದನ್ನು ಕುರಿತು ಕೇಳುವ ಮನುಷ್ಯನಿಗೆ, ಆರೀತಿ ನಡಕೊಳ್ಳಲಿಕ್ಕೆ ಅವನನ್ನು ಬಿಡುವದು ಅಪ್ರಾಯಸ್ಥನ ಕ್ಷೇಮಲಾಭಕ್ಕಾಗಿಯೇ ಎಂತ ಕೋರ್ಟಿನವರು ಅಭಿಪ್ರಾಯಪಟ್ಟ ಹೊರತು, ಅಂಥಾ ಅಪ್ಪಣೆಯನ್ನು ಕೋರ್ಟಿನವರು ಕೊಡಕೂಡದು "

B.—ಸದರಿ ಕೋಡಿನ 443ನೇ ಪ್ರಕರಣಕ್ಕೆ ಈ ಕೆಳಗೆ ಬರುವದನ್ನು ಸೇರಿಸತಕ್ಕದ್ದು ; ಯಾವದಂದರೆ :—

" ಆ ಪರವಾಗಿ ತಕ್ಕ ಅಧಿಕಾರ ಇರುವ ಅಧಿಕಾರಸ್ಥರು ಅಪ್ರಾಯಸ್ಥನ ದೇಹದ ಯಾ ಸೊತ್ತಿನ ಯಾ ಇವೆರಡರ ಬಗ್ಗೆ ಸಂರಕ್ಷಕನನ್ನು ಯಾ ಸಂರಕ್ಷಕರನ್ನು ನೇಮಿಸಿರುವಲ್ಲಿ ಯಾ ವಿಧಿಸಿ ತಿಳಿಸಿರುವಲ್ಲಿ, ಕೋರ್ಟಿನವರು ಆತನನ್ನು, ಯಾ ಸಂಗಸ್ಥ್ಯಾನುಸಾರ, ಅವರಪೈಕಿ ಒಬ್ಬನನ್ನು ಈ ಪ್ರಕರಣಕ್ಕನುಗುಣವಾದ ವ್ಯಾಜ್ಯವನ್ನು ಕುರಿತು ಸಂರಕ್ಷಕನಾಗಿ ನೇಮಿಸತಕ್ಕದ್ದು. ಪರಂತು ಇತರ ಯಾವನೊಬ್ಬನಾದರೂ ಹಾಗೆ ನೇಮಿಸಲ್ಪಡತಕ್ಕದ್ದು ಎಂತ ಕೋರ್ಟಿನವರು ತಿಳಿಕೊಳ್ಳುವದಾದರೆ, ಅದಕ್ಕಾಗಿ ತಮ್ಮ ಕಾರಣಗಳನ್ನು ರಿಕಾರ್ಡ್ ಮಾಡತಕ್ಕದ್ದು."

C.—ಸದರಿ ಕೋಡಿನ 445ನೇ ಪ್ರಕರಣದನಂತರ ಈ ಕೆಳಗೆ ಬರುವದನ್ನು ಸೇರಿಸತಕ್ಕದ್ದು, ಯಾವದೆಂದರೆ:—

"ಕ್ಷೇಮ ಚಿಂತಕನು ಈಪರವಾಗಿ ತಕ್ಕ ಅಧಿಕಾರವಿರುವ ಅಧಿಕಾರಸ್ಥರಿಂದ ನೇಮಕ ಮಾಡಲ್ಪಟ್ಟ ಯಾ ವಿಧಿಸಿ ತಿಳಿಸಲ್ಪಟ್ಟ ಸಂರಕ್ಷಕನಲ್ಲವಾಗಿದ್ದರೆ ಮತ್ತು ಆರೀತಿ ನೇಮಕ ಮಾಡಲ್ಪಟ್ಟ ಯಾ ವಿಧಿಸಿ ತಿಳಿಸಲ್ಪಟ್ಟ ಸಂರಕ್ಷಕನು ಕ್ಷೇಮಚಿಂತಕನ ಬದಲಾಗಿ ನೇಮಿಸಲ್ಪಡಬೇಕೆಂದು ಅಪೇಕ್ಷಿಸಿ ಅದನ್ನು ಕುರಿತು ಮನವಿಮಾಡಿಕೊಂಡರೆ, ಕೋರ್ಟಿನವರು ಸದರಿ ಕ್ಷೇಮಚಿಂತಕನನ್ನು ತೆಗೆದುಹಾಕತಕ್ಕದ್ದು; ಪರಂತು ಅಪ್ರಾಯಸ್ಥನ ಕ್ಷೇಮಚಿಂತಕನಾಗಿ ಸಂರಕ್ಷಕನನ್ನು ನೇಮಿಸತಕ್ಕದ್ದಲ್ಲನಾಗಿ ಕೋರ್ಟಿನವರು ತಿಳಕೊಳ್ಳುವದಾದರೆ ಅದನ್ನು ಕುರಿತು ತಮ್ಮ ಕಾರಣಗಳನ್ನು ರಿಕಾರ್ಡು ಮಾಡಿ ಹಾಗೆ ತೆಗೆದುಹಾಕದೆ ಇರಬಹುದು."

D.—ಸದರಿ ಕೋಡಿನ 461ನೇ ಪ್ರಕರಣದ ಬದಲಾಗಿ ಈ ಕೆಳಗೆ ಬರುವದನ್ನು ಇಡತಕ್ಕದ್ದು, ಯಾವದೆಂದರೆ:—

ವ್ಯಾಜ್ಯದ ಕುರಿತ ಕ್ಷೇಮಚಿಂತಕನು ಯಾ ರಕ್ಷಿತನು ಡಿಕ್ರಿ ಮೇರೆಗೆ ಅಪ್ರಾಯಸ್ಥನಬಗ್ಗೆ ಸೊತ್ತು ತೆಗೆದುಕೊಳ್ಳುವಿಕೆ.

"461. (1) ವ್ಯಾಜ್ಯದ ಕುರಿತ ಕ್ಷೇಮಚಿಂತಕನು ಅಥವಾ ಸಂರಕ್ಷಕನು ಕೋರ್ಟಿನವರ ಅಪ್ಪಣೆ ಶಿವಾಯಿ—

(a) ಡಿಕ್ರಿ ಯಾ ಹುಕುಂ ಉಂಟಾಗುವ ಮೊದಲು ರಾಜಿಮೂಲಕ, ಅಥವಾ

(b) ಅಪ್ರಾಯಸ್ಥನಪರವಾಗಿ ಉಂಟಾದ ಡಿಕ್ರಿ ಯಾ ಹುಕುಂ ಮೇರೆಗೆ,

ಯಾವ ಹಣವನ್ನಾಗಲೀ ಇತರ ಚರಸೊತ್ತನ್ನಾಗಲೀ ಅಪ್ರಾಯಸ್ಥನಬಗ್ಗೆ ತೆಗೆದುಕೊಳ್ಳಕೂಡದು.

"(2) ವ್ಯಾಜ್ಯದ ಕುರಿತ ಕ್ಷೇಮಚಿಂತಕ ಯಾ ಸಂರಕ್ಷಕನು ತಕ್ಕ ಅಧಿಕಾರ ಇರುವ ಅಧಿಕಾರಸ್ಥರಿಂದ ಅಪ್ರಾಯಸ್ಥನ ಆಸ್ತಿ ಕುರಿತು ರಕ್ಷಕನಾಗಿ ನೇಮಿಸಲ್ಪಡಲಿಲ್ಲವಾದ ಯಾ ವಿಧಿಸಿ ತಿಳಿಸಲ್ಪಡಲಿಲ್ಲವಾದಪಕ್ಷದಲ್ಲಿ, ಅಥವಾ ಆರೀತಿ ನೇಮಕಮಾಡಲ್ಪಟ್ಟು ಯಾ ವಿಧಿಸಿ ತಿಳಿಸಲ್ಪಟ್ಟು ಇದ್ದು ಸದರೀ ಹಣ ಯಾ ಇತರ ಚರಸೊತ್ತನ್ನು ತೆಗೆದುಕೊಳ್ಳಲಿಕ್ಕೆ ಯಾವ ತರದ ಅಯೋಗ್ಯತೆಯೊಳಗಾಗಿದ್ದಾನೆಂತ ಕೋರ್ಟಿನವರಿಗೆ ತಿಳಿದಿರುವಲ್ಲಿ, ಕೋರ್ಟಿನವರು ಸದರಿ ಸೊತ್ತನ್ನು ತೆಗೆದುಕೊಳ್ಳಲಿಕ್ಕೆ ಅಪ್ಪಣೆ ಕೊಡುವದಾದರೆ, ಸದರಿ ಸೊತ್ತು ವ್ಯಯವಾಗದಂತೆ ಮತ್ತು ಅದರ ಸರಿಯಾದ ವಿನಿಯೋಗವನ್ನು ಭದ್ರಪಡಿಸಲಿಕ್ಕೆ ತಮ್ಮ ಅಭಿಪ್ರಾಯದಲ್ಲಿ ಸಾಕಾಗುವಷ್ಟು ಜಾಮೀನು ಕೊಡಹೇಳಿ ತಕ್ಕ ಅನುಜ್ಞೆಗಳನ್ನು ಸಹಾ ಕೊಡತಕ್ಕದ್ದು."

ಶೆಡ್ಯೂಲ್ ಪಟ್ಟಿ.

ರದ್ದಾದ ಆಕ್ಟುಗಳು.

(2ನೇ ಪ್ರಕರಣ ನೋಡಿ.)

ವಿವರ ಇಸವಿ ಮತ್ತು ನಂಬರು.	ಹೆಸರು ಯಾ ವಿಷಯ.	ರದ್ದಾದ ಪರಿಮಾಣವು.
1872ನೇ ವರುಷದ ಏಪ್ರಿಲ್ 20ನೇ ತಾರೀಖು 752ನೇ ನಂ. ಉಳ ಗವರ್ನಮೆಂಟ್ ಆಫ್ ಇಂಡಿಯಾ ಫಾರಿನ್ ಡಿಪಾರ್ಟ್ಮೆಂಟಿನ ಇಸ್ತಿಹಾರು	ಮೈಸೂರು ಸೀಮೆಯ ಅಪ್ರಾಯಸ್ಥರು, ಕೇವಲ ಬುದ್ಧಿಹೀನರು ಮತ್ತು ಇತರ ಅಯೋಗ್ಯತೆಯುಳ್ಳ ಆಸಾಮಿಗಳು ಇವರ ಕಾವಲು ಮತ್ತು ಸಂರಕ್ಷಣೆಯನ್ನು ಕುರಿತ ನೇಮಗಳು.	22ನೇ ನೇಮ ಮತ್ತು 22ನೇ ನೇಮದಂತೆ ಆದ ಹುಕುಮುಗಳಿಗೆ ಸಮ್ಬಂಧಪಡುವಷ್ಟು 23ನೇ ನೇಮದ ಭಾಗವಿನಹ ಮತ್ತು 22ನೇ ನೇಮವನ್ನು ಜಾರಿಯಲ್ಲಿ ತರುವಬಗ್ಗೆ ಅವಶ್ಯವಿರುವಷ್ಟು ವಿನಹ, ಮಿಕ್ಕಾದ್ದೆಲ್ಲಾ.
ಮೈಸೂರಲ್ಲಿ ಜಾರಿ ಇರುವ 1882ನೇ ಇಸವಿ ನಂ. 14ನೇ ಆಕ್ಟು.	ಸಿವಿಲ್ ಪ್ರೊಸಿಜ್ಯೂರ್ ಕೋಡು ...	443ನೇ ಪ್ರಕರಣ 2ನೇ ಕಲಂ ಮತ್ತು 464ನೇ ಪ್ರಕರಣ.
1900ನೇ ವರುಷದ IIIನೇ ನಂಬರಿನ ರೆಗ್ಯುಲೇಷನ್	1900ನೇ ವರುಷದ ಮೈಸೂರು ಕೋರ್ಟ್ ಫೀಸ್ ರೆಗ್ಯುಲೇಷನ್	28ನೇ ಪ್ರಕರಣ ಮತ್ತು 1ನೇ ಷೆಡ್ಯೂಲಿನಲ್ಲಿ 9ನೇ ಆರ್ಟಿಕಲ್.

ಕೆ. ಎಸ್. ಸಿ.

ಸಂರಕ್ಷಕರನ್ನು ಮತ್ತು ಸಂರಕ್ಷಣೆಯೊಳಗಿರುವವರನ್ನು ಕುರಿತ ನಿಬಂಧನೆಯನ್ನು ಒಟ್ಟುಪಡಿಸಿ ತಿದ್ದುಪಾಟು ಮಾಡುವಬಗ್ಗೆ ಉಂಟಾದ ರೆಗ್ಯುಲೇಷನ್.

ಈ ರೆಗ್ಯುಲೇಷನಿನ ಉದ್ದೇಶಗಳು ಮತ್ತು ಕಾರಣಗಳು—ಅವುಗಳ ವಿವರ.

ಅಪ್ರಾಯಸ್ಥರ ದೇಹರಕ್ಷಣೆಗೂ ಸಂರಕ್ಷಣೆಗೂ ಸಮ್ಬಂಧಪಟ್ಟು ಈಗ ಜಾರಿಯಲ್ಲಿರುವ ನಿಬಂಧನೆಯು, (ಹುಚ್ಚರಿಗೂ, ಕೇವಲ ಮತಿಹೀನರಿಗೂ, ಸ್ವಭಾವವಾದ ದೌರ್ಬಲ್ಯದಿಂದ ಅನರ್ಹರಾಗಿ ಮಾಡಲ್ಪಟ್ಟ ಇತರ ಮನುಷ್ಯರಿಗೂ ಪ್ರಯೋಗವಾಗುವ 22ನೆ ನೇಮ ವಿನಹ ಅಪ್ರಾಯಸ್ಥರಿಗೆ ಸಮ್ಬಂಧಪಡುವ ನಿಯಮಗಳಾಗಿರುವಂತಾ) 1872ನೇ ವರುಷದ ಏಪ್ರಿಲ್ 25ನೇ ತಾರೀಖು 75ನೇ ನಂಬರಿನ ಇಸ್ತಿಹಾರಿನಲ್ಲಿ ಗವರ್ನಮೆಂಟ್ ಆಫ್ ಇಂಡಿಯ (ಫಾರಿನ್ ಡಿಪಾರ್ಟ್ಮೆಂಟ್) ಯವರಿಂದ ಮಂಜೂರ್ಮಾಡಲ್ಪಟ್ಟ ನೇಮಗಳಾಗಿ ಇರುತ್ತವೆ. ಈ ನೇಮಗಳು, ಬೆಂಗಾಲಿನಲ್ಲಿನ ಅಪ್ರಾಯಸ್ಥರಿಗೆ ಸಮ್ಬಂಧಪಟ್ಟ 1858ನೇ ವರುಷದ XIನೇ ಆಕ್ಟಿಗೂ, ಬೊಂಬಾಯಿನಲ್ಲಿನ ಅಪ್ರಾಯಸ್ಥರಿಗೆ ಸಮ್ಬಂಧಪಟ್ಟ 1764ನೇ ವರುಷದ XXನೆ ಆಕ್ಟಿಗೂ ಹೆಚ್ಚು ಕಮ್ಮಿಯಾಗಿ

ಅನುಗುಣವಾಗಿರುವದಲ್ಲದೆ, ಬಹುಶಃ ಅವುಗಳನ್ನೆ ಆಧಾರವಾಗಿ ವುಳ್ಳದ್ದಾಗಿಯೂ ಇರುತ್ತವೆ. ಇವು ಮತ್ತು ಕೆಲವು ಇತರ ದೇಶೀಯವಾದ ಮತ್ತು ವಿಶೇಷವಾದ ಆಕ್ಟುಗಳು 1890ನೇ ವರುಷದ VIIIನೇ ಆಕ್ಟಿನ ಮೂಲಕ 1890ನೇ ವರುಷದಲ್ಲಿ ಕಡೇ ಸಾರಿ ರದ್ದು ಮಾಡಲ್ಪಟ್ಟವು. ಸದರಿ 1890ನೇ ವರುಷದ VIIIನೇ ಆಕ್ಟಿನಲ್ಲಿ, ಬ್ರಿಟಿಷ್ ಇಂಡಿಯಾದಲ್ಲಿರುವ ಹರ್ ಮೆಜೆಸ್ಟಿಯವರ ಪ್ರಜೆಗಳ ಸಮಸ್ತ ವರ್ಗಗಳಿಗೂ, ಯಾವ ಜಾತಿಗಳಿಗಾಗಲಿ ಯಾವ ಕುಲಗಳಿಗಾಗಲಿ ಅವರು ಸೇರಿ ಇರಲಿ, ಸಾಧ್ಯವಾದ ಮಟ್ಟಿಗೂ ಪ್ರಯೋಗವಾಗತಕ್ಕದಾಗಿದ್ದು ಸಂರಕ್ಷಕನಿಗೂ ಸಂರಕ್ಷಣೆಯೊಳಗಿರುವವನಿಗೂ ಶಾಶ್ವತರೂಪ ಒಂದು ನಿಬಂಧನೆಯು ಒದಗಿಸಲ್ಪಟ್ಟಿತ್ತು.

1872ನೇ ವರುಷದ ನೇಮಗಳು ಕೆಲವು ಅಂಶಗಳಲ್ಲಿ ಸಂಕ್ಷಿಪ್ತವಾಗಿರುವದರಿಂದ ಅಪ್ರಾಯಸ್ಥರ ಸಂರಕ್ಷಣೆಗೆ ಅವುಗಳ ಸಮ್ಮಂಧಪಡುವ ಮಟ್ಟಿಗೆ ಅವುಗಳಿಗೆ ಬದಲಾಗಿ, 1890ನೇ ವರುಷದ VIIIನೇ ಇಂಡಿಯನ್ ಆಕ್ಟಿಗೆ ಅನುಸರಿಸಿಯೂ, ಸದರೀ ನೇಮಗಳಿಗಿಂತ ಅಧಿಕವಾಗಿ ಗ್ರಹಿಸುವಂತೆಯೂ, ಮತ್ತು ಅವುಗಳಲ್ಲಿಲ್ಲದ ಅನೇಕ ವಿಷಯಗಳನ್ನು ಒಳಗೊಂಡದ್ದಾಗಿಯೂ ಇರುವಂಥಾ ಒಂದು ರೆಗ್ಯುಲೇಷನನ್ನು ನಿರ್ಣಯಿಸಲು ಉದ್ದೇಶಿಸಿರುತ್ತೆ.

ಮನುಷ್ಯರನ್ನು ಹುಚ್ಚರೆಂದು ನಿಶ್ಚಯಿಸಿ ಅವರ ದೇಹಗಳಿಗೂ ಸೊತ್ತುಗಳಿಗೂ ಸಂರಕ್ಷಕರನ್ನು ಮೊಕರರು ಮಾಡುವ ವಿಷಯವು, ಅಪ್ರಾಯಸ್ಥರ ಸಂರಕ್ಷಣೆ ಬಗ್ಗೆ ಉಂಟಾದ ರೆಗ್ಯುಲೇಷನಿನ ಒಂದು ಭಾಗವಾಗಿ ಇಟ್ಟುಕೊಳ್ಳೋಣವು ಅನಾನುಕೂಲವಾಗಿರುವದರಿಂದ, ಆ ವಿಷಯವು ಪ್ರತ್ಯೇಕವಾಗಿ ಆಲೋಚಿಸುವದಕ್ಕೋಸ್ಕರ ಉಳಿಸಲ್ಪಟ್ಟಿರುತ್ತೆ. ಅಷ್ಟರೊಳಗೆ 1872ನೇ ವರುಷದ ನೇಮಗಳು ಎಷ್ಟುಮಟ್ಟಿಗೆ ಹುಚ್ಚರಿಗೆ ಸಮ್ಮಂಧಪಡುತ್ತೊ ಅಷ್ಟುಮಟ್ಟಿಗೆ ಸ್ವಸ್ಥವಾಗಿ ನಿಲ್ಲಿಸಿಕೊಳ್ಳಬೇಕಾಗಿರುತ್ತೆಯಾದ್ದರಿಂದ, ಅದು ಷೆಡ್ಯೂಲ ಪಟ್ಟಿಯಲ್ಲಿ ರದ್ದಾಗಿಲ್ಲದಂತೆ ಕಾಣಿಸಲ್ಪಟ್ಟಿರುತ್ತೆ.

1890ನೇ ವರುಷದ VIIIನೇ ಆಕ್ಟಿನ ನಿಯಮಗಳಲ್ಲಿ ಮಾಡಿರುವ ಅನೇಕ ಬದಲಾವಣೆಗಳು, ಒಂದಕ್ಕೆ ಮತ್ತೊಂದನ್ನು ಹೊಂದಿಸುವ ಕ್ರಮದಲ್ಲಿ ಅವಶ್ಯವಿರುವ ಪದಸಮ್ಮಂಧವಾದ ಬದಲಾವಣೆಗಳಾಗಿರುತ್ತವೆ. ಆ ಪೈಕಿ ವಿವರಿಸಬೇಕಾದ ಕೆಲವು ಇದರಡಿ ಸೂಚಿಸಿರುತ್ತೆ.

ಈ ರೆಗ್ಯುಲೇಷನಿನಲ್ಲೆಲ್ಲಾ ಕೋರ್ಟ್ ಆಫ್ ವಾರ್ಡ್ಸಗಳಿಗೂ ಟ್ರಸ್ಟೀಸ್ ಹೈಕೋರ್ಟುಗಳಿಗೂ ಸಮ್ಮಂಧ ಸೂಚನೆಯನ್ನು ಬಿಟ್ಟಿರುತ್ತೆ.

3ನೇ ಪ್ರಕರಣ (1)ನೆ ಕಲಂ "ಅಪ್ರಾಯಸ್ಥ" ಎಂಬುವದರ ಅರ್ಥ ವಿವರಣೆಯು ಇಂಡಿಯನ್ ಆಕ್ಟಿನಲ್ಲಿರುವ ಅದೇ ಪದದ ಅರ್ಥವಿವರಣೆಯು ಬೇರೆಬೇರೆಯಾಗಿದೆ. ಸದರಿ ಆಕ್ಟಿನಲ್ಲಿರುವ ಆ ಪದದ ಅರ್ಥವಿವರಣೆಯು, ಮೈಸೂರಲ್ಲಿ ಜಾರಿ ಇಲ್ಲದಂಥಾ ಇಂಡಿಯನ್ ಮೆಜಾರಿಟಿ ಆಕ್ಟಿಗೆ ಅನುಗುಣವಾಗಿದೆ. ಪರಂತು ಇಲ್ಲಿ ಇರುವ ಆ ಪದದ ಅರ್ಥವಿವರಣೆಯು, ಜಾರಿಯಲ್ಲಿರುವ ಯಾವ ನಿಬಂಧನೆ ಪ್ರಕಾರ "16 ವರುಷದ ವಯಸ್ಸನ್ನು ಪೂರ್ತಿ ಮಾಡದಿರುವ ಪ್ರತಿ ಮನುಷ್ಯನನ್ನು ಅಪ್ರಾಯಸ್ಥನೆಂದು" ಎಣಿಸಬೇಕಾಗಿರುತ್ತೆಯೋ ಆ ನಿಬಂಧನೆಯು ನಿಯಮಗಳಿಗೆ ಅನುಸಾರವಾಗಿರುತ್ತೆ. ಜಾರಿಯಲ್ಲಿರುವ ನಿಬಂಧನೆಯು ನಿಯಮವನ್ನು ಬಿಡುವದರಲ್ಲಿಯೂ, (ಇಂಡಿಯನ್ ಮೆಜಾರಿಟಿ ಆಕ್ಟಿನಂತೆ) ಯಾವ ಅಪ್ರಾಯಸ್ಥನ ಶರೀರಕ್ಕಾಗಲಿ ಅಥವಾ ಸೊತ್ತಿಗಾಗಲಿ ಆತನಿಗೆ 18 ವರುಷದ ವಯಸ್ಸು ಬರುವದಕ್ಕೆ ಮುಂಚೆ ಒಬ್ಬ ಸಂರಕ್ಷಕನು ಕೋರ್ಟಿನವರಿಂದ ಮೊಕರರ್ರಾಗಲ್ಪಡುತ್ತಾನೋ ಅಂಥಾವನ ಪ್ರಾಯದ ವಯಸ್ಸಿಗೂ ಮತ್ತು ಇತರ ಎಲ್ಲಾ ಮನುಷ್ಯರ ಪ್ರಾಯದ ವಯಸ್ಸಿಗೂ ಒಂದು ತಾರತಮ್ಯ ಮಾಡುವದರಲ್ಲಿಯೂ ಸಹ, ಯಾವ ಪ್ರಯೋಜನವೂ ಇಲ್ಲವೆಂದು ಗವರ್ನಮೆಂಟಿನವರು ಎಣಿಸುತ್ತಾರೆ. ಇಂಡಿಯನ್ ಸಕ್ಸೆಷನ್ ಆಕ್ಟಿನ 3ನೇ ಪ್ರಕರಣದಲ್ಲಿರುವ ಅರ್ಥ ವಿವರಣೆಗೂ ಮತ್ತು 1903ನೇ ವರುಷದ ಮೈಸೂರು ರಿಜಿಸ್ಟ್ರೇಷನ್ ರೆಗ್ಯುಲೇಷನಿನ 3ನೇ ಪ್ರಕರಣದಲ್ಲಿರುವ ಅರ್ಥವಿವರಣೆಗೂ, ತಾರತಮ್ಯ ನೋಡಬೇಕು.

1872ನೇ ವರುಷದ ನೇಮಗಳ ಪೈಕಿ 2ನೆ ನೇಮವನ್ನು ನೋಡಬೇಕು.

3ನೇ ಪ್ರಕರಣ, (4)ನೆ ಕಲಂ. ಈ ಕಲಮಿನಲ್ಲಿ ಕೊಟ್ಟಿರುವ "ಡಿಸ್ಟ್ರಿಕ್ಟು ಕೋರ್ಟು" ಎಂಬುವದರ ಅರ್ಥ ವಿವರಣೆಯು 1901ನೇ ವರುಷದ VIIನೇ ನಂಬರಿನ ಸಕ್ಸೆಷನ್ ಸರ್ಟಿಫಿಕೇಟ್ ರೆಗ್ಯುಲೇಷನಿಂದ ತೆಗೆಯಲ್ಪಟ್ಟಿರುತ್ತೆ.

ಅದೇರೀತಿಯಾಗಿ 4ನೇ ಪ್ರಕರಣವೂ ಸಹ ಇರುತ್ತೆ. ಈ ರೆಗ್ಯುಲೇಷನಿನ ಪ್ರಕಾರ ಒಂದು ಡಿಸ್ಟ್ರಿಕ್ಟು ಕೋರ್ಟಿಗೆ ಇರುವ ಉದ್ಯೋಗಗಳು, ಡಿಸ್ಟ್ರಿಕ್ಟು ಕೋರ್ಟಿನ ಕೆಳಗಿನ ಕೋರ್ಟುಗಳಿಗೆ ಕೊಡಲ್ಪಡುವ ಬಗ್ಗೆ ಈ ಪ್ರಕರಣದಲ್ಲಿ ಅವಕಾಶ ಉಂಟುಮಾಡಿರುತ್ತೆ. ಜಾರಿಯಲ್ಲಿರುವ ನೇಮಗಳ ಪ್ರಕಾರ ಸಂರಕ್ಷಕರನ್ನು ಮೊಕರರ್ರು ಮಾಡುವದಕ್ಕೋಸ್ಕರವಾದ ಅರ್ಜಿಗಳನ್ನು ವಿಚಾರಿಸಿ ನಿರ್ಧಾರ ಮಾಡುವದಕ್ಕೆ ಸಬಾರ್ಡಿನೇಟ್ ಜಡ್ಜಿಯವರಿಗೆ ಅಧಿಕಾರ ಕೊಡಲ್ಪಟ್ಟಿರುತ್ತೆ. (3ನೇ ನೇಮದ ನಿಯಮವನ್ನು ನೋಡಬೇಕು.)

ಇದಕ್ಕೆ ಸಮವಾಗಿರುವ ಇಂಡಿಯನ್ ಆಕ್ಟಿನ 52ನೇ ಪ್ರಕರಣವು, ಇಂಡಿಯನ್ ಮೆಜಾರಿಟಿ ಆಕ್ಟಿಗೆ ಸಮ್ಮಂಧಪಡುವದರಿಂದ, ಬಿಡಲ್ಪಟ್ಟಿರುತ್ತೆ.

1890ನೇ ವರುಷದ VIIIನೇ ನಂಬರಿನ ಆಕ್ಟಿನ 53ನೇ ಪ್ರಕರಣದ 2 ಕಲಮೂ ಅದೇರೀತಿಯಲ್ಲಿ ವರ್ಜಿಸಲ್ಪಟ್ಟಿದೆ. ಯಾತಕ್ಕೆಂದರೆ ಅದರಿಂದ ತಿದ್ದುಪಾಟು ಆಗಿರುವ ಸಿವಿಲ್ ಪ್ರೊಸೀಜರ್ ಕೋಡಿನ 464ನೇ ಪ್ರಕರಣವು ಇದರಡಿ ಬರುವ ಕಾರಣಗಳಿಗಾಗಿ ಪ್ರಯೋಗವಾಗತಕ್ಕದ್ದಾಗಿಲ್ಲ. ಅವು ಯಾವವೆಂದರೆ :—

ಮೊದಲನೇದು,—ಸದರಿ ಕೋಡು 1881ನೇ ವರುಷದಲ್ಲಿ ಮೈಸೂರಿಗೆ ಪ್ರಯೋಗ ಮಾಡಲ್ಪಟ್ಟಾಗ, (ಅಪ್ರಾಯಸ್ಥರುಗಳು ಮತ್ತು ಸೇರಿದ ಸ್ವತ್ತುಗಳು ಅವುಗಳನ್ನು ಆಳುವವರಿಂದಾಗಲಿ ಅವರುಗಳ ಮೇಲೆಯಾಗಲಿ ಆಗುವ ದಾವೆಗಳ ಸಮ್ಮಂಧವಾಗಿರುವ) ಸದರಿ ಕೋಡಿನ XXVIIIನೇ ಅಧ್ಯಾಯವು ವರ್ಜಿಸಲ್ಪಟ್ಟಿತ್ತು ; ಎರಡನೆಯದು,—ಅಪ್ರಾಯಸ್ಥರಿಂದಾಗಲಿ ಅಪ್ರಾಯಸ್ಥರ ಮೇಲಾಗಲಿ ಅಥವಾ ಚಿತ್ತಸ್ವಾಸ್ಥ್ಯತೆ ಇಲ್ಲದವರಿಂದಾಗಲಿ ಅಂಥಾವರ ಮೇಲಾಗಲಿ ಆಗುವ ದಾವೆಗಳ ಸಮ್ಮಂಧವಾಗಿ, ಸ್ಥಳೀಕ ನೇಮಗಳ್ಯಾವವೂ ಜಾರಿಯಲ್ಲಿಲ್ಲ. XXVIIIನೇ ಅಧ್ಯಾಯವು "ವಾರ್ಡ್ಸ ಆಫ್ ಕೋರ್ಟ" ಎಂದು ಕರೆಯಲ್ಪಡುವ ಕೋರ್ಟಿನವರ ಸಂರಕ್ಷಣೆಯಲ್ಲಿರುವವರಿಗೆ ಪ್ರಯೋಗವಾಗತಕ್ಕದ್ದಾಗಿ ಈ ರೆಗ್ಯುಲೇಷನಿನಲ್ಲಿ ಉದ್ದೇಶಿಸಲ್ಪಟ್ಟಿದೆಯಾದ್ದರಿಂದಲೂ ಕೂಡ, ಸದರಿ ಕೋಡಿನ 464ನೇ ಮೂಲಪ್ರಕರಣವು ಅನುಪಯುಕ್ತವಾಗಿದೆ. ಆದಕಾರಣ, ಅದು 443ನೇ ಪ್ರಕರಣದ ಎರಡನೆ ಪ್ರಾವಿಸೋ ರದ್ದಾಗುವಂತೆ, ಷೆಡ್ಯೂಲ ಪಟ್ಟಿಯಲ್ಲಿ ಸೇರಿಸಲ್ಪಟ್ಟಿದೆ.

20-11-03 ಕೆ. ಎಸ್. ಚಂದ್ರಶೇಖರ ಅಯ್ಯರ್.

522

ಮೈಸೂರ ಗೆಜೆಟ್.

ಸಂ. 39. ಸರ್ಕಾರದಿಂದ ಛಾಪಿಸಿ ಆದ್ದು. ನಂ. 12.

ಬೆಂಗಳೂರು, ಗುರುವಾರ, ಮಾರ್ಚಿ ತಾ|| 24, ಸನ 1904.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್, ವೈದ್ಯಶಾಸ್ತ್ರ, ಎಜುಕೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜಿಯರು, ಡಿಸ್ಟ್ರಿಕ್ಟು ಡೆಪ್ಯುಟಿಕಮಿಷನರುಗಳು, ಸಬಾರ್ಡಿನೇಟ್ ಜಡ್ಜಿಯರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಿಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಿಗಳು ವಗೈರೆ ಕಾಲಸ್ತಿತೀ ರಿಪೋರ್ಟುಗಳು. ಪೋಸ್ಟಾಫೀಸ ನೋಟಿಸುಗಳು.

3ನೆ ಭಾಗ—ಲೆಜಿಸ್ಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದಪತ್ರಗಳು — ಇಲ್ಲ.

1ನೆ ಭಾಗ

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 9ನೆ ಮಾರ್ಚಿ 1904.

ನಂ. ಲೋ. ಜೋ. ಪಿ. 1214, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನೆಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರುವರಿ 10ನೆ ಮರ್ಯಾಂ 9383—ಪಿ. ಫೈ. 21—96ನೆ ಮತ್ತು 9384—ಪಿ. ಫೈ. 21—96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಚಿಕ್ಕಬಾಣಾವಾರ	ಬೆಂಗಳೂರು	14. ಕಾವರೇಕೆರೆ	ಮಾಗಡಿ
2. ಕಾಚೆಪುರ	ಡಿಟೋ	15. ಕೂಡ್ಲೂರು	ಚನ್ನಪಟ್ಣ
3. ಜೋಳನಾಯಕನಹಳ್ಳಿ	ಡಿಟೋ	16. ದೊಡ್ಡಮಳೂರು	ಡಿಟೋ
4. ಯೆಣ್ಣೂರು	ಡಿಟೋ	17. ವಡ್ಡಯ್ಯನಾಯಿಕನಹಳ್ಳಿ	ಡಿಟೋ
5. ತುಂಗಣಿ	ಕಾನಕಾನಹಳ್ಳಿ	18. ಪೂಜಾರಮ್ಮನಹಳ್ಳಿ	ಹೊಸಕೋಟೆ
6. ನಾರಣಘಟ್ಟ	ಆನೇಕಲ್	19. ಹೆಡಕನಹಳ್ಳಿ	ಡಿಟೋ
7. ಕಾವಲ್ ಹೊಸಹಳ್ಳಿ	ಡಿಟೋ	20. ಅರಳುಮಲ್ಲಿಗೆ	ದೊಡ್ಡಬಳ್ಳಾಪುರ
8. ದೊಮ್ಮಸಂದ್ರ	ಡಿಟೋ	21. ಮಾರಸಂದ್ರ	ಡಿಟೋ
9. ಹಾರಗದ್ದೆ	ಡಿಟೋ	22. ಕೊಡಿಗೇನೂರು ಮತ್ತು ಹೊಸಹಳ್ಳಿ	ಡಿಟೋ
10. ಪಿಲ್ಲಹಳ್ಳಿ	ನೆಲಮಂಗಲ	23. ಲಿಂಗನಹಳ್ಳಿ	ಡಿಟೋ
11. ಧಂಜೆಪಾಳ್ಯ	ಡಿಟೋ	24. ದೊಡ್ಡಬೆಳವಂಗಲ	ಡಿಟೋ
12. ಗುಂಗೊಂಡಹಳ್ಳಿ	ಡಿಟೋ	25. ತಿಮ್ಮನಹಳ್ಳಿ	ದೇವನಹಳ್ಳಿ
13. ಹೊಸಪಾಳ್ಯ	ಮಾಗಡಿ	26. ನಾರಾಯಣಪುರ	ಡಿಟೋ

ತಾರೀಖು 14ನೆ ಮಾರ್ಚ್ 1904.

ನಂ. ಲೋ. ಬೋ. ಪಿ. 1219, ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳಲ್ಲಿ ನಡೆಯುವ ಕೆಳಗೆ ನಮೂದು ಮಾಡಲ್ಪಟ್ಟ ಜಾತ್ರೆಗಳ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಗಳಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ತಾರೀಖು.	
			ಯಾವ ಲಾಗಾಯ್ತು.	ಯಾವ ವರಿವಿಗೆ.
ಉಮಾಮಹೇಶ್ವರ ದೇವರ ಜಾತ್ರೆ ..	ಹಡಸು ಗ್ರಾಮದಲ್ಲಿರುವ ಉತ್ತಮೇಶ್ವರ.	ಕೊಪ್ಪ ..	3—4—04	7—4—04
ದುರ್ಗಮ್ಮನವರ ಜಾತ್ರೆ ...	ಬಮ್ಮಾಪುರ ...	ಡಿಟೋ ...	24—4—04	27—4—04
ರಂಗನಾಥದೇವರ ಜಾತ್ರೆ ...	ಹೊಸಹಳ್ಳಿ ..	ಕಡೂರು ...	31—3—04	4—4—04

ಸನ್ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರ್ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಪ್ರತಿ ಒಂದರ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಮೇಲ್ಕಂಡ ಜಾತ್ರೆಗಳಲ್ಲಿ ಸೇರುವದನ್ನು ಅಡ್ಡಿಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ಜಾತ್ರೆಗಳಿಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 15ನೆ ಮಾರ್ಚ್ 1904.

ನಂ. ಲೋ. ಬೋ. ಪಿ. 1231, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮರ್ಸ್ಯಂ 9383—ಮಿ. ಫ್ಲೈ. 21-96ನೆ ಮತ್ತು 9384—ಮಿ. ಫ್ಲೈ. 21-96ನೆ ನಂಬರು ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1 ಚಿಕ್ಕಮಲ್ಲನ ಹೊಳೆ	ಜಗಳೂರು	4. ಕಾಡಜ್ಜಿ	.. ದಾವಣಗೆರೆ
2. ಲೋಕಿಕೆರೆ	.. ದಾವಣಗೆರೆ	5. ಹರಲಹಳ್ಳಿ	.. ಹರಿಹರ ಸಬ್ ತಾಲ್ಲೂಕ್
3. ಹದಡಿ	.. ಡಿಟೋ	6. ರಾಮಗಿರಿ	.. ಹೊಳಲಕೆರೆ

ತಾರೀಖು 15ನೆ ಮಾರ್ಚ್ 1904.

ನಂ. ಲೋ. ಬೋ. ಪಿ. 1233, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳಲ್ಲಿ ನಡೆಯುವ ಕೆಳಗೆ ನಮೂದು ಮಾಡಲ್ಪಟ್ಟ ಜಾತ್ರೆಗಳ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಗಳಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ತಾರೀಖು.	
			ಯಾವ ಲಾಗಾಯ್ತು.	ಯಾವ ವರಿವಿಗೆ.
ದ್ಯಾಮವ್ಮನ ಜಾತ್ರೆ ..	ಅಗ್ರಹಾರ ಬಾಚಹಳ್ಳಿ	ಕೃಷ್ಣರಾಜಪೇಟೆ	10—4—04	14—4—04
ಛಾಯಾಸೋಮೇಶ್ವರ ತೀರ್ಥಪ್ರಸಾದಾ ..	ಸಾಲಿಗ್ರಾಮ	ಯಡತೊರೆ ..	1—4—04	6—4—04

ಸನ್ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರು ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಪ್ರತಿ ಒಂದರ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರಿ ಜಾತ್ರೆಗಳಲ್ಲಿ ಸೇರುವದನ್ನು ಅಡ್ಡಿಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರಿ ಜಾತ್ರೆಗಳಿಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

529

ತಾರೀಖು 18ನೆ ಮಾರ್ಚಿ 1904.

ನಂ. ಲೋ. ಜೋ. ಪಿ. (A), ಮೈಸೂರು ಡಿಸ್ಟ್ರಿಕ್ಟ್ ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕಿನ ಮೇಲುಕೋಟೆಯಲ್ಲಿ ಪ್ಲೇಗ್ ರೋಗವು ಇರುವದೆಂದು ಮೈಸೂರು ಸೀಮೆಯು ಧನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದಲೂ ಮತ್ತು ಅದರ ವ್ಯಾಪಕವನ್ನು ಅಡ್ಡಿಪಡಿಸಬೇಕಾಗಿರುವದ್ದರಿಂದಲೂ, 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರ್ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರು ಸೀಮೆಯ ಧನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು, 1904ನೆ ಮಾರ್ಚಿ 26ನೆ ತಾರೀಖಿನಲ್ಲಿ ಪ್ರಾರಂಭವಾಗಿ ಅದೇ ತಿಂಗಳು 31ನೆ ತಾರೀಖಿನ ವರೆವಿಗೆ ನಡೆಯುವ ವೈರಮುಡಿ ಉತ್ಸವಕ್ಕೆ ಇತರ ಸ್ಥಳಗಳಿಂದ ಜನಗಳು ಸದರೀ ಸ್ಥಳಕ್ಕೆ ಬರುವದನ್ನು ಅಡ್ಡಿಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ಉತ್ಸವಕ್ಕೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 22ನೆ ಮಾರ್ಚಿ 1904.

ನಂ. ಲೋ. ಜೋ. ಪಿ. 1257, ಕೋಲಾರ ವ ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿರುವ ಇದರಡೀ ಕಂಡ ಸ್ಥಳಗಳಲ್ಲಿ ನಡೆಯುವ ಕೆಳಗೆ ನಮೂದು ಮಾಡಲ್ಪಟ್ಟ ಜಾತ್ರೆಗಳ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಗಳಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಧನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ತಾರೀಖು.	
			ಯಾವ ಲಾಗಾಯತು.	ಯಾವ ವರೆವಿಗೆ.
ಕೋಲಾರ ಡಿಸ್ಟ್ರಿಕ್ಟ್.				
ಕೈವಾರ ನಾರೇಣಪ್ಪನ ಜಾತ್ರೆ ...	ಕೈವಾರ ...	ಚಿಂತಾಮಣಿ ...	29—4—04	3—5—04
ಗಂಗದೇವಿಯ ಜಾತ್ರೆ ...	ಮೈಲೂರು ...	ಸಿಡ್ಲಘಟ್ಟ ...	5—4—04	12—4—04
ಪಟಾಲಮ್ಮನ ರಥೋತ್ಸವ ...	ವರದನಾಯಕನ ಹಳ್ಳಿ	ಡಿಟೋ	ಡಿಟೋ	13—4—04
ಗಂಗಾದೇವಿಯ ಪರಸೆ ...	ಬೋಡಗುಂಟೆ	ಡಿಟೋ	10—4—04	18—4—04
ಶ್ರೀ ಕೋದಂಡರಾಮಸ್ವಾಮಿಯ ರಥೋತ್ಸವ.	ಮುಲ್ಲೂರು	ಶ್ರೀನಿವಾಸಪುರ ...	30—3—04	9—4—04
ಶ್ರೀ ವೆಂಕಟರಮಣಸ್ವಾಮಿಯ ರಥೋತ್ಸವ.	ರೋಣೂರು ...	ಡಿಟೋ	9—4—04	18—4—04
ಶಿವಮೊಗ್ಗ ಡಿಸ್ಟ್ರಿಕ್ಟ್.				
ರೇಣುಕಮ್ಮನ ರಥೋತ್ಸವ ...	ಚಂದ್ರಗುತ್ತಿ ...	ಸೊರಬ ...	7—4—04	12—4—04

ಸನ್ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರ್ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರು ಸೀಮೆಯ ಧನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಪ್ರತಿ ಬಂದರ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಮೇಲ್ಕಂಡ ಜಾತ್ರೆಗಳಿಗೆ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಅಡ್ಡಿಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ಜಾತ್ರೆಗಳಿಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 22ನೆ ಮಾರ್ಚಿ 1904.

ನಂ. ಲೋ. ಬೋ. ಪಿ. 1259, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಉತ್ಸವಕ್ಕೆ ಯಾತ್ರಾರ್ಥವಾಗಿ ಹೋಗುವದನ್ನು ಮದರಾಸು ಗವರ್ನಮೆಂಟಿನವರು ಅಜ್ಞೀಪಡಿಸುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಥಾರಿಟಿ.
				ಯಾವ ಲಾಗಾಯತು.	ಯಾವ ವರಿವಿಗೆ.	
ರಥೋತ್ಸವ.	ನಾಮಕಲ್ ...	ನಾಮಕಲ್ ...	ಸೇಲಂ...	18—3—04	5—4—04	ಫಸ್ಟ್ ಅಸಿಸ್ಟೆಂಟ್ ಸೆಕ್ರಿಟರಿಯವರ ಎಂಡಾರ್ಸ್ಮೆಂಟ್ ನಂ. 428—ಪಿ., ತಾ|| 16-3-04

ತಾರೀಖು 22ನೆ ಮಾರ್ಚಿ 1904.

ನಂ. ಲೋ. ಬೋ. ಪಿ. 1260, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸಾರ 18.8ನೆ ಫೆಬ್ರವರಿ 10ನೆ ಮರ್ಯಾಂ 9383 ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಕೋಲಾರ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಜಂಗಮಕೋಟೆ ..	ಶಿಡ್ಲಘಟ್ಟ	13. ಚನ್ನಗಿರಾಯಪುರ	ಮಾಲೂರು
2. ಕಾಲನಾಯಕನಹಳ್ಳಿ ..	ಡಿಟೋ	14. ಅಪ್ಪಪ್ಪನಹಳ್ಳಿ ...	ಡಿಟೋ
3. ಚೊಕ್ಕೊಂಡಹಳ್ಳಿ ..	ಡಿಟೋ	15. ಹೊಸಕೋಟೆ ...	ಡಿಟೋ
4. ಯನ್ನೂರು ...	ಡಿಟೋ	16. ಮಡಿವಾಳ ..	ಡಿಟೋ
5. ಎಡ್ಗೋಡು ..	ಡಿಟೋ	17. ಕರರಿದೇವನಹಳ್ಳಿ ..	ಚಿಕ್ಕಬಳ್ಳಾಪುರ
6. ಬಾಚಹಳ್ಳಿ ..	ಡಿಟೋ	18. ಅಡ್ಡಗಲಹಳ್ಳಿ ...	ಡಿಟೋ
7. ಕಾಮಸಂದ್ರ ...	ಬೌರಿಂಗ್‌ಪೇಟೆ	19. ಹೊನ್ನಪ್ಪನಹಳ್ಳಿ ..	ಡಿಟೋ
8. ಚಿಕ್ಕನಲ್ಲಾಗುಟ್ಟಪಲ್ಲಿ ...	ಡಿಟೋ	20. ಕಾಚೂರು ..	ಡಿಟೋ
9. ಕಾಮನಪಲ್ಲಿ ..	ಡಿಟೋ	21. ಮರಳಕುಂಟೆ ..	ಡಿಟೋ
10 ಸಾಲಿಕುಂಟೆ ..	ಡಿಟೋ	22. ದೊಡ್ಡರಾಗಲದಿಂಪೆ	ಶ್ರೀನಿವಾಸಪುರ
11. ದೇವರಡ್ಡಿಪಲ್ಲಿ ...	ಬಾಗೇಪಲ್ಲಿ	23. ಎತಂಡಹಳ್ಳಿ ..	ಗೋರಿಬಿದನೂರು
12. ಚಿಂತಕಾಯಲಪಲ್ಲಿ ..	ಗುಡಿಬಂಡೆ ಸಬ್ ತಾ||		

ಕಡೂರು ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಸರಸ್ವತೀಪುರ ...	ಕಡೂರು	5. ಚೆನ್ನಾಪುರ ...	ಕಡೂರು
2. ಯಗಟಿ ..	ಡಿಟೋ	6. ಅತ್ತಿಗನಾಳ್ ..	ತರೀಕೆರೆ
3. ದಲ್ಲಿಬಲಕೆ ...	ಡಿಟೋ	7. ಅತ್ತಿಮೊಗೆ ...	ಡಿಟೋ
4. ಕೋಡಿಹಳ್ಳಿ ...	ಡಿಟೋ	8. ಮಯಂದ್ರ ...	ಡಿಟೋ

ತಾರೀಖು 23ನೆ ಮಾರ್ಚಿ 1904.

ನಂ. ಲೋ. ಬೋ. ಪಿ. 1266, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಉತ್ಸವಕ್ಕೆ ಮೈಸೂರು ಸಂಸ್ಥಾನ ಸಹಿತವಾಗಿ ರೋಗ ತಗಲಿದ ಪ್ರದೇಶಗಳಿಂದ ಬರಲು ಉದ್ದೇಶಿಸಿರುವ ಜನಗಳಿಗೆ ಟಿಕೆಟ್ಟುಗಳು ಕೊಡುವದನ್ನು ಮದರಾಸು ಗವರ್ನಮೆಂಟಿನವರು ಅಜ್ಞೀಪಡಿಸುತ್ತಾರೆ:—

ಜಾತ್ರೆಯ ಉತ್ಸವದ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ಟಿಕೆಟ್ಟುಗಳು ವಿಕ್ರಯಿಸಲ್ಪಡದೆ ಇರುವ ತಾರೀಖುಗಳು ವ ಸ್ಟೇಷನ್‌ಗಳು.			ಅಥಾರಿಟಿ.
				ಯಾವ ಲಾಗಾಯತು.	ಯಾವ ವರಿವಿಗೆ.	ಸ್ಟೇಷನ್‌ಗಳು.	
ಶ್ರೀ ದೇವರಾಜಸ್ವಾಮಿಯ ಬ್ರಹ್ಮೋತ್ಸವ.	ಕಾಂಜೀವರಂ.	ಕಾಂಜೀವರಂ.	ಚೆಂಗಲ್ಪಟ್.	20—5—04	10—6—04	ಮದ್ರಾಸು ರೈಲ್ವೆಯಲ್ಲಿರುವ ಅರ್ಕೋಣಂ ಮತ್ತು ದಕ್ಷಿಣ ಇಂಡಿಯಾ ರೈಲ್ವೆಯಲ್ಲಿರುವ ಅರ್ಕೋಣಂ, ಪಲ್ಲೂರು, ಕಾಂಜೀವರಂ, ವಾಲಾಜಾಬಾದ್ ಮತ್ತು ವಿಲಿಯಂಬಾಕಂ*	ಫಸ್ಟ್ ಅಸಿಸ್ಟೆಂಟ್ ಸೆಕ್ರಿಟರಿಯವರ ಎಂಡಾರ್ಸ್ಮೆಂಟ್ ನಂ. 446—ಪಿ., ತಾ|| 22-3-04

* ಸೇಲಂ, ಕೊಯಿಮತ್ತೂರು, ಉತ್ತರ ಆರ್ಕಾಡು, ಬಳ್ಳಾರಿ ಮತ್ತು ಅನಂತಪುರ ಡಿಸ್ಟ್ರಿಕ್ಟುಗಳಲ್ಲಿ ಟಿಕೆಟ್ಟುಗಳು ವಿಕ್ರಯಿಸಲ್ಪಡುವದು ಅಜ್ಞೀಪಡಿಸಲ್ಪಟ್ಟಿರುತ್ತದೆ.

ತಾರೀಖು 22ನೆ ಮಾರ್ಚಿ 1904.

ನಂ. ಲೋ. ಬೋ. ಪಿ. 1262, ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳಲ್ಲಿ ನಡೆಯುವ ಕೆಳಗೆ ನಮೂದು ಮಾಡಲ್ಪಟ್ಟ ಜಾತ್ರೆಗಳ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಗಳಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮರ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ತಾರೀಖು.	
			ಯಾವ ಲಾಗಾಯತು.	ಯಾವ ವರಿವಿಗೆ.
ಶ್ರೀ ಗಡಿದಂ ವೆಂಕಟರಮಣಸ್ವಾಮಿಯ ಜಾತ್ರೆ.	ದೇವರಗುಡಿಪಲ್ಲಿ ...	ಬಾಗೆಪಲ್ಲಿ ..	23—4—04	8—5—04
ವೆಂಕಟರಮಣಸ್ವಾಮಿ ದನಗಳ ಪರಿಸೆ	ಚಿಕ್ಕ ತಿರುಪತಿ ..	ಮಾಲೂರು ..	24—3—04	3—4—04
ಭೂವತಮ್ಮ ದನಗಳ ಪರಿಸೆ ...	ಉಲ್ಲರಹಳ್ಳಿ ..	ಡಿಟ್ಟೋ ...	22—3—04	5—4—04

ಸ್ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ 2ನೆ ನಂಬರ್ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮರ್ ಮಹಾರಾಜಾ ಸರ್ಕಾರದವರು ಪ್ರತಿ ಒಂದರ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಮೇಲ್ಕಂಡ ಜಾತ್ರೆಗಳಿಗೆ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಅಡ್ಡಿಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ಜಾತ್ರೆಗಳಿಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 23ನೆ ಮಾರ್ಚಿ 1904.

ನಂ. ಲೋ. ಬೋ. ಪಿ. 1267, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಉತ್ಸವಗಳಿಗೆ ಯಾತ್ರಾರ್ಥವಾಗಿ ಹೋಗುವದನ್ನು ಮದರಾಸು ಗವರ್ನ್ಮೆಂಟಿನವರು ಅಡ್ಡಿಪಡಿಸುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಥಾರಿಟಿ.	ಷರಾ.
				ಯಾವ ಲಾಗಾಯತು.	ಯಾವ ವರಿವಿಗೆ.		
ಅವನಾಷಿ ರಥೋತ್ಸವ ಮತ್ತು ದನಗಳ ಪರಸೆ	ಅವನಾಷಿ	ಪಲ್ಲಡಂ	ಕೊಯಿಮುತ್ತೂರು	1—5—04	10—5—04	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟ್ರವರ ಎಂಡಾರ್ಸ್ಮೆಂಟ್ ನಂ. 440-ಪಿ, ತಾ|| 22-3-04	ದನಗಳ ಪರಸೆ ನಡೆಯುವದು ಅಡ್ಡಿಪಡಿಸಲ್ಪಟ್ಟಿರುತ್ತದೆ
ಕೈಲಾಸನಾಥಸ್ವಾಮಿಯ ರಥೋತ್ಸವ	ಬೇರಿಕೆ	ಹೊಸೂರು	ಸೇಲಂ	19—3—04	4—4—04	ಡಿಟ್ಟೋ 450-ಪಿ, ತಾ|| 22—3—04	
ಧರ್ಮರಾಜ ಉತ್ಸವ	ಕೆಡಿಪ್ಪಪಲ್ಲಿ	ಡಿಟ್ಟೋ	ಡಿಟ್ಟೋ	26—2—04	7—4—04	ಡಿಟ್ಟೋ 452-ಪಿ, ತಾ|| 22—3—04	
ರಥೋತ್ಸವ ...	ಮಾತ್ತುಗನಪಲ್ಲಿ	ಡಿಟ್ಟೋ	ಡಿಟ್ಟೋ	22—3—04	3—4—04	ಡಿಟ್ಟೋ 454-ಪಿ, ತಾ|| 22—3—04	
ವೆಂಕಟರಮಣಸ್ವಾಮಿಯ ರಥೋತ್ಸವ	ಗೋಪ್ಪಸಂದ್ರಂ	...	...	19—3—04	2—4—04	ಡಿಟ್ಟೋ	

ತಾರೀಖು 23ನೆ ಮಾರ್ಚಿ 1904.

ನಂ. ಲೋ. ಜೋ. ಪಿ. 1268, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಾತ್ರೆ ವ ಉತ್ಸವಗಳಿಗೆ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮದರಾಸು ಗವರ್ನ್ಮೆಂಟಿನವರು ಅಡ್ಡಿ ಪಡಿಸುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಥಾರಿಟಿ.	ಷರಾ.
				ಯಾವ ಲಗಾಯತು.	ಯಾವ ವರೆವಿಗೆ.		
ಕುಂತಂಪಾರ್ ಸ್ವಾಮಿಯ ಉತ್ಸವ ಮತ್ತು ದನಗಳ ಪರಸೆ.	ಕೂವಗಂ	ತಿರುಕ್ಕೊಯಿಲೂರು	ದಕ್ಷಿಣಾರ್ಕಾಡ್	6-4-04	27-4-04	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎಂಡಾರ್ಸ್ಮೆಂಟ್ ನಂ. 442-ಪಿ., ತಾ॥ 22-3-04	ಕೂವಗಂಯಲ್ಲಾಗಲಿ ಯಾ ಅದರ ಸುತ್ತುಮುತ್ತಲು 5 ಮೈಲಿಯಲ್ಲಿರುವ ಯಾವ ಗ್ರಾಮಗಳಲ್ಲಾಗಲಿ ದನಗಳ ಪರಸೆ ನಡೆಯುವದು ಅಡ್ಡಿಪಡಿಸಲ್ಪಟ್ಟಿರುತ್ತದೆ.
ನರಸಿಂಹಸ್ವಾಮಿಯ ಉತ್ಸವ ಮತ್ತು ದನಗಳ ಪರಸೆ.	ಪರಿಕಲ್	ಡಿಟೋ	ಡಿಟೋ	25—4—04	7—5—04	ಡಿಟೋ ನಂ. 444-ಪಿ., ತಾ॥ 22-3-04	ಪರಿಕಲ್ಲಾಗಲಿ ಯಾ ಅದರ ಸುತ್ತುಮುತ್ತಲು 5 ಮೈಲಿಯಲ್ಲಿರುವ ಯಾವ ಗ್ರಾಮಗಳಲ್ಲಾಗಲಿ ದನಗಳ ಪರಸೆ ನಡೆಯುವದು ಅಡ್ಡಿಪಡಿಸಲ್ಪಟ್ಟಿರುತ್ತದೆ.
ಶ್ರೀ ದೇವರಾಜಸ್ವಾಮಿಯ ಬ್ರಹ್ಮೋತ್ಸವ.	ಕಾಂಜೀವರಂ	ಕಾಂಜೀವರಂ	ಚೆಂಗಲ್ಪಟ್	20—5—04	10—6—04	ಡಿಟೋ ನಂ. 446-ಪಿ., ತಾ॥ 22-3-04	
ಸಂಗಮೇಶ್ವರಸ್ವಾಮಿಯ ರಥೋತ್ಸವ.	ಕೊಟ್ಟಚೆರುವು	ಪೆನಕೊಂಡ	ಅನಂತಪುರ	23—4—04	5—5—04	ಡಿಟೋ ನಂ. 448-ಪಿ., ತಾ॥ 22-3-04	

ತಾರೀಖು 4ನೆ ಮಾರ್ಚಿ 1904.

ನಂ. 3347—ಲೋ. ಫಂ. 78-03, ಸ್ 1903ನೆ ಸೆಪ್ಟೆಂಬರ್ 9ನೆ ಮುರ್ತಿಂ 30-ಲೆಜಿಸ್. 4-03ನೆ ನಂಬರ್ ಇಸ್ತಿಹಾರ್ನಾಮೆಯೊಡನೆ ಘಾಯಿಷಾದ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ 7ನೆ ಪ್ರಕರಣದಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ತಾಲ್ಲೂಕು ಬೋರ್ಡುಗಳಿಗೋಸ್ಕರ ಮೊಕರರ್ಮಾಡಲ್ಪಟ್ಟ ಮೆಂಬರುಗಳ ಪಟ್ಟಿ :—

1. ಮದ್ದಗಿರಿ ತಾಲ್ಲೂಕು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು ... ಪ್ರೆಸಿಡೆಂಟರು.
2. ತಾಲ್ಲೂಕಿನ ಅಮಲ್ದಾರು ... .. ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪತ್ರೆ ಅಸಿಸ್ಟೆಂಟರು .. ಮೆಂಬರು.
4. ತುಮಕೂರಲ್ಲಿರುವ ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು .. ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5. ಮ॥ ವ್ಯಾಸಪ್ಪಾಜಿ ಚಿಕ್ಕಣ್ಣನವರು .. . ಡಿಟೋ
6. „ ಸ್ವಾಮಂದೆಹಳ್ಳಿ ಚಿಕ್ಕೆಗೌಡರು .. .. ಡಿಟೋ
7. „ ಗರಣಿ ರಾಮಾಚಾರು .. .. ಡಿಟೋ
8. „ ಹನುಮಂತಪುರ ವೆಂಕಟರಂಗಪ್ಪಯವರು .. .. ಡಿಟೋ

(*f*) ಕ್ಲಾಜ್ ಅನುಸರಿಸಿ.

9. ಮ|| ಪ್ಲೀಡರ್ ಅಚ್ಯುತರಾಯರು .. .. ಮೆಂಬರು.

(*g*) ಕ್ಲಾಜ್ ಅನುಸರಿಸಿ.

10. ,, ಲಾಲ್ ಅಹಮ್ಮದ್‌ಸಾಬರು ... . ಡಿಟೋ
11. ,, ಸಂಗಣ್ಣನವರು .. .. .. ಡಿಟೋ
12. ,, ಜಿ. ಶಿವರಂಗಯ್ಯನವರು ... ... ಡಿಟೋ

2. ಕೊರಟಗೆರೆ ಸಬ್ ತಾಲ್ಲೂಕು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ಸಬ್ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು ಪ್ರೆಸಿಡೆಂಟರು.
2. ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರು ... ... ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು ಮೆಂಬರು.
4. ತುಮಕೂರಲ್ಲಿರುವ ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು ... ಡಿಟೋ

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

5. ಮ|| ರಾಮಪುರ ಶಾನಭೋಗ ಹಂಪಣ್ಣಯ್ಯನವರು .. ಡಿಟೋ
6. ,, ಶಾಂಭೂರ್ ಸಂಜೀವಪ್ಪನವರು ... . ಡಿಟೋ
7. ,, ಹೊಳವನಹಳ್ಳಿ ಅಬಿದ್ ಅಲಿಸಾಹೇಬರು ... ... ಡಿಟೋ
8. ,, ತೋವಿನಕೆರೆ ನೇಮಿರಾಜಶೆಟ್ಟರು ... .. ಡಿಟೋ

(*f*) ಕ್ಲಾಜ್ ಅನುಸರಿಸಿ.

9. ,, ಯಜಮಾನ್ ಶಂಕರಯ್ಯನವರು ... .. ಡಿಟೋ

(*g*) ಕ್ಲಾಜ್ ಅನುಸರಿಸಿ.

10. ,, ಚೆನ್ನಬಸವರಾಧ್ಯರು .. .. ಡಿಟೋ
11. ,, ಜವರಾಯಗೌಡರು ... ... ಡಿಟೋ
12. ,, ಶ್ರೀವತ್ಸ ರಂಗಾಚಾರ್ರು .. .. .. ಡಿಟೋ

ತಾರೀಖು 4ನೆ ಮಾರ್ಚಿ 1904.

ನಂ. 3351—ಲೋ. ಫಂ. 79—03, ಸನ್ 1903ನೆ ಸೆಪ್ಟೆಂಬರ್ 9ನೆ ಮತ್ತು 30—ಲೆಜಿಸ್. 4-03ನೇ ನಂಬರ್ ಅಧಿಕಾರ್ನಾಮೆಯೊಡನೆ ಪ್ರಚುರವಾದ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ 7ನೆ ಪ್ಯಾರಾದಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ಕಂಡ ತಾಲ್ಲೂಕು ಬೋರ್ಡುಗಳಿಗೋಸ್ಕರ ನೇಮಕರಮಾಡಲ್ಪಟ್ಟ ಮೆಂಬರುಗಳ ಪಟ್ಟಿ :—

1. ಮೈಸೂರು ತಾಲ್ಲೂಕು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟರು.
2. ಅಮಲ್ದಾರು, ವೈಸ್ ಪ್ರೆಸಿಡೆಂಟರು.
3. ಸೀನಿಯರ್ ಮೆಡಿಕಲ್ ಆಫೀಸರು, ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು, ಮೆಂಬರು.

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

5. ಮ|| ಶ್ರೀನಿವಾಸ ಜೋಯಿಸರು, ಮೆಂಬರು ಮತ್ತು ಜಮೀನ್ದಾರು.
6. ,, ಗುರುಕಾರ್ ಪುಟ್ಟಪ್ಪನವರು, ಡಿಟೋ ಇನಾಂದಾರು.
7. ,, ಲಿಂಗೇಗೌಡರು, ಡಿಟೋ ಪಟೇಲರು ಮತ್ತು ಜಮೀನ್ದಾರು.
8. ,, ಅನಂತಯ್ಯನವರು, ಡಿಟೋ ಶಾನಭೋಗರು ಮತ್ತು ಜಮೀನ್ದಾರು.

(*f*) ಕ್ಲಾಜ್ ಅನುಸರಿಸಿ.

9. ,, ವಿ. ರಾಘವಾಚಾರ್ರು, ಡಿಟೋ ಅಡ್ವೋಕೇಟರು.

(*g*) ಕ್ಲಾಜ್ ಅನುಸರಿಸಿ.

10. ,, ಸುಬ್ಬಾದೀಕ್ಷಿತರು, ಡಿಟೋ ಶಾನಭೋಗರು ಮತ್ತು ಜಮೀನ್ದಾರು.
11. ,, ಶಾಮಣ್ಣನವರು, ಮೆಂಬರು, ಶಾನಭೋಗರು ಮತ್ತು ಜಮೀನ್ದಾರು.
12. ,, ನಂಜೇಗೌಡರು, ಡಿಟೋ ಜಮೀನ್ದಾರು.

2. ಗುಂಡ್ಲುಪೇಟೆ ತಾಲ್ಲೂಕು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟರು.
2. ಅಮಲ್ದಾರು, ವೈಸ್ ಪ್ರೆಸಿಡೆಂಟರು.
3. ತಾಲ್ಲೂಕಿನ ಹೆಡ್‌ಕ್ವಾರ್ಟರ್ಸಿನಲ್ಲಿರುವ ಡಿಸ್ಪೆನ್ಸರಿಯ ಚಾರ್ಜಿನ ಆಸ್ಪಿಟಲ್ ಅಸಿಸ್ಟೆಂಟರು, ಮೆಂಬರು.
4. ಪಬ್ಲಿಕ್‌ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು, ಮೆಂಬರು.

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5. ಮೆ|| ಕಾಳಪ್ಪನವರು, ಮೆಂಬರ್, ಪಟೇಲರು ಮತ್ತು ಜಮೀನ್ದಾರು.
6. ,, ವಳಹಟ್ಟಿ ದೇವಪ್ಪನವರು, ಡಿಟೋ ವರ್ತಕರು ಮತ್ತು ಜಮೀನ್ದಾರು.
7. ,, ಕೋಟೆಕೆರೆ ಭುಜಂಗಯ್ಯನವರು, ಡಿಟೋ ಜಮೀನ್ದಾರು.
8. ,, ಮುದುಗೂಡು ಪುಟ್ಟವೀರತಯ್ಯನವರು, ಡಿಟೋ ಜಮೀನ್ದಾರು.

(f) ಕ್ಲಾಜ್ ಅನುಸರಿಸಿ.

9. ,, ಗುರುಮೂರ್ತಪ್ಪನವರು, ಡಿಟೋ ಜಮೀನ್ದಾರು.

(g) ಕ್ಲಾಜ್ ಅನುಸರಿಸಿ.

10. ,, ಪೀರ್ ಸಾಹೇಬರು, ಡಿಟೋ
11. ,, ಬೊಂಮಲಾಪೂರ್ ಹುಚ್ಚಯ್ಯನವರು, ಡಿಟೋ ಪಟೇಲರು ಮತ್ತು ಜಮೀನ್ದಾರು.
12. ,, ಬಾಚಹಳ್ಳಿ ಜಗನ್ನಾಥಯ್ಯನವರು, ಡಿಟೋ

3. ಹೆಗ್ಗಡದೇವನಕೋಟೆ.

ಎಕ್ಸ್ ಆಫಿಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು, ಪ್ರೆಸಿಡೆಂಟರು.
2. ಅಮಲ್ದಾರು, ವೈಸ್ ಪ್ರೆಸಿಡೆಂಟರು.
3. ತಾಲ್ಲೂಕು ಹೆಡ್‌ಕ್ವಾರ್ಟರಿನ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು, ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು, ಮೆಂಬರು.

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5. ಮೆ|| ವೆಂಕಟರಾಯರು, ಮೆಂಬರ್, ಪಟೇಲರು.
6. ,, ಮಳಲಿ ಸುಬ್ಬಣ್ಣನವರು, ಡಿಟೋ
7. ,, ಲಕ್ಷ್ಮೀನಾರಣಪ್ಪನವರು, ಡಿಟೋ ಶಾನಭೋಗರು.
8. ,, ಎಂ. ಸುಬ್ಬರಾಯರು, ಡಿಟೋ ಡಿಟೋ

(f) ಕ್ಲಾಜ್ ಅನುಸರಿಸಿ

9. ,, ಪ್ರಭುಕೋಟೆ ಸುಬ್ಬರಾಯರು, ಡಿಟೋ

(g) ಕ್ಲಾಜ್ ಅನುಸರಿಸಿ.

10. ,, ದಾಸೆಗೌಡರು, ಡಿಟೋ ಪಟೇಲರು.
11. ,, ರಾಜೆ ಅರಸಿನವರು, ಡಿಟೋ ಡಿಟೋ
12. ,, ಸೈಯದ್ ಅಬ್ದುಲ್‌ರಹೀಂ ಯವರು, ಡಿಟೋ ವರ್ತಕರು ಮತ್ತು ಜಮೀನ್ದಾರು.

ತಾರೀಖು 11ನೆ ಮಾರ್ಚಿ 1904.

ನಂ. 3457—ಲೋ. ಫಂ. 79-03, ಸನ್ 1903ನೆ ಸೆಪ್ಟಂಬರ್ 9ನೆ ಮುದ್ರಾಂ 30-ಲೆಜಿಸ್. 4-03ನೆ ನಂಬರ್ ಇಸ್ತಿಹಾರ್ನಾಮೆಯೊಡನೆ ಪ್ರಾಯಿಷಾದ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ 7ನೆ ಪ್ಯಾರಾವಿನಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ಮೈಸೂರು ಡಿಸ್ಟ್ರಿಕ್ಟಿನ ಯಡತೊರೆ ತಾಲ್ಲೂಕು ಬೋರ್ಡಿಗೋಸ್ಕರ ಮೊಕರರ್ರು ಮಾಡಲ್ಪಟ್ಟ ಮೆಂಬರುಗಳ ಪಟ್ಟಿ :—

ಎಕ್ಸ್ ಆಫಿಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು .. ಪ್ರೆಸಿಡೆಂಟರು.
2. ಅಮಲ್ದಾರು .. .. ವೈಸ್ ಪ್ರೆಸಿಡೆಂಟರು.
3. ತಾಲ್ಲೂಕು ಹೆಡ್‌ಕ್ವಾರ್ಟರಿನಲ್ಲಿನ ಡಿಸ್ಪೆನ್ಸರಿ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು .. ಡಿಟೋ

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

5. ಮೆ|| ಬಾದಾಂ ರಂಗಶೆಟ್ಟರು, ವರ್ತಕರು ... ... ಮೆಂಬರು.
6. ,, ಲಕ್ಷ್ಮೆಗೌಡರು, ಜಮೀನ್ದಾರು ... ... ಡಿಟೋ.
7. ,, ಮಲ್ಲಿಕಾರ್ಜುನಯ್ಯನವರು, ವರ್ತಕರು ... ... ಡಿಟೋ.
8. ,, ಹನುಮೆಗೌಡರು, ಜಮೀನ್ದಾರು ... ... ಡಿಟೋ.

(*f*) ಕ್ಲಾಜ್ ಅನುಸರಿಸಿ.

9. ,, ಸುಬ್ಬರಾಯರು, ಸ್ಟಾಂಪು ವೆಂಡರು ... ... ಡಿಟೋ.

(*g*) ಕ್ಲಾಜ್ ಅನುಸರಿಸಿ.

10. ,, ಸೈಯದ್ ಅಹಮ್ಮದ್ ಸಾಹೇಬರು, ವರ್ತಕರು ಮತ್ತು ಜಮೀನ್ದಾರು ... ಡಿಟೋ.
11. ,, ಕೃಷ್ಣರಾಯರು, ಜಹಗೀರ್ದಾರು ... ... ಡಿಟೋ.
12. ,, ಲಿಂಗೆಗೌಡರು, ಪಟೇಲರು ಮತ್ತು ಜಮೀನ್ದಾರು ... ... ಡಿಟೋ.

ತಾರೀಖು 15ನೆ ಮಾರ್ಚಿ 1904.

ನಂ. 3511—ಲೋ. ಫಂ. 78—03, ಸನ್ 1902ನೆ ಇಸವಿಯ IIನೆ ನಂಬರ್ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ಮತ್ತು 1903ನೆ ಸೆಪ್ಟಂಬರ್ ನೆ ಮರ್ಕ್ಯುಂ 30—ಲೆಜಿಸ್. 4—03ನೆ ನಂಬರ್ ಇಸ್ತಿಹಾರ್ನಾಮೆಯೊಡನೆ ಪ್ರಾಯಿಷ್ ಆದ ರೂಲುಗಳ 7ನೆ ಸೆಕ್ಷನ್ ಅನುಸರಿಸಿ ಸೀರಾ ತಾಲ್ಲೂಕು ಬೋರ್ಡಿಗೆ ಇದರಡಿ ಕಂಡ ಮೆಂಬರುಗಳನ್ನು ಉಂಟಾಗಿರತಕ್ಕದ್ದು:—

ಎಕ್ಸ್ ಅಫೀಷಿಯೋ ಮೆಂಬರುಗಳು.

1. ಸೀರಾ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು ... ಪ್ರೆಸಿಡೆಂಟರು.
2. ತಾಲ್ಲೂಕಿನ ಅಮಲ್ದಾರು ... ವೈಸ್ ಪ್ರೆಸಿಡೆಂಟರು.
3. ಸೀರಾದಲ್ಲಿನ ಲೋಕಲ್ ಫಂಡ್ ಡಿಸ್ಪೆನ್ಸೆರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು ... ಡಿಟೋ.

ಇತರ ಮೆಂಬರುಗಳು.

(*e*) ಕ್ಲಾಜು ಅನುಸರಿಸಿ.

5. ಮೆ|| ಅಗಳಿ ವೆಂಕಟರಾಮಯ್ಯನವರು ... ... ಮೆಂಬರು.
6. ,, ಲಿಂಗಗೌಡರು ಪುರೋಹಿತ ಅಪ್ಪಣ್ಣಗೌಡರು ... ... ಡಿಟೋ.
7. ,, ದೊಡ್ಡ ಮಲ್ಲಯ್ಯನವರು ... ... ಡಿಟೋ.
8. ,, ಬರಗೂರ ನಂಜುಂಡಯ್ಯನವರು ... ... ಡಿಟೋ.

(*f*) ಕ್ಲಾಜು ಅನುಸರಿಸಿ.

9. ಸೀರಾ ಮ್ಯುನಿಸಿಪಲ್ ಬೋರ್ಡಿನ ಮೆಂಬರಾದ ಮೆಸ್ಟರ್ ಬಿ. ನಾರಣಯ್ಯಂಗಾರು ಡಿಟೋ.

(*g*) ಕ್ಲಾಜು ಅನುಸರಿಸಿ.

10. ಮೆ|| ಬಡೇಸಾಹೇಬರು ... ... ಡಿಟೋ.
11. ,, ಕಾಳೇಗೌಡರು ... ... ಡಿಟೋ.
12. ,, ದೊಡ್ಡ ರಂಗೇಗೌಡರು ... ... ಡಿಟೋ.

ತಾರೀಖು 11ನೆ ಮಾರ್ಚಿ 1904.

ನಂ. ಜ. 4505½, ಕೆಲಸದಿಂದ ನಿವೃತ್ತರಾದ ಮೆ|| ವಿ. ಪಿ. ಮಾಧವರಾವ್, ಸಿ. ಐ. ಇ. ಯವರಿಗೆ ಬದಲಾಗಿ ಮೆ|| ಟಿ. ಆನಂದರಾವ್, ಬಿ. ಎ. ಯವರು ಮೈಸೂರು ಲ್ಯಾಂಡು ರೆವಿನ್ಯೂ ಕೋಡಿನ 4ನೆ ಸೆಕ್ಷನ್ ಅನುಸರಿಸಿ ರೆವಿನ್ಯೂ ಕಮಿಷನರಾಗಿ ನೌಕರೂರು ಮಾಡಲ್ಪಟ್ಟಿರುತ್ತಾರೆ.

ತಾರೀಖು 21ನೆ ಮಾರ್ಚಿ 1904.

ನಂ. 3584—ಲೋ. ಫಂ. 69—97, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನೆಂದರೆ, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ಕಂಡ ಇನ್ಸ್ಪೆಕ್ಷನ್ ಬಂಗ್ಲೆಗಳು ಮೂರನೇ ಕ್ಲಾಸಿನ ಮುಸಾಫರ್ ಬಂಗ್ಲೆಗಳಾಗಿ ಬದಲಾಯಿಸಲ್ಪಟ್ಟಿರುತ್ತವೆ:—

1. ಯಡತೊರೆಯಲ್ಲಿರುವ ಲೋವರ್ ಬಂಗ್ಲೆ.
2. ಶ್ರೀರಂಗಪಟ್ಟಣ ತಾಲ್ಲೂಕಿನ ಬೆಳಗೊಳದಲ್ಲಿರುವ ಇನ್ಸ್ಪೆಕ್ಷನ್ ಬಂಗ್ಲೆ.
3. ನಂಜನಗೂಡು ತಾಲ್ಲೂಕಿನ ಕುಪ್ಪೇಗಾಲದಲ್ಲಿರುವ ಇನ್ಸ್ಪೆಕ್ಷನ್ ಬಂಗ್ಲೆ.

ತಾರೀಖು 19ನೆ ಮಾರ್ಚಿ 1904.

ನಂ. ಜ. 4640, ಮೆ|| ರಾವ್ ಬಹದೂರ್ ಸಿ. ಮಾದಯ್ಯನವರು 1904ನೆ ಮಾರ್ಚಿ 19ನೆ ತಾರೀಖಿನ ಪೂರ್ವಾಹ್ನದಲ್ಲಿ ಮೈಸೂರು ಶ್ರೀಮಯ ಘನವನ್ನೈದಿದ ಶ್ರೀಮನ್ಮಹಾರಾಜರವರ ಗವರ್ನಮೆಂಟಿನ ಎರಡನೆ ಕೌನ್ಸಿಲರವರ ಆಫೀಸಿನ ಚಾರ್ಜನ್ನು ಮೆ|| ಬಿ. ಕೆ. ವೆಂಕಟವರದ ಐಯ್ಯಂಗಾರ್ಯರವರಿಗೆ ಒಪ್ಪಿಸಿರುತ್ತಾರೆ.

ತಾರೀಖು 19ನೆ ಮಾರ್ಚಿ 1904.

ನಂ. ಜ. 4642,—ಮೆ॥ ಬಿ. ಕೆ. ವೆಂಕಟವರದ ಐಯ್ಯಂಗಾರ್ರವರು 1904ನೆ ಮಾರ್ಚಿ 19ನೆ ತಾರೀಖಿನ ಪೂರ್ವಾಹ್ನ ದಲ್ಲಿ ಮೈಸೂರು ಶ್ರೀಮೆಯು ಘನವನ್ನೈದಿದ ಶ್ರೀಮನ್ಮಹಾರಾಜರವರ ಸರ್ಕಾರದ ರೆವಿನ್ಯೂ ವ ಜನರಲ್ ಇಲಾಖೆಗಳ ಸೆಕ್ರೆಟೆರಿ ಯವರ ಆಫೀಸಿನ ಚಾರ್ಜನ್ನು ಮೆ॥ ಎಲ್. ಅನಂತಸ್ವಾಮಿರಾಯರವರಿಗೆ ಒಪ್ಪಿಸಿರುತ್ತಾರೆ.

ತಾರೀಖು 21ನೆ ಮಾರ್ಚಿ 1904.

ನಂ. ಜ. 4903, ವೈಸೂರು ಸರ್ವಿಸ್ ರೆಗ್ಯುಲೇಷನ್ಗಳ 188ನೆ ಆರ್ಟಿಕಲ್ ಅನುಸರಿಸಿ ಕಡೂರು ಡಿಸ್ಟ್ರಿಕ್ಟು ಬೀರೂರು ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಸಬ್ ಅಸಿಸ್ಟೆಂಟ್ ಸರ್ಜನ್ರಾದ ಮೆ॥ ವಿ. ಮುತ್ತುಸ್ವಾಮಿದಾಸ್ ಯವರಿಗೆ 1904ನೆ ಮಾರ್ಚಿ 25ನೆ ತಾರೀಖಿನಾರಭ್ಯ 45 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

2. ಮೆ॥ ವಿ ಮುತ್ತುಸ್ವಾಮಿದಾಸ್ ಯವರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ್ರ, ಸಬ್ ಅಸಿಸ್ಟೆಂಟ್ ಸರ್ಜನ್ರಾದ ಮೆ॥ ಎಸ್. ರಂಗಾಚಾರ್ರು ಸದರಿ ಡಿಸ್ಪೆನ್ಸರಿ ಚಾರ್ಜಿನಲ್ಲಿರಲಿಕ್ಕೆ ಬೀರೂರಿಗೆ ನೇಮಿಸಲ್ಪಟ್ಟಿರುತ್ತಾರೆ.

ತಾರೀಖು 11ನೆ ಮಾರ್ಚಿ 1904.

ನಂ. ರೆ. 2796, ಸರ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ತರೀಕೆರೆಯಲ್ಲಿ ಸಂದಲ್ ಕೋಠಿಯನ್ನು ಕಟ್ಟುವ ಬಗ್ಗೆ ಬೇಕಾಗಿರುತ್ತದೆ. ಮತ್ತು ಕಡೂರು ಡಿಸ್ಟ್ರಿಕ್ಟಿನ ಮೊದಲನೆ ಅಸಿಸ್ಟೆಂಟ್ ಕಮೀಷನರಾದ ಮೆ॥ ಪಿ. ಜೆ. ಡಿಸೋಜಾ ಯವರು ಮೇಲ್ಕಂಡ ರೆಗ್ಯುಲೇಷನಿನ 3 (ಸಿ) ವ 7ನೆ ಸೆಕ್ಷನ್ಗಳ ಅನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳೀದಾರರ ಹೆಸರು.	ಸರ್ವೆ ನಂ.	ಜಮೀನಿನ ವಿವರ.	ವಿಸ್ತೀರ್ಣ.	ಆಕಾರ.	ಬೇಕಾಗಿರುವ ವಿಸ್ತೀರ್ಣ.	ಚಕ್ಕುಬಂದಿ.			
										ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕಡೂರು.	ತರೀಕೆರೆ.	ತರೀಕೆರೆ.	ನಂದೀಬಟ್ಟಲು.	ಚಿಕ್ಕ ಸಣ್ಣ ಹನುಮ ಮಗ ಚಿಕ್ಕ ಮತ್ತು ಭರಮಪ್ಪ	15	ಖುಷ್ಕಿ.	ಎಕರೆ. 10 ಗುಂಟೆ. 10	ರೂ 10—0—0	ಎಕರೆ. 5 ಗುಂಟೆ. 26	ನಂದೀಬಟ್ಟಲು ಸರ್ವೆ ನಂ. 17.	ತರೀಕೆರೆ ಸರ್ವೆ ನಂ. 93.	ನಾಲೆ, ನಂದೀಬಟ್ಟಲು ಸರ್ವೆ ನಂ. 12 ಮತ್ತು ಬೆಂಗಳೂರು—ಶಿವಮೊಗ್ಗ ರೋಡು.	ನಂದೀಬಟ್ಟಲು ಸರ್ವೆ ನಂ. 15ರ ಭಾಗಗಳು.

ತಾರೀಖು 16ನೆ ಮಾರ್ಚಿ 1904.

ನಂ. 2849, ಸರ್1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡಿ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಕಡೂರು ತಾಲ್ಲೂಕಿನ (1) ರಂಗಾಪುರ, (2) ಸಿದ್ರಾಮನಹಳ್ಳಿ ಮತ್ತು (3) ಮಾಚಾಪುರ ಗ್ರಾಮಗಳಲ್ಲಿ ವಾಸಮಾಡುವ ಮುಸಲ್ಮಾನರ ಉಪಯೋಗಕ್ಕಾಗಿ ರಂಗಾಪುರ ಗ್ರಾಮದ ಮುಸಲ್ಮಾನರ ಖಬರಸ್ಥಾನವನ್ನು ಬಡಾಯಿಸುವದಕ್ಕೋಸ್ಕರ ಬೇಕಾಗಿರುತ್ತದೆ ಮತ್ತು ಕಡೂರು ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಕಮೀಷನರಾದ ಮೆ॥ ಪಿ. ಜೆ. ಡಿಸೋಜಾಯವರು ಮೇಲ್ಕಂಡ ರೆಗ್ಯುಲೇಷನಿನ 3 (ಸಿ) ವ 7ನೆ ಸೆಕ್ಷನ್ಗಳನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳೀದಾರರ ಹೆಸರು	ಸರ್ವೆ ನಂ.	ಜಮೀನಿನ ವಿಸ್ತೀರ್ಣ.	ಆಕಾರ.	ಬೇಕಾಗಿರುವ ವಿಸ್ತೀರ್ಣ.	ಚಕ್ಕುಬಂದಿ.			
									ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕಡೂರು	ಕಡೂರು	[illegible]	ರಂಗಾಪುರ	ರುದ್ರ	145	4 ಎಕರೆ, 10 ಗುಂಟೆ.	ರೂ. 3—8—0	1 ಎಕರೆ.	ರಂಗಾಪುರದಿಂದ ಬಸವಾಪುರಕ್ಕೆ ಹೋಗುವ ದಾರಿ.	ಸರ್ವೆ ನಂಬರು 145ರ ಭಾಗ	ಹಿತ್ತಲು	ರಂಗಾಪುರ ಗ್ರಾಮದ ಸರ್ವೆ ನಂ. 11, ಖರಾಬು.

537

ತಾರೀಖು 21ನೆ ಮಾರ್ಚಿ 1904.

ನಂ. ರೆ. 2869, ಅಫಿಷಿಯೇಟಿಂಗ್ ಡೆಪ್ಯುಟಿ ಕಮಿಷನರಾದ ಮೆ॥ ಎಂ. ಕಾಂತರಾಜೆ ಅರಸಿನವರು ಮೈಸೂರಲ್ಲಿ ಗೈರ್ ಹಾಜರಾಗಿರುವ ಕಾಲದಲ್ಲಿ, ಸೀನಿಯರ್ ಅಸಿಸ್ಟೆಂಟ್ ಕಮಿಷನರಾದ ಮೆ॥ ಎ. ವೆಂಕಟರಾಯರು ಮೈಸೂರು ಡಿಸ್ಟ್ರಿಕ್ಟಿನ ಚಾರ್ಜಿನಲ್ಲಿ ರತಕ್ಕದ್ದು.

ತಾರೀಖು 23ನೆ ಮಾರ್ಚಿ 1904.

ನಂ. ರೆ. 2907, ಡೆಪ್ಯುಟಿ ಕಮಿಷನರಾದ ಮೆ॥ ಬಿ. ಕೆ. ವೆಂಕಟವರದಯ್ಯಂಗಾರ್ರವರು 1904ನೆ ಮಾರ್ಚಿ 3ನೆ ತಾರೀಖಿನ ಪೂರ್ವಾಹ್ನದಲ್ಲಿ ಮೈಸೂರು ಡಿಸ್ಟ್ರಿಕ್ಟಿನ ಮತ್ತು ಅದೇ ತಾರೀಖಿನ ಮಧ್ಯಾಹ್ನಾತ್ಪರ ಟ್ರೆಜರಿಯ ಚಾರ್ಜನ್ನು ಅಫಿಷಿಯೇಟಿಂಗ್ ಡೆಪ್ಯುಟಿ ಕಮಿಷನರಾದ ಮೆ॥ ಎಂ. ಕಾಂತರಾಜೆ ಅರಸಿನವರಿಗೆ ಒಪ್ಪಿಸಿರುತ್ತಾರೆ.

ತಾರೀಖು 23ನೆ ಮಾರ್ಚಿ 1904.

ನಂ. ರೆ. 2911, ಸೀನಿಯರ್ ಅಸಿಸ್ಟೆಂಟ್ ಕಮಿಷನರಾದ ಮೆ॥ ಎಂ. ಚೆಂಗಯ್ಯಚೆಟ್ಟಿ, ಬಿ. ಎ, ಯವರು 1904ನೆ ಮಾರ್ಚಿ 5ನೆ ತಾರೀಖಿನ ಪೂರ್ವಾಹ್ನದಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ನ ವ ಟ್ರೆಜರಿಯ ಚಾರ್ಜನ್ನು ಡೆಪ್ಯುಟಿ ಕಮಿಷನರಾದ ಮೆ॥ ಡಿ. ದೇವರಾಜೆ ಅರಸಿನವರಿಗೆ ಒಪ್ಪಿಸಿರುತ್ತಾರೆ.

ಹುಕುಂ ಬಮೋಜೀಬ್,
ಎಲ್. ಅನಂತಸ್ವಾಮಿರಾವ್,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್ಮೆಂಟ್ ಅಫೀಷಿಯೇಟಿಂಗ್ ಸೆಕ್ರಿಟೆರಿ.

ಮುಜರೈ.

ಇಸ್ತಿಹಾರ್ನಾಮೆ.

ತಾರೀಖು 19ನೆ ಮಾರ್ಚಿ 1904.

ನಂ. 2890, ಮೆ॥ ಎಲ್. ಅನಂತಸ್ವಾಮಿರಾವ್, ಬಿ. ಎ., ಯವರು ಮಾಹೆ ಮಜಕೂರು 19ನೆ ತಾರೀಖಿನ ಪೂರ್ವಾಹ್ನದಲ್ಲಿ ಮೈಸೂರು ಗವರ್ನ್ಮೆಂಟ್ ಮುಜರಾಯಿ ಇಲಾಖೆಯ ಸೆಕ್ರೆಟೆರಿಯವರ ಆಫೀಸಿನ ಚಾರ್ಜನ್ನು ಮೆ॥ ಎಂ. ಶ್ಯಾಮರಾವ್, ಎಂ. ಎ., ಯವರಿಗೆ ಒಪ್ಪಿಸಿರುತ್ತಾರೆ.

ಹುಕುಂ ಬಮೋಜೀಬ್,
ಎಲ್. ಅನಂತಸ್ವಾಮಿರಾವ್,
ಸೆಕ್ರಿಟೆರಿ.

ಜಿಯೊಲಾಜಿಕಲ್.

ಇಸ್ತಿಹಾರ್ನಾಮೆ.

ತಾರೀಖು 16ನೆ ಮಾರ್ಚಿ 1904.

ನಂ. 562—ಎಸ್., ಮೈಸೂರು ಸೀಮೆಯ ಗಣಿಗಳ ಇನ್ಸ್ಪೆಕ್ಟರಾದ ಮೆ॥ ಆರ್. ಬೋಕೆಯವರಿಗೆ 1904ನೆ ಜನವರಿ ತಾರೀಖಿನ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ XIII ಎ. ನೇ ಅಧ್ಯಾಯವನ್ನನುಸರಿಸಿ ಸ್ವಂತ ಕಲಸಗಳ ಮೇಲೆ ನಾಲ್ಕು ತಿಂಗಳುಗಳ ಸ್ಪೆಷಿಯಲ್ ರಜಾದೊಂದಿಗೆ ಸೇರಿನ ಸದರೀ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ 23 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಹುಕುಂ ಬಮೋಜೀಬ್,
ಇ. ಡಬ್ಲ್ಯು. ವೆದರಲ್,
ಫಾರ್ ಜಿಯೋಲಾಜಿಕಲ್ ಇಲಾಖೆಯ ಸೆಕ್ರಿಟೆರಿ.

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಪ್ರಾಯಿಸ್ ಆದ್ದು [ನಂ. 12.

ಬೆಂಗಳೂರು, ಗುರುವಾರ, ಮಾರ್ಚಿ ತಾ|| 24, ಸ್ 1904.

IIನೆ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೆರಿಂದ ಕೊಡೋಣವ ಇಸ್ತಿಹಾರ ನಾಮೆಗಳು.

ವಿದ್ಯಾಭ್ಯಾಸದ ಇಲಾಖಾ.

ನೋಟಿಫಿಕೇಷನ್—ಡಿ. ನಂಬರು 51.

ತಾರೀಖು 14ನೆ ಮಾಹೆ ಮಾರ್ಚಿ ಸ್ 1904ನೆ ಇಸವಿ.

ಮೈಸೂರು ವೆಸ್ಲಿಯನ್ ಮಿಷನ್ ಹೈಸ್ಕೂಲ್ Vನೆ ಫಾರಂನಲ್ಲಿ ಓದುತ್ತಿದ್ದ ಕೆ. ವಿ. ಸೀತಾರಾಮೈಯ್ಯನು 1903ನೆ ಇಸವಿ ಮಾರ್ಚಿ ತಿಂಗಳಲ್ಲಿ ಸ್ಕೂಲನ್ನು ಬಿಟ್ಟು ಅನಂತರ ಅವನು ಒಂದು ಸುಳ್ಳು ಅಪ್ಪಣೆ ಚೀಟಿಯನ್ನು ಹಾಜರ್ಮಾಡಿ ಪುನಹಾ ಅದೇ ಸ್ಕೂಲ್ VIನೆ ಫಾರಂಗೆ ದಾಖಲಾಗಲು ಪ್ರಯತ್ನಪಟ್ಟದ್ದಕ್ಕಾಗಿ ಅವನು 1905ನೆ ಇಸವಿ ಜನವರಿ ಮಾಹೆ ವರೆಗೆ ಮೈಸೂರು ಸೀಮೆಯಲ್ಲಿರುವ ಗೌರ್ನಮೆಂಟ್, ಏಡೆಡ್ ಮತ್ತು ಸರ್ಕಾರದಿಂದ ಅಂಗೀಕರಿಸಲ್ಪಟ್ಟ ಯಾವ ಹೈಸ್ಕೂಲ್ Vನೆ ಫಾರಂಗೆ ಸೇರಿಸಕೂಡದೆಂದು ವಿಧಿಸಿರುತ್ತೆ.

ಹೆಚ್. ಜೆ. ಭಾಭಾ,
ಇನ್ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 16ನೆ ಮಾರ್ಚಿ 1904.

ಇದರಿಂದ ಸಮಸ್ತ ಜನಗಳಿಗು ತಿಳಿಯಪಡಿಸುವದೇನಂದರೆ,— ಈ ಕೆಳಗೆ ಕಂಡ ಜನಗಳು ಅವರವರ ಹೆಸರಿನ ಬಾಜೂದಲ್ಲಿ ಕಂಡ ಸ್ಥಳಗಳಲ್ಲಿ ಜಾಬೀನ್ ಮತ್ತು ಬಿದರು ವಗೈರ ಬಗ್ಗೆ ಲೈಸೆನ್ಸುಗಳು ಕೊಡುವ ಬಗ್ಗೆ ಲೈಸೆನ್ಸುಗಳು ಛಕ್ಕಾ ಮಾಡುವ ಬಗ್ಗೆ ಲೈಸೆನ್ಸು ವೆಂಡರಾಗಿ ನೇಮಕ ಮಾಡಲ್ಪಟ್ಟಿರುತ್ತಾರೆ:—

ತಾಲ್ಲೂಕು ಹೆಸರು.	ಸ್ಥಳದ ಹೆಸರು.	ಲೈಸೆನ್ಸದಾರ್ರ ಹೆಸರು.
ಗುಂಡ್ಲುಪೇಟೆ ...	ಯರಿಯೂರು ...	ಲಕ್ಷ್ಮೀನಾರಣಪ್ಪನವರು
ಹೆಗ್ಗಡದೇವನಕೋಟೆ ...	ಮಗ್ಗಿಯೂರು ...	ದಾಸಗೌಡ
ಚಾಮರಾಜನಗರ ...	ಮೂಕಹಳ್ಳಿ ...	ಗುರುಪಾದದೇವರು
ಹುಣಸೂರು ...	ವೀರನಹೊಸಹಳ್ಳಿ ...	ನಂಜುಂಡೈಯ್ಯ
ಡಿಟ್ಟೋ ...	ಕೊಪ್ಪ ...	ಶಿವರಾಮೈಯ್ಯ

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮಿಷನರ್, ಮೈಸೂರ್.

ನೋಟಿಫಿಕೇಷನ್, ತಾರೀಖು 12ನೆ ಮಾರ್ಚಿ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರಡಿ ಕಂಡ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ—ಶಿವಮೊಗ್ಗ ಡಿಸ್ಟ್ರಿಕ್ಟು ಡಿಪೋಗಳ ಬಾಬತು ಜಪ್ತಿಬೀನ ಸಾಮಾನು ರೇಂಜ್ ಫಾರೆಸ್ಟ್ ಆಫಿಸರು ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರಿಂದ ನೇಮಿಸಲ್ಪಡುವ ಇತರ ಆಫಿಸರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ:—

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	ಸಾಗವಾನಿ ನಾಟಾ.		ಮತ್ತಿ ಮತ್ತು ಕಾಡುಜಾತಿ ನಾಟಾ.		ಸಾಗವಾನಿ ಬೆಲಗು ಮತ್ತು ತುಂಡುಗಳು.		ಜಂಗಲಿ ಬೆಲಗು ಮತ್ತು ತುಂಡುಗಳು.		ಕಟ್ಟಿಗೆ.	ಹೆಬ್ಬಿದರು.	ಕಿರುಬಿದರು.	ಹರಾಜು ಮಾಡಿಸುವ ಆಫಿಸರ ಹೆಸರು.	ಷರಾ.
1	ಉಂಬಳೆಬೈಲು ..	2-4—1904	10	250	190	6,500	...	.	..	...	..	..	..	ಶಿವಮೊಗ್ಗ ರೇಂಜ್ ಆಫಿಸರವರು.	[illegible]
2	ಶಿವಮೊಗ್ಗ ...	4—4—1904	25	700	50	1,400	200	..	100	...		....	..		
3	ಸಕ್ರೆಬೈಲು ..	6—4—1904	10	250	..	..	..	..	10	250	50 ಗಾಡಿಗಳು	...	...		
4	ಪುರದಾಳು ಜಂಗಲಿ .	8—4—1904	..	..	..	...	..	..	...	..	...	...	..		
5	ಆಯನೂರು ..	9—4—1904	..	..	140	3,354	200	...	...	...	..	..	..		
6	ಕುಂಸಿ .	12—4—1904	.	..	....	...	500	...	...	...	...	...	...		
7	ಜೇಕಿಪುರ ..	2—5—1904	...	..	..	..	150	1,500	..	..	...	...	..	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರು	
8	ತಲಗಡ್ಡೆ ..	5-4—1904	6	123¼	...	..	1,480	9,549	....	..	...	...	....	ಸೊರಬ ರೇಂಜ್ ಆಫಿಸರವರು.	
9	ಅರತಲಗಡ್ಡೆ ಸ್ಟೇಟ್ ಫಾರೆಸ್ಟು	6—4—1904	..	....	..	..	1,296	7,794¼	...	..	...	...	..		
10	ಡಿಟೋ ಡಿಸ್ಟ್ರಿಕ್ಟ್ ಫಾರೆಸ್ಟು	7—4—1904	....	..	...	....	332	2,108½	.	...	..	...	...		
11	ಸಿರಾಳಕೊಪ್ಪ ..	9—4—1904	...	..	120	2,500	124	455	...	...	..	500	2,700		
12	ಶಿಕಾರಿಪುರ ...	11—4—1904	.	..	100	2,500	390	988	..	..		...	350		

ಹರಾಜು ಷರತ್ತು.—15—3—95ನೆ ಮುರಸ್ಲಾಂ ನಂಬರು 15229—R. F. 155-92ನೆ ಗವರ್ನಮೆಂಟ್ ನೋಟಿಫಿಕೇಷನ್ ಮೇರಿಗೆ.

ಎಂ. ವೆಂಕಟನಾರಣಪ್ಪ, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ, ಶಿವಮೊಗ್ಗ.

541

ಇಸ್ತಿಹಾರ.

1904ನೆ ಇಸವಿ ತಾರೀಖು ರಲ್ಲು.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ—ಇದರಡಿ ಕಂಡ ಮೈಸೂರು ಡಿಸ್ಟ್ರಿಕ್ಟು ಡಿಪೋಗಳಲ್ಲಿ ಅದರ ಬಾಜೂದಲ್ಲಿ ನಮೂದಿಸುವ ತಾರೀಖುಗಳಲ್ಲಿ ಚೌಬೀನೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಬೆಳಿಗ್ಯೆ 8 ಘಂಟೆಗೆ ಹರಾಜು ಶುರುವಾಗುತ್ತೆ.

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	[illegible]	ಸುಮಾರು ಚೌಬೀನೆ ಮೊತ್ತ.											
				ಸಾಗ್ವಾನಿ ನಾಟಾ ಮತ್ತು ಜಂತೆ.		ಮಿನ್ನಾ ಜಾತಿ ನಾಟಾ ಮತ್ತು ಜಂತೆ.		ಕಾಡುನಾಟಾ ಮತ್ತು ಜಂತೆ.		ಸಾಗವಾನಿ ಸರಾ.		ಮಿನ್ನಾ ಜಾತಿ ಸರಾ.		ಕಾಡುಸರಾ.	
				ಅದದು	ಸಲೆ ಅಡಿ	ಅದದು	ಸಲೆ ಅಡಿ.	ಅದದು	ಸಲೆ ಅಡಿ.	ಅದದು	ಸಲೆ ಅಡಿ.	ಅದದು	ಸಲೆ ಅಡಿ.	ಅದದು	ಸಲೆ ಅಡಿ.
1	ಮೈಸೂರು ಫುಡಿಯಾರ್ಡು.	4-4-04	[illegible]	436	5299	340	6114	20	397	277	300	5	60	...	..
2	ನಂಜನಗೂಡು ಡಿಪೋ.	6-4-04	[illegible]	502	5419	369	4639	..	...	...	...	8	76	40	363

ಷರತ್ತು :—1895ನೆ ಇಸವಿ ಮಾರ್ಚಿ 10ನೆ ಮಿತಿಯಂ 1529—R. F. 155—92ನೆ ನಂಬರು ಇಸ್ತಿಹಾರ್ನಾಮೆಯನ್ನ 25—4—1895ನೆ ಮಿತಿಯಂ 15ನೆ ನಂಬರು ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಿರುತ್ತೆ.

ಸಿ ಅಪ್ಪಯ್ಯ,
ಡಿಸ್ಟ್ರಿಕ್ಟ ಫಾರೆಸ್ಟ ಆಫೀಸರ್, ಮೈಸೂರು ಡಿಸ್ಟ್ರಿಕ್ಟ.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 15ನೆ ಮಾರ್ಚಿ 1904ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಡಿಸ್ಟ್ರಿಕ್ಟು ಚಾಮರಾಜನಗರ ತಾಲ್ಲೂಕಿಗೆ ಸೇರಿದ ಸಂತೆಮರಹಳ್ಳಿ ಮಾರ್ಕೆಟ್ಟಿನಲ್ಲಿ 1904ನೆ ಜುಲೈ 1ರ ಲಾಗಾಯತು 1905ನೆ ಜೂನ ಆಖೈರ ವರಿವಿಗೆ ತರಗೆ ವಸೂಲ್ಮಾಡುವ ಹಕ್ಕುದಾರಿಯು ಸಂತೆಮರಹಳ್ಳಿ ಪೊಲೀಸ ಸ್ಟೇಷನ ಬಳಿ ತಾಲ್ಲೂಕು ಅಮಲ್ದಾರ್ರಿಂದ 1904ನೆ ಮೇ 17ನೆ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಪಡೆಯತಕ್ಕವರು ಸಂತೆಯದಿವಸ ಮಾರ್ಕೆಟ್ಟಿನ ಸರಹದ್ದಿನ ಒಳಗೆ ತರಲ್ಪಡುವ ಸಾಮಾನುಗಳ ಮೇಲೆ ಇದರ ಕೆಳಗೆ ನಮೂದು ಮಾಡಿರುವ ಷೆಡ್ಯೂಲ್‌ನಲ್ಲಿ ಕಂಡ ರೇಟಿನಂತೆಯೇ ಫೀ ವಸೂಲ್ಮಾಡತಕ್ಕದ್ದು. ಸದರೀ ರೇಟಿಗಿಂತ ಹೆಚ್ಚು ರೇಟನ್ನು ವಸೂಲ್ ಮಾಡಕೂಡದು. ಮಾರ್ಕೆಟ್ಟಿನ ಸರಹದ್ದು ಇಷ್ಟೆಂದು ಅಮಲ್ದಾರ್ರಿಂದ ಸ್ಪಷ್ಟವಾಗಿ ಗುರ್ತು ಮಾಡಲ್ಪಡುತ್ತೆ.

3. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗ್ರ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲಾ. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

4. ಕಂಟ್ರಾಕ್ಟುದಾರನು ಪ್ರತಿ ತಿಂಗಳು 10ನೆ ತಾರೀಖಿನ ಒಳಗಾಗಿ ಹಿಂದಿನ ಮಾಹೆಯ ಕಿಸ್ತು ಮೊಬಲಗನ್ನು ಹಾಜರ್ಮಾಡಿ ರಶೀತಿ ಪಡೆಯಬೇಕು. ಹರಾಜು ಆಖೈರಾದ ಕೂಡ್ಲೆ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಎರಡು ತಿಂಗಳ ಕಂಟ್ರಾಕ್ಟು ಮೊಬಲಗನ್ನು ಅಮಾನತ್ತಿನಲ್ಲಿಡಬೇಕು. ಷರತ್ತುಗಳ ಮೀರ ನಡದುಕೊಂಡರೆ, ಅಮಾನತ್ತಿನಲ್ಲಿ ಇಟ್ಟಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಕಿಸ್ತು ಬಗ್ಯೆ ಜಪ್ತಾ ತೆಗೆದುಕೊಳ್ಳಲ್ಪಡುತ್ತೆ.

5. ಹರಾಜಾದ ಕೂಡ್ಲೆ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡದೇ ಇದ್ದರೆ ಹರಾಜು ಹಕ್ಕುದಾರಿಯನ್ನು ಅಸಲ್ ಕಂಟ್ರಾಕ್ಟುದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ಒಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಪ್ರತಿ ಮಾಹೆಯಲ್ಲೂ ಕೊಡತಕ್ಕ ಕಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನ ಒಳಗಾಗಿ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡಬೇಕಾಗಿರುವ ಮೊಬಲಗಿನ ಮೇಲೆ ಪಾವತೀ ಮಾಡುವ ತಾರೀಖಿನವರಿವಿಗೆ ಮಾಹೆಯಾನ ರೂಪಾಯಿ ಒಂದಕ್ಕೆ ಒಂದು ಪೈನಂತೆ ಬಡ್ಡಿ ಸೇರಿಸಿ ಕಿಸ್ತು ಮೊಬಲಗನ್ನು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಉಳಿದ ಕಂಟ್ರಾಕ್ಟನ್ನು ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಲುಕ್ಸಾನಿಗೆ ಅಸಲ್ ಕಂಟ್ರಾಕ್ಟುದಾರನನ್ನು ಒಳಪಡಿಸಿ ಹರಾಜು ಮಾಡಲ್ಪಡುತ್ತೆ. ಎರಡನೇ ಹರಾಜಿನಿಂದ ನಫೇಬಂದಲ್ಲಿ ಮೊದಲು ಕಂಟ್ರಾಕ್ಟುದಾರನು ಸದರೀ ನಫೆಗೆ ಹಕ್ಕುದಾರನಾಗಿರುವದಿಲ್ಲ.

6. ಕಂಟ್ರಾಕ್ಟುದಾರನು ಪ್ರತಿ ಸಂತೆಯಲ್ಲಿಯೂ ವಸೂಲಾಗುವ ಫೀಯನ್ನು ತಪಶೀಲಾಗಿ ತಿಳಿಯುವಂತೆ ಒಂದು ಲೆಖ್ಖವನ್ನು ಇಟ್ಟಿರಬೇಕು. ಸದರೀ ಲೆಖ್ಖವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಆಫೀಸಿನ ಹುದ್ದೇದಾರ್ರಿಗೆ ಅಪೇಕ್ಷಿಸಿದ ಕಾಲದಲ್ಲಿ ತೋರಿಸ ತಕ್ಕದ್ದಾಗಿರುತ್ತೆ.

7. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ಕಂಟ್ರಾಕ್ಟುದಾರನೇ ಆಗಲಿ ಯಾ ಅವನ ಕಡೆ ನೌಕರರೇ ಆಗಲಿ ವಿರೋಧವಾಗಿ ನಡೆದುಕೊಂಡರೆ ಕಂಟ್ರಾಕ್ಟನ್ನು ವಜಾ ಮಾಡುತ್ತೆ.

ಷೆಡ್ಯೂಲ್.

ಷಾಪ್ ಯಾ ಮಳಿಗೆ	...	...	..	ಪ್ರತ್ಯೇಕ ಹರಾಜು ಮಾಡಲ್ಪಡುತ್ತೆ.		
ಗುಡಾರ	..	..	..	ಪ್ರತಿಯೊಂದಕ್ಕೆ	4	ಆಣೆ.
ಎತ್ತಿನ ಗಾಡಿ	...	..	...	,,	2	,,
ಒಡ್ಡರ ಗಾಡಿ	..	...	...	,,	1	,,
ಎತ್ತಿನ ಬೋಜ	..	..	..	,,	6	ಕಾಸು
ತಲೆ ಬೋಜಾ	..	....	.	,,	3	,,

ನೋಟ್:—ಕೊನೇ ನಾಲ್ಕು ಐಟಂಗಳ ಮೇಲೆಯೂ ಮಾರ್ಕಟ್ಟು ಸರಹದ್ದನ್ನು ಪ್ರವೇಶಿಸುವಾಗಲೇ ಫೀ ವಸೂಲ್ಮಾಡತಕ್ಕದ್ದು. ಎರಡನೇ ಬಾಬಿನ ಮೇಲೆ ಗುಡಾರವನ್ನು ನೆಟ್ಟಾಗ ಫೀ ವಸೂಲ್ಮಾಡತಕ್ಕದ್ದು.

ತಾರೀಖು 15ನೆ ಮಾರ್ಚಿ 1904ನೆ ಇಸವಿ.

1904ನೆ ಜುಲೈ ಮಾಹೆ ಗುರ್ರು ತಾರೀಖು ಲಾಗಾಯಿತು 1905ನೆ ಇಸವಿ ಜೂನ್ ಮಾಹೆ 30ರ ವರೆಗೆ ಷೆಡ್ಯೂಲ್ A ಯಲ್ಲಿ ನಮೂದು ಮಾಡಿರುವ ಟೋಲ್ ಗೇಟುಗಳಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ಅದರಲ್ಲಿ ಕಂಡ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫೀಸರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟುದಾರನು ಷೆಡ್ಯೂಲ್ B ಯಲ್ಲಿ ನಮೂದು ಮಾಡುವ ರೇಟಿನಂತೆಯೇ ಗೇಟುಗಳ ಮುಖಾಂತರ ಹೋಗುವ ಮತ್ತು ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲೀ ಮಂಜೂರ್ಮಾಡುವ ಅಧಿಕಾರವು ಡೆಪ್ಯುಟಿ ಕಮಿಷನರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು ಹತ್ತನೇ ತಾರೀಖಿನ ವೊಳಗಾಗ್ಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಪಾವತೀ ಮಾಡಬೇಕು. ಹರಾಜು ಆಖೈರು ಆದ ಕೂಡ್ಲೆ, ಬಾಬನ್ನು ಪಡೆಯತಕ್ಕ ಕಂಟ್ರಾಕ್ಟುದಾರನು ಎರಡು ಮಾಹೆಗಳ ಖಿಸ್ತಿಗೆ ಸಮನಾದ ಮೊಬಲಗನ್ನು ಡಿಪಾಜಿಟ್ಟು ಬಗ್ಗೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮೆಗೆ ತೆಗೆದುಕೊಳ್ಳುತ್ತೆ.

5. ಹರಾಜು ಆಖೈರಾದ ಕೂಡ್ಲೆ ಡಿಪಾಜಿಟ್ಟು ಬಗ್ಗೆ ಮೊಬಲಗನ್ನು ಹಾಜರ್ಮಾಡದಿದ್ದರೆ, ಖರ್ಚಿಗೂ ಮತ್ತು ಲುಕ್ಸಾನಿಗೂ ಅವಲ್ ಕಂಟ್ರಾಕ್ಟುದಾರನನ್ನು ಗುರಿಪಡಿಸಿ, ಪುನಹಾ ಹರಾಜು ಮಾಡಲ್ಪಡುತ್ತೆ. ಖಿಸ್ತು ಮೊಬಲಗನ್ನು ವಾಯಿದೆ ವೊಳಗೆ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡುವ ತಾರೀಖಿನವರಿವಿಗೆ ಮಾಹೆಯಾನಾ ರೂಪಾಯಿಗೆ ಒಂದು ಪೈ ನಂತೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಉಳಿದ ಕಂಟ್ರಾಕ್ಟನ್ನು ಪುನಹಾ ಹರಾಜುಮಾಡಿ, ಲುಕ್ಸಾನಾದಲ್ಲಿ, ಸದರಿ ಮೊಬಲಗನ್ನು ಅವಲ್ ಕಂಟ್ರಾಕ್ಟುದಾರನಿಂದ ವಸೂಲ್ಮಾಡುತ್ತೆ. ಎರಡನೇ ಹರಾಜಿನಲ್ಲಿ ನಫೇ ಬಂದಲ್ಲಿ, ಮೊದಲು ಕಂಟ್ರಾಕ್ಟುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲಾ.

6. ಮೇಲ್ಕಂಡ 5 ಮತ್ತು 4ನೆ ಪ್ಯಾರಾಗಳಲ್ಲಿ ನಮೂದು ಮಾಡಿರುವ ಷರತ್ತುಗಳ ಒಳಪಟ್ಟು ಕಂಟ್ರಾಕ್ಟುದಾರ್ರು ಹರಾಜು ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸನ್ನೂ ಸಹ ಸೇರಿಸಿ, ಪಾವತೀ ಮಾಡಬೇಕು.

7. ಪ್ರತಿ ದಿವಸದಲ್ಲೂ ಉತ್ಪತ್ತಿ ಆಗುವ ಮೊಬಲಗನ್ನ ತೋರಿಸುವಂತೆ ಖರಾರ್ವಾಕವಾಗಿ ಲೆಖ್ಖವನ್ನು ಕಂಟ್ರಾಕ್ಟುದಾರ್ರು ಇಡಬೇಕು. ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಉದ್ಯೋಗಸ್ತರು ಅಪೇಕ್ಷಿಸಿದ ಕಾಲದಲ್ಲಿ, ಇನ್ಸ್ಪೆಕ್ಷನ್ ಬಗ್ಗೆ ಹಾಜರ್ಮಾಡಬೇಕು.

8. ಮೇಲ್ಕಂಡ 7ನೆ ಪ್ಯಾರಾದಲ್ಲಿ ನಮೂದು ಮಾಡಿರುವಂತೆ ಗೇಟುಗಳ ಮುಖಾಂತರ ಹೋಗತಕ್ಕ ಗಾಡಿ ವಗೈರೆ ಟ್ರಾಫಿಕ್‌ಗಳ ಲೆಖ್ಖಗಳನ್ನು ಖರಾರ್ವಾಕವಾಗಿ ಇಡಲು, ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಒಬ್ಬ ಮುತ್ಸದ್ದಿಯನ್ನು ಇಡಬೇಕು.

9. ಹಾಲಿ ಇರುವ ಟೋಲ್ ಗೇಟುಗಳನ್ನು ಮತ್ತು ಮನೆಗಳನ್ನು ಒಳ್ಳೆ ಸ್ಥಿತಿಯಲ್ಲಿ ಇಟ್ಟುಕೊಂಡು ಇರುವದು ಕಂಟ್ರಾಕ್ಟುದಾರನ ಕೆಲಸವಾಗಿರುತ್ತೆ. ಹೊಸ ಗೇಟುಗಳೇ ಆಗಲಿ ಮನೆಗಳೇ ಆಗಲಿ ಅವಶ್ಯಕವಿದ್ದಲ್ಲಿ ಗವರ್ನಮೆಂಟಿನ ಖರ್ಚಿನಿಂದ ತಯಾರ್ಮಾಡಿಸಲ್ಪಡುತ್ತೆ.

10. ಲೇಟ ಚೀಫ್ ಕಮಿಷನರ ಸಾಹೇಬರವರ 4—11—1876ನೆ ಮುರ್ಕುಂ 274ನೆ ನಂಬರು ನೋಟಿಫಿಕೇಷನ್ನೊಡನೆ ಸಾದರ್ಮಾಡಿರುವ ರೂಲ್ಸುಗಳಿಗೆ ಕಂಟ್ರಾಕ್ಟುದಾರ್ರು ಬದ್ಧರಾಗಿರಬೇಕು.

11. ಮಾಳ ಅಥವಾ ಗೊಬ್ಬರದಿಂದ ಭರ್ತಿಯಾಗಿರುವ ಗಾಡಿಗಳನ್ನು ಖಾಲಿ ಗಾಡಿಯಂತೆ ಭಾವಿಸಿ, ಆ ರೀತಿಯೇ ಸುಂಕ ವಸೂಲ್ಮಾಡಬೇಕು.

543

ಷೆಡ್ಯೂಲ್ A.

	ರಸ್ತೆಗಳು.	ಸ್ಟೇಷನ್‌ಗಳು.	ಹರಾಜಾಗತಕ್ಕ ಸ್ಥಳ.	ಹರಾಜು ತಾರೀಖು.
1.	ಬೆಂಗಳೂರು–ಮಂಗಳೂರು ರಸ್ತೆ, ಸಿದ್ಧಾಪುರದ ಬ್ರಾಂಚು ರಸ್ತೆ	ಪಿರ್ಯಾಪಟ್ಟಣದ ಕೋಟೆಗೆ ಪಶ್ಚಿಮ ಎರಡು ರಸ್ತೆಗಳು ಸೇರುವ ಸ್ಥಳ	ಹುಣಸೂರು ತಾಲ್ಲೂಕ ಕಚೇರಿ	20—4—04
2.	ಹಾಸನ–ಪಿರ್ಯಾಪಟ್ಟಣ–ಕನ್ಯಾನೂರು ರಸ್ತೆ	ಪಿರ್ಯಾಪಟ್ಟಣಕ್ಕೂ ಟಂಕನಹಳ್ಳಿಗೂ ಮಧ್ಯೆ		
3.	ಮಡರಾಸು–ಕನ್ಯಾನೂರು ರಸ್ತೆ	ಸಂಜವಳ್ಳಿ		
4.	ಮೈಸೂರು–ಮಾನಂದವಾಡಿ ರಸ್ತೆ	ಕಾರಾಪುರ	ಹೆಗ್ಗಡದೇವನಕೋಟೆ ತಾಲ್ಲೂಕ ಕಚೇರಿ	22—4—04
5.	ಗುಂಡ್ಲುಪೇಟೆ–ಸುಲ್ತಾನಬತೇರಿ ರಸ್ತೆ	ಮೂಲೆ ಹೊಳೆ	ಗುಂಡ್ಲುಪೇಟೆ ತಾಲ್ಲೂಕ ಕಚೇರಿ	28—4—04
6.	ಬೆಂಗಳೂರು–ನೀಲಗಿರಿ ರಸ್ತೆ	ಬಂಡೀಪುರ		
7.	ನಂಜನಗೂಡು–ಸಾಸನೂರು ಗಾಟ್ ರಸ್ತೆ	ಸುವರ್ಣಾವತೀ ಬಳಿ ಅತ್ತಿಕಲ್‌ಪುರ	ಚಾಮರಾಜನಗರ ತಾಲ್ಲೂಕ ಕಚೇರಿ	16—5—04

ಷೆಡ್ಯೂಲ್ B ರೇಟುಗಳು.

ತಪಶೀಲು.	ರೇಟುಗಳು.			ಷರಾ.
	ರೂ.	ಆ.	ಪೈ.	
ಪ್ರಯಾಣಸ್ಥರೊಡನೆ ನಾಲ್ಕು ಚಕ್ರದ ಗಾಡಿ	0	12	0	
ಡಿಟೋ ಇಲ್ಲದೆ ಇರುವ ಡಿಟೋ	0	6	0	
ಡಿಟೋ ಇರುವ ಎರಡು ಚಕ್ರದ ಗಾಡಿ ...	0	8	0	
ಡಿಟೋ ಇಲ್ಲದೆ ಇರುವ ಡಿಟೋ	0	4	0	
ಗಾಡಿ ಬೋಜಾ ಸಹಿತವಾದದ್ದು	0	4	0	
ಡಿಟೋ ಬೋಜಾ ಇಲ್ಲದ್ದು ...	0	2	0	
ಆನೆ	1	0	0	
ಒಂಟೆ	0	4	0	
ಕುದುರೆ ಸವಾರನುಳ್ಳದ್ದು	0	1	6	
ಡಿಟೋ ಸವಾರನಿಲ್ಲದ್ದು	0	0	9	
ಕುದುರೆ ಮರಿ, ಸವಾರನುಳ್ಳದ್ದು	0	0	9	
ಡಿಟೋ ಸವಾರನಿಲ್ಲದ್ದು	0	0	6	
ಎತ್ತು ಬೋಜಾ ವುಳ್ಳದ್ದು	0	1	0	
ಡಿಟೋ ಬೋಜಾ ಇಲ್ಲದ್ದು	0	0	6	
ಕತ್ತೆ ಬೋಜಾ ವುಳ್ಳದ್ದು	0	0	6	
ಡಿಟೋ ಬೋಜಾ ಇಲ್ಲದ್ದು	0	0	3	
ಪಲ್ಲಕ್ಕಿ	0	4	0	
ಕುರಿ, ಆಡು, ಯಾ, ಹಂದಿ	0	0	1	

ತಾರೀಖು 15ನೆ ಮಾರ್ಚಿ 1904ನೆ ಇಸವಿ.

1904ನೆ ಜುಲೈ ಮಾಹೆ ಗುರ್ರೀ ತಾರೀಖು ಲಾಗಾಯಿತು 1905ನೆ ಇಸವಿ ಜೂನ್ ಮಾಹೆ 30ರ ವರಿಗೆ ಯಡತೊರೆ ಟೋಲ್ ಗೇಟಿನಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು 1904ನೆ ಇಸವಿ ಏಪ್ರೆಲ್ 18ನೆ ತಾರೀಖಿನಲ್ಲಿ ಡೆಪ್ಯುಟಿ ಕಮಿಷನರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫಿಸರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟುದಾರನು ಷೆಡ್ಯೂಲಿನಲ್ಲಿ ನಮೂದು ಮಾಡುವ ರೇಟಿನಂತೆಯೇ ಗೇಟುಗಳ ಮುಖಾಂತರ ಹೋಗುವ ಮತ್ತು ಬರುವ ಗಾಡಿ ವಗ್ಯೆರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲೀ ಮಂಜೂರ್ಮಾಡುವ ಅಧಿಕಾರವು ಡೆಪ್ಯುಟಿ ಕಮಿಷನರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು ಹತ್ತನೇ ತಾರೀಖಿನ ಒಳಗಾಗಿ ಹಿಂದಿನ ಮಾಹೆಯ ಕಿಸ್ತು ಮೊಬಲಗನ್ನು ಪಾವತೀ ಮಾಡಬೇಕು. ಹರಾಜು ಖಾಯಂ ಆದ ಕೂಡ್ಲೆ, ಬಾಬನ್ನು ಪಡೆಯತಕ್ಕ ಕಂಟ್ರಾಕ್ಟುದಾರನು ಎರಡು ಮಾಹೆಗಳ ಕಿಸ್ತಿಗೆ ಸಮನಾದ ಮೊಬಲಗನ್ನು ಡಿಪಾಜಿಟ್ಟು ಬಗ್ಗೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಕಿಸ್ತು ಬಗ್ಯೆ ಜಮೆಗೆ ತೆಗೆದುಕೊಳ್ಳುತ್ತೆ.

5. ಹರಾಜು ಆಖೈರಾದ ಕೂಡ್ಲೆ ಡಿಪಾಜಿಟ್ಟು ಬಗ್ಯೆ ಮೊಬಲಗನ್ನು ಹಾಜರ್ಮಾಡದಿದ್ದರೆ, ಖರ್ಚಿಗೂ ಮತ್ತು ಲುಕ್ಸಾನಿಗೂ ಅವಲ್ ಕಂಟ್ರಾಕ್ಟುದಾರನನ್ನು ಗುರಿಪಡಿಸಿ, ಪುನಹಾ ಹರಾಜು ಮಾಡಲ್ಪಡುತ್ತೆ. ಕಿಸ್ತು ಮೊಬಲಗನ್ನು ವಾಯಿದೆಪ್ರಕಾರ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡುವ ತಾರೀಖಿನ ವರಿಗೆ ಮಾಹೇಯಾನಾ ರೂಪಾಯಿಗೆ ಒಂದು ಪೈ ಮೇರೆ ಬಡ್ಡಿ ಸೇರಿಸಿ ಕಿಸ್ತು ಮೊಬಲಗು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಉಳಿದ ಕಂಟ್ರಾಕ್ಟನ್ನು ಪುನಹ ಹರಾಜು ಮಾಡಿ, ಲುಕ್ಸಾನಾದಲ್ಲಿ ಸದರಿ ಮೊಬಲಗನ್ನು ಅವಲ್ ಕಂಟ್ರಾಕ್ಟುದಾರನಿಂದ ವಸೂಲ್ಮಾಡುತ್ತೆ. ಎರಡನೇ ಹರಾಜಿನಲ್ಲಿ ನಫೇ ಬಂದಲ್ಲಿ, ಮೊದಲು ಕಂಟ್ರಾಕ್ಟುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.

6. ಮೇಲ್ಕಂಡ 5 ಮತ್ತು 4ನೆ ಪ್ಯಾರಾಗಳಲ್ಲಿ ನಮೂದು ಮಾಡಿರುವ ಷರತ್ತುಗಳ ಒಳಪಟ್ಟು ಕಂಟ್ರಾಕ್ಟುದಾರ್ರು ಹರಾಜು ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸನ್ನೂ ಸಹ ಸೇರಿಸಿ, ಪಾವತಿ ಮಾಡಬೇಕು.

7. ಪ್ರತಿ ದಿವಸದಲ್ಲೂ ಉತ್ಪತ್ತಿ ಆಗುವ ಮೊಬಲಗನ್ನ ತೋರಿಸುವಂತೆ ಖರಾರ್ವಾಕವಾಗಿ ಲೆಖ್ಖವನ್ನು ಕಂಟ್ರಾಕ್ಟುದಾರ್ರು ಇಡಬೇಕು. ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಉದ್ಯೋಗಸ್ತರು ಅಪೇಕ್ಷಿಸಿದ ಕಾಲದಲ್ಲಿ, ಇನ್ಸ್‌ಪೆಕ್ಷನ್ ಬಗ್ಯೆ ಹಾಜರ್ಮಾಡಬೇಕು.

8. ಮೇಲ್ಕಂಡ 7ನೆ ಪ್ಯಾರಾದಲ್ಲಿ ನಮೂದು ಮಾಡಿರುವಂತೆ ಗೇಟುಗಳ ಮುಖಾಂತರ ಹೋಗತಕ್ಕ ಗಾಡಿ ವಗ್ಯೆರೆ ಟ್ರಾಫಿಕ್‌ಗಳ ಲೆಖ್ಖಗಳನ್ನು ಖರಾರ್ವಾಕಾವಾಗಿ ಇಡಲು ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಒಬ್ಬ ಮುತ್ಸದ್ದಿಯನ್ನು ಇಡಬೇಕು.

9. ಹಾಲಿ ಇರುವ ಟೋಲ್ ಗೇಟುಗಳನ್ನು ಮತ್ತು ಮನೆಗಳನ್ನು ಒಳ್ಳೆ ಸ್ಥಿತಿಯಲ್ಲಿ ಇಟ್ಟುಕೊಂಡು ಇರುವದು ಕಂಟ್ರಾಕ್ಟುದಾರನ ಕೆಲಸವಾಗಿರುತ್ತೆ. ಹೊಸ ಗೇಟುಗಳೇ ಆಗಲಿ ಮನೆಗಳೇ ಆಗಲಿ ಅವಶ್ಯಕವಿದ್ದಲ್ಲಿ ಗವರ್ನ್ಮೆಂಟಿನ ಖರ್ಚಿನಿಂದ ತಯಾರ್ಮಾಡಿಸಲ್ಪಡುತ್ತೆ.

10. ಲೇಟ್ ಚೀಫ್ ಕಮಿಷನರ್ ಸಾಹೇಬರವರ 4—11—1876ನೆ ಮರ್ಕಂ 274ನೆ ನಂಬರು ನೋಟಿಫಿಕೇಷನ್ ನೊಡನೆ ಸಾದರ್ಮಾಡಿರುವ ರೂಲ್ಸುಗಳಿಗೆ ಕಂಟ್ರಾಕ್ಟುದಾರ್ರು ಬದ್ಧರಾಗಿರಬೇಕು.

11. ಮೂಳೆ ಅಥವಾ ಗೊಬ್ಬರದಿಂದ ಭರ್ತಿಯಾಗಿರುವ ಗಾಡಿಗಳನ್ನು ಖಾಲಿ ಗಾಡಿಯಂತೆ ಭಾವಿಸಿ, ಆ ರೀತಿಯೇ ಸುಂಕ ವಸೂಲ್ಮಾಡಬೇಕು.

ಷೆಡ್ಯೂಲ್.

ನಂಬರು.	ತಪಶೀಲು.	ಬೋಜ ವುಳ್ಳದ್ದು.			ಬೋಜ ಇಲ್ಲದ್ದು.		
1	ಪ್ರತಿ ನಾಲ್ಕು ಚಕ್ರದ ಗಾಡಿ	0	8	0	0	4	0
2	,, ಎರಡು ಡಿಟೋ ..	0	4	0	0	2	0
3	,, ಎಮ್ಮೆ ಅಥವಾ ಎತ್ತು	0	0	6		....	...
4	,, ಆನೆ	1	0	0	1	0	0
5	,, ಒಂಟೆ ...	0	8	0	0	8	0
6	,, ಕುದುರೆ ಸವಾರ ಅಥವಾ ಬೋಜ ಉಳ್ಳದ್ದು ..	0	1	0		..	..
7	,, ಡಿಟೋ ಡಿಟೋ ಇಲ್ಲದ್ದು				0	1	
8	,, ಕತ್ತೆ ಸವಾರ ಅಥವಾ ಬೋಜ ಉಳ್ಳದ್ದು	0	0	6	...		..

ಎಂ. ಕಾಂತರಾಜೆ ಅರಸ್,
ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಫಂಡ್ ಬೋರ್ಡ್.

ಹಾಸನ ಡಿಸ್ಟ್ರಿಕ್ಟ್.

ಇಸಿ ಹಾರನಾಮಾ.

ತಾರೀಖು 2ನೆ ಮಾರ್ಚಿ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಹೊಳೇನರಸೀಪುರದ ಟವರ್ ಅಭಿವೃದ್ಧಿಗೋಸ್ಕರ ಇದಕ್ಕೆ ಒಳಗೆ ತ್ತಿರುವ ಷೆಡ್ಯೂಲ್ ಪಟ್ಟಿಯಲ್ಲಿ ವಿವರಿಸಿರುವ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡಿರುತ್ತಯಲ್ಲದೆ ಆಯಾಯ ಜಮೀನುಗಳಿಗೆ ತರಾ ವಾಗಿರುವ ಪರಿಹಾರದ ಮೊಬಲಗನ್ನು ಸದರಿ ಮೊಬಲಗನ್ನು ತೆಗೆದುಕೊಳ್ಳಲು ತಮಗೆ ಹಕ್ಕಿರುವದಾಗಿ ತಿಳಿಸುವವರ ಹೆಸರನ್ನು ಪಟ್ಟಿಯಲ್ಲಿ ಕಾಣಿಸಿರುತ್ತೆ.

ಈ ಕೆಳಗೆ ಕಂಡ ಪಟ್ಟಿಯಲ್ಲಿ ನಮೂದಿರುವ ಜಮೀನುಗಳಿಗೆ ವಿಧಿಸಿರುವ ಕಂಪರ್ಸೇಷನ್ ಮೊಬಲಗನ್ನು ಪಡೆಯಲು ಸದರಿ ಪಟ್ಟಿಯ 3ನೆ ಕಲಂನಲ್ಲಿ ತೋರಿಸಿರುವವರಲ್ಲದೆ ಯಾರಿಗಾದರೂ ಹಕ್ಕುದಾರಿ ಇರುವಲ್ಲಿ ತಕ್ಕ ದಾಖಲಾತುಗಳೊಡನೆ ಈ ಇಸ್ತಿಹಾರ್ ತಾರೀಖು ಲಾಗಾಯತು ಮೂರು ತಿಂಗಳೊಳಗೆ ಹಾಸನ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರವರಲ್ಲಿ ಹಾಜರಾಗಿ ಅವರ ಹಕ್ಕುದಾರಿಯನ್ನು ಊರ್ಜಿತ ಪಡಿಸಿಕೊಳ್ಳದೆ ಇದ್ದಲ್ಲಿ ಮೇಲ್ಕಂಡ ಪಟ್ಟಿಯ 3ನೆ ಕಲಂನಲ್ಲಿ ತೋರಿಸಿರುವವರಿಗೇನೆ ಮೊಬಲಗನ್ನು ಪಾವತಿ ಮಾಡುತ್ತೆ. ನಂತರ ಬರುವ ತಕರಾರುಗಳನ್ನು ಅಂಗೀಕರಿಸಲಾರೆವು.

ಷೆಡ್ಯೂಲ್.

ನಂಬರು	ಜಮೀನು ತಫ್ಸೀಲ್ ಮತ್ತು ವಿಸ್ತೀರ್ಣ.	ತರಾಯಿಸಿರುವ ಪರಿಹಾರದ ಮೊಬಲಗು.	ಮೊಬಲಗು ಪಡೆಯಲು ಹಕ್ಕಿರುವದಾಗಿ ಹೇಳುವವರ ಹೆಸರು ಮತ್ತು ಅವರ ಹಕ್ಕಿನ ತರಹಾ.
1	26 × 8=208 ಸಲೆ ಗಜ ವಿಸ್ತೀರ್ಣವುಳ್ಳ ಪಾಳು ನಿವೇಶನ. (ಖಾತೇದಾರ ಜಳ್ಳಿ)	13—0—0	ಶ್ರೀನಿವಾಸಾಚಾರ್ರು, ಕ್ರಯದಾರರಾಗಿ
2	19—4—1900ನೆ ಮುರ್ತಂ ಮೈಸೂರ ಗೆಜೆಟ್ಟನಲ್ಲಿ 34 ಮತ್ತು 35ನೆ ಕೇಸುಗಳಾಗಿ ಪ್ರಾಯಿಷಾಗಿರುವ ಗೊರವ ಮತ್ತು ಗೊರವೈಯ್ಯನ ಬಾಬತು ಮನೆ ಮತ್ತು ಹಿತ್ತಲು. (ಖಾತೆ ಪ್ರೋಪರ್ಟಿ ಯರ್ ಧರ್ಮ ಕಿಂಗ್ ಸುವರ ಹೆಸರಿನಲ್ಲಿದೆ)	76—4—0	1. ಮೈಲಾರಿ 2. ನಿಂಗಿ ಪ್ರಸಕ್ತವಾದ ಜಮೀನು ಎರಡು ತಾಕುಗಳ ಕ್ರಯದಾರರಾಗಿ
3	19-4-1900ನೆ ಮುರ್ತಂನ ಬಾಬತು ಮೈಸೂರ ಗೆಜೆಟ್ಟನಲ್ಲಿ 9ನೆ ನಂಬರು ಕೇಸಾಗಿ ನೋಟಿಫಿಕೇಷನಿಸಿ ಪ್ರಾಯಿಷಾಗಿರುವ ಜಮೀನು ಸರ್ವೆ ನಂಬರು 94 (ಪೈಕಿ 1) ಖಾತೆ ಪುಟ್ಟನರಸಿಂಹೈಯ್ಯನ ಹೆಸರಿನಲ್ಲಿದೆ.	222—8—0	ಖಾದ್ರಿಶೆಟ್ಟಿ ಕ್ರಯದಾರನಾಗಿ

ಕೆ. ಮುತ್ತಾಣ್ಣ,
ಫಾರ್ ಡೆಪ್ಯೂಟಿ ಕಮಿಷನರ.

ಕಡೂರು ಡಿಸ್ಟ್ರಿಕ್ಟ್.

ನೋಟಿಸ್.

ಸನ್ 1904ನೆ ಇಸವಿ ಮಾರ್ಚಿ ತಾರೀಖು 10, ಚಿಕ್ಕಮಗಳೂರು.

ಮೂಡಿಗೆರೆ ತಾಲ್ಲೂಕಿನಲ್ಲಿ ಇರುವ ತಮ್ಮಾಬಾಳೂರು ಕಾಫಿ ಯಸ್ಟೇಟಿಗೆ ಕೆಲವು ಕಾಡು ದನಗಳ ಗುಂಪುಗಳು ಬಂದು ಕೆಡಕು ಮಾಡುತ್ತವೆ ಎಂತಲೂ ಅವುಗಳನ್ನು ಹಿಡಿದು ದೊಡ್ಡಿಗೆ ಕಳುಹಿಸುವದಕ್ಕೆ ಅಸಾಧ್ಯವಾಗಿ ಇರುತ್ತೆಂತಲೂ, ಸದರಿ ಎಸ್ಟೇಟ್ ಮೆ॥ ಜರಲ್ಡ್ ಅಟ್ಕಿನ್ಸನ್ ಸಾಹೇಬರವರು ಫಿರ್ಯಾದು ಮಾಡಿದ್ದರ ಮೇಲೆ ಸದರಿ ಜಾನುವಾರುಗಳ ಮಾಲೀಕರುಗಳು ಅವುಗಳನ್ನು ಕಟ್ಟಿ ಹಾಕಿಕೊಳ್ಳದೆ ಹೋದಲ್ಲಿ ಅವುಗಳನ್ನು ನಾಶ ಪಡಿಸುವ ಬಗ್ಗೆ ಲೈಸೆನ್ಸು ಕೊಡಲ್ಪಡುತ್ತೆಂದು 4—12—03ನೆ ಮುರ್ತಂನಲ್ಲಿ ನೋಟಿಸು ಕೊಟ್ಟಿರುತ್ತಷ್ಟೆ ; ಈ ದನಗಳ ಹಾವಳಿಯು ಅದ್ಯಾಪಿ ನಿಲ್ಲಲಿಲ್ಲವೆಂಬದಾಗಿ ಮೆ॥ ಅಟ್ಕಿನ್ಸನ್ ಸಾಹೇಬರು ಚೀಟಿ ಬರೆದಿರುತ್ತಾರಾಗಿ ಪ್ರಕಟಂ ಮಾಡಿದೆ.

ಸದರೀ ಗುಂಪಿಗೆ ಸೇರಿದ ಕಾಡುದನಗಳನ್ನು ಯಾರಾದರು ಮೂಡಿಗೆರೆ ತಾಲ್ಲೂಕು ಕಚೇರಿಗೆ ತಂದು ಹಾಜರು ಪಡಿಸಿದ್ದಲ್ಲಿ ಅಂಥಾವರಿಗೆ ದೊಡ್ಡ ರಾಸು 1ಕ್ಕೆ ಐದು ರುಪಾಯಿಗಳಂತೆಯೂ ಇತರ ರಾಸು 1ಕ್ಕೆ ಎರಡು ರುಪಾಯಿಗಳಂತೆಯೂ ಇನಾಂ ಕೊಡಲ್ಪಡುತ್ತೆ.

ಎಂ. ನಾರಾಯಣರಾವ್,
ಡೆಪ್ಯೂಟಿ ಕಮಿಷನರ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ಆಫೀಸಿನಿಂದ.

ತಾರೀಖು 16ನೆ ಮಾರ್ಚಿ 1904.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಟವರ್ನ ಸರಹದ್ದಿನಲ್ಲಿ ಜಮಾಯಿಸತಕ್ಕ ಕಚರಾವನ್ನು ಇದರೊಡನೆ ಜಂಟಿಸಿರುವ ಪಟ್ಟೀ ಮೇರೆಗೆ ರೂಢಿಸಿಕೊಳ್ಳುವ ಬಗ್ಗೆ ಸ್ನ 1904ನೆ ಇಸವಿ ಜುಲೈ ಗುರ್ರೇ ಲಾಗಾಯಿತು 1905ನೆ ಇಸವಿ ಜೂನ್ ಆಖ್ಯೆರ್ ಮಿನಹು ಇದರಡಿ ಕಂಡಿರುವ ಷರತ್ತುಗಳನ್ನು ಅನುಸರಿಸಿ ಏಪ್ರೈಲ್ 16ನೆ ತಾರೀಖು ಶನಿವಾರ ದಿವಿ 2 ಘಂಟೆಗೆ ಬೋರ್ಡ್ ಆಫೀಸಿನಲ್ಲಿ ಹರಾಜು ಮಾಡಲ್ಪಡುತ್ತಾಗಿ ಇದನ್ನು ದರಖಾಸ್ತು ಮಾಡಿ ತೆಗದುಕೊಳ್ಳತಕ್ಕ ಇಷ್ಟವುಳ್ಳವರು ಹಾಜರಾಗಿ ಸವಾಲ್ಮಾಡಿ ತೆಗದುಕೊಳ್ಳಬಹುದು. ಛಡ ಸವಾಲ್ದಾರನ ಸವಾಲ್ ಖೈದಾದ ಕೂಡ್ಲೆ ಶೇಕಡಾ 25 ರೂಪಾಯಿ ಮೇರೆಗೆ ಆಗುವ ಮೊಬಲಗನ್ನು ಡಿಪಾಜಿಟ್ ಹಾಜರ್ಮಾಡಬೇಕು. ತಪ್ಪಿದಲ್ಲಿ ಸದರೀ ಸವಾಲ್ ಕ್ಯಾನ್ಸಲ್ಮಾಡಲ್ಪಟ್ಟು ಬಾಬು ಪುನಹ ಹರಾಜ್ ಮಾಡಿಸುವದರಲ್ಲಿ ಉಂಟಾಗುವ ಲುಕ್ಸಾನು ಅವಲ್ ದರಖಾಸ್ತುದಾರನಿಂದಲೇ ವಸೂಲ್ಮಾಡಲ್ಪಡುತ್ತೆ. ಎಲ್ಲಾ ಸವಾಲ್ಗಿಂತ ಹೆಚ್ಚಾದ ಅಥವಾ ಇನ್ಯಾವ ಸವಾಲನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು. ಮತ್ತು ಯಾವ ಸಬಬನ್ನು ತೋರಿಸದೆ ಯಾವ ಸವಾಲನ್ನೇ ಆಗಲಿ ನಿರಾಕರಿಸಬಹುದು.

ಷರತ್ತುಗಳು.

1. ಆಯಾಯ ಡಿವಿಜನ್ಗೆ ಸೇರಿದ ರೋಡುಗಳಲ್ಲಿಯೂ, ಗಲ್ಲಿಗಳಲ್ಲಿಯೂ ಸಹ ಸ್ವೀಪರ್‌ಗಳಿಂದ ಗುಡಿಸಿ ತೊಟ್ಟಿಗಳಲ್ಲಿ ಮತ್ತು ರಸ್ತೆ ಬಾಜೂದಲ್ಲಿ ಜಮಾಯಿಸಲ್ಪಡುವ ಕಚರಾವನ್ನು, ಮಳೆಕಾಲದಲ್ಲಿಯೂ ಬೇಸಿಗೆಕಾಲದಲ್ಲಿಯೂ ಸಹ ಬೆಳಿಗ್ಗೆ 5 ಘಂಟೆ ಲಾಗಾಯಿತು 9 ಘಂಟೆ ವರೆಗೂ, ಮಧ್ಯಾಹ್ನ 2 ಘಂಟೆ ಲಾಗಾಯಿತು 5 ಘಂಟೆ ವರೆಗೂ ಒಂದು ದಿವಸ್ಸೂ ತಪ್ಪದೆ ಕ್ಲುಪ್ತವಾದ ಕಾಲಕ್ಕೆ ಸರಿಯಾಗಿ ಆಯಾಯ ದಿವಸವೇ ಟೌನ್ ಸರಹದ್ದಿನಿಂದ ಹೊರಕ್ಕೆ ಸಾಗಿಸಿಕೊಂಡು ಹೋಗಬೇಕು. ತಪ್ಪಿದಲ್ಲಿ ರೋಜೀನಾ ಹೆಲ್ತ್ ಆಫಿಸರು ನೇಮಿಸತಕ್ಕ 5 ರೂಪಾಯಿಗೆ ಮೀರದ ಜುರ್ಮಾನೆ ಕೊಡುವದಕ್ಕೆ ಬದ್ಧರಾಗಿರಬೇಕು. ಮತ್ತು ಆ ಪ್ರಕಾರ ಕಚರಾವನ್ನು ಸಾಗಿಸುವದಕ್ಕೆ ತಪ್ಪಿಹೋದ ದಿವಸದಲ್ಲಿ ಇತರ ಭಂಡಿಗಳನ್ನು ಇಡಿಸಿ ಮ್ಯುನಿಸಿಪಲ್ ಅಧಿಕಾರಸ್ಥರು ತೆಗದು ಹಾಕುವದಕ್ಕೆ ತಗಲುವ ಲಾಗವತು ಎಷ್ಟು ಆಗುತ್ತದೆಯೋ ಅದನ್ನು ಕೊಡುವದಕ್ಕೆ ಸಹ ಬದ್ಧರಾಗಿರಬೇಕು.

2. ಆಯಾ ಭಾಗದ ಸರಹದ್ದಿನಲ್ಲಿ ಮ್ಯುನಿಸಿಪಲ್ ಮಾರ್ಫತ್ತು ಮನೆಗಳ ಪಾಯಿಖಾನೆ ಗೊಬ್ಬರವನ್ನು ಪ್ರತಿದಿನವೂ ಸಾಗಿಸತಕ್ಕ ಬಗ್ಗೆ ಹಾಲಿ ಗೊತ್ತಾಗಿರುವ ಮತ್ತು ಆಗಿಂದಾಗ್ಯೆ ಗೊತ್ತುಮಾಡಲ್ಪಡುವ ಮನೆಗಳ ಪಾಯಿಖಾನೆಯನ್ನು ಪ್ರತಿ ದಿವಸವೂ ಐಯಿಂದ ನೇಮಕವಾಗುತ್ತಾ ಬರುವ ಮನೆಗಳ ಪಾಯಿಖಾನೆ ಗೊಬ್ಬರವೂ ತಪ್ಪದೆ ತಿಂಗಳಿಗೊಂದಾವರ್ತಿ ಅಥವಾ ಕೆಲವು ಸ್ಪೆಷಿಯಲ್ ಕೇಸುಗಳಲ್ಲಿ ತಲಬು ಮಾಡಿದವ್ಯಾಳೆ ಸಾಗಿಸಿಕೊಂಡು ಸಾಫ್ ಮಾಡಿಸುತ್ತಾ ಬರಬೇಕು. ಇದಕ್ಕೆ ತಪ್ಪಿದರೆ ಮೇಲೆ ಕಂಡ 1ನೆ ಕಲಂನಲ್ಲಿ ಗೊತ್ತುಮಾಡಿರುವ ಮೇರೆಗೆ ಜುರ್ಮಾನೆಗೂ ಮತ್ತು ಲುಕ್ಸಾನ್ ಮೊಬಲಗು ಕೊಡುವದಕ್ಕೂ ಕಂಟ್ರಾಕ್ಟುದಾರ ಬಳಪಟ್ಟಿರಬೇಕು.

3. ಹಾಗೆ ಪಾಯಿಖಾನೆ ಗೊಬ್ಬರ ಸಾಗಿಸುವಲ್ಲಿ ಭಾಂಡಿ ಮಕ್ಕರಿಗಳಲ್ಲಿ ಮೊದಲು ಕಚರಾ ಹಾಕಿ ಮಧ್ಯದಲ್ಲಿ ಪಾಯಿಖಾನೆ ಗೊಬ್ಬರ ಭರ್ತೀಮಾಡಿ ಅದರಮೇಲೆ ಪುನಹ ಕಸ ಹಾಕಿ ಅದರ ದುರ್ಗಂಧ ಹೊರಗೆ ಬಾರದಂತೆಯೂ, ದಾರಿಗಳಲ್ಲಿ ಚಲ್ಲದಂತೆಯೂ ಮಕ್ಕರಿ ಹಿಂಭಾಗದಲ್ಲಿ ಜಾಕಾಯಿ ಹಲಿಗೆಯಿಂದ ತಡೆ ಕಟ್ಟಿರಬೇಕು. ಮತ್ತು ಮಕ್ಕರಿಯ ಕಸದಮೇಲೆ ಚಾಪೆಯಿಂದ ಕಾಣದಂತೆ ಮುಚ್ಚಿ ಇರಬೇಕು.

4. ಭಂಡಿಗಳು ಮತ್ತು ಅವುಗಳ ಮೇಲೆ ಇರತಕ್ಕ ಭಂಡಿ ಮಕ್ಕರಿಗಳೂ ಸಹ ದೊಡ್ಡವಾಗಿಯೂ ಮಜಬೂತಾಗಿಯೂ, ಸಗಣಿಯಿಂದ ಸಾರಿಸಲ್ಪಟ್ಟವಂಥವಾಗಿಯೂ ಇರಬೇಕು. ಎತ್ತುಗಳು ಎಳೇವಯಸ್ಸುಳ್ಳವಾಗಿ ಧೃಡವಾಗಿ ಇರಬೇಕು.

5. ದರಖಾಸ್ತು ಮಂಜೂರಾದ ನಂತರ ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನು ನಾಲ್ಕು ಖಿಸ್ತಿನಲ್ಲಿ ಅಂದರೆ 1ನೆ ಖಿಸ್ತು 1904ನೆ ಇಸವಿ ಸೆಪ್ಟಂಬರ್ ಆಖ್ಯೆರ್ ವರಿಗಿನದು 1904ನೆ ಜುಲೈ 1ನೆ ತಾರೀಖಿನಲ್ಲಿಯೂ, 2ನೆ ಖಿಸ್ತು 1904ನೆ ಇಸವಿ ಡಿಸೆಂಬರ್ ಆಖ್ಯೆರ್ ವರಿಗಿನದು 1904ನೆ ಇಸವಿ ಆಕ್ಟೋಬರ್ 1ನೆ ತಾರೀಖಿನಲ್ಲಿಯೂ, 3ನೆ ಖಿಸ್ತು 1905ನೆ ಮಾರ್ಚಿ ಆಖ್ಯೆರ್ ವರಿಗಿನದು 1905ನೆ ಇಸವಿ ಜನವರಿ 1ನೆ ತಾರೀಖಿನಲ್ಲಿಯೂ, 4ನೆ ಖಿಸ್ತು 1905ನೆ ಜೂನ್ ಆಖ್ಯೆರು ವರಿಗಿನದು 1905ನೆ ಏಪ್ರೈಲ್ 1ನೆ ತಾರೀಖಿನಲ್ಲಿಯೂ ತಪ್ಪದೆ ಅಡ್ವಾನ್ಸಾಗಿ ಹಾಜರ್ಮಾಡಿ ರಸೀದಿ ಪಡದುಕೊಳ್ಳಬೇಕು. ಈರೀತಿ ಮೊಬಲಗು ಪಾವತಿ ಮಾಡಲು ತಪ್ಪಿದರೆ ಕಂಟ್ರಾಕ್ಟಿನ ಒಟ್ಟು ಮೊಬಲಗನ್ನು ಒಂದೇ ಗಂಟಿನಲ್ಲಿ ಡಿಮ್ಯಾಂಡ್ ಮಾಡಿದ ಒಡನೇ ಬಿನ್ ತಕರಾರ್ ಪಾವತಿ ಮಾಡಬೇಕು. ಇದಕ್ಕಾಗಿ ಸ್ಟಾಂಪು ಕಾಗದ್ದಲ್ಲಿ ಕಂಟ್ರಾಕ್ಟುದಾರನು ಮೇಲೆ ಹೇಳಿದ ಎಲ್ಲಾ ಷರತ್ತುಗಳನ್ನು ಕಾಣಿಸಿ ಕಂಟ್ರಾಕ್ಟು ಮಂಜೂರಾದ 3 ದಿವಸದಲ್ಲಿ ಮುಚ್ಚಳಿಕೆ ಬರದುಕೊಡಬೇಕು. ಈ ಷರತ್ತುಗಳ ಪೈಕಿ ಯಾವದಕ್ಕೇ ಆಗಲಿ ವಿರೋಧವಾಗಿ ನಡದುಕೊಂಡರೆ ಆ ಕೂಡ್ಲೆ ಅವನ ಕಂಟ್ರಾಕ್ಟನ್ನು ರದ್ದುಮಾಡಿ ಬೇರೆ ಜನರಿಗೆ ಕಂಟ್ರಾಕ್ಟು ಕೊಡುವದಲ್ಲದೆ ಲುಕ್ಸಾನ್ ಮೊಬಲಗಿಗೆ ಅವಲ್ ಕಂಟ್ರಾಕ್ಟುದಾರನನ್ನು ಗುರಿಮಾಡಿ ಜಪ್ತಿ ಹರಾಜ್ ಮೂಲಕ ಹಣ ವಸೂಲ್ಮಾಡಿಕೊಳ್ಳಲ್ಪಡುತ್ತೆ.

6. ಕಡಿಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿ ಇರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

7. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖ್ಯೆರಾಗುವ ವರಿವಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟುಕಾಲದಲ್ಲಿ 1ನೆ ಷರತ್ತಿನಲ್ಲಿ ಕಂಡಂತೆ ಇವನಿಗೆ ವಿಧಿಸುವ ಜುಲ್ಮಾನೆಗಳನ್ನು ಅಥವಾ ಖರ್ಚುಗಳನ್ನು ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಗೆ ಕಂಟ್ರಾಕ್ಟುದಾರನಿಗೆ ನೋಟೀಸು ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ಪೂರಾ ಅಥವಾ ಉಳಿದದ್ದು ವಾಪಸು ಮಾಡಲ್ಪಡುವದು.

8. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಪೋಟಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನು ಬಿನ್ ತಕರಾರು ತೆಗದುಕೊಳ್ಳಲು ಸಲೀಸು ಪಿರ್ಯಾದು ಇಡತಕ್ಕದ್ದು.

9. ಗೊಬ್ಬರದ ಭಂಡಿಗಳಿಗಾಗಿ ಮಾಫೀ ಪ್ಯಾಸುಗಳು ದೊರೆಯಲಾರವು. ಟೋಲ್ ಗೇಟುಗಳಲ್ಲಿ ಈ ಸಿಟಿಗೆ ಸೇರಿ ಲೈಸೆನ್ಸು ಪಡೆಯದೆ ಇರುವ ಭಂಡಿಗಳು ಬಂದರೆ ಅವುಗಳಿಗಾಗಿ ಟೋಲ್ ಪಾವತಿ ಮಾಡಬೇಕು.

ನಂಬರ್.	ಡಿವಿಜನ್.	ಬ್ಲಾಕ್.	ರೋಡಿಗಳ ತಪಶೀಲ್ ಮತ್ತು ಚಕ್ಕುಬಂದಿ.
1	I	"	1ನೆ ಡಿವಿಜನ್ ನಾರದರ್ನ ಎಕ್ಸ್ಟೆನ್ಷನ್ ಮಾಲೇನಹಳ್ಳಿ. ಪಿಂಡಾರಿಕೆರಿ ಎಲ್ಲಾ ಸಬರ್ಬನ್ ರೋಡುಗಳು ಗುಟ್ಟಹಳ್ಳಿ ಮುನಿರೆಡ್ಡಿಪಾಳ್ಯ ವಗೈರೆ ಡಿವಿಜನ್‌ಗೆ ಸೇರಿದ ಎಲ್ಲಾ ಭಾಗಗಳು ರಾತ್ರಿ ಕಾಲದಲ್ಲಿ ಕಾಲ ಎತ್ತುತ್ತಿರುವ ಮುಂದೆ ಎತ್ತಬ್ಬಹುವ ಬಂಗೆಗಳ ಪಾಯಿಖಾನೆ ವಿನಹ.
2	II	1	ಕಿಚ್ಚಿಶೆಟ್ಟಿ ಛತ್ರದ ರೋಡು ಸೇರಿ ಅವಿನ್ಯೂ ರೋಡ್ ಅಂಜನೇಯನ ಗುಡಿ ಚವುಕದ ವರಿಗೆ, ಅಲ್ಲಿಂದ ಗುಡುಮೈಯ್ಯನ ಪೇಟೆ ದೊಡ್ಡರೋಡಿನಿಂದ ಬಳೇಪೇಟೆ ರೋಡಿನವರಿಗೆ, ಮತ್ತು ಉತರಕ್ಕೆ ಸುಬೇದಾರ್ ಛತ್ರ ರೋಡ್ ಆಯ್ಯರು ವರಿಗೆ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
3	"	2	ಅವಿನ್ಯೂ ರೋಡ್ ಅಂಜನೇಯನ ಗುಡಿ ಚವುಕ ಮೊದಲು ದೊಡ್ಡಪೇಟೆ ಚವುಕದಿಂದ ತಾಲ್ಲೂಕ್ ಕಚೇರಿ ರೋಡ್ ಜಹಗೀರ್‌ದಾರ್ ಮನೆ ಚವುಕ ಬಳೇಪೇಟೆ ಗುಡುಮೈಯ್ಯನ ಪೇಟೆ ರೋಡ್ ವರಿಗೂ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
4	"	3	ತಾಲ್ಲೂಕು ಕಚೇರಿ ರೋಡ್ ಬಳೇಪೇಟೆ ಚವುಕದ ಮೊದಲು ಮದರಾಸ್ ಗೂಡ್ಸ್ ಗೇಟ್ ವರಿಗೆ ಅಲ್ಲಿಂದ ರೈಲ್ವೆ ಸ್ಟೇಷನ್ ಸ್ಟಾಫ್ ಕ್ವಾರ್ಟರ್ಸ್ ವಗೈರೆ ಕಕ್ಕಸಿಗಳು ಮತ್ತು ಮನೆಗಳು ಧರ್ಮಾಂಬುಧಿಕೆರೆ ಸುತ್ತಲೂ ರೋಡ್, ಹಳೆ ಸವಾರ ಲೈನಿಗೆ ಸೇರಿದ ಪೊಲೀಸ್ ಸ್ಟೇಷನ್ ವಗೈರೆ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
5	III	1	ಮಾರ್ಕೆಟ್ ಚವುಕದ ಮೊದಲು ದೊಡ್ಡಪೇಟೆ ಚವುಕದಿಂದ ತಾಲ್ಲೂಕ್ ಕಚೇರಿ ರೋಡ್ ಮೇಟಿಕಲ್ ರೋಡ್‌ವರಿಗೂ, ಅಲ್ಲಿಂದ ಮ್ಯುನಿಸಿಪಲ್ ಸ್ಕೂಲ್ ಬಳಿ ಚವುಕದಿಂದ ಮಾರ್ಕೆಟ್ ಚವುಕದವರಿಗೆ, ಈ ಮಧ್ಯೆ ಗುಂಡೋಪಂತರ ರೋಡ್, ತರಗಿನಪೇಟೆ, ಮಾಮೂಲ್‌ಪೇಟೆ ರಸ್ತೆಗಳು, ಒಳಗಲ್ಲಿಗಳು.
6	"	2	ಮ್ಯುನಿಸಿಪಲ್ ಸ್ಕೂಲ್ ಬಳಿ ಚವುಕದ ಮೊದಲು ಪೊಲೀಸ್ ರೋಡ್ ಅಕ್ಕಿಪೇಟೆ ರೋಡ್ ವರಿಗೂ. ಅಲ್ಲಿಂದ ಅಕ್ಕಿಪೇಟೆ ರೋಡ್ ಅನಾಮತ್ತು ತಾಲ್ಲೂಕು ಕಚೇರಿ ರೋಡ್ ರಾಘವಾಚಾರ್ಲು ಮನೆ ಬಳಿ ಚವುಕದಿಂದ ತಾಲ್ಲೂಕು ಕಚೇರಿ ರೋಡ್ ಮೇಟಿಕಲ್ಲು ರೋಡ್ ಚವುಕದ ವರಿಗೂ, ಈ ಮಧ್ಯೆ ಇರುವ ಜಂಬೂನಪೇಟೆ, ಸುಲ್ತಾನ್‌ಪೇಟೆ, ಸಂತೂಸಾಪೇಟೆ, ಮನವಾರ್ತೇಪೇಟೆ ರೋಡ್‌ಗಳು, ಗಲ್ಲಿಗಳು.
7	"	3	ಪೊಲೀಸ್ ರೋಡ್ ಅಕ್ಕಿಪೇಟೆ ಚವುಕದ ಲಾಗಾಯಿತು ತೋಟದ್ದೇವರ ಮಠದ ವರಿಗೂ, ಅಲ್ಲಿಂದಾ ಉಲನ್ ಮಿಲ್ ಟ್ಯಾಂಕ್ ಬಂಡ್ ರೋಡ್ ಮೈಸೂರು ರೈಲ್ವೆ ಗೂಡ್ಸ್ ಗೇಟ್ ತಾಲ್ಲೂಕ್ ಕಚೇರಿ ರೋಡ್ ಅಕ್ಕಿಪೇಟೆ ಚವುಕದವರಿಗೆ. ಈ ಮಧ್ಯೆ ಇರುವ ಗೌಡನ್‌ಪೇಟೆ, ಅರಳೇಪೇಟೆ ಅಕ್ಕಿಪೇಟೆ ಗಲ್ಲಿಗಳು, ರಸ್ತೆಗಳು.
8	"	4	ತರಕಾರಿ ಮಾರ್ಕೆಟ್‌ಬಳಿ ಆಸ್ಪತ್ರೆ ಮೊದಲು ಮೈಸೂರು ರೋಡ್ ಬ್ಯಾರಲ್ಸ್‌ವರಿಗೂ, ಅಲ್ಲಿಂದ ಕೆಂಗೇರಿ ಬಾಗಲ್ ಪೊಲೀಸ್ ಸ್ಟೇಷನ್‌ವರಿಗೆ, ಸ್ಟೇಷನ್ನಿಂದ ರಾಣಾಸಿಂಗನ ಪೇಟೆ ಬೇಲಿ. ಈ ಮಧ್ಯೆ ಇರುವ ರಸ್ತೆಗಳು, ಗಲ್ಲಿಗಳು ಮತ್ತು ಹಳೇ ಬಾರ್ ಲೈನ್ ಬಾಜು ಇರುವ ಪೆನ್ಷನ್ ಲೈನ್, ಚಲವಾದಿ ಪಾಳ್ಯ ವಗೈರೆ.
9	IV	1	ಹಲಸೂರು ಗೇಟ್ ಪೊಲೀಸ್ ಸ್ಟೇಷನ್ ಮೊದಲು ತಾಲ್ಲೂಕ್ ಕಚೇರಿ ರೋಡ್ ನಗರ್ತರಪೇಟೆ ಅಣ್ಣಯ್ಯಪ್ಪ ಶೆಟ್ಟರ ಮನೆವರಿಗೂ, ಅಲ್ಲಿಂದಾ ಉತ್ತರಕ್ಕೆ ಸೈಬಶೆಟ್ಟರ ಗಲ್ಲಿಯಿಂದಾ ಜುಮ್ಮಾ ಮಸೀತಿ ಮುಂಭಾಗದಿಂದ ನಾರಾಯಣಶೆಟ್ಟಿ ಪೇಟೆ ರೋಡ್ ಸೇರಿ ಕಬ್ಬನ್‌ಪೇಟೆ ಸಾರಾಯಿ ಅಂಗಡಿ ಗಲ್ಲಿ ಚವುಕದವರಿಗೆ, ಅಲ್ಲಿಂದಾ ಕಬ್ಬನ್ ಸಾಬರಪೇಟೆ ರೋಡ್ ಸೇರಿ ಹಲಸೂರು ಗೇಟಿನ ವರಿಗೆ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
10	"	2	ನಗರ್ತರಪೇಟೆ ಅಣ್ಣಯ್ಯಪ್ಪಶೆಟ್ಟರ ಮನೆ ಲಾಗಾಯಿತು ದೊಡ್ಡಪೇಟೆ ಚವುಕ ಅವಿನ್ಯೂ ರೋಡ್ ಸೇರಿ ಎಲಹಂಕದ ಬಾಗಲ್ ಪೊಲೀಸ್ ಸ್ಟೇಷನ್‌ವರಿಗೂ, ಅಲ್ಲಿಂದ ಡಿಸ್ಟ್ರಿಕ್ಟ್ ಆಫೀಸ್ ರೋಡ್ ಸೆನಟೂಫ್ ಕಬ್ಬನ್‌ರೋಡ್ ಸಾರಾಯಿ ಅಂಗಡಿ ಗಲ್ಲಿ ಚವುಕದವರಿಗೆ. ಈ ಮಧ್ಯೆ ಇರುವ ಚವುಡೇಶ್ವರಿ ರೋಡ್ ಪಂಚಾಳದಪೇಟೆ ಮುಕ್ಕಾಳು ಬಸವಣ್ಣನ ಗುಡಿ ರೋಡ್ ಕವಾಡಿ ರೇವಣ್ಣನಪೇಟೆ ರಸ್ತೆಗಳು, ಗಲ್ಲಿಗಳು.

ನಂಬರ್.	ಡಿವಿಜನ್.	ಬ್ಲಾಕ್.	ರೋಡುಗಳ ತಪಶೀಲು ಮತ್ತು ಚಕ್ಕುಬಂದಿ.
11	V	2	5ನೆ ಡಿವಿಜನ್ ಮಾಮೂಲ್ ಮೇರೆಗೆ.
12	VI	1	ಮಾರ್ಕೆಟ್ ಚವುಕದ ಮೊದಲು ಬೊಂಬು ಬಜಾರ್ ರೋಡ್, ಮಿರ್ಜಾರೋಡ್, ಲಾಲ್‌ಬಾಗ್ ರೋಡ್, ಬ್ಯಾಟಪ್ಪನ ತೋಪಿನಿಂದ ಬಕೆಟ್ಟುಭಾವಿ ಬಳಿ ಗಲ್ಲಿಯಿಂದ ಮಾವಹಳ್ಳಿ, ಕೆರೆಕಟ್ಟೆ ಕಲಾಸಿ ರೋಡ್, ಹಳೇ ಪೊಲೀಸ್ ಸ್ಟೇಷನ್ ಚವುಕದ ವರೆಗೆ. ಈ ಮಧ್ಯೆ ಇರುವ ಅಮ್ಮಾಜಪ್ಪನಪಾಳ್ಯ, ಗಂಗಮ್ಮಚೇರಿ ರಸ್ತೆಗಳು, ಗಲ್ಲಿಗಳು.
13	,,	2	ಕಲಾಸಿ ಲೈನು ಹಳೇ ಪೊಲೀಸ್ ಸ್ಟೇಷನ್ನಿಂದ ಕೊರಚರ ಪಾಳ್ಯದ ರೋಡ್ ಕಾರಂಜಿ ಕೆರೆಕಟ್ಟೆ ಬುಚ್ಚಣ್ಣನ ತೋಪುವರೆಗೂ, ಅಲ್ಲಿಂದ ಉಪ್ಪಾರಹಳ್ಳಿ, ಚಿಕ್ಕ ಮಾವಹಳ್ಳಿ, ದೊಡ್ಡ ಮಾವಹಳ್ಳಿ ಕನಕನಪಾಳ್ಯ ಲಾಲ್‌ಬಾಗ್ ರೋಡ್ ಗೇಟಿನ ವರೆಗೂ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
14	VII	,,	7ನೆ ಡಿವಿಜನ್ ಕೋಟೆ ಮಾಮೂಲ್ ಮೇರೆಗೆ.
15	,,	,,	ಚಾಮರಾಜೇಂದ್ರಪೇಟೆ, ಹೊಸ ತರಗಿನಪೇಟೆ, ಗುಟ್ಟಹಳ್ಳಿ, ಗವಿಪುರ, ಮಾದಿಗರ ಪಾಳ್ಯ ವಗೈರೆ ಡಿವಿಜನಿಗೆ ಸೇರಿದ ರೋಡುಗಳು, ಗಲ್ಲಿಗಳು ಯಾವತ್ತೂ.
16	,,	,,	ಬಸವಣ್ಣನಗುಡಿ ಎಕ್ಸ್‌ಟೆನ್ಷನ್.
17	,,	,,	ಮಲ್ಲೇಶ್ವರ ಎಕ್ಸ್‌ಟೆನ್ಷನ್.

ಪಿ. ಪಲ್ಪ್,
ಫಾರ್ ಪ್ರೆಸಿಡೆಂಟ್.

ಮೈಸೂರ ಗೆಜೆಟ್.

ನಂ. 39. ಸರ್ಕಾರದಿಂದ ಪ್ರಾಯಿಷ್ ಆದ್ದು. ನಂ. 14.

ಬೆಂಗಳೂರು, ಗುರುವಾರ, ಏಪ್ರೆಲ್ ತಾ॥ 7, ಸೆ 1904.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ–ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೆ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಇಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ್ಕ್ಸ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜಿರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೋಲೀಸ್ ಸೂಪರ್ಇಂಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸ್‌ಗಳು.

3ನೆ ಭಾಗ–ಲೆಜಿಸಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲ.

4ನೆ ಭಾಗ–ಸರ್ಕಾರೀ ಕಾಗದಪತ್ರಗಳು ಇಲ್ಲಾ.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 22ನೆ ಮಾರ್ಚಿ 1904.

ನಂ. ಜೋ. ಬೋ. ಪಿ. 1260, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮುರ್ರ್ಕಂ 9383–ಮಿ. ಫೈ. 21–96ನೆ ಮತ್ತು 9384—ಮಿ. ಫೈ. 21–96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಕೋಲಾರ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿರುವ ಅಡಿಯೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಜಂಗಮಕೋಟೆ ..	ಶಿಡ್ಲಘಟ್ಟ	13. ಚನ್ನಗಿರಾಯಪುರ ..	ಮಾಲೂರು
2. ಕಾಲನಾಯಕನಹಳ್ಳಿ ..	ಡಿಟೋ	14. ಅಜ್ಜಪ್ಪನಹಳ್ಳಿ ...	ಡಿಟೋ
3. ಚೊಕ್ಕೊಂಡಹಳ್ಳಿ ...	ಡಿಟೋ	15. ಹೊಸಕೋಟೆ ...	ಡಿಟೋ
4. ಯನ್ನೂರು ...	ಡಿಟೋ	16. ಮಡಿವಾಳ ..	ಡಿಟೋ
5. ಎಡ್ಗೋಡು ..	ಡಿಟೋ	17. ಕದರಿದೇವನಹಳ್ಳಿ ..	ಚಿಕ್ಕಬಳ್ಳಾಪುರ
6. ಬಾಚಹಳ್ಳಿ ...	ಡಿಟೋ	18. ಅಡ್ಡಗರಹಳ್ಳಿ ...	ಡಿಟೋ
7. ಕಾಮಸಂದ್ರ ...	ಬಾರಿಂಗ್‌ಪೇಟೆ	19. ಹೊನ್ನಪ್ಪನಹಳ್ಳಿ ..	ಡಿಟೋ
8. ಚಿಕ್ಕನಲ್ಲಗುಟ್ಟಪಲ್ಲಿ ...	ಡಿಟೋ	20. ಕಾಚಹೂರು ..	ಡಿಟೋ
9. ಕಾಮನಪಲ್ಲಿ ...	ಡಿಟೋ	21. ಮರಳಿಕುಂಟೆ ..	ಡಿಟೋ
10. ಸಾಲಿಕುಂಟೆ ..	ಡಿಟೋ	22. ದೊಡ್ಡರಾಗಲಹಳ್ಳಿ	ಶ್ರೀನಿವಾಸಪುರ
11. ದೇವರಡ್ಡಿಪಲ್ಲಿ ...	ಬಾಗೇಪಲ್ಲಿ	23. ಎರಂಡಹಳ್ಳಿ ..	ಗೋರಿಬಿದನೂರು
12. ಚಿಂತಕಾಯಲಪಲ್ಲಿ ..	ಗುಡಿಬಂಡೆ ಸಬ್ ತಾ॥		

ಕಡೂರು ಡಿಸ್ಟ್ರಿಕ್ಟು.

1. ಸರಸ್ವತೀಪುರ ...	ಕಡೂರು	5. ಚೆನ್ನಾಪುರ ...	ಕಡೂರು
2. ಯಗಟಿ ..	ಡಿಟೋ	6. ಅತ್ತಿಗನಾಳ್ ..	ತರೀಕೆರೆ
3. ಯಳ್ಳಂಬಳಸೆ ...	ಡಿಟೋ	7. ಅತ್ತಿಮೊಗೆ ...	ಡಿಟೋ
4. ಕೋಡಿಹಳ್ಳಿ ...	ಡಿಟೋ	8. ಮಂದ್ರ ...	ಡಿಟೋ

ತಾರೀಖು 31ನೆ ಮಾರ್ಚಿ 1904.

ನಂ. ಲೋ. ಜೋ. ಪಿ. 1276, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧ ಪಡಿಸುವದೇನಂದರೆ, ಇದರಡೀ ಕಂಡ ಉತ್ಸವಕ್ಕೆ ಯಾತ್ರಾರ್ಥವಾಗಿ ಹೋಗುವದನ್ನು ಮದರಾಸು ಗವರ್ನಮೆಂಟನವರು ಅಡ್ಡಿಪಡಿಸುತ್ತಾರೆ: —

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಥಾರಿಟಿ.
				ಯಾವ ಲಾಗಾಯತು.	ಯಾವ ವರಿವಿಗೆ.	
ಶ್ರೀ ವೆಂಕಟ ರಮಣಸ್ವಾಮಿಯ ರಥೋತ್ಸವ.	ಮಡಕಸೀರ ..	ಮಡಕಸೀರ ..	ಅನಂತಪುರ.	20—4—04	2—5—04	ಫಸ್ಟ್ ಅಸಿಸ್ಟೆಂಟ ರೆಸಿಡೆಂಟರವರ ಎಂಡಾರ್ಸ್‌ಮೆಂಟ ನಂ. 503–ಪಿ., ತಾ||29–3–04

ತಾರೀಖು 2ನೆ ಏಪ್ರಿಲ್ 1904.

ನಂ. ಲೋ. ಜೋ. ಪಿ. 1291, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಾತ್ರೆ ವ ಉತ್ಸವಗಳಿಗೆ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮದರಾಸು ಗವರ್ನಮೆಂಟನವರು ಅಡ್ಡಿಪಡಿಸುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು	ಡಿಸ್ಟ್ರಿಕ್ಟು.	ತಾರೀಖು.		ಅಥಾರಿಟಿ.
				ಯಾವ ಲಾಗಾಯತು.	ಯಾವ ವರಿವಿಗೆ.	
ಚಿತ್ರೈ ಉತ್ಸವ ಮತ್ತು ದನಗಳ ಪರಸೆ	ಸಿವಲಪೇರಿ. .	ತಿನ್ನವಲ್ಲಿ ...	ತಿನ್ನವಲ್ಲಿ ...	1—4—04	30—4—04	ಫಸ್ಟ್ ಅಸಿಸ್ಟೆಂಟ ರೆಸಿಡೆಂಟರವರ ಎಂಡಾರ್ಸ್‌ಮೆಂಟ ನಂ. 505–ಪಿ., ತಾ|| 30–3–04
* ತಿರುಪ್ಪೂರು ರಥೋತ್ಸವ	ತಿರುಪ್ಪೂರು	ಪಲ್ಲಡಂ ...	ಕೊಯಿಮುತ್ತೂರು	1—6—04	12—6—04	ಡಿಟೋ ನಂ. 526 ಪಿ., ತಾ||31–3–04

* ಷರಾ.—ಯಾತ್ರಾರ್ಥವಾಗಿ ಹೋಗುವದು ಅಡ್ಡಿಪಡಿಸಲ್ಪಟ್ಟಿರುತ್ತದೆ.

ತಾರೀಖು 5ನೆ ಏಪ್ರಿಲ್ 1904.

ನಂ. ಲೋ. ಜೋ. ಪಿ. 1294, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಉತ್ಸವಕ್ಕೆ ಯಾತ್ರಾರ್ಥವಾಗಿ ಹೋಗುವದನ್ನು ಮದರಾಸು ಗವರ್ನಮೆಂಟನವರು ಅಡ್ಡಿಪಡಿಸುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಥಾರಿಟಿ.
				ಯಾವ ಲಾಗಾಯತು.	ಯಾವ ವರಿವಿಗೆ.	
ರಥೋತ್ಸವ ..	ಉಜ್ಜನಿ	ಕೂಡ್ಲಿಗಿ	ಬಳ್ಳಾರಿ	12–4—04	30–4–04	ಫಸ್ಟ್ ಅಸಿಸ್ಟೆಂಟ ರೆಸಿಡೆಂಟರವರ ಎಂಡಾರ್ಸ್‌ಮೆಂಟ ನಂ. 528-ಪಿ., ತಾ|| 2-4-04.

ತಾರೀಖು 5ನೆ ಏಪ್ರಿಲ್ 1904.

ನಂ. ಲೋ. ಬೋ. ಪಿ. 1296, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮರ್ಸ್ಸಂ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ತುಮಕೂರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಮಲ್ಲೇನಹಳ್ಳಿ	.. ತುಮಕೂರು	7. ಬಿದರೆ	... ಗುಬ್ಬಿ
2. ಮುತ್ತಸಂದ್ರ	.. ಡಿಟೋ	8. ಸೋಮಲಾಪುರ	.. ಡಿಟೋ
3. ಸ್ವಾಂದೇನಹಳ್ಳಿ	... ಡಿಟೋ	9. ಕರಡಿ	.. ತಿಪಟೂರು
4. ವಡ್ಡರಹಟ್ಟಿ	.. ಡಿಟೋ	10. ಕೊಟಗೇನಹಳ್ಳಿ	... ಡಿಟೋ
5. ತಿಂಗಳೂರು	.. ಮದ್ದಗಿರಿ	11. ಆಲದಹಳ್ಳಿ	... ಡಿಟೋ
6. ಲಕ್ಕೇನಹಳ್ಳಿ	... ಗುಬ್ಬಿ		

ತಾರೀಖು 31ನೆ ಮಾರ್ಚಿ 1904.

ನಂ. 3722—ಲೋ. ಫಂ. 77—03, ಸನ್ 1902ನೆ ಇಸವಿಯ 11ನೆ ನಂಬರ ಲೋಕಲ್ ಬೋರ್ಡ್ಸ್ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ಮತ್ತು 1903ನೆ ಸೆಪ್ಟಂಬರ 9ನೆ ಮರ್ಸ್ಸಂ 30—ಲೆಜಿಸ್. 4—03ನೆ ನಂಬರ ಇಸ್ತಿಹಾರ್ನಾಮೆಯೊಡನೆ ಪ್ರಾಯಿಸಾದ ರೂಲುಗಳ 21ನೆ ಪ್ಯಾರಾ ಅನುಸರಿಸಿ, ಸದರೀ ರೂಲುಗಳ 7ನೆ ಪ್ಯಾರಾವಿನಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ತಾಲ್ಲೂಕು ಬೋರ್ಡುಗಳ ಮೆಂಬರುಗಳ ಇದರಡೀ ನಮೂದಾದ ಪಟ್ಟಿಯು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಾಯಿಸ್ಮಾಡಲ್ಪಟ್ಟಿರುತ್ತದೆ:—

ಚಿಕ್ಕಬಳ್ಳಾಪುರ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1.	ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು ..	ಪ್ರೆಸಿಡೆಂಟರು.
2.	ಅಮಲ್ದಾರು ..	ವೈಸ್ ಪ್ರೆಸಿಡೆಂಟರು.
3.	ಲೋಕಲ್ ಫಂಡ್ ಡಿಸ್ಪೆನ್ಸೆರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು ..	ಮೆಂಬರು.
4.	ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫಿಸರು ..	ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5.	ಮ॥ ಬಿ ರಾಘವೇಂದ್ರಾಚಾರ್ರು	ಡಿಟೋ
6.	,, ರಂಗೇಗೌಡರು	ಡಿಟೋ
7.	,, ಲಕ್ಷ್ಮೀನಾರಣಪ್ಪನವರು ..	ಡಿಟೋ
8.	,, ವೆಂಕಟರಾಯಪ್ಪನವರು	ಡಿಟೋ

(f) ಕ್ಲಾಜ್ ಅನುಸರಿಸಿ

9.	,, ಎಚ್. ನಾರಸಿಂಹಯ್ಯನವರು ..	ಡಿಟೋ

(g) ಕ್ಲಾಜ್ ಅನುಸರಿಸಿ.

10.	,, ಫಾದರ್ ಬ್ಯಾರಿಯವರು	ಡಿಟೋ
11.	,, ಜೆ. ಸುಬ್ಬಾಶಾಸ್ತ್ರಿಯವರು	ಡಿಟೋ
12.	,, ಸಿ. ನಾರಾಯಣಸ್ವಾಮಿ ಶೆಟ್ಟರು	ಡಿಟೋ

ಗೋರಿಬಿದನೂರು ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1.	ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು ..	ಪ್ರೆಸಿಡೆಂಟರು.
2.	ಅಮಲ್ದಾರು ..	ವೈಸ್ ಪ್ರೆಸಿಡೆಂಟರು.
3.	ಲೋಕಲ್ ಫಂಡ್ ಡಿಸ್ಪೆನ್ಸೆರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು ..	ಮೆಂಬರು.
4.	ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫಿಸರು ..	ಡಿಟೋ

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

5. ಮ॥ ಪಟೇಲ್ ರಾಮಣ್ಣನವರು .. .. ಮೆಂಬರು.
6. ,, ನರಸಿಂಗರಾಯರು .... ಡಿಟೋ
7. ,, ಚಿಕ್ಕೆಗೌಡರು .. .. .. ಡಿಟೋ
8. ,, ಅಂಜನಿಗೌಡರು ... . ಡಿಟೋ

(*f*) ಕ್ಲಾಜ್ ಅನುಸರಿಸಿ.

9. ,, ಪಟೇಲ್ ವೆಂಕಟೇಗೌಡರು .. .. ಡಿಟೋ

(*g*) ಕ್ಲಾಜ್ ಅನುಸರಿಸಿ.

10. ,, ಎ. ಘೋರೆಸ್ವರವರು ... ... ಡಿಟೋ
11. ,, ಚಂಚರಡ್ಡಿಯುವರು .. .. .. ಡಿಟೋ
12. ,, ಟಿ. ನಂಜುಂಡಯ್ಯನವರು .. .. ಡಿಟೋ

ಬಾಗೇಪಲ್ಲಿ ತಾಲ್ಲೂಕು.

ಎಕ್ಸ್ ಆಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು .. ಪ್ರೆಸಿಡೆಂಟರು.
2. ಅಮಲ್ದಾರು) .. .. .. ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪತಾಲ್ ಅಸಿಸ್ಟೆಂಟರು... ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫಿಸರು .. ಡಿಟೋ

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

5. ಮ॥ ಎಚ್. ಬೈರೆಡ್ಡಿಯುವರು .. .. ಡಿಟೋ
6. ,, ಎಸ್. ಮಲ್ಲಪ್ಪನವರು ... . ಡಿಟೋ
7. ,, ಎ. ಬೈರಡ್ಡಿಯುವರು .. .. ಡಿಟೋ
8. ,, ವೆಂಕಟಪ್ಪನವರು .. .. .. ಡಿಟೋ

(*f*) ಕ್ಲಾಜ್ ಅನುಸರಿಸಿ.

9. ,, ಆರಗಲ್ ರಾಮಸ್ವಾಮಯ್ಯನವರು .. ... ಡಿಟೋ

(*g*) ಕ್ಲಾಜ್ ಅನುಸರಿಸಿ.

10. ,, ಸೀನಪ್ಪನವರು .. .. ಡಿಟೋ
11. ,, ಬಂಗಾರನಾಯಕರವರು ... .. ಡಿಟೋ
12. ,, ಜಿ. ಬೈರಪ್ಪರಡ್ಡಿಯುವರು ... . ಡಿಟೋ

ಗುಡಿಬಂಡೆ ಸಬ್ ತಾಲ್ಲೂಕು.

ಎಕ್ಸ್ ಆಫೀಷಿಯೋ ಮೆಂಬರುಗಳು.

1. ಸಬ್ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರು .... ಪ್ರೆಸಿಡೆಂಟರು.
2. ಡೆಪ್ಯುಟಿ ಅಮಲ್ದಾರು) .. .. ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು... ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫಿಸರು ... ಡಿಟೋ

ಇತರ ಮೆಂಬರುಗಳು.

( ) ಕ್ಲಾಜ್ ಅನುಸರಿಸಿ.

5. ಮ॥ ಎಚ್. ಕೃಷ್ಣಪ್ಪನವರು .. .. ಡಿಟೋ
6. ,, ಲಕ್ಷ್ಮಣರಾಯರು ... . ಡಿಟೋ
7. ,, ಬಾಚೆ೯ ಕರಿಯಪ್ಪನವರು ... . ಡಿಟೋ
8. ,, ನಾರಪ್ಪರಡ್ಡಿಯವರು .. .. ಡಿಟೋ

(*f*) ಕ್ಲಾಜ್ ಅನುಸರಿಸಿ.

9. ಮ॥ ಚೆಟ್ಟಿ ಚಿಕ್ಕಣ್ಣನವರು ... ... ಮೆಂಬರು.

(*g*) ಕ್ಲಾಜ್ ಅನುಸರಿಸಿ.

10. ,, ಸುಬ್ಬಣ್ಣನವರು ... . ಡಿಟೋ
11. ,, ವೆಂಕಟಸುಬ್ಬಯ್ಯನವರು .. .. ಡಿಟೋ
12. ,, ಗೊಲ್ಲ ವೀರಪ್ಪನವರು .. .. ಡಿಟೋ

ತಾರೀಖು 2ನೆ ಏಪ್ರೆಲ್ 1904.

ನಂ. 3781—ಲೋ. ಫಂ. 76–03, ಸನ್ 1903ನೆ ಸೆಪ್ಟಂಬರ 9ನೆ ಮಾರ್ಕ್ಕಂ 30—ಲೆಜಿಸ್. 4—03ನೆ ನಂಬರ್ ಅಸಿಸ್ಟಾಂಟ್ ಹುಕುಮಿನೊಡನೆ ಹೊರಡಿಸಲ್ಪಟ್ಟ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ 7ನೆ ಪ್ಯಾರಾದಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ಬೆಂಗಳೂರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ತಾಲ್ಲೂಕು ಬೋರ್ಡುಗಳಿಗೋಸ್ಕರ ನೌಕರರಾಗಿ ನೇಮಿಸಲ್ಪಟ್ಟ ಮೆಂಬರುಗಳ ಇದರಡೀ ಕಂಡ ಪಟ್ಟಿಯು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಟ್ಟಿರುತ್ತದೆ:—

1. ದೇವನಹಳ್ಳಿ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು .. ... ಪ್ರೆಸಿಡೆಂಟರು.
2. ಅಮಲ್ದಾರು ... ... ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸೆರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು... ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫಿಸರು .. ... ಡಿಟೋ

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

5. ಮ॥ ಗುರುನಂಜೆ ಒಡೆಯರವರು, ಜೋಡಿದಾರು .. .. ಡಿಟೋ
6. ,, ಚನ್ನಬಸವಡೆಯರವರು, ಡಿಟೋ .. ಡಿಟೋ
7. ,, ಕೋಟೆ ಚಿಕ್ಕಣ್ಣಪ್ಪನವರು, ವರ್ತಕರು ... ... ಡಿಟೋ
8. ,, ವೆಂಕಟಗೌಡರು, ಪಟೇಲರು ... ಡಿಟೋ

(*f*) ಕ್ಲಾಜ್ ಅನುಸರಿಸಿ.

9. ,, ಡಿ. ಶ್ರೀನಿವಾಸ ಗೋಪಾಲಾಚಾರ್ರು .. .. ಡಿಟೋ

(*g*) ಕ್ಲಾಜ್ ಅನುಸರಿಸಿ.

10. ,, ಗುಂಡೂರಾಯರು, ಜೋಡಿದಾರು ... ಡಿಟೋ
11. ,, ಮಲಿಗೆ ಸಂಜೀವಪ್ಪನವರು, ಡಿಟೋ .. .. ಡಿಟೋ
12. ,, ಸುಬ್ಬರಾಯರು, ಜಮೀನ್ದಾರು ವ ಪೆನ್ಷನ್ ಶಿರಸ್ತೇದಾರು .. ಡಿಟೋ

2. ಹೊಸಕೋಟೆ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರು .. ಪ್ರೆಸಿಡೆಂಟರು.
2. ಅಮಲ್ದಾರು .. .. ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸೆರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು... ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಓವರ್ಸಿಯರು .... .. ಡಿಟೋ

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

5. ಮ॥ ಸೀನಪ್ಪನವರು ... . ಡಿಟೋ
6. ,, ಎ. ರಾಮಣ್ಣನವರು .. ... ಡಿಟೋ
7. ,, ಕೆ. ಸೀನಪ್ಪನವರು ... . ಡಿಟೋ
8. ,, ದ್ಯಾವೆಗೌಡರು ... ... ಡಿಟೋ

(*f*) ಕ್ಲಾಜ್ ಅನುಸರಿಸಿ.

9. ಮೆ|| ವೀರಭದ್ರಪ್ಪನವರು .. .. ಮೆಂಬರು.

(*g*) ಕ್ಲಾಜ್ ಅನುಸರಿಸಿ.

10. ,, ಹೈದರ್‌ಖಾನರವರು, ಜಮೀನ್ದಾರ್ರು .. ... ಡಿಟೋ
11. ,, ಚನ್ನಬಸವಗೌಡರು ಡಿಟೋ ... .. ಡಿಟೋ
12. ,, ಹನುಮಂತಗೌಡರು ಡಿಟೋ .. .. ಡಿಟೋ

3. ಕಾನಕಾನಹಳ್ಳಿ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು .. .. ಪ್ರೆಸಿಡೆಂಟರು.
2. ಅಮಲ್ದಾರ್ರು ... ... ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪತ್ರೆ ಅಸಿಸ್ಟೆಂಟರು ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು ... ... ಡಿಟೋ

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

5. ಮೆ|| ಲಿಂಗಗೌಡರು ಗುರಿಕಾರ್ರು .. . .. ಮೆಂಬರು.
6. ,, ಮಲ್ಲರಾಜೆ ಅರಸಿನವರು .. .. ಡಿಟೋ
7. ,, ತಿಮ್ಮೆಗೌಡರು .. .. .. ಡಿಟೋ
8. ,, ವೀರಭದ್ರಪ್ಪನವರು .. .. .. ಡಿಟೋ

(*f*) ಕ್ಲಾಜ್ ಅನುಸರಿಸಿ.

9. ,, ತಿಮ್ಮೆಗೌಡರು .. .. .. ಡಿಟೋ

(*g*) ಕ್ಲಾಜ್ ಅನುಸರಿಸಿ.

10. ,, ಬಾಜೀರಾವ್ ಸಿಂಧೆಯವರು ... . ಡಿಟೋ
11. ,, ಮುದ್ದಪ್ಪನವರು .. .. ಡಿಟೋ
12. ,, ಸೈಯದ್ ಸಾಹೇಬರು .. .. .. ಡಿಟೋ

4. ಮಾಗಡಿ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರು .. ... ಪ್ರೆಸಿಡೆಂಟರು.
2. ಅಮಲ್ದಾರ್ರು ... . ವೈಸ್ ಪ್ರೆಸಿಡೆಂಟರು..
3. ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪತ್ರೆ ಅಸಿಸ್ಟೆಂಟರು ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು .. .. ಡಿಟೋ

(*e*) ಕ್ಲಾಜ್ ಅನುಸರಿಸಿ.

5. ಮೆ|| ಹೋಸರ ರಂಗಪ್ಪನವರು .. .. .. ಡಿಟೋ
6. ,, ನಂಜೆಗೌಡರು . ... ಡಿಟೋ
7. ,, ಸುಬ್ಬರಾಯರು .. .. ಡಿಟೋ
8. ,, ಸೂರಪ್ಪನವರು .... ಡಿಟೋ

(*f*) ಕ್ಲಾಜ್ ಅನುಸರಿಸಿ.

9. ,, ಕಾಸಿಂಸಾಹೇಬರು ... . ಡಿಟೋ

(*g*) ಕ್ಲಾಜ್ ಅನುಸರಿಸಿ.

10. ,, ರಾಮಚಂದ್ರರಾಯರು, ಪ್ಲೀಡರು ... ... ಡಿಟೋ
11. ,, ವೆಂಕಟರಂಗಸೆಟ್ಟರು .. .. ಡಿಟೋ
12. ,, ಮಲ್ಲಪ್ಪಸೆಟ್ಟರು .. .. ಡಿಟೋ

555

5. ಆನೆಕಲ್ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1.	ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರು ..	ಪ್ರೆಸಿಡೆಂಟರು.
2.	ಅಮಲ್ದಾರು ...	ವೈಸ್ ಪ್ರೆಸಿಡೆಂಟರು.
3.	ಲೋಕಲ್ ಫಂಡ್ ಡಿಸ್ಪೆನ್ಸೆರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು ..	ಮೆಂಬರು.
4.	ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಓವರ್ಸಿಯರು ...	ಡಿಟೋ

ಇತರ ಮೆಂಬರುಗಳು.

(c) ಕ್ಲಾಜ್ ಅನುಸರಿಸಿ.

5.	ಮೆ॥ ಕಾಶಿಪತಯ್ಯನವರು ...	ಡಿಟೋ
6.	,, ರಾಮಣ್ಣನವರು, ಪಟೇಲರು ...	ಡಿಟೋ
7.	,, ಗಾಸಿಖಾನರವರು ...	ಡಿಟೋ
8.	,, ಪುಟ್ಟಪ್ಪನವರು, ಪಟೇಲರು ...	ಡಿಟೋ

(f) ಕ್ಲಾಜು ಅನುಸರಿಸಿ.

9.	,, ಚಿಕ್ಕ ನಂಜಣ್ಣನವರು ...	ಡಿಟೋ

(g) ಕ್ಲಾಜ್ ಅನುಸರಿಸಿ.

10.	,, ರಾಮಸ್ವಾಮಯ್ಯಂಗಾರು ...	ಡಿಟೋ
11.	,, ನರಸಿಂಹಯ್ಯನವರು ...	ಡಿಟೋ
12.	,, ನಂಜಪ್ಪನವರು, ಪಟೇಲರು ...	ಡಿಟೋ

ತಾರೀಖು 2ನೆ ಏಪ್ರೈಲ್ 1904.

ನಂ. 3783—ಲೋ. ಫಂ. 78—03, ಸ್ 1903ನೆ ಸೆಪ್ಟಂಬರ 9ನೆ ಮುಕ್ಕಾಂ 30—ಲೆಜಿಸ್. 4—03ನೆ ನಂಬರ ಇಸ್ತಿಹಾರ್ನಾಮೆಯೊಡನೆ ಘಾಯಿಷಾದ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ 7ನೆ ಪ್ಯಾರಾವಿನಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ತಾಲ್ಲೂಕು ಬೋರ್ಡುಗಳಿಗೋಸ್ಕರ ಮೊಕರರ್ಮಾಡಲ್ಪಟ್ಟ ಮೆಂಬರುಗಳ ಪಟ್ಟಿ :—

1. ಪಾವಗಡ ತಾಲ್ಲೂಕು

ಎಕ್ಸ್ ಅಫೀಷಿಯೋ ಮೆಂಬರುಗಳು.

1.	ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು ..	ಪ್ರೆಸಿಡೆಂಟರು.
2.	ಅಮಲ್ದಾರು ...	ವೈಸ್ ಪ್ರೆಸಿಡೆಂಟರು.
3.	ಲೋಕಲ್ ಫಂಡ್ ಡಿಸ್ಪೆನ್ಸೆರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು	ಮೆಂಬರು.
4.	ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವೀಜನ್ ಆಫೀಸರು ..	ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5.	ಮೆ॥ ಗಿರಿಯಪ್ಪನವರು, ಗುಮ್ಮಘಟ್ಟದ ಪಟೇಲರು ...	ಡಿಟೋ
6.	,, ಚನ್ನಕೇಶವಪುರದ ಶ್ರೀನಿವಾಸರಾಯರು ..	ಡಿಟೋ
7.	,, ಪೋತಗಾನಹಳ್ಳಿಯ ಭೀಮಸೇನರಾಯರು ..	ಡಿಟೋ
8.	,, ತಿರುಮಣಿಯ ವೊಂಟಿಕೊಂಡ ಗುರಪ್ಪನವರು ..	ಡಿಟೋ

(f) ಕ್ಲಾಜ್ ಅನುಸರಿಸಿ

9.	,, ಪಾವಗಡದ ತಿರುಮಲ ತಾತಾಚಾರು ...	ಡಿಟೋ

(g) ಕ್ಲಾಜ್ ಅನುಸರಿಸಿ.

10.	,, ಬುಡ್ಡರಡ್ಡಿಹಳ್ಳಿಯ ಕೇಶವರಡ್ಡಿಯವರು ...	ಡಿಟೋ
11.	,, ವಡನಕಲ್ಲಿನ ಶಂಣಪ್ಪನವರು ...	ಡಿಟೋ
12.	,, ಪಾವಗಡದ ಹನುಮಂತ ಶೆಟ್ಟರು ...	ಡಿಟೋ

2. ಗುಬ್ಬಿ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು .. ಪ್ರೆಸಿಡೆಂಟರು.
2. ಅಮಲ್ದಾರು .. .. ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫಿಸರು .. ಡಿಟೋ

ಇತರ ಮೆಂಬರುಗಳು.

(e) ಕ್ಲಾಜು ಅನುಸರಿಸಿ.

5. ಮೆ|| ಹೊನ್ನಲಿಗೆಗೌಡರು .. .. ಡಿಟೋ
6. ,, ಸಿದ್ದಲಿಂಗೆಗೌಡರು .. .. .. ಡಿಟೋ
7. ,, ರಾಮಕೃಷ್ಣಪ್ಪನವರು .. .. .. ಡಿಟೋ
8. ,, ರಾಮಪುರದ ರಾಮೆಗೌಡರು .. ... ಡಿಟೋ

(f) ಕ್ಲಾಜು ಅನುಸರಿಸಿ.

9. ,, ಮದಾರ್‌ಸಾಹೇಬರು .. .. .. ಡಿಟೋ

(g) ಕ್ಲಾಜು ಅನುಸರಿಸಿ.

10. ,, ಕಡಬದ ಕೆ. ರಾಮಾನುಜಯ್ಯಂಗಾರು .. .. ಡಿಟೋ
11. ,, ಕಪ್ಪಣ್ಣಸೆಟ್ಟರು .. .. ಡಿಟೋ
12. ,, ಲಕ್ಷ್ಮೀನರಸಿಂಹಯ್ಯನವರು .. .. ಡಿಟೋ

3. ತಿಪಟೂರು ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು ... ಪ್ರೆಸಿಡೆಂಟರು.
2. ಅಮಲ್ದಾರು .. .. ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫಿಸರು .. ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5. ಮೆ|| ಬಿಳಿಗಾರಹಳ್ಳಿಯ ಸಿದ್ಧರಾಮೆಗೌಡರು .. .. ಡಿಟೋ
6. ,, ಹೊನ್ನವಳ್ಳಿಯ ಸುಬ್ಬರಾಯರು ... ... ಡಿಟೋ
7. ,, ತರೀಕೆರೆಯ ನರಸಿಂಹಾಚಾರು ... .. ಡಿಟೋ
8. ,, ಕೆಂಪೆಗೌಡರು, ಪಟೇಲರು .. . ಡಿಟೋ

(f) ಕ್ಲಾಜ್ ಅನುಸರಿಸಿ.

9. ,, ಸಿಂಗ್ರಿ ನಂಜಪ್ಪನವರು ... . ಡಿಟೋ

(g) ಕ್ಲಾಜ್ ಅನುಸರಿಸಿ.

10. ,, ಹಾಲಕುರಿಕೆಯ ಗುಂಡಪ್ಪನವರು . .. ಡಿಟೋ
11. ,, ಗಂದಿಗೆ ಬಿರಾಂಸಾಹೇಬರು ... .. ಡಿಟೋ
12. ,, ನೊಣವಿನಕೆರೆಯ ಚಿಕ್ಕಣ್ಣಶೆಟ್ಟರು .. .... ಡಿಟೋ

4. ತುರುವೇಕೆರೆ ಸಬ್ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ಸಬ್ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು .. ಪ್ರೆಸಿಡೆಂಟರು.
2. ಡೆಪ್ಯುಟಿ ಅಮಲ್ದಾರು .. .. ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫಿಸರು .. ಡಿಟೋ

557

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5.	ಮ॥ ಗುಂಡಪ್ಪನವರು, ಶಾನಭೋಗರು	.. ..	ಮೆಂಬರು.
6.	,, ರಂಗಣ್ಣನವರು, ಡಿಟೋ	.. ..	ಡಿಟೋ
7.	,, ನಾರಣಪ್ಪನವರು	..	ಡಿಟೋ
8.	,, ಸುಬ್ಬರಾಯರು, ಶಾನಭೋಗರು	...	ಡಿಟೋ

(f) ಕ್ಲಾಜ್ ಅನುಸರಿಸಿ.

9.	,, ವಿ. ನಾರಣಪ್ಪನವರು	...	ಡಿಟೋ

(g) ಕ್ಲಾಜ್ ಅನುಸರಿಸಿ.

10.	,, ಕೆಂಚೆಗೌಡರು, ಪಟೇಲರು	.. ..	ಡಿಟೋ
11.	,, ಸೀರೆಗೌಡರು	... ...	ಡಿಟೋ
12.	,, ಕೃಷ್ಣಯ್ಯಂಗಾರ್ರು	... ...	ಡಿಟೋ

5. ಚಿಕ್ಕನಾಯ್ಕನಹಳ್ಳಿ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1.	ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು	...	ಪ್ರೆಸಿಡೆಂಟರು.
2.	ಅಮಲ್ದಾರ್ರು	...	ವೈಸ್ ಪ್ರೆಸಿಡೆಂಟರು.
3.	ಲೋಕಲ್ ಫಂಡ್ ಡಿಸ್ಪೆನ್ಸೆರಿಯ ಚಾರ್ಜಿನಲ್ಲಿರುವ ಆಸ್ಪಟಲ್ ಅಸಿಸ್ಟೆಂಟರು		ಮೆಂಬರು.
4.	ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು	...	ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5.	ಮ॥ ಗಂಗೆಗೌಡರು, ಪಟೇಲರು	... ...	ಡಿಟೋ
6.	,, ಮುದ್ದೆಗೌಡರು	..	ಡಿಟೋ
7.	,, ರಂಗೆಗೌಡರು	... ...	ಡಿಟೋ
8.	,, ಗಣೊದಹಾಳಿನ ಮರುಳಸೆಟ್ಟಿಯವರು	... ..	ಡಿಟೋ

(f) ಕ್ಲಾಜ್ ಅನುಸರಿಸಿ.

9.	,, ಲಿಂಗೆಗೌಡರು	... ...	ಡಿಟೋ

(g) ಕ್ಲಾಜ್ ಅನುಸರಿಸಿ.

10.	,, ಮೈಲಾರಸೆಟ್ಟಿಯವರು	... ...	ಡಿಟೋ
11.	,, ಸಿದ್ದಮಲ್ಲೆಗೌಡರು	... ...	ಡಿಟೋ
12.	,, ನಂಜುಂಡಯ್ಯನವರು	... ...	ಡಿಟೋ

ತಾರೀಖು 4ನೆ ಏಪ್ರೈಲ್ 1904.

ನಂ. 3797—ಲೋ. ಫಂ. 78—03, ಸ್ ೯ 1904ನೆ ಜನವರಿ 20ನೆ ಮಾರ್ಚ್ 2653—ಲೋ. ಫಂ. 78—03ನೆ ನಂಬರ ಇಸ್ತಿಹಾರ್ನಾಮೆಯಲ್ಲಿ "3. ಗುಬ್ಬಿ, ತಿಪಟೂರು ಮತ್ತು ಕುಣಿಗಲ್ ತಾಲ್ಲೂಕುಗಳ ಚಾರ್ಜಿನಲ್ಲಿರುವ 2ನೆ ಅಸಿಸ್ಟೆಂಟ್ ಕಮಿಷನರು" ಎಂಬುವಕ್ಕೆ ಬದಲಾಗಿ "3. ಗುಬ್ಬಿ, ಚಿಕ್ಕನಾಯಿಕನಹಳ್ಳಿ ಮತ್ತು ತಿಪಟೂರು ತಾಲ್ಲೂಕುಗಳ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು" ಎಂಬದಾಗಿ ಓದಿಕೊಳ್ಳತಕ್ಕದ್ದು.

ತಾರೀಖು 4ನೆ ಏಪ್ರೈಲ್ 1904.

ನಂ. ಜ. 4904, ಚಿಕ್ಕಬಳ್ಳಾಪುರದ ಹೈ ಸ್ಕೂಲಿನ ಹೆಡ್ ಮಾಸ್ಟರಾದ ಮ॥ ಎಂ. ಬಿ. ಶ್ರೀನಿವಾಸಯ್ಯಂಗಾರ್ರಿಗೆ 1904ನೆ ಮಾರ್ಚಿ 9ನೆ ಮಾರ್ಚ್ ಜ. 4383ನೆ ನಂಬರ ಗವರ್ನಮೆಂಟ್ ಪ್ರೊಸೀಡಿಂಗ್ಸಿನಲ್ಲಿ 1904ನೆ ಫೆಬ್ರುವರಿ 8ನೆ ತಾರೀಖಿನಾರಭ್ಯ ಕೊಟ್ಟಿದ್ದ 1 ವಾರದ ಪ್ರಿವಿಲೇಜ್ ರಜಾವನ್ನು ಅವರು ಉಪಯೋಗಿಸಿಕೊಳ್ಳದೆ ಇರುವದ್ದರಿಂದ ಸದರೀ ರಜಾ ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ.

C

ತಾರೀಖು 5ನೆ ಏಪ್ರಿಲ್ 1904.

ನಂ. 3810—ಲೋ. ಫಂ. 40—1892, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, 1903ನೆ ನವಂಬರ್ 24ನೆ ಮಾರ್ಕ್ಕಂ 5973-4—ಲೋ. ಫಂ. 17-96ನೆ ನಂಬರ್ ಇಸ್ತಿಹಾರ್ನಾಮೆಯನುಸಾರವಾಗಿ ಫಾಯಿಷ್ ಮಾಡಲ್ಪಟ್ಟ ಎಲೆಕ್ಷನ್ ರೂಲುಗಳ XIIIನೆ ಪ್ಯಾರಾ ಅನುಸರಿಸಿ ಮೆ॥ ಪುಟ್ಟಯ್ಯಾಜಿ ಅರಸಿನವರು, ರಾಜೀನಾಮೆ ಕೊಟ್ಟ ಮೆ॥ ಸೇತುರಾಯರಿಗೆ ಬದಲಾಗಿ, ಖಿಲ್ಲೆ ಮೊಹಲ್ಲಾವಿಗೋಸ್ಕರ ಮೈಸೂರು ಸಿಟಿ ಮ್ಯುನಿಸಿಪಲ್ ಕಮಿಷನಿನ ಕಮಿಷನರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 5ನೆ ಏಪ್ರಿಲ್ 1904.

ನಂ. 2092—ಜು., ಸನ್ 1901ನೆ ಇಸವಿಯ VIIನೆ ನಂಬರ್ ಸಕ್ಸೆಷನ್ ಸರ್ಟಿಫಿಕೇಟ್ ರೆಗ್ಯುಲೇಷನಿನ 22ನೆ ಸೆಕ್ಷನ್ನಿಂದ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು, ಕೋರ್ಟುಗಳ ಹಣದ ಎಖ್ತ್ಯಾರಿಯಂದರೆ 2,500 ರೂಪಾಯಿಗಳ ಮೀರದ ಆಸ್ತಿಗಳ ಸಂಬಂಧಪಟ್ಟ ಮೊಕದ್ದಮೆಗಳಲ್ಲಿ ಚಲಾಯಿಸುವ ಬಗ್ಗೆ ಮೇಲ್ಕಂಡ ರೆಗ್ಯುಲೇಷನ್ ಅನುಸರಿಸಿ ಡಿಸ್ಟ್ರಿಕ್ಟ್ ಕೋರ್ಟಿನ ಅಧಿಕಾರಗಳನ್ನು ಇದರಡಿ ಕಂಡ ಕೋರ್ಟುಗಳಿಗೆ ಕೊಟ್ಟಿರುತ್ತಾರೆ :—

ಮಧುಗಿರಿಯ	ಮುನ್ಸೀಫ್ ಕೋರ್ಟ್	ಕೋಲಾರ ಗೋಲ್ಡ್ ಫೀಲ್ಡ್ಸ್‌ಗಳ	ಮುನ್ಸೀಫ್ ಕೋರ್ಟ್
ದೊಡ್ಡಬಳ್ಳಾಪುರದ	ಡಿಟೋ	ಸಾಗರದ	ಡಿಟೋ
ಚಿಕ್ಕಬಳ್ಳಾಪುರದ	ಡಿಟೋ	ಹೊನ್ನಾಳಿಯ	ಡಿಟೋ

ತಾರೀಖು 6ನೆ ಏಪ್ರಿಲ್ 1904.

ನಂ. 3833—ಲೋ. ಫಂ. 79-03, ಸನ್ 1902ನೆ ಇಸವಿಯ IIನೆ ನಂಬರ್ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ಮತ್ತು 1903ನೆ ಸೆಪ್ಟಂಬರ್ 9ನೆ ಮಾರ್ಕ್ಕಂ 30—ಲೆಜಿಸ್. 4-03ನೆ ನಂಬರ್ ಇಸ್ತಿಹಾರ್ನಾಮೆಯೊಡನೆ ಫಾಯಿಷಾದ ರೂಲುಗಳ 7ನೆ ಪ್ಯಾರಾ ಅನುಸರಿಸಿ ನಾಗಮಂಗಲದ ತಾಲ್ಲೂಕು ಬೋರ್ಡು ಇದರಡಿ ಕಂಡ ಮೆಂಬರುಗಳನ್ನುಂಟಾಗಿರತಕ್ಕದ್ದು :—

ಎಕ್ಸ್ ಅಫೀಷಿಯೋ ಮೆಂಬರುಗಳು.

1.	ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು ..	ಪ್ರೆಸಿಡೆಂಟರು.
2.	ಅಮಲ್ದಾರರು .	ವೈಸ್ ಪ್ರೆಸಿಡೆಂಟರು.
3.	ಲೋಕಲ್ ಫಂಡ್ ಡಿಸ್ಪೆನ್ಸೆರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು...	ಮೆಂಬರು.
4.	ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಅಫಿಸರು ..	ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5.	ಮೆ॥ ಚಂದ್ರಶೇಖರಯ್ಯನವರು, ಜಮೀನ್ದಾರರು	ಡಿಟೋ
6.	,, ಗರುಡಾಚಾರ್ಯರು, ಜಮೀನ್ದಾರರು	ಡಿಟೋ
7.	,, ತಿಮ್ಮೇಗೌಡರು, ಪಟೇಲರು ವ ಜಮೀನ್ದಾರರು ..	ಡಿಟೋ
8.	,, ಗುಂಡಪ್ಪನವರು, ಶಾನಭೋಗರು ವ ಜಮೀನ್ದಾರರು ..	ಡಿಟೋ

(f) ಕ್ಲಾಜ್ ಅನುಸರಿಸಿ.

9.	,, ತಿರುಮಲಾಚಾರ್ಲು, ಜಮೀನ್ದಾರರು	ಡಿಟೋ

(g) ಕ್ಲಾಜ್ ಅನುಸರಿಸಿ.

10.	,, ಗಂಗಪ್ಪನವರು, ಸಾಹುಕಾರರು	ಡಿಟೋ
11.	,, ತಮ್ಮಯ್ಯನವರು, ಪುರೋಹಿತರು	ಡಿಟೋ
12.	,, ಲಕ್ಷ್ಮಯ್ಯನವರು, ಪೆನ್ಷನ್ ಮೇಸ್ತ್ರಿಯವರು	ಡಿಟೋ

ತಾರೀಖು 6ನೆ ಏಪ್ರಿಲ್ 1904.

ನಂ. 3835—ಲೋ. ಫಂ. 78–03, ಸನ್ 1903ನೆ ಸೆಪ್ಟಂಬರ್ 9ನೆ ಮರ್ಕ್ಯುಂ 30–ಎಜಿಸ. 4–03ನೆ ನಂಬರ್ ಇಸ್ತಿಹಾರ್ನಾಮೆಯೊಡನೆ ಫಾಯಿಷಾದ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ 7ನೆ ಪ್ಯಾರಾವಿನಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ತುಮಕೂರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ತಾಲ್ಲೂಕು ಬೋರ್ಡುಗಳಿಗೋಸ್ಕರ ನೇಮಕರ್ಮಾಡಲ್ಪಟ್ಟ ಮೆಂಬರುಗಳ ಪಟ್ಟಿ:—

ತುಮಕೂರ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1.	ತುಮಕೂರ ತಾಲ್ಲೂಕಿನ ಅಮಲ್ದಾರು ...	ಪ್ರೆಸಿಡೆಂಟರು.
2.	ಅಸಿಸ್ಟೆಂಟ್ ಸರ್ಜನರು ...	ಮೆಂಬರು.
3.	ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಅಫಿಸರು ...	ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

4.	ಮೆ|| ಬಿ. ಕೃಷ್ಣಯ್ಯಂಗಾರ್ರು, ಪ್ಲೀಡರು ...	ಡಿಟೋ
5.	„ ನಿಡಿವಳಲುವಿನ ಶಾನಭೋಗ ವೆಂಕಟರಾಮಯ್ಯನವರು ...	ಡಿಟೋ
6.	„ ಸಾಸಲ್ ತಿಮ್ಮೆಗೌಡರು ...	ಡಿಟೋ
7.	„ ಬೆಳ್ಳಾವಿಯ ಸಾಹುಕಾರ್ ಪಾಪಣ್ಣನವರು ...	ಡಿಟೋ

(f) ಕ್ಲಾಜ್ ಅನುಸರಿಸಿ.

8.	„ ಕರ್ಣಿಕ ನಲ್ಲಪ್ಪನವರು ...	ಡಿಟೋ

(g) ಕ್ಲಾಜ್ ಅನುಸರಿಸಿ.

9.	„ ಗಳಗದಕುಪ್ಪೆ ರಾಮರಾವ್ ಬಿನ್ ರಾಗೋದಾಸಪ್ಪನವರು ...	ಡಿಟೋ
10.	„ ಕೋದಂಡ ರಾಮಸೆಟ್ಟರು (ಬ್ರಾಂಚ್ ಹಾಲ್) ...	ಡಿಟೋ
11.	„ ಗೊಲ್ಲಹಳ್ಳಿಯ ದಾವುದ್‌ಖಾನ್ ಸಾಹೇಬರು ...	ಡಿಟೋ
12.	„ ಮಹದೇವಯ್ಯ ಬಿ. ಎ., ಬಿ. ಎಲ್., ಅಡ್ವೋಕೇಟರು ...	ಡಿಟೋ

ಕುಣಿಗಲ್ ತಾಲ್ಲೂಕು

ಎಕ್ಸ್ ಅಫೀಷಿಯೋ ಮೆಂಬರುಗಳು.

1.	ತಾಲ್ಲೂಕಿನ ಅಮಲ್ದಾರು ...	ಪ್ರೆಸಿಡೆಂಟರು.
2.	ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು	ಮೆಂಬರು.
3.	ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಅಫಿಸರು ...	ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

4.	ಮೆ|| ಗುಂಡಪ್ಪನವರು (ಹೆರೂರು) ...	ಡಿಟೋ
5.	„ ಶ್ಯಾಮಯ್ಯಂಗಾರ್ರು, ವರ್ತಕರು ...	ಡಿಟೋ
6.	„ ಸುಬ್ಬಣ್ಣನವರು (ಯೆಡಯೂರು) ...	ಡಿಟೋ
7.	„ ಲಿಂಗಣ್ಣಯ್ಯನವರು ...	ಡಿಟೋ

(f) ಕ್ಲಾಜ್ ಅನುಸರಿಸಿ.

8.	„ ಬಿ. ಶ್ರೀನಿವಾಸಯ್ಯಂಗಾರ್ರು ...	ಡಿಟೋ

(g) ಕ್ಲಾಜ್ ಅನುಸರಿಸಿ.

9.	„ ಲಕ್ಷ್ಮೀನರಸಯ್ಯನವರು ...	ಡಿಟೋ
10.	„ ನಂಜುಂಡಯ್ಯನವರು ...	ಡಿಟೋ
11.	„ ರಂಗೇಗೌಡರು ...	ಡಿಟೋ
12.	„ ವೆಂಕಣ್ಣಯ್ಯನವರು ...	ಡಿಟೋ

ತಾರೀಖು 11ನೆ ಮಾರ್ಚಿ 1904.

ನಂ. ರೆ. 2796, ಸರ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷರ್ ರೆಗ್ಯುಲೇಷನಿನ 6ನೆ ಸೆಕ್‌ಷರ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ತರೀಕೆರೆಯಲ್ಲಿ ಸಂದಲ್ ಕೋಠಿಯನ್ನು ಕಟ್ಟುವ ಬಗ್ಗೆ ಬೇಕಾಗಿರುತ್ತದೆ. ಮತ್ತು ಕಡೂರು ಡಿಸ್ಟ್ರಿಕ್ಟಿನ ಮೊದಲನೆ ಅಸಿಸ್ಟೆಂಟ್ ಕಮೀಷನರಾದ ಮೆ|| ಪಿ. ಜೆ. ಡಿಸೋಜಾ ಯವರು ಮೇಲ್ಕಂಡ ರೆಗ್ಯುಲೇಷನಿನ 3 (ಸಿ) ವ 7ನೆ ಸೆಕ್‌ಷರ್‌ಗಳ ಅನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳೀದಾರರ ಹೆಸರು.	ಸರ್ವೆ ನಂ.	ಜಮೀನಿನ ತರಹ.	ವಿಸ್ತೀರ್ಣ.	ಆಕಾರ.	ಬೇಕಾಗಿರುವ ವಿಸ್ತೀರ್ಣ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕಡೂರು.	ತರೀಕೆರೆ.	ತರೀಕೆರೆ.	[illegible]	[illegible]	15	ಖುಷ್ಕಿ.	ಎಕರೆ 10 ಗುಂಟೆ 10	ರೂ 10-0-0	ಎಕರೆ 5 ಗುಂಟೆ 26	[illegible] ಸರ್ವೆ ನಂ. 17.	[illegible] ಸರ್ವೆ ನಂ. 93.	[illegible] ಸರ್ವೆ ನಂ. 12 [illegible]	[illegible] ಸರ್ವೆ ನಂ. 15ರ ಭಾಗಗಳು.

ತಾರೀಖು 16ನೆ ಮಾರ್ಚಿ 1904.

ನಂ. 2849, ಸರ್1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷರ್ ರೆಗ್ಯುಲೇಷನಿನ 6ನೆ ಸೆಕ್‌ಷರ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡಿ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಕಡೂರು ತಾಲ್ಲೂಕಿನ (1) ರಂಗಾಪುರ, (2) ಸಿದ್ರಾಮನಹಳ್ಳಿ ಮತ್ತು (3) ಮಾದಾಪುರ ಗ್ರಾಮಗಳಲ್ಲಿ ವಾಸಮಾಡುವ ಮುಸಲ್ಮಾನರ ಉಪಯೋಗಕ್ಕಾಗಿ ರಂಗಾಪುರ ಗ್ರಾಮದ ಮುಸಲ್ಮಾನರ ಖಬರಸ್ಥಾನವನ್ನು ಬಡಾಯಿಸುವದಕ್ಕೋಸ್ಕರ ಬೇಕಾಗಿರುತ್ತದೆ ಮತ್ತು ಕಡೂರು ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಕಮೀಷನರಾದ ಮೆ|| ಪಿ. ಜೆ. ಡಿಸೋಜಾಯವರು ಮೇಲ್ಕಂಡ ರೆಗ್ಯುಲೇಷನಿನ 3 (ಸಿ) ವ 7ನೆ ಸೆಕ್‌ಷರ್‌ಗಳನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರರ ಹೆಸರು	ಸರ್ವೆ ನಂ.	ವಿಸ್ತೀರ್ಣ.	ಆಕಾರ.	ಬೇಕಾಗಿರುವ ವಿಸ್ತೀರ್ಣ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕಡೂರು	ಕಡೂರು	[illegible]	ಮಾದಾಪುರ	ರುದ್ರ	145	4 ಎಕರೆ, 10 ಗುಂಟೆ.	ರೂ. 3—8—0	1 ಎಕರೆ.	ರಂಗಾಪುರದಿಂದ ಮಾದಾಪುರಕ್ಕೆ ಹೋಗುವ ದಾರಿ.	ಸರ್ವೆ ನಂಬರು 145ರ ಭಾಗ	[illegible]	ರಂಗಾಪುರ ಗ್ರಾಮದ ಸರ್ವೆ ನಂ. 11, ಖರಾಬು.

ತಾರೀಖು 26ನೆ ಮಾರ್ಚಿ 1904.

ನಂ. ರೆ. 2938—ರೆ. ಫೈ. 45—1901, ಷೆಡ್ಯೂಲ್ ಬಿ. ಎರಡನೇ ಕ್ಲಾಸಿನ ಇದರಡೀ ಕಂಡ ಅಸಿಸ್ಟೆಂಟ್ ಕಮೀಷನರುಗಳು ಅವರವರ ಹೆಸರುಗಳ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಾರಭ್ಯ ಮೊದಲನೇ ಕ್ಲಾಸಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ:—

(1)	ಮೆ|| ಸಿ. ಎಸ್. ಬಾಲಸುಂದರಂ ಅಯ್ಯರ್, ಬಿ. ಎ., ಯವರು ..	1903ನೆ ಸೆಪ್ಟೆಂಬರ್ 22ರ ಲಾಗಾಯತು
(2)	,, ಕುರಿಯನ್ ಮತ್ತಾಯ್, ಬಿ. ಎ., ಯವರು	
(3)	,, ಜೆ. ಅರಾವಮುದಯ್ಯಂಗಾರ್, ಬಿ. ಎ., ಬಿ. ಎಲ್., ಯವರು ..	
(4)	,, ಬಿ. ರಾಮಸ್ವಾಮಯ್ಯ, ಬಿ. ಎ., ಬಿ. ಎಲ್., ಯವರು .	

(5) ,, ಸಿ. ವೆಂಕಟರಾವ್, ಬಿ. ಎ., ಯವರು, 1903ನೆ ನವೆಂಬರ್ 23ರ ಲಾಗಾಯತು.

56

1904–1905ನೇ ವರುಷಕ್ಕಾಗಿ ಪ್ರತ್ಯೇಕ ಸಾರಾಯಿ ಅಂಗಡಿಗಳ ಹರಾಜು.

ನಂಬರ್ 640 - Ex. F. 7- 1902, ತಾರೀಖು 29ನೇ ಮಾರ್ಚಿ 1904.

1. ಇದಕ್ಕೆ ಲಗತ್ತು ಮಾಡಿರುವ ಷೆಡ್ಯೂಲ್ ಪಟ್ಟಿಯಲ್ಲಿ ನಮೂದಾಗುವ ಪ್ರತ್ಯೇಕ ಸಾರಾಯಿ ಅಂಗಡಿಗಳಲ್ಲಿ 1904ನೇ ಇಸವಿ ಜುಲೈ ಒಂದನೇ ತಾರೀಖಿಗೆ ಪ್ರಾರಂಭವಾಗಿ 1905ನೇ ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12 ತಿಂಗಳು ಕಾಲಕ್ಕಾಗಿ ಸಾರಾಯಿ ವಿಕರಿ ಮಾಡತಕ್ಕ ಹಕ್ಕನ್ನು ಸದರೀ ಪಟ್ಟಿಯಲ್ಲಿ ಕಂಡ ಸ್ಥಳಗಳಲ್ಲಿ ವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರ್‌ಗಳು ಯಾ ರೆವಿನ್ಯೂ ಅಸಿಸ್ಟೆಂಟ್ ಕಮ್ಮಿಷನರ್‌ಗಳು ಯಾ ಎಕ್ಸೈಸ್ ಇಲಾಖೆಯ ಡಿವಿಜನ್ ಆಫಿಸರರು ಯಾ ಡೆಪ್ಯುಟಿ ಕಮ್ಮಿಷನರವರಿಂದ ಈ ಕೆಲಸಕ್ಕಾಗಿ ನೇಮಿಸಲ್ಪಡಬಹುದಾದ ಇತರ ಅಧಿಕಾರಿಗಳು ಸರ್ಕಾರದ ಸವಾಲನ್ನು ಗೊತ್ತು ಮಾಡಿಕೊಂಡು ಮುಂದೆ ನಮೂದು ಮಾಡಿರುವ ಷರತ್ತುಗಳಿಗನುಸರಿಸಿ ಹರಾಜ್ ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ. ಹರಾಜುಗಳು ಸದರಿ ತಾರೀಖುಗಳಲ್ಲಿ ಪೂರೈಸದೆಹೋದಲ್ಲಿ ಮಾರನೇ ದಿನಗಳಲ್ಲಿಯೂ ಹಾಕಲ್ಪಡುವವು. (ರಜಾ ದಿನಗಳು ಹೊರತಾಗಿ).

2. (a) ಕೋಲಾರದ ಚಿನ್ನದ ಗಣಿಗಳ ಅಂಗಡಿಗಳಿಗೆ 60 ರೂಪಾಯಿಗಳನ್ನು ಮೈಸೂರು ಬೆಂಗಳೂರು ಷಹರುಗಳ ಅಂಗಡಿಗಳಿಗೆ 25 ರೂಪಾಯಿಗಳನ್ನು ಇತರ ಸ್ಥಳಗಳಲ್ಲಿನ ಅಂಗಡಿಗಳಿಗೆ 10 ರೂಪಾಯಿಗಳನ್ನು ಅಥವಾ ಹರಾಜ್ ಮಾಡತಕ್ಕ ಆಫಿಸರರು ಗೊತ್ತು ಮಾಡುವ ಇತರ ನ್ಯಾಯವಾದ ಮೊಬಲಗನ್ನು ಹರಾಜಿನಲ್ಲಿ ಪ್ರತಿ ಸವಾಲ್‌ದಾರನೂ ಠೇವಣಾತಿ ಇಡತಕ್ಕದ್ದು. ಹರಾಜು ತಾರೀಖಿಗೆ ಮುಂಚೆ 3 ದಿವಸಗಳೊಳಗಾಗಿ ಸದರೀ ಮೊಬಲಗನ್ನು ಸವಾಲ್‌ದಾರನು ಕೊಟ್ಟರು ತೆಗೆದುಕೊಳ್ಳಲ್ಪಡುತ್ತದೆ. ಆದರೆ ಸರ್ಕಾರದವರು ಅಂಥಾ ಆರಂಭದ ಠೇವಣಾತಿ ಮೊಬಲಗನ್ನು ಯಾವಾಗ ಬೇಕಾದರೂ ಅವಶ್ಯಕವಿಲ್ಲವೆಂದು ಬಿಟ್ಟುಬಿಡಬಹುದು. ಸದರೀ ಅಂಗಡಿ ಯಾ ಅಂಗಡಿಗಳ ಸಮುದಾಯಗಳಿಗೆ ಯಾರ ಚಡದರಖಾಸ್ತು ಅಂಗೀಕರಿಸಲ್ಪಡುತ್ತದೆಯೋ ಅಂಥಾ ಅಂಗೀಕಾರಕ್ಕೆ ಅರ್ಹರಾದ ಜನರಿಗೆ ಅಂಗಡಿಗಳು ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತವೆ. ಡೆಪ್ಯುಟಿ ಕಮ್ಮಿಷನರವರು ಸದರೀ ದರಖಾಸ್ತನ್ನು ತಮಗೆ ಯುಕ್ತತೋರುವಂತೆ ಕಾರಣಗಳನ್ನು ಉದಹರಿಸದೆ ಮಂಜೂರು ಅಥವಾ ತಳ್ಳಿಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಅಂಥಾ ಕ್ರಮವಾದ ಮಂಜೂರಾತಿಯು ಗೌರ್ನಮೆಂಟಿನವರಿಂದ ವಿಶೇಷ ಕಾರಣಕ್ಕೋಸ್ಕರ ಬದಲಾಯಿಸಲ್ಪಡದೇ ಇದ್ದ ಪಕ್ಷದಲ್ಲಿ ದರಖಾಸ್ತನ್ನು ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದಾಗಿ ಯು ಡೆಪ್ಯುಟಿ ಕಮ್ಮಿಷನರವರು ಖುದ್ದಾಗಿಯೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರೇ ಆಗಲಿ ಹರಾಜು ನಡಿಸಿದ್ದರೂ ಅವಶ್ಯಕವಾಗಿರುವದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು. ಅಥವಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದಿರುವ ಅವರ ತರಫ ಮುಖ್ತಾಲೀಕರನ್ನು ಕಳುಹಿಸಬೇಕು. ಒಂದೊಂದು ಅಂಗಡಿಗೆ ಸರ್ಕಾರದ ಸವಾಲಿಗಿಂತ ಹೆಚ್ಚಾದ ಸವಾಲ್ ಬಾರದೇ ಹೋದಲ್ಲಿ ಹರಾಜು ನಡಿಸತಕ್ಕ ಆಫಿಸರರು ಎಕ್ಸೈಜ್ ಡಿವಿಜನ್ ಆಫೀಸರರು ಹಾಜರಿದ್ದಲ್ಲಿ ಅವರ ಅಭಿಪ್ರಾಯವನ್ನು ತಿಳಿದು ಒಂದಕ್ಕಿಂತಲೂ ಹೆಚ್ಚಾಗಿ ಅಂಗಡಿಗಳನ್ನು ಸೇರಿಸಿ ಹರಾಜು ಮಾಡಿಸಬಹುದು. ಅಥವಾ ಅವಶ್ಯಕವಾಗಿದ್ದಲ್ಲಿ ಸವಾಲಿಲ್ಲದೇ ಇರುವ ಅಂಗಡಿಗಳನ್ನು ಮುಂದೆ ವಿಲೇವಾರಿ ಮಾಡಲು ಅಮಾನತ್ತು ಇಡಬಹುದು. ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಹರಾಜು ನಡೆಸತಕ್ಕ ಆಫಿಸರರು ಯಾವದಾದರೂ ವಿಶೇಷ ಸಂದರ್ಭದಲ್ಲಿ ದರಖಾಸ್ತುಗಳ ಮೂಲಕವೇ ಆಗಲಿ ಖಾಸಗೀ ಏರ್ಪಾಟುಗಳ ಮೂಲಕವೇ ಆಗಲಿ ಅಂಗಡಿಗಳನ್ನು ಮಾಡಬಹುದು. ಸರ್ಕಾರದ ಸವಾಲನ್ನು ತಮ್ಮ ಇಷ್ಟಾನುಸಾರ ಕಮ್ಮಿ ಮಾಡಬಹುದು. ಲೈಸೆನ್ಸುದಾರನು ಯಾವದಾದರೂ ತಕ್ಸೀರಿಗಾಗಿ ಕ್ರಿಮಿನಲ್ ಕೋರ್ಟಿನಲ್ಲಿ ದರ್ಯಾಪ್ತಿಯಾಗಿ ತಪ್ಪು ಸಾಬೀತಾಗಿರುವದರಿಂದಲೂ, ಅಥವಾ ಲೈಸೆನ್ಸಿನ ಯಾ ಎಕ್ಸೈಜ್ ರೆಗ್ಯುಲೇಷನ್ ಯಾ ಓಪಿಯಂ ಆಕ್ಟಿನ ಷರತ್ತುಗಳಿಗನುಸಾರವಾಗಿ ನಡೆಯದೇ ಇದ್ದ ತಪ್ಪಿತಸ್ಥನಾಗಿರುವ ಕಾರಣದಿಂದ ಲೈಸೆನ್ಸಿನ ಹಿಡುವಳಿದಾರನಾಗಿರಲು ಯೋಗ್ಯನಲ್ಲವೆಂಬದರ ಮೇಲೂ ಯಾ ನಾದಾರೀ ಮನುಷ್ಯನೆಂಬದರಮೇಲೂ ಅಥವಾ ಸರ್ಕಾರದ ಪ್ರಯೋಜನಕ್ಕೆ ಕುಂದಕವಾಗತಕ್ಕ ಏರ್ಪಾಟುಗಳನ್ನು ನಿಲ್ಲಿಸಬೇಕೆಂಬದರಮೇಲೂ ಅಥವಾ ಇನ್ನಾವ ಇತರ ಯುಕ್ತವಾದ ಕಾರಣಕ್ಕಾಗಿಯೂ ಹರಾಜು ನಡಿಸತಕ್ಕ ಆಫಿಸರರು ಅವರಿಗೆ ಯುಕ್ತ ತೋರಿದಲ್ಲಿ ಯಾವ ಮನುಷ್ಯನ ಸವಾಲನ್ನಾದರೂ ಕಾರಣವನ್ನು ತಿಳಿಸದೇನೇ ತಿರಸ್ಕರಿಸಬಹುದು.

(b) ಯಾವ ಅಂಗಡಿಯನ್ನು ಒಬ್ಬ ಆಸಾಮಿಗಿಂತ, ಯಾ ಕ್ರಮವಾಗಿ ಏರ್ಪಟ್ಟಿರುವ ಒಂದು ಕಂಪನಿ ಯಾ ಫರಂಗಿಂತ ಹೆಚ್ಚಾದ ಸಂಖ್ಯೆಯುಳ್ಳವರ ಹೆಸರಿಗೆ ಛಡಸವಾಲಿನಲ್ಲಿ ನಿಲ್ಲಿಸಕೂಡದು. ಹರಾಜು ಮಾಡುವ ಅಧಿಕಾರಿಯು ಯಾರ ಹೆಸರಿನಿಂದ ಸವಾಲು ಬಂದಿರುವದಿಲ್ಲವೋ ಅತನ ಹೆಸರನ್ನು ಕೊಂಡುಕೊಂಡವನೆಂದು ದಾಖಲ್ಮಾಡಲು ತಿರಸ್ಕರಿಸತಕ್ಕದ್ದು.

3. ಹರಾಜ್ ಪೂರೈಸಿದ ನಂತರ ಸಾಧ್ಯವಾದಮಟ್ಟಿಗೆ ಜಾಗ್ರತೆಯಾಗಿ ನಾ ಮಂಜೂರಾದ ಸವಾಲ್‌ದಾರರ ಠೇವಣೀ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡದೇ ಇರುವ ಪಕ್ಷಕ್ಕೆ ಅವರಿಗೆ ವಾಪಸ್ ಮಾಡಲ್ಪಡುತ್ತವೆ. ಹರಾಜ್ ನಡೆಯುತ್ತಾ ಬಂದಹಾಗೆಲ್ಲಾ ಯಾರ್ಯಾರ ಸವಾಲ್ ಅಂಗೀಕರಿಸಲ್ಪಡುತ್ತೆಯೋ ಅವರೆಲ್ಲಾ ಹರಾಜ್ ನಡೆಸತಕ್ಕ ಆಫಿಸರರು ಕೇಳಿದ್ದಲ್ಲಿ ತಕ್ಷಣವೇ, ಇಲ್ಲದಿದ್ದಲ್ಲಿ ಆ ದಿವಸದ ಹರಾಜ್ ಖೈದಾದ ನಂತರ, ಪ್ರಾರಂಭದಲ್ಲಿ ಇಟ್ಟಿರತಕ್ಕ ಠೇವಣಿ ಮೊಬಲಗು ಸದರೀ ಅಂಗಡಿಯ ಯಾ ಅಂಗಡಿ ಸಮುದಾಯದ 2 ತಿಂಗಳ ಗುತ್ತಿಗೆ ಹಣಕ್ಕೆ ಸರಿಯಾಗಿ ಯಾ ಹೆಚ್ಚಾಗಿದ್ದಾಗ ಹೊರತು ಆಯಾಯ ಅಂಗಡಿಯ ಯಾ ಅಂಗಡಿ ಸಮುದಾಯದ ಅರ್ಧ ತಿಂಗಳ ಗುತ್ತಿಗೆ ಹಣದಷ್ಟು ಮೊಬಲಗನ್ನು ಠೇವಣಿ ಇಡಬೇಕು. ಹರಾಜಿನಲ್ಲಿ ಒಂದು ಅಂಗಡಿ ಯಾ ಅಂಗಡಿಗಳ ಸಮುದಾಯಕ್ಕಾಗಿ ಯಾರ ಚಡದರಖಾಸ್ತು ಅಂಗೀಕರಿಸಲ್ಪಟ್ಟಿದೆಯೋ, ಮತ್ತು ಮೇಲೆ ನಮೂದಿಸಿರುವಂತೆ ಠೇವಣಿಗಳನ್ನು ಕೊಟ್ಟದ್ದಾನೆಯೋ ಅತನು ಹರಾಜು ಮಂಜೂರಾದ ವಿಷಯವನ್ನು

ನೋಟೀಸ ಮೂಲಕ ತಿಳಿಸಲು ಸಾಧ್ಯವಾಗುವಂತೆ ತನ್ನ ವಿಳಾಸವನ್ನು ಹರಾಜು ನಡಿಸತಕ್ಕ ಆಫಿಸರವರಲ್ಲಿ ಕೊಟ್ಟು ಹೋಗತಕ್ಕದ್ದು. ಸದರೀ ನೋಟೀಸ ಆತನಿಗೇ ಆಗಲಿ ಅಥವಾ ಸದರೀ ವಿಳಾಸದಲ್ಲಿ ಕೊಟ್ಟಿರುವ ಸ್ಥಳದಲ್ಲಿ ಆತನ ಮನೆಯಲ್ಲಿರುವ ಇತರ ವಯಸ್ಸಾದ ಗಂಡಸಿಗಾಗಲೀ ರೂಬರೂಬ ಪಾವತಿಯಾಗೇ ಆಗಲಿ ಅಥವಾ ಆತನ ವಾಸಸ್ಥಾನಕ್ಕೆ ಅಂಟಿಸುವದರಿಂದಲೂ ಯಾ ಕ್ರಮವಾಗಿ ರಿಜಿಸ್ಟರ್ಡ್ ಪೋಸ್ಟು ಮೂಲಕ ಕಳುಹಿಸಿದ್ದರಿಂದಲೇ ಆಗಲಿ ಜಾರಿಯಾದ 7 ದಿವಸಗಳೊಳಗಾಗಿ ಮೊದಲು ಹಾಜರ್ಮಾಡಿದ ಠೇವಣೀ ಸೇರಿಸಿಕೊಂಡು 2 ತಿಂಗಳ ಖಿಸ್ತು ಮೊಬಲಗಿಗೆ ಸರಿಯಾದಷ್ಟು ಹಣವನ್ನು ತಾಲ್ಲೂಕು ಖಜಾನೆಯಲ್ಲಿ ಠೇವಣೀ ಇಡಬೇಕು. ಮತ್ತು ಅವಶ್ಯಕವಾಗಿರುವ ಕರಾರುಗಳನ್ನು ಆಗಲೇ ಅಮಲ್ದಾರ್ರವರಿಗೆ ಬರದು ಕೊಟ್ಟು ಮುಂದೆ ನಮೂದಿಸಿರುವ ಪ್ರಕಾರ ನಿಬಂಧನೆಯಾಗಿರುವ ಲೈಸೆನ್ಸುಗಳನ್ನು ತೆಗೆದುಕೊಳ್ಳಬೇಕು. ಪ್ರಾರಂಭದಲ್ಲಿ ಇಟ್ಟಿರತಕ್ಕ ಠೇವಣೀ ಮೊಬಲಗು ಈ ಯಾ ಮುಂದಿನ ಕಲಂನಲ್ಲಿ ಕೇಳಿರುವ ಮೊಬಲಗಿಗಿಂತಲೂ ಹೆಚ್ಚಾಗಿದ್ದಲ್ಲಿ ಹೆಚ್ಚಾಗಿರುವ ಮೊಬಲಗನ್ನು ಅಂಗಡಿಯನ್ನು ತೆಗೆದುಕೊಂಡವನಿಗೆ ವಾಪಸ ಕೊಡಲ್ಪಡುವದು. ಹರಾಜು ನಂತರ ವಿಚಾರಿಸಿದ್ದಲ್ಲಿ ಆತನು ಮೈಸೂರು ಸೀಮೆಯಲ್ಲಿ ಜಂದಿಗಿಯನ್ನಾಂಟಾಗದೆ ಇರುವ ಅನ್ಯದೇಶದವನಾಗಿಯೂ ಜೇವಾಳಸ್ಥನೆಂಬುದಕ್ಕೆ ಅನುಮಾನಕ್ಕೆ ಗುರಿಯಾದವನಾಗಿ ಇರುವಂತೆ ಕಂಡು ಬಂದಲ್ಲಿ ವಿಧಾಯಕವಾದ ಎರಡರಷ್ಟು ಮೊಬಲಗನ್ನು ಠೇವಣಿ ಇಡುವದಕ್ಕಾಗಲೀ ಯಾ ಆತನ ಗುತ್ತಿಗೆ ಷರತ್ತುಗಳನ್ನನುಸರಿಸಿ ಆತನು ಕೊಡಬೇಕಾದ ಎಲ್ಲಾ ಹಣಗಳನ್ನು ಕ್ರಮವಾಗಿ ಪಾವತೀ ಮಾಡಲುಳ್ಳವರೆಂದು ಜಾಮಿನ್ ಪತ್ರವನ್ನು ಬರದು ಕೊಡುವುದಕ್ಕೆ ಮೈಸೂರು ಸಂಸ್ಥಾನದಲ್ಲಿ ವಾಸವಾಗಿದ್ದು ಸ್ವತ್ತುಳ್ಳವರಾಗಿರುವ ಒಬ್ಬ ಜಾಮೀನ್ದಾರನನ್ನು ಯಾ ಜಾಮೀನ್ದಾರರನ್ನು ಹಾಜರ್ಮಾಡುವದಕ್ಕಾಗಲೀ ಆತನನ್ನು ಕೇಳಬಹುದು.

4. ಹಿಂದಿನ ಕಲಮ್ಮನುಸರಿಸಿ ಇಡಲ್ಪಟ್ಟ ಠೇವಣಿಯು ನಗದಾಗಿ ಯಾಗಲೀ ಯಾ ಡೆಪ್ಯುಟಿ ಕಮ್ಮಿಷನರವರ ಹೆಸರಿಗೆ ಕ್ರಮವಾಗಿ ಇಂಡಾರ್ಸ್ ಮಾಡಲ್ಪಟ್ಟ ಇಂಡಿಯಾ ಗವರ್ನಮೆಂಟ್ ಸೆಕ್ಯೂರಿಟಿಗಳ ಮೂಲಕವಾಗಿಯಾಗಲೀ ಇರತಕ್ಕದ್ದು. ಆದರೆ ಮಾಹೆಯಾನಾ ಗುತ್ತಿಗೆ ಮೊಬಲಗು 10 ರೂಪಾಯಿಗಿಂತಲೂ ಹೆಚ್ಚಾಗಿರುವ ಸಂದರ್ಭಗಳಲ್ಲಿ (ಮೇಲಿನ 2 ತಿಂಗಳ ಗುತ್ತಿಗೆ ಹಣದ ಠೇವಣಿ ಬದ್ಲಾಗಿ) ಡೆಪ್ಯುಟಿ ಕಮ್ಮಿಷನರವರು ತಮಗೆ ಯುಕ್ತ ತೋರುವಂತೆ ಮೇಲ್ಕಂಡ ಮೇರೆಗೆ 1 ತಿಂಗಳ ಗುತ್ತಿಗೆ ಹಣಕ್ಕೆ ಸಮನಾದ ಠೇವಣೀಸಿಸಿ 4 ತಿಂಗಳ ಗುತ್ತಿಗೆ ಹಣಕ್ಕೆ ಸಮನಾದ ಮೊಬಲಗಿಗೆ ಖಾತರೀ ಜಾಮೀನನ್ನು ಹಾಜರ್ಮಾಡುವಂತೆ ಬಿಕರೀ ದಾರನಿಗೆ ಅಪ್ಪಣೆ ಕೊಡಬಹುದು. 1 ತಿಂಗಳ ಗುತ್ತಿಗೆ ಮೊಬಲಗು 10 ರೂಪಾಯಿಗಳಿಗೆ ಮೀರದಿರುವ ಎಲ್ಲಾ ಸಂದರ್ಭಗಳಲ್ಲಿಯೂ 2 ತಿಂಗಳ ಖಿಸ್ತಿನ ಹಣದಷ್ಟು ನಗದು ಠೇವಣಿಯನ್ನು ತೆಗದುಕೊಳ್ಳಬೇಕೇ ಹೊರ್ತು ನಫರ ಜಾಮೀನನ್ನು ಅಂಗೀಕರಿಸಕೂಡದು.

5. ಬಿಕರೀದಾರನು ಮೇಲೆ ನಮೂದಿಸಿರುವ ಯಾವ ಠೇವಣಿಯನ್ನಾದರೂ ಯಾ ಅವಶ್ಯಕವಾದ ಜಾಮೀನ್ದಾರ ಅಥವಾ ಜಾಮೀನ್ದಾರರನ್ನಾದರೂ ಹಾಜರ್ಮಾಡುವದಕ್ಕೆ ತಪ್ಪಿದರೆ ಮೊದಲು ಇಟ್ಟಿರುವ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟು ಸದರೀ ಅಂಗಡಿಯು ಅಥವಾ ಸಮುದಾಯವು ಡೆಪ್ಯುಟಿ ಕಮ್ಮಿಷನರವರ ಅಥವಾ ಹರಾಜು ನಡೆಸತಕ್ಕ ಆಫಿಸರವರ ಅಪ್ಪಣೇ ಮೇರೆಗೆ ಪುನಃ ಹರಾಜ್ ಮಾಡಲ್ಪಡುವುದು. ಅಥವಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು. ಮತ್ತು ಆತನು ಆ ಅಂಗಡಿ ಗಾಗಲೀ ಯಾ ಮತ್ಯಾವ ಅಂಗಡಿ ಯಾ ಅಂಗಡಿಗಳ ಸಮುದಾಯಕ್ಕಾಗಲೀ ಸವಾಲ್ಮಾಡದಂತೆ ನಿಷೇಧಿಸಿದೆ.

6. ಬಿಕರೀದಾರನು ಈ ಕೆಳಗೆ ನಮೂದಿಸಿರುವ ಮತ್ತು ತನಗೆ ಕೊಡಲ್ಪಡುವ ಲೈಸೆನ್ಸಿನ ಷರತ್ತುಗಳಿಗೆ ಅನುಸರಿಸಿ ನಡೆಯುವುದಕ್ಕೆ ತನ್ನನ್ನು ಮತ್ತು ಕ್ರಮವಾಗಿ ರಿಕಾರ್ಡಾದ ಡೆಪ್ಯುಟಿ ಕಮ್ಮಿಷನರವರ ಹುಕುಂನಿಂದ ವಿನಾಯಿಸಿದ ಹೊರ್ತು ಡೆಪ್ಯುಟಿ ಕಮ್ಮಿಷನರವರಿಂದ ಸಾಕೆಂದು ಭಾವಿಸಲ್ಪಡುವಷ್ಟು ತನ್ನ ಚರ ಸ್ಥಿರ ಸ್ವತನ್ನು ಬದ್ಧಿಸುವ ಒಂದು ಒಡಂಬಡಿಕೆಯನ್ನು ಕ್ರಮವಾದ ನಮೂನೆಯಲ್ಲಿ ಬರದು ಕೊಡತಕ್ಕದ್ದು. ಆತನ ಜಾಮೀನ್ದಾರನು ಯಾ ಜಾಮೀನ್ದಾರರು ಯಾರಾದರೂ ಅಂಗೀಕರಿಸಲ್ಪಟ್ಟಿದ್ದಲ್ಲಿ ಅವರೂ ಕೂಡ ವಿಧಾಯಕವಾಗಿರುವ ನಮೂನೆಯಲ್ಲಿ ತನ್ನನ್ನು ಯಾ ತಮ್ಮನ್ನು ಅಥವಾ ತಮ್ಮ ಚರ ಸ್ಥಿರ ಸ್ವತ್ತುಗಳ ಪೈಕಿ ಬಿಕರೀದಾರನು ಕರಾರಿನ ಷರತ್ತಿಗನುಸಾರವಾಗಿ ನಡೆಯುವದಕ್ಕೆ ಡೆಪ್ಯುಟಿ ಕಮ್ಮಿಷನರವರಿಂದ ಸಾಕೆಂದು ಭಾವಿಸಲ್ಪಟ್ಟಿರುವಷ್ಟು ಚರ ಯಾ ಸ್ಥಿರ ಸ್ವತ್ತನ್ನೂ ಬದ್ಧಿಸುವ ಒಂದು ಪತ್ರವನ್ನ ಬರೆದು ಕೊಡತಕ್ಕದ್ದು. ಹಾಗೆ ಬರದು ಕೊಡಲ್ಪಟ್ಟ ಒಡಂಬಡಿಕೆ ವ ಪತ್ರವೂ ಬಿಕರೀದಾರನ ಖರ್ಚಿನಿಂದ ಸ್ಟ್ಯಾಂಪು ಆಗಬೇಕು, ಮತ್ತು ಪತ್ರದಲ್ಲಿ ಕಂಡ ಮೊಬಲಗು ಅಥವಾ 100ಕ್ಕೆ ಮೀರಿರುವಾಗ ಆತನ ಖರ್ಚಿಂದಲೇನೆ ಅವು ರಿಜಿಸ್ಟರು ಮಾಡಿಸಲ್ಪಡಬೇಕು.

7. ಮೇಲ್ಕಂಡಂತೆ ಲೈಸೆನ್ಸುಗಳನ್ನು ಪಡೆಯುವದಕ್ಕೆ ಯಾ ಒಡಂಬಡಿಕೆಗಳನ್ನು ಬರದು ಕೊಡುವುದಕ್ಕೆ ಯಾವ ಮನುಷ್ಯನಾದರೂ ತಪ್ಪಿದರೆ ಮೊದಲೇ ಇಡಲ್ಪಟ್ಟ ಎಲ್ಲಾ ಠೇವಣಿಗಳೂ ಸರ್ಕಾರಕ್ಕೆ ದಂಡವಾಗಿ ಸೇರಿಸಲ್ಪಡುತ್ತವೆ, ಮತ್ತು ಸದರೀ ಅಂಗಡಿ ಯಾ ಅಂಗಡಿಗಳ ಸಮುದಾಯವು ಹಾಗೆ ತಪ್ಪಿ ಹೋದ ಬಿಕರೀದಾರನನ್ನು ನಷ್ಟಕ್ಕೆ ಗುರಿಯಾಗುವಂತೆ ಡೆಪ್ಯುಟಿ ಕಮ್ಮಿಷನರವರಿಂದ ದುಸರಾ ಹರಾಜು ಮಾಡಲ್ಪಡುವುದು, ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವುದು. ಆ ಬಿಕರೀ ದಾರನಿಂದ ಮೊದಲೇ ಹಾಜರ್ಮಾಡಲ್ಪಟ್ಟ ಠೇವಣಿ ಯಾ ಠೇವಣಿಗಳು ಸರ್ಕಾರಕ್ಕೆ ದಂಡವಾಗಿ ತೆಗದು ಕೊಳ್ಳಲ್ಪಡುವುದಲ್ಲದೆ ಆತನು ದುಸರಾ ಹರಾಜಿನಿಂದ ಯಾ ಅನ್ಯಥಾ ವಿಲೇವಾರಿಯಿಂದ ಆಗತಕ್ಕ ನಷ್ಟಕ್ಕೆ ಸಹಾ ಗುರಿಯಾಗತಕ್ಕದ್ದು. ಪರಂತು ಅಂಥಾ ದುಸರಾ ಹರಾಜಿನಿಂದ ಯಾ ಅನ್ಯಥಾ ವಿಲೇವಾರಿಯಿಂದ ಏನಾದರೂ ನಫೆ ಬಂದರೆ ಅದಕ್ಕೆ ಆತನಿಗೆ ಏನೂ ಹಕ್ಕಿರತಕ್ಕದ್ದಲ್ಲ. ಇದರಿಂದ ನಷ್ಟವಾದ ಪಕ್ಷದಲ್ಲಿ ದಂಡವಾಗಿ ತೆಗದುಕೊಂಡ ಮೊಬಲಗನ್ನು ಅದರಿಂದ ಉತಾರು ಹಾಕಬಹುದು. ಹರಾಜು ಮುಂಜೂರಾದ ಮೇಲೆ ಸದರೀ ಬಿಕರೀ ದಾರನು ಸತ್ತುಹೋದ ಪಕ್ಷದಲ್ಲಿ ಅವನ ವಾರಸುದಾರರು ಯಾ ಆತನಿಂದ ಹಕ್ಕನ್ನು ಪಡೆದವರು ಅದಕ್ಕೆ ಜವಾಬ್ದಾರರಾಗಿರತಕ್ಕದ್ದು.

8. ಮೇಲಿನ 5ನೇ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಯಾ ಹರಾಜುಗಳು ಅನ್ಯಥಾ ವಿಲೇವಾರಿಯು ಷರತ್ತಿಗೆ ತಪ್ಪಿದ ಭರವಸ್ತುದಾರನ ಜವಾಬ್ದಾರಿ ಮೇಲೆ ನಡೆಯತಕ್ಕದ್ದು. ಇದರಿಂದ ಆತನು ಆದಾಯವನ್ನೆಲ್ಲಾ ಕಳೆದುಕೊಂಡವನಾಗುತ್ತಾನೆ.

ಮತ್ತು ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿ ಮಾಡುವದರಿಂದ ನಷ್ಟ ಸಂಭವಿಸುವಲ್ಲಿ ಮೊದಲಿನ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾಗಿದ್ದ ಒಟ್ಟು ಮೊಬಲಗಿನ ಪೈಕಿ ದುಸರೇ ಹರಾಜ್ ಯಾ ಅನ್ಯಥಾ ವಿಲೇವಾರಿ ಯಾದ್ದರಲ್ಲಿ ಚಡಸವಾಲದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾ ಬಾಕಿ ಉಳಿಯುವದನ್ನು ಆತನು ಭರ್ತಿ ಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿ ಮಾಡಿದ್ದರಿಂದ ಉಂಟಾಗುವ ನಷ್ಟದ ಮೊಬಲಗಿನಲ್ಲಿ ದಂಡವಾಗಿ ತೆಗದುಕೊಂಡಿರುವ ಠೇವಣಿ ಮೊಬಲಗನ್ನು ವಜಾಯಿಸಿ ಬಾಕಿ ಏನಾದರೂ ಉಳಿದರೆ ಅದನ್ನು ಆತನಿಂದ ಜವಿರ್ಹ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುತ್ತದೆ. ಆದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಸದರೀ ಠೇವಣಿ ಮೊಬಲಗು ದುಸರೇ ಹರಾಜಿನಿಂದ ಆಗತಕ್ಕ ನಷ್ಟಕ್ಕಿಂತಲೂ ಹೆಚ್ಚಾಗಿದ್ದಲ್ಲಿ ಆ ಠೇವಣೀ ಮೊಬಲಗು ಯಾವತ್ತನ್ನೂ ಸರ್ಕಾರಕ್ಕೇನೇ ಜಮಾ ಮಾಡಿ ಕೊಳ್ಳತಕ್ಕದ್ದು.

9. ಹಿಂದಿನ ಕೆಲವು ವರ್ಷಗಳ ಬಾಬತು ಅಂಗಡಿಯು ಗುತ್ತಿಗೆ ಮೊಬಲಗು ಖರ್ಚಾದ ಸಾರಾಯಿ ವಗೈರೆ ತಪ್ಸೀಲ್ ಇದಕ್ಕೆ ಲಗತ್ಮಾಡಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುತ್ತದೆ.

10. ಮೇಲಿನ 6ನೇ ಕಲಂನಲ್ಲಿ ಕಂಡ ಮೇರೆಗೆ ಹೊಂದಬೇಕಾದ ಲೈಸೆನ್ಸ್ ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು. ಕ್ರಮವಾದ ಲೈಸೆನ್ಸ್ ಕೊಡದಿದ್ದಾಗ್ಯೂ ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ವಿರೋಧವಾಗಿ ನಡೆದ್ದಕ್ಕೆ ವಿಧಿಸಿರುವ ಶಿಕ್ಷೆಗಳ ಸ್ವತಂತ್ರ ಹಕ್ಕನ್ನು ಕೊಂಡುಕೊಂಡವನು ಗುರಿಯಾಗುವದನ್ನು ಈ ಪ್ರಕರಣದಲ್ಲಿರುವ ಯಾವದು ತಪ್ಪಿಸಲಾರದು.

(1) a. ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು 20° ಡಿಗ್ರಿ ಜೋರಾದ ಅಂಡರ್ ಪ್ರೂಫ್ ಬಲವುಳ್ಳ ಸಾರಾಯನ್ನು ಮಾರುವುದಕ್ಕೂ ಮತ್ತು ಡೆಪ್ಯುಟಿ ಕಮ್ಮಿಷನರ ಯಾ ಅವರಿಂದ ಅಧಿಕಾರ ಪಡೆದ ಇತರ ಆಫೀಸರರ ಅಪ್ಪಣೆಯಿಂದ 30° ಡಿಗ್ರಿ ಅಂಡರ್ ಪ್ರೂಫ್ ಸಾರಾಯನ್ನು ಮಾರುವುದಕ್ಕೂ ಮಾತ್ರವೇ ವ್ಯಾಪಿಸುತ್ತೆ. ಪರದೇಶೀಯ ಮದ್ಯಗಳನ್ನು ಮಾರತಕ್ಕ ಅಂಗಡಿಗಳಿಲ್ಲದೇ ಇರತಕ್ಕ ಪ್ರದೇಶಗಳಲ್ಲಿ ಅಥವಾ ಪರದೇಶೀಯ ಮದ್ಯಗಳ ಅಂಗಡೀದಾರರು ಎಕ್ಸೈಜ್ ಕಮ್ಮಿಷನರ್ ನಿರ್ಣಯಿಸಿರುವ ಮೇರೆಗೆ ಬೆಂಗಳೂರು ಸೆಂಟ್ರಲ್ ಡಿಸ್ಟಿಲೆರಿಯಲ್ಲಿ ತಯಾರಾಗುವ ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗಣಿ ಭಟ್ಟಿ ಇಳಿಸಲ್ಪಟ್ಟ ಷರಾಬನ್ನು ಯಾ ಇತರ ವಿಶೇಷ ಮದ್ಯಗಳನ್ನು ಅಂದರೆ ಬ್ರಾಂದಿ ವಿಸ್ಕಿ ಜಿನ್ ಮುಂತಾದ್ದನ್ನು ಮಾರದೇ ಇರತಕ್ಕ ಸ್ಥಳಗಳಲ್ಲಿಯೂ ಒಪ್ಪಿತವಾದ ನಡತೆಯುಳ್ಳ ಸಾರಾಯಿ ಅಂಗಡಿ ಲೈಸೆನ್ಸುದಾರನು ಎಕ್ಸೈಜ್ ಕಮ್ಮಿಷನರವರ ಮುಂಜೂರು ಹುಕುಂ ಪಡೆದು ಸದರೀ ಮದ್ಯಗಳನ್ನು ಕ್ರಮವಾಗಿ ಚಿರಟೆ ಮೊಹರು ಆಗಿರುವ ಶೀಶೆಗಳಲ್ಲಿ ಎಕ್ಸೈಜ್ ಕಮ್ಮಿಷನರ್ ಗೊತ್ತು ಮಾಡಿದ ಖರೀದಿ ದರದ ಮೇರೆಗೆ ಅಂಗಡಿಯ ಆವರಣದಲ್ಲಿ ಕುಡಿಯದಂತೆ ಮಾರಲು ಅಪ್ಪಣೆ ಕೊಡಲ್ಪಡಬಹುದು.

b. ಸಾರಾಯಿ ಯಾ ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗಣೀ ಭಟ್ಟಿ ಇಳಿಸಲ್ಪಟ್ಟ ಸ್ವದೇಶ ಷರಾಬನ್ನು ಯಾ ಇತರ ವಿಶೇಷ ಮದ್ಯಗಳನ್ನು ತಯಾರ್ಮಾಡುವವರು ಷರಾಬ್ ಬಾಂಡೆಡ್ ಕೋಠಿ ಲೈಸೆನ್ಸ್‌ದಾರರು ಮೇಲೆ ನಮೂದಿಸಿರುವ ಮದ್ಯಗಳ ಚಿಲ್ಲರೆ ವ್ಯಾಪಾರದಲ್ಲಿ ಯಾವ ಸಂಬಂಧವನ್ನೂ ಇಟ್ಟುಕೊಳ್ಳಕೂಡದು; ಅಥವಾ ಹಾಗೆ ಸಂಬಂಧವಿರುವ ಯಾವ ಮನುಷ್ಯನನ್ನೂ ನೇಮಿಸಿಕೊಳ್ಳಕೂಡದು.

(2) (a) ಸದರೀ ಸ್ವತಂತ್ರದ ಹಕ್ಕನ್ನೂ ಪಡೆದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ವರ್ಷಕ್ಕೆ 12 ರೂಪಾಯಿಗಿಂತಲೂ ಹೆಚ್ಚಾಗಿದ್ದಲ್ಲಿ, ಸ್ಥಳೀಯವಾದ ತಾಲ್ಲೂಕು ಖಜಾನೆಗೆ 1904ನೇ ಇಸವಿ ಜುಲೈ ಮಾಹೆ ಲಾಗಾಯಿತು ಸರಿಯಾದ ತಿಂಗಳುಗಟ್ಲೆ ಖಿಸ್ತು ಪ್ರಕಾರ ಪಾವತಿ ಮಾಡಲ್ಪಡುತ್ತಾ ಬರತಕ್ಕದ್ದು. ವರ್ಷಕ್ಕೆ 12 ರೂಪಾಯಿಗಿಂತಲೂ ಹೆಚ್ಚಾಗಿಲ್ಲದೆ ಇದ್ದಲ್ಲಿ 3 ತ್ರೈಮಾಸಿಕದ ಖಿಸ್ತುಗಳಿಗಿಂತಲೂ ಹೆಚ್ಚಾಗದಂತೆ ಪಾವತಿ ಮಾಡಲ್ಪಡತಕ್ಕದ್ದು. ಪ್ರತಿಯೊಂದು ಖಿಸ್ತು ಯಾವ ತಿಂಗಳಿಗೆ ಪಾವತಿ ಯಾಗತಕ್ಕದ್ದೋ ಆ ತಿಂಗಳಿನ ಯಾ ತ್ರೈಮಾಸಿಕದ ಗುತ್ತಿಗೆ ಮೊಬಲಗೆಂದು ಭಾವಿಸತಕ್ಕದ್ದು. ಲೈಸೆನ್ಸ್‌ದಾರನು ಲೋಕಲ್‌ಸೆಸ್ಸಿಗಾಗಿ ಏನೂ ಜಾಸ್ತೀ ಮೊಬಲಗು ಕೊಡತಕ್ಕದ್ದಿಲ್ಲವು. ಪ್ರತಿ ಮಾಹೆಯ ಯಾ ತ್ರೈಮಾಸಿಕದ ಇಜಾರ ಮೊಬಲಗು ಸದರೀ ಮಾಹೆಯ 20ನೇ ತಾರೀಖಿನಲ್ಲಾಗಲೀ ತತ್ಪೂರ್ವವಾಗಲೀ ಅಥವಾ ಖಿಸ್ತು ಬಾಕೀ ನಿಲ್ಲುವ ತ್ರೈಮಾಸಿಕದ ಅಖೈರೊಳಗಾಗಲೀ ಪಾವತಿ ಮಾಡಲ್ಪಡಬೇಕು. ಹಾಗೆ ಪಾವತಿ ಮಾಡಲಿಕ್ಕೆ ತಪ್ಪಿದರೆ ಅಮಲ್ದಾರರು ಡೆಪ್ಯುಟಿ ಕಮ್ಮಿಷನರ ಹುಕುಂ ಪಡೆದು ಸದರೀ ಇಜಾರೆಯನ್ನು ವಜಾಯಿಸಿ ಯಾ ಸದರೀ ಇಜಾರೆ ದಂಡವಾಗಿ ಕಳದುಕೊಳ್ಳಲ್ಪಟ್ಟಿರುತ್ತೆಂದು ಬರಹ ಮೂಲಕವಾಗಿ ರಿಕಾರ್ಡು ಮಾಡಿ (ಮಾಹೆ ಯಾ ತ್ರೈಮಾಸಿಕದ ಅಖೈರ್ ಆದಕೂಡಲೇ ಸಾಧ್ಯವಾದಷ್ಟು ತ್ವರೆಯಲ್ಲಿ) ಅಂಗಡಿಯನ್ನು ಯಾ ಅಂಗಡಿಗಳ ಸಮುದಾಯವನ್ನು ಮರಳಿ ಹರಾಜ್ ಯಾ ಅನ್ಯಥಾ ವಿಲೇವಾರಿ ಮಾಡತಕ್ಕದ್ದು. ಸದರೀ ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿಯು ಹೊಸ ಬಿಕರೀದಾರನಿಗೆ ಕೊಟ್ಟ ಲೈಸೆನ್ಸ್ ತಾರೀಖು ಯಾ ಅನ್ಯಥಾ ವಿಲೇವಾರಿ ಆದ ತಾರೀಖು ಲಾಗಾಯಿತು ಜಾರೀಗೆ ಬರತಕ್ಕದ್ದು. ಲೈಸೆನ್ಸನ್ನು ವಜಾಯಿಸಲು ಅಧಿಕಾರವಿರುವ ಆಫೀಸರರು ತಮಗೆ ಯುಕ್ತ ತೋರಿದಲ್ಲಿ ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿ ಆಗುವದರೊಳಗೆ ಮಾರಾಟವನ್ನು ನಿಲ್ಲಿಸಬೇಕಾದ್ದಿಲ್ಲ.

ಟಿಪ್ಪಣಿ.—ಜಾತ್ರೆ ಅಂಗಡಿಯ ಲೈಸೆನ್ಸ್‌ದಾರನು ಜಾತ್ರೆ ಷುರು ಆಗುವದಕ್ಕೆ ಮೊದಲೇನೇ ಸದರೀ ಅಂಗಡಿಯ ಮೊಬಲಗನ್ನು ಪೂರಾ ಪಾವತಿ ಮಾಡಬೇಕು.

(b) ಲೈಸೆನ್ಸದಾರನಿಂದ ಇಡಲ್ಪಟ್ಟ ಠೇವಣಿ ಮೊಬಲಗು ಲೈಸೆನ್ಸಿನ ಷರತ್ತುಗಳಂತೆ ಕ್ರಮವಾಗಿ ನಡೆದುಕೊಳ್ಳುವದಕ್ಕಾಗಿ ಕೊಟ್ಟಿರುವ ಜಾಮೀನಾಗಿ ಭಾವಿಸಲ್ಪಡುತ್ತದೆ. ದಂಡವಾಗಿ ತೆಗೆದುಕೊಳ್ಳಲ್ಪಡದ ಯಾ ಜಪ್ತಾ ಮಾಡಲ್ಪಡದೆ ಯಾ ಅನ್ಯಥಾ ವಿಲೇವಾರಿ ಆಗದೆ ಇದ್ದಲ್ಲಿ ಇಜಾರೆ ವಾಯಿದೆಯ ಆಖೈರ್ 2 ತಿಂಗಳ ಖಿಸ್ತು ಮೊಬಲಗಿಗೋಸ್ಕರ ಜಮಾ ಮಾಡಿ ಕೊಳ್ಳಲ್ಪಡತಕ್ಕದ್ದು. ಪರಂತು ಅಂಗಡಿಯು ಯಾ ಅಂಗಡಿಯು ಸಮುದಾಯವು ದುಸರೇ ಹರಾಜ್ ಯಾ ಅನ್ಯಥಾ ವಿಲೇವಾರಿ ಮಾಡಲ್ಪಟ್ಟಾಗ ಸದರೀ ಡಿಪಾಜಿಟ್ಟು ಮೊಬಲಗು ಡೆಪ್ಯುಟಿ ಕಮಿಷನರವರಿಗೆ ಯುಕ್ತ ತೋರುವಂತೆ ದಂಡವಾಗಿ ಆದರೂ ತೆಗೆದುಕೊಳ್ಳಲ್ಪಡತಕ್ಕದ್ದು. ಅಥವಾ ತಪ್ಪಿ ಹೋದವನಿಂದ ಬರಬೇಕಾದ ಬಾಕಿಗೋಸ್ಕರವೂ ಅಂಗಡಿಯು ಯಾ ಅಂಗಡಿಗಳ ಸಮುದಾಯವು ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿ ಮಾಡಿದ್ದರಿಂದ ಉಂಟಾಗಬಹುದಾದ ಯಾವ ನಷ್ಟವನ್ನಾದರೂ ಭರ್ತಿ ಮಾಡುವ ಬಗ್ಗೆ ಉಪಯೋಗಿಸಲ್ಪಡತಕ್ಕದ್ದು. ಅಂಥಾ ಬರಬೇಕಾದ ಬಾಕಿಗಳು ಮತ್ತು ನಷ್ಟದ ಮೊಬಲಗುಗಳು ಸದಾ ರೆವಿನ್ಯೂ ಕಂದಾಯದ ಬಾಕಿ ವಸೂಲಿ ಬಗ್ಗೆ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ ಲೈಸೆನ್ಸದಾರನಿಂದ ವಸೂಲ್ಮಾಡಲ್ಪಡತಕ್ಕದ್ದು. ಲೈಸೆನ್ಸದಾರನಿಂದ ಯಾವ ಸಂದರ್ಭದಲ್ಲಿಯೂ ರಿಮಿಷನ್ ಅಥವಾ ಇಜಾರೆ ಮೊಬಲಗನ್ನು ಕಮ್ಮಿ ಮಾಡುವ ಬಗ್ಗೆ ಅಥವಾ ಪರಿಹಾರ ದ್ರವ್ಯವನ್ನು ಪಡೆಯುವ ಬಗ್ಗೆ ಕೇಳಲ್ಪಡಕೂಡದು.

(c) ಬಾಕಿ ಬರಬೇಕಾದ ದರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ ಮತ್ತು ನಷ್ಟದ ಮೊಬಲಗಿಗೆ ಪುನಃ ಹರಾಜಾದ ತಾರೀಖಿನ ಲಾಗಾಯಿತು ಸಾಲಿಯಾನಾ ಶೇಕಡಾ 6ರ ಪ್ರಕಾರ ಬಡ್ಡಿ ವಸೂಲ್ಮಾಡಲ್ಪಡತಕ್ಕದ್ದು.

(3) (a) ಲೈಸೆನ್ಸದಾರನು ಕಾಕುಂಬೆ ಸಾರಾಯಿಯನ್ನು 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ 1ಕ್ಕೆ 8½ ಆಣೆ ದರದ ಮೇರೆ ಬಿರಡೆ ಹಾಕಿ ಮೊಹರ್ಮಾಡಿದ ಶೀಸೆಗಳಲ್ಲಿ 20° ಡಿಗ್ರಿ ಜೋರುಳ್ಳ ಬೆಲ್ಲದ ಸಾರಾಯಿಯನ್ನು ಸಹಾ ಗ್ಯಾಲನ್1ಕ್ಕೆ ರೂ. 1—6—6 ಪ್ರಕಾರವೂ ಮತ್ತು ಮೇಲೆ ನಮೂದಿಸಿರುವ ವಿಶೇಷ ಮದ್ಯಗಳನ್ನು ಭಟ್ಟೀದಾರರು ಗೊತ್ತುಮಾಡುವ ಖರೀದಿ ದರದಂತೆಯೂ ಏರ್ಪಾಡಾಗಿರುವ ಬಾಂಡೆಡ್ ಡಿಪೋಗಳಿಂದ ಕೊಂಡುಕೊಳ್ಳತಕ್ಕದ್ದು.

(b) ಲೈಸೆನ್ಸದಾರನು 20° ಡಿಗ್ರಿ ಅಂಡರ್ ಪ್ರೂಫ್ ಜೋರಿನ ಕಾಕುಂಬೆ ಸಾರಾಯಿಯನ್ನು ಗ್ಯಾಲನ್ 1ಕ್ಕೆ 6—6—0 ಯಂತೆಯೂ ಅಥವಾ ಗ್ಯಾಲನ್ನಿನ 1—51ನೇ ಭಾಗವಾದ ಒಂದು ಡ್ರಾಂಗೆ 2 ಆಣೆಯಂತೆಯೂ ಬೆಲ್ಲದ ಸಾರಾಯಿಯನ್ನು ಒಂದು ರೆಪ್ಯುಟೆಡ್ ಕ್ವಾರ್ಟ್ ಶೀಸೆ ಒಂದಕ್ಕೆ 1—3—10ರಂತೆಯೂ ಸದರೀ ಜೋರಿಗಿಂತ ಕಮ್ಮಿಯುಳ್ಳ ಸಾರಾಯಿಗಳಿಗೆ ಅದರ ದಾಮಾಷಾಯಿ ದರದಂತೆಯೂ ಜನರಿಗೆ ಮಾರತಕ್ಕದ್ದು.

(4) ಬೆಂಗಳೂರು ಮತ್ತು ಮೈಸೂರು ಷಹರುಗಳಲ್ಲಿ ಪ್ರತಿಯೊಂದು ಅಂಗಡಿಯ ಲೈಸೆನ್ಸದಾರನು ಅವನ ಅಂಗಡಿಯ ಲೈಸೆನ್ಸಿನ ನಿಯಮಿತ ಕಾಲಕ್ಕೆ ಮುಂಗಡವಾಗಿ ವರುಷ 1ಕ್ಕೆ 180 ರೂಪಾಯಿ ದರದ ಮೇರೆಗೆ ಮುನಿಸಿಪಲ್ ಕಾನೂನ್ ಪ್ರಕಾರ ರಿಜಿಸ್ಟರ್ ಫೀ ಯಾ ರುಸುಮನ್ನು ಕೊಡಬೇಕು. ಮತ್ತು ಆತನು ಪ್ರತಿ ತಿಂಗಳಲ್ಲಿಯೂ ಅಂಥಾ ಪ್ರತಿ ಅಂಗಡಿಯಲ್ಲೂ 55 ಗ್ಯಾಲನ್‌ಗಳಿಗೆ ಹೆಚ್ಚಾಗಿ ಮಾರುವ ವಿಶಿಷ್ಟಸಾರಾಯಿನ ಮೇಲೆ ಗ್ಯಾಲನ್ 1ಕ್ಕೆ 4 ಆಣೆ ಪ್ರಕಾರ ಲೈಸೆನ್ಸ್ ಫೀಯನ್ನು ಸಹ ಕೊಡಬೇಕು.

(5) ಭಟ್ಟೀದಾರರಿಂದ ಕಾಕುಂಬೆ ಸಾರಾಯಿ, ಬೆಲ್ಲದ ಸಾರಾಯಿ, ಡಬ್ಬಲ್ ಡಿಸ್ಟಿಲ್ಡ್‌ಯಾನೆ ದುಗಣಿ ಭಟ್ಟಿ ಇಳಿಸಿದ ಸ್ವದೇಶ ಷರಾಬು ಅಥವಾ ಇತರ ವಿಶೇಷ ಮದ್ಯಗಳು, ಇವುಗಳಿಗಾಗಿ ಹಾಕಲ್ಪಡುವ ಮೇಲ್ಕಂಡ ಖರೀದಿ ದರ ಮತ್ತು ರುಸುಂ ಶಿವಾಯಿ ಸರ್ಕಾರದ ಅಪ್ಪಣೆ ಪ್ರಕಾರ ಸ್ಥಾಪಿಸಲ್ಪಟ್ಟಿರುವ ಬಾಂಡೆಡ್ ಡಿಪೋದಿಂದ ಸಾರಾಯಿ ಒಯ್ಯಲ್ಪಡುವದಕ್ಕೆ ಪೂರ್ವ 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ 1ಕ್ಕೆ ಲೋಕಲ್‌ಸೆಸ್ ಸಹಿತ ವಿಧಾಯಕವಾಗಿರುವ 4¾ ರೂಪಾಯಿ ದರದಂತೆಯೂ, ಯಾ ಸದರಿ ಜೋರಿಗಿಂತ ಹೆಚ್ಚಾದ ಯಾ ಕಮ್ಮಿಯಾದ ಸಾರಾಯಿಗಳಿಗೆ ಅದರ ದಾಮಾಷಾಯಿ ದರದಂತೆಯು ಎಕ್ಸೈಜ್ ಡ್ಯೂಟಿ ಯಾನೆ ಹಾಸಲು 6ನೇ ಷರತ್ತು ಅನುಸರಿಸಿ ಮುಂಗಡವಾಗಿ ಪಾವತಿ ಮಾಡಲ್ಪಡಬೇಕಾಗಿರುತ್ತೆ.

(6) ಲೈಸೆನ್ಸದಾರನು ಮೇಲ್ಕಂಡ ಹಾಸಲನ್ನು ಖರೀದಿ ಮೊಬಲಗನ್ನೂ ತಾಲ್ಲೂಕು ಖಜಾನೆಗೆ ಅಥವಾ ತಾಲ್ಲೂಕು ಕಚೇರಿಯಲ್ಲಿ ಭಾನುವಾರ ಮತ್ತು ರಜಾ ದಿನಗಳಲ್ಲಿಯೂ ಸಹ ಡಿಟೋ ಹಾಸಲು ಮತ್ತು ಖರೀದಿ ಮೊಬಲಗನ್ನು ತೆಗೆದುಕೊಳ್ಳುವುದಕ್ಕಾಗಿ ಸರ್ಕಾರದ ಖರ್ಚಿನಿಂದ ನೇಮಿಸಲ್ಪಟ್ಟಿರುವ ವಿಶೇಷ ಷರಾಫನು ಇದ್ದಲ್ಲಿ ಆತನ ವಶಕ್ಕೆ, ಅಥವಾ ಡೆಪ್ಯುಟಿ ಕಮಿಷನರ್ ಇದಕ್ಕಾಗಿ ಮೊಕರರ್ಮಾಡಿರುವ ಇನ್ಯಾವ ನೌಕರನಿಗಾದರೂ ಪಾವತಿ ಮಾಡಿ ಗೊತ್ತು ಮಾಡಿರುವ ಛಾಪಾ ನಮೂನೆಯಲ್ಲಿ ರಶೀತಿಯನ್ನು ಪಡೆಯತಕ್ಕದ್ದು. ಅಂಥಾ ರಶೀತಿಯನ್ನೂ ಮತ್ತು ಆ ರಶೀತಿಯಲ್ಲಿ ಕಂಡ ಮೊಬಲಗಿಗೆ ತಕ್ಕ ಮದ್ಯಕ್ಕೆ ಒಂದು ದರಖಾಸ್ತನ್ನೂ ಹಾಜರ್ಮಾಡಿದರೆ ಬಾಂಡೆಡ್ ಡಿಪೋ ಜಿಮ್ಮೇದಾರನು ಟ್ರೆಷರಿ ಆಫೀಸರರ ರಶೀತಿಯಲ್ಲಿ ನಮೂದು ಮಾಡಿರುವ ಡ್ಯೂಟಿ ಮತ್ತು ಖರೀದಿ ಮೊಬಲಗಿಗೆ ಸರಿಹೊಂದುವ ಮದ್ಯವನ್ನು ಸರಬರಾಯಿ ಮಾಡಿ ಆ ರಶೀತಿಯಲ್ಲಿ ಮದ್ಯವು ರವಾನೆ ಆದ ತಾರೀಖು ಮತ್ತು ಘಂಟೆಯನ್ನು ನಮೂದುಮಾಡಿ ಎಕ್ಸೈಜ್ ಕಮಿಷನರವರ ಆಫೀಸಿಗೆ ಆ ರಶೀತಿಯನ್ನು ರವಾನಿಸತಕ್ಕದ್ದು. ಮೇಲ್ಕಂಡ ಡಿಪೋ ಜಿಮ್ಮೇದಾರನು ಬಾಂಡೆಡ್ ಡಿಪೋದಿಂದ ಮದ್ಯವನ್ನು ರವಾನೆ ಮಾಡಲು ವಿಧಾಯಕವಾಗಿರುವ ನಮೂನೆಯಲ್ಲಿ ರಹದಾರಿಯನ್ನು ಕಳುಹಿಸತಕ್ಕದ್ದು. ಆತನು ಎಕ್ಸೈಜ್ ಕಮಿಷನರ್ ಸಾಹೇಬರವರ ಆಜ್ಞಾನುಸಾರವಾಗಿ ಸರಕಿನೊಡನೆ ಸ್ಯಾಂಪಲ್ ಬಾಟ್ಲು ಯಾನೆ ಮಾದ್ರಿ ಬಡ್ಡಿಗಳನ್ನು ಸಹಾ ಕಳುಹಿಸತಕ್ಕದ್ದು.

(7) ಲೈಸೆನ್ಸ್ದಾರನು 1904ನೇ ಇಸವಿ ಜುಲೈ ತಾರೀಖಿನಲ್ಲಿ ಅಂಗಡಿಯಲ್ಲಿ ಹಾಜರಿರತಕ್ಕ ಹಳೇ ಲೈಸೆನ್ಸ್ದಾರನ ಬಾಬತು ದಾಸ್ತಾನ ಮದ್ಯವನ್ನು ಎಕ್ಸೈಜ್ ಕಮ್ಮಿಷನರ್ ಸಾಹೆಬರವರು ಗೊತ್ತು ಮಾಡಬಹುದಾದ ಪರಿಹಾರ ದ್ರವ್ಯವನ್ನು ಹಳೇ ಗುತ್ತಿಗೆ ದಾರನಿಗೆ ಪಾವತಿಮಾಡಿ ತೆಗದುಕೊಳ್ಳಲು ಗುರಿಯಾಗತಕ್ಕದ್ದು.

(8) ಲೈಸೆನ್ಸ್ದಾರನು ಲೈಸೆನ್ಸ್ ಪಡೆದಿರುವ ಯಾವ ಆವರಣದಲ್ಲಾದರೂ ಎಕ್ಸೈಜ್ ಕಮ್ಮಿಷನರವರಿಂದ ಆಗಿಂದಾಗ್ಗೆ ವಿಧಿಸಲ್ಪಡಬಹುದಾದ ಪ್ರಮಾಣದ ಅಳತೇ ಸಾಧನಗಳನ್ನು ಇಟ್ಟುಕೊಂಡು ಉಪಯೋಗಿಸತಕ್ಕದ್ದು. ಲೈಸೆನ್ಸ್ ಪಡದ ಅಂಗಡಿಗಳನ್ನು ತನಿಖೆಮಾಡಲು ಅಧಿಕಾರವುಳ್ಳ ನೌಕರರು ಆವರಣವನ್ನು ತನಿಖೆ ಮಾಡುವದಕ್ಕೂ ಉಪಯೋಗಿಸಲ್ಪಡುವ ಅಳತೇ ಸಾಮಾನುಗಳನ್ನೂ ಮತ್ತು ಮದ್ಯವನ್ನು ಪರೀಕ್ಷೆ ಮಾಡುವದಕ್ಕೂ ಅಂಗಡಿಯಲ್ಲಿಟ್ಟಿರುವ ಲೆಖ್ಖವನ್ನು ಕೇಳಿ ತನಿಖೆ ಮಾಡುವುದಕ್ಕೂ ಅಧಿಕಾರವುಳ್ಳವರಾಗಿರುತ್ತಾರೆ.

(9) ಇಜಾರೆಯು ಎಕ್ಸೈಜ್ ಕಮ್ಮಿಷನರ್ ಸಾಹೆಬರವರ ಅಪ್ಪಣೆ ಶಿವಾಯಿ ಮಾರಿಕೆಯಿಂದಲಾಗಲಿ ದಾನಮೂಲಕವಾಗಿ ಆಗಲೀ ಅಥವಾ ಇತರ ವಿಧವಾಗಿಯಾಗಲೀ ವರ್ಗವಾಗತಕ್ಕದ್ದಲ್ಲ. ಯಾ ಬಳಗೇಣಿ ಆಗತಕ್ಕದ್ದಲ್ಲ ಯಾ ಡೆಪ್ಯುಟಿ ಕಮ್ಮಿಷರವರು ಹಾಗೆ ಹುಕುಂ ಮಾಡಿದ್ದಲ್ಲಿ ಅವರ ಅನುಮತಿ ಶಿವಾಯಿ ಯಾವ ಹಕ್ಕಿನ ಆಡಳಿತಕ್ಕಾದರೂ ಯಾವ ಮುತಾಲೀಕನಿಗೂ ಮೊಕರರಾಗಕೂಡದು. ಮುತಾಲೀಕನೊಡನೆ ಗೊತ್ತುಮಾಡಿಕೊಂಡಿರುವ ಎಲ್ಲಾ ಒಡಂಬಡಿಕೆಗಳು ಕರಾರು ಮಾಡಿಕೊಂಡ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಡೆಪ್ಯುಟಿ ಕಮ್ಮಿಷನರವರಲ್ಲಿ ಇಡಲ್ಪಡತಕ್ಕದ್ದು.

(10) ತೆಗದುಕೊಳ್ಳಲ್ಪಟ್ಟದ್ದ ಅಂಗಡಿಗಳಿಗೆ ಬರುವ ರಾಜೀನಾಮೆಗಳನ್ನು ಡೆಪ್ಯುಟಿ ಕಮ್ಮಿಷನರವರು ವಿಚಾರಮಾಡದೆ ತಿರಸ್ಕರಿಸುವರು.

(11) ಲೈಸೆನ್ಸ್ದಾರನು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನು ಮತ್ತು ನಿಬಂಧನೆಗಳಿಗೂ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಕಾನೂನುಗಳನ್ನನುಸರಿಸಿ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು, ಮತ್ತು ಸರಿಪಡಿಸಲು ಯಾ ಹೊಸ ಲೈಸೆನ್ಸ್ ಕೊಡುವ ಕಾರಣಗಳಿಂದ ಲೈಸೆನ್ಸನ್ನು ಕೇಳಿದ್ದಲ್ಲಿ ಕೊಟ್ಟುಬಿಡತಕ್ಕದ್ದು.

(12) ಡೆಪ್ಯುಟಿ ಕಮ್ಮಿಷನರವರು ಅವರಿಗೆ ಯುಕ್ತ ಕಂಡಾಗ ಅಂಗಡಿಗಳನ್ನು ಮುಚ್ಚಿಸಬಹುದು. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ 200 ಗಜಗಳ ಒಳಗಾಗಿ ವರ್ಗಾಯಿಸಬಹುದು. ಎಕ್ಸೈಜ್ ಕಮ್ಮಿಷನರ್ ಸಾಹೆಬರವರ ಅಪ್ಪಣೆಯನ್ನು ಪಡದು ಹೊಸ ಅಂಗಡಿಗಳನ್ನು ಇಡಿಸಬಹುದು.

(13) ಅಂಗಡಿಗಳ ಸಮುದಾಯವನ್ನು ಕೊಂಡುಕೊಂಡಿರುವರು ಎಕ್ಸೈಜ್ ಕಮ್ಮಿಷನರವರ ವಿಶೇಷ ಅಪ್ಪಣೆಯನ್ನು ಪಡದು ಸರಿಯಾದ ಅಧಿಕಾರಿಗಳಿಂದ ಲೈಸೆನ್ಸ್ ಪಡೆದು ಕೋಠಿಯನ್ನು ಇಟ್ಟುಕೊಂಡು ಅಲ್ಲಿಗೆ ಬಾಂಡೆಡ್ ಕೋಠಿಯಲ್ಲಿ ವಿಕ್ರಯಿಸಿರುವ ಸರಕನ್ನು ತೆಗೆಸಿಕೊಂಡು ಹೋಗಿ ಅಲ್ಲಿಂದ ತಮ್ಮ ಅಂಗಡಿಗಳಿಗೆ ಅವಶ್ಯಕವಾಗಿರುವ ಸರಬರಾಯಿಯನ್ನು ಮಾಡಿಕೊಳ್ಳಬಹುದು. ಇಂಥಾ ಅಪ್ಪಣೆಯನ್ನು ತಿರಸ್ಕರಿಸಲು ಎಕ್ಸೈಜ್ ಕಮ್ಮಿಷನರ ಸಾಹೇಬರವರು ಸ್ವಾತಂತ್ರವುಳ್ಳವರಾಗಿರುತ್ತಾರೆ.

(14) ಅಂಗಡಿಯ ಯಾ ಅಂಗಡಿ ಸಮುದಾಯದ ಲೈಸೆನ್ಸ್ದಾರನು ತನ್ನ ಲೈಸೆನ್ಸಿನ ವಾಯಿದೆವಳಗೆ ಅಲ್ಲಿಂದ 5 ಮೈಲಿ ಒಳಗೆ ಶೇಂದಿ ಮಾರತಕ್ಕ ಬಿಟ್ಟು ಸ್ವಾತಂತ್ರ್ಯದ ಹಕ್ಕಿನ ವಿಷಯದಲ್ಲಿ ಯಾವ ವಿಧವಾದ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಅಥವಾ ಅದೇ ಯಲ್ಲೆಯೊಳಗೆ ಶೇಂದಿ ಬಿಕರೀ ಮಾಡತಕ್ಕ ಬಿಟ್ಟು ಸ್ವಾತಂತ್ರ್ಯದ ಹಕ್ಕನ್ನು ವಹಿಸಿರತಕ್ಕ ಯಾವ ಮನುಷ್ಯನನ್ನೂ ಬಳದೇಶದ ಮದ್ಯವನ್ನು ಮಾರುವ ತನ್ನ ಬಿಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಪಾಲುದಾರನನ್ನಾಗಿ ಆಗಲಿ ಯಾ ಸಂಬಂಧವುಳ್ಳವನನ್ನಾಗಿ ಆಗಲಿ ಇಟ್ಟುಕೊಳ್ಳಕೂಡದು ಅಥವಾ ತನ್ನ ಲೈಸೆನ್ಸಿನ ವಾಯಿದೆ ಅಂದರ್‌ವಾರ್ ಎಕ್ಸೈಜ್ ಕಮ್ಮಿಷನರವರ ಲಿಖಿತಮೂಲಕವಾದ ಹುಕುಂ ಇಲ್ಲದೆ ಬ್ರಿಟಿಷ್ ಸರ್ಕಾರದ ಕೈಗೆಳಗಿರುವ ಮದರಾಸ್ ಯಾ ಬೊಂಬಾಯಿ ರಾಜ್ಯಾಧಿಪತ್ಯದ ಯಾವ ಡಿಸ್ಟ್ರಿಕ್ಟುಗಳಲ್ಲಾಗಲಿ, ಯಾ ಇತರ ಪರಾಯಿದೇಶದ ಯಾ ಶೀಮೆಯಲ್ಲಾಗಲೀ, ಬೆಂಗಳೂರು ಸಿವಿಲ್ ಮಿಲಿಟರಿ ಸ್ಟೇಷನ್ನಲ್ಲಾಗಲೀ ಲೈಸೆನ್ಸ್ದಾರನು ಯಾವದೊಂದು ಸಾರಾಯಿ ಗುತ್ತಿಗೆಯಲ್ಲಿ ಪ್ರತ್ಯಕ್ಷವಾದ ಯಾ ಪರೋಕ್ಷವಾದ ಸಂಬಂಧವನ್ನು ಇಟ್ಟುಕೊಂಡಿರಕೂಡದು.

(15) ಕ್ರಮವಾಗಿ ನಂಬರ್ ಹಾಕಲ್ಪಟ್ಟ ಪುಟಗಳುಳ್ಳ ಒಂದು ಇನ್ಸ್‌ಪೆಕ್ಷನ್ ನೋಟ್ ಪುಸ್ತಕವನ್ನು ತನಿಖೆ ಮಾಡತಕ್ಕ ಆಫೀಸರುಗಳ ಷರಾಗಳಿಗೋಸ್ಕರ ಇಟ್ಟುಕೊಳ್ಳತಕ್ಕದ್ದಲ್ಲದೆ ಸದರೀ ಬುಕ್ಕನ್ನು ರೇಂಜ್ ಛಾರ್ಜಿನಲ್ಲಿರುವ ಇನ್ಸ್‌ಪೆಕ್ಟರ್ರೇ ಆಗಲಿ ಯಾ ಅವರಿಂದ ಅಧಿಕಾರ ಪಡೆದಿರುವ ಇನ್ಯಾವ ಆಫೀಸರರೇ ಆಗಲಿ ರಸೀತಿಕೊಟ್ಟಲ್ಲಿ ಅವರಿಗೆ ಕೊಡತಕ್ಕದ್ದು.

(16) ಎಕ್ಸೈಜ್ ರೆಗ್ಯುಲೇಷನ್ ಯಾ ಓಪಿಯಂ ಆಕ್ಟಿಗೆ ವಿರೋಧವಾಗಿ ಯಾ ಹಾಲಿ ಜಾರಿಯಲ್ಲಿರುವ ಮತ್ಯಾವ ನಿಬಂಧನೆಗೆ ವಿರೋಧವಾಗಿ ನಡೆದ ಯಾವದಾದರೂ ತಕ್ಸೀರಿಗೆ ಲೈಸೆನ್ಸ್‌ದಾರ್ ಮೇಜಿಸ್ಟ್ರೇಟರ ಮುಂದೆ ದರ್ಯಾಫ್ತುಯಾಗಿ

ತಪ್ಪು ಸಾಬೀತಾಗಿ ಡೆಪ್ಯುಟಿ ಕಮಿಷನರವರಿಗೆ ಆತನು ಲೈಸೆನ್ಸ್‌ದಾರನಾಗಿರಲು ನಾಲಾಯಖುಎಂದು ಕಂಡು ಬಂದಲ್ಲಿ ಆತನನ್ನು ನಷ್ಟಕ್ಕೆ ಗುರಿಮಾಡಿ ಆತನ ಲೈಸೆನ್ಸ್ ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಟ್ಟಂತೆ ಹುಕುಂ ಮಾಡುವುದಕ್ಕೆ ಯಾ ಹಕ್ಕನ್ನು ಮಾರುವುದಕ್ಕೂ ಯಾ ಅನ್ಯಥಾ ವಿಲೇವಾರಿ ಮಾಡುವುದಕ್ಕೂ ಡೆಪ್ಯುಟಿ ಕಮಿಷನರವರಿಗೆ ನ್ಯಾಯವಾಗಿರತಕ್ಕದ್ದು.

(17) ಲೈಸೆನ್ಸ್‌ದಾರ್ರಿಂದ ಬರಬೇಕಾದ ಮೊಬಲಗುಗಳೆಲ್ಲಾ ಠೇವಣಿ ಮೊಬಲಗಿನಲ್ಲಿ ವಜಾ ಮಾಡಲ್ಪಡಬಹುದು. ಅಥವಾ ಜಮೀನ್ ಕಂದಾಯದ ಬಾಕಿಗಳನ್ನು ವಸೂಲ್ಮಾಡಲು ಹಾಲಿ ಜಾರೀಲಿರತಕ್ಕ ಕಾನೂನ್‌ಪ್ರಕಾರ ಯಾ ಆತನ ಜಾಮೀನ್‌ದಾರ್ರ ಆಸ್ತಿಯನ್ನು ಜಫ್ತಿ ಹರಾಜ್ ಮಾಡುವದರ ಮೂಲಕ ವಸೂಲ್ಮಾಡಲ್ಪಡಬಹುದು.

(18) ಲೈಸೆನ್ಸ್‌ದಾರ ಯಾ ಬಿಕರೀದಾರ ಯಾ ಬಿಕರೀದಾರರು ಯಾವ ತರಹಾದ ಸಾರಾಯಿಯನ್ನಾದರೂ ಲೈಸೆನ್ಸ್‌ಪಡದ ಯಾವ ಅಂಗಡಿ ಯಾ ಆವರಣದಿಂದ ಹೊರಗೆ ನ್ಯಾಯವಾದ ಪರ್ಮಿಟ್‌ಯಿಲ್ಲದೆ ತೆಗದುಕೊಂಡು ಹೋಗುವದಕ್ಕೆ ಯಾರೊಬ್ಬರಿಗೂ ಒಂದು ರೆಪ್ಯುಟೆಡ್ ಕ್ವಾರ್ಟ್‌ಬೀಸೆಗಿಂತ ಹೆಚ್ಚಾಗಿ ಕೊಡಲೂಕೂಡದು, ಮಾರಲೂಕೂಡದು.

(19) ಅಂಗಡಿಕಾರರು ಯಾವ ಯೂರೋಪಿಯನ್ ನಾನ್‌ಕಮಿಷನ್ಡ್ ಆಫಿಸರ್, ಪ್ರೈವೇಟ್ ಅಥವಾ ಸೋಲ್ಜರಿಗಾದರೂ ಅಥವಾ ಸೈನ್ಯಗಳ ಮೊಕ್ಕಾಂಗಳೊಡನೆ ಹೋಗುವ ಯಾವ ಯೂರೋಪಿಯನ್ ಯಾ ಯೂರೇಷಿಯನ್‌ಗಾದರೂ ಅಥವಾ ಮೇಲೆ ಹೇಳಲ್ಪಟ್ಟ ಜನಗಳ ಸಂಸಾರಗಳ ಪೈಕಿ ಯಾರೊಬ್ಬರಿಗಾದರೂ ಕಮ್ಯಾಂಡಿಂಗ್ ಆಫೀಸರವರ ಅಥವಾ ಈ ವಿಷಯದಲ್ಲಿ ಅವರಿಂದ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯ ಲಿಖಿತಮೂಲಕವಾದ ಅಪ್ಪಣೆಯಿಲ್ಲದೆ ಯಾವ ಸಾರಾಯಿಯನ್ನೂ ಮಾರಲೂ ಕೂಡದು, ಕೊಡಲೂಕೂಡದು. ಮತ್ತು ಅವರು ಯಾವ ಯೂರೋಪಿಯನ್ ಯಾ ಯೂರೇಷಿಯನ್ ನಾವಿಕನಿಗೂ ಮತ್ತು ಉದ್ಯೋಗದಮೇಲಿರುವ ಕಾಲದಲ್ಲಿ ಯಾವ ಶಿಪಾಯಿಗೂ ಪೋಲಿಸ ಅಥವಾ ಯಕ್ಸೈಜ್ ನೌಕರನಿಗೂ ರೈಲ್ವೆ ಕಂಪೆನಿಯ ನೌಕರನಿಗೂ ಮತ್ತು ಪೋಲಿಸ್ ಮೊಹಸಲೆಯಲ್ಲಿರುವ ಯಾವ ಯೂರೋಪಿಯನ್ ಪೋಲೀ ಮನುಷ್ಯನಿಗೂ ಅಥವಾ ಯಾವ ಹುಚ್ಚು ಮನುಷ್ಯನಿಗೂ ಹನ್ನೆರಡು ವರ್ಷಗಳ ವಯಸ್ಸಿನೊಳಗಾಗಿ ಇರುವ ಯಾವ ಮಗುವಿಗೂ ಅಂಗಡಿಯ ಆವರಣದಲ್ಲಿ ಉಪಯೋಗಿಸಲಿಕ್ಕೆ ಸಾರಾಯಿಯನ್ನು ಮಾರಕೂಡದು ಯಾ ಕೊಡಕೂಡದು ; ಶಿವಾಯಿ ಸಾರಾಯಿಯನ್ನು ಸಾಲವಾಗಿ ಮಾರಕೂಡದು ಅಥವಾ ಸಾಲವಾಗಿ ಮಾರಕೂಡದು.

(20) ಲೈಸೆನ್ಸ್‌ದಾರ ಯಾ ಬಿಕರೀದಾರ ಅಥವಾ ಬಿಕರೀದಾರರು ಸಾರಾಯಿಯ ಖರೀದಿ ಹಣಕ್ಕೆ ಯಾವ ವಿಧವಾದ ಪದಾರ್ಥವನ್ನು ಬದಲಿಯಾಗಿಯಾದರೂ ಅಡಮಾನವಾಗಿ ಆದರೂ ತೆಗೆದುಕೊಳ್ಳಕೂಡದು. ಸಾರಾಯಿಗೆ ನಗದು ಹಣವೇ ತೆಗೆದುಕೊಳ್ಳತಕ್ಕದ್ದು. ಮತ್ತು ನಗದು ಹಣವಲ್ಲದೆ ಇನ್ಯಾವ ಪದಾರ್ಥವನ್ನಾದರೂ ಖರೀದಿ ಬದಲಾಗಿ ಬಂದಲ್ಲಿ ಸಮೀಪದಲ್ಲಿ ಇರುವ ಮೇಜಿಸ್ಟ್ರೇಟರಿಗೇ ಆಗಲಿ ಅಥವಾ ಪೋಲಿಸ್ ಆಫೀಸರಿಗೇ ಆಗಲಿ ವರ್ತಮಾನ ಕೊಡತಕ್ಕದ್ದು. ಅವರು ಎಕ್ಸೈಜ್ ಉದ್ಯೋಗಸ್ಥರಲ್ಲಿ ಹಣಸಂಬಂಧವಾದ ಲೇವಾದೇವಿಯನ್ನು ಇಟ್ಟುಕೊಳ್ಳಕೂಡದು.

(21) ಅಂಗಡಿಯಲ್ಲಿ ಮಾರಾಟಕ್ಕಾಗಿ ಇಡಲ್ಪಡುವ ಮತ್ತು ಮಾರಲ್ಪಡುವ ಸಾರಾಯಿಯು ಬೆರಸದೆ ಮತ್ತು ನೀರುಹಾಕದೆ ಇಟ್ಟಿರತಕ್ಕದ್ದು ; ಮತ್ತು ಕೋಠಿಯಿಂದ ರವಾನಿಸಲ್ಪಟ್ಟ ತರಹದಲ್ಲಿಯೂ ಮತ್ತು ಜೋರಿನಲ್ಲಿಯೂ ಇರಬೇಕು. ಅದರ ಮತ್ತನ್ನುಂಟುಮಾಡತಕ್ಕ ಶಕ್ತಿಯನ್ನು ವೃದ್ಧಿಮಾಡುವುದಕ್ಕಾಗಲೀ ಅಥವಾ ಇನ್ಯಾವ ಕಾರಣಕ್ಕಾಗಲೀ ದೇಹಕ್ಕೆ ವಿರುದ್ಧವಾದ ಯಾವ ವಸ್ತುಗಳನ್ನೂ ಅದರಲ್ಲಿ ಬೆರಸಕೂಡದು. ಅಂಗಡಿಗಳನ್ನೂ ಕೋಠಿಗಳನ್ನೂ ತನಿಖೆ ಮಾಡುವುದಕ್ಕೆ ಅಧಿಕಾರವುಳ್ಳ ಎಲ್ಲಾ ಆಫಿಸರರು ಕುಡಿಯುವದಕ್ಕಾಗಲೀ ಉಪಯೋಗಿಸುವದಕ್ಕಾಗಲೀ ನಾಲಾಯಖಾಗಿರತಕ್ಕ ಮದ್ಯವನ್ನು ನಿಲ್ಲಿಸುವದಕ್ಕೆ ಡೆಪ್ಯುಟಿ ಕಮಿಷನರುಗಳು ಎಕ್ಸೈಜ್ ಕಮಿಷನರವರು, ಡೆಪ್ಯುಟಿ ಎಕ್ಸೈಜ್ ಕಮಿಷನರವರು ಎಕ್ಸೈಜ್ ಅಸಿಸ್ಟೆಂಟ್ ಕಮಿಷನರುಗಳು ಅಂಥಾ ಮದ್ಯವನ್ನು ನಾಶಪಡಿಸುವದಕ್ಕೂ ಅಧಿಕಾರವುಳ್ಳವರಾಗಿರುತ್ತಾರೆ.

(22) ಷರಾಬ್ ಬಿಕರೀ ಆಗುವ ದುಕಾನಿನಲ್ಲಾಗಲೀ ಯಾ ಲೈಸೆನ್ಸ್‌ದಾರ ಯಾ ಬಿಕರೀದಾರನ ಬಳಿಯಲ್ಲಾಗಲಿ ಯಾ ಅವನ ಸ್ವಾಧೀನದಲ್ಲಾಗಲಿ ಯಾ ಅಂಥಾವನ ದುಕಾನಿನ ನೌಕರರ ಬಳಿಯಲ್ಲಾಗಲೀ, ಅಥವಾ ಅವರ ಸ್ವಾಧೀನದಲ್ಲಾಗಲೀ, ಷರಾಬ್ ವಿನಹ ಇತರ ಯಾವ ಮದ್ಯವಾಗಲಿ ನೀರೇಆಗಲಿ ಯಾ ಇತರ ಪಾನಗಳಾಗಲೀ ಎಷ್ಟುಮಟ್ಟಿಗೂ ಇರತಕ್ಕದ್ದಲ್ಲವು, ಮತ್ತು ಮಾರತಕ್ಕದ್ದಲ್ಲವು.

(23) ಚೋರಿ ಮಾಡುವ ಜನರು, ಕಳ್ಳರು, ಪೋಲಿ ಜನಗಳು, ದೊಂಬಿ ಮಾಡತಕ್ಕವರು, ಹಾದರಗಿತ್ತಿಯರು, ಶಿಪಾಯಿಗಳು ಅಥವಾ ಫೌಜು ಬಿಟ್ಟವರೆಂದು ತಿಳಿದುಬಂದ ಅಥವಾ ನಂಬಲ್ಪಡಬಹುದಾದ ಇತರ ಮನುಷ್ಯರು, ಇವರುಗಳಿಗೆ ಅಂಗಡಿಯಲ್ಲಿ ಸ್ಥಳ ಕೊಡಕೂಡದು. ಅದರಲ್ಲಿ ಜೂಜು ಮುಂತಾದ ದುರ್ನಡತೆಗಳನ್ನು ಅಡ್ಡೀ ಮಾಡತಕ್ಕದ್ದು. ಗುಮಾನಿ ಜನಗಳು ಅಲ್ಲಿಗೆ ಬರುವ ವರ್ತಮಾನವನ್ನು ಮೇಜಿಸ್ಟ್ರೇಟರಿಗೆ ಅಥವಾ ಪೋಲಿಸ್ ಆಫಿಸರರಿಗೆ ಕೊಡತಕ್ಕದ್ದು. ಯಾವ ಅಂಗಡಿಯಲ್ಲಿಯೂ ರಾತ್ರಿ ಹೊತ್ತಿನಲ್ಲಿ ಯಾರಿಗೂ ಸ್ಥಳ ಕೊಡಕೂಡದು.

(24) ಲೈಸೆನ್ಸುದಾರನು ತನ್ನ ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ಒಂದು ಹಲಿಗೆಮೇಲೆ ತನ್ನ ಹೆಸರು, ತನ್ನ ಅಂಗಡಿಯ ನಂಬರ್, ತಾನು ಯಾವ ಪದಾರ್ಥಗಳ ವ್ಯಾಪಾರ ಮಾಡುವುದಕ್ಕೆ ಲೈಸೆನ್ಸ್ ಪಡೆದಿರುತ್ತಾನೋ ಆ ಪದಾರ್ಥಗಳ ಹೆಸರು ಇವುಗಳನ್ನು ದೇಶಭಾಷೆಯಲ್ಲಿ ಸ್ಪಷ್ಟವಾಗಿ ಛಾಪಿಸಿ ತಗಲಹಾಕತಕ್ಕದ್ದು. ಅಂಗಡಿಯ ಒಳಭಾಗದಲ್ಲಿ ಎಲ್ಲರಿಗೂ ಕಾಣುವಂತೆ ಲೈಸೆನ್ಸನ್ನು ತಗಲಹಾಗತಕ್ಕದ್ದು.

(25) ಪ್ರತಿದಿವಸವೂ ಜಮಾ ಖರ್ಚು ಆಗುವ ಮದ್ಯದ ಸಾಬಾ ಲೆಖ್ಖಗಳನ್ನು ವಿಧಾಯಕವಾಗಿರುವ ನಮೂನೆಯಲ್ಲಿ ಶಾಯಿಯಿಂದ ಬರೆದು ಇಡಬೇಕು. ಈ ಲೆಖ್ಖಗಳು ಪರ್ಮಿಟ್ಟುಗಳು ಅಚ್ಚಾಗಿರುವ ಪುಸ್ತಕಗಳ ರೀತಿಯಲ್ಲಿರಬೇಕು. ಇವುಗಳ ಅಸಲು ಖರೀದಿಯನ್ನು ಕೊಟ್ಟಲ್ಲಿ ಸ್ಥಳದ ಎಕ್ಸೈಜ್ ನೌಕರರಿಂದ ಸದರೀ ಪುಸ್ತಗಳನ್ನು ಪಡೆಯಬಹುದು. ಕೊಂಡುಕೊಳ್ಳಲ್ಪಡುವ ಸಾರಾಯಿಗೆ ಪರ್ಮಿಟುಗಳನ್ನೂ ಮತ್ತು ಖರ್ಚಾದಕ್ಕೆ ಕೌಂಟರ್ ಫಾಯಿಲ್ ಪರ್ಮಿಟುಗಳನ್ನೂ ಹುಷಾರಿನಿಂದ ಫೈಲು ಮಾಡತಕ್ಕದ್ದು. ಮುಂದಿನ ಖರ್ಚಿಗಾಗಿ ಖಾಲಿ ಪರ್ಮಿಟುಗಳನ್ನು ಸೈನ್ ಮಾಡುವದನ್ನು ನಿಷೇಧಿಸಿದೆ. ಸದರೀ ಲೆಖ್ಖಗಳು ಪರ್ಮಿಟುಗಳ ಕೌಂಟರ್ ಫಾಯಿಲ್‌ಗಳು ಭದ್ರವಾಗಿ ಇಡಲ್ಪಟ್ಟು ಇಜಾರೆ ಮುಗದ ತಕ್ಷಣ ಸ್ಥಳದ ಎಕ್ಸೈಜ್ ಆಫಿಸರವರಲ್ಲಿ ಕೊಡಲ್ಪಡತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು ಯಾ ಡೆಪ್ಯುಟಿ ಕಮ್ಮಿಷನರವರು ಮೊಕರರ್ಮಾಡುವ ಇತರ ಆಫಿಸರುಗಳೇ ಆಗಲಿ, ಅಸಿಸ್ಟೆಂಟ್ ಇನ್‌ಸ್ಪೆಕ್ಟರಿಗಿಂತಲೂ ಹುದ್ದೆಯಲ್ಲಿ ಕಮ್ಮಿಯಾಗಿರದ ಎಕ್ಸೈಜ್ ಆಫಿಸರುಗಳೇ ಆಗಲಿ ಕೇಳಿದ್ದಲ್ಲಿ ಸದರೀ ಲೆಖ್ಖಗಳನ್ನು ಹಾಜರ್ಪಡಿಸಬೇಕು. ಡೆಪ್ಯುಟಿ ಕಮ್ಮಿಷನರವರು ಅಥವಾ ಅಸಿಸ್ಟೆಂಟ್ ಇನ್‌ಸ್ಪೆಕ್ಟರಿಗಿಂತಲೂ ಹುದ್ದೆಯಲ್ಲಿ ಕಮ್ಮಿಯಾಗಿಲ್ಲದ ಎಕ್ಸೈಜ್ ಆಫಿಸರರು ಆಗ್ಗಿಂದಾಗ್ಗೆ ಅಪೇಕ್ಷಿಸುವಂಥಾ ಯಾವ ಲೆಖ್ಖಗಳನ್ನಾಗಲೀ ವರ್ತಮಾನಗಳನ್ನಾಗಲೀ ಕೊಡಲಿಕ್ಕೆ ಲೈಸೆನ್ಸುದಾರನು ಬದ್ಧನಾಗಿರತಕ್ಕದ್ದು.

(26) ಈ ಕೆಳಗೆ ನಮೂದಿಸಿರುವದರಗಳಿಗೆ ಯಾ ಎಕ್ಸೈಜ್ ಡಿವಿಜನಲ್ ಆಫಿಸರರು ಸ್ಥಳದ ಸರಬರಾಯಿಗೆ ಅವಶ್ಯಕವಾಗಿರುವದೆಂದು ಅಭಿಪ್ರಾಯಪಡುವ ಮೊತ್ತಕ್ಕೆ ಕಮ್ಮಿಯಿಲ್ಲದಂತೆ ಯಾವಾಗಲೂ ಸರಕು ಹಾಜರು ಇರಬೇಕು.

	ಅರಕ್ ಸಾರಾಯಿ	ಷರಾ
1. ಎಲ್ಲಾ ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರಗಳಲ್ಲು	2 ಗ್ಯಾಲನ್‌ಗಳು	
2. ಎಲ್ಲಾ ತಾಲ್ಲೂಕು ಮತ್ತು ಕೋತಿ ಕಸಬಾದಲ್ಲು ...	1 ಗ್ಯಾಲನ್	
3. ಕೋಠಿಗೆ 5 ಮೈಲಿ ಫಾಸಲೆ ಒಳಗೆ ಇರತಕ್ಕ ಎಲ್ಲಾ ಗ್ರಾಮಗಳ ಅಂಗಡಿಗಳಲ್ಲೂ	½ ಗ್ಯಾಲನ್	
4. ಕೋಠಿಗೆ 5 ಮೈಲಿಗೆ ಜಾಸ್ತಿ ಇರತಕ್ಕ ಎಲ್ಲಾ ಗ್ರಾಮಗಳ ಅಂಗಡಿಗಳಲ್ಲೂ	ಕೋಠಿಗೆ ಪ್ರತಿ 10 ಮೈಲಿ ಫಾಸಲೆಗೂ 1 ದಿವಸದ ಬಿಕರಿಗೆ ಆಗುವಷ್ಟು ವ 5 ಮೈಲಿಗಳೊಳಗಾಗಿರುವ ಅಂಗಡಿಗಳಿಗೆ ಗೊತ್ತಾಗಿರುವ ಸರಕಿಗಿಂತಲೂ ಕಮ್ಮಿ ಇಲ್ಲದಂತೆಯೂ ಇರಬೇಕು.	

ಡೆಪ್ಯುಟಿ ಕಮ್ಮಿಷನರ್ ಸಾಹೆಬರವರು ಅಂಗಡಿಯನ್ನು ಹಂಗಾಮಿಯಾಗಿ ಆಗಲೀ ಅಥವಾ ಖಾಯಂ ಆಗಿ ಆಗಲೀ ಮುಚ್ಚುವುದಕ್ಕೆ ಹುಕುಂ ಕೊಟ್ಟಹೊರ್ತು ನಿಬಂಧಿಸಿರುವ ಕಾಲಗಳಲ್ಲಿ ಅಂಗಡಿಯನ್ನು ತೆಗದಿರಬೇಕು.

(27) ಅಂಗಡಿಯನ್ನು ರಾತ್ರಿ 9 ಘಂಟೆಗೆ ಮುಚ್ಚಬೇಕು. ಹಬ್ಬ, ಜಾತ್ರೆ ಮುಂತಾದ ಕಾಲಗಳಲ್ಲಿ ವಿಶೇಷವಾದ ಅಪ್ಪಣೆ ಹೊರ್ತು ಸೂರ್ಯೋದಯಕ್ಕೆ ಮುಂಚಿತವಾಗಿ ಅಂಗಡಿ ಬಾಗಿಲನ್ನ ತೆಗೆಯಕೂಡದು. ಯೂರೋಪಿಯನ್ ಯಾ ನೇಟಿವ್ ಸೈನ್ಯದ ರಿಜಿಮೆಂಟ್ ಯಾ ಸಮೂಹವು ಪ್ರಯಾಣಮಾಡುತ್ತಿರುವಾಗ ಯಾ ಸಮೀಪದಲ್ಲಿ ಮೊಕ್ಕಾಂ ಮಾಡಿರುವಾಗ ಅವರ ಪ್ರಯಾಣದ ಮಾರ್ಗದಲ್ಲಿ ಯಾ ಆ ಮಾರ್ಗದ ಸಮೀಪದಲ್ಲಿರುವ ಎಲ್ಲಾ ಸಾರಾಯಿ ಬಿಕರಿ ಅಂಗಡಿಗಳನ್ನು ಮುಚ್ಚುವಂತೆ ಡೆಪ್ಯುಟಿ ಕಮ್ಮಿಷನರವರು ಯಾ ತಾಲ್ಲೂಕು ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರವರು ಅಪ್ಪಣೆ ಮಾಡಬಹುದು. ಸರ್ಕಾರದವರು ತಕ್ಕ ಕಾರಣಗಳಿಂದ 15 ದಿವಸದ ಮುಂಚಿತವಾಗಿಯೇ ನೋಟಿಸ್ ಕೊಟ್ಟು ಲೈಸೆನ್ಸುದಾರರಿಗೆ ನ್ಯಾಯವಾದ ಪರಿಹಾರದ್ರವ್ಯವನ್ನು ಕೊಡಿಸಿ ಗುತ್ತಿಗೆಯನ್ನು ಮೋಖೂಫ್ ಮಾಡುವ ಅಧಿಕಾರವನ್ನು ಉಳಿಸಿಕೊಂಡಿರುತ್ತಾರೆ. ಮತ್ತು ಒಳದೇಶದ ಬೇರು ವಿಷಯದಲ್ಲಿ ಯಾ ಸಾರಾಯಿ ವಿನಹ ಇತರ ವಿಧವಾದ ಯಾವ ಮದ್ಯದ ವಿಷಯದಲ್ಲಿಯೂ ಸರ್ಕಾರದವರು ಯಾವದ್ದಾದರೂ ಏರ್ಪಾಟುಮಾಡಿದ ವಿಷಯದಲ್ಲಿ ಲೈಸೆನ್ಸುದಾರನಿಗೆ ಪರಿಹಾರದ್ರವ್ಯಕೆ ಯಾ ರಿಮಿಷನ್ ಯಾನೆ ಸೋಡಿಗೆ ಹಕ್ಕು ಇರಲಾರದು.

(28) ಬಿಕರಿಯುಪ್ರಶಸ್ತವಾಗಿರುವ ಕಟ್ಟಡದಲ್ಲಿ ಮಾಡಲ್ಪಡತಕ್ಕದ್ದು. ಸದರೀ ಕಟ್ಟಡಕ್ಕೆ ಒಂದೇ ಬಾಗಲು ಇರತಕ್ಕದ್ದು. ಹಿಂಭಾಗದಲ್ಲಾದರೂ ಪಕ್ಕಗಳಲ್ಲಾದರೂ ಕಿಟಕಿಯಾಗಲಿ ಇರಕೂಡದು. ಷರಾಬನ್ನು ಮಾರುವ ಜಗಲಿಯು ಅಂಗಡಿ ಒಳಗೆ ಇರುವ ಜನಗಳು, ಅಂಗಡಿಮುಂದೆ ಬೀದಿಲಿ ತಿರಗಾಡುವ ಜನರಿಗೆ ಕಾಣುವಹಾಗೆ ಬಾಗಲಿಗೆ ಎದುರಾಗಿ ಇರತಕ್ಕದ್ದು. ಮತ್ತು ಇದರಲ್ಲಿ ಎರಡನೇ ಕೋಣೆಯು ಗಿರಾಕಿಗಳಿಗಾಗಿ ತೆಗದು ಇರಕೂಡದು.

(29) ಸಮೀಪದಲ್ಲಿ ಕ್ರಮವಾಗಿ ಲೈಸೆನ್ಸ ಪಡದ ಅಂಗಡಿಗಳಿಲ್ಲದೇ ಇರುವ ಪ್ರದೇಶಗಳಲ್ಲಿ ನಡೆಯುವ ಹಬ್ಬ, ಜಾತ್ರೆ ಮುಂತಾದ ಕಾಲಗಳಲ್ಲಿ ಮದ್ಯವನ್ನು ಬಿಕರೀ ಮಾಡಲು ಅಗಾಗ್ಯೆ ಕೊಡಬೇಕಾದ ಲೈಸೆನ್ಸುಗಳನ್ನು ಕೊಡತಕ್ಕ ಅಧಿಕಾರವು ಡೆಪ್ಯುಟಿ ಕಮ್ಮಿಷನರವರಿಗೆ ಉಳಿಸಿಕೊಂಡಿರುತ್ತದೆ. ಅಂಥಾ ಲೈಸೆನ್ಸುಗಳು ಮಾಮೂಲಾಗಿ ಸದರೀ ಪ್ರದೇಶದಲ್ಲೆಲ್ಲಾ ಸರಬರಾಯಿ ಮಾಡುವ ದುಕಾನದಾರರಿಗೆ ಕೊಡಲ್ಪಡತಕ್ಕದ್ದು. ಸದರೀ ಲೈಸೆನ್ಸುಗಳ ಅವಧಿಯು 15 ದಿವಸಗಳಿಗಿಂತಲೂ ಹೆಚ್ಚಾಗಿರಕೂಡದು. ಮತ್ತು ಅದಕ್ಕಾಗಿ ಪಾವತಿಯಾಗತಕ್ಕ ಮೊಬಲಗು ಡೆಪ್ಯುಟಿ ಕಮ್ಮಿಷನರಿಗೆ ಯುಕ್ತವಾಗಿ ತೋರಿದಂತೆ ಗೊತ್ತುಮಾಡಲ್ಪಡಬಹುದು. ಡೆಪ್ಯುಟಿ ಕಮ್ಮಿಷನರವರು ಅದನ್ನು ಹರಾಜುಮೂಲಕವಾಗಿಯೂ ವಿಲೇವಾರಿ ಮಾಡುವಂತೆ ಶೀರ್ಮಾನಿಸಬಹುದು.

(30) ಲೈಸೆನ್ಸ್ದಾರನು ಸಾರಾಯಿಯನ್ನು ಒಯ್ಯುವುದಕ್ಕೆ ಯಾ ಬಿಕರೀ ಮಾಡುವುದಕ್ಕೆ ಅವರಿಂದ ನೌಕರರ್ಮಾಡಲ್ಪಟ್ಟ ಯಾವ ಮನುಷ್ಯನಾದರೂ ಎಕ್ಸೈಜ್ ಕಾನೂನಿಗೆ ಅಥವಾ ಆತನು ಬರದುಕೊಟ್ಟ ಕರಾರುಗಳಿಗೆ ವಿರೋಧವಾಗಿ ನಡೆದ ಸಂಗತಿಯು ಅವರ ತಿಳುವಳಿಕೆಗೆ ಬಂದಲ್ಲಿ ಆ ಸಂಗತಿಯನ್ನು ಡೆಪ್ಯುಟಿ ಕಮ್ಮಿಷನರವರಿಗೆ ಇತ್ತಿಲೆ ಮಾಡಿ, ಅಂಥಾ ಮನುಷ್ಯನನ್ನು ಕೆಲಸದಲ್ಲಿಡುವ ವಿಷಯದಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಕೊಡಲ್ಪಡುವ ಹುಕುಮನ್ನು ಜಾರೀಲಿ ತರತಕ್ಕದ್ದು ಅವರ ಕರ್ತವ್ಯವಾಗಿರುತ್ತದೆ.

(31) ಡೆಪ್ಯುಟಿ ಕಮ್ಮಿಷನರವರ ಅಪ್ಪಣೆ ಪಡೆದ ಶಿವಾಯಿ ಇಂಡಿಯನ್ ಪೀನಲ್‌ಕೋಡ್ ರೀತ್ಯಾ ಯಾವದಾದರೂ ಕ್ರೂರವಾದ ತಪ್ಪಿತಕ್ಕೆ ಶಿಕ್ಷಿಸಲ್ಪಟ್ಟಿರುವ ಯಾವ ಮನುಷ್ಯನನ್ನಾದರೂ ಮದ್ಯವನ್ನು ಒಯ್ಯುದಕ್ಕಾಗಲೀ ಬಿಕರಿ ಮಾಡುವುದಕ್ಕಾಗಲೀ ನೇಮಿಸಿಕೊಳ್ಳಕೂಡದು.

(32) ಕುಷ್ಠರೋಗದಿಂದಾಗಲೀ ಅಥವಾ ಇತರ ಅಂಟುರೋಗದಿಂದಾಗಲೀ ಪೀಡಿತರಾದ ಜನಗಳಿಂದ ಸಾರಾಯಿಯನ್ನು ಒಯ್ಯುವದಕ್ಕಾಗಲೀ ಅಥವಾ ಮಾರುವುದಕ್ಕಾಗಲೀ, ಮತ್ತು ಅಂಗಡಿಯಲ್ಲಿ ಅಂಥಾ ಜನಗಳನ್ನು ನೌಕರವಾ ನೇರಾಗಿ ಇಟ್ಟುಕೊಳ್ಳುವದಕ್ಕಾಗಲೀ ಅಡ್ಡೀ ಪಡಿಸಲ್ಪಟ್ಟಿರುತ್ತದೆ.

(33) ಬ್ರಿಟಿಷ್ ರಾಜ್ಯದ ದ್ವಾರಾ ಒಯ್ಯಲ್ಪಟ್ಟು ಅಂಗಡಿಗಳಿಗೆ ಒರತಕ್ಕ ಸಾರಾಯಿಯ ಮೊಹರನ್ನು ಸರ್ಕಾರದಿಂದ ನೇಮಿಸಲ್ಪಟ್ಟಿರುವ ನೌಕರ ಮೂನೇರಿಂದ ಸರಕು ಮೊಕಾಬಿಲೆ ಮಾಡಲ್ಪಡುವವರೆಗೂ ಹೊಡೆಯಕೂಡದು.

11. ಲೈಸೆನ್ಸ್ದಾರನು ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಅತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಗಳನ್ನು ತೆಗೆಯುವದರಲ್ಲಿಯೂ ತನ್ನ ಅಂಗಡಿ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಿಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ ಯಾ ಉದಾಶೀನಕ್ಕೆ 50 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣಿ ಮೊಬಲಗನ್ನು ದಂಡವಾಗಿ ಸರ್ಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೇಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನು ರದ್ದುಮಾಡಿ ಸದರೀ ಲೈಸೆನ್ಸ್ದಾರನ ಜವಾಬ್ದಾರೀಮೇಲೆ ಆತನನ್ನು ನಷ್ಟಕ್ಕೆ ಗುರಿಮಾಡಿ ಮೇಲ್ಕಂಡ ಅಂಗಡಿಯನ್ನು ಪುನಹಾ ಹರಾಜು ಮಾಡಲಿಕ್ಕೂ ಅಥವ ಇತರ ವಿಧವಾಗಿ ವಿಲೇ ಮಾಡಲಿಕ್ಕೂ ಯಾ ಅಂಥಾ ಅಂಗಡಿಯನ್ನು ಸರ್ಕಾರದ ಆಡಳಿತದಲ್ಲಿಡಲಿಕ್ಕೂ ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರ್ರಾಗಿರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 1904ನೇ ಇಸವಿ ಜುಲೈ ಗ.ರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣಾದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟದ ದೇಖೀಲ್ ಸದರೀ ಲೈಸೆನ್ಸ್ದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಅಂಗಡಿಯು ರದ್ದುಮಾಡಲ್ಪಟ್ಟರೆ ಪೂರಾಕಾಲದ ಗುತ್ತಿಗೇಹಣವು ಕೂಡ್ಲೆ ಪಾವತಿ ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು. ಮತ್ತು ಅಂಥಾ ದಂಡದ ವ ನಷ್ಟದ ಮೊಬಲಗುಗಳು ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು.

12. ಮೇಲಿನ ಹಿಂದಿನ ಕಲಂನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ್ ಯಾ ಇತರ ಕಾನೂನ್‌ಗಳಿಗೆ ವಿರೋಧವಾಗಿ ನಡಿಸಿದ ತಕ್ಸೀರಿಗೆ ಲೈಸೆನ್ಸ್ದಾರನನ್ನಾಗಲಿ ಯಾ ಆತನ ಮುತಾಲೀಕನನ್ನಾಗಲಿ ಯಾ ಆತನ ನೌಕರರನ್ನಾಗಲಿ ಆಪಾದಿಸಿ ದರ್ಯಾಫ್ತು ಕ್ರಮನಡಿಸಲು ಆತಂಕ ಪಡಿಸುವದಿಲ್ಲ.

ಟಿಪ್ಪಣಿ.—ಬಾರಿಬಾರಿಗು ಲೈಸೆನ್ಸಿನ ಷರತ್ತುಗಳಿಗೆ ವಿರೋಧವಾಗಿ ನಡೆಸುವ ತಪ್ಪಿತಗಳಿಗು ಬಾರಿಬಾರಿಗೂ ಜುರ್ಮಾನೆ ಹಾಕಲ್ಪಡತಕ್ಕದ್ದು.

ಸನ್ 1904–1905 ನೇ ಸಾಲಿಗೆ ಶೇಂದಿ ಅಂಗಡಿಗಳ ಹರಾಜು.

ನಂಬರ್ 641—Ex. F. 6—1902, ಬೆಂಗಳೂರು 29ನೇ ಮಾರ್ಚಿ 1904.

1. ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಪ್ರತಿ ಅಂಗಡಿಯಲ್ಲಿ ಯಾ ಅಂಗಡಿಗಳ ಸಮುದಾಯದಲ್ಲಿ 1904ನೇ ಇಸವಿ ಜುಲೈ ಗುರ್ರೆಲಾಗಾಯಿತು 1905ನೆ ಇಸವಿ ಜೂನ್ 30ನೇ ತಾರೀಖಿನ ಪೂರೈಸುವ ಸರ್ಕಾರಿ ಸಾಲಿಗೆ ಶೇಂದಿಯನ್ನು ಬಿಕರಿ ಮಾಡುವ ಬಟ್ಟು ಸ್ವಾತಂತ್ರ್ಯದ ಹಕ್ಕು ಆಯಾ ಡೆಪ್ಯುಟಿ ಕಮಿಷನರುಗಳಿಂದ ಯಾ ರೆವಿನ್ಯೂ ಅಸಿಸ್ಟೆಂಟ್ ಕಮಿಷನರುಗಳಿಂದ ಯಾ ಎಕ್ಸೈಜ್ ಇಲಾಖೆಯ ಡಿವಿಜನ್ ಆಫೀಸರರುಗಳಿಂದ ಯಾ ಇದಕ್ಕಾಗಿ ಡೆಪ್ಯುಟಿ ಕಮಿಷನರುಗಳಿಂದ ವಿಶೇಷವಾಗಿ ಅಧಿಕಾರಹೊಂದಿದ ಇತರ ಆಫೀಸರರುಗಳಿಂದ ಆಯಾಯ ತಾಲ್ಲೂಕು ಯಾ ಸಬ್ ತಾಲ್ಲೂಕು ಕಸಬಾಗಳಲ್ಲಿ ಇತಃಪರ ಹೇಳಿದಪ್ರಕಾರ ಹೊರತಾಗಿ ಮೇಲ್ಕಂಡ ಪಟ್ಟಿಯಲ್ಲಿ ನಮೂದಾಗಿರುವ ತಾರೀಖುಗಳಲ್ಲಿ ಸರ್ಕಾರದ ಸವಾಲನ್ನು ಗೊತ್ತುಮಾಡಿಕೊಂಡು ಹರಾಜ್ ಹಾಕಲ್ಪಡುತ್ತದೆಂದುನ್ನು, ಮತ್ತು ಸದರೀ ಸವಾಲಿನಮೇಲೆ ಅತ್ಯಂತ ಜಾಸ್ತಿ ಗುತ್ತಿಗೆ ಮೊಬಲಗನ್ನು ದರಖಾಸ್ತು ಮಾಡುವ ಸವಾಲ್‌ದಾರನಿಗೆ ಅದು ಕೊಡಲ್ಪಡುವದೆಂದುನ್ನೂ, ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದಿಂದ ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ. ಹರಾಜುಗಳು ಸದರೀ ತಾರೀಖುಗಳಲ್ಲಿ ಪೂರೈಸದೆ ಹೋದಲ್ಲಿ ಮಾರನೇದಿನಗಳಲ್ಲಿ ಯೂ ಹಾಕಲ್ಪಡುವವು (ರಜಾದಿನಗಳು ಹೊರತಾಗಿ). ಒಂದೊಂದು ಅಂಗಡಿಗೆ ಪ್ರತ್ಯೇಕವಾಗಿ ಸವಾಲು ಬಾರದೇ ಹೋದಲ್ಲಿ ಹರಾಜು ಹಾಕುವ ಆಫೀಸರರು ಎಕ್ಸೈಜ್ ಡಿವಿಜನ್ ಆಫೀಸರ್ರವರು ಹಾಜರು ಇದ್ದಲ್ಲಿ ಅವರ ಅಭಿಪ್ರಾಯವನ್ನು ತಿಳಿದು ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ನಮೂದಿಸಿರುವ ಅಂಗಡಿಗಳ ಸಮುದಾಯದ ಕ್ರಮವನ್ನು ಅವಶ್ಯಕ ಬಿದ್ದಾಗ ಬದಲಾಯಿಸಲಿಕ್ಕೂ ಅಥವಾ ಸವಾಲಿಲ್ಲದೇ ಇರುವ ಅಂಗಡಿಗಳನ್ನು ಇತಃಪರ ವಿಲೇವಾರಿ ಮಾಡಲು ಅಮಾನತ್ತು ಇಡುವದಕ್ಕೂ, ಅಥವಾ ದರಖಾಸ್ತು ಮೂಲಕ ಯಾ ಖಾಸಗಿ ಏರ್ಪಾಟು ಮೂಲಕ ಯಾವದಾದರೂ ವಿಶೇಷ ಸಂದರ್ಭದಲ್ಲಿ ಸದರೀ ಹಕ್ಕನ್ನು ಮಾರುವದಕ್ಕೂ ಸ್ವಾತಂತ್ರ್ಯವುಳ್ಳವರಾಗಿರುತ್ತಾರೆ. ಯಾವದಾದರು ಕಾಫಿ ಯಸ್ಟೇಟಿನಲ್ಲಿ ಸದರೀ ಹಕ್ಕು ಒಂದೊಂದು ಅಂಗಡಿಗೆ ವರ್ಷಕ್ಕೆ 12 ರೂಪಾಯಿಗೆ ಕಮ್ಮಿಯಿಲ್ಲದಂತೆ ಗೊತ್ತಾದ ಮೊಬಲಗಿಗೆ ಕಾಫಿಪ್ಲಾಂಟರ್ರಿಗೆ ಮಾರಲ್ಪಡಬಹುದು. ಇನಾಂ ಗ್ರಾಮಗಳಲ್ಲಿರತಕ್ಕ ಅಂಗಡಿಗಳು ಪ್ರತ್ಯೇಕವಾಗಿ ಹರಾಜು ಹಾಕಲ್ಪಡತಕ್ಕದ್ದಲ್ಲದೆ ಅವುಗಳ ಬಾಬತು ಹುಟ್ಟುವಳಿ ಮೊಬಲಗು ಲೆಖ್ಖಗಳಲ್ಲಿ ಪ್ರತ್ಯೇಕವಾಗಿ ತೋರಿಸಲ್ಪಡತಕ್ಕದ್ದು. ಹರಾಜು ಪ್ರತಿ ಒಂದು ವಿಷಯದಲ್ಲಿಯೂ ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದಲ್ಲದೆ ಗೌರ್ನಮೆಂಟಿನವರಿಂದ ಬದಲಾಯಿಸಲ್ಪಟ್ಟಹೊರತು ಡೆಪ್ಯುಟಿ ಕಮಿಷನರವರು ಕ್ರಮವಾಗಿ ಮಂಜೂರ್ಮಾಡಿದ ಕೂಡ್ಲೇ ಜಾರೀಗೆ ಬರತಕ್ಕದ್ದು. ಡೆಪ್ಯುಟಿ ಕಮಿಷನರವರು ತಮಗೆ ಯುಕ್ತತೋರಿದಹಾಗೆ ಯಾವ ಕಾರಣವನ್ನೂ ತಿಳಿಸದೆ ಯಾವ ಸವಾಲನ್ನಾದರೂ ಅಂಗೀಕರಿಸುವದಕ್ಕೂ ಯಾ ನಿರಾಕರಿಸುವದಕ್ಕೂ ಸ್ವಾತಂತ್ರ್ಯವುಳ್ಳವರಾಗಿರುತ್ತಾರೆ. ಅಂಥಾ ಕ್ರಮವಾಗಿ ಮಂಜೂರ್ಮಾಡೋಣವು ಹರಾಜು ಡೆಪ್ಯುಟಿ ಕಮಿಷನರವರಿಂದ ಖುದ್ದೇ ಆಗಲಿ ಅಥವಾ ಅವರಿಂದ ನೇಮಿಸಲ್ಪಟ್ಟ ಇನ್ಯಾವ ಇತರ ಆಫೀಸರರಿಂದಲೇ ಆಗಲಿ ನಡಿಸಲ್ಪಟ್ಟಿದ್ದಾಗ್ಯೂ ಅವಶ್ಯಕವಾಗಿರುತ್ತದೆ. ಸರ್ಕಾರೀ ಸವಾಲಿಗಿಂತ ಹೆಚ್ಚಾದ ಸವಾಲ್ ಬಾರದೆಹೋದಲ್ಲಿ ಹರಾಜು ನಡಿಸತಕ್ಕ ಆಫೀಸರರು ತಮಗೆ ಯುಕ್ತತೋರಿದ್ದಲ್ಲಿ ಸದರೀ ಸರ್ಕಾರಿ ಸವಾಲನ್ನು ತಗ್ಗಿಸಬಹುದು. ಲೈಸೆನ್ಸ್‌ದಾರನು ಯಾವದಾದರೂ ತಕ್ಸೀರಿಗಾಗಿ ಕ್ರಿಮಿನಲ್ ಕೋರ್ಟಿನಲ್ಲಿ ದರ್ಯಾಫ್ತಿಯಾಗಿ ತಪ್ಪು ಸಾಬೀತಾಗಿರುವದರಿಂದಲೂ ಅಥವಾ ಲೈಸೆನ್ಸಿನ ಯಾ ಎಕ್ಸೈಜ್ ರೆಗ್ಯುಲೇಷನ್ ಯಾ ಓಪಿಯಂ ಆಕ್ಟಿನ ಗುತ್ತಿಗೆಯ ಷರತ್ತುಗಳಿಗನುಸಾರವಾಗಿ ನಡೆಯದೇಯಿದ್ದ ತಪ್ಪಿತಸ್ಥನಾಗಿರುವ ಕಾರಣದಿಂದ ಲೈಸೆನ್ಸ್ ಹಿಡುವಳಿದಾರನಾಗಿರಲು ಯೋಗ್ಯನಲ್ಲವೆಂಬದರಮೇಲೂ ಯಾ ನಾದಾರಿ ಮನುಷ್ಯನೆಂಬದರಮೇಲೂ ಅಥವಾ ಸರ್ಕಾರದ ಪ್ರಯೋಜನಕ್ಕೆ ಕುಂದಕವಾಗತಕ್ಕ ಏರ್ಪಾಟುಗಳನ್ನು ಅಡ್ಡಿಪಡಿಸತಕ್ಕ ಕಾರಣದಿಂದಲೂ, ಅಥವಾ ಮತ್ಯಾವ ನ್ಯಾಯವಾದ ಕಾರಣಕ್ಕಾಗಿಯೂ, ಆತನ ಸವಾಲನ್ನು ಹರಾಜು ನಡೆಸತಕ್ಕ ಆಫೀಸರರು ತಮಗೆ ಯುಕ್ತ ತೋರಿದಂತೆ ಯಾವ ಕಾರಣವನ್ನು ತಿಳಿಸದೇನೆ ತಿರಸ್ಕರಿಸಬಹುದು.

2. (a) ಸವಾಲ್ಮಾಡಲು ಇಷ್ಟವುಳ್ಳವರು ಖುದ್ದಾಗಿ ಆಗಲೀ ಯಾ ಅಪ್ಪಣೆ ಹೊಂದಲ್ಪಟ್ಟಿರುವ ಮುತಾಲೀಕರ ಮೂಲಕವಾಗಿ ಆಗಲೀ ಹರಾಜಾಗಬೇಕು; ಮತ್ತು ಕೋಲಾರದ ಚಿನ್ನದಗಣಿಗಳ ವ ಬೆಂಗಳೂರು ಮೈಸೂರು ಷಹರುಗಳಲ್ಲಿನ ಅಂಗಡಿಗಳಿಗೆ 25 ರೂಪಾಯಿನಂತೆಯೂ ಇತರ ಸ್ಥಳಗಳಲ್ಲಿನ ಅಂಗಡಿಗಳಿಗೆ 10 ರೂಪಾಯಿನಂತೆಯೂ ಅಥವಾ ಹರಾಜು ನಡೆಸತಕ್ಕ ಆಫೀಸರರು ಗೊತ್ತು ಮಾಡಬಹುದಾದ ಬೇರೆ ನ್ಯಾಯವಾದ ಮೊಬಲಗಿನ ಮೊತ್ತದಷ್ಟು ಠೇವಣಿ ಇಟ್ಟಹೊರ್ತು ಯಾರೊಬ್ಬನು ತನಗಾಗಿ ಯಾಗಲೀ ಯಾ ಇತರರಿಗೋಸ್ಕರವಾಗಲೀ ಸವಾಲ್ಮಾಡಕೂಡದು. ಹಾಗೆ ಪ್ರಾರಂಭದಲ್ಲಿ ಠೇವಣಿ ಮೊಬಲಗು ಅವಶ್ಯಕವಿಲ್ಲವೆಂದು ಸರ್ಕಾರದವರು ಯಾವಾಗಬೇಕಾದರೂ ಬಿಟ್ಟುಬಿಡಬಹುದು. ಅಂಥಾ ಠೇವಣಿಗಳು ಹರಾಜು ತಾರೀಖು ಮುಂಚೆ 3 ದಿವಸಗಳೊಳಗಾಗಿ ಕೊಟ್ಟರು ತೆಗದುಕೊಳ್ಳಲ್ಪಡುವವು; ನಾಮಂಜೂರಾದ ಸವಾಲ್ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡದೇ ಇರುವಪಕ್ಷಕ್ಕೆ ಹರಾಜ್ ಪೂರೈಸಿದ ಕೂಡ್ಲೆ ವಾಪಸ್ ಮಾಡಲ್ಪಡುತ್ತವೆ.

(b) ಯಾವ ಅಂಗಡಿ ಯಾ ಅಂಗಡಿಗಳ ಸಮುದಾಯವೂ ಒಬ್ಬ ಆಸಾಮಿಗಿಂತ ಯಾ ಕ್ರಮವಾಗಿ ಏರ್ಪಟ್ಟಿರುವ ಒಂದು ಕಂಪನಿಯ ಫರಮ್ಮಿಗಿಂತ ಹೆಚ್ಚಾದ ಸಂಖ್ಯೆಯುಳ್ಳವರ ಹೆಸರಿಗೆ ಖಡಸವಾಲಿನಲ್ಲಿ ನಿಲ್ಲಿಸಲ್ಪಡಕೂಡದು. ಹರಾಜುಮಾಡುವ ಅಧಿಕಾರಿಯು ಯಾರ ಹೆಸರಿನಿಂದ ಸವಾಲ್ ಬಂದಿರುವದಿಲ್ಲವೋ ಆತನ ಹೆಸರನ್ನು ಕೂಡುಕೊಂಡವನೆಂದು ದಾಖಲ್ಮಾಡಲು ತಿರಸ್ಕರಿಸತಕ್ಕದ್ದು.

3. (a) ಬಿಟ್ಟು ಸ್ವಾತಂತ್ರ್ಯದ ಹಕ್ಕನ್ನು ಹರಾಜಿನಲ್ಲಿ ಪಡೆದ ಸವಾಲ್ದಾರನು ಸದರೀ ಸ್ವಾತಂತ್ರ್ಯದ ಹಕ್ಕು ತನ್ನ ಹೆಸರಿಗೆ ನಿಂತ ನಂತರ ಹರಾಜು ನಡಿಸತಕ್ಕ ಆಫೀಸರರು ಕೇಳಿದ್ದಲ್ಲಿ ತಕ್ಷಣವೇ ಇಲ್ಲದಿದ್ದರೆ ಆ ದಿವಸದ ಹರಾಜು ಖೈದಾದ ನಂತರ ಸಂವತ್ಸರಕ್ಕೆ ತನ್ನ ಸವಾಲಿನ ಮೊಬಲಗಿನಲ್ಲಿ 24ರಲ್ಲಿ 1 ಭಾಗಕ್ಕೆ ಸರಿಯಾದ ಮೊಬಲಗನ್ನು ಅಂದರೆ ಒಂದು ತಿಂಗಳ ಗುತ್ತಿಗೇ ಹಣದಲ್ಲಿ ಅರ್ಧವನ್ನು, ಮೊದಲು ಠೇವಣಿ ಇಟ್ಟಿರುವ ಮೊಬಲಗು ತಿಂಗಳ ಗುತ್ತಿಗೆ ಹಣಕ್ಕೆ ಸಮಯಹೆಚ್ಚು ಇದ್ದಾಗ ಶಿವಾಯಿ, ಠೇವಣಿ ಯಿಡಬೇಕು. ಇದಕ್ಕೆ ತಪ್ಪಿದಲ್ಲಿ 2ನೇ (a) ಕಲಂಮೇರೆ ಆತನು ಇಟ್ಟಿರತಕ್ಕ ಠೇವಣಿ ಮೊಬಲಗು ಏನಾದರು ಯಿದ್ದಲ್ಲಿ ಅದು ದಂಡವಾಗಿ ಸೇರಿಸಿಕೊಳ್ಳಲ್ಪಡುವದು ಮತ್ತು ಡೆಪ್ಯುಟಿ ಕಮಿಷನರವರು ಯಾ ಹರಾಜು ಮಾಡುವ ಆಫೀಸರರು ಗೊತ್ತು ಮಾಡುವ ರೀತ್ಯಾ ಸದರೀ ಹಕ್ಕು ಮೇಲೆ ನಮೂದಿಸಿರುವ ಷರತ್ತುಗಳ ಪ್ರಕಾರ ಅವನನ್ನು ನಷ್ಟಕ್ಕೆ ಗುರಿಮಾಡಿ ಪುನಹಾ ಹರಾಜು ಮಾಡಲ್ಪಡುವದು ಅನ್ಯಥಾ ವಿಲೇವಾರಿ ಮಾಡಲ್ಪಡುವದು.

(b) ಹರಾಜಿನಲ್ಲಿ ಅಂಗಡಿ ಯಾ ಅಂಗಡಿಗಳ ಸಮುದಾಯಕ್ಕಾಗಿ ಯಾರ ಸವಾಲ್ ಅಂಗೀಕರಿಸಲ್ಪಟ್ಟಿದೆಯೋ ಮತ್ತು ಯಾರು ಮೇಲೆ ಹೇಳಿರುವಂತೆ ಠೇವಣಿಗಳನ್ನು ಕೊಟ್ಟಿದ್ದಾನೆಯೋ ಆತನು ಹರಾಜು ಮಂಜೂರಾದ ವಿಷಯವನ್ನು ನೋಟೀಸ್ ಮೂಲಕ ತಿಳಿಸಲು ಸಾಧ್ಯವಾಗುವಹಾಗೆ ತನ್ನ ವಿಳಾಸವನ್ನು ಹರಾಜು ನಡಿಸತಕ್ಕ ಆಫೀಸರವರಲ್ಲಿ ಕೊಟ್ಟುಹೋಗತಕ್ಕದ್ದು. ಸದರೀ ನೋಟೀಸು ಆತನಿಗೆ ಆಗಲಿ ಅಥವಾ ಸದರೀ ವಿಳಾಸದ ಸ್ಥಳದಲ್ಲಿ ಆತನ ಮನೆಯಲ್ಲಿರುವ ಇತರ ವಯಸ್ಸಾದ ಗಂಡಸಿಗಾಗಲೀ ರೂಬರೂಬ್ ವಾವತಿಯಾಗೇಆಗಲಿ ಅಥವ ವಾಸಸ್ಥಾನಕ್ಕೆ ಅಂಟಿಸಲ್ಪಡುವದರಿಂದಲೂ ಯಾ ಕ್ರಮವಾಗಿ ರಿಜಿಸ್ಟರ್ಡ್ ಪೋಸ್ಟುಮೂಲಕ ಕಳುಹಿಸಿದ್ದರಿಂದಲೇ ಆಗಲಿ ಜಾರಿಯಾದ 7 ದಿವಸಗಳೊಳಗಾಗಿ ಸಂಬಂಧಪಟ್ಟ ತಾಲ್ಲೂಕು ಖಜಾನೆಯಲ್ಲಿ ಮೊದಲು ಕೊಟ್ಟ ಠೇವಣಿ ಮೊಬಲಗು ಸೇರಿಸಿಕೊಂಡು 2 ತಿಂಗಳ ಬಿಸ್ತು ಮೊಬಲಗಿಗೆ ಸರಿಯಾದಷ್ಟು ಹಣವನ್ನು ಠೇವಣಿ ಇಡಬೇಕು. ಮತ್ತು ಅಮಲ್ದಾರ್ರವರಲ್ಲಿ ಅವಶ್ಯಕವಾಗಿರುವ ಒಡಂಬಡಿಕೆಗಳನ್ನು ಬರದುಕೊಟ್ಟು ಮುಂದೆ ಹೇಳಿರುವ ಪ್ರಕಾರ ಆವಶ್ಯಕವಾಗಿರುವ ಲೈಸೆನ್ಸುಗಳನ್ನು ತೆಗದುಕೊಳ್ಳತಕ್ಕದ್ದು.

4. (a) ಹಿಂದಿನ ಕಲಮ್ಮನ್ನನುಸರಿಸಿ ಇಡತಕ್ಕ ಠೇವಣಿಯು ನಗದಾಗಿಯಾಗಲೀ ಯಾ ಡೆಪ್ಯುಟಿ ಕಮಿಷನರವರ ಹೆಸರಿಗೆ ಕ್ರಮವಾಗಿ ಇಂಡಾರ್ಸು ಮಾಡಲ್ಪಟ್ಟ ಇಂಡಿಯಾ ಗೌರ್ನಮೆಂಟ್ ಸೆಕ್ಯೂರಿಟಿ ಮೂಲಕವಾಗಿಯಾಗಲೀ ಇರತಕ್ಕದ್ದು. ಪರಂತು ಮಾಹೆಯಾನಾ ಗುತ್ತಿಗೆ ಮೊಬಲಗು 10 ರೂಪಾಯಿಗಿಂತಲೂ ಹೆಚ್ಚಾಗಿರುವ ಸಂದರ್ಭಗಳಲ್ಲಿ (ಮೇಲ್ಕಂಡ 2 ತಿಂಗಳ ಗುತ್ತಿಗೇ ಹಣದ ಬದಲಾಗಿ) ಡೆಪ್ಯುಟಿ ಕಮಿಷನರವರು ತಮಗೆ ಯುಕ್ತ ತೋರಿದಂತೆ ಮೇಲ್ಕಂಡ ಮೇರೆಗೆ 1 ತಿಂಗಳ ಗುತ್ತಿಗೆ ಹಣಕ್ಕೆ ಸಮನಾದ ಠೇವಣಿ ಸಹ 4 ತಿಂಗಳ ಗುತ್ತಿಗೆ ಹಣಕ್ಕೆ ಸಮವಾದ ಮೊಬಲಗಿಗೆ ಖಾತರಿ ಜಾಮೀನನ್ನು ಕೊಡುವಂತೆ ಬಿಕರೀದಾರನಿಗೆ ಅಪ್ಪಣೆ ಕೊಡಬಹುದು. ಒಂದು ತಿಂಗಳ ಗುತ್ತಿಗೆ ಮೊಬಲಗು 10 ರೂಪಾಯಿಗಳಿಗೆ ಮೀರದಿರುವ ಎಲ್ಲಾ ಸಂದರ್ಭಗಳಲ್ಲಿಯೂ 2 ತಿಂಗಳ ಬಿಸ್ತಿನ ಹಣದಷ್ಟು ನಗದು ಠೇವಣಿಯನ್ನು ತೆಗೆದುಕೊಳ್ಳಬೇಕೇ ಹೊರ್ತು ನಫರ್ ಜಾಮೀನನ್ನು ಅಂಗೀಕರಿಸಕೂಡದು. ಹರಾಜು ನಂತರ ವಿಚಾರಿಸಿದ್ದರಲ್ಲಿ ಆತನು ಮೈಸೂರು ಸೀಮೆಯಲ್ಲಿ ಜಂದಿಗಿಮನ್ನುಂಟಾಗದೆ ಇರುವ ಅನ್ಯದೇಶದವನಾಗಿಯೂ ಜೀವಾಳಸ್ಥನೆಂಬುವದಕ್ಕೆ ಅನುಮಾನಕ್ಕೆ ಗುರಿಯಾದವನಾಗಿ ಇರುವಂತೆ ಕಂಡುಬಂದಲ್ಲಿ ವಿಧಾಯಕವಾದ ಎರಡರಷ್ಟು ಠೇವಣಿಯನ್ನು ಇಡುವದಕ್ಕಾಗಲೀ ಯಾ ಆತನ ಗುತ್ತಿಗೆ ಷರತ್ತುಗಳಿಗನುಸರಿಸಿ ಆತನು ಕೊಡಬೇಕಾದ ಎಲ್ಲಾ ಹಣಗಳನ್ನು ಕ್ರಮವಾಗಿ ವಾವತಿ ಮಾಡಲುಳ್ಳವನೆಂದು ಜಾಮೀನ್ ಪತ್ರವನ್ನು ಬರದುಕೊಡುವದಕ್ಕೆ ಮೈಸೂರು ಸಂಸ್ಥಾನದಲ್ಲಿ ವಾಸವಾಗಿದ್ದು ಸ್ವತ್ತುಳ್ಳವನಾಗಿರುವ ಒಬ್ಬ ಜಾಮೀನ್‌ದಾರನನ್ನು ಯಾ ಜಾಮೀನ್‌ದಾರರನ್ನು ಹಾಜರ್ಮಾಡುವದಕ್ಕಾಗಲೀ ಆತನಿಗೆ ಕೇಳಬಹುದು.

(b) ಪ್ರಾರಂಭದಲ್ಲಿ ಇಟ್ಟಿರತಕ್ಕ ಠೇವಣಿ ಮೊಬಲಗು 3 (b) ನೆ ಯಾ 4 (a) ನೇ ಕಲಂ ಮೇರೆಗೆ ಠೇವಣಿ ಇಡಬೇಕಾಗಿರುವ ಮೊಬಲಗಿಗಿಂತಲೂ ಹೆಚ್ಚಾಗಿದ್ದಲ್ಲಿ ಹೆಚ್ಚಾಗಿರತಕ್ಕ ಮೊಬಲಗು ಬಿಕರೀದಾರನಿಗೆ ವಾಪಸ್ ಕೊಡಲ್ಪಡುವದು.

5. ಸದರೀ ಸ್ವಾತಂತ್ರ್ಯದ ಹಕ್ಕನ್ನು ಕೊಂಡುಕೊಂಡವನು ಈ ಮುಂದೆ ನಮೂದಿಸಿರುವ ಮತ್ತು ತನಗೆ ಲೈಸೆನ್ಸಿನಲ್ಲಿ ಗೊತ್ತುಮಾಡಿರುವ ಷರತ್ತುಗಳಿಗನುಸಾರವಾಗಿ ನಡೆಯುವದಕ್ಕೆ ತನ್ನನ್ನು ಮತ್ತು ಕ್ರಮವಾಗಿ ರಿಕಾರ್ಡಾದ ಡೆಪ್ಯುಟಿ ಕಮಿಷನರವರ ಹುಕುಂನಿಂದ ನೇಮಾಯಿಸಲ್ಪಟ್ಟ ಹೊರ್ತು ಡೆಪ್ಯುಟಿ ಕಮಿಷನರವರಿಂದ ಸಾಕೆಂದು ಭಾವಿಸಲ್ಪಡುವಷ್ಟು ತನ್ನ ಚರ ಸ್ಥಿರ ಸ್ವತ್ತುಗಳನ್ನು ಬದ್ಧಿಸುವ ಒಂದು ಒಡಂಬಡಿಕೆಯನ್ನು ಬರೆದುಕೊಡತಕ್ಕದ್ದು ಮತ್ತು ಮೇಲ್ಕಂಡ ಕಲಂ ಅನುಸರಿಸಿ ಅಂಗೀಕರಿಸಲ್ಪಟ್ಟಿದ್ದ ಪಕ್ಷದಲ್ಲಿ ಆತನ ಜಾಮೀನ್‌ದಾರನು ಸದರೀ ಬಿಕರೀದಾರನು ಅವನ ಕರಾರಿನ ಷರತ್ತುಗಳನ್ನನುಸರಿಸಿ ಕ್ರಮವಾಗಿ ನಡೆಯುವದಕ್ಕೋಸ್ಕರ ತನ್ನನ್ನು ಮತ್ತು ಡೆಪ್ಯುಟಿ ಕಮಿಷನರವರು ಸಾಕೆಂದು ಅಪೇಕ್ಷಿಸಬಹುದಾದಷ್ಟು ತನ್ನ ಚರ ಸ್ಥಿರ ಸ್ವತ್ತುಗಳನ್ನೂ ಈಡುಮಾಡಿ ವಿಧಾಯಕವಾದ ನಮೂನೆಯಲ್ಲಿ ಜಾಮೀನ್ ತಮಸೂಕನ್ನು ಬರದುಕೊಡತಕ್ಕದ್ದು. ಹಾಗೆ ಬರದುಕೊಡಲ್ಪಟ್ಟ ಒಡಂಬಡಿಕೆ ವ ಜಾಮೀನ್ ತಮಸೂಕು ಬಿಕರೀದಾರನ ಖರ್ಚಿನಿಂದ ಸ್ಟ್ಯಾಂಪು ಹಾಕಲ್ಪಡಬೇಕು. ಮತ್ತು ಪತ್ರದಲ್ಲಿ ಕಂಡ ಮೊಬಲಗು 100 ರೂಪಾಯಿ ಅಥವಾ 100 ರೂಪಾಯಿಗಿಂತಲೂ ಹೆಚ್ಚಾಗಿದ್ದಲ್ಲಿ ಆತನ ಖರ್ಚಿನಿಂದಲೇನೇ ರಿಜಿಸ್ಟ್ರು ಮಾಡಿಸಲ್ಪಡಬೇಕು.

6. ಮೇಲೆ ಹೇಳಿರುವಂತೆ ಠೇವಣಿ ಯಾ ಠೇವಣಿಗಳನ್ನು ಹಾಜರು ಮಾಡಲಿಕ್ಕೆ ಯಾ ಕರಾರನ್ನು ಯಾ ಜಾಮೀನ್ ಇದ್ದಲ್ಲಿ ಜಾಮೀನ್ ತಮಸೂಕನ್ನು ಬರದುಕೊಡಲಿಕ್ಕೂ ಮತ್ತು ಲೈಸೆನ್ಸುಗಳನ್ನು ತೆಗದುಕೊಳ್ಳುವದಕ್ಕೂ ತಪ್ಪಿದರೆ ಡೆಪ್ಯುಟಿ ಕಮಿಷನರವರು ಕೂಡ್ಲೆ ಸದರೀ ಸ್ವಾತಂತ್ರ್ಯದ ಹಕ್ಕನ್ನು ಮೊದಲು ಕೊಂಡುಕೊಂಡವನನ್ನು ನಷ್ಟಕ್ಕೆ ಗುರಿಮಾಡಿ ದುಸರಾ ಹರಾಜು ಯಾ ಅನ್ಯಥಾ ವಿಲೇವಾರಿ ಮಾಡತಕ್ಕದ್ದು. ಸದರೀ ಪ್ರಥಮ ಖರೀದಿದಾರನಿಂದ ಮೊದಲೇ ಹಾಜರ್ಮಾಡಲ್ಪಟ್ಟ ಠೇವಣಿ ಯಾ

ಶೇವಣಿಗಳು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಆತನು ದುಸರಾ ಹರಾಜಿನಿಂದ ಯಾ ಅನ್ಯಥಾ ವಿಲೇವಾರಿಯಿಂದ ಉಂಟಾದ ನಷ್ಟಕ್ಕೂ ಗುರಿಪಡಿಸಲ್ಪಡತಕ್ಕದ್ದು. ಪರಂತು ದುಸರಾ ಹರಾಜಿನಲ್ಲಿ ಯಾ ಅನ್ಯಥಾ ವಿಲೇವಾರಿಯಲ್ಲಿ ಏನಾದರೂ ನಫೆ ಬಂದರೆ ಅದಕ್ಕೆ ಆತನಿಗೆ ಏನೂ ಹಕ್ಕಿರಲಾರದು. ಇದರಿಂದ ನಷ್ಟವಾದ ಸಂದರ್ಭದಲ್ಲಿ ದಂಡವಾಗಿ ತೆಗದುಕೊಂಡ ಶೇವಣಿ ಮೊಬಲಗು ಅದರಿಂದ ಉತಾರು ಹಾಕಲ್ಪಡುವದು; ಮತ್ತು ಬಾಕಿ ಏನಾದರು ಯಿದ್ದಲ್ಲಿ ಜಮೀನ್ ಕಂದಾಯದ ಬಾಕಿಯಂತೆ ವಸೂಲಾಗತಕ್ಕದ್ದು. ಹರಾಜು ಮಂಜೂರಾದ ಮೇಲೆ ಸದರೀ ಖರೀದಿದಾರನು ಸತ್ತುಹೋದ ಪಕ್ಷದಲ್ಲಿ ಅವನ ವಾರಸದಾರರು ಯಾ ಅವನಿಂದ ಹಕ್ಕನ್ನು ಪಡೆದವರು ಅದಕ್ಕೆ ಜವಾಬ್ದಾರರಾಗಿರತಕ್ಕದ್ದು.

7. ಕರಾರುಗಳನ್ನೂ ತಮಸೂಕುಗಳನ್ನೂ ಬರೆದುಕೊಟ್ಟಕೂಡ್ಲೆ ಡೆಪ್ಯುಟಿ ಕಮ್ಮಿಷನರವರು ಖರೀದಿದಾರನಿಗೆ ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ಒಳಪಟ್ಟು ವಿಧಾಯಕವಾಗಿರುವ ನಮೂನೆಯಲ್ಲಿ ಸದರೀ ಬಟ್ಟು ಸ್ವಾತಂತ್ರ್ಯದ ಹಕ್ಕನ್ನು ನಮೂದಿಸಿ ಒಂದು ಲೈಸೆನ್ಸನ್ನು ಕೊಡುವರು. ಕ್ರಮವಾದ ಲೈಸೆನ್ಸ್ ಕೊಡದಿದ್ದಾಗ್ಯೂ ಈ ಕೆಳಗೆ ನಮೂದಿಸಿರುವ ಷರತ್ತುಗಳಿಗೆ ವಿರೋಧವಾಗಿ ನಡೆದ್ದಕ್ಕೆ ವಿಧಿಸಿರುವ ಶಿಕ್ಷೆಗಳಿಗೆ ಸ್ವತಂತ್ರ ಹಕ್ಕನ್ನು ಪಡೆದುಕೊಂಡಿರುವವನು ಗುರಿಯಾಗುವದನ್ನು ಈ ಪ್ರಕರಣದಲ್ಲಿರುವ ಯಾವದೂ ತಪ್ಪಿಸಲಾರದು.

(1) ಲೈಸೆನ್ಸದಾರನು ತನ್ನ ದುಕಾನ್‌ಗಳಿಗೆ ಶೇಂದಿ ಪದಗಿಸಿಕೊಳ್ಳುವದಕ್ಕೆ ತನ್ನ ಅಂಗಡಿಗೆ ಯಾ ಅಂಗಡಿಗಳ ಸಮುದಾಯಕ್ಕೆ ಸೇರಿದ ವನಗಳಲ್ಲಿರುವ ಶೇಂದಿ ಉತ್ಪತ್ತಿ ಆಗುವ ಗಿಡಗಳನ್ನು, ಮರತೆರಿಗೆ ನಿಬಂಧನೆಗಳಿಗೆ ಒಳಪಟ್ಟು, ಹೊಂದುವದಕ್ಕೆ ಸ್ವಾತಂತ್ರ್ಯವುಳ್ಳವನಾಗಿರುತ್ತಾನೆ. ಮತ್ತು ಆಪಸನಲ್ಲಿ ಮಾಲೀಕರೊಡನೆ ಮಾಡಿಕೊಂಡ ಏರ್ಪಾಟುಗಳನ್ನನುಸರಿಸಿ ಹಿಡುವಳಿದಾರ್ರ ಜಮೀನುಗಳಲ್ಲಿರತಕ್ಕ ಮರಗಳಿಂದ ಶೇಂದಿಯನ್ನು ತಯಾರ್ಮಾಡಿಕೊಳ್ಳುವದಕ್ಕೆ ಸ್ವತಂತ್ರನಾಗಿರುತ್ತಾನೆ. ಲೈಸೆನ್ಸದಾರನು ಇನ್ಸ್‌ಪೆಕ್ಟರವರಿಗೆ ದರಖಾಸ್ತುಕೊಟ್ಟು ಅವಶ್ಯಕವಾಗಿರುವ ಬಗ್ಗೆ ಅವರಿಂದ ಅಪ್ಪಣೇಚೀಟಿ ಪಡದು ಇತರ ಶೇಂದಿ ದುಕಾನ್‌ದಾರರಿಂದ ಶೇಂದಿಯನ್ನು ಕೊಂಡುಕೊಳ್ಳಬಹುದು, ಇದರ ಅವಶ್ಯಕವನ್ನು ತೋರಿಸಿದ್ದಲ್ಲಿ ಇನ್ಸ್‌ಪೆಕ್ಟರವರು ಅಪ್ಪಣೇಚೀಟಿಯನ್ನು ಕೊಡುತ್ತಾರೆ. ಸರಿಯಾದ ಆಫೀಸರರಿಂದ ನಂಬರ್ ಹಾಕಲ್ಪಟ್ಟು ಮತ್ತು ಲೈಸೆನ್ಸುಮೇರೆ ಉತಾರ್ಮಾಡಿರುವ ಮರಗಳ ಶೇಂದಿ ವಿನಹಾ ಮತ್ಯಾವವಿನಿಂದಾದ ಶೇಂದಿಯನ್ನೂ ಅಂಗಡಿಯಲ್ಲಿ ಇಟ್ಟುಕೊಳ್ಳಕೂಡದು ಮಾರಲಿಕ್ಕೆ ಕೊಡುತ್ತೇನೆಂತ ಹೇಳಕೂಡದು ಅಥವಾ ಮಾರಕೂಡದು.

(2) ಸದರೀ ಬಟ್ಟು ಸ್ವಾತಂತ್ರ್ಯದ ಹಕ್ಕು ಈಚಲು, ತಾಳಿ, ತೆಂಗು ಮತ್ತು ಬಗನಿ ವ ದಡಸಾಲ್ ಮರಗಳ ಶೇಂದಿಯನ್ನು ಮಾರುವುದಕ್ಕೆ ವ್ಯಾಪಿಸುತ್ತದೆ. ಆದರೆ ಈಚಲು ಮತ್ತು ಬಗನಿ ಶೇಂದಿ ಅಂಗಡಿಗಳಿರತಕ್ಕ ಪ್ರದೇಶಗಳಲ್ಲಿ ಈಚಲು ಶೇಂದಿ ಅಂಗಡಿ ಲೈಸೆನ್ಸದಾರನು ಬಗನಿ ಮರಗಳನ್ನು ಬಗನಿ ಶೇಂದಿ ಅಂಗಡಿ ಲೈಸೆನ್ಸದಾರನು ಈಚಲು ಮರಗಳನ್ನು ಕಟ್ಟಕೂಡದು. ಆದರೆ ಈ ಉಭಯ ಲೈಸೆನ್ಸದಾರರು ಮೇಲೆ ನಮೂದಿಸಿರುವ ಎಲ್ಲಾ ಇತರ ಶೇಂದಿ ಮರಗಳನ್ನು ಕಟ್ಟಬಹುದು.

(3) ಗುತ್ತಿಗೆ ಮೊಬಲಗನ್ನು ಸರ್ಕಾರದಿಂದ್ದ ಆಜ್ಞೆ ವಿಧಾಯಕವಾಗಿ ಅಚ್ಚು ಹಾಕಲ್ಪಟ್ಟಿರುವ ಚಲನ್‌ಗಳಮೂಲಕ ಸ್ಥಳೀಯವಾದ ಸರ್ಕಾರದ ಖಜಾನೆಗಳಿಗೆ 1904ನೇ ಇಸವಿ ಜುಲೈ ಲಾಗಾಯಿತು ಸರಿಯಾದ ತಿಂಗಳಗಟ್ಲೆ ಖಿಸ್ತುಪ್ರಕಾರ ಪಾವತಿ ಮಾಡುತ್ತಾ ಬರತಕ್ಕದ್ದು. ಮೊಬಲಗು ಎಕ್ಸೈಜ್ ಆಫೀಸರುಗಳಿಗೆ ಕೊಡಲ್ಪಡಕೂಡದು ಅಥವಾ ಸದರೀ ಎಕ್ಸೈಜ್ ಆಫೀಸರುಗಳು ಅದನ್ನು ತೆಗದುಕೊಳ್ಳಕೂಡದು. ಮಲ್ನಾಡು ಮತ್ತು ಅರ್ಧ ಮಲ್ನಾಡು ತಾಲ್ಲೂಕುಗಳಲ್ಲಿ ಡೆಪ್ಯುಟಿ ಕಮ್ಮಿಷನರವರು ಲೈಸೆನ್ಸದಾರರಲ್ಲದ ಗ್ರಾಮದ ಪಟೇಲರಿಗೆ ಬಂದುಸಲಕ್ಕೆ 50 ರೂಪಾಯಿಗಳಿಗೆ ಮೀರದೆ ಮೊಬಲಗುಗಳನ್ನು ಯಾವವನು ವಸ್ಯಾನಿಂದಲಾದರೂ ತೆಗದುಕೊಳ್ಳಬಹುದೆಂದು ಅಪ್ಪಣೆ ಕೊಡಬಹುದು. ಯಾವ ಅಂಗಡಿಗಾದರೂ ಸಾಲಿಯಾನಾ ಕೊಡತಕ್ಕ ಗುತ್ತಿಗೆ ಮೊಬಲಗು 12 ರೂಪಾಯಿಗಳಿಗೆ ಮೀರದಿದ್ದಲ್ಲಿ ಪೂರಾ ಮೊಬಲಗು 3 ತ್ರೈಮಾಸಿಕದ ಖಿಸ್ತುಗಳಿಗೆ ಹೆಚ್ಚಾಗದಂತೆ ಪಾವತಿ ಮಾಡಲ್ಪಡತಕ್ಕದ್ದು. ಪ್ರತಿಯೊಂದು ಖಿಸ್ತು ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಲೈಸೆನ್ಸದಾರನು ಲೋಕಲ್ ಸೆಸ್ಸಿಗಾಗಿ ಏನು ಜಾಸ್ತಿ ಮೊಬಲಗು ಕೊಡತಕ್ಕದ್ದಿಲ್ಲವು. ಪ್ರತಿ ತಿಂಗಳಿನ ಯಾ ತ್ರೈಮಾಸಿಕದ ಗುತ್ತಿಗೆ ಮೊಬಲಗು ಅದೇ ತಿಂಗಳ 20ನೇ ತಾರೀಖು ವ ಅದರ ಒಳಗೆ ಯಾ ತ್ರೈಮಾಸಿಕದ ಆಖ್ಯೆರೊಳಗೆ ಪಾವತಿಯಾಗತಕ್ಕದ್ದು. ಹಾಗೆ ಪಾವತಿಯಾಗುವದಕ್ಕೆ ತಪ್ಪಿದರೆ ಅಮುಲ್ದಾರರು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಯನ್ನು ಪಡೆದು ಬರಹಮೂಲಕ ರಿಕಾರ್ಡುಮಾಡಿ ಲೈಸೆನ್ಸನ್ನು ಮೋಖೂಪ್ ಯಾ ರದ್ದುಮಾಡಿ ತಪ್ಪಿತಸ್ಥನಿಂದ ಇಡಲ್ಪಟ್ಟಿರುವ ಶೇವಣಿ ಮೊಬಲಗುಗಳನ್ನೆಲ್ಲಾ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಕ್ಕೆ ಹುಕುಂಮಾಡಿ (ಸಾಧ್ಯವಾದಮಟ್ಟಿಗೆ ಸದರೀ ತಿಂಗಳು ಯಾ ತ್ರೈಮಾಸಿಕ ಆಖ್ಯೆರಾದ ಕೂಡ್ಲೆ) ಅಂಗಡಿಯನ್ನು ಯಾ ಅಂಗಡಿಗಳ ಸಮುದಾಯವನ್ನು ತಪ್ಪಿತಸ್ಥನನ್ನು ನಷ್ಟಕ್ಕೆ ಗುರಿಮಾಡಿ ದುಸರಾ ಹರಾಜು ಯಾ ಅನ್ಯಥಾ ವಿಲೇವಾರಿ ಮಾಡಬಹುದು. ಇದು ನೂತನ ಖರೀದಾರನಿಗೆ ಲೈಸೆನ್ಸುಕೊಟ್ಟ ಯಾ ಅನ್ಯಥಾ ವಿಲೇವಾರಿಯಾದ ತಾರೀಖಿನಿಂದ ಜಾರಿಗೆ ಬರತಕ್ಕದ್ದು. ಪರಂತು ಮೇಲ್ಕಂಡಂತೆ ದುಸರಾ ಹರಾಜ್ ಹಾಕುವುದಕ್ಕೆ ಬದಲಾಗಿ ಡೆಪ್ಯುಟಿ ಕಮ್ಮಿಷನರವರು ತಮಗೆ ಯುಕ್ತ ತೋರುವಂತೆ ತಪ್ಪಿತಸ್ಥನು ಪಾವತಿ ಮಾಡಲು ತಪ್ಪಿದ್ದ ಗುತ್ತಾ ಮೊಬಲಗಿಗಿಂತ ಕಡಿಮೆಯಿಲ್ಲದೆ ಇರುವ ಗುತ್ತಿಗೆಗೆ ಸಮನಾಗತಕ್ಕ ಮೊಬಲಗುಗಳಿಗೆ ತಪ್ಪಿದ ಲೈಸೆನ್ಸದಾರನ ಕೈಕೆಳಗಿರುವ ವೆಂಡರು ಅಥವಾ ಸಬ್ ವೆಂಡರುಗಳಿಗೆ ಲೈಸೆನ್ಸನ್ನು ಕೊಡಲು ಅಮುಲ್ದಾರ್ರಿಗೆ ಹುಕುಂ ಮಾಡಬಹುದು. ಲೈಸೆನ್ಸನ್ನು ಮೋಖೂಪ್ ಮಾಡಲು ಅಧಿಕಾರವುಳ್ಳ ಆಫೀಸರರು ತಮಗೆ ಯುಕ್ತ ತೋರಿದಲ್ಲಿ ಹಕ್ಕಿನ ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿ ಆಗುವದರೊಳಗೆ ಮಾರಾಟವನ್ನು ನಿಲ್ಲಿಸಬೇಕಾದ್ದಿಲ್ಲ.

ಟಿಪ್ಪಣಿ.—ಜಾತ್ರೇ ಅಂಗಡಿಯ ಲೈಸೆನ್ಸದಾರನು ಜಾತ್ರೆ ಪ್ರಾರಂಭವಾಗುವದರೊಳಗೇನೆ ಸದರೀ ಅಂಗಡಿಯ ಗುತ್ತಿಗೆ ಮೊಬಲಗನ್ನೆಲ್ಲಾ ಪಾವತಿ ಮಾಡಬೇಕು.

(4) ಲೈಸೆನ್ಸ್‌ದಾರನಿಂದ ಇಡಲ್ಪಟ್ಟ ಠೇವಣೀ ಮೊಬಲಗು ಲೈಸೆನ್ಸಿನ ಷರತ್ತುಗಳಂತೆ ಕ್ರಮವಾಗಿ ನಡೆಯುವದಕ್ಕೆ ಇಟ್ಟಿರತಕ್ಕ ಜಾಮೀನಾಗಿ ಭಾವಿಸಲ್ಪಡುತ್ತದೆ. ಮತ್ತು ಅದು ದಂಡವಾಗಿ ತೆಗೆದುಕೊಳ್ಳಲ್ಪಡದೆ ಯಾ ಜಪ್ತಮಾಡಲ್ಪಡದೆ ಯಾ ಅನ್ಯಥಾ ವಿಲೇವಾರಿ ಮಾಡಲ್ಪಡದೇ ಇದ್ದಲ್ಲಿ ಲೈಸೆನ್ಸಿನ ಮಾಯಿದೆಯು ಆಖೈರ್ ಮಾಹೆ ಯಾ ಮಾಹೆಗಳ ಕಿಸ್ತುಗಳಿಗೋಸ್ಕರ ವಸೂಲ್ ಹಾಕಲ್ಪಡಬೇಕು. ಲೈಸೆನ್ಸ್‌ದಾರನಿಂದ ಬರಬೇಕಾದ ಬಾಕಿ ಹಣಗಳು ಮತ್ತು ನಷ್ಟದ ಮೊಬಲಗುಗಳು ಸಾಲು 1ಕ್ಕೆ ಶೇಕಡ 6 ರೂಪಾಯಿನಂತೆ ಬಡ್ಡಿ ಸಹಿತವಾಗಿ ಅವನಿಂದ ಯಾ ಆತನ ಜಾಮೀನುದಾರನಿಂದ ಜಮೀನ್ ಕಂದಾಯವನ್ನು ವಸೂಲ್ಮಾಡುವದಕ್ಕೆ ಜಾರಿಯಲ್ಲಿರುವ ನಿಬಂಧನೆಗಳನ್ನನುಸರಿಸಿ ವಸೂಲ್ಮಾಡಲ್ಪಡತಕ್ಕದ್ದು. ಬಾಕಿ ಬರಬೇಕಾದ ಮರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ, ಮತ್ತು ನಷ್ಟದ ಮೊಬಲಗಿಗೆ ಪುನಃ ಹರಾಜಾದ ಯಾ ಅನ್ಯಥಾ ವಿಲೇವಾರಿಯಾದ ತಾರೀಖಿನಿಂದಲೂ ಬಡ್ಡಿಯು ಲೆಖ್ಖಾಚಾರ ಮಾಡಲ್ಪಡತಕ್ಕದ್ದು. ಯಾವ ವಿಮಿಷನ್ನೇ ಆಗಲಿ ಗುತ್ತಿಗೆ ಮೊಬಲಗನ್ನು ಕಡಿಮೇಮಾಡುವದೇ ಆಗಲಿ ಅಥವಾ ಯಾವ ಪ್ರತಿಫಲವೇ ಆಗಲಿ ಲೈಸೆನ್ಸ್‌ದಾರನಿಂದ ಯಾವವಿಧದಲ್ಲೂ ಬಯಸತಕ್ಕದ್ದಲ್ಲ, ಮತ್ತು ಪಟ್ಟಿಯಿಂದ ವಜಾಯಿಸಿದ ಯಾ ಸರ್ಕಾರದ ಉಪಯೋಗಕ್ಕಾಗಿ ತೆಗೆದುಕೊಂಡ ಯಾವ ಮರಗಳ ಪ್ರತಿಫಲಕ್ಕೂ ಆತನಿಗೆ ಹಕ್ಕು ಇರುವದಿಲ್ಲ.

(5) ಡೆಪ್ಯುಟಿ ಕಮ್ಮಿಷನರವರು ದುಸರಾ ಹರಾಜನ್ನು ಮಂಜೂರ್ಮಾಡದ ಪಕ್ಷದಲ್ಲಿ ಸದರೀ ಗುತ್ತಿಗೆಯಲ್ಲಿ ಬಾಕೀ ಕಾಲಕ್ಕೆ ಯುಕ್ತ ತೋರುವ ಬೇರೆ ಏರ್ಪಾಡನ್ನಾದರು ಮಾಡಬಹುದು. ಹಾಗೆ ಮಾಡಿದ ಸಂದರ್ಭದಲ್ಲಿ ಅವರು ತಪ್ಪಿಹೋದ ಲೈಸೆನ್ಸ್ ದಾರನಿಗೆ ತಮ್ಮಿಂದ ಮಾಡಲ್ಪಟ್ಟಿರುವ ಏರ್ಪಾಟುಗಳ ವಿಧಾನಗಳನ್ನು ತಿಳಿಸಿ ಒಂದು ನೋಟೀಸನ್ನು ಕೊಡಬೇಕು.

(6) ಶೇಂದಿಯು ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ನಮೂದಿಸಿರುವ ಚಿಲ್ಲರೆ ದರಗಳಿಗಿಂತ ಕಮ್ಮಿಯಾಗಿ ಜನರಿಗೆ ಮಾರಲ್ಪಡಕೂಡದು.

(7) ಮರಗಳಿಂದ ತೆಗಿಯಲ್ಪಟ್ಟ ಸ್ಥಿತಿಯಲ್ಲಿ ಶೇಂದಿಯು ಬೆರಕೆಯಿಲ್ಲದೆ ಶುದ್ಧವಾಗಿ ಮಾರಲ್ಪಡತಕ್ಕದ್ದು. ಮತ್ತು ಅಂಗಡಿಗಳಲ್ಲಿ ಅಥವಾ ಡೆಪೋಗಳಿದ್ದರೆ ಅವುಗಳಲ್ಲಿ ಯಾವ ರೀತಿಯಿಂದಲೂ ಇತರ ಪದಾರ್ಥಗಳಿಂದ ಬೆರಿಸಲ್ಪಡಲಾಗದು. ಯಾ ನೀರಿನಿಂದ ಮಿಶ್ರ ಮಾಡಲಾಗದು. ಅದರ ಮತ್ತನ್ನುಂಟುಮಾಡುವ ಶಕ್ತಿಯನ್ನು ವೃದ್ಧಿಪಡಿಸುವದಕ್ಕೆ ಆಗಲಿ ಇನ್ಯಾವ ಕಾರಣಕ್ಕಾಗಲಿ ದೇಹಕ್ಕೆ ವಿರುದ್ಧವಾದ ಯಾವ ವಸ್ತುಗಳನ್ನು ಅದರಲ್ಲಿ ಬೆರಸಕೂಡದು. ಅಂಗಡಿಗಳನ್ನೂ ಕೋಠಿಗಳನ್ನೂ ತನಿಖೆ ಮಾಡುವುದಕ್ಕೆ ಅಧಿಕಾರವುಳ್ಳ ಆಫೀಸರುಗಳು ಕುಡಿಯುವದಕ್ಕೂ ಉಪಯೋಗಿಸುವದಕ್ಕೂ ನಾಲಾಯಕಾಗಿರುವ ಶೇಂದಿಯನ್ನು ಖರ್ಚು ಮಾಡದೇ ಇಡುವದಕ್ಕೆ ಅಪ್ಪಣೇ ಮಾಡಲು ಅಧಿಕಾರವುಳ್ಳವರಾಗಿರುತ್ತಾರೆ. ಮತ್ತು ಎಲ್ಲಾ ಡೆಪ್ಯುಟಿ ಕಮ್ಮಿಷನರುಗಳು ಮತ್ತು ಎಕ್ಸೈಜ್ ಕಮ್ಮಿಷನರವರು, ಡೆಪ್ಯುಟಿ ಎಕ್ಸೈಜ್ ಕಮ್ಮಿಷನರವರು ಮತ್ತು ಎಕ್ಸೈಜ್ ಅಸಿಸ್ಟೆಂಟ್ ಕಮ್ಮಿಷನರುಗಳು ಅಂಥಾ ಶೇಂದಿಯನ್ನು ನಾಶಪಡಿಸಲು ಅಧಿಕಾರವುಳ್ಳವರಾಗಿರುತ್ತಾರೆ.

(8) ಅಂಗಡಿಗಳ ಸಮುದಾಯದ ಲೈಸೆನ್ಸ್‌ದಾರನು ತನ್ನ ಅಂಗಡಿಗಳಿಗೆ ಸರಬರಾಯಿ ಮಾಡಲು ಶೇಂದಿ ಸರಕನ್ನು ಇಡುವದಕ್ಕಾಗಿ ಒಂದು ಕೋಠಿಯನ್ನು ಇಟ್ಟುಕೊಳ್ಳಬೇಕೆಂದು ಅಪೇಕ್ಷಿಸಿದರೆ ವಿಧಿಸಲ್ಪಟ್ಟಿರುವ ನಮೂನೆಯಲ್ಲಿ ಲೈಸೆನ್ಸನ್ನು ಪಡೆಯಬೇಕು. ಶೇಂದಿಯೊಡನೆ ಕೊಡಲ್ಪಟ್ಟ ಪ್ಯಾಸುಗಳು ಅದಕ್ಕಾಗಿ ಅಧಿಕಾರ ಹೊಂದಿದ ಆಫೀಸರುಗಳ ಪರೀಕ್ಷೆಗೆ ವ ತನಿಖೆ ಬಗ್ಯೆ ಗುರಿಯಾಗಿರತಕ್ಕದ್ದು.

(9) ವಿಧಾಯಕವಾದ ನಮೂನೆಯಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಕ್ರಮವಾಗಿ ಲೈಸೆನ್ಸ ಪಡೆದ ದುಕಾನುಗಳಲ್ಲಿ ವಿನಹಾ ಮತ್ತೆಲ್ಲಿಯೂ ಶೇಂದಿಯನ್ನು ಬಿಕರೀ ಮಾಡಲಾಗದು, ಮತ್ತು ಎಕ್ಸೈಜ್ ಕಮ್ಮಿಷನರವರ ಮುಂಚಿತವಾದ ಹುಕುಂ ಜೂರಾತಿಯಿಲ್ಲದೆ ಹೊಸದಾಗಿ ಅಂಗಡಿಗಳನ್ನಿಡಕೂಡದು. ಶೇಂದಿಯನ್ನು ಗಿಡದಕೆಳಗೆ ಮಾರೋಣವೂ ಅಥವಾ ಬೈಲಿನಲ್ಲಿ ಮಾರೋಣವೂ ಅಥವಾ ಕಾನೂನ್ ಯಾ ನಿಬಂಧನೆಗಳ ಪ್ರಕಾರ ಅಪ್ಪಣೆ ಕೊಡಲ್ಪಡದೇ ಯಿರುವ ಮತ್ಯಾವ ಇತರ ರೀತಿಯಲ್ಲಾಗಲಿ ವಿನಿಯೋಗಪಡಿಸೋಣವೂ ಖಂಡಿತವಾಗಿ ಅಡ್ಡೀ ಮಾಡಲ್ಪಟ್ಟಿರುತ್ತದೆ. ಪರಂತು ಬಗನೀಮರಗಳಿರತಕ್ಕ ಪ್ರದೇಶಗಳಲ್ಲಿ ಬಗನೀ ಶೇಂದಿಯು ಮಾರುವ ಹಕ್ಕನ್ನು ಪಡೆದಿರುವ ಲೈಸೆನ್ಸ್‌ದಾರನು ಗೃಹಕೃತ್ಯದ ಉಪಯೋಗಕ್ಕೋಸ್ಕರವೂ, ಬಿಕರೀಬಗ್ಯೆ ಸಹ ತಾನು ಹರಾಜಿನಲ್ಲಿ ಪಡೆದಿರುವ ಗ್ರಾಮದ ಸರಹದ್ದಿನೊಳಗೆ ಬಗನಿ ಮರಗಳನ್ನು ಉತಾರ್ಮಾಡಲು ಅಪ್ಪಣೆ ಕೊಡಬಹುದು. ಕೋಠಿ ಯಾ ಅಂಗಡಿ ಯಾ ಅಂಗಡಿಗಳ ಸಮುದಾಯದ ಲೈಸೆನ್ಸ್‌ದಾರನು ಪ್ರತಿದಿನದಲ್ಲಿಯೂ ತನ್ನ ಅಂಗಡಿಗೆ ಜಮಾ ಬಂದ ಮತ್ತು ಖರ್ಚಾದ ಶೇಂದಿಯ ಕರಾರ್ವಾಕಾ ಲೆಖ್ಖವನ್ನು ವಿಧಾಯಕವಾಗಿರುವ ನಮೂನೆಯಲ್ಲಿ ಶಾಯಿಯಿಂದ ಬರದು ಇಡಬೇಕು. ಈ ಲೆಖ್ಖಗಳು ಮತ್ತು ಪರ್ಮಿಟ್ಟುಗಳು ಅಚ್ಚಾಗಿರುವ ಪುಸ್ತಕಗಳಲ್ಲಿರಬೇಕು. ಇವುಗಳ ಅಸಲು ಖರೀದಿಯನ್ನು ಕೊಟ್ಟಲ್ಲಿ ಸ್ಥಳದ ಎಕ್ಸೈಜ್ ಆಫೀಸರುಗಳಿಂದ ಸದರೀ ಪುಸ್ತಕಗಳನ್ನು ಪಡೆಯಬಹುದು. ಜಮಾ ಬಂದ ಶೇಂದಿಗೆ ಪರ್ಮಿಟ್ಟುಗಳು ಮತ್ತು ಖರ್ಚಾದ್ದರ ಪರ್ಮಿಟ್ಟುಗಳ ಕೌಂಟರ್ ಫಾಯಿಲ್‌ಗಳು ಹುಷಾರಿನಿಂದ ವಿಲೇ ಮಾಡಿರತಕ್ಕದ್ದು. ಮುಂದಿನ ಖರ್ಚಿಗಾಗಿ ಖಾಲೀ ಪರ್ಮಿಟ್ಟುಗಳನ್ನು ಸೈನ್ ಮಾಡುವದನ್ನು ಅಡ್ಡೀ ಪಡಿಸಿದೆ. ಇಜಾರೆ ಮುಗಿದ ನಂತರ ಸದರೀ ಲೆಖ್ಖಗಳು ಪರ್ಮಿಟ್ಟುಗಳ ಕೌಂಟರ್ ಫಾಯಿಲ್‌ಗಳು ಸ್ಥಳದ ಎಕ್ಸೈಜ್ ಆಫೀಸರವರಲ್ಲಿ ಕೊಡಲ್ಪಡತಕ್ಕದ್ದು. ಡೆಪ್ಯುಟಿ ಕಮ್ಮಿಷನರು ಅಥವಾ ಅವರಿಂದ ನೌಕರರಾದ ಇತರ ಆಫೀಸರುಗಳು ಅಸಿಸ್ಟೆಂಟ್ ಇನ್ಸ್‌ಪೆಕ್ಟರುಗಳಿಗಿಂತಲೂ ಹುದ್ದೆಯಲ್ಲಿ ಕಮ್ಮಿಯಾಗಿರದ ಎಕ್ಸೈಜ್ ಆಫೀಸರುಗಳು ಕೇಳಿದಲ್ಲಿ ಸದರೀ ಲೆಖ್ಖಗಳನ್ನು ಹಾಜರ್ಪಡಿಸಬೇಕು. ಡೆಪ್ಯುಟಿ ಕಮ್ಮಿಷನರು ಅಥವಾ ಅಸಿಸ್ಟೆಂಟ್ ಇನ್ಸ್‌ಪೆಕ್ಟರಿಗಿಂತಲೂ ಹುದ್ದೆಯಲ್ಲಿ ಕಮ್ಮಿಯಾಗಿರದ ಎಕ್ಸೈಜ್ ನೌಕರರು ಆಗಿಂದಾಗ್ಯೆ ಅಪೇಕ್ಷಿಸುವಂಥಾ ಲೆಖ್ಖಗಳನ್ನು ವ ವರ್ತಮಾನವನ್ನು ಲೈಸೆನ್ಸ್‌ದಾರನು ತಡಮಾಡದೆ ಕೊಡತಕ್ಕದ್ದು.

573

(10) ಕ್ರಮವಾಗಿ ಲೈಸೆನ್ಸು ಪಡೆದ ಅಂಗಡಿಗಳು ಸಮೀಪದಲ್ಲಿ ಇಲ್ಲದೇ ಇರುವ ಪ್ರದೇಶಗಳಲ್ಲಿ ನಡೆಯುವ ಹಬ್ಬ, ಜಾತ್ರೆ ಮುಂತಾದ ಕಾಲಗಳಲ್ಲಿ ಶೇಂದಿಯನ್ನು ಬಿಕರೀ ಮಾಡಲು ತತ್ಕಾಲಕ್ಕೆ ಬೇಕಾದ ಲೈಸೆನ್ಸುಗಳನ್ನು ಕೊಡತಕ್ಕ ಅಧಿಕಾರವನ್ನು ಡೆಪ್ಯುಟಿ ಕಮ್ಮಿಷನರವರಿಗೆ ಉಳಿಸಿಕೊಂಡಿರುತ್ತದೆ. ಅಂಥಾ ಲೈಸೆನ್ಸುಗಳನ್ನು ಸಾಧಾರಣವಾಗಿ ಸದರೀ ಪ್ರದೇಶದ ಜಿಲ್ಲಾ ಅಮಾನಿಯಾಗಿ ಸರಬರಾಯಿ ಮಾಡುವ ದುಕಾನದಾರರಿಗೇ ಕೊಡತಕ್ಕದ್ದು. ಸದರೀ ಲೈಸೆನ್ಸುಗಳ ಅವಧಿಯು 15 ದಿವಸಗಳಿಗಿಂತಲೂ ಹೆಚ್ಚಾಗಿರಕೂಡದು. ಮತ್ತು ಅದಕ್ಕಾಗಿ ಪಾವತಿಯಾಗತಕ್ಕ ಮೊಬಲಗು ಡೆಪ್ಯುಟಿ ಕಮ್ಮಿಷನರವರಿಗೆ ಯುಕ್ತವಾಗಿ ತೋರಿದಂತೆ ಗೊತ್ತು ಮಾಡಲ್ಪಡಬಹುದು, ಹರಾಜು ಮೂಲಕವಾಗಿಯೂ ವಿಲೇವಾರಿ ಮಾಡಲು ಡೆಪ್ಯುಟಿ ಕಮ್ಮಿಷನರವರು ತೀರ್ಮಾನಿಸಬಹುದು.

(11) ಡೆಪ್ಯುಟಿ ಕಮ್ಮಿಷನರವರು ತಮಗೆ ಯುಕ್ತ ತೋರಿದಾಗ ಯಾವ ದುಕಾನಗಳನ್ನಾಗಲಿ ಮುಚ್ಚಲು, ಅಥವಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಿಧಿಸಲ್ಪಟ್ಟಿರುವ ಸ್ಥಳದಿಂದ 200 ಗಜಗಳ ವಳಗೆ ವರ್ಗಾಯಿಸಲು ಅಪ್ಪಣೆ ಕೊಡಬಹುದು. ಮಂಜೂರ್ಮಾಡಲ್ಪಟ್ಟ ಎಲ್ಲಾ ಅಂಗಡಿಗಳಲ್ಲಿಯೂ ಎಕ್ಸೈಜ್ ಡಿವಿಜನಲ್ ಆಫಿಸರವರು ಗೊತ್ತು ಮಾಡುವ ಮೊತ್ತದಷ್ಟು ಶೇಂದಿಯನ್ನು ದಾಸ್ತಾನಾಗಿ ಇಟ್ಟಿರಬೇಕು.

(12) ಅಂಗಡಿಯ ಯಾ ಅಂಗಡಿಗಳ ಸಮುದಾಯದ ಲೈಸೆನ್ಸದಾರನು ತನ್ನ ಲೈಸೆನ್ಸಿನ ವಾಯಿದೆವಳಗೆ ತನ್ನ ಶೇಂದಿ ಅಂಗಡಿ ಇರತಕ್ಕ ಸುತ್ತಲೂ 5 ಮೈಲಿ ಫಾಸಲೆಗಳೊಳಗಾಗಿ ಸರಬರಾಯಿ ಮಾಡತಕ್ಕ ಬಟ್ಟು ಸ್ವಾತಂತ್ರ್ಯದ ಹಕ್ಕಿನ ವಿಷಯದಲ್ಲಿ ಯಾವ ವಿಧವಾದ ಸಂಬಂಧವನ್ನು ಇಟ್ಟುಕೊಳ್ಳಕೂಡದು; ಅಥವಾ ಅದೇ ಸರಹದ್ದಿನೊಳಗೆ ಸರಬರಾಯಿ ಬಿಕರೀ ಮಾಡತಕ್ಕ ಬಟ್ಟು ಸ್ವಾತಂತ್ರ್ಯದ ಹಕ್ಕನ್ನು ವಹಿಸಿರತಕ್ಕ ಯಾವ ಮನುಷ್ಯನನ್ನಾಗಲಿ, ಶೇಂದಿ ಮಾರುವ ತನ್ನ ಬಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಪಾಲುದಾರನನ್ನಾಗಿ ಆಗಲಿ, ಯಾ ಸಂಬಂಧವುಳ್ಳವನನ್ನಾಗಲೀ ಇಟ್ಟುಕೊಳ್ಳಕೂಡದು. ಅಥವಾ ತನ್ನ ಲೈಸೆನ್ಸಿನ ವಾಯಿದೆ ಅಂಪರ್‌ವಾರಿ ಎಕ್ಸೈಜ್ ಕಮಿಷನರವರ ಲಿಖಿತಮೂಲಕವಾದ ಹುಕುಂ ಇಲ್ಲದೆ ಮೈಸೂರು ರಾಜ್ಯದ ಹೊರಗೆ ಯಾ ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ನಲ್ಲಿ ಇರುವ ಯಾವದೊಂದು ಶೇಂದಿ ಅಂಗಡಿಯಲ್ಲಿಯೂ ಅಥವಾ ಬಿಕರೀ ಗುತ್ತಾ ಫಿರ್ಕಾದಲ್ಲಿಯೂ ಪ್ರತ್ಯಕ್ಷವಾದ ಯಾ ಪರೋಕ್ಷವಾದ ಸಂಬಂಧವನ್ನು ಇಟ್ಟುಕೊಂಡಿರಕೂಡದು.

(13) ಲೈಸೆನ್ಸದಾರನು ಹಾಲಿ ಜಾರೀಲ್ಲಿರುವ ಎಕ್ಸೈಜ್ ಕಾನೂನುಗಳಿಗೂ ಅವುಗಳನ್ನನುಸರಿಸಿದ ನಿಬಂಧನೆಗಳಿಗೂ ಲೈಸೆನ್ಸಿನ ಷರತ್ತುಗಳಿಗೂ ಅನುಸಾರವಾಗಿ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು. ಲೈಸೆನ್ಸದಾರನು ಎಕ್ಸೈಜ್ ಕಮ್ಮಿಷನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೇ ಸಾಧನಗಳನ್ನು ಲೈಸೆನ್ಸ್ ಪಡದ ಯಾವ ಆವರಣದಲ್ಲಾದರೂ ಹೊಂದಿರಬಹುದು ಯಾ ಉಪಯೋಗಿಸಬಹುದು. ಲೈಸೆನ್ಸ್ ಪಡದ ಅಂಗಡಿಯನ್ನು ತನಿಖೆಮಾಡಲು ಅಧಿಕಾರವುಳ್ಳ ಆಫಿಸರುಗಳು ಆವರಣಗಳನ್ನು ಪ್ರವೇಶಮಾಡಿ ನೋಡುವದಕ್ಕೂ ಉಪಯೋಗಿಸತಕ್ಕ ಅಳತೇ ಸಾಧನಗಳನ್ನು ಮತ್ತು ಮಾರಲ್ಪಡುವ ಶೇಂದಿಯನ್ನು ಪರಿಕ್ಷೆಮಾಡುವದಕ್ಕೂ ಅಂಗಡಿಯಲ್ಲಿನ ಲೆಖ್ಖಗಳನ್ನು ತರಿಸಿ ತನಿಖೆಮಾಡುವದಕ್ಕೂ ಅಧಿಕಾರವುಳ್ಳವರಾಗಿರುತ್ತಾರೆ.

(14) ಎಕ್ಸೈಜ್ ಕಮಿಷನರವರ ಅಪ್ಪಣೆ ಶಿವಾಯಿ ಲೈಸೆನ್ಸ್ ಮಾರಿಕೆಯಿಂದಲಾಗಲೀ ದಾನ ಮೂಲಕವಾಗಿ ಆಗಲೀ ಅಥವಾ ಇತರ ವಿಧವಾಗಿ ಆಗಲಿ ವರ್ಗವಾಗತಕ್ಕದ್ದಲ್ಲ. ಯಾ ವಳಗೇಣಿ ಆಗತಕ್ಕದ್ದಲ್ಲ. ಅಂಗಡಿಗಳ ರಾಜೀನಾಮೆಯು ಪೂರ್ಣವಾಗಿಯೇ ಆಗಲಿ ಯಾ ಭಾಗವಾಗಿಯೇ ಆಗಲಿ ಡೆಪ್ಯುಟಿ ಕಮ್ಮಿಷನರವರಿಂದ ವಿಚಾರವಿಲ್ಲದೆ ತಿರಸ್ಕರಿಸಲ್ಪಡುವದು.

8. (1) ಈ ಕೆಳಗೆ ನಮೂದಿಸುವ ಜನರ ದರಖಾಸ್ತಿನಮೇಲೆ ನಿಬಂಧಿಸಿರುವ ನಮೂನೆಯಲ್ಲಿ ಮರವನ್ನು ಕಟ್ಟುವ ಬಗ್ಯೆ ಲೈಸೆನ್ಸಗಳು ಸಾದರ್ಮಾಡಲ್ಪಡತಕ್ಕದ್ದು.

(a) ಲೈಸೆನ್ಸ ಕೊಡಲ್ಪಟ್ಟಿರುವ ಶೇಂದಿ ಅಂಗಡಿಕಾರರ, ಅಥವಾ ಅವರಿಂದ ಅಧಿಕಾರಹೊಂದಿದ ಏಜಂಟರ.

(b) ಸನ್ 1898ನೇ ಇಸವಿ ಜೂನ್ 20ನೇ ಮರ್ಕುಂ 11897—906—Ex. 485ನೇ ನಂಬರುಳ್ಳ ಗವರ್ನಮೆಂಟ್ ಇಸ್ತಿಹಾರ್ ನಾಮೆಯನ್ನನುಸರಿಸಿ ಮನೆ ಕುಟುಂಬದವರ ನಿಜವಾದ ಸ್ವಂತ ಉಪಯೋಗಕ್ಕೋಸ್ಕರ ಬೇಕಾಗಿರುವ ಶೇಂದಿಯನ್ನು ವಿಧಾಯುಕವಾದ ಮರ ತೆರಿಗೆಯನ್ನು ಕೊಡಬೇಕಾದ ನಿರ್ಬಂಧವಿಲ್ಲದೆ ಎಕ್ಸೈಜ್ ಕಮ್ಮಿಷನರವರಿಗೆ ಅವಶ್ಯಕವೆಂದು ಕಾಣಬರುವ ಮರಗಳಿಂದ ತಯಾರುಮಾಡಲಿಕ್ಕೆ ಮಲನಾಡಿನಲ್ಲಿರುವ ಕಾಫಿತೋಟಗಳಲ್ಲಿಯೂ, ಕಾಫಿ ಹಿತ್ತಲುಗಳಲ್ಲಿಯೂ ಮತ್ತು ಬಾಗಗಳಲ್ಲಿಯೂ ಇರುವ ಮರಗಳ ಮಾಲೀಕರು.—

ಲೈಸೆನ್ಸುಗಳನ್ನು ದರಖಾಸ್ತುದಾರನ ಹೆಸರಿಗಾಗಲಿ ಯಾ ಆತನಿಂದ ನೇಮಿಸಲ್ಪಡುವ ಇತರ ಜನರ ಹೆಸರಿಗಾಗಲೀ ಕೊಡಬಹುದು.

(2) ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೆ ದರಖಾಸ್ತುಗಳನ್ನು ಸಂಬಂಧಪಟ್ಟ ಎಕ್ಸೈಜ್ ಇನ್‌ಸ್ಪೆಕ್ಟರವರಿಗೆ ನಿಬಂಧಿಸಿರುವ ನಮೂನೆಯಲ್ಲಿ ಸ್ಥಳದ ಖಜಾನೆಯ ಮೂಲಕ ಕೊಡಬೇಕು. ಸದರೀ ನಮೂನೆಗಳನ್ನು ಅವರಿಂದ ಯಾ ಅವರ ಕೈಕೆಳಗಿರುವ ಅಸಿಸ್ಟೆಂಟ್ ಇನ್‌ಸ್ಪೆಕ್ಟರುಗಳಿಂದ ಪಡೆಯಬಹುದು.

(3) ಸರ್ಕಾರಿ ಜಮೀನುಗಳಲ್ಲಿಯೂ ಯಾ ಇನಾಂ ವ ಕಾಯಂಗುತ್ತಾ ಜಮೀನುಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಸದರೀ ಮರಗಳ ಮಾಲೀಕರ ಅನುಮತಿಯನ್ನು ಪಡೆದಿರುವದಕ್ಕೆ ಸಾಧಕವಾಗಿ ಸದರೀ ಮಾಲೀಕರ ರುಜುಗಳನ್ನು ಮಾಡಿಸಬೇಕು. ಸ್ಟೇಟ್ ಫಾರೆಸ್ಟುಗಳಲ್ಲಿಯೂ ಯಾ ಪ್ಲಾಂಟೇಷನುಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಫಾರೆಸ್ಟ್ ರೇಂಜ್ ಆಫಿಸರ ಅನುಮತಿಯನ್ನು ಪಡೆದಿರುವದಕ್ಕೆ ಸಾಧಕವಾಗಿ ಅವರ ರುಜುಗಳನ್ನು ಮಾಡಿಸಬೇಕು.

(4) ಉತಾರು ಲೈಸೆನ್ಸುಗಳಿಗೆ ದರಖಾಸ್ತು ಮಾಡುವ ಜನರು ಶೇಂದಿ ಉತಾರಿಗೋಸ್ಕರ ಸದರೀ ಲೈಸೆನ್ಸುಗಳಲ್ಲಿ ನಮೂದಾಗಿರುವ ಮರಗಳ ಬಾಬತು ಮರತೆರಿಗೆ ಪಾವತಿ ಆಗಬೇಕಾಗಿರುವ ಎಲ್ಲಾ ಹಣವನ್ನು, ಸರ್ಕಾರೀ ಬಂಜರಿನಲ್ಲಿರತಕ್ಕ ಮರಗಳ ಮರದ ಮಾಲ್ಕಿಯನ್ನು ಅವುಗಳ ಮೇಲಿನ ಸೆಸ್ ಮೊಬಲಗನ್ನೂ ಸರ್ಕಾರಕ್ಕೆ ಕೊಡಲಿಕ್ಕೆ ಜವಾಬ್ದಾರರಾಗಿರತಕ್ಕದ್ದು.

(5) ಅಂಥಾ ದರಖಾಸ್ತು ದಾಖಲಾದ ಕೂಡಲೇ ಇನ್ಸ್‌ಪೆಕ್ಟರವರು ಸಬ್ ಇನ್ಸ್‌ಪೆಕ್ಟರ ಹುದ್ದೆಗೆ ಮೇಲ್ಪಟ್ಟ ಬುಡ್ಡಿ ಉದ್ಯೋಗಸ್ಥರಿಂದ ಮರಗಳಿಗೆ ಸಂಖ್ಯೆ ಹಾಕಿಸುವದಕ್ಕೂ ಮತ್ತು ಕಾಲಕ್ಕೆ ಸರಿಯಾಗಿ ಲೈಸೆನ್ಸನ್ನು ಕೊಡುವದಕ್ಕೂ ತರದೂದ್ ಮಾಡತಕ್ಕದ್ದು. ಈಚಲು ಮರಗಳ ದರಖಾಸ್ತುದಾರರು ಮರಗಳಮೇಲೆ ಅವಶ್ಯಕವಾಗಿರುವ ಜಾಗವನ್ನು ತಯಾರ್ಮಾಡಿ ನಂಬರು ಹಾಕತಕ್ಕ ಆಫೀಸರರು ಕೇಳಿದಾಗ ದರಖಾಸ್ತು ಮಾಡಲ್ಪಟ್ಟ ಮರಗಳನ್ನು ತೋರಿಸಬೇಕು. ಯುಕ್ತವಾದಷ್ಟು ವಿರಾಮನಿಸಿ ನೋಟೀಸ್ ಕೊಟ್ಟ ತರುವಾಯ ಹಾಗೆಮಾಡಲು ಅವರು ತಪ್ಪಿದರೆ ಅವರಿಂದ ಪಾವತಿ ಮಾಡಲ್ಪಟ್ಟ ಮರ ತೆರಿಗೆಯೂ ಮತ್ತು ಮರದ ಮಾಲ್ಕಿಯೂ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಯುಕ್ತ ತೋರುವಂತೆ ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡತಕ್ಕದ್ದು.

(6) ಡೆಪ್ಯುಟಿ ಕಮಿಷನರುಗಳು ಆಗಾಗ್ಯೆ ಎಕ್ಸೈಜ್ ಕಮಿಷನರವರ ಹುಕುಮಿಗೆ ಒಳಪಟ್ಟು ಕನಿಷ್ಟಪಕ್ಷ ಎಷ್ಟು ಮರಗಳಿಗೆ ಲೈಸೆನ್ಸ್ ಕೊಡಬಹುದೋ, ಮತ್ತು ಒಂದೊಂದು ದರಖಾಸ್ತಿನಲ್ಲಿ ಕನಿಷ್ಟಪಕ್ಷ ಎಷ್ಟು ಮರಗಳನ್ನು ದಾಖಲ್ಮಾಡಬಹುದೋ ಆ ಅಂಕಗಳನ್ನು ಆಗಿಂದಾಗ್ಯೆ ಗೊತ್ತುಮಾಡತಕ್ಕದ್ದು. ಶಿವಾಯಿ ಅವರು ಒಂದೊಂದು ದರಖಾಸ್ತಿನಲ್ಲಿ ಒಂದೇಗ್ರಾಮದ ಮರಗಳನ್ನು ದಾಖಲ್ಮಾಡಬೇಕೆಂದು ಹುಕುಂ ಮಾಡಬಹುದು.

(7) ತಕ್ಕ ಉದ್ಯೋಗಸ್ಥರು ಮರಗಳಿಗೆ ಸಂಖ್ಯೆ ಹಾಕುವ ಪರಿಯಂತರ ಯಾವ ಮರವನ್ನೂ ಕಟ್ಟಕೂಡದು, ಯಾವ ಮರದಿಂದಲೂ ಶೇಂದಿಯನ್ನು ಉತಾರು ಮಾಡಕೂಡದು, ಯಾವ ಮರಕ್ಕೂ ಗಡಿಗೆಯನ್ನು ಕಟ್ಟಕೂಡದು. ಪರಂತು ನಿಬಂಧಿಸಿರುವ ನಮೂನೆಯಲ್ಲಿ ದರಖಾಸ್ತನ್ನು ಸಂಬಂಧಪಟ್ಟ ಖಜಾನೆಗೆ ಕೊಟ್ಟ ಕೂಡ್ಲೆ ಶೇಂದಿ ಉತಾರಿಗೋಸ್ಕರ ರೇವು ಮಾಡಲಿಕ್ಕೆ ಗರಿಗಳನ್ನು ತೆಗದುಹಾಕಲಿಕ್ಕೂ, ಹೊಂಬಾಳೆಗಳನ್ನು ಯಾ ರೇವುಗಳನ್ನು ತಯಾರ್ಮಾಡಲಿಕ್ಕೂ ಉಪಕ್ರಮಿಸಬಹುದು.

(8) ಶೇಂದಿ ಉತ್ಪತ್ತಿಯಾಗತಕ್ಕ ಎಲ್ಲಾ ಮರಗಳಿಗೂ ಕೊಡುವ ಉತಾರ್ ಲೈಸೆನ್ಸುಗಳು ವರುಷಗಟ್ಲೆಯಾಗಿರತಕ್ಕದ್ದು. ಲೈಸೆನ್ಸದಾರನ ಅನುಕೂಲಕ್ಕಾಗಿ ಯಾವ ಕಾಲಕ್ಕೆ ಸಂಬಂಧಪಡುತ್ತವೋ ಆ ಕಾಲಕ್ಕೆ 15 ದಿವಸಗಳು ಮುಂಚಿತವಾಗಿ ಉತಾರ್ ಲೈಸೆನ್ಸ್ ಬಗ್ಯೆ ದರಖಾಸ್ತುಗಳು ಅಂಗೀಕರಿಸಲ್ಪಡುವವು, ಮರಗಳಿಗೆ ಸಂಖ್ಯೆ ಹಾಕಲ್ಪಟ್ಟು ಲೈಸೆನ್ಸುಗಳು ಕೊಡಲ್ಪಡುವವು; ಮತ್ತು ಸದರೀ ಕಾಲಕ್ಕೆ 8 ದಿವಸಗಳಿಗೆ ಮುಂಚಿತವಾಗಿ ಸಂಖ್ಯೆ ಹಾಕಲ್ಪಟ್ಟಿರುವ ಮೇಲ್ಕಂಡ ಮರಗಳಿಗೆ ಗಡಿಗೆಗಳನ್ನು ಕಟ್ಟಬಹುದು; ಆದರೆ ಶೇಂದಿ ಉತಾರು ಮುಂತಾದ್ದು ಸದರೀ ಕಾಲದ ಪ್ರಾರಂಭದ ಮೊದಲು ಜಾರಿಯಲ್ಲಿ ಬರತಕ್ಕದ್ದು. ಪರಂತು ಲೈಸೆನ್ಸಿನ ಕಾಲಾವಧಿಯಲ್ಲಿ ವಿನಹಾ ಬೇರೆ ಕಾಲದಲ್ಲಿ ಶೇಂದಿಯನ್ನು ಮರಗಳಿಂದ ಇಳಿಸಿಕೊಂಡು ಹೋಗಕೂಡದು.

(9) ಈ ಕೆಳಗೆ ನಮೂದಿಸಿರುವ ದರಗಳಂತೆ ಮರ ತೆರಿಗೆಯನ್ನು ಕೊಟ್ಟು ಶೇಂದಿ ಉತಾರ್ ಬಗ್ಯೆ ಲೈಸೆನ್ಸ್ ಪಡದ ಹೊರ್ತು ಯಾವ ಮರವನ್ನೂ ಕಟ್ಟಕೂಡದು.

ಮರದ ತರಹೆ	ಮರ ಒಂದಕ್ಕೆ ಲೋಕಲ್ ಸೆಸ್ ಶಿವಾಯಿ ವರುಷ ಒಂದಕ್ಕೆ ಕೊಡಬೇಕಾದ ಮರ ತೆರಿಗೆ.		
	ರೂ.	ಅ.	ಪೈ.
ಈಚಲು	1	1	0
ತೆಂಗು	2	2	0
ತಾಳೆ	1	9	6
ಬಗನಿ ಮ	1	9	6
ದಡಸಾಲು	0	8	6

ಟಿಪ್ಪಣಿ.—ಮೇಲಿನ (1)ನೇ ಕಲಂನಲ್ಲಿ ನಮೂದಿಸಿರುವ ವಿಷಯಗಳಲ್ಲಿ ಕೊಡಲ್ಪಡುವ ಲೈಸೆನ್ಸುಗಳಿಗೆ ಮೈಸೂರು ಸರ್ಕಾರಕ್ಕೆ ಮರ ತೆರಿಗೆಯನ್ನು ಕೊಡಬೇಕಾದ್ದಿಲ್ಲವು.

(10) ಮೇಲ್ಕಂಡ ತೆರಿಗೆ ಶಿವಾಯಿ, ಮೈಸೂರು ರಾಜ್ಯದ ಒಳಗೆ ಅಥವಾ ಹೊರಗೆ ಇರುವ ಅಥವಾ ಬೆಂಗಳೂರು ದಂಡಿನಲ್ಲಿ ಇರುವ ಅಂಗಡಿಗಳಿಗೆ ಸರಬರಾಯಿಗಾಗಿ ಉತಾರಾಗತಕ್ಕದ್ದಕ್ಕೆ ದರಖಾಸ್ತು ಬರುವ ಸರ್ಕಾರೀ ಮರಗಳಿಗೆ ಸಾಲಿಯಾನಾ ಮರ ಒಂದಕ್ಕೆ 4 ಆಣೆ ಪ್ರಕಾರ ಮರದ ಮಾಲ್ಕಿ ಮೊಬಲಗು 3 ಪೈ ಪ್ರಕಾರ ಲೋಕಲ್‌ಸೆಸ್ಸಿನಿಸಿ ವಸೂಲಾಗತಕ್ಕದ್ದು.

ಟಿಪ್ಪಣಿ.—ಸರ್ಕಾರಿ ಹಿಡುವಳಿ ಜಮೀನಿನಲ್ಲಿರುವ ಮರಗಳನ್ನು ಮಾಲೀಕರ ಅನುಮತಿಯಿಲ್ಲದೆ ಕಟ್ಟಕೂಡದು. ಇನಾಂ ವ ಕಾಯಂಗುತ್ತಾ ಜಮೀನಿನಲ್ಲಿರುವ ಮರಗಳ ವಿಷಯದಲ್ಲಿ ಹಾಲಿ ಏರ್ಪಾಟುಗಳು ಜಾರೀಲಿರತಕ್ಕದ್ದು. ಪರಂತು ಆ ಮರಗಳು ಸರ್ಕಾರದಿಂದ ಮರ ತೆರಿಗೆ ವಸೂಲ್ಮಾಡಲಿಕ್ಕೆ ಗುರಿಯಾಗಿರತಕ್ಕದ್ದು.

ಸಂಬಂಧಪಟ್ಟ ಆಯಾಯ ಇಲಾಖೆಗಳಿಗೆ ಈ ಮರದ ಮಾಲ್ಕಿ ಮೊಬಲಗನ್ನು ಜಮೆ ಕಟ್ಟತಕ್ಕದ್ದು.

(11) (a) ದರಖಾಸ್ತು ಬರುವ ಮರಗಳ ಮೇಲಿನ ಮರದ ಮಾಲ್ಕಿ ಮೊಬಲಗು ಅದರ ಮೇಲಿನ ಸೆಸ್ ಮೊಬಲಗೂ ಮತ್ತು ಮರತೆರಿಗೆ ಮೇಲಿನ ಸೆಸ್ ಮೊಬಲಗೂ ಉತಾರ್ ಲೈಸೆನ್ಸಿಗೆ ದರಖಾಸ್ತು ಕೊಡುವಾಗ ಪೂರಾ ಪಾವತಿಯಾಗತಕ್ಕದ್ದು.

(b) ಎಕ್ಸೈಜ್ ಕಮಿಷನರ್ ಸಾಹೇಬರವರು ಬೇರೆ ಹುಕುಂ ಕೊಡದೆ ಇದ್ದ ಪಕ್ಷದಲ್ಲಿ ಮರತೆರಿಗೆ ಮೊಬಲಗು ಈ ಳಗೆ ನಮೂದ್ ಮಾಡಿರುವ ಕಿಸ್ತುಗಳಲ್ಲಿ ಪಾವತಿ ಮಾಡಲ್ಪಡತಕ್ಕದ್ದು.

ಲೈಸೆನ್ಸಗಳಿಗಾಗಿ ದರಖಾಸ್ತುಗಳನ್ನು ಕೊಡತಕ್ಕ ಕಾಲ.	ಲೈಸೆನ್ಸಿಗೆ ದರಖಾಸ್ತು ಮಾಡುವಾಗ ಕೊಡಬೇಕಾದ ಮರ ತೆರಿಗೆ ಮೊಬಲಗಿನ ಪ್ರಮಾಣ.	ಮೂರನೇ ತಿಂಗಳ ಗುರ್ರೇ ತಾರೀಖಿನಲ್ಲಿ ಪಾವತಿ ಯಾಗಬೇಕಾದ ಮರ ತೆರಿಗೆ ಪ್ರಮಾಣ.
1904ನೇ ಇಸವಿ ಜುಲೈ ಗುರ್ರೇ ಲಾಗಾಯಿತು 1905ನೇ ಏಪ್ರಿಲ್ 30ನೇ ತಾರೀಖಿನ ವಳಗಾಗಿ.	ಮೂರರಲ್ಲಿ ಒಂದುಭಾಗ.	ಉಳಿದ ಮೂರರಲ್ಲಿ ಎರಡುಭಾಗವು.
1905ನೇ ಇಸವಿ ಮೇ ಗುರ್ರೇ ಲಾಗಾಯಿತು 1905ನೇ ಜೂನ್ 30ನೇ ತಾರೀಖಿನ ವಳಗಾಗಿ.	ಎಲ್ಲಾ.	ಇಲ್ಲಾ.

(c) ನಿರ್ಣಯಿಸಿದ ಕಾಲದೊಳಗಾಗಿ ಯಾವ ಕಿಸ್ತು ಮೊಬಲಗನ್ನಾದರೂ ಪಾವತಿ ಮಾಡದೇ ಇದ್ದಲ್ಲಿ ಎಕ್ಸೈಜ್ ರೆಗ್ಯುಲೇಷನ್ 26ನೇ ಸೆಕ್ಷನ್ ಮೇರೆಗೆ ಲೈಸೆನ್ಸ್ ರದ್ದು ಯಾ ಮೋಕೂಫ್ ಮಾಡಲ್ಪಡಲು ಗುರಿಯಾಗಿರುತ್ತದೆ.

(d) ಲೈಸೆನ್ಸುದಾರನು ತಪ್ಪಿತಸ್ಥನಾಗಿ ಅವನ ಅಂಗಡಿಯು ಮುಸೆರಾ ಹರಾಜು ಮಾಡಲ್ಪಟ್ಟರೆ ಸರ್ಕಾರದ ಮರಗಳಿಗೆ ಅವನಿಗೆ ಇರತಕ್ಕ ಹಕ್ಕು ಬಾಧ್ಯತೆಯು ನಿಂತುಹೋಗುತ್ತದೆ.

(e) ಮೇಲ್ಕಂಡಂತೆ ನಡೆಯಲು ತಪ್ಪಿದಲ್ಲಿ ಅಮಲ್ದಾರರು ಡೆಪ್ಯುಟಿ ಕಮಿಷನರವರ ಹುಕುಂ ಪಡದು ಬಾಕಿ ನಿಂತಿರುವ ಮೊಬಲಗು ಪಾವತಿ ಮಾಡಲ್ಪಡುವವರಿಗು ಉತಾರು ಲೈಸೆನ್ಸನ್ನು ಮೋಕೂಫ್ ಮಾಡಬಹುದು. ಹಾಗೆ ಮೋಕೂಫ್ ಮಾಡಿದ್ದರ ನೋಟೀಸು ತನಿಗೆ ಬಂದಿದ್ದರಮೇಲೆ ತಪ್ಪಿತಸ್ಥನಾದ ಲೈಸೆನ್ಸುದಾರನು ಮರಗಳನ್ನು ಉತಾರು ಮಾಡುತ್ತಲೇನೇ ಇದ್ದಲ್ಲಿ ಅನ್ಯಾಯವಾಗಿ ಉತಾರ್ಮಾಡಿದ ತಕ್ಸೀರಿಗೆ ಒಳಪಡುತ್ತಾನೆ.

(12) ಚಾಪೇ ಮಾಡುವದಕ್ಕಾದರೂ ಹಗ್ಗ ಮಾಡುವದಕ್ಕಾದರೂ ಗೂಡೆಗಳು ಮಾಡುವದಕ್ಕಾದರೂ ಯಾ ವ್ಯವಸಾಯ ಯಾ ಇತರ ಕಾರ್ಯಗಳಿಗಾದರೂ ಈಚಲು ಗರಿಗಳನ್ನು ಕಡಿಯಲು ಲೈಸೆನ್ಸ್ ಪಡೆದಿರುವವರು ಹೆಂಡವನ್ನು ಕಟ್ಟಲು ಊಳಿಸಿರುವ ಮರಗಳನ್ನು ಬಿಟ್ಟು ಅಂಥಾ ಕಾರ್ಯಗಳಿಗಾಗಿ ಗೊತ್ತು ಮಾಡಲ್ಪಟ್ಟಿರುವ ಬೇರೆ ಮರಗಳನ್ನು ಉಪಯೋಗಿಸಿಕೊಳ್ಳುವಾಗ ಲೈಸೆನ್ಸ್‌ದಾರನು ಅವರ ಕಾರ್ಯಗಳಲ್ಲಿ ಪ್ರವೇಶ ಮಾಡಬಾರದು.

(13) ಲೈಸೆನ್ಸ್‌ದಾರನು ಆತನಿಗೆ ಕೊಡಲ್ಪಟ್ಟ ಲೈಸೆನ್ಸನ್ನು ಆತನ ಅಂಗಡಿಯಲ್ಲಿ ಬಹಿರಂಗವಾದ ಸ್ಥಳದಲ್ಲಿಡಬೇಕು.

(14) ಸ್ವದೇಶ ಭಾಷೆಯಲ್ಲಿ ದುಕಾನ್‌ದಾರನ ಹೆಸರು, ಲೈಸೆನ್ಸ್ ನಂಬರ್ ಮತ್ತು ಆತನಿಂದ ಮಾರಲ್ಪಡುವ ಶೇಂದಿಯ ಖರೀದಿ ನಮೂದಿನಿಂದ ಪ್ರತಿ ಅಂಗಡಿಯ ಮುಂಭಾಗದಲ್ಲಿ ಒಂದು ಹಲಿಗೆಯು ಬಹಿರಂಗವಾಗಿ ತಗಲಿ ಹಾಕಲ್ಪಡಬೇಕು. ಕುಷ್ಟರೋಗದಿಂದಲಾಗಲೀ ಅಥವಾ ಇತರ ಅಂಟುರೋಗದಿಂದಲಾಗಲೀ ಪೀಡಿತರಾದ ಜನಗಳಿಂದ ಶೇಂದಿಯನ್ನು ಬಯ್ಯುವುದಕ್ಕಾಗಲೀ ಅಥವಾ ಮಾರುವುದಕ್ಕಾಗಲೀ ಮತ್ತು ಅಂಗಡಿಯಲ್ಲಿ ಅಂಥಾ ಜನರನ್ನು ನೌಕರಮಾಸೇರಾಗಿ ಇಟ್ಟುಕೊಳ್ಳುವುದಕ್ಕಾಗಲೀ ಅಡ್ಡಿಪಡಿಸಲ್ಪಟ್ಟಿರುತ್ತೆ.

(15) ಲೈಸೆನ್ಸುದಾರನು ತನ್ನ ಅಂಗಡಿಯಲ್ಲಿ ನಿಷಾವನ್ನೂ, ನೆಮ್ಮದಿಗೆ ಭಂಗವನ್ನೂ, ಜೂಜಾಡುವದನ್ನೂ, ಅಡ್ಡಿ ಮಾಡತಕ್ಕದು.

(16) ಸೂರ್ಯೋದಯಕ್ಕೆ ಮುಂಚೆ ಯಾವ ಅಂಗಡಿಯೂ ಯಾ ಕೋಠಿಯೂ ತೆಗೆಯಲ್ಪಡಕೂಡದು, ಮತ್ತು ಪ್ರತ್ಯೇಕವಾದ ಅಪ್ಪಣೆ ಹೊಂದಿದ ಶಿವಾಯಿ ರಾತ್ರಿ 9 ಘಂಟೆ ನಂತರ ತೆರೆಯಲ್ಪಟ್ಟಿರಕೂಡದು. ಡೆಪ್ಯುಟಿ ಕಮಿಷನರ್ ಸಾಹೇಬರವರು ಅಂಗಡಿಯನ್ನು ಹಂಗಾಮಿಯಾಗಿಯಾಗಲಿ ಅಥವಾ ಕಾಯಂ ಆಗಿ ಆಗಲೀ ಮುಚ್ಚುವದಕ್ಕೆ ಹುಕುಂ ಕೊಟ್ಟ ಹೊರ್ತು ನಿಬಂಧಿಸಿರುವ ಕಾಲಗಳಲ್ಲಿ ಅಂಗಡಿಯನ್ನು ತೆಗದಿರಬೇಕು.

(17) ಲೈಸೆನ್ಸ್‌ದಾರನು ಚೋರರು, ಕಳ್ಳರು, ಪೋಲೀ ಮನುಷ್ಯರು, ದೊಂಬಿ ಮಾಡತಕ್ಕವರು, ಹಾದರಗಿತ್ತಿಯರು, ಶಿಪಾಯಿಗಳು, ಫೌಜಿನಿಂದ ಫರಾರಿಯಾಗಿ ಬಂದವರೆಂದು ಗೊತ್ತಿದ್ದ ಅಥವಾ ನಂಬಲ್ಪಟ್ಟಿದ್ದವರು ಅಂಥಾವರನ್ನು ಇಟ್ಟುಕೊಳ್ಳ

ಕೂಡದು. ರಾತ್ರಿ ಕಾಲದಲ್ಲಿ ಯಾವ ಮನುಷ್ಯನಿಗೂ ಆಶ್ರಯ ಕೊಡಕೂಡದು; ಆದರೆ ಅಂಥಾ ಜನರು ಯಾರಾದರೂ ಅಂಗಡಿಗೆ ಬಂದರೆ ಸಮೀಪದಲ್ಲಿರುವ ಮೇಜಿಸ್ಟ್ರೇಟರಿಗೆ ಯಾ ಪೋಲೀಸ್ ಆಫಿಸರರಿಗೆ ವರ್ತಮಾನ ಕೊಡಬೇಕು.

(18) ಲೈಸೆನ್ಸ್‌ದಾರನು ಶೇಂದಿಗೆ ಅಡವಾಗಿ ಯಾ ಗಿರವಿಯಾಗಿ ಧಾನ್ಯ, ಒಡವೆ, ಸಾಮಾನು, ಉಡುಪು ಯಾ ಇತರ ಪದಾರ್ಥವನ್ನು ತೆಗದುಕೊಳ್ಳಕೂಡದು. ಅಂಥಾ ಯಾವ ಪದಾರ್ಥವಾದರೂ ತನ್ನಲ್ಲಿ ಬಂದರೆ ಸಮೀಪದಲ್ಲಿರತಕ್ಕ ಮೇಜಿಸ್ಟ್ರೇಟರಿಗೆ ಯಾ ಪೋಲೀಸ್ ಆಫಿಸರರಿಗೆ ವರ್ತಮಾನ ಕೊಡಬೇಕು.

(19) ಯಾವ ಲೈಸೆನ್ಸ್‌ದಾರ ಯಾ ಬಿಕರೀದಾರ ಯಾ ಚಿಕರೀದಾರರೇ ಆಗಲಿ ಮೂರು ಅಳೆಯುವ ಶೇರಿಗಿಂತಲೂ ಹೆಚ್ಚಾಗಿ ಶೇಂದಿಯನ್ನು ದುಕಾನಿನಲ್ಲಿ ಒಬ್ಬನೇ ಮನುಷ್ಯನಿಂದ ಒಂದೇ ಕಾಲದಲ್ಲಿ ಪಾನಮಾಡಲು ಕೊಡಬಾರದು; ತಮ್ಮಿಂದ ಹೊಂದಲ್ಪಟ್ಟಿರುವ ಅಪ್ಪಣೇ ಚೀಟಿಯಲ್ಲಿ ವಿವರಿಸಿರುವ ಶೇಂದಿಯ ಪರಿಮಾಣವನ್ನು ಸಾಗಿಸಿಕೊಂಡು ಹೋಗಲು ಅಪ್ಪಣೆ ಪಡೆದಿರುವ ರೊಟ್ಟೀ ಕಾರ್ಖಾನೆಯವರು ವಿನಹಾ ಮತ್ಯಾರಿಗು ಅಪ್ಪಣೆ ಚೀಟಿ ಉಂಟಾಗಿದ್ದರೆ ಹೊರತಾಗಿ ಎರಡು ಇಂಪೀರಿಯಲ್ ಕ್ವಾರ್ಟ್‌ಗಳಿಗೆ ಅಥವಾ ಎರಡು ಸೇರುಗಳಿಗೆ ಅಧಿಕವಾಗಿ ಹೊರಗ ತೆಗದುಕೊಂಡು ಹೋಗಲು ಅವಕಾಶ ಕೊಡಬಾರದು. ಒಂದು ಇಂಪೀರಿಯಲ್ ಗ್ಯಾಲನ್ ಯಾ 4 ಅಳೆಯುವ ಸೇರುಗಳ ವರಿಗೂ ಅಪ್ಪಣೆ ಚೀಟಿ ಪಡೆದು ಪಾನ ಮಾಡಲಿಕ್ಕೆ ಶೇಂದಿಯನ್ನು ತೆಗದುಕೊಂಡು ಹೋಗಲು ಅವಕಾಶ ಕೊಡಬಹುದು.

(20) ಲೈಸೆನ್ಸ್‌ದಾರನು ಯಾವ ಎಕ್ಸೈಜ್ ಉದ್ಯೋಗಸ್ಥನಲ್ಲಿಯೂ ಹಣ ಸಂಬಂಧವಾದ ಲೇವಾದೇವಿಯನ್ನು ಇಟ್ಟುಕೊಳ್ಳಕೂಡದು.

(21) ಬಿಕರಿಯು ಪ್ರಶಸ್ತವಾಗಿರುವ ಕಟ್ಟಡದಲ್ಲಿ ಮಾಡಲ್ಪಡತಕ್ಕದ್ದು. ಸದರೀ ಕಟ್ಟಡಕ್ಕೆ ಒಂದೇ ಬಾಗಲು ಇರತಕ್ಕದ್ದು. ಹಿಂಭಾಗದಲ್ಲಾದರು ಪಕ್ಕಗಳಲ್ಲಿಯಾದರೂ ಕಿಟಕಿಯಾಗಲಿ ಗಂಡಿಯಾಗಲೀ ಇರಕೂಡದು. ಶೇಂದಿಯನ್ನು ಮಾರುವ ಜಗಲಿಯು ಅಂಗಡೀ ಒಳಗಡೆ ಇರುವ ಜನಗಳೂ ಅಂಗಡೀಮುಂದೆ ಬೀದೀಲಿ ತಿರಗಾಡುವ ಜನಗಳಿಗೆ ಕಾಣುವಹಾಗೆ ಬಾಗಲಿಗೆ ಎದುರಾಗಿ ಇರತಕ್ಕದ್ದು. ಮತ್ತು ಇದರಲ್ಲಿ ಎರಡನೇ ಕೊಠಡಿ ಶೇಂದಿಯನ್ನು ಮಾರುವದಕ್ಕೆ ಉಪಯೋಗಿಸಲೂ ಕೂಡದು ಅಥವಾ ಗಿರಾಕಿಗಳಿಗೋಸ್ಕರ ತೆಗೆದು ಇರಲೂಕೂಡದು.

(22) ಶೇಂದಿಯಿಂದ ಸಾರಾಯಿ ಭಟ್ಟೀ ಇಳಿಸುವದು ಸಂಪೂರ್ಣವಾಗಿ ಅಡ್ಡಿಮಾಡಲ್ಪಟ್ಟಿದೆ.

(23) ಯಾವ ಯೂರೋಪಿಯನ್ ನಾನ್ ಕಮಿಷನ್ಡ್ ಆಫಿಸರ್, ಅಥವಾ ಪ್ರೈವೆಟ್ ಯಾ ಸೋಲ್ಜರಾದರು, ಅಥವ ಸೈನ್ಯಗಳ ಮೊಕ್ಕಾಂಗಳೊಡನೆ ಹೋಗುವ ಯಾವ ಯುರೋಪಿಯನ್ ಯಾ ಯೂರೇಷಿಯನ್ನಿಗಾದರೂ ಅಥವಾ ಮೇಲೆ ಹೇಳಲ್ಪಟ್ಟ ಜನಗಳ ಸಂಸಾರಗಳ ಪೈಕಿ ಯಾರೊಬ್ಬರಿಗಾದರೂ ಕಮ್ಯಾಂಡಿಂಗ್ ಆಫಿಸರವರ ಅಥವಾ ಈ ವಿಷಯದಲ್ಲಿ ಅವರಿಂದ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯ ಲಿಖಿತಮೂಲಕವಾದ ಅಪ್ಪಣೆಯಿಲ್ಲದೆ ಶೇಂದಿಯನ್ನು ಮಾರಲೂಕೂಡದು ಕೊಡಲೂ ಕೂಡದು, ಮತ್ತು ಅವರು ಯಾವ ಯೂರೋಪಿಯನ್ ಯಾ ಯೂರೇಷಿಯನ್ ನಾವಿಕನಿಗೂ ಮತ್ತು ಉದ್ಯೋಗದ ಮೇಲಿರುವ ಕಾಲದಲ್ಲಿ ಯಾವ ಶಿಪಾಯಿಗೂ ಪೋಲೀಸ್ ನೌಕರನಿಗೂ, ಎಕ್ಸೈಜ್ ಆಫಿಸರರಿಗೂ ರೈಲ್ವೆ ಕಂಪನಿಯ ನೌಕರನಿಗೂ, ಮತ್ತು ಪೋಲೀಸ್ ಮೊಹಸಲಿನಲ್ಲಿರುವ ಯಾವ ಯೂರೋಪಿಯನ್ ಫ್ರೀ ಮನುಷ್ಯನಿಗೂ ಹನ್ನೆರಡು ವರುಷಗಳ ವಯಸ್ಸಿನೊಳಗಾಗಿರುವ ಯಾವ ಮಗುವಿಗೂ, ಅಥವಾ ಯಾವ ಹುಚ್ಚನಿಗು ಆವರಣದಲ್ಲಿ ಕುಡಿಯುವದಕ್ಕಾಗಿ ಶೇಂದಿಯನ್ನು ಮಾರಕೂಡದು ಯಾ ಕೊಡಕೂಡದು. ಇವಾಯು ಶೇಂದಿಯನ್ನು ಸಾಲವಾಗಿ ಮಾರಕೂಡದು.

(24) ಯೂರೋಪಿಯನ್ ಯಾ ನೇಟಿವ್ ಸೈನ್ಯದ ರಿಜಿಮೆಂಟ್ ಯಾ ಸಮೂಹವು ಪ್ರಯಾಣ ಮಾಡುತ್ತಿರುವಾಗ ಯಾ ಸಮೀಪದಲ್ಲಿ ಮೊಕ್ಕಾಂ ಮಾಡಿರುವಾಗ ಅವರ ಪ್ರಯಾಣದ ಮಾರ್ಗದಲ್ಲಿ ಯಾ ಆ ಮಾರ್ಗದ ಸಮೀಪದಲ್ಲಿರುವ ಎಲ್ಲಾ ಶೇಂದಿ ಬಿಕರೀ ಅಂಗಡಿಗಳನ್ನು ಮುಚ್ಚುವಂತೆ ಡೆಪ್ಯುಟಿ ಕಮಿಷನರವರು ಅಥವಾ ತಾಲ್ಲೂಕು ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರು ಅಪ್ಪಣೆ ಮಾಡಬಹುದು.

(25) ಸರ್ಕಾರದವರು ಲೈಸೆನ್ಸುದಾರನಿಗೆ 15 ದಿವಸಗಳ ಮುಂಚಿನ ನೋಟೀಸು ಕೊಟ್ಟು ತಕ್ಕ ಕಾರಣಗಳಿಂದ ಆತನಿಗೆ ನ್ಯಾಯವಾಗಿ ತೋರುವ ಪರಿಹಾರದ್ರವ್ಯವನ್ನು ಕೊಟ್ಟು ಗುತ್ತಿಗೆಯನ್ನು ಮೋಬದಲು ಮಾಡುವ ಅಧಿಕಾರವನ್ನು ಉಳಿಸಿಕೊಂಡಿರುತ್ತಾರೆ, ಮತ್ತು ಒಳದೇಶದ ಬೀರು ವಿಷಯದಲ್ಲಿ, ಯಾ ಶೇಂದಿ ವಿನಹ ಇತರ ವಿಧವಾದ ಯಾವ ಮದ್ಯದ ವಿಷಯದಲ್ಲಿ ಸರ್ಕಾರದವರು ಯಾವದಾದರೂ ಏರ್ಪಾಟು ಮಾಡಿದ್ದಲ್ಲಿ ಲೈಸೆನ್ಸ್‌ದಾರನಿಗೆ ಪರಿಹಾರದ್ರವ್ಯಕ್ಕೆ ಯಾ ರಿಮಿಷನ್ ಎಂಬ ಸೋಡಿಗೆ ಹಕ್ಕು ಇರಲಾರದು.

(26) ಡೆಪ್ಯುಟಿ ಕಮಿಷನರವರ ಮಂಜೂರನ್ನು ಪಡೆಯದೆ ಯಾವ ಹಕ್ಕಿನ ಅಡಳಿತಕ್ಕೂ ಲೈಸೆನ್ಸ್‌ದಾರನಿಂದ ಯಾವ ಮನುಷ್ಯನೂ ನೇಮಿಸಲ್ಪಡಕೂಡದು, ಮುತಾಲೀಕನಿಂದ ತೆಗೆಯಲ್ಪಟ್ಟಿರುವ ಎಲ್ಲಾ ಒಪ್ಪಂದಗಳ ಆರ್ಜಿಗಳನ್ನು ಬರದು ಕೊಟ್ಟ ತಾರೀಖು ಲಾಗಾಯಿತು ಒಂದು ತಿಂಗಳೊಳಗೆ ಡೆಪ್ಯುಟಿ ಕಮಿಷನರವರಲ್ಲಿ ಇಡಲ್ಪಡಬೇಕು.

(27) ಶೇಂದಿಯನ್ನು ತಯಾರು ಮಾಡುವದಕ್ಕೆ ಯಾ ಒಯ್ಯುವದಕ್ಕೆ ಯಾ ಬಿಕರಿ ಮಾಡುವದಕ್ಕೆ ತನ್ನಿಂದ ನೌಕರಿಗಿಡಲ್ಪಟ್ಟ ಯಾವ ಮನುಷ್ಯನಾದರೂ ಎಕ್ಸೈಜ್ ಕಾನೂನಿಗ ಅಥವಾ ಆತನು ಬರದು ಕೊಟ್ಟ ಕರಾರುಗಳಿಗೆ ವಿರೋಧವಾಗಿ

ನಡೆದ ಸಂಗತಿಯು ಲೈಸೆನ್ಸ್‌ದಾರನ ತಿಳುವಳಿಕೆಗೆ ಬಂದಲ್ಲಿ ಆತನು ಆ ಸಂಗತಿಯನ್ನು ಡೆಪ್ಯುಟಿ ಕಮಿಷ್ನರವರಿಗೆ ಇತ್ತಿಲ್ಲೆ ಮಾಡಿ ಅಂಥಾ ಮನುಷ್ಯನನ್ನು ಮುಂದೆ ಕೆಲಸದಲ್ಲಿಡುವ ವಿಷಯದಲ್ಲಿ ಡೆಪ್ಯುಟಿ ಕಮಿಷ್ನರವರಿಂದ ಕೊಡಲ್ಪಡುವ ಹುಕುಮನ್ನು ಜಾರಿಲಿ ತರತಕ್ಕದ್ದು.

(28) ಲೈಸೆನ್ಸ್ ಸಹಾರ ಶೇಂದಿಯನ್ನು ಸಾಗಿಸುವದಕ್ಕಾಗಿ ಉಪಯೋಗಿಸುವ ಗಾಡಿಗಳಿಗೆ ಮೊಕತರ್ಫಾ ತೆರಿಗೆಯನ್ನು ಸಲ್ಲಿಸತಕ್ಕದ್ದು. ಆದರೆ ಅಂಥಾ ಗಾಡಿಗಳು ಸರ್ಕಾರದ ನೌಕರೀಬಗ್ಗೆ ಹಿಡಿಯಲ್ಪಡಕೂಡದು.

(29) ಕ್ರಮವಾಗಿ ನಂಬರ್ ಹಾಕಲ್ಪಟ್ಟ ಪುಟಗಳುಳ್ಳ ಒಂದು ಇನ್ಸ್‌ಪೆಕ್ಷನ್ ನೋಟ ಪುಸ್ತಕವು ತನಿಖೆ ಮಾಡತಕ್ಕ ಆಫೀಸರುಗಳ ಷರಾ ನಮೂದಿಗೋಸ್ಕರ ಇಟ್ಟುಕೊಳ್ಳಲ್ಪಡತಕ್ಕದ್ದಲ್ಲದೆ ಸದರೀ ಪುಸ್ತಕವು ರೇಂಜ್ ಛಾರ್ಜಿನಲ್ಲಿರುವ ಇನ್ಸ್‌ಪೆಕ್ಟರೇ ಆಗಲಿ ಯಾ ಅವರಿಂದ ಅಧಿಕಾರ ಪಡೆದ ಮತ್ಯಾವ ಆಫೀಸರರೇ ಆಗಲಿ ರಸೀತಿ ಕೊಟ್ಟಲ್ಲಿ ಅವರಿಗೆ ಕೊಡಲ್ಪಡತಕ್ಕದ್ದು.

(30) ಯಾವ ಮನುಷ್ಯನ ವಿಷಯದಲ್ಲಿ ಆದರೂ ಇಂಡಿಯನ್ ಪೀನಲ್ ಕೋಡ್ ರೀತ್ಯಾ ಯಾವದಾದರೂ ಕ್ರೂರವಾದ ಅಕ್ರಮಕ್ಕೆ ದರ್ಯಾಫ್ತಿಯಾಗಿ ತಪ್ಪು ಸಾಬೀತಾಗಿದ್ದಲ್ಲಿ, ಅಂಥಾವನನ್ನು ಶೇಂದಿಯನ್ನು ಇಳಿಯುವದಕ್ಕಾದರೂ ಯಾ ಮಾರುವದಕ್ಕಾದರೂ ಡೆಪ್ಯುಟಿ ಕಮಿಷ್ನರವರ ಅಪ್ಪಣೆ ಇಲ್ಲದೆ ನೇಮಿಸಿಕೊಳ್ಳಕೂಡದು.

(31) ಮದ್ರಾಸ್ ರಾಜ್ಯದಲ್ಲಿರುವ ಮರಗಳಿಂದ ಉತಾರಾಗುವ, ಆದರೆ ಮೈಸೂರು ದೇಶದಲ್ಲಿ ಉಪಯೋಗಿಸಲ್ಪಡುವ ಶೇಂದಿಗೋಸ್ಕರ ಪಾವತಿ ಆಗಬೇಕಾದ ಮರತೆರಿಗೆಯು ಮೈಸೂರು ಸರ್ಕಾರಕ್ಕೆ ಜಮೆ ಆಗತಕ್ಕದ್ದು. ಅಂಥಾ ವಿಷಯಗಳಲ್ಲಿ ಉಭಯ ಸರಹದ್ದುಗಳ ಪೈಕಿ ಯಾವ ಕಡೆಯಲ್ಲಿ ಅತ್ಯಂತ ಜಾಸ್ತಿ ದರವಿರುತ್ತೋ ಆ ದರದಂತೆಯೇ ಯಾವಾಗಲೂ ಮರತೆರಿಗೆಯು ಪಾವತಿ ಮಾಡಲ್ಪಡತಕ್ಕದ್ದು. ಮೈಸೂರು ದೇಶದ ಅಂಗಡಿಕಾರರು ಮದ್ರಾಸ್ ರಾಜ್ಯದಲ್ಲಿ ಯಾವ ಮರಗಳಿಂದ ಶೇಂದಿಯನ್ನು ಉತಾರ್ ಮಾಡಲಿಕ್ಕೆ ಲೈಸೆನ್ಸ್‌ಗಳನ್ನು ಪಡೆಯುವಿಕೆಯ ಉದ್ದೇಶದಿಂದ ಇರುವರೋ ಅಂಥಾ ಮರಗಳ ಬಾಬತು ಮರ ತೆರಿಗೆಯನ್ನು ಮೈಸೂರು ದೇಶದಲ್ಲಿ ಸಂಬಂಧಪಟ್ಟ ತಾಲ್ಲೂಕು ಅಮಲ್ದಾರ್ರಿಗೆ ಒಂದೇ ಖಿಸ್ತಿನಲ್ಲಿ ಪಾವತಿಮಾಡತಕ್ಕದ್ದು. ಸದರೀ ಅಮಲ್ದಾರರು ವಿಧಾಯಕವಾದ ನಮೂನೆಯಲ್ಲಿ ಒಂದು ರಶೀತಿಯನ್ನು ಕೊಡಬೇಕಲ್ಲದೆ ಸದರೀ ದರಖಾಸ್ತುದಾರನು ಉತಾರ್ ಲೈಸೆನ್ಸ್‌ಗಳನ್ನು ಪಡೆಯಲಿಕ್ಕೆ ಹಕ್ಕುದಾರನಾಗಿರುತ್ತಾನೆಂದು ಆ ರಶೀತಿ ಕೆಳಗೆ ದೃಢಪಡಿಸಿ ರುಜು ಮಾಡಬೇಕು! ಸದರೀ ದರಖಾಸ್ತುದಾರನು ಮದ್ರಾಸ್ ಸರ್ಕಾರದ ಮರ ಕಟ್ಟುವ ನಿಬಂಧನೆಗಳ ಪ್ರಕಾರ ಬ್ರಿಟಿಷ್ ಸರ್ಕಾರದವರಿಗೆ ದರಖಾಸ್ತು ಮಾಡಿ, ಸರಹದ್ದು ಪ್ರದೇಶದಲ್ಲಿ ಉತಾರ್ ಮಾಡಲ್ಪಟ್ಟ ಶೇಂದಿಯನ್ನು ಉದ್ದೇಶಿಸಲ್ಪಟ್ಟ ಅಂಗಡಿಗೆ ಯಾ ಕೋಠಿಗೆ ಮದರಾಸ್ ಸರ್ಕಾರದವರ ನಿಬಂಧನೆಗಳ ಪ್ರಕಾರ ಎಲ್ಲಾ ಕ್ರಮವನ್ನು ನಡಿಸಿದ ತರುವಾಯ ತೆಗೆದುಕೊಂಡು ಹೋಗಲಿಕ್ಕೆ ಮೈಸೂರು ದೇಶದ ಸಂಬಂಧಪಟ್ಟ ಇನ್ಸ್‌ಪೆಕ್ಟರವರಿಂದ ಪರ್ಮಿಟ್ ಯಾ ರವಾನೆಯನ್ನು ಪಡೆಯುತಕ್ಕದ್ದು.

32. ಶೇಂದಿಯನ್ನು ತಯಾರು ಮಾಡುವದಕ್ಕಾಗಿ ಉತಾರ್ ಲೈಸೆನ್ಸನ್ನು ಪಡೆಯುವ ಪ್ರತಿ ಮನುಷ್ಯನು ಈಚಲು ಮರವನ್ನು ಕಟ್ಟುವಾಗ್ಯೆ ಈ ಕೆಳಗೆ ನಮೂದಾಗುವ ನಿಬಂಧನೆಗಳನ್ನು ಆಚರಿಸತಕ್ಕದ್ದು:—

(a) ಈಚಲು ಮರಗಳು ಕಸಬುದಾರ್ರಿಂದಲೇ ಕಟ್ಟಲ್ಪಡತಕ್ಕದ್ದು.

(b) ಒಂದು ವರುಷದಲ್ಲಿ ಕಟ್ಟಿದ ಮರಗಳನ್ನು ವಾಡಿಕೆಯಾಗಿ ಮಾರನೇ ವರುಷದಲ್ಲಿ ಕಟ್ಟಕೂಡದು.

(c) ಮರಗಳಿಂದ ಶೇಂದಿಯನ್ನು ಮಿತಿಮೀರಿ ಉತಾರ್ಮಾಡಿ ಮರಗಳನ್ನು ಕೆಡಿಸಕೂಡದು.

(d) ಎಕ್ಸೈಜ್ ಕಮಿಷ್ನರವರಿಂದ ವಿಶೇಷ ಅಪ್ಪಣೆ ಕೊಡಲ್ಪಟ್ಟಿರುವ ಸ್ಥಳಗಳಲ್ಲಿ ವಿನಹಾ ಯಾವ ಮರವಲ್ಲಾಗಲಿ ಪ್ರಥಮ ರೇವು ಭೂಮಿಯಿಂದ ಅದಕ್ಕೆ 3 ಅಡಿಗಿಂತ ಕಮ್ಮಿಯಾಗುವ ಸ್ಥಾನದಲ್ಲಿ ಮಾಡಲ್ಪಡಕೂಡದು.

(e) ರೇವಿನ ಆಳವು ಮತ್ತು ಅಗಲವೂ ಮರದ ಅಡ್ಡಳತೆಯ ಮೂರರಲ್ಲಿ ಒಂದು ಭಾಗಕ್ಕಿಂತ ಜಾಸ್ತಿಯಾಗಿರಕೂಡದು. ಮತ್ತು ಅದರ ಉದ್ದವು 8 ಅಂಗುಲಗಳಿಗಿಂತ ಜಾಸ್ತಿಯಾಗಿರಕೂಡದು.

(f) ವಿಶೇಷ ಅಪ್ಪಣೆಕೊಟ್ಟ ಪ್ರದೇಶದಲ್ಲಿ ವಿನಹಾ ಹೊಸದಾಗಿ ಮಾಡಲ್ಪಡುವ ಪ್ರತಿ ಒಂದು ರೇವು ಅದಕ್ಕೆ ಮುಂಚೆ ಮಾಡಲ್ಪಟ್ಟ ರೇವಿನ ಮೇಲುಗಡೆ ಒಂದು ಅಡಿಗಿಂತ ಕಮ್ಮಿಯಾಗಿರಕೂಡದು.

(g) ಮಧ್ಯದಲ್ಲಿ ಮೊಳೆಗಳೋಪಾದಿಯಲ್ಲಿರುವ ಸುಳಿಗಳ ಸಮುದಾಯವನ್ನು ಮುಟ್ಟಕೂಡದು. ಅವುಗಳ ಪಕ್ಕದ ಗರಿಗಳ ಪೈಕಿ ಎರಡು ವರಸೆಗಳಿಗೆ ಕಮ್ಮಿ ಇಲ್ಲದಂತೆ ಬಿಡತಕ್ಕದ್ದು; ಅಂದರೆ ಮಧ್ಯದ ಸುಳಿಗಳ ಬಾಜೂದಲ್ಲಿರುವ ಗರಿಗಳ ವರಸೆಗಳಿಂದ ರೇವಿನ ಮೇಲ್ಗಡೆವರಿಗೂ ಗರಿಗಳನ್ನು ಲೆಖ್ಖ ಮಾಡಿದರೆ ಎರಡು ವರಸೆಗಳಿಗೆ ಕಮ್ಮಿಯಾಗಿರಕೂಡದು; ಅಂದರೆ ರೇವಿನ ಮೇಲ್ಗಡೆಯಲ್ಲಿ ಮೊಳೆಗಳೋಪಾದಿಯಲ್ಲಿರುವ ಸುಳಿಗಳು ಶಿವಾಯಿ ರೇವು ತಯಾರ್ಮಾಡಲ್ಪಟ್ಟಿರುವ ಮುಂಭಾಗದಲ್ಲಿ ಎಂಟು ಗರಿಗಳಿಗಿಂತ ಕಮ್ಮಿಯಾಗಿ ಬಿಡಕೂಡದು.

(h) ಲೈಸೆನ್ಸ್‌ದಾರನು ಲೈಸೆನ್ಸ್ ಕೊಡಲ್ಪಟ್ಟ ಮರಗಳನ್ನಾಗಲೀ ಅಥವಾ ಇತರ ಮರಗಳನ್ನಾಗಲೀ ಕುಯ್ಯಲೂ ಯಾ ಕೆಡಿಸಲೂ ಕೂಡದು; ಅಥವಾ ಕುಯ್ಯಲೂ ಯಾ ಕೆಡಿಸಲೂ ಅಪ್ಪಣೆ ಕೊಡಕೂಡದು.

(i) ಲೈಸೆನ್ಸ್‌ದಾರನು ಅಥವಾ ಅವನ ಏಜಮಾನನು ತನ್ನ ಗುತ್ತಿಗೆ ಕಾಲದಲ್ಲಿ ಆಗಲಿ ಅಥವಾ ಪೂರೈಸಿದ 6 ತಿಂಗಳೊಳಗಾಗಲೀ ಮಿತಿಯಿಲ್ಲದೆ ಶೇಂದಿಯನ್ನು ಇಳಿಸಿದ್ದರಿಂದ ಯಾ ಅಜಾಗರೂಕತೆಯಿಂದ ಉತಾರ್ ಮಾಡಿದ್ದರಿಂದ ಒಣಗಿಹೋದ ಮರ

ಗಳು ಆತನಿಗೆ ಸಂತೆ ಹಾಕಿಕೊಡಲ್ಪಟ್ಟ ಒಟ್ಟು ಮರಗಳಲ್ಲಿ ಶೇಕಡ 3ಕ್ಕೆ ಅತಿಕ್ರಮಿಸಿದರೆ ಅಂಥಾ ಪ್ರತಿಯೊಂದು ಮರಕ್ಕೂ ಒಂದು ರೂಪಾಯಿನಂತೆ ಜುರ್ಮಾನೆಯನ್ನು ಕೊಡಲು ಬದ್ಧನಾಗಿರುತ್ತಾನೆ.

(8) ಶೇಂದಿಯನ್ನು ಇಳಿಸುವ ಮರಗಳು ಇರತಕ್ಕ ಪ್ರತಿ ವನದಲ್ಲಿಯೂ ಎಕ್ಸೈಜ್ ಉದ್ಯೋಗಸ್ಥರು ಸಂಗತ್ಯಾನುಸಾರ ರೇಪನ್ನು ಯಾ ವಾರ್ಶ್ ಯನ್ನು ಅಜಮಾಯಿಷಿ ಮಾಡಲಿಕ್ಕೂ ಅಥವಾ ರೇಪನ್ನು ಅಳತೆ ಮಾಡಲಿಕ್ಕೂ ಉತಾರ್‌ದಾರನು ಒಂದು ಏಣಿಯನ್ನು ಇಟ್ಟಿರತಕ್ಕದ್ದು.

(9) ಮೇಲೆ ನಮೂದಿಸಿರುವ ಕಾನೂನುಗಳು ಯಾ ಲೈಸೆನ್ಸ್ ಷರತ್ತುಗಳು ಲೈಸೆನ್ಸ್‌ದಾರನಿಂದಾದರು ಅಥವಾ ಆತನ ಅಂತರ್ಯ ತಿಳುವಳಿಕೆ ಯಾ ಸಮ್ಮತಿಯಿಂದ ಆತನ ನೌಕರರಿಂದಲಾದರೂ ಉಲ್ಲಂಘಿಸಲ್ಪಟ್ಟರೆ, ಅಥವಾ ಲೈಸೆನ್ಸುದಾರನು ತನ್ನ ಮಳಿಗೆಗಳನ್ನು 1904ನೇ ಜುಲೈ ಒಂದನೇ ತಾರೀಖಿನಲ್ಲಿ ಇಡುವದಕ್ಕಾದರೂ ಯಾ ತನ್ನ ಕೆಲಸಗಳನ್ನು ಕ್ರಮವಾದ ಎಚ್ಚರಿಕೆಯಿಂದನೆ ನಡಸುವದಕ್ಕಾದರೂ ಉದಾಸೀನ ಮಾಡಿದರೆ ಅಂಥಾ ಪ್ರತಿ ಒಂದು ಉಲ್ಲಂಘನೆ ಯಾ ಉದಾಸೀನದ ಬಗ್ಗೆ ಪ್ರತಿ ಲೈಸೆನ್ಸ್ ದಾರನಿಗೆ 50 ರೂಪಾಯಿಗಳಿಗೆ ಮೀರಿದ ಒಂದು ಜುರ್ಮಾನೆಯನ್ನು ವಿಧಿಸುವ ಬಗ್ಗೆ ಡೆಪ್ಯುಟಿ ಕಮಿಷನರವರಿಗೆ ನ್ಯಾಯವಾಗಿರತಕ್ಕದ್ದು, ಅಥವಾ ಡೆಪ್ಯುಟಿ ಕಮಿಷನರವರ ಯುಕ್ತಾನುಸಾರ ಆತನಿಂದ ಇಡೋಣಾದ ಡಿಪಾಜಿಟ್ ಮೊಬಲಗನ್ನು ದಂಡವಾಗಿ ತೆಗೆದುಕೊಳ್ಳಲ್ಪಡಲಿಕ್ಕೂ, ಲೈಸೆನ್ಸನ್ನು ರದ್ದುಮಾಡಲಿಕ್ಕೂ ಲೈಸೆನ್ಸುದಾರನನ್ನು ನಷ್ಟಕ್ಕೆ ಗುರಿಮಾಡಿ ಒಟ್ಟು ಸ್ವಾತಂತ್ರ್ಯವನ್ನು ಮರಳಿ ಹರಾಜು ಮಾಡಲಿಕ್ಕೂ, ಅಥವಾ ಇತರವಿಧವಾಗಿ ವಿಲೇವಾರಿ ಮಾಡಲಿಕ್ಕೂ ಅಥವಾ ಅವನ್ನು ಅಮಾನಿಯಲ್ಲಿ ಜರಗಿಸುವದಕ್ಕೂ ಅವರಿಗೆ ಮುಖ್ತಿಯಾರು ಇರತಕ್ಕದ್ದು. ಒಂದು ಲೈಸೆನ್ಸು ರದ್ದುಮಾಡಲ್ಪಟ್ಟ ಗುತ್ತಿಗೆಯ ಬಾಕಿ ಕಾಲಕ್ಕೆ ಬರಬೇಕಾದ ತವಾಂ ಮೊಬಲಗು ತಕ್ಷಣ ಪಾವತಿ ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು. ಮತ್ತು ಹಾಗೆ ಲೈಸೆನ್ಸು ರದ್ದು ಮಾಡಲ್ಪಟ್ಟದ್ದರಿಂದಲಾಗಲಿ ಯಾ ಆ ಹಕ್ಕನ್ನು ಮರಳಿ ಹರಾಜು ಅಥವಾ ಇತರ ವಿಧದಿಂದ ವಿಲೇವಾರಿ ಮಾಡುವದರಿಂದಲಾಗಲೀ ಸರ್ಕಾರಕ್ಕೆ ಉಂಟಾಗುವ ಎಲ್ಲಾ ನುಕ್ಸಾನುಗಳೂ ಲೈಸೆನ್ಸುದಾರನಿಂದ ಯಾ ಅವನ ಜಮೀನ್‌ದಾರನಿಂದ ಮೇಲ್ಕಂಡ 3ನೇ ಪ್ಯಾರಾ (a) ಕಲಂ ಅನುಸರಿಸಿ ಮರಳಿ ಹರಾಜಿಗಾಗಿ ವಿಧಿಸುವ ಮೇರೆ ಭರ್ತಿ ಮಾಡಲ್ಪಡಬೇಕು. ಈ ರೀತಿ ವಸೂಲಾಗಬೇಕಾದ ತವಾಂ ಮೊಬಲಗುಗಳು ಜಮೀನ್ ಕಂದಾಯದ ಬಾಕಿಯೋಪಾದಿಯಲ್ಲಿ ವಸೂಲ್ಮಾಡಲ್ಪಡತಕ್ಕದ್ದು.

(10) ಎಕ್ಸೈಜ್ ರೆಗ್ಯುಲೇಷನ್ ಯಾ ಒಪಿಯಂ ಆಕ್ಟಿಗೆ ವಿರೋಧವಾಗಿ ಯಾ ಹಾಲಿ ಜಾರಿಯಲ್ಲಿರುವ ಮತ್ಯಾವ ನಿಬಂಧನೆಗೆ ವಿರೋಧವಾಗಿ ನಡೆದ ಯಾವದಾದರೂ ತಕ್ಸೀರಿಗೆ ಲೈಸೆನ್ಸ್‌ದಾರ್ ಮೇಜಿಸ್ಟ್ರೇಟರ ಮುಂದೆ ದರ್ಯಾಫ್ತಿಯಾಗಿ ತಪ್ಪು ಸಾಬೀತಾಗಿ ಡೆಪ್ಯುಟಿ ಕಮಿಷನರವರಿಗೆ ಅವನು ಲೈಸೆನ್ಸುದಾರನಾಗಿರಲು ಯೋಗ್ಯನಲ್ಲವೆಂದು ಕಂಡುಬಂದಲ್ಲಿ ಆತನನ್ನು ನಷ್ಟಕ್ಕೆ ಗುರಿಮಾಡಿ ಆತನ ಲೈಸೆನ್ಸ್ ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಟ್ಟಂತೆ ಹುಕುಂ ಮಾಡುವದಕ್ಕೆ ಯಾ ಮಾರುವದಕ್ಕೆ ಯಾ ಅನ್ಯಥಾ ವಿಲೇವಾರಿ ಮಾಡಲಿಕ್ಕೆ ಡೆಪ್ಯುಟಿ ಕಮಿಷನರವರಿಗೆ ನ್ಯಾಯವಾಗಿರತಕ್ಕದ್ದು.

(11) ಲೈಸೆನ್ಸ್‌ದಾರನಿಂದ ಬರಬೇಕಾದ ಮೊಬಲಗುಗಳೆಲ್ಲಾ ಠೇವಣಿ ಮೊಬಲಗಿನಲ್ಲಿ ಮಜಾಮಾಡಲ್ಪಡಬಹುದು. ಅಥವಾ ಜಮೀನ್ ಕಂದಾಯದ ಬಾಕಿಗಳನ್ನು ವಸೂಲ್ಮಾಡಲು ಹಾಲಿ ಜಾರೀಲಿರತಕ್ಕ ಕಾನೂನ್ ಪ್ರಕಾರ ಯಾ ಆತನ ಜಾಮೀನ್ ದಾರನ ಆಸ್ತಿಯನ್ನು ಜಫ್ತಿ ಹರಾಜು ಮಾಡುವದರ ಮೂಲಕ ವಸೂಲ್ಮಾಡಲ್ಪಡಬಹುದು.

(12) ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ವಿಧಿಸೋಣ, ಠೇವಣಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳೋಣ, ಲೈಸೆನ್ಸು ರದ್ದುಮಾಡೋಣ, ಈ ಸಂದರ್ಭಗಳು ಹಾಲಿ ಜಾರೀಲಿರುವ ಕಾನೂನ್ ಪ್ರಕಾರ ಶಿಕ್ಷಿಸಲ್ಪಡತಕ್ಕ ಯಾವ ತಪ್ಪಿತಕ್ಕಾದರೂ ಲೈಸೆನ್ಸ್‌ದಾರನನ್ನಾಗಲೀ ಯಾ ಆತನ ಏಜಂಟನ್ನಾಗಲೀ ಯಾ ಆತನ ನೌಕರರನ್ನಾಗಲೀ ಆಪಾದಿಸಿ ದರ್ಯಾಫ್ತು ನಡಸಲು ಆತಂಕಪಡಿಸುವದೆಂದು ಭಾವಿಸಲ್ಪಡಕೂಡದು.

ಟಿಪ್ಪಣಿ:—ಬಾರಿಬಾರಿಗೂ ಲೈಸೆನ್ಸಿನ ಷರತ್ತುಗಳಿಗೆ ವಿರೋಧವಾಗಿ ನಡೆಸಿದ ತಪ್ಪಿತಗಳಿಗೆ ಬಾರಿಬಾರಿಗೂ ಜುರ್ಮಾನೆ ಹಾಕಲ್ಪಡತಕ್ಕದ್ದು.

ತಾರೀಖು 31ನೆ ಮಾರ್ಚಿ 1904.

ನಂ. ರೆ. 2993—ರೆ. ಫೈ. 59—1902, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ ಅನುಸರಿಸಿ ಮೈಸೂರು ಡಿಸ್ಟ್ರಿಕ್ಟ್ ಶ್ರೀರಂಗಪಟ್ಣ ತಾಲ್ಲೂಕಿನ ಅಮಲ್‌ದಾರ್ರಾದ ಮೆ|| ಸಿ. ವೆಂಕಟರಾಯರಿಗೆ 1903ನೆ ಡಿಸೆಂಬರ್ 12ನೆ ತಾರೀಖಿನಾರಭ್ಯ 10 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು. ಫ್ರೆಂಚ್‌ರಾಕ್ಸಿನ ಡೆಪ್ಯುಟಿ ಅಮಲ್‌ದಾರ್ರು, ಮೆ|| ಸಿ. ವೆಂಕಟರಾಯರು ರಜಾದಲ್ಲಿದ್ದ ಕಾಲದಲ್ಲಿ ಸದರೀ ತಾಲ್ಲೂಕಿನ ಚಾರ್ಜಿನಲ್ಲಿದ್ದರು.

ತಾರೀಖು 4ನೆ ಏಪ್ರಿಲ್ 1904.

ಅಶುದ್ಧ.

ನಂ. ರೆ. 3066—ರೆ. ಫೈ. 57—1896, ಸನ್ 1904ನೆ ಫೆಬ್ರುವರಿ 10ನೆ ಮಸ್ತೂರ್ ರೆ. 2341ನೆ ನಂಬರ್ ಇಸ್ತಿಹಾರ್‌ನಾಮೆಯಲ್ಲಿ "ದಾಸಪ್ಪನವರು" ಎಂಬದಕ್ಕೆ ಬದಲಾಗಿ "ಎಂ. ಆರ್. ದಾಸೇಗೌಡನವರು" ಎಂಬದಾಗಿ ಓದಿಕೊಳ್ಳತಕ್ಕದ್ದು.

579

ತಾರೀಖು 4ನೆ ಏಪ್ರೈಲ್ 1904.

ನಂ. ರೆ. 3014-6—ರೆ. ಫೈ. 109—96. ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಶಿವಮೊಗ್ಗ ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಕಮಿಷನರಾದ ಮ॥ ಟಿ. ಚಿಕ್ಕಣ್ಣನವರಿಗೆ 1904ನೆ ಮಾರ್ಚಿ 3ನೆ ತಾರೀಖಿನ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಆ ತರುವಾಯದ ತಾರೀಖಿನಾರಭ್ಯ 10 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 6ನೆ ಏಪ್ರೈಲ್ 1904.

ನಂ. ರೆ. 3030—ರೆ. ಫೈ. 5—1903. ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರಾದ ಮ॥ ನರಸಿಂಗರಾವ್ ಪೂರ್ಣಯ್ಯನವರಿಗೆ 1904ನೆ ಫೆಬ್ರುವರಿ 25ನೆ ಮುರಸ್ಕಂ ರೆ. 2499—ರೆ. ಫೈ. 5—1903ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 1 ತಿಂಗಳು 11 ದಿನಗಳ ಪ್ರಿವಿಲೇಜ್ ರಜಾದೊಂದಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 165 A ನೆ ಆರ್ಟಿಕಲ್ ಅನುಸರಿಸಿ ತಲಬಿಲ್ಲದ ಆರು ತಿಂಗಳುಗಳ ಎಕ್ಸ್‌ಟ್ರಾರ್ಡಿನೆರಿ ರಜಾ ಕೊಡಲ್ಪಟ್ಟಿರುತ್ತದೆ.

2. ಸದರೀಯವರು ಮೇಲ್ಕಂಡ ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಅಸಿಸ್ಟೆಂಟ್ ಕಮಿಷನರಾದ ಮ॥ ಅಹಮದ್ ಅಲಿ ಯಾವರು ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರಿಯ ಚಾರ್ಜಿನಲ್ಲಿ ಇರತಕ್ಕದ್ದು.

ತಾರೀಖು 6ನೆ ಏಪ್ರೈಲ್ 1904.

ನಂ. ರೆ. 3035—ರೆ. ಫೈ. 35—1898. ಬೆಂಗಳೂರು ಡಿಸ್ಟ್ರಿಕ್ಟ್ ಮಾಗಡಿ ತಾಲ್ಲೂಕಿನ ಅಮಲ್ದಾರ್‌ರಾದ ಮ॥ ಅಬ್ದುಲ್ ಜಲೀಲ್ ಯಾವರಿಗೆ 1904ನೆ ಜನವರಿ 31ನೆ ಮುರಸ್ಕಂ ರೆ. 2226—ರೆ. ಫೈ. 35—1898ನೆ ನಂಬರ್‌ಯೊಡನೆ ಆಖೈರಾಗುವ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 8 ತಿಂಗಳುಗಳ ತಲಬಿಲ್ಲದ ಎಕ್ಸ್‌ಟ್ರಾಆರ್ಡಿನೆರಿ ರಜಾ ಇನ್ನೂ 2 ತಿಂಗಳುಗಳು ಜಾಸ್ತಿ ಮಾಡಲ್ಪಟ್ಟಿರುತ್ತದೆ.

2. ಮೇಲ್ಕಂಡ ರಜಾ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಹಾಲಿ ಇರುವ ಏರ್ಪಾಡಿನಂತೆಯೇ ಇರತಕ್ಕದ್ದು.

ತಾರೀಖು 6ನೆ ಏಪ್ರೈಲ್ 1904.

ನಂ. ರೆ. 3038—ರೆ. ಫೈ. 101—1896. ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಚಿತ್ರದುರ್ಗ ಡಿಸ್ಟ್ರಿಕ್ಟ್ ಮೊಳಕಾಲಮೂರು ತಾಲ್ಲೂಕಿನ ಅಮಲ್ದಾರ್‌ರಾದ ಮ॥ ಸಿ. ನರಸಿಂಗರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

2. ಹರಿಹರದ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್‌ರಾದ ಮಹಮದ್‌ಪೀರ್ ಯಾವರು, ಮ॥ ಸಿ. ನರಸಿಂಗರಾಯರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಮೊಳಕಾಲಮೂರು ತಾಲ್ಲೂಕಿನ ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕು ಮೊಕರರ್ ಮಾಡಲ್ಪಟ್ಟಿರುತ್ತಾರೆ.

3. ಮಹಮದ್‌ಪೀರ್ ಯಾವರು ಇತರ ಕೆಲಸದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ದಾವಣಗೆರೆಯ ಅಮಲ್ದಾರರು ತಮ್ಮ ಕೆಲಸದೊಂದಿಗೆ ಹರಿಹರ ಸಬ್ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ಹುಕುಂ ಬಮೋಜೀಬ್,
ಎಲ್. ಅನಂತಸ್ವಾಮಿರಾವ್,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಅಫಿಷಿಯೇಟಿಂಗ್ ಸೆಕ್ರೆಟರಿ.

ಮುಜರೈ.

ಇಸ್ತಿಹಾರ್ನಾಮಾ.

ತಾರೀಖು 5ನೆ ಏಪ್ರೈಲ್ 1904.

ನಂ. 3022. ಕಾಲಾತಿಕ್ರಮಣ ಯಾ ಇತರ ಕಾರಣಗಳಿಂದ ತೆಗದುಹಾಕಲ್ಪಟ್ಟವರಿಗೆ ಬದಲಾಗಿ ಇದರಡೀ ಕಂಡ ಜನಗಳು ಮಂಡ್ಯದ ತಾಲ್ಲೂಕಿನ ಮದ್ದೂರಲ್ಲಿ ಮುಜರೈ ಆಡಳಿತದಲ್ಲಿರುವ ದೇವಸ್ಥಾನಗಳ ಮತ್ತು ಛತ್ರದ ಕೆಲಸಗಳನ್ನು ಮೇಲ್ವಿಚಾರಣೆ ಮಾಡುವ ಬಗ್ಗೆ ಧರ್ಮದರ್ಶಿಗಳಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ:—

ಮ॥ ರಾ॥ ರಾ॥ ಉಪಾಧ್ಯ ತಿರುವೆಂಕಟಾಚಾರ್ರು,
,, ಶಾನಭೋಗ ಲಕ್ಷ್ಮೀನರಸಿಂಹಯ್ಯನವರು.
,, ಆಸ್ಪತ್ರೆಟಲ್ ಅಸಿಸ್ಟೆಂಟರಾದ ಜಿ. ಬಸಪ್ಪಸೆಟ್ಟರು.
,, ವೈದ್ಯನಾಥಪುರದ ರಾಮಣ್ಣನವರು.

ಹುಕುಂ ಬಮೋಜೀಬ್,
ಎಂ. ಶಾಮರಾವ್,
ಮುಜರೈ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ.

ಇಸ್ತಿಹಾರ್ನಾಮೆ.

ತಾರೀಖು 2ನೆ ಏಪ್ರಿಲ್ 1904.

ನಂ. 363—2066, ಸ್ 1904ನೆ ಮಾರ್ಚಿ 26ನೆ ತಾರೀಖು ಇಂಡಿಯಾ ಗೆಜೆಟ್ಟಿನ ಇದರಡೀ ಕಂಡ ಎಕ್‌ಸ್ಟ್ರಾಕ್ಟು ತಿಳುವಳಿಕೆ ಬಗ್ಗೆ ಮರಳೀ ಛಾಯಿಸ್ಮಾಡಲ್ಪಟ್ಟಿರುತ್ತದೆ:—

ಪಬ್ಲಿಕ್ ವರ್ಕ್ಸ ಇಲಾಖಾ.

ರೈಲ್ವೆಗಳು.

ಇಸ್ತಿಹಾರ್‌ನಾಮೆಗಳು.

ತಾರೀಖು 24ನೆ ಮಾರ್ಚಿ 1904, ಕಲಕತ್ತಾ.

* * * *

ನಂ. 123—ಸ್ಟೇಟ್ ರೈಲ್ವೆಗಳಿಗೆ ಸೇರಿದ ಚೀಫ್ ವ ಸೂಪರಿಂಟೆಂಡಿಂಗ್ ಇಂಜಿನಿಯರುಗಳ ಇದರಡೀ ಕಂಡ ಬಡ್ತಿಗಳು ನಮೂದು ಮಾಡಲ್ಪಟ್ಟ ತಾರೀಖುಗಳ ನಾರಭ್ಯ ಮಂತ್ರಾಲೋಚಕ ಸಮಾಜದೊಳಗಣ ಗವರ್ನರ ಜನರಲ್ ಯವರು ಹುಕುಂ ಮಾಡಿರುತ್ತಾರೆ:—

ಹೆಸರು.	ಎಲ್ಲಿಂದ.	ಎಲ್ಲಿಗೆ.	ಬಡ್ತಿಯ ಸ್ವಭಾವ.	ಯಾವ ಲಾಗಾಯತು.
*	*	*	*	*
ಡಬ್ಲ್ಯು. ಮೆಕ್‌ಹರ್ಚೀ ಯವರು.	ಮೊದಲನೇ ಗ್ರೇಡಿನ ಎಗ್ಜಿಕ್ಯೂಟಿವ್ ಇಂಜಿನಿಯರು ಮತ್ತು ಹಂಗಾಮಿ ದರ್ಜೆ ಸೂಪರ ನ್ಯೂಮರರಿ ಎರಡನೇ ಕ್ಲಾಸಿನ ಸೂಪರಿಂಟೆಂಡಿಂಗ್ ಇಂಜಿನಿಯರು.	ಮೂರನೇ ಕ್ಲಾಸಿನ ಸೂಪರಿಂಟೆಂಡಿಂಗ್ ಇಂಜಿನಿಯರು ಮತ್ತು ಸೂಪರ್ ನ್ಯೂಮರರಿ ಎರಡನೇ ಕ್ಲಾಸಿನ ಸೂಪರಿಂಟೆಂಡಿಂಗ್ ಇಂಜಿನಿಯರು.	ಕಾಯಂ. ಹಂಗಾಮಿ.	14ನೆ ಡಿಸೆಂಬರ 1903
*	*	*	*	*
ಡಿಟ್ಟೋ	ಹಂಗಾಮಿ ದರ್ಜೆ ಸೂಪರ ನ್ಯೂಮರರಿ ಎರಡನೇ ಕ್ಲಾಸಿನ ಸೂಪರಿಂಟೆಂಡಿಂಗ್ ಇಂಜಿನಿಯರು.	ಸೂಪರ್ ನ್ಯೂಮರರಿ ಎರಡನೇ ಕ್ಲಾಸಿನ ಸೂಪರಿಂಟೆಂಡಿಂಗ್ ಇಂಜಿನಿಯರು.	ಸಬ್ ಪ್ರೊಟೆಂ.	15ನೆ ಡಿಸೆಂಬರ 1903
*	*	*	*	*
ಡಿಟ್ಟೋ	ಸಬ್‌ಪ್ರೊಟೆಂ ಸೂಪರ್ ನ್ಯೂಮರರಿ ಎರಡನೇ ಕ್ಲಾಸಿನ ಸೂಪರಿಂಟೆಂಡಿಂಗ್ ಇಂಜಿನಿಯರು.	ಸೂಪರ್ ನ್ಯೂಮರರಿ ಮೊದಲನೇ ಕ್ಲಾಸಿನ ಸೂಪರಿಂಟೆಂಡಿಂಗ್ ಇಂಜಿನಿಯರು.	ಹಂಗಾಮಿ.	22ನೆ ಜನವರಿ 1904

ಹುಕುಂ ಬಮೋಜಿಬ್,
ಡಬ್ಲ್ಯು. ಎಸ್. ಟ್ರೇಲ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ್ ಇಲಾಖಾ, ಮೈಸೂರು ಗವರ್ನಮೆಂಟ್ ಅಂಡರ್ ಸೆಕ್ರೆಟರಿ.

ಜಿಯೋಲಾಜಿಕಲ್.

ಇಸ್ತಿಹಾರ್ನಾಮಾ.

ತಾರೀಖು 30ನೆ ಮಾರ್ಚಿ 1904.

ನಂ. 580—ಎಸ್., ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ [illegible]ದಿನಲ್ಲಿ ಡೆಪ್ಯುಟೇಷನ್ ಮೇಲಿರುವ ಮೈಸೂರ ಜಿಯೋಲಾಜಿಕಲ್ ಇಲಾಖೆಯ ಅಸಿಸ್ಟೆಂಟ್ ಛೋರಜೆನಾ ಶಾಸ್ತ್ರಜ್ಞರಾದ ಮ॥ ಬಿ. ಜಯರಾಂ ಯವರಿಗೆ 1904ನೆ ಮೇ ಗುರ್ರ್ತ ತಾರೀಖಿನಾರಭ್ಯ ಮೂರು ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಹುಕ್ಕುಂ ಬಮೋಜಿಬ್,
ಡಬ್ಲ್ಯು. ಎಫ್. ಸ್ಮಿತ್,
ಜಿಯೋಲೋಜಿಕಲ್ ಇಲಾಖಾ ಗವರ್ನಮೆಂಟ್ ಸೆಕ್ರೆಟರಿ.

ಫಾರೆಸ್ಟ್.

ಇಸ್ತಿಹಾರ್ನಾಮೆ.

ತಾರೀಖು 26ನೆ ಮಾರ್ಚಿ 1904.

ನಂ. 746—7699, ಸ್ 1900ನೆ ಇಸವಿ XIನೆ ನಂಬರ್ ಮೈಸೂರ್ ಫಾರೆಸ್ಟ್ ರೆಗ್ಯುಲೇಷನಿನ 76ನೆ ಸೆಕ್ಷನ್ ನಿಯಮಗಳನುಸರಿಸಿ ಶ್ರೀಮನ್ ಮಹಾರಾಜಾ ಸರ್ಕಾರದವರು ಇದರಡೀ ಕಂಡ ಆಫೀಸರುಗಳಿಗೆ ಅವರವರ ಹೆಸರುಗಳಿಗೆದುರಾಗಿ ನಮೂದಿಸಲ್ಪಟ್ಟ ಅಧಿಕಾರಗಳನ್ನು ಕೊಟ್ಟಿರುತ್ತಾರೆ:—

ಸ್ 1901ನೆ ಜನವರಿ 21ನೆ ಮರ್ಕುಂ 460 – ಫಾ. ಫ್ಯ. 15–1900ನೆ ನಂಬರ್ ಇಸ್ತಿಹಾರ್ನಾಮೆಯ IIIನೆ ಕ್ಲಾಸನ್ನು ನೋಡತಕ್ಕದ್ದು.

ಆಫೀಸರುಗಳ ಹೆಸರು.	ಹುದ್ದೆ.	ರೆಗ್ಯುಲೇಷನಿನ ಸೆಕ್ಷನ್.	ಅಧಿಕಾರಗಳ ಸ್ವಭಾವ.
ಮೆ|| ಜೆ. ಜೆ. ಮಾರ್ಟೀರೊಯವರು.	ಫಾರೆಸ್ಟ್ ಅಸಿಸ್ಟೆಂಟ್ ಕನ್ಸರವೇಟರ್.	26 C.	ಸ್ಟೇಟ್ ಫಾರೆಸ್ಟ್‌ನಲ್ಲಿ ಕೃತ್ಯಗಳನ್ನು ನಡಿಸಲು ಅಪ್ಪಣೆ ಕೊಡುವದಕ್ಕೆ ಅಧಿಕಾರ
,, ಹೆಚ್. ಶ್ರೀನಿವಾಸರಾಯರು	ಡಿಟೋ	53	ಜಫ್ತಿ ಮಾಡಲ್ಪಟ್ಟ ಸೊತ್ತನ್ನು ಖುಲಾಸೆ ವಗೈರೆ ಮಾಡಲು ಹುಕುಂ ಮಾಡುವದಕ್ಕೆ ಅಧಿಕಾರ
		59	ತಕ್ಸೀರುಗಳನ್ನು ರಾಜಿಯಿಂದ ವ್ಯವಸ್ಥೆ ಮಾಡಲು ಅಧಿಕಾರ
,, ಹೆಚ್. ರಾಮಯ್ಯನವರು ..	ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕನ್ಸರವೇಟರ್.	65	(1) (a) ಯಾವ ಜಮೀನಿನಲ್ಲಾದರೂ ಪ್ರವೇಶಿಸಿ ಅದನ್ನು ಸರ್ವೆ ಮೊದಲಾದವುಗಳನ್ನು ಮಾಡಲು ಅಧಿಕಾರ
,, ವಿ. ನಂಸಿಹ್ಮಮೂರ್ತಿರಾಯರು.	ಡಿಟೋ	65	(1) (b) ಸಾಕ್ಷಿಗಳ ಹಾಜರಿಯನ್ನು ಬಲಾತ್ಕರಿಸುವದಕ್ಕೆ ಸಿವಿಲ್ ಕೋರ್ಟಿನ ಅಧಿಕಾರ
,, ಕೆ. ಮುತ್ತಯ್ಯನವರು ...	ಡಿಟೋ	65	(1) (d) ಫಾರೆಸ್ಟ್ ತಕ್ಸೀರಗಳನ್ನು ವಿಚಾರಣೆ ಮಾಡಿ ಸಾಕ್ಷ್ಯವನ್ನು ಬರಮಾಡಿಕೊಂಡು ರಿಕಾರ್ಡ್ ಮಾಡಲು ಅಧಿಕಾರ

ಹುಕುಂ ಬಮೋಜಿಬ್,

ಎಂ. ಮುತ್ತಣ್ಣ,

ಫಾರೆಸ್ಟ್ ಇಲಾಖಾ ಗವರ್ನ್‌ಮೆಂಟ್ ಅಫೀಷಿಯೇಟಿಂಗ್ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಛಾಪಿಸಲ್ಪಟ್ಟದ್ದು. [ನಂ. 14.

ಬೆಂಗಳೂರು, ಗುರುವಾರ, ಏಪ್ರೆಲ್ ತಾ॥ 7, ಸನ 1904.

IIನೆ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್‌ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಎಕ್ಸೈಜ್ ಇಲಾಖೆ.

1904–1905ನೆ ವರುಷಕ್ಕಾಗಿ ಬೆಂಗಳೂರು ಸಿಟಿಯಲ್ಲಿಯೂ ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿಯೂ ಇರತಕ್ಕ ಬೀರು ಅಂಗಡಿಗಳ ಹರಾಜು ನೋಟಿಸ್.

ನಂ. ತಾರೀಖು 1904.

1. ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿರತಕ್ಕ ಇದಕ್ಕೆ ಲಗತ್ತು ಮಾಡಿರುವ ಪಟ್ಟಿಯಲ್ಲಿ ನಮೂದು ಮಾಡಿರುವ ಅಂಗಡಿಗಳಲ್ಲಿ ಬೀರು ಯಾ ಪೋರ್‌ಟರನ್ನು 1904ನೆ ಇಸವಿ ಜುಲೈ ಗುರ್ರೇ ತಾರೀಖಿಗೆ ಪ್ರಾರಂಭವಾಗಿ 1905ನೆ ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12 ತಿಂಗಳ ಕಾಲಕ್ಕಾಗಿ ಬಿಕರೀ ಮಾಡತಕ್ಕ ಬಟ್ಟು ಸ್ವತಂತ್ರದ ಹಕ್ಕನ್ನು ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಅಥವಾ ಅವರಿಂದ ಅಧಿಕಾರ ಹೊಂದಿದ ಇತರ ಆಫಿಸರರು ಸದರಿ ಪಟ್ಟಿಯಲ್ಲಿ ನಮೂದುಮಾಡಿರುವ ಸ್ಥಳಗಳಲ್ಲಿ ಮತ್ತು ತಾರೀಖುಗಳಲ್ಲಿ ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ.

2. ಸದರಿ ಸ್ವತಂತ್ರ ಹಕ್ಕು ಬೌರಿಂಗ್‌ಪೇಟೆ ಮತ್ತು ಕೋಲಾರ್ ಚಿನ್ನದಗಣಿಗಳಲ್ಲಿನ ಅಂಗಡಿಯಲ್ಲಿ ಬಿಕರಿ ಆಗುವ ಬೀರು ಯಾ ಪೋರ್ಟ್ಟರಿನ ಪೀಪಾಯಿ 1ಕ್ಕೆ 35 ರೂಪಾಯಿ ಮೇರೆಗೂ ಬೆಂಗಳೂರು ಸಿಟಿ ಅಂಗಡಿಗಳಲ್ಲಿ ಬಿಕರಿ ಆಗುವುದಕ್ಕೆ ಎ॥ ಕ॥ ಸಾ॥ ರವರ ಮಂಜೂರಾತಿ ಮೇರೆಗೆ ಹರಾಜು ನಡೆಸುವ ಆಫಿಸರರು ಗೊತ್ತು ಮಾಡುವ ಮೊಬಲಗನ್ನು ಸರ್ಕಾರದ ಸವಾಲು ಎಂದು ಇಟ್ಟುಕೊಂಡು ಹರಾಜು ಹಾಕಲ್ಪಡುತ್ತೆ.

3. ಬೀರು ಕಾಯಿಸುವ ಭಟ್ಟೀದಾರು ಅಂಗಡಿಗಳಿಗೆ ಸವಾಲು ಮಾಡಬಹುದು.

4. ಹರಾಜಿನಲ್ಲಿ ಪ್ರತಿ ಸವಾಲ್ದಾರನೂ ಸವಾಲು ಮಾಡುವದಕ್ಕೆ ಮುಂಚಿತವಾಗಿ ಬೌರಿಂಗ್‌ಪೇಟೆ ತಾಲ್ಲೂಕಿನ ಅಂಗಡಿಗಳಿಗೆ 250 ರೂಪಾಯಿ, ಬೆಂಗಳೂರು ಸಿಟಿ ಅಂಗಡಿಗಳಿಗೆ 100 ರೂಪಾಯಿ ಯಾ ಹರಾಜು ಮಾಡತಕ್ಕ ಆಫಿಸರರು ಗೊತ್ತು ಮಾಡುವ ಬೇರೆ ಇತರ ನ್ಯಾಯವಾದ ಮೊಬಲಗನ್ನು ಠೇವಣಾತಿ ಇಡತಕ್ಕದ್ದು. ಪೀಪಾಯಿ 1ಕ್ಕೆ ಪ್ರತಿ ಒಂದು ಅಂಗಡಿಯು ಅಂಗೀಕರಿಸಲ್ಪಟ್ಟ ಛಡ ಸವಾಲ್‌ದಾರನಿಗೆ ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತದೆ. ಡೆಪ್ಯುಟಿ ಕಮ್ಮಿಷನರವರು ಸದರೀ ದರಖಾಸ್ತನ್ನು ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳು ಉದಹರಿಸದೇ ಮಂಜೂರು ಯಾ ತಳ್ಳುಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತನ್ನು ಗವರ್ನಮೆಂಟಿನವರು ತಿದ್ದುಪಡಿ ಮಾಡದೇ ಇರುವ ಪಕ್ಷದಲ್ಲಿ ಅಂಗೀಕರಿಸಿದಂತೆ ಭಾವಿಸತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು. ಅಥವಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದು ಇರುವ ಅವರ ತರಫ್ ಮುತಾಲೀಕರನ್ನು ಕಳುಹಿಸಬೇಕು.

5. ಹರಾಜು ಪೂರೈಸಿದ ಕೂಡ್ಲೆ ನಾ ಮಂಜೂರಾದ ಸವಾಲ್ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡದೆ ಇರುವ ಪಕ್ಷಕ್ಕೆ ಅವರುಗಳಿಗೆ ವಾಪಸು ಮಾಡಲ್ಪಡುತ್ತವೆ.

6. ಯಾರ ಹೆಸರಿಗೆ ಹರಾಜಿನಲ್ಲಿ ಈ ಅಂಗಡಿಗಳು ಮಂಜೂರಾಗುತ್ತವೋ ಅವರು ಹರಾಜು ಮಂಜೂರಾದ್ದನ್ನು ಅವರಿಗೆ ತಿಳಿಸಲು ಅನುಕೂಲವಾಗುವಂತೆ ಅವರ ವಿಳಾಸವನ್ನು ಹರಾಜು ನಡೆಸತಕ್ಕ ಆಫೀಸರ್ರವರಲ್ಲಿ ಕೊಡತಕ್ಕದ್ದು. ಮತ್ತು 7 ದಿನಗಳೊಳಗಾಗಿ ಸದರೀ ನೋಟೀಸು ಅವರಿಗೆ ಖುದ್ದಾಗಿ ಅಥವಾ ಸದರೀ ವಿಳಾಸದ ಸ್ಥಳದಲ್ಲಿರುವ ವಯಸ್ಸಾದ ಕುಟುಂಬಕ್ಕೆ ಸಂಬಂಧಪಟ್ಟ ಗಂಡಸಿಗೆ ಆಗಲೀ ಜಾರಿಯಾದ ನಂತರ, ಯಾ ಸದರೀ ಮನೆಗೆ ಅಂಟಿಸಿದ ನಂತರ ಯಾ ರಿಜಿಸ್ಟರ್ಡ್ ಪೋಸ್ಟು ಮೂಲಕ ಕಳುಹಿಸಿದ ತರುವಾಯ ಹರಾಜಿನಲ್ಲಿ ಬಿಡಲ್ಪಡುವ ಪ್ರತಿ ಒಂದು ಅಂಗಡಿಗೆ ಒಟ್ಟು 500 ರೂಪಾಯಿಗಳಿಗೆ ಸರಿಯಾಗುವ ಹಾಗೆ ಯಾ ಪ್ರತಿ ಒಂದು ಅಂಗಡಿಯ ಬಿಲಗ್ನುಸಾರವಾಗಿ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಂದ ಗೊತ್ತು ಮಾಡಲ್ಪಡಬಹುದಾದ ಯುಕ್ತವಾದ ಇತರ ಮೊಬಲಗಿಗೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನು ಅವರು ಮೊದಲನೇ ಠೇವಣಾತಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನು ಠೇವಣಿ ಕಟ್ಟಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟ ಲೈಸೆನ್ಸುಗಳನ್ನು ಪಡಿಯತಕ್ಕದ್ದು. ಮತ್ತು ಎದುರು ಒಡಂಬಡಿಕೆಗಳನ್ನು ಬರೆದು ಕೊಡತಕ್ಕದ್ದು. ಈರೀತಿಲಿ ಠೇವಣಿ ಇಡುವದಕ್ಕೆ ಯಾ ಲೈಸೆನ್ಸ ಪಡೆಯಲಿಕ್ಕೆ ಯಾ ಎದುರು ಒಡಂಬಡಿಕೆಯನ್ನು ಬರೆದುಕೊಡಲಿಕ್ಕೆ ತಪ್ಪಿದರೆ ಸದರೀ ಅಂಗಡಿಯು ಹಾಗೆ ತಪ್ಪಿದ ಮನುಷ್ಯರ ಜವಾಬ್ದಾರೀಮೇಲೆ ಪುನಃ ಹರಾಜು ಮಾಡಲ್ಪಡುತ್ತೆ. ಅಥವಾ ಈ ಇಸ್ತಿಹಾರಿನಲ್ಲಿ ಕಂಡ ಹರಾಜು ಮೊದಲೇ ಖಾರೈಸಿ ಹೋಗಿದ್ದ ಪಕ್ಷಕ್ಕೆ ಡೆಪ್ಯುಟಿ ಕಮ್ಮಿಷನರವರು ಅವರಿಗೆ ಯುಕ್ತ ತೋರುವಂತೆ ಬೇರೆ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ. ಹರಾಜು ಮಂಜೂರಾದ ನಂತರ ಕೊಂಡುಕೊಂಡವನು ಮೃತಪಟ್ಟರೆ ಜವಾಬ್ದಾರಿಯು ಆತನ ವಾರಸುದಾರರು ಅಥವಾ ಆತನಿಂದ ವರ್ಗ ಪಡೆದವರನ್ನು ಹೊಂದಿರುತ್ತೆ.

7. ಮೇಲಿನ 6ನೇ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಹರಾಜುಗಳು ಷರತ್ತಿಗೆ ತಪ್ಪಿದ ಖರೀದಾಸ್ತುದಾರನ ಜವಾಬ್ದಾರೀಮೇಲೆ ನಡಿಯತಕ್ಕದ್ದು. ಇದರಿಂದ ಆತನು ಆದಾಯವನ್ನೆಲ್ಲಾ ಕಳೆದುಕೊಂಡವನಾಗುತ್ತಾನೆ. ಮತ್ತು ದುಸರೇ ಹರಾಜು ಅಥವಾ ಇತರೇವಿಧವಾದ ವಿಲೇವಾರಿ ಮಾಡುವಲ್ಲಿ ನಷ್ಟಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜಿನ ಪಟ್ಟು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೇ ಹರಾಜಾದಲ್ಲಿ ಅಥವಾ ಇತರೇ ವಿಧವಾಗಿ ವಿಲೇವಾರಿ ಆದಲ್ಲಿ ಬಿಡ ಸವಾಲ್ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾಬಾಕಿ ಉಳಿಯುವದನ್ನು ಆತನು ಭರ್ತಿಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಿನಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಠೇವಣಿ ಮೊಬಲಗುಗಳನ್ನು ವಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನು ಆತನಿಂದ ಜಮೀನು ಕಂದಾಯದ ಬಾಕಿಯಂತೆ ವಸೂಲ್ಮಾಡೋಣಾಗುತ್ತೆ. ಆದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಸದರೀ ಠೇವಣಿ ಮೊಬಲಗು ದುಸರೇ ಹರಾಜಿನಲ್ಲಿ ಸಂಭವಿಸುವ ಅಥವಾ ಇತರೇವಿಧವಾದ ವಿಲೇವಾರಿಯಿಂದ ಆಗುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಆ ಠೇವಣಿ ಮೊಬಲಗನ್ನೆಲ್ಲಾ ಸರಕಾರಕ್ಕೇನೆ ಜಮಾ ಮಾಡಿಕೊಳ್ಳತಕ್ಕದ್ದು :—

8. ಮೇಲಿನ 6ನೆ ಕಲಂನಲ್ಲಿ ಕಂಡ ಮೇರಿಗೆ ಹೊಂದಬೇಕಾದ ಲೈಸೆನ್ಸು ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು :—

(1) ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು ನೀಲಗಿರಿಯಲ್ಲಿ ಸರಕಾರದಿಂದ ಮಂಜೂರ್ಮಾಡಲ್ಪಡಬಹುದಾದ ಬ್ರೂಯರಿಗಳಲ್ಲಿಯಾಗಲಿ ಅಥವಾ ಕಿರ್ಕಿಯಲ್ಲಿ ಮಿಾರ್ಕಿ ಅಂಡ್ ಕೋ ಯವರಿಂದ ಕಾಯಿಸಲ್ಪಟ್ಟ ಅಥವಾ ಬೆಂಗಳೂರು ಷಿಪ್ರಿಹಾಂ ಮತ್ತು ಗಂಗಾಧರಶೆಟ್ಟಿ ಅಂಡ್ ಕೋ ಯವರಿಂದ ಯಾ ಸರ್ಕಾರದಿಂದ ಮಂಜೂರ್ಮಾಡಲ್ಪಡಬಹುದಾದ ಇತರ ಯಾವ ಬ್ರೂಯರಿಯಲ್ಲಿಯಾಗಲಿ ಕಾಯಿಸಲ್ಪಟ್ಟ ಸಂಸ್ಕೃತ ಬೀರು ಯಾ ಪೋರ್ಟರನ್ನು ಮಾರುವದಕ್ಕೆ ಮಾತ್ರವೇ ವ್ಯಾಪಿಸುತ್ತೆ.

(2) ಪ್ರತಿ ಅಂಗಡಿಯು ಇದಕ್ಕೆ ಜಂಟಿಸಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಹಾಲೀ ಜಾರೀಲಿರುವ ಅಂಗಡಿ ಒಳಗಾಗಲಿ ಯಾ ಅದರ ಸಮಿಾಪದಲ್ಲಿ ಆಗಲಿ ಇಡಲ್ಪಡಬೇಕು.

(3) ಪ್ರತಿ ತಿಂಗಳಿನಲ್ಲಿ ಮಾರಿದ ಬೀರು ಯಾ ಪೋರ್ಟರಿನ ಫೀಜುಗಳಿಗಾಗಿ ಕೊಡಬೇಕಾದ ಮೊಬಲಗನ್ನು ಮಾರನೇ ತಿಂಗಳಿನ ಮೊದಲನೇ ವಾರದಲ್ಲಿ ತಾಲ್ಲೂಕು ಖಜಾನೆಗೆ ಇದಕ್ಕಾಗಿ ಗೊತ್ತಾಗಿರುವ ಚಲನ್ ಮೂಲಕ ಪಾವತಿಯಾಗತಕ್ಕದ್ದು. ಲೈಸೆನ್ಸದಾರನಿಂದ ಠೇವಣಿ ಇಡಲ್ಪಟ್ಟಿರುವ ಮೊಬಲಗು ಗುತ್ತಿಗೆ ಅವಧಿಯ ಕೊನೇ 2 ತಿಂಗಳಿನ ಮೊಬಲಗಿಗೋಸ್ಕರ ಉಪಯೋಗಿಸಲ್ಪಡತಕ್ಕದ್ದು. ಮೇಲೆ ಹೇಳಿದ ಹಾಗೆ ಪಾವತಿ ಮಾಡಲಿಕ್ಕೆ ತಪ್ಪಿದಲ್ಲಿ ಡೆಪ್ಯುಟಿ ಕಮ್ಮಿಷನರವರು ಜಮೀನು ಕಂದಾಯ ವಸೂಲ್ಮಾಡುವದಕ್ಕೆ ಜಾರೀಲಿರುವ ನಿಬಂಧನೆಗಳ ಪ್ರಕಾರ ವರುಷಕ್ಕೆ ಶೇಕಡಾ 6 ರೂಪಾಯಿನಂತೆ ಬಡ್ಡಿ ನಿಸಿ ಬಾಕಿ ಮೊಬಲಗನ್ನು ವಸೂಲ್ಮಾಡುವದಕ್ಕೆ ತಕ್ಷಣ ಪ್ರವರ್ತಿಸತಕ್ಕದ್ದು. ಲೈಸೆನ್ಸದಾರನು ತಾನು ಕೊಡಬೇಕಾಗಿರುವ ಸರ್ಕಾರದ ಹಣಗಳಲ್ಲಿ ಯಾವ ಕಾರಣದಿಂದಲಾಗಲಿ ಮಾಫಿ ವಜಾ ಮುಂತಾದ್ದನ್ನು ಪಡೆಯುವದಕ್ಕೆ ಹಕ್ಕುದಾರನಾಗಿರುವದಿಲ್ಲ.

(4) ಲೈಸೆನ್ಸದಾರನಿಂದ ಕೊಂಡುಕೊಳ್ಳಲ್ಪಡತಕ್ಕ ಬೀರು ಅಥವಾ ಪೋರ್ಟರ್ ಬಾಬತು ಪ್ರತಿ ಒಂದು ಗ್ಯಾಲನಿಗೂ ರೂಪಾಯಿಗೆ 1 ಆಣೆ ಮೇರೆ ಲೋಕಲ್ ಸೆಸ್ ಸಹಿತವಾಗಿ ಎರಡಾಣೆಯಂತೆ ಫೀಸು ಕೊಡತಕ್ಕದ್ದು.

(5) ಲೈಸೆನ್ಸದಾರನು ಕೊಂಡುಕೊಂಡ ಬೀರು ಮತ್ತು ಪೋರ್ಟರ್ ಬ್ರೂಯರಿಯಿಂದ ತಾಲ್ಲೂಕು ಅಮಲ್ದಾರ್ರವರಲ್ಲಿಗೆ ಪ್ರಥಮತಃ ರವಾನಿಸಲ್ಪಡತಕ್ಕದ್ದು. ಸರಕಿನೊಂದಿಗೆ ಲೆಟರ್ ಆಫ್ ಅಡ್ವೈಸ್ ಎಂಬ ರಹದಾರಿಯನ್ನು ಅಮಲ್ದಾರ್ರಿಗೆ ಕಳುಹಿಸಬೇಕು. ಇದರ ಎರಡನೇ ಪ್ರತಿಯು ಎಕ್ಸೈಜ್ ಕಮ್ಮಿಷನರ್ ಸಾಹೇಬರವರ ಆಫೀಸಿಗೆ ರವಾನಿ

ಸಲ್ಪಡತಕ್ಕದ್ದು. ಮೇಲೆ ನಮೂದು ಮಾಡಲ್ಪಟ್ಟ ದರದ ಮೇರೆಗೆ ಲೋಕಲ್ ಸೆಸ್ ಸಹಿತವಾಗಿ ಹಾಸಲ್ ಮೊಬಲಗು ಗೊತ್ತಾದ ನಮೂನೆಯಲ್ಲಿ ಪಾವತಿ ಆದ ನಂತರ ಅಮಲ್ದಾರ್ರು ಅಥವಾ ಇವರಿಂದ ಈ ವಿಷಯದಲ್ಲಿ ಅಧಿಕಾರ ಪಡೆದ ಇತರೆ ಆಫಿಸರ್ರು ಸರಕನ್ನ ಲೈಸೆನ್‌ಸದಾರನು ತನ್ನ ಅಂಗಡಿಗೆ ಒಯ್ಯಲು ತಮ್ಮ ಸೈನಾದ ಪ್ಯಾಸ್ ಮೂಲಕ ಅಪ್ಪಣೆ ಕೊಡತಕ ದ್ದು.

(6) ಬೆಂಗಳೂರ್ರು ಸಿಟಿಯಲ್ಲಿರುವ ಪ್ರತಿ ಒಂದು ಬೀರು ಅಂಗಡಿಯ ಲೈಸೆನ್‌ಸದಾರನ್ನು ಮ್ಯುನಿಸಿಪಲ್ ರೆಗ್ಯುಲೇಷನ್ ಅನುಸರಿಸಿ ರಿಜಿಸ್ಟ್ರೇಷನ್ ರುಸುಂ ಬಗ್ಯೆ ಸಾಲಿಯಾನಾ 180 ರೂಪಾಯಿಗಳನ್ನು ಈ ಲೈಸೆನ್ಸ್ ಕೊಟ್ಟಿರುವ ಕಾಲದ ಮಟ್ಟಿಗೆ ಮುಂಗಡವಾಗಿ ಪಾವತಿ ಮಾಡತಕ್ಕದ್ದು.

(7) ಲೈಸೆನ್‌ಸದಾರನು ಸರ್ಕಾರದಿಂದ ಆಗ್ಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೆ ಸಾಧನಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲೆಕ್ಕ, ಬೀರು ಯಾ ಪೋರ್ಟರನ್ನು ಸಾಗಿಸುವ ಬಗ್ಯೆ ಬೇಕಾದ ರಹದಾರೀ ಅಥವಾ ಪ್ಯಾಸ್ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(8) ಲೈಸೆನ್‌ಸದಾರನು 1904ನೆ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ಹಳೇ ಲೈಸೆನ್‌ಸದಾರನು ಬಾಬತು ಸದರಿ ಅಂಗಡಿಯಲ್ಲಿ ದಾಸ್ತಾನ್ ಇರಬಹುದಾದ ಬೀರು ಅಥವಾ ಪೋರ್ಟರನ್ನು ಎಕ್ಸೈಜ್ ಕಮ್ಮಿಷನರ್ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರ ದ್ರವ್ಯವನ್ನು ಹಳೇ ಲೈಸೆನ್‌ಸದಾರನಿಗೆ ಪಾವತಿಮಾಡಿ ತೆಗದುಕೊಳ್ಳಲು ಗುರಿಯಾಗಿರತಕ್ಕದ್ದು.

(9) ಈ ಗುತ್ತಿಗೆ ಎಕ್ಸೈಜ್ ಕಮ್ಮಿಷನರ್ ಸಾಹೇಬರವರ ಮುಂಚಿತವಾದ ಅನುಮತಿ ಇಲ್ಲದೆ ಕ್ರಯ, ದಾನ, ಭೋಗ್ಯ ಅಥವಾ ಇನ್ನಾವ ವಿಧದಿಂದಲೇ ಆಗಲಿ ವರ್ಗವಾಗತಕ್ಕದ್ದಲ್ಲ.

(10) ಮುಕ್ತಾಯದಾರನು ಲೈಸೆನ್‌ಸದಾರನಂತೆಯೇ ಈ ಲೈಸೆನ್‌ಸಿನ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ ಇದರಲ್ಲಿ ನಮೂದಾಗುವ ದಂಡನೆಗಳಿಗೆ ಗುರಿಯಾಗುತ್ತಾನೆ.

(11) ಅವನು ಮಂಜೂರ್ಮಾಡಲ್ಪಟ್ಟ ಬೀರ್ ಯಾ ಪೋರ್ಟರನ್ನು ಮಾತ್ರವೇ ಮಾರತಕ್ಕದ್ದು. ಒಂದು ಇಂಪೀರಿಯಲ್ ಕ್ವಾರ್ಟ್ ಕಿಸೆಮರಿವಿಗೂ ಅಂಗಡಿಯಲ್ಲಿ ಕುಡಿಯಲಿಕ್ಕೆ ಮಾರಬಹುದು: ಮತ್ತು ಸ್ಪೆಷಲ್ ಪ್ಯಾಸುಗಳ ಆಧಾರದ ಮೇಲೆ ಹೊರಗೆ ಕುಡಿಯಲಿಕ್ಕೆ ಕೊಡಲ್ಪಡುವ ಬೀರ್ ಒಂದು ಇಂಪೀರಿಯಲ್ ಗ್ಯಾಲನ್‌ಗಳು ಅಂದರೆ ನಾಲ್ಕು ಸೇರುಗಳಿಗಿಂತಾ ಹೆಚ್ಚಾಗಿರಕೂಡದು.

(12) ಅವನು ಪ್ರತ್ಯಕ್ಷವಾಗಿಯಾದರೂ ಪರೋಕ್ಷವಾಗಿಯಾದರೂ ಯಾವ ತರಹೆಯ ಬೀರು ಯಾ ಪೋರ್ಟರು ಎಷ್ಟುಮಟ್ಟಿಗಾದರೂ ಯಾವ ಯುರೋಪಿಯನಿಗೂ ಅಥವಾ ನಾನ್ ಕಮ್ಮಿಷನ್ಡ್ ಆಫಿಸರಿಗಾದರೂ, ಪ್ರೈವೇಟ್ ಸೋಲ್ಜರಿಗಾದರೂ, ಸದರಿ ಜನಗಳಿಗೆ ಸಂಬಂಧಪಟ್ಟ ಯಾವ ಯೂರೋಪಿಯನ್ ಅಥವಾ ಈಸ್ಟಿಂಡಿಯನ್ ಹೆಂಗಸರಿಗಾದರೂ ಮಾರಲೂ ಕೂಡದು. ಅವನು ಯಾ ಅವಳು ತನ್ನ ಅಂಗಡಿಯಲ್ಲಿ ಅಥವಾ ತನ್ನ ಅಂಗಡಿಯ ಆವರಣದಲ್ಲಿ ಅವರು ಕುಡಿಯಲಿಕ್ಕೆ ಅವಕಾಶ ಕೊಡಕೂಡದು. ತನ್ನ ಅಂಗಡಿಯಲ್ಲಿ ಬಂದ ಜನಗಳು ಕುಡಿದು ಬಹಳ ನಿಷಾಹತ್ತಿ ಬೀಳುವಂತೆ ಮಾಡಕೂಡದು, ಮತ್ತು ಅವರು ಅಕ್ರಮವಾಗಿ ನಡೆಯುವಂತೆಯೂ ಅಂಗಡಿಯಲ್ಲಿ ಜೂಜು ವಗೈರೆ ಆಡುವಂತೆಯೂ ಮಾಡಕೂಡದು. ವ್ಯಭಿಚಾರಿಗಳನ್ನಾದರೂ ಬಹಿರಂಗವಾದ ದುರ್ನಡತೆಯುಳ್ಳ ಜನಗಳನ್ನಾದರೂ ತನಗೆ ತಿಳಿದು ತನ್ನ ಅಂಗಡಿಗೆ ಬರುವಂತೆಯಾದರೂ ಅಂಗಡಿಯಲ್ಲಿರುವಂತೆಯಾದರೂ ಮಾಡಕೂಡದು. ಸೋಲ್ಜರಾದರೂ ಇತರರಾದರೂ ಫರಾರಿ ಆದವರೆಂದು ತಿಳಿದಾದರೂ, ಅಥವಾ ಅಂಥವರೆಂದು ಎಣಿಸುವದಕ್ಕೆ ಕಾರಣವಿದ್ದಾದರೂ ಅಂಥವರಿಗೆ ತನ್ನ ಅಂಗಡಿಯಲ್ಲಿ ಸ್ಥಳ ಕೊಡಲೂ ಕೂಡದು, ಮನಃಪೂರ್ತಿಯಾಗಿ ಅವರನ್ನು ಛಪಾಯಿಸಿ ಇಡಲೂಕೂಡದು. ಮತ್ತು ಗುಮಾನಿ ನಡತೆಯುಳ್ಳ ಜನಗಳು ಕಾಣಬಂದಲ್ಲಿ ಅವರ ವಿಷಯವಾಗಿ ಪೋಲೀಸ್ ಆಫಿಸರ್ ಯಾ ಮೇಜಿಸ್ಟ್ರೇಟರಿಗೆ ತಿಳಿಸತಕ್ಕದ್ದು. ಮತ್ತು ಉದ್ಯೋಗದ ಮೇಲೆ ಇರುವಾಗ ಯಾವ ಪೋಲೀಸ್ ಆಫಿಸರಿಗೆಯಾಗಲಿ, ರೈಲ್ವೆ ನೌಕರನಿಗೇಯಾಗಲಿ, ಎಕ್ಸೈಜ್ ಆಫಿಸರಿಗೆಯಾಗಲಿ, ಹುಚ್ಚರಿಗೆ ಆಗಲಿ ಬೀರ್ ಅಥವಾ ಪೋರ್ಟರನ್ನು ಮಾರಲೂಕೂಡದು.

(13) ಅವನು ತನ್ನ ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ಒಂದು ಹಲಿಗೇ ಮೇಲೆ ತನ್ನ ಹೆಸರು, ಮಾರುವವನ ಹೆಸರು, ಅಂಗಡಿ ನಂಬರ್ ಮತ್ತು ಅದರಲ್ಲಿ ಮಾರಲಿಕ್ಕೆ ಲೈಸೆನ್ಸ್ ಪಡೆದಿರುವ ಪದಾರ್ಥದ ಹೆಸರನ್ನೂ ಸಹ ವ್ಯಕ್ತವಾಗಿ ಬರಿಸಿ ಇಡಬೇಕು.

(14) ಅವನು ಯಾವ ದಿನಸು ಯಾ ನಗವನ್ನಾಗಲಿ ಬದಲಿಯಾಗಿಯಾದರೂ ಆಧಾರವಾಗಿಯಾದರೂ ತೆಗದುಕೊಳ್ಳಕೂಡದು, ಮತ್ತು ತಾನು ಮಾರಿದ ಬೀರು ಯಾ ಪೋರ್ಟರಿಗೆ ಇಂಪೀರಿಯಲ್ ಗ್ಯಾಲನ್ ಒಂದಕ್ಕೆ ದರ ಒಂದುವರೆ ರೂಪಾಯಿ ಮೇರಿಗೆ ನಗದಾಗಿ ಹಣ ತೆಗದುಕೊಳ್ಳಬೇಕು. ಮತ್ತು ಚಿಲ್ಲರೆಯಾಗಿ ಮಾರುವದಕ್ಕೆ ದಾಮಾಷಾಯಿ ಪ್ರಕಾರ ಖರೀದಿ ವಸೂಲ್ಮಾಡಬೇಕು.

(15) ಈ ಲೈಸೆನ್ಸ್ ಪ್ರಕಾರ ಮಾರುವ ಪ್ರತಿ ಒಂದು ಹಾಗ್ಸ್ ಹೆಡ್ಡಿಗೆ ಬೀರ್ ಯಾ ಪೋರ್ಟರ್‌ನಲ್ಲಿ ಮಾಲ್ಟ್ ಎಂಬ ಪದಾರ್ಥದ ಅಥವಾ ಅದರಿಂದ ತಯಾರಾದ ಯಾವದಾದರೂ ಪದಾರ್ಥದ ಶೇಕಡಾ 75ರಷ್ಟನ್ನೂ ಕೆಂಟು ದೇಶದಲ್ಲಿ ಬೆ

ಳಿನಂಥಾ ಒಳ್ಳೇದಾಗಿ ಇರುವ ಮೂರು ಪರ್ಲ್ ಹಾಪಸ್ ಎಂಬ ಹುವ್ವುಗಳನ್ನೂ ಸೇರಿಸಿರಬೇಕು. ಮತ್ತು ಮೇಲ್ಕಂಡ ಬೀರು ಯಾ ಪೋರ್ಟರನ್ನು ಭಟ್ಟೀ ಕಾರಖಾನೆಯಿಂದ ಖರೀದಿಗೆ ತಂದಕಾಲದಲ್ಲಿದ್ದ ಸ್ಥಿತಿಯಲ್ಲಿಡಬೇಕೇ ಹೊರ್ತು ನೀರಿನಿಂದ ಮಿಶ್ರಪಡಿಸಕೂಡದು ಯಾ ಇತರ ಪದಾರ್ಥಗಳನ್ನ ಬೆರಸಿ ಕೆಡಿಸಕೂಡದು. ಬೀರಿನ ಊಟಿಯ ಷುರು ತೂಕವು ಫಾರನ್ಹೈಟಿನ 60° ಉಷ್ಣವಿರುವಾಗ 1070 ಸಂಖೆಯನ್ನು ಮೀರಕೂಡದು. ಬೀರು ಮತ್ತು ಪೋರ್ಟರ್‌ನಲ್ಲಿ ಅಲ್ಕೋಹಾಲ್ ಯಾ ನಿಷಾ ಪದಾರ್ಥವು ಮೊತ್ತದಲ್ಲಿ ಶೇಕಡಾ 8ಕ್ಕೆ ಜಾಸ್ತಿಯಾಗಿರಕೂಡದು. ಬೀರು ಮತ್ತು ಪೋರ್ಟರ್‌ನಲ್ಲಿ ಮೊತ್ತದಲ್ಲಿ ಶೇಕಡಾ 8ಕ್ಕೆ ಜಾಸ್ತಿಯಾಗಿರತಕ್ಕ ಎಲ್ಲಾ ಅಲ್ಕೋಹಾಲಿನ ಮೇಲೆ ಪ್ರೂಫ್ ಷರಾಬಿನ ಗ್ಯಾಲನ್ 1ಕ್ಕೆ ವಿಧಾಯಕವಾಗಿರುವ ದರದಂತೆ ಲೋಕಲ್ ಸೆಸ ಸಹಿತ ಡ್ಯೂಟಿ ಯಾ ಹಾಸಲನ್ನು ಲೈಸೆನ್ಸದಾರನು ಕೊಡಲು ಬದ್ಧನಾಗಿರುವನು ಮತ್ತು ಪ್ರಾಸಿಕ್ಯೂಷನ್‌ಗೆ ಗುರಿಯಾಗಿರುವನು. ಇಂಥಾ ಬೀರ್ ಯಾ ಪೋರ್ಟರ್‌ವುಳ್ಳ ಒಂದು ಸೀಸಾಯನ್ನು ಎಕ್ಸೈಜ್ ಇಲಾಖೆಯವರು ಅಪೇಕ್ಷಿಸಿದಾಗ ಅಜಮಾಯಿಷಿ ಮಾಡುವದಕ್ಕಾಗಿ ಭಟ್ಟೀ ಕಾರಖಾನೆಯಿಂದ ಯಾ ಅಂಗಡಿಯಿಂದ ಕಳುಹಿಸಬೇಕು.

(16) ಸ್ಥಳದ ಅಧಿಕಾರವುಳ್ಳ ಯಾವ ಮ್ಯಾಜಿಸ್ಟ್ರೇಟರಾಗಲಿ ಅಥವಾ ಮ್ಯಾಜಿಸ್ಟ್ರೇಟರ ಹುಕುಮನ್ನು ಪಡೆದ ಯಾವ ಅಧಿಕಾರಿಯಾಗಲಿ ಅಥವಾ ಅಧಿಕಾರ ಹೊಂದಿದ ಎಕ್ಸೈಜ್ ಆಫಿಸರಾಗಲಿ ಯಾವ ಹೊತ್ತಿನಲ್ಲಿಯಾದರೂ ಅಂಗಡಿಯೊಳಗೆ ಪ್ರವೇಶಮಾಡಿ ಅಲ್ಲಿರುವ ಬೀರ್ ಮತ್ತು ಪೋರ್ಟರನ್ನು ಅಜಮಾಯಿಷಿ ಮಾಡಲು ಅವರಿಗೆ ಅವಕಾಶ ಕೊಡಬೇಕು, ಮತ್ತು ಲೈಸೆನ್ಸನ್ನು ಅಂಗಡಿಯಲ್ಲಿ ಅವಶ್ಯಕವಾಗಿ ಲೈಸೆನ್ಸದಾರನಿಂದಲೂ, ವ ಮಾರುವವನಿಂದಲೂ ಇಡಲ್ಪಡಬೇಕಾದ ಲೆಖ್ಖಗಳನ್ನೂ ಅವರು ಪರಿಶೋಧನೆ ಮಾಡಲಿಕ್ಕೆ ಹಾಜರ್‌ಮಾಡಬೇಕು. ಮತ್ತು ಈ ಲೆಖ್ಖಗಳು ಸಾಚಾ ಮತ್ತು ಕರಾರುವಾಕಾವಾಗಿರಬೇಕಲ್ಲದೆ ವಿಧಾಯಕವಾಗಿರುವ ನಮೂನೆಗಳಲ್ಲಿ ರೋಜೇನಾ ಬರೆದಿರಬೇಕು. ತಿರಸ್ಕರಿಸಲ್ಪಟ್ಟ ತಮಾಂ ಬೀರನ್ನೂ ನಾಶಪಡಿಸತಕ್ಕದ್ದು.

(17) ಸದರಿ ಅಂಗಡಿಯನ್ನು ರಾತ್ರಿ 9 ಘಂಟೆಗೆ ಮುಚ್ಚಬೇಕು. ಹಬ್ಬ ಮುಂತಾದ ದಿವಸಗಳಲ್ಲಿ ವಿಶೇಷ ಅಪ್ಪಣೆ ಮೇಲೆ ಹೊರ್ತು ಬೆಳಿಗ್ಯೆ ಸೂರ್ಯೋದಯಕ್ಕೆ ಮುಂಚಿತವಾಗಿ ಅಂಗಡಿ ಬಾಗಲು ತೆಗಿಯಕೂಡದು.

(18) ಕಮಿಸರಿಯಾಟ್ ಇಲಾಖೆಯ ಉಪಯೋಗಕ್ಕಾಗಿ ತರಿಸಿ ಮಿಲಿಟೇರಿ ಅಥವಾ ಇತರ ಇಲಾಖೆಗಳಿಂದ ತಿರಸ್ಕರಿಸಲ್ಪಟ್ಟ ಬೀರನ್ನು ಅಂಗಡಿಯಲ್ಲಿ ಮಾರಲಿಕ್ಕೆ ಯಾವ ಕಾರಣಗಳಿಂದಲೂ ರವಾನಿಸಲ್ಪಡಕೂಡದು.

(19) ಸದರಿ ಅಂಗಡಿಗೆ ಒಂದೇಬಾಗಲಿರಬೇಕು. ಹಿಂಭಾಗದಲ್ಯಾದರೂ ಕೊನೇಭಾಗಗಳಲ್ಯಾದರೂ ಕಿಟಕಿ ಇರಕೂಡದು. ಬೀರ್ ಮಾರುವ ಜಗಲಿಯು, ಅಂಗಡಿಯೊಳಗೆ ಇರುವ ಜನಗಳು ಅಂಗಡೀ ಮುಂದೆ ಬೀದೀಲಿ ತಿರುಗಾಡುವ ಜನಗಳಿಗೆ ಕಾಣುವ ಹಾಗೆ ಬಾಗಲಿಗೆ ಎದುರಾಗಿ ಇರತಕ್ಕದ್ದು, ಮತ್ತು ಪಾನೀಕರಿಗೆ ಇದಕ್ಕೆ ಸೇರಿದ ಹಾಗೆ ಎರಡನೇ ಕೊಠಡಿ ತೆರದಿರಕೂಡದು.

(20) ಲೈಸೆನ್ಸದಾರನು ಹಾಲಿ ಜಾರೀಲಿರುವ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಾದರ್‌ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

9. ಲೈಸೆನ್ಸದಾರನ ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಯನ್ನು ತೆಗಿಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನ ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣಿ ಮೊಬಲಗನ್ನ ದಂಡವಾಗಿ ಸರಕಾರಕ್ಕೆ ದಾಖಲ್‌ಮಾಡಿಕೊಂಡಿರುತ್ತೆಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನ ರದ್ದು ಮಾಡಿ ಸದರೀ ಲೈಸೆನ್ಸದಾರನ ಜವಾಬ್ದಾರಿ ಮೇಲೆ ಮೇಲ್ಕಂಡ ಹಕ್ಕನ್ನ ಪುನಹ ಹರಾಜು ಮಾಡಲಿಕ್ಕೂ ಯಾ ಇತರ ವಿಧವಾಗಿ ವಿಲೇ ಮಾಡಲಿಕ್ಕೂ ಡೆಪ್ಯುಟಿ ಕಮಿಷನರವರು ಮೊಖ್ತ್ಯಾರಾಗಿ ಇರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 190 ;ನೆ ಇಸವಿ ಜುಲೈ ಗುರ್‍ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣವರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟ ದೇಖೀಲು ಸದರೀ ಲೈಸೆನ್ಸದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಲೈಸೆನ್ಸ ರದ್ದು ಮಾಡಲ್ಪಟ್ಟರೆ ಪೂರಾಕಾಲದ ಗುತ್ತಿಗೆ ಹಣವು ಕೊಡಲ್ಲ ಪಾವತಿ ಮಾಡಲಿಕ್ಕೆ ಗುರಿಯಾಗತಕ್ಕದ್ದು ; ಮತ್ತು ಅಂಥಾ ಮೊಬಲಗು ಜಮೀನ್ ಕಂದಾಯದ ಬಾಕಿಯಂತೆ ಎಲ್ಲಾ ನಷ್ಟಗಳ ಸಹಿತವಾಗಿ ವಸೂಲ್‌ಮಾಡಲ್ಪಡತಕ್ಕದ್ದು.

10. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನುಗಳಿಗೆ ವಿರೋಧವಾಗಿ ನಡಿಸಿದ ತಕ್ಸೀರಿಗೆ ಲೈಸೆನ್ಸದಾರರನ್ನಾಗಲಿ ಯಾ ಆತನ ನೌಕರರನ್ನಾಗಲಿ ಆಪಾದಿಸಿ ದರ್ಯಾಫ್ತು ಕ್ರಮ ನಡಿಸಲು ಆತಂಕ ಪಡಿಸುವದಿಲ್ಲ.

ಪಿ. ಎನ್. ಪೂರ್ಣಯ್ಯ,
ಮೈಸೂರು ಶೀಮೆಯ ಎಕ್ಸೈಜ್ ಕಮಿಷನರ್.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್.

1904ನೆ ಇಸವಿ ತಾರೀಖು ರಲ್ಲು.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನೆಂದರೆ—ಇದರಡಿ ಕಂಡ ಮೈಸೂರು ಡಿಸ್ಟ್ರಿಕ್ಟ್ ಡಿಪೋಗಳಲ್ಲಿ ಅದರ ಬಾಜೂದಲ್ಲಿ ನಮೂದಿಸುವ ತಾರೀಖುಗಳಲ್ಲಿ ಚೌಬೀನೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಬೆಳಿಗ್ಯೆ 8 ಘಂಟೆಗೆ ಹರಾಜು ಶುರುವಾಗುತ್ತೆ:—

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	[illegible]	ಸುಮಾರು ಚೌಬೀನೆ ಮೊತ್ತ.											
				ಸಾಗ್ವಾನಿ ನಾಟಾ ಮತ್ತು ಜಂತೆ.		ಮಿನ್ನಾ ಜಾತಿ ನಾಟಾ ಮತ್ತು ಜಂತೆ.		ಕಾಡುನಾಟಾ ಮತ್ತು ಜಂತೆ.		ಸಾಗವಾನಿ ಸರಾ.		ಮಿನ್ನಾ ಜಾತಿ ಸರಾ.		ಕಾಡಸರಾ.	
				ಅದದು.	ಸಲಿ ಅಡಿ.	ಅದದು.	ಸಲಿ ಅಡಿ.	ಅದದು.	ಸಲಿ ಅಡಿ.	ಅದದು.	ಸಲಿ ಅಡಿ.	ಅದದು.	ಸಲಿ ಅಡಿ.	ಅದದು.	ಸಲಿ ಅಡಿ.
1	ಮೈಸೂರು ವುಡಿ ಯಾರ್ಡ್.	4-4-04	[illegible]	436	5299	340	6114	20	397	277	300	5	60	...	...
2	ನಂಜನಗೂಡು ಡಿಪೋ.	6-4-04	[illegible]	502	5419	369	4639	...	...	...	...	8	76	40	363

ಷರತ್ತು:—1895ನೆ ಇಸವಿ ಮಾರ್ಚಿ 10ನೆ ಮರ್ಸ್ಯಂ 1529—R. F. 155—92ನೆ ನಂಬರು ಇಸ್ತಿಹಾರ್ನಾಮೆಯನ್ನು 25—1—1895ನೆ ಮರ್ಸ್ಯಂ 15ನೆ ನಂಬರು ಮೈಸೂರು ಗೆಜೆಟ್ಟಿನಲ್ಲಿ ಘಾಯಿಷ್ ಮಾಡಿರುತ್ತೆ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಮೈಸೂರು ಡಿಸ್ಟ್ರಿಕ್ಟ್.

ನೋಟಿಫಿಕೇಷನ್.

ತಾರೀಖು 16ನೆ ಮಾರ್ಚಿ 1904.

ಇದರಿಂದ ಸಮಸ್ತ ಜನಗಳಿಗು ತಿಳಿಯಪಡಿಸುವದೇನೆಂದರೆ,—ಈ ಕೆಳಗೆ ಕಂಡ ಜನಗಳು ಅವರವರ ಹೆಸರಿನ ಬಾಜೂದಲ್ಲಿ ಕಂಡ ಸ್ಥಳಗಳಲ್ಲಿ ಚೌಬೀನೆ ಮತ್ತು ಬಿದರು ವಗ್ಯರ ಬಗ್ಗೆ ಲೈಸೆನ್ಸುಗಳು ಕೊಡುವ ಬಗ್ಯೆ ಲೈಸೆನ್ಸುಗಳು ಛಕ್ಕು ಮಾಡುವ ಬಗ್ಯೆ ಲೈಸೆನ್ಸು ವೆಂಡರಾಗಿ ನೇಮಕ ಮಾಡಲ್ಪಟ್ಟಿರುತ್ತಾರೆ:—

ತಾಲ್ಲೂಕು ಹೆಸರು.	ಸ್ಥಳದ ಹೆಸರು.	ಲೈಸೆನ್ಸುದಾರ್ರ ಹೆಸರು.
ಗುಂಡ್ಲು ಪೇಟೆ ...	ಯರಿಯೂರು ...	ಲಕ್ಷ್ಮೀನಾರಣಪ್ಪನವರು
ಹೆಗ್ಗಡದೇವನಕೋಟೆ ...	ಮಳಿಯೂರು ...	ದಾಸೆಗೌಡ
ಚಾಮರಾಜನಗರ ...	ಮೂಕಹಳ್ಳಿ ...	ಗುರುಮಾದೇವರು
ಹುಣಸೂರು ...	ವೀರನಹೊಸಹಳ್ಳಿ ...	ನಂಜುಂಡೈಯ್ಯ
ಡಿಪೋ ...	ಕೊಪ್ಪ ...	ಶಿವರಾಮಯ್ಯ

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮಿಷನರ್, ಮೈಸೂರ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 21ನೆ ಮಾರ್ಚಿ 1904.

ಇದರಿಂದ ತಿಳಿಯಪಡಿಸುವದೇನೆಂದರೆ:—ಈ ಕೆಳಗೆ ನಮೂದಿಸಿರುವ ಸಬ್ ರಿಜಿಸ್ಟ್ರಾರಾಫೀಸುಗಳಲ್ಲಿ ರಿಜಿಸ್ಟರಾದ ತಾರೀಖು ಲಾಗಾಯಿತು ಎರಡು ವರುಷಗಳಿಗೆ ಮೇಲಟ್ಟು ಬೇವಾರ್‍ಸ್ಸಾಗಿರುವ ತಂಸೂಕುಗಳನ್ನು ಕ್ರಮವಾದ ವಾರಸುದಾರರಾಗಲಿ ಅಥವಾ ಅವರಿಂದ ಅಧಿಕಾರ ಹೊಂದಿದ ಮುತಾಲೀಕರೇಯಾಗಲಿ ಈ ಇಸ್ತಿಹಾರ್ನ್ನಾಮಾ ಮೈಸೂರು ಗೆಜೆಟ್ಟಿನಲ್ಲಿ ಛಾಯಿಷ್ ಆದ ತಾರೀಖು ಲಾಗಾಯಿತು ಒಂದು ತಿಂಗಳ ವಳಗಾಗಿ ಆಯಾಯ ಸಬ್ ರಿಜಿಸ್ಟ್ರಾರರ ಮುಂದೆ ಹಾಜರಾಗಿ ತೆಗದುಕೊಂಡು ಹೋಗಬಹುದು. ಇಲ್ಲವಾದರೆ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟ್ 85ನೆ ಪ್ರಕರಣಾನುಗುಣವಾಗಿ ನಾಶಪಡಿಸಲ್ಪಡುತ್ತೆ.

ಆಫೀಸಿನ ಹೆಸರು.	ಯಾವ ಬುಕ್ಕು.	ದಸ್ತಾವೇಜಿನ ನಂಬರು.	ಪತ್ರ ಹುಟ್ಟಿದ ತಾರೀಖು.	ಪತ್ರ ರಿಜಿಸ್ಟರಾದ ತಾರೀಖು.	ದಸ್ತಾವೇಜನ್ನು ಬರದುಕೊಟ್ಟವರ ಹೆಸರು.	ದಸ್ತಾವೇಜನ್ನು ಬರಸಿಕೊಂಡವರ ಹೆಸರು.	ಪತ್ರದ ಸ್ವಭಾವ ಮತ್ತು ಕಿಮ್ಮತ್ತು.
ಕೋಲಾರ ...	I	672 / 1900—01	21 5 1901	21—5—1901	ಮುನಿಬೈರಂಣಾ	ಶ್ಯಾಮಂಣ ...	ಕ್ರಯ ಪತ್ರ 16 ರೂಪಾಯಿಗಳಿಗೆ
ಬವರಿಂಗುಪೇಟೆ ...		131	29—6—1901	3—8—1901	ಯಲ್ಲಪ್ಪಶೆಟ್ಟಿ ...	ಕ್ರಿಸ್ಣಪ್ಪ ..	ಕ್ರಯ ಪತ್ರ 40 ರೂಪಾಯಿಗಳಿಗೆ
	I	343	29—10—1901	31—10—1901	ರಾಮಸ್ವಾಮಿ ಶೆಟ್ಟಿ ...	ಸಾಬಿಜಾನ್ ಸಾಬ್ ...	ಕ್ರಯ ಪತ್ರ 400 ರೂಪಾಯಿಗಳಿಗೆ
ಶ್ರೀನಿವಾಸಪುರ	IV	8 / 1900—01	18 2 1901	18—2—1901	1. ಅಲ್ಲಿಖಾನ್ ... 2. ಹನುಮಂತಪ್ಪ ...	ಅಬ್ದುಲ್ಲಾಸಾಬಿ ...	ಕ್ರಯ ಪತ್ರ 1,400 ರೂಪಾಯಿಗಳಿಗೆ
	IV	13 / 1900—01	16—3—1901	18—3—1901	ಹನುಮಂತಪ್ಪ ...	ಅಬ್ದುಲ್ಲಾಸಾಬಿ ...	ಕ್ರಯ ಪತ್ರ 90 ರೂಪಾಯಿಗಳಿಗೆ
	I	280 / 1900—01	1—6—1901	1—6—1901	ಚೌಡಮ್ಮ ...	ಅಬ್ದುಲ್ಲಾಸಾಬಿ ..	ಕ್ರಯ ಪತ್ರ 50 ರೂಪಾಯಿಗಳಿಗೆ
	I	287 / 1900—01	10—6—1901	10—6—1901	ಸುಲೇಮಾನ್‌ಸಾಬಿ ...	ದಾದೂಸಾಬಿ .	ಖುಲಾಸೆ ಪತ್ರ 30 ರೂಪಾಯಿಗಳಿಗೆ
	I	70 / 1901—02	12—9—1901	18—9—1901	ಗ.ಲಾಂ ಹುಸೇನ್ ಸಾಬಿ ...	ದರ್ಜಿ ವೆಂಕೋಜಿ ...	ಆಧಾರ ಪತ್ರ 20 ರೂಪಾಯಿಗಳಿಗೆ
ಮುಳಬಾಗಲ್ ...	I	104 / 1901—02	1—8—1901	8—8—1901	ಶ್ಯಾನುಭೋಗ ರಾಮರಾವ್ ...	ಕಾಶಂಮ .	ಕ್ರಯ ಪತ್ರ 11 ರೂಪಾಯಿಗಳಿಗೆ
	I	232 / 1901—02	12—10—1900	7—11—1901	ಮುನಿಶಾಮಿ ...	ಅಬ್ದುಲ್ ವಹಾಬ್ ...	ಬಾಡಿಗೆ ದಸ್ತೈವಜು 150 ರೂಪಾಯಿಗಳಿಗೆ
	II	2 / 1901—02	16—1—1901	6—11—1901 ದಸ್ತೈವಜು ನಿರಾಕರಿಸಿದ ತಾರೀಖು.	1. ವೆಂಕಮ್ಮ 2. ರಾಮಚಂದ್ರರಾವ್ ...	ಹನುಮೇಗೌಡ ...	ಪ್ಲವ ಸಂವತ್ಸರದ ಲಾಗಾಯಿತು 15 ವರುಷಗಳಿಗೆ ವರುಷ 1ಕ್ಕೆ 4 ಖಂಡಗ ಭತ್ತ ಕೊಡುವದಾಗಿ ಜಮೀನ್ ಗುತ್ತಿಗೆ ದಸ್ತೈವಜು ರಶೀತಿ 40 ರೂಪಾಯಿಗಳು ಸಂದಿರುವದಾಗಿ
ಮಾಲೂರು ...	I	378 / 1901—02	16—1—1902	17—1—1902	ವೆಂಕೋಬಾಯಮ್ಮ ...	1. ಚಿಕ್ಕಮುನಿಗ 2. ತಿಮ್ಮಕ್ಕ ವಗ್ಯರೆ ...	
ಶಿಡ್ಲಘಟ್ಟ ...	I	512 / 1901—02	16—2—1902	18—2—1902	ಮುನೆಕ್ಕ ...	1. ಐಯ್ಯಂಣ 2. ಹುನುಮಪ್ಪ ...	ಗುತ್ತಿಗೆ ಪತ್ರ ವರುಷ 1ಕ್ಕೆ ಒಂದುವರೆ ಖಂ॥ ರಾಗಿಯು ನಗದು 7-8-0 ರೂ. ಕೊಡುವದಾಗಿ
ಗೌರೀಬಿದನೂರು...	II	9 / 1900—01	4—2—1900	29—1—1901 ದಸ್ತೈವಜು ನಿರಾಕರಿಸಿದ ತಾರೀಖು.	ವೆಂಕಟರಮಣ ...	ಭೀಮಸೇನರಾವ್ ...	ಗುತ್ತಿಗೆ ಪತ್ರ 6 ವರುಷಗಳು ವಾಯಿದೆ ವರುಷ 1ಕ್ಕೆ 8-4-0 ನಂತೆ ಗುತ್ತಿಗೆ ಕೊಡುವದಾಗಿ

ಕೆ. ಆರ್. ಶ್ರೀನಿವಾಸಯ್ಯಂಗಾರ್, ಛಾರ್ಜಿ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

589

ತುಮಕೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 23ನೆ ಮಾರ್ಚಿ 1904.

1. ಕಂದಾಯದ ಬಾಕೀದಾರರಾದ ತುರ್ವೇಕೆರೆ ಗ್ರಾಮದ ಜೋಡಿದಾರ್ ಗೋಪಾಲದೀಕ್ಷಿತರು ವಗೈರೆರಿಂದ ಬರಬೇಕಾದ ಜಮಿರ್ಹಾ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ತುಮಕೂರು ಡಿಸ್ಟ್ರಿಕ್ಟು ತುರ್ವೇಕೆರೆ ಸಬ್ ತಾಲ್ಲೂಕು ಕಛೇರಿಯಲ್ಲಿ 23—5-1904ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ. ಹರಾಜು ಸದರಿ ತಾರೀಖು ದಿವ 11 ಘಂಟೆಗೆ ಉಪಕ್ರಮಿಸಲ್ಪಡತ್ತೆ. ಸ್ವತ್ತು ಏಕವಂ ಜಮದಂಬಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 52—11—6 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫೆನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕೀಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮೀಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮೀಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮೀಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮೀಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರ್ರ ಹೆಸರು.	ಸ್ವತ್ತಿನ ತಪ್ಸೀಲ. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು	ಖುಷ್ಕಿ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಆಕಾರ.	ಸರ್ಕಾರಕ್ಕೆ ಬರಬೇಕಾದ ನೋಟಿಸ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.	
					ರೂ. ಆ. ಪೈ.			ಖ. ಕೊ. ಪ.	ರೂ. ಆ. ಪೈ.	ರೂ. ಆ. ಪೈ.	
ತುರ್ವೇಕೆರೆ ಸಬ್ ತಾಲ್ಲೂಕು	ತುರ್ವೇಕೆರೆ	ಜೋಡಿ ಅರಶಿನದಹಳ್ಳಿ	1. ಗೋಪಾಲದೀಕ್ಷಿತರು, 2. ಭೋಜರಾಯಿ ದೀಕ್ಷಿತರು, 3. ಕೃಷ್ಣದೀಕ್ಷಿತರು. 4. ನಂಜಮ್ಮ.	...	...	ಟೈಟಲ್ ಡೀಡ ನಂ. 10-502	ಖುಷ್ಕಿ	10 2 15	150 0 0	51 11 6	
2. (a) ಕೋಲಾರದ ಚಿನ್ನದ ಗಣಿಗಳ ಅಂಗಡಿಗಳಿಗೆ 60 ರೂಪಾಯಿಗಳನ್ನು, ಮೈಸೂರು ಬೆಂಗಳೂರು ಷಹರುಗಳ ಅಂಗಡಿಗಳಿಗೆ 25 ರೂಪಾಯಿಗಳನ್ನು, ಇತರ ಸ್ಥಳಗಳಲ್ಲಿನ ಅಂಗಡಿಗಳಿಗೆ 10 ರೂಪಾಯಿಗಳನ್ನು ಅಥವಾ ಹರಾಜ್ ಮಾಡತಕ್ಕ ಆಫೀಸರರು ಗೊತ್ತು ಮಾಡುವ ಇತರ ನ್ಯಾಯವಾದ ಮೊಬಲಗನ್ನು ಹರಾಜಿನಲ್ಲಿ ಪ್ರತಿ ಸವಾಲ್‌ದಾರನೂ ಠೇವಣಾತಿ ಇಡತಕ್ಕದ್ದು. ಹರಾಜು ತಾರೀಖಿಗೆ ಮುಂಚೆ 3 ದಿವಸಗಳೊಳಗಾಗಿ ಸದರೀ ಮೊಬಲಗನ್ನು ಸವಾಲ್‌ದಾರನು ಕೊಟ್ಟರು ತೆಗೆದುಕೊಳ್ಳಲ್ಪಡುತ್ತದೆ. ಆದರೆ ಸರ್ಕಾರದವರು ಅಂಥಾ ಆರಂಭದ ಠೇವಣಾತಿ ಮೊಬಲಗನ್ನು ಯಾವಾಗ ಬೇಕಾದರೂ ಆವಶ್ಯಕವಿಲ್ಲವೆಂದು ಬಿಟ್ಟುಬಿಡಬಹುದು. ಸದರೀ ಅಂಗಡಿ ಯಾ ಅಂಗಡಿಗಳ ಸಮುದಾಯಗಳಿಗೆ ಯಾರ ಚಡದರಖಾಸ್ತು ಅಂಗೀಕರಿಸಲ್ಪಡುತ್ತದೆಯೋ ಅಂಥಾ ಅಂಗೀಕಾರಕ್ಕೆ ಅರ್ಹರಾದ ಜನರಿಗೆ ಅಂಗಡಿಗಳು ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತವೆ. ಡೆಪ್ಯುಟಿ ಕಮಿಷನರವರು ಸದರೀ ದರಖಾಸ್ತನ್ನು ತಮಗೆ ಯುಕ್ತತೋರುವಂತೆ ಕಾರಣಗಳನ್ನು ಉದಹರಿಸದೆ ಮಂಜೂರು ಅಥವಾ ತಳ್ಳಿಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಅಂಥಾ ಕ್ರಮವಾದ ಮಂಜೂರಾತಿಯು ಗೌರ್ನಮೆಂಟಿನವರಿಂದ ವಿಶೇಷ ಕಾರಣಕ್ಕೋಸ್ಕರ ಬದಲಾಯಿಸಲ್ಪಡದೇ ಇದ್ದ ಪಕ್ಷದಲ್ಲಿ ದರಖಾಸ್ತನ್ನು ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದಾಗಿಯೂ ಡೆಪ್ಯುಟಿ ಕಮಿಷನರವರು ಖುದ್ದಾಗಿಯೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಇತರ ಆಫೀಸರೇ ಆಗಲಿ ಹರಾಜು ನಡಿಸಿದ್ದರೂ ಅವಶ್ಯಕವಾಗಿರುವದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು. ಅಥವಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದಿರುವ ಅವರ ತರಫ ಮುಖ್ತಾಲೀಕರನ್ನು ಕಳುಹಿಸಬೇಕು. ಒಂದೊಂದು ಅಂಗಡಿಗೆ ಸರ್ಕಾರದ ಸವಾಲಿಗಿಂತ ಹೆಚ್ಚಾದ ಸವಾಲ್ ಬಾರದೇ ಹೋದಲ್ಲಿ ಹರಾಜು ನಡಿಸತಕ್ಕ ಆಫೀಸರರು ಎಕ್ಸೈಜ್ ಡಿವಿಜನ ಆಫೀಸರರು ಹಾಜರಿದ್ದಲ್ಲಿ ಅವರ ಅಭಿಪ್ರಾಯವನ್ನು ತಿಳಿದು ಒಂದಕ್ಕಿಂತಲೂ ಹೆಚ್ಚಾಗಿ ಅಂಗಡಿಗಳನ್ನು ಸೇರಿಸಿ ಹರಾಜು ಮಾಡಿಸಬಹುದು. ಅಥವಾ ಅವಶ್ಯಕವಾಗಿದ್ದಲ್ಲಿ ಸವಾಲಿಲ್ಲದೇ ಇರುವ ಅಂಗಡಿಗಳನ್ನು ಮುಂದೆ ವಿಲೇವಾರಿ ಮಾಡಲು ಅಮಾನತ್ತು ಇಡಬಹುದು. ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಹರಾಜು ನಡೆಸತಕ್ಕ ಆಫೀಸರರು ಯಾವದಾದರೂ ವಿಶೇಷ ಸಂದರ್ಭದಲ್ಲಿ ದರಖಾಸ್ತುಗಳ ಮೂಲಕವೇ ಆಗಲಿ ಖಾಸಗೀ ಏರ್ಪಾಟುಗಳ ಮೂಲಕವೇ ಆಗಲಿ ಅಂಗಡಿಗಳನ್ನು ಮಾಡಬಹುದು. ಸರ್ಕಾರದ ಸವಾಲನ್ನು ತಮ್ಮ ಇಷ್ಟಾನುಸಾರ ಕಮ್ಮಿ ಮಾಡಬಹುದು. ಲೈಸೆನ್ಸುದಾರನು ಯಾವದಾದರೂ ತಕ್ಸೀರಿಗಾಗಿ ಕ್ರಿಮಿನಲ್ ಕೋರ್ಟಿನಲ್ಲಿ ದರ್ಯಾಫ್ತಿಯಾಗಿ ತಪ್ಪು ಸಾಬೀತಾಗಿರುವದರಿಂದಲೂ, ಅಥವಾ ಲೈಸೆನ್ಸಿನ ಯಾ ಎಕ್ಸೈಜ್ ರೆಗ್ಯುಲೇಷನ ಯಾ ಓಪಿಯಂ ಆಕ್ಟಿನ ಷರತ್ತುಗಳಿಗನುಸಾರವಾಗಿ ನಡೆಯದೇ ಇದ್ದ ತಪ್ಪಿತಸ್ಥನಾಗಿರುವ ಕಾರಣದಿಂದ ಲೈಸೆನ್ಸಿನ ಹಿಡುವಳಿದಾರನಾಗಿರಲು ಯೋಗ್ಯನಲ್ಲವೆಂಬದರಮೇಲೂ ಯಾ ನಾದಾರೀ ಮನುಷ್ಯನೆಂಬದರಮೇಲೂ ಅಥವಾ ಸರ್ಕಾರದ ಪ್ರಯೋಜನಕ್ಕೆ ಕುಂದಕವಾಗತಕ್ಕ ಏರ್ಪಾಟುಗಳನ್ನು ನಿಲ್ಲಿಸಬೇಕೆಂಬದರಮೇಲೂ ಅಥವಾ ಇನ್ನಾವ ಇತರ ಯುಕ್ತವಾದ ಕಾರಣಕ್ಕಾಗಿಯೂ ಹರಾಜು ನಡಿಸತಕ್ಕ ಆಫೀಸರರು ಅವರಿಗೆ ಯುಕ್ತ ತೋರಿದಲ್ಲಿ ಯಾವ ಮನುಷ್ಯನ ಸವಾಲನ್ನಾದರೂ ಕಾರಣವನ್ನು ತಿಳಿಸದೇನೇ ತಿರಸ್ಕರಿಸಬಹುದು.

(b) ಯಾವ ಅಂಗಡಿಯನ್ನು ಒಬ್ಬ ಆಸಾಮಿಗಿಂತ, ಯಾ ಕ್ರಮವಾಗಿ ಏರ್ಪಟ್ಟಿರುವ ಒಂದು ಕಂಪನಿ ಯಾ ಫರಂಗಿಂತ ಹೆಚ್ಚಾದ ಸಂಖ್ಯೆಯುಳ್ಳವರ ಹೆಸರಿಗೆ ಛಡಸವಾಲಿನಲ್ಲಿ ನಿಲ್ಲಿಸಕೂಡದು. ಹರಾಜು ಮಾಡುವ ಅಧಿಕಾರಿಯು ಯಾರ ಹೆಸರಿನಿಂದ ಸವಾಲು ಬಂದಿರುವದಿಲ್ಲವೋ ಆತನ ಹೆಸರನ್ನು ಕೊಂಡುಕೊಂಡವನೆಂದು ದಾಖಲ್ಮಾಡಲು ತಿರಸ್ಕರಿಸತಕ್ಕದ್ದು.

3. ಹರಾಜ್ ಪೂರೈಸಿದ ನಂತರ ಸಾಧ್ಯವಾದಷ್ಟುಗೆ ಜಾಗ್ರತೆಯಾಗಿ ನಾಮಂಜೂರಾದ ಸವಾಲ್‌ದಾರರ ಠೇವಣೀ ಮೊಬಲಗುಗಳು ಈ ಕೆಳಗೆ ನಿರ್ಬಂಧಿಸಿರುವ ರೀತಿಯಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡದೇ ಇರುವ ಪಕ್ಷಕ್ಕೆ ಅವರಿಗೆ ವಾಪಸ್ ಮಾಡಲ್ಪಡುತ್ತವೆ. ಹರಾಜ್ ನಡೆಯುತ್ತಾ ಬಂದಹಾಗೆಲ್ಲಾ ಯಾರ್ಯಾರ ಸವಾಲ್ ಅಂಗೀಕರಿಸಲ್ಪಡುತ್ತಯೋ ಅವರೆಲ್ಲಾ ಹರಾಜ್ ನಡೆಸತಕ್ಕ ಆಫೀಸರರು ಕೇಳಿದ್ದಲ್ಲಿ ತಕ್ಷಣವೇ, ಇಲ್ಲದಿದ್ದಲ್ಲಿ ಆ ದಿವಸದ ಹರಾಜ್ ಖೈದಾದ ನಂತರ, ಪ್ರಾರಂಭದಲ್ಲಿ ಇಟ್ಟಿರತಕ್ಕ ಠೇವಣಿ ಮೊಬಲಗು ಸದರೀ ಅಂಗಡಿಯ ಯಾ ಅಂಗಡಿ ಸಮುದಾಯದ 2 ತಿಂಗಳ ಗುತ್ತಿಗೆ ಹಣಕ್ಕೆ ಸರಿಯಾಗಿ ಯಾ ಹೆಚ್ಚಾಗಿದ್ದಾಗ ಹೊರತು ಆಯಾಯ ಅಂಗಡಿಯ ಯಾ ಅಂಗಡಿ ಸಮುದಾಯದ ಅರ್ಧ ತಿಂಗಳ ಗುತ್ತಿಗೆ ಹಣದಷ್ಟು ಮೊಬಲಗನ್ನು ಠೇವಣಿ ಇಡಬೇಕು. ಹರಾಜಿನಲ್ಲಿ ಒಂದು ಅಂಗಡಿ ಯಾ ಅಂಗಡಿಗಳ ಸಮುದಾಯಕ್ಕಾಗಿ ಯಾರ ಚಡದರಖಾಸ್ತು ಅಂಗೀಕರಿಸಲ್ಪಟ್ಟಿದೆಯೋ, ಮತ್ತು ಮೇಲೆ ನಮೂದಿಸಿರುವಂತೆ ಠೇವಣಿಗಳನ್ನು ಕೊಟ್ಟಿದ್ದಾನೆಯೋ ಆತನು ಹರಾಜು ಮಂಜೂರಾದ ವಿಷಯವನ್ನು

ನೋಟೀಸ್ ಮೂಲಕ ತಿಳಿಸಲು ಸಾಧ್ಯವಾಗುವಂತೆ ತನ್ನ ವಿಳಾಸವನ್ನು ಹರಾಜು ನಡಿಸತಕ್ಕ ಆಫಿಸರವರಲ್ಲಿ ಕೊಟ್ಟು ಹೋಗತಕ್ಕದ್ದು. ಸದರೀ ನೋಟೀಸ್ ಆತನಿಗೇ ಆಗಲಿ ಅಥವಾ ಸದರೀ ವಿಳಾಸದಲ್ಲಿ ಕೊಟ್ಟಿರುವ ಸ್ಥಳದಲ್ಲಿ ಆತನ ಮನೆಯಲ್ಲಿರುವ ಇತರ ಪ್ರಾಯಸ್ಥನಾದ ಗಂಡಸಿಗಾಗಲೀ ರೂಬರೂಬ್ ಸಾವತಿಯಾಗೀ ಆಗಲಿ ಅಥವಾ ಆತನ ವಾಸಸ್ಥಾನಕ್ಕೆ ಅಂಟಿಸುವದರಿಂದಲೂ ಯಾ ಕ್ರಮವಾಗಿ ರಿಜಿಸ್ಟರ್ಡ್ ಪೋಸ್ಟು ಮೂಲಕ ಕಳುಹಿಸಿದ್ದರಿಂದಲೇ ಆಗಲಿ ಜಾರಿಯಾದ 7 ದಿವಸಗಳೊಳಗಾಗಿ ಮೊದಲು ಹಾಜರ್ಮಾಡಿದ ಠೇವಣೀ ಸೇರಿಸಿಕೊಂಡು 2 ತಿಂಗಳ ಖಿಸ್ತು ಮೊಬಲಗಿಗೆ ಸರಿಯಾದಷ್ಟು ಹಣವನ್ನು ತಾಲ್ಲೂಕು ಖಜಾನೆಯಲ್ಲಿ ಠೇವಣೀ ಇಡಬೇಕು. ಮತ್ತು ಅವಶ್ಯಕವಾಗಿರುವ ಕರಾರುಗಳನ್ನು ಆಗಲೀ ಅಮಲ್ದಾರ್ರವರಿಗೆ ಬರದು ಕೊಟ್ಟು ಮುಂದೆ ನಮೂದಿಸಿರುವ ಪ್ರಕಾರ ನಿಬಂಧನೆಯಾಗಿರುವ ಲೈಸೆನ್ಸುಗಳನ್ನು ತೆಗದುಕೊಳ್ಳಬೇಕು. ಪ್ರಾರಂಭದಲ್ಲಿ ಇಟ್ಟಿರತಕ್ಕ ಠೇವಣೀ ಮೊಬಲಗು ಈ ಯಾ ಮುಂದಿನ ಕಲಂನಲ್ಲಿ ಕೇಳಿರುವ ಮೊಬಲಗಿಗಿಂತಲೂ ಹೆಚ್ಚಾಗಿದ್ದಲ್ಲಿ ಹೆಚ್ಚಾಗಿರುವ ಮೊಬಲಗನ್ನು, ಅಂಗಡಿಯನ್ನು ತೆಗದುಕೊಂಡವನಿಗೆ ವಾಪಸ್ ಕೊಡಲ್ಪಡುವದು. ಹರಾಜು ನಂತರ ವಿಚಾರಿಸಿದ್ದಲ್ಲಿ ಆತನು ಮೈಸೂರು ಶೀಮೆಯಲ್ಲಿ ಜಿಂದಿಗಿಯನ್ನುಂಟಾಗದೆ ಇರುವ ಅನ್ಯದೇಶದವನಾಗಿಯೂ ಜೇವಾಳಸ್ಥನೆಂಬುದಕ್ಕೆ ಅನುಮಾನಕ್ಕೆ ಗುರಿಯಾದವನಾಗಿ ಇರುವಂತೆ ಕಂಡು ಬಂದಲ್ಲಿ ವಿಧಾಯಕವಾದ ಎರಡರಷ್ಟು ಮೊಬಲಗನ್ನು ಠೇವಣಿ ಇಡುವದಕ್ಕಾಗಲೀ ಯಾ ಆತನ ಗುತ್ತಿಗೆ ಷರತ್ತುಗಳನ್ನನುಸರಿಸಿ ಆತನು ಕೊಡಬೇಕಾದ ಎಲ್ಲಾ ಹಣಗಳನ್ನು ಕ್ರಮವಾಗಿ ಪಾವತೀ ಮಾಡಲುಳ್ಳವರೆಂದು ಜಾಮೀನ್ ಪತ್ರವನ್ನು ಬರೆದು ಕೊಡುವುದಕ್ಕೆ ಮೈಸೂರು ಸಂಸ್ಥಾನದಲ್ಲಿ ವಾಸವಾಗಿದ್ದು ಸ್ವತ್ತುಳ್ಳವರಾಗಿರುವ ಒಬ್ಬ ಜಾಮೀನ್‌ದಾರನನ್ನು ಯಾ ಜಾಮೀನ್‌ದಾರರನ್ನು ಹಾಜರ್ಮಾಡುವದಕ್ಕಾಗಲೀ ಆತನನ್ನು ಕೇಳಬಹುದು.

4. ಹಿಂದಿನ ಕಲಮ್ಮನುಸರಿಸಿ ಇಡಲ್ಪಟ್ಟ ಠೇವಣಿಯು ನಗದಾಗಿ ಯಾಗಲೀ ಯಾ ಡೆಪ್ಯುಟಿ ಕಮ್ಮಿಷನರವರ ಹೆಸರಿಗೆ ಕ್ರಮವಾಗಿ ಇಂಡಾರ್ಸ್ ಮಾಡಲ್ಪಟ್ಟ ಇಂಡಿಯಾ ಗವರ್ನ್ಮೆಂಟ್ ಸೆಕ್ಯೂರಿಟಿಗಳ ಮೂಲಕವಾಗಿಯಾಗಲೀ ಇರತಕ್ಕದ್ದು. ಆದರೆ ಮಾಹೆಯಾನಾ ಗುತ್ತಿಗೆ ಮೊಬಲಗು 10 ರೂಪಾಯಿಗಿಂತಲೂ ಹೆಚ್ಚಾಗಿರುವ ಸಂದರ್ಭಗಳಲ್ಲಿ (ಮೇಲಿನ 2 ತಿಂಗಳ ಗುತ್ತಿಗೆ ಹಣದ ಠೇವಣಿ ಬದ್ಲಾಗಿ) ಡೆಪ್ಯುಟಿ ಕಮ್ಮಿಷನರವರು ತಮಗೆ ಯುಕ್ತ ತೋರುವಂತೆ ಮೇಲ್ಕಂಡ ಮೇರೆಗೆ 1 ತಿಂಗಳ ಗುತ್ತಿಗೆ ಹಣಕ್ಕೆ ಸಮನಾದ ಠೇವಣೀಸಿಸಿ 4 ತಿಂಗಳ ಗುತ್ತಿಗೆ ಹಣಕ್ಕೆ ಸಮನಾದ ಮೊಬಲಗಿಗೆ ಖಾತರೀ ಜಾಮೀನನ್ನು ಹಾಜರ್ಮಾಡುವಂತೆ ಬಿಕರೀ ದಾರನಿಗೆ ಅಪ್ಪಣೆ ಕೊಡಬಹುದು. 1 ತಿಂಗಳ ಗುತ್ತಿಗೆ ಮೊಬಲಗು 10 ರೂಪಾಯಿಗಳಿಗೆ ಮೀರದಿರುವ ಎಲ್ಲಾ ಸಂದರ್ಭಗಳಲ್ಲಿಯೂ 2 ತಿಂಗಳ ಖಿಸ್ತಿನ ಹಣದಷ್ಟು ನಗದು ಠೇವಣಿಯನ್ನು ತೆಗದುಕೊಳ್ಳಬೇಕೇ ಹೊರತು ನಫರ್ ಜಾಮೀನನ್ನು ಅಂಗೀಕರಿಸಕೂಡದು.

5. ಬಿಕರೀದಾರನು ಮೇಲೆ ನಮೂದಿಸಿರುವ ಯಾವ ಠೇವಣಿಯನ್ನಾದರೂ ಯಾ ಅವಶ್ಯಕವಾದ ಜಾಮೀನ್‌ದಾರ ಅಥವಾ ಜಾಮೀನ್‌ದಾರರನ್ನಾದರೂ ಹಾಜರ್ಮಾಡುವದಕ್ಕೆ ತಪ್ಪಿದರೆ ಮೊದಲು ಇಟ್ಟಿರುವ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟು ಸದರೀ ಅಂಗಡಿಯು ಅಥವಾ ಸಮುದಾಯವು ಡೆಪ್ಯುಟಿ ಕಮ್ಮಿಷನರವರ ಅಥವಾ ಹರಾಜು ನಡೆಸತಕ್ಕ ಆಫಿಸರವರ ಅಪ್ಪಣೇ ಮೇರೆಗೆ ಪುನಹ ಹರಾಜ್ ಮಾಡಲ್ಪಡುವುದು. ಅಥವಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು. ಮತ್ತು ಆತನು ಆ ಅಂಗಡಿ ಗಾಗಲೀ ಯಾ ಮತ್ಯಾವ ಅಂಗಡಿ ಯಾ ಅಂಗಡಿಗಳ ಸಮುದಾಯಕ್ಕಾಗಲೀ ಸವಾಲ್ಮಾಡದಂತೆ ನಿಷೇಧಿಸಿದೆ.

6. ಬಿಕರೀದಾರನು ಈ ಕೆಳಗೆ ನಮೂದಿಸಿರುವ ಮತ್ತು ತನಿಗೆ ಕೊಡಲ್ಪಡುವ ಲೈಸೆನ್ಸಿನ ಷರತ್ತುಗಳಿಗೆ ಅನುಸರಿಸಿ ನಡೆಯುವುದಕ್ಕೆ ತನ್ನನ್ನು ಮತ್ತು ಕ್ರಮವಾಗಿ ರಿಕಾರ್ಡಾದ ಡೆಪ್ಯುಟಿ ಕಮ್ಮಿಷನರವರ ಹುಕುಂನಿಂದ ವಿನಾಯಿಸಿದ ಹೊರತು ಡೆಪ್ಯುಟಿ ಕಮ್ಮಿಷನರವರಿಂದ ಸಾಕೆಂದು ಭಾವಿಸಲ್ಪಡುವಷ್ಟು ತನ್ನ ಚರ ಸ್ಥಿರ ಸ್ವತನ್ನು ಬದ್ಧಿಸುವ ಒಂದು ಒಡಂಬಡಿಕೆಯನ್ನು ಕ್ರಮವಾದ ನಮೂನೆಯಲ್ಲಿ ಬರದು ಕೊಡತಕ್ಕದ್ದು. ಆತನ ಜಾಮೀನ್‌ದಾರನು ಯಾ ಜಾಮೀನ್‌ದಾರರು ಯಾರಾದರೂ ಅಂಗೀಕರಿಸಲ್ಪಟ್ಟಿದ್ದಲ್ಲಿ ಅವರೂ ಕೂಡ ವಿಧಾಯಕವಾಗಿರುವ ನಮೂನೆಯಲ್ಲಿ ತನ್ನನ್ನು ಯಾ ತಮ್ಮನ್ನು ಅಥವಾ ತಮ್ಮ ಚರ ಸ್ಥಿರ ಸ್ವತ್ತುಗಳ ಪೈಕಿ ಬಿಕರೀದಾರನು ಕರಾರಿನ ಷರತ್ತಿಗನುಸಾರವಾಗಿ ನಡೆಯುವದಕ್ಕೆ ಡೆಪ್ಯುಟಿ ಕಮ್ಮಿಷನರವರಿಂದ ಸಾಕೆಂದು ಭಾವಿಸಲ್ಪಟ್ಟಿರುವಷ್ಟು ಚರ ಯಾ ಸ್ಥಿರ ಸ್ವತ್ತನ್ನೂ ಬದ್ಧಿಸುವ ಒಂದು ಪತ್ರವನ್ನು ಬರೆದು ಕೊಡತಕ್ಕದ್ದು. ಹಾಗೆ ಬರದು ಕೊಡಲ್ಪಟ್ಟ ಒಡಂಬಡಿಕೆ ವ ಪತ್ರವೂ ಬಿಕರೀದಾರನ ಖರ್ಚಿನಿಂದ ಸ್ಟಾಂಪು ಆಗಬೇಕು, ಮತ್ತು ಪತ್ರದಲ್ಲಿ ಕಂಡ ಮೊಬಲಗು ಅಥವಾ 100ಕ್ಕೆ ಮೀರಿರುವಾಗ ಆತನ ಖರ್ಚಿನಿಂದಲೇನೆ ಅವು ರಿಜಸ್ಟರು ಮಾಡಿಸಲ್ಪಡಬೇಕು.

7. ಮೇಲ್ಕಂಡಂತೆ ಲೈಸೆನ್ಸುಗಳನ್ನು ಪಡೆಯುವದಕ್ಕೆ ಯಾ ಒಡಂಬಡಿಕೆಗಳನ್ನು ಬರದು ಕೊಡುವುದಕ್ಕೆ ಯಾವ ಮನುಷ್ಯನಾದರೂ ತಪ್ಪಿದರೆ ಮೊದಲೇ ಇಡಲ್ಪಟ್ಟ ಎಲ್ಲಾ ಠೇವಣಿಗಳೂ ಸರ್ಕಾರಕ್ಕೆ ದಂಡವಾಗಿ ಸೇರಿಸಲ್ಪಡುತ್ತವೆ, ಮತ್ತು ಸದರೀ ಅಂಗಡಿ ಯಾ ಅಂಗಡಿಗಳ ಸಮುದಾಯವು ಹಾಗೆ ತಪ್ಪಿ ಹೋದ ಬಿಕರೀದಾರನನ್ನು ನಷ್ಟಕ್ಕೆ ಗುರಿಯಾಗುವಂತೆ ಡೆಪ್ಯುಟಿ ಕಮ್ಮಿಷನರವರಿಂದ ದುಸರಾ ಹರಾಜು ಮಾಡಲ್ಪಡುವುದು, ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವುದು. ಆ ಬಿಕರೀದಾರನಿಂದ ಮೊದಲೇ ಹಾಜರ್ಮಾಡಲ್ಪಟ್ಟ ಠೇವಣಿ ಯಾ ಠೇವಣಿಗಳು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವುದಲ್ಲದೆ ಆತನು ದುಸರಾ ಹರಾಜಿನಿಂದ ಯಾ ಅನ್ಯಥಾ ವಿಲೇವಾರಿಯಿಂದ ಆಗತಕ್ಕ ನಷ್ಟಕ್ಕೆ ಸಹಾ ಗುರಿಯಾಗತಕ್ಕದ್ದು. ಪರಂತು ಅಂಥಾ ದುಸರಾ ಹರಾಜಿನಿಂದ ಯಾ ಅನ್ಯಥಾ ವಿಲೇವಾರಿಯಿಂದ ಏನಾದರೂ ನಫೆ ಬಂದರೆ ಅದಕ್ಕೆ ಆತನಿಗ ಏನೂ ಹಕ್ಕಿರತಕ್ಕದ್ದಲ್ಲ. ಇದರಿಂದ ನಷ್ಟವಾದ ಪಕ್ಷದಲ್ಲಿ ದಂಡವಾಗಿ ತೆಗದುಕೊಂಡ ಮೊಬಲಗನ್ನು ಅದರಿಂದ ಉತಾರು ಹಾಕಬಹುದು. ಹರಾಜು ಮುಂಜೂರಾದ ಮೇಲೆ ಸದರೀ ಬಿಕರೀದಾರನು ಸತ್ತುಹೋದ ಪಕ್ಷದಲ್ಲಿ ಅವನ ವಾರಸ್‌ದಾರರು ಯಾ ಆತನಿಂದ ಹಕ್ಕನ್ನು ಪಡೆದವರು ಅದಕ್ಕೆ ಜವಾಬ್ದಾರರಾಗಿರತಕ್ಕದ್ದು.

8. ಮೇಲಿನ 5ನೇ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಯಾ ಹರಾಜುಗಳು ಅನ್ಯಥಾ ವಿಲೇವಾರಿಯು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್ದಾರೀ ಮೇಲೆ ನಡೆಯತಕ್ಕದ್ದು. ಇದರಿಂದ ಆತನು ಆದಾಯುವನ್ನೆಲ್ಲಾ ಕಳದುಕೊಂಡವನಾಗುತ್ತಾನೆ.

ಮತ್ತು ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿ ಮಾಡುವುದರಿಂದ ನಷ್ಟ ಸಂಭವಿಸುವಲ್ಲಿ ಮೊದಲಿನ ಹರಾಜಿನ ಷರತು ಅನುಸರಿಸಿ ಆತನು ಪೂರಾ ಪಾಯಿದೆಗೆ ಕೊಡಬೇಕಾದ ಬಟ್ಟು ಮೊಬಲಗಿನ ಪೈಕಿ ದುಸರೇ ಹರಾಜ್ ಯಾ ಅನ್ಯಥಾ ವಿಲೇವಾರಿ ಯಾದ್ವರಲ್ಲಿ ಜಡಸ್ತವಾಲದಾರನು ಕೊಡಬೇಕಾದ ಬಟ್ಟು ಮೊಬಲಗು ಜಾತಾ ಬಾಕಿ ಉಳಿಯುವದನ್ನು ಆತನು ಭರ್ತಿ ಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿ ಮಾಡಿದ್ದರಿಂದ ಉಂಟಾಗುವ ನಷ್ಟದ ಮೊಬಲಗಿನಲ್ಲಿ ದಂಡವಾಗಿ ತೆಗದುಕೊಂಡಿರುವ ಠೇವಣೀ ಮೊಬಲಗನ್ನು ವಜಾಯಿಸಿ ಬಾಕಿ ಏನಾದರೂ ಉಳಿದರೆ ಅದನ್ನು ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುತ್ತದೆ. ಆದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಸದರೀ ಠೇವಣಿ ಮೊಬಲಗು ದುಸರೇ ಹರಾಜಿನಿಂದ ಆಗತಕ್ಕ ನಷ್ಟಕ್ಕಿಂತಲೂ ಹೆಚ್ಚಾಗಿದ್ದಲ್ಲಿ ಆ ಠೇವಣೀ ಮೊಬಲಗು ಯಾವತ್ತನ್ನೂ ಸರ್ಕಾರಕ್ಕೇನೇ ಜಮಾ ಮಾಡಿ ಕೊಳ್ಳತಕ್ಕದ್ದು.

9. ಹಿಂದಿನ ಕೆಲವು ವರ್ಷಗಳ ಬಾಬತು ಅಂಗಡಿಯ ಗುತ್ತಿಗೆ ಮೊಬಲಗು ಖರ್ಚಾದ ಸಾರಾಯಿ ವಗೈರೆ ತಪ್ಸೀಲ್ ಇದಕ್ಕೆ ಲಗತ್ಮಾಡಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುತ್ತದೆ.

10. ಮೇಲಿನ 6ನೇ ಕಲಂನಲ್ಲಿ ಕಂಡ ಮೇರೆಗೆ ಹೊಂದಬೇಕಾದ ಲೈಸೆನ್ಸ್ ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು. ಕ್ರಮವಾದ ಲೈಸೆನ್ಸ್ ಕೊಡದಿದ್ದಾಗ್ಯೂ ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ವಿರೋಧವಾಗಿ ನಡೆದ್ದಕ್ಕೆ ವಿಧಿಸಿರುವ ಶಿಕ್ಷೆಗಳ ಸ್ವತಂತ್ರ ಹಕ್ಕನ್ನು ಕೊಂಡುಕೊಂಡವನು ಗುರಿಯಾಗುವದನ್ನು ಈ ಪ್ರಕರಣದಲ್ಲಿರುವ ಯಾವದು ತಪ್ಪಿಸಲಾರದು.

(1) a. ಈ ಲೈಸೆನ್ಸಿಂದ ಕೊಡಲ್ಪಟ್ಟ ಹಕ್ಕು 20° ಡಿಗ್ರಿ ಜೋರಾದ ಅಂಡರ್ ಪ್ರೂಫ್ ಬಲವುಳ್ಳ ಸಾರಾಯನ್ನು ಮಾರುವುದಕ್ಕೂ ಮತ್ತು ಡೆಪ್ಯುಟಿ ಕಮ್ಮಿಷನರ್ ಯಾ ಅವರಿಂದ ಅಧಿಕಾರ ಪಡೆದ ಇತರ ಆಫಿಸರರ ಅಪ್ಪಣೆಯಿಂದ 30° ಡಿಗ್ರಿ ಅಂಡರ್ ಪ್ರೂಫ್ ಸಾರಾಯನ್ನು ಮಾರುವುದಕ್ಕೂ ಮಾತ್ರವೇ ವ್ಯಾಪಿಸುತ್ತೆ. ಪರದೇಶೀಯ ಮದ್ಯಗಳನ್ನು ಮಾರತಕ್ಕ ಅಂಗಡಿಗಳಿಲ್ಲದೇ ಇರತಕ್ಕ ಪ್ರದೇಶಗಳಲ್ಲಿ ಅಥವಾ ಪರದೇಶೀಯ ಮದ್ಯಗಳ ಅಂಗಡೀದಾರರು ಎಕ್ಸೈಜ್ ಕಮ್ಮಿಷನರ್ ನಿರ್ಣಯಿಸಿರುವ ಮೇರೆಗೆ ಬೆಂಗಳೂರು ಸೆಂಟ್ರಲ್ ಡಿಸ್ಟಿಲರಿಯಲ್ಲಿ ತಯಾರಾಗುವ ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗಣೆ ಭಟ್ಟಿ ಇಳಿಸಲ್ಪಟ್ಟ ಷರಾಬನ್ನು ಯಾ ಇತರ ವಿಶೇಷ ಮದ್ಯಗಳನ್ನು ಅಂದರೆ ಬ್ರಾಂದಿ ವಿಸ್ಕಿ ಜಿನ್ ಮುಂತಾದ್ದನ್ನು ಮಾರದೇ ಇರತಕ್ಕ ಸ್ಥಳಗಳಲ್ಲಿಯೂ ಖಚಿತವಾದ ನಡತೆಯುಳ್ಳ ಸಾರಾಯಿ ಅಂಗಡಿ ಲೈಸೆನ್ಸುದಾರನು ಎಕ್ಸೈಜ್ ಕಮ್ಮಿಷನರವರ ಮುಂಜೂರು ಹುಕುಂ ಪಡದು ಸದರೀ ಮದ್ಯಗಳನ್ನು ಕ್ರಮವಾಗಿ ಬಿರಡೆ ಮೊಹರು ಆಗಿರುವ ಶೀಶೆಗಳಲ್ಲಿ ಎಕ್ಸೈಜ್ ಕಮ್ಮಿಷನರ್ ಗೊತ್ತು ಮಾಡಿದ ಖರೀದಿ ದರದ ಮೇರೆಗೆ ಅಂಗಡಿಯ ಆವರಣದಲ್ಲಿ ಕುಡಿಯದಂತೆ ಮಾರಲು ಅಪ್ಪಣೆ ಕೊಡಲ್ಪಡಬಹುದು.

b. ಸಾರಾಯಿ ಯಾ ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗಣೀ ಭಟ್ಟಿ ಇಳಿಸಲ್ಪಟ್ಟ ಸ್ವದೇಶ ಷರಾಬನ್ನು ಯಾ ಇತರ ವಿಶೇಷ ಮದ್ಯಗಳನ್ನು ತಯಾರ್ಮಾಡುವವರು ಷರಾಬ್ ಬಾಂಡೆಡ್ ಕೋಟಿ ಲೈಸೆನ್ಸದಾರರು ಮೇಲೆ ನಮೂದಿಸಿರುವ ಮದ್ಯಗಳ ಚಿಲ್ಲರೆ ವ್ಯಾಪಾರದಲ್ಲಿ ಯಾವ ಸಂಬಂಧವನ್ನೂ ಇಟ್ಟುಕೊಳ್ಳಕೂಡದು, ಅಥವಾ ಹಾಗೆ ಸಂಬಂಧವಿರುವ ಯಾವ ಮನುಷ್ಯನನ್ನೂ ನೇಮಿಸಿಕೊಳ್ಳಕೂಡದು.

(2) (a) ಸದರೀ ಸ್ವತಂತ್ರದ ಹಕ್ಕನ್ನೂ ಪಡೆದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ವರ್ಷಕ್ಕೆ 12 ರೂಪಾಯಿಗಿಂತಲೂ ಹೆಚ್ಚಾಗಿದ್ದಲ್ಲಿ ಸ್ಥಳೀಯವಾದ ತಾಲ್ಲೂಕು ಖಜಾನೆಗೆ 1904ನೇ ಇಸವಿ ಜುಲೈ ಮಾಹೆ ಲಾಗಾಯಿತು ಸರಿಯಾದ ತಿಂಗಳುಗಟ್ಲೆ ಖಿಸ್ತು ಪ್ರಕಾರ ಪಾವತಿ ಮಾಡಲ್ಪಡುತ್ತಾ ಬರತಕ್ಕದ್ದು. ವರ್ಷಕ್ಕೆ 12 ರೂಪಾಯಿಗಿಂತಲೂ ಹೆಚ್ಚಾಗಿಲ್ಲದ ಇದ್ದಲ್ಲಿ 3 ತ್ರೈಮಾಸಿಕದ ಖಿಸ್ತುಗಳಿಗಿಂತಲೂ ಹೆಚ್ಚಾಗದಂತೆ ಪಾವತಿ ಮಾಡಲ್ಪಡತಕ್ಕದ್ದು. ಪ್ರತಿಯೊಂದು ಖಿಸ್ತು ಯಾವ ತಿಂಗಳಿಗೆ ಪಾವತಿ ಯಾಗತಕ್ಕದ್ದೋ ಆ ತಿಂಗಳಿನ ಯಾ ತ್ರೈಮಾಸಿಕದ ಗುತ್ತಿಗೆ ಮೊಬಲಗೆಂದು ಭಾವಿಸತಕ್ಕದ್ದು. ಲೈಸೆನ್ಸದಾರನು ಲೋಕಲ್ ಸೆಸ್ಸಿಗಾಗಿ ಏನೂ ಜಾಸ್ತೀ ಮೊಬಲಗು ಕೊಡತಕ್ಕದ್ದಿಲ್ಲವು. ಪ್ರತಿ ಮಾಹೆಯ ಯಾ ತ್ರೈಮಾಸಿಕದ ಇಜಾರೆ ಮೊಬಲಗು ಸದರೀ ಮಾಹೆಯ 20ನೇ ತಾರೀಖಿನಲ್ಲಾಗಲೀ ತತ್ಪೂರ್ವವಾಗಲೀ ಅಥವಾ ಖಿಸ್ತು ಬಾಕೀ ನಿಲ್ಲುವ ತ್ರೈಮಾಸಿಕದ ಆಖೈರೊಳಗಾಗಲೀ ಪಾವತಿ ಮಾಡಲ್ಪಡಬೇಕು. ಹಾಗೆ ಪಾವತಿ ಮಾಡಲಿಕ್ಕೆ ತಪ್ಪಿದರೆ ಅಮಲ್ದಾರರು ಡೆಪ್ಯುಟಿ ಕಮ್ಮಿಷನರ ಹುಕುಂ ಪಡೆದು ಸದರೀ ಇಜಾರೆಯನ್ನು ವಜಾಯಿಸಿ ಯಾ ಸದರೀ ಇಜಾರೆ ದಂಡವಾಗಿ ಕಳೆದುಕೊಳ್ಳಲ್ಪಟ್ಟಿರುತ್ತೆಂದು ಬರಹ ಮೂಲಕವಾಗಿ ರಿಕಾರ್ಡು ಮಾಡಿ (ಮಾಹೆ ಯಾ ತ್ರೈಮಾಸಿಕದ ಆಖೈರ್ ಆದಕೂಡಲೇ ಸಾಧ್ಯವಾದಷ್ಟು ತ್ವರೆಯಲ್ಲಿ) ಅಂಗಡಿಯನ್ನು ಯಾ ಅಂಗಡಿಗಳ ಸಮುದಾಯವನ್ನು ಮರಳಿ ಹರಾಜ್ ಯಾ ಅನ್ಯಥಾ ವಿಲೇವಾರಿ ಮಾಡತಕ್ಕದ್ದು. ಸದರೀ ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿಯು ಹೊಸ ಬಿಕರೀದಾರನಿಗೆ ಕೊಟ್ಟ ಲೈಸೆನ್ಸ್ ತಾರೀಖು ಯಾ ಅನ್ಯಥಾ ವಿಲೇವಾರಿ ಆದ ತಾರೀಖು ಲಾಗಾಯಿತು ಜಾರೀಗೆ ಬರತಕ್ಕದ್ದು. ಲೈಸೆನ್ಸನ್ನು ವಜಾಯಿಸಲು ಅಧಿಕಾರವಿರುವ ಆಫಿಸರರು ತಮಗೆ ಯುಕ್ತ ತೋರಿದಲ್ಲಿ ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿ ಆಗುವದರೊಳಗೆ ಮಾರಾಟವನ್ನು ನಿಲ್ಲಿಸಬೇಕಾದ್ದಿಲ್ಲ.

ಟಿಪ್ಪಣಿ.—ಜಾತ್ರೆ ಅಂಗಡಿಯ ಲೈಸೆನ್ಸದಾರನು ಜಾತ್ರೆ ಷುರು ಆಗುವದಕ್ಕೆ ಮೊದಲೇನೇ ಸದರೀ ಅಂಗಡಿಯ ಮೊಬಲಗನ್ನು ಪೂರಾ ಪಾವತಿ ಮಾಡಬೇಕು.

(b) ಲೈಸೆನ್ಸದಾರನಿಂದ ಇಡಲ್ಪಟ್ಟ ಠೇವಣಿ ಮೊಬಲಗು ಲೈಸೆನ್ಸಿನ ಷರತ್ತುಗಳಂತೆ ಕ್ರಮವಾಗಿ ನಡೆದುಕೊಳ್ಳುವದಕ್ಕಾಗಿ ಕೊಟ್ಟಿರುವ ಜಾಮೀನಾಗಿ ಭಾವಿಸಲ್ಪಡುತ್ತದೆ. ದಂಡವಾಗಿ ತೆಗದುಕೊಳ್ಳಲ್ಪಡದೆ ಯಾ ಜಮಾ ಮಾಡಲ್ಪಡದೆ ಯಾ ಅನ್ಯಥಾ ವಿಲೇವಾರಿ ಆಗದೆ ಇದ್ದಲ್ಲಿ ಇಜಾರೆ ವಾಯಿದೆಯ ಆಖೈರ್ 2 ತಿಂಗಳ ಖಿಸ್ತು ಮೊಬಲಗಿಗೋಸ್ಕರ ಜಮಾ ಮಾಡಿ ಕೊಳ್ಳಲ್ಪಡತಕ್ಕದ್ದು. ಪರಂತು ಅಂಗಡಿಯು ಯಾ ಅಂಗಡಿಯ ಸಮುದಾಯವು ದುಸರೇ ಹರಾಜ್ ಯಾ ಅನ್ಯಥಾ ವಿಲೇವಾರಿ ಮಾಡಲ್ಪಟ್ಟಾಗ ಸದರೀ ಡಿಪಾಜಿಟ್ಟು ಮೊಬಲಗು ಡೆಪ್ಯುಟಿ ಕಮಿಷನರವರಿಗೆ ಯುಕ್ತ ತೋರುವಂತೆ ದಂಡವಾಗಿ ಆದರೂ ತೆಗದುಕೊಳ್ಳಲ್ಪಡತಕ್ಕದ್ದು. ಅಥವಾ ತಪ್ಪಿ ಹೋದವನಿಂದ ಬರಬೇಕಾದ ಬಾಕಿಗೋಸ್ಕರವೂ ಅಂಗಡಿಯು ಯಾ ಅಂಗಡಿಗಳ ಸಮುದಾಯವು ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿ ಮಾಡಿದ್ದರಿಂದ ಉಂಟಾಗಬಹುದಾದ ಯಾವ ನಷ್ಟವನ್ನಾದರೂ ಭರ್ತಿ ಮಾಡುವ ಬಗ್ಗೆ ಉಪಯೋಗಿಸಲ್ಪಡತಕ್ಕದ್ದು. ಅಂಥಾ ಬರಬೇಕಾದ ಬಾಕಿಗಳು ಮತ್ತು ನಷ್ಟದ ಮೊಬಲಗುಗಳು ಸುದಾ ರೆವಿನ್ಯೂ ಕಂದಾಯದ ಬಾಕಿ ವಸೂಲಿ ಬಗ್ಗೆ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ ಲೈಸೆನ್ಸದಾರನಿಂದ ವಸೂಲ್ಮಾಡಲ್ಪಡತಕ್ಕದ್ದು. ಲೈಸೆನ್ಸದಾರನಿಂದ ಯಾವ ಸಂದರ್ಭದಲ್ಲಿಯೂ ರಿಮಿಷನ್ ಅಥವಾ ಇಜಾರೆ ಮೊಬಲಗನ್ನು ಕಮ್ಮಿ ಮಾಡುವ ಬಗ್ಗೆ ಅಥವಾ ಪರಿಹಾರ ದ್ರವ್ಯವನ್ನು ಪಡೆಯುವ ಬಗ್ಗೆ ಕೇಳಲ್ಪಡಕೂಡದು.

(c) ಬಾಕಿ ಬರಬೇಕಾದ ದರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ ಮತ್ತು ನಷ್ಟದ ಮೊಬಲಗಿಗೆ ಪುನಃ ಹರಾಜಾದ ತಾರೀಖಿನ ಲಾಗಾಯಿತು ಸಾಲಿಯಾನಾ ಶೇಕಡಾ 6ರ ಪ್ರಕಾರ ಬಡ್ಡಿ ವಸೂಲ್ಮಾಡಲ್ಪಡತಕ್ಕದ್ದು.

(3) (a) ಲೈಸೆನ್ಸದಾರನು ಕಾಕುಂಬೆ ಸಾರಾಯಿಯನ್ನು 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ 1ಕ್ಕೆ 8½ ಆಣೆ ದರದ ಮೇರೆ ಬಿರಟೆ ಹಾಕಿ ಮೊಹರ್ಮಾಡಿದ ಶೀಶೆಗಳಲ್ಲಿ 20° ಡಿಗ್ರಿ ಜೋರುಳ್ಳ ಬೆಲ್ಲದ ಸಾರಾಯಿಯನ್ನು ಸಹಾ ಗ್ಯಾಲನ್ 1ಕ್ಕೆ ರೂ. 1—6—6 ಪ್ರಕಾರವೂ ಮತ್ತು ಮೇಲೆ ನಮೂದಿಸಿರುವ ವಿಶೇಷ ಮದ್ಯಗಳನ್ನು ಭಟ್ಟೀದಾರರು ಗೊತ್ತುಮಾಡುವ ಖರೀದಿ ದರದಂತೆಯೂ ಏರ್ಪಾಡಾಗಿರುವ ಬಾಂಡೆಡ್ ಡಿಪೋಗಳಿಂದ ಕೊಂಡುಕೊಳ್ಳತಕ್ಕದ್ದು.

(b) ಲೈಸೆನ್ಸದಾರನು 20° ಡಿಗ್ರಿ ಅಂಡರ್ ಪ್ರೂಫ್ ಜೋರಿನ ಕಾಕುಂಬೆ ಸಾರಾಯಿಯನ್ನು ಗ್ಯಾಲನ್ 1ಕ್ಕೆ 6–6–0 ಯಂತೆಯೂ ಅಥವಾ ಗ್ಯಾಲನ್ನಿನ 1—51ನೇ ಭಾಗವಾದ ಒಂದು ಡ್ರಾಂಗೆ 2 ಆಣೆಯಂತೆಯೂ ಬೆಲ್ಲದ ಸಾರಾಯಿಯನ್ನು ಒಂದು ರೆಪ್ಯುಟೆಡ್ ಕ್ವಾರ್ಟ್ ಶೀಶೆ ಒಂದಕ್ಕೆ 1—3—10ರಂತೆಯೂ ಸದರೀ ಜೋರಿಗಿಂತ ಕಮ್ಮಿಯುಳ್ಳ ಸಾರಾಯಿಗಳಿಗೆ ಅದರ ದಾಮಾಷಾಯಿ ದರದಂತೆಯೂ ಜನರಿಗೆ ಮಾರತಕ್ಕದ್ದು.

(4) ಬೆಂಗಳೂರು ಮತ್ತು ಮೈಸೂರು ಷಹರುಗಳಲ್ಲಿ ಪ್ರತಿಯೊಂದು ಅಂಗಡಿಯ ಲೈಸೆನ್ಸದಾರನು ಅವನ ಅಂಗಡಿಯ ಲೈಸೆನ್ಸಿನ ನಿಯಮಿತ ಕಾಲಕ್ಕೆ ಮುಂಗಡವಾಗಿ ವರುಷ 1ಕ್ಕೆ 180 ರೂಪಾಯಿ ದರದ ಮೇರೆಗೆ ಮುನಿಸಿಪಲ್ ಕಾನೂನ್ ಪ್ರಕಾರ ರಿಜಿಸ್ಟರ್ ಫೀ ಯಾ ರುಸುಮನ್ನು ಕೊಡಬೇಕು. ಮತ್ತು ಆತನು ಪ್ರತಿ ತಿಂಗಳಲ್ಲಿಯೂ ಅಂಥಾ ಪ್ರತಿ ಅಂಗಡಿಯಲ್ಲೂ 55 ಗ್ಯಾಲನ್‌ಗಳಿಗೆ ಹೆಚ್ಚಾಗಿ ಮಾರುವ ವಿಶಿಷ್ಟಸಾರಾಯಿನ ಮೇಲೆ ಗ್ಯಾಲನ್ 1ಕ್ಕೆ 4 ಆಣೆ ಪ್ರಕಾರ ಲೈಸೆನ್ಸ್ ಫೀಯನ್ನು ಸಹ ಕೊಡಬೇಕು.

(5) ಭಟ್ಟೀದಾರರಿಂದ ಕಾಕುಂಬೆ ಸಾರಾಯಿ, ಬೆಲ್ಲದ ಸಾರಾಯಿ, ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗಣಿ ಭಟ್ಟಿ ಇಳಿಸಿದ ಸ್ವದೇಶ ಷರಾಬು ಅಥವಾ ಇತರ ವಿಶೇಷ ಮದ್ಯಗಳು, ಇವುಗಳಿಗಾಗಿ ಹಾಕಲ್ಪಡುವ ಮೇಲ್ಕಂಡ ಖರೀದಿ ದರ ಮತ್ತು ರುಸುಂ ಶಿವಾಯಿ ಸರ್ಕಾರದ ಅಪ್ಪಣೆ ಪ್ರಕಾರ ಸ್ಥಾಪಿಸಲ್ಪಟ್ಟಿರುವ ಬಾಂಡೆಡ್ ಡೆಪೋದಿಂದ ಸಾರಾಯಿ ಒಯ್ಯಲ್ಪಡುವದಕ್ಕೆ ಪೂರ್ವ 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ 1ಕ್ಕೆ ಲೋಕಲ್‌ಸೆಸ್ ಸಹಿತ ವಿಧಾಯಕವಾಗಿರುವ 4¾ ರೂಪಾಯಿ ದರದಂತೆಯೂ, ಯಾ ಸದರಿ ಜೋರಿಗಿಂತ ಹೆಚ್ಚಾದ ಯಾ ಕಮ್ಮಿಯಾದ ಸಾರಾಯಿಗಳಿಗೆ ಅದರ ದಾಮಾಷಾಯಿ ದರದಂತೆಯು ಎಕ್ಸೈಜ್ ಡ್ಯೂಟಿ ಯಾನೆ ಹಾಸಲು 6ನೇ ಷರತ್ತು ಅನುಸರಿಸಿ ಮುಂಗಡವಾಗಿ ಪಾವತಿ ಮಾಡಲ್ಪಡಬೇಕಾಗಿರುತ್ತೆ.

(6) ಲೈಸೆನ್ಸದಾರನು ಮೇಲ್ಕಂಡ ಹಾಸಲನ್ನು ಖರೀದಿ ಮೊಬಲಗನ್ನೂ ತಾಲ್ಲೂಕು ಖಜಾನೆಗೆ ಅಥವಾ ತಾಲ್ಲೂಕು ಕಚೇರಿಯಲ್ಲಿ ಖಾಸುವಾರ ಮತ್ತು ರಜಾ ದಿನಗಳಲ್ಲಿಯೂ ಸಹ ಡಿಟೋ ಹಾಸಲು ಮತ್ತು ಖರೀದಿ ಮೊಬಲಗನ್ನು ತೆಗದುಕೊಳ್ಳುವುದಕ್ಕಾಗಿ ಸರ್ಕಾರದ ಖರ್ಚಿನಿಂದ ನೇಮಿಸಲ್ಪಟ್ಟಿರುವ ವಿಶೇಷ ಷರಾಫನು ಇದ್ದಲ್ಲಿ ಆತನ ವಶಕ್ಕೆ, ಅಥವಾ ಡೆಪ್ಯುಟಿ ಕಮಿಷನರ್ ಇದಕ್ಕಾಗಿ ಮೊಕರರ್ಮಾಡಿರುವ ಇನ್ನಾವ ನೌಕರನಿಗಾದರೂ ಪಾವತೀ ಮಾಡಿ ಗೊತ್ತು ಮಾಡಿರುವ ಛಾಪಾ ನಮೂನೆಯಲ್ಲಿ ರಶೀತಿಯನ್ನು ಪಡೆಯತಕ್ಕದ್ದು. ಅಂಥಾ ರಶೀತಿಯನ್ನೂ ಮತ್ತು ಆ ರಶೀತಿಯಲ್ಲಿ ಕಂಡ ಮೊಬಲಗಿಗೆ ತಕ್ಕ ಮದ್ಯಕ್ಕೆ ಒಂದು ದರಖಾಸ್ತನ್ನೂ ಹಾಜರ್ಮಾಡಿದರೆ ಬಾಂಡೆಡ್ ಡೆಪೋ ಜಿಮ್ಮೇದಾರನು ಟ್ರೆಷರಿ ಆಫೀಸರರ ರಶೀತಿಯಲ್ಲಿ ನಮೂದು ಮಾಡಿರುವ ಡ್ಯೂಟಿ ಮತ್ತು ಖರೀದಿ ಮೊಬಲಗಿಗೆ ಸರಿಯಾದ ಮದ್ಯವನ್ನು ಸರಬರಾಯಿ ಮಾಡಿ ಆ ರಶೀತಿಯಲ್ಲಿ ಮದ್ಯವು ರವಾನೆ ಆದ ತಾರೀಖು ಮತ್ತು ಘಂಟೆಯನ್ನು ನಮೂದುಮಾಡಿ ಎಕ್ಸೈಜ್ ಕಮಿಷನರವರ ಆಫೀಸಿಗೆ ಆ ರಶೀತಿಯನ್ನು ರವಾನಿಸತಕ್ಕದ್ದು. ಮೇಲ್ಕಂಡ ಡೆಪೋ ಜಿಮ್ಮೇದಾರನು ಬಾಂಡೆಡ್ ಡಿಪೋದಿಂದ ಮದ್ಯವನ್ನು ರವಾನೆ ಮಾಡಲು ವಿಧಾಯಕವಾಗಿರುವ ನಮೂನೆಯಲ್ಲಿ ರಹದಾರಿಯನ್ನು ಕಳುಹಿಸತಕ್ಕದ್ದು. ಆತನು ಎಕ್ಸೈಜ್ ಕಮಿಷನರ್ ಸಾಹೇಬರವರ ಆಜ್ಞಾನುಸಾರವಾಗಿ ಸರಕಿನೊಡನೆ ಸ್ಯಾಂಪಲ್ ಬಾಟ್ಲು ಯಾನೆ ಮಾದ್ರಿ ಬುಡ್ಡಿಗಳನ್ನು ಸಹಾ ಕಳುಹಿಸತಕ್ಕದ್ದು.

(7) ಲೈಸೆನ್ಸ್‌ದಾರನು 1904ನೇ ಇಸವಿ ಜುಲೈ ತಾರೀಖಿನಲ್ಲಿ ಅಂಗಡಿಯಲ್ಲಿ ಹಾಜರಿರತಕ್ಕ ಹಳೇ ಲೈಸೆನ್ಸ್‌ದಾರನ ಬಾಬತು ದಾಸ್ತಾನು ಮದ್ಯವನ್ನು ಎಕ್ಸೈಜ್ ಕಮಿಷನರ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರ ದ್ರವ್ಯವನ್ನು ಹಳೇ ಗುತ್ತಿಗೆ ದಾರನಿಗೆ ಪಾವತಿಮಾಡಿ ತೆಗೆದುಕೊಳ್ಳಲು ಗುರಿಯಾಗತಕ್ಕದ್ದು.

(8) ಲೈಸೆನ್ಸ್‌ದಾರನು ಲೈಸೆನ್ಸ್ ಪಡೆದಿರುವ ಯಾವ ಆವರಣದಲ್ಲಾದರೂ ಎಕ್ಸೈಜ್ ಕಮಿಷನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಪ್ರಮಾಣದ ಅಳತೇ ಸಾಧನಗಳನ್ನು ಇಟ್ಟುಕೊಂಡು ಉಪಯೋಗಿಸತಕ್ಕದ್ದು. ಲೈಸೆನ್ಸ್ ಪಡದ ಅಂಗಡಿಗಳನ್ನು ತನಿಖೆಮಾಡಲು ಅಧಿಕಾರವುಳ್ಳ ನೌಕರರು ಆವರಣವನ್ನು ತನಿಖೆ ಮಾಡುವದಕ್ಕೂ ಉಪಯೋಗಿಸಲ್ಪಡುವ ಅಳತೇ ಸಾಮಾನುಗಳನ್ನೂ ಮತ್ತು ಮದ್ಯವನ್ನು ಪರೀಕ್ಷೆ ಮಾಡುವದಕ್ಕೂ ಅಂಗಡಿಯಲ್ಲಿಟ್ಟಿರುವ ಲೆಖ್ಖವನ್ನು ಕೇಳಿ ತನಿಖೆ ಮಾಡುವುದಕ್ಕೂ ಅಧಿಕಾರವುಳ್ಳವರಾಗಿರುತ್ತಾರೆ.

(9) ಇಜಾರೆಯು ಎಕ್ಸೈಜ್ ಕಮಿಷನರ ಸಾಹೇಬರವರ ಅಪ್ಪಣೆ ಶಿವಾಯಿ ಮಾರಿಕೆಯಿಂದಲಾಗಲಿ ದಾನಮೂಲಕ ವಾಗಿ ಆಗಲೀ ಅಥವಾ ಇತರ ವಿಧವಾಗಿಯಾಗಲೀ ವರ್ಗವಾಗತಕ್ಕದ್ದಲ್ಲ. ಯಾ ಒಳಗೇಣಿ ಆಗತಕ್ಕದ್ದಲ್ಲ ಯಾ ಡೆಪ್ಯುಟಿ ಕಮಿಷನರವರು ಹಾಗೆ ಹುಕುಂ ಮಾಡಿದ್ದಲ್ಲಿ ಅವರ ಅನುಮತಿ ಶಿವಾಯಿ ಯಾವ ಹಕ್ಕಿನ ಅಡಳಿತಕ್ಕಾದರೂ ಯಾವ ಮುತಾಲೀಕನಿಗೂ ಮೊಕರರಾಗಕೂಡದು. ಮುತಾಲೀಕನೊಡನೆ ಗೊತ್ತುಮಾಡಿಕೊಂಡಿರುವ ಎಲ್ಲಾ ಒಡಂಬಡಿಕೆಗಳು ಕರಾರು ಮಾಡಿಕೊಂಡ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಡೆಪ್ಯುಟಿ ಕಮಿಷನರವರಲ್ಲಿ ಇಡಲ್ಪಡತಕ್ಕದ್ದು.

(10) ತೆಗೆದುಕೊಳ್ಳಲ್ಪಟ್ಟಿದ್ದ ಅಂಗಡಿಗಳಿಗೆ ಬರುವ ರಾಜೀನಾಮೆಗಳನ್ನು ಡೆಪ್ಯುಟಿ ಕಮಿಷನರವರು ವಿಚಾರಮಾಡದೆ ತಿರಸ್ಕರಿಸುವರು.

(11) ಲೈಸೆನ್ಸ್‌ದಾರನು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನು ಮತ್ತು ನಿಬಂಧನೆಗಳಿಗೂ, ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಕಾನೂನುಗಳನ್ನನುಸರಿಸಿ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿ ರತಕ್ಕದ್ದು, ಮತ್ತು ಸರಿಪಡಿಸಲು ಯಾ ಹೊಸ ಲೈಸೆನ್ಸ್ ಕೊಡುವ ಕಾರಣಗಳಿಂದ ಲೈಸೆನ್ಸನ್ನು ಕೇಳಿದ್ದಲ್ಲಿ ಕೊಟ್ಟುಬಿಡತಕ್ಕದ್ದು.

(12) ಡೆಪ್ಯುಟಿ ಕಮಿಷನರವರು ಅವರಿಗೆ ಯುಕ್ತ ಕಂಡಾಗ ಅಂಗಡಿಗಳನ್ನು ಮುಚ್ಚಿಸಬಹುದು. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ 200 ಗಜಗಳ ಒಳಗಾಗಿ ವರ್ಗಾಯಿಸಬಹುದು. ಎಕ್ಸೈಜ್ ಕಮಿಷನರ ಸಾಹೆಬರವರ ಅಪ್ಪಣೆಯನ್ನು ಪಡದು ಹೊಸ ಅಂಗಡಿಗಳನ್ನು ಇಡಿಸಬಹುದು.

(13) ಅಂಗಡಿಗಳ ಸಮುದಾಯವನ್ನು ಕೊಂಡುಕೊಂಡಿರುವರು ಎಕ್ಸೈಜ್ ಕಮಿಷನರವರ ವಿಶೇಷ ಅಪ್ಪಣೆಯನ್ನು ಪಡದು ಸರಿಯಾದ ಅಧಿಕಾರಿಗಳಿಂದ ಲೈಸೆನ್ಸ್ ಪಡೆದು ಕೋಠಿಯನ್ನು ಇಟ್ಟುಕೊಂಡು ಅಲ್ಲಿಗೆ ಬಾಂಡೆಡ್ ಕೋಠಿಯಲ್ಲಿ ವಿಕ್ರಯಿಸಿರುವ ಸರಕನ್ನು ತೆಗೆಸಿಕೊಂಡು ಹೋಗಿ ಅಲ್ಲಿಂದ ತಮ್ಮ ಅಂಗಡಿಗಳಿಗೆ ಆವಶ್ಯಕವಾಗಿರುವ ಸರಬರಾಯಿಯನ್ನು ಮಾಡಿಕೊಳ್ಳಬಹುದು. ಇಂಥಾ ಅಪ್ಪಣೆಯನ್ನು ತಿರಸ್ಕರಿಸಲು ಎಕ್ಸೈಜ್ ಕಮಿಷನರ ಸಾಹೇಬರವರು ಸ್ವಾತಂತ್ರ್ಯವುಳ್ಳವರಾಗಿರುತ್ತಾರೆ.

(14) ಅಂಗಡಿಯ ಯಾ ಅಂಗಡಿ ಸಮುದಾಯದ ಲೈಸೆನ್ಸ್‌ದಾರನು ತನ್ನ ಲೈಸೆನ್ಸಿನ ವಾಯಿದೆವಳಗೆ ಅಲ್ಲಿಂದ 5 ಮೈಲಿ ಒಳಗೆ ಶೇಂದಿ ಮಾರತಕ್ಕ ಒಟ್ಟು ಸ್ವಾತಂತ್ರ್ಯದ ಹಕ್ಕಿನ ವಿಷಯದಲ್ಲಿ ಯಾವ ವಿಧವಾದ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಅಥವಾ ಅದೇ ಎಲ್ಲೆಯೊಳಗೆ ಶೇಂದಿ ಬಿಕರೀ ಮಾಡತಕ್ಕ ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ಪಡೆಸಿರತಕ್ಕ ಯಾವ ಮನುಷ್ಯನನ್ನೂ ಒಳದೇಶದ ಮದ್ಯವನ್ನು ಮಾರುವ ತನ್ನ ಒಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಪಾಲುದಾರನನ್ನಾಗಿ ಆಗಲಿ ಯಾ ಸಂಬಂಧವುಳ್ಳವನನ್ನಾಗಿ ಆಗಲಿ ಇಟ್ಟುಕೊಳ್ಳಕೂಡದು. ಅಥವಾ ತನ್ನ ಲೈಸೆನ್ಸಿನ ವಾಯಿದೆ ಅಂದರ್‌ವಾರ್ ಎಕ್ಸೈಜ್ ಕಮಿಷನರವರ ಲಿಖಿತಮೂಲಕವಾದ ಹುಕುಂ ಇಲ್ಲದೆ ಬ್ರಿಟಿಷ್ ಸರ್ಕಾರದ ಕೈಗಳಿಗಿರುವ ಮದರಾಸ್ ಯಾ ಬೊಂಬಾಯಿ ರಾಜ್ಯಾಧಿಪತ್ಯದ ಯಾವ ಡಿಸ್ಟ್ರಿಕ್ಟುಗಳಲ್ಲಾಗಲಿ, ಯಾ ಇತರ ಪರಾಯಿದೇಶದ ಯಾ ಶೀಮೆಯಲ್ಲಾಗಲೀ, ಬೆಂಗಳೂರು ಸಿವಿಲ್ ಮಿಲಿಟರಿ ಸ್ಟೇಷನ್ನಲ್ಲಾಗಲೀ ಲೈಸೆನ್ಸ್‌ದಾರನು ಯಾವದೊಂದು ಸಾರಾಯಿ ಗುತ್ತಿಗೆಯಲ್ಲಿ ಪ್ರತ್ಯಕ್ಷವಾದ ಯಾ ಪರೋಕ್ಷವಾದ ಸಂಬಂಧವನ್ನು ಇಟ್ಟುಕೊಂಡಿರಕೂಡದು.

(15) ಕ್ರಮವಾಗಿ ನಂಬರ ಹಾಕಲ್ಪಟ್ಟ ಪುಟಗಳುಳ್ಳ ಒಂದು ಇನ್ಸ್‌ಪೆಕ್ಷನ್ ನೋಟ್ ಪುಸ್ತಕವನ್ನು ತನಿಖೆ ಮಾಡತಕ್ಕ ಆಫಿಸರುಗಳ ಷರಾಗಳಿಗೋಸ್ಕರ ಇಟ್ಟುಕೊಳ್ಳತಕ್ಕದ್ದಲ್ಲದೆ ಸದರೀ ಬುಕ್ಕನ್ನು ರೇಂಜ್ ಛಾರ್ಜಿನಲ್ಲಿರುವ ಇನ್ಸ್‌ಪೆಕ್ಟರೇ ಆಗಲಿ ಯಾ ಅವರಿಂದ ಅಧಿಕಾರ ಪಡೆದಿರುವ ಇನ್ನಾವ ಆಫಿಸರರೇ ಆಗಲಿ ರಸೀತಿಕೊಟ್ಟಲ್ಲಿ ಅವರಿಗೆ ಕೊಡತಕ್ಕದ್ದು.

(16) ಎಕ್ಸೈಜ್ ರೆಗ್ಯುಲೇಷನ್ ಯಾ ಓಪಿಯಂ ಆಕ್ಟಿಗೆ ವಿರೋಧವಾಗಿ ಯಾ ಹಾಲಿ ಜಾರಿಯಲ್ಲಿರುವ ಮತ್ತ್ಯಾವ ನಿಬಂಧನೆಗೆ ವಿರೋಧವಾಗಿ ನಡೆದ ಯಾವದಾದರೂ ತಕ್ಸೀರಿಗೆ ಲೈಸೆನ್ಸ್‌ದಾರ ಮೇಜಿಸ್ಟ್ರೇಟರ ಮುಂದೆ ದರ್ಯಾಫ್ತು ಯಾ

ತಪ್ಪು ಸಾಬೀತಾಗಿ ಡೆಪ್ಯುಟಿ ಕಮ್ಮಿಷನರವರಿಗೆ ಆತನು ಲೈಸೆನ್ಸ್‌ದಾರನಾಗಿರಲು ನಾಲಾಯಖಾಯಂದು ಕಂಡು ಬಂದಲ್ಲಿ ಆತನನ್ನು ನಷ್ಟಕ್ಕೆ ಗುರಿಮಾಡಿ ಆತನ ಲೈಸೆನ್ಸ್ ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಟ್ಟಂತೆ ಹುಕುಂ ಮಾಡುವುದಕ್ಕೆ ಯಾ ಹಕ್ಕನ್ನು ಮಾರುವುದಕ್ಕೂ ಯಾ ಅನ್ಯಥಾ ವಿಲೇವಾರಿ ಮಾಡುವುದಕ್ಕೂ ಡೆಪ್ಯುಟಿ ಕಮ್ಮಿಷನರವರಿಗೆ ನ್ಯಾಯವಾಗಿರತಕ್ಕದ್ದು.

(17) ಲೈಸೆನ್ಸ್‌ದಾರರಿಂದ ಬರಬೇಕಾದ ಮೊಬಲಗುಗಳೆಲ್ಲಾ ಠೇವಣಿ ಮೊಬಲಗಿನಲ್ಲಿ ವಜಾ ಮಾಡಲ್ಪಡಬಹುದು. ಅಥವಾ ಜಮೀನ್ ಕಂದಾಯದ ಬಾಕಿಗಳನ್ನು ವಸೂಲ್ಮಾಡಲು ಹಾಲಿ ಜಾರೀಲಿರತಕ್ಕ ಕಾನೂನುಪ್ರಕಾರ ಯಾ ಆತನ ಜಾಮೀನ್‌ದಾರರ ಆಸ್ತಿಯನ್ನು ಜಫ್ತಿ ಹರಾಜ್ ಮಾಡುವದರ ಮೂಲಕ ವಸೂಲ್ಮಾಡಲ್ಪಡಬಹುದು.

(18) ಲೈಸೆನ್ಸ್‌ದಾರ ಯಾ ಬಿಕರೀದಾರ ಯಾ ಬಿಕರೀದಾರರು ಯಾವ ತರಹಾದ ಸಾರಾಯಿಯನ್ನಾದರೂ ಲೈಸೆನ್ಸ್‌ಪಡದ ಯಾವ ಅಂಗಡಿ ಯಾ ಆವರಣದಿಂದ ಹೊರಗೆ ನ್ಯಾಯವಾದ ಪರ್ಮಿಟ್ಟಿಯಿಲ್ಲದೆ ತಗದುಕೊಂಡು ಹೋಗುವದಕ್ಕೆ ಯಾರೊಬ್ಬರಿಗೂ ಒಂದು ರಪ್ಯೂಟೆಡ್ ಕ್ವಾರ್ಟ್ಸೀಸೆಗಿಂತ ಹೆಚ್ಚಾಗಿ ಕೊಡಲೂಕೂಡದು, ಮಾರಲೂಕೂಡದು.

(19) ಅಂಗಡಿಕಾರರು ಯಾವ ಯೂರೋಪಿಯನ್ ನಾನ್‌ಕಮ್ಮಿಷನ್ಡ್ ಆಫಿಸರ್, ಪ್ರೈವೆಟ್ ಅಥವಾ ಸೋಲ್ಜರಿಗಾದರೂ ಅಥವಾ ಸೈನ್ಯಗಳ ಮೊಕ್ಕಾಂಗಳೊಡನೆ ಹೋಗುವ ಯಾವ ಯೂರೋಪಿಯನ್ ಯಾ ಯೂರೇಷಿಯನ್‌ಗಾದರೂ ಅಥವಾ ಮೇಲೆ ಹೇಳಲ್ಪಟ್ಟ ಜನಗಳ ಸಂಸಾರಗಳ ಪೈಕಿ ಯಾರೊಬ್ಬರಿಗಾದರೂ ಕಮ್ಯಾಂಡಿಂಗ್ ಆಫೀಸರವರ ಅಥವಾ ಈ ವಿಷಯದಲ್ಲಿ ಅವರಿಂದ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯ ಲಿಖಿತಮೂಲಕವಾದ ಅಪ್ಪಣೆಯಿಲ್ಲದೆ ಯಾವ ಸಾರಾಯಿಯನ್ನೂ ಮಾರಲೂ ಕೂಡದು, ಕೊಡಲೂಕೂಡದು. ಮತ್ತು ಅವರು ಯಾವ ಯೂರೋಪಿಯನ್ ಯಾ ಯೂರೇಷಿಯನ್ ನಾವಿಕನಿಗೂ ಮತ್ತು ಉದ್ಯೋಗದಮೇಲಿರುವ ಕಾಲದಲ್ಲಿ ಯಾವ ಶಿಪಾಯಿಗೂ ಪೋಲಿಸ್ ಅಥವಾ ಯಕ್ಸೈಸ್ ನೌಕರನಿಗೂ ರೈಲ್ವೆ ಕಂಪೆನಿಯ ನೌಕರನಿಗೂ ಮತ್ತು ಪೋಲಿಸ ಮೊಹಸಲೆಯಲ್ಲಿರುವ ಯಾವ ಯೂರೋಪಿಯನ್ ಪೋಲೀ ಮನುಷ್ಯನಿಗೂ ಅಥವಾ ಯಾವ ಹುಚ್ಚು ಮನುಷ್ಯನಿಗೂ ಹನ್ನೆರಡು ವರ್ಷಗಳ ವಯಸ್ಸಿನೊಳಗಾಗಿ ಇರುವ ಯಾವ ಮಗುವಿಗೂ ಅಂಗಡಿಯ ಆವರಣದಲ್ಲಿ ಉಪಯೋಗಿಸಲಿಕ್ಕೆ ಸಾರಾಯಿಯನ್ನು ಮಾರಕೂಡದು ಯಾ ಕೊಡಕೂಡದು ; ಶಿವಾಯಿ ಸಾರಾಯಿಯನ್ನು ಸಾಲವಾಗಿ ಮಾರಕೂಡದು ಅಥವಾ ಸಾಲವಾಗಿ ಮಾರಕೂಡದು.

(20) ಲೈಸೆನ್ಸ್‌ದಾರ ಯಾ ಬಿಕರೀದಾರ ಅಥವಾ ಬಿಕರೀದಾರರು ಸಾರಾಯಿಯ ಖರೀದಿ ಹಣಕ್ಕೆ ಯಾವ ವಿಧವಾದ ಪದಾರ್ಥವನ್ನು ಬದಲಿಯಾಗಿಯಾದರೂ ಅಡಮಾನವಾಗಿ ಆದರೂ ತೆಗೆದುಕೊಳ್ಳಕೂಡದು. ಸಾರಾಯಿಗೆ ನಗದು ಹಣವೇ ತೆಗೆದುಕೊಳ್ಳತಕ್ಕದ್ದು. ಮತ್ತು ನಗದು ಹಣವಲ್ಲದೆ ಇನ್ಯಾವ ಪದಾರ್ಥವನ್ನಾದರೂ ಖರೀದಿ ಬದಲಾಗಿ ಬಂದಲ್ಲಿ ಸಮೀಪದಲ್ಲಿ ಇರುವ ಮೇಜಿಸ್ಟ್ರೇಟರಿಗೇ ಆಗಲಿ ಅಥವಾ ಪೋಲಿಸ ಅಫೀಸರಿಗೇ ಆಗಲಿ ವರ್ತಮಾನ ಕೊಡತಕ್ಕದ್ದು. ಅವರು ಎಕ್ಸೈಜ್ ಉದ್ಯೋಗಸ್ಥರಲ್ಲಿ ಹಣಸಂಬಂಧವಾದ ಲೇವಾದೇವಿಯನ್ನು ಇಟ್ಟುಕೊಳ್ಳಕೂಡದು.

(21) ಅಂಗಡಿಯಲ್ಲಿ ಮಾರಾಟಕ್ಕಾಗಿ ಇಡಲ್ಪಡುವ ಮತ್ತು ಮಾರಲ್ಪಡುವ ಸಾರಾಯಿಯು ಬೆರಸದ ಮತ್ತು ನೀರುಹಾಕದೆ ಇಟ್ಟಿರತಕ್ಕದ್ದು ; ಮತ್ತು ಕೋಠಿಯಿಂದ ರವಾನಿಸಲ್ಪಟ್ಟ ತರಹದಲ್ಲಿಯೂ ಮತ್ತು ಜೋರಿನಲ್ಲಿಯೂ ಇರಬೇಕು. ಅದರ ಮತ್ತನ್ನುಂಟುಮಾಡತಕ್ಕ ಶಕ್ತಿಯನ್ನು ವೃದ್ಧಿಮಾಡುವುದಕ್ಕಾಗಲೀ ಅಥವಾ ಇನ್ಯಾವ ಕಾರಣಗಳಿಗಾಗಲೀ ದೇಹಕ್ಕೆ ವಿರುದ್ಧವಾದ ಯಾವ ವಸ್ತುಗಳನ್ನೂ ಅದರಲ್ಲಿ ಬೆರಸಕೂಡದು. ಅಂಗಡಿಗಳನ್ನೂ ಕೋಠಿಗಳನ್ನೂ ತನಿಖೆ ಮಾಡುವುದಕ್ಕೆ ಅಧಿಕಾರವುಳ್ಳ ಎಲ್ಲಾ ಆಫಿಸರರು ಕುಡಿಯುವದಕ್ಕಾಗಲೀ ಉಪಯೋಗಿಸುವದಕ್ಕಾಗಲೀ ನಾಲಾಯಖಾಗಿರತಕ್ಕ ಮದ್ಯವನ್ನು ನಿಲ್ಲಿಸುವದಕ್ಕೆ ಡೆಪ್ಯುಟಿ ಕಮ್ಮಿಷನರುಗಳು ಎಕ್ಸೈಜ್ ಕಮ್ಮಿಷನರವರು, ಡೆಪ್ಯುಟಿ ಎಕ್ಸೈಜ್ ಕಮ್ಮಿಷನರವರು ಎಕ್ಸೈಜ್ ಅಸಿಸ್ಟೆಂಟ್ ಕಮ್ಮಿಷನರುಗಳು ಅಂಥಾ ಮದ್ಯವನ್ನು ನಾಶಪಡಿಸುವದಕ್ಕೂ ಅಧಿಕಾರವುಳ್ಳವರಾಗಿರುತ್ತಾರೆ.

(22) ಷರಾಬ್ ಬಿಕರೀ ಆಗುವ ದುಕಾನಿನಲ್ಲಾಗಲೀ ಯಾ ಲೈಸೆನ್ಸ್‌ದಾರ ಯಾ ಬಿಕರೀದಾರನ ಬಳಿಯಲ್ಲಾಗಲಿ ಯಾ ಅವನ ಸ್ವಾಧೀನದಲ್ಲಾಗಲಿ ಯಾ ಅಂಥಾವನ ದುಕಾನಿನ ನೌಕರರ ಬಳಿಯಲ್ಲಾಗಲೀ, ಅಥವಾ ಅವರ ಸ್ವಾಧೀನದಲ್ಲಾಗಲೀ, ಷರಾಬ್ ವಿನಹ ಇತರ ಯಾವ ಮದ್ಯವಾಗಲಿ ಸೇರೇಂಗಲಿ ಯಾ ಇತರ ಪಾನವಾಗಲೀ ಎಷ್ಟುಮಟ್ಟಿಗೂ ಇರತಕ್ಕದ್ದಲ್ಲವು. ಮತ್ತು ಮಾರತಕ್ಕದ್ದಲ್ಲವು.

(23) ಚೋರಿ ಮಾಡುವ ಜನರು, ಕಳ್ಳರು, ಪೋಲಿ ಜನಗಳು, ದೊಂಬಿ ಮಾಡತಕ್ಕವರು, ಹಾದರಗಿತ್ತಿಯರು, ಶಿಪಾಯಿಗಳು ಅಥವಾ ಫೌಜು ಬಿಟ್ಟವರೆಂದು ತಿಳಿದುಬಂದ ಅಥವಾ ನಂಬಲ್ಪಡಬಹುದಾದ ಇತರ ಮನುಷ್ಯರು, ಇವರುಗಳಿಗೆ ಅಂಗಡಿಯಲ್ಲಿ ಸ್ಥಳ ಕೊಡಕೂಡದು. ಅದರಲ್ಲಿ ಜೂಜು ಮುಂತಾದ ದುರ್ನಡತೆಗಳನ್ನು ಆಡ್ಡೀ ಮಾಡತಕ್ಕದ್ದು. ಗುಮಾನಿ ಜನಗಳು ಅಲ್ಲಿಗೆ ಬರುವ ವರ್ತಮಾನವನ್ನು ಮೇಜಿಸ್ಟ್ರೇಟರಿಗೆ ಅಥವಾ ಪೋಲಿಸ್ ಆಫಿಸರರಿಗೆ ಕೊಡತಕ್ಕದ್ದು. ಯಾವ ಅಂಗಡಿಯಲ್ಲಿಯೂ ರಾತ್ರಿ ಹೊತ್ತಿನಲ್ಲಿ ಯಾರಿಗೂ ಸ್ಥಳ ಕೊಡಕೂಡದು.

(24) ಲೈಸೆನ್ಸ್‌ದಾರನು ತನ್ನ ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ಒಂದು ಹಲಿಗೆಮೇಲೆ ತನ್ನ ಹೆಸರು, ತನ್ನ ಅಂಗಡಿಯ ನಂಬರ್, ತಾನು ಯಾವ ಪದಾರ್ಥಗಳ ವ್ಯಾಪಾರ ಮಾಡುವುದಕ್ಕೆ ಲೈಸೆನ್ಸ್ ಪಡೆದಿರುತ್ತಾನೋ ಆ ಪದಾರ್ಥಗಳ ಹೆಸರು ಇವುಗಳನ್ನು ದೇಶಭಾಷೆಯಲ್ಲಿ ಸ್ಪಷ್ಟವಾಗಿ ಛಾಪಿಸಿ ತಗಲಹಾಕತಕ್ಕದ್ದು. ಅಂಗಡಿಯ ಒಳಭಾಗದಲ್ಲಿ ಎಲ್ಲರಿಗೂ ಕಾಣುವಂತೆ ಲೈಸೆನ್ಸನ್ನು ತಗಲಹಾಕತಕ್ಕದ್ದು.

(25) ಪ್ರತಿದಿವಸವೂ ಜಮಾ ಖರ್ಚು ಆಗುವ ಮದ್ಯದ ಸಾಚಾ ಲೆಖ್ಖಗಳನ್ನು ವಿಧಾಯಕವಾಗಿರುವ ನಮೂನೆಯಲ್ಲಿ ಶಾಯಿಯಿಂದ ಬರೆದು ಇಡಬೇಕು. ಈ ಲೆಖ್ಖಗಳು ಪರ್ಮಿಟ್ಟುಗಳು ಅಚ್ಚಾಗಿರುವ ಪುಸ್ತಕಗಳ ರೀತಿಯಲ್ಲಿರಬೇಕು. ಇವುಗಳ ಅಸಲು ಬೆಲೆಯನ್ನು ಕೊಟ್ಟಲ್ಲಿ ಸ್ಥಳದ ಎಕ್ಸೈಜ್ ನೌಕರರಿಂದ ಸದರೀ ಪುಸ್ತಗಳನ್ನು ಪಡೆಯಬಹುದು. ಕೊಂಡುಕೊಳ್ಳಲ್ಪಡುವ ಸಾರಾಯಿಗೆ ಪರ್ಮಿಟಗಳನ್ನೂ ಮತ್ತು ಖರ್ಚಾದಕ್ಕೆ ಕೌಂಟರ್ ಫಾಯಿಲ್ ಪರ್ಮಿಟಗಳನ್ನೂ ಹುಷಾರಿನಿಂದ ಫೈಲು ಮಾಡತಕ್ಕದ್ದು. ಮುಂದಿನ ಖರ್ಚಿಗಾಗಿ ಖಾಲಿ ಪರ್ಮಿಟಗಳನ್ನು ಸೈನ್ ಮಾಡುವದನ್ನು ನಿಷೇಧಿಸಿದೆ. ಸದರೀ ಲೆಖ್ಖಗಳು ಪರ್ಮಿಟಗಳ ಕೌಂಟರ್ ಫಾಯಿಲ್‌ಗಳು ಭದ್ರವಾಗಿ ಇಡಲ್ಪಟ್ಟು ಇಜಾರೆ ಮುಗದ ತಕ್ಷಣ ಸ್ಥಳದ ಎಕ್ಸೈಜ್ ಆಫಿಸರವರಲ್ಲಿ ಕೊಡಲ್ಪಡತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು ಯಾ ಡೆಪ್ಯುಟಿ ಕಮ್ಮಿಷನರವರು ಮೊಕರ್ರಾಮಾಡುವ ಇತರ ಆಫಿಸರುಗಳೇ ಆಗಲಿ, ಅಸಿಸ್ಟೆಂಟ್ ಇನ್ಸ್‌ಪೆಕ್ಟರಿಗಿಂತಲೂ ಹುದ್ದೆಯಲ್ಲಿ ಕಮ್ಮಿಯಾಗಿರದ ಎಕ್ಸೈಜ್ ಆಫಿಸರುಗಳೇ ಆಗಲಿ ಕೇಳಿದ್ದಲ್ಲಿ ಸದರೀ ಲೆಖ್ಖಗಳನ್ನು ಹಾಜರ್ಪಡಿಸಬೇಕು. ಡೆಪ್ಯುಟಿ ಕಮ್ಮಿಷನರವರು ಅಥವಾ ಅಸಿಸ್ಟೆಂಟ್ ಇನ್ಸ್‌ಪೆಕ್ಟರಿಗಿಂತಲೂ ಹುದ್ದೆಯಲ್ಲಿ ಕಮ್ಮಿಯಾಗಿಲ್ಲದ ಎಕ್ಸೈಜ್ ಆಫಿಸರರು ಆಗಿಂದಾಗ್ಗೆ ಅಪೇಕ್ಷಿಸುವಂಥಾ ಯಾವ ಲೆಖ್ಖಗಳನ್ನಾಗಲೀ ವರ್ತಮಾನಗಳನ್ನಾಗಲೀ ಕೊಡಲಿಕ್ಕೆ ಲೈಸೆನ್ಸ್‌ದಾರನು ಬದ್ಧನಾಗಿರತಕ್ಕದ್ದು.

(26) ಈ ಕೆಳಗೆ ನಮೂದಿಸಿರುವದರಗಳಿಗೆ ಯಾ ಎಕ್ಸೈಜ್ ಡಿವಿಜನಲ್ ಆಫಿಸರರು ಸ್ಥಳದ ಸರಬರಾಯಿಗೆ ಅವಶ್ಯಕವಾಗಿರುವದೆಂದು ಅಭಿಪ್ರಾಯಪಡುವ ಮೊತ್ತಕ್ಕೆ ಕಮ್ಮಿ ಯಿಲ್ಲದಂತೆ ಯಾವಾಗಲೂ ಸರಕು ಹಾಜರು ಇರಬೇಕು.

	ಅರಕ್ ಸಾರಾಯಿ	ಹೆಂಡ
1. ಎಲ್ಲಾ ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರಗಳಲ್ಲು	2 ಗ್ಯಾಲನಗಳು	
2. ಎಲ್ಲಾ ತಾಲ್ಲೂಕು ಮತ್ತು ಕೋಠಿ ಕಸಬಾದಲ್ಲು	1 ಗ್ಯಾಲನ	
3. ಕೋಠಿಗೆ 5 ಮೈಲಿ ಫಾಸಲೆ ಒಳಗೆ ಇರತಕ್ಕ ಎಲ್ಲಾ ಗ್ರಾಮಗಳ ಅಂಗಡಿಗಳಲ್ಲೂ	$\frac{1}{2}$ ಗ್ಯಾಲನ	
4. ಕೋಠಿಗೆ 5 ಮೈಲಿಗೆ ಜಾಸ್ತಿ ಇರತಕ್ಕ ಎಲ್ಲಾ ಗ್ರಾಮಗಳ ಅಂಗಡಿಗಳಲ್ಲೂ	ಕೋಠಿಗೆ ಪ್ರತಿ 10 ಮೈಲಿ ಫಾಸಲೆಗೂ 1 ದಿವಸದ ಬಿಕರಿಗೆ ಆಗುವಷ್ಟು ವ 5 ಮೈಲಿಗಳೊಳಗಾಗಿರುವ ಅಂಗಡಿಗಳಿಗೆ ಗೊತ್ತಾಗಿರುವ ಸರಕಿಗಿಂತಲೂ ಕಮ್ಮಿ ಇಲ್ಲದಂತೆಯೂ ಇರಬೇಕು.	

ಡೆಪ್ಯುಟಿ ಕಮ್ಮಿಷನರ್ ಸಾಹೆಬರವರು ಅಂಗಡಿಯನ್ನು ಹಂಗಾಮಿಯಾಗಿ ಆಗಲೀ ಅಥವಾ ಖಾಯಂ ಆಗಿ ಆಗಲೀ ಮುಚ್ಚುವುದಕ್ಕೆ ಹುಕುಂ ಕೊಟ್ಟಹೊರ್ತು ನಿಬಂಧಿಸಿರುವ ಕಾಲಗಳಲ್ಲಿ ಅಂಗಡಿಯನ್ನು ತೆಗದಿರಬೇಕು.

(27) ಅಂಗಡಿಯನ್ನು ರಾತ್ರಿ 9 ಘಂಟೆಗೆ ಮುಚ್ಚಬೇಕು. ಹಬ್ಬ, ಜಾತ್ರೆ ಮುಂತಾದ ಕಾಲಗಳಲ್ಲಿ ವಿಶೇಷವಾದ ಅಪ್ಪಣೆ ಹೊರ್ತು ಸೂರ್ಯೋದಯಕ್ಕೆ ಮುಂಚಿತವಾಗಿ ಅಂಗಡಿ ಬಾಗಿಲನ್ನು ತೆಗಿಯಕೂಡದು. ಯೂರೋಪಿಯನ್ ಯಾ ನೇಟಿವ್ ಸೈನ್ಯದ ರಿಜಿಮೆಂಟ್ ಯಾ ಸಮೂಹವು ಪ್ರಯಾಣಮಾಡುತ್ತಿರುವಾಗ ಯಾ ಸಮೀಪದಲ್ಲಿ ಮೊಕ್ಕಾಂ ಮಾಡಿರುವಾಗ ಅವರ ಪ್ರಯಾಣದ ಮಾರ್ಗದಲ್ಲಿ ಯಾ ಆ ಮಾರ್ಗದ ಸಮೀಪದಲ್ಲಿರುವ ಎಲ್ಲಾ ಸಾರಾಯಿ ಬಿಕರಿ ಅಂಗಡಿಗಳನ್ನು ಮುಚ್ಚುವಂತೆ ಡೆಪ್ಯುಟಿ ಕಮ್ಮಿಷನರವರು ಯಾ ತಾಲ್ಲೂಕು ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರವರು ಅಪ್ಪಣೆ ಮಾಡಬಹುದು. ಸರ್ಕಾರದವರು ತಕ್ಕ ಕಾರಣಗಳಿಂದ 15 ದಿವಸದ ಮುಂಚಿತವಾಗಿಯೇ ನೋಟಿಸ್ ಕೊಟ್ಟು ಲೈಸೆನ್ಸ್‌ದಾರರಿಗೆ ನ್ಯಾಯವಾದ ಪರಿಹಾರದ್ರವ್ಯವನ್ನು ಕೊಡಿಸಿ ಗುತ್ತಿಗೆಯನ್ನು ಮೋಖೂಫ್ ಮಾಡುವ ಅಧಿಕಾರವನ್ನು ಉಳಿಸಿಕೊಂಡಿರುತ್ತಾರೆ. ಮತ್ತು ಒಳದೇಶದ ಬೀರು ವಿಷಯದಲ್ಲಿ ಯಾ ಸಾರಾಯಿ ವಿನಹ ಇತರ ವಿಧವಾದ ಯಾವ ಮದ್ಯದ ವಿಷಯದಲ್ಲಿಯೂ ಸರ್ಕಾರದವರು ಯಾವದಾದರೂ ಏರ್ಪಾಟುಮಾಡಿದ ವಿಷಯದಲ್ಲಿ ಲೈಸೆನ್ಸ್‌ದಾರನಿಗೆ ಪರಿಹಾರದ್ರವ್ಯಕೆ ಯಾ ರಿಮಿಷನ್ ಯಾನೆ ಸೋಡಿಗೆ ಹಕ್ಕು ಇರಲಾರದು.

(28) ಬಿಕರಿಯುಪ್ರಶಸ್ತವಾಗಿರುವ ಕಟ್ಟಡದಲ್ಲಿ ಮಾಡಲ್ಪಡತಕ್ಕದ್ದು. ಸದರೀ ಕಟ್ಟಡಕ್ಕೆ ಒಂದೇ ಬಾಗಲು ಇರತಕ್ಕದ್ದು. ಹಿಂಭಾಗದಲ್ಲಾದರೂ ಪಕ್ಕಗಳಲ್ಲಾದರೂ ಕಿಟಕಿಯಾಗಲಿ ಇರಕೂಡದು. ಷರಾಬನ್ನು ಮಾರುವ ಜಗಲಿಯು ಅಂಗಡಿ ಒಳಗೆ ಇರುವ ಜನಗಳು, ಅಂಗಡಿಮುಂದೆ ಬೀದೀಲಿ ತಿರಗಾಡುವ ಜನರಿಗೆ ಕಾಣುವಹಾಗೆ ಬಾಗಲಿಗೆ ಎದುರಾಗಿ ಇರತಕ್ಕದ್ದು. ಮತ್ತು ಇದರಲ್ಲಿ ಎರಡನೇ ಕೊಠಡಿಯು ಗಿರಾಕಿಗಳಿಗಾಗಿ ತೆಗದು ಇರಕೂಡದು.

(29) ಸಮೀಪದಲ್ಲಿ ಕ್ರಮವಾಗಿ ಲೈಸೆನ್ಸ ಪಡದ ಅಂಗಡಿಗಳಿಲ್ಲದೇ ಇರುವ ಪ್ರದೇಶಗಳಲ್ಲಿ ನಡೆಯುವ ಹಬ್ಬ, ಜಾತ್ರೆ ಮುಂತಾದ ಕಾಲಗಳಲ್ಲಿ ಮದ್ಯವನ್ನು ಬಿಕರೀ ಮಾಡಲು ಆಗಾಗ್ಯೆ ಕೊಡಬೇಕಾದ ಲೈಸೆನ್ಸುಗಳನ್ನು ಕೊಡತಕ್ಕ ಅಧಿಕಾರವು ಡೆಪ್ಯುಟಿ ಕಮ್ಮಿಷನರವರಿಗೆ ಉಳಿಸಿಕೊಂಡಿರುತ್ತದೆ. ಅಂಥಾ ಲೈಸೆನ್ಸುಗಳು ಮಾಮೂಲಾಗಿ ಸದರೀ ಪ್ರದೇಶದಲ್ಲೆಲ್ಲಾ ಸರಬರಾಯಿ ಮಾಡುವ ದುಕಾನದಾರರಿಗೆ ಕೊಡಲ್ಪಡತಕ್ಕದ್ದು. ಸದರೀ ಲೈಸೆನ್ಸುಗಳ ಅವಧಿಯು 15 ದಿವಸಗಳಿಗಿಂತಲೂ ಹೆಚ್ಚಾಗಿರಕೂಡದು. ಮತ್ತು ಅದಕ್ಕಾಗಿ ಪಾವತಿಯಾಗತಕ್ಕ ಮೊಬಲಗು ಡೆಪ್ಯುಟಿ ಕಮ್ಮಿಷನರಿಗೆ ಯುಕ್ತವಾಗಿ ತೋರಿದಂತೆ ಗೊತ್ತುಮಾಡಲ್ಪಡಬಹುದು. ಡೆಪ್ಯುಟಿ ಕಮ್ಮಿಷನರವರು ಅದನ್ನು ಹರಾಜುಮೂಲಕವಾಗಿಯೂ ವಿಲೇವಾರಿ ಮಾಡುವಂತೆ ತೀರ್ಮಾನಿಸಬಹುದು.

(30) ಲೈಸೆನ್ಸ್ದಾರನು ಸಾರಾಯಿಯನ್ನು ಒಯ್ಯುವುದಕ್ಕೆ ಯಾ ಬಿಕರೀ ಮಾಡುವುದಕ್ಕೆ ಅವರಿಂದ ಮೊಕರ್ರುಮಾಡಲ್ಪಟ್ಟ ಯಾವ ಮನುಷ್ಯನಾದರೂ ಎಕ್ಸೈಜ್ ಕಾನೂನಿಗೆ ಅಥವಾ ಆತನು ಬರದುಕೊಟ್ಟ ಕರಾರುಗಳಿಗೆ ವಿರೋಧವಾಗಿ ನಡದ ಸಂಗತಿಯು ಅವರ ತಿಳುವಳಿಕೆಗೆ ಬಂದಲ್ಲಿ ಆ ಸಂಗತಿಯನ್ನು ಡೆಪ್ಯುಟಿ ಕಮ್ಮಿಷನರವರಿಗೆ ಇತ್ತಿಲ್ಲೆ ಮಾಡಿ, ಅಂಥಾ ಮನುಷ್ಯನನ್ನು ಕೆಲಸದಲ್ಲಿಡುವ ವಿಷಯದಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಕೊಡಲ್ಪಡುವ ಹುಕುಮನ್ನು ಜಾರೀಲಿ ತರತಕ್ಕದ್ದು ಅವರ ಕರ್ತವ್ಯವಾಗಿರುತ್ತದೆ.

(31) ಡೆಪ್ಯುಟಿ ಕಮ್ಮಿಷನರವರ ಒಪ್ಪಿಗೆ ಪಡದ ಶಿವಾಯಿ ಇಂಡಿಯನ್ ಪೀನಲ್‌ಕೋಡ್ ರೀತ್ಯಾ ಯಾವದಾದರೂ ಕ್ರೂರವಾದ ತಪ್ಪಿತಕ್ಕೆ ಶಿಕ್ಷಿಸಲ್ಪಟ್ಟಿರುವ ಯಾವ ಮನುಷ್ಯನನ್ನಾದರೂ ಮದ್ಯವನ್ನು ಒಯ್ಯುದಕ್ಕಾಗಲೀ ಬಿಕರಿ ಮಾಡುವುದಕ್ಕಾಗಲೀ ನೇಮಿಸಿಕೊಳ್ಳಕೂಡದು.

(32) ಕುಷ್ಠರೋಗದಿಂದಾಗಲೀ ಅಥವಾ ಇತರ ಅಂಟುರೋಗದಿಂದಾಗಲೀ ಪೀಡಿತರಾದ ಜನಗಳಿಂದ ಸಾರಾಯಿಯನ್ನು ಒಯ್ಯುವದಕ್ಕಾಗಲೀ ಅಥವಾ ಮಾರುವುದಕ್ಕಾಗಲೀ, ಮತ್ತು ಅಂಗಡಿಯಲ್ಲಿ ಅಂಥಾ ಜನಗಳನ್ನು ನೌಕರವಾ ನೇರಾಗಿ ಇಟ್ಟುಕೊಳ್ಳುವದಕ್ಕಾಗಲೀ ಅಡ್ಡೀ ಪಡಿಸಲ್ಪಟ್ಟಿರುತ್ತದೆ.

(33) ಬ್ರಿಟಿಷ್ ರಾಜ್ಯದ ದ್ವಾರಾ ಒಯ್ಯಲ್ಪಟ್ಟ ಅಂಗಡಿಗಳಿಗೆ ಬರತಕ್ಕ ಸಾರಾಯಿಯ ಮೋಹರನ್ನು ಸರ್ಕಾರದಿಂದ ನೇಮಿಸಲ್ಪಟ್ಟಿರುವ ನೌಕರ ಮಾನೇರಿಂದ ಸರಕು ಮೊಕಾಬಿಲೆ ಮಾಡಲ್ಪಡುವವರಗೂ ಹೊಡೆಯಕೂಡದು.

11. ಲೈಸೆನ್ಸ್ದಾರನು ಯಾ ಅತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಅತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಗಳನ್ನು ತೆಗೆಯುವದರಲ್ಲಿಯೂ ತನ್ನ ಅಂಗಡಿ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಿಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸ್ದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ ಯಾ ಉದಾಸೀನಕ್ಕೆ 50 ರೂಪಾಯಿಗಳಿಗೆ ಮೀರದ ಜರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣಿ ಮೊಬಲಗನ್ನು ದಂಡವಾಗಿ ಸರ್ಕಾರಕ್ಕೆ ದಾಖಲುಮಾಡಿಕೊಂಡಿರುತ್ತೆಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನು ರದ್ದುಮಾಡಿ ಸದರೀ ಲೈಸೆನ್ಸ್ದಾರನ ಜವಾಬ್ದಾರೀಮೇಲೆ ಆತನನ್ನು ನಷ್ಟಕ್ಕೆ ಗುರಿಮಾಡಿ ಮೇಲ್ಕಂಡ ಅಂಗಡಿಯನ್ನು ಪುನಹಾ ಹರಾಜು ಮಾಡಲಿಕ್ಕೂ ಅಥವ ಇತರ ವಿಧವಾಗಿ ವಿಲೀ ಮಾಡಲಿಕ್ಕೂ ಯಾ ಅಂಥಾ ಅಂಗಡಿಯನ್ನು ಸರ್ಕಾರದ ಆಡಳಿತದಲ್ಲಿಡಲಿಕ್ಕೂ ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರ್ರಾಗಿರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 1904ನೇ ಇಸವಿ ಜುಲೈ ಗುರ್ರೀ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗೆದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟದ ದೇಖೀಲ್ ಸದರೀ ಲೈಸೆನ್ಸ್ದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಅಂಗಡಿಯು ರದ್ದುಮಾಡಲ್ಪಟ್ಟರೆ ಪೂರಾಕಾಲದ ಗುತ್ತಿಗೇಹಣವು ಕೂಡ್ಲೆ ಪಾವತಿ ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು. ಮತ್ತು ಅಂಥಾ ದಂಡದ ವ ನಷ್ಟದ ಮೊಬಲಗುಗಳು ಜಮೀನ್ ಕಂದಾಯದ ಬಾಕಿಯಂತ ವಸೂಲ್ಮಾಡಲ್ಪಡತಕ್ಕದ್ದು.

12. ಮೇಲಿನ ಹಿಂದಿನ ಕಲಂನಲ್ಲಿ ಕಂಡ ಪ್ರಕಾರ ಜರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ್ ಯಾ ಇತರ ಕಾನೂನುಗಳಿಗೆ ವಿರೋಧವಾಗಿ ನಡಿಸಿದ ತಕ್ಸೀರಿಗೆ ಲೈಸೆನ್ಸ್ದಾರನನ್ನಾಗಲಿ ಯಾ ಆತನ ಮುತಾಲೀಕನನ್ನಾಗಲಿ ಯಾ ಆತನ ನೌಕರರನ್ನಾಗಲಿ ಆಪಾದಿಸಿ ದರ್ಯಾಫ್ತು ಕ್ರಮನಡಿಸಲು ಆತಂಕ ಪಡಿಸುವದಿಲ್ಲ.

ಟಿಪ್ಪಣಿ.—ಬಾರಿಬಾರಿಗು ಲೈಸೆನ್ಸಿನ ಷರತ್ತುಗಳಿಗೆ ವಿರೋಧವಾಗಿ ನಡೆಸುವ ತಪ್ಪಿತಗಳಿಗೂ ಬಾರಿಬಾರಿಗೂ ಜರ್ಮಾನೆ ಹಾಕಲ್ಪಡತಕ್ಕದ್ದು.

ಸನ್ 1904—1905 ನೇ ಸಾಲಿಗೆ ಶೇಂದಿ ಅಂಗಡಿಗಳ ಹರಾಜು.

ನಂಬರ್ 641—Ex. F. 6–1902, ಬೆಂಗಳೂರು, 29ನೇ ಮಾರ್ಚಿ 1904.

1. ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಪ್ರತಿ ಅಂಗಡಿಯಲ್ಲಿ ಯಾ ಅಂಗಡಿಗಳ ಸಮುದಾಯದಲ್ಲಿ 1904ನೇ ಇಸವಿ ಜುಲೈ ಗುರ್ರೆಲಾಗಾಯಿತು 1905ನೇ ಇಸವಿ ಜೂನ್ 30ನೇ ತಾರೀಖಿಗೆ ಪೂರೈಸುವ ಸರ್ಕಾರಿ ಸಾಲಿಗೆ ಶೇಂದಿಯನ್ನು ಬಿಕರಿ ಮಾಡುವ ಬಟ್ಟು ಸ್ವಾತಂತ್ರ್ಯದ ಹಕ್ಕು ಆಯಾ ಡೆಪ್ಯುಟಿ ಕಮ್ಮಿಷನರುಗಳಿಂದ ಯಾ ರೆವಿನ್ಯೂ ಅಸಿಸ್ಟೆಂಟ್ ಕಮ್ಮಿಷನರುಗಳಿಂದ ಯಾ ಎಕ್ಸೈಜ್ ಇಲಾಖೆಯ ಡಿವಿಜನ್ ಆಫೀಸರರುಗಳಿಂದ ಯಾ ಇದಕ್ಕಾಗಿ ಡೆಪ್ಯುಟಿ ಕಮ್ಮಿಷನರುಗಳಿಂದ ವಿಶೇಷವಾಗಿ ಅಧಿಕಾರಕೊಂದಿದ ಇತರ ಆಫೀಸರರುಗಳಿಂದ, ಆಯಾಯ ತಾಲ್ಲೂಕು ಯಾ ಸಬ್ ತಾಲ್ಲೂಕು ಕಸಬಾಗಳಲ್ಲಿ ಇತಃಪರ ಹೇಳಿದಪ್ರಕಾರ ಹೊರತಾಗಿ ಮೇಲ್ಕಂಡ ಪಟ್ಟಿಯಲ್ಲಿ ನಮೂದಾಗಿರುವ ತಾರೀಖುಗಳಲ್ಲಿ, ಸರ್ಕಾರದ ಸವಾಲನ್ನು ಗೊತ್ತು ಮಾಡಿಕೊಂಡು ಹರಾಜ್ ಹಾಕಲ್ಪಡುತ್ತದೆಂದುನ್ನು, ಮತ್ತು ಸದರೀ ಸವಾಲಿನಮೇಲೆ ಅತ್ಯಂತ ಜಾಸ್ತಿ ಗುತ್ತಿಗೆ ಮೊಬಲಗನ್ನು ದರಖಾಸ್ತು ಮಾಡುವ ಸವಾಲದಾರನಿಗೆ ಅದು ಕೊಡಲ್ಪಡುವದೆಂದುನ್ನೂ, ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದಿಂದ ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ. ಹರಾಜುಗಳು ಸದರೀ ತಾರೀಖುಗಳಲ್ಲಿ ಪೂರೈಸದೆ ಹೋದಲ್ಲಿ ಮಾರನೇದಿನಗಳಲ್ಲಿಯೂ ಹಾಕಲ್ಪಡುವವು (ರಜಾದಿನಗಳು ಹೊರತಾಗಿ). ಒಂದೊಂದು ಅಂಗಡಿಗೆ ಪ್ರತ್ಯೇಕವಾಗಿ ಸವಾಲು ಬಾರದೇ ಹೋದಲ್ಲಿ ಹರಾಜು ಹಾಕುವ ಆಫೀಸರರು ಎಕ್ಸೈಜ್ ಡಿವಿಜನ್ ಆಫೀಸರ್ರವರು ಹಾಜರು ಇದ್ದಲ್ಲಿ ಅವರ ಅಭಿಪ್ರಾಯವನ್ನು ತಿಳಿದು ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ನಮೂದಿಸಿರುವ ಅಂಗಡಿಗಳ ಸಮುದಾಯದ ಕ್ರಮವನ್ನು ಅವಶ್ಯಕವಿದ್ದಾಗ ಬದಲಾಯಿಸಲಿಕ್ಕೂ ಅಥವಾ ಸವಾಲಿಲ್ಲದೇ ಇರುವ ಅಂಗಡಿಗಳನ್ನು ಇತಃಪರ ವಿಲೇವಾರಿ ಮಾಡಲು ಅಮಾನತ್ತು ಇಡುವದಕ್ಕೂ ಅಥವಾ ದರಖಾಸ್ತು ಮೂಲಕ ಯಾ ಖಾಸಗಿ ಏರ್ಪಾಟು ಮೂಲಕ ಯಾವದಾದರೂ ವಿಶೇಷ ಸಂದರ್ಭದಲ್ಲಿ ಸದರೀ ಹಕ್ಕನ್ನು ಮಾರುವುದಕ್ಕೂ ಸ್ವತಂತ್ರವುಳ್ಳವರಾಗಿರುತ್ತಾರೆ. ಯಾವದಾದರು ಕಾಫಿ ಎಸ್ಟೇಟಿನಲ್ಲಿ ಸದರೀ ಹಕ್ಕು ಒಂದೊಂದು ಅಂಗಡಿಗೆ ವರ್ಷಕ್ಕೆ 12 ರೂಪಾಯಿಗೆ ಕಮ್ಮಿಯಿಲ್ಲದಂತೆ ಗೊತ್ತಾದ ಮೊಬಲಗಿಗೆ ಕಾಫಿಪ್ಲಾಂಟರ್ರಿಗೆ ಮಾರಲ್ಪಡಬಹುದು. ಇನಾಂ ಗ್ರಾಮಗಳಲ್ಲಿರತಕ್ಕ ಅಂಗಡಿಗಳು ಪ್ರತ್ಯೇಕವಾಗಿ ಹರಾಜು ಹಾಕಲ್ಪಡತಕ್ಕವಲ್ಲದೆ ಅವುಗಳ ಬಾಬತು ಹುಟ್ಟುವಳಿ ಮೊಬಲಗು ಲೆಖ್ಖಗಳಲ್ಲಿ ಪ್ರತ್ಯೇಕವಾಗಿ ತೋರಿಸಲ್ಪಡತಕ್ಕದ್ದು. ಹರಾಜು ಪ್ರತಿ ಒಂದು ವಿಷಯದಲ್ಲಿಯೂ ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದಲ್ಲದೆ ಗಾರ್ನ್ಮೆಂಟಿನವರಿಂದ ಬದಲಾಯಿಸಲ್ಪಟ್ಟಹೊರತು ಡೆಪ್ಯುಟಿ ಕಮ್ಮಿಷನರವರು ಕ್ರಮವಾಗಿ ಮಂಜೂರ್ಮಾಡಿದ ಕೂಡ್ಲೆ ಜಾರಿಗೆ ಬರತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು ತಮಗೆ ಯುಕ್ತತೋರಿದಹಾಗೆ ಯಾವ ಕಾರಣವನ್ನೂ ತಿಳಿಸದೆ ಯಾವ ಸವಾಲನ್ನಾದರೂ ಅಂಗೀಕರಿಸುವದಕ್ಕೂ ಯಾ ನಿರಾಕರಿಸುವದಕ್ಕೂ ಸ್ವಾತಂತ್ರ್ಯವುಳ್ಳವರಾಗಿರುತ್ತಾರೆ. ಅಂಥಾ ಕ್ರಮವಾಗಿ ಮಂಜೂರ್ಮಾಡೋಣವು ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಖುದ್ದೇ ಆಗಲಿ ಅಥವಾ ಅವರಿಂದ ನೇಮಿಸಲ್ಪಟ್ಟ ಇನ್ಯಾವ ಇತರ ಆಫೀಸರರಿಂದಲೇ ಆಗಲಿ ನಡಿಸಲ್ಪಟ್ಟಿದ್ದಾಗ್ಯೂ ಅವಶ್ಯಕವಾಗಿರುತ್ತದೆ. ಸರ್ಕಾರೀ ಸವಾಲಿಗಿಂತ ಹೆಚ್ಚಾದ ಸವಾಲ್ ಬಾರದೆಹೋದಲ್ಲಿ ಹರಾಜು ನಡಿಸತಕ್ಕ ಆಫೀಸರರು ತಮಗೆ ಯುಕ್ತತೋರಿದ್ದಲ್ಲಿ ಸದರೀ ಸರ್ಕಾರಿ ಸವಾಲನ್ನು ತಗ್ಗಿಸಬಹುದು. ಲೈಸೆನ್ಸ್‌ದಾರನು ಯಾವದಾದರೂ ತಕ್ಸೀರಿಗಾಗಿ ಕ್ರಿಮಿನಲ್ ಕೋರ್ಟಿನಲ್ಲಿ ದಯಾಫ್ತಿಯಾಗಿ ತಪ್ಪು ಸಾಬೀತಾಗಿರುವದರಿಂದಲೂ ಅಥವಾ ಲೈಸೆನ್ಸಿನ ಯಾ ಎಕ್ಸೈಜ್ ರೆಗ್ಯುಲೇಷನ್ ಯಾ ಒಪಿಯಂ ಆಕ್ಟಿನ ಗುತ್ತಿಗೆಯ ಷರತ್ತುಗಳಿಗನುಸಾರವಾಗಿ ನಡೆಯದೇಯಿದ್ದ ತಪ್ಪಿತಸ್ಥನಾಗಿರುವ ಕಾರಣದಿಂದ ಲೈಸೆನ್ಸ್ ಹಿಡುವಳಿದಾರನಾಗಿರಲು ಯೋಗ್ಯನಲ್ಲವೆಂಬದರಮೇಲೂ ಯಾ ನಾಲಾಯಖು ಮನುಷ್ಯನೆಂಬದರಮೇಲೂ ಅಥವಾ ಸರ್ಕಾರದ ಪ್ರಯೋಜನಕ್ಕೆ ಕುಂದಕವಾಗತಕ್ಕ ಏರ್ಪಾಟುಗಳನ್ನು ಅಡ್ಡಿಪಡಿಸತಕ್ಕ ಕಾರಣದಿಂದಲೂ, ಅಥವಾ ಮತ್ಯಾವ ನ್ಯಾಯವಾದ ಕಾರಣಕ್ಕಾಗಿಯೂ ಆತನ ಸವಾಲನ್ನು ಹರಾಜು ನಡಿಸತಕ್ಕ ಆಫೀಸರರು ತಮಗೆ ಯುಕ್ತ ತೋರಿದಂತೆ ಯಾವ ಕಾರಣವನ್ನು ತಿಳಿಸದೇನೆ ತಿರಸ್ಕರಿಸಬಹುದು.

2. (a) ಸವಾಲ್ಮಾಡಲು ಇಷ್ಟವುಳ್ಳವರು ಖುದ್ದಾಗಿ ಆಗಲೀ ಯಾ ಅಪ್ಪಣೆ ಹೊಂದಲ್ಪಟ್ಟಿರುವ ಮುಖ್ತಾರ್ನಾಮೆ ಮೂಲಕವಾಗಿ ಆಗಲೀ ಹರಾಜಾಗಬೇಕು; ಮತ್ತು ಕೋಲಾರದ ಚಿನ್ನದಗಣಿಗಳು, ವ ಬೆಂಗಳೂರು, ಮೈಸೂರು ಷಹರುಗಳಲ್ಲಿನ ಅಂಗಡಿಗಳಿಗೆ 25 ರೂಪಾಯಿನಂತೆಯೂ ಇತರ ಸ್ಥಳಗಳಲ್ಲಿನ ಅಂಗಡಿಗಳಿಗೆ 10 ರೂಪಾಯಿನಂತೆಯೂ ಅಥವಾ ಹರಾಜು ನಡೆಸತಕ್ಕ ಆಫೀಸರರು ಗೊತ್ತು ಮಾಡಬಹುದಾದ ಬೇರೆ ನ್ಯಾಯವಾದ ಮೊಬಲಗಿನ ಮೊತ್ತದಷ್ಟು ಠೇವಣಿ ಇಟ್ಟಹೊರತು ಯಾರೊಬ್ಬನು ತನಗಾಗಿ ಯಾಗಲೀ ಯಾ ಇತರರಿಗೋಸ್ಕರವಾಗಲೀ ಸವಾಲ್ಮಾಡಕೂಡದು. ಹಾಗೆ ಪ್ರಾರಂಭದಲ್ಲಿ ಠೇವಣಿ ಮೊಬಲಗು ಅವಶ್ಯಕವಿಲ್ಲವೆಂದು ಸರ್ಕಾರದವರು ಯಾವಾಗಬೇಕಾದರೂ ಬಿಟ್ಟುಬಿಡಬಹುದು. ಅಂಥಾ ಠೇವಣಿಗಳು ಹರಾಜು ತಾರೀಖು ಮುಂಚೆ 3 ದಿವಸಗಳೊಳಗಾಗಿ ಕೊಟ್ಟರು ತೆಗೆದುಕೊಳ್ಳಲ್ಪಡುವದು. ನಾ ಮಂಜೂರಾದ ಸವಾಲ್ದಾರರ ಠೇವಣಿ ಮೊಬಲಗುಗಳು, ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡದೇ ಇರುವಪಕ್ಷಕ್ಕೆ ಹರಾಜ್ ಪೂರೈಸಿದ ಕೂಡ್ಲೆ ವಾಪಸ್ ಮಾಡಲ್ಪಡುತ್ತವೆ.

(b) ಯಾವ ಅಂಗಡಿ ಯಾ ಅಂಗಡಿಗಳ ಸಮುದಾಯವೂ ಒಬ್ಬ ಆಸಾಮಿಗಿಂತ ಯಾ ಕ್ರಮವಾಗಿ ಏರ್ಪಟ್ಟಿರುವ ಒಂದು ಕಂಪನಿಯು ಫರಮ್ಮಿಗಿಂತ ಹೆಚ್ಚಾದ ಸಂಖ್ಯೆಯುಳ್ಳವರ ಹೆಸರಿಗೆ ಜಂಟಿಸವಾಲಿನಲ್ಲಿ ನಿಲ್ಲಿಸಲ್ಪಡಕೂಡದು. ಹರಾಜುಮಾಡುವ ಅಧಿಕಾರಿಯು ಯಾರ ಹೆಸರಿನಿಂದ ಸವಾಲ್ ಬಂದಿರುವದಿಲ್ಲವೋ ಆತನ ಹೆಸರನ್ನು ಸೇರಿಸಿಕೊಂಡವನೆಂದು ದಾಖಲ್ಮಾಡಲು ತಿರಸ್ಕರಿಸತಕ್ಕದ್ದು.

3. (a) ಬಿಟ್ಟಿ ಸ್ವಾತಂತ್ರ್ಯದ ಹಕ್ಕನ್ನು ಹರಾಜಿನಲ್ಲಿ ಪಡೆದ ಸವಾಲ್ದಾರನು ಸದರೀ ಸ್ವಾತಂತ್ರ್ಯದ ಹಕ್ಕು ತನ್ನ ಹೆಸರಿಗೆ ನಿಂತ ನಂತರ ಹರಾಜು ನಡಿಸತಕ್ಕ ಆಫೀಸರರು ಕೇಳಿದ್ದಲ್ಲಿ ತಕ್ಷಣವೇ ಇಲ್ಲದಿದ್ದರೆ ಆ ದಿವಸದ ಹರಾಜು ಖೈದಾದ ನಂತರ ಸಂವತ್ಸರಕ್ಕೆ ತನ್ನ ಸವಾಲಿನ ಮೊಬಲಗಿನಲ್ಲಿ 24ರಲ್ಲಿ 1 ಭಾಗಕ್ಕೆ ಸರಿಯಾದ ಮೊಬಲಗನ್ನು ಅಂದರೆ ಒಂದು ತಿಂಗಳ ಗುತ್ತಿಗೇ ಹಣದಲ್ಲಿ ಅರ್ಧವನ್ನು, ಮೊದಲು ಠೇವಣಿ ಇಟ್ಟಿರುವ ಮೊಬಲಗು ತಿಂಗಳ ಗುತ್ತಿಗೆ ಹಣಕ್ಕೆ ಸಮಹೆಚ್ಚು ಇದ್ದಾಗ ಶಿವಾಯಿ, ಠೇವಣಿ ಯಿಡಬೇಕು. ಇದಕ್ಕೆ ತಪ್ಪಿದಲ್ಲಿ 2ನೇ (a) ಕಲಂ ಮೇರೆ ಆತನು ಇಟ್ಟಿರತಕ್ಕ ಠೇವಣಿ ಮೊಬಲಗು ಏನಾದರು ಯಿದ್ದಲ್ಲಿ ಅದು ದಂಡವಾಗಿ ಸೇರಿಸಿಕೊಳ್ಳಲ್ಪಡುವದು ಮತ್ತು ಡೆಪ್ಯುಟಿ ಕಮಿಷನರವರು ಯಾ ಹರಾಜು ಮಾಡುವ ಆಫೀಸರರು ಗೊತ್ತು ಮಾಡುವ ರೀತ್ಯಾ ಸದರೀ ಹಕ್ಕು ಮೇಲೆ ನಮೂದಿಸಿರುವ ಷರತ್ತುಗಳ ಪ್ರಕಾರ ಅವನನ್ನು ನಷ್ಟಕ್ಕೆ ಗುರಿಮಾಡಿ ಪುನಹಾ ಹರಾಜು ಮಾಡಲ್ಪಡುವದು ಅನ್ಯಥಾ ವಿಲೇವಾರಿ ಮಾಡಲ್ಪಡುವದು.

(b) ಹರಾಜಿನಲ್ಲಿ ಅಂಗಡಿ ಯಾ ಅಂಗಡಿಗಳ ಸಮುದಾಯಕ್ಕಾಗಿ ಯಾರ ಸವಾಲ್ ಅಂಗೀಕರಿಸಲ್ಪಟ್ಟಿದೆಯೋ ಮತ್ತು ಯಾರು ಮೇಲೆ ಹೇಳಿರುವಂತೆ ಠೇವಣಿಗಳನ್ನು ಕೊಟ್ಟಿದ್ದಾನೆಯೋ ಆತನು ಹರಾಜು ಮಂಜೂರಾದ ವಿಷಯವನ್ನು ನೋಟೀಸ್ ಮೂಲಕ ತಿಳಿಸಲು ಸಾಧ್ಯವಾಗುವಹಾಗೆ ತನ್ನ ವಿಳಾಸವನ್ನು ಹರಾಜು ನಡಿಸತಕ್ಕ ಆಫೀಸರವರಲ್ಲಿ ಕೊಟ್ಟುಹೋಗತಕ್ಕದ್ದು. ಸದರೀ ನೋಟೀಸು ಆತನಿಗೆ ಆಗಲಿ ಅಥವಾ ಸದರೀ ವಿಳಾಸದ ಸ್ಥಳದಲ್ಲಿ ಆತನ ಮನೆಯಲ್ಲಿರುವ ಇತರ ವಯಸ್ಸಾದ ಗಂಡಸಿಗಾಗಲೀ ರೂಬರೂಬ್ ಜಾವತಿಯಾಗೇ ಆಗಲಿ ಅಥವ ವಾಸಸ್ಥಾನಕ್ಕೆ ಅಂಟಿಸಲ್ಪಡುವದರಿಂದಲೂ ಯಾ ಕ್ರಮವಾಗಿ ರಿಜಿಸ್ಟರ್ಡ್ ಪೋಸ್ಟು ಮೂಲಕ ಕಳುಹಿಸಿದ್ದರಿಂದಲೇ ಆಗಲಿ ಜಾರಿಯಾದ 7 ದಿವಸಗಳೊಳಗಾಗಿ ಸಂಬಂಧಪಟ್ಟ ತಾಲ್ಲೂಕು ಖಜಾನೆಯಲ್ಲಿ ಮೊದಲು ಕೊಟ್ಟ ಠೇವಣಿ ಮೊಬಲಗು ಸೇರಿಸಿಕೊಂಡು 2 ತಿಂಗಳ ಖಿಸ್ತು ಮೊಬಲಗಿಗೆ ಸರಿಯಾದಷ್ಟು ಹಣವನ್ನು ಠೇವಣಿ ಇಡಬೇಕು. ಮತ್ತು ಅಮಲ್ದಾರ್ರವರಲ್ಲಿ ಅವಶ್ಯಕವಾಗಿರುವ ಒಡಂಬಡಿಕೆಗಳನ್ನು ಬರೆದುಕೊಟ್ಟು ಮುಂದೆ ಹೇಳಿರುವ ಪ್ರಕಾರ ಅವಶ್ಯಕವಾಗಿರುವ ಲೈಸೆನ್ಸುಗಳನ್ನು ತೆಗೆದುಕೊಳ್ಳತಕ್ಕದ್ದು.

4. (a) ಹಿಂದಿನ ಕಲಮ್ಮಿನ್ನನುಸರಿಸಿ ಇಡತಕ್ಕ ಠೇವಣಿಯು ನಗದಾಗಿಯಾಗಲೀ ಯಾ ಡೆಪ್ಯುಟಿ ಕಮಿಷನರವರ ಹೆಸರಿಗೆ ಕ್ರಮವಾಗಿ ಇಂಡಾರ್ಸು ಮಾಡಲ್ಪಟ್ಟ ಇಂಡಿಯಾ ಗೌರ್ನಮೆಂಟ್ ಸೆಕ್ಯೂರಿಟಿ ಮೂಲಕವಾಗಿಯಾಗಲೀ ಇರತಕ್ಕದ್ದು. ಪರಂತು ಮಾಹೆಯಾನಾ ಗುತ್ತಿಗೆ ಮೊಬಲಗು 10 ರೂಪಾಯಿಗಿಂತಲೂ ಹೆಚ್ಚಾಗಿರುವ ಸಂದರ್ಭಗಳಲ್ಲಿ (ಮೇಲ್ಕಂಡ 2 ತಿಂಗಳ ಗುತ್ತಿಗೇ ಹಣದ ಬದಲಾಗಿ) ಡೆಪ್ಯುಟಿ ಕಮಿಷನರವರು ತಮಗೆ ಯುಕ್ತ ತೋರಿದಂತೆ ಮೇಲ್ಕಂಡ ಮೇರಿಗೆ 1 ತಿಂಗಳ ಗುತ್ತಿಗೆ ಹಣಕ್ಕೆ ಸಮನಾದ ಠೇವಣಿ ಇಡಿ 4 ತಿಂಗಳ ಗುತ್ತಿಗೆ ಹಣಕ್ಕೆ ಸಮವಾದ ಮೊಬಲಗಿಗೆ ಖಾತರಿ ಜಾಮೀನನ್ನು ಕೊಡುವಂತೆ ಬಿಕರೀದಾರನಿಗೆ ಅಪ್ಪಣೆ ಕೊಡಬಹುದು. ಒಂದು ತಿಂಗಳ ಗುತ್ತಿಗೆ ಮೊಬಲಗು 10 ರೂಪಾಯಿಗಳಿಗೆ ಮೀರದಿರುವ ಎಲ್ಲಾ ಸಂದರ್ಭಗಳಲ್ಲಿಯೂ 2 ತಿಂಗಳ ಖಿಸ್ತಿನ ಹಣದಷ್ಟು ನಗದು ಠೇವಣಿಯನ್ನು ತೆಗೆದುಕೊಳ್ಳಬೇಕೇ ಹೊರತು ನಫರ್ ಜಾಮೀನನ್ನು ಅಂಗೀಕರಿಸಕೂಡದು. ಹರಾಜು ನಂತರ ವಿಚಾರಿಸಿದ್ದರಲ್ಲಿ ಆತನು ಮೈಸೂರು ಸೀಮೆಯಲ್ಲಿ ಜಿಂದಿಗಿಯನ್ನಿಟ್ಟುಕೊಳ್ಳದೆ ಇರುವ ಅನ್ಯದೇಶದವನಾಗಿಯೂ ಜವಾಬ್ದಾರಸ್ಥನೆಂಬುವದಕ್ಕೆ ಅನುಮಾನಕ್ಕೆ ಗುರಿಯಾದವನಾಗಿ ಇರುವಂತೆ ಕಂಡುಬಂದಲ್ಲಿ ವಿಧಾಯಕವಾದ ಎರಡರಷ್ಟು ಠೇವಣಿಯನ್ನು ಇಡುವದಕ್ಕಾಗಲೀ ಯಾ ಆತನ ಗುತ್ತಿಗೆ ಷರತ್ತುಗಳಿಗನುಸರಿಸಿ ಆತನು ಕೊಡಬೇಕಾದ ಎಲ್ಲಾ ಹಣಗಳನ್ನು ಕ್ರಮವಾಗಿ ಪಾವತಿ ಮಾಡಲುಳ್ಳವರೆಂದು ಜಾಮೀನ್ ಪತ್ರವನ್ನು ಬರೆದುಕೊಡುವದಕ್ಕೆ ಮೈಸೂರು ಸಂಸ್ಥಾನದಲ್ಲಿ ವಾಸವಾಗಿದ್ದು ಸ್ವತ್ತುಳ್ಳವರಾಗಿರುವ ಒಬ್ಬ ಜಾಮೀನ್‌ದಾರನನ್ನು ಯಾ ಜಾಮೀನ್‌ದಾರರನ್ನು ಹಾಜರ್ಮಾಡುವದಕ್ಕಾಗಲೀ ಆತನಿಗೆ ಕೇಳಬಹುದು.

(b) ಪ್ರಾರಂಭದಲ್ಲಿ ಇಟ್ಟಿರತಕ್ಕ ಠೇವಣಿ ಮೊಬಲಗು 3 (b) ನೆ ಯಾ 4 (a) ನೇ ಕಲಂ ಮೇರೆಗೆ ಠೇವಣಿ ಇಡಬೇಕಾಗಿರುವ ಮೊಬಲಗಿಗಿಂತಲೂ ಹೆಚ್ಚಾಗಿದ್ದಲ್ಲಿ ಹೆಚ್ಚಾಗಿರತಕ್ಕ ಮೊಬಲಗು ಬಿಕರೀದಾರನಿಗೆ ವಾಪಸ್ ಕೊಡಲ್ಪಡುವದು.

5. ಸದರೀ ಸ್ವಾತಂತ್ರ್ಯದ ಹಕ್ಕನ್ನು ಕೊಂಡುಕೊಂಡವನು ಈ ಮುಂದೆ ನಮೂದಿಸಿರುವ ಮತ್ತು ತನಿಗೆ ಲೈಸೆನ್ಸಿನಲ್ಲಿ ಗೊತ್ತುಮಾಡಿರುವ ಷರತ್ತುಗಳಿಗನುಸಾರವಾಗಿ ನಡೆಯುವದಕ್ಕೆ ತನ್ನನ್ನು ಮತ್ತು ಕ್ರಮವಾಗಿ ರಿಕಾರ್ಡಾದ ಡೆಪ್ಯುಟಿ ಕಮಿಷನರವರ ಹುಕುಂನಿಂದ ವಿನಾಯಿಸಲ್ಪಟ್ಟ ಹೊರತು ಡೆಪ್ಯುಟಿ ಕಮಿಷನರವರಿಂದ ಸಾಕೆಂದು ಭಾವಿಸಲ್ಪಡುವಷ್ಟು ತನ್ನ ಚರ ಸ್ಥಿರ ಸ್ವತ್ತುಗಳನ್ನು ಬದ್ಧಿಸುವ ಒಂದು ಒಡಂಬಡಿಕೆಯನ್ನು ಬರೆದುಕೊಡತಕ್ಕದ್ದು ಮತ್ತು ಮೇಲ್ಕಂಡ ಕಲಂ ಅನುಸರಿಸಿ ಅಂಗೀಕರಿಸಲ್ಪಟ್ಟಿದ್ದ ಪಕ್ಷದಲ್ಲಿ ಆತನ ಜಾಮೀನ್‌ದಾರನು ಸದರೀ ಬಿಕರೀದಾರನು ಅವನ ಕರಾರಿನ ಷರತ್ತುಗಳನ್ನನುಸರಿಸಿ ಕ್ರಮವಾಗಿ ನಡೆಯುವದಕ್ಕೋಸ್ಕರ ತನ್ನನ್ನು ಮತ್ತು ಡೆಪ್ಯುಟಿ ಕಮಿಷನರವರು ಸಾಕೆಂದು ಅಪೇಕ್ಷಿಸಬಹುದಾದಷ್ಟು ತನ್ನ ಚರ ಸ್ಥಿರ ಸ್ವತ್ತುಗಳನ್ನೂ ಈಡುಮಾಡಿ ವಿಧಾಯಕವಾದ ನಮೂನೆಯಲ್ಲಿ ಜಾಮೀನ್ ತಮಸೂಕನ್ನು ಬರೆದುಕೊಡತಕ್ಕದ್ದು. ಹಾಗೆ ಬರೆದುಕೊಡಲ್ಪಟ್ಟ ಒಡಂಬಡಿಕೆ ವ ಜಾಮೀನ್ ತಮಸೂಕು ಬಿಕರೀದಾರನ ಖರ್ಚಿನಿಂದ ಸ್ಟಾಂಪು ಹಾಕಲ್ಪಡಬೇಕು. ಮತ್ತು ಪತ್ರದಲ್ಲಿ ಕಂಡ ಮೊಬಲಗು 100 ರೂಪಾಯಿ ಅಥವಾ 100 ರೂಪಾಯಿಗಿಂತಲೂ ಹೆಚ್ಚಾಗಿದ್ದಲ್ಲಿ ಆತನ ಖರ್ಚಿಂದಲೇನೇ ರಜಿಸ್ಟ್ರು ಮಾಡಿಸಲ್ಪಡಬೇಕು.

6. ಮೇಲೆ ಹೇಳಿರುವಂತೆ ಠೇವಣಿ ಯಾ ಠೇವಣಿಗಳನ್ನು ಹಾಜರು ಮಾಡಲಿಕ್ಕೆ ಯಾ ಕರಾರನ್ನು ಯಾ ಜಾಮೀನ್ ಇದ್ದಲ್ಲಿ ಜಾಮೀನ್ ತಮಸೂಕನ್ನು ಬರೆದುಕೊಡಲಿಕ್ಕೂ ಮತ್ತು ಲೈಸೆನ್ಸುಗಳನ್ನು ತೆಗೆದುಕೊಳ್ಳುವದಕ್ಕೂ ತಪ್ಪಿದರೆ ಡೆಪ್ಯುಟಿ ಕಮಿಷನರವರು ಕೂಡಲೆ ಸದರೀ ಸ್ವಾತಂತ್ರ್ಯದ ಹಕ್ಕನ್ನು ಮೊದಲು ಕೊಂಡುಕೊಂಡವನನ್ನು ನಷ್ಟಕ್ಕೆ ಗುರಿಮಾಡಿ ಮರಳಾ ಹರಾಜು ಯಾ ಅನ್ಯಥಾ ವಿಲೇವಾರಿ ಮಾಡತಕ್ಕದ್ದು. ಸದರೀ ಪ್ರಥಮ ಖರೀದಿದಾರನಿಂದ ಮೊದಲೇ ಹಾಜರ್ಮಾಡಲ್ಪಟ್ಟ ಠೇವಣಿ ಯಾ

ತೇವಣಿಗಳು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಆತನು ದುಸರಾ ಹರಾಜಿನಿಂದ ಯಾ ಅನ್ಯಥಾ ವಿಲೇವಾರಿಯಿಂದ ಉಂಟಾದ ನಷ್ಟಕ್ಕೂ ಗುರಿಯಾಗಿರತಕ್ಕದ್ದು. ಪರಂತು ದುಸರಾ ಹರಾಜಿನಲ್ಲಿ ಯಾ ಅನ್ಯಥಾ ವಿಲೇವಾರಿಯಲ್ಲಿ ಏನಾದರೂ ನಫೆ ಬಂದರೆ ಅದಕ್ಕೆ ಆತನಿಗೆ ಏನೂ ಹಕ್ಕಿರಲಾರದು. ಇದರಿಂದ ನಷ್ಟವಾದ ಸಂದರ್ಭದಲ್ಲಿ ದಂಡವಾಗಿ ತೆಗದುಕೊಂಡ ತೇವಣಿ ಮೊಬಲಗು ಅದರಿಂದ ಉತಾರು ಹಾಕಲ್ಪಡುವದು, ಮತ್ತು ಬಾಕಿ ಏನಾದರು ಯಿದ್ದಲ್ಲಿ ಜಮೀನ್ ಕಂದಾಯದ ಬಾಕಿಯಂತೆ ವಸೂಲಾಗತಕ್ಕದ್ದು. ಹರಾಜು ಮಂಜೂರಾದ ಮೇಲೆ ಸದರೀ ಖರೀದಿದಾರನು ಸತ್ತುಹೋದ ಪಕ್ಷದಲ್ಲಿ ಅವನ ವಾರಸ್‌ದಾರರು ಯಾ ಅವನಿಂದ ಹಕ್ಕನ್ನು ಪಡೆದವರು ಅದಕ್ಕೆ ಜವಾಬ್ದಾರರಾಗಿರತಕ್ಕದ್ದು.

7. ಕರಾರುಗಳನ್ನೂ ತಮಸೂಕುಗಳನ್ನೂ ಬರೆದುಕೊಟ್ಟಕೂಡಲೆ ಡೆಪ್ಯುಟಿ ಕಮಿಷನರವರು ಖರೀದಿದಾರನಿಗೆ ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ಬಳಪಟ್ಟು ವಿಧಾಯಕವಾಗಿರುವ ನಮೂನೆಯಲ್ಲಿ ಸದರೀ ಬಟ್ಟು ಸ್ವಾತಂತ್ರ್ಯದ ಹಕ್ಕನ್ನು ನಮೂದಿಸಿ ಬಂದು ಲೈಸೆನ್ಸನ್ನು ಕೊಡುವರು. ಕ್ರಮವಾದ ಲೈಸೆನ್ಸ್ ಕೊಡದಿದ್ದಾಗ್ಯೂ ಈ ಕೆಳಗೆ ನಮೂದಿಸಿರುವ ಷರತ್ತುಗಳಿಗೆ ವಿರೋಧವಾಗಿ ನಡೆದ್ದಕ್ಕೆ ವಿಧಿಸಿರುವ ಶಿಕ್ಷೆಗಳಿಗೆ ಸ್ವತಂತ್ರ ಹಕ್ಕನ್ನು ಪಡೆದುಕೊಂಡಿರುವವನು ಗುರಿಯಾಗುವದನ್ನು ಈ ಪ್ರಕರಣದಲ್ಲಿರುವ ಯಾವದು ತಪ್ಪಿಸಲಾರದು.

(1) ಲೈಸೆನ್ಸ್‌ದಾರನು ತನ್ನ ದುಕಾನ್‌ಗಳಿಗೆ ಶೇಂದಿ ಪದಗಿಸಿಕೊಳ್ಳುವದಕ್ಕೆ ತನ್ನ ಅಂಗಡಿಗೆ ಯಾ ಅಂಗಡಿಗಳ ಸಮುದಾಯಕ್ಕೆ ಸೇರಿದ ವನಗಳಲ್ಲಿರುವ ಶೇಂದಿ ಉತ್ಪತ್ತಿ ಆಗುವ ಗಿಡಗಳನ್ನು ಮರತೆರಿಗೆ ನಿಬಂಧನೆಗಳಿಗೆ ಬಳಪಟ್ಟು ಹೊಂದುವದಕ್ಕೆ ಸ್ವಾತಂತ್ರ್ಯವುಳ್ಳವನಾಗಿರುತ್ತಾನೆ. ಮತ್ತು ಆಪಸ್ನಲ್ಲಿ ಮಾಲೀಕರೊಡನೆ ಮಾಡಿಕೊಂಡ ಏರ್ಪಾಟುಗಳನ್ನನುಸರಿಸಿ ಹಿಡುವಳಿದಾರ್ರ ಜಮೀನುಗಳಲ್ಲಿರತಕ್ಕ ಮರಗಳಿಂದ ಶೇಂದಿಯನ್ನು ತಯಾರ್ಮಾಡಿಕೊಳ್ಳುವದಕ್ಕೆ ಸ್ವತಂತ್ರನಾಗಿರುತ್ತಾನೆ. ಲೈಸೆನ್ಸ್‌ದಾರನು ಇನ್ಸ್‌ಪೆಕ್ಟರವರಿಗೆ ದರಖಾಸ್ತುಕೊಟ್ಟು ಅವಶ್ಯಕವಾಗಿರುವ ಬಗ್ಗೆ ಅವರಿಂದ ಅಪ್ಪಣೇಚೀಟಿ ಪಡದು ಇತರ ಶೇಂದಿ ದುಕಾನ್‌ದಾರದಿಂದ ಶೇಂಡಿಯನ್ನು ಕೊಂಡುಕೊಳ್ಳಬಹುದು, ಇದರ ಅವಶ್ಯಕವನ್ನು ತೋರಿಸಿದ್ದಲ್ಲಿ ಇನ್ಸ್‌ಪೆಕ್ಟರವರು ಅಪ್ಪಣೇಚೀಟಿಯನ್ನು ಕೊಡುತ್ತಾರೆ. ಸರಿಯಾದ ಆಫೀಸರರಿಂದ ಸಂಖ್ಯೆ ಹಾಕಲ್ಪಟ್ಟ ಮತ್ತು ಲೈಸೆನ್ಸುಮೇರೆ ಉತಾರ್ಮಾಡಿರುವ ಮರಗಳ ಶೇಂದಿ ವಿನಹಾ ಮತ್ಯಾವವಿಧವಾದ ಶೇಂದಿಯನ್ನೂ ಅಂಗಡಿಯಲ್ಲಿ ಇಟ್ಟುಕೊಳ್ಳಕೂಡದು ಮಾರಲಿಕ್ಕೆ ಕೊಡುತ್ತೇನೆಂತ ಹೇಳಕೂಡದು ಅಥವಾ ಮಾರಕೂಡದು.

(2) ಸದರೀ ಬಟ್ಟು ಸ್ವಾತಂತ್ರ್ಯದ ಹಕ್ಕು ಈಚಲು, ತಾಳೆ, ತೆಂಗು ಮತ್ತು ಬಗನಿ ಈ ದಡಸಾಲ್ ಮರಗಳ ಶೇಂದಿಯನ್ನು ಮಾರುವುದಕ್ಕೆ ವ್ಯಾಪಿಸುತ್ತದೆ. ಆದರೆ ಈಚಲು ಮತ್ತು ಬಗನಿ ಶೇಂದಿ ಅಂಗಡಿಗಳಿರತಕ್ಕ ಪ್ರದೇಶಗಳಲ್ಲಿ ಈಚಲು ಶೇಂದಿ ಅಂಗಡಿ ಲೈಸೆನ್ಸ್‌ದಾರನು ಬಗನಿ ಮರಗಳನ್ನು ಬಗನಿ ಶೇಂದಿ ಅಂಗಡಿ ಲೈಸೆನ್ಸ್‌ದಾರನು ಈಚಲು ಮರಗಳನ್ನು ಕಟ್ಟಕೂಡದು. ಆದರೆ ಈ ಉಭಯ ಲೈಸೆನ್ಸ್‌ದಾರರು ಮೇಲೆ ನಮೂದಿಸಿರುವ ಎಲ್ಲಾ ಇತರ ಶೇಂದಿ ಮರಗಳನ್ನು ಕಟ್ಟಬಹುದು.

(3) ಗುತ್ತಿಗೆ ಮೊಬಲಗನ್ನು ಸರ್ಕಾರದಿಂದ ಆಬಗ್ಗೆ ವಿಧಾಯಕವಾಗಿ ಅಚ್ಚುಹಾಕಲ್ಪಟ್ಟಿರುವ ಚಲನ್‌ಗಳಮೂಲಕ ಸ್ಥಳೀಯವಾದ ಸರ್ಕಾರದ ಖಜಾನೆಗಳಿಗೆ 1904ನೇ ಇಸವಿ ಜುಲೈ ಲಾಗಾಯಿತು ಸರಿಯಾದ ತಿಂಗಳಗಟ್ಲೆ ಖಿಸ್ತುಪ್ರಕಾರ ಪಾವತಿ ಮಾಡುತ್ತಾ ಬರತಕ್ಕದ್ದು. ಮೊಬಲಗು ಎಕ್ಸೈಜ್ ಆಫೀಸರುಗಳಿಗೆ ಕೊಡಲ್ಪಡಕೂಡದು ಅಥವಾ ಸದರೀ ಎಕ್ಸೈಜ್ ಆಫೀಸರುಗಳು ಅದನ್ನು ತೆಗದುಕೊಳ್ಳಕೂಡದು. ಮಲ್ನಾಡು ಮತ್ತು ಅರ್ಧ ಮಲ್ನಾಡು ತಾಲ್ಲೂಕುಗಳಲ್ಲಿ ಡೆಪ್ಯುಟಿ ಕಮಿಷನರವರು ಲೈಸೆನ್ಸ್‌ದಾರರಲ್ಲದ ಗ್ರಾಮದ ಪಟ್ಟೇಲರಿಗೆ ಬಂದುಸಲಕ್ಕೆ 50 ರೂಪಾಯಿಗಳಿಗೆ ಮೀರದ ಮೊಬಲಗುಗಳನ್ನು ಯಾವವುನು ಷ್ಯನಿಂದಲಾದರೂ ತೆಗದುಕೊಳ್ಳಬಹುದೆಂದು ಅಪ್ಪಣೆ ಕೊಡಬಹುದು. ಯಾವ ಅಂಗಡಿಗಾದರೂ ಸಾಲಿಯಾನಾ ಕೊಡತಕ್ಕ ಗುತ್ತಿಗೆ ಮೊಬಲಗು 12 ರೂಪಾಯಿಗಳಿಗೆ ಮೀರದಿದ್ದಲ್ಲಿ ಪೂರಾ ಮೊಬಲಗು 3 ತ್ರೈಮಾಸಿಕದ ಖಿಸ್ತುಗಳಿಗೆ ಹೆಚ್ಚಾಗದಂತೆ ಪಾವತಿ ಮಾಡಲ್ಪಡತಕ್ಕದ್ದು. ಪ್ರತಿಯೊಂದು ಖಿಸ್ತು ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಲೈಸೆನ್ಸ್‌ದಾರನು ಲೋಕಲ್ ಸೆಸ್ಸಿಗಾಗಿ ಏನು ಜಾಸ್ತಿ ಮೊಬಲಗು ಕೊಡತಕ್ಕದ್ದಿಲ್ಲವು. ಪ್ರತಿ ತಿಂಗಳಿನ ಯಾ ತ್ರೈಮಾಸಿಕದ ಗುತ್ತಿಗೆ ಮೊಬಲಗು ಅದೇ ತಿಂಗಳ 20ನೇ ತಾರೀಖು ವ ಅದರ ಒಳಗೆ ಯಾ ತ್ರೈಮಾಸಿಕದ ಆಖೈರೊಳಗೆ ಪಾವತಿಯಾಗತಕ್ಕದ್ದು. ಹಾಗೆ ಪಾವತಿಯಾಗುವದಕ್ಕೆ ತಪ್ಪಿದರೆ ಅಮಲ್‌ದಾರರು ಡೆಪ್ಯುಟಿ ಕಮಿಷನರವರ ಮಂಜೂರಾತಿಯನ್ನು ಪಡೆದು ಬರಹಮೂಲಕ ರಿಕಾರ್ಡ್‌ಮಾಡಿ ಲೈಸೆನ್ಸನ್ನು ಮೋಖೂಫ್ ಯಾ ರದ್ದುಮಾಡಿ ತಪ್ಪಿತಸ್ಥನಿಂದ ಇಡಲ್ಪಟ್ಟಿರುವ ತೇವಣಿ ಮೊಬಲಗುಗಳನ್ನೆಲ್ಲಾ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಕ್ಕೆ ಹುಕುಂಮಾಡಿ (ಸಾಧ್ಯವಾದಮಟ್ಟಿಗೆ ಸದರೀ ತಿಂಗಳು ಯಾ ತ್ರೈಮಾಸಿಕ ಆಖೈರಾದ ಕೂಡ್ಲೆ) ಅಂಗಡಿಯನ್ನು ಯಾ ಅಂಗಡಿಗಳ ಸಮುದಾಯವನ್ನು ತಪ್ಪಿತಸ್ಥನನ್ನು ನಷ್ಟಕ್ಕೆ ಗುರಿಮಾಡಿ ದುಸರಾ ಹರಾಜು ಯಾ ಅನ್ಯಥಾ ವಿಲೇವಾರಿ ಮಾಡಬಹುದು. ಇದು ನೂತನ ಬಿಕರೀದಾರನಿಗೆ ಲೈಸೆನ್ಸುಕೊಟ್ಟ ಯಾ ಅನ್ಯಥಾ ವಿಲೇವಾರಿಯಾದ ತಾರೀಖಿನಿಂದ ಜಾರಿಗೆ ಬರತಕ್ಕದ್ದು. ಪರಂತು ಮೇಲ್ಕಂಡಂತೆ ದುಸರಾ ಹರಾಜ್ ಹಾಕುವುದಕ್ಕೆ ಬದಲಾಗಿ ಡೆಪ್ಯುಟಿ ಕಮಿಷನರವರು ತಮಗೆ ಯುಕ್ತ ತೋರುವಂತೆ ತಪ್ಪಿತಸ್ಥನು ಪಾವತಿ ಮಾಡಲು ಒಪ್ಪಿದ್ದ ಗುತ್ತಾ ಮೊಬಲಗಿಗಿಂತ ಕಡಿಮೆಯಿಲ್ಲದೆ ಇರುವ ಗುತ್ತಿಗೆಗೆ ಸಮನಾಗತಕ್ಕ ಮೊಬಲಗುಗಳಿಗೆ ತಪ್ಪಿದ ಲೈಸೆನ್ಸ್‌ದಾರನ ಕೈಕೆಳಗಿರುವ ವೆಂಡರ್ ಅಥವಾ ಸಬ್ ವೆಂಡರುಗಳಿಗೆ ಲೈಸೆನ್ಸನ್ನು ಕೊಡಲು ಅಮಲ್‌ದಾರ್ರಿಗೆ ಹುಕುಂ ಮಾಡಬಹುದು. ಲೈಸೆನ್ಸನ್ನು ಮೋಖೂಫ್ ಮಾಡಲು ಅಧಿಕಾರವುಳ್ಳ ಆಫೀಸರರು ತಮಗೆ ಯುಕ್ತ ತೋರಿದಲ್ಲಿ ಹಕ್ಕಿನ ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿ ಆಗುವದರೊಳಗೆ ಮಾರಾಟವನ್ನು ನಿಲ್ಲಿಸಬೇಕಾದ್ದಿಲ್ಲ.

ಟಿಪ್ಪಣಿ:—ಜಾತ್ರೇ ಅಂಗಡಿಯ ಲೈಸೆನ್ಸ್‌ದಾರನು ಜಾತ್ರೆ ಪ್ರಾರಂಭವಾಗುವದರೊಳಗೇನೆ ಸದರೀ ಅಂಗಡಿಯ ಗುತ್ತಿಗೆ ಮೊಬಲಗನ್ನೆಲ್ಲಾ ಪಾವತಿ ಮಾಡಬೇಕು.

(4) ಲೈಸೆನ್ಸ್‌ದಾರನಿಂದ ಇಡಲ್ಪಟ್ಟ ಠೇವಣೀ ಮೊಬಲಗು ಲೈಸೆನ್ಸಿನ ಷರತ್ತುಗಳಂತೆ ಕ್ರಮವಾಗಿ ನಡೆಯುವದಕ್ಕೆ ಇಟ್ಟಿರತಕ್ಕ ಜಾಮೀನಾಗಿ ಭಾವಿಸಲ್ಪಡುತ್ತದೆ. ಮತ್ತು ಅದು ದಂಡವಾಗಿ ತೆಗೆದುಕೊಳ್ಳಲ್ಪಡದೆ ಯಾ ಜಪ್ತುಮಾಡಲ್ಪಡದೆ ಯಾ ಅನ್ಯಥಾ ವಿಲೇವಾರಿ ಮಾಡಲ್ಪಡದೇ ಇದ್ದಲ್ಲಿ ಲೈಸೆನ್ಸಿನ ಮಿಯಾದೆಯು ಆಖೈರ್ ಮಾಡಿ ಯಾ ವರ್ಷಗಳ ಕಿಸ್ತುಗಳಿಗೋಸ್ಕರ ವಸೂಲ್ ಹಾಕಲ್ಪಡಬೇಕು. ಲೈಸೆನ್ಸ್‌ದಾರನಿಂದ ಬರಬೇಕಾದ ಬಾಕಿ ಹಣಗಳು ಮತ್ತು ನಷ್ಟದ ಮೊಬಲಗುಗಳು ಸಾಲು 1ಕ್ಕೆ ಶೇಕಡ 6 ರೂಪಾಯಿಸಂತೆ ಬಡ್ಡಿ ಸಹಿತವಾಗಿ ಅವನಿಂದ ಯಾ ಆತನ ಜಾಮೀನ್‌ದಾರನಿಂದ ಜಮೀನ್ ಕಂದಾಯವನ್ನು ವಸೂಲ್ಮಾಡುವದಕ್ಕೆ ಜಾರಿಯಲ್ಲಿರುವ ನಿಬಂಧನೆಗಳನ್ನನುಸರಿಸಿ ವಸೂಲ್ಮಾಡಲ್ಪಡತಕ್ಕದ್ದು. ಬಾಕಿ ಬರಬೇಕಾದ ದರೋಬಸ್ತು ಮೊಬಲಗಿಗೆ ಖಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ, ಮತ್ತು ನಷ್ಟದ ಮೊಬಲಗಿಗೆ ಪುನಃ ಹರಾಜಾದ ಯಾ ಅನ್ಯಥಾ ವಿಲೇವಾರಿಯಾದ ತಾರೀಖಿನಿಂದಲೂ ಬಡ್ಡಿಯು ಲೆಖ್ಖಾಚಾರ ಮಾಡಲ್ಪಡತಕ್ಕದ್ದು. ಯಾವ ರಿಮಿಷನ್ನೇ ಆಗಲಿ ಗುತ್ತಿಗೆ ಮೊಬಲಗನ್ನು ಕಡಿಮೆಮಾಡುವದೇ ಆಗಲಿ ಅಥವಾ ಯಾವ ಪ್ರತಿಫಲವೇ ಆಗಲಿ ಲೈಸೆನ್ಸ್‌ದಾರನಿಂದ ಯಾವವಿಧದಲ್ಲೂ ಬಯಸತಕ್ಕದ್ದಲ್ಲ, ಮತ್ತು ಪಟ್ಟಿಯಿಂದ ವಜಾಯಿಸಿದ ಯಾ ಸರ್ಕಾರದ ಉಪಯೋಗಕ್ಕಾಗಿ ತೆಗೆದುಕೊಂಡ ಯಾವ ಮರಗಳ ಪ್ರತಿಫಲಕ್ಕೂ ಆತನಿಗೆ ಹಕ್ಕು ಇರುವದಿಲ್ಲ.

(5) ಡೆಪ್ಯುಟಿ ಕಮಿಷನರವರು ದುಸರಾ ಹರಾಜನ್ನು ಮಂಜೂರ್ಮಾಡದ ಪಕ್ಷದಲ್ಲಿ ಸದರೀ ಗುತ್ತಿಗೆಯಲ್ಲಿ ಬಾಕೀ ಕಾಲಕ್ಕೆ ಯುಕ್ತ ತೋರುವ ಬೇರೆ ಏರ್ಪಾಡನ್ನಾದರು ಮಾಡಬಹುದು. ಹಾಗೆ ಮಾಡಿದ ಸಂದರ್ಭದಲ್ಲಿ ಅವರು ತಪ್ಪಿಹೋದ ಲೈಸೆನ್ಸ್‌ದಾರ್ರಿಗೆ ತಮ್ಮಿಂದ ಮಾಡಲ್ಪಟ್ಟಿರುವ ಏರ್ಪಾಟುಗಳ ವಿಧಾನಗಳನ್ನು ತಿಳಿಸಿ ಒಂದು ನೋಟೀಸನ್ನು ಕೊಡಬೇಕು.

(6) ಶೇಂದಿಯು ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ನಮೂದಿಸಿರುವ ಚಿಲ್ಲರೆ ದರಗಳಿಗಿಂತ ಕಮ್ಮಿಯಾಗಿ ಜನರಿಗೆ ಮಾರಲ್ಪಡಕೂಡದು.

(7) ಮರಗಳಿಂದ ತೆಗೆಯಲ್ಪಟ್ಟ ಸ್ಥಿತಿಯಲ್ಲಿ ಶೇಂದಿಯು ಬೆರಿಕೆಯಿಲ್ಲದೆ ಶುದ್ಧವಾಗಿ ಮಾರಲ್ಪಡತಕ್ಕದ್ದು. ಮತ್ತು ಅಂಗಡಿಗಳಲ್ಲಿ ಅಥವಾ ಡಿಪೋಗಳಿದ್ದರೆ ಅವುಗಳಲ್ಲಿ ಯಾವ ರೀತಿಯಿಂದಲೂ ಇತರ ಪದಾರ್ಥಗಳಿಂದ ಬೆರಿಸಲ್ಪಡಲಾಗದು. ಯಾ ನೀರಿನಿಂದ ಮಿಶ್ರ ಮಾಡಲಾಗದು. ಅದರ ಮತ್ತನ್ನುಂಟುಮಾಡುವ ಶಕ್ತಿಯನ್ನು ವೃದ್ಧಿಪಡಿಸುವದಕ್ಕೆ ಆಗಲಿ ಇನ್ಯಾವ ಕಾರಣಕ್ಕಾಗಲಿ ದೇಹಕ್ಕೆ ವಿರುದ್ಧವಾದ ಯಾವ ವಸ್ತುಗಳನ್ನು ಅದರಲ್ಲಿ ಬೆರಸಕೂಡದು. ಅಂಗಡಿಗಳನ್ನೂ ಕೋಠಿಗಳನ್ನೂ ತನಿಖೆ ಮಾಡುವುದಕ್ಕೆ ಅಧಿಕಾರವುಳ್ಳ ಆಫೀಸರುಗಳು ಕುಡಿಯುವದಕ್ಕೂ ಉಪಯೋಗಿಸುವದಕ್ಕೂ ನಾಲಾಯಖಾಗಿರುವ ಶೇಂದಿಯನ್ನು ಖರ್ಚು ಮಾಡದೇ ಇಡುವದಕ್ಕೆ ಅಪ್ಪಣೇ ಮಾಡಲು ಅಧಿಕಾರವುಳ್ಳವರಾಗಿರುತ್ತಾರೆ. ಮತ್ತು ಎಲ್ಲಾ ಡೆಪ್ಯುಟಿ ಕಮಿಷನರುಗಳು ಮತ್ತು ಎಕ್ಸೈಜ್ ಕಮಿಷನರವರು, ಡೆಪ್ಯುಟಿ ಎಕ್ಸೈಜ್ ಕಮಿಷನರವರು ಮತ್ತು ಎಕ್ಸೈಜ್ ಅಸಿಸ್ಟೆಂಟ್ ಕಮಿಷನರುಗಳು ಅಂಥಾ ಶೇಂದಿಯನ್ನು ನಾಶಪಡಿಸಲು ಅಧಿಕಾರವುಳ್ಳವರಾಗಿರುತ್ತಾರೆ.

(8) ಅಂಗಡಿಗಳ ಸಮುದಾಯದ ಲೈಸೆನ್ಸ್‌ದಾರನು ತನ್ನ ಅಂಗಡಿಗಳಿಗೆ ಸರಬರಾಯಿ ಮಾಡಲು ಶೇಂದಿ ಸರಕನ್ನು ಇಡುವದಕ್ಕಾಗಿ ಒಂದು ಕೋಠಿಯನ್ನು ಇಟ್ಟುಕೊಳ್ಳಬೇಕೆಂದು ಅಪೇಕ್ಷಿಸಿದರೆ ವಿಧಿಸಲ್ಪಟ್ಟಿರುವ ನಮೂನೆಯಲ್ಲಿ ಲೈಸೆನ್ಸನ್ನು ಪಡೆಯಬೇಕು. ಶೇಂದಿಯೊಡನೆ ಕೊಡಲ್ಪಟ್ಟ ಪಾಸುಗಳು ಅದಕ್ಕಾಗಿ ಅಧಿಕಾರ ಹೊಂದಿದ ಆಫೀಸರುಗಳ ಪರೀಕ್ಷೆಗೆ ವ ತನಿಖೆ ಬಗ್ಗೆ ಗುರಿಯಾಗಿರತಕ್ಕದ್ದು.

(9) ವಿಧಾಯಕವಾದ ನಮೂನೆಯಲ್ಲಿ ಡೆಪ್ಯುಟಿ ಕಮಿಷನರವರಿಂದ ಕ್ರಮವಾಗಿ ಲೈಸೆನ್ಸ್ ಪಡದ ದುಕಾನಗಳಲ್ಲಿ ವಿನಹಾ ಮತ್ತೆಲ್ಲಿಯೂ ಶೇಂದಿಯನ್ನು ಬಿಕರೀ ಮಾಡಲಾಗದು. ಮತ್ತು ಎಕ್ಸೈಜ್ ಕಮಿಷನರವರ ಮುಂಚಿತವಾದ ಮಂಜೂರಾತಿಯಿಲ್ಲದೆ ಹೊಸದಾಗಿ ಅಂಗಡಿಗಳನ್ನಿಡಕೂಡದು. ಶೇಂದಿಯನ್ನು ಗಿಡದಕೆಳಗೆ ಮಾರೋಣವೂ ಅಥವಾ ಬೈಲಿನಲ್ಲಿ ಮಾರೋಣವೂ ಅಥವಾ ಕಾನೂನ್ ಯಾ ನಿಬಂಧನೆಗಳ ಪ್ರಕಾರ ಅಪ್ಪಣೆ ಕೊಡಲ್ಪಡದೇ ಯಿರುವ ಮತ್ಯಾವ ಇತರ ರೀತಿಯಲ್ಲಾಗಲಿ ವಿನಿಯೋಗಪಡಿಸೋಣವೂ ಖಂಡಿತವಾಗಿ ಅಡ್ಡೀ ಮಾಡಲ್ಪಟ್ಟಿರುತ್ತದೆ. ಪರಂತು ಬಗನೀಮರಗಳಿರತಕ್ಕ ಪ್ರದೇಶಗಳಲ್ಲಿ ಬಗನೀ ಶೇಂದಿಯು ಮಾರುವ ಹಕ್ಕನ್ನು ಪಡೆದಿರುವ ಲೈಸೆನ್ಸ್‌ದಾರನು ಗೃಹಕೃತ್ಯದ ಉಪಯೋಗಕ್ಕೋಸ್ಕರವೂ, ಬಿಕರೀಬಗ್ಗೆ ಸಹ ತಾನು ಹರಾಜಿನಲ್ಲಿ ಪಡೆದಿರುವ ಗ್ರಾಮದ ಸರಹದ್ದಿನೊಳಗೆ ಬಗನಿ ಮರಗಳನ್ನು ಊರ್ಜಿತಮಾಡಲು ಅಪ್ಪಣೆ ಕೊಡಬಹುದು. ಕೋಠಿ ಯಾ ಅಂಗಡಿ ಯಾ ಅಂಗಡಿಗಳ ಸಮುದಾಯದ ಲೈಸೆನ್ಸ್‌ದಾರನು ಪ್ರತಿದಿನದಲ್ಲಿಯೂ ತನ್ನ ಅಂಗಡಿಗೆ ಜಮಾ ಬಂದ ಮತ್ತು ಖರ್ಚಾದ ಶೇಂದಿಯ ಕರಾರ್ವಾಕ್ ಲೆಖ್ಖವನ್ನು ವಿಧಾಯಕವಾಗಿರುವ ನಮೂನೆಯಲ್ಲಿ ಶಾಯಿಯಿಂದ ಬರದು ಇಡಬೇಕು. ಈ ಲೆಖ್ಖಗಳು ಮತ್ತು ಪರ್ಮಿಟ್ಟುಗಳು ಅಚ್ಚಾಗಿರುವ ಪುಸ್ತಕಗಳಲ್ಲಿರಬೇಕು. ಇವುಗಳ ಅಸಲು ಖರೀದಿಯನ್ನು ಕೊಟ್ಟಲ್ಲಿ ಸ್ಥಳದ ಎಕ್ಸೈಜ್ ಆಫೀಸರುಗಳಿಂದ ಸದರೀ ಪುಸ್ತಕಗಳನ್ನು ಪಡೆಯಬಹುದು. ಜಮಾ ಬಂದ ಶೇಂದಿಗೆ ಪರ್ಮಿಟ್ಟುಗಳು ಮತ್ತು ಖರ್ಚಾದ್ದರ ಪರ್ಮಿಟ್ಟುಗಳ ಕೌಂಟರ್ ಫಾಯಿಲ್‌ಗಳು ಹುಷಾರಿನಿಂದ ವಿಲೇ ಮಾಡಿರತಕ್ಕದ್ದು. ಮುಂದಿನ ಖರ್ಚಿಗಾಗಿ ಖಾಲೀ ಪರ್ಮಿಟ್ಟುಗಳನ್ನು ಸೈನ್ ಮಾಡುವದನ್ನು ಅಡ್ಡೀ ಪಡಿಸಿದೆ. ಇಜಾರೆ ಮುಗಿದ ನಂತರ ಸದರೀ ಲೆಖ್ಖಗಳೂ ಪರ್ಮಿಟ್ಟುಗಳ ಕೌಂಟರ್ ಫಾಯಿಲ್‌ಗಳು ಸ್ಥಳದ ಎಕ್ಸೈಜ್ ಆಫೀಸರವರಲ್ಲಿ ಕೊಡಲ್ಪಡತಕ್ಕದ್ದು. ಡೆಪ್ಯುಟಿ ಕಮಿಷನರು ಅಥವಾ ಅವರಿಂದ ಮೊಕರರಾದ ಇತರ ಆಫೀಸರುಗಳು ಅಸಿಸ್ಟೆಂಟ್ ಇನ್ಸ್‌ಪೆಕ್ಟರುಗಳಿಗಿಂತಲೂ ಹುದ್ದೆಯಲ್ಲಿ ಕಮ್ಮಿಯಾಗಿರದ ಎಕ್ಸೈಜ್ ಆಫೀಸರುಗಳು ಕೇಳಿದಲ್ಲಿ ಸದರೀ ಲೆಖ್ಖಗಳನ್ನು ಹಾಜರ್ಪಡಿಸಬೇಕು. ಡೆಪ್ಯುಟಿ ಕಮಿಷನರು ಅಥವಾ ಅಸಿಸ್ಟೆಂಟ್ ಇನ್ಸ್‌ಪೆಕ್ಟರಿಗಿಂತಲೂ ಹುದ್ದೆಯಲ್ಲಿ ಕಮ್ಮಿಯಾಗಿರದ ಎಕ್ಸೈಜ್ ನೌಕರರು ಆಗಿಂದಾಗ್ಯೆ ಅಪೇಕ್ಷಿಸುವಂಥಾ ಲೆಖ್ಖಗಳನ್ನು ವ ವರ್ತಮಾನವನ್ನು ಲೈಸೆನ್ಸ್‌ದಾರನು ತಡಮಾಡದೆ ಕೊಡತಕ್ಕದ್ದು.

(10) ಕ್ರಮವಾಗಿ ಲೈಸೆನ್ಸು ಪಡೆದ ಅಂಗಡಿಗಳು ಸಮೀಪದಲ್ಲಿ ಇಲ್ಲದೇ ಇರುವ ಪ್ರದೇಶಗಳಲ್ಲಿ ನಡೆಯುವ ಹಬ್ಬ, ಜಾತ್ರೆ ಮುಂತಾದ ಕಾಲಗಳಲ್ಲಿ ಶೇಂದಿಯನ್ನು ಬಿಕರೀ ಮಾಡಲು ತತ್ಕಾಲಕ್ಕೆ ಬೇಕಾದ ಲೈಸೆನ್ಸುಗಳನ್ನು ಕೊಡತಕ್ಕ ಅಧಿಕಾರವನ್ನು ಡೆಪ್ಯುಟಿ ಕಮ್ಮಿಷನರವರಿಗೆ ಉಳಿಸಿಕೊಂಡಿರುತ್ತದೆ. ಅಂಥಾ ಲೈಸೆನ್ಸುಗಳನ್ನು ಸಾಧಾರಣವಾಗಿ ಸದರೀ ಪ್ರದೇಶದಲ್ಲೆಲ್ಲಾ ಮಾಮೂಲಾಗಿ ಸರಬರಾಯಿ ಮಾಡುವ ದುಕಾನದಾರರಿಗೇ ಕೊಡತಕ್ಕದ್ದು. ಸದರೀ ಲೈಸೆನ್ಸುಗಳ ಅವಧಿಯು 15 ದಿವಸಗಳಿಗಿಂತಲೂ ಹೆಚ್ಚಾಗಿರಕೂಡದು. ಮತ್ತು ಅದಕ್ಕಾಗಿ ಪಾವತಿಯಾಗತಕ್ಕ ಮೊಬಲಗು ಡೆಪ್ಯುಟಿ ಕಮ್ಮಿಷನರವರಿಗೆ ಯುಕ್ತವಾಗಿ ತೋರಿದಂತೆ ಗೊತ್ತು ಮಾಡಲ್ಪಡಬಹುದು; ಹರಾಜು ಮೂಲಕವಾಗಿಯೂ ವಿಲೇವಾರಿ ಮಾಡಲು ಡೆಪ್ಯುಟಿ ಕಮ್ಮಿಷನರವರು ತೀರ್ಮಾನಿಸಬಹುದು.

(11) ಡೆಪ್ಯುಟಿ ಕಮ್ಮಿಷನರವರು ತಮಗೆ ಯುಕ್ತ ತೋಚಿದಾಗ ಯಾವ ದುಕಾನಗಳನ್ನಾಗಲಿ ಮುಚ್ಚಲು, ಅಥವಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಿಧಿಸಲ್ಪಟ್ಟಿರುವ ಸ್ಥಳದಿಂದ 200 ಗಜಗಳ ವಳಗೆ ವರ್ಗಾಯಿಸಲು ಅಪ್ಪಣೇ ಕೊಡಬಹುದು. ಮಂಜೂರ್ಮಾಡಲ್ಪಟ್ಟ ಎಲ್ಲಾ ಅಂಗಡಿಗಳಲ್ಲಿಯೂ ಎಕ್ಸೈಜ್ ಡಿವಿಜನಲ್ ಆಫಿಸರವರು ಗೊತ್ತು ಮಾಡುವ ಮೊತ್ತದಷ್ಟು ಶೇಂದಿಯನ್ನು ದಾಸ್ತಾನಾಗಿ ಇಟ್ಟಿರಬೇಕು.

(12) ಅಂಗಡಿಯ ಯಾ ಅಂಗಡಿಗಳ ಸಮುದಾಯದ ಲೈಸೆನ್ಸದಾರನು ತನ್ನ ಲೈಸೆನ್ಸಿನ ವಾಯಿದೆವಳಗೆ ತನ್ನ ಶೇಂದಿ ಅಂಗಡಿ ಇರತಕ್ಕ ಸುತ್ತಲೂ 5 ಮೈಲಿ ಫಾಸಲೆಗಳೊಳಗಾಗಿ ಸಾರಾಯಿ ಮಾರತಕ್ಕ ಬುಟ್ಟಿ ಸ್ವಾತಂತ್ರ್ಯದ ಹಕ್ಕಿನ ವಿಷಯದಲ್ಲಿ ಯಾವ ವಿಧವಾದ ಸಂಬಂಧವನ್ನು ಇಟ್ಟುಕೊಳ್ಳಕೂಡದು; ಅಥವಾ ಅದೇ ಸರಹದ್ದಿನೊಳಗೆ ಸಾರಾಯಿ ಬಿಕರೀಮಾಡತಕ್ಕ ಬುಟ್ಟಿ ಸ್ವಾತಂತ್ರ್ಯದ ಹಕ್ಕನ್ನು ವಹಿಸಿರತಕ್ಕ ಯಾವ ಮನುಷ್ಯನನ್ನಾಗಲಿ, ಶೇಂದಿ ಮಾರುವ ತನ್ನ ಬುಟ್ಟಿ ಸ್ವಾತಂತ್ರ್ಯದ ಹಕ್ಕಿನಲ್ಲಿ ಪಾಲುದಾರನನ್ನಾಗಿ ಆಗಲಿ, ಯಾ ಸಂಬಂಧವುಳ್ಳವನನ್ನಾಗಲೀ ಇಟ್ಟುಕೊಳ್ಳಕೂಡದು. ಅಥವಾ ತನ್ನ ಲೈಸೆನ್ಸಿನ ವಾಯಿದೆ ಅಂದರ್‌ವಾರ್ ಎಕ್ಸೈಜ್ ಕಮಿಷನರವರ ಲಿಖಿತಮೂಲಕವಾದ ಹುಕುಂ ಇಲ್ಲದೆ ಮೈಸೂರು ರಾಜ್ಯದ ಹೊರಗೆ ಯಾ ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನನಲ್ಲಿ ಇರುವ ಯಾವದೊಂದು ಶೇಂದಿ ಅಂಗಡಿಯಲ್ಲಿಯೂ ಅಥವಾ ಬಿಕರೀ ಗುತ್ತಾ ಫಿರ್ಕಾದಲ್ಲಿಯೂ ಪ್ರತ್ಯಕ್ಷವಾದ ಯಾ ಪರೋಕ್ಷವಾದ ಸಂಬಂಧವನ್ನು ಇಟ್ಟುಕೊಂಡಿರಕೂಡದು.

(13) ಲೈಸೆನ್ಸದಾರನು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನುಗಳಿಗೂ ಅವುಗಳನ್ನನುಸರಿಸಿದ ನಿಬಂಧನೆಗಳಿಗೂ ಲೈಸೆನ್ಸಿನ ಷರತ್ತುಗಳಿಗೂ ಅನುಸಾರವಾಗಿ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು. ಲೈಸೆನ್ಸದಾರನು ಎಕ್ಸೈಜ್ ಕಮ್ಮಿಷನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೇ ಸಾಧನಗಳನ್ನು ಲೈಸೆನ್ಸ ಪಡೆದ ಯಾವ ಆವರಣದಲ್ಲಾದರೂ ಹೊಂದಿರಬಹುದು ಯಾ ಉಪಯೋಗಿಸಬಹುದು. ಲೈಸೆನ್ಸ ಪಡೆದ ಅಂಗಡಿಯನ್ನು ತನಿಖೆಮಾಡಲು ಅಧಿಕಾರವುಳ್ಳ ಆಫಿಸರುಗಳು ಆವರಣಗಳನ್ನು ಪ್ರವೇಶಮಾಡಿ ನೋಡುವದಕ್ಕೂ ಉಪಯೋಗಿಸತಕ್ಕ ಅಳತೇ ಸಾಧನಗಳನ್ನು ಮತ್ತು ಮಾರಲ್ಪಡುವ ಶೇಂದಿಯನ್ನು ಪರೀಕ್ಷೆಮಾಡುವದಕ್ಕೂ ಅಂಗಡಿಯಲ್ಲಿನ ಲೆಖ್ಖಗಳನ್ನು ತರಿಸಿ ತನಿಖೆಮಾಡುವದಕ್ಕೂ ಅಧಿಕಾರವುಳ್ಳವರಾಗಿರುತ್ತಾರೆ.

(14) ಎಕ್ಸೈಜ್ ಕಮಿಷನರವರ ಅಪ್ಪಣೆ ಶಿವಾಯಿ ಲೈಸೆನ್ಸ ಮಾರಿಕೆಯಿಂದಲಾಗಲೀ ದಾನ ಮೂಲಕವಾಗಿ ಆಗಲೀ ಅಥವಾ ಇತರ ವಿಧವಾಗಿ ಆಗಲಿ ವರ್ಗವಾಗತಕ್ಕದ್ದಲ್ಲ. ಯಾ ವಳಗೇಣಿ ಆಗತಕ್ಕದ್ದಲ್ಲ. ಅಂಗಡಿಗಳ ರಾಜೀನಾಮೆಯು ಪೂರ್ಣವಾಗಿಯೇ ಆಗಲಿ ಯಾ ಭಾಗವಾಗಿಯೇ ಆಗಲಿ ಡೆಪ್ಯುಟಿ ಕಮ್ಮಿಷನರವರಿಂದ ವಿಚಾರವಿಲ್ಲದೆ ತಿರಸ್ಕರಿಸಲ್ಪಡುವದು.

8. (1) ಈ ಕೆಳಗೆ ನಮೂದಿಸುವ ಜನರ ದರಖಾಸ್ತಿನಮೇಲೆ ನಿಬಂಧಿಸಿರುವ ನಮೂನೆಯಲ್ಲಿ ಮರವನ್ನು ಕಟ್ಟುವ ಬಗ್ಗೆ ಲೈಸೆನ್ಸಗಳು ಸಾದರ್ಮಾಡಲ್ಪಡತಕ್ಕದ್ದು.

(a) ಲೈಸೆನ್ಸ ಕೊಡಲ್ಪಟ್ಟಿರುವ ಶೇಂದಿ ಅಂಗಡಿಕಾರರ, ಅಥವಾ ಅವರಿಂದ ಅಧಿಕಾರಹೊಂದಿದ ಏಜಂಟರ.

(b) ಸನ್ 1898ನೇ ಇಸವಿ ಜೂನ್ 20ನೇ ಮುಕ್ಕಾಂ 11897—906—Ex. 485ನೇ ನಂಬರುಳ್ಳ ಗವರ್ನ್ಮೆಂಟ್ ಇಸ್ತಿಹಾರ್ ನಾಮೆಯನ್ನನುಸರಿಸಿ ಮನೆ ಕುಟುಂಬದವರ ನಿಜವಾದ ಸ್ವಂತ ಉಪಯೋಗಕ್ಕೋಸ್ಕರ ಬೇಕಾಗಿರುವ ಶೇಂದಿಯನ್ನು ವಿಧಾಯಕವಾದ ಮರ ತೆರಿಗೆಯನ್ನು ಕೊಡಬೇಕಾದ ನಿರ್ಬಂಧವಿಲ್ಲದೆ ಎಕ್ಸೈಜ್ ಕಮ್ಮಿಷನರವರಿಗೆ ಆವಶ್ಯಕವೆಂದು ಕಾಣಬರುವ ಮರಗಳಿಂದ ತಯಾರುಮಾಡಲಿಕ್ಕೆ ಮಲನಾಡಿನಲ್ಲಿರುವ ಕಾಫಿತೋಟಗಳಲ್ಲಿಯೂ, ಕಾಫಿ ಹಿತ್ತಲುಗಳಲ್ಲಿಯೂ ಮತ್ತು ಬಾಗಗಳಲ್ಲಿಯೂ ಇರುವ ಮರಗಳ ಮಾಲೀಕರು,—

ಲೈಸೆನ್ಸುಗಳನ್ನು ದರಖಾಸ್ತುದಾರನ ಹೆಸರಿಗಾಗಲಿ ಯಾ ಆತನಿಂದ ನೇಮಿಸಲ್ಪಡುವ ಇತರೆ ಜನರ ಹೆಸರಿಗಾಗಲೀ ಕೊಡಬಹುದು.

(2) ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೆ ದರಖಾಸ್ತುಗಳನ್ನ ಸಂಬಂಧಪಟ್ಟ ಎಕ್ಸೈಜ್ ಇನ್ಸ್ಪೆಕ್ಟರವರಿಗೆ ನಿಬಂಧಿಸಿರುವ ನಮೂನೆಯಲ್ಲಿ ಸ್ಥಳದ ಖಜಾನೆಯ ಮೂಲಕ ಕೊಡಬೇಕು. ಸದರೀ ನಮೂನೆಗಳನ್ನು ಅವರಿಂದ ಯಾ ಅವರ ಕೈಕೆಳಗಿರುವ ಅಸಿಸ್ಟೆಂಟ್ ಇನ್ಸ್ಪೆಕ್ಟರುಗಳಿಂದ ಪಡೆಯಬಹುದು.

(3) ಸರ್ಕಾರಿ ಹಿಡುವಳಿಗಳಲ್ಲಿಯೂ ಯಾ ಇನಾಂ ವ ಕಾಯಂಗುತ್ತಾ ಜಮೀನುಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಸದರೀ ಮರಗಳ ಮಾಲೀಕರ ಅನುಮತಿಯನ್ನು ಪಡೆದಿರುವದಕ್ಕೆ ಸಾಧಕವಾಗಿ ಸದರೀ ಮಾಲೀಕರ ರುಜುಗಳನ್ನು ಮಾಡಿಸಬೇಕು. ಸ್ಟೇಟ್ ಫಾರೆಸ್ಟುಗಳಲ್ಲಿಯೂ ಯಾ ಪ್ಲಾಂಟೇಷನಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಫಾರೆಸ್ಟ್ ರೇಂಜ್ ಆಫಿಸರ ಅನುಮತಿಯನ್ನು ಪಡೆದಿರುವದಕ್ಕೆ ಸಾಧಕವಾಗಿ ಅವರ ರುಜುಗಳನ್ನು ಮಾಡಿಸಬೇಕು.

(4) ಉತಾರು ಲೈಸೆನ್ಸುಗಳಿಗೆ ದರಖಾಸ್ತು ಮಾಡುವ ಜನರು ಕೇಂದಿ ಉತಾರಿಗೋಸ್ಕರ ಸದರೀ ಲೈಸೆನ್ಸುಗಳಲ್ಲಿ ನಮೂದಾಗಿರುವ ಮರಗಳ ಬಾಬತು ಮರತೆರಿಗೆ ಪಾವತಿ ಆಗಬೇಕಾಗಿರುವ ಎಲ್ಲಾ ಹಣವನ್ನು, ಸರ್ಕಾರೀ ಬಂಜರಿನಲ್ಲಿರತಕ್ಕ ಮರಗಳ ಮರದ ಮಾಲ್ಕಿಯನ್ನು ಅವುಗಳ ಮೇಲಿನ ಸೆಸ್ ಮೊಬಲಗನ್ನೂ ಸರ್ಕಾರಕ್ಕೆ ಕೊಡಲಿಕ್ಕೆ ಜವಾಬ್ದಾರರಾಗಿರತಕ್ಕದ್ದು.

(5) ಅಂಥಾ ದರಖಾಸ್ತು ದಾಖಲಾದ ಕೂಡಲೇ ಇನ್ಸ್‌ಪೆಕ್ಟರವರು ಸಬ್ ಇನ್ಸ್‌ಪೆಕ್ಟರ ಹುದ್ದೆಗೆ ಮೇಲ್ಪಟ್ಟ ಒಬ್ಬ ಉದ್ಯೋಗಸ್ಥರಿಂದ ಮರಗಳಿಗೆ ಸಂಖ್ಯೆ ಹಾಕಿಸುವದಕ್ಕೂ ಮತ್ತು ಕಾಲಕ್ಕೆ ಸರಿಯಾಗಿ ಲೈಸೆನ್ಸನ್ನು ಕೊಡುವದಕ್ಕೂ ತರಢೂದ್ ಮಾಡತಕ್ಕದ್ದು. ಈಚಲು ಮರಗಳ ದರಖಾಸ್ತುದಾರರು ಮರಗಳಮೇಲೆ ಅವಶ್ಯಕವಾಗಿರುವ ಜಾಗವನ್ನು ತಯಾರ್ಮಾಡಿ ನಂಬರು ಹಾಕತಕ್ಕ ಆಫೀಸರರು ಕೇಳಿದಾಗ ದರಖಾಸ್ತು ಮಾಡಲ್ಪಟ್ಟ ಮರಗಳನ್ನು ತೋರಿಸಬೇಕು. ಯುಕ್ತವಾದಷ್ಟು ವಿರಾಮನಿಸಿ ನೋಟೀಸ್ ಕೊಟ್ಟ ತರುವಾಯ ಹಾಗೆಮಾಡಲು ಅವರು ತಪ್ಪಿದರೆ ಅವರಿಂದ ಪಾವತಿ ಮಾಡಲ್ಪಟ್ಟ ಮರ ತೆರಿಗೆಯೂ ಮತ್ತು ಮರದ ಮಾಲ್ಕಿಯೂ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಯುಕ್ತ ತೋರುವಂತೆ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡತಕ್ಕದ್ದು.

(6) ಡೆಪ್ಯುಟಿ ಕಮಿಷನರುಗಳು ಆಗಾಗ್ಯೆ ಎಕ್ಸೈಜ್ ಕಮಿಷನರವರ ಹುಕುಮಿಗೆ ಒಳಪಟ್ಟು ಕನಿಷ್ಟಪಕ್ಷ ಎಷ್ಟು ಮರಗಳಿಗೆ ಲೈಸೆನ್ಸ್ ಕೊಡಬಹುದೋ, ಮತ್ತು ಒಂದೊಂದು ದರಖಾಸ್ತಿನಲ್ಲಿ ಕನಿಷ್ಟಪಕ್ಷ ಎಷ್ಟು ಮರಗಳನ್ನು ದಾಖಲ್ಮಾಡಬಹುದೋ ಆ ಅಂಶಗಳನ್ನು ಆಗಿಂದಾಗ್ಯೆ ಗೊತ್ತುಮಾಡತಕ್ಕದ್ದು. ಶಿವಾಯಿ ಅವರು ಒಂದೊಂದು ದರಖಾಸ್ತಿನಲ್ಲಿ ಒಂದೇ ಗ್ರಾಮದ ಮರಗಳನ್ನು ದಾಖಲ್‌ಮಾಡಬೇಕೆಂದು ಹುಕುಂ ಮಾಡಬಹುದು.

(7) ತಕ್ಕ ಉದ್ಯೋಗಸ್ಥರು ಮರಗಳಿಗೆ ಸಂಖೆ ಹಾಕುವ ಪರಿಯಂತರ ಯಾವ ಮರವನ್ನೂ ಕಟ್ಟಕೂಡದು, ಯಾವ ಮರದಿಂದಲೂ ಕೇಂದಿಯನ್ನು ಉತಾರು ಮಾಡಕೂಡದು, ಯಾವ ಮರಕ್ಕೂ ಗಡಿಗೆಯನ್ನು ಕಟ್ಟಕೂಡದು. ಪರಂತು ನಿಬಂಧಿಸಿರುವ ನಮೂನೆಯಲ್ಲಿ ದರಖಾಸ್ತನ್ನು ಸಂಬಂಧಪಟ್ಟ ಖಜಾನೆಗೆ ಕೊಟ್ಟ ಕೂಡ್ಲೆ ಕೇಂದಿ ಉತಾರಿಗೋಸ್ಕರ ರೇವು ಮಾಡಲಿಕ್ಕೆ ಗರಿಗಳನ್ನು ತೆಗದುಹಾಕಲಿಕ್ಕೂ, ಹೊಂಬಾಳೆಗಳನ್ನು ಯಾ ರೇವುಗಳನ್ನು ತಯಾರ್ಮಾಡಲಿಕ್ಕೂ ಉಪಕ್ರಮಿಸಬಹುದು.

(8) ಕೇಂದಿ ಉತ್ಪತ್ತಿ ಆಗತಕ್ಕ ಎಲ್ಲಾ ಮರಗಳಿಗೂ ಕೊಡುವ ಉತಾರ್ ಲೈಸೆನ್ಸುಗಳು ವರುಷಗಟ್ಲೆಯಾಗಿರತಕ್ಕದ್ದು. ಲೈಸೆನ್ಸದಾರನ ಅನುಕೂಲಕ್ಕಾಗಿ ಯಾವ ಕಾಲಕ್ಕೆ ಸಂಬಂಧಪಡುತ್ತವೋ ಆ ಕಾಲಕ್ಕೆ 15 ದಿವಸಗಳು ಮುಂಚಿತವಾಗಿ ಉತಾರ್ ಲೈಸೆನ್ಸ ಬಗ್ಯೆ ದರಖಾಸ್ತುಗಳು ಅಂಗೀಕರಿಸಲ್ಪಡುವವು, ಮರಗಳಿಗೆ ಸಂಖೆ ಹಾಕಲ್ಪಟ್ಟು ಲೈಸೆನ್ಸುಗಳು ಕೊಡಲ್ಪಡುವವು; ಮತ್ತು ಸದರೀ ಕಾಲಕ್ಕೆ 8 ದಿವಸಗಳಿಗೆ ಮುಂಚಿತವಾಗಿ ಸಂಖೆ ಹಾಕಲ್ಪಟ್ಟಿರುವ ಮೇಲ್ಕಂಡ ಮರಗಳಿಗೆ ಗಡಿಗೆಗಳನ್ನು ಕಟ್ಟಬಹುದು; ಆದರೆ ಕೇಂದಿ ಉತಾರು ಮುಂತಾದ್ದು ಸದರೀ ಕಾಲದ ಪ್ರಾರಂಭದ ಮೊದಲು ಜಾರಿಯಲ್ಲಿ ಬರತಕ್ಕದ್ದು. ಪರಂತು ಲೈಸೆನ್ಸಿನ ಕಾಲಾವಧಿಯಲ್ಲಿ ವಿನಹಾ ಬೇರೆ ಕಾಲದಲ್ಲಿ ಕೇಂದಿಯನ್ನು ಮರಗಳಿಂದ ಇಳಿಸಿಕೊಂಡು ಹೋಗಕೂಡದು.

(9) ಈ ಕೆಳಗೆ ನಮೂದಿಸಿರುವ ದರಗಳಂತೆ ಮರ ತೆರಿಗೆಯನ್ನು ಕೊಟ್ಟ ಕೇಂದಿ ಉತಾರ್ ಬಗ್ಯೆ ಲೈಸೆನ್ಸ ಪಡದ ಹೊರ್ತು ಯಾವ ಮರವನ್ನೂ ಕಟ್ಟಕೂಡದು.

ಮರದ ತರಹೆ	ಮರ ಒಂದಕ್ಕೆ ಲೋಕಲ್‌ಸೆಸ್ ದೇಖೀಲ್ ವರುಷ ಒಂದಕ್ಕೆ ಕೊಡಬೇಕಾದ ಮರ ತೆರಿಗೆ. ರೂ.	ಆ.	ಪೈ.
ಈಚಲು	1	1	0
ತೆಂಗು	2	2	0
ತಾಳೆ	1	9	6
ಬಗನಿ ವೆ	1	9	6
ದಡಸಾಲು	0	8	6

ಟಿಪ್ಪಣಿ.—ಮೇಲಿನ (1)ನೇ ಕಲಂನಲ್ಲಿ ನಮೂದಿಸಿರುವ ವಿಷಯಗಳಲ್ಲಿ ಕೊಡಲ್ಪಡುವ ಲೈಸೆನ್ಸುಗಳಿಗೆ ಮೈಸೂರು ಸರ್ಕಾರಕ್ಕೆ ಮರ ತೆರಿಗೆಯನ್ನು ಕೊಡಬೇಕಾದ್ದಿಲ್ಲವು.

(10) ಮೇಲ್ಕಂಡ ತೆರಿಗೆ ಶಿವಾಯಿ, ಮೈಸೂರು ರಾಜ್ಯದ ಒಳಗೆ ಅಥವಾ ಹೊರಗೆ ಇರುವ ಅಥವಾ ಬೆಂಗ್ಳೂರು ದಂಡಿನಲ್ಲಿ ಇರುವ ಅಂಗಡಿಗಳಿಗೆ ಸರಬರಾಯಿಗಾಗಿ ಉತಾರಾಗತಕ್ಕದ್ದಕ್ಕೆ ದರಖಾಸ್ತು ಬರುವ ಸರ್ಕಾರೀ ಮರಗಳಿಗೆ ಸಾಲಿಯಾನಾ ಮರ ಒಂದಕ್ಕೆ 4 ಆಣೆ ಪ್ರಕಾರ ಮರದ ಮಾಲ್ಕಿ ಮೊಬಲಗು 3 ಪೈ ಪ್ರಕಾರ ಲೋಕಲ್‌ಸೆಸ್‌ನಿಸಿ ವಸೂಲಾಗತಕ್ಕದ್ದು.

ಟಿಪ್ಪಣಿ.—ಸರ್ಕಾರ ಹಿಡುವಳಿ ಜಮೀನಿನಲ್ಲಿರುವ ಮರಗಳನ್ನು ಮಾಲೀಕರ ಅನುಮತಿಯಿಲ್ಲದೆ ಕಟ್ಟಕೂಡದು, ಇನಾಂ ವ ಕಾಯಂಗುತ್ತಾ ಜಮೀನಿನಲ್ಲಿರುವ ಮರಗಳ ವಿಷಯದಲ್ಲಿ ಹಾಲಿ ಏರ್ಪಾಟುಗಳು ಜಾರೀಲಿರತಕ್ಕದ್ದು. ಪರಂತು ಆ ಮರಗಳು ಸರ್ಕಾರದಿಂದ ಮರ ತೆರಿಗೆ ವಸೂಲ್ಮಾಡಲಿಕ್ಕೆ ಗುರಿಯಾಗಿರತಕ್ಕದ್ದು.

628

ಸಂಬಂಧಪಟ್ಟ ಆಯಾಯ ಇಲಾಖೆಗಳಿಗೆ ಈ ಮರದ ಮಾಲ್ಕಿ ಮೊಬಲಗನ್ನು ಜಮೆ ಕಟ್ಟತಕ್ಕದ್ದು.

(11) (a) ದರಖಾಸ್ತು ಬರುವ ಮರಗಳ ಮೇಲಿನ ಮರದ ಮಾಲ್ಕಿ ಮೊಬಲಗು ಅವರ ಮೇಲಿನ ಸೆಸ್ ಮೊಬಲಗೂ ಮತ್ತು ಮರತೆರಿಗೆ ಮೇಲಿನ ಸೆಸ್ ಮೊಬಲಗೂ ಬುತಾರ್ ಲೈಸೆನ್ಸಿಗೆ ದರಖಾಸ್ತು ಕೊಡುವಾಗ ಪೂರಾ ಪಾವತಿಯಾಗತಕ್ಕದ್ದು.

(b) ಎಕ್ಸೈಜ್ ಕಮಿಷನರ್ ಸಾಹೇಬರವರು ಬೇರೆ ಹುಕುಂ ಕೊಡದೆ ಇದ್ದ ಪಕ್ಷದಲ್ಲಿ ಮರತೆರಿಗೆ ಮೊಬಲಗು ಈ ಕೆಳಗೆ ನಮೂದ್ ಮಾಡಿರುವ ಖಿಸ್ತುಗಳಲ್ಲಿ ಪಾವತಿ ಮಾಡಲ್ಪಡತಕ್ಕದ್ದು.

ಲೈಸೆನ್ಸುಗಳಿಗಾಗಿ ದರಖಾಸ್ತುಗಳನ್ನು ಕೊಡತಕ್ಕ ಕಾಲ.	ಲೈಸೆನ್ಸಿಗೆ ದರಖಾಸ್ತು ಮಾಡುವಾಗ ಕೊಡಬೇಕಾದ ಮರ ತೆರಿಗೆ ಮೊಬಲಗಿನ ಪ್ರಮಾಣಾಯಿ.	ಮೂರನೇ ತಿಂಗಳು ಗುರ್ರೇ ತಾರೀಖಿನಲ್ಲಿ ಪಾವತಿ ಯಾಗಬೇಕಾದ ಮರ ತೆರಿಗೆ ಪ್ರಮಾಣಾಯಿ.
1904ನೇ ಇಸವಿ ಜುಲೈ ಗುರ್ರೇ ಲಾಗಾಯಿತು 1905ನೇ ಏಪ್ರೈಲ್ 30ನೇ ತಾರೀಖಿನ ವಳಗಾಗಿ.	ಮೂರರಲ್ಲಿ ಒಂದುಭಾಗ.	ಉಳಿದ ಮೂರರಲ್ಲಿ ಎರಡುಭಾಗವು.
1905ನೇ ಇಸವಿ ಮೇ ಗುರ್ರೇ ಲಾಗಾಯಿತು 1905ನೇ ಜೂನ್ 30ನೇ ತಾರೀಖಿನ ವಳಗಾಗಿ.	ಇಲ್ಲಾ.	ಇಲ್ಲಾ.

(c) ನಿರ್ಣಯಿಸಿದ ಕಾಲದೊಳಗಾಗಿ ಯಾವ ಖಿಸ್ತು ಮೊಬಲಗನ್ನಾದರೂ ಪಾವತಿ ಮಾಡದೇ ಇದ್ದಲ್ಲಿ ಎಕ್ಸೈಜ್ ರೆಗ್ಯುಲೇಷನ್ 26ನೇ ಸೆಕ್ಷನ್ ಮೇರೆಗೆ ಲೈಸೆನ್ಸ್ ರದ್ದು ಯಾ ಮೋಕೂಫ್ ಮಾಡಲ್ಪಡಲು ಗುರಿಯಾಗಿರುತ್ತದೆ.

(d) ಲೈಸೆನ್ಸುದಾರನು ತಪ್ಪಿತಸ್ಥನಾಗಿ ಅವನ ಅಂಗಡಿಯು ಮುಸರಾ ಹರ್ರಾಜು ಮಾಡಲ್ಪಟ್ಟರೆ ಸರ್ಕಾರದ ಮರಗಳಿಗೆ ಅವನಿಗೆ ಇರತಕ್ಕ ಹಕ್ಕು ಬಾಧ್ಯತೆಯು ನಿಂತುಹೋಗುತ್ತದೆ.

(e) ಮೇಲ್ಕಂಡಂತೆ ನಡೆಯಲು ತಪ್ಪಿದರಲ್ಲಿ ಅಮಲ್‌ದಾರರು ಡೆಪ್ಯುಟಿ ಕಮಿಷನರವರ ಹುಕುಂ ಪಡದು ಬಾಕಿ ನಿಂತಿರುವ ಮೊಬಲಗು ಪಾವತಿ ಮಾಡಲ್ಪಡುವವರೆಗೂ ಉತ್ತಾರು ಲೈಸೆನ್ಸನ್ನು ಮೋಕೂಫ್ ಮಾಡಬಹುದು. ಹಾಗೆ ಮೋಕೂಫ್ ಮಾಡಿದ್ದರ ನೋಟೀಸು ತನಿಗೆ ಬಂದಿದ್ದರ ಮೇಲೆ ತಪ್ಪಿತಸ್ಥನಾದ ಲೈಸೆನ್ಸುದಾರನು ಮರಗಳನ್ನು ಉತ್ತಾರು ಮಾಡುತ್ತಲೇ ಇದ್ದಲ್ಲಿ ಅನ್ಯಾಯವಾಗಿ ಉತ್ತಾರು ಮಾಡಿದ ಶಿಕ್ಷೆಗೆ ಒಳಪಡುತ್ತಾನೆ.

(12) ಚಾಪೆ ಮಾಡುವದಕ್ಕಾದರೂ ಹಗ್ಗ ಮಾಡುವದಕ್ಕಾದರೂ ಗೂಡೆಗಳು ಮಾಡುವದಕ್ಕಾದರೂ ಯಾ ವ್ಯವಸಾಯ ಯಾ ಇತರ ಕಾರ್ಯಗಳಿಗಾದರೂ ಈಚಲು ಗರಿಗಳನ್ನು ಕಡಿಯಲು ಲೈಸೆನ್ಸ್ ಪಡೆದಿರುವವರು ಹೆಂಡವನ್ನು ಕಟ್ಟಲು ಉಳಿಸಿರುವ ಮರಗಳನ್ನು ಬಿಟ್ಟು ಅಂಥಾ ಕಾರ್ಯಗಳಿಗಾಗಿ ಗೊತ್ತು ಮಾಡಲ್ಪಟ್ಟಿರುವ ಬೇರೆ ಮರಗಳನ್ನು ಉಪಯೋಗಿಸಿಕೊಳ್ಳುವಾಗ ಲೈಸೆನ್ಸುದಾರನು ಅವರ ಕಾರ್ಯಗಳಲ್ಲಿ ಪ್ರವೇಶ ಮಾಡಬಾರದು.

(13) ಲೈಸೆನ್ಸುದಾರನು ಆತನಿಗೆ ಕೊಡಲ್ಪಟ್ಟ ಲೈಸೆನ್ಸನ್ನು ಆತನ ಅಂಗಡಿಯಲ್ಲಿ ಬಹಿರಂಗವಾದ ಸ್ಥಳದಲ್ಲಿಡಬೇಕು.

(14) ಸ್ವದೇಶ ಭಾಷೆಯಲ್ಲಿ ದುಕಾಣದಾರನ ಹೆಸರು, ಲೈಸೆನ್ಸ್ ನಂಬರ್ ಮತ್ತು ಆತನಿಂದ ಮಾರಲ್ಪಡುವ ಶೇಂದಿಯ ಖರೀದಿ ನಮೂದಿನಿಂದ ಪ್ರತಿ ಅಂಗಡಿಯ ಮುಂಭಾಗದಲ್ಲಿ ಒಂದು ಹಲಿಗೆಯು ಬಹಿರಂಗವಾಗಿ ತಗಲಿ ಹಾಕಲ್ಪಡಬೇಕು. ಕುಷ್ಟರೋಗದಿಂದಲಾಗಲೀ ಅಥವಾ ಇತರ ಅಂಟುರೋಗದಿಂದಲಾಗಲೀ ಪೀಡಿತರಾದ ಜನಗಳಿಂದ ಶೇಂದಿಯನ್ನು ಬಿಡುವುದಕ್ಕಾಗಲೀ ಅಥವಾ ಮಾರುವುದಕ್ಕಾಗಲೀ ಮತ್ತು ಅಂಗಡಿಯಲ್ಲಿ ಅಂಥಾ ಜನರನ್ನು ನೌಕರರನ್ನಾಗಿ ಇಟ್ಟುಕೊಳ್ಳುವುದಕ್ಕಾಗಲೀ ಅಡ್ಡಿಪಡಿಸಲ್ಪಟ್ಟಿರುತ್ತೆ.

(15) ಲೈಸೆನ್ಸುದಾರನು ತನ್ನ ಅಂಗಡಿಯಲ್ಲಿ ನಿಷಾವನ್ನೂ, ನೃತ್ಯಾದಿಗೆ ಬಂಗವನ್ನೂ, ಜೂಜಾಡುವದನ್ನೂ ಅಡ್ಡಿಮಾಡತಕ್ಕದ್ದು.

(16) ಸೂರ್ಯೋದಯಕ್ಕೆ ಮುಂಚೆ ಯಾವ ಅಂಗಡಿಯೂ ಯಾ ಕೋಠಿಯೂ ತೆಗೆಯಲ್ಪಡಕೂಡದು, ಮತ್ತು ಪ್ರತ್ಯೇಕವಾದ ಅಪ್ಪಣೆ ಹೊಂದಿದ ಶಿವಾಯಿ ರಾತ್ರೆ 9 ಘಂಟೆ ನಂತರ ತೆರೆಯಲ್ಪಟ್ಟಿರಕೂಡದು. ಡೆಪ್ಯುಟಿ ಕಮಿಷನರ್ ಸಾಹೇಬರವರು ಅಂಗಡಿಯನ್ನು ತಂಗಾಮಿಯಾಗಿದ್ದಾಗಲಿ ಅಥವಾ ಖಾಯಂ ಆಗಿ ಆಗಲೀ ಮುಚ್ಚುವದಕ್ಕೆ ಹುಕುಂ ಕೊಟ್ಟ ಹೊತ್ತು ಸಂಬಂಧಿಸಿರುವ ಕಾಲಗಳಲ್ಲಿ ಅಂಗಡಿಯನ್ನು ತೆರೆದಿರಬೇಕು.

(17) ಲೈಸೆನ್ಸುದಾರನು ಚೋರರು, ಕಳ್ಳರು, ಪೋಲೀ ಮನುಷ್ಯರು, ಬೊಂಬ ಮಾಡತಕ್ಕವರು, ಹಾದರಗಿತ್ತಿಯರು, ಇವಾಯಿಗಳು, ಫೌಜ್ದಿನಿಂದ ಫರಾರಿಯಾಗಿ ಬಂದವರೆಂದು ಗೊತ್ತಿದ್ದ ಅಥವಾ ನಂಬಲ್ಪಟ್ಟಿದ್ದವರು ಇಂಥಾವರನ್ನು ಇಟ್ಟುಕೊಳ್ಳ

ಕೂಡದು. ರಾತ್ರಿ ಕಾಲದಲ್ಲಿ ಯಾವ ಮನುಷ್ಯನಿಗೂ ಆಶ್ರಯ ಕೊಡಕೂಡದು ; ಆದರೆ ಅಂಥಾ ಜನರು ಯಾರಾದರೂ ಅಂಗಡಿಗೆ ಬಂದರೆ ಸಮೀಪದಲ್ಲಿರುವ ಮೇಜಿಸ್ಟ್ರೇಟರಿಗೆ ಯಾ ಪೋಲೀಸ್ ಆಫಿಸರರಿಗೆ ವರ್ತಮಾನ ಕೊಡಬೇಕು.

(18) ಲೈಸೆನ್ಸ್‌ದಾರನು ಶೇಂದಿಗೆ ಅಡವಾಗಿ ಯಾ ಗಿರವಿಯಾಗಿ ಧಾನ್ಯ, ಒಡವೆ, ಸಾಮಾನು, ಉಡುಪು ಯಾ ಇತರ ಪದಾರ್ಥವನ್ನು ತೆಗದುಕೊಳ್ಳಕೂಡದು. ಅಂಥಾ ಯಾವ ಪದಾರ್ಥವಾದರೂ ತನ್ನಲ್ಲಿ ಬಂದರೆ ಸಮೀಪದಲ್ಲಿರತಕ್ಕ ಮೇಜಿಸ್ಟ್ರೇಟರಿಗೆ ಯಾ ಪೋಲೀಸ್ ಆಫಿಸರರಿಗೆ ವರ್ತಮಾನ ಕೊಡಬೇಕು.

(19) ಯಾವ ಲೈಸೆನ್ಸ್‌ದಾರ ಯಾ ಚಿಕರೀದಾರ ಯಾ ಚಿಕರೀದಾರರೇ ಆಗಲಿ ಮೂರು ಅಳೆಯುವ ಶೇರಿಗಿಂತಲೂ ಹೆಚ್ಚಾಗಿ ಶೇಂದಿಯನ್ನು ದುಕಾನಿನಲ್ಲಿ ಒಬ್ಬನೇ ಮನುಷ್ಯನಿಂದ ಒಂದೇ ಕಾಲದಲ್ಲಿ ಪಾನಮಾಡಲು ಕೊಡಬಾರದು ; ತಮ್ಮಿಂದ ಹೊಂದಲ್ಪಟ್ಟಿರುವ ಅಪ್ಪಣೇ ಚೀಟಿಯಲ್ಲಿ ವಿವರಿಸಿರುವ ಶೇಂದಿಯ ಪರಿಮಾಣವನ್ನು ಸಾಗಿಸಿಕೊಂಡು ಹೋಗಲು ಅಪ್ಪಣೆ ಪಡೆದಿರುವ ರೊಟ್ಟೀ ಕಾರ್ಖಾನೆಯವರು ವಿನಹಾ ಮತ್ತ್ಯಾರಿಗು ಅಪ್ಪಣೆ ಚೀಟಿ ಉಂಟಾಗಿದ್ದರೆ ಹೊರತಾಗಿ ಎರಡು ಇಂಪೀರಿಯಲ್ ಕ್ವಾರ್ಟ್‌ಗಳಿಗೆ ಅಥವಾ ಎರಡು ಸೇರುಗಳಿಗೆ ಅಧಿಕವಾಗಿ ಹೊರಗೆ ತೆಗದುಕೊಂಡು ಹೋಗಲು ಅವಕಾಶ ಕೊಡಬಾರದು. ಒಂದು ಇಂಪೀರಿಯಲ್ ಗ್ಯಾಲನ್ ಯಾ 4 ಅಳೆಯುವ ಸೇರುಗಳ ವರಿಗೂ ಅಪ್ಪಣೆ ಚೀಟಿ ಪಡೆದು ಪಾನ ಮಾಡಲಿಕ್ಕೆ ಶೇಂದಿಯನ್ನು ತೆಗದುಕೊಂಡು ಹೋಗಲು ಅವಕಾಶ ಕೊಡಬಹುದು.

(20) ಲೈಸೆನ್ಸ್‌ದಾರನು ಯಾವ ಎಕ್ಸೈಜ್ ಉದ್ಯೋಗಸ್ಥನಲ್ಲಿಯೂ ಹಣ ಸಂಬಂಧವಾದ ಲೇವಾದೇವಿಯನ್ನು ಇಟ್ಟುಕೊಳ್ಳಕೂಡದು.

(21) ಬಿಕರಿಯು ಪ್ರಶಸ್ತವಾಗಿರುವ ಕಟ್ಟಡದಲ್ಲಿ ಮಾಡಲ್ಪಡತಕ್ಕದ್ದು. ಸದರೀ ಕಟ್ಟಡಕ್ಕೆ ಒಂದೇ ಬಾಗಲು ಇರತಕ್ಕದ್ದು. ಹಿಂಭಾಗದಲ್ಲಾದರು ಪಕ್ಕಗಳಲ್ಲಿಯಾದರೂ ಕಿಟಕಿಯಾಗಲಿ ಗಂಡಿಯಾಗಲೀ ಇರಕೂಡದು. ಶೇಂದಿಯನ್ನು ಮಾರುವ ಜಗಲಿಯು ಅಂಗಡೀ ಒಳಗಡೆ ಇರುವ ಜನಗಳೂ ಅಂಗಡೀಮುಂದೆ ಬೀದೀಲಿ ತಿರಗಾಡುವ ಜನಗಳಿಗೆ ಕಾಣುವಹಾಗೆ ಬಾಗಲಿಗೆ ಎದುರಾಗಿ ಇರತಕ್ಕದ್ದು. ಮತ್ತು ಇದರಲ್ಲಿ ಎರಡನೇ ಕೊಠಡಿ ಶೇಂದಿಯನ್ನು ಮಾರುವದಕ್ಕೆ ಉಪಯೋಗಿಸಲೂ ಕೂಡದು ಅಥವಾ ಗಿರಾಕಿಗಳಿಗೋಸ್ಕರ ತೆಗೆದು ಇರಲೂಕೂಡದು.

(22) ಶೇಂದಿಯಿಂದ ಸಾರಾಯಿ ಭಟ್ಟೀ ಇಳಿಸುವದು ಸಂಪೂರ್ಣವಾಗಿ ಅಡ್ಡಿಮಾಡಲ್ಪಟ್ಟಿದೆ.

(23) ಯಾವ ಯೂರೋಪಿಯನ್ ನಾನ್ ಕಮಿಷನ್ಡ್ ಆಫಿಸರ್, ಅಥವಾ ಪ್ರೈವೇಟ್ ಯಾ ಸೋಲ್ಜರಿಗಾದರು, ಅಥವಾ ಸೈನ್ಯಗಳ ಮೊಕ್ಕಾಂಗಳೊಡನೆ ಹೋಗುವ ಯಾವ ಯುರೋಪಿಯನ್ ಯಾ ಯೂರೇಷಿಯನ್ನಿಗಾದರೂ ಅಥವಾ ಮೇಲೆ ಹೇಳಲ್ಪಟ್ಟ ಜನಗಳ ಸಂಸಾರಗಳ ಪೈಕಿ ಯಾರೊಬ್ಬರಿಗಾದರೂ ಕಮ್ಯಾಂಡಿಂಗ್ ಆಫಿಸರವರ ಅಥವಾ ಈ ವಿಷಯದಲ್ಲಿ ಅವರಿಂದ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯ ಲಿಖಿತಮೂಲಕವಾದ ಅಪ್ಪಣೆಯಿಲ್ಲದೆ ಶೇಂದಿಯನ್ನು ಮಾರಲೂಕೂಡದು ಕೊಡಲೂ ಕೂಡದು, ಮತ್ತು ಅವರು ಯಾವ ಯೂರೋಪಿಯನ್ ಯಾ ಯೂರೇಷಿಯನ್ ನಾವಿಕನಿಗೂ ಮತ್ತು ಉದ್ಯೋಗದ ಮೇಲಿರುವ ಕಾಲದಲ್ಲಿ ಯಾವ ಶಿಪಾಯಿಗೂ ಪೋಲೀಸ್ ನೌಕರನಿಗೂ, ಯುಕ್ಸೈಜ್ ಆಫಿಸರರಿಗೂ ರೈಲ್ವೆ ಕಂಪೆನಿಯ ನೌಕರನಿಗೂ, ಮತ್ತು ಪೋಲೀಸ್ ಮೊಹಸಲೆಯಲ್ಲಿರುವ ಯಾವ ಯೂರೋಪಿಯನ್ ಫ್ರೀಲೀ ಮನುಷ್ಯನಿಗೂ ಹನ್ನೆರಡು ವರುಷಗಳ ವಯಸ್ಸಿನೊಳಗಾಗಿರುವ ಯಾವ ಮಗುವಿಗೂ, ಅಥವಾ ಯಾವ ಹುಚ್ಚನಿಗು ಆವರಣದಲ್ಲಿ ಕುಡಿಯುವದಕ್ಕಾಗಿ ಶೇಂದಿಯನ್ನು ಮಾರಕೂಡದು ಯಾ ಕೊಡಕೂಡದು. ಶಿವಾಯಿ ಶೇಂದಿಯನ್ನು ಸಾಲವಾಗಿ ಮಾರಕೂಡದು.

(24) ಯೂರೋಪಿಯನ್ ಯಾ ನೇಟಿವ್ ಸೈನ್ಯದ ರಿಜಿಮೆಂಟ್ ಯಾ ಸಮೂಹವು ಪ್ರಯಾಣ ಮಾಡುತ್ತಿರುವಾಗ ಯಾ ಸಮೀಪದಲ್ಲಿ ಮೊಕ್ಕಾಂ ಮಾಡಿರುವಾಗ ಅವರ ಪ್ರಯಾಣದ ಮಾರ್ಗದಲ್ಲಿ ಯಾ ಆ ಮಾರ್ಗದ ಸಮೀಪದಲ್ಲಿರುವ ಎಲ್ಲಾ ಶೇಂದಿ ಬಿಕರೀ ಅಂಗಡಿಗಳನ್ನು ಮುಚ್ಚುವಂತೆ ಡೆಪ್ಯುಟಿ ಕಮ್ಮಿಷನರವರು ಅಥವಾ ತಾಲ್ಲೂಕು ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರವರು ಅಪ್ಪಣೆ ಮಾಡಬಹುದು.

(25) ಸರ್ಕಾರದವರು ಲೈಸೆನ್ಸುದಾರನಿಗೆ 15 ದಿವಸಗಳ ಮುಂಚಿನ ನೋಟೀಸು ಕೊಟ್ಟು ತಕ್ಕ ಕಾರಣಗಳಿಂದ ಆತನಿಗೆ ನ್ಯಾಯವಾಗಿ ತೋರುವ ಪರಿಹಾರದ್ರವ್ಯವನ್ನು ಕೊಟ್ಟು ಗುತ್ತಿಗೆಯನ್ನು ಮೋಖೂಫ ಮಾಡುವ ಅಧಿಕಾರವನ್ನು ಉಳಿಸಿಕೊಂಡಿರುತ್ತಾರೆ, ಮತ್ತು ಬಳದೇಶದ ಬೀರು ವಿಷಯದಲ್ಲಿ, ಯಾ ಶೇಂದಿ ವಿನಹ ಇತರ ವಿಧವಾದ ಯಾವ ಮದ್ಯದ ವಿಷಯದಲ್ಲಿ ಸರ್ಕಾರದವರು ಯಾವದಾದರೂ ಏರ್ಪಾಟು ಮಾಡಿದ್ದಲ್ಲಿ ಲೈಸೆನ್ಸ್‌ದಾರನಿಗೆ ಪರಿಹಾರದ್ರವ್ಯಕ್ಕೆ ಯಾ ರಿಮಿಷನ್ ಎಂಬ ಸೋಡಿಗೆ ಹಕ್ಕು ಇರಲಾರದು.

(26) ಡೆಪ್ಯುಟಿ ಕಮ್ಮಿಷನರವರ ಮಂಜೂರನ್ನು ಪಡೆಯದೆ ಯಾವ ಹಕ್ಕಿನ ಆಡಳಿತಕ್ಕೂ ಲೈಸೆನ್ಸ್‌ದಾರನಿಂದ ಯಾವ ಮನುಷ್ಯನೂ ನೇಮಿಸಲ್ಪಡಕೂಡದು. ಮುತಾಲೀಕನಿಂದ ತೆಗೆಯಲ್ಪಟ್ಟಿರುವ ಎಲ್ಲಾ ಒಡಂಬಡಿಕೆಗಳೂ ಅವುಗಳನ್ನು ಬರೆದು ಕೊಟ್ಟ ತಾರೀಖು ಲಾಗಾಯಿತು ಒಂದು ತಿಂಗಳೊಳಗೆ ಡೆಪ್ಯುಟಿ ಕಮ್ಮಿಷನರವರಲ್ಲಿ ಇಡಲ್ಪಡಬೇಕು.

(27) ಶೇಂದಿಯನ್ನು ತಯಾರು ಮಾಡುವದಕ್ಕೆ ಯಾ ಒಯ್ಯುವದಕ್ಕೆ ಯಾ ಬಿಕರೀ ಮಾಡುವದಕ್ಕೆ ತನ್ನಿಂದ ನೌಕರ ಮಾಡಲ್ಪಟ್ಟ ಯಾವ ಮನುಷ್ಯನಾದರೂ ಎಕ್ಸೈಜ್ ಕಾನೂನಿಗೆ ಅಥವಾ ಆತನು ಬರೆದು ಕೊಟ್ಟ ಕರಾರುಗಳಿಗೆ ವಿರೋಧವಾಗಿ

ನಡೆದ ಸಂಗತಿಯು ಲೈಸೆನ್ಸದಾರನ ತಿಳುವಳಿಕೆಗೆ ಬಂದಲ್ಲಿ ಆತನು ಆ ಸಂಗತಿಯನ್ನು ಡೆಪ್ಯುಟಿ ಕಮಿಷನರವರಿಗೆ ಇತ್ತಿಲೆ ಮಾಡಿ ಅಂಥಾ ಮನುಷ್ಯನನ್ನು ಮುಂದೆ ಕೆಲಸದಲ್ಲಿಡುವ ವಿಷಯದಲ್ಲಿ ಡೆಪ್ಯುಟಿ ಕಮಿಷನರವರಿಂದ ಕೊಡಲ್ಪಡುವ ಹುಕುಮನ್ನು ಜಾರಿಲಿ ತರತಕ್ಕದ್ದು.

(28) ಲೈಸೆನ್ಸದಾರ ಸೇಂದಿಯನ್ನು ಸಾಗಿಸುವದಕ್ಕಾಗಿ ಉಪಯೋಗಿಸುವ ಗಾಡಿಗಳಿಗೆ ಮೊಹತರ್ಫಾ ತೆರಿಗೆಯನ್ನು ಸಲ್ಲಿಸತಕ್ಕದ್ದು. ಆದರೆ ಅಂಥಾ ಗಾಡಿಗಳು ಸರ್ಕಾರದ ನೌಕರೀಬಗ್ಗೆ ಹಿಡಿಯಲ್ಪಡಕೂಡದು.

(29) ಕ್ರಮವಾಗಿ ನಂಬರ್ ಹಾಕಲ್ಪಟ್ಟ ಪುಟಗಳುಳ್ಳ ಒಂದು ಇನ್ಸ್‌ಪೆಕ್ಷನ್ ನೋಟ್ ಪುಸ್ತಕವು ತನಿಖೆ ಮಾಡತಕ್ಕ ಆಫೀಸರುಗಳ ಷರಾ ನಮೂದಿಗೋಸ್ಕರ ಇಟ್ಟುಕೊಳ್ಳಲ್ಪಡತಕ್ಕದ್ದಲ್ಲದೆ ಸದರೀ ಪುಸ್ತಕವು ರೇಂಜ್ ಛಾರ್ಜಿನಲ್ಲಿರುವ ಇನ್ಸ್‌ಪೆಕ್ಟರ್ರೇ ಆಗಲಿ ಯಾ ಅವರಿಂದ ಅಧಿಕಾರ ಪಡೆದ ಮತ್ಯಾವ ಆಫೀಸರರೇ ಆಗಲಿ ರಸೀತಿ ಕೊಟ್ಟಲ್ಲಿ ಅವರಿಗೆ ಕೊಡಲ್ಪಡತಕ್ಕದ್ದು.

(30) ಯಾವ ಮನುಷ್ಯನ ವಿಷಯದಲ್ಲಿ ಆದರೂ ಇಂಡಿಯನ್ ಪೀನಲ್ ಕೋಡ್ ರೀತ್ಯಾ ಯಾವದಾದರೂ ಕ್ರೂರವಾದ ಶಿಕ್ಷೆಗೆ ಧರ್ಯಾಫ್ತಿಯಾಗಿ ತಪ್ಪು ಸ್ಥಾಬೀತಾಗಿದ್ದಲ್ಲಿ, ಅಂಥಾವನನ್ನು ಸೇಂದಿಯನ್ನು ಇಳುಕುವದಕ್ಕಾದರೂ ಯಾ ಮಾರುವದಕ್ಕಾದರೂ ಡೆಪ್ಯುಟಿ ಕಮಿಷನರವರ ಅಪ್ಪಣೆ ಇಲ್ಲದೆ ನೇಮಿಸಿಕೊಳ್ಳಕೂಡದು.

(31) ಮದ್ರಾಸ್ ರಾಜ್ಯದಲ್ಲಿರುವ ಮರಗಳಿಂದ ಉತಾರಾಗುವ, ಆದರೆ ಮೈಸೂರು ದೇಶದಲ್ಲಿ ಉಪಯೋಗಿಸಲ್ಪಡುವ ಸೇಂದಿಗೋಸ್ಕರ ಪಾವತಿ ಆಗಬೇಕಾದ ಮರತೆರಿಗೆಯು ಮೈಸೂರು ಸರ್ಕಾರಕ್ಕೆ ಜಮೆ ಆಗತಕ್ಕದ್ದು. ಅಂಥಾ ವಿಷಯಗಳಲ್ಲಿ ಉಭಯ ಸರಹದ್ದುಗಳ ಪೈಕಿ ಯಾವ ಕಡೆಯಲ್ಲಿ ಅತ್ಯಂತ ಜಾಸ್ತಿ ದರವಿರುತ್ತೋ ಆ ದರದಂತೆಯೇ ಯಾವಾಗಲೂ ಮರತೆರಿಗೆಯು ಪಾವತಿ ಮಾಡಲ್ಪಡತಕ್ಕದ್ದು. ಮೈಸೂರು ದೇಶದ ಅಂಗಡಿಕಾರರು ಮದ್ರಾಸ್ ರಾಜ್ಯದಲ್ಲಿ ಯಾವ ಮರಗಳಿಂದ ಸೇಂದಿಯನ್ನು ಉತಾರ್ ಮಾಡಲಿಕ್ಕೆ ಲೈಸೆನ್ಸುಗಳನ್ನು ಪಡೆಯಬೇಕೆಂಬ ಉದ್ದೇಶದಿಂದ ಇರುವರೋ ಅಂಥಾ ಮರಗಳ ಬಾಬತ್ತು ಮರ ತೆರಿಗೆಯನ್ನು ಮೈಸೂರು ದೇಶದಲ್ಲಿ ಸಂಬಂಧಪಟ್ಟ ತಾಲ್ಲೂಕು ಅಮಲ್ದಾರರಿಗೆ ಒಂದೇ ಖಿಸ್ತಿನಲ್ಲಿ ಪಾವತಿಮಾಡತಕ್ಕದ್ದು. ಸದರೀ ಅಮಲ್ದಾರರು ವಿಧಾಯಕವಾದ ನಮೂನೆಯಲ್ಲಿ ಒಂದು ರಶೀತಿಯನ್ನು ಕೊಡಬೇಕಲ್ಲದೆ ಸದರೀ ದರಖಾಸ್ತುದಾರನು ಉತಾರ್ ಲೈಸೆನ್ಸುಗಳನ್ನು ಪಡೆಯಲಿಕ್ಕೆ ಹಕ್ಕುದಾರನಾಗಿರುತ್ತಾನೆಂದು ಆ ರಶೀತಿ ಕೆಳಗೆ ದೃಢಪಡಿಸಿ ರುಜು ಮಾಡಬೇಕು. ಸದರೀ ದರಖಾಸ್ತುದಾರನು ಮದ್ರಾಸ್ ಸರ್ಕಾರದ ಮರ ಕಟ್ಟುವ ನಿಬಂಧನೆಗಳ ಪ್ರಕಾರ ಬ್ರಿಟಿಷ್ ಸರ್ಕಾರದವರಿಗೆ ದರಖಾಸ್ತು ಮಾಡಿ ಸರಹದ್ದು ಪ್ರದೇಶದಲ್ಲಿ ಉತಾರ್ ಮಾಡಲ್ಪಟ್ಟ ಸೇಂದಿಯನ್ನು ಉದ್ದೇಶಿಸಲ್ಪಟ್ಟ ಅಂಗಡಿಗೆ ಯಾ ಕೋಠಿಗೆ ಮದರಾಸ್ ಸರ್ಕಾರದವರ ನಿಬಂಧನೆಗಳ ಪ್ರಕಾರ ಎಲ್ಲಾ ಕ್ರಮವನ್ನು ನಡಿಸಿದ ತರುವಾಯ ತೆಗದುಕೊಂಡು ಹೋಗಲಿಕ್ಕೆ ಮೈಸೂರು ದೇಶದ ಸಂಬಂಧಪಟ್ಟ ಇನ್ಸ್‌ಪೆಕ್ಟರವರಿಂದ ಪರ್ಮಿಟ್ ಯಾ ಪರವಾನೆಯನ್ನು ಪಡೆಯತಕ್ಕದ್ದು.

32. ಸೇಂದಿಯನ್ನು ತಯಾರು ಮಾಡುವದಕ್ಕಾಗಿ ಉತಾರ್ ಲೈಸೆನ್ಸನ್ನು ಪಡೆಯುವ ಪ್ರತಿ ಮನುಷ್ಯನು ಈಚಲು ಮರವನ್ನು ಕಟ್ಟುವಾಗ್ಯೆ ಈ ಕೆಳಗೆ ನಮೂದಾಗುವ ನಿಬಂಧನೆಗಳನ್ನು ಆಚರಿಸತಕ್ಕದ್ದು :—

(a) ಈಚಲು ಮರಗಳು ಕಸಬುದಾರರಿಂದಲೇ ಕಟ್ಟಲ್ಪಡತಕ್ಕದ್ದು.

(b) ಒಂದು ವರುಷದಲ್ಲಿ ಕಟ್ಟಿದ ಮರಗಳನ್ನು ವಾಡಿಕೆಯಾಗಿ ಮೂರನೇ ವರುಷದಲ್ಲಿ ಕಟ್ಟಕೂಡದು.

(c) ಮರಗಳಿಂದ ಸೇಂದಿಯನ್ನು ಮಿತಿಮೀರಿ ಉತಾರ್ಮಾಡಿ ಮರಗಳನ್ನು ಕೆಡಿಸಕೂಡದು.

(d) ಎಕ್ಸೈಜ್ ಕಮಿಷನರವರಿಂದ ವಿಶೇಷ ಅಪ್ಪಣೆ ಕೊಡಲ್ಪಟ್ಟಿರುವ ಸ್ಥಳಗಳಲ್ಲಿ ವಿನಹಾ ಯಾವ ಮರದಲ್ಲಾಗಲಿ ಪ್ರಥಮ ರೇವು ಭೂಮಿಯಿಂದ ಅದಕ್ಕೆ 3 ಅಡಿಗಿಂತ ಕಮ್ಮಿಯಾಗುವ ಸ್ಥಾನದಲ್ಲಿ ಮಾಡಲ್ಪಡಕೂಡದು.

(e) ರೇವಿನ ಆಳವೂ ಮತ್ತು ಅಗಲವೂ ಮರದ ಅಡ್ಡಳತೆಯ ಮೂರರಲ್ಲಿ ಒಂದು ಭಾಗಕ್ಕಿಂತ ಜಾಸ್ತಿಯಾಗಿರಕೂಡದು. ಮತ್ತು ಅದರ ಉದ್ದವು 8 ಅಂಗುಲಗಳಿಗಿಂತ ಜಾಸ್ತಿಯಾಗಿರಕೂಡದು.

(f) ವಿಶೇಷ ಅಪ್ಪಣೆಕೊಟ್ಟ ಪ್ರದೇಶದಲ್ಲಿ ವಿನಹಾ ಹೊಸದಾಗಿ ಮಾಡಲ್ಪಡುವ ಪ್ರತಿ ಒಂದು ರೇವು ಅದಕ್ಕೆ ಮುಂಚೆ ಮಾಡಲ್ಪಟ್ಟ ರೇವಿನ ಮೇಲುಗಡೆ ಒಂದು ಅಡಿಗಿಂತ ಕಮ್ಮಿಯಾಗಿರಕೂಡದು.

(g) ಮಧ್ಯದಲ್ಲಿ ಮೊಳೆಗಳೋಪಾದಿಯಲ್ಲಿರುವ ಸುಳಿಗಳ ಸಮುದಾಯವನ್ನು ಮುಟ್ಟಕೂಡದು. ಅವುಗಳ ಪಕ್ಕದ ಗರಿಗಳ ಪೈಕಿ ಎರಡು ವರಸೆಗಳಿಗೆ ಕಮ್ಮಿ ಇಲ್ಲದಂತೆ ಬಿಡತಕ್ಕದ್ದು. ಅಂದರೆ ಮಧ್ಯದ ಸುಳಿಗಳ ಬಾಜೂದಲ್ಲಿರುವ ಗರಿಗಳ ವರಸೆಗಳಿಂದ ರೇವಿನ ಮೇಲ್ಗಡೆವರಿಗೂ ಗರಿಗಳನ್ನು ಲೆಖ್ಖ ಮಾಡಿದರೆ ಎರಡು ವರಸೆಗಳಿಗೆ ಕಮ್ಮಿಯಾಗಿರಕೂಡದು; ಅಂದರೆ ರೇವಿನ ಮೇಲ್ಗಡೆಯಲ್ಲಿ ಮೊಳೆಗಳೋಪಾದಿಯಲ್ಲಿರುವ ಸುಳಿಗಳು ಶಿವಾಯಿ ರೇವು ತಯಾರ್ಮಾಡಲ್ಪಟ್ಟಿರುವ ಮುಂಭಾಗದಲ್ಲಿ ಎಂಟು ಗರಿಗಳಿಗಿಂತ ಕಮ್ಮಿಯಾಗಿ ಬಿಡಕೂಡದು.

(h) ಲೈಸೆನ್ಸದಾರನು ಲೈಸೆನ್ಸ್ ಕೊಡಲ್ಪಟ್ಟ ಮರಗಳನ್ನಾಗಲೀ ಅಥವಾ ಇತರ ಮರಗಳನ್ನಾಗಲೀ ಕುಯ್ಯಲೂ ಯಾ ಕೆಡಿಸಲೂ ಕೂಡದು, ಅಥವಾ ಕುಯ್ಯಲೂ ಯಾ ಕೆಡಿಸಲೂ ಅಪ್ಪಣೆ ಕೊಡಕೂಡದು.

(i) ಲೈಸೆನ್ಸದಾರನು ಅಥವಾ ಅವನ ಎಜಮಾನನು ತನ್ನ ಗುತ್ತಿಗೇ ಕಾಲದಲ್ಲಿ ಆಗಲಿ ಅಥವಾ ಪೂರೈಸಿದ 6 ತಿಂಗಳೊಳಗಾಗಲೀ ವಿಕ್ರಿಯಿಲ್ಲದೆ ಸೇಂದಿಯನ್ನು ಇಳಿಸಿದ್ದರಿಂದ ಯಾ ಅಜಾಗರೂಕತೆಯಿಂದ ಉತಾರ್ ಮಾಡಿದ್ದರಿಂದ ಒಣಗಿಹೋದ ಮರ

ಗಳು ಆತನಿಗೆ ಸಂಖ್ಯೆ ಹಾಕಿಕೊಡಲ್ಪಟ್ಟ ಒಟ್ಟು ಮರಗಳಲ್ಲಿ ಶೇಕಡ 3ಕ್ಕೆ ಅತಿಕ್ರಮಿಸಿದರೆ ಅಂಥಾ ಪ್ರತಿಯೊಂದು ಮರಕ್ಕೂ ಒಂದು ರೂಪಾಯಿನಂತೆ ಜುಲ್ಮಾನೆಯನ್ನು ಕೊಡಲು ಬದ್ಧನಾಗಿರುತ್ತಾನೆ.

(8) ಶೇಂದಿಯನ್ನು ಇಳಿಸುವ ಮರಗಳು ಇರತಕ್ಕ ಪ್ರತಿ ವನದಲ್ಲಿಯೂ ಎಕ್ಸೈಜ್ ಉದ್ಯೋಗಸ್ಥರು ಸಂಗತ್ಯಾನುಸಾರ ರೇವನ್ನು ಯಾ ಪಾಣೆಯನ್ನು ಅಜಮಾಯಿಷಿ ಮಾಡಲಿಕ್ಕೂ ಅಥವಾ ರೇವನ್ನು ಅಳತೆ ಮಾಡಲಿಕ್ಕೂ ಉತಾರ್‍ದಾರನು ಒಂದು ಏಣಿಯನ್ನು ಇಟ್ಟಿರತಕ್ಕದ್ದು.

(9) ಮೇಲೆ ನಮೂದಿಸಿರುವ ಕಾನೂನುಗಳು ಯಾ ಲೈಸೆನ್ಸ ಷರತ್ತುಗಳು ಲೈಸೆನ್ಸದಾರನಿಂದಾದರು ಅಥವಾ ಆತನ ಅಂತರ್‍ಯ ತಿಳುವಳಿಕೆ ಯಾ ಸಮ್ಮತಿಯಿಂದ ಆತನ ನಾಕರರಿಂದಲಾದರೂ ಉಲ್ಲಂಘಿಸಲ್ಪಟ್ಟರೆ, ಅಥವಾ ಲೈಸೆನ್ಸುದಾರನು ತನ್ನ ದುಕಾನುಗಳನ್ನು 1904ನೇ ಇಸವಿ ಜುಲೈ ಗುರ್ರ್ರಯಲ್ಲಿ ಇಡುವದಕ್ಕಾದರೂ ಯಾ ತನ್ನ ಕೆಲಸಗಳನ್ನು ಕ್ರಮವಾದ ಎಚ್ಚರಿಕೆಯೊಡನೆ ನಡಸುವದಕ್ಕಾದರೂ ಉದಾಸೀನ ಮಾಡಿದರೆ ಅಂಥಾ ಪ್ರತಿ ಒಂದು ಉಲ್ಲಂಘನೆ ಯಾ ಉದಾಸೀನದಬಗ್ಗೆ ಪ್ರತಿ ಲೈಸೆನ್ಸ್ ದಾರನಿಗೆ 50 ರೂಪಾಯಿಗಳಿಗೆ ಮೀರಿದ ಒಂದು ಜುಲ್ಮಾನೆಯನ್ನು ವಿಧಿಸುವ ಬಗ್ಗೆ ಡೆಪ್ಯುಟಿಕಮ್ಮಿಷನರವರಿಗೆ ನ್ಯಾಯವಾಗಿರತಕ್ಕದ್ದು, ಅಥವಾ ಡೆಪ್ಯುಟಿಕಮ್ಮಿಷನರವರ ಯುಕ್ತಾನುಸಾರ ಅವರಿಂದ ಇಡೋಣಾದ ಡಿಪಾಜಿಟ್ ಮೊಬಲಗನ್ನು ದಂಡವಾಗಿ ತೆಗದುಕೊಳ್ಳಲ್ಪಡಲಿಕ್ಕೂ, ಲೈಸೆನ್ಸನ್ನು ರದ್ದುಮಾಡಲಿಕ್ಕೂ ಲೈಸೆನ್ಸುದಾರನನ್ನು ನಷ್ಟಕ್ಕೆ ಗುರಿಮಾಡಿ ಒಟ್ಟು ಸ್ವಾತಂತ್ರ್ಯವನ್ನು ಮರಳಿ ಹರಾಜುಮಾಡಲಿಕ್ಕೂ, ಅಥವಾ ಇತರವಿಧವಾಗಿ ವಿಲೇವಾರಿಮಾಡಲಿಕ್ಕೂ ಅಥವಾ ಅದನ್ನು ಅಮಾನಿಯಲ್ಲಿ ಜರಗಿಸುವದಕ್ಕೂ ಅವರಿಗೆ ಯುಖ್ತ್ಯಾರು ಇರತಕ್ಕದ್ದು. ಒಂದು ಲೈಸೆನ್ಸು ರದ್ದುಮಾಡಲ್ಪಟ್ಟರೆ ಗುತ್ತಿಗೆಯ ಪೂರಾ ಕಾಲಕ್ಕೆ ಬರಬೇಕಾದ ತಮಾಮ್ ಮೊಬಲಗು ತಕ್ಷಣ ಪಾವತಿ ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು, ಮತ್ತು ಹಾಗೆ ಲೈಸೆನ್ಸು ರದ್ದು ಮಾಡಲ್ಪಟ್ಟದ್ದರಿಂದಲಾಗಲಿ ಮಾಲು ಹಕ್ಕನ್ನು ದುಸರಾ ಹರಾಜು ಅಥವಾ ಇತರ ವಿಧದಿಂದ ವಿಲೇವಾರಿ ಮಾಡುವದರಿಂದಲಾಗಲೀ ಸರ್ಕಾರಕ್ಕೆ ಉಂಟಾಗುವ ಎಲ್ಲಾ ನುಕ್ಸಾನುಗಳೂ ಲೈಸೆನ್ಸುದಾರನಿಂದ ಯಾ ಅವನ ಜಾಮೀನುದಾರನಿಂದ ಮೇಲ್ಕಂಡ ಪ್ರನೇಸ್ಯಾರಾ (8) ಕಲಂ ಅನುಸರಿಸಿ ಮರಳಿ ಹರಾಜಿಯಾಗಿ ವಿಧಿಸಿರುವಮೇರೆ ಭರ್ತಿ ಮಾಡಲ್ಪಡಬೇಕು. ಈ ರೀತಿ ವಸೂಲಾಗಬೇಕಾದ ತಮಾಮ್ ಮೊಬಲಗುಗಳು ಜಮೀನು ಕಂದಾಯದ ಬಾಕಿಯೋಪಾದಿಯಲ್ಲಿ ವಸೂಲ್ಮಾಡಲ್ಪಡತಕ್ಕದ್ದು.

(10) ಎಕ್ಸೈಜ್ ರೆಗ್ಯುಲೇಷನ್ ಯಾ ಓಪಿಯಮ್ ಆಕ್ಟಿಗೆ ವಿರೋಧವಾಗಿ ಯಾ ಹಾಲಿ ಜಾರಿಯಲ್ಲಿರುವ ಮತ್ಯಾವ ನಿಬಂಧನೆಗೆ ವಿರೋಧವಾಗಿ ನಡೆದ ಯಾವದಾದರೂ ತಕ್ಸೀರಿಗೆ ಲೈಸೆನ್ಸದಾರ ಮೇಜಿಸ್ಟ್ರೇಟರ ಮುಂದೆ ದರ್ಯಾಫ್ತಿಯಾಗಿ ತಪ್ಪು ಸಾಬೀತಾಗಿ ಡೆಪ್ಯುಟಿ ಕಮ್ಮಿಷನರವರಿಗೆ ಅವನು ಲೈಸೆನ್ಸುದಾರನಾಗಿರಲು ಯೋಗ್ಯನಲ್ಲನೆಂದು ಕಂಡುಬಂದಲ್ಲಿ ಆತನನ್ನು ನಷ್ಟಕ್ಕೆ ಗುರಿಮಾಡಿ ಆತನ ಲೈಸೆನ್ಸ್ ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಟ್ಟಂತೆ ಹುಕುಂ ಮಾಡುವದಕ್ಕೆ ಯಾ ಮಾರುವದಕ್ಕೆ ಯಾ ಅನ್ಯಥಾ ವಿಲೇವಾರಿ ಮಾಡಲಿಕ್ಕೆ ಡೆಪ್ಯುಟಿ ಕಮ್ಮಿಷನರವರಿಗೆ ನ್ಯಾಯವಾಗಿರತಕ್ಕದ್ದು.

(11) ಲೈಸೆನ್ಸದಾರನಿಂದ ಬರಬೇಕಾದ ಮೊಬಲಗುಗಳೆಲ್ಲಾ ಠೇವಣಿ ಮೊಬಲಗಿನಲ್ಲಿ ವಜಾಮಾಡಲ್ಪಡಬಹುದು; ಅಥವಾ ಜಮೀನು ಕಂದಾಯದ ಬಾಕಿಗಳನ್ನು ವಸೂಲ್ಮಾಡಲು ಹಾಲಿ ಜಾರೀಲಿರತಕ್ಕ ಕಾನೂನು ಪ್ರಕಾರ ಯಾ ಆತನ ಜಾಮೀನುದಾರ್ರ ಆಸ್ತಿಯನ್ನು ಜಪ್ತಿ ಹರಾಜು ಮಾಡುವದರಮೂಲಕ ವಸೂಲ್ಮಾಡಲ್ಪಡಬಹುದು.

(12) ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುಲ್ಮಾನೆ ವಿಧಿಸೋಣ, ಠೇವಣಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳೋಣ, ಲೈಸೆನ್ಸು ರದ್ದುಮಾಡೋಣ, ಈ ಸಂದರ್ಭಗಳು ಹಾಲಿ ಜಾರೀಲಿರುವ ಕಾನೂನು ಪ್ರಕಾರ ಶಿಕ್ಷಿಸಲ್ಪಡತಕ್ಕ ಯಾವ ತಪ್ಪಿಗಾದರೂ ಲೈಸೆನ್ಸದಾರನನ್ನಾಗಲೀ ಯಾ ಆತನ ಏಜಂಟನ್ನಾಗಲೀ ಯಾ ಆತನ ನಾಕರರನ್ನಾಗಲೀ ಆಪಾದಿಸಿ ದರ್ಯಾಫ್ತಿ ಕ್ರಮ ನಡಿಸಲು ಆತಂಕಪಡಿಸುವದೆಂದು ಭಾವಿಸಲ್ಪಡಕೂಡದು.

ಟಿಪ್ಪಣಿ:—ಬಾರಿಬಾರಿಗೂ ಲೈಸೆನ್ಸಿನ ಷರತ್ತುಗಳಿಗೆ ವಿರೋಧವಾಗಿ ನಡೆಸಿದ ತಪ್ಪುಗಳಿಗೆ ಬಾರಿಬಾರಿಗೂ ಜುಲ್ಮಾನೆ ಹಾಕಲ್ಪಡತಕ್ಕದ್ದು.

ತಾರೀಖು 7ನೆ ಏಪ್ರಿಲ್ 1904.

ನಂ. 662—ಎಕ್ಸೈ. ಫೈ. 15–93, ಮೈಸೂರು ಸರ್ವಿಸ್ ರೆಗ್ಯುಲೇಷನ್‍ಗಳ 165 ಎ. ನೇ ಆರ್ಟಿಕಲ್ ಅನುಸರಿಸಿ, ಡೆಪ್ಯುಟಿ ಎಕ್ಸೈಜ್ ಕಮಿಷನರಾದ ಮೆ|| ಡಬ್ಲ್ಯು. ವಿ. ದೇವಯ್ಯನವರಿಗೆ 1904ನೆ ಏಪ್ರಿಲ್ 14ನೆ ತಾರೀಖಿನ ಲಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಸ್ವಂತ ಕೆಲಸಗಳ ಮೇಲೆ 3 ತಿಂಗಳುಗಳ ರಜಾದೊಂದಿಗೆ ಸೇರಿದ 3 ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಸನ್ 1904ನೆ ಮಾರ್ಚಿ 30ನೆ ಮುರ್ಕ್ಕಂ ರೆ. 2966ನೆ ನಂಬರ್ ಇಸ್ತಿಹಾರ್‍ನಾಮೆಯನ್ನು ಬದಲಾಯಿಸೋಣದರಲ್ಲಿ ಎಕ್ಸೈಜ್ ಅಸಿಸ್ಟೆಂಟ್ ಕಮಿಷನರಾದ ಮೆ|| ಬಿ. ರಾಮಕೃಷ್ಣರಾಯರು, ಮೆ|| ದೇವಯ್ಯನವರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಎಕ್ಸೈಜ್ ಇಲಾಖೆಯಲ್ಲಿ ಕೆಲಸಕ್ಕೋಸ್ಕರ ವರ್ಗ ಮಾಡಲ್ಪಟ್ಟಿರುತ್ತಾರೆ.

ತಾರೀಖು 8ನೆ ಏಪ್ರಿಲ್ 1904.

ನಂ. ರೆ. 3078, ಮೆ|| ವಿ. ಪಿ. ಮಾಧವರಾವ್, ಬಿ. ಎ., ಸಿ. ಐ. ಇ., ಯವರು ಮೈಸೂರು ಸೀಮೆಯ ರೆವಿನ್ಯೂ ಕಮಿಷನರವರ ಆಫೀಸಿನ ಚಾರ್ಜನ್ನು 1904ನೆ ಮಾರ್ಚಿ 12ನೆ ತಾರೀಖಿನ ಪೂರ್ವಾಹ್ನದಲ್ಲಿ ಅಸಿಸ್ಟೆಂಟ್ ಕಮಿಷನರಾದ ಮೆ|| ಕೆ. ಚ್ಯಾಂಡಿ, ಬಿ. ಎ., ಯವರಿಗೆ ಒಪ್ಪಿಸಿರುತ್ತಾರೆ.

ತಾರೀಖು 8ನೆ ಏಪ್ರೆಲ್ 1904.

ನಂ. ರ. 3080, ಮೆ|| ವಿ. ಪಿ. ಮಾಧವರಾವ್, ಬಿ. ಎ., ಸಿ. ಐ. ಇ., ಯವರು ಕೌನ್ಸಿಲರಾದ ತಮ್ಮ ಕೆಲಸಗಳ ಚಾರ್ಜನ್ನು 1904ನೆ ಮಾರ್ಚಿ 12ನೆ ತಾರೀಖಿನ ಮಧ್ಯಾಹ್ನಾತ್ಪರ ರಾವ್ ಬಹದೂರ್ ಮೆ|| ಪಿ. ಮಾಧವಯ್ಯನವರಿಗೆ ಒಪ್ಪಿಸಿರುತ್ತಾರೆ.

ತಾರೀಖು 9ನೆ ಏಪ್ರೆಲ್ 1904.

ನಂ. ರ. 3092—ರೆ. ಫೈ. 23—1903, ವ್ಯವಸಾಯ ಸಂಬಂಧಪಟ್ಟ ರಸಾಯನ ಶಾಸ್ತ್ರಜ್ಞರಾದ ಡಾಕ್ಟರ್ ಎ. ಲೇಮ್ಯಾನ್ ಯವರು ತಮ್ಮ ಆಫೀಸಿನ ಚಾರ್ಜನ್ನು 1904ನೆ ಮಾರ್ಚಿ 16ನೆ ತಾರೀಖಿನ ಮಧ್ಯಾಹ್ನಾತ್ಪರ ಸಂಸ್ಥಾನದ ಎರಡನೇ ಭೂಗರ್ಭಶಾಸ್ತ್ರಜ್ಞರಾದ ಮೆ|| ಇ. ಡಬ್ಲ್ಯೂ. ವೆದರಲ್ ಯವರಿಗೆ ಒಪ್ಪಿಸಿರುತ್ತಾರೆ.

ತಾರೀಖು 9ನೆ ಏಪ್ರೆಲ್ 1904.

ನಂ. ರ. 3100, ಮೈಸೂರು ಸರ್ವಿಸ್ ರೆಗ್ಯುಲೇಷನ್ಗಳ 188ನೆ ಆರ್ಟಿಕಲ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟ್ ಮಾಲೂರು ತಾಲ್ಲೂಕಿನ ಅಮಲ್ದಾರ್ರಾದ ಮೆ|| ಸಿ. ನಾರಾಯಣನವರಿಗೆ ಮಾರ್ಚಿ ಮಾಹೆ 15ನೆ ತಾರೀಖಿನ ಲಾಗಾಯ್ತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ 2 ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

2. ಹಾಲಿ ರಜಾದಲ್ಲಿರುವ ಅಮ್ಲದಾರ್ರಾದ ಮೆ|| ಅಬ್ದುಲ್ ಜಲೀಲ್ ಯವರು, ಮೆ|| ನಾರಾಯಣನವರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಮಾಲೂರು ತಾಲ್ಲೂಕಿಗೆ ಹಂಗಾಮಿ ತರೀಕಾ ನೇಮಿಸಲ್ಪಟ್ಟಿರುತ್ತಾರೆ.

ತಾರೀಖು 13ನೆ ಏಪ್ರೆಲ್ 194.

ನಂ. ಫೈ. 2820, ಅಸಿಸ್ಟೆಂಟ್ ಕಮಿಷನರಾದ ಮೆ|| ಬಿ. ರಾಮಸ್ವಾಮಯ್ಯನವರು ಬೇರೆ ಕೆಲಸದಲ್ಲಿರುವದ್ದರಿಂದ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಹಾಸನದ ಸಬ್ ಜಡ್ಜಿರಾದ ಮೆ|| ಸಿ. ಬಿ. ಶೇಷಗಿರಿರಾಯರು, ಸಿವಿಲ್ ಕೋರ್ಟುಗಳ ರಜಾಕಾಲದಲ್ಲಿ, ಹಾಸನದ ಡಿಸ್ಟ್ರಿಕ್ಟ್ ಟ್ರೆಜರಿಯ ಚಾರ್ಜನಲ್ಲಿರತಕ್ಕದ್ದು.

ಹುಕುಂ ಬಮೋಜಿಬ್,

ಎಲ್. ಅನಂತಸ್ವಾಮಿರಾವ್,

ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್ಮೆಂಟ್ ಅಫಿಷಿಯೇಟಿಂಗ್ ಸೆಕ್ರೆಟರಿ.

ಫಾರೆಸ್ಟ್.

ಇಸ್ತಿಹಾರ್ನಾಮೆ.

ತಾರೀಖು 26ನೆ ಮಾರ್ಚಿ 1904.

ನಂ. 746—7899, ಸಗ 1900ನೆ ಇಸವಿ XIನೆ ನಂಬರ್ ಮೈಸೂರ ಫಾರೆಸ್ಟ್ ರೆಗ್ಯುಲೇಷನಿನ 76ನೆ ಸೆಕ್ಷನ್ ನಿಯಮಗಳನುಸರಿಸಿ ಶ್ರೀಮನ್ ಮಹಾರಾಜಾ ಸರ್ಕಾರದವರು ಇದರಡಿ ಕಂಡ ಆಫೀಸರುಗಳಿಗೆ ಅವರವರ ಹೆಸರುಗಳಿಗೆದುರಾಗಿ ನಮೂದಿಸಲ್ಪಟ್ಟ ಅಧಿಕಾರಗಳನ್ನು ಕೊಟ್ಟಿರುತ್ತಾರೆ:—

ಸಗ 1901ನೆ ಜನವರಿ 21ನೆ ಮುರ್ಸ್ಸಲಾ 460—ಫಾ. ಫೈ. 15—1900ನೆ ನಂಬರ್ ಇಸ್ತಿಹಾರ್ನಾಮೆಯ IIIನೆ ಕ್ಲಾಸನ್ನು ನೋಡತಕ್ಕದ್ದು.

ಆಫೀಸರುಗಳ ಹೆಸರು.	ಹುದ್ದೆ.	ರೆಗ್ಯುಲೇಷನಿನ ಸೆಕ್ಷನ್.	ಅಧಿಕಾರಗಳ ಸ್ವಭಾವ.
ಮೆ|| ಜೆ. ಜೆ. ಮಾರ್ಟೀರೊಯವರು	ಫಾರೆಸ್ಟ್ ಅಸಿಸ್ಟೆಂಟ್ ಕನ್ಸರವೇಟರ್.	26 C.	ಸ್ಟೇಟ್ ಫಾರೆಸ್ಟಿನಲ್ಲಿ ಕೃತ್ಯಗಳನ್ನು ನಡೆಸಲು ಅಪ್ಪಣೆ ಕೊಡುವದಕ್ಕೆ ಅಧಿಕಾರ
,, ಹೆಚ್. ಶ್ರೀನಿವಾಸರಾಯರು ...	ಡಿಟೋ	53	ಜಫ್ತಿ ಮಾಡಲ್ಪಟ್ಟ ಸೊತ್ತನ್ನು ಖುಲಾಸೆ ವಗೈರೆ ಮಾಡಲು ಹುಕುಂ ಮಾಡುವದಕ್ಕೆ ಅಧಿಕಾರ
		59	ತಕ್ಸೀರುಗಳನ್ನು ರಾಜಿಯಿಂದ ವ್ಯವಸ್ಥೆ ಮಾಡಲು ಅಧಿಕಾರ
,, ಹೆಚ್. ರಾಮಯ್ಯನವರು ..	ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕನ್ಸರ್ವೇಟರ್.	65	(1) (a) ಯಾವ ಜಮೀನಿನಲ್ಲಾದರೂ ಪ್ರವೇಶಿಸಿ ಅದನ್ನು ಸರ್ವೆ ಮೊದಲಾದವುಗಳನ್ನು ಮಾಡಲು ಅಧಿಕಾರ.
,, ವಿ. ನರಸಿಹ್ಮಮೂರ್ತಿರಾಯರು.	ಡಿಟೋ	65.	(1) (b). ಸಾಕ್ಷಿಗಳ ಹಾಜರಿಯನ್ನು ಬಲಾತ್ಕರಿಸುವದಕ್ಕೆ ಸಿವಿಲ್ ಕೋರ್ಟಿನ ಅಧಿಕಾರ
,, ಕೆ. ಮುತ್ತಯ್ಯನವರು ...	ಡಿಟೋ	65	(1) (d) ಫಾರೆಸ್ಟ್ ತಕ್ಸೀರುಗಳನ್ನು ವಿಚಾರಣೆ ಮಾಡಿ ಸಾಕ್ಷ್ಯವನ್ನು ಬರಮಾಡಿಕೊಂಡು ರಿಕಾರ್ಡು ಮಾಡಲು ಅಧಿಕಾರ

ತಾರೀಖು 7ನೆ ಏಪ್ರೈಲ್ 1904.

ನಂ. 761—8260, ಮೈಸೂರ ಸರ್ವಿಸ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟಿನ ಸಬ್ ಅಸಿಸ್ಟೆಂಟ್ ಕನ್ಸರ್ವೇಟರರಾದ ಮೆ|| ಕೆ. ಮುತ್ತಯ್ಯನವರಿಗೆ 1904ನೆ ಏಪ್ರೈಲ್ ಗುರ್ರ್ರೆ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಹುಕುಂ ಬಮೋಜೀಬ್,

ಎಂ. ಮುತ್ತಣ್ಣ,

ಫಾರೆಸ್ಟು ಇಲಾಖಾ ಗವರ್ನ್ಮೆಂಟ್ ಆಫಿಷಿಯೇಟಿಂಗ ಸೆಕ್ರೆಟೆರಿ.

ಪಬ್ಲಿಕ್ ವರ್ಕ್ಸ.

ಇಸ್ತಿಹಾರ್ನಾಮಾ.

ತಾರೀಖು 7ನೆ ಏಪ್ರೈಲ್ 1904.

ನಂ. 380—2144, ತುಮಕೂರ ಡಿವೀಜನಿಗೆ ಸೇರಿದ ಅಸಿಸ್ಟೆಂಟ್ ಇಂಜನಿಯರ ಮೆ|| ಎಚ್. ಡಿ. ರೈಸ ಯವರಿಗೆ ಮಾಹೆ ಮಜಕೂರು 11ನೆ ತಾರೀಖಿನ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 7ನೆ ಏಪ್ರೈಲ್ 1904.

ನಂ. 383—2154, ಕೊಪ್ಪ ರೇಂಜಿನ ಅಸಿಸ್ಟೆಂಟ್ ಇಂಜನಿಯರರಾದ ಮೆ|| ಬಿ. ಬಿ. ಗರುಡಾಚಾರ್ಯ, ಎಲ್. ಸಿ. ಇ., ಯವರಿಗೆ ಮಾಹೆ ಮಜಕೂರು 20ನೆ ತಾರೀಖಿನ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 10 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 9ನೆ ಏಪ್ರೈಲ್ 1904.

ನಂ. 388—2198, ಶಿವಮೊಗ್ಗ ಡಿವೀಜನಿನ ಆಫಿಷಿಯೇಟಿಂಗ್ ಎಕ್ಸಿಕ್ಯೂಟಿವ ಇಂಜನಿಯರರಾದ ಮೆ|| ಕೆ. ಪ್ರಹ್ಲಾದರಾಯರಿಗೆ, 1903ನೆ ಡಿಸೆಂಬರ 31ನೆ ಮುರ್ರ್ಸಂ 1413—7303ನೆ ನಂಬರ್ ಈ ಆಫೀಸಿನ ಇಸ್ತಿಹಾರ್ನಾಮೆಯಲ್ಲಿ 1903ನೆ ಅಕ್ಟೋಬರ 2ನೆ ತಾರೀಖಿನಾರಭ್ಯ ಕೊಟ್ಟಿದ್ದ 2 ತಿಂಗಳು 21 ದಿನಗಳ ಪ್ರಿವಿಲೇಜ್ ರಜಾ ಮತ್ತು 3 ತಿಂಗಳು 10 ದಿನಗಳ ಫರ್ಲೋ ರಜಾ ಸೇರಿದ 6 ತಿಂಗಳ ರಜಾ ದೊಂದಿಗೆ, 6 ತಿಂಗಳುಗಳ ಫರ್ಲೋ ರಜಾ ಕೊಡಲ್ಪಟ್ಟಿರುತ್ತದೆ.

ಹುಕುಂ ಬಮೋಜೀಬ್,

ಡಬ್ಲ್ಯು. ಎಸ್. ಟ್ರೇಲ್, ಕ್ಯಾಪ್ಟನ್, ಆರ್. ಇ.,

ಪಬ್ಲಿಕ ವರ್ಕ್ಸ ಇಲಾಖೆಯ ಮೈಸೂರ ಗವರ್ನ್ಮೆಂಟ್ ಅಂಡರ ಸೆಕ್ರೆಟರಿ.

ಮುಜರೈ.

ಇಸ್ತಿಹಾರ್ನಾಮಾ.

ತಾರೀಖು 11ನೆ ಏಪ್ರೈಲ್ 1904.

ನಂ. 3174—ಮುಜ. ಫೈ. 53-02, ಕಾಲಾತಿಕ್ರಮಣ ಯಾ ಇತರ ಕಾರಣಗಳಿಂದ ತೆಗೆದುಹಾಕಲ್ಪಟ್ಟವರಿಗೆ ಬದಲಾಗಿ ಇದರಡೀ ಕಂಡ ಜನಗಳು ನಾಗಮಂಗಲ ತಾಲ್ಲೂಕಿನ ಕೋಟೆ ಬೆಟ್ಟದಲ್ಲಿರುವ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ ಕೆಲಸಗಳನ್ನು ಮೇಲ್ವಿಚಾರಣೆ ಮಾಡುವ ಬಗ್ಗೆ ಧರ್ಮದರ್ಶಿಗಳಾಗಿ ನೌಕರರ್ರ್ಮಾಡಲ್ಪಟ್ಟಿರುತ್ತಾರೆ:—

ಮಾ|| ರಾ|| ರಾ|| ಕೋಟೆರಾಯರು.
,, ಲಕ್ಷ್ಮಣರಾಯರು.
,, ಕೆಂಗೋಟೆಯವರು.

ಹುಕುಂ ಬಮೋಜೀಬ್,

ಎಂ. ಶಾಮರಾವ್,

ಮುಜರೈ ಇಲಾಖೆಯ ಆಫಿಷಿಯೇಟಿಂಗ್ ಸೆಕ್ರೆಟೆರಿ.

ಮಿಲಿಟೆರಿ.

ಇಸ್ತಿಹಾರ್ನಾಮೆ.

ತಾರೀಖು 12ನೆ ಏಪ್ರೈಲ್ 1904.

ನಂ. 3187—9, ಮೈಸೂರು ಪೈದಲ್ ಫೌಜು 3ನೆ ಪಟಾಲಮಿನ ಜಮೇದಾರ್ ಅಬ್ದುಲ್ ಅಜೀಜ್‌ಖಾನರವರು 1904ನೆ ಫೆಬ್ರುವರಿ 29ನೆ ತಾರೀಖಿನಾರಭ್ಯ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಡಲು ಅಪ್ಪಣೆ ಕೊಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜೀಬ್,

ಆರ್. ಜೆ. ಜೋನ್ಸ್,

ಲೆಫ್ಟಿನೆಂಟ್ ಕರ್ನಲ್, ಮಿಲಿಟೆರಿ ಅಸಿಸ್ಟೆಂಟ್.

ಮೈಸೂರ್ ಗೆಜೆಟ್.

ಸಂ. 39.] ಸರ್ಕಾರದಿಂದ ಛಾಪಿಸ್ ಆದ್ದು. [ನಂ. 15.

ಬೆಂಗಳೂರು, ಗುರುವಾರ, ಏಪ್ರಿಲ್ ತಾ|| 14, ಸನ್ 1904.

IIನೆ ಭಾಗ.

ಇಂಡ್ಯಾ ಗವರ್ನ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜಿಯರು ವಗೈರೆಯರಿಂದ ಹೊರಡೋಣಾದ ಇಸ್ತಿಹಾರ್ ನಾಮೆಗಳು.

ಎಕ್ಸೈಜ್ ಇಲಾಖೆ.

1904–1905ನೆ ವರುಷಕ್ಕಾಗಿ ಬೆಂಗಳೂರು ಸಿಟಿಯಲ್ಲಿಯೂ ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿಯೂ ಇರತಕ್ಕ ಬೀರು ಅಂಗಡಿಗಳ ಹರಾಜು ನೋಟಿಸ.

ನಂ. ತಾರೀಖು 1904.

1. ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿರತಕ್ಕ ಇದಕ್ಕೆ ಲಗತ್ತು ಮಾಡಿರುವ ಪಟ್ಟಿಯಲ್ಲಿ ನಮೂದು ಮಾಡಿರುವ ಅಂಗಡಿಗಳಲ್ಲಿ ಬೀರು ಯಾ ಪೋರ್ಟರನ್ನು 1904ನೆ ಇಸವಿ ಜುಲೈ ಗುರ್ರೆ ತಾರೀಖಿಗೆ ಪ್ರಾರಂಭವಾಗಿ 1905ನೆ ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12 ತಿಂಗಳ ಕಾಲಕ್ಕಾಗಿ ಬಿಕರೀ ಮಾಡತಕ್ಕ ಬಟ್ಟು ಸ್ವತಂತ್ರದ ಹಕ್ಕನ್ನು ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಅಥವಾ ಅವರಿಂದ ಅಧಿಕಾರ ಹೊಂದಿದ ಇತರ ಆಫಿಸರರು ಸದರಿ ಪಟ್ಟಿಯಲ್ಲಿ ನಮೂದುಮಾಡಿರುವ ಸ್ಥಳಗಳಲ್ಲಿ ಮತ್ತು ತಾರೀಖುಗಳಲ್ಲಿ ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ.

2. ಸದರಿ ಸ್ವತಂತ್ರ ಹಕ್ಕು ಬೌರಿಂಗ್‌ಪೇಟೆ ಮತ್ತು ಕೋಲಾರ್ ಚಿನ್ನದಗಣಿಗಳಲ್ಲಿನ ಅಂಗಡಿಯಲ್ಲಿ ಬಿಕರಿ ಆಗುವ ಬೀರು ಯಾ ಪೋರ್ಟರಿನ ಪೀಪಾಯಿ 1ಕ್ಕೆ 35 ರೂಪಾಯಿ ಮೇರೆಗೂ ಬೆಂಗಳೂರು ಸಿಟಿ ಅಂಗಡಿಗಳಲ್ಲಿ ಬಿಕರಿ ಆಗುವುದಕ್ಕೆ ಎ|| ಕ|| ಸಾ|| ರವರ ಮಂಜೂರಾತಿ ಮೇರೆಗೆ ಹರಾಜು ನಡೆಸುವ ಆಫಿಸರರು ಗೊತ್ತು ಮಾಡುವ ಮೊಬಲಗನ್ನು ಸರ್ಕಾರದ ಸವಾಲು ಎಂದು ಇಟ್ಟುಕೊಂಡು ಹರಾಜು ಹಾಕಲ್ಪಡುತ್ತೆ.

3. ಬೀರು ಕಾಯಿಸುವ ಭಟ್ಟೀದಾರು ಅಂಗಡಿಗಳಿಗೆ ಸವಾಲು ಮಾಡಬಹುದು.

4. ಹರಾಜಿನಲ್ಲಿ ಪ್ರತಿ ಸವಾಲ್ದಾರನೂ ಸವಾಲು ಮಾಡುವದಕ್ಕೆ ಮುಂಚಿತವಾಗಿ ಬೌರಿಂಗ್‌ಪೇಟೆ ತಾಲ್ಲೂಕಿನ ಅಂಗಡಿಗಳಿಗೆ 250 ರೂಪಾಯಿ, ಬೆಂಗಳೂರು ಸಿಟಿ ಅಂಗಡಿಗಳಿಗೆ 100 ರೂಪಾಯಿ ಯಾ ಹರಾಜು ಮಾಡತಕ್ಕ ಆಫಿಸರರು ಗೊತ್ತು ಮಾಡುವ ಬೇರೆ ಇತರ ನ್ಯಾಯವಾದ ಮೊಬಲಗನ್ನು ಠೇವಣಾತಿ ಇಡತಕ್ಕದ್ದು. ಪೀಪಾಯಿ 1ಕ್ಕೆ ಪ್ರತಿ ಒಂದು ಅಂಗಡಿಯು ಅಂಗೀಕರಿಸಲ್ಪಟ್ಟ ಥಡ ಸವಾಲ್ದಾರನಿಗೆ ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತದೆ. ಡೆಪ್ಯುಟಿ ಕಮಿಷನರವರು ಸದರೀ ದರಖಾಸ್ತನ್ನ ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳು ಉದಹರಿಸದೇ ಮಂಜೂರು ಯಾ ತಳ್ಳುಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತನ್ನ ಗವರ್ನಮೆಂಟಿನವರು ತಿದ್ದುಪಡಿ ಮಾಡದೇ ಇರುವ ಪಕ್ಷದಲ್ಲಿ ಅಂಗೀಕರಿಸಿದಂತೆ ಭಾವಿಸತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು. ಅಥವಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದು ಇರುವ ಅವರ ತರಫ್ ಮುತಾಲೀಕರನ್ನ ಕಳುಹಿಸಬೇಕು.

5. ಹರಾಜು ಪೂರೈಸಿದ ಕೂಡಲೆ ನಾ ಮಂಜೂರಾದ ಸವಾಲ್ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡದೆ ಇರುವ ಪಕ್ಷಕ್ಕೆ ಅವರುಗಳಿಗೆ ವಾಪಸು ಮಾಡಲ್ಪಡುತ್ತವೆ.

6. ಯಾರ ಹೆಸರಿಗೆ ಹರಾಜಿನಲ್ಲಿ ಈ ಅಂಗಡಿಗಳು ಮಂಜೂರಾಗುತ್ತವೋ ಅವರು ಹರಾಜು ಮಂಜೂರಾದ್ದನ್ನು ಅವರಿಗೆ ತಿಳಿಸಲು ಅನುಕೂಲವಾಗುವಂತೆ ಅವರ ವಿಳಾಸವನ್ನು ಹರಾಜು ನಡೆಸತಕ್ಕ ಆಫೀಸರ್ರವರಲ್ಲಿ ಕೊಡತಕ್ಕದ್ದು. ಮತ್ತು 7 ದಿನಗಳೊಳಗಾಗಿ ಸದರೀ ನೋಟೀಸು ಅವರಿಗೆ ಖುದ್ದಾಗಿ ಅಥವಾ ಸದರೀ ವಿಳಾಸದ ಸ್ಥಳದಲ್ಲಿರುವ ವಯಸ್ಸಾದ ಕುಟುಂಬಕ್ಕೆ ಸಂಬಂಧಪಟ್ಟ ಗಂಡಸಿಗೆ ಆಗಲೀ ಜಾರಿಯಾದ ನಂತರ, ಯಾ ಸದರೀ ಮನೆಗೆ ಅಂಟಿಸಿದ ನಂತರ ಯಾ ರಿಜಿಸ್ಟರ್ಡ್ ಪೋಸ್ಟು ಮೂಲಕ ಕಳುಹಿಸಿದ ತರುವಾಯ ಹರಾಜಿನಲ್ಲಿ ಬಿಡಲ್ಪಡುವ ಪ್ರತಿ ಒಂದು ಅಂಗಡಿಗೆ ಒಟ್ಟು 500 ರೂಪಾಯಿಗಳಿಗೆ ಸರಿಯಾಗುವ ಹಾಗೆ ಯಾ ಪ್ರತಿ ಒಂದು ಅಂಗಡಿಯು ಬೆಲೆಗನುಸಾರವಾಗಿ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಂದ ಗೊತ್ತು ಮಾಡಲ್ಪಡಬಹುದಾದ ಯುಕ್ತವಾದ ಇತರ ಮೊಬಲಗಿಗೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನು ಅವರ ಮೊದಲನೇ ಠೇವಣಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನು ಠೇವಣಿ ಕಟ್ಟಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸುಗಳನ್ನು ಪಡಿಯತಕ್ಕದ್ದು, ಮತ್ತು ಎದುರು ಒಡಂಬಡಿಕೆಗಳನ್ನು ಬರೆದು ಕೊಡತಕ್ಕದ್ದು. ಈರೀತಿಯಲಿ ಠೇವಣಿ ಇಡುವದಕ್ಕೆ ಯಾ ಲೈಸೆನ್ಸ್ ಪಡೆಯಲಿಕ್ಕೆ ಯಾ ಎದುರು ಒಡಂಬಡಿಕೆಯನ್ನು ಬರೆದುಕೊಡಲಿಕ್ಕೆ ತಪ್ಪಿದರೆ ಸದರೀ ಅಂಗಡಿಯು ಹಾಗೆ ತಪ್ಪಿದ ಮನುಷ್ಯನ ಜವಾಬ್ದಾರೀಮೇಲೆ ಪುನಃ ಹರಾಜು ಮಾಡಲ್ಪಡುತ್ತೆ. ಅಥವಾ ಈ ಇಸ್ತಿಹಾರಿನಲ್ಲಿ ಕಂಡ ಹರಾಜು ಮೊದಲೇ ಪೂರೈಸಿ ಹೋಗಿರುವ ಪಕ್ಷಕ್ಕೆ ಡೆಪ್ಯುಟಿ ಕಮ್ಮಿಷನರವರು ಅವರಿಗೆ ಯುಕ್ತ ತೋರುವಂತೆ ಬೇರೆ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ. ಹರಾಜು ಮಂಜೂರಾದ ನಂತರ ಕೊಂಡುಕೊಂಡವನು ಮೃತಪಟ್ಟರೆ ಜವಾಬ್ದಾರಿಯು ಆತನ ವಾರಸುದಾರರು ಅಥವಾ ಆತನಿಂದ ವರ್ಗ ಪಡೆದವರನ್ನು ಹೊಂದಿರುತ್ತೆ.

7. ಮೇಲಿನ 6ನೇ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಹರಾಜುಗಳ ಷರತ್ತಿಗೆ ತಪ್ಪಿದ ಖರೀದಸ್ತುದಾರನ ಜವಾಬ್ದಾರೀಮೇಲೆ ನಡಿಯತಕ್ಕದ್ದು. ಇದರಿಂದ ಆತನು ಆದಾಯವನ್ನೆಲ್ಲಾ ಕಳೆದುಕೊಂಡವನಾಗುತ್ತಾನೆ. ಮತ್ತು ದುಸರೇ ಹರಾಜು ಅಥವಾ ಇತರೇವಿಧವಾದ ವಿಲೇವಾರಿ ಮಾಡುವಲ್ಲಿ ನಷ್ಟಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೇ ಹರಾಜಿನಲ್ಲಿ ಅಥವಾ ಇತರೇ ವಿಧವಾಗಿ ವಿಲೇವಾರಿ ಆದದ್ದಲ್ಲಿ ಹೊಸ ಸವಾಲ್ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾಬಾಕಿ ಉಳಿಯುವದರನ್ನು ಆತನು ಭರ್ತಿಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಠೇವಣಿ ಮೊಬಲಗುಗಳನ್ನು ವಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನು ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡೋಣಾಗುತ್ತೆ. ಆದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಸದರೀ ಠೇವಣಿ ಮೊಬಲಗು ದುಸರೇ ಹರಾಜಿನಲ್ಲಿ ಸಂಭವಿಸುವ ಅಥವಾ ಇತರೇವಿಧವಾದ ವಿಲೇವಾರಿಯಿಂದ ಆಗುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಆ ಠೇವಣಿ ಮೊಬಲಗನ್ನೆಲ್ಲಾ ಸರಕಾರಕ್ಕೇನೆ ಜಮಾ ಮಾಡಿಕೊಳ್ಳತಕ್ಕದ್ದು :-

8. ಮೇಲಿನ 6ನೆ ಕಲಂನಲ್ಲಿ ಕಂಡ ಮೇರೆಗೆ ಹೊಂದಬೇಕಾದ ಲೈಸೆನ್ಸು ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು :—

(1) ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು ನೀಲಗಿರಿಯಲ್ಲಿ ಸರಕಾರದಿಂದ ಮಂಜೂರ್ಮಾಡಲ್ಪಡಬಹುದಾದ ಬ್ರೂಯರಿಗಳಲ್ಲಿಯಾಗಲಿ ಅಥವಾ ಕಿರ್ಕಿಯಲ್ಲಿ ಡಿಂಷಾ ಅಂಡ್ ಕೋ ಯವರಿಂದ ಕಾಯಿಸಲ್ಪಟ್ಟ ಅಥವಾ ಬೆಂಗಳೂರು ಪಿ. ಸಾಂ ಮತ್ತು ಗಂಗಾಧರಶೆಟ್ಟಿ ಅಂಡ್ ಕೋ ಯವರಿಂದ ಯಾ ಸರ್ಕಾರದಿಂದ ಮಂಜೂರ್ಮಾಡಲ್ಪಡಬಹುದಾದ ಇತರ ಯಾವ ಬ್ರೂಯರಿಯಲ್ಲಿಯಾಗಲಿ ಕಾಯಿಸಲ್ಪಟ್ಟ, ಇಂಗ್ಲೀಷ್ ಬೀರು ಯಾ ಪೋರ್ಟರನ್ನು ಮಾರುವದಕ್ಕೆ ಮಾತ್ರವೇ ವ್ಯಾಪಿಸುತ್ತೆ.

(2) ಪ್ರತಿ ಅಂಗಡಿಯು ಇದಕ್ಕೆ ಅಂಟಿಸಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಹಾಲೀ ಜಾರೀಲಿರುವ ಅಂಗಡಿ ಒಳಗಾಗಲಿ ಯಾ ಅದರ ಸಮೀಪದಲ್ಲಿ ಆಗಲಿ ಇಡಲ್ಪಡಬೇಕು.

(3) ಪ್ರತಿ ತಿಂಗಳಿನಲ್ಲಿ ಮಾರಿದ ಬೀರು ಯಾ ಪೋರ್ಟರಿನ ಸಿಪಾಯಿಗಳಿಗಾಗಿ ಕೊಡಬೇಕಾದ ಮೊಬಲಗನ್ನು ಮಾರನೇ ತಿಂಗಳಿನ ಮೊದಲನೇ ವಾರದಲ್ಲಿ ತಾಲ್ಲೂಕು ಖಜಾನೆಗೆ ಇದಕ್ಕಾಗಿ ಗೊತ್ತಾಗಿರುವ ಚಲನ್ ಮೂಲಕ ಪಾವತಿಯಾಗತಕ್ಕದ್ದು. ಲೈಸೆನ್ಸ್‌ದಾರನಿಂದ ಠೇವಣಿ ಇಡಲ್ಪಟ್ಟಿರುವ ಮೊಬಲಗು ಗುತ್ತಿಗೆ ಅವಧಿಯ ಕೊನೇ 2 ತಿಂಗಳಿನ ಮೊಬಲಗಿಗೋಸ್ಕರ ಉಪಯೋಗಿಸಲ್ಪಡತಕ್ಕದ್ದು. ಮೇಲೆ ಹೇಳಿದ ಹಾಗೆ ಪಾವತಿ ಮಾಡಲಿಕ್ಕೆ ತಪ್ಪಿದಲ್ಲಿ ಡೆಪ್ಯುಟಿ ಕಮ್ಮಿಷನರವರು ಜಮೀನ್ ಕಂದಾಯ ವಸೂಲ್ಮಾಡುವದಕ್ಕೆ ಜಾರೀಲಿರುವ ನಿಬಂಧನೆಗಳ ಪ್ರಕಾರ ವರುಷಕ್ಕೆ ಶೇಕಡಾ 6 ರೂಪಾಯಿನಂತೆ ಬಡ್ಡಿ ಸಿಸಿ ಬಾಕಿ ಮೊಬಲಗನ್ನು ವಸೂಲ್ಮಾಡುವದಕ್ಕೆ ತಕ್ಷಣ ಪ್ರವರ್ತಿಸತಕ್ಕದ್ದು. ಲೈಸೆನ್ಸ್‌ದಾರನು ತಾನು ಕೊಡಬೇಕಾಗಿರುವ ಸರ್ಕಾರದ ಹಣಗಳಲ್ಲಿ ಯಾವ ಕಾರಣದಿಂದಲಾಗಲಿ ಮಾಫಿ ವಜಾ ಮುಂತಾದ್ದನ್ನು ಪಡೆಯುವದಕ್ಕೆ ಹಕ್ಕುದಾರನಾಗಿರುವದಿಲ್ಲಾ.

(4) ಲೈಸೆನ್ಸ್‌ದಾರನಿಂದ ಕೊಂಡುಕೊಳ್ಳಲ್ಪಡತಕ್ಕ ಬೀರು ಅಥವಾ ಪೋರ್ಟರ್ ಬಾಬತು ಪ್ರತಿ ಒಂದು ಗ್ಯಾಲನಿಗೂ ರೂಪಾಯಿಗೆ 1 ಆಣೆ ಯಂತೆ ಲೋಕಲ್ ಸೆಸ್ ಸಹಿತವಾಗಿ ಎರಡಾಣೆಯಂತೆ ಹಾಸಲು ಕೊಡತಕ್ಕದ್ದು.

(5) ಲೈಸೆನ್ಸ್‌ದಾರನು ಕೊಂಡುಕೊಂಡ ಬೀರು ಮತ್ತು ಪೋರ್ಟರ್ ಬ್ರೂಯರಿಯಿಂದ ತಾಲ್ಲೂಕು ಅಮಲ್ದಾರ್ರವರಲ್ಲಿಗೆ ಪ್ರಥಮತಃ ರವಾನಿಸಲ್ಪಡತಕ್ಕದ್ದು. ಸರಕಿನೊಂದಿಗೆ ಲೆಟರ್ ಆಫ್ ಅಡ್ವೈಸ್ ಎಂಬ ರಹದಾರಿಯನ್ನು ಅಮಲ್ದಾರ್ರಿಗೆ ಕಳುಹಿಸಬೇಕು. ಇದರ ಎರಡನೇ ಪ್ರತಿಯು ಎಕ್ಸೈಜ್ ಕಮ್ಮಿಷನರ್ ಸಾಹೇಬರವರ ಆಫೀಸಿಗೆ ರವಾನಿ

ಸಲ್ಲತಕ್ಕದ್ದು. ಮೇಲೆ ನಮೂದು ಮಾಡಲ್ಪಟ್ಟ ದರದ ಮೇರೆಗೆ ಲೋಕಲ್ ಸೆಸ್ ಸಹಿತವಾಗಿ ಹಾಸಲ್ ಮಾಡಲು ಗೊತ್ತಾದ ನಮೂನೆಯಲ್ಲಿ ಪಾವತಿ ಆದ ನಂತರ ಅಮಲ್ದಾರ್ರು ಅಥವಾ ಇವರಿಂದ ಈ ವಿಷಯದಲ್ಲಿ ಅಧಿಕಾರ ಪಡೆದ ಇತರ ಆಫೀಸರ್ರು ಸರಕನ್ನು ಲೈಸೆನ್ಸದಾರನು ತನ್ನ ಅಂಗಡಿಗೆ ಒಯ್ಯಲು ತಕ್ಕ ಸ್ಯನಾದ ಪಾಸಿನ ಮೂಲಕ ಅಪ್ಪಣೆ ಕೊಡತಕ್ಕದ್ದು.

(6) ಬೆಂಗಳೂರು ಸಿಟಿಯಲ್ಲಿರುವ ಪ್ರತಿ ಒಂದು ಬೀರು ಅಂಗಡಿಯ ಲೈಸೆನ್ಸದಾರನು ಮ್ಯುನಿಸಿಪಲ್ ರೆಗ್ಯುಲೇಷನ್ ಅನುಸರಿಸಿ ರಿಜಿಸ್ಟ್ರೇಷನ್ ರುಸುಂ ಬಗ್ಗೆ ಸಾಲಿಯಾನಾ 180 ರೂಪಾಯಿಗಳನ್ನು ಈ ಲೈಸೆನ್ಸ್ ಕೊಟ್ಟಿರುವ ಕಾಲದ ವ್ಯಾಪ್ತಿಗೆ ಮುಂಗಡವಾಗಿ ಪಾವತಿ ಮಾಡತಕ್ಕದ್ದು.

(7) ಲೈಸೆನ್ಸದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೆ ಸಾಧನಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲೆಕ್ಕ, ಬೀರು ಯಾ ಪೋರ್ಟರನ್ನು ಸಾಗಿಸುವ ಬಗ್ಗೆ ಬೇಕಾದ ರಹದಾರೀ ಅಥವಾ ಪ್ಯಾಸ್ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(8) ಲೈಸೆನ್ಸದಾರನು 1904ನೆ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ಹಳೇ ಲೈಸೆನ್ಸದಾರನು ಖಾಯಿತು ಸದರಿ ಅಂಗಡಿಯಲ್ಲಿ ದಾಸ್ತಾನ್ ಇರಬಹುದಾದ ಬೀರು ಅಥವಾ ಪೋರ್ಟರನ್ನು ಎಕ್ಸೈಜ್ ಕಮಿಷನರ್ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರ ದ್ರವ್ಯವನ್ನು ಹಳೇ ಲೈಸೆನ್ಸದಾರನಿಗೆ ಪಾವತಿಮಾಡಿ ತೆಗೆದುಕೊಳ್ಳಲು ಗುರಿಯಾಗಿರತಕ್ಕದ್ದು.

(9) ಈ ಗುತ್ತಿಗೆ ಎಕ್ಸೈಜ್ ಕಮಿಷನರ್ ಸಾಹೇಬರವರ ಮುಂಚಿತವಾದ ಅನುಮತಿ ಇಲ್ಲದೆ ಕ್ರಯ, ದಾನ, ಭೋಗ್ಯ ಅಥವಾ ಇನ್ನಾವ ವಿಧದಿಂದಲೇ ಆಗಲಿ ವರ್ಗವಾಗತಕ್ಕದ್ದಲ್ಲ.

(10) ದುಕಾನ್‌ದಾರನು ಲೈಸೆನ್ಸದಾರನಂತೆಯೇ ಈ ಲೈಸೆನ್ಸಿನ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ ಇದರಲ್ಲಿ ನಮೂದಾಗುವ ದಂಡನೆಗಳಿಗೆ ಗುರಿಯಾಗುತ್ತಾನೆ.

(11) ಅವನು ಮಂಜೂರ್ಮಾಡಲ್ಪಟ್ಟ ಬೀರ್ ಯಾ ಪೋರ್ಟರನ್ನು ಮಾತ್ರವೇ ಮಾರತಕ್ಕದ್ದು. ಒಂದು ಇಂಪೀರಿಯಲ್ ಕ್ವಾರ್ಟ್ ಕೀಸೆವರಿವಿಗೂ ಅಂಗಡಿಯಲ್ಲಿ ಕುಡಿಯಲಿಕ್ಕೆ ಮಾರಬಹುದು. ಮತ್ತು ಸ್ಪೆಷಲ್ ಪ್ಯಾಸುಗಳ ಆಧಾರದ ಮೇಲೆ ಹೊರಗೆ ಕುಡಿಯಲಿಕ್ಕೆ ಕೊಡಲ್ಪಡುವ ಬೀರ್ ಒಂದು ಇಂಪೀರಿಯಲ್ ಗ್ಯಾಲನ್‌ಗಳು ಅಂದರೆ ನಾಲ್ಕು ಸೇರುಗಳಿಗಿಂತಾ ಹೆಚ್ಚಾಗಿರಕೂಡದು.

(12) ಅವನು ಪ್ರತ್ಯಕ್ಷವಾಗಿಯಾದರೂ ಪರೋಕ್ಷವಾಗಿಯಾದರೂ ಯಾವ ತರಹೆಯ ಬೀರು ಯಾ ಪೋರ್ಟರು ಎಷ್ಟುಮಟ್ಟಿಗಾದರೂ ಯಾವ ಯೂರೋಪಿಯನಿಗೂ ಅಥವಾ ನಾನ್ ಕಮಿಷನ್ಡ್ ಆಫೀಸರಿಗಾದರೂ, ಪ್ರೈವೇಟ್ ಸೋಲ್ಜರಿಗಾದರೂ, ಸದರಿ ಜನಗಳಿಗೆ ಸಂಬಂಧಪಟ್ಟ ಯಾವ ಯೂರೋಪಿಯನ್ ಅಥವಾ ಈಸ್ಟಿಂಡಿಯನ್ ಹೆಂಗಸರಿಗಾದರೂ ಮಾರಲೂ ಕೂಡದು. ಅವನು ಯಾ ಅವಳು ತನ್ನ ಅಂಗಡಿಯಲ್ಲಿ ಅಥವಾ ತನ್ನ ಅಂಗಡಿಯ ಆವರಣದಲ್ಲಿ ಅವರು ಕುಡಿಯಲಿಕ್ಕೆ ಅವಕಾಶ ಕೊಡಕೂಡದು. ತನ್ನ ಅಂಗಡಿಯಲ್ಲಿ ಬಂದ ಜನಗಳು ಕುಡಿದು ಬಹಳ ನಿಷಾ ಹತ್ತಿ ಬೀಳುವಂತೆ ಮಾಡಕೂಡದು, ಮತ್ತು ಅವರು ಅಕ್ರಮವಾಗಿ ನಡೆಯುವಂತೆಯೂ ಅಂಗಡಿಯಲ್ಲಿ ಜೂಜು ವಗೈರೆ ಆಡುವಂತೆಯೂ ಮಾಡಕೂಡದು. ವ್ಯಭಿಚಾರಿಗಳನ್ನಾದರೂ ಬಹಿರಂಗವಾದ ದುರ್ನಡತೆಯುಳ್ಳ ಜನಗಳನ್ನಾದರೂ ತನಗೆ ತಿಳಿದು ತನ್ನ ಅಂಗಡಿಗೆ ಬರುವಂತೆಯಾದರೂ ಅಂಗಡಿಯಲ್ಲಿರುವಂತೆಯಾದರೂ ಮಾಡಕೂಡದು. ಸೋಲ್ಜರಾದರೂ ಇತರರಾದರೂ ಫರಾರಿ ಆದವರೆಂದು ತಿಳಿದಾದರೂ, ಅಥವಾ ಅಂಥವರೆಂದು ಎಣಿಸುವದಕ್ಕೆ ಕಾರಣವಿದ್ದಾದರೂ ಅಂಥವರಿಗೆ ತನ್ನ ಅಂಗಡಿಯಲ್ಲಿ ಸ್ಥಳ ಕೊಡಲೂ ಕೂಡದು, ಮನಃಪೂರ್ತಿಯಾಗಿ ಅವರನ್ನು ಛಪಾಯಿಸಿ ಇಡಲೂಕೂಡದು. ಮತ್ತು ಗುಮಾನಿ ನಡತೆಯುಳ್ಳ ಜನಗಳು ಕಾಣಬಂದಲ್ಲಿ ಅವರ ವಿಷಯವಾಗಿ ಪೋಲೀಸ್ ಆಫಿಸರ್ ಯಾ ಮೇಜಸ್ಟ್ರೇಟರಿಗೆ ತಿಳಿಸತಕ್ಕದ್ದು. ಮತ್ತು ಉದ್ಯೋಗದ ಮೇಲೆ ಇರುವಾಗ ಯಾವ ಪೋಲೀಸ್ ಆಫಿಸರಿಗೆಯಾಗಲಿ, ರೈಲ್ವೆ ನೌಕರನಿಗೇಯಾಗಲಿ, ಎಕ್ಸೈಜ್ ಆಫಿಸರಿಗೆಯಾಗಲಿ, ಹುಡುಗರಿಗೆ ಆಗಲಿ ಬೀರ್ ಅಥವಾ ಪೋರ್ಟರನ್ನು ಮಾರಲೂಕೂಡದು.

(13) ಅವನು ತನ್ನ ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ಒಂದು ಹಲಿಗೇ ಮೇಲೆ ತನ್ನ ಹೆಸರು, ಮಾಲೀಕನ ಹೆಸರು, ಅಂಗಡಿ ನಂಬರ್ ಮತ್ತು ಅದರಲ್ಲಿ ಮಾರಲಿಕ್ಕೆ ಲೈಸೆನ್ಸ್ ಪಡೆದಿರುವ ಪದಾರ್ಥದ ಹೆಸರನ್ನೂ ಸ್ಪಷ್ಟ ವ್ಯಕ್ತವಾಗಿ ಬರಿಸಿ ಇಡಬೇಕು.

(14) ಅವನು ಯಾವ ದಿನಸು ಯಾ ಸಗವನ್ನಾಗಲಿ ಬದಲಿಯಾಗಿಯಾದರೂ ಆಧಾರವಾಗಿಯಾದರೂ ತೆಗೆದುಕೊಳ್ಳಕೂಡದು, ಮತ್ತು ತಾನು ಮಾರಿದ ಬೀರು ಯಾ ಪೋರ್ಟರಿಗೆ ಇಂಪೀರಿಯಲ್ ಗ್ಯಾಲನ್ ಒಂದಕ್ಕೆ ಪರ ಒಂದುವರೆ ರೂಪಾಯಿ ಮೇರಿಗೆ ನಗದಾಗಿ ಹಣ ತೆಗೆದುಕೊಳ್ಳಬೇಕು. ಮತ್ತು ಚಿಲ್ಲರೆಯಾಗಿ ಮಾರುವದಕ್ಕೆ ದಾಮಾಷಾಯ ಪ್ರಕಾರ ಖರೀದಿ ವಸೂಲ್ಮಾಡಬೇಕು.

(15) ಈ ಲೈಸೆನ್ಸ್ ಪ್ರಕಾರ ಮಾರುವ ಪ್ರತಿ ಒಂದು ಹಾಗ್ಸ್ ಹೆಡ್ಡಿಗೆ ಬೀರ್ ಯಾ ಪೋರ್ಟರ್‌ನಲ್ಲಿ ಮಾಲ್ಟ್ ಎಂಬ ಪದಾರ್ಥದ ಅಥವಾ ಅದರಿಂದ ತಯಾರಾದ ಯಾವದಾದರೂ ಪದಾರ್ಥದ ಶೇಕಡಾ 75ರಷ್ಟನ್ನೂ ಕೆಂಪು ದೇಶದಲ್ಲಿ ಜ

ಳವಂಥಾ ಒಳ್ಳೇದಾಗಿ ಇರುವ ಮೂರು ಪಾರ್ಟ ಸಾವಸ್ ಎಂಬ ಪುಪ್ಪೆಗಳನ್ನೂ ಸೇರಿಸಿರಬೇಕು. ಮತ್ತು ಮೇಲ್ಕಂಡ ಬೀರು ಯಾ ಪೋರ್ಟರನ್ನು ಭಟ್ಟೀ ಕಾರಖಾನೆಯಿಂದ ಖರೀದಿಗೆ ತಂದಕಾಲದಲ್ಲಿದ್ದ ಸ್ಥಿತಿಯಲ್ಲಿಡಬೇಕೇ ಹೊರ್ತು ನೀರಿನಿಂದ ಮಿಶ್ರಪಡಿಸಕೂಡದು ಯಾ ಇತರ ಪದಾರ್ಥಗಳನ್ನು ಬೆರಸಿ ಕೆಡಿಸಕೂಡದು. ಬೀರಿನ ಊಟಿಯು ಷುರು ತೂಕವು ಫಾರನ್ಹೈಟಿನ 60° ಉಷ್ಣ ವಿರುವಾಗ 1070 ಸಂಖ್ಯೆಯನ್ನು ಮೀರಕೂಡದು. ಬೀರು ಮತ್ತು ಪೋರ್ಟರ್‌ನಲ್ಲಿ ಅಲ್ಕೋಹಾಲ್ ಯಾ ವಿಷಾ ಪದಾರ್ಥವು ಮೊತ್ತದಲ್ಲಿ ಶೇಕಡಾ ೬ಕ್ಕೆ ಜಾಸ್ತಿಯಾಗಿರಕೂಡದು. ಬೀರು ಮತ್ತು ಪೋರ್ಟರ್‌ನಲ್ಲಿ ಮೊತ್ತದಲ್ಲಿ ಶೇಕಡಾ ೬ಕ್ಕೆ ಜಾಸ್ತಿಯಾಗಿರತಕ್ಕ ಎಲ್ಲಾ ಅಲ್ಕೋಹಾಲಿನ ಮೇಲೆ ಪ್ರೂಫ್ ಷರಾಬಿನ ಗ್ಯಾಲಾ 1ಕ್ಕೆ ವಿಧಾಯುಕ್ತವಾಗಿರುವ ಪ್ರಕಾರಂತೆ ಲೋಕಲ್ ಸೆಸ್ ಸಹಿತ ಡ್ಯೂಟಿ ಯಾ ಹಾಸಲನ್ನು ಲೈಸೆನ್ಸ್‌ದಾರನು ಕೊಡಲು ಬದ್ಧನಾಗಿರುವನು ಮತ್ತು ಪ್ರಾಸಿಕ್ಯೂಷನ್‌ಗೆ ಗುರಿಯಾಗಿರುವನು. ಇಂಥಾ ಬೀರ್ ಯಾ ಪೋರ್ಟರ್‌ವುಳ್ಳ ಒಂದು ಸೀಸಾಯಿಯನ್ನು ಎಕ್ಸೈಜ್ ಇಲಾಖೆಯವರು ಅಪೇಕ್ಷಿಸಿದಾಗ ಅಜಮಾಯಿಷಿ ಮಾಡುವದಕ್ಕಾಗಿ ಭಟ್ಟೀ ಕಾರಖಾನೆಯಿಂದ ಯಾ ಅಂಗಡಿಯಿಂದ ಕಳುಹಿಸಬೇಕು.

(16) ಸ್ಥಳದ ಅಧಿಕಾರವುಳ್ಳ ಯಾವ ಮ್ಯಾಜಿಸ್ಟ್ರೇಟರಾಗಲಿ ಅಥವಾ ಮ್ಯಾಜಿಸ್ಟ್ರೇಟರ ಹುಕುಮನ್ನು ಪಡೆದ ಯಾವ ಅಧಿಕಾರಿಯಾಗಲಿ ಅಥವಾ ಅಧಿಕಾರ ಹೊಂದಿದ ಎಕ್ಸೈಜ್ ಆಫಿಸರಾಗಲಿ ಯಾವ ಹೊತ್ತಿನಲ್ಲಿಯಾದರೂ ಅಂಗಡಿಯೊಳಗೆ ಪ್ರವೇಶಮಾಡಿ ಅಲ್ಲಿರುವ ಬೀರ್ ಮತ್ತು ಪೋರ್ಟರನ್ನು ಅಜಮಾಯಿಷಿ ಮಾಡಲು ಅವರಿಗೆ ಅವಕಾಶ ಕೊಡಬೇಕು, ಮತ್ತು ಲೈಸೆನ್ಸನ್ನು ಅಂಗಡಿಯಲ್ಲಿ ಅವಶ್ಯಕವಾಗಿ ಲೈಸೆನ್ಸ್‌ದಾರನಿಂದಲೂ, ವ ಮಾರುವವನಿಂದಲೂ ಇಡಲ್ಪಡಬೇಕಾದ ಲೆಖ್ಖಗಳನ್ನೂ ಅವರು ಪರಿಶೋಧನೆ ಮಾಡಲಿಕ್ಕೆ ಹಾಜರ್ಮಾಡಬೇಕು. ಮತ್ತು ಈ ಲೆಖ್ಖಗಳು ಸಾಚಾ ಮತ್ತು ಕರಾರುವಾಕಾಗಿರಬೇಕಲ್ಲದೆ ವಿಧಾಯುಕವಾಗಿರುವ ನಮೂನೆಗಳಲ್ಲಿ ರೋಜೀನಾ ಬರದಿರಬೇಕು. ತಿರಸ್ಕರಿಸಲ್ಪಟ್ಟ ತಮಾಂ ಬೀರನ್ನು ನಾಶಪಡಿಸತಕ್ಕದ್ದು.

(17) ಸದರಿ ಅಂಗಡಿಯನ್ನು ರಾತ್ರಿ 9 ಘಂಟೆಗೆ ಮುಚ್ಚಬೇಕು. ಹಬ್ಬ ಮುಂತಾದ ದಿವಸಗಳಲ್ಲಿ ವಿಶೇಷ ಅಪ್ಪಣೆ ಮೇಲೆ ಹೊರ್ತು ಬೆಳಿಗ್ಯೆ ಸೂರ್ಯೋದಯಕ್ಕೆ ಮುಂಚಿತವಾಗಿ ಅಂಗಡಿ ಬಾಗಲು ತೆಗಿಯಕೂಡದು.

(18) ಕಮಿಸರಿಯಾಟ್ ಇಲಾಖೆಯ ಉಪಯೋಗಕ್ಕಾಗಿ ತರಿಸಿ ಮಿಲಿಟೇರಿ ಅಥವಾ ಇತರ ಇಲಾಖೆಗಳಿಂದ ತಿರಸ್ಕರಿಸಲ್ಪಟ್ಟ ಬೀರನ್ನು ಅಂಗಡಿಯಲ್ಲಿ ಮಾರಲಿಕ್ಕೆ ಯಾವ ಕಾರಣಗಳಿಂದಲೂ ರವಾನಿಸಲ್ಪಡಕೂಡದು.

(19) ಸದರಿ ಅಂಗಡಿಗೆ ಒಂದೇಬಾಗಲಿರಬೇಕು. ಹಿಂಭಾಗದಲ್ಲ್ಯಾದರೂ ಕೋನೇಭಾಗಗಳಲ್ಲ್ಯಾದರೂ ಕಿಟಕಿ ಇರಕೂಡದು. ಬೀರ್ ಮಾರುವ ಜಗಲಿಯು, ಅಂಗಡಿಯೊಳಗೆ ಇರುವ ಜನಗಳು ಅಂಗಡೀ ಮುಂದೆ ಬೀದೀಲಿ ತಿರುಗಾಡುವ ಜನಗಳಿಗೆ ಕಾಣುವ ಹಾಗೆ ಬಾಗಲಿಗೆ ಎದುರಾಗಿ ಇರತಕ್ಕದ್ದು, ಮತ್ತು ಪಾನೀಕರಿಗೆ ಇದಕ್ಕೆ ಸೇರಿದ ಹಾಗೆ ಎರಡನೇ ಕೊಠಡಿ ತೆರದಿರಕೂಡದು.

(20) ಲೈಸೆನ್ಸ್‌ದಾರನು ಹಾಲಿ ಜಾರೀಲಿರುವ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

9. ಲೈಸೆನ್ಸ್‌ದಾರನ ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಯನ್ನು ತೆಗಿಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸ್‌ದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣಿ ಮೊಬಲಗನ್ನು ದಂಡವಾಗಿ ಸರಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೆಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನು ರದ್ದು ಮಾಡಿ ಸದರೀ ಲೈಸೆನ್ಸ್‌ದಾರನ ಜವಾಬ್ದಾರಿ ಮೇಲೆ ಮೇಲ್ಕಂಡ ಹಕ್ಕನ್ನು ಪುನಹ ಹರಾಜು ಮಾಡಲಿಕ್ಕೂ ಯಾ ಇತರ ವಿಧವಾಗಿ ವಿಲೇ ಮಾಡಲಿಕ್ಕೂ ಡೆಪ್ಯುಟಿ ಕಮಿಷನರವರು ಮೊಖ್ತ್ಯಾರಾಗಿ ಇರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನು 1905ನೆ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗೆದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟ ಮೇಲೇಲು ಸದರೀ ಲೈಸೆನ್ಸ್‌ದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಲೈಸೆನ್ಸ್ ರದ್ದು ಮಾಡಲ್ಪಟ್ಟರೆ ಪೂರಾಕಾಲದ ಗುತ್ತಿಗೆ ಹಣವು ಕೊಡ್ಲೆ ಪಾವತಿ ಮಾಡಲಿಕ್ಕೆ ಗುರಿಯಾಗತಕ್ಕದ್ದು; ಮತ್ತು ಅಂಥಾ ಮೊಬಲಗು ಜಮೀನ್ ಕಂದಾಯದ ಬಾಕಿಯಂತೆ ಎಲ್ಲಾ ನಷ್ಟಗಳ ಸಹಿತವಾಗಿ ವಸೂಲ್ಮಾಡಲ್ಪಡತಕ್ಕದ್ದು.

10. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ್‌ಗಳಿಗೆ ವಿರೋಧವಾಗಿ ನಡಿಸಿದ ತಕ್ಸೀರಿಗೆ ಲೈಸೆನ್ಸ್‌ದಾರನನ್ನಾಗಲಿ ಯಾ ಆತನ ನೌಕರರನ್ನಾಗಲಿ ಅಪಾದಿಸಿ ದರ್ಯಾಫ್ತಿಕ್ರಮ ನಡಿಸಲು ಅತಂಕ ಪಡಿಸುವದಿಲ್ಲ.

ಪಿ. ಎನ್. ಪೂರ್ಣಯ್ಯ,
ಮೈಸೂರು ಶೀಮೆಯ ಎಕ್ಸೈಜ್ ಕಮಿಷನರ್.

ವಿದ್ಯಾಭ್ಯಾಸದ ಇಲಾಖೆ.

ಪ್ರಕಟನ ಪತ್ರಿಕೆ.

ಸ್ 1904ನೆ ಇಸವಿ ಮಾರ್ಚಿ ತಾರೀಖು 4ನೆ ಡಿ. ನಂಬರು 48.

ಮೈಸೂರು ದೇಶಭಾಷೆಯ ಅಪ್ಪರ್ ಸೆಕೆಂಡರಿ ಪರೀಕ್ಷೆ.

ಪರೀಕ್ಷ್ಯೆಯರು ಬೀಜಗಣಿತ, ರೇಖಾಗಣಿತ ಮತ್ತು ಕ್ಷೇತ್ರಗಣಿತ ಇವುಗಳಿಗೆ ಪ್ರತಿಯಾಗಿ ಮದರಾಸ್ ಟೆಕ್ನಿಕಲ್ ಪರೀಕ್ಷೆಯ ಮೊದಲನೆಯ ಅಂತಸ್ತಿಗೆ ನಿಯಮಿಸಲ್ಪಟ್ಟಿರುವ ಸರಳ (ಸುಲಭ) ಹಸ್ತ ನಕ್ಷೆಯ ಬರವಣಿಗೆಯನ್ನು (Free hand outline Drawing) ತೆಗದುಕೊಳ್ಳಬಹುದು.

ಈ ವಿಷಯಕ್ಕೆ ನಿಯಮಿತವಾಗಿರುವ ಅಂಕಗಳು 70.

ಸರಳ ಹಸ್ತ ನಕ್ಷೆ ಬರವಣಿಗೆಯ ಪ್ರಥಮ ಪರೀಕ್ಷೆಯ ಅಂಶಗಳು ಯಾವುವೆಂದರೆ :—

ಪರೀಕ್ಷೆಯು ಕಾರ್ಯತಃ ಪರೀಕ್ಷೆಯಾಗಿ (Practical Examination) ಯೂ ಮತ್ತು ಕೆಳಗೆ ಸೂಚಿಸಿರುವ ಭಾಗಗಳನ್ನು ಒಳಕೊಂಡು ಇರುವದು.

(1) ಚಪ್ಪಟೆಯಾದ ಮಾದರಿಗಳಿಂದ ಬರೆಯುವ $1\frac{1}{2}$ ಘಂಟೆ ಕಾಲದ ಒಂದು ಪರೀಕ್ಷೆ. ಕೊಡಲ್ಪಟ್ಟ ನಕ್ಷೆಯನ್ನಾಗಲಿ ಅಥವಾ ಆಭರಣದ ನಮೂನೆಯನ್ನಾಗಲಿ ಇಟ್ಟುಕೊಂಡು ಕೈವಾರದ (compass) ಅಥವಾ ಇತರ ಯಂತ್ರೋಪಕರಣಗಳ ಸಹಾಯವಿಲ್ಲದೆಯೇ ಮಾತೃಕೆ ಗಿಂತ ಸ್ವಲ್ಪ ಹೆಚ್ಚಾದ ಅಥವಾ ಸ್ವಲ್ಪ ಕಡಿಮೆಯಾದ ಪರಿಮಾಣಕ್ಕೆ ಸರಿಯಾದ ರೇಖಾವಿನ್ಯಾಸವುಳ್ಳ ಒಂದು ಆಕೃತಿಯನ್ನು ನಿರ್ಮಿಸುವುದು.

(2) ಮಾದರಿ ನಕ್ಷೆಯ $1\frac{1}{2}$ ಘಂಟೆಯ ಕಾಲದ ಪರೀಕ್ಷೆ ಹೂಜಿ ಮತ್ತು ಜೋಗಣಿ; ಟೀ ಬಟ್ಟಲು ಮತ್ತು ತಟ್ಟೆಗಳು, ಪೆಟ್ಟಿಗೆ, ಪುಸ್ತಕಗಳು, ಕಲಶಗಳು ಅಥವಾ ಘನಾಕೃತಿ (cube) ಶ್ರಕೋಟಾಯತ (prism), ಗೋಪುರಾಕಾರ (pyramid) ಶಂಕು (cone) ಮತ್ತು ಸ್ತಂಭಾಕಾರ (cylinder) ಮೊದಲಾದ ಸರಳವಾದ ಮಾದರಿಗಳು ಇವೇ ಮೊದಲಾದ ಸರಳವಾದ ಆಕೃತಿಯುಳ್ಳ ಒಂದು ಅಥವಾ ಎರಡು ಸಾಧಾರಣವಾದ ಪದಾರ್ಥಗಳ ಜೋಡಣೆಯನ್ನು ಮಾತ್ರ ರೇಖಾವಿನ್ಯಾಸದಿಂದ ಲೇಖಿಸುವದು.

ಇದಕ್ಕಾಗಿ ಶಿಫಾರಸ್ ಮಾಡಲ್ಪಟ್ಟ ಗ್ರಂಥಗಳು ಯಾವುವೆಂದರೆ :—

ವಾಲ್ಟರ್ ಸಾಹೇಬರವರಿಂದ ರಚಿಸಲ್ಪಟ್ಟ ಸಾತ್‌ಕೆನ್‌ಸಿಂಗ್‌ಟನ್ ಡ್ರಾಯಿಂಗ್ ಪುಸ್ತಕಗಳು (ಆಭರಣ ಪುಸ್ತಕಗಳು II, III, IV, ಮತ್ತು ಪ್ರಥಮ ಅಥವಾ ಸುಲಭವಾದ ಆಕಾರ I ಮತ್ತು II) ಮತ್ತು ಮದರಾಸ್ ಸ್ಕೂಲ್ ಆಫ್ ಆರ್ಟ್ಸಿನ ನಕ್ಷೆಯ ಪುಸ್ತಕ.

ಹೆಚ್. ಜೆ. ಭಾಭಾ,
ಇನ್‌ಸ್ಪೆಕ್ಟರ್ ಜನರಲ್ ಆಫ್ ಎಜ್ಯುಕೇಷನ್.

ಕೋಲಾರ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜು ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 29ನೆ ಮಾರ್ಚಿ 1904.

1. ಕಂದಾಯದ ಬಾಕೀದಾರರಾದ ಜೋಡಿ ಪೋತರಾಜಪಲ್ಲಿ ಗ್ರಾಮದ ಶೇಷಾಚಾರ್ ವಗೈರೆರಿಂದ ಬರಬೇಕಾದ ಜವಿರ್ನಾ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಬವರಿಂಗಪ್ಯಾಟೆ ತಾಲ್ಲೂಕು ಕಚೇರಿಯಲ್ಲಿ 1904ನೆ ಇಸವಿ ಮೇ ಮಾಹೆ 20ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಅದೆ. ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರೆಗೆ ರೂಪಾಯಿ 70—6—0 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್‍ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ವಿಜಂಟು ಯಾ ಮುತಾಲೀಕರಾಗಿ ಸವಾಲ್ಮಾಡುತ್ತಾರೆಯೋ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್‍ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್‍ಮಾಡದೆ ಹೋದರೆ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯುಳ್ಳ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್‍ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮಿಷನರವರಿಂದ ಮಂಜೂರ್‍ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮಿಷನರವರಿಂದ ಹರಾಜು ಮಂಜೂರ್‍ಮಾಡಲ್ಪಟ್ಟ ಕೂಡಲೆ, ಹರಾಜುದಾರ್‍ರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರ್‍ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯೂಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈನಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ, ತರಿ ಅಥವಾ ಬಾಗಾಯತು.	ವಿಸ್ತೀರ್ಣ.	ಕಂದಾಯ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.
					ರೂ. ಆ. ಪೈ.			ಖಂ. ಕೊ. ಪ.	ರೂ. ಆ. ಪೈ.	ರೂ. ಆ. ಪೈ.
ಬಂಗಾರಪೇಟೆ	ಬೇತಮಂಗಲ	ಜೋಡಿ ಹೊಸಹಳ್ಳಿ	ಕೃಷ್ಣಪ್ಪ ಶೆಟ್ರು	...	...		ಖುಷ್ಕಿ ...	2 6 1	98 11 3	66—13—6 ಶುಭಕೃತು ಸಾಲ್ ಬಾಕಿ
							ತರಿ ...	7 8 12		1—8—0 ಪ್ರೊಸೆಸ್ ಫೀ
							ಪರಂಬೋಕು.	2 16 $13\frac{3}{4}$		2—1—0 ಬಡ್ಡಿ
								12 11 $10\frac{3}{4}$		70—6—6
					ಚಕ್ಕುಬಂದಿ. ಪೂರ್ವಕ್ಕೆ—ಕ್ಷೀರನದಿ ಪಶ್ಚಿಮಕ್ಕೆ—ಬ್ಯಾಟರಾಯನಹಳ್ಳಿ ಸರಹದ್ದು ಉತ್ತರಕ್ಕೆ—ಬೇತಮಂಗಲದ ಸರಹದ್ದು ದಕ್ಷಿಣಕ್ಕೆ—ದೇವೇರಹಳ್ಳಿ ಸರಹದ್ದು (ಪೂರಾ ಗ್ರಾಮ)					

* ಯಾ ಬಾಕಿ ಇರುವ ವರ್ಷಕ್ಕೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 29ನೆ ಮಾರ್ಚಿ 1904.

1. ಕಂದಾಯದ ಬಾಕೀದಾರರಾದ ಖಾಯಂಗುತ್ತಾ ಮುದ್ದಲಹಳ್ಳಿ ಗ್ರಾಮದ ಶಂಕರರಾಯರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಗೋರೀಬಿದನೂರು ತಾಲ್ಲೂಕು ಕಛೇರಿಯಲ್ಲಿ 1904ನೆ ಇಸವಿ ಮೇ ಮಾಹೆ 20ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಾಸ್ತಿ ಬಿಡುವವರ (ಖರೀದಾರನ) ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 15—4—4 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತೀ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಒಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು	ಅಂದಾಜು ಕ್ರಯ.	ಜಮೀನು. ನಂಬರ ಅಥವಾ ಜಮೀನಿನ ಹೆಸರು.	ಖುಷ್ಕಿ ತರಿ ಬಾಗಾಯತು.	ವಿಸ್ತೀರ್ಣ.	ಕಂದಾಯ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.
					ರೂ. ಅ. ಪೈ.			ಎ. ಗು.	ರೂ. ಅ. ಪೈ.	ರೂ. ಅ. ಪೈ.
ಗೋರೀಬಿದನೂರು	ನಗರಗರ	ಖಾಯಂಗುತ್ತಾ ಮುದ್ದಲಹಳ್ಳಿ	ಶಂಕರರಾಯರು		....	..	ತರಿ ಖುಷ್ಕಿ ಖರಾಬು	8—0 20—0 78—30 106—30	ಗುತ್ತಾ 25—8—0	ಶುಭಕೃತು 15—4—4

ಚಕ್ಕುಬಂದಿ.
ಪೂರ್ವಕ್ಕೆ— ಪುಸಪುಲೋಡಿ
ಪಶ್ಚಿಮಕ್ಕೆ —ಚೋಳಶೆಟ್ಟಿಹಳ್ಳಿ
ಉತ್ತರಕ್ಕೆ— ಡಿಟೋ
ದಕ್ಷಿಣಕ್ಕೆ— ಡಿಟೋ
ಪೂರಾ ಗ್ರಾಮ.

* ಯಾ ಬಾಕೀ ಇರುವ ಮೊಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 29ನೆ ಮಾರ್ಚಿ 1904.

1. ಕಂದಾಯದ ಬಾಕೀದಾರರಾದ ಜೋಡಿ ಬಡಮಾಕಲಹಳ್ಳಿ, ಗ್ರಾಮದ ರಾಮಪ್ಪ, ರಾಜಪ್ಪ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಬವರಿಂಗಪೇಟೆ ತಾಲ್ಲೂಕು ಕಛೇರಿಯಲ್ಲಿ 1904ನೆ ಇಸವಿ ಮೇ ಮಾಹೆ 20ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಕೂಗಿದರ ಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902–1903ನೆ ಸಾಲ್ ವರೆಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 275 3—10 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೇ ಸದರಿ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುಖ್ತಾರ್‌ರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುಖ್ತಾರ್‌ರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೇ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಸ್ಟರಿ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸ್ಟಾಂಪ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ನ್ಯೂನತೆಗಳಿಗೆ ಗವರ್ನಮೆಂಟಿನವರು ಜವಾಬುದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಿಯಾದಿಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕಿ, ತರೀ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ.	ಜಮೀನು. ಆಕಾರ.	ಸರ್ಕಾರಕ್ಕೆ ಬರಬೇಕಾದ ನೋಟೀಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.	
					ರೂ. ಆ. ಪೈ.				ರೂ. ಆ. ಪೈ.	ರೂ. ಆ. ಪೈ.	
ಬವರಿಂಗಪೇಟೆ	ಬೇತಮಂಗಲ	ಜೋಡಿ ಬಡಮಾಕಲಹಳ್ಳಿ	ರಾಮಪ್ಪ, ರಾಜಪ್ಪ ವಗೈರೇರು	..	..	ಮಾಜಿ ಪಟ್ಟು ಜೇರೀಜು ...			608 11 0	220 8 0	ಬಾಭ್ತು ಸಾಲ ಬಾಕಿ
										38 0 11	ಸೆಸ್ಸು
										6 14 5	ಚಿಲ್ಲರ ಸೆಸ್ಸು
						ಚಕ್ಕುಬಂದಿ.				1 8 0	ಪ್ರೋಸೆಸ್ ಫೀ
						ಪೂರ್ವಕ್ಕೆ—ಗೊಲ್ಲಹಳ್ಳಿ				8 4 6	ಬಡ್ಡಿ
						ಪಶ್ಚಿಮಕ್ಕೆ—ಹುನಕುಂದ					
						ಉತ್ತರಕ್ಕೆ—ಚಿಕ್ಕಗುಂಟ್ಲಹಳ್ಳಿ ಸರಹದ್ದು				275 3 10	
						ದಕ್ಷಿಣಕ್ಕೆ—ಹುನಕುಂದದ ಸರಹದ್ದು					
						(ಪೂರಾ ಗ್ರಾಮ)					

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

148

639

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 29ನೆ ಮಾರ್ಚಿ 1904.

1. ಕಂದಾಯದ ಬಾಕೀದಾರರಾದ ಜೋಡಿ ಶೀತಮ್ಮನಹಳ್ಳಿ ಗ್ರಾಮದ ಚಿನ್ನಾಬಾಯಿ, ರಾಮರಾವ್ ಇವರಿಂದ ಬರಬೇಕಾದ ಜವಿರ್ಹಾ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ್ ಮಾಲೂರು ತಾಲ್ಲೂಕು ಕಛೇರಿಯಲ್ಲಿ 1904ನೆ ಇಸವಿ ಮೇ ಮಾಹೆ 20ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಾಸ್ತಿ ಬರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೆ ಸಾಲ್ ವರಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಫ್ಸೀಲ್ ಮೇರಿಗೆ ರೂಪಾಯಿ 26—10—11 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲ್ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ವ್ಯವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿದ್ದುವ ಪೂರಾ ಕಂದಾಯದ ಹಣವನ್ನು ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನ್‌ಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ನ್‌ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಫ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು	ಅಂದಾಜು ಕಿಮ್ಮತ್ತು.	ಜಮೀನು. ಸರ್ವೆ ನಂಬರು ಮತ್ತು ಹಿಸ್ಸಾ ನಂಬರು	ಜಮೀನಿನ ಬಾಗ ವಗೈರೆ	ವಿಸ್ತೀರ್ಣ.	ಆಕಾರ.			ಹರಾಜಿನಲ್ಲಿ ವಸೂಲು ಮಾಡಬೇಕಾದ ಬಾಕೀ ಮೊಬಲಗು.			
					ರೂ. ಆ. ಪೈ.			ಖ. ಕೊ. ಪ.	ರೂ.	ಆ.	ಪೈ.	ರೂ.	ಆ.	ಪೈ.	
ಮಾಲೂರು	ನರಸಾಪುರ	ಜೋಡಿ ಶೀತಮ್ಮನಹಳ್ಳಿ	ಚಿನ್ನಾಬಾಯಿ, ರಾಮರಾವು			ಖುಷ್ಕಿ ..		5 5 7	ಜೋಡಿ						
						ತರಿ ..		1 13 6							
						ಪರಂಪೋಕು ..		4 10 13	80	0	0	25	2	11	ಶುಭಕೃತು ಸಾಲ್ ಬಾಕಿ
								11 9 10	ಜೋಡಿ 49	0	0	1	8	0	ಪ್ರೊಸೆಸ್ ಫೀ
						ಚೆಕ್ಕುಬಂದಿ. ಪೂರ್ವಕ್ಕೆ—ಜೋಡಿ ಮುತಕದಹಳ್ಳಿ ಜಮೀನು ಪಶ್ಚಿಮಕ್ಕೆ—ವಿಂಡಹಳ್ಳಿ ಸರಹದ್ದು ಉತ್ತರಕ್ಕೆ—ವಿಂಡಹಳ್ಳಿ ಸರಹದ್ದು ದಕ್ಷಿಣಕ್ಕೆ—ಮುತಕದಹಳ್ಳಿ (ಪೂರಾ ಗ್ರಾಮವು)						26	10	11	

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಡೆಪ್ಯುಟಿ ಕಮಿಷನರ್.

2 c

ತುಮಕೂರು ಡಿಸ್ಟ್ರಿಕ್ಟು.

ಆಸ್ತಿ ಹರಾಜ್ನಾಮೆ.

ತುಮಕೂರು ಡಿಸ್ಟ್ರಿಕ್ಟು ತುರ್ವೇಕೆರೆ ಸಬ್ ತಾಲ್ಲೂಕು ಜೋಡಿ ಅರಕೆನರಹಳ್ಳಿ ಗ್ರಾಮವು 1904ನೆ ಮೇ ಮಾಹೆ 23ನೆ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ತುಮಕೂರು ಡಿಸ್ಟ್ರಿಕ್ಟು ಮದ್ದಗಿರಿ ತಾಲ್ಲೂಕು ಜೋಡಿ ಚಿಕ್ಕ ತಿಮ್ಮನಹಳ್ಳಿ ಗ್ರಾಮವು 1904ನೆ ಇಸವಿ ಮೇ ಮಾಹೆ 23ನೆ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಬಿ. ಭೀಮರಾವ್,
ಫಾರ್, ಡೆಪ್ಯುಟಿ ಕಮಿಷನರ್.

ಬೆಂಗಳೂರು ಡಿವೀಜನ್ ಡಿಸ್ಟ್ರಿಕ್ಟು ಜಡ್ಜರವರ ಕೋರ್ಟಿನಲ್ಲಿ.

ಸನ್ 1903—1904ನೆ ಇಸವಿ ಅರ್ಜೀ ನಂಬರ್ 344.

ಮೃತಪಟ್ಟ ಪುಟ್ಟೆಗೌಡ ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಚನ್ನಪಟ್ಟಣದ ತಾಲ್ಲೂಕು ಸರ್ವಮಾನ್ಯ ಕೊಂಡಾಪುರದಲ್ಲಿರುವ ಪಟೇಲ್ ಮಂಚೇಗೌಡ ನೆಂಬುವನು, ಮೃತಪಟ್ಟ ಸದರೀ ಪುಟ್ಟೆಗೌಡ ಎಂಬುವರಿಗೆ ಅವಿಭಕ್ತ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಸರ್ವಮಾನ್ಯ ಕೊಂಡಾಪುರದ ವಾಸಸ್ಥರಾಗಿ ಮೃತಪಟ್ಟ ಸದರಿ ಪುಟ್ಟೆಗೌಡ ಎಂಬುವರ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮಂಚೇಗೌಡನ ಅರ್ಜಿಯನ್ನು ಸನ್ 1904ನೆ ಇಸವಿ ಜೂನ್ ತಿಂಗಳು ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟೆಗೌಡನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ಏಪ್ರೈಲ್ ತಿಂಗಳು 2ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1903—1904ನೆ ಇಸವಿ ಅರ್ಜೀ ನಂಬರ್ 351.

ಮೃತಪಟ್ಟ ಶಾಮಣ್ಣ ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ದೇವನಹಳ್ಳಿ ತಾಲ್ಲೂಕು ಜೋಡಿ ಅರದೇಶಹಳ್ಳಿ ಗ್ರಾಮದಲ್ಲಿ ಇರುವ ಪುಟ್ಟಪ್ಪನ ಮಗ ಆದೆಪ್ಪ ಮೈನರ್, ಗಾರ್ಡಿಯನ್ ತಾಯಿ ಪುಟ್ಟಮ್ಮ, ಮೃತಪಟ್ಟ ಸದರೀ ಶಾಮಣ್ಣ ಎಂಬುವರಿಗೆ ತಮ್ಮನ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಕಾನಕಾನಹಳ್ಳಿಯಲ್ಲಿ ವಾಸಸ್ಥರಾಗಿ ಮೃತಪಟ್ಟ ಸದರಿ ಶಾಮಣ್ಣ ಎಂಬುವರ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಆದೆಪ್ಪ ಮೈನರ್, ಗಾರ್ಡಿಯನ್ ತಾಯಿ ಪುಟ್ಟಮ್ಮನ ಅರ್ಜಿಯನ್ನು 1904ನೆ ಇಸವಿ ಜೂನ್ ತಿಂಗಳು ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಾಮಣ್ಣ ಎಂಬುವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ಏಪ್ರೈಲ್ ತಿಂಗಳು 2ನೆ ತಾರೀಖಿನಲ್ಲಿ ಕೋರ್ಟಿನ ಮೊಹರಸಿಹಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1903—1904ನೆ ಇಸವಿ ಅರ್ಜೀ ನಂಬರ್ 353.

ಮೃತಪಟ್ಟ ಮೀನಾಕ್ಷಮ್ಮನೆಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಸೇಲಂ ಡಿಸ್ಟ್ರಿಕ್ಟು ಹೊಸೂರಲ್ಲಿರುವ ಲಕ್ಷ್ಮೀನಾರಣಪ್ಪನ ಮಗಳು ಪಾರ್ವತಮ್ಮನು, ಮೃತಪಟ್ಟ ಸದರೀ ಮೀನಾಕ್ಷಮ್ಮನವರಿಗೆ ಸವತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಸದರಿ ಮೀನಾಕ್ಷಮ್ಮನವರ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪಾರ್ವತಮ್ಮನವರ ಅರ್ಜಿಯನ್ನು ಸನ್ 1904ನೆ ಇಸವಿ ಜೂನ್ ತಿಂಗಳು ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮೀನಾಕ್ಷಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ಏಪ್ರೈಲ್ ತಿಂಗಳು 2ನೆ ತಾರೀಖಿನಲ್ಲಿ ಕೋರ್ಟಿನ ಮೊಹರಸಿಹಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1903—1904ನೆ ಇಸವಿ ಮಿ|| ಅರ್ಜೀ ನಂಬರ್ 359.

ವೃತಪಟ್ಟ ಟಿ. ಹನುಮಂತಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ದೊಡ್ಡಬಳ್ಳಾಪುರದಲ್ಲಿರುವ ಯಳ್ಳೂಪುರದ ಲಕ್ಷ್ಮೀಪತಿ ಶಾಸ್ತ್ರಿಗಳ ಮಗಳು ಲಕ್ಷ್ಮೀದೇವಮ್ಮ ಮೈನರ್, ಗಾರ್ಡಿಯನ್ ಲಕ್ಷ್ಮೀಪತಿ ಶಾಸ್ತ್ರಿ, ವೃತಪಟ್ಟ ಸದರೀ ಟಿ. ಹನುಮಂತಯ್ಯನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ತುಮಕೂರು ವಾಸಸ್ಥರಾಗಿ ವೃತಪಟ್ಟ ಸದರೀ ಟಿ. ಹನುಮಂತಯ್ಯನವರ ಜಿಂದಗಿ ಬಗ್ಗೆ ಬರತಕ್ಕ ಸಾಲವನ್ನು ವಸೂಲ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಫಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಷ್ಮೀದೇವಮ್ಮ ಮೈನರ್, ಗಾರ್ಡಿಯನ್ ಲಕ್ಷ್ಮೀಪತಿ ಶಾಸ್ತ್ರಿಯವರ ಅರ್ಜಿಯನ್ನು ಸನ್ 1904ನೆ ಇಸವಿ ಜೂನ್ ತಿಂಗಳು ತಾರೀಖು 2ನಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ಟಿ. ಹನುಮಂತಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ಏಪ್ರಿಲ್ ತಿಂಗಳು 5ನೆ ತಾರೀಖಿನಲ್ಲಿ ಕೋರ್ಟಿನ ಮೊಹರಿನಿಂ ನಮ್ಮ ದಸ್ತುಖತ್ತಿನೊಡನೆ ಕೊಡೋಣಾಯಿತು.

ಎಸ್. ಆರ್. ಸುಬ್ಬಾರಾಯ ಅಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಎಕ್ಸೈಜ್ ಇಲಾಖೆ.

1904–1905ನೇ ವರುಷಕ್ಕಾಗಿ ಮೈಸೂರು ಶೀಮೆಯಲ್ಲಿ ಇರತಕ್ಕ ಗಾಂಜಾ ವ ಅಫೀಂ ಅಂಗಡಿಗಳ ಹರಾಜ್ ನೋಟಿಸ.

ನಂಬರು 7402–7, ತಾರೀಖು 11ನೆ ಏಪ್ರಿಲ್ 1904.

1. ಇದಕ್ಕೆ ಲಗತ್ತು ಮಾಡಿರುವ ಪಟ್ಟಿಯಲ್ಲಿ ನಮೂದು ಮಾಡಿರುವ ಅಂಗಡಿಗಳಲ್ಲಿ ಮಾದಕ ಪದಾರ್ಥಗಳನ್ನು 1904ನೆ ಇಸವಿ ಜುಲೈ ಗುರ್ರೇ ತಾರೀಖಿಗೆ ಪ್ರಾರಂಭವಾಗಿ 1905ನೆ ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12 ತಿಂಗಳ ಕಾಲಕ್ಕಾಗಿ ಬಿಕರೀ ಮಾಡತಕ್ಕ ಏಟ್ಟು ಸ್ವಾತಂತ್ರ್ಯದ ಹಕ್ಕನ್ನು ಇದರಡಿ ಕಂಡ ಷರತ್ತುಗಳಿಗೆ ಒಳಪಟ್ಟು ಸದರೀ ಪಟ್ಟಿಯಲ್ಲಿ ನಮೂದಿಸ್ಮಾಡಿರುವ ತಾರೀಖುಗಳಲ್ಲಿ ಆಯಾಯ ಡೆಪ್ಯುಟಿ ಕಮ್ಮಿಷನರವರು ಅಥವಾ ಅದಕ್ಕಾಗಿ ಅವರಿಂದ ಅಧಿಕಾರಹೊಂದಿದ ಅಸಿಸ್ಟೆಂಟ್ ಕಮ್ಮಿಷನರವರು ಆಯಾಯ ತಾಲ್ಲೂಕು ಯಾ ಸಬ್ ತಾಲ್ಲೂಕು ಕಸಬಾಗಳಲ್ಲಿ ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ.

2. ಹರಾಜಿನಲ್ಲಿ ಪ್ರತಿ ಸವಾಲುದಾರನೂ ಸವಾಲು ಮಾಡುವದಕ್ಕೆ ಮುಂಚಿತವಾಗಿ 5 ರೂಪಾಯಿ ಯಾ ಹರಾಜು ಮಾಡತಕ್ಕ ಆಫಿಸರರು ಗೊತ್ತು ಮಾಡುವ ಬೇರೆ ಇತರ ನ್ಯಾಯವಾದ ಮೊಬಲಗನ್ನು ಠೇವಣಾತಿ ಇಡತಕ್ಕದ್ದು. ಹಾಗೆ ಪ್ರಾರಂಭದಲ್ಲಿ ಠೇವಣಿ ಮೊಬಲಗು ಅವಶ್ಯಕವಿಲ್ಲವೆಂದು ಸರ್ಕಾರದವರು ಯಾವಾಗಬೇಕಾದರೂ ಬಿಟ್ಟುಬಿಡಬಹುದು. ಪ್ರತಿ ಅಂಗಡಿಗೆ ಯಾರ ಏಡ ದರಖಾಸ್ತು ಅಂಗೀಕರಿಸಲ್ಪಡುತ್ತೋ ಅಂಥಾವರಿಗೆ ಆ ಅಂಗಡಿಯು ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತದೆ. ಡೆಪ್ಯುಟಿ ಕಮ್ಮಿಷನರವರು ಸದರೀ ದರಖಾಸ್ತನ್ನ ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳು ಉದಹರಿಸದೆ ಮಂಜೂರು ಯಾ ತಳ್ಳುಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತನ್ನ ಗವರ್ನ್‌ಮೆಂಟಿನವರು ತಿದ್ದುಪಡಿ ಮಾಡದೆ ಇರುವ ಪಕ್ಷದಲ್ಲಿ, ಅಂಗೀಕರಿಸಿದಂತೆ ಭಾವಿಸತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು. ಅಥವಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದು ಇರುವ ಅವರ ತರಫ್ ಮುತಾಲೀಕರನ್ನ ಕಳುಹಿಸಬೇಕು. ಯಾವ ಅಂಗಡಿಯನ್ನು ಒಬ್ಬ ಆಸಾಮಿಗಿಂತ, ಯಾ ಕ್ರಮವಾಗಿ ಏರ್ಪಟ್ಟಿರುವ ಒಂದು ಕಂಪನಿ ಯಾ ಫರಂಗಿಂತ ಹೆಚ್ಚಾದ ಸಂಖ್ಯೆಯುಳ್ಳವರ ಹೆಸರಿಗೆ ಛಡಸವಾಲಿನಲ್ಲಿ ನಿಲ್ಲಿಸಕೂಡದು. ಹರಾಜು ಮಾಡುವ ಅಧಿಕಾರಿಯು ಯಾರ ಹೆಸರಿನಿಂದ ಸವಾಲು ಬಂದಿರುವದಿಲ್ಲವೋ ಆತನ ಹೆಸರನ್ನು ಕೊಂಡುಕೊಂಡವನೆಂದು ದಾಖಲ್ಮಾಡಲು ತಿರಸ್ಕರಿಸತಕ್ಕದ್ದು.

3. ಹರಾಜು ಪೂರೈಸಿದ ಕೂಡ್ಲೆ ನಾಮಂಜೂರಾದ ಸವಾಲ್‌ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡದೇ ಇರುವ ಪಕ್ಷಕ್ಕೆ ಅವರುಗಳಿಗೆ ವಾಪಸು ಮಾಡಲ್ಪಡುತ್ತವೆ. ಹರಾಜು ನಡೆಯುತ್ತಿರುವಾಗ ಯಾರ ಸವಾಲ್ ಅಂಗೀಕರಿಸಲ್ಪಡುತ್ತೋ ಅವರವರು ತಕ್ಷಣವೇ ಆ ಅಂಗಡಿಯ ಒಂದು ತಿಂಗಳ ಗುತ್ತಿಗೆ ಹಣದಲ್ಲಿ ರೂಪಾಯಿ 1ಕ್ಕೆ 10 ಆಣೆ ಭಾಗದ ಮೊಬಲಗನ್ನು ಠೇವಣೀ ಇಡಬೇಕು. ಇದಕ್ಕೆ ಯಾರಾದರೂ ತಪ್ಪಿದಲ್ಲಿ ಮೇಲೆ 2ನೇ ಕಲಂನಲ್ಲಿ ಕಂಡಂತೆ ಆತನು ಇಟ್ಟಿರುವ ಠೇವಣೀ ಮೊಬಲಗು ಸರ್ಕಾರಕ್ಕೆ ದಾಖಲಾಗಿ ಸದರೀ ಅಂಗಡಿಯು ಪುನಹ ಮೇಲೆ ನಮೂದಿಸಿರುವ ಷರತ್ತುಗಳಿಗೆ ಅನುಸಾರವಾಗಿ ಹರಾಜಾಗುವದಲ್ಲದೆ ಆತನು ಈ ಅಂಗಡಿ ಯಾ ಇತರ ಅಂಗಡಿಗಳನ್ನು ಸವಾಲ್ ಮಾಡಕೂಡದು.

4. ಯಾರ ಹೆಸರಿಗೆ ಹರಾಜಿನಲ್ಲಿ ಈ ಅಂಗಡಿಗಳು ನಿಂತು ಮೇಲಿನ 2 ನೇ 3ನೇ ಕಲಂಗಳಲ್ಲಿ ಕಂಡಂತೆ ಠೇವಣೀ ಮೊಬಲಗುಗಳನ್ನ ಕಟ್ಟಿರುತ್ತಾರೋ ಅವರು ಹರಾಜು ಮಂಜೂರಾದ ವಿಷಯವನ್ನು ನೋಟಿಸ್ ಮೂಲಕ ತಿಳಿಸಲು ಸಾಧ್ಯವಾಗುವಂತೆ ತಮ್ಮ ವಿಳಾಸವನ್ನು ಹರಾಜು ನಡಿಸತಕ್ಕ ಆಫೀಸರವರಲ್ಲಿ ಕೊಟ್ಟು ಹೋಗತಕ್ಕದ್ದು. ಸದರಿ ನೋಟಿಸ್ ಅವರಿಗಾಗಲೀ ಅಥವಾ ಸದರಿ ವಿಳಾಸದಲ್ಲಿ ಕೊಟ್ಟಿರುವ ಸ್ಥಳದಲ್ಲಿ ಅವರ ಕುಟುಂಬದ ಇತರ ವಯಸ್ಸಾದ ಗಂಡಸಿಗಾಗಲೀ ರೂಬರೂಬು ಜಾರಿ ಮಾಡೀ ಆಗಲೀ ಅಥವಾ ಅವರ ವಾಸಸ್ಥಾನಕ್ಕೆ ಅಂಟಿಸುವದರಿಂದ ಯಾ ಕ್ರಮವಾಗಿ ರಿಜಿಸ್ಟರ್ಡ್ ಪೋಸ್ಟ್ ಮೂಲಕ ಕಳುಹಿಸಿದ್ದರಿಂದಲೀ ಆಗಲೀ ಜಾರಿಯಾದ 7 ದಿವಸಗಳೊಳಗಾಗಿ ಅವರಿಗೆ ಹರಾಜಿನಲ್ಲಿ ಬಿಡಲ್ಪಟ್ಟಿರುವ ಪ್ರತಿ ಅಂಗಡಿಯ ಎರಡು ತಿಂಗಳ ಗುತ್ತಿಗೆ ಹಣಕ್ಕೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನ ಅವರ ಮೊದಲನೇ ಮತ್ತು ಎರಡನೇ ಠೇವಣಾತಿಗಳಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನ ತಾಲ್ಲೂಕು ಖಜಾನೆಯಲ್ಲಿ ಠೇವಣಿ ಕಟ್ಟಿ ವಿಧಾಯಕವಾದ ನಮೂನೆಯಲ್ಲಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸುಗಳನ್ನ ಪಡಿಯತಕ್ಕದ್ದು, ಮತ್ತು ಒಂದು ಎದುರು ಒಡಂಬಡಿಕೆಯನ್ನು ಬರೆದು ಕೊಡತಕ್ಕದ್ದು. ಈ ರೀತೀಲಿ ಠೇವಣಿ ಇಡುವದಕ್ಕೆ ಯಾ ಲೈಸೆನ್ಸ್ ಪಡೆಯಲಿಕ್ಕೆ ಯಾ ಎದುರು ಒಡಂಬಡಿಕೆಯನ್ನು ಬರೆದು ಕೊಡಲಿಕ್ಕೆ ತಪ್ಪಿದರೆ ಸದರೀ ಅಂಗಡಿಯು ಹಾಗೆ ತಪ್ಪಿದ ಮನುಷ್ಯರ ಜವಾಬ್ದಾರಿ ಮೇಲೆ ಪುನಃ ಹರಾಜು ಮಾಡಲ್ಪಡುತ್ತೆ. ಅಥವಾ ಈ ಇಸ್ತಿಹಾರಿನಲ್ಲಿ ಕಂಡ ಹರಾಜು ಮೊದಲೇ ಪೂರೈಸಿಹೋಗಿರುವ ಪಕ್ಷಕ್ಕೆ ಡೆಪ್ಯುಟಿ ಕಮಿಷನರವರು ಅವರಿಗೆ ಯುಕ್ತತೋರುವಂತೆ ಬೇರೆ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ. ಹರಾಜು ಮಂಜೂರಾದನಂತರ ಕೊಂಡುಕೊಂಡವನು ಮೃತಪಟ್ಟರೆ ಜವಾಬ್ದಾರಿಯು ಆತನ ವಾರಸುದಾರರು ಅಥವಾ ಆತನಿಂದ ವರ್ಗಪಡೆದವರನ್ನ ಹೊಂದಿರುತ್ತೆ.

5. ಮೇಲಿನ 4ನೆ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್ದಾರಿಮೇಲೆ ನಡಿಯುತ್ತವೆ. ಇದರಿಂದ ಆತನು ಅಪಾಯವನ್ನೆಲ್ಲಾ ಕಳದುಕೊಂಡವನಾಗುತ್ತಾನೆ. ಮತ್ತು ದುಸರೆ ಹರಾಜು ಮಾಡುವಲ್ಲಿ ಯಾ ಅನ್ಯಥಾ ವಿಲೇವಾರಿಯಿಂದ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೇ ಹರಾಜಾದ್ದರಲ್ಲಿ ಯಾ ಅನ್ಯಥಾ ವಿಲೇವಾರಿ ಮಾಡಿದ್ದರಲ್ಲಿ ಹೊಸ ಪಾಲ್ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾ ಬಾಕಿ ಉಳಿಯುವುದರನ್ನ ಆತನು ಭರ್ತಿ ಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಠೇವಣಿ ಮೊಬಲಗುಗಳನ್ನ ವಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನ ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡೋಣಾಗುತ್ತೆ. ಆದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಸದರೀ ಠೇವಣಿ ಮೊಬಲಗು ದುಸರೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಆ ಠೇವಣಿ ಮೊಬಲಗನ್ನೆಲ್ಲಾ ಸರ್ಕಾರಕ್ಕೇನೆ ಜಮಾ ಮಾಡಿಕೊಳ್ಳತಕ್ಕದ್ದು.

6. ಮೇಲಿನ 4ನೇ ಕಲಂನಲ್ಲಿ ಕಂಡಮೇರಿಗೆ ಹೊಂದಬೇಕಾದ ಲೈಸೆನ್ಸ್ ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:—

(1) ಸದರೀ ಒಟ್ಟು ಸ್ವತಂತ್ರದ ಹಕ್ಕನ್ನು ಪಡೆಕೊಂಡದ್ದಕ್ಕೆ ಕೊಡಬೇಕಾದ ಮೊಬಲಗನ್ನು ವಿಧಾಯಕವಾದ ಚಲನ್ನಲ್ಲಿ ತಾಲ್ಲೂಕು ಖಜಾನೆಗೆ 1904ನೇ ಇಸವಿ ಜುಲೈ ಮಹೆ ಲಾಗಾಯತು ಸರಿಯಾದ ತಿಂಗಳುಗಟ್ಲೆ ಕಿಸ್ತು ಪ್ರಕಾರ ಪಾವತಿ ಮಾಡುತ್ತಾ ಬರತಕ್ಕದ್ದು. ಪ್ರತಿಯೊಂದು ಕಿಸ್ತು ಯಾವ ತಿಂಗಳಿಗೆ ಪಾವತಿ ಆಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಪ್ರತಿಯೊಂದು ತಿಂಗಳ ಗುತ್ತಿಗೆ ಮೊಬಲಗು ಇದಕ್ಕಾಗಿ ಗೊತ್ತಾಗಿರುವ ಚಲನ್ ಮೂಲಕ ಅದೇ ತಿಂಗಳ 20ನೇ ತಾರೀಖಿನಲ್ಲಿ ಅಥವಾ ಅದಕ್ಕೆ ಮುಂಚಿತವಾಗಿ ಪಾವತಿಯಾಗತಕ್ಕದ್ದು. ಅಂಥಾ ಮೊಬಲಗು 12 ರೂಪಾಯಿಗಳಿಗೆ ಕಮ್ಮಿಯಾಗಿದ್ದರೆ ಮೂರು ತ್ರೈಮಾಸಿಕದ ಕಿಸ್ತುಗಳಿಗೆ ಅತಿಕ್ರಮಿಸದಂತೆ 1904ನೇ ಇಸವಿ ಜುಲೈ ಗುರ್ರೆ ಲಾಗಾಯಿತು ಪಾವತಿ ಮಾಡಲ್ಪಡಬೇಕು. ಲೈಸೆನ್ಸುದಾರನಿಂದ ಠೇವಣಿ ಇಡಲ್ಪಟ್ಟಿರುವ 2 ತಿಂಗಳ ಗುತ್ತಿಗೆ ಮೊಬಲಗು ಗುತ್ತಿಗೆ ಅವಧಿಯ ಕೊನೇ 2 ತಿಂಗಳಿನ ಕಿಸ್ತುಗಳಿಗೋಸ್ಕರ ಉಪಯೋಗಿಸಲ್ಪಡತಕ್ಕದ್ದು. ಸದರೀ 20ನೇ ತಾರೀಖಿನೊಳಗಾಗಲಿ ಅಥವಾ ಯಾವ ತ್ರೈಮಾಸಿಕಕ್ಕೆ ಬಾಕಿ ನಿಲ್ಲುತ್ತದೋ ಆ ತ್ರೈಮಾಸಿಕದ ಆಖೈರೊಳಗಾಗಲಿ ಪಾವತಿ ಮಾಡಲಿಕ್ಕೆ ತಪ್ಪಿದಲ್ಲಿ ಡೆಪ್ಯುಟಿ ಕಮಿಷನರವರು ಜಮೀನ್ ಕಂದಾಯ ವಸೂಲ್ಮಾಡುವದಕ್ಕೆ ಜಾರೀಲಿರುವ ನಿಬಂಧನೆಗಳ ಪ್ರಕಾರ ವರುಷಕ್ಕೆ ಶೇಕಡಾ 6 ರೂಪಾಯಿಯಂತೆ ಬಡ್ಡಿಸಿಸಿ ಬಾಕಿ ಮೊಬಲಗನ್ನು ವಸೂಲ್ಮಾಡುವದಕ್ಕೆ ತಕ್ಷಣ ಪ್ರವರ್ತಿಸತಕ್ಕದ್ದು. ಲೈಸೆನ್ಸುದಾರನು ತಾನು ಕೊಡಬೇಕಾಗಿರುವ ಗುತ್ತಿಗೆ ಮೊಬಲಗಿನಲ್ಲಿ ಯಾವ ಕಾರಣದಿಂದಲಾಗಲಿ ಮಾಫಿ ವಜಾ ಮುಂತಾದ್ದನ್ನ ಪಡೆಯುವದಕ್ಕೆ ಹಕ್ಕುದಾರನಾಗಿರುವದಿಲ್ಲಾ.

(2) ಲೈಸೆನ್ಸುದಾರನು ಯಾವದಾದರೂ ಬಾಂಡೆಡ್ ಡಿಪೋದಿಂದ ಗಾಂಜಾ 80 ತೊಲೆಗಳುಳ್ಳ ಶೇರು 1ಕ್ಕೆ ರೂಪಾಯಿ 0—13—4 ಪ್ರಕಾರವೂ, ಮಾಜುಂ ರೂ. 0—5—4 ಪ್ರಕಾರವೂ ಖರೀದಿ ಕೊಟ್ಟು ಸದರಿ ಪದಾರ್ಥಗಳನ್ನು ಕೊಂಡುಕೊಳ್ಳತಕ್ಕದ್ದು.

(3) ಮೇಲ್ಕಂಡ ಖರೀದಿ ಶಿವಾಯಿ, ಗಾಂಜಾ ಶೇರು 1ಕ್ಕೆ (ಲೋಕಲ್ ಸೆಸ್ ಸಹಿತವಾಗಿ) ರೂ. 3—6—8 ಧರದಂತೆಯೂ, ಮಾಜುಂ ಶೇರು 1ಕ್ಕೆ ರೂ. 0—11—8 ದರದಂತೆಯೂ ಡ್ಯೂಟಿ ಯಾ ಹಾಸಲನ್ನು ತಾಲ್ಲೂಕು ಖಜಾನೆಗೆ ಅಥವಾ ಡೆಪ್ಯುಟಿ ಕಮಿಷನರ್ ಸಾಹೇಬರವರ ಅನುಮತಿಮೇಲೆ ಬೇರೆ ಇತರ ಸರ್ಕಾರದ ಖಜಾನೆಗೆ ಮುಂಗಡವಾಗಿ ಪಾವತಿ ಮಾಡತಕ್ಕದ್ದು.

(4) ಲೈಸೆನ್ಸದಾರನಿಂದ ಮಾರಲ್ಪಡುವ ಗಾಂಜಾ ಒಳ್ಳೇ ಗುಣವುಳ್ಳದ್ದಾಗಿಯೂ, ಬೆರಿಕೆ ಇಲ್ಲದ್ದಾಗಿಯೂ, ಇರತಕ್ಕದ್ದು, ಮತ್ತು ಗಾಂಜಾ 80 ತೊಲೆ ಶೇರು ಒಂದಕ್ಕೆ 10 ರೂಪಾಯಿ ಪ್ರಕಾರವೂ ಯಾ ತೊಲೆ 1ಕ್ಕೆ ಎರಡಾಣೆ ಪ್ರಕಾರವೂ, ಮಾಜುಂ ಶೇರು 1ಕ್ಕೆ ರೂ. 1—10—8 ಪ್ರಕಾರವೂ, ಆತನಿಂದ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹಾಜರಿರುವ ತವಶೀಲು ಗಾಂಜಾ ಮತ್ತು ಮಾಜುಂ ಲೈಸೆನ್ಸು ಪಡೆದ ದುಕಾನ್ನಲ್ಲಿ ಇಡಲ್ಪಡತಕ್ಕದ್ದೇ ಹೊರ್ತು ಯಾವ ನೆಪದಿಂದಲೂ ವಿಶೇಷ ಅಪ್ಪಣೆ ಇಲ್ಲದೆ ಅನ್ಯತ್ರ ಎಲ್ಲಿಯೂ ಇಡಲ್ಪಡತಕ್ಕದ್ದಲ್ಲವು.

(5) ಲೈಸೆನ್ಸದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ತಾಸು ವ ಬಟ್ಟುಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲೆಕ್ಕ ಮದತ್ ಪದಾರ್ಥಗಳನ್ನು ಸಾಗಿಸುವ ಬಗ್ಗೆ ಬೇಕಾದ ರಹದಾರೀ ಅಥವಾ ಪ್ಯಾಸ್ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(6) ಲೈಸೆನ್ಸದಾರನು 1904ನೆ ಇಸವಿ ಜುಲೈ ಗುರ್ರೇಯಲ್ಲಿ ಹಳೇ ಲೈಸೆನ್ಸದಾರನ ಬಾಬತು ಸದರೀ ಅಂಗಡಿಯಲ್ಲಿ ದಾಸ್ತಾ ಇರಬಹುದಾದ ಮದತ್ ಪದಾರ್ಥಗಳನ್ನು ಡೆಪ್ಯುಟಿ ಕಮ್ಮಿಷನರ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರದ್ರವ್ಯವನ್ನು ಹಳೇ ಲೈಸೆನ್ಸದಾರನಿಗೆ ಪಾವತಿಮಾಡಿ ತೆಗೆದುಕೊಳ್ಳಲು ಗುರಿಯಾಗತಕ್ಕದ್ದು.

(7) ಲೈಸೆನ್ಸದಾರನು ಹಾಲಿ ಜಾರೀಲಿರುವ ನಿಬಂಧನೆಗಳು ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು. ಲೈಸೆನ್ಸದಾರನು ತನ್ನ ಲೈಸೆನ್ಸಿನ ವಾಯಿದೆ ಅಂದರ್‌ವಾರ್ ಎಕ್ಸೈಜ್ ಕಮ್ಮಿಷನರವರ ಲಿಖಿತ ಮೂಲಕವಾದ ಹುಕುಂ ಇಲ್ಲದೆ, ಮೈಸೂರು ಶೀಮೆಯ ಹೊರಗಾಗಲಿ, ಯಾ ಬೆಂಗಳೂರು ಶಿವಿಲ್ ವ ಮಿಲಿಟೆರಿ ಸ್ಟೇಷನ್ನಲ್ಲಾಗಲಿ ಯಾವದೊಂದು ಮದತ್ ಪದಾರ್ಥಗಳ ಅಂಗಡಿಯಲ್ಲಿ ಪ್ರತ್ಯಕ್ಷವಾದ ಯಾ ಪರೋಕ್ಷವಾದ ಸಂಬಂಧವನ್ನು ಇಟ್ಟುಕೊಂಡಿರಕೂಡದು.

(8) ಮದತ್ ಪದಾರ್ಥಗಳನ್ನು ಮಾರಲಿಕ್ಕೆ ಯಾವ ಹೆಂಗಸನ್ನೂ ಇಡಕೂಡದು.

(9) ಬಾಕಿ ಕರಾರುಗಳು ವ ಷರತ್ತುಗಳು ವಿಧಾಯಕವಾಗಿರುವ ಲೈಸೆನ್ಸಿನಲ್ಲಿ ಉದಹರಿಸಿರುವ ಪ್ರಕಾರ ಇರತಕ್ಕದ್ದು.

7. ಲೈಸೆನ್ಸದಾರನು ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಸೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಯನ್ನ ತೆಗೆಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣಿ ಮೊಬಲಗನ್ನ ದಂಡವಾಗಿ ಸರ್ಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೇವೆಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನ ರದ್ದುಮಾಡಿ ಸದರೀ ಲೈಸೆನ್ಸದಾರನ ಜವಾಬ್ದಾರಿ ಮೇಲೆ ಮೇಲ್ಕಂಡ ಹಕ್ಕನ್ನ ಪುನಹ ಹರಾಜು ಮಾಡಲಿಕ್ಕೂ ಯಾ ಇತರ ವಿಧವಾಗಿ ವಿಲೇ ಮಾಡಲಿಕ್ಕೂ ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರಾಗಿರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನು 1904ನೆ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗದು, ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟ ದೇಖೀಲು ಸದರೀ ಲೈಸೆನ್ಸದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಲೈಸೆನ್ಸ್ ರದ್ದುಮಾಡಲ್ಪಟ್ಟರೆ ಪೂರಾ ಕಾಲದ ಗುತ್ತಿಗೆ ಹಣವು ಕೂಡ್ಲೆ ಪಾವತಿ ಮಾಡಲಿಕ್ಕೆ ಗುರಿಯಾಗತಕ್ಕದ್ದು. ಮತ್ತು ಅಂಥಾ ಮೊಬಲಗು ಜಮೀನ್ ಕಂದಾಯದ ಬಾಕಿಯಂತೆ ಎಲ್ಲಾ ನಷ್ಟಗಳ ಸಹಿತವಾಗಿ ವಸೂಲ್ಮಾಡತಕ್ಕದ್ದು.

8. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ್ ಯಾ ನಿಬಂಧನೆಗಳಿಗೆ ವಿರೋಧವಾಗಿ ನಡಿಸಿದ ತಕ್ಸೀರಿಗೆ ಲೈಸೆನ್ಸದಾರನನ್ನಾಗಲಿ ಯಾ ಆತನ ನೌಕರನನ್ನಾಗಲಿ ಆಪಾದಿಸಿ ದರ್ಯಾಫ್ತು ಕ್ರಮ ನಡಿಸಲು ಆತಂಕ ಪಡಿಸುವದಿಲ್ಲ.

ಷೆಡ್ಯೂಲ್.

ಈ ಬಗ್ಗೆ 1904ನೆ ಮಾರ್ಚಿ 31ನೆ ತಾರೀಖಿನ ಮೈಸೂರು ಗೆಜೆಟ್ ಸಪ್ಲಿಮೆಂಟನಲ್ಲಿ ಪ್ರಾಯಿಷಾದ ಗಾಂಜಾ ಮತ್ತು ಅಫೀಂ ಬಾಬ್ತು ಷೆಡ್ಯೂಲುಗಳನ್ನು ನೋಡತಕ್ಕದ್ದು. ಸದರೀ ಷೆಡ್ಯೂಲುಗಳಲ್ಲಿ ನಮೂದಿಸಲ್ಪಟ್ಟ ಹರಾಜು ತಾರೀಖುಗಳು ಇದರಡೀ ಕಂಡ ಬದಲಾವಣೆಗೆ ಒಳಪಟ್ಟಿರತಕ್ಕದ್ದು :—

1ನೇ ಪುಟದಲ್ಲಿ ..	11ನೆ ಏಪ್ರಲ್ 1904	ಎಂಬದಕ್ಕೆ ಬದಲಾಗಿ	...	2ನೆ ಮೇ 1904	ಎಂಬದಾಗಿ ಓದಿಕೊಳ್ಳತಕ್ಕದ್ದು.	
	14ನೆ	ಡಿಟೋ	,,	...	2ನೆ ಡಿಟೋ	,,
	16ನೆ	ಡಿಟೋ	,,	...	3ನೆ ಡಿಟೋ	,,
	18ನೆ	ಡಿಟೋ	,,	...	4ನೆ ಡಿಟೋ	,,
2ನೇ ಡಿಟೋ ...	19ನೆ	ಡಿಟೋ	,,	...	5ನೆ ಡಿಟೋ	,,
	20ನೆ	ಡಿಟೋ	,,	...	7ನೆ ಡಿಟೋ	,,
6ನೇ ಡಿಟೋ ...	16ನೆ	ಡಿಟೋ	,,		20ನೆ ಡಿಟೋ	,,

7ನೇ ಪುಟದಲ್ಲಿ..	18ನೆ ಏಪ್ರೆಲ್ 1904	ಎಂಬದಕ್ಕೆ ಬದಲಾಗಿ ...	21ನೆ ಮೇ 1904	ಎಂಬದಾಗಿ ಓದಿಕೊಳ್ಳತಕ್ಕದ್ದು.
	20ನೆ ಡಿಟೋ	,, ..	23ನೆ ಡಿಟೋ	,,
	22ನೆ ಡಿಟೋ	,, ..	24ನೆ ಡಿಟೋ	,,
	28ನೆ ಡಿಟೋ	,, ..	30ನೆ ಡಿಟೋ	,,
	25ನೆ ಡಿಟೋ	,, .	27ನೆ ಡಿಟೋ	,,
8ನೇ ಡಿಟೋ .	30ನೆ ಡಿಟೋ	,, ..	2ನೆ ಜೂನ್ 1904	,,
9ನೇ ಡಿಟೋ ..	20ನೆ ಡಿಟೋ	,, ..	19ನೆ ಮೇ 1904	,,
	22ನೆ ಡಿಟೋ	,, ..	21ನೆ ಡಿಟೋ	,,
	25ನೆ ಡಿಟೋ	,, ...	23ನೆ ಡಿಟೋ	,,
10ನೇ ಡಿಟೋ ..	28ನೆ ಡಿಟೋ	,, ..	27ನೆ ಡಿಟೋ	,, ಮೂಡಿಗೆರೆಗೆ ಎದುರಾಗಿ
	16ನೆ ಡಿಟೋ	,, ..	25ನೆ ಡಿಟೋ	,,
	18ನೆ ಡಿಟೋ	,, ..	18ನೆ ಡಿಟೋ	,,
	28ನೆ ಡಿಟೋ	,, ..	7ನೆ ಜೂನ್ 1904	,, ಚನ್ನಗಿರಿಗೆ ಎದುರಾಗಿ
	11ನೆ ಡಿಟೋ	,, ..	21ನೆ ಮೇ 1904	,,
11ನೇ ಡಿಟೋ ...	25ನೆ ಡಿಟೋ	,, ..	4ನೆ ಜೂನ್ 1904	,,
	22ನೆ ಡಿಟೋ	,, ...	1ನೆ ಡಿಟೋ	,,
	20ನೆ ಡಿಟೋ	,, ...	30ನೆ ಮೇ 1904	,,
	18ನೆ ಡಿಟೋ	,, ..	27ನೆ ಡಿಟೋ	,,
	16ನೆ ಡಿಟೋ	,, ...	25ನೆ ಡಿಟೋ	,,
12ನೇ ಡಿಟೋ ..	14ನೆ ಡಿಟೋ	,, ..	24ನೆ ಡಿಟೋ	,,

ಪಿ. ಎನ್. ಪೂರ್ಣಯ್ಯ,
ಮೈಸೂರು ಶೀನಿಯರ್ ಎಕ್ಸೈಜ್ ಕಮಿಷನರ್.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ
ನೋಟಿಸ್.

ತಾರೀಖು 9ನೆ ಏಪ್ರೆಲ್ 1904.

ಮಾಹೆ ಮಾರ್ಚಿ 7ನೆ ಮಂಗಳವಾರದ ಮೈಸೂರು ಗೆಜೆಟಿ 575ನೆ ಪುಟದಲ್ಲಿ ಪ್ರಚುರಪಡಿಸಿರುವ ಮ್ಯುನಿಸಿಪಲ್ ನೋಟಿಸ್ ಅನುಸರಿಸಿ 11ನೆ ಒಳಪ್ಯಾಟಿ ಡಿವಿಜನ್ ವೋಟರ್ಸ್‌ಗಳಿಗೆ ತಿಳಿಯಪಡಿಸುವದೇನಂದರೆ,— ಸದರಿ ನೋಟಿಸಿನಲ್ಲಿ ನಮೂದಿಸಿರುವವರಲ್ಲದೆ ಇದರಡಿ ಕಂಡ ದೊಡ್ಡಮನುಷ್ಯರು ಸಹ ಆ ಡಿವಿಜನ್‌ಗೆ ಮ್ಯುನಿಸಿಪಲ್ ಕಮಿಷನರಾಗಿರಲು ಇಷ್ಟಪಟ್ಟಿರುತ್ತಾರೆಯಾಗಿ ಇವರುಗಳ ಪೈಕಿ ಒಬ್ಬರಿಗಾಗಲಿ ಅಥವಾ ಇಬ್ಬರಿಗಾಗಲಿ ವೋಟ್ ಕೊಡಬಹುದೆಂದು ಕೋರಲ್ಪಟ್ಟಿದೆ :—

ಜಂಜರ್ ನಂಬರ್.	ಪ್ರಚುರಿಸಲ್ಪಟ್ಟಿರುವ ಲಿಸ್ಟಿನ ನಂ.	ಹೆಸರು.	ವಾಸಸ್ಥಳ.
1	..	ಮ|| ರಾ|| ಬಿ. ಗಂಗೈಯ್ಯನವರು	5 ಕೊಟ್ಟಿಗೆ ಲೇನ್

ತಾರೀಖು 9ನೆ ಏಪ್ರೆಲ್ 1904.

ಮಾಹೆ ಮಾರ್ಚಿ 7ನೆ ಮಂಗಳವಾರದ ಮೈಸೂರು ಗೆಜೆಟಿ 575ನೆ ಪುಟದಲ್ಲಿ ಪ್ರಚುರಪಡಿಸಿರುವ ಮ್ಯುನಿಸಿಪಲ್ ನೋಟಿಸ್ ಅನುಸರಿಸಿ IVನೆ ಹಲಸೂರುಪೇಟೆ ಡಿವಿಜನ್ ವೋಟರ್ಸ್‌ಗಳಿಗೆ ತಿಳಿಯಪಡಿಸುವದೇನಂದರೆ,—ಸದರಿ ನೋಟಿಸಿನಲ್ಲಿ ನಮೂದಿಸಿರುವವರಲ್ಲದೆ ಇದರಡಿಯಲ್ಲಿ ಕಂಡ ದೊಡ್ಡಮನುಷ್ಯರು ಸಹ ಆ ಡಿವಿಜನ್‌ಗೆ ಮ್ಯುನಿಸಿಪಲ್ ಕಮಿಷನರಾಗಿರಲು ಇಷ್ಟಪಟ್ಟಿರುತ್ತಾರೆಯಾಗಿ ಇವರುಗಳ ಪೈಕಿ ಒಬ್ಬರಿಗಾಗಲಿ ಅಥವಾ ಇಬ್ಬರಿಗಾಗಲಿ ವೋಟ್ ಕೊಡಬಹುದೆಂದು ಕೋರಲ್ಪಟ್ಟಿದೆ :—

ಜಂಜರ್ ನಂಬರ್.	ಪ್ರಚುರಿಸಲ್ಪಟ್ಟಿರುವ ಲಿಸ್ಟಿನ ನಂ.	ಹೆಸರು.	ವಾಸಸ್ಥಳ.
1	93	ಮ|| ಬಿ ಉಸ್ಮಾನ್ ಖಾನ್ ಸಾಹೇಬ್	112 ತಾಲ್ಲೂಕು ಕಚೇರಿ ರೋಡ್

ಪಿ. ಪಲ್ಪು,
ವೈಸ್ ಪ್ರೆಸಿಡೆಂಟ್.

ಪ್ರಸಿದ್ಧ ಪತ್ರಿಕೆ.

ತಾರೀಖು 31ನೆ ಮಾರ್ಚಿ 1904.

ತುಮಕೂರು ತಾಲ್ಲೂಕು ಕೋಳಾಲದ ಕಸಬಾದಲ್ಲಿರುವ ನನ್ನ ಅಣ್ಣ ಲಕ್ಷ್ಮೀನಾರಣಪ್ಪನ ಮಗ ರಾಮಪ್ಪ ಉರಫ್ ರಾಮಸ್ವಾಮಿಯು ತನಗೆ ಹಕ್ಕು ಬಾಧ್ಯತೆ ಮತ್ತು ಪರಭಾರೆ ಮಾಡಲು ಅವಕಾಶ ಮತ್ತು ಅಧಿಕಾರವಿಲ್ಲದ ಸ್ಥಿರ ಆಸ್ತಿಗಳನ್ನು ದಾಕ್ಷಿಣ್ಯದಿಂದ ಪರಭಾರೆ ಮಾಡಲು ಪ್ರಯತ್ನಪಟ್ಟಿರುತ್ತಾನೆ. ಆದ್ದರಿಂದ ಯಾರೇ ಆಗಲಿ ಯಾವ ವಿಧವಾಗಿಯೇ ಆಗಲಿ ಯಾವ ಸ್ಥಿರ ಆಸ್ತಿಯನ್ನೇ ಆಗಲಿ ಪರಭಾರೆಯನ್ನು ಈ ರಾಮಪ್ಪ ಉರಫ್ ರಾಮಸ್ವಾಮಿಯಿಂದ ಪಡದರೆ ಅವರಿಗೆ ಅಂಥಾ ಪರಭಾರೆಯು ಸಲ್ಲದೆ ಕೊಟ್ಟ ಪ್ರತಿಫಲವು ವ್ಯರ್ಥವಾಗುತ್ತದೆಂದು ಇದರಿಂದ ಸರ್ವರಿಗೂ ಪ್ರಸಿದ್ಧಪಡಿಸಿರುತ್ತೇನೆ.

ಮಲ್ಲಪ್ಪನ ರಾಜಪ್ಪ.

Mysore Government Central Press, Bangalore.—1904.

154 645

ಮೈಸೂರ ಗೆಜೆಟ್.

ನಂ. 39. ಸರ್ಕಾರದಿಂದ ಛಾಯಿಸ್ ಆದ್ದು. ನಂ. 16.

ಬೆಂಗಳೂರು, ಗುರುವಾರ, ಏಪ್ರೈಲ್ ತಾ|| 21, ಸನ್ 1904.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ನಂಬರ್ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ರಿಂಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಯಡ್ಯುಕೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜಿರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೋಲೀಸ್ ಸೂಪರ್ರಿಂಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸ್‌ಗಳು.

3ನೆ ಭಾಗ—ಲೆಜಿಸ್ಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದಪತ್ರಗಳು —ಇಲ್ಲಾ.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 5ನೆ ಏಪ್ರೈಲ್ 1904.

ನಂ. ಲೋ. ಜೋ. ಪಿ. 1296, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರುವರಿ 10ನೆ ಮಾರ್ಕ್ಕಂ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ತುಮಕೂರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಮಲ್ಲೇನಹಳ್ಳಿ ...	ತುಮಕೂರು	7. ಬಿದರೆ ...	ಗುಬ್ಬಿ
2. ಮುತ್ತಸಂದ್ರ ...	ಡಿಟೋ	8. ಸೋಮಲಾಪುರ ...	ಡಿಟೋ
3. ಸ್ವಾಮೇನಹಳ್ಳಿ ...	ಡಿಟೋ	9. ಕರಡಿ ...	ತಿಪಟೂರು
4. ವಡ್ಡರಹಟ್ಟಿ ...	ಡಿಟೋ,	10. ಕೊಟಿಗೇನಹಳ್ಳಿ ...	ಡಿಟೋ
5. ತಿಂಗಳೂರು ...	ಮದ್ದಗಿರಿ	11. ಆಲದಹಳ್ಳಿ ...	ಡಿಟೋ
6. ಲಕ್ಕೇನಹಳ್ಳಿ ...	ಗುಬ್ಬಿ		

ತಾರೀಖು 12ನೆ ಏಪ್ರೈಲ್ 1904.

ನಂ. ಲೋ. ಜೋ. ಪಿ. 1324, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರುವರಿ 10ನೆ ಮಾರ್ಕ್ಕಂ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳವು ರೋಗ ತಗಲಿದ ಪ್ರದೇಶವಾಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.	ತಾಲ್ಲೂಕು.
ಜಗಳೂರು ಪೇಟೆ ...	ಜಗಳೂರು.

155

ತಾರೀಖು 11ನೆ ಏಪ್ರಿಲ್ 1904.

ನಂ. ಲೋ. ಬೋ. ಪಿ. 1311, ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳಲ್ಲಿ ನಡೆಯುವ ಕೆಳಗೆ ನಮೂದು ಮಾಡಲ್ಪಟ್ಟ ಜಾತ್ರೆಗಳ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಗಳಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮತ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದ :—

ಜಾತ್ರೆಯ ಹೆಸರು.	ಸ್ಥಳ.	ತಾರೀಖು.	
		ಯಾವ ಲಾಗಾಯತು.	ಯಾವ ವರಿವಿಗೆ.
ವೀರಭದ್ರದೇವರ ಜಾತ್ರೆ ..	ಚಳ್ಳಕೆರೆ ..	29—4—04	1—5—04
ರಂಗನಾಥಸ್ವಾಮಿಯ ಜಾತ್ರೆ ...	ಬೆಳಗೆರೆ ...	ಡಿಟೋ	ಡಿಟೋ

ಸ್ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರ್ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, ಮೈಸೂರು ಸೀಮೆಯ ಘನವನ್ನೈದಿದ ಶ್ರೀಮತ್ ಮಹಾರಾಜಾ ಸರ್ಕಾರದವರು ಪ್ರತಿ ಬಂದರ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಮೇಲ್ಕಂಡ ಜಾತ್ರೆಗಳಿಗೆ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸೇರುವದನ್ನು ಅಡ್ಡೀಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 20ನೆ ಏಪ್ರಿಲ್ 1904.

ನಂ. ಲೋ. ಬೋ. ಪಿ. 1335, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಆಗಾಗ್ಯೆ ರೋಗೆ ತಗಲಿದ ಪ್ರದೇಶಗಳಾಗಿ ಪ್ರಸಿದ್ಧಪಡಿಸಲ್ಪಟ್ಟ ಇದರಡೀ ಕಂಡ ಸ್ಥಳಗಳು ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ :—

ಹಾಸನ ಡಿಸ್ಟ್ರಿಕ್ಟ್.

	ಸ್ಥಳ.	ತಾಲ್ಲೂಕು.
1.	ಶಾಮಪುರ ...	ಹಾಸನ.
2.	ಯಮ್ಮೆದೇವರಹಳ್ಳಿ ...	ಡಿಟೋ
3.	ಹೊಸೂರು ...	ಡಿಟೋ
4.	ತ್ಯಗಟೂರು ..	ಡಿಟೋ
5.	ಕಾಟಿಹಳ್ಳಿ ...	ಡಿಟೋ
6.	ಕ್ಯಾತನಹಳ್ಳಿ ...	ಡಿಟೋ
7.	ಬಿದರಕೆರೆ ...	ಡಿಟೋ
8.	ಪ್ರೊಗಣೆ ...	ಡಿಟೋ
9.	ಕಾಳತಮ್ಮನಹಳ್ಳಿ ...	ಡಿಟೋ
10.	ಗೂಳೀನಹಳ್ಳಿ ..	ಡಿಟೋ
11.	ದ್ಯಾವಲಾಪುರ ...	ಡಿಟೋ
12.	ಗುಡ್ಡಿನಹಳ್ಳಿ ...	ಡಿಟೋ
13.	ಚನ್ನಪಟ್ಣ	ಡಿಟೋ
14.	ಚಿಕ್ಕ ಬ್ಯಾಡಗೆರೆ ...	ಬೇಲೂರು.
15.	ಅಂದಲೆ ...	ಡಿಟೋ
16.	ಜೇಲೂರು ...	ಡಿಟೋ
17.	ಮಾದಾಪುರ ...	ಡಿಟೋ
18.	ಭಂಡಿ ಲಕ್ಕರ್ ಕೊಪ್ಪಲ್ ...	ಡಿಟೋ
19.	ತಗರೆ ...	ಡಿಟೋ
20.	ಪಡಿವಳಲು ...	ಡಿಟೋ
21.	ದೊಡ್ಡಮೇದೂರು ...	ಡಿಟೋ
22.	ಗೋತ್ರವಳ್ಳಿ	ಡಿಟೋ
23.	ಶಂಕರದೇವರಪೇಟೆ ...	ಡಿಟೋ
24.	ಚಲುವನಹಳ್ಳಿ ...	ಅರಸೀಕೆರೆ.
25.	ಗರುಡಗಿರಿ ...	ಡಿಟೋ
26.	ಹೆಬ್ಬ್ಯಾರನಹಳ್ಳಿ ..	ಡಿಟೋ
27.	ಬನ್ನಸಮುದ್ರ ...	ಡಿಟೋ
28.	ತಳಲೂರು ..	ಡಿಟೋ
29.	ಕರಗುಂದ ...	ಅರಸೀಕೆರೆ
30.	ಕಾಲೇಗರೆ ..	ಡಿಟೋ
31.	ಬಸವನಹಳ್ಳಿ ..	ಡಿಟೋ
32.	ಬಡ್ಡರಹಟ್ಟಿ ..	ಡಿಟೋ
33.	ಗೊಲ್ಲರಹಟ್ಟಿ ..	ಡಿಟೋ
34.	ರಂಗಾಪುರ ...	ಡಿಟೋ
35.	ಬಾಗೂರು ...	ಚನ್ನರಾಯಪಟ್ಣ
36.	ಮೂಡ್ನಹಳ್ಳಿ ...	ಡಿಟೋ
37.	ಆದಿಹಳ್ಳಿ ..	ಡಿಟೋ
38.	ಓಬಳಾಪುರ ..	ಡಿಟೋ
39.	ಬಾವೆನಹಳ್ಳಿ ...	ಡಿಟೋ
40.	ಹೊನ್ನೇನಹಳ್ಳಿ ..	ಡಿಟೋ
41.	ಕುಂಬಾರಹಳ್ಳಿ ...	ಡಿಟೋ
42.	ಚೋಕೇನಹಳ್ಳಿ ..	ಡಿಟೋ
43.	ಬಡ್ಡಿಕೆರೆ ..	ಡಿಟೋ
44.	ಚಾವಲಗೆರೆ ..	ಡಿಟೋ
45.	ಸಾಸಲಪುರ ..	ಡಿಟೋ
46.	ವಾರನಹಳ್ಳಿ ..	ಡಿಟೋ
47.	ಮಾಯನವಲೆ ..	ಡಿಟೋ
48.	ನವಲೆ ..	ಡಿಟೋ
49.	ಹಳ್ಳಿಮೈಸೂರು ...	ಹೊಳೇನರಸೀಪುರ
50.	ಹೊಳೇನರಸೀಪುರ ಟವುನ್ ...	ಡಿಟೋ
51.	ಗೋಹಳ್ಳಿ ..	ಡಿಟೋ
52.	ಕಲ್ಲಹಳ್ಳಿ ..	ಡಿಟೋ
53.	ಹಂಗರಹಳ್ಳಿ ..	ಡಿಟೋ
54.	ಬಸದಹಳ್ಳಿ ...	ಅರಕಲಗೋಡು
55.	ಕುಂದೂರು ..	ಆಲೂರು ಸಬ್ ತಾಲ್ಲೂಕು.

ತಾರೀಖು 20ನೆ ಏಪ್ರೆಲ್ 1904.

ನಂ. ಲೋ. ಬೋ. ಪಿ. 1337, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನೆಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರುವರಿ 10ನೆ ಮುರ್ಖ್ಕಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಕೋಲಾರ ವ ಮೈಸೂರು ಡಿಸ್ಟ್ರಿಕ್ಟುಗಳಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು.

ಕೋಲಾರ ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.
1. ತುಮಕುಂಟೆಹಳ್ಳಿ	ಚಿಕ್ಕಬಳ್ಳಾಪುರ.

ಮೈಸೂರು ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಅತ್ತಿಗೋಡು ..	ಹುಣಸೂರು	4. ಹಿರಿಕಾಟಿ ...	ಗುಂಡ್ಲುಪೇಟೆ
2. ಅರೆನಲ್ಲಿ ..	ಡಿಟೋ	5. ಪಡಗೂರು ..	ಡಿಟೋ
3. ದ್ಯಾವೇಗೌಡನದೊಡ್ಡಿ ..	ಮಳವಳ್ಳಿ	6. ಯಣಗುಂಬ ...	ಚಾಮರಾಜನಗರ

ತಾರೀಖು 20ನೆ ಏಪ್ರೆಲ್ 1904.

ನಂ. ಲೋ. ಬೋ. ಪಿ. 1339, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳಲ್ಲಿ ನಡೆಯುವ ಕೆಳಗೆ ನಮೂದು ಮಾಡಲ್ಪಟ್ಟ ಜಾತ್ರೆಗಳ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಗಳಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ತಾರೀಖು.	
			ಯಾವ ಲಾಗಾಯತು.	ಯಾವ ವರಿವಿಗೆ.
ರಬ್ಬಿ ಅವಾಲ್ ಪಾಚಾ ...	ಗಂಜಾಂ ...	ಶ್ರೀರಂಗಪಟ್ಟಣ ...	20—5—04	30—5—04
ಶ್ರೀಲಕ್ಷ್ಮೀನರಸಿಂಹಸ್ವಾಮಿಯ ರಥೋತ್ಸವ ..	ಮಾರೇಹಳ್ಳಿ ...	ಮಳವಳ್ಳಿ ...	25—5—04	5—6—04

ಸ್ನ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ 14ನೆ ನಂಬರು ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ಮಹಾರಾಜಾ ಸರ್ಕಾರದವರು ಪ್ರತಿ ಬಂದರ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಮೇಲ್ಕಂಡ ಜಾತ್ರೆಗಳಿಗೆ ಜನಗಳು ಸೇರುವದನ್ನು ಅಡ್ಡಿಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರಿ ಜಾತ್ರೆಗಳಿಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 14ನೆ ಏಪ್ರೆಲ್ 1904.

ನಂ. ಜ. 5192, ಫೊರಿನ್ ಇಲಾಖಾ ಇಂಡಿಯಾ ಗವರ್ನ್ಮೆಂಟಿನವರಿಂದ ಕೊಡಲ್ಪಟ್ಟ 1904ನೆ ಮಾರ್ಚಿ 30ನೆ ಮುರ್ಖ್ಕಂ 645—ಜ. ನೇ ನಂಬರ್ ಇದರಡೀ ಕಂಡ ಇಸ್ತಿಹಾರ್ನಾಮೆಯು ಪುನಃ ಛಾಯಿಷ್ಮಾ ಡಲ್ಪಟ್ಟಿರುತ್ತದೆ:—

ಇಸ್ತಿಹಾರ್ನಾಮೆ.

ಮೈಸೂರು ಗವರ್ನ್ಮೆಂಟಿನ ಸೀನಿಯರ್ ಸರ್ಜನ್ ವ ಎಕ್ಸ್ ಅಫೀಷಿಯೋ ಸ್ಯಾನಿಟರಿ ಕಮಿಷನರಾದ ಲೆಫ್ಟಿನೆಂಟ್ ಕರ್ನಲ್ ಪಿ. ಎಚ್. ಬೆರ್ನರ್, ಇಂಡಿಯನ್ ಮೆಡಿಕಲ್ ಸರ್ವಿಸ್ (ಮದರಾಸು), ಯವರ ನೌಕರಿಯು 1904ನೆ ಮಾರ್ಚಿ 28ನೆ ತಾರೀಖಿನಾರಭ್ಯ ಘನವನ್ನೈದಿದ ಇಂಡಿಯಾ ದೇಶದ ಕಮ್ಯಾಂಡರ್ ಇನ್ ಚೀಫ್ ಯವರ ತಾಬೆಯಲ್ಲಿ ಹಂಗಾಮಿ ತರೀಕಾ ಇಡಲ್ಪಟ್ಟಿರುತ್ತೆ.

(ಸೈನ್ಡ್) ಎಲ್. ಡಬ್ಲ್ಯು. ಡೇನ್,
ಇಂಡಿಯಾ ಗವರ್ನ್ಮೆಂಟಿನ ಸೆಕ್ರೆಟರಿ.

ತಾರೀಖು 16ನೆ ಏಪ್ರೆಲ್ 1904.

ನಂ. ಜ. 5273, ಮೈಸೂರು ಡಿಸ್ಟ್ರಿಕ್ಟಿನ ಸಿವಿಲ್ ಸರ್ಜನ್ ರಾದ ಮೆ॥ ಪಿ. ಎಸ್. ಅಚ್ಯುತರಾಯರು 1904ನೆ ಏಪ್ರೆಲ್ 2ರ ಲಗಾಯತು 8ರ ವರಿವಿಗೆ ಮೈಸೂರು ಗವರ್ನ್ಮೆಂಟಿನ ಸೀನಿಯರ್ ಸರ್ಜನ್ ವ ಸ್ಯಾನಿಟರಿ ಕಮಿಷನರವರ ಆಫೀಸಿನಲ್ಲಿ ಸ್ಪೆಷಿಯಲ್ ಡ್ಯೂಟಿ ಮೇಲಿದ್ದರು.

ತಾರೀಖು 31ನೆ ಮಾರ್ಚಿ 1904.

ನಂ. 3722—ಲೋ. ಫಂ. 77—03, ಸನ್ 1902ನೆ ಇಸವಿಯ IIನೆ ನಂಬರ್ ಲೋಕಲ್ ಬೋರ್ಡ್ಸ್ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ಮತ್ತು 1903ನೆ ಸೆಪ್ಟಂಬರ್ 9ನೆ ಮಾರ್ಕ್ಕಂ 30—ಲೆಜಿಸ್. 4—03ನೆ ನಂಬರ್ ಇಸ್ತಿಹಾರ್ನಾಮೆಯೊಡನೆ ಪ್ರಕಟಿಸಿದ ರೂಲುಗಳ 21ನೆ ಪ್ಯಾರಾ ಅನುಸರಿಸಿ, ಸದರೀ ರೂಲುಗಳ 7ನೆ ಪ್ಯಾರಾವಿನಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ತಾಲ್ಲೂಕು ಬೋರ್ಡುಗಳ ಮೆಂಬರುಗಳ ಇದರಡೀ ನಮೂದಾದ ಪಟ್ಟಿಯು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಕಟಿಸ್ಮಾಡಲ್ಪಟ್ಟಿರುತ್ತದೆ :—

ಚಿಕ್ಕಬಳ್ಳಾಪುರ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು .. ಪ್ರೆಸಿಡೆಂಟರು.
2. ಅಮಲ್ದಾರು .. .. .. ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಟಲ್ ಅಸಿಸ್ಟೆಂಟರು .. ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫಿಸರು .. ಡಿಟ್ಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5. ಮ॥ ಬಿ. ರಾಘವೇಂದ್ರಾಚಾರ್ರು .... ಡಿಟ್ಟೋ
6. ,, ರಂಗೆಗೌಡರು .... ಡಿಟ್ಟೋ
7. ,, ಲಕ್ಷ್ಮೀನಾರಣಪ್ಪನವರು .. .. .. ಡಿಟ್ಟೋ
8. ,, ವೆಂಕಟರಾಯಪ್ಪನವರು .. . .. ಡಿಟ್ಟೋ

(f) ಕ್ಲಾಜ್ ಅನುಸರಿಸಿ.

9. ,, ಎಚ್. ನಾರಣ್ಣಯ್ಯನವರು .. .. .. ಡಿಟ್ಟೋ

(g) ಕ್ಲಾಜ್ ಅನುಸರಿಸಿ.

10. ,, ಫಾದರ್ ಬ್ಯಾರಿಯವರು .. .. .. ಡಿಟ್ಟೋ
11. ,, ಜೆ. ಸುಬ್ಬಾಶಾಸ್ತ್ರಿಯವರು .. .. ಡಿಟ್ಟೋ
12. ,, ಸಿ. ನಾರಾಯಣಸ್ವಾಮಿ ಸೆಟ್ಟರು .. .. ಡಿಟ್ಟೋ

ಗೋರಿಬಿದನೂರು ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು .. ಪ್ರೆಸಿಡೆಂಟರು.
2. ಅಮಲ್ದಾರು .... ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಟಲ್ ಅಸಿಸ್ಟೆಂಟರು ... ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫಿಸರು .. ಡಿಟ್ಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5. ಮ॥ ಪಟೇಲ್ ರಾಮಣ್ಣನವರು .. .. ಡಿಟ್ಟೋ
6. ,, ನರಸಿಂಗರಾಯರು .... ಡಿಟ್ಟೋ
7. ,, ಚಿಕ್ಕಗೌಡರು .. .. .. ಡಿಟ್ಟೋ
8. ,, ಅಂಜನಿಗೌಡರು ... . ಡಿಟ್ಟೋ

(f) ಕ್ಲಾಜ್ ಅನುಸರಿಸಿ.

9. ,, ಪಟೇಲ್ ವೆಂಕಟೆಗೌಡರು .. .. ಡಿಟ್ಟೋ

(g) ಕ್ಲಾಜ್ ಅನುಸರಿಸಿ.

10. ,, ಎ. ಫಾರೆಸ್ಟರವರು ... ... ಡಿಟ್ಟೋ
11. ,, ಚೆಂಚರೆಡ್ಡಿಯವರು .. .. .. ಡಿಟ್ಟೋ
12. ,, ಟಿ. ನಂಜುಂಡಯ್ಯನವರು .. .. ಡಿಟ್ಟೋ

ಬಾಗೆಪಲ್ಲಿ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು .. ಪ್ರೆಸಿಡೆಂಟರು.
2. ಅಮಲ್ದಾರು .. .. .. ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಟಲ್ ಅಸಿಸ್ಟೆಂಟರು ... ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫಿಸರು .. ಡಿಟ್ಟೋ

(*f*) ಕ್ಲಾಜ್ ಅನುಸರಿಸಿ.

9. ಮೆ|| ಡಿ. ಶ್ರೀನಿವಾಸ ಗೋಪಾಲಾಚಾರ್ಲು ... ... ಮೆಂಬರು.

(*g*) ಕ್ಲಾಜ್ ಅನುಸರಿಸಿ.

10. ,, ಗುಂಡುರಾಯರು, ಜೋಡಿದಾರು ... ಡಿಟೋ
11. ,, ಮಲಿಗೆ ಸಂಜೀವಪ್ಪನವರು, ಡಿಟೋ ... ಡಿಟೋ
12. ,, ಸುಬ್ಬರಾಯರು, ಜಮೀನ್ದಾರು ವ ಪೆನ್ಷನ್ ಶಿರಸ್ತೆದಾರು ... ಡಿಟೋ

2. ಹೊಸಕೋಟೆ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರು ... ಪ್ರೆಸಿಡೆಂಟರು.
2. ಅಮಲ್ದಾರು ... ... ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸೆರಿಯ ಚಾರ್ಜಿನಲ್ಲಿರುವ ಆಸ್ಪತ್ರಲ್ ಅಸಿಸ್ಟೆಂಟರು ... ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಓವರ್ಸಿಯರು ... ... ಡಿಟೋ

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

5. ಮೆ|| ಸೀನಪ್ಪನವರು ... ... ಡಿಟೋ
6. ,, ಎ. ರಾಮಣ್ಣನವರು ... ... ಡಿಟೋ
7. ,, ಕೆ. ಸೀನಪ್ಪನವರು ... ... ಡಿಟೋ
8. ,, ದ್ಯಾವೇಗೌಡರು ... ... ಡಿಟೋ

(*f*) ಕ್ಲಾಜ್ ಅನುಸರಿಸಿ.

9. ,, ವೀರಭದ್ರಪ್ಪನವರು ... ... ಡಿಟೋ

(*g*) ಕ್ಲಾಜ್ ಅನುಸರಿಸಿ.

10. ,, ಹೈದರಿಖಾನರವರು, ಜಮೀನ್ದಾರು ... ಡಿಟೋ
11. ,, ಚನ್ನಬಸವಗೌಡರು ಡಿಟೋ ... ... ಡಿಟೋ
12. ,, ಹನುಮಂತಗೌಡರು ಡಿಟೋ ... ... ಡಿಟೋ

3. ಕಾನಕಾನಹಳ್ಳಿ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು ... ಪ್ರೆಸಿಡೆಂಟರು.
2. ಅಮಲ್ದಾರು ... ... ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸೆರಿಯ ಚಾರ್ಜಿನಲ್ಲಿರುವ ಆಸ್ಪತ್ರಲ್ ಅಸಿಸ್ಟೆಂಟರು ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು ... ... ಡಿಟೋ

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

5. ಮೆ|| ಲಿಂಗಗೌಡರು ಗುರಿಕಾರು ... ... ಡಿಟೋ
6. ,, ಮಲ್ಲರಾಜೆ ಅರಸಿನವರು ... ... ಡಿಟೋ
7. ,, ತಿಮ್ಮೆಗೌಡರು ... ... ಡಿಟೋ
8. ,, ವೀರಭದ್ರಪ್ಪನವರು ... ... ಡಿಟೋ

(*f*) ಕ್ಲಾಜ್ ಅನುಸರಿಸಿ.

9. ,, ತಿಮ್ಮೆಗೌಡರು ... ... ಡಿಟೋ

(*g*) ಕ್ಲಾಜ್ ಅನುಸರಿಸಿ.

10. ,, ಬಾಜೀರಾವ್ ಸಿಂಧೆಯವರು ... ... ಡಿಟೋ
11. ,, ಮುದ್ದಪ್ಪನವರು ... ... ಡಿಟೋ
12. ,, ಸೈಯದ್ ಸಾಹೇಬರು ... ... ಡಿಟೋ

4. ಮಾಗಡಿ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರು ... ಪ್ರೆಸಿಡೆಂಟರು.
2. ಅಮಲ್ದಾರು ... ... ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸೆರಿಯ ಚಾರ್ಜಿನಲ್ಲಿರುವ ಆಸ್ಪತ್ರಲ್ ಅಸಿಸ್ಟೆಂಟರು ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು ... ... ಡಿಟೋ

851

ಇತರ ಮೆಂಬರುಗಳು.

(a) ಕ್ಲಾಜ್ ಅನುಸರಿಸಿ.

5. ಮ॥ ಎಚ್. ಬೈರೆಡ್ಡಿಯವರು .. ಮೆಂಬರು
6. ,, ಎಸ್. ಮಲ್ಲಪ್ಪನವರು ... .. ಡಿಟೋ
7. ,, ಎ. ಬೈರೆಡ್ಡಿಯವರು ... ... ಡಿಟೋ
8. ,, ವೆಂಕಟಪ್ಪನವರು ಡಿಟೋ

(b) ಕ್ಲಾಜ್ ಅನುಸರಿಸಿ.

9. ,, ಅರಗಲ್ ರಾಮಸ್ವಾಮಯ್ಯನವರು .. ... ಡಿಟೋ

(c) ಕ್ಲಾಜ್ ಅನುಸರಿಸಿ.

10. ,, ಸೀನಪ್ಪನವರು .. ... ಡಿಟೋ
11. ,, ಬಂಗಾರನಾಯಕರವರು ... .. ಡಿಟೋ
12. ,, ಜಿ. ಬೈರಪ್ಪರೆಡ್ಡಿಯವರು ... . ಡಿಟೋ

ಗುಡಿಬಂಡೆ ಸಬ್ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ಸಬ್ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರು .... ಪ್ರೆಸಿಡೆಂಟರು.
2. ಡೆಪ್ಯುಟಿ ಅಮಲ್ದಾರು ... .. ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು... ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು ... ಡಿಟೋ

ಇತರ ಮೆಂಬರುಗಳು.

(a) ಕ್ಲಾಜ್ ಅನುಸರಿಸಿ.

5. ಮ॥ ಎಚ್. ಕೃಷ್ಣಪ್ಪನವರು .. .. ಡಿಟೋ
6. ,, ಲಕ್ಷ್ಮಣರಾಯರು ... . ಡಿಟೋ
7. ,, ಬಾಚೆ ಕರಿಯಪ್ಪನವರು .. .. ಡಿಟೋ
8. ,, ನಾರಪ್ಪರೆಡ್ಡಿಯವರು .. .. ಡಿಟೋ

(b) ಕ್ಲಾಜ್ ಅನುಸರಿಸಿ.

9. ,, ಚೆಟ್ಟಿ ಚಿಕ್ಕಣ್ಣನವರು ... ... ಡಿಟೋ

(c) ಕ್ಲಾಜ್ ಅನುಸರಿಸಿ.

10. ,, ಸುಬ್ಬಣ್ಣನವರು ... . ಡಿಟೋ
11. ,, ವೆಂಕಟಸುಬ್ಬಯ್ಯನವರು .. .. ಡಿಟೋ
12. ,, ಗೊರ ವೀರಪ್ಪನವರು .. . ... ಡಿಟೋ

ತಾರೀಖು 2ನೆ ಏಪ್ರಿಲ್ 1904.

ನಂ. 3781—ಲೋ. ಫಂ. 76-04, ಸನ್ 1903ನೆ ಸೆಪ್ಟಂಬರ್ 9ನೆ ತಾರೀಖು 30—ಲೆಜಿಸ್. 4-0 (ನೆ ನಂಬರ್ ಇಷ್ತಿಹಾರ್ನಾಮೆಯೊಡನೆ ಜಾಹೀರಾದ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ 7ನೆ ಪ್ಯಾರಾವಿನಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ಬೆಂಗಳೂರ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ಕಂಡ ತಾಲ್ಲೂಕು ಬೋರ್ಡುಗಳಿಗೋಸ್ಕರ ನೇಮಕರನ್ನಾಗಿ ಮಾಡಲ್ಪಟ್ಟ ಮೆಂಬರುಗಳ ಇದರಡಿ ಕಂಡ ಪಟ್ಟಿಯು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಜಾಹೀರುಮಾಡಲ್ಪಟ್ಟಿರುತ್ತದೆ:—

1. ದೇವನಹಳ್ಳಿ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು .. ... ಪ್ರೆಸಿಡೆಂಟರು.
2. ಅಮಲ್ದಾರು .. .. ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು... ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು . ... ಡಿಟೋ

ಇತರ ಮೆಂಬರುಗಳು.

(a) ಕ್ಲಾಜ್ ಅನುಸರಿಸಿ.

5. ಮ॥ ಗುರುನಂಜಿ ವಡೆಯರವರು, ಜೋಡಿದಾರು .. .. ಡಿಟೋ
6. ,, ಚನ್ನಬಸವಡೆಯರವರು, ಡಿಟೋ .. .. ಡಿಟೋ
7. ,, ಕೋಟೆ ಚಿಕ್ಕಣ್ಣಪ್ಪನವರು, ವರ್ತಕರು ... ... ಡಿಟೋ
8. ,, ವೆಂಕಟಗಿರಿಯವರು, ಪಟೇಲರು .. .. ಡಿಟೋ

651

(e) ಕ್ಲಾಜ್ ಅನುಸರಿಸಿ.

5. ಮೆ|| ಹೋಸರ ತಂಗಪ್ಪನವರು ... ... ಮೆಂಬರು.
6. „ ನಂಜೆಗೌಡರು ... ... ಡಿಟೋ
7. „ ಸುಬ್ಬರಾಯರು ... ... ಡಿಟೋ
8. „ ಸೂರಪ್ಪನವರು ... ... ಡಿಟೋ

(f) ಕ್ಲಾಜ್ ಅನುಸರಿಸಿ.

9. „ ಕಾಸೀಂಸಾಹೇಬರು ... ... ಡಿಟೋ

(g) ಕ್ಲಾಜ್ ಅನುಸರಿಸಿ.

10. „ ರಾಮಚಂದ್ರರಾಯರು, ಪ್ಲೀಡರು ... ... ಡಿಟೋ
11. „ ವೆಂಕಟರಂಗಸೆಟ್ಟರು ... ... ಡಿಟೋ
12. „ ಮಲ್ಲಪ್ಪಸೆಟ್ಟರು ... ... ಡಿಟೋ

5. ಆನೇಕಲ್ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರು ... ಪ್ರೆಸಿಡೆಂಟರು.
2. ಅಮಲ್ದಾರು ... ... ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪತ್ರೆ ಅಸಿಸ್ಟೆಂಟರು .. ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಓವರ್ಸಿಯರು ... ... ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5. ಮೆ|| ಕಾಶಿಪತಯ್ಯನವರು ... ... ಡಿಟೋ
6. „ ರಾಮಣ್ಣನವರು, ಪಟೇಲರು ... ... ಡಿಟೋ
7. „ ಗೌಸಿಖಾನರವರು ... ... ಡಿಟೋ
8. „ ಪುಟ್ಟಪ್ಪನವರು, ಪಟೇಲರು ... ಡಿಟೋ

(f) ಕ್ಲಾಜ್ ಅನುಸರಿಸಿ.

9. „ ಚಿಕ್ಕ ನಂಜಣ್ಣನವರು ... ... ಡಿಟೋ

(g) ಕ್ಲಾಜ್ ಅನುಸರಿಸಿ.

10. „ ರಾಮಸ್ವಾಮಯ್ಯಂಗಾರು ... ... ಡಿಟೋ
11. „ ನರಸಿಂಹಯ್ಯನವರು .. .. ಡಿಟೋ
12. „ ನಂಜಪ್ಪನವರು, ಪಟೇಲರು ... ... ಡಿಟೋ

ತಾರೀಖು 2ನೆ ಏಪ್ರಿಲ್ 1904.

ನಂ. 3783—ಲೋ. ಫಂ. 78-03, ಸ್ 1903ನೆ ಸೆಪ್ಟಂಬರ 9ನೆ ಮಾರ್ಚಿ 30—ಲೆಜಿಸ್. 4—03ನೆ ನಂಬರ ಇಷ್ಟಿಹಾರ ದ್ವಾ ಮೊದಲನೆ ಥಾಯಿಷಾದ ಲೋಕಲ್ ಬೋರ್ಡುಗಳ ರಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ 7ನೆ ಪ್ಯಾರಾದಲ್ಲಿ ಕಂಡ ನಿಯಮಗಳನುಸರಿಸಿ ಮಾಡಲ್ಪಟ್ಟ ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ತಾಲ್ಲೂಕು ಬೋರ್ಡುಗಳಿಗೋಸ್ಕರ ಮಂಜೂರು ಮಾಡಲ್ಪಟ್ಟ ಮೆಂಬರುಗಳ ಪಟ್ಟಿ:—

1. ಪಾವಗಡ ತಾಲ್ಲೂಕು

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು .. ಪ್ರೆಸಿಡೆಂಟರು.
2. ಅಮಲ್ದಾರು ... .. ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪತ್ರೆ ಅಸಿಸ್ಟೆಂಟರು ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5. ಮೆ|| ಗಿರಿಯಪ್ಪನವರು, ಗುಮ್ಮಘಟ್ಟದ ಪಟೇಲರು ... .. ಡಿಟೋ
6. „ ಚನ್ನಕೇಶವಪುರದ ಶ್ರೀನಿವಾಸರಾಯರು ಡಿಟೋ
7. „ ಪೋತಗಾನಹಳ್ಳಿಯ ಭೀಮಸೇನರಾಯರು ಡಿಟೋ
8. „ ತಿರುಮಣಿಯ ವೊಂಟಿಕೊಂಡ ಗುರಪ್ಪನವರು ಡಿಟೋ

(f) ಕ್ಲಾಜ್ ಅನುಸರಿಸಿ

9. „ ಪಾವಗಡದ ತಿರುಮಲ ತಾತಾಚಾರು ಡಿಟೋ

(g) ಕ್ಲಾಜ್ ಅನುಸರಿಸಿ.

10. „ ಬುಡ್ಡರಡ್ಡಿಹಳ್ಳಿಯ ಕೇಶವರಡ್ಡಿಯವರು ... ಡಿಟೋ
11. „ ವಡನಕಲ್ಲಿನ ಕೆಂಚಪ್ಪನವರು ... .. ಡಿಟೋ
12. „ ಪಾವಗಡದ ಹನುಮಂತ ಶೆಟ್ಟರು .. ... ಡಿಟೋ

2. ಗುಬ್ಬಿ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1.	ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು ..	ಪ್ರೆಸಿಡೆಂಟರು.
2.	ಅಮಲ್ದಾರು ...	ವೈಸ್ ಪ್ರೆಸಿಡೆಂಟರು.
3.	ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪತಾಲ್ ಅಸಿಸ್ಟೆಂಟರು	ಮೆಂಬರು.
4.	ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು ..	ಡಿಟ್ಟೋ

ಇತರ ಮೆಂಬರುಗಳು.

(*e*) ಕ್ಲಾಜು ಅನುಸರಿಸಿ.

5.	ಮೆ|| ಹೊನ್ನಲಿಗೆಗೌಡರು	ಡಿಟ್ಟೋ
6.	,, ಸಿದ್ಧಲಿಂಗೆಗೌಡರು	ಡಿಟ್ಟೋ
7.	,, ರಾಮಕೃಷ್ಣಪ್ಪನವರು	ಡಿಟ್ಟೋ
8.	,, ರಾಮಪುರದ ರಾಮೆಗೌಡರು	ಡಿಟ್ಟೋ

(*f*) ಕ್ಲಾಜು ಅನುಸರಿಸಿ.

9.	,, ಮದಾರ್‌ಸಾಹೇಬರು	ಡಿಟ್ಟೋ

(*g*) ಕ್ಲಾಜು ಅನುಸರಿಸಿ.

10.	,, ಕಡಬದ ಕೆ. ರಾಮಾನುಜಯ್ಯಂಗಾರು	ಡಿಟ್ಟೋ
11.	,, ಕಪ್ಪಣಸೆಟ್ಟರು	ಡಿಟ್ಟೋ
12.	,, ಲಕ್ಷ್ಮೀನರಸಿಂಹಯ್ಯನವರು	ಡಿಟ್ಟೋ

3. ತಿಪಟೂರು ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1.	ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು ...	ಪ್ರೆಸಿಡೆಂಟರು.
2.	ಅಮಲ್ದಾರು	ವೈಸ್ ಪ್ರೆಸಿಡೆಂಟರು.
3.	ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪತಾಲ್ ಅಸಿಸ್ಟೆಂಟರು	ಮೆಂಬರು.
4.	ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು ..	ಡಿಟ್ಟೋ

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

5.	ಮೆ|| ಬಿಳಿಗೆರೆಹಳ್ಳಿಯ ಸಿದ್ಧರಾಮೆಗೌಡರು	ಡಿಟ್ಟೋ
6.	,, ಹೊನ್ನವಳ್ಳಿಯ ಸುಬ್ಬರಾಯರು	ಡಿಟ್ಟೋ
7.	,, ತರೀಕೆರೆಯ ನರಸಿಂಹಾಚಾರು	ಡಿಟ್ಟೋ
8.	,, ಕಂಪೆಗೌಡರು, ಪಟೇಲರು .. .	ಡಿಟ್ಟೋ

(*f*) ಕ್ಲಾಜ್ ಅನುಸರಿಸಿ.

9.	,, ಸಿಂಗ್ರಿ ನಂಜಪ್ಪನವರು	ಡಿಟ್ಟೋ

(*g*) ಕ್ಲಾಜ್ ಅನುಸರಿಸಿ.

10.	,, ಹಾಲಕುರಿಕೆಯ ಗುಂಡಪ್ಪನವರು . ..	ಡಿಟ್ಟೋ
11.	,, ಗಂಡಿಗೆ ಬಿರಾಂಸಾಹೇಬರು	ಡಿಟ್ಟೋ
12.	,, ಸೊಣವಿನಕೆರೆಯ ಚಿಕ್ಕಣಸೆಟ್ಟರು	ಡಿಟ್ಟೋ

4. ತುರುವೇಕೆರೆ ಸಬ್ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1.	ಸಬ್ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು ..	ಪ್ರೆಸಿಡೆಂಟರು.
2.	ಡೆಪ್ಯುಟಿ ಅಮಲ್ದಾರು	ವೈಸ್ ಪ್ರೆಸಿಡೆಂಟರು.
3.	ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪತಾಲ್ ಅಸಿಸ್ಟೆಂಟರು	ಮೆಂಬರು.
4.	ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು ..	ಡಿಟ್ಟೋ

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

5.	ಮೆ|| ಗುಂಡಪ್ಪನವರು, ಶಾನಭೋಗರು	ಡಿಟ್ಟೋ
6.	,, ರಂಗಣ್ಣನವರು, ಡಿಟ್ಟೋ	ಡಿಟ್ಟೋ
7.	,, ನಾರಣಪ್ಪನವರು	ಡಿಟ್ಟೋ
8.	,, ಸುಬ್ಬರಾಯರು, ಶಾನಭೋಗರು	ಡಿಟ್ಟೋ

(*f*) ಕ್ಲಾಜ್ ಅನುಸರಿಸಿ.

9.	,, ವಿ. ನಾರಣಪ್ಪನವರು	ಡಿಟ್ಟೋ

(g) ಕ್ಲಾಜ್ ಅನುಸರಿಸಿ.

10. „ ಕೆಂಚೆಗೌಡರು, ಪಟೇಲರು ... ... ಮೆಂಬರು.
11. „ ಜೀರೆಗೌಡರು ... ... ಡಿಟೋ
12. „ ಕೃಷ್ಣಯ್ಯಂಗಾರು ... ... ಡಿಟೋ

5. ಚಿಕ್ಕನಾಯ್ಕನಹಳ್ಳಿ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು ... ... ಪ್ರೆಸಿಡೆಂಟರು.
2. ಅಮಲ್ದಾರು ... ... ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪತಲ್ ಅಸಿಸ್ಟೆಂಟರು ... ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು ... ... ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5. ಮೆ॥ ಗಂಗೆಗೌಡರು, ಪಟೇಲರು ... ... ಡಿಟೋ
6. „ ಮುದ್ದೆಗೌಡರು ... ... ಡಿಟೋ
7. „ ರಂಗೆಗೌಡರು ... ... ಡಿಟೋ
8. „ ಗಣೊದಹಾಳಿನ ಮರುಳಸಿದ್ದಯ್ಯನವರು ... ... ಡಿಟೋ

(f) ಕ್ಲಾಜ್ ಅನುಸರಿಸಿ.

9. „ ಲಿಂಗೆಗೌಡರು ... ... ಡಿಟೋ

(g) ಕ್ಲಾಜ್ ಅನುಸರಿಸಿ.

10. „ ಮೈಲಾರಸೆಟ್ಟಿಯವರು ... ... ಡಿಟೋ
11. „ ಸಿದ್ದಮಲ್ಲೆಗೌಡರು ... ... ಡಿಟೋ
12. „ ನಂಜುಂಡಯ್ಯನವರು ... ... ಡಿಟೋ

ತಾರೀಖು 6ನೆ ಏಪ್ರಿಲ್ 1904.

ನಂ. 3833—ಲೋ. ಫಂ. 79-03. ಸ್ತ 1902ನೆ ಇಸವಿಯ 11ನೆ ನಂಬರ್ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ಮತ್ತು 1903ನೆ ಸೆಪ್ಟಂಬರ್ 21ನೆ ಮತ್ತು 30—ಲೆಜಿಸ್. 4-03ನೆ ನಂಬರ್ ಇಸ್ತಿಹಾರ್ನಾಮೆಯೊಡನೆ ಘೋಷಿಸಲ್ಪಟ್ಟ ರೂಲುಗಳ 7ನೆ ಪ್ಯಾರಾ ಅನುಸರಿಸಿ ನಾಗಮಂಗಲದ ತಾಲ್ಲೂಕು ಬೋರ್ಡು ಇದರಡಿ ಕಂಡ ಮೆಂಬರುಗಳನ್ನು ಹೊಂದಿರತಕ್ಕದ್ದು:—

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು ... ಪ್ರೆಸಿಡೆಂಟರು.
2. ಅಮಲ್ದಾರು ... ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪತಲ್ ಅಸಿಸ್ಟೆಂಟರು ... ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್-ಡಿವಿಜನ್ ಆಫೀಸರು ... ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5. ಮೆ॥ ಚಂದ್ರಶೇಖರಯ್ಯನವರು, ಜಮೀನ್ದಾರು ... ಡಿಟೋ
6. „ ಗರುಡಾಚಾರ್ಯರು, ಜಮೀನ್ದಾರು ... ಡಿಟೋ
7. „ ತಿಮ್ಮೆಗೌಡರು, ಪಟೇಲರು ಮತ್ತು ಜಮೀನ್ದಾರು ... ಡಿಟೋ
8. „ ಗುಂಡಪ್ಪನವರು, ಶಾನಭೋಗರು ಮತ್ತು ಜಮೀನ್ದಾರು ... ಡಿಟೋ

(f) ಕ್ಲಾಜ್ ಅನುಸರಿಸಿ.

9. „ ತಿರುಮಲಾಚಾರ್ಲು, ಜಮೀನ್ದಾರು ... ... ಡಿಟೋ

(g) ಕ್ಲಾಜ್ ಅನುಸರಿಸಿ.

10. „ ಗಂಗಪ್ಪನವರು, ಸಾಹುಕಾರು ... ... ಡಿಟೋ
11. „ ತಮ್ಮಯ್ಯನವರು, ಪುರೋಹಿತರು ... ... ಡಿಟೋ
12. „ ಲಕ್ಷ್ಮಯ್ಯನವರು, ಪರ್ಷಿಯನ್ ಮೇಷ್ಟ್ರುಯವರು ... ... ಡಿಟೋ

C-

ತಾರೀಖು 6ನೇ ಏಪ್ರೆಲ್ 1904.

ನಂ. 3835—ಲೋ. ಫಂ. 78—03, ಸನ್ 1903ನೆ ಸೆಪ್ಟಂಬರ್ 9ನೆ ಮಾರ್ಚ್ 30-ಲೆಜಿಸ್. 4-03ನೆ ನಂಬರ್ ಜಿಸ್ತಿಹಾರ್ನಾಮೆಯೊಡನೆ ಫಾಯಿಷಾದ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ 7ನೆ ಪ್ಯಾರಾವಿನಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ತುಮಕೂರ ಡಿಸ್ಟ್ರಿಕ್ಟಿನಲ್ಲಿರುವ ಇವರಡೀ ಕಂಡ ತಾಲ್ಲೂಕು ಬೋರ್ಡು ಗಳಿಗೋಸ್ಕರ ನೇಮಕರನ್ನಾಡಲ್ಪಟ್ಟ ಮೆಂಬರುಗಳ ಪಟ್ಟಿ :—

ತುಮಕೂರ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1.	ತುಮಕೂರ ತಾಲ್ಲೂಕಿನ ಅಮಲ್ದಾರು ..	ಪ್ರೆಸಿಡೆಂಟರು.
2.	ಅಸಿಸ್ಟೆಂಟ್ ಸರ್ಜನರು	ಮೆಂಬರು.
3.	ಪಬ್ಲಿಕ್ ವರ್ಕ್ಸ ಇಲಾಖೆಯ ಸಬ್ ಡಿವಿಜನ್ ಆಫೀಸರು .	ಡಿಟೋ

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

4.	ಮೆ॥ ಬಿ. ಕೃಷ್ಣಯ್ಯಂಗಾರು, ಪ್ಲೀಡರು ..	ಡಿಟೋ
5.	„ ನಿಡಿವಳ್ಳಲುವಿನ ಶಾನಭೋಗ ವೆಂಕಟರಾಮಯ್ಯನವರು ...	ಡಿಟೋ
6.	„ ಸಾಸಲ್ ತಿಮ್ಮೇಗೌಡರು	ಡಿಟೋ
7.	„ ಬೆಳ್ಳಾವಿಯ ಸಾಹುಕಾರ್ ಪುಟ್ಟಣ್ಣನವರು	ಡಿಟೋ

(*f*) ಕ್ಲಾಜ್ ಅನುಸರಿಸಿ.

8.	„ ಕರ್ಣಿಕ ನಲ್ಲಪ್ಪನವರು	ಡಿಟೋ

(*g*) ಕ್ಲಾಜ್ ಅನುಸರಿಸಿ.

9.	„ ಗರಗದಕುಪ್ಪೆ ರಾಮರಾವ್ ಜನ್ ರಾಮದಾಸಪ್ಪನವರು ...	ಡಿಟೋ
10.	„ ಕೋದಂಡ ರಾಮುಸೆಟ್ಟರು (ಬ್ಯಾಂಬೆ ಪಾಲ್)	ಡಿಟೋ
11.	„ ಗೊಲ್ಲಹಳ್ಳಿಯ ದಾವುದ್‌ಖಾನ್ ಸಾಹೇಬರು	ಡಿಟೋ
12.	„ ಮಹದೇವಯ್ಯ, ಬಿ. ಎ., ಬಿ. ಎಲ್., ಅಡ್ವೋಕೇಟರು ...	ಡಿಟೋ

ಕುಣಿಗಲ್ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1.	ತಾಲ್ಲೂಕಿನ ಅಮಲ್ದಾರು ..	ಪ್ರೆಸಿಡೆಂಟರು.
2.	ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು	ಮೆಂಬರು.
3.	ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು	ಡಿಟೋ

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

4.	ಮೆ॥ ಗುಂಡಪ್ಪನವರು (ಹೆರೂರು)	ಡಿಟೋ
5.	„ ಶಾಮಯ್ಯಂಗಾರು, ವರ್ತಕರು	ಡಿಟೋ
6.	„ ಸುಬ್ಬಣ್ಣನವರು (ಯಡೆಯೂರು)	ಡಿಟೋ
7.	„ ಲಿಂಗಣ್ಣಯ್ಯನವರು	ಡಿಟೋ

(*f*) ಕ್ಲಾಜ್ ಅನುಸರಿಸಿ.

8.	„ ಬಿ. ಶ್ರೀನಿವಾಸಯ್ಯಂಗಾರು	ಡಿಟೋ

(*g*) ಕ್ಲಾಜ್ ಅನುಸರಿಸಿ.

9.	„ ಲಕ್ಷ್ಮೀನರಸಯ್ಯನವರು	ಡಿಟೋ
10.	„ ನಂಜುಂಡಯ್ಯನವರು	ಡಿಟೋ
11.	„ ರಂಗೇಗೌಡರು	ಡಿಟೋ
12.	„ ವೆಂಕಣ್ಣಯ್ಯನವರು	ಡಿಟೋ

ತಾರೀಖು 12ನೆ ಏಪ್ರಿಲ್ 1904.

ನಂ. 3948—ಲೋ. ಫಂ. 76—03, ಸ‍ನ 1903ನೆ ಇಸ್ವಿ ಫೆಬ್ರವರಿ ಮಾರ್ಚಿ 30-ಲೆಜಿಸ್. 4—03ನೆ ನಂಬರು ಇಸ್ತಿಹಾರ್ನಾಮೆಯೊಡನೆ ಪ್ರಕಟಿಸಿದ ಲೋಕಲ್ ಫಂಡ್ ಕಮೀಟಿಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ 7ನೆ ಪ್ಯಾರಾವಿನಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ಬೆಂಗಳೂರ ಡಿಸ್ಟ್ರಿಕ್ಟಿನಲ್ಲಿರುವ ಇವರ ಕೆಳಕಂಡ ತಾಲ್ಲೂಕು ಬೋರ್ಡುಗಳಿಗೆ ಸರ್ಕಾರದ ಮಂಜೂರಾತಿ ಪಡೆಯಲ್ಪಟ್ಟ ಮೆಂಬರುಗಳ ಪಟ್ಟಿ:—

ಬೆಂಗಳೂರು ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮೀಷನರು ... ಪ್ರೆಸಿಡೆಂಟರು.
2. ಅಮಲ್ದಾರರು ... ... ವೈಸ್ ಪ್ರೆಸಿಡೆಂಟರು.
3. ಖಾಲಿ.
4. ಪಬ್ಲಿಕ್ ವರ್ಕ್ಸ್ ಇಲಾಖೆಯ 11ನೆ ನಂಬರ್ ಸಬ್ ಡಿವಿಜನಿನ ಸೂಪರ್ವೈಜರು .. ಮೆಂಬರು.

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

5. ಮೆ|| ಶ್ಯಾಮಣ್ಣನವರು, ಕೆಂಗೇರಿ ... ... ಡಿಟೋ
6. ,, ಯಲಹಂಕ ನಾರಣಪ್ಪನವರು ... ... ಡಿಟೋ
7. ,, ಯಮಲೂರು ಪಟೇಲ್ ನಂಜುಂಡಪ್ಪನವರು ... ... ಡಿಟೋ
8. ,, ಸುಬ್ಬರಾಯಪ್ಪನವರು, ಅಗರದ ಶ್ಯಾನುಭೋಗರು ... ... ಡಿಟೋ

(*f*) ಕ್ಲಾಜ್ ಅನುಸರಿಸಿ.

9. ಖಾಲಿ.

(*g*) ಕ್ಲಾಜ್ ಅನುಸರಿಸಿ.

10. ಮೆ|| ಉಸ್ಮಾನ್ ಖಾನ್ ರವರು, ಜಹಗೀರದಾರು ... ... ಡಿಟೋ
11. ,, ವೀರಪ್ಪರೆಡ್ಡಿಯವರು, ಕೃಷ್ಣರಾಜಪುರದ ಪಟೇಲರು .. ... ಡಿಟೋ
12. ,, ಸುಬ್ಬಣ್ಣನವರು, ದೊಡ್ಡಬಳ್ಳಾಪುರ ತಾಲ್ಲೂಕು ಕಾಚರಕನಹಳ್ಳಿ ಇನಾಂದಾರರು ... ಡಿಟೋ

ದೊಡ್ಡಬಳ್ಳಾಪುರ ತಾಲ್ಲೂಕು

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮೀಷನರು ... ಪ್ರೆಸಿಡೆಂಟರು.
2. ಅಮಲ್ದಾರರು ... ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪತ್ರೆ ಅಸಿಸ್ಟೆಂಟರು .. ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು .. .. ಡಿಟೋ

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

5. ಮೆ|| ನರಸಣ್ಣನವರು .. .. ಡಿಟೋ
6. ,, ಅರಸೆಗೌಡರು .. .. .. ಡಿಟೋ
7. ,, ಬೈರೆಗೌಡರು . .. .. ಡಿಟೋ
8. ,, ಚನ್ನವೀರಗೌಡರು ... . ಡಿಟೋ

(*f*) ಕ್ಲಾಜ್ ಅನುಸರಿಸಿ.

9. ,, ಪುಟ್ಟಣ್ಣಶೆಟ್ಟರು .. .. ಡಿಟೋ

(*g*) ಕ್ಲಾಜ್ ಅನುಸರಿಸಿ.

10. ,, ಕೋಲೂರು ರಾಮಪ್ಪನವರು, ಜಮೀನ್ದಾರರು... .. ಡಿಟೋ
11. ,, ಅಬ್ದುಲ್ ಖಾದರ್ ಸಾಹೇಬರು, ಕಂಟ್ರಾಕ್ಟರು ... .. ಡಿಟೋ
12. ,, ಧನಶೆಟ್ಟರು, ಜಮೀನ್ದಾರರು ... .. ಡಿಟೋ

ನೆಲಮಂಗಲ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1.	ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು ...	ಪ್ರೆಸಿಡೆಂಟರು.
2.	ಅಮಲ್ದಾರು	ವೈಸ್ ಪ್ರೆಸಿಡೆಂಟರು
3.	ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಹಾಸ್ಪಿಟಲ್ ಅಸಿಸ್ಟೆಂಟರು	ಮೆಂಬರು
4.	ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು ...	ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5.	ಮ|| ಶಾಂತಪ್ಪನವರು	ಡಿಟೋ
6.	,, ಕೃಷ್ಣಪ್ಪನವರು	ಡಿಟೋ
7.	,, ರಾಮಚಂದ್ರಯ್ಯನವರು ..	ಡಿಟೋ
8.	,, ದಾಸಪ್ಪನವರು	ಡಿಟೋ

(f) ಕ್ಲಾಜ್ ಅನುಸರಿಸಿ.

9.	,, ಅಷ್ಕಾಂಫೀರ್ ಸಾಹೆಬರು	ಡಿಟೋ

(g) ಕ್ಲಾಜ್ ಅನುಸರಿಸಿ.

10.	,, ಚನ್ನಲಿಂಗಪ್ಪನವರು, ಪಟೇಲರು ವ ಜಮೀನ್ದಾರು ...	ಡಿಟೋ
11.	,, ಹೊಂಬಳಾಪುರದ ಹನುಮಂತೇಗೌಡರು, ಪಟೇಲರು ವ ಜಮೀನ್ದಾರು ...	ಡಿಟೋ
12.	,, ನರಹರ್ಯಯ್ಯನವರು, ಶಾನುಭೋಗರು ವ ಜಮೀನ್ದಾರು ...	ಡಿಟೋ

ಚನ್ನಪಟ್ಟಣ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1.	ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು .	ಪ್ರೆಸಿಡೆಂಟರು.
2.	ಅಮಲ್ದಾರು	ವೈಸ್ ಪ್ರೆಸಿಡೆಂಟರು.
3.	ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಹಾಸ್ಪಿಟಲ್ ಅಸಿಸ್ಟೆಂಟರು ..	ಮೆಂಬರು.
4.	ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು ..	ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5.	ಮ|| ಪುಟ್ಟೇಗೌಡರು, ಮಳೂರು ಪಟ್ಟಣದ ಪಟೇಲರು ...	ಡಿಟೋ
6.	,, ವೆಂಕಟೇಗೌಡರು, ಮೈಲನಾಯಕನಹಳ್ಳಿ ಪಟೇಲರು ...	ಡಿಟೋ
7.	,, ಜಮೀನ್ದಾರ್ ಬಸವಲಿಂಗಪ್ಪನವರು, ಚನ್ನಪಟ್ಟಣದ ಪಟೇಲರು	ಡಿಟೋ
8.	,, ಪುಟ್ಟೇಗೌಡರು, ಬಂದೂರು ವಲಗೆರೆಹಳ್ಳಿ ಪಟೇಲರು	ಡಿಟೋ

(f) ಕ್ಲಾಜ್ ಅನುಸರಿಸಿ.

9.	,, ರಂಗೈಯ್ಯಂಗಾರು	ಡಿಟೋ

(g) ಕ್ಲಾಜ್ ಅನುಸರಿಸಿ.

10.	,, ಷೇಕ್ ಮೊಹಿದೀನ್ ಸಾಹೇಬರು	ಡಿಟೋ
11.	,, ರಾಮಸಂಜೀವಯ್ಯನವರು	ಡಿಟೋ
12.	,, ನಂಜುಂಡೈಯ್ಯನವರು	ಡಿಟೋ

ತಾರೀಖು 16ನೆ ಏಪ್ರಿಲ್ 1904.

ನಂ. ಜ. 5287, ಮೈಸೂರ ಸರ್ವಿಸ್ ರೆಗ್ಯುಲೇಷನ್ಗಳ 188ನೆ ಆರ್ಟಿಕಲ್ ಅನುಸರಿಸಿ ಅಸಿಸ್ಟೆಂಟ್ ಸರ್ಜನ್ನಾದ ಮ|| ಟಿ. ವಿ. ಕುಪ್ಪುಸ್ವಾಮಿ ಮೊದಲಿಯಾರ್ರಿಗೆ 1904ನೆ ಏಪ್ರಿಲ್ 20ನೆ ತಾರೀಖಿನಾರಭ್ಯ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು [illegible]ನೆ ಏಪ್ರಿಲ್ 1904.

ನಂ. 2212—ಜ. 36—99—00, ಮೈಸೂರು ಸರ್ವಿಸ್ ರೆಗ್ಯುಲೇಷನ್ಗಳ 185ನೆ ಆರ್ಟಿಕಲ್ ಅನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟ್ ಪೋಲೀಸಿನ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮ|| ಪಿ. ವಿ. ಕೃಷ್ಣಮೂರ್ತಿ ಯವರಿಗೆ 1904ನೆ ಏಪ್ರಿಲ್ 15ನೆ ತಾರೀಖಿನ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಆ ತರುವಾಯದ ತಾರೀಖಿನಾರಭ್ಯ 15 ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

1904—1905ನೇ ವರುಷಕ್ಕಾಗಿ ಪ್ರತ್ಯೇಕ ಸ್ಥಾಯಿ ಅಂಗಡಿಗಳ ಹರಾಜು.

ನಂಬರ್ 640 – Ex. F. 7. 1902, ತಾರೀಖು 29ನೇ ಮಾರ್ಚ್ 1904.

1. ಇದಕ್ಕೆ ಲಗತ್ತು ಮಾಡಿರುವ ಷೆಡ್ಯೂಲ್ ಪಟ್ಟಿಯಲ್ಲಿ ನಮೂದಾಗುವ ಪ್ರತ್ಯೇಕ ಸ್ಥಾಯಿ ಅಂಗಡಿಗಳಲ್ಲಿ 1904ನೇ ಇಸವಿ ಜುಲೈ ಒಂದನೇ ತಾರೀಖಿಗೆ ಪ್ರಾರಂಭವಾಗಿ 1905ನೇ ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12 ತಿಂಗಳು ಕಾಲಕ್ಕಾಗಿ ಸ್ಥಾಯಿ ಬಿಕರಿ ಮಾಡತಕ್ಕ ಹಕ್ಕನ್ನು ಸದರೀ ಪಟ್ಟಿಯಲ್ಲಿ ಕಂಡ ಸ್ಥಳಗಳಲ್ಲಿ ಆ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು ಯಾ ರೆವಿನ್ಯೂ ಅಸಿಸ್ಟೆಂಟ್ ಕಮಿಷನರುಗಳು ಯಾ ಎಕ್ಸೈಸ್ ಖಾತೆಯ ಡಿವಿಜನ್ ಆಫೀಸರರು ಯಾ ಡೆಪ್ಯುಟಿ ಕಮಿಷನರವರಿಂದ ಈ ಕೆಲಸಕ್ಕಾಗಿ ನೇಮಿಸಲ್ಪಡಬಹುದಾದ ಇತರ ಅಧಿಕಾರಿಗಳು ಸರ್ಕಾರದ ಸವಾಲನ್ನು ಗೊತ್ತು ಮಾಡಿಕೊಂಡು ಮುಂದೆ ನಮೂದು ಮಾಡಿರುವ ಷರತ್ತುಗಳಿಗನುಸರಿಸಿ ಹರಾಜ್ ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ. ಹರಾಜುಗಳು ಸದರಿ ತಾರೀಖುಗಳಲ್ಲಿ ಪೂರೈಸದಹೋದಲ್ಲಿ ಮಾರನೇ ದಿನಗಳಲ್ಲಿಯೂ ಹಾಕಲ್ಪಡುವುವು. (ರಜಾ ದಿನಗಳು ಹೊರತಾಗಿ).

2. a) ಕೋಲಾರದ ಚಿನ್ನದ ಗಣಿಗಳ ಅಂಗಡಿಗಳಿಗೆ 50 ರೂಪಾಯಿಗಳನ್ನು, ಮೈಸೂರು ಬೆಂಗಳೂರು ಷಹರುಗಳ ಅಂಗಡಿಗಳಿಗೆ 25 ರೂಪಾಯಿಗಳನ್ನು, ಇತರ ಸ್ಥಳಗಳಲ್ಲಿನ ಅಂಗಡಿಗಳಿಗೆ 10 ರೂಪಾಯಿಗಳನ್ನು ಅಥವಾ ಹರಾಜ್ ಮಾಡತಕ್ಕ ಆಫೀಸರರು ಗೊತ್ತು ಮಾಡುವ ಇತರ ನ್ಯಾಯವಾದ ಮೊಬಲಗನ್ನು ಹರಾಜಿನಲ್ಲಿ ಪ್ರತಿ ಸವಾಲ್‌ದಾರನೂ ಠೇವಣಾತಿ ಇಡತಕ್ಕದ್ದು. ಹರಾಜು ತಾರೀಖಿಗೆ ಮುಂಚೆ 5 ದಿವಸಗಳೊಳಗಾಗಿ ಸದರೀ ಮೊಬಲಗನ್ನು ಸವಾಲ್‌ದಾರನು ಕೊಟ್ಟರು ತೆಗೆದುಕೊಳ್ಳಲ್ಪಡುತ್ತದೆ. ಆದರೆ ಸರ್ಕಾರದವರು ಅಂಥಾ ಆರಂಭದ ಠೇವಣಾತಿ ಮೊಬಲಗನ್ನು ಯಾವಾಗ ಬೇಕಾದರೂ ಅವಶ್ಯಕವಿಲ್ಲವೆಂದು ಬಿಟ್ಟುಬಿಡಬಹುದು. ಸದರೀ ಅಂಗಡಿ ಯಾ ಅಂಗಡಿಗಳ ಸಮುದಾಯಗಳಿಗೆ ಯಾರ ಟೆಂಡರ್ ಖಾಸ್ತು ಅಂಗೀಕರಿಸಲ್ಪಡುತ್ತದೆಯೋ ಅಂಥಾ ಅಂಗೀಕಾರಕ್ಕೆ ಅರ್ಹರಾದ ಜನರಿಗೆ ಅಂಗಡಿಗಳು ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತವೆ. ಡೆಪ್ಯುಟಿ ಕಮಿಷನರವರು ಸದರೀ ದರಖಾಸ್ತನ್ನು ತಮಗೆ ಯುಕ್ತತೋರುವಂತೆ ಕಾರಣಗಳನ್ನು ಹೇಳದೆಯೇ ಮಂಜೂರು ಅಥವಾ ತಳ್ಳುಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಅಂಥಾ ಕ್ರಮವಾದ ಮಂಜೂರಾತಿಯು ಗವರ್ನ್ಮೆಂಟಿನವರಿಂದ ವಿಶೇಷ ಕಾರಣಕ್ಕೋಸ್ಕರ ಬದಲಾಯಿಸಲ್ಪಡದೇ ಇದ್ದ ಪಕ್ಷದಲ್ಲಿ ದರಖಾಸ್ತನ್ನು ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದಾಗಿಯೂ ಡೆಪ್ಯುಟಿ ಕಮಿಷನರವರು ಖುದ್ದಾಗಿಯೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಇತರ ಆಫೀಸರೇ ಆಗಲಿ ಹರಾಜು ನಡಿಸಿದ್ದರೂ ಅವಶ್ಯಕವಾಗಿರುವುದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು. ಅಥವಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದಿರುವ ಅವರ ತರಫ ಮುಖ್ತಾರೀದಾರರನ್ನು ಕಳುಹಿಸಬೇಕು. ಒಂದೊಂದು ಅಂಗಡಿಗೆ ಸರ್ಕಾರದ ಸವಾಲಿಗಿಂತ ಹೆಚ್ಚಾದ ಸವಾಲ್ ಬಾರದೇ ಹೋದಲ್ಲಿ ಹರಾಜು ನಡಿಸತಕ್ಕ ಆಫೀಸರರು ಎಕ್ಸೈಜ್ ಡಿವಿಜನ್ ಆಫೀಸರರು ಹಾಜರಿದ್ದಲ್ಲಿ ಅವರ ಅಭಿಪ್ರಾಯವನ್ನು ತಿಳಿದು ಒಂದಕ್ಕಿಂತಲೂ ಹೆಚ್ಚಾಗಿ ಅಂಗಡಿಗಳನ್ನು ಸೇರಿಸಿ ಹರಾಜು ಮಾಡಿಸಬಹುದು. ಅಥವಾ ಅವಶ್ಯಕವಾಗಿದ್ದಲ್ಲಿ ಸವಾಲಿಲ್ಲದೇ ಇರುವ ಅಂಗಡಿಗಳನ್ನು ಮುಂದೆ ವಿಲೇವಾರಿ ಮಾಡಲು ಅಮಾನತ್ತು ಇಡಬಹುದು. ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಹರಾಜು ನಡೆಸತಕ್ಕ ಆಫೀಸರು ಯಾವದಾದರೂ ವಿಶೇಷ ಸಂದರ್ಭದಲ್ಲಿ ದರಖಾಸ್ತುಗಳ ಮೂಲಕವೇ ಆಗಲಿ ಖಾಸಗೀ ಏರ್ಪಾಟುಗಳ ಮೂಲಕವೇ ಆಗಲಿ ಅಂಗಡಿಗಳನ್ನು ಮಾಡಬಹುದು. ಸರ್ಕಾರದ ಸವಾಲನ್ನು ತಮ್ಮ ಇಷ್ಟಾನುಸಾರ ಕಮ್ಮಿ ಮಾಡಬಹುದು. ಲೈಸೆನ್ಸುದಾರನು ಯಾವದಾದರೂ ತಕ್ಸೀರಿಗಾಗಿ ಕ್ರಿಮಿನಲ್ ಕೋರ್ಟಿನಲ್ಲಿ ದೋಷಾರೋಪಿಯಾಗಿ ತಪ್ಪು ಸಾಬೀತಾಗಿರುವದರಿಂದಲೂ, ಅಥವಾ ಲೈಸೆನ್ಸಿನ ಯಾ ಎಕ್ಸೈಜ್ ರೆಗ್ಯುಲೇಷನ್ ಯಾ ಓಪಿಯಂ ಆಕ್ಟಿನ ಷರತ್ತುಗಳಿಗನುಸಾರವಾಗಿ ನಡೆಯದೇ ಇದ್ದು ತಪ್ಪಿತಸ್ಥನಾಗಿರುವ ಕಾರಣದಿಂದ ಲೈಸೆನ್ಸಿನ ಹಿಡುವಳಿದಾರನಾಗಿರಲು ಯೋಗ್ಯನಲ್ಲವೆಂಬದರ ಮೇಲೂ ಯಾ ನಾದಾರೀ ಮನುಷ್ಯನೆಂಬದರ ಮೇಲೂ ಅಥವಾ ಸರ್ಕಾರದ ಪ್ರಯೋಜನಕ್ಕೆ ಕುಂದಕವಾಗತಕ್ಕ ಏರ್ಪಾಟುಗಳನ್ನು ನಿಲ್ಲಿಸಬೇಕೆಂಬದರ ಮೇಲೂ ಅಥವಾ ಇನ್ಯಾವ ಇತರ ಯುಕ್ತವಾದ ಕಾರಣಕ್ಕಾಗಿಯೂ ಹರಾಜು ನಡಿಸತಕ್ಕ ಆಫೀಸರರು ಅವರಿಗೆ ಯುಕ್ತ ತೋರಿದಲ್ಲಿ ಯಾವ ಮನುಷ್ಯನ ಸವಾಲನ್ನಾದರೂ ಕಾರಣವನ್ನು ತಿಳಿಸದೇನೇ ತಿರಸ್ಕರಿಸಬಹುದು.

(b) ಯಾವ ಅಂಗಡಿಯನ್ನು ಒಬ್ಬ ಆಸಾಮಿಗಿಂತ, ಯಾ ಕ್ರಮವಾಗಿ ಏರ್ಪಟ್ಟಿರುವ ಒಂದು ಕಂಪನಿ ಯಾ ಫರಂಗಿಂತ ಹೆಚ್ಚಾದ ಸಂಖ್ಯೆಯುಳ್ಳವರ ಹೆಸರಿಗೆ ಛಡಸವಾಲಿನಲ್ಲಿ ನಿಲ್ಲಿಸಕೂಡದು. ಹರಾಜು ಮಾಡುವ ಅಧಿಕಾರಿಯು ಯಾರ ಹೆಸರಿನಿಂದ ಸವಾಲು ಬಂದಿರುವದಿಲ್ಲವೋ ಆತನ ಹೆಸರನ್ನು ಖರೀದುಕೊಂಡವನೆಂದು ದಾಖಲ್ಮಾಡಲು ತಿರಸ್ಕರಿಸತಕ್ಕದ್ದು.

3. ಹರಾಜ್ ಪೂರೈಸಿದ ನಂತರ ಸಾಧ್ಯವಾದಮಟ್ಟಿಗೆ ಜಾಗ್ರತೆಯಾಗಿ ನಾ ಮಂಜೂರಾದ ಸವಾಲ್‌ದಾರರ ಠೇವಣೀ ಮೊಬಲಗುಗಳು ಈ ಕೆಳಗೆ ನಿರ್ಬಂಧಿಸಿರುವ ರೀತಿಯಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡದೇ ಇರುವ ಪಕ್ಷಕ್ಕೆ ಅವರಿಗೆ ವಾಪಸ್ ಮಾಡಲ್ಪಡುತ್ತವೆ. ಹರಾಜ್ ನಡೆಯುತ್ತಾ ಬಂದಹಾಗೆಲ್ಲಾ ಯಾರ್‍ಯಾರ ಸವಾಲ್ ಅಂಗೀಕರಿಸಲ್ಪಡುತ್ತದೆಯೋ ಅವರೆಲ್ಲಾ ಹರಾಜ್ ನಡಸತಕ್ಕ ಆಫೀಸರರು ಕೇಳಿದ್ದಲ್ಲಿ ತಕ್ಷಣವೇ, ಇಲ್ಲದಿದ್ದಲ್ಲಿ ಆ ದಿವಸದ ಹರಾಜ್ ಖೈದಾದ ನಂತರ, ಪ್ರಾರಂಭದಲ್ಲಿ ಇಟ್ಟಿರತಕ್ಕ ಠೇವಣಿ ಮೊಬಲಗು ಸದರೀ ಅಂಗಡಿಯ ಯಾ ಅಂಗಡಿ ಸಮುದಾಯದ 2 ತಿಂಗಳ ಗುತ್ತಿಗೆ ಹಣಕ್ಕೆ ಸರಿಯಾಗಿ ಯಾ ಹೆಚ್ಚಾಗಿದ್ದಾಗ ಹೊರತು ಆಯಾಯ ಅಂಗಡಿಯ ಯಾ ಅಂಗಡಿ ಸಮುದಾಯದ ಅರ್ಧ ತಿಂಗಳ ಗುತ್ತಿಗೆ ಹಣದಷ್ಟು ಮೊಬಲಗನ್ನು ಠೇವಣಿ ಇಡಬೇಕು. ಹರಾಜಿನಲ್ಲಿ ಒಂದು ಅಂಗಡಿ ಯಾ ಅಂಗಡಿಗಳ ಸಮುದಾಯಕ್ಕಾಗಿ ಯಾರ ಟೆಂಡರ್ ಖಾಸ್ತು ಅಂಗೀಕರಿಸಲ್ಪಟ್ಟಿದೆಯೋ, ಮತ್ತು ಮೇಲೆ ನಮೂದಿಸಿರುವಂತೆ ಠೇವಣಿಗಳನ್ನು ಕೊಟ್ಟಿದ್ದಾನೆಯೋ ಆತನು ಹರಾಜು ಮಂಜೂರಾದ ವಿಷಯವನ್ನು

ನೋಟೀಸ ಮೂಲಕ ತಿಳಿಸಲು ಸಾಧ್ಯವಾಗುವಂತೆ ತನ್ನ ವಿಳಾಸವನ್ನು ಹರಾಜು ನಡಿಸತಕ್ಕ ಆಫೀಸರವರಲ್ಲಿ ಕೊಟ್ಟು ಹೋಗತಕ್ಕದ್ದು. ಸದರೀ ನೋಟೀಸ ಆತನಿಗೇ ಆಗಲಿ ಅಥವಾ ಸದರೀ ವಿಳಾಸದಲ್ಲಿ ಕೊಟ್ಟಿರುವ ಸ್ಥಳದಲ್ಲಿ ಆತನ ಮನೆಯಲ್ಲಿರುವ ಇತರ ವಯಸ್ಸಾದ ಗಂಡಸಿಗಾಗಲೀ ರೂಬರೂಬ್ ಪಾವತಿಯಾಗೇ ಆಗಲಿ ಅಥವಾ ಆತನ ವಾಸಸ್ಥಾನಕ್ಕೆ ಅಂಟಿಸುವದರಿಂದಲೂ ಯಾ ಕ್ರಮವಾಗಿ ರಿಜಿಸ್ಟರ್ಡ್ ಪೋಸ್ಟು ಮೂಲಕ ಕಳುಹಿಸಿದ್ದರಿಂದಲೇ ಆಗಲಿ ಜಾರಿಯಾದ 7 ದಿವಸಗಳೊಳಗಾಗಿ ಮೊದಲು ಹಾಜರ್ಮಾಡಿದ ಠೇವಣೀ ಸೇರಿಸಿಕೊಂಡು 2 ತಿಂಗಳ ಖಿಸ್ತು ಮೊಬಲಗಿಗೆ ಸರಿಯಾದಷ್ಟು ಹಣವನ್ನು ತಾಲ್ಲೂಕು ಖಜಾನೆಯಲ್ಲಿ ಠೇವಣೀ ಇಡಬೇಕು. ಮತ್ತು ಅವಶ್ಯಕವಾಗಿರುವ ಕರಾರುಗಳನ್ನು ಆಗಲೇ ಅಮಲ್ದಾರ್ರವರಿಗೆ ಬರೆದು ಕೊಟ್ಟು ಮುಂದೆ ನಮೂದಿಸಿರುವ ಪ್ರಕಾರ ನಿಬಂಧನೆಯಾಗಿರುವ ಲೈಸೆನ್ಸುಗಳನ್ನು ತೆಗೆದುಕೊಳ್ಳಬೇಕು. ಪ್ರಾರಂಭದಲ್ಲಿ ಇಟ್ಟಿರತಕ್ಕ ಠೇವಣೀ ಮೊಬಲಗು ಈ ಯಾ ಮುಂದಿನ ಕಲಂನಲ್ಲಿ ಕೇಳಿರುವ ಮೊಬಲಗಿಗಿಂತಲೂ ಹೆಚ್ಚಾಗಿದ್ದಲ್ಲಿ ಹೆಚ್ಚಾಗಿರುವ ಮೊಬಲಗನ್ನು, ಅಂಗಡಿಯನ್ನು ತೆಗೆದುಕೊಂಡವನಿಗೆ ವಾಪಸ್ ಕೊಡಲ್ಪಡುವದು. ಹರಾಜು ನಂತರ ವಿಚಾರಿಸಿದ್ದಲ್ಲಿ ಆತನು ಮೈಸೂರು ಸೀಮೆಯಲ್ಲಿ ಜಿಂದಿಗಿಯನ್ನುಂಟಾಗದೆ ಇರುವ ಅನ್ಯದೇಶದವನಾಗಿಯೂ ದೀವಾಳಿಸ್ಥನೆಂಬುದಕ್ಕೆ ಅನುಮಾನಕ್ಕೆ ಗುರಿಯಾದವನಾಗಿ ಇರುವಂತೆ ಕಂಡು ಬಂದಲ್ಲಿ ವಿಧಾಯಕವಾದ ಎರಡರಷ್ಟು ಮೊಬಲಗನ್ನು ಠೇವಣಿ ಇಡುವದಕ್ಕಾಗಲೀ ಯಾ ಆತನ ಗುತ್ತಿಗೆ ಷರತ್ತುಗಳನ್ನನುಸರಿಸಿ ಆತನು ಕೊಡಬೇಕಾದ ಎಲ್ಲಾ ಹಣಗಳನ್ನು ಕ್ರಮವಾಗಿ ಪಾವತೀ ಮಾಡಲುಳ್ಳವರೆಂದು ಜಾಮೀನ್ ಪತ್ರವನ್ನು ಬರೆದು ಕೊಡುವುದಕ್ಕೆ ಮೈಸೂರು ಸಂಸ್ಥಾನದಲ್ಲಿ ವಾಸವಾಗಿದ್ದು ಸ್ವತ್ತುಳ್ಳವರಾಗಿರುವ ಒಬ್ಬ ಜಾಮೀನ್‌ದಾರನನ್ನು ಯಾ ಜಾಮೀನ್‌ದಾರರನ್ನು ಹಾಜರ್ಮಾಡುವದಕ್ಕಾಗಲೀ ಆತನನ್ನು ಕೇಳಬಹುದು.

4. ಹಿಂದಿನ ಕಲಮ್ಮನುಸರಿಸಿ ಇಡಲ್ಪಟ್ಟ ಠೇವಣಿಯು ನಗದಾಗಿ ಯಾಗಲೀ ಯಾ ಡೆಪ್ಯುಟಿ ಕಮಿಷನರವರ ಹೆಸರಿಗೆ ಕ್ರಮವಾಗಿ ಇಂಡಾರ್ಸ್ ಮಾಡಲ್ಪಟ್ಟ ಇಂಡಿಯಾ ಗವರ್ನ್‌ಮೆಂಟ್ ಸೆಕ್ಯೂರಿಟಿಗಳ ಮೂಲಕವಾಗಿಯಾಗಲೀ ಇರತಕ್ಕದ್ದು. ಆದರೆ ಮಾಹೆಯಾನಾ ಗುತ್ತಿಗೆ ಮೊಬಲಗು 10 ರೂಪಾಯಿಗಿಂತಲೂ ಹೆಚ್ಚಾಗಿರುವ ಸಂದರ್ಭಗಳಲ್ಲಿ (ಮೇಲಿನ 2 ತಿಂಗಳ ಗುತ್ತಿಗೆ ಹಣದ ಠೇವಣಿ ಬದ್ಲಾಗಿ) ಡೆಪ್ಯುಟಿ ಕಮಿಷನರವರು ತಮಗೆ ಯುಕ್ತ ತೋರುವಂತೆ ಮೇಲ್ಕಂಡ ಮೇರೆಗೆ 1 ತಿಂಗಳ ಗುತ್ತಿಗೆ ಹಣಕ್ಕೆ ಸಮನಾದ ಠೇವಣೀಸಿಸಿ 4 ತಿಂಗಳ ಗುತ್ತಿಗೆ ಹಣಕ್ಕೆ ಸಮನಾದ ಮೊಬಲಗಿಗೆ ಖಾತರೀ ಜಾಮೀನನ್ನು ಹಾಜರ್ಮಾಡುವಂತೆ ಬಿಕರೀ ದಾರನಿಗೆ ಅಪ್ಪಣೆ ಕೊಡಬಹುದು. 1 ತಿಂಗಳ ಗುತ್ತಿಗೆ ಮೊಬಲಗು 10 ರೂಪಾಯಿಗಳಿಗೆ ಮೀರದಿರುವ ಎಲ್ಲಾ ಸಂದರ್ಭಗಳಲ್ಲಿಯೂ 2 ತಿಂಗಳ ಖಿಸ್ತಿನ ಹಣದಷ್ಟು ನಗದು ಠೇವಣಿಯನ್ನು ತೆಗೆದುಕೊಳ್ಳಬೇಕೇ ಹೊರತು ನಫರ್ ಜಾಮೀನನ್ನು ಅಂಗೀಕರಿಸಕೂಡದು.

5. ಬಿಕರೀದಾರನು ಮೇಲೆ ನಮೂದಿಸಿರುವ ಯಾವ ಠೇವಣಿಯನ್ನಾದರೂ ಯಾ ಅವಶ್ಯಕವಾದ ಜಾಮೀನ್‌ದಾರ ಅಥವಾ ಜಾಮೀನ್‌ದಾರರನ್ನಾದರೂ ಹಾಜರ್ಮಾಡುವದಕ್ಕೆ ತಪ್ಪಿದರೆ ಮೊದಲು ಇಟ್ಟಿರುವ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟು ಸದರೀ ಅಂಗಡಿಯು ಅಥವಾ ಸಮುದಾಯವು ಡೆಪ್ಯುಟಿ ಕಮಿಷನರವರ ಅಥವಾ ಹರಾಜು ನಡೆಸತಕ್ಕ ಆಫೀಸರವರ ಅಪ್ಪಣೇ ಮೇರೆಗೆ ಪುನಹ ಹರಾಜ್ ಮಾಡಲ್ಪಡುವುದು. ಅಥವಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು. ಮತ್ತು ಆತನು ಆ ಅಂಗಡಿಗಾಗಲೀ ಯಾ ಮತ್ಯಾವ ಅಂಗಡಿ ಯಾ ಅಂಗಡಿಗಳ ಸಮುದಾಯಕ್ಕಾಗಲೀ ಸವಾಲ್ಮಾಡದಂತೆ ನಿಷೇಧಿಸಿದೆ.

6. ಬಿಕರೀದಾರನು ಈ ಕೆಳಗೆ ನಮೂದಿಸಿರುವ ಮತ್ತು ತನಿಗೆ ಕೊಡಲ್ಪಡುವ ಲೈಸೆನ್ಸಿನ ಷರತ್ತುಗಳಿಗೆ ಅನುಸರಿಸಿ ನಡೆಯುವುದಕ್ಕೆ ತನ್ನನ್ನು ಮತ್ತು ಕ್ರಮವಾಗಿ ರಿಕಾರ್ಡಾದ ಡೆಪ್ಯುಟಿ ಕಮಿಷನರವರ ಹುಕುಂನಿಂದ ವಿನಾಯಿಸಿದ ಹೊರತು ಡೆಪ್ಯುಟಿ ಕಮಿಷನರವರಿಂದ ಸಾಕೆಂದು ಭಾವಿಸಲ್ಪಡುವಷ್ಟು ತನ್ನ ಚರ ಸ್ಥಿರ ಸ್ವತನ್ನು ಬದ್ಧಿಸುವ ಒಂದು ಒಡಂಬಡಿಕೆಯನ್ನು ಕ್ರಮವಾದ ನಮೂನೆಯಲ್ಲಿ ಬರೆದು ಕೊಡತಕ್ಕದ್ದು. ಆತನ ಜಾಮೀನ್‌ದಾರನು ಯಾ ಜಾಮೀನ್‌ದಾರರು ಯಾವಾದರೂ ಅಂಗೀಕರಿಸಲ್ಪಟ್ಟಿದ್ದಲ್ಲಿ ಅವರೂ ಕೂಡ ವಿಧಾಯಕವಾಗಿರುವ ನಮೂನೆಯಲ್ಲಿ ತನ್ನನ್ನು ಯಾ ತಮ್ಮನ್ನು ಅಥವಾ ತಮ್ಮ ಚರ ಸ್ಥಿರ ಸ್ವತ್ತುಗಳ ಪೈಕಿ ಬಿಕರೀದಾರನು ಕರಾರಿನ ಷರತ್ತಿಗನುಸಾರವಾಗಿ ನಡೆಯುವದಕ್ಕೆ ಡೆಪ್ಯುಟಿ ಕಮಿಷನರವರಿಂದ ಸಾಕೆಂದು ಭಾವಿಸಲ್ಪಟ್ಟಿರುವಷ್ಟು ಚರ ಯಾ ಸ್ಥಿರ ಸ್ವತ್ತನ್ನೂ ಬದ್ಧಿಸುವ ಒಂದು ಪತ್ರವನ್ನು ಬರೆದು ಕೊಡತಕ್ಕದ್ದು. ಹಾಗೆ ಬರೆದು ಕೊಡಲ್ಪಟ್ಟ ಒಡಂಬಡಿಕೆ ಪತ್ರವೂ ಬಿಕರೀದಾರನ ಖರ್ಚಿನಿಂದ ಸ್ಟಾಂಪು ಆಗಬೇಕು, ಮತ್ತು ಪತ್ರದಲ್ಲಿ ಕಂಡ ಮೊಬಲಗು ಅಥವಾ 100ಕ್ಕೆ ಮೀರಿರುವಾಗ ಆತನ ಖರ್ಚಿನಿಂದಲೇನೆ ಅವು ರಿಜಿಸ್ಟರು ಮಾಡಿಸಲ್ಪಡಬೇಕು.

7. ಮೇಲ್ಕಂಡಂತೆ ಲೈಸೆನ್ಸುಗಳನ್ನು ಪಡೆಯುವದಕ್ಕೆ ಯಾ ಒಡಂಬಡಿಕೆಗಳನ್ನು ಬರೆದು ಕೊಡುವುದಕ್ಕೆ ಯಾವ ಮನುಷ್ಯನಾದರೂ ತಪ್ಪಿದರೆ ಮೊದಲೇ ಇಡಲ್ಪಟ್ಟ ಎಲ್ಲಾ ಠೇವಣಿಗಳೂ ಸರ್ಕಾರಕ್ಕೆ ದಂಡವಾಗಿ ಸೇರಿಸಲ್ಪಡುತ್ತವೆ, ಮತ್ತು ಸದರೀ ಅಂಗಡಿ ಯಾ ಅಂಗಡಿಗಳ ಸಮುದಾಯವು ಹಾಗೆ ತಪ್ಪಿ ಹೋದ ಬಿಕರೀದಾರನನ್ನು ನಷ್ಟಕ್ಕೆ ಗುರಿಯಾಗುವಂತೆ ಡೆಪ್ಯುಟಿ ಕಮಿಷನರವರಿಂದ ದುಸರಾ ಹರಾಜು ಮಾಡಲ್ಪಡುವುದು, ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವುದು. ಆ ಬಿಕರೀದಾರನಿಂದ ಮೊದಲೇ ಹಾಜರ್ಮಾಡಲ್ಪಟ್ಟ ಠೇವಣಿ ಯಾ ಠೇವಣಿಗಳು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವುದಲ್ಲದೆ ಆತನು ದುಸರಾ ಹರಾಜಿನಿಂದ ಯಾ ಅನ್ಯಥಾ ವಿಲೇವಾರಿಯಿಂದ ಆಗತಕ್ಕ ನಷ್ಟಕ್ಕೆ ಸಹಾ ಗುರಿಯಾಗತಕ್ಕದ್ದು. ಪರಂತು ಅಂಥಾ ದುಸರಾ ಹರಾಜಿನಿಂದ ಯಾ ಅನ್ಯಥಾ ವಿಲೇವಾರಿಯಿಂದ ಏನಾದರೂ ನಫೆ ಬಂದರೆ ಅದಕ್ಕೆ ಆತನಿಗೆ ಏನೂ ಹಕ್ಕಿರತಕ್ಕದ್ದಲ್ಲ. ಇದರಿಂದ ನಷ್ಟವಾದ ಪಕ್ಷದಲ್ಲಿ ದಂಡವಾಗಿ ತೆಗೆದುಕೊಂಡ ಮೊಬಲಗನ್ನು ಅದರಿಂದ ಉತಾರು ಹಾಕಬಹುದು. ಹರಾಜು ಮಂಜೂರಾದ ಮೇಲೆ ಸದರೀ ಬಿಕರೀದಾರನು ಸತ್ತುಹೋದ ಪಕ್ಷದಲ್ಲಿ ಅವನ ವಾರಸ್‌ದಾರರು ಯಾ ಆತನಿಂದ ಹಕ್ಕನ್ನು ಪಡೆದವರು ಅದಕ್ಕೆ ಜವಾಬ್ದಾರರಾಗಿರತಕ್ಕದ್ದು.

8. ಮೇಲಿನ 5ನೇ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಯಾ ಹರಾಜುಗಳು ಅನ್ಯಥಾ ವಿಲೇವಾರಿಯು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್ದಾರೀ ಮೇಲೆ ನಡೆಯತಕ್ಕದ್ದು. ಇದರಿಂದ ಆತನು ಆದಾಯವನ್ನೆಲ್ಲಾ ಕಳೆದುಕೊಂಡವನಾಗುತ್ತಾನೆ.

ಮತ್ತು ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿ ಮಾಡುವುದರಿಂದ ನಷ್ಟ ಸಂಭವಿಸುವಲ್ಲಿ ಮೊದಲಿನ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ಪಾವತಿ ಮಾಡಬೇಕಾದ ಬಟ್ಟು ಮೊಬಲಗಿನ ವ್ಯಕಿ ದುಸರೇ ಹರಾಜ್ ಯಾ ಅನ್ಯಥಾ ವಿಲೇವಾರಿ ಯಾದ್ದರಲ್ಲಿ ಹೊಸ ಬಿಡ್ಡುದಾರನು ಕೊಡಬೇಕಾದ ಬಟ್ಟು ಮೊಬಲಗು ಜಾತಾ ಬಾಕಿ ಉಳಿಯುವದನ್ನು ಆತನು ಭರ್ತಿ ಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿ ಮಾಡಿದ್ದರಿಂದ ಉಂಟಾಗುವ ನಷ್ಟದ ಮೊಬಲಗಿನಲ್ಲಿ ದಂಡವಾಗಿ ತೆಗೆದುಕೊಂಡಿರುವ ಠೇವಣಿ ಮೊಬಲಗನ್ನು ವಜಾಯಿಸಿ ಬಾಕಿ ಏನಾದರೂ ಉಳಿದರೆ ಅದನ್ನು ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುತ್ತದೆ. ಆದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಸದರೀ ಠೇವಣಿ ಮೊಬಲಗು ದುಸರೇ ಹರಾಜಿನಿಂದ ಆಗತಕ್ಕ ನಷ್ಟಕ್ಕಿಂತಲೂ ಹೆಚ್ಚಾಗಿದ್ದಲ್ಲಿ ಆ ಠೇವಣೀ ಮೊಬಲಗು ಪೂವತ್ತನ್ನೂ ಸರ್ಕಾರಕ್ಕೇನೇ ಜಮಾ ಮಾಡಿ ಕೊಳ್ಳತಕ್ಕದ್ದು.

9. ಹಿಂದಿನ ಕೆಲವು ವರ್ಷಗಳ ಬಾಬತು ಅಂಗಡಿಯ ಗುತ್ತಿಗೆ ಮೊಬಲಗು ಖರ್ಚಾದ ಸಾರಾಯಿ ಜಿನ್ನೈತೆ ತಖ್ತೀಲ್ ಇವಕ್ಕೆ ಲಗತ್ಮಾಡಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುತ್ತದೆ.

10. ಮೇಲಿನ 6ನೇ ಕಲಂನಲ್ಲಿ ಕಂಡ ಮೇರೆಗೆ ಹೊಂದಬೇಕಾದ ಲೈಸೆನ್ಸ್ ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು. ಕ್ರಮವಾದ ಲೈಸೆನ್ಸ್ ಕೊಡದಿದ್ದಾಗ್ಯೂ ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ವಿರೋಧವಾಗಿ ನಡೆದ ವ್ಯಕ್ತಿ ವಿಧಿಸಿರುವ ಶಿಕ್ಷೆಗಳ ಸ್ವತಂತ್ರ ಹಕ್ಕನ್ನು ಕೊಂಡುಕೊಂಡವನು ಗುರಿಯಾಗುವದನ್ನು ಈ ಪ್ರಕರಣದಲ್ಲಿರುವ ಯಾವದು ತಪ್ಪಿಸಲಾರದು.

(1) a. ಈ ಲೈಸೆನ್ಸಿಂದ ಕೊಡಲ್ಪಟ್ಟ ಹಕ್ಕು 20° ಡಿಗ್ರಿ ಜೋರಾದ ಅಂಡರ್ ಪ್ರೂಫ್ ಬಲವುಳ್ಳ ಸಾರಾಯನ್ನು ಮಾರುವುದಕ್ಕೂ ಮತ್ತು ಡೆಪ್ಯುಟಿ ಕಮ್ಮಿಷನರ್ ಯಾ ಅವರಿಂದ ಅಧಿಕಾರ ಪಡೆದ ಇತರ ಆಫೀಸರರ ಅಪ್ಪಣೆಯಿಂದ 30° ಡಿಗ್ರಿ ಅಂಡರ್ ಪ್ರೂಫ್ ಸಾರಾಯನ್ನು ಮಾರುವುದಕ್ಕೂ ಮಾತ್ರವೇ ವ್ಯಾಪಿಸುತ್ತೆ. ಪರದೇಶೀಯ ಮದ್ಯಗಳನ್ನು ಮಾರತಕ್ಕ ಅಂಗಡಿಗಳಿಲ್ಲದೇ ಇತತಕ್ಕ ಪ್ರದೇಶಗಳಲ್ಲಿ ಅಥವಾ ಪರದೇಶೀಯ ಮದ್ಯಗಳ ಅಂಗಡೀದಾರರು ಎಕ್ಸೈಜ್ ಕಮ್ಮಿಷನರ್ ನಿರ್ಣಯಿಸಿರುವ ಮೇರೆಗೆ ಬೆಂಗಳೂರು ಸೆಂಟ್ರಲ್ ಡಿಸ್ಟಿಲೆರಿಯಲ್ಲಿ ತಯಾರಾಗುವ ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗಣೆ ಭಟ್ಟಿ ಇಳಿಸಲ್ಪಟ್ಟ ಷರಾಬನ್ನು ಯಾ ಇತರ ವಿಶೇಷ ಮದ್ಯಗಳನ್ನು ಅಂದರೆ ಬ್ರಾಂದಿ ವಿಸ್ಕಿ ಜಿನ್ ಮುಂತಾದ್ದನ್ನು ಮಾರದೇ ಇರತಕ್ಕ ಸ್ಥಳಗಳಲ್ಲಿಯೂ ಉಚಿತವಾದ ನಡತೆಯುಳ್ಳ ಸಾರಾಯಿ ಅಂಗಡಿ ಲೈಸೆನ್ಸುದಾರನು ಎಕ್ಸೈಜ್ ಕಮ್ಮಿಷನರವರ ಮುಂಜೂರು ಹುಕುಂ ಪಡದು ಸದರೀ ಮದ್ಯಗಳನ್ನು ಕ್ರಮವಾಗಿ ಬಿರಡೆ ಮೊಹರು ಆಗಿರುವ ಶೀಶೆಗಳಲ್ಲಿ ಎಕ್ಸೈಜ್ ಕಮ್ಮಿಷನರ್ ಗೊತ್ತು ಮಾಡಿದ ಖರೀದಿ ದರದ ಮೇರೆಗೆ ಅಂಗಡಿಯ ಆವರಣದಲ್ಲಿ ಕುಡಿಯುವಂತೆ ಮಾರಲು ಅಪ್ಪಣೆ ಕೊಡಲ್ಪಡಬಹುದು.

b. ಸಾರಾಯಿ ಯಾ ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗಣೀ ಭಟ್ಟಿ ಇಳಿಸಲ್ಪಟ್ಟ ಸ್ವದೇಶ ಷರಾಬನ್ನು ಯಾ ಇತರ ವಿಶೇಷ ಮದ್ಯಗಳನ್ನು ತಯಾರ್ಮಾಡುವವರು ಷರಾಬ್ ಬಾಂಡೆಡ್ ಕೋಟೆ ಲೈಸೆನ್ಸದಾರರು ಮೇಲೆ ನಮೂದಿಸಿರುವ ಮದ್ಯಗಳ ಚಿಲ್ಲರೆ ವ್ಯಾಪಾರದಲ್ಲಿ ಯಾವ ಸಂಬಂಧವನ್ನೂ ಇಟ್ಟುಕೊಳ್ಳಕೂಡದು, ಅಥವಾ ಹಾಗೆ ಸಂಬಂಧವಿರುವ ಯಾವ ಮನುಷ್ಯನನ್ನೂ ನೇಮಿಸಿಕೊಳ್ಳಕೂಡದು.

(2) (a) ಸದರೀ ಸ್ವತಂತ್ರದ ಹಕ್ಕನ್ನು ಪಡೆದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ವರ್ಷಕ್ಕೆ 12 ರೂಪಾಯಿಗಿಂತಲೂ ಹೆಚ್ಚಾಗಿದ್ದಲ್ಲಿ ಸ್ಥಳೀಯವಾದ ತಾಲ್ಲೂಕು ಖಜಾನೆಗೆ 1904ನೇ ಇಸವಿ ಜುಲೈ ಮಾಹೆ ಲಾಗಾಯಿತು ಸರಿಯಾದ ತಿಂಗಳ ಗಟ್ಲೆ ಕಿಸ್ತು ಪ್ರಕಾರ ಪಾವತಿ ಮಾಡಲ್ಪಡುತ್ತಾ ಬರತಕ್ಕದ್ದು. ವರ್ಷಕ್ಕೆ 12 ರೂಪಾಯಿಗಿಂತಲೂ ಹೆಚ್ಚಾಗಿಲ್ಲದೆ ಇದ್ದಲ್ಲಿ 3 ತ್ರೈಮಾಸಿಕದ ಕಿಸ್ತುಗಳಿಗಿಂತಲೂ ಹೆಚ್ಚಾಗದಂತೆ ಪಾವತಿ ಮಾಡಲ್ಪಡತಕ್ಕದ್ದು. ಪ್ರತಿಯೊಂದು ಕಿಸ್ತು ಯಾವ ತಿಂಗಳಿಗೆ ಪಾವತಿ ಯಾಗತಕ್ಕದ್ದೋ ಆ ತಿಂಗಳಿನ ಯಾ ತ್ರೈಮಾಸಿಕದ ಗುತ್ತಿಗೆ ಮೊಬಲಗೆಂದು ಭಾವಿಸತಕ್ಕದ್ದು. ಲೈಸೆನ್ಸ್‌ದಾರನು ಲೋಕಲ್ ಸೆಸ್ಸಿಗಾಗಿ ಏನೂ ಜಾಸ್ತೀ ಮೊಬಲಗು ಕೊಡತಕ್ಕದ್ದಿಲ್ಲವು. ಪ್ರತಿ ಮಾಹೆಯ ಯಾ ತ್ರೈಮಾಸಿಕದ ಇಜಾರೆ ಮೊಬಲಗು ಸದರೀ ಮಾಹೆಯ 20ನೇ ತಾರೀಖಿನಲ್ಲಾಗಲೀ ತತ್ಪೂರ್ವವಾಗಲೀ ಅಥವಾ ಕಿಸ್ತು ಬಾಕೀ ನಿಲ್ಲುವ ತ್ರೈಮಾಸಿಕದ ಅಖೈರೊಳಗಾಗಲೀ ಪಾವತಿ ಮಾಡಲ್ಪಡಬೇಕು. ಹಾಗೆ ಪಾವತಿ ಮಾಡಲಿಕ್ಕೆ ತಪ್ಪಿದರೆ ಅಮಲ್ದಾರರು ಡೆಪ್ಯುಟಿ ಕಮ್ಮಿಷನರ ಹುಕುಂ ಪಡೆದು ಸದರೀ ಇಜಾರೆಯನ್ನು ವಜಾಯಿಸಿ ಯಾ ಸದರೀ ಇಜಾರೆ ದಂಡವಾಗಿ ಸೆಳೆದುಕೊಳ್ಳಲ್ಪಟ್ಟಿರುತ್ತೆಂದು ಬರಹ ಮೂಲಕವಾಗಿ ರಿಕಾರ್ಡು ಮಾಡಿ (ಮಾಹೆ ಯಾ ತ್ರೈಮಾಸಿಕದ ಅಖೈರ್ ಆದಕೂಡಲೇ ಸಾಧ್ಯವಾದಷ್ಟು ತ್ವರೆಯಲ್ಲಿ) ಅಂಗಡಿಯನ್ನು ಯಾ ಅಂಗಡಿಗಳ ಸಮುದಾಯವನ್ನು ಮರಳಿ ಹರಾಜ್ ಯಾ ಅನ್ಯಥಾ ವಿಲೇವಾರಿ ಮಾಡತಕ್ಕದ್ದು. ಸದರೀ ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿಯು ಹೊಸ ಬಿಕರೀದಾರನಿಗೆ ಕೊಟ್ಟ ಲೈಸೆನ್ಸ್ ತಾರೀಖು ಯಾ ಅನ್ಯಥಾ ವಿಲೇವಾರಿ ಆದ ತಾರೀಖು ಲಾಗಾಯಿತು ಜಾರೀಗೆ ಬರತಕ್ಕದ್ದು. ಲೈಸೆನ್ಸನ್ನು ವಜಾಯಿಸಲು ಅಧಿಕಾರವಿರುವ ಆಫೀಸರರು ತಮಗೆ ಯುಕ್ತ ತೋರಿದಲ್ಲಿ ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿ ಆಗುವದರೊಳಗೆ ಮಾರಾಟವನ್ನು ನಿಲ್ಲಿಸಬೇಕಾದ್ದಿಲ್ಲ.

ಟಿಪ್ಪಣಿ.—ಜಾತ್ರೆ ಅಂಗಡಿಯ ಲೈಸೆನ್ಸದಾರನು ಜಾತ್ರೆ ಷುರು ಆಗುವದಕ್ಕೆ ಮೊದಲೇನೇ ಸದರೀ ಅಂಗಡಿಯ ಮೊಬಲಗನ್ನು ಪೂರಾ ಪಾವತಿ ಮಾಡಬೇಕು.

(b) ಲೈಸೆನ್ಸದಾರನಿಂದ ಇಡಲ್ಪಟ್ಟ ಠೇವಣಿ ಮೊಬಲಗು ಲೈಸೆನ್ಸಿನ ಷರತ್ತುಗಳಂತೆ ಕ್ರಮವಾಗಿ ನಡೆದುಕೊಳ್ಳುವದಕ್ಕಾಗಿ ಕೊಟ್ಟಿರುವ ಜಾಮೀನಾಗಿ ಭಾವಿಸಲ್ಪಡುತ್ತದೆ. ದಂಡವಾಗಿ ತೆಗದುಕೊಳ್ಳಲ್ಪಡದೆ ಯಾ ಜಪ್ತಾ ಮಾಡಲ್ಪಡದೆ ಯಾ ಅನ್ಯಥಾ ವಿಲೇವಾರಿ ಆಗದೆ ಇದ್ದಲ್ಲಿ ಇಜಾರೆ ಮಾಯೆದೆಯು ಆಖೈರ್ 2 ತಿಂಗಳ ಖಿಸ್ತು ಮೊಬಲಗಿಗೋಸ್ಕರ ಜಮಾ ಮಾಡಿ ಕೊಳ್ಳಲ್ಪಡತಕ್ಕದ್ದು. ಪರಂತು ಅಂಗಡಿಯು ಯಾ ಅಂಗಡಿಯ ಸಮುದಾಯವು ದುಸರೇ ಹರಾಜ್ ಯಾ ಅನ್ಯಥಾ ವಿಲೇವಾರಿ ಮಾಡಲ್ಪಟ್ಟಾಗ ಸದರೀ ಡಿಪಾಜಿಟ್ಟು ಮೊಬಲಗು ಡೆಪ್ಯುಟಿ ಕಮಿಷನರವರಿಗೆ ಯುಕ್ತ ತೋರುವಂತೆ ದಂಡವಾಗಿ ಆದರೂ ತೆಗದುಕೊಳ್ಳಲ್ಪಡತಕ್ಕದ್ದು. ಅಥವಾ ತಪ್ಪಿ ಹೋದವನಿಂದ ಬರಬೇಕಾದ ಬಾಕಿಗೋಸ್ಕರವೂ ಅಂಗಡಿಯು ಯಾ ಅಂಗಡಿಗಳ ಸಮುದಾಯವು ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿ ಮಾಡಿದ್ದರಿಂದ ಉಂಟಾಗಬಹುದಾದ ಯಾವ ನಷ್ಟವನ್ನಾದರೂ ಭರ್ತಿ ಮಾಡುವ ಬಗ್ಗೆ ಉಪಯೋಗಿಸಲ್ಪಡತಕ್ಕದ್ದು. ಅಂಥಾ ಬರಬೇಕಾದ ಬಾಕಿಗಳು ಮತ್ತು ನಷ್ಟದ ಮೊಬಲಗುಗಳು ಸುದಾ ರೆವಿನ್ಯೂ ಕಂದಾಯದ ಬಾಕಿ ವಸೂಲಿ ಬಗ್ಗೆ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ ಲೈಸೆನ್ಸದಾರನಿಂದ ವಸೂಲ್ಮಾಡಲ್ಪಡತಕ್ಕದ್ದು. ಲೈಸೆನ್ಸದಾರನಿಂದ ಯಾವ ಸಂದರ್ಭದಲ್ಲಿಯೂ ರಿಮಿಷನ್ ಅಥವಾ ಇಜಾರೆ ಮೊಬಲಗನ್ನು ಕಮ್ಮಿ ಮಾಡುವ ಬಗ್ಯೆ ಅಥವಾ ಪರಿಹಾರ ದ್ರವ್ಯವನ್ನು ಪಡೆಯುವ ಬಗ್ಯೆ ಕೇಳಲ್ಪಡಕೂಡದು.

(c) ಬಾಕಿ ಬರಬೇಕಾದ ವರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ ಮತ್ತು ನಷ್ಟದ ಮೊಬಲಗಿಗೆ ಪುನಃ ಹರಾಜಾದ ತಾರೀಖಿನ ಲಾಗಾಯಿತು ಸಾಲಿಯಾನಾ ಶೇಕಡಾ 6ರ ಪ್ರಕಾರ ಬಡ್ಡಿ ವಸೂಲ್ಮಾಡಲ್ಪಡತಕ್ಕದ್ದು.

(3) (a) ಲೈಸೆನ್ಸದಾರನು ಕಾಕುಂಬಿ ಸಾರಾಯಿಯನ್ನು 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ 1ಕ್ಕೆ 8½ ಆಣೆ ದರದ ಮೇರೆ ಖಿರಟಿ ಹಾಕಿ ಮೊಹರ್ಮಾಡಿದ ಶೀಸೆಗಳಲ್ಲಿ 20° ಡಿಗ್ರಿ ಜೋರುಳ್ಳ ಬೆಲ್ಲದ ಸಾರಾಯಿಯನ್ನು ಸಹಾ ಗ್ಯಾಲನ್ 1ಕ್ಕೆ ರೂ. 1—6—6 ಪ್ರಕಾರವೂ ಮತ್ತು ಮೇಲೆ ನಮೂದಿಸಿರುವ ವಿಶೇಷ ಮದ್ಯಗಳನ್ನು ಭಟ್ಟೀದಾರರು ಗೊತ್ತು ಮಾಡುವ ಖರೀದಿ ದರದಂತೆಯೂ ನಿರ್ಮಾಣವಾಗಿರುವ ಬಾಂಡೆಡ್ ಡಿಪೋಗಳಿಂದ ಕೊಂಡುಕೊಳ್ಳತಕ್ಕದ್ದು.

(b) ಲೈಸೆನ್ಸದಾರನು 20 ಡಿಗ್ರಿ ಅಂಡರ್ ಪ್ರೂಫ್ ಜೋರಿನ ಕಾಕುಂಬಿ ಸಾರಾಯಿಯನ್ನು ಗ್ಯಾಲನ್ 1ಕ್ಕೆ 6—6—0 ಯಂತೆಯೂ ಅಥವಾ ಗ್ಯಾಲನ್ನಿನ 1—51ನೇ ಭಾಗವಾದ ಒಂದು ಡ್ರಾಂಗೆ 2 ಆಣೆಯಂತೆಯೂ ಬೆಲ್ಲದ ಸಾರಾಯಿಯನ್ನು ಒಂದು ರೆಪ್ಯೂಟೆಡ್ ಕ್ವಾರ್ಟ್ ಶೀಶೆ ಒಂದಕ್ಕೆ 1—3—10ರಂತೆಯೂ ಸದರೀ ಜೋರಿಗಿಂತ ಕಮ್ಮಿಯುಳ್ಳ ಸಾರಾಯಿಗಳಿಗೆ ಅದರ ದಾಮಾಷಾಯಿ ದರದಂತೆಯೂ ಜನರಿಗೆ ಮಾರತಕ್ಕದ್ದು.

(4) ಬೆಂಗಳೂರು ಮತ್ತು ಮೈಸೂರು ಷಹರುಗಳಲ್ಲಿ ಪ್ರತಿಯೊಂದು ಅಂಗಡಿಯ ಲೈಸೆನ್ಸದಾರನು ಅವನ ಅಂಗಡಿಯ ಲೈಸೆನ್ಸಿನ ನಿಯಮಿತ ಕಾಲಕ್ಕೆ ಮುಂಗಡವಾಗಿ ವರುಷ 1ಕ್ಕೆ 180 ರೂಪಾಯಿ ದರದ ಮೇರೆಗೆ ಮುನಿಸಿಪಲ್ ಕಾನೂನ್ ಪ್ರಕಾರ ರಿಜಿಸ್ಟರ್ ಫೀ ಯಾ ರುಸುಮನ್ನು ಕೊಡಬೇಕು. ಮತ್ತು ಆತನು ಪ್ರತಿ ತಿಂಗಳಲ್ಲಿಯೂ ಅಂಥಾ ಪ್ರತಿ ಅಂಗಡಿಯಲ್ಲೂ 55 ಗ್ಯಾಲನ್‌ಗಳಿಗೆ ಹೆಚ್ಚಾಗಿ ಮಾರುವ ವಿಶಿಷ್ಟ ಸಾರಾಯಿನ ಮೇಲೆ ಗ್ಯಾಲನ್ 1ಕ್ಕೆ 4 ಆಣೆ ಪ್ರಕಾರ ಲೈಸೆನ್ಸ್ ಫೀಯನ್ನು ಸಹ ಕೊಡಬೇಕು.

(5) ಭಟ್ಟೀದಾರರಿಂದ ಕಾಕುಂಬಿ ಸಾರಾಯಿ, ಬೆಲ್ಲದ ಸಾರಾಯಿ, ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗಣಿ ಭಟ್ಟಿ ಇಳಿಸಿದ ಸ್ವದೇಶ ಷರಾಬು ಅಥವಾ ಇತರ ವಿಶೇಷ ಮದ್ಯಗಳು, ಇವುಗಳಿಗಾಗಿ ಹಾಕಲ್ಪಡುವ ಮೇಲ್ಕಂಡ ಖರೀದಿ ದರ ಮತ್ತು ರುಸುಂ ಶಿವಾಯಿ ಸರ್ಕಾರದ ಅಪ್ಪಣೆ ಪ್ರಕಾರ ಸ್ಥಾಪಿಸಲ್ಪಟ್ಟಿರುವ ಬಾಂಡೆಡ್ ಡಿಪೋದಿಂದ ಸಾರಾಯಿ ಬಿಡ್ಯಲ್ಪಡುವದಕ್ಕೆ ಪೂರ್ವ 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ 1ಕ್ಕೆ ಲೋಕಲ್‌ಸೆಸ್ ಸಹಿತ ವಿಧಾಯಕವಾಗಿರುವ 4¾ ರೂಪಾಯಿ ದರದಂತೆಯೂ, ಯಾ ಸದರಿ ಜೋರಿಗಿಂತ ಹೆಚ್ಚಾದ ಯಾ ಕಮ್ಮಿಯಾದ ಸಾರಾಯಿಗಳಿಗೆ ಅದರ ದಾಮಾಷಾಯಿ ದರದಂತೆಯೂ ಎಕ್ಸೈಜ್ ಡ್ಯೂಟಿ ಯಾನೆ ಹಾಸಲು 6ನೇ ಷರತ್ತು ಅನುಸರಿಸಿ ಮುಂಗಡವಾಗಿ ಪಾವತಿ ಮಾಡಲ್ಪಡಬೇಕಾಗಿರುತ್ತೆ.

(6) ಲೈಸೆನ್ಸದಾರನು ಮೇಲ್ಕಂಡ ಹಾಸಲನ್ನು ಖರೀದಿ ಮೊಬಲಗನ್ನೂ ತಾಲ್ಲೂಕು ಖಜಾನೆಗೆ ಅಥವಾ ತಾಲ್ಲೂಕು ಕಚೇರಿಯಲ್ಲಿ ಭಾನುವಾರ ಮತ್ತು ರಜಾ ದಿನಗಳಲ್ಲಿಯೂ ಸಹ ಡಿಟೋ ಹಾಸಲು ಮತ್ತು ಖರೀದಿ ಮೊಬಲಗನ್ನು ತೆಗದುಕೊಳ್ಳುವುದಕ್ಕಾಗಿ ಸರ್ಕಾರದ ಪರ್ಮಿನಿಂದ ನೇಮಿಸಲ್ಪಟ್ಟಿರುವ ವಿಶೇಷ ಷರಾಫನು ಇದ್ದಲ್ಲಿ ಆತನ ವಶಕ್ಕೆ, ಅಥವಾ ಡೆಪ್ಯುಟಿ ಕಮಿಷನರ್ ಇದಕ್ಕಾಗಿ ನೌಕರರ್ಮಾಡಿರುವ ಇನ್ನಾವ ನೌಕರನಿಗಾದರೂ ಪಾವತೀ ಮಾಡಿ ಗೊತ್ತು ಮಾಡಿರುವ ಛಾಪಾ ನಮೂನೆಯಲ್ಲಿ ರಶೀತಿಯನ್ನು ಪಡೆಯತಕ್ಕದ್ದು. ಅಂಥಾ ರಶೀತಿಯನ್ನೂ ಮತ್ತು ಆ ರಶೀತಿಯಲ್ಲಿ ಕಂಡ ಮೊಬಲಗಿಗೆ ತಕ್ಕ ಮದ್ಯಕ್ಕೆ ಒಂದು ದರಖಾಸ್ತನ್ನೂ ಹಾಜರ್ಮಾಡಿದರೆ ಬಾಂಡೆಡ್ ಡಿಪೋ ಜಿಮ್ಮೇದಾರನು ಟ್ರೆಜರಿ ಆಫೀಸರರ ರಶೀತಿಯಲ್ಲಿ ನಮೂದು ಮಾಡಿರುವ ಡ್ಯೂಟಿ ಮತ್ತು ಖರೀದಿ ಮೊಬಲಗಿಗೆ ಸರಿಯಾದ ಮದ್ಯವನ್ನು ಸರಬರಾಯಿ ಮಾಡಿ ಆ ರಶೀತಿಯಲ್ಲಿ ಮದ್ಯವು ರವಾನೆ ಆದ ತಾರೀಖು ಮತ್ತು ಘಂಟೆಯನ್ನು ನಮೂದುಮಾಡಿ ಎಕ್ಸೈಜ್ ಕಮಿಷನರವರ ಆಫೀಸಿಗೆ ಆ ರಶೀತಿಯನ್ನು ರವಾನಿಸತಕ್ಕದ್ದು. ಮೇಲ್ಕಂಡ ಡಿಪೋ ಜಿಮ್ಮೇದಾರನು ಬಾಂಡೆಡ್ ಡಿಪೋದಿಂದ ಮದ್ಯವನ್ನು ರವಾನೆ ಮಾಡಲು ವಿಧಾಯಕವಾಗಿರುವ ನಮೂನೆಯಲ್ಲಿ ರಹದಾರಿಯನ್ನು ಕಳುಹಿಸತಕ್ಕದ್ದು. ಆತನು ಎಕ್ಸೈಜ್ ಕಮಿಷನರ್ ಸಾಹೇಬರವರ ಆಜ್ಞಾನುಸಾರವಾಗಿ ಸರಕಿನೊಡನೆ ಸ್ಯಾಂಪಲ್ ಬಾಟ್ಲು ಯಾನೆ ಮಾದ್ರಿ ಬುಡ್ಡಿಗಳನ್ನು ಸಹಾ ಕಳುಹಿಸತಕ್ಕದ್ದು.

ಸನ್ 1904—1905 ನೇ ಸಾಲಿಗೆ ಶೇಂದಿ ಅಂಗಡಿಗಳ ಹರಾಜು.

68

ನಂಬರ್ 641—Ex. F. 6–1902, ಬೆಂಗಳೂರು, 29ನೆ ಮಾರ್ಚಿ 1904

1. ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಪ್ರತಿ ಅಂಗಡಿಯಲ್ಲಿ ಯಾ ಅಂಗಡಿಗಳ ಸಮುದಾಯದಲ್ಲಿ 1904ನೇ ಇಸವಿ ಜುಲೈ ಗುರ್ರೆಲಾಗಾಯಿತು 1905ನೆ ಇಸವಿ ಜೂನ್ 30ನೇ ತಾರೀಖಿಗೆ ಪೂರೈಸುವ ಸರ್ಕಾರಿ ಸಾಲಿಗೆ ಶೇಂದಿಯನ್ನು ಬಿಕರಿ ಮಾಡುವಷ್ಟು ಬಿಟ್ಟು ಸ್ವಾತಂತ್ರ್ಯದ ಹಕ್ಕು ಆಯಾ ಡೆಪ್ಯುಟಿ ಕಮಿಷನರುಗಳಿಂದ ಯಾ ರೆವಿನ್ಯೂ ಅಸಿಸ್ಟೆಂಟ್ ಕಮಿಷನರುಗಳಿಂದ ಯಾ ಎಕ್ಸೈಜ್ ಇಲಾಖೆಯ ಡಿವಿಜನ್ ಆಫಿಸರರುಗಳಿಂದ ಯಾ ಇದಕ್ಕಾಗಿ ಡೆಪ್ಯುಟಿ ಕಮಿಷನರುಗಳಿಂದ ವಿಶೇಷವಾಗಿ ಅಧಿಕಾರಹೊಂದಿದ ಇತರ ಆಫೀಸರರುಗಳಿಂದ ಆಯಾಯ ತಾಲ್ಲೂಕು ಯಾ ಸಬ್ ತಾಲ್ಲೂಕು ಕಸಬಾಗಳಲ್ಲಿ ಇತಃಪರ ಹೇಳಿದಪ್ರಕಾರ ಹೊರತಾಗಿ ಮೇಲ್ಕಂಡ ಪಟ್ಟಿಯಲ್ಲಿ ನಮೂದ್ಮಾಡಿರುವ ತಾರೀಖುಗಳಲ್ಲಿ ಸರ್ಕಾರದ ಸವಾಲನ್ನು ಗೊತ್ತು ಮಾಡಿಕೊಂಡು ಹರಾಜ್ ಹಾಕಲ್ಪಡುತ್ತದೆಂದುನ್ನು, ಮತ್ತು ಸದರೀ ಸವಾಲಿನಮೇಲೆ ಅತ್ಯಂತ ಜಾಸ್ತಿ ಗುತ್ತಿಗೆ ಮೊಬಲಗನ್ನು ದರಖಾಸ್ತು ಮಾಡುವ ಸವಾಲ್‌ದಾರನಿಗೆ ಅದು ಕೊಡಲ್ಪಡುವದೆಂದುನ್ನೂ, ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದಿಂದ ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ. ಹರಾಜುಗಳು ಸದರೀ ತಾರೀಖುಗಳಲ್ಲಿ ಪೂರೈಸದೆ ಹೋದಲ್ಲಿ ಮಾರನೇದಿನಗಳಲ್ಲಿಯೂ ಹಾಕಲ್ಪಡುವವು (ರಜಾದಿನಗಳು ಹೊರತಾಗಿ). ಒಂದೊಂದು ಅಂಗಡಿಗೆ ಪ್ರತ್ಯೇಕವಾಗಿ ಸವಾಲು ಬಾರದೇ ಹೋದಲ್ಲಿ ಹರಾಜು ಹಾಕುವ ಆಫಿಸರರು ಎಕ್ಸೈಜ್ ಡಿವಿಜನ್ ಆಫಿಸರ್ರವರು ಹಾಜರು ಇದ್ದಲ್ಲಿ ಅವರ ಅಭಿಪ್ರಾಯವನ್ನು ತಿಳಿದು ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ನಮೂದಿಸಿರುವ ಅಂಗಡಿಗಳ ಸಮುದಾಯದ ಕ್ರಮವನ್ನು ಅವಶ್ಯಕ ಬಿದ್ದಾಗ ಬದಲಾಯಿಸಲಿಕ್ಕೂ ಅಥವಾ ಸವಾಲಿಲ್ಲದೇ ಇರುವ ಅಂಗಡಿಗಳನ್ನು ಇತಃಪರ ವಿಲೇವಾರಿ ಮಾಡಲು ಅವಕಾಶತ್ತು ಇಡುವದಕ್ಕೂ ಅಥವಾ ದರಖಾಸ್ತು ಮೂಲಕ ಯಾ ಖಾಸಗಿ ಏರ್ಪಾಟು ಮೂಲಕ ಯಾವದಾದರೂ ವಿಶೇಷ ಸಂದರ್ಭದಲ್ಲಿ ಸದರೀ ಹಕ್ಕನ್ನು ಮಾರುವುದಕ್ಕೂ ಸ್ವತಂತ್ರವುಳ್ಳವರಾಗಿರುತ್ತಾರೆ. ಯಾವದಾದರು ಕಾಫಿ ಯಸ್ಟೇಟಿನಲ್ಲಿ ಸದರೀ ಹಕ್ಕು ಒಂದೊಂದು ಅಂಗಡಿಗೆ ವರ್ಷಕ್ಕೆ 12 ರೂಪಾಯಿಗೆ ಕಮ್ಮಿಯಿಲ್ಲದಂತೆ ಗೊತ್ತಾದ ಮೊಬಲಗಿಗೆ ಕಾಫಿಪ್ಲಾಂಟರ್ರಿಗೆ ಮಾರಲ್ಪಡಬಹುದು. ಇನಾಂ ಗ್ರಾಮಗಳಲ್ಲಿರತಕ್ಕ ಅಂಗಡಿಗಳು ಪ್ರತ್ಯೇಕವಾಗಿ ಹರಾಜು ಹಾಕಲ್ಪಡತಕ್ಕದ್ದಲ್ಲದೆ ಅವುಗಳ ಬಾಬತು ಹುಟ್ಟುವಳಿ ಮೊಬಲಗು ಲೆಕ್ಕಗಳಲ್ಲಿ ಪ್ರತ್ಯೇಕವಾಗಿ ತೋರಿಸಲ್ಪಡತಕ್ಕದ್ದು. ಹರಾಜು ಪ್ರತಿ ಒಂದು ವಿಷಯದಲ್ಲಿಯೂ ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ಬಳಪಟ್ಟು ಇರತಕ್ಕದ್ದಲ್ಲದೆ ಗಾರ್ನ್ಮೆಂಟಿನವರಿಂದ ಬದಲಾಯಿಸಲ್ಪಟ್ಟಹೊರತು ಡೆಪ್ಯುಟಿ ಕಮಿಷನರವರು ಕ್ರಮವಾಗಿ ಮಂಜೂರ್ಮಾಡಿದ ಕೂಡ್ಲೆ ಜಾರೀಗೆ ಬರತಕ್ಕದ್ದು. ಡೆಪ್ಯುಟಿ ಕಮಿಷನರವರು ತಮಗೆ ಯುಕ್ತತೋರಿದಹಾಗೆ ಯಾವ ಕಾರಣವನ್ನೂ ತಿಳಿಸದೆ ಯಾವ ಸವಾಲನ್ನಾದರೂ ಅಂಗೀಕರಿಸುವದಕ್ಕೂ ಯಾ ನಿರಾಕರಿಸುವದಕ್ಕೂ ಸ್ವಾತಂತ್ರ್ಯವುಳ್ಳವರಾಗಿರುತ್ತಾರೆ. ಅಂಥಾ ಕ್ರಮವಾಗಿ ಮಂಜೂರ್ಮಾಡೋಣವು ಹರಾಜು ಡೆಪ್ಯುಟಿ ಕಮಿಷನರವರಿಂದ ಖುದ್ದೇ ಆಗಲಿ ಅಥವಾ ಅವರಿಂದ ನೇಮಿಸಲ್ಪಟ್ಟ ಇನ್ಯಾವ ಇತರ ಆಫೀಸರರಿಂದಲೇ ಆಗಲಿ ನಡಿಸಲ್ಪಟ್ಟಿದ್ದಾಗ್ಯೂ ಅವಶ್ಯಕವಾಗಿರುತ್ತದೆ. ಸರ್ಕಾರೀ ಸವಾಲಿಗಿಂತ ಹೆಚ್ಚಾದ ಸವಾಲ್ ಬಾರದೆಹೋದಲ್ಲಿ ಹರಾಜು ನಡಿಸತಕ್ಕ ಆಫೀಸರರು ತಮಗೆ ಯುಕ್ತತೋರಿದ್ದಲ್ಲಿ ಸದರೀ ಸರ್ಕಾರಿ ಸವಾಲನ್ನು ತಗ್ಗಿಸಬಹುದು. ಲೈಸೆನ್ಸ್‌ದಾರನು ಯಾವದಾದರೂ ತಕ್ಸೀರಿಗಾಗಿ ಕ್ರಿಮಿನಲ್ ಕೋರ್ಟಿನಲ್ಲಿ ದಯಾಫ್ತಿಯಾಗಿ ತಪ್ಪು ಸಾಬೀತಾಗಿರುವದರಿಂದಲೂ ಅಥವಾ ಲೈಸೆನ್ಸಿನ ಯಾ ಎಕ್ಸೈಜ್ ರೆಗ್ಯುಲೇಷನ್ ಯಾ ಒಪಿಯಂ ಆಕ್ಟಿನ ಗುತ್ತಿಗೆಯ ಷರತ್ತುಗಳಿಗನುಸಾರವಾಗಿ ನಡೆಯದೇಯಿದ್ದ ತಪ್ಪಿತಸ್ಥನಾಗಿರುವ ಕಾರಣದಿಂದ ಲೈಸೆನ್ಸ್ ಹಿಡುವಳಿದಾರನಾಗಿರಲು ಯೋಗ್ಯನಲ್ಲವೆಂಬದರಮೇಲೂ ಯಾ ನಾದಾರಿ ಮನುಷ್ಯನೆಂಬದರಮೇಲೂ ಅಥವಾ ಸರ್ಕಾರದ ಪ್ರಯೋಜನಕ್ಕೆ ಕುಂದಕವಾಗತಕ್ಕ ಏರ್ಪಾಟುಗಳನ್ನು ಅಡ್ಡೀಪಡಿಸತಕ್ಕ ಕಾರಣದಿಂದಲೂ, ಅಥವಾ ಮತ್ಯಾವ ನ್ಯಾಯವಾದ ಕಾರಣಕ್ಕಾಗಿಯೂ ಆತನ ಸವಾಲನ್ನು ಹರಾಜು ನಡೆಸತಕ್ಕ ಆಫೀಸರರು, ತಮಗೆ ಯುಕ್ತ ತೋರಿದಂತೆ ಯಾವ ಕಾರಣವನ್ನು ತಿಳಿಸದೇನೆ ತಿರಸ್ಕರಿಸಬಹುದು.

2. (a) ಸವಾಲ್ಮಾಡಲು ಇಷ್ಟವುಳ್ಳವರು ಖುದ್ದಾಗಿ ಆಗಲೀ ಯಾ ಅಪ್ಪಣೆ ಹೊಂದಲ್ಪಟ್ಟಿರುವ ಮುತಾಲೀಕರ ಮೂಲಕವಾಗಿ ಆಗಲೀ ಹರಾಜಾಗಬೇಕು; ಮತ್ತು ಕೋಲಾರದ ಚಿನ್ನದಗಣಿಗಳ ಮ ಬೆಂಗಳೂರು ಮೈಸೂರು ಷಹರುಗಳಲ್ಲಿನ ಅಂಗಡಿಗಳಿಗೆ 25 ರೂಪಾಯಿನಂತೆಯೂ ಇತರ ಸ್ಥಳಗಳಲ್ಲಿನ ಅಂಗಡಿಗಳಿಗೆ 10 ರೂಪಾಯಿನಂತೆಯೂ ಅಥವಾ ಹರಾಜು ನಡೆಸತಕ್ಕ ಆಫೀಸರರು ಗೊತ್ತು ಮಾಡಬಹುದಾದ ಬೇರೆ ನ್ಯಾಯವಾದ ಮೊಬಲಗಿನ ಮೊತ್ತದಷ್ಟು ಠೇವಣಿ ಇಟ್ಟಹೊರತು ಯಾರೊಬ್ಬನು ತನಗಾಗಿ ಯಾಗಲೀ ಯಾ ಇತರರಿಗೋಸ್ಕರವಾಗಲೀ ಸವಾಲ್ಮಾಡಕೂಡದು. ಹಾಗೆ ಪ್ರಾರಂಭದಲ್ಲಿ ಠೇವಣಿ ಮೊಬಲಗು ಅವಶ್ಯಕವಿಲ್ಲನೆಂದು ಸರ್ಕಾರದವರು ಯಾವಾಗಬೇಕಾದರೂ ಬಿಟ್ಟುಬಿಡಬಹುದು. ಅಂಥಾ ಠೇವಣಿಗಳು ಹರಾಜು ತಾರೀಖು ಮುಂಚೆ 3 ದಿವಸಗಳೊಳಗಾಗಿ ಕೊಟ್ಟರು ತೆಗೆದುಕೊಳ್ಳಲ್ಪಡುವದು; ನಾ ಮಂಜೂರಾದ ಸವಾಲ್ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡದೇ ಇರುವಪಕ್ಷಕ್ಕೆ ಹರಾಜ್ ಪೂರೈಸಿದ ಕೂಡಲೆ ವಾಪಸ್ ಮಾಡಲ್ಪಡುತ್ತವೆ.

(b) ಯಾವ ಅಂಗಡಿ ಯಾ ಅಂಗಡಿಗಳ ಸಮುದಾಯವೂ ಒಬ ಆಸಾಮಿಗಿಂತ, ಯಾ ಕ್ರಮವಾಗಿ ಏರ್ಪಟ್ಟಿರುವ ಒಂದು ಕಂಪನಿಯ ಫರಮ್ಮಿಗಿಂತ ಹೆಚ್ಚಾದ ಸಂಖ್ಯೆಯುಳ್ಳವರ ಹೆಸರಿಗೆ ಛಡಸವಾಲಿನಲ್ಲಿ ನಿಲ್ಲಿಸಲ್ಪಡಕೂಡದು. ಹರಾಜುಮಾಡುವ ಅಧಿಕಾರಿಯು ಯಾರ ಹೆಸರಿನಿಂದ ಸವಾಲ್ ಬಂದಿರುವದಿಲ್ಲವೋ ಆತನ ಹೆಸರನ್ನು ಕೊಂಡುಕೊಂಡವನೆಂದು ದಾಖಲ್ಮಾಡಲು ತಿರಸ್ಕರಿಸತಕ್ಕದ್ದು.

3. (a) ಬಟ್ಟಿ ಸ್ವಾತಂತ್ರ್ಯದ ಹಕ್ಕನ್ನು ಹರಾಜಿನಲ್ಲಿ ಪಡೆದ ಸವಾಲ್ದಾರನು ಸದರೀ ಸ್ವಾತಂತ್ರ್ಯದ ಹಕ್ಕು ತನ್ನ ಹೆಸರಿಗೆ ನಿಂತ ನಂತರ ಹರಾಜು ನಡಿಸತಕ್ಕ ಆಫೀಸರರು ಕೇಳಿದ್ದಲ್ಲಿ ತಕ್ಷಣವೇ ಇಲ್ಲದಿದ್ದರೆ ಆ ದಿವಸದ ಹರಾಜು ಖೈದಾದ ನಂತರ ಸಂವತ್ಸರಕ್ಕೆ ತನ್ನ ಸವಾಲಿನ ಮೊಬಲಗಿನಲ್ಲಿ 24ರಲ್ಲಿ 1 ಬಾಗಕ್ಕೆ ಸರಿಯಾದ ಮೊಬಲಗನ್ನು ಅಂದರೆ ಒಂದು ತಿಂಗಳ ಗುತ್ತಿಗೇ ಹಣದಲ್ಲಿ ಅರ್ಧವನ್ನು, ಮೊದಲು ಠೇವಣಿ ಇಟ್ಟಿರುವ ಮೊಬಲಗು ತಿಂಗಳ ಗುತ್ತಿಗೆ ಹಣಕ್ಕೆ ಸಮಯಹೆಚ್ಚು ಇದ್ದಾಗ ಶಿವಾಯಿ, ಠೇವಣಿ ಯಿಡಬೇಕು. ಇದಕ್ಕೆ ತಪ್ಪಿದಲ್ಲಿ 2ನೇ (a) ಕಲಂಮೇರೆ ಆತನು ಇಟ್ಟಿರತಕ್ಕ ಠೇವಣಿ ಮೊಬಲಗು ಏನಾದರು ಯಿದ್ದಲ್ಲಿ ಅದು ದಂಡವಾಗಿ ಸೇರಿಸಿಕೊಳ್ಳಲ್ಪಡುವದು ಮತ್ತು ಡೆಪ್ಯುಟಿ ಕಮಿಷನರವರು ಯಾ ಹರಾಜು ಮಾಡುವ ಆಫೀಸರರು ಗೊತ್ತು ಮಾಡುವ ರೀತ್ಯಾ ಸದರೀ ಹಕ್ಕು ಮೇಲೆ ನಮೂದಿಸಿರುವ ಷರತ್ತುಗಳ ಪ್ರಕಾರ ಅವನನ್ನು ನಷ್ಟಕ್ಕೆ ಗುರಿಮಾಡಿ ಪುನಹಾ ಹರಾಜು ಮಾಡಲ್ಪಡುವದು ಅನ್ಯಥಾ ವಿಲೇವಾರಿ ಮಾಡಲ್ಪಡುವದು.

(b) ಹರಾಜಿನಲ್ಲಿ ಅಂಗಡಿ ಯಾ ಅಂಗಡಿಗಳ ಸಮುದಾಯಕ್ಕಾಗಿ ಯಾರ ಸವಾಲ್ ಅಂಗೀಕರಿಸಲ್ಪಟ್ಟಿದೆಯೋ ಮತ್ತು ಯಾರು ಮೇಲೆ ಹೇಳಿರುವಂತೆ ಠೇವಣಿಗಳನ್ನು ಕೊಟ್ಟಿದ್ದಾನೆಯೋ ಆತನು ಹರಾಜು ಮಂಜೂರಾದ ವಿಷಯವನ್ನು ನೋಟಿಸ್ ಮೂಲಕ ತಿಳಿಸಲು ಸಾಧ್ಯವಾಗುವಹಾಗೆ ತನ್ನ ವಿಳಾಸವನ್ನು ಹರಾಜು ನಡಿಸತಕ್ಕ ಆಫೀಸರವರಲ್ಲಿ ಕೊಟ್ಟುಹೋಗತಕ್ಕದ್ದು. ಸದರೀ ನೋಟೀಸು ಆತನಿಗೆ ಆಗಲಿ ಅಥವಾ ಸದರೀ ವಿಳಾಸದ ಸ್ಥಳದಲ್ಲಿ ಆತನ ಮನೆಯಲ್ಲಿರುವ ಇತರ ವಯಸ್ಸಾದ ಗಂಡಸಿಗಾಗಲೀ ರೂಬರೂಬ್ ಪಾವತಿಯಾಗೇಆಗಲಿ ಅಥವ ವಾಸಸ್ಥಾನಕ್ಕೆ ಅಂಟಿಸಲ್ಪಡುವದರಿಂದಲೂ ಯಾ ಕ್ರಮವಾಗಿ ರಿಜಿಸ್ಟರ್ಡ್ ಪೋಸ್ಟುಮೂಲಕ ಕಳುಹಿಸಿದ್ದರಿಂದಲೇ ಆಗಲಿ ಜಾರಿಯಾದ 7 ದಿವಸಗಳೊಳಗಾಗಿ ಸಂಬಂಧಪಟ್ಟ ತಾಲ್ಲೂಕು ಖಜಾನೆಯಲ್ಲಿ ಮೊದಲು ಕೊಟ್ಟ ಠೇವಣಿ ಮೊಬಲಗು ಸೇರಿಸಿಕೊಂಡು 2 ತಿಂಗಳ ಖಿಸ್ತು ಮೊಬಲಗಿಗೆ ಸರಿಯಾದಷ್ಟು ಹಣವನ್ನು ಠೇವಣಿ ಇಡಬೇಕು. ಮತ್ತು ಅಮಲ್ದಾರ್ರವರಲ್ಲಿ ಅವಶ್ಯಕವಾಗಿರುವ ಒಡಂಬಡಿಕೆಗಳನ್ನು ಬರೆದುಕೊಟ್ಟು ಮುಂದೆ ಹೇಳಿರುವ ಪ್ರಕಾರ ಅವಶ್ಯಕವಾಗಿರುವ ಲೈಸೆನ್ಸುಗಳನ್ನು ತೆಗದುಕೊಳ್ಳತಕ್ಕದ್ದು.

4. (a) ಹಿಂದಿನ ಕಲಮ್ಮನ್ನನುಸರಿಸಿ ಇಡತಕ್ಕ ಠೇವಣಿಯು ನಗದಾಗಿಯಾಗಲೀ ಯಾ ಡೆಪ್ಯುಟಿ ಕಮಿಷನರವರ ಹೆಸರಿಗೆ ಕ್ರಮವಾಗಿ ಇಂಡಾರ್ಸ್ ಮಾಡಲ್ಪಟ್ಟ ಇಂಡಿಯಾ ಗೌರ್ನಮೆಂಟ್ ಸೆಕ್ಯೂರಿಟಿ ಮೂಲಕವಾಗಿಯಾಗಲೀ ಇರತಕ್ಕದ್ದು. ಪರಂತು ಮಾಹೆಯಾನಾ ಗುತ್ತಿಗೆ ಮೊಬಲಗು 10 ರೂಪಾಯಿಗಿಂತಲೂ ಹೆಚ್ಚಾಗಿರುವ ಸಂದರ್ಭಗಳಲ್ಲಿ (ಮೇಲ್ಕಂಡ 2 ತಿಂಗಳ ಗುತ್ತಿಗೇ ಹಣದ ಬದಲಾಗಿ) ಡೆಪ್ಯುಟಿ ಕಮಿಷನರವರು ತಮಗೆ ಯುಕ್ತ ತೋರಿದಂತೆ ಮೇಲ್ಕಂಡ ಮೇರಿಗೆ 1 ತಿಂಗಳ ಗುತ್ತಿಗ ಹಣಕ್ಕೆ ಸಮನಾದ ಠೇವಣಿ ನಿಸಿ 4 ತಿಂಗಳ ಗುತ್ತಿಗೆ ಹಣಕ್ಕೆ ಸಮವಾದ ಮೊಬಲಗಿಗೆ ಖಾತರೆ ಜಾಮೀನನ್ನು ಕೊಡುವಂತೆ ಬಿಕರೀದಾರನಿಗೆ ಅಪ್ಪಣೆ ಕೊಡಬಹುದು. ಒಂದು ತಿಂಗಳ ಗುತ್ತಿಗೆ ಮೊಬಲಗು 10 ರೂಪಾಯಿಗಳಿಗೆ ಮೀರದಿರುವ ಎಲ್ಲಾ ಸಂದರ್ಭಗಳಲ್ಲಿಯೂ 2 ತಿಂಗಳ ಖಿಸ್ತಿನ ಹಣದಷ್ಟು ನಗದು ಠೇವಣಿಯನ್ನು ತೆಗೆದುಕೊಳ್ಳಬೇಕೇ ಹೊರ್ತು ನಫರ್ ಜಾಮೀನನ್ನು ಅಂಗೀಕರಿಸಕೂಡದು. ಹರಾಜು ನಂತರ ವಿಚಾರಿಸಿದ್ದರಲ್ಲಿ ಆತನು ಮೈಸೂರು ಶೀಮೆಯಲ್ಲಿ ಚಿಂದಿಗಿಯನ್ನುಂಟುಮಾಡದೆ ಇರುವ ಅನ್ಯದೇಶದವನಾಗಿಯೂ ಜೇವಾಳಸ್ಥನೆಂಬುವದಕ್ಕೆ ಅನುಮಾನಕ್ಕೆ ಗುರಿಯಾದವನಾಗಿ ಇರುವಂತೆ ಕಂಡುಬಂದಲ್ಲಿ ವಿಧಾಯುಕವಾದ ಎರಡರಷ್ಟು ಠೇವಣಿಯನ್ನು ಇಡುವದಕ್ಕಾಗಲೀ ಯಾ ಆತನ ಗುತ್ತಿಗೆ ಷರತ್ತುಗಳಿಗನುಸರಿಸಿ ಆತನು ಕೊಡಬೇಕಾದ ಎಲ್ಲಾ ಹಣಗಳನ್ನು ಕ್ರಮವಾಗಿ ಪಾವತಿ ಮಾಡಲುಳ್ಳವರೆಂದು ಜಾಮೀನ್ ಪತ್ರವನ್ನು ಬರದುಕೊಡುವದಕ್ಕೆ ಮೈಸೂರು ಸಂಸ್ಥಾನದಲ್ಲಿ ವಾಸವಾಗಿದ್ದು ಸ್ವತ್ತುಳ್ಳವರಾಗಿರುವ ಒಬ್ಬ ಜಾಮೀನ್‌ದಾರನನ್ನು ಯಾ ಜಾಮೀನ್‌ದಾರರನ್ನು ಹಾಜರ್ಮಾಡುವದಕ್ಕಾಗಲೀ ಆತನಿಗೆ ಕೇಳಬಹುದು.

(b) ಪ್ರಾರಂಭದಲ್ಲಿ ಇಟ್ಟಿರತಕ್ಕ ಠೇವಣಿ ಮೊಬಲಗು 3 (b) ನೆ ಯಾ 4 (a) ನೇ ಕಲಂ ಮೇರೆಗೆ ಠೇವಣಿ ಇಡಬೇಕಾಗಿರುವ ಮೊಬಲಗಿಗಿಂತಲೂ ಹೆಚ್ಚಾಗಿದ್ದಲ್ಲಿ ಹೆಚ್ಚಾಗಿರತಕ್ಕ ಮೊಬಲಗು ಬಿಕರೀದಾರನಿಗೆ ವಾಪಸ್ ಕೊಡಲ್ಪಡುವದು.

5. ಸದರೀ ಸ್ವಾತಂತ್ರ್ಯದ ಹಕ್ಕನ್ನು ಕೊಂಡುಕೊಂಡವನು ಈ ಮುಂದೆ ನಮೂದಿಸಿರುವ ಮತ್ತು ತನಿಗೆ ಲೈಸೆನ್ಸಿನಲ್ಲಿ ಗೊತ್ತುಮಾಡಿರುವ ಷರತ್ತುಗಳಿಗನುಸಾರವಾಗಿ ನಡೆಯುವದಕ್ಕೆ ತನ್ನನ್ನು ಮತ್ತು ಕ್ರಮವಾಗಿ ರಿಕಾರ್ಡಾದ ಡೆಪ್ಯುಟಿ ಕಮಿಷನರವರ ಹುಕುಂನಿಂದ ನಿಯಮಿಸಲ್ಪಟ್ಟ ಹೊರ್ತು ಡೆಪ್ಯುಟಿ ಕಮಿಷನರವರಿಂದ ಸಾಕೆಂದು ಭಾವಿಸಲ್ಪಡುವಷ್ಟು ತನ್ನ ಚರ ಸ್ಥಿರ ಸ್ವತ್ತುಗಳನ್ನು ಬದ್ಧಿಸುವ ಒಂದು ಒಡಂಬಡಿಕೆಯನ್ನು ಬರೆದುಕೊಡತಕ್ಕದ್ದು ಮತ್ತು ಮೇಲ್ಕಂಡ ಕಲಂ ಅನುಸರಿಸಿ ಅಂಗೀಕರಿಸಲ್ಪಟ್ಟಿದ್ದ ಪಕ್ಷದಲ್ಲಿ ಆತನ ಜಾಮೀನ್‌ದಾರನು ಸದರೀ ಬಿಕರೀದಾರನು ಅವನ ಕರಾರಿನ ಷರತ್ತುಗಳನ್ನನುಸರಿಸಿ ಕ್ರಮವಾಗಿ ನಡೆಯುವದಕ್ಕೋಸ್ಕರ ತನ್ನನ್ನು ಮತ್ತು ಡೆಪ್ಯುಟಿ ಕಮಿಷನರವರು ಸಾಕೆಂದು ಅಪೇಕ್ಷಿಸಬಹುದಾದಷ್ಟು ತನ್ನ ಚರ ಸ್ಥಿರ ಸ್ವತ್ತುಗಳನ್ನೂ ಈಡುಮಾಡಿ ವಿಧಾಯುಕವಾದ ನಮೂನೆಯಲ್ಲಿ ಜಾಮೀನ್ ತಮಸೂಕನ್ನು ಬರದುಕೊಡತಕ್ಕದ್ದು. ಹಾಗೆ ಬರದುಕೊಡಲ್ಪಟ್ಟ ಒಡಂಬಡಿಕೆ ವ ಜಾಮೀನ್ ತಮಸೂಕು ಬಿಕರೀದಾರನ ಖರ್ಚಿನಿಂದ ಸ್ಟಾಂಪು ಹಾಕಲ್ಪಡಬೇಕು. ಮತ್ತು ಪತ್ರದಲ್ಲಿ ಕಂಡ ಮೊಬಲಗು 100 ರೂಪಾಯಿ ಅಥವಾ 100 ರೂಪಾಯಿಗಿಂತಲೂ ಹೆಚ್ಚಾಗಿದ್ದಲ್ಲಿ ಆತನ ಖರ್ಚಿನಿಂದಲೇನೇ ರಿಜಿಸ್ಟರು ಮಾಡಿಸಲ್ಪಡಬೇಕು.

6. ಮೇಲೆ ಹೇಳಿರುವಂತೆ ಠೇವಣಿ ಯಾ ಠೇವಣಿಗಳನ್ನು ಹಾಜರು ಮಾಡಲಿಕ್ಕೆ ಯಾ ಕರಾರನ್ನು ಯಾ ಜಾಮೀನ್ ಇದ್ದಲ್ಲಿ ಜಾಮೀನ್ ತಮಸೂಕನ್ನು ಬರೆದುಕೊಡಲಿಕ್ಕೂ ಮತ್ತು ಲೈಸೆನ್ಸುಗಳನ್ನು ತೆಗದುಕೊಳ್ಳುವದಕ್ಕೂ ತಪ್ಪಿದರೆ ಡೆಪ್ಯುಟಿ ಕಮಿಷನರವರು ಕೂಡಲೆ ಸದರೀ ಸ್ವಾತಂತ್ರ್ಯದ ಹಕ್ಕನ್ನು ಮೊದಲು ಕೊಂಡುಕೊಂಡವನನ್ನು ನಷ್ಟಕ್ಕೆ ಗುರಿಮಾಡಿ ದುಸರಾ ಹರಾಜು ಯಾ ಅನ್ಯಥಾ ವಿಲೇವಾರಿ ಮಾಡತಕ್ಕದ್ದು. ಸದರೀ ಪ್ರಥಮ ಖರೀದಿದಾರನಿಂದ ಮೊದಲೇ ಹಾಜರ್ಮಾಡಲ್ಪಟ್ಟ ಠೇವಣಿ ಯಾ

ತೇವಣಿಗಳು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಆತನು ದುಸರಾ ಹರಾಜಿನಿಂದ ಯಾ ಅನ್ಯಥಾ ವಿಲೇವಾರಿಯಿಂದ ಉಂಟಾದ ನಷ್ಟಕ್ಕೂ ಗುರಿಯಾಗಿರತಕ್ಕದ್ದು. ಪರಂತು ದುಸರಾ ಹರಾಜಿನಲ್ಲಿ ಯಾ ಅನ್ಯಥಾ ವಿಲೇವಾರಿಯಲ್ಲಿ ಏನಾದರೂ ನಫೆ ಬಂದರೆ ಅದಕ್ಕೆ ಆತನಿಗೆ ಏನೂ ಹಕ್ಕಿರಲಾರದು. ಇದರಿಂದ ನಷ್ಟವಾದ ಸಂದರ್ಭದಲ್ಲಿ ದಂಡವಾಗಿ ತೆಗದುಕೊಂಡ ತೇವಣಿ ಮೊಬಲಗು ಅದರಿಂದ ಉತಾರು ಹಾಕಲ್ಪಡುವದು ಮತ್ತು ಬಾಕಿ ಏನಾದರು ಯಿದ್ದಲ್ಲಿ ಜಮೀನ್ ಕಂದಾಯದ ಬಾಕಿಯಂತೆ ವಸೂಲಾಗತಕ್ಕದ್ದು. ಹರಾಜು ಮಂಜೂರಾದ ಮೇಲೆ ಸದರೀ ಖರೀದಿದಾರನು ಸತ್ತುಹೋದ ಪಕ್ಷದಲ್ಲಿ ಅವನ ವಾರಸುದಾರರು ಯಾ ಅವನಿಂದ ಹಕ್ಕನ್ನು ಪಡೆದವರು ಅದಕ್ಕೆ ಜವಾಬ್ದಾರರಾಗಿರತಕ್ಕದ್ದು.

7. ಕರಾರುಗಳನ್ನೂ ತಮಸೂಕುಗಳನ್ನೂ ಬರೆದುಕೊಟ್ಟಕೂಡಲೆ ಡೆಪ್ಯುಟಿ ಕಮಿಷನರವರು ಖರೀದಿದಾರನಿಗೆ ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ಒಳಪಟ್ಟು ವಿಧಾಯಕವಾಗಿರುವ ನಮೂನೆಯಲ್ಲಿ ಸದರೀ ಗುತ್ತಾ ಸ್ವಾತಂತ್ರ್ಯದ ಹಕ್ಕನ್ನು ನಮೂದಿಸಿ ಒಂದು ಲೈಸೆನ್ಸನ್ನು ಕೊಡುವರು. ಕ್ರಮವಾದ ಲೈಸೆನ್ಸ್ ಕೊಡದಿದ್ದಾಗ್ಯೂ ಈ ಕೆಳಗೆ ನಮೂದಿಸಿರುವ ಷರತ್ತುಗಳಿಗೆ ವಿರೋಧವಾಗಿ ನಡೆದ್ದಕ್ಕೆ ವಿಧಿಸಿರುವ ಶಿಕ್ಷೆಗಳಿಗೆ ಸ್ವತಂತ್ರ ಹಕ್ಕನ್ನು ಪಡೆದುಕೊಂಡಿರುವವನು ಗುರಿಯಾಗುವದನ್ನು ಈ ಪ್ರಕರಣದಲ್ಲಿರುವ ಯಾವದು ತಪ್ಪಿಸಲಾರದು.

(1) ಲೈಸೆನ್ಸದಾರನು ತನ್ನ ದುಕಾನುಗಳಿಗೆ ಶೇಂದಿ ಪದಗಿಸಿಕೊಳ್ಳುವದಕ್ಕೆ ತನ್ನ ಅಂಗಡಿಗೆ ಯಾ ಅಂಗಡಿಗಳ ಸಮುದಾಯಕ್ಕೆ ಸೇರಿದ ವನಗಳಲ್ಲಿರುವ ಶೇಂದಿ ಉತ್ಪತ್ತಿ ಆಗುವ ಗಿಡಗಳನ್ನು ಮರತೆರಿಗೆ ನಿಬಂಧನೆಗಳಿಗೆ ಒಳಪಟ್ಟು ಹೊಂದುವದಕ್ಕೆ ಸ್ವಾತಂತ್ರ್ಯವುಳ್ಳವನಾಗಿರುತ್ತಾನೆ. ಮತ್ತು ಆಪಸ್ಸಿನಲ್ಲಿ ಮಾಲೀಕರೊಡನೆ ಮಾಡಿಕೊಂಡ ಏರ್ಪಾಟುಗಳನ್ನನುಸರಿಸಿ ಹಿಡುವಳಿದಾರ ಜಮೀನುಗಳಲ್ಲಿರತಕ್ಕ ಮರಗಳಿಂದ ಶೇಂದಿಯನ್ನು ತಯಾರುಮಾಡಿಕೊಳ್ಳುವದಕ್ಕೆ ಸ್ವತಂತ್ರನಾಗಿರುತ್ತಾನೆ. ಲೈಸೆನ್ಸದಾರನು ಇನಸ್ಪೆಕ್ಟರವರಿಗೆ ದರಖಾಸ್ತು ಕೊಟ್ಟು ಅವಶ್ಯಕವಾಗಿರುವ ಬಗ್ಯೆ ಅವರಿಂದ ಅಪ್ಪಣೇಚೀಟಿ ಪಡದು ಇತರ ಶೇಂದಿ ದುಕಾನದಾರರಿಂದ ಶೇಂದಿಯನ್ನು ಕೊಂಡುಕೊಳ್ಳಬಹುದು. ಇದರ ಅವಶ್ಯಕವನ್ನು ತೋರಿಸಿದ್ದಲ್ಲಿ ಇನಸ್ಪೆಕ್ಟರವರು ಅಪ್ಪಣೇಚೀಟಿಯನ್ನು ಕೊಡುತ್ತಾರೆ. ಸರಿಯಾದ ಆಫೀಸರರಿಂದ ಸಂಖ್ಯೆ ಹಾಕಲ್ಪಟ್ಟ ಮತ್ತು ಲೈಸೆನ್ಸುಮೇರೆ ಉತ್ಪನ್ನಮಾಡಿರುವ ಮರಗಳ ಶೇಂದಿ ವಿನಹಾ ಮತ್ಯಾವವಿಧವಾದ ಶೇಂದಿಯನ್ನೂ ಅಂಗಡಿಯಲ್ಲಿ ಇಟ್ಟುಕೊಳ್ಳಕೂಡದು ಮಾರಲಿಕ್ಕೆ ಕೊಡುತ್ತೇನೆಂತ ಹೇಳಕೂಡದು ಅಥವಾ ಮಾರಕೂಡದು.

(2) ಸದರೀ ಗುತ್ತಾ ಸ್ವಾತಂತ್ರ್ಯದ ಹಕ್ಕು ಈಚಲು, ತಾಳೆ, ತೆಂಗು ಮತ್ತು ಬಗನಿ ವ ದಡಸಾಲ್ ಮರಗಳ ಶೇಂದಿಯನ್ನು ಮಾರುವುದಕ್ಕೆ ವ್ಯಾಪಿಸುತ್ತದೆ. ಆದರೆ ಈಚಲು ಮತ್ತು ಬಗನಿ ಶೇಂದಿ ಅಂಗಡಿಗಳಿರತಕ್ಕ ಪ್ರದೇಶಗಳಲ್ಲಿ ಈಚಲು ಶೇಂದಿ ಅಂಗಡಿ ಲೈಸೆನ್ಸದಾರನು ಬಗನಿ ಮರಗಳನ್ನು ಬಗನಿ ಶೇಂದಿ ಅಂಗಡಿ ಲೈಸೆನ್ಸದಾರನು ಈಚಲು ಮರಗಳನ್ನು ಕಟ್ಟಕೂಡದು. ಆದರೆ ಈ ಉಭಯ ಲೈಸೆನ್ಸದಾರರು ಮೇಲೆ ನಮೂದಿಸಿರುವ ಎಲ್ಲಾ ಇತರ ಶೇಂದಿ ಮರಗಳನ್ನು ಕಟ್ಟಬಹುದು.

(3) ಗುತ್ತಿಗೆ ಮೊಬಲಗನ್ನು ಸರ್ಕಾರದಿಂದ ಆಬ್ಕಾರಿ ವಿಧಾಯಕವಾಗಿ ಅಚ್ಚು ಹಾಕಲ್ಪಟ್ಟಿರುವ ಚಲನುಗಳಮೂಲಕ ಸ್ಥಳೀಯವಾದ ಸರ್ಕಾರದ ಖಜಾನೆಗಳಿಗೆ 1904ನೇ ಇಸವಿ ಜುಲೈ ಲಾಗಾಯಿತು ಸರಿಯಾದ ತಿಂಗಳಗಟ್ಲೆ ಖಿಸ್ತು ಪ್ರಕಾರ ಪಾವತಿ ಮಾಡುತ್ತಾ ಬರತಕ್ಕದ್ದು. ಮೊಬಲಗು ಎಕ್ಸೈಜ್ ಆಫೀಸರುಗಳಿಗೆ ಕೊಡಲ್ಪಡಕೂಡದು ಅಥವಾ ಸದರೀ ಎಕ್ಸೈಜ್ ಆಫೀಸರುಗಳು ಅದನ್ನು ತೆಗದುಕೊಳ್ಳಕೂಡದು. ಮಲ್ನಾಡು ಮತ್ತು ಅರ್ಧ ಮಲ್ನಾಡು ತಾಲ್ಲೂಕುಗಳಲ್ಲಿ ಡೆಪ್ಯುಟಿ ಕಮಿಷನರವರು ಲೈಸೆನ್ಸದಾರರಲ್ಲದ ಗ್ರಾಮದ ಪಟೇಲರಿಗೆ ಒಂದುಸಲಕ್ಕೆ 50 ರೂಪಾಯಿಗಳಿಗೆ ಮೀರದ ಮೊಬಲಗುಗಳನ್ನು ಯಾವಮನುಷ್ಯನಿಂದಲಾದರೂ ತೆಗದುಕೊಳ್ಳಬಹುದೆಂದು ಅಪ್ಪಣೆ ಕೊಡಬಹುದು. ಯಾವ ಅಂಗಡಿಗಾದರೂ ಸಾಲಿಯಾನಾ ಕೊಡತಕ್ಕ ಗುತ್ತಿಗೆ ಮೊಬಲಗು 12 ರೂಪಾಯಿಗಳಿಗೆ ಮೀರದಿದ್ದಲ್ಲಿ ಪೂರಾ ಮೊಬಲಗು 3 ತ್ರೈಮಾಸಿಕದ ಖಿಸ್ತುಗಳಿಗೆ ಹೆಚ್ಚಾಗದಂತೆ ಪಾವತಿ ಮಾಡಲ್ಪಡತಕ್ಕದ್ದು. ಪ್ರತಿಯೊಂದು ಖಿಸ್ತು ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಲೈಸೆನ್ಸದಾರನು ಲೋಕಲ್ ಸೆಸ್ಸಿಗಾಗಿ ಏನು ಜಾಸ್ತಿ ಮೊಬಲಗು ಕೊಡತಕ್ಕದ್ದಿಲ್ಲವು. ಪ್ರತಿ ತಿಂಗಳಿನ ಯಾ ತ್ರೈಮಾಸಿಕದ ಗುತ್ತಿಗೆ ಮೊಬಲಗು ಅದೇ ತಿಂಗಳ 20ನೇ ತಾರೀಖು ವ ಅದರ ಒಳಗೆ ಯಾ ತ್ರೈಮಾಸಿಕದ ಅಖೈರೊಳಗೆ ಪಾವತಿಯಾಗತಕ್ಕದ್ದು. ಹಾಗೆ ಪಾವತಿಯಾಗುವದಕ್ಕೆ ತಪ್ಪಿದರೆ ಅಮಲ್ದಾರರು ಡೆಪ್ಯುಟಿ ಕಮಿಷನರವರ ಮುಂಚಾಗ್ರತೆಯನ್ನು ಪಡೆದು ಬರಹಮೂಲಕ ರಿಕಾರ್ಡುಮಾಡಿ ಲೈಸೆನ್ಸನ್ನು ಮೊಖೂಫ್ ಯಾ ರದ್ದುಮಾಡಿ ತಪ್ಪಿತಸ್ಥನಿಂದ ಇಡಲ್ಪಟ್ಟಿರುವ ತೇವಣಿ ಮೊಬಲಗುಗಳನ್ನೆಲ್ಲಾ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಕ್ಕೆ ಹುಕುಂಮಾಡಿ (ಸಾಧ್ಯವಾದಮಟ್ಟಿಗೆ ಸದರೀ ತಿಂಗಳು ಯಾ ತ್ರೈಮಾಸಿಕ ಅಖೈರಾದ ಕೂಡಲೆ) ಅಂಗಡಿಯನ್ನು ಯಾ ಅಂಗಡಿಗಳ ಸಮುದಾಯವನ್ನು ತಪ್ಪಿತಸ್ಥನನ್ನು ನಷ್ಟಕ್ಕೆ ಗುರಿಮಾಡಿ ದುಸರಾ ಹರಾಜು ಯಾ ಅನ್ಯಥಾ ವಿಲೇವಾರಿ ಮಾಡಬಹುದು. ಇದು ನೂತನ ಖರೀದಾರನಿಗೆ ಲೈಸೆನ್ಸು ಕೊಟ್ಟ ಯಾ ಅನ್ಯಥಾ ವಿಲೇವಾರಿಯಾದ ತಾರೀಖಿನಿಂದ ಜಾರಿಗೆ ಬರತಕ್ಕದ್ದು. ಪರಂತು ಮೇಲ್ಕಂಡಂತೆ ದುಸರಾ ಹರಾಜ್ ಹಾಕುವುದಕ್ಕೆ ಬದಲಾಗಿ ಡೆಪ್ಯುಟಿ ಕಮಿಷನರವರು ತಮಗೆ ಯುಕ್ತ ತೋರುವಂತೆ ತಪ್ಪಿತಸ್ಥನು ಪಾವತಿ ಮಾಡಲು ತಪ್ಪಿದ್ದ ಗುತ್ತಾ ಮೊಬಲಗಿಗಿಂತ ಕಡಿಮೆಯಿಲ್ಲದೆ ಇರುವ ಗುತ್ತಿಗೆಗೆ ಸಮನಾಗತಕ್ಕ ಮೊಬಲಗುಗಳಿಗೆ ತಪ್ಪಿದ ಲೈಸೆನ್ಸದಾರನ ಕೈಕೆಳಗಿರುವ ವೆಂಡರು ಅಥವಾ ಸಬ್ ವೆಂಡರುಗಳಿಗೆ ಲೈಸೆನ್ಸನ್ನು ಕೊಡಲು ಅಮಲ್ದಾರರಿಗೆ ಹುಕುಂ ಮಾಡಬಹುದು. ಲೈಸೆನ್ಸನ್ನು ಮೊಖೂಫ್ ಮಾಡಲು ಅಧಿಕಾರವುಳ್ಳ ಆಫೀಸರರು ತಮಗೆ ಯುಕ್ತ ತೋರಿದಲ್ಲಿ ಹಕ್ಕಿನ ದುಸರೇ ಹರಾಜು ಯಾ ಅನ್ಯಥಾ ವಿಲೇವಾರಿ ಆಗುವದರೊಳಗೆ ಮಾರಾಟವನ್ನು ನಿಲ್ಲಿಸಬೇಕಾದ್ದಿಲ್ಲ.

ಟಿಪ್ಪಣಿ.—ಜಾತ್ರೆ ಅಂಗಡಿಯ ಲೈಸೆನ್ಸದಾರನು ಜಾತ್ರೆ ಪ್ರಾರಂಭವಾಗುವದರೊಳಗೇನೆ ಸದರೀ ಅಂಗಡಿಯ ಗುತ್ತಿಗೆ ಮೊಬಲಗನ್ನೆಲ್ಲಾ ಪಾವತಿ ಮಾಡಬೇಕು.

(4) ಲೈಸೆನ್ಸದಾರನಿಂದ ಇಡಲ್ಪಟ್ಟ ಶೇಂದಿಯ ಮೊಬಲಗು ಲೈಸೆನ್ಸಿನ ಷರತ್ತುಗಳಂತೆ ಕ್ರಮವಾಗಿ ನಡೆಯುವದಕ್ಕೆ ಇಟ್ಟಿರತಕ್ಕ ಜಾಮೀನಾಗಿ ಭಾವಿಸಲ್ಪಡುತ್ತದೆ. ಮತ್ತು ಅದು ದಂಡವಾಗಿ ತೆಗದುಕೊಳ್ಳಲ್ಪಡದೆ ಯಾ ಜಪ್ತಮಾಡಲ್ಪಡದೆ ಯಾ ಅನ್ಯಥಾ ವಿಲೇವಾರಿ ಮಾಡಲ್ಪಡದೇ ಇದ್ದಲ್ಲಿ ಲೈಸೆನ್ಸಿನ ಮಾಯಿದೆಯು ಆಖೈರ್ ಮಾಹೆ ಯಾ ಮಾಹೆಗಳ ಕಿಸ್ತುಗಳಿಗೋಸ್ಕರ ವಸೂಲ್ ಹಾಕಲ್ಪಡಬೇಕು. ಲೈಸೆನ್ಸದಾರನಿಂದ ಬರಬೇಕಾದ ಬಾಕಿ ಹಣಗಳು ಮತ್ತು ನಷ್ಟದ ಮೊಬಲಗುಗಳು ಸಾಲು 1ಕ್ಕೆ ಶೇಕಡ 6 ರೂಪಾಯಿನಂತೆ ಬಡ್ಡಿ ಸಹಿತವಾಗಿ ಅವನಿಂದ ಯಾ ಆತನ ಜಾಮೀನುದಾರನಿಂದ ಜಮೀನು ಕಂದಾಯವನ್ನು ವಸೂಲ್ಮಾಡುವದಕ್ಕೆ ಜಾರಿಯಲ್ಲಿರುವ ನಿಬಂಧನೆಗಳನ್ನನುಸರಿಸಿ ವಸೂಲ್ಮಾಡಲ್ಪಡತಕ್ಕದ್ದು. ಬಾಕಿ ಬರಬೇಕಾದ ದರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ, ಮತ್ತು ನಷ್ಟದ ಮೊಬಲಗಿಗೆ ಪುನಃ ಹರಾಜಾದ ಯಾ ಅನ್ಯಥಾ ವಿಲೇವಾರಿಯಾದ ತಾರೀಖಿನಿಂದಲೂ ಬಡ್ಡಿಯು ಲೆಖ್ಖಾಚಾರ ಮಾಡಲ್ಪಡತಕ್ಕದ್ದು. ಯಾವ ರಿಮಿಷನ್ನೆ ಆಗಲಿ ಗುತ್ತಿಗೆ ಮೊಬಲಗನ್ನು ಕಡಿಮೆಮಾಡುವದೇ ಆಗಲಿ ಅಥವಾ ಯಾವ ಪ್ರತಿಫಲವೇ ಆಗಲಿ ಲೈಸೆನ್ಸದಾರನಿಂದ ಯಾವವಿಧದಲ್ಲೂ ಬಯಸತಕ್ಕದ್ದಲ್ಲ, ಮತ್ತು ಪಟ್ಟೆಯಿಂದ ವಜಾಯಿಸಿದ ಯಾ ಸರ್ಕಾರದ ಉಪಯೋಗಕ್ಕಾಗಿ ತೆಗದುಕೊಂಡ ಯಾವ ಮರಗಳ ಪ್ರತಿಫಲಕ್ಕೂ ಆತನಿಗೆ ಹಕ್ಕು ಇರುವದಿಲ್ಲ.

(5) ಡೆಪ್ಯುಟಿ ಕಮ್ಮಿಷನರವರು ದುಸರಾ ಹರಾಜನ್ನು ಮಂಜೂರ್ಮಾಡದ ಪಕ್ಷದಲ್ಲಿ ಸದರೀ ಗುತ್ತಿಗೆಯಲ್ಲಿ ಬಾಕೀ ಕಾಲಕ್ಕೆ ಯುಕ್ತ ತೋರುವ ಬೇರೆ ಏರ್ಪಾಡನ್ನಾದರು ಮಾಡಬಹುದು. ಹಾಗೆ ಮಾಡಿದ ಸಂದರ್ಭದಲ್ಲಿ ಅವರು ತಪ್ಪಿಹೋದ ಲೈಸೆನ್ಸದಾರನಿಗೆ ತಮ್ಮಿಂದ ಮಾಡಲ್ಪಟ್ಟಿರುವ ಏರ್ಪಾಟುಗಳ ವಿಧಾನಗಳನ್ನು ತಿಳಿಸಿ ಒಂದು ನೋಟೀಸನ್ನು ಕೊಡಬೇಕು.

(6) ಶೇಂದಿಯು ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ನಮೂದಿಸಿರುವ ಚಿಲ್ಲರೆ ದರಗಳಿಗಿಂತ ಕಮ್ಮಿಯಾಗಿ ಜನರಿಗೆ ಮಾರಲ್ಪಡಕೂಡದು.

(7) ಮರಗಳಿಂದ ತೆಗಿಯಲ್ಪಟ್ಟ ಸ್ಥಿತಿಯಲ್ಲಿ ಶೇಂದಿಯು ಬೆರಿಕೆಯಿಲ್ಲದೆ ಶುದ್ಧವಾಗಿ ಮಾರಲ್ಪಡತಕ್ಕದ್ದು. ಮತ್ತು ಅಂಗಡಿಗಳಲ್ಲಿ ಅಥವಾ ಡಿಪೋಗಳಿದ್ದರೆ ಅವುಗಳಲ್ಲಿ ಯಾವ ರೀತಿಯಿಂದಲೂ ಇತರ ಪದಾರ್ಥಗಳಿಂದ ಬೆರಿಸಲ್ಪಡಲಾಗದು. ಯಾ ನೀರಿನಿಂದ ಮಿಶ್ರ ಮಾಡಲಾಗದು. ಅದರ ಮತ್ತನ್ನುಂಟುಮಾಡುವ ಶಕ್ತಿಯನ್ನು ವೃದ್ಧಿಪಡಿಸುವದಕ್ಕೆ ಆಗಲಿ ಇನ್ಯಾವ ಕಾರಣಕ್ಕಾಗಲಿ ದೇಹಕ್ಕೆ ವಿರುದ್ಧವಾದ ಯಾವ ವಸ್ತುಗಳನ್ನು ಅದರಲ್ಲಿ ಬೆರಸಕೂಡದು. ಅಂಗಡಿಗಳನ್ನೂ ಕೋಠಿಗಳನ್ನೂ ತನಿಖಿ ಮಾಡುವದಕ್ಕೆ ಅಧಿಕಾರವುಳ್ಳ ಆಫೀಸರುಗಳು ಕುಡಿಯುವದಕ್ಕೂ ಉಪಯೋಗಿಸುವದಕ್ಕೂ ನಾಲಾಯಖಾಗಿರುವ ಶೇಂದಿಯನ್ನು ಖರ್ಚು ಮಾಡದೇ ಇಡುವದಕ್ಕೆ ಅಪ್ಪಣೆ ಮಾಡಲು ಅಧಿಕಾರವುಳ್ಳವರಾಗಿರುತ್ತಾರೆ. ಮತ್ತು ಎಲ್ಲಾ ಡೆಪ್ಯುಟಿ ಕಮ್ಮಿಷನರುಗಳು ಮತ್ತು ಎಕ್ಸೈಜ್ ಕಮ್ಮಿಷನರವರು, ಡೆಪ್ಯುಟಿ ಎಕ್ಸೈಜ್ ಕಮ್ಮಿಷನರವರು ಮತ್ತು ಎಕ್ಸೈಜ್ ಅಸಿಸ್ಟೆಂಟ್ ಕಮ್ಮಿಷನರುಗಳು ಅಂಥಾ ಶೇಂದಿಯನ್ನು ನಾಶಪಡಿಸಲು ಅಧಿಕಾರವುಳ್ಳವರಾಗಿರುತ್ತಾರೆ.

(8) ಅಂಗಡಿಗಳ ಸಮುದಾಯದ ಲೈಸೆನ್ಸದಾರನು ತನ್ನ ಅಂಗಡಿಗಳಿಗೆ ಸರಬರಾಯಿ ಮಾಡಲು ಶೇಂದಿ ಸರಕನ್ನು ಇಡುವದಕ್ಕಾಗಿ ಒಂದು ಕೋಠಿಯನ್ನು ಇಟ್ಟುಕೊಳ್ಳಬೇಕೆಂದು ಅಪೇಕ್ಷಿಸಿದರೆ ವಿಧಿಸಲ್ಪಟ್ಟಿರುವ ನಮೂನೆಯಲ್ಲಿ ಲೈಸೆನ್ಸನ್ನು ಪಡೆಯಬೇಕು. ಶೇಂದಿಯೊಡನೆ ಕೂಡಲ್ಪಟ್ಟ ಪ್ಯಾಸುಗಳು ಅದಕ್ಕಾಗಿ ಅಧಿಕಾರ ಹೊಂದಿದ ಆಫೀಸರುಗಳ ಪರೀಕ್ಷೆಗೆ ವ ತನಿಖೆ ಬಗ್ಯೆ ಗುರಿಯಾಗಿರತಕ್ಕದ್ದು.

(9) ವಿಧಾಯುಕವಾದ ನಮೂನೆಯಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಕ್ರಮವಾಗಿ ಲೈಸೆನ್ಸ ಪಡೆದ ದುಕಾನುಗಳಲ್ಲಿ ವಿನಹಾ ಮತ್ತೆಲ್ಲಿಯೂ ಶೇಂದಿಯನ್ನು ಬಿಕರೀ ಮಾಡಲಾಗದು. ಮತ್ತು ಎಕ್ಸೈಜ್ ಕಮ್ಮಿಷನರವರ ಮುಂಚಿತವಾದ ಮಂಜೂರಾತಿಯಿಲ್ಲದೆ ಹೊಸದಾಗಿ ಅಂಗಡಿಗಳನ್ನಿಡಕೂಡದು. ಶೇಂದಿಯನ್ನು ಗಿಡದಕೆಳಗೆ ಮಾರೋಣವೂ ಅಥವಾ ಬೈಲಿನಲ್ಲಿ ಮಾರೋಣವೂ ಅಥವಾ ಕಾನೂನು ಯಾ ನಿಬಂಧನೆಗಳ ಪ್ರಕಾರ ಅಪ್ಪಣೆ ಕೊಡಲ್ಪಡದೇ ಯಿರುವ ಮತ್ಯಾವ ಇತರ ರೀತಿಯಲ್ಲಾಗಲಿ ವಿನಿಯೋಗಪಡಿಸೋಣವೂ ಖಂಡಿತವಾಗಿ ಅಡ್ಡಿ ಮಾಡಲ್ಪಟ್ಟಿರುತ್ತದೆ. ಪರಂತು ಬಗನೀಮರಗಳಿರತಕ್ಕ ಪ್ರದೇಶಗಳಲ್ಲಿ ಬಗನೀ ಶೇಂದಿಯ ಮಾರುವ ಹಕ್ಕನ್ನು ಪಡೆದಿರುವ ಲೈಸೆನ್ಸದಾರನು ಗೃಹಕೃತ್ಯದ ಉಪಯೋಗಕ್ಕೋಸ್ಕರವೂ, ಬಿಕರೀಬಗ್ಯೆ ಸಹ ತಾನು ಹರಾಜಿನಲ್ಲಿ ಪಡೆದಿರುವ ಗ್ರಾಮದ ಸರಹದ್ದಿನೊಳಗೆ ಬಗನಿ ಮರಗಳನ್ನು ಉತಾರ್ಮಾಡಲು ಅಪ್ಪಣೆ ಕೊಡಬಹುದು. ಕೋಠಿ ಯಾ ಅಂಗಡಿ ಯಾ ಅಂಗಡಿಗಳ ಸಮುದಾಯದ ಲೈಸೆನ್ಸದಾರನು ಪ್ರತಿದಿನದಲ್ಲಿಯೂ ತನ್ನ ಅಂಗಡಿಗೆ ಜಮಾ ಬಂದ ಮತ್ತು ಖರ್ಚಾದ ಶೇಂದಿಯ ಕರಾರ್ವಾಕಾ ಲೆಖ್ಖವನ್ನು ವಿಧಾಯುಕವಾಗಿರುವ ನಮೂನೆಯಲ್ಲಿ ಶಾಯಿಯಿಂದ ಬರದು ಇಡಬೇಕು. ಈ ಲೆಖ್ಖಗಳು ಮತ್ತು ಪರ್ಮಿಟ್ಟುಗಳು ಅಚ್ಚಾಗಿರುವ ಪುಸ್ತಕಗಳಲ್ಲಿರಬೇಕು. ಇವುಗಳ ಅಸಲು ಖರೀದಿಯನ್ನು ಕೊಟ್ಟಲ್ಲಿ ಸ್ಥಳದ ಎಕ್ಸೈಜ್ ಆಫೀಸರುಗಳಿಂದ ಸದರೀ ಪುಸ್ತಕಗಳನ್ನು ಪಡೆಯಬಹುದು. ಜಮಾ ಬಂದ ಶೇಂದಿಗೆ ಪರ್ಮಿಟ್ಟುಗಳು ಮತ್ತು ಖರ್ಚಾದ್ದರ ಪರ್ಮಿಟ್ಟುಗಳ ಕೌಂಟರ್ ಫಾಯಿಲ್‌ಗಳು ಹುಷಾರಿನಿಂದ ವಿಲೇ ಮಾಡಿರತಕ್ಕದ್ದು. ಮುಂದಿನ ಖರ್ಚಿಗಾಗಿ ಖಾಲೀ ಪರ್ಮಿಟ್ಟುಗಳನ್ನು ಸೈನ್ ಮಾಡುವದನ್ನು ಅಡ್ಡಿ ಪಡಿಸಿದೆ. ಇಜಾರೆ ಮುಗಿದ ನಂತರ ಸದರೀ ಲೆಖ್ಖಗಳು ಪರ್ಮಿಟ್ಟುಗಳ ಕೌಂಟರ್ ಫಾಯಿಲ್‌ಗಳು ಸ್ಥಳದ ಎಕ್ಸೈಜ್ ಆಫೀಸರವರಲ್ಲಿ ಕೊಡಲ್ಪಡತಕ್ಕದ್ದು. ಡೆಪ್ಯುಟಿ ಕಮ್ಮಿಷನರು ಅಥವಾ ಅವರಿಂದ ನೌಕರರಾದ ಇತರ ಆಫೀಸರುಗಳು ಅಸಿಸ್ಟೆಂಟ್ ಇನ್ಸ್ಪೆಕ್ಟರುಗಳಿಗಿಂತಲೂ ಹುದ್ದೆಯಲ್ಲಿ ಕಮ್ಮಿಯಾಗಿರದ ಎಕ್ಸೈಜ್ ಆಫೀಸರುಗಳು ಕೇಳಿದಲ್ಲಿ ಸದರೀ ಲೆಖ್ಖಗಳನ್ನು ಹಾಜರ್ಪಡಿಸಬೇಕು. ಡೆಪ್ಯುಟಿ ಕಮ್ಮಿಷನರು ಅಥವಾ ಅಸಿಸ್ಟೆಂಟ್ ಇನ್ಸ್ಪೆಕ್ಟರಿಗಿಂತಲೂ ಹುದ್ದೆಯಲ್ಲಿ ಕಮ್ಮಿಯಾಗಿರದ ಎಕ್ಸೈಜ್ ನೌಕರರು ಆಗಿಂದಾಗ್ಯೆ ಅಪೇಕ್ಷಿಸುವಂಥಾ ಲೆಖ್ಖಗಳನ್ನೂ ವ ವರ್ತಮಾನವನ್ನು ಲೈಸೆನ್ಸದಾರನು ತಡಮಾಡದೆ ಕೊಡತಕ್ಕದ್ದು.

(10) ಕ್ರಮವಾಗಿ ಲೈಸೆನ್ಸು ಪಡೆದ ಅಂಗಡಿಗಳು ಸಮೀಪದಲ್ಲಿ ಇಲ್ಲದೇ ಇರುವ ಪ್ರದೇಶಗಳಲ್ಲಿ ನಡೆಯುವ ಹಬ್ಬ, ಜಾತ್ರೆ ಮುಂತಾದ ಕಾಲಗಳಲ್ಲಿ ಶೇಂದಿಯನ್ನು ಬಿಕರೀ ಮಾಡಲು ತತ್ಕಾಲಕ್ಕೆ ಬೇಕಾದ ಲೈಸೆನ್ಸುಗಳನ್ನು ಕೊಡತಕ್ಕ ಅಧಿಕಾರವನ್ನು ಡೆಪ್ಯುಟಿ ಕಮ್ಮಿಷನರವರಿಗೆ ಉಳಿಸಿಕೊಂಡಿರುತ್ತದೆ. ಅಂಥಾ ಲೈಸೆನ್ಸುಗಳನ್ನು ಸಾಧಾರಣವಾಗಿ ಸದರೀ ಪ್ರದೇಶದಲ್ಲಿ ಮಾಮೂಲಾಗಿ ಸರಬರಾಯಿ ಮಾಡುವ ದುಕಾಣದಾರರಿಗೇ ಕೊಡತಕ್ಕದ್ದು. ಸದರೀ ಲೈಸೆನ್ಸುಗಳ ಅವಧಿಯು 15 ದಿವಸಗಳಿಗಿಂತಲೂ ಹೆಚ್ಚಾಗಿರಕೂಡದು. ಮತ್ತು ಅದಕ್ಕಾಗಿ ಪಾವತಿಯಾಗತಕ್ಕ ಮೊಬಲಗು ಡೆಪ್ಯುಟಿ ಕಮ್ಮಿಷನರವರಿಗೆ ಯುಕ್ತವಾಗಿ ತೋರಿದಂತೆ ಗೊತ್ತು ಮಾಡಲ್ಪಡಬಹುದು, ಹರಾಜು ಮೂಲಕವಾಗಿಯೂ ವಿಲೇವಾರಿ ಮಾಡಲು ಡೆಪ್ಯುಟಿ ಕಮ್ಮಿಷನರವರು ತೀರ್ಮಾನಿಸಬಹುದು.

(11) ಡೆಪ್ಯುಟಿ ಕಮ್ಮಿಷನರವರು ತಮಗೆ ಯುಕ್ತ ತೋಚಿದಾಗ ಯಾವ ದುಕಾಣಗಳನ್ನಾಗಲಿ ಮುಚ್ಚಲು; ಅಥವಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಿಧಿಸಲ್ಪಟ್ಟಿರುವ ಸ್ಥಳದಿಂದ 200 ಗಜಗಳ ವಳಗೆ ವರ್ಗಾಯಿಸಲು ಅಪ್ಪಣೇ ಕೊಡಬಹುದು. ಮಂಜೂರ್ಮಾಡಲ್ಪಟ್ಟ ಎಲ್ಲಾ ಅಂಗಡಿಗಳಲ್ಲಿಯೂ ಎಕ್ಸೈಜ್ ಡಿವಿಜನಲ್ ಆಫಿಸರವರು ಗೊತ್ತು ಮಾಡುವ ಮೊತ್ತದಷ್ಟು ಶೇಂದಿಯನ್ನು ದಾಸ್ತಾನಾಗಿ ಇಟ್ಟಿರಬೇಕು.

(12) ಅಂಗಡಿಯ ಯಾ ಅಂಗಡಿಗಳ ಸಮುದಾಯದ ಲೈಸೆನ್ಸದಾರನು ತನ್ನ ಲೈಸೆನ್ಸಿನ ಮಾಯಿದೆವಳಗೆ ತನ್ನ ಶೇಂದಿ ಅಂಗಡಿ ಇರತಕ್ಕ ಸುತ್ತಲೂ 5 ಮೈಲಿ ಫಾಸಲೆಗಳೊಳಗಾಗಿ ಸಾರಾಯಿ ಮಾರತಕ್ಕ ಬಿಟ್ಟು ಸ್ವಾತಂತ್ರ್ಯದ ಹಕ್ಕಿನ ವಿಷಯದಲ್ಲಿ ಯಾವ ವಿಧವಾದ ಸಂಬಂಧವನ್ನು ಇಟ್ಟುಕೊಳ್ಳಕೂಡದು; ಅಥವಾ ಅದೇ ಸರಹದ್ದಿನೊಳಗೆ ಸಾರಾಯಿ ಬಿಕರೀಮಾಡತಕ್ಕ ಬಿಟ್ಟು ಸ್ವಾತಂತ್ರ್ಯದ ಹಕ್ಕನ್ನು ವಹಿಸಿರತಕ್ಕ ಯಾವ ಮನುಷ್ಯನನ್ನಾಗಲಿ, ಶೇಂದಿ ಮಾರುವ ತನ್ನ ಬಿಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಪಾಲುದಾರನನ್ನಾಗಿ ಆಗಲಿ, ಯಾ ಸಂಬಂಧವುಳ್ಳವನನ್ನಾಗಲೀ ಇಟ್ಟುಕೊಳ್ಳಕೂಡದು. ಅಥವಾ ತನ್ನ ಲೈಸೆನ್ಸಿನ ಮಾಯಿದೆ ಅಂದರ್‌ವಾರ್ ಎಕ್ಸೈಜ್ ಕಮಿಷನರವರ ಲಿಖಿತಮೂಲಕವಾದ ಹುಕುಂ ಇಲ್ಲದೆ ಮೈಸೂರು ರಾಜ್ಯದ ಹೊರಗೆ ಯಾ ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ನಲ್ಲಿ ಇರುವ ಯಾವದೊಂದು ಶೇಂದಿ ಅಂಗಡಿಯಲ್ಲಿಯೂ ಅಥವಾ ಬಿಕರೀ ಗುತ್ತಾ ಫಿರ್ಕಾದಲ್ಲಿಯೂ ಪ್ರತ್ಯಕ್ಷವಾದ ಯಾ ಪರೋಕ್ಷವಾದ ಸಂಬಂಧವನ್ನು ಇಟ್ಟುಕೊಂಡಿರಕೂಡದು.

(13) ಲೈಸೆನ್ಸದಾರನು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನುಗಳಿಗೂ ಅವುಗಳನ್ನನುಸರಿಸಿದ ನಿಬಂಧನೆಗಳಿಗೂ ಲೈಸೆನ್ಸಿನ ಷರತ್ತುಗಳಿಗೂ ಅನುಸಾರವಾಗಿ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು. ಲೈಸೆನ್ಸದಾರನು ಎಕ್ಸೈಜ್ ಕಮ್ಮಿಷನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೇ ಸಾಧನಗಳನ್ನು ಲೈಸೆನ್ಸ ಪಡೆದ ಯಾವ ಆವರಣದಲ್ಲಾದರೂ ಹೊಂದಿರಬಹುದು ಯಾ ಉಪಯೋಗಿಸಬಹುದು. ಲೈಸೆನ್ಸ ಪಡೆದ ಅಂಗಡಿಯನ್ನು ತನಿಖೆಮಾಡಲು ಅಧಿಕಾರವುಳ್ಳ ಆಫಿಸರುಗಳು ಆವರಣಗಳನ್ನು ಪ್ರವೇಶಮಾಡಿ ನೋಡುವದಕ್ಕೂ ಉಪಯೋಗಿಸತಕ್ಕ ಅಳತೇ ಸಾಧನಗಳನ್ನು ಮತ್ತು ಮಾರಲ್ಪಡುವ ಶೇಂದಿಯನ್ನು ಪರೀಕ್ಷೆಮಾಡುವದಕ್ಕೂ ಅಂಗಡಿಯಲ್ಲಿನ ಲೆಖ್ಖಗಳನ್ನು ತರಿಸಿ ತನಿಖೆಮಾಡುವದಕ್ಕೂ ಅಧಿಕಾರವುಳ್ಳವರಾಗಿರುತ್ತಾರೆ.

(14) ಎಕ್ಸೈಜ್ ಕಮಿಷನರವರ ಅಪ್ಪಣೆ ಶಿವಾಯಿ ಲೈಸೆನ್ಸ ಮಾರಿಕೆಯಿಂದಲಾಗಲೀ ದಾನ ಮೂಲಕವಾಗಿ ಆಗಲೀ ಅಥವಾ ಇತರ ವಿಧವಾಗಿ ಆಗಲಿ ವರ್ಗವಾಗತಕ್ಕದ್ದಲ್ಲ. ಯಾ ವಳಗೇಣಿ ಆಗತಕ್ಕದ್ದಲ್ಲ. ಅಂಗಡಿಗಳ ರಾಜೀನಾಮೆಯು ಪೂರ್ಣವಾಗಿಯೇ ಆಗಲಿ ಯಾ ಭಾಗವಾಗಿಯೇ ಆಗಲಿ ಡೆಪ್ಯುಟಿ ಕಮ್ಮಿಷನರವರಿಂದ ವಿಚಾರವಿಲ್ಲದೆ ತಿರಸ್ಕರಿಸಲ್ಪಡುವದು.

8. (1) ಈ ಕೆಳಗೆ ನಮೂದಿಸುವ ಜನರ ದರಖಾಸ್ತಿನಮೇಲೆ ನಿಬಂಧಿಸಿರುವ ನಮೂನೆಯಲ್ಲಿ ಮರವನ್ನು ಕಟ್ಟುವ ಬಗ್ಗೆ ಲೈಸೆನ್ಸಗಳು ಸಾದರ್ಮಾಡಲ್ಪಡತಕ್ಕದ್ದು.

(a) ಲೈಸೆನ್ಸ ಕೊಡಲ್ಪಟ್ಟಿರುವ ಶೇಂದಿ ಅಂಗಡಿಕಾರರ, ಅಥವಾ ಅವರಿಂದ ಅಧಿಕಾರಹೊಂದಿದ ಏಜಂಟರ.

(b) ಸ್ 1898ನೇ ಇಸವಿ ಜೂನ್ 20ನೇ ಮಕ್ರೂಂ 11897—906—Ex. 485ನೇ ನಂಬರುಳ್ಳ ಗವರ್ನ್ಮೆಂಟ್ ಇಸ್ತಿಹಾರ್ ನಾಮೆಯನ್ನನುಸರಿಸಿ ಮನೆ ಕುಟುಂಬದವರ ನಿಜವಾದ ಸ್ವಂತ ಉಪಯೋಗಕ್ಕೋಸ್ಕರ ಬೇಕಾಗಿರುವ ಶೇಂದಿಯನ್ನು ವಿಧಾಯುಕವಾದ ಮರ ತೆರಿಗೆಯನ್ನು ಕೊಡಬೇಕಾದ ನಿರ್ಬಂಧವಿಲ್ಲದೆ ಎಕ್ಸೈಜ್ ಕಮ್ಮಿಷನರವರಿಗೆ ಅವಶ್ಯಕವೆಂದು ಕಾಣಬರುವ ಮರಗಳಿಂದ ತಯಾರುಮಾಡಲಿಕ್ಕೆ ಮಲನಾಡಿನಲ್ಲಿರುವ ಕಾಫಿತೋಟಗಳಲ್ಲಿಯೂ, ಕಾಫಿ ಹಿತ್ತಲುಗಳಲ್ಲಿಯೂ ಮತ್ತು ಬಾಗಗಳಲ್ಲಿ ಯೂ ಇರುವ ಮರಗಳ ಮಾಲೀಕರು;—

ಲೈಸೆನ್ಸುಗಳನ್ನು ದರಖಾಸ್ತುದಾರನ ಹೆಸರಿಗಾಗಲಿ ಯಾ ಆತನಿಂದ ನೇಮಿಸಲ್ಪಡುವ ಇತರ ಜನರ ಹೆಸರಿಗಾಗಲೀ ಕೊಡಬಹುದು.

(2) ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೆ ದರಖಾಸ್ತುಗಳನ್ನ ಸಂಬಂಧಪಟ್ಟ ಎಕ್ಸೈಜ್ ಇನ್ಸ್‌ಪೆಕ್ಟರವರಿಗೆ ನಿಬಂಧಿಸಿರುವ ನಮೂನೆಯಲ್ಲಿ ಸ್ಥಳದ ಖಜಾನೆಯ ಮೂಲಕ ಕೊಡಬೇಕು. ಸದರೀ ನಮೂನೆಗಳನ್ನು ಅವರಿಂದ ಯಾ ಅವರ ಕೈಕೆಳಗಿರುವ ಅಸಿಸ್ಟೆಂಟ್ ಇನ್ಸ್‌ಪೆಕ್ಟರುಗಳಿಂದ ಪಡೆಯಬಹುದು.

(3) ಸರ್ಕಾರಿ ಹಿಡುವಳಿಗಳಲ್ಲಿಯೂ ಯಾ ಇನಾಂ ವ ಕಾಯಂಗುತ್ತಾ ಜಮೀನುಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಸದರೀ ಮರಗಳ ಮಾಲೀಕರ ಅನುಮತಿಯನ್ನು ಪಡೆದಿರುವದಕ್ಕೆ ಸಾಧಕವಾಗಿ ಸದರೀ ಮಾಲೀಕರ ರುಜುಗಳನ್ನು ಮಾಡಿಸಬೇಕು. ಸ್ಟೇಟ್‌ಫಾರೆಸ್ಟುಗಳಲ್ಲಿಯೂ ಯಾ ಪ್ಲಾಂಟೇಷನುಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಫಾರೆಸ್ಟು ರೇಂಜ್ ಆಫಿಸರ ಅನುಮತಿಯನ್ನು ಪಡೆದಿರುವದಕ್ಕೆ ಸಾಧಕವಾಗಿ ಅವರ ರುಜುಗಳನ್ನು ಮಾಡಿಸಬೇಕು.

(4) ಉತಾರು ಲೈಸೆನ್ಸುಗಳಿಗೆ ದರಖಾಸ್ತು ಮಾಡುವ ಜನರು ಶೇಂದಿ ಉತಾರಿಗೋಸ್ಕರ ಸದರೀ ಲೈಸೆನ್ಸುಗಳಲ್ಲಿ ನಮೂದಾಗಿರುವ ಮರಗಳ ಬಾಬ್ತು ಮರತೆರಿಗೆ ಪಾವತಿ ಆಗಬೇಕಾಗಿರುವ ಎಲ್ಲಾ ಹಣವನ್ನು, ಸರ್ಕಾರೀ ಬಂಜರಿನಲ್ಲಿರತಕ್ಕ ಮರಗಳ ಮರದ ಮಾಲ್ಕಿಯನ್ನು ಅವುಗಳ ಮೇಲಿನ ಸೆಸ್ ಮೊಬಲಗನ್ನೂ ಸರ್ಕಾರಕ್ಕೆ ಕೊಡಲಿಕ್ಕೆ ಜವಾಬ್ದಾರರಾಗಿರತಕ್ಕದ್ದು.

(5) ಅಂಥಾ ದರಖಾಸ್ತು ದಾಖಲಾದ ಕೂಡಲೇ ಇನ್ಸ್‌ಪೆಕ್ಟರವರು ಸಬ್ ಇನ್ಸ್‌ಪೆಕ್ಟರ ಹುದ್ದೆಗೆ ಮೇಲ್ಪಟ್ಟ ಒಬ್ಬ ಉದ್ಯೋಗಸ್ಥರಿಂದ ಮರಗಳಿಗೆ ಸಂಖ್ಯೆ ಹಾಕಿಸುವದಕ್ಕೂ ಮತ್ತು ಕಾಲಕ್ಕೆ ಸರಿಯಾಗಿ ಲೈಸೆನ್ಸನ್ನು ಕೊಡುವದಕ್ಕೂ ತರವೂದ್ ಮಾಡತಕ್ಕದ್ದು. ಈಚಲು ಮರಗಳ ದರಖಾಸ್ತುದಾರರು ಮರಗಳಮೇಲೆ ಅವಶ್ಯಕವಾಗಿರುವ ಜಾಗವನ್ನು ತಯಾರ್ಮಾಡಿ ನಂಬರು ಹಾಕತಕ್ಕ ಆಫಿಸರರು ಕೇಳಿದಾಗ ದರಖಾಸ್ತು ಮಾಡಲ್ಪಟ್ಟ ಮರಗಳನ್ನು ತೋರಿಸಬೇಕು. ಯುಕ್ತವಾದಷ್ಟು ಮುದ್ದತ್ತನಿಸಿ ನೋಟೀಸ್ ಕೊಟ್ಟ ತರುವಾಯ ಹಾಗೆಮಾಡಲು ಅವರು ತಪ್ಪಿದರೆ ಅವರಿಂದ ಪಾವತಿ ಮಾಡಲ್ಪಟ್ಟ ಮರ ತೆರಿಗೆಯೂ ಮತ್ತು ಮರದ ಮಾಲ್ಕಿಯೂ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಯುಕ್ತ ತೋರುವಂತ ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡತಕ್ಕದ್ದು.

(6) ಡೆಪ್ಯುಟಿ ಕಮಿಷನರುಗಳು ಆಗಾಗ್ಯೆ ಎಕ್ಸೈಜ್ ಕಮಿಷನರವರ ಹುಕುಮಿಗೆ ಒಳಪಟ್ಟು ಕನಿಷ್ಟಪಕ್ಷ ಎಷ್ಟು ಮರಗಳಿಗೆ ಲೈಸೆನ್ಸ ಕೊಡಬಹುದೋ, ಮತ್ತು ಒಂದೊಂದು ದರಖಾಸ್ತಿನಲ್ಲಿ ಕನಿಷ್ಟಪಕ್ಷ ಎಷ್ಟು ಮರಗಳನ್ನು ದಾಖಲ್ಮಾಡಬಹುದೋ ಆ ಅಂಶಗಳನ್ನು ಆಗಿಂದಾಗ್ಯೆ ಗೊತ್ತುಮಾಡತಕ್ಕದ್ದು. ಶಿವಾಯಿ ಅವರು ಒಂದೊಂದು ದರಖಾಸ್ತಿನಲ್ಲಿ ಒಂದೇ ಗ್ರಾಮದ ಮರಗಳನ್ನು ದಾಖಲ್ಮಾಡಬೇಕೆಂದು ಹುಕುಂ ಮಾಡಬಹುದು.

(7) ತಕ್ಕ ಉದ್ಯೋಗಸ್ಥರು ಮರಗಳಿಗೆ ಸಂಖೆ ಹಾಕುವ ಪರಿಯಂತರ ಯಾವ ಮರವನ್ನೂ ಕಟ್ಟಕೂಡದು, ಯಾವ ಮರದಿಂದಲೂ ಶೇಂದಿಯನ್ನು ಉತಾರು ಮಾಡಕೂಡದು, ಯಾವ ಮರಕ್ಕೂ ಗಡಿಗೆಯನ್ನು ಕಟ್ಟಕೂಡದು. ಪರಂತು ನಿಬಂಧಿಸಿರುವ ನಮೂನೆಯಲ್ಲಿ ದರಖಾಸ್ತನ್ನು ಸಂಬಂಧಪಟ್ಟ ಖಜಾನೆಗೆ ಕೊಟ್ಟ ಕೂಡ್ಲೆ ಶೇಂದಿ ಉತಾರಿಗೋಸ್ಕರ ರೇವು ಮಾಡಲಿಕ್ಕೆ ಗಾಯಗಳನ್ನು ತೆಗದುಹಾಕಲಿಕ್ಕೂ, ಹೊಂಬಾಳೆಗಳನ್ನು ಯಾ ರೇವುಗಳನ್ನು ತಯಾರ್ಮಾಡಲಿಕ್ಕೂ ಉಪಕ್ರಮಿಸಬಹುದು.

(8) ಶೇಂದಿ ಉತ್ಪತ್ತಿ ಆಗತಕ್ಕ ಎಲ್ಲಾ ಮರಗಳಿಗೂ ಕೊಡುವ ಉತಾರ್ ಲೈಸೆನ್ಸುಗಳು ವರುಷಗಟ್ಲೆಯಾಗಿರತಕ್ಕದ್ದು. ಲೈಸೆನ್ಸದಾರನ ಅನುಕೂಲಕ್ಕಾಗಿ ಯಾವ ಕಾಲಕ್ಕೆ ಸಂಬಂಧಪಡುತ್ತವೋ ಆ ಕಾಲಕ್ಕೆ 15 ದಿವಸಗಳು ಮುಂಚಿತವಾಗಿ ಉತಾರ್ ಲೈಸೆನ್ಸ ಬಗ್ಯೆ ದರಖಾಸ್ತುಗಳು ಅಂಗೀಕರಿಸಲ್ಪಡುವವು, ಮರಗಳಿಗೆ ಸಂಖೆ ಹಾಕಲ್ಪಟ್ಟು ಲೈಸೆನ್ಸುಗಳು ಕೊಡಲ್ಪಡುವವು; ಮತ್ತು ಸದರೀ ಕಾಲಕ್ಕೆ 8 ದಿವಸಗಳಿಗೆ ಮುಂಚಿತವಾಗಿ ಸಂಖೆ ಹಾಕಲ್ಪಟ್ಟಿರುವ ಮೇಲ್ಕಂಡ ಮರಗಳಿಗೆ ಗಡಿಗೆಗಳನ್ನು ಕಟ್ಟಬಹುದು; ಆದರೆ ಶೇಂದಿ ಉತಾರು ಮುಂತಾದ್ದು ಸದರೀ ಕಾಲದ ಪ್ರಾರಂಭದ ಮೊದಲು ಜಾರಿಯಲ್ಲಿ ಬರತಕ್ಕದ್ದು. ಪರಂತು ಲೈಸೆನ್ಸಿನ ಕಾಲಾವಧಿಯಲ್ಲಿ ವಿನಹಾ ಬೇರೆ ಕಾಲದಲ್ಲಿ ಶೇಂದಿಯನ್ನು ಮರಗಳಿಂದ ಇಳಿಸಿಕೊಂಡು ಹೋಗಕೂಡದು.

(9) ಈ ಕೆಳಗೆ ನಮೂದಿಸಿರುವ ದರಗಳಂತೆ ಮರ ತೆರಿಗೆಯನ್ನು ಕೊಟ್ಟ ಶೇಂದಿ ಉತಾರ್ ಬಗ್ಯೆ ಲೈಸೆನ್ಸ ಪಡದ ಹೊರ್ತು ಯಾವ ಮರವನ್ನೂ ಕಟ್ಟಕೂಡದು.

ಮರದ ತರಹೆ				ಮರ ಒಂದಕ್ಕೆ ಲೋಕಲ್‌ಸೆಸ್ ದೇಖೀಲ್ ವರುಷ ಒಂದಕ್ಕೆ ಕೊಡಬೇಕಾದ ಮರ ತೆರಿಗೆ,		
				ರೂ.	ಆ.	ಪೈ.
ಈಚಲು	...	..	..	1	1	0
ತೆಂಗು	...	..	..	2	2	0
ತಾಳೆ	...	...	...	1	9	6
ಬಗನಿ ಮ	...	..	..	1	9	6
ದಡಸಾಲು	...	...	...	0	8	6

ಟಿಪ್ಪಣಿ.—ಮೇಲಿನ (1)ನೇ ಕಲಂನಲ್ಲಿ ನಮೂದಿಸಿರುವ ವಿಷಯಗಳಲ್ಲಿ ಕೊಡಲ್ಪಡುವ ಲೈಸೆನ್ಸುಗಳಿಗೆ ಮೈಸೂರು ಸರ್ಕಾರಕ್ಕೆ ಮರ ತೆರಿಗೆಯನ್ನು ಕೊಡಬೇಕಾದ್ದಿಲ್ಲವು.

(10) ಮೇಲ್ಕಂಡ ತೆರಿಗೆ ಶಿವಾಯಿ, ಮೈಸೂರು ರಾಜ್ಯದ ಒಳಗೆ ಅಥವಾ ಹೊರಗೆ ಇರುವ ಅಥವಾ ಬೆಂಗಳೂರು ದಂಡಿನಲ್ಲಿ ಇರುವ ಅಂಗಡಿಗಳಿಗೆ ಸರಬರಾಯಿಗಾಗಿ ಉತಾರಾಗತಕ್ಕದ್ದಕ್ಕೆ ದರಖಾಸ್ತು ಬರುವ ಸರ್ಕಾರೀ ಮರಗಳಿಗೆ ಸಾಲಿಯಾನಾ ಮರ ಒಂದಕ್ಕೆ 4 ಆಣೆ ಪ್ರಕಾರ ಮರದ ಮಾಲ್ಕಿ ಮೊಬಲಗು 3 ಪೈ ಪ್ರಕಾರ ಲೋಕಲ್‌ಸೆಸ್ಸಿಸಿ ವಸೂಲಾಗತಕ್ಕದ್ದು.

ಟಿಪ್ಪಣಿ.—ಸರ್ಕಾರಿ ಹಿಡುವಳಿ ಜಮೀನಿನಲ್ಲಿರುವ ಮರಗಳನ್ನು ಮಾಲೀಕರ ಅನುಮತಿಯಿಲ್ಲದೆ ಕಟ್ಟಕೂಡದು, ಇನಾಂ ವ ಕಾಯಂಗುತ್ತಾ ಜಮೀನಿನಲ್ಲಿರುವ ಮರಗಳ ವಿಷಯದಲ್ಲಿ ಹಾಲಿ ಏರ್ಪಾಟುಗಳು ಜಾರೀಲಿರತಕ್ಕದ್ದು. ಪರಂತು ಆ ಮರಗಳು ಸರ್ಕಾರದಿಂದ ಮರ ತೆರಿಗೆ ವಸೂಲ್ಮಾಡಲಿಕ್ಕೆ ಗುರಿಯಾಗಿರತಕ್ಕದ್ದು.

ಸಂಬಂಧಪಟ್ಟ ಆಯಾಯ ಇಲಾಖೆಗಳಿಗೆ ಈ ಮರದ ಮಾಲ್ಕಿ ಮೊಬಲಗನ್ನು ಜಮಾ ಕಟ್ಟತಕ್ಕದ್ದು.

(11) (a) ದರಖಾಸ್ತು ಬರುವ ಮರಗಳ ಮೇಲಿನ ಮರದ ಮಾಲ್ಕಿ ಮೊಬಲಗು ಅದರ ಮೇಲಿನ ಸೆಸ್ ಮೊಬಲಗೂ ಮತ್ತು ಮರತೆರಿಗೆ ಮೇಲಿನ ಸೆಸ್ ಮೊಬಲಗೂ ಉತಾರ್ ಲೈಸೆನ್ಸಿಗೆ ದರಖಾಸ್ತು ಕೊಡುವಾಗ ಪೂರಾ ಪಾವತಿಯಾಗತಕ್ಕದ್ದು.

(b) ಎಕ್ಸೈಜ್ ಕಮ್ಮಿಷನರ್ ಸಾಹೇಬರವರು ಬೇರೆ ಹುಕುಂ ಕೊಡದೆ ಇದ್ದ ಪಕ್ಷದಲ್ಲಿ ಮರತೆರಿಗೆ ಮೊಬಲಗು ಈ ಕೆಳಗೆ ನಮೂದ್ ಮಾಡಿರುವ ಬಿಸ್ತುಗಳಲ್ಲಿ ಪಾವತಿ ಮಾಡಲ್ಪಡತಕ್ಕದ್ದು.

ಲೈಸೆನ್ಸಗಳಿಗಾಗಿ ದರಖಾಸ್ತುಗಳನ್ನು ಕೊಡತಕ್ಕ ಕಾಲ.	ಲೈಸೆನ್ಸಿಗೆ ದರಖಾಸ್ತು ಮಾಡುವಾಗ ಕೊಡಬೇಕಾದ ಮರ ತೆರಿಗೆ ಮೊಬಲಗಿನ ದಾಮಾಷಾಯಿ.	ಮೂರನೇ ತಿಂಗಳು ಗುರ್ರೇ ತಾರೀಖಿನಲ್ಲಿ ಪಾವತಿ ಯಾಗಬೇಕಾದ ಮರ ತೆರಿಗೆ ದಾಮಾಷಾಯಿ.
1904ನೇ ಇಸವಿ ಜುಲೈ ಗುರ್ರೇ ಲಾಗಾಯಿತು 1905ನೇ ಏಪ್ರೈಲ್ 30ನೇ ತಾರೀಖಿನ ವಳಗಾಗಿ.	ಮೂರರಲ್ಲಿ ಒಂದುಭಾಗ.	ಉಳಿದ ಮೂರರಲ್ಲಿ ಎರಡುಭಾಗವು.
1905ನೇ ಇಸವಿ ಮೇ ಗುರ್ರೇ ಲಾಗಾಯಿತು 1905ನೇ ಜೂನ್ 30ನೇ ತಾರೀಖಿನ ವಳಗಾಗಿ.	ಎಲ್ಲಾ.	ಇಲ್ಲಾ.

(c) ನಿರ್ಣಯಿಸಿದ ಕಾಲದೊಳಗಾಗಿ ಯಾವ ಬಿಸ್ತು ಮೊಬಲಗನ್ನಾದರೂ ಪಾವತಿ ಮಾಡದೇ ಇದ್ದಲ್ಲಿ ಎಕ್ಸೈಜ್ ರೆಗ್ಯುಲೇಷನ್ 26ನೇ ಸೆಕ್ಷನ್ ಮೇರೆಗೆ ಲೈಸೆನ್ಸ್ ರದ್ದು ಯಾ ಮೋಕೂಫ್ ಮಾಡಲ್ಪಡಲು ಗುರಿಯಾಗಿರುತ್ತದೆ.

(d) ಲೈಸೆನ್ಸ್‌ದಾರನು ತಪ್ಪಿತಸ್ಥನಾಗಿ ಅವನ ಅಂಗಡಿಯು ದುಸರಾ ಹರಾಜು ಮಾಡಲ್ಪಟ್ಟರೆ ಸರ್ಕಾರದ ಮರಗಳಿಗೆ ಅವನಿಗೆ ಇರತಕ್ಕ ಹಕ್ಕು ಬಾಧ್ಯತೆಯು ನಿಂತುಹೋಗುತ್ತದೆ.

(e) ಮೇಲ್ಕಂಡಂತೆ ನಡೆಯಲು ತಪ್ಪಿದಲ್ಲಿ ಅಮಲ್ದಾರರು ಡೆಪ್ಯುಟಿ ಕಮ್ಮಿಷನರವರ ಹುಕುಂ ಪಡೆದು ಬಾಕಿ ನಿಂತಿರುವ ಮೊಬಲಗು ಪಾವತಿ ಮಾಡಲ್ಪಡುವವರೆಗು ಉತಾರು ಲೈಸೆನ್ಸನ್ನು ಮೋಕೂಫ್ ಮಾಡಬಹುದು. ಹಾಗೆ ಮೋಕೂಫ್ ಮಾಡಿದ್ದರೆ ನೋಟೀಸು ತನಗೆ ಬಂದಿದ್ದರ ಮೇಲೆ ತಪ್ಪಿತಸ್ಥನಾದ ಲೈಸೆನ್ಸುದಾರನು ಮರಗಳನ್ನು ಉತಾರು ಮಾಡುತ್ತಲೇ ಇದ್ದಲ್ಲಿ ಅನ್ಯಾಯವಾಗಿ ಉತಾರ್ ಮಾಡಿದ ತಕ್ಸೀರಿಗೆ ಒಳಪಡುತ್ತಾನೆ.

(12) ಛಾಪೇ ಮಾಡುವದಕ್ಕಾದರೂ ಹಗ್ಗ ಮಾಡುವದಕ್ಕಾದರೂ ಗೂಡೆಗಳು ಮಾಡುವದಕ್ಕಾದರೂ ಯಾ ವ್ಯವಸಾಯ ಯಾ ಇತರ ಕಾರ್ಯಗಳಿಗಾದರೂ ಈಚಲು ಗರಿಗಳನ್ನು ಕಡಿಯಲು ಲೈಸೆನ್ಸ್ ಪಡೆದಿರುವವರು ಹೆಂಡವನ್ನು ಕಟ್ಟಲು ಉಳಿಸಿರುವ ಮರಗಳನ್ನು ಬಿಟ್ಟು ಅಂಥಾ ಕಾರ್ಯಗಳಿಗಾಗಿ ಗೊತ್ತು ಮಾಡಲ್ಪಟ್ಟಿರುವ ಬೇರೆ ಮರಗಳನ್ನು ಉಪಯೋಗಿಸಿಕೊಳ್ಳುವಾಗ ಲೈಸೆನ್ಸ್‌ದಾರನು ಅವರ ಕಾರ್ಯಗಳಲ್ಲಿ ಪ್ರವೇಶ ಮಾಡಬಾರದು.

(13) ಲೈಸೆನ್ಸ್‌ದಾರನು ಆತನಿಗೆ ಕೊಡಲ್ಪಟ್ಟ ಲೈಸೆನ್ಸನ್ನು ಆತನ ಅಂಗಡಿಯಲ್ಲಿ ಬಹಿರಂಗವಾದ ಸ್ಥಳದಲ್ಲಿಡಬೇಕು.

(14) ಸ್ವದೇಶ ಭಾಷೆಯಲ್ಲಿ ದುಕಾನದಾರನ ಹೆಸರು, ಲೈಸೆನ್ಸ್ ನಂಬರ್ ಮತ್ತು ಆತನಿಂದ ಮಾರಲ್ಪಡುವ ಶೇಂದಿಯ ಖರೀದಿ ನಮೂದಿನಿಂದ ಪ್ರತಿ ಅಂಗಡಿಯ ಮುಂಭಾಗದಲ್ಲಿ ಒಂದು ಹಲಿಗೆಯು ಬಹಿರಂಗವಾಗಿ ತಗಲಿ ಹಾಕಲ್ಪಡಬೇಕು. ಕುಷ್ಟರೋಗದಿಂದಲಾಗಲೀ ಅಥವಾ ಇತರ ಅಂಟುರೋಗದಿಂದಲಾಗಲೀ ಪೀಡಿತರಾದ ಜನಗಳಿಂದ ಶೇಂದಿಯನ್ನು ಒಯ್ಯುವುದಕ್ಕಾಗಲೀ ಅಥವಾ ಮಾರುವುದಕ್ಕಾಗಲೀ ಮತ್ತು ಅಂಗಡಿಯಲ್ಲಿ ಅಂಥಾ ಜನರನ್ನು ನೌಕರಮಾನೇರಾಗಿ ಇಟ್ಟುಕೊಳ್ಳುವುದಕ್ಕಾಗಲೀ ಅಡ್ಡಿಪಡಿಸಲ್ಪಟ್ಟಿರುತ್ತೆ.

(15) ಲೈಸೆನ್ಸ್‌ದಾರನು ತನ್ನ ಅಂಗಡಿಯಲ್ಲಿ ನಿಷಾವನ್ನೂ, ನೆಮ್ಮದಿಗೆ ಭಂಗವನ್ನೂ, ಜೂಜಾಡುವದನ್ನೂ ಅಡ್ಡಿ ಮಾಡತಕ್ಕದ್ದು.

(16) ಸೂರ್ಯೋದಯಕ್ಕೆ ಮುಂಚೆ ಯಾವ ಅಂಗಡಿಯೂ ಯಾ ಕೋಠಿಯೂ ತೆಗೆಯಲ್ಪಡಕೂಡದು, ಮತ್ತು ಪ್ರತ್ಯೇಕವಾದ ಅಪ್ಪಣೆ ಹೊಂದಿದ ಶಿವಾಯಿ ರಾತ್ರೆ 9 ಘಂಟೆ ನಂತರ ತೆರೆಯಲ್ಪಟ್ಟಿರಕೂಡದು. ಡೆಪ್ಯುಟಿ ಕಮ್ಮಿಷನರ್ ಸಾಹೇಬರವರು ಅಂಗಡಿಯನ್ನು ಹಂಗಾಮಿಯಾಗಿಯಾಗಲಿ ಅಥವಾ ಕಾಯಂ ಆಗಿ ಆಗಲೀ ಮುಚ್ಚುವದಕ್ಕೆ ಹುಕುಂ ಕೊಟ್ಟ ಹೊರ್ತು ನಿಬಂಧಿಸಿರುವ ಕಾಲಗಳಲ್ಲಿ ಅಂಗಡಿಯನ್ನು ತೆಗದಿರಬೇಕು.

(17) ಲೈಸೆನ್ಸ್‌ದಾರನು ಜೋರರು, ಕಳ್ಳರು, ಪೋಲೀ ಮನುಷ್ಯರು, ದೊಂಬಿ ಮಾಡತಕ್ಕವರು, ಹಾದರಗಿತ್ತಿಯರು, ಶಿಪಾಯಿಗಳು, ಫೌಜಿನಿಂದ ಫರಾರಿಯಾಗಿ ಬಂದವರೆಂದು ಗೊತ್ತಿದ್ದ ಅಥವಾ ನಂಬಲ್ಪಟ್ಟಿದ್ದವರು ಇಂಥಾವರನ್ನು ಇಟ್ಟುಕೊಳ್ಳ

ಕೂಡದು. ರಾತ್ರಿ ಕಾಲದಲ್ಲಿ ಯಾವ ಮನುಷ್ಯನಿಗೂ ಆಶ್ರಯ ಕೊಡಕೂಡದು ; ಆದರೆ ಅಂಥಾ ಜನರು ಯಾರಾದರೂ ಅಂಗಡಿಗೆ ಬಂದರೆ ಸಮೀಪದಲ್ಲಿರುವ ಮೇಜಿಸ್ಟ್ರೇಟರಿಗೆ ಯಾ ಪೋಲೀಸ್ ಆಫಿಸರರಿಗೆ ವರ್ತಮಾನ ಕೊಡಬೇಕು.

(18) ಲೈಸೆನ್ಸ್‌ದಾರನು ಶೇಂದಿಗೆ ಅಡವಾಗಿ ಯಾ ಗಿರವಿಯಾಗಿ ಧಾನ್ಯ, ಒಡವೆ, ಸಾಮಾನು, ಉಡುಪು ಯಾ ಇತರ ಪದಾರ್ಥವನ್ನು ತೆಗದುಕೊಳ್ಳಕೂಡದು. ಅಂಥಾ ಯಾವ ಪದಾರ್ಥವಾದರೂ ತನ್ನಲ್ಲಿ ಬಂದರೆ ಸಮೀಪದಲ್ಲಿರತಕ್ಕ ಮೇಜಿಸ್ಟ್ರೇಟರಿಗೆ ಯಾ ಪೋಲೀಸ್ ಆಫಿಸರರಿಗೆ ವರ್ತಮಾನ ಕೊಡಬೇಕು.

(19) ಯಾವ ಲೈಸೆನ್ಸ್‌ದಾರ ಯಾ ಬಿಕರೀದಾರ ಯಾ ಬಿಕರೀದಾರರೇ ಆಗಲಿ ಮೂರು ಅಳೆಯುವ ಸೇರಿಗಿಂತಲೂ ಹೆಚ್ಚಾಗಿ ಶೇಂದಿಯನ್ನು ದುಕಾನಿನಲ್ಲಿ ಒಬ್ಬನೇ ಮನುಷ್ಯನಿಂದ ಒಂದೇ ಕಾಲದಲ್ಲಿ ಪಾನಮಾಡಲು ಕೊಡಬಾರದು ; ತಮ್ಮಿಂದ ಹೊಂದಲ್ಪಟ್ಟಿರುವ ಅಪ್ಪಣೇ ಚೀಟಿಯಲ್ಲಿ ವಿವರಿಸಿರುವ ಶೇಂದಿಯ ಪರಿಮಾಣವನ್ನು ಸಾಗಿಸಿಕೊಂಡು ಹೋಗಲು ಅಪ್ಪಣೆ ಪಡೆದಿರುವ ರೊಟ್ಟೀ ಕಾರ್ಖಾನೆಯವರು ವಿನಹಾ ಮತ್ಯಾರಿಗು ಅಪ್ಪಣೆ ಚೀಟಿ ಉಂಟಾಗಿದ್ದರೆ ಹೊರತಾಗಿ ಎರಡು ಇಂಪೀರಿಯಲ್ ಕ್ವಾರ್ಟ್‌ಗಳಿಗ ಅಥವಾ ಎರಡು ಸೇರುಗಳಿಗೆ ಅಧಿಕವಾಗಿ ಹೊರಗೆ ತೆಗದುಕೊಂಡು ಹೋಗಲು ಅವಕಾಶ ಕೊಡಬಾರದು. ಒಂದು ಇಂಪೀರಿಯಲ್ ಗ್ಯಾಲಾ ಯಾ 4 ಅಳೆಯುವ ಸೇರುಗಳ ವರಿಗೂ ಅಪ್ಪಣೆ ಚೀಟಿ ಪಡೆದು ಪಾನ ಮಾಡಲಿಕ್ಕೆ ಶೇಂದಿಯನ್ನು ತೆಗದುಕೊಂಡು ಹೋಗಲು ಅವಕಾಶ ಕೊಡಬಹುದು.

(20) ಲೈಸೆನ್ಸ್‌ದಾರನು ಯಾವ ಎಕ್ಸೈಜ್ ಉದ್ಯೋಗಸ್ಥನಲ್ಲಿಯೂ ಹಣ ಸಂಬಂಧವಾದ ಲೇವಾದೇವಿಯನ್ನು ಇಟ್ಟುಕೊಳ್ಳಕೂಡದು.

(21) ಬಿಕರಿಯು ಪ್ರಶಸ್ತವಾಗಿರುವ ಕಟ್ಟಡದಲ್ಲಿ ಮಾಡಲ್ಪಡತಕ್ಕದ್ದು. ಸದರೀ ಕಟ್ಟಡಕ್ಕೆ ಒಂದೇಬಾಗಲು ಇರತಕ್ಕದ್ದು. ಹಿಂಭಾಗದಲ್ಲಾದರು ಪಕ್ಕಗಳಲ್ಲಿಯಾದರೂ ಕಿಟಕಿಯಾಗಲಿ ಗಂಡಿಯಾಗಲೀ ಇರಕೂಡದು. ಶೇಂದಿಯನ್ನು ಮಾರುವ ಜಗಲಿಯು ಅಂಗಡೀ ಒಳಗಡೆ ಇರುವ ಜನಗಳೂ ಅಂಗಡೀಮುಂದೆ ಬೀದಿಲಿ ತಿರಗಾಡುವ ಜನಗಳಿಗೆ ಕಾಣುವಹಾಗೆ ಬಾಗಲಿಗೆ ಎದುರಾಗಿ ಇರತಕ್ಕದ್ದು. ಮತ್ತು ಇದರಲ್ಲಿ ಎರಡನೇ ಕೊಠಡಿ ಶೇಂದಿಯನ್ನು ಮಾರುವದಕ್ಕೆ ಉಪಯೋಗಿಸಲೂ ಕೂಡದು ಅಥವಾ ಗಿರಾಕಿಗಳಿಗೋಸ್ಕರ ತೆಗೆದು ಇರಲೂಕೂಡದು.

(22) ಶೇಂದಿಯಿಂದ ಸಾರಾಯಿ ಭಟ್ಟೀ ಇಳಿಸುವದು ಸಂಪೂರ್ಣವಾಗಿ ಅಡ್ಡಿಮಾಡಲ್ಪಟ್ಟಿದೆ.

(23) ಯಾವ ಯೂರೋಪಿಯನ್ ನಾನ್ ಕಮಿಷನ್ಡ್ ಆಫಿಸರ್, ಅಥವಾ ಪ್ರೈವೆಟ್ ಯಾ ಸೋಲ್ಜರಿಗಾದರು, ಅಥವಾ ಸೈನ್ಯಗಳ ಮೊಕ್ಕಾಂಗಳೊಡನೆ ಹೋಗುವ ಯಾವ ಯುರೋಪಿಯನ್ ಯಾ ಯೂರೇಷಿಯನ್ನಿಗಾದರೂ ಅಥವಾ ಮೇಲೆ ಹೇಳಲ್ಪಟ್ಟ ಜನಗಳ ಸಂಸಾರಗಳ ಪೈಕಿ ಯಾರೊಬ್ಬರಿಗಾದರೂ ಕಮ್ಯಾಂಡಿಂಗ್ ಆಫಿಸರವರ ಅಥವಾ ಈ ವಿಷಯದಲ್ಲಿ ಅವರಿಂದ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯ ಲಿಖಿತಮೂಲಕವಾದ ಅಪ್ಪಣೆಯಿಲ್ಲದೆ ಶೇಂದಿಯನ್ನು ಮಾರಲೂಕೂಡದು ಕೊಡಲೂ ಕೂಡದು, ಮತ್ತು ಅವರು ಯಾವ ಯೂರೋಪಿಯನ್ ಯಾ ಯೂರೇಷಿಯನ್ ನಾವಿಕನಿಗೂ ಮತ್ತು ಉದ್ಯೋಗದ ಮೇಲಿರುವ ಕಾಲದಲ್ಲಿ ಯಾವ ಶಿಪಾಯಿಗೂ ಪೋಲೀಸ್ ನೌಕರನಿಗೂ, ಯಕ್ಸೈಜ್ ಆಫಿಸರರಿಗೂ ರೈಲ್ವೆ ಕಂಪೆನಿಯ ನೌಕರನಿಗೂ, ಮತ್ತು ಪೋಲೀಸ್ ಮೊಹಸಲೆಯಲ್ಲಿರುವ ಯಾವ ಯೂರೋಪಿಯನ್ ಪ್ರೇಲೀ ಮನುಷ್ಯನಿಗೂ ಹನ್ನೆರಡು ವರುಷಗಳ ವಯಸ್ಸಿನೊಳಗಾಗಿರುವ ಯಾವ ಮಗುವಿಗೂ, ಅಥವಾ ಯಾವ ಹುಚ್ಚನಿಗು ಆವರಣದಲ್ಲಿ ಕುಡಿಯುವದಕ್ಕಾಗಿ ಶೇಂದಿಯನ್ನು ಮಾರಕೂಡದು ಯಾ ಕೊಡಕೂಡದು. ಶಿವಾಯಿ ಶೇಂದಿಯನ್ನು ಸಾಲವಾಗಿ ಮಾರಕೂಡದು.

(24) ಯೂರೋಪಿಯನ್ ಯಾ ನೇಟಿವ್ ಸೈನ್ಯದ ರಿಜಿಮೆಂಟ್ ಯಾ ಸಮೂಹವು ಪ್ರಯಾಣ ಮಾಡುತ್ತಿರುವಾಗ ಯಾ ಸಮೀಪದಲ್ಲಿ ಮೊಕ್ಕಾಂ ಮಾಡಿರುವಾಗ ಅವರ ಪ್ರಯಾಣದ ಮಾರ್ಗದಲ್ಲಿ ಯಾ ಆ ಮಾರ್ಗದ ಸಮೀಪದಲ್ಲಿರುವ ಎಲ್ಲಾ ಶೇಂದಿ ಬಿಕರೀ ಅಂಗಡಿಗಳನ್ನು ಮುಚ್ಚುವಂತೆ ಡೆಪ್ಯುಟಿ ಕಮ್ಮಿಷನರವರು ಅಥವಾ ತಾಲ್ಲೂಕು ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರವರು ಅಪ್ಪಣೆ ಮಾಡಬಹುದು.

(25) ಸರ್ಕಾರದವರು ಲೈಸೆನ್ಸುದಾರನಿಗೆ 15 ದಿವಸಗಳ ಮುಂಚಿನ ನೋಟೀಸು ಕೊಟ್ಟು ತಕ್ಕ ಕಾರಣಗಳಿಂದ ಆತನಿಗೆ ನ್ಯಾಯವಾಗಿ ತೋರುವ ಪರಿಹರದ್ರವ್ಯವನ್ನು ಕೊಟ್ಟು ಗುತ್ತಿಗೆಯನ್ನು ಮೋಖೂಫ್ ಮಾಡುವ ಅಧಿಕಾರವನ್ನು ಉಳಿಸಿಕೊಂಡಿರುತ್ತಾರೆ, ಮತ್ತು ಒಳದೇಶದ ಬೀರು ವಿಷಯದಲ್ಲಿ, ಯಾ ಶೇಂದಿ ವಿನಹ ಇತರ ವಿಧವಾದ ಯಾವ ಮದ್ಯದ ವಿಷಯದಲ್ಲಿ ಸರ್ಕಾರದವರು ಯಾವದಾದರೂ ಏರ್ಪಾಟು ಮಾಡಿದ್ದಲ್ಲಿ ಲೈಸೆನ್ಸ್‌ದಾರನಿಗೆ ಪರಿಹಾರದ್ರವ್ಯಕ್ಕೆ ಯಾ ರಿಮಿಷನ್ ಎಂಬ ಸೋಡಿಗೆ ಹಕ್ಕು ಇರಲಾರದು.

(26) ಡೆಪ್ಯುಟಿ ಕಮ್ಮಿಷನರವರ ಮಂಜೂರನ್ನು ಪಡೆಯದೆ ಯಾವ ಹಕ್ಕಿನ ಆಡಳಿತಕ್ಕೂ ಲೈಸೆನ್ಸ್‌ದಾರನಿಂದ ಯಾವ ಮನುಷ್ಯನೂ ನೇಮಿಸಲ್ಪಡತಕೂಡದು, ಮುತಾಲೀಕನಿಂದ ತೆಗೆಯಲ್ಪಟ್ಟಿರುವ ಎಲ್ಲಾ ಒಪಂಬಡಿಕೆಗಳೂ ಅವುಗಳನ್ನು ಬರೆದು ಕೊಟ್ಟ ತಾರೀಖು ಲಾಗಾಯ್ತು ಒಂದು ತಿಂಗಳೊಳಗೆ ಡೆಪ್ಯುಟಿ ಕಮ್ಮಿಷನರವರಲ್ಲಿ ಇಡಲ್ಪಡಬೇಕು.

(27) ಶೇಂದಿಯನ್ನು ತಯಾರು ಮಾಡುವದಕ್ಕೆ ಯಾ ಒಯ್ಯುವದಕ್ಕೆ ಯಾ ಬಿಕರೀ ಮಾಡುವದಕ್ಕೆ ತನ್ನಿಂದ ನೌಕರರಾಗಿಡಲ್ಪಟ್ಟ ಯಾವ ಮನುಷ್ಯನಾದರೂ ಎಕ್ಸೈಜ್ ಕಾನೂನಿಗೆ ಅಥವಾ ಆತನು ಬರೆದು ಕೊಟ್ಟ ಕರಾರುಗಳಿಗೆ ವಿರೋಧವಾಗಿ

ನಡೆದ ಸಂಗತಿಯು ಲೈಸೆನ್ಸದಾರನ ತಿಳುವಳಿಕೆಗೆ ಬಂದಲ್ಲಿ ಆತನು ಆ ಸಂಗತಿಯನ್ನು ಡೆಪ್ಯುಟಿ ಕಮ್ಮಿಷನರವರಿಗೆ ಇತ್ತಿಲೆ ಮಾಡಿ ಅಂಥಾ ಮನುಷ್ಯನನ್ನು ಮುಂದೆ ಕೆಲಸದಲ್ಲಿಡುವ ವಿಷಯದಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಕೊಡಲ್ಪಡುವ ಹುಕುಮನ್ನು ಜಾರೀಲಿ ತರತಕ್ಕದ್ದು.

(28) ಲೈಸೆನ್ಸದಾರ ಶೇಂದಿಯನ್ನು ಸಾಗಿಸುವದಕ್ಕಾಗಿ ಉಪಯೋಗಿಸುವ ಗಾಡಿಗಳಿಗೆ ಮೊಹತರ್ಫಾ ತೆರಿಗೆಯನ್ನು ಸಲ್ಲಿಸತಕ್ಕದ್ದು. ಆದರೆ ಅಂಥಾ ಗಾಡಿಗಳು ಸರ್ಕಾರದ ನೌಕರೀಬಗ್ಗೆ ಹಿಡಿಯಲ್ಪಡಕೂಡದು.

(29) ಕ್ರಮವಾಗಿ ನಂಬರ್ ಹಾಕಲ್ಪಟ್ಟ ಪುಟಗಳುಳ್ಳ ಒಂದು ಇನ್ಸ್‌ಪೆಕ್ಷನ್ ನೋಟ್ ಪುಸ್ತಕವು ತನಿಖೆ ಮಾಡತಕ್ಕ ಆಫೀಸರುಗಳ ಷರಾ ನಮೂದಿಗೋಸ್ಕರ ಇಟ್ಟುಕೊಳ್ಳಲ್ಪಡತಕ್ಕದ್ದಲ್ಲದೆ ಸದರೀ ಪುಸ್ತಕವು ರೇಂಜ್ ಛಾರ್ಜಿನಲ್ಲಿರುವ ಇನ್ಸ್‌ಪೆಕ್ಟರೇ ಆಗಲಿ ಯಾ ಅವರಿಂದ ಅಧಿಕಾರ ಪಡೆದ ಮತ್ಯಾವ ಆಫೀಸರರೇ ಆಗಲಿ ರಸೀತಿ ಕೊಟ್ಟಲ್ಲಿ ಅವರಿಗೆ ಕೊಡಲ್ಪಡತಕ್ಕದ್ದು.

(30) ಯಾವ ಮನುಷ್ಯನ ವಿಷಯದಲ್ಲಿ ಆದರೂ ಇಂಡಿಯನ್ ಪೀನಲ್ ಕೋಡ್ ರೀತ್ಯಾ ಯಾವದಾದರೂ ಘೋರವಾದ ತಕ್ಸೀರಿಗೆ ದರ್ಯಾಫ್ತಿಯಾಗಿ ತಪ್ಪು ಸಾಬೀತಾಗಿದ್ದಲ್ಲಿ, ಅಂಥಾವನನ್ನು ಶೇಂದಿಯನ್ನು ಬಯ್ಯುವದಕ್ಕಾದರೂ ಯಾ ಮಾರುವದಕ್ಕಾದರೂ ಡೆಪ್ಯುಟಿ ಕಮ್ಮಿಷನರವರ ಅಪ್ಪಣೆ ಇಲ್ಲದೆ ನೇಮಿಸಿಕೊಳ್ಳಕೂಡದು.

(31) ಮದ್ರಾಸ್ ರಾಜ್ಯದಲ್ಲಿರುವ ಮರಗಳಿಂದ ಉತ್ಪತ್ತಾಗುವ, ಆದರೆ ಮೈಸೂರು ದೇಶದಲ್ಲಿ ಉಪಯೋಗಿಸಲ್ಪಡುವ ಶೇಂದಿಗೋಸ್ಕರ ಪಾವತಿ ಆಗಬೇಕಾದ ಮರತೆರಿಗೆಯು ಮೈಸೂರು ಸರ್ಕಾರಕ್ಕೆ ಜಮೆ ಆಗತಕ್ಕದ್ದು. ಅಂಥಾ ವಿಷಯಗಳಲ್ಲಿ ಉಭಯ ಸರಹದ್ದುಗಳ ಪೈಕಿ ಯಾವ ಕಡೆಯಲ್ಲಿ ಅತ್ಯಂತ ಜಾಸ್ತಿ ದರವಿರುತ್ತೋ ಆ ದರದಂತೆಯೇ ಯಾವಾಗಲೂ ಮರತೆರಿಗೆಯು ಪಾವತಿ ಮಾಡಲ್ಪಡತಕ್ಕದ್ದು. ಮೈಸೂರು ದೇಶದ ಅಂಗಡಿಕಾರರು ಮದ್ರಾಸ್ ರಾಜ್ಯದಲ್ಲಿ ಯಾವ ಮರಗಳಿಂದ ಶೇಂದಿಯನ್ನು ಉತಾರ್ ಮಾಡಲಿಕ್ಕೆ ಲೈಸೆನ್ಸುಗಳನ್ನು ಪಡೆಯಬೇಕೆಂಬ ಉದ್ದೇಶದಿಂದ ಇರುವರೋ ಅಂಥಾ ಮರಗಳ ಬಾಬತು ಮರ ತೆರಿಗೆಯನ್ನು ಮೈಸೂರು ದೇಶದಲ್ಲಿ ಸಂಬಂಧಪಟ್ಟ ತಾಲ್ಲೂಕು ಅಮಲ್ದಾರರಿಗೆ ಒಂದೇ ಕಿಸ್ತಿನಲ್ಲಿ ಪಾವತಿಮಾಡತಕ್ಕದ್ದು. ಸದರೀ ಅಮಲ್ದಾರರು ವಿಧಾಯಕವಾದ ನಮೂನೆಯಲ್ಲಿ ಒಂದು ರಸೀತಿಯನ್ನು ಕೊಡಬೇಕಲ್ಲದೆ ಸದರೀ ದರಖಾಸ್ತುದಾರನು ಉತಾರ್ ಲೈಸೆನ್ಸುಗಳನ್ನು ಪಡೆಯಲಿಕ್ಕೆ ಹಕ್ಕುದಾರನಾಗಿರುತ್ತಾನೆಂದು ಆ ರಶೀತಿ ಕೆಳಗೆ ದೃಢಪಡಿಸಿ ರುಜು ಮಾಡಬೇಕು. ಸದರೀ ದರಖಾಸ್ತುದಾರನು ಮದ್ರಾಸ್ ಸರ್ಕಾರದ ಮರ ಕಟ್ಟುವ ನಿಬಂಧನೆಗಳ ಪ್ರಕಾರ ಬ್ರಿಟಿಷ್ ಸರ್ಕಾರದವರಿಗೆ ದರಖಾಸ್ತು ಮಾಡಿ ಸರಹದ್ದು ಪ್ರದೇಶದಲ್ಲಿ ಉತಾರ್ ಮಾಡಲ್ಪಟ್ಟ ಶೇಂದಿಯನ್ನು ಉದ್ದೇಶಿಸಲ್ಪಟ್ಟ ಅಂಗಡಿಗೆ ಯಾ ಕೋಠಿಗೆ ಮದರಾಸ್ ಸರ್ಕಾರದವರ ನಿಬಂಧನೆಗಳ ಪ್ರಕಾರ ಎಲ್ಲಾ ಕ್ರಮವನ್ನು ನಡಿಸಿದ ತರುವಾಯ ತೆಗೆದುಕೊಂಡು ಹೋಗಲಿಕ್ಕೆ ಮೈಸೂರು ದೇಶದ ಸಂಬಂಧಪಟ್ಟ ಇನ್ಸ್‌ಪೆಕ್ಟರವರಿಂದ ಪರ್ಮಿಟ್ ಯಾ ರವಾನೆಯನ್ನು ಪಡೆಯತಕ್ಕದ್ದು.

32. ಶೇಂದಿಯನ್ನು ತಯಾರು ಮಾಡುವದಕ್ಕಾಗಿ ಉತಾರ್ ಲೈಸೆನ್ಸನ್ನು ಪಡೆಯುವ ಪ್ರತಿ ಮನುಷ್ಯನು ಈಚಲು ಮರವನ್ನು ಕಟ್ಟುವಾಗ್ಯೆ ಈ ಕೆಳಗೆ ನಮೂದಾಗುವ ನಿಬಂಧನೆಗಳನ್ನು ಆಚರಿಸತಕ್ಕದ್ದು :—

(a) ಈಚಲು ಮರಗಳು ಕಸಬುದಾರರಿಂದಲೇ ಕಟ್ಟಲ್ಪಡತಕ್ಕದ್ದು.

(b) ಒಂದು ವರುಷದಲ್ಲಿ ಕಟ್ಟಿದ ಮರಗಳನ್ನು ವಾಡಿಕೆಯಾಗಿ ಮೂರನೇ ವರುಷದಲ್ಲಿ ಕಟ್ಟಕೂಡದು.

(c) ಮರಗಳಿಂದ ಶೇಂದಿಯನ್ನು ಮಿತಿಮೀರಿ ಉತಾರ್ಮಾಡಿ ಮರಗಳನ್ನು ಕೆಡಿಸಕೂಡದು.

(d) ಎಕ್ಸೈಜ್ ಕಮ್ಮಿಷನರವರಿಂದ ವಿಶೇಷ ಅಪ್ಪಣೆ ಕೊಡಲ್ಪಟ್ಟಿರುವ ಸ್ಥಳಗಳಲ್ಲಿ ವಿನಹಾ ಯಾವ ಮರದಲ್ಲಾಗಲಿ ಪ್ರಥಮ ರೇವು ಭೂಮಿಯಿಂದ ಅದಕ್ಕೆ 3 ಅಡಿಗಿಂತ ಕಮ್ಮಿಯಾಗುವ ಸ್ಥಾನದಲ್ಲಿ ಮಾಡಲ್ಪಡಕೂಡದು.

(e) ರೇವಿನ ಆಳವೂ ಮತ್ತು ಅಗಲವೂ ಮರದ ಅಡ್ಡಳತೆಯ ಮೂರರಲ್ಲಿ ಒಂದು ಭಾಗಕಿಂತ ಜಾಸ್ತಿಯಾಗಿರಕೂಡದು. ಮತ್ತು ಅದರ ಉದ್ದವು 8 ಅಂಗುಲಗಳಿಗಿಂತ ಜಾಸ್ತಿಯಾಗಿರಕೂಡದು.

(f) ವಿಶೇಷ ಅಪ್ಪಣೆಕೊಟ್ಟ ಪ್ರದೇಶದಲ್ಲಿ ವಿನಹಾ ಹೊಸದಾಗಿ ಮಾಡಲ್ಪಡುವ ಪ್ರತಿ ಒಂದು ರೇವು ಅದಕ್ಕೆ ಮುಂಚೆ ಮಾಡಲ್ಪಟ್ಟ ರೇವಿನ ಮೇಲುಗಡೆ ಒಂದು ಅಡಿಗಿಂತ ಕಮ್ಮಿಯಾಗಿರಕೂಡದು.

(g) ಮಧ್ಯದಲ್ಲಿ ಮೊಳೆಗಳೋಪಾದಿಯಲ್ಲಿರುವ ಸುಳಿಗಳ ಸಮುದಾಯವನ್ನು ಮುಟ್ಟಕೂಡದು. ಅವುಗಳ ಪಕ್ಕದ ಗರಿಗಳ ಪೈಕಿ ಎರಡು ವರಿಸೆಗಳಿಗೆ ಕಮ್ಮಿ ಇಲ್ಲದಂತೆ ಬಿಡತಕ್ಕದ್ದು. ಅಂದರೆ ಮಧ್ಯದ ಸುಳಿಗಳ ಬಾಜೂದಲ್ಲಿರುವ ಗರಿಗಳ ವರಿಸೆಗಳಿಂದ ರೇವಿನ ಮೇಲ್ಗಡೆವರಿಗೂ ಗರಿಗಳನ್ನು ಲೆಖ್ಖ ಮಾಡಿದರೆ ಎರಡು ವರಿಸೆಗಳಿಗೆ ಕಮ್ಮಿಯಾಗಿರಕೂಡದು; ಅಂದರೆ ರೇವಿನ ಮೇಲ್ಗಡೆಯಲ್ಲಿ ಮೊಳೆಗಳೋಪಾದಿಯಲ್ಲಿರುವ ಸುಳಿಗಳು ಶಿವಾಯಿ ರೇವು ತಯಾರ್ಮಾಡಲ್ಪಟ್ಟಿರುವ ಮುಂಭಾಗದಲ್ಲಿ ಎಂಟು ಗರಿಗಳಿಗಿಂತ ಕಮ್ಮಿಯಾಗಿ ಬಿಡಕೂಡದು.

(h) ಲೈಸೆನ್ಸದಾರನು ಲೈಸೆನ್ಸ್ ಕೊಡಲ್ಪಟ್ಟ ಮರಗಳನ್ನಾಗಲೀ ಅಥವಾ ಇತರ ಮರಗಳನ್ನಾಗಲೀ ಕುಯ್ಯಲೂ ಯಾ ಕೆಡಿಸಲೂ ಕೂಡದು, ಅಥವಾ ಕುಯ್ಯಲೂ ಯಾ ಕೆಡಿಸಲೂ ಅಪ್ಪಣೆ ಕೊಡಕೂಡದು.

(i) ಲೈಸೆನ್ಸದಾರನು ಅಥವಾ ಅವನ ಎಜಮಾನನು ತನ್ನ ಗುತ್ತಿಗೇ ಕಾಲದಲ್ಲಿ ಆಗಲಿ ಅಥವಾ ಪೂರೈಸಿದ 6 ತಿಂಗಳೊಳಗಾಗಲೀ ಮಿತಿಯಿಲ್ಲದೆ ಶೇಂದಿಯನ್ನು ಇಳಿಸಿದ್ದರಿಂದ ಯಾ ಅಜಾಗರೂಕತೆಯಿಂದ ಉತಾರ್ ಮಾಡಿದ್ದರಿಂದ ಒಣಗಿಹೋದ ಮರ

ಗಳು ಆತನಿಗೆ ಸಂಪೆ ಹಾಕಿಕೊಡಲ್ಪಟ್ಟ ಬಟ್ಟು ಮರಗಳಲ್ಲಿ ಶೇಕಡ 10ಕ್ಕೆ ಅತಿಕ್ರಮಿಸಿದರೆ ಅಂಥಾ ಪ್ರತಿಯೊಂದು ಮರಕ್ಕೂ ಒಂದು ರೂಪಾಯಿಯಂತೆ ಜುಲ್ಮಾನೆಯನ್ನು ಕೊಡಲು ಬದ್ಧನಾಗಿರುತ್ತಾನೆ.

(8). ಶೇಂದಿಯನ್ನು ಇಳಿಸುವ ಮರಗಳು ಇರತಕ್ಕ ಪ್ರತಿ ವನದಲ್ಲಿಯೂ ಎಕ್ಸೈಜ್ ಉದ್ಯೋಗಸ್ಥರು ಸಂಗತ್ಯಾನುಸಾರ ಶೇಂದಿಯನ್ನು ಯಾ ಶಾಕಾಯನ್ನು ಅಜಮಾಯಿಷಿ ಮಾಡಲಿಕ್ಕೂ ಅಥವಾ ಶೇಂದಿಯನ್ನು ಅಳತೆ ಮಾಡಲಿಕ್ಕೂ ಉತಾರದಾರನು ಬಂದು ಒಳಿಯನ್ನು ಇಟ್ಟಿರತಕ್ಕದ್ದು.

(9) ಮೇಲ ನಮೂದಿಸಿರುವ ಕಾನೂನುಗಳು ಯಾ ಲೈಸೆನ್ಸ್ ಷರತ್ತುಗಳು ಲೈಸೆನ್ಸದಾರನಿಂದಾದರು ಅಥವಾ ಆತನ ಅಂತಃಕ್ಯ ತಿಳುವಳಿಕೆ ಯಾ ಸಮ್ಮತಿಯಿಂದ ಆತನ ನೌಕರರಿಂದಲಾದರೂ ಉಲ್ಲಂಘಿಸಲ್ಪಟ್ಟರೆ, ಅಥವಾ ಲೈಸೆನ್ಸುದಾರನು ತನ್ನ ಮುಕಾಮಗಳನ್ನು 1904ನೇ ಇಸವಿ ಜುಲೈ ಗುರ್ರಿಯಲ್ಲಿ ಇಡುವದಕ್ಕಾದರೂ ಯಾ ತನ್ನ ಕೆಲಸಗಳನ್ನು ಕ್ರಮವಾದ ಎಚ್ಚರಿಕೆ ಯೊಡನೆ ನಡೆಸುವದಕ್ಕಾದರೂ ಉದಾಸೀನ ಮಾಡಿದರೆ ಅಂಥಾ ಪ್ರತಿ ಒಂದು ಉಲ್ಲಂಘನೆ ಯಾ ಉದಾಸೀನದಬಗ್ಯೆ ಪ್ರತಿ ಲೈಸೆನ್ಸ ದಾರನಿಗೆ 50 ರೂಪಾಯಿಗಳಿಗೆ ಮೀರಿದ ಒಂದು ಜುಲ್ಮಾನೆಯನ್ನು ವಿಧಿಸುವ ಬಗ್ಯೆ ಡೆಪ್ಯುಟಿಕಮಿಷನರವರಿಗೆ ನ್ಯಾಯವಾಗಿರ ತಕ್ಕದ್ದು, ಅಥವಾ ಡೆಪ್ಯುಟಿಕಮಿಷನರವರ ಹುಕುಮ್ಮಾನುಸಾರ ಆತನಿಂದ ಇಡೋಣಾದ ಡಿಪಾಜಿಟ್ ಮೊಬಲಗನ್ನು ದಂಡವಾಗಿ ತೆಗೆದುಕೊಳ್ಳಲ್ಪಡಲಿಕ್ಕೂ, ಲೈಸೆನ್ಸನ್ನು ರದ್ದುಮಾಡಲಿಕ್ಕೂ ಲೈಸೆನ್ಸುದಾರನನ್ನು ನಷ್ಟಕ್ಕೆ ಗುರಿಮಾಡಿ ಬಟ್ಟು ಸ್ವಾತಂತ್ರ್ಯ ವನ್ನು ಮರಳಿ ಹರಾಜುಮಾಡಿಸಲಿಕ್ಕೂ, ಅಥವಾ ಇತರವಿಧವಾಗಿ ವಿಲೇವಾರಿ ಮಾಡಲಿಕ್ಕೂ ಅಥವಾ ಅದನ್ನು ಅಮಾನಿಯಲ್ಲಿ ಜರಗಿಸು ವದಕ್ಕೂ ಅವರಿಗೆ ಅಖ್ತ್ಯಾರು ಇರತಕ್ಕದ್ದು. ಒಂದು ಲೈಸೆನ್ಸು ರದ್ದುಮಾಡಲ್ಪಟ್ಟರೆ ಗುತ್ತಿಗೆಯ ಪೂರಾ ಕಾಲಕ್ಕೆ ಬರ ಬೇಕಾದ ತಮಾಮ್ ಮೊಬಲಗು ತಕ್ಷಣ ಪಾವತಿ ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು, ಮತ್ತು ಹಾಗೆ ಲೈಸೆನ್ಸು ರದ್ದು ಮಾಡ ಲ್ಪಟ್ಟಿದ್ದರಿಂದಲಾಗಲಿ ಯಾ ಆ ಹಕ್ಕನ್ನು ಮರಳಿ ಹರಾಜು ಅಥವಾ ಇತರ ವಿಧದಿಂದ ವಿಲೇವಾರಿ ಮಾಡುವದರಿಂದಲಾಗಲೀ ಸರ್ಕಾ ರಕ್ಕೆ ಉಂಟಾಗುವ ಎಲ್ಲಾ ಲುಕ್ಸಾನುಗಳೂ ಲೈಸೆನ್ಸುದಾರನಿಂದ ಯಾ ಅವನ ಜಮೀನ್ದಾರನಿಂದ ಮೇಲ್ಕಂಡ 4ನೇಪ್ಯಾರಾ (a) ಕಲಂ ಅನುಸರಿಸಿ ಮರಳಿ ಹರಾಜಿಗಾಗಿ ವಿಧಿಸಿರುವಮೇರೆ ಭರ್ತಿ ಮಾಡಲ್ಪಡಬೇಕು. ಈ ರೀತಿ ವಸೂಲಾಗಬೇಕಾದ ತಮಾಮ್ ಮೊಬಲಗುಗಳು ಜಮೀನ್ ಕಂದಾಯದ ಬಾಕಿಯೋಪಾದಿಯಲ್ಲಿ ವಸೂಲ್ಮಾಡಲ್ಪಡತಕ್ಕದ್ದು.

(10) ಎಕ್ಸೈಜ್ ರೆಗ್ಯುಲೇಷನ್ ಯಾ ಒಪಿಯಮ್ ಆಕ್ಟಿಗೆ ವಿರೋಧವಾಗಿ ಯಾ ಹಾಲಿ ಜಾರಿಯಲ್ಲಿರುವ ಮತ್ಯಾವ ನಿಬಂಧ ನೆಗೆ ವಿರೋಧವಾಗಿ ನಡೆದ ಯಾವದಾದರೂ ತಕ್ಸೀರಿಗೆ ಲೈಸೆನ್ಸದಾರ ಮೇಜಿಸ್ಟ್ರೇಟರ ಮುಂದೆ ದರ್ಯಾಫ್ತಿಯಾಗಿ ತಪ್ಪು ಸಾಬೀ ತಾಗಿ ಡೆಪ್ಯುಟಿ-ಕಮಿಷನರವರಿಗೆ ಅವನು ಲೈಸೆನ್ಸುದಾರನಾಗಿರಲು ಯೋಗ್ಯನಲ್ಲವೆಂದು ಕಂಡುಬಂದಲ್ಲಿ ಆತನನ್ನು ನಷ್ಟಕ್ಕೆ ಗುರಿಮಾಡಿ ಆತನ ಲೈಸೆನ್ಸ ಸರ್ಕಾರಕ್ಕೆ ದಾಖಿಲ್ಮಾಡಿಕೊಳ್ಳಲ್ಪಟ್ಟಂತೆ ಹುಕುಂ ಮಾಡುವದಕ್ಕೆ ಯಾ ಮಾರುವದಕ್ಕೆ ಯಾ ಅನ್ಯ ಥಾ ವಿಲೇವಾರಿ ಮಾಡಲಿಕ್ಕೆ ಡೆಪ್ಯುಟಿ ಕಮಿಷನರವರಿಗೆ ನ್ಯಾಯವಾಗಿರತಕ್ಕದ್ದು.

(11) ಲೈಸೆನ್ಸದಾರ್ರಿಂದ ಬರಬೇಕಾದ ಮೊಬಲಗುಗಳೆಲ್ಲಾ ಠೇವಣಿ ಮೊಬಲಗಿನಲ್ಲಿ ವಜಾಮಾಡಲ್ಪಡಬಹುದು, ಅಥ ವಾ ಜಮೀನ್ ಕಂದಾಯದ ಬಾಕಿಗಳನ್ನು ವಸೂಲ್ಮಾಡಲು ಹಾಲಿ ಜಾರೀಲಿರತಕ್ಕ ಕಾನೂನ್ ಪ್ರಕಾರ ಯಾ ಆತನ ಜಾಮೀನ್ ದಾರ್ರ ಆಸ್ತಿಯನ್ನು ಜಫ್ತಿ ಹರಾಜು ಮಾಡುವದರಮೂಲಕ ವಸೂಲ್ಮಾಡಲ್ಪಡಬಹುದು.

(12) ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುಲ್ಮಾನೆ ವಿಧಿಸೋಣ, ಠೇವಣಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊ ಳ್ಳೋಣ, ಲೈಸೆನ್ಸು ರದ್ದುಮಾಡೋಣ, ಈ ಸಂದರ್ಭಗಳು ಹಾಲಿ ಜಾರೀಲಿರುವ ಕಾನೂನ್ ಪ್ರಕಾರ ಶಿಕ್ಷಿಸಲ್ಪಡತಕ್ಕ ಯಾವ ತಪ್ಪಿತಕ್ಕಾದರೂ ಲೈಸೆನ್ಸದಾರನನ್ನಾಗಲೀ ಯಾ ಆತನ ಏಜಂಟನ್ನಾಗಲೀ ಯಾ ಆತನ ನೌಕರರನ್ನಾಗಲೀ ಅಪಾದಿಸಿ ದರ್ಯಾಫ್ತಿ ಕ್ರಮ ನಡಿಸಲು ಆತಂಕಪಡಿಸುವವೆಂದು ಭಾವಿಸಲ್ಪಡಕೂಡದು.

ಟಿಪ್ಪಣಿ:—ಬಾರಿಬಾರಿಗೂ ಲೈಸೆನ್ಸಿನ ಷರತ್ತುಗಳಿಗೆ ವಿರೋಧವಾಗಿ ನಡೆಸಿದ ತಪ್ಪಿತಗಳಿಗೆ ಬಾರಿಬಾರಿಗೂ ಜುಲ್ಮಾನೆ ಹಾಕಲ್ಪಡತಕ್ಕದ್ದು.

ತಾರೀಖು 14ನೆ ಏಪ್ರಿಲ್ 1904.

ನಂ. ಫೈ. 1826, ಮೈಸೂರು ಸರ್ವಿಸ್ ರೆಗ್ಯುಲೇಷನ್ಗಳ 18ನೇ ಆರ್ಟಿಕಲ್ ಅನುಸರಿಸಿ ಚಿತ್ರದುರ್ಗ ಡಿಸ್ಟ್ರಿಕ್ಟಿನ ಟ್ರೆಜರಿ ಅಸಿಸ್ಟೆಂಟ ಕಮಿಷನರಾದ ರಾ|| ಬಿ. ವೆಂಕೋಬರಾಯರಿಗೆ 1904ನೆ ಏಪ್ರಿಲ್ 8ನೆ ತಾರೀಖಿನ ಲಾಗಾಯತು ಯಾ ಅವರು ಉಪ ಯೋಗಿಸಿಕೊಳ್ಳುವ ಇತರ ತಾರೀಖಿನಿಂದ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

2. ಅಸಿಸ್ಟೆಂಟ ಕಮಿಷನರಾದ ಮ|| ಎ. ಸುಬ್ರಮಣ್ಯ ಅಯ್ಯರ್ ಯವರು ತಮ್ಮ ಕೆಲಸದೊಂದಿಗೆ, ಮೇಲ್ಕಂಡವರು ರಜಾ ದಲ್ಲಿರುವ ಕಾಲದಲ್ಲಿ ಯಾ ಇತ್ತೋದು ಹುಕುಂ ಕೊಡುವ ಪರಿಯಂತ, ಡಿಸ್ಟ್ರಿಕ್ಟು ಟ್ರೆಜರಿಯ ಚಾರ್ಜಿನಲ್ಲಿರತಕ್ಕದ್ದು.

ಹುಕುಂ ಮೇರೆಗೆ,

ಎಲ್. ಅನಂತಸ್ವಾಮಿರಾವ್,

ಜನರಲ್ ಮ ರೆವಿನ್ಯೂ ಇಲಾಖೆಗಳ ಗವರ್ನ್ಮೆಂಟ್ ಅಫಿಷಿಯೇಟಿಂಗ್ ಸೆಕ್ರೆಟರಿ.

ಫಾರೆಸ್ಟು.

ಇಸ್ತಿಹಾರ್ನಾಮೆ.

ತಾರೀಖು 29ನೆ ಮಾರ್ಚಿ 1904.

ನಂ. 746—7899, ಸ್ 1900ನೆ ಇಸವಿ XIನೆ ನಂಬರ್ ಮೈಸೂರ ಫಾರೆಸ್ಟು ರೆಗ್ಯುಲೇಷನಿನ 76ನೆ ಸೆಕ್ಷರ್ನ ನಿಯಮಗಳನುಸರಿಸಿ ಶ್ರೀಮನ್ ಮಹಾರಾಜಾ ಸರ್ಕಾರದವರು ಇದರಡೀ ಕಂಡ ಆಫಿಸರುಗಳಿಗೆ ಅವರವರ ಹೆಸರುಗಳಿಗೆದುರಾಗಿ ನಮೂದಿಸಲ್ಪಟ್ಟ ಅಧಿಕಾರಗಳನ್ನು ಕೊಟ್ಟಿರುತ್ತಾರೆ:—

ಸ್ 1901ನೆ ಜನವರಿ 21ನೆ ಮರ್ಕ್ಯಂ 460—ಫಾ. ಫೈ. 15–1900ನೆ ನಂಬರ್ ಇಸ್ತಿಹಾರ್ನಾಮೆಯ IIIನೆ ಕ್ಲಾಸನ್ನು ನೋಡತಕ್ಕದ್ದು.

ಆಫಿಸರುಗಳ ಹೆಸರು.	ಹುದ್ದೆ.	ರೆಗ್ಯುಲೇಷನಿನ ಸೆಕ್ಷನ್.	ಅಧಿಕಾರಗಳ ಸ್ವಭಾವ.
ಮ॥ ಜೆ. ಜೆ. ಮರ್ಕಟೀರೆಯವರು.	ಫಾರೆಸ್ಟ್ ಅಸಿಸ್ಟೆಂಟ ಕನ್ಸರವೇಟರ್.	26 C.	ಸ್ಟೇಟ್ ಫಾರೆಸ್ಟಿನಲ್ಲಿ ಕೃತ್ಯಗಳನ್ನು ನಡಿಸಲು ಅಪ್ಪಣೆ ಕೊಡುವದಕ್ಕೆ ಅಧಿಕಾರ
,, ಹೆಚ್. ಶ್ರೀನಿವಾಸರಾಯರು	ಡಿಟೋ	53	ಜಫ್ತಿ ಮಾಡಲ್ಪಟ್ಟ ಸೊತ್ತನ್ನು ಖುಲಾಸೆ ವಗೈರೆ ಮಾಡಲು ಹುಕುಂ ಮಾಡುವದಕ್ಕೆ ಅಧಿಕಾರ
		59	ತಕ್ಸೀರುಗಳನ್ನು ರಾಜಿಯಿಂದ ವ್ಯವಸ್ಥೆ ಮಾಡಲು ಅಧಿಕಾರ
,, ಹೆಚ್. ರಾಮಯ್ಯನವರು ..	ಫಾರೆಸ್ಟ್ ಸಬ್ ಅಸಿಸ್ಟೆಂಟ ಕನ್ಸರವೇಟರ್.	65	(1) (a) ಯಾವ ಜಮೀನಿನಲ್ಲಾದರೂ ಪ್ರವೇಶಿಸಿ ಅದನ್ನು ಸರ್ವೆ ಮೊದಲಾದವುಗಳನ್ನು ಮಾಡಲು ಅಧಿಕಾರ
,, ಎ. ನರಸಿಹ್ಮಮೂರ್ತಿರಾಯರು.	ಡಿಟೋ	65	(1) (b) ಸಾಕ್ಷಿಗಳ ಹಾಜರಿಯನ್ನು ಬಲಾತ್ಕರಿಸುವದಕ್ಕೆ ಸಿವಿಲ್ ಕೋರ್ಟಿನ ಅಧಿಕಾರ
,, ಕೆ. ಮುತ್ತಯ್ಯನವರು ...	ಡಿಟೋ	65	(1) (d) ಫಾರೆಷ್ಟು ತಕ್ಸೀರಗಳನ್ನು ವಿಚಾರಣೆ ಮಾಡಿ ಸಾಕ್ಷ್ಯವನ್ನು ಬರಮಾಡಿಕೊಂಡು ರಿಕಾರ್ಡು ಮಾಡಲು ಅಧಿಕಾರ

ತಾರೀಖು 18ನೆ ಏಪ್ರೆಲ್ 1904.

ನಂ. 784—8601, ಕೋಲಾರ ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರಾದ ಮ॥ ಎಸ್. ಎ. ಬಾಪುರಾಯರಿಗೆ 1904ನೆ ಫೆಬ್ರವರಿ 4ನೆ ಮರ್ಕ್ಯಂ 515–16—6301-2ನೆ ನಂಬರ್ ಗವರ್ನಮೆಂಟಿನ ಪ್ರೊಸೀಡಿಂಗ್ಸಿನಲ್ಲಿ ಕೊಟ್ಟಿದ್ದ 1 ತಿಂಗಳು 15 ದಿನಗಳ ಪ್ರಿವಿಲೇಜ್ ರಜಾ ಇನ್ನೂ 1 ದಿವಸ ಇದರಿಂದ ಜಾಸ್ತಿ ಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,
ಎಂ. ಮುತ್ತಣ್ಣ,
ಫಾರೆಸ್ಟ್ ಇಲಾಖೆಯ ಗವರ್ನಮೆಂಟ್ ಅಫಿಷಿಯೇಟಿಂಗ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ.

ಇಸ್ತಿಹಾರ್ನಾಮೆ.

ತಾರೀಖು 15ನೆ ಏಪ್ರೆಲ್ 1904.

ನಂ. 403—2312, ಚಿತ್ರದುರ್ಗ ಡಿವಿಜನಿಗೆ ಸೇರಿದ ಅಸಿಸ್ಟೆಂಟ ಇಂಜನಿಯರ್ ಮ॥ ಆರ್. ಎಸ್. ನವರತ್ನಯ್ಯವರಿಗೆ 1904ನೆ ಜನವರಿ 23ನೆ ಮರ್ಕ್ಯಂ 87—499ನೆ ನಂಬರಿ ಈ ಆಫೀಸಿನ ಇಸ್ತಿಹಾರ್ನಾಮೆಯಲ್ಲಿ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಟ್ಟಿದ್ದ 2 ತಿಂಗಳುಗಳ ರಜಾ 3 ತಿಂಗಳುಗಳ ವರಿವಿಗೆ ಜಾಸ್ತಿ ಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,
ಡಬ್ಲ್ಯೂ. ಎಸ್. ಟ್ರೇಲ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ ವರ್ಕ್ಸ ಇಲಾಖೆಯ ಮೈಸೂರ ಗವರ್ನಮೆಂಟ ಅಂಡರ್ ಸೆಕ್ರೆಟರಿ.

ಜಿಯೋಲಾಜಿಕಲ್.

ಇಸ್ತಿಹಾರ್ನಾಮೆ.

ತಾರೀಖು 14—16ನೆ ಏಪ್ರೆಲ್ 1904.

ನಂ. 603—ಎಸ್., ಸ್ 1904ನೆ ಮಾರ್ಚಿ 16ನೆ ಮರ್ಕ್ಯಂ 562—ಎಸ್. ನೆ ನಂಬರ್ ಗವರ್ನಮೆಂಟಿನ ಜಿಯೋಲಾಜಿಕಲ್ ಇಸ್ತಿಹಾರ್ನಾಮೆಗೆ ಬದಲಾಗಿ ಮೈಸೂರು ಸೀಮೆಯ ಗಣಿಗಳ ಇನ್ಸ್ಪೆಕ್ಟರಾದ ಮ॥ ಆರ್. ಬೋಕಟಿಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್ಗಳ XIII Aನೆ ಅಧ್ಯಾಯವನ್ನನುಸರಿಸಿ ಸ್ವಂತ ಕೆಲಸಗಳ ಮೇಲಣ ಸ್ಪೆಷಿಯಲ್ ರಜಾದೊಂದಿಗೆ ಸೇರಿರುವ ಅದೇ ರೆಗ್ಯುಲೇಷನಿನ 188ನೆ ಆರ್ಟಿಕಲ್ ಅನುಸರಿಸಿ 23 ದಿನಗಳ ಪ್ರಿವಿಲೇಜ್ ರಜಾ ಒಟ್ಟು 6 ತಿಂಗಳ ರಜಾ, 1904ನೆ ಮೇ 26ನೆ ತಾರೀಖಿನ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಕೊಡಲ್ಪಟ್ಟಿರುತ್ತೆ.

ಹುಕ್ಕುಂ ಬಮೋಜಿಬ್,
ಡಬ್ಲ್ಯೂ. ಎಫ್. ಸ್ಮಿತ್,
ಜಿಯೋಲಾಜಿಕಲ್ ಇಲಾಖೆಯ ಗವರ್ನಮೆಂಟ ಸೆಕ್ರೆಟರಿ.

(7) ಲೈಸೆನ್ಸ್ದಾರನು 1904ನೇ ಇಸವಿ ಜುಲೈ ತಾರೀಖಿನಲ್ಲಿ ಅಂಗಡಿಯಲ್ಲಿ ಹಾಜರಿರತಕ್ಕ ಹಳೇ ಲೈಸೆನ್ಸ್ದಾರನ ಬಾಬತು ದಾಸ್ತಾನ್ ಮದ್ಯವನ್ನು ಎಕ್ಸೈಜ್ ಕಮಿಷನರ್ ಸಾಹೆಬರವರು ಗೊತ್ತು ಮಾಡಬಹುದಾದ ಪರಿಹಾರ ದ್ರವ್ಯವನ್ನು ಹಳೇ ಗುತ್ತಿಗೆ ದಾರನಿಗೆ ಪಾವತಿಮಾಡಿ ತೆಗದುಕೊಳ್ಳಲು ಗುರಿಯಾಗತಕ್ಕದ್ದು.

(8) ಲೈಸೆನ್ಸ್ದಾರನು ಲೈಸೆನ್ಸ್ ಪಡದಿರುವ ಯಾವ ಆವರಣದಲ್ಲಾದರೂ ಎಕ್ಸೈಜ್ ಕಮಿಷನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಪ್ರಮಾಣದ ಅಳತೇ ಸಾಧನಗಳನ್ನು ಇಟ್ಟುಕೊಂಡು ಉಪಯೋಗಿಸತಕ್ಕದ್ದು. ಲೈಸೆನ್ಸ್ ಪಡದ ಅಂಗಡಿಗಳನ್ನು ತನಿಖೆಮಾಡಲು ಅಧಿಕಾರವುಳ್ಳ ನೌಕರರು ಆವರಣವನ್ನು ತನಿಖೆ ಮಾಡುವದಕ್ಕೂ ಉಪಯೋಗಿಸಲ್ಪಡುವ ಅಳತೇ ಸಾಮಾನುಗಳನ್ನೂ ಮತ್ತು ಮದ್ಯವನ್ನು ಪರೀಕ್ಷೆ ಮಾಡುವದಕ್ಕೂ ಅಂಗಡಿಯಲ್ಲಿಟ್ಟಿರುವ ಲೆಖ್ಖವನ್ನು ಕೇಳಿ ತನಿಖೆ ಮಾಡುವುದಕ್ಕೂ ಅಧಿಕಾರವುಳ್ಳವರಾಗಿರುತ್ತಾರೆ.

(9) ಇಜಾರೆಯು ಎಕ್ಸೈಜ್ ಕಮಿಷನರ್ ಸಾಹೆಬರವರ ಅಪ್ಪಣೆ ಶಿವಾಯಿ ಮಾರಿಕೆಯಿಂದಲಾಗಲಿ ದಾನಮೂಲಕವಾಗಿ ಆಗಲೀ ಅಥವಾ ಇತರ ವಿಧವಾಗಿಯಾಗಲೀ ವರ್ಗವಾಗತಕ್ಕದ್ದಲ್ಲ. ಯಾ ಒಳಗೇಣಿ ಆಗತಕ್ಕದ್ದಲ್ಲ ಯಾ ಡೆಪ್ಯುಟಿ ಕಮಿಷರವರು ಹಾಗೆ ಹುಕುಂ ಮಾಡಿದ್ದಲ್ಲಿ ಅವರ ಅನುಮತಿ ಶಿವಾಯಿ ಯಾವ ಹಕ್ಕಿನ ಆಳೀತಕ್ಕಾದರೂ ಯಾವ ಮುತಾಲೀಕನಿಗೂ ಮೊಕರರಾಗಕೂಡದು. ಮುತಾಲೀಕನೊಡನೆ ಗೊತ್ತುಮಾಡಿಕೊಂಡಿರುವ ಎಲ್ಲಾ ಒಡಂಬಡಿಕೆಗಳು ಕರಾರು ಮಾಡಿಕೊಂಡ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಡೆಪ್ಯುಟಿ ಕಮಿಷನರವರಲ್ಲಿ ಇಡಲ್ಪಡತಕ್ಕದ್ದು.

(10) ತೆಗದುಕೊಳ್ಳಲ್ಪಟ್ಟದ್ದು ಅಂಗಡಿಗಳಿಗೆ ಬರುವ ರಾಜೀನಾಮೆಗಳನ್ನು ಡೆಪ್ಯುಟಿ ಕಮಿಷನರವರು ವಿಚಾರಮಾಡದೆ ತಿರಸ್ಕರಿಸುವರು.

(11) ಲೈಸೆನ್ಸ್ದಾರನು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನು ಮತ್ತು ನಿಬಂಧನೆಗಳಿಗೂ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಕಾನೂನುಗಳನ್ನನುಸರಿಸಿ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು, ಮತ್ತು ಸರಿಪಡಿಸಲು ಯಾ ಹೊಸ ಲೈಸೆನ್ಸ್ ಕೊಡುವ ಕಾರಣಗಳಿಂದ ಲೈಸೆನ್ಸನ್ನು ಕೇಳಿದ್ದಲ್ಲಿ ಕೊಟ್ಟುಬಿಡತಕ್ಕದ್ದು.

(12) ಡೆಪ್ಯುಟಿ ಕಮಿಷನರವರು ಆವರಿಗೆ ಯುಕ್ತ ಕಂಡಾಗ ಅಂಗಡಿಗಳನ್ನು ಮುಚ್ಚಿಸಬಹುದು. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ 200 ಗಜಗಳ ಒಳಗಾಗಿ ವರ್ಗಾಯಿಸಬಹುದು. ಎಕ್ಸೈಜ್ ಕಮಿಷನರ್ ಸಾಹೆಬರವರ ಅಪ್ಪಣೆಯನ್ನು ಪಡದು ಹೊಸ ಅಂಗಡಿಗಳನ್ನು ಇಡಿಸಬಹುದು.

(13) ಅಂಗಡಿಗಳ ಸಮುದಾಯವನ್ನು ಕೊಂಡುಕೊಂಡಿರುವರು ಎಕ್ಸೈಜ್ ಕಮಿಷನರವರ ವಿಶೇಷ ಅಪ್ಪಣೆಯನ್ನು ಪಡದು ಸರಿಯಾದ ಅಧಿಕಾರಿಗಳಿಂದ ಲೈಸೆನ್ಸ್ ಪಡೆದು ಕೋಠಿಯನ್ನು ಇಟ್ಟುಕೊಂಡು ಅಲ್ಲಿಗೆ ಬಾಂಡೆಡ್ ಕೋಠಿಯಲ್ಲಿ ವಿಕ್ರಯಿಸಿರುವ ಸರಕನ್ನು ತೆಗೆಸಿಕೊಂಡು ಹೋಗಿ ಅಲ್ಲಿಂದ ತಮ್ಮ ಅಂಗಡಿಗಳಿಗೆ ಅವಶ್ಯಕವಾಗಿರುವ ಸರಬರಾಯಿಯನ್ನು ಮಾಡಿಕೊಳ್ಳಬಹುದು. ಇಂಥಾ ಅಪ್ಪಣೆಯನ್ನು ತಿರಸ್ಕರಿಸಲು ಎಕ್ಸೈಜ್ ಕಮಿಷನರ್ ಸಾಹೇಬರವರು ಸ್ವಾತಂತ್ರವುಳ್ಳವರಾಗಿರುತ್ತಾರೆ.

(14) ಅಂಗಡಿಯ ಯಾ ಅಂಗಡಿ ಸಮುದಾಯದ ಲೈಸೆನ್ಸ್ದಾರನು ತನ್ನ ಲೈಸೆನ್ಸಿನ ವಾಯಿದೆವಳಗೆ ಅಲ್ಲಿಂದ 5 ಮೈಲಿ ಒಳಗೆ ಶೇಂದಿ ಮಾರತಕ್ಕ ಒಟ್ಟು ಸ್ವಾತಂತ್ರ್ಯದ ಹಕ್ಕಿನ ವಿಷಯದಲ್ಲಿ ಯಾವ ವಿಧವಾದ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಅಥವಾ ಅದ್ದೇ ಯಲ್ಲೆಯೊಳಗೆ ಶೇಂದಿ ಬಿಕರೀ ಮಾಡತಕ್ಕ ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ವಹಿಸಿರತಕ್ಕ ಯಾವ ಮನುಷ್ಯನನ್ನೂ ಒಳದೇಶದ ಮದ್ಯವನ್ನು ಮಾರುವ ತನ್ನ ಒಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಪಾಲುದಾರನನ್ನಾಗಿ ಆಗಲಿ ಯಾ ಸಂಬಂಧವುಳ್ಳವನನ್ನಾಗಿ ಆಗಲಿ ಇಟ್ಟುಕೊಳ್ಳಕೂಡದು; ಅಥವಾ ತನ್ನ ಲೈಸೆನ್ಸಿನ ವಾಯಿದೆ ಅಂದರ್ವಾರ್ ಎಕ್ಸೈಜ್ ಕಮಿಷನರವರ ಲಿಖಿತಮೂಲಕವಾದ ಹುಕುಂ ಇಲ್ಲದೆ ಬ್ರಿಟಿಷ ಸರ್ಕಾರದ ಕೈಗೆಳಗಿರುವ ಮದರಾಸ್ ಯಾ ಬೊಂಬಾಯಿ ರಾಜ್ಯಾಧಿಪತ್ಯದ ಯಾವ ಡಿಸ್ಟ್ರಿಕ್ಟುಗಳಲ್ಲಾಗಲಿ, ಯಾ ಇತರ ಪರಾಯಿದೇಶದ ಯಾ ಶೀಮೆಯಲ್ಲಾಗಲೀ, ಬೆಂಗಳೂರು ಸಿವಿಲ್ ಮಿಲಿಟೆರಿ ಸ್ಟೇಷನ್ನಲ್ಲಾಗಲಿ ಲೈಸೆನ್ಸ್ದಾರನು ಯಾವದೊಂದು ಸಾರಾಯಿ ಗುತ್ತಿಗೆಯಲ್ಲಿ ಪ್ರತ್ಯಕ್ಷವಾದ ಯಾ ಪರೋಕ್ಷವಾದ ಸಂಬಂಧವನ್ನು ಇಟ್ಟುಕೊಂಡಿರಕೂಡದು.

(15) ಕ್ರಮವಾಗಿ ನಂಬರ್ ಹಾಕಲ್ಪಟ್ಟ ಪುಟಗಳುಳ್ಳ ಒಂದು ಇನ್ಸ್ಪೆಕ್ಷನ್ ನೋಟ್ ಪುಸ್ತಕವನ್ನು ತನಿಖೆ ಮಾಡತಕ್ಕ ಆಫಿಸರುಗಳ ಷರಾಗಳಿಗೋಸ್ಕರ ಇಟ್ಟುಕೊಳ್ಳತಕ್ಕದ್ದಲ್ಲದೆ ಸದರೀ ಬುಕ್ಕನ್ನು ರೇಂಜ್ ಛಾರ್ಜಿನಲ್ಲಿರುವ ಇನ್ಸ್ಪೆಕ್ಟರೇ ಆಗಲಿ ಯಾ ಅವರಿಂದ ಅಧಿಕಾರ ಪಡೆದಿರುವ ಇನ್ನಾವ ಆಫಿಸರರೇ ಆಗಲಿ ರಸೀತಿಕೊಟ್ಟಲ್ಲಿ ಅವರಿಗೆ ಕೊಡತಕ್ಕದ್ದು.

(16) ಎಕ್ಸೈಜ್ ರೆಗ್ಯುಲೇಷನ್ ಯಾ ಓಪಿಯಂ ಆಕ್ಟಿಗೆ ವಿರೋಧವಾಗಿ ಯಾ ಹಾಲಿ ಜಾರಿಯಲ್ಲಿರುವ ಮತ್ಯಾವ ನಿಬಂಧನೆಗೆ ವಿರೋಧವಾಗಿ ನಡೆದ ಯಾವದಾದರೂ ತಕ್ಸೀರಿಗೆ ಲೈಸೆನ್ಸ್ದಾರ ಮ್ಯಾಜಿಸ್ಟ್ರೇಟರ ಮುಂದೆ ಷಯಾಫ್ತಿಯಾ

ತಪ್ಪು ಸಾಬೀತಾಗಿ ಡೆಪ್ಯುಟಿ ಕಮ್ಮಿಷನರವರಿಗೆ ಆತನು ಲೈಸೆನ್ಸ್‌ದಾರನಾಗಿರಲು ನಾಲಾಯಖುಯೆಂದು ಕಂಡು ಬಂದಲ್ಲಿ ಆತನನ್ನು ನಷ್ಟಕ್ಕೆ ಗುರಿಮಾಡಿ ಆತನ ಲೈಸೆನ್ಸ್ ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಟ್ಟಂತೆ ಹುಕುಂ ಮಾಡುವುದಕ್ಕೆ ಯಾ ಹಕ್ಕನ್ನು ಮಾರುವುದಕ್ಕೂ ಯಾ ಅನ್ಯಥಾ ವಿಲೇವಾರಿ ಮಾಡುವುದಕ್ಕೂ ಡೆಪ್ಯುಟಿ ಕಮ್ಮಿಷನರವರಿಗೆ ನ್ಯಾಯವಾಗಿರತಕ್ಕದ್ದು.

(17) ಲೈಸೆನ್ಸ್‌ದಾರ್ರಿಂದ ಬರಬೇಕಾದ ಮೊಬಲಗುಗಳೆಲ್ಲಾ ಠೇವಣಿ ಮೊಬಲಗಿನಲ್ಲಿ ವಜಾ ಮಾಡಲ್ಪಡಬಹುದು. ಅಥವಾ ಜಮೀನ್ ಕಂದಾಯದ ಬಾಕಿಗಳನ್ನು ವಸೂಲ್ಮಾಡಲು ಹಾಲಿ ಜಾರೀಲಿರತಕ್ಕ ಕಾನೂನ್‌ಪ್ರಕಾರ ಯಾ ಆತನ ಜಾಮೀನ್‌ದಾರ್ರ ಆಸ್ತಿಯನ್ನು ಜಫ್ತಿ ಹರಾಜ್ ಮಾಡುವದರ ಮೂಲಕ ವಸೂಲ್ಮಾಡಲ್ಪಡಬಹುದು.

(18) ಲೈಸೆನ್ಸ್‌ದಾರ ಯಾ ಬಿಕರೀದಾರ ಯಾ ಬಿಕರೀದಾರರು ಯಾವ ತರಹದ ಸಾರಾಯಿಯನ್ನಾದರೂ ಲೈಸೆನ್ಸ್‌ಪಡದ ಯಾವ ಅಂಗಡಿ ಯಾ ಆವರಣದಿಂದ ಹೊರಗೆ ನ್ಯಾಯವಾದ ಪರ್ಮಿಟಿಯಿಲ್ಲದೆ ತೆಗದುಕೊಂಡು ಹೋಗುವದಕ್ಕೆ ಯಾರೊಬ್ಬರಿಗೂ ಒಂದು ರೆಪ್ಯುಟೆಡ್ ಕ್ವಾರ್ಟ್ಸೀಸೆಗಿಂತ ಹೆಚ್ಚಾಗಿ ಕೊಡಲೂಕೂಡದು, ಮಾರಲೂಕೂಡದು.

(19) ಅಂಗಡಿಕಾರರು ಯಾವ ಯೂರೋಪಿಯನ್ ನಾನ್‌ಕಮ್ಮಿಷನ್ಡ್ ಆಫಿಸರ್, ಪ್ರೈವೆಟ್ ಅಥವಾ ಸೋಲ್ಜರಿಗಾದರೂ ಅಥವಾ ಸೈನ್ಯಗಳ ಮೊಕ್ಕಾಂಗಳೊಡನೆ ಹೋಗುವ ಯಾವ ಯೂರೋಪಿಯನ್ ಯಾ ಯೂರೇಷಿಯನ್‌ಗಾದರೂ ಅಥವಾ ಮೇಲೆ ಹೇಳಲ್ಪಟ್ಟ ಜನಗಳ ಸಂಸಾರಗಳ ಪೈಕಿ ಯಾರೊಬ್ಬರಿಗಾದರೂ ಕಮ್ಯಾಂಡಿಂಗ್ ಆಫೀಸರವರ ಅಥವಾ ಈ ವಿಷಯದಲ್ಲಿ ಅವರಿಂದ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯ ಲಿಖಿತಮೂಲಕವಾದ ಅಪ್ಪಣೆಯಿಲ್ಲದೆ ಯಾವ ಸಾರಾಯಿಯನ್ನೂ ಮಾರಲೂ ಕೂಡದು, ಕೊಡಲೂಕೂಡದು. ಮತ್ತು ಅವರು ಯಾವ ಯೂರೋಪಿಯನ್ ಯಾ ಯೂರೇಷಿಯನ್ ನಾವಿಕನಿಗೂ ಮತ್ತು ಉದ್ಯೋಗದಮೇಲಿರುವ ಕಾಲದಲ್ಲಿ ಯಾವ ಶಿಪಾಯಿಗೂ ಪೋಲಿಸ್ ಅಥವಾ ಯಕ್ಸೈಸ್ ನೌಕರನಿಗೂ ರೈಲ್ವೆ ಕಂಪೆನಿಯ ನೌಕರನಿಗೂ ಮತ್ತು ಪೋಲಿಸ್ ಮೊಹಸಲಿಯಲ್ಲಿರುವ ಯಾವ ಯೂರೋಪಿಯನ್ ಪೋಲೀ ಮನುಷ್ಯನಿಗೂ ಅಥವಾ ಯಾವ ಹುಚ್ಚುಮನುಷ್ಯನಿಗೂ ಹನ್ನೆರಡು ವರ್ಷಗಳ ವಯಸ್ಸಿನೊಳಗಾಗಿ ಇರುವ ಯಾವ ಮಗುವಿಗೂ ಅಂಗಡಿಯ ಆವರಣದಲ್ಲಿ ಉಪಯೋಗಿಸಲಿಕ್ಕೆ ಸಾರಾಯಿಯನ್ನು ಮಾರಕೂಡದು ಯಾ ಕೊಡಕೂಡದು; ಶಿವಾಯಿ ಸಾರಾಯಿಯನ್ನು ಸಾಲವಾಗಿ ಮಾರಕೂಡದು ಅಥವಾ ಸಾಲವಾಗಿ ಮಾರಕೂಡದು.

(20) ಲೈಸೆನ್ಸ್‌ದಾರ ಯಾ ಬಿಕರೀದಾರ ಅಥವಾ ಬಿಕರೀದಾರರು ಸಾರಾಯಿಯ ಖರೀದಿ ಹಣಕ್ಕೆ ಯಾವ ವಿಧವಾದ ಪದಾರ್ಥವನ್ನು ಬದಲಿಯಾಗಿಯಾದರೂ ಅಡಮಾನವಾಗಿ ಆದರೂ ತೆಗೆದುಕೊಳ್ಳಕೂಡದು. ಸಾರಾಯಿಗೆ ನಗದು ಹಣವೇ ತೆಗೆದುಕೊಳ್ಳತಕ್ಕದ್ದು. ಮತ್ತು ನಗದು ಹಣವಲ್ಲದೆ ಇನ್ನ್ಯಾವ ಪದಾರ್ಥವನ್ನಾದರೂ ಖರೀದಿ ಬದಲಾಗಿ ಬಂದಲ್ಲಿ ಸಮೀಪದಲ್ಲಿ ಇರುವ ಮೇಜಸ್ಟ್ರೇಟರಿಗೇ ಆಗಲಿ ಅಥವಾ ಪೋಲಿಸ್ ಆಫೀಸರಿಗೇ ಆಗಲಿ ವರ್ತಮಾನ ಕೊಡತಕ್ಕದ್ದು. ಅವರು ಎಕ್ಸೈಜ್ ಉದ್ಯೋಗಸ್ಥರಲ್ಲಿ ಹಣಸಂಬಂಧವಾದ ಲೇವಾದೇವಿಯನ್ನು ಇಟ್ಟುಕೊಳ್ಳಕೂಡದು.

(21) ಅಂಗಡಿಯಲ್ಲಿ ಮಾರಾಟಕ್ಕಾಗಿ ಇಡಲ್ಪಡುವ ಮತ್ತು ಮಾರಲ್ಪಡುವ ಸಾರಾಯಿಯು ಬೆರಿಸದ ಮತ್ತು ನೀರುಹಾಕದೆ ಇಟ್ಟಿರತಕ್ಕದ್ದು; ಮತ್ತು ಕೋಠಿಯಿಂದ ರವಾನಿಸಲ್ಪಟ್ಟ ತರಹದಲ್ಲಿಯೂ ಮತ್ತು ಜೋರಿನಲ್ಲಿಯೂ ಇರಬೇಕು. ಅದರ ಮತ್ತನ್ನುಂಟುಮಾಡತಕ್ಕ ಶಕ್ತಿಯನ್ನು ವೃದ್ಧಿಮಾಡುವುದಕ್ಕಾಗಲೀ ಅಥವಾ ಇನ್ನ್ಯಾವ ಕಾರಣಗಳಿಗಾಗಲೀ ದೇಹಕ್ಕೆ ವಿರುದ್ಧವಾದ ಯಾವ ವಸ್ತುಗಳನ್ನೂ ಅದರಲ್ಲಿ ಬೆರಸಕೂಡದು. ಅಂಗಡಿಗಳನ್ನೂ ಕೋಠಿಗಳನ್ನೂ ತನಿಖೆ ಮಾಡುವುದಕ್ಕೆ ಅಧಿಕಾರವುಳ್ಳ ಎಲ್ಲಾ ಆಫಿಸರರು ಕುಡಿಯುವದಕ್ಕಾಗಲೀ ಉಪಯೋಗಿಸುವದಕ್ಕಾಗಲೀ ನಾಲಾಯಖಾಗಿರತಕ್ಕ ಮದ್ಯವನ್ನು ನಿಲ್ಲಿಸುವದಕ್ಕೆ ಡೆಪ್ಯುಟಿ ಕಮ್ಮಿಷನರುಗಳು ಎಕ್ಸೈಜ್ ಕಮ್ಮಿಷನರವರು, ಡೆಪ್ಯುಟಿ ಎಕ್ಸೈಜ್ ಕಮ್ಮಿಷನರವರು ಎಕ್ಸೈಜ್ ಅಸಿಸ್ಟೆಂಟ್ ಕಮ್ಮಿಷನರುಗಳು ಅಂಥಾ ಮದ್ಯವನ್ನು ನಾಶಪಡಿಸುವದಕ್ಕೂ ಅಧಿಕಾರವುಳ್ಳವರಾಗಿರುತ್ತಾರೆ.

(22) ಷರಾಬ್ ಬಿಕರೀ ಆಗುವ ದುಕಾನಿನಲ್ಲಾಗಲೀ ಯಾ ಲೈಸೆನ್ಸ್‌ದಾರ ಯಾ ಬಿಕರೀದಾರನ ಬಳಿಯಲ್ಲಾಗಲಿ ಯಾ ಅವನ ಸ್ವಾಧೀನದಲ್ಲಾಗಲಿ ಯಾ ಅಂಥಾವನ ದುಕಾನಿನ ನೌಕರರ ಬಳಿಯಲ್ಲಾಗಲೀ, ಅಥವಾ ಅವರ ಸ್ವಾಧೀನದಲ್ಲಾಗಲೀ, ಷರಾಬ್ ವಿನಹ ಇತರ ಯಾವ ಮದ್ಯವಾಗಲಿ ನೀರೇಆಗಲಿ ಯಾ ಇತರ ಪಾನವಾಗಲೀ ಎಷ್ಟುಮಟ್ಟಿಗೂ ಇರತಕ್ಕದ್ದಲ್ಲವು, ಮತ್ತು ಮಾರತಕ್ಕದ್ದಲ್ಲವು.

(23) ಚೋರಿ ಮಾಡುವ ಜನರು, ಕಳ್ಳರು, ಪೋಲಿ ಜನಗಳು, ದೊಂಬಿ ಮಾಡತಕ್ಕವರು, ಸೂಳೆಯರು, ಶಿಪಾಯಿಗಳು ಅಥವಾ ಫೌಜು ಬಿಟ್ಟವರೆಂದು ತಿಳಿದುಬಂದ ಅಥವಾ ನಂಬಲ್ಪಡಬಹುದಾದ ಇತರ ಮನುಷ್ಯರು, ಇವರುಗಳಿಗೆ ಅಂಗಡಿಯಲ್ಲಿ ಸ್ಥಳ ಕೊಡಕೂಡದು. ಅದರಲ್ಲಿ ಜೂಜು ಮುಂತಾದ ದುರ್ನಡತೆಗಳನ್ನು ಅಡ್ಡೀ ಮಾಡತಕ್ಕದ್ದು. ಗುಮಾನಿ ಜನಗಳು ಅಲ್ಲಿಗೆ ಬರುವ ವರ್ತಮಾನವನ್ನು ಮೇಜಸ್ಟ್ರೇಟರಿಗೆ ಅಥವಾ ಪೋಲಿಸ್ ಆಫಿಸರರಿಗೆ ಕೊಡತಕ್ಕದ್ದು. ಯಾವ ಅಂಗಡಿಯಲ್ಲಿಯೂ ರಾತ್ರಿ ಹೊತ್ತಿನಲ್ಲಿ ಯಾರಿಗೂ ಸ್ಥಳ ಕೊಡಕೂಡದು.

(24) ಲೈಸೆನ್ಸ್‌ದಾರನು ತನ್ನ ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ಒಂದು ಹಲಿಗೆಮೇಲೆ ತನ್ನ ಹೆಸರು, ತನ್ನ ಅಂಗಡಿಯ ನಂಬರ್, ತಾನು ಯಾವ ಪದಾರ್ಥಗಳ ವ್ಯಾಪಾರ ಮಾಡುವುದಕ್ಕೆ ಲೈಸೆನ್ಸ್ ಪಡೆದಿರುತ್ತಾನೋ ಆ ಪದಾರ್ಥಗಳ ಹೆಸರು ಇವುಗಳನ್ನು ದೇಶಭಾಷೆಯಲ್ಲಿ ಸ್ಪಷ್ಟವಾಗಿ ಛಾಪಿಸಿ ತಗಲಹಾಕತಕ್ಕದ್ದು. ಅಂಗಡಿಯ ಒಳಭಾಗದಲ್ಲಿ ಎಲ್ಲರಿಗೂ ಕಾಣುವಂತೆ ಲೈಸೆನ್ಸನ್ನು ತಗಲಹಾಗತಕ್ಕದ್ದು.

(25) ಪ್ರತಿದಿವಸವೂ ಜಮಾ ಖರ್ಚು ಆಗುವ ಮದ್ಯದ ಸಾಚಾ ಲೆಖ್ಖಗಳನ್ನು ವಿಧಾಯಕವಾಗಿರುವ ನಮೂನೆಯಲ್ಲಿ ಶಾಯಿಯಿಂದ ಬರೆದು ಇಡಬೇಕು. ಈ ಲೆಖ್ಖಗಳು ಪರ್ಮಿಟ್ಟುಗಳು ಅಚ್ಚಾಗಿರುವ ಪುಸ್ತಕಗಳ ರೀತಿಯಲ್ಲಿರಬೇಕು. ಇವುಗಳ ಅಸಲು ಖರೀದಿಯನ್ನು ಕೊಟ್ಟಲ್ಲಿ ಸ್ಥಳದ ಎಕ್ಸೈಜ್ ನೌಕರರಿಂದ ಸದರೀ ಪುಸ್ತಕಗಳನ್ನು ಪಡೆಯಬಹುದು. ಕೊಂಡುಕೊಳ್ಳಲ್ಪಡುವ ಸಾರಾಯಿಗೆ ಪರ್ಮಿಟ್‌ಗಳನ್ನೂ ಮತ್ತು ಖರ್ಚಾದಕ್ಕೆ ಕೌಂಟರ್ ಫಾಯಿಲ್ ಪರ್ಮಿಟ್‌ಗಳನ್ನೂ ಹುಷಾರಿನಿಂದ ಫೈಲು ಮಾಡತಕ್ಕದ್ದು. ಮುಂದಿನ ಖರ್ಚಿಗಾಗಿ ಖಾಲಿ ಪರ್ಮಿಟ್‌ಗಳನ್ನು ಸೈನ್ ಮಾಡುವದನ್ನು ನಿಷೇಧಿಸಿದೆ. ಸದರೀ ಲೆಖ್ಖಗಳು ಪರ್ಮಿಟ್‌ಗಳ ಕೌಂಟರ್ ಫಾಯಿಲ್‌ಗಳು ಭದ್ರವಾಗಿ ಇಡಲ್ಪಟ್ಟು ಇಜಾರೆ ಮುಗಿದ ತಕ್ಷಣ ಸ್ಥಳದ ಎಕ್ಸೈಜ್ ಆಫಿಸರವರಲ್ಲಿ ಕೊಡಲ್ಪಡತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು ಯಾ ಡೆಪ್ಯುಟಿ ಕಮ್ಮಿಷನರವರು ಮೊಕರ್ರಾ ಮಾಡುವ ಇತರ ಆಫಿಸರುಗಳೇ ಆಗಲಿ, ಅಸಿಸ್ಟೆಂಟ್ ಇನ್‌ಸ್ಪೆಕ್ಟರಿಗಿಂತಲೂ ಹುದ್ದೆಯಲ್ಲಿ ಕಮ್ಮಿಯಾಗಿರದ ಎಕ್ಸೈಜ್ ಆಫಿಸರುಗಳೇ ಆಗಲಿ ಕೇಳಿದ್ದಲ್ಲಿ ಸದರೀ ಲೆಖ್ಖಗಳನ್ನು ಹಾಜರ್ಪಡಿಸಬೇಕು. ಡೆಪ್ಯುಟಿ ಕಮ್ಮಿಷನರವರು ಅಥವಾ ಅಸಿಸ್ಟೆಂಟ್ ಇನ್‌ಸ್ಪೆಕ್ಟರಿಗಿಂತಲೂ ಹುದ್ದೆಯಲ್ಲಿ ಕಮ್ಮಿಯಾಗಿಲ್ಲದ ಎಕ್ಸೈಜ್ ಆಫಿಸರರು ಆಗಿಂದಾಗ್ಯೆ ಅಪೇಕ್ಷಿಸುವಂಥಾ ಯಾವ ಲೆಖ್ಖಗಳನ್ನಾಗಲೀ ವರ್ತಮಾನಗಳನ್ನಾಗಲೀ ಕೊಡಲಿಕ್ಕೆ ಲೈಸೆನ್ಸ್‌ದಾರನು ಬದ್ಧನಾಗಿರತಕ್ಕದ್ದು.

(26) ಈ ಕೆಳಗೆ ನಮೂದಿಸಿರುವ ದರಗಳಿಗೆ ಯಾ ಎಕ್ಸೈಜ್ ಡಿವಿಜನಲ್ ಆಫಿಸರರು ಸ್ಥಳದ ಸರಬರಾಯಿಗೆ ಅವಶ್ಯಕವಾಗಿರುವದೆಂದು ಅಭಿಪ್ರಾಯಪಡುವ ಮೊತ್ತಕ್ಕೆ ಕಮ್ಮಿಯಿಲ್ಲದಂತೆ ಯಾವಾಗಲೂ ಸರಕು ಹಾಜರು ಇರಬೇಕು.

	ಆರಕ್ ಸಾರಾಯಿ	ಷರಾ
1. ಎಲ್ಲಾ ಡಿಸ್ಟ್ರಿಕ್ಟ ಹೆಡ್‌ಕ್ವಾರ್ಟರ್‌ಗಳಲ್ಲು	2 ಗ್ಯಾಲನ್‌ಗಳು	
2. ಎಲ್ಲಾ ತಾಲ್ಲೂಕು ಮತ್ತು ಕೋಟೆ ಕಸಬಾದಲ್ಲು	1 ಗ್ಯಾಲನ್	
3. ಕೋಠಿಗೆ 5 ಮೈಲಿ ಫಾಸಲೆ ಒಳಗೆ ಇರತಕ್ಕ ಎಲ್ಲಾ ಗ್ರಾಮಗಳ ಅಂಗಡಿಗಳಲ್ಲೂ	½ ಗ್ಯಾಲನ್	
4. ಕೋಠಿಗೆ 5 ಮೈಲಿಗೆ ಜಾಸ್ತಿ ಇರತಕ್ಕ ಎಲ್ಲಾ ಗ್ರಾಮಗಳ ಅಂಗಡಿಗಳಲ್ಲೂ	ಕೋಠಿಗೆ ಪ್ರತಿ 10 ಮೈಲಿ ಫಾಸಲೆಗೂ 1 ದಿವಸದ ಬಿಕರಿಗೆ ಆಗುವಷ್ಟು ಯಿದ್ದ 5 ಮೈಲಿಗಳೊಳಗಾಗಿರುವ ಅಂಗಡಿಗಳಿಗೆ ಗೊತ್ತಾಗಿರುವ ಸರಕಿಗಿಂತಲೂ ಕಮ್ಮಿ ಇಲ್ಲದಂತೆಯೂ ಇರಬೇಕು.	

ಡೆಪ್ಯುಟಿ ಕಮ್ಮಿಷನರ್ ಸಾಹೆಬರವರು ಅಂಗಡಿಯನ್ನು ಹಂಗಾಮಿಯಾಗಿ ಆಗಲೀ ಅಥವಾ ಖಾಯಂ ಆಗಿ ಆಗಲೀ ಮುಚ್ಚುವದಕ್ಕೆ ಹುಕುಂ ಕೊಟ್ಟಹೊರ್ತು ನಿಬಂಧಿಸಿರುವ ಕಾಲಗಳಲ್ಲಿ ಅಂಗಡಿಯನ್ನು ತೆಗದಿರಬೇಕು.

(27) ಅಂಗಡಿಯನ್ನು ರಾತ್ರಿ 9 ಘಂಟೆಗೆ ಮುಚ್ಚಬೇಕು. ಹಬ್ಬ, ಜಾತ್ರೆ ಮುಂತಾದ ಕಾಲಗಳಲ್ಲಿ ವಿಶೇಷವಾದ ಅಪ್ಪಣೆ ಹೊರ್ತು ಸೂರ್ಯೋದಯಕ್ಕೆ ಮುಂಚಿತವಾಗಿ ಅಂಗಡಿ ಬಾಗಿಲನ್ನು ತೆಗಿಯಕೂಡದು. ಯೂರೋಪಿಯನ್ ಯಾ ನೇಟಿವ್ ಸೈನ್ಯದ ರಿಜಿಮೆಂಟ್ ಯಾ ಸಮೂಹವು ಪ್ರಯಾಣಮಾಡುತ್ತಿರುವಾಗ ಯಾ ಸಮಿಪದಲ್ಲಿ ಮೊಕ್ಕಾಂ ಮಾಡಿರುವಾಗ ಅವರ ಪ್ರಯಾಣದ ಮಾರ್ಗದಲ್ಲಿ ಯಾ ಆ ಮಾರ್ಗದ ಸಮೀಪದಲ್ಲಿರುವ ಎಲ್ಲಾ ಸಾರಾಯಿ ಬಿಕರಿ ಅಂಗಡಿಗಳನ್ನು ಮುಚ್ಚುವಂತೆ ಡೆಪ್ಯುಟಿ ಕಮ್ಮಿಷನರವರು ಯಾ ತಾಲ್ಲೂಕು ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರವರು ಅಪ್ಪಣೆ ಮಾಡಬಹುದು. ಸರ್ಕಾರದವರು ತಕ್ಕ ಕಾರಣಗಳಿಂದ 15 ದಿವಸದ ಮುಂಚಿತವಾಗಿಯೇ ನೋಟೀಸ್ ಕೊಟ್ಟು ಲೈಸೆನ್ಸ್‌ದಾರರಿಗೆ ನ್ಯಾಯವಾದ ಪರಿಹಾರದ್ರವ್ಯವನ್ನು ಕೊಡಿಸಿ ಗುತ್ತಿಗೆಯನ್ನು ಮೋಖೂಫ್ ಮಾಡುವ ಅಧಿಕಾರವನ್ನು ಉಳಿಸಿಕೊಂಡಿರುತ್ತಾರೆ. ಮತ್ತು ಒಳದೇಶದ ಬೀರು ವಿಷಯದಲ್ಲಿ ಯಾ ಸಾರಾಯಿ ವಿನಹ ಇತರ ವಿಧವಾದ ಯಾವ ಮದ್ಯದ ವಿಷಯದಲ್ಲಿಯೂ ಸರ್ಕಾರದವರು ಯಾವದಾದರೂ ಏರ್ಪಾಟುಮಾಡಿದ ವಿಷಯದಲ್ಲಿ ಲೈಸೆನ್ಸ್‌ದಾರನಿಗೆ ಪರಿಹಾರದ್ರವ್ಯಕೆ ಯಾ ರಿಮಿಷನ್ ಯಾನೆ ಸೋಡಿಗೆ ಹಕ್ಕು ಇರಲಾರದು.

(28) ಬಿಕರಿಯು ಪ್ರಶಸ್ತವಾಗಿರುವ ಕಟ್ಟಡದಲ್ಲಿ ಮಾಡಲ್ಪಡತಕ್ಕದ್ದು. ಸದರೀ ಕಟ್ಟಡಕ್ಕೆ ಒಂದೇ ಬಾಗಲು ಇರತಕ್ಕದ್ದು. ಹಿಂಭಾಗದಲ್ಲಾದರೂ ಪಕ್ಕಗಳಲ್ಲಾದರೂ ಕಿಟಕಿಯಾಗಲಿ ಇರಕೂಡದು. ಶರಾಬನ್ನು ಮಾರುವ ಜಗಲಿಯು ಅಂಗಡಿ ಒಳಗೆ ಇರುವ ಜನಗಳು, ಅಂಗಡಿಮುಂದೆ ಬೀದೀಲಿ ತಿರಗಾಡುವ ಜನರಿಗೆ ಕಾಣುವಹಾಗೆ ಬಾಗಲಿಗೆ ಎದುರಾಗಿ ಇರತಕ್ಕದ್ದು. ಮತ್ತು ಇದರಲ್ಲಿ ಎರಡನೇ ಕೊಠಡಿಯು ಗಿರಾಕಿಗಳಿಗಾಗಿ ತೆಗೆದು ಇರಕೂಡದು.

(29) ಸಮೀಪದಲ್ಲಿ ಕ್ರಮವಾಗಿ ಲೈಸೆನ್ಸ್ ಪಡದ ಅಂಗಡಿಗಳಿಲ್ಲದೇ ಇರುವ ಪ್ರದೇಶಗಳಲ್ಲಿ ನಡೆಯುವ ಹಬ್ಬ, ಜಾತ್ರೆ ಮುಂತಾದ ಕಾಲಗಳಲ್ಲಿ ಮದ್ಯವನ್ನು ಬಿಕರೀ ಮಾಡಲು ಆಗಾಗ್ಯೆ ಕೊಡಬೇಕಾದ ಲೈಸೆನ್ಸುಗಳನ್ನು ಕೊಡತಕ್ಕ ಅಧಿಕಾರವು ಡೆಪ್ಯುಟಿ ಕಮ್ಮಿಷನರವರಿಗೆ ಉಳಿಸಿಕೊಂಡಿರುತ್ತದೆ. ಅಂಥಾ ಲೈಸೆನ್ಸುಗಳು ಮಾಮೂಲಾಗಿ ಸದರೀ ಪ್ರದೇಶದಲ್ಲೆಲ್ಲಾ ಸರಬರಾಯಿ ಮಾಡುವ ದುಕಾನದಾರರಿಗೆ ಕೊಡಲ್ಪಡತಕ್ಕದ್ದು. ಸದರೀ ಲೈಸೆನ್ಸುಗಳ ಅವಧಿಯು 15 ದಿವಸಗಳಿಗಿಂತಲೂ ಹೆಚ್ಚಾಗಿರಕೂಡದು. ಮತ್ತು ಅದಕ್ಕಾಗಿ ಪಾವತಿಯಾಗತಕ್ಕ ಮೊಬಲಗು ಡೆಪ್ಯುಟಿ ಕಮ್ಮಿಷನರಿಗೆ ಯುಕ್ತವಾಗಿ ತೋರಿದಂತೆ ಗೊತ್ತುಮಾಡಲ್ಪಡಬಹುದು. ಡೆಪ್ಯುಟಿ ಕಮ್ಮಿಷನರವರು ಅದನ್ನು ಹರಾಜುಮೂಲಕವಾಗಿಯೂ ವಿಲೇವಾರಿ ಮಾಡುವಂತೆ ತೀರ್ಮಾನಿಸಬಹುದು.

(30) ಲೈಸೆನ್ಸ್‌ದಾರನು ಸಾರಾಯಿಯನ್ನು ಬಯ್ಯುವುದಕ್ಕೆ ಯಾ ಬಿಕರೀ ಮಾಡುವುದಕ್ಕೆ ಅವರಿಂದ ನೌಕರರ್ಮಾಡಲ್ಪಟ್ಟ ಯಾವ ಮನುಷ್ಯನಾದರೂ ಎಕ್ಸೈಜ್ ಕಾನೂನಿಗೆ ಅಥವಾ ಆತನು ಬರೆದುಕೊಟ್ಟ ಕರಾರುಗಳಿಗೆ ವಿರೋಧವಾಗಿ ನಡೆದ ಸಂಗತಿಯು ಅವರ ತಿಳುವಳಿಕೆಗೆ ಬಂದಲ್ಲಿ ಆ ಸಂಗತಿಯನ್ನು ಡೆಪ್ಯುಟಿ ಕಮ್ಮಿಷನರವರಿಗ ಇತ್ತಿಲ್ಲೆ ಮಾಡಿ, ಅಂಥಾ ಮನುಷ್ಯನನ್ನು ಕೆಲಸದಲ್ಲಿಡುವ ವಿಷಯದಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಕೊಡಲ್ಪಡುವ ಹುಕುಮನ್ನು ಜಾರೀಲಿ ತರತಕ್ಕದ್ದು ಅವರ ಕರ್ತವ್ಯವಾಗಿರುತ್ತದೆ.

(31) ಡೆಪ್ಯುಟಿ ಕಮ್ಮಿಷನರವರ ಅಪ್ಪಣೆ ಪಡೆದ ಶಿವಾಯಿ ಇಂಡಿಯನ್ ಪೀನಲ್‌ಕೋಡ್ ರೀತ್ಯಾ ಯಾವದಾದರೂ ಕ್ರೂರವಾದ ತಪ್ಪಿತಕ್ಕೆ ಶಿಕ್ಷಿಸಲ್ಪಟ್ಟಿರುವ ಯಾವ ಮನುಷ್ಯನನ್ನಾದರೂ ಮದ್ಯವನ್ನು ಬಯ್ಯುದಕ್ಕಾಗಲೀ ಬಿಕರಿ ಮಾಡುವುದಕ್ಕಾಗಲೀ ನೇಮಿಸಿಕೊಳ್ಳಕೂಡದು.

(32) ಕುಷ್ಠರೋಗದಿಂದಾಗಲೀ ಅಥವಾ ಇತರ ಅಂಟುರೋಗದಿಂದಾಗಲೀ ಪೀಡಿತರಾದ ಜನಗಳಿಂದ ಸಾರಾಯಿಯನ್ನು ಬಯ್ಯುವದಕ್ಕಾಗಲೀ ಅಥವಾ ಮಾರುವುದಕ್ಕಾಗಲೀ, ಮತ್ತು ಅಂಗಡಿಯಲ್ಲಿ ಅಂಥಾ ಜನಗಳನ್ನು ನೌಕರವಾನೇನಾಗ ಇಟ್ಟುಕೊಳ್ಳುವದಕ್ಕಾಗಲೀ ಅಡ್ಡೀ ಪಡಿಸಲ್ಪಟ್ಟಿರುತ್ತದೆ.

(33) ಬ್ರಿಟಿಷ್ ರಾಜ್ಯದ ದ್ವಾರಾ ಬಯ್ಯಲ್ಪಟ್ಟ ಅಂಗಡಿಗಳಿಗೆ ಬರತಕ್ಕ ಸಾರಾಯಿಯ ಮೊಹರನ್ನು ಸರ್ಕಾರದಿಂದ ನೇಮಿಸಲ್ಪಟ್ಟಿರುವ ನೌಕರ ಮೂನೇರಿಂದ ಸರಕು ಮೊಕಾಬಿಲಿ ಮಾಡಲ್ಪಡುವವರೆಗೂ ಹೊಡೆಯಕೂಡದು.

11. ಲೈಸೆನ್ಸ್‌ದಾರನು ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಗಳನ್ನು ತೆಗೆಯುವದರಲ್ಲಿಯೂ ತನ್ನ ಅಂಗಡಿ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಿಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸ್‌ದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ ಯಾ ಉದಾಶೀನಕ್ಕೆ 50 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣಿ ಮೊಬಲಗನ್ನು ದಂಡವಾಗಿ ಸರ್ಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೇವೆಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನು ರದ್ದುಮಾಡಿ ಸದರೀ ಲೈಸೆನ್ಸ್‌ದಾರನ ಜವಾಬ್ದಾರೀಮೇಲೆ ಆತನನ್ನು ನಷ್ಟಕ್ಕೆ ಗುರಿಮಾಡಿ ಮೇಲ್ಕಂಡ ಅಂಗಡಿಯನ್ನು ಪುನಹಾ ಹರಾಜು ಮಾಡಲಿಕ್ಕೂ ಅಥವ ಇತರ ವಿಧವಾಗಿ ವಿಲೇ ಮಾಡಲಿಕ್ಕೂ ಯಾ ಅಂಥಾ ಅಂಗಡಿಯನ್ನು ಸರ್ಕಾರದ ಆಡಳಿತದಲ್ಲಿಡಲಿಕ್ಕೂ ಡೆಪ್ಯುಟಿ ಕಮ್ಮಿಷನರವರು ಮುಖ್ತ್ಯಾರ್ರಾಗಿರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 1904ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟದ ದೇಖೀಲ್ ಸದರೀ ಲೈಸೆನ್ಸ್‌ದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಅಂಗಡಿಯು ರದ್ದುಮಾಡಲ್ಪಟ್ಟರೆ ಪೂರಾಕಾಲದ ಗುತ್ತಿಗೇಹಣವು ಕೂಡ್ಲೆ ಪಾವತಿ ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು. ಮತ್ತು ಅಂಥಾ ದಂಡದ ವ ನಷ್ಟದ ಮೊಬಲಗುಗಳು ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು.

12. ಮೇಲಿನ ಹಿಂದಿನ ಕಲಂನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ್ ಯಾ ಇತರ ಕಾನೂನ್‌ಗಳಿಗೆ ವಿರೋಧವಾಗಿ ನಡಿಸಿದ ತಕ್ಸೀರಿಗೆ ಲೈಸೆನ್ಸ್‌ದಾರನನ್ನಾಗಲಿ ಯಾ ಆತನ ಮುತಾಲೀಕನನ್ನಾಗಲಿ ಯಾ ಆತನ ನೌಕರರನ್ನಾಗಲಿ ಆಪಾದಿಸಿ ದರ್ಯಾಫ್ತು ಕ್ರಮನಡಿಸಲು ಆತಂಕ ಪಡಿಸುವದಿಲ್ಲ.

ಟಿಪ್ಪಣಿ.—ಬಾರಿಬಾರಿಗು ಲೈಸೆನ್ಸಿನ ಷರತ್ತುಗಳಿಗೆ ವಿರೋಧವಾಗಿ ನಡೆಸುವ ತಪ್ಪಿತಗಳಿಗೂ ಬಾರಿಬಾರಿಗೂ ಜುರ್ಮಾನೆ ಹಾಕಲ್ಪಡತಕ್ಕದ್ದು.

ಮೈಸೂರ ಗೆಜೆಟ್.

ನಂ. 39.] ಸರ್ಕಾರದಿಂದ ಪ್ರಸಿದ್ಧ ಆದ್ದು. [ನಂ. 16.

ಬೆಂಗಳೂರು, ಗುರುವಾರ, ಏಪ್ರೈಲ್ ತಾ॥ 21, ಸ‌ನ 1904.

IIನೆ ಭಾಗ.

ಇಂಡ್ಯಾಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಎಕ್ಸೈಜ್ ಇಲಾಖೆ.

1904–1905ನೆ ವರುಷಕ್ಕಾಗಿ ಬೆಂಗಳೂರು ಸಿಟಿಯಲ್ಲಿಯೂ ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿಯೂ ಇರತಕ್ಕ ಬೀರು ಅಂಗಡಿಗಳ ಹರಾಜು ನೋಟಿಸ್.

ನಂ. ತಾರೀಖು 1904.

1. ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿರತಕ್ಕ ಇದಕ್ಕೆ ಲಗತ್ತು ಮಾಡಿರುವ ಪಟ್ಟಿಯಲ್ಲಿ ನಮೂದು ಮಾಡಿರುವ ಅಂಗಡಿಗಳಲ್ಲಿ ಬೀರು ಯಾ ಪೋರ್ಟರನ್ನು 1904ನೆ ಇಸವಿ ಜುಲೈ ಗುರ್ರೇ ತಾರೀಖಿಗೆ ಪ್ರಾರಂಭವಾಗಿ 1905ನೆ ಇಸವಿ ಜೂನ 30ಕ್ಕೆ ಅಂತ್ಯವಾಗುವ 12 ತಿಂಗಳ ಕಾಲಕ್ಕಾಗಿ ಬಿಕರೀ ಮಾಡತಕ್ಕ ಖಟ್ಲಿ ಸ್ವತಂತ್ರದ ಹಕ್ಕನ್ನು ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ ಅಥವಾ ಅವರಿಂದ ಅಧಿಕಾರ ಹೊಂದಿದ ಇತರ ಆಫಿಸರರು ಸದರಿ ಪಟ್ಟಿಯಲ್ಲಿ ನಮೂದು ಮಾಡಿರುವ ಸ್ಥಳಗಳಲ್ಲಿ ಮತ್ತು ತಾರೀಖುಗಳಲ್ಲಿ ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ.

2. ಸದರಿ ಸ್ವತಂತ್ರ ಹಕ್ಕು ಬೌರಿಂಗ್‌ಪೇಟೆ ಮತ್ತು ಕೋಲಾರ್ ಚಿನ್ನದಗಣಿಗಳಲ್ಲಿನ ಅಂಗಡಿಯಲ್ಲಿ ಬಿಕರಿ ಆಗುವ ಬೀರು ಯಾ ಪೋರ್ಟರಿನ ಪೀಪಾಯಿ 1ಕ್ಕೆ 35 ರೂಪಾಯಿ ಮೇರೆಗೂ ಬೆಂಗಳೂರು ಸಿಟಿ ಅಂಗಡಿಗಳಲ್ಲಿ ಬಿಕರಿ ಆಗುವುದಕ್ಕೆ ಎ॥ ಕ॥ ಸಾ॥ ರವರ ಮಂಜೂರಾತಿ ಮೇರೆಗೆ ಹರಾಜು ನಡೆಸುವ ಆಫಿಸರರು ಗೊತ್ತು ಮಾಡುವ ಮೊಬಲಗನ್ನು ಸರ್ಕಾರದ ಸವಾಲು ಎಂದು ಇಟ್ಟುಕೊಂಡು ಹರಾಜು ಹಾಕಲ್ಪಡುತ್ತೆ.

3. ಬೀರು ಕಾಯಿಸುವ ಭಟ್ಟೀದಾರು ಅಂಗಡಿಗಳಿಗೆ ಸವಾಲು ಮಾಡಬಹುದು.

4. ಹರಾಜಿನಲ್ಲಿ ಪ್ರತಿ ಸವಾಲ್ದಾರನೂ ಸವಾಲು ಮಾಡುವದಕ್ಕೆ ಮುಂಚಿತವಾಗಿ ಬೌರಿಂಗ್‌ಪೇಟೆ ತಾಲ್ಲೂಕಿನ ಅಂಗಡಿಗಳಿಗೆ 250 ರೂಪಾಯಿ, ಬೆಂಗಳೂರು ಸಿಟಿ ಅಂಗಡಿಗಳಿಗೆ 100 ರೂಪಾಯಿ ಯಾ ಹರಾಜು ಮಾಡತಕ್ಕ ಆಫಿಸರರು ಗೊತ್ತು ಮಾಡುವ ಬೇರೆ ಇತರ ನ್ಯಾಯವಾದ ಮೊಬಲಗನ್ನು ಠೇವಣಾತಿ ಇಡತಕ್ಕದ್ದು. ಪೀಪಾಯಿ 1ಕ್ಕೆ ಪ್ರತಿ ಒಂದು ಅಂಗಡಿಯು ಅಂಗೀಕರಿಸಲ್ಪಟ್ಟ ಖಡ ಸವಾಲ್‌ದಾರನಿಗೆ ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತದೆ. ಡೆಪ್ಯುಟಿ ಕಮಿಷನರವರು ಸದರೀ ದರಖಾಸ್ತನ್ನು ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳು ಉದಹರಿಸದೇ ಮಂಜೂರು ಯಾ ತಳ್ಳುಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತನ್ನು ಗವರ್ನಮೆಂಟಿನವರು ತಿದ್ದುಪಡಿ ಮಾಡದೇ ಇರುವ ಪಕ್ಷದಲ್ಲಿ ಅಂಗೀಕರಿಸಿದಂತೆ ಭಾವಿಸತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು. ಅಥವಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದು ಇರುವ ಅವರ ತರ್ಫೆ ಮುತಾಲೀಕರನ್ನ ಕಳುಹಿಸಬೇಕು.

5. ಹರಾಜು ಪೂರೈಸಿದ ಕೂಡ್ಲೆ ನಾಮಂಜೂರಾದ ಸವಾಲ್ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡದೆ ಇರುವ ಪಕ್ಷಕ್ಕೆ ಅವರುಗಳಿಗೆ ವಾಪಸು ಮಾಡಲ್ಪಡುತ್ತವೆ.

6. ಯಾರ ಹೆಸರಿಗೆ ಹರಾಜಿನಲ್ಲಿ ಈ ಅಂಗಡಿಗಳು ಮಂಜೂರಾಗುತ್ತವೋ ಅವರು ಹರಾಜು ಮಂಜೂರಾದ್ದನ್ನು ಅವರಿಗೆ ತಿಳಿಸಲು ಅನುಕೂಲವಾಗುವಂತೆ ಅವರ ವಿಳಾಸವನ್ನು ಹರಾಜು ನಡೆಸತಕ್ಕ ಆಫಿಸರ್ರವರಲ್ಲಿ ಕೊಡತಕ್ಕದ್ದು. ಮತ್ತು 7 ದಿನಗಳೊಳಗಾಗಿ ಸದರೀ ನೋಟೀಸು ಅವರಿಗೆ ಖುದ್ದಾಗಿ ಅಥವಾ ಸದರೀ ವಿಳಾಸದ ಸ್ಥಳದಲ್ಲಿರುವ ವಯಸ್ಸಾದ ಕುಟುಂಬಕ್ಕೆ ಸಂಬಂಧಪಟ್ಟ ಗಂಡಸಿಗೆ ಆಗಲೀ ಜಾರಿಯಾದ ನಂತರ, ಯಾ ಸದರೀ ಮನೆಗೆ ಅಂಟಿಸಿದ ನಂತರ ಯಾ ರಿಜಿಸ್ಟರ್ಡ್ ಪೋಸ್ಟು ಮೂಲಕ ಕಳುಹಿಸಿದ ತರುವಾಯ ಹರಾಜಿನಲ್ಲಿ ಬಿಡಲ್ಪಡುವ ಪ್ರತಿ ಒಂದು ಅಂಗಡಿಗೆ ಒಟ್ಟು 500 ರೂಪಾಯಿಗಳಿಗೆ ಸರಿಯಾಗುವ ಹಾಗೆ ಯಾ ಪ್ರತಿ ಒಂದು ಅಂಗಡಿಯ ಬೆಲೆಗನುಸಾರವಾಗಿ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಂದ ಗೊತ್ತು ಮಾಡಲ್ಪಡಬಹುದಾದ ಯುಕ್ತವಾದ ಇತರ ಮೊಬಲಗಿಗೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನು ಅವರ ಮೊದಲನೇ ಠೇವಣಾತಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನು ಠೇವಣಿ ಕಟ್ಟಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸುಗಳನ್ನು ಪಡಿಯತಕ್ಕದ್ದು, ಮತ್ತು ಎದುರು ಒಡಂಬಡಿಕೆಗಳನ್ನು ಬರೆದು ಕೊಡತಕ್ಕದ್ದು. ಈರೀತಿಯಲಿ ಠೇವಣಿ ಇಡುವದಕ್ಕೆ ಯಾ ಲೈಸೆನ್ಸ್ ಪಡೆಯಲಿಕ್ಕೆ ಯಾ ಎದುರು ಒಡಂಬಡಿಕೆಯನ್ನು ಬರೆದುಕೊಡಲಿಕ್ಕೆ ತಪ್ಪಿದರೆ ಸದರೀ ಅಂಗಡಿಯು ಹಾಗೆ ತಪ್ಪಿದ ಮನುಷ್ಯರ ಜವಾಬ್ದಾರೀಮೇಲೆ ಪುನಹ ಹರಾಜು ಮಾಡಲ್ಪಡುತ್ತೆ. ಅಥವಾ ಈ ಇಸ್ತಿಹಾರಿನಲ್ಲಿ ಕಂಡ ಹರಾಜು ಮೊದಲೇ ಪೂರೈಸಿ ಹೋಗಿರುವ ಪಕ್ಷಕ್ಕೆ ಡೆಪ್ಯುಟಿ ಕಮ್ಮಿಷನರವರು ಅವರಿಗೆ ಯುಕ್ತ ತೋರುವಂತೆ ಬೇರೆ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ. ಹರಾಜು ಮಂಜೂರಾದ ನಂತರ ಕೊಂಡುಕೊಂಡವನು ಮೃತಪಟ್ಟರೆ ಜವಾಬ್ದಾರಿಯು ಆತನ ವಾರಸುದಾರರು ಅಥವಾ ಆತನಿಂದ ವರ್ಗ ಪಡೆದವರನ್ನು ಹೊಂದಿರುತ್ತೆ.

7. ಮೇಲಿನ 6ನೇ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್ದಾರೀಮೇಲೆ ನಡಿಯತಕ್ಕದ್ದು. ಇದರಿಂದ ಆತನು ಆದಾಯವನ್ನೆಲ್ಲಾ ಕಳೆದುಕೊಂಡವನಾಗುತ್ತಾನೆ. ಮತ್ತು ದುಸರೇ ಹರಾಜು ಅಥವಾ ಇತರೇವಿಧವಾದ ವಿಲೇವಾರಿ ಮಾಡುವಲ್ಲಿ ನಷ್ಟಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೇ ಹರಾಜಾದಲ್ಲಿ ಅಥವಾ ಇತರೇ ವಿಧವಾಗಿ ವಿಲೇವಾರಿ ಆದಲ್ಲಿ ಜಡ ಸವಾಲ್ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾಬಾಕಿ ಉಳಿಯುವವರನ್ನ ಆತನು ಭರ್ತಿಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಠೇವಣಿ ಮೊಬಲಗುಗಳನ್ನ ವಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನ ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡೋಣಾಗುತ್ತೆ. ಆದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಸದರೀ ಠೇವಣಿ ಮೊಬಲಗು ದುಸರೇ ಹರಾಜಿನಲ್ಲಿ ಸಂಭವಿಸುವ ಅಥವಾ ಇತರೇವಿಧವಾದ ವಿಲೇವಾರಿಯಿಂದ ಆಗುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಆ ಠೇವಣಿ ಮೊಬಲಗನ್ನೆಲ್ಲಾ ಸರಕಾರಕ್ಕೇನೆ ಜಮಾ ಮಾಡಿಕೊಳ್ಳತಕ್ಕದ್ದು :—

8. ಮೇಲಿನ 6ನೆ ಕಲಂನಲ್ಲಿ ಕಂಡ ಮೇರಿಗೆ ಹೊಂದಬೇಕಾದ ಲೈಸೆನ್ಸು ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು :—

(1) ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು ನೀಲಗಿರಿಯಲ್ಲಿ ಸರಕಾರದಿಂದ ಮಂಜೂರ್ಮಾಡಲ್ಪಡಬಹುದಾದ ಬ್ರೂಯರಿಗಳಲ್ಲಿಯಾಗಲಿ ಅಥವಾ ಕಿರ್ಕಿಯಲ್ಲಿ ಮಾರ್ಕಿ ಅಂಡ್ ಕೋ ಯವರಿಂದ ಕಾಯಿಸಲ್ಪಟ್ಟ ಅಥವಾ ಬೆಂಗಳೂರು ಷಬ್ರಿಹಾಂ ಮತ್ತು ಗಂಗಾಧರಶೆಟ್ಟಿ ಅಂಡ್ ಕೋ ಯವರಿಂದ ಯಾ ಸರ್ಕಾರದಿಂದ ಮಂಜೂರ್ಮಾಡಲ್ಪಡಬಹುದಾದ ಇತರ ಯಾವ ಬ್ರೂಯರಿಯಲ್ಲಿಯಾಗಲಿ ಕಾಯಿಸಲ್ಪಟ್ಟ, ಕಂತ್ರಿ ಬೀರು ಯಾ ಪೋರ್ಟರನ್ನು ಮಾರುವದಕ್ಕೆ ಮಾತ್ರವೇ ವ್ಯಾಪಿಸುತ್ತೆ.

(2) ಪ್ರತಿ ಅಂಗಡಿಯು ಇದಕ್ಕೆ ಜಂಟಿಸಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಹಾಲೀ ಜಾರೀಲಿರುವ ಅಂಗಡಿ ಒಳಗಾಗಲಿ ಯಾ ಅದರ ಸಮೀಪದಲ್ಲಿ ಆಗಲಿ ಇಡಲ್ಪಡಬೇಕು.

(3) ಪ್ರತಿ ತಿಂಗಳಿನಲ್ಲಿ ಮಾರಿದ ಬೀರು ಯಾ ಪೋರ್ಟರಿನ ಫೀಜುಗಳಿಗಾಗಿ ಕೊಡಬೇಕಾದ ಮೊಬಲಗನ್ನು ಮಾರನೇ ತಿಂಗಳಿನ ಮೊದಲನೇ ವಾರದಲ್ಲಿ ತಾಲ್ಲೂಕು ಖಜಾನೆಗೆ ಇದಕ್ಕಾಗಿ ಗೊತ್ತಾಗಿರುವ ಚಲನ್ ಮೂಲಕ ಪಾವತಿಯಾಗತಕ್ಕದ್ದು. ಲೈಸೆನ್ಸ್‌ದಾರನಿಂದ ಠೇವಣಿ ಇಡಲ್ಪಟ್ಟಿರುವ ಮೊಬಲಗು ಗುತ್ತಿಗೆ ಅವಧಿಯ ಕೊನೇ 2 ತಿಂಗಳಿನ ಮೊಬಲಗಿಗೋಸ್ಕರ ಉಪಯೋಗಿಸಲ್ಪಡತಕ್ಕದ್ದು. ಮೇಲೆ ಹೇಳಿದ ಹಾಗೆ ಪಾವತಿ ಮಾಡಲಿಕ್ಕೆ ತಪ್ಪಿದಲ್ಲಿ ಡೆಪ್ಯುಟಿ ಕಮ್ಮಿಷನರವರು ಜಮೀನ್ ಕಂದಾಯ ವಸೂಲ್ಮಾಡುವದಕ್ಕೆ ಜಾರೀಲಿರುವ ನಿಬಂಧನೆಗಳ ಪ್ರಕಾರ ವರುಷಕ್ಕೆ ಶೇಕಡಾ 6 ರೂಪಾಯಿನಂತೆ ಬಡ್ಡಿ ನಿಸಿ ಬಾಕಿ ಮೊಬಲಗನ್ನು ವಸೂಲ್ಮಾಡುವದಕ್ಕೆ ತಕ್ಷಣ ಪ್ರವರ್ತಿಸತಕ್ಕದ್ದು. ಲೈಸೆನ್ಸ್‌ದಾರನು ತಾನು ಕೊಡಬೇಕಾಗಿರುವ ಸರ್ಕಾರದ ಹಣಗಳಲ್ಲಿ ಯಾವ ಕಾರಣದಿಂದಲಾಗಲಿ ಮಾಫಿ ವಜಾ ಮುಂತಾದ್ದನ್ನ ಪಡೆಯುವದಕ್ಕೆ ಹಕ್ಕುದಾರನಾಗಿರುವದಿಲ್ಲಾ.

(4) ಲೈಸೆನ್ಸ್‌ದಾರನಿಂದ ಕೊಂಡುಕೊಳ್ಳಲ್ಪಡತಕ್ಕ ಬೀರು ಅಥವಾ ಪೋರ್ಟರ್ ಬಾಬತು ಪ್ರತಿ ಒಂದು ಗ್ಯಾಲನಿಗೂ ರೂಪಾಯಿಗೆ 1 ಆಣೆ ಯಂತೆ ಲೋಕಲ್ ಸೆಸ್ ಸಹಿತವಾಗಿ ಎರಡಾಣೆಯಂತೆ ಹಾಸಲು ಕೊಡತಕ್ಕದ್ದು.

(5) ಲೈಸೆನ್ಸ್‌ದಾರನು ಕೊಂಡುಕೊಂಡ ಬೀರು ಮತ್ತು ಪೋರ್ಟರ್ ಬ್ರೂಯರಿಯಿಂದ ತಾಲ್ಲೂಕು ಅಮಲ್ದಾರ್ರವರಲ್ಲಿಗೆ ಪ್ರಥಮತಃ ರವಾನಿಸಲ್ಪಡತಕ್ಕದ್ದು. ಸರಕಿನೊಂದಿಗೆ ಲೆಟರ್ ಆಫ್ ಅಡ್ವೈಸ್ ಎಂಬ ರಹದಾರಿಯನ್ನ ಅಮಲ್ದಾರ್ರಿಗೆ ಕಳುಹಿಸಬೇಕು. ಇದರ ಎರಡನೇ ಪ್ರತಿಯು ಎಕ್ಸೈಜ್ ಕಮ್ಮಿಷನರ್ ಸಾಹೇಬರವರ ಆಫೀಸಿಗೆ ರವಾನಿ

ಸಲ್ಪಡತಕ್ಕದ್ದು. ಮೇಲೆ ನಮೂದು ಮಾಡಲ್ಪಟ್ಟ ಪರದ ಮೇರೆಗೆ ಲೋಕಲ್ ಸೆಸ್ ಸಹಿತವಾಗಿ ಹಾಸಲ್ ಮೊಬಲಗು ಗೊತ್ತಾದ ನಮೂನೆಯಲ್ಲಿ ಪಾವತಿ ಆದ ನಂತರ ಅಮಲ್ದಾರರು ಅಥವಾ ಇವರಿಂದ ಈ ವಿಷಯದಲ್ಲಿ ಅಧಿಕಾರ ಪಡೆದ ಇತರ ಆಫೀಸರು ಸರಕನ್ನು ಲೈಸೆನ್ಸದಾರನು ತನ್ನ ಅಂಗಡಿಗೆ ಒಯ್ಯಲು ತಮ್ಮ ಸೈನಾದ ಪ್ಯಾಸಿ ಮೂಲಕ ಅಪ್ಪಣೆ ಕೊಡತಕ್ಕದ್ದು.

(6) ಬೆಂಗಳೂರು ಸಿಟಿಯಲ್ಲಿರುವ ಪ್ರತಿ ಒಂದು ಬೀರು ಅಂಗಡಿಯ ಲೈಸೆನ್ಸದಾರನು ಮ್ಯುನಿಸಿಪಲ್ ರಗ್ಯುಲೇಷನ್ ಅನುಸರಿಸಿ ರಿಜಿಸ್ಟ್ರೇಷನ್ ರುಸುಂ ಬಗ್ಗೆ ಸಾಲಿಯಾನಾ 180 ರೂಪಾಯಿಗಳನ್ನು ಈ ಲೈಸೆನ್ಸ್ ಕೊಟ್ಟಿರುವ ಕಾಲದ ವರೆಗೆ ಮುಂಗಡವಾಗಿ ಪಾವತಿ ಮಾಡತಕ್ಕದ್ದು.

(7) ಲೈಸೆನ್ಸದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೆ ಸಾಧನಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲಿಕ್ಕರ್, ಬೀರು ಯಾ ಪೋರ್ಟರನ್ನು ಸಾಗಿಸುವ ಬಗ್ಗೆ ಬೇಕಾದ ರಹದಾರೀ ಅಥವಾ ಪ್ಯಾಸ್ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫೀಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(8) ಲೈಸೆನ್ಸದಾರನು 1904ನೆ ಇಸವಿ ಜುಲೈ ಗುರ್‍ರೇ ತಾರೀಖಿನಲ್ಲಿ ಹಳೇ ಲೈಸೆನ್ಸದಾರನು ಬಾಬತು ಸದರಿ ಅಂಗಡಿಯಲ್ಲಿ ದಾಸ್ತಾನ ಇರಬಹುದಾದ ಬೀರು ಅಥವಾ ಪೋರ್ಟರನ್ನು ಎಕ್ಸೈಜ್ ಕಮಿಷನರ್ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರ ದ್ರವ್ಯವನ್ನು ಹಳೇ ಲೈಸೆನ್ಸದಾರನಿಗೆ ಪಾವತಿಮಾಡಿ ತೆಗೆದುಕೊಳ್ಳಲು ಗುರಿಯಾಗಿರತಕ್ಕದ್ದು.

(9) ಈ ಗುತ್ತಿಗೆ ಎಕ್ಸೈಜ್ ಕಮಿಷನರ್ ಸಾಹೇಬರವರ ಮುಂಚಿತವಾದ ಅನುಮತಿ ಇಲ್ಲದೆ ಕ್ರಯ, ದಾನ, ಭೋಗ್ಯ ಅಥವಾ ಇನ್ಯಾವ ವಿಧದಿಂದಲೇ ಆಗಲಿ ವರ್ಗವಾಗತಕ್ಕದ್ದಲ್ಲ.

(10) ದುಕಾನದಾರನು ಲೈಸೆನ್ಸದಾರನಂತೆಯೇ ಈ ಲೈಸೆನ್ಸಿನ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ ಅದರಲ್ಲಿ ನಮೂದಾಗುವ ದಂಡನೆಗಳಿಗೆ ಗುರಿಯಾಗುತ್ತಾನೆ.

(11) ಅವನು ಮಂಜೂರ್‍ಮಾಡಲ್ಪಟ್ಟ ಬೀರ್ ಯಾ ಪೋರ್ಟರನ್ನು ಮಾತ್ರವೇ ಮಾರತಕ್ಕದ್ದು. ಒಂದು ಇಂಪೀರಿಯಲ್ ಕ್ವಾರ್ಟ್ ಶೀಸೆವರಿವಿಗೂ ಅಂಗಡಿಯಲ್ಲಿ ಕುಡಿಯಲಿಕ್ಕೆ ಮಾರಬಹುದು. ಮತ್ತು ಸ್ಪೆಷಲ್ ಪ್ಯಾಸುಗಳ ಆಧಾರದ ಮೇಲೆ ಹೊರಗೆ ಕುಡಿಯಲಿಕ್ಕೆ ಕೊಡಲ್ಪಡುವ ಬೀರ್ ಒಂದು ಇಂಪೀರಿಯಲ್ ಗ್ಯಾಲನ್‌ಗಳು ಅಂದರೆ ನಾಲ್ಕು ಶೇರುಗಳಿಗಿಂತಾ ಹೆಚ್ಚಾಗಿರಕೂಡದು.

(12) ಅವನು ಪ್ರತ್ಯಕ್ಷವಾಗಿಯಾದರೂ ಪರೋಕ್ಷವಾಗಿಯಾದರೂ ಯಾವ ತರಹೆಯ ಬೀರು ಯಾ ಪೋರ್ಟರು ಎಷ್ಟುಮಟ್ಟಿಗಾದರೂ ಯಾವ ಯೂರೋಪಿಯನಿಗೂ ಅಥವಾ ನಾನ್ ಕಮಿಷನ್ಡ್ ಆಫೀಸರಿಗಾದರೂ, ಪ್ರೈವೇಟ್ ಸೋಲ್ಜರಿಗಾದರೂ, ಸದರಿ ಜನಗಳಿಗೆ ಸಂಬಂಧಪಟ್ಟ ಯಾವ ಯೂರೋಪಿಯನ್ ಅಥವಾ ಈಸ್ಟಿಂಡಿಯನ್ ಹೆಂಗಸರಿಗಾದರೂ ಮಾರಲೂ ಕೂಡದು. ಅವನು ಯಾ ಅವಳು ತನ್ನ ಅಂಗಡಿಯಲ್ಲಿ ಅಥವಾ ತನ್ನ ಅಂಗಡಿಯ ಆವರಣದಲ್ಲಿ ಅವರು ಕುಡಿಯಲಿಕ್ಕೆ ಅವಕಾಶ ಕೊಡಕೂಡದು. ತನ್ನ ಅಂಗಡಿಯಲ್ಲಿ ಬಂದ ಜನಗಳು ಕುಡಿದು ಬಹಳ ನಿಷಾಪತ್ತಿ ಬೀಳುವಂತೆ ಮಾಡಕೂಡದು, ಮತ್ತು ಅವರು ಅಕ್ರಮವಾಗಿ ನಡೆಯುವಂತೆಯೂ ಅಂಗಡಿಯಲ್ಲಿ ಜೂಜು ವಗೈರೆ ಆಡುವಂತೆಯೂ ಮಾಡಕೂಡದು. ವ್ಯಭಿಚಾರಿಗಳನ್ನಾದರೂ ಬಹಿರಂಗವಾದ ದುರ್ನಡತೆಯುಳ್ಳ ಜನಗಳನ್ನಾದರೂ ತನಗೆ ತಿಳಿದು ತನ್ನ ಅಂಗಡಿಗೆ ಬರುವಂತೆಯಾದರೂ ಅಂಗಡಿಯಲ್ಲಿರುವಂತೆಯಾದರೂ ಮಾಡಕೂಡದು. ಸೋಲ್ಜರಾದರೂ ಇತರರಾದರೂ ಫರಾರಿ ಆದವರೆಂದು ತಿಳಿದಾದರೂ, ಅಥವಾ ಅಂಥವರೆಂದು ಎಣಿಸುವದಕ್ಕೆ ಕಾರಣವಿದ್ದಾದರೂ ಅಂಥವರಿಗೆ ತನ್ನ ಅಂಗಡಿಯಲ್ಲಿ ಸ್ಥಳ ಕೊಡಲೂ ಕೂಡದು, ಮನಃಪೂರ್ತಿಯಾಗಿ ಅವರನ್ನು ಛಪಾಯಿಸಿ ಇಡಲೂಕೂಡದು. ಮತ್ತು ಗುಮಾನಿ ನಡತೆಯುಳ್ಳ ಜನಗಳು ಕಾಣಬಂದಲ್ಲಿ ಅವರ ವಿಷಯವಾಗಿ ಪೋಲೀಸ್ ಆಫೀಸರ್ ಯಾ ಮೇಜಸ್ಟ್ರೇಟರಿಗೆ ತಿಳಿಸತಕ್ಕದ್ದು. ಮತ್ತು ಉದ್ಯೋಗದ ಮೇಲೆ ಇರುವಾಗ ಯಾವ ಪೋಲೀಸ್ ಆಫೀಸರಿಗೆಯಾಗಲಿ, ರೈಲ್ವೆ ನೌಕರನಿಗೇಯಾಗಲಿ, ಎಕ್ಸೈಜ್ ಆಫೀಸರಿಗೆಯಾಗಲಿ, ಹುಚ್ಚರಿಗೆ ಆಗಲಿ ಬೀರ್ ಅಥವಾ ಪೋರ್ಟರನ್ನು ಮಾರಲೂಕೂಡದು.

(13) ಅವನು ತನ್ನ ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ಒಂದು ಹಲಿಗೇ ಮೇಲೆ ತನ್ನ ಹೆಸರು, ಮಾರುವವನ ಹೆಸರು, ಅಂಗಡಿ ನಂಬರ್ ಮತ್ತು ಅದರಲ್ಲಿ ಮಾರಲಿಕ್ಕೆ ಲೈಸೆನ್ಸ್ ಪಡೆದಿರುವ ಪದಾರ್ಥದ ಹೆಸರನ್ನೂ ಸಹ ವ್ಯಕ್ತವಾಗಿ ಬರಿಸಿ ಇಡಬೇಕು.

(14) ಅವನು ಯಾವ ದಿನಸು ಯಾ ನಗವನ್ನಾಗಲಿ ಬದಲಿಯಾಗಿಯಾದರೂ ಆಧಾರವಾಗಿಯಾದರೂ ತೆಗೆದುಕೊಳ್ಳಕೂಡದು, ಮತ್ತು ತಾನು ಮಾರಿದ ಬೀರು ಯಾ ಪೋರ್ಟರಿಗೆ ಇಂಪೀರಿಯಲ್ ಗ್ಯಾಲನ್ ಒಂದಕ್ಕೆ ದರ ಒಂದುವರೆ ರೂಪಾಯಿ ಮೇರೆಗೆ ನಗದಾಗಿ ಹಣ ತೆಗೆದುಕೊಳ್ಳಬೇಕು. ಮತ್ತು ಚಿಲ್ಲರೆಯಾಗಿ ಮಾರುವದಕ್ಕೆ ದಾಮೂಷಾಯಿ ಪ್ರಕಾರ ಖರೀದಿ ವಸೂಲ್ಮಾಡಬೇಕು.

(15) ಈ ಲೈಸೆನ್ಸ್ ಪ್ರಕಾರ ಮಾರುವ ಪ್ರತಿ ಒಂದು ಹಾಗ್ಸ್ ಹೆಡ್ಡಿಗೆ ಬೀರ್ ಯಾ ಪೋರ್ಟರಿನಲ್ಲಿ ಮಾಲ್ಟ್ ಎಂಬ ಪದಾರ್ಥದ ಅಥವಾ ಅದರಿಂದ ತಯಾರಾದ ಯಾವದಾದರೂ ಪದಾರ್ಥದ ಶೇಕಡಾ 75ರಷ್ಟನ್ನೂ ಕೆಂಟು ದೇಶದಲ್ಲಿ ಬೆ

[illegible] ಮೊಹರು ಮಾಡಿ ಹೊಸ ಎರಡು ಮುಚ್ಚಳಗಳನ್ನು ನೀರಿಸಬೇಕು. ಮೇಲ್ಕಂಡ ಬೀರು ಯಾ ಪೋರ್ಟರನ್ನು ಭಟ್ಟೀ ಕಾರಖಾನೆಯಿಂದ ಖರೀದಿಗೆ ತಂದಕಾಲದಲ್ಲಿದ್ದ ಸ್ಥಿತಿಯ ಹೊರತಾಗಿ ನೀರಿನಿಂದ ಮಿಶ್ರಪಡಿಸಕೂಡದು ಯಾ ಇತರ ಪದಾರ್ಥಗಳನ್ನು ಬೆರಸಿ ಕೆಡಿಸಕೂಡದು. ಬೀರಿನ ಟಿಯು ಷುರು ತೂಕವು ಫಾರನ್‌ಹೈಟಿನ 60° ಉಷ್ಣ ವಿರುವಾಗ 1070 ಸಂಖ್ಯೆಯನ್ನು ಮೀರಕೂಡದು ಮತ್ತು ಪೋರ್ಟರಿನಲ್ಲಿ ಆಲ್ಕೋಹಾಲ್ ಯಾ ಸಿಷ್ಟಾ ಪದಾರ್ಥವು ಮೊತ್ತದಲ್ಲಿ ಶೇಕಡಾ ೯ಕ್ಕೆ ಜಾಸ್ತಿಯಾಗಿರಬಾರದು. ಬೀರು ಮತ್ತು ಪೋರ್ಟರ್‌ನಲ್ಲಿ ಮೊತ್ತದಲ್ಲಿ ಶೇಕಡಾ ೯ಕ್ಕೆ ಜಾಸ್ತಿಯಾಗಿರತಕ್ಕ ಎಲ್ಲಾ ಆಲ್ಕೋಹಾಲಿನ ಮೇಲೆ ಪ್ರೂಫ್ ಷರಾಬಿನ ಗ್ಯಾಲನ್ 1ಕ್ಕೆ ವಿಧಾಯಕವಾಗಿರುವ ದರದಂತೆ ಲೋಕಲ್ ಸೆಸ್ ಸಹಿತ ಡ್ಯೂಟಿ ಹಣವನ್ನು ಲೈಸೆನ್ಸ್‌ದಾರನು ಕೊಡಲು ಬದ್ಧನಾಗಿರುವನು ಮತ್ತು ಪ್ರಾಸಿಕ್ಯೂಷನಿಗೆ ಗುರಿಯಾಗುವನು. ಇಂಥಾ ಬೀರ್ ಯಾ ಪೋರ್ಟರ್‌ನ್ನಿನ ಒಂದು ಸೀಸೆಯನ್ನು ಎಕ್ಸೈಜ್ ಇಲಾಖೆಯವರು ಅಪೇಕ್ಷಿಸಿದರೆ ಮಾಯಿಷ್ಚರ್ ಮಾಡುವದಕ್ಕಾಗಿ ಭಟ್ಟೀ ಕಾರಖಾನೆಯಿಂದ ಯಾ ಅಂಗಡಿಯಿಂದ ಕಳುಹಿಸಬೇಕು.

(16) ಸ್ಥಳದ ಅಧಿಕಾರವುಳ್ಳ ಯಾವ ಮ್ಯಾಜಿಸ್ಟ್ರೇಟರಾಗಲಿ ಅಥವಾ ಮ್ಯಾಜಿಸ್ಟ್ರೇಟರ ಹುಕುಮನ್ನು ಪಡೆದ ಅಧಿಕಾರಿಯಾಗಲಿ ಅಥವಾ ಅಧಿಕಾರ ಹೊಂದಿದ ಎಕ್ಸೈಜ್ ಆಫೀಸರಾಗಲಿ ಯಾವ ಹೊತ್ತಿನಲ್ಲಿಯಾದರೂ ಒಳಗೆ ಪ್ರವೇಶಮಾಡಿ ಅಲ್ಲಿರುವ ಬೀರ್ ಮತ್ತು ಪೋರ್ಟರನ್ನು ಅಜಮಾಯಿಷಿ ಮಾಡಲು ಅವರಿಗೆ ಅವಕಾಶ ಕೊಡಬೇಕು, ಮತ್ತು ಲೈಸೆನ್ಸನ್ನು ಅಂಗಡಿಯಲ್ಲಿ ಅವಶ್ಯಕವಾಗಿ ಲೈಸೆನ್ಸ್‌ದಾರನಿಂದಲೂ, ಆ ಮಾರುವವನಿಂದಲೂ ಇಡಲ್ಪಡಬೇಕಾದ ಲೆಕ್ಕಗಳನ್ನೂ ಅವರು ಪರಿಶೋಧನೆ ಮಾಡಲಿಕ್ಕೆ ಹಾಜರ್ಮಾಡಬೇಕು. ಮತ್ತು ಲೆಕ್ಕಗಳು ಸರಿಯಾ ಮತ್ತು ಕರಾರುವಾಕ್ಕಾಗಿರಬೇಕಲ್ಲದೆ ವಿಧಾಯಕವಾಗಿರುವ ನಮೂನೆಗಳಲ್ಲಿ ರೋಜು ಬರೆದಿರಬೇಕು. ತಿರಸ್ಕರಿಸಲ್ಪಟ್ಟ ತರಹಂ ಬೀರನ್ನು ನಾಶಪಡಿಸತಕ್ಕದ್ದು.

(17) ಸದರಿ ಅಂಗಡಿಯನ್ನು ರಾತ್ರಿ 9 ಘಂಟೆಗೆ ಮುಚ್ಚಬೇಕು. ಹಬ್ಬ ಮುಂತಾದ ದಿವಸಗಳಲ್ಲಿ ವಿಶೇಷ ಹುಕುಮಿನ ಮೇಲೆ ಹೊರತಾಗಿ ಬೆಳಿಗ್ಗೆ ಸೂರ್ಯೋದಯಕ್ಕೆ ಮುಂಚಿತವಾಗಿ ಅಂಗಡಿ ಬಾಗಲು ತೆಗೆಯಕೂಡದು.

(18) ಕಮಿಸ್ಸೇರಿಯಟ್ ಇಲಾಖೆಯ ಉಪಯೋಗಕ್ಕಾಗಿ ತರಿಸಿ ಮಿಲಿಟೆರಿ ಅಥವಾ ಇತರ ಇಲಾಖೆಗಳಿಂದ ತಿರಸ್ಕರಿಸಲ್ಪಟ್ಟ ಬೀರನ್ನು ಅಂಗಡಿಯಲ್ಲಿ ಮಾರಲಿಕ್ಕೆ ಯಾವ ಕಾರಣಗಳಿಂದಲೂ ರವಾನಿಸಲ್ಪಡಕೂಡದು.

(19) ಸದರಿ ಅಂಗಡಿಗೆ ಒಂದೇ ಬಾಗಲಿರಬೇಕು. ಹಿಂಭಾಗದಲ್ಲಾದರೂ ಕೊನೇಭಾಗಗಳಲ್ಲಾದರೂ ಕಿಟಿಕಿ ಇರಬಾರದು. ಬೀರ್ ಮಾರುವ ಜಗಲಿಯು, ಅಂಗಡಿಯೊಳಗೆ ಇರುವ ಜನಗಳು ಅಂಗಡೀ ಮುಂದೆ ಬೀದಿಲಿ ಹೋಗುವ ಜನಗಳಿಗೆ ಕಾಣುವ ಹಾಗೆ ಬಾಗಲಿಗೆ ಎದುರಾಗಿ ಇರತಕ್ಕದ್ದು, ಮತ್ತು ಮಾಲೀಕರಿಗೆ ಅದಕ್ಕೆ ಸೇರಿದ ಎರಡನೇ ಕೊಠಡಿ ತೆರದಿರಕೂಡದು.

(20) ಲೈಸೆನ್ಸ್‌ದಾರನು ಹಾಲಿ ಜಾರೀಲಿರುವ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸೇರಿಸಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

9. ಲೈಸೆನ್ಸ್‌ದಾರನ ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಸೆಯಿಂದ ಆತನ ನೌಕರನ [illegible] ವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಯನ್ನು ತೆಗೆಯುವ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇಟ್ಟುಗೊಂಡ ಮಾಡಲು ಅಶ್ರದ್ಧೆ ಜರಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸ್‌ದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಆ ಡೆಪ್ಯುಟಿ ಕಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣಿ ಮೊಬಲಗನ್ನು ದಂಡವಾಗಿ ಸರಕಾರಕ್ಕೆ ದಾಖಲು ಕೊಂಡಿರತಕ್ಕದೆಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನು ರದ್ದು ಮಾಡಿ ಸದರೀ ಲೈಸೆನ್ಸ್‌ದಾರನ ಜವಾಬ್ದಾರಿ ಮೇಲೆ ಮೇಲ್ಕಂಡ ಹಕ್ಕನ್ನು ಪುನಃ ಹರಾಜು ಮಾಡಲಿಕ್ಕೂ ಯಾ ಇತರ ವಿಧವಾಗಿ ವಿಲೇ ಮಾಡಲಿಕ್ಕೂ ಡೆಪ್ಯುಟಿ ಕಮಿಷನರವರು ಮೊಖ್ತಾರರಾಗಿ ಇರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನು 1904ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗೆದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟ ದೇಖೀಲು ಸದರೀ ಲೈಸೆನ್ಸ್‌ದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಲೈಸೆನ್ಸ ರದ್ದು ಮಾಡಲ್ಪಟ್ಟರೆ ಪೂರಾಕಾಲದ ಗುತ್ತಿಗೆ ಹಣವು ಕೂಡ ಪಾವತಿ ಮಾಡಲಿಕ್ಕೆ ಗುರಿಯಾಗತಕ್ಕದ್ದು; ಮತ್ತು ಅಂಥಾ ಮೊಬಲಗು ಜಮೀನ್ ಕಂದಾಯದ ಬಾಕಿಯಂತೆ ಎಲ್ಲಾ ನಷ್ಟ ಸಹಿತವಾಗಿ ವಸೂಲ್ಮಾಡಲ್ಪಡತಕ್ಕದ್ದು.

10. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರಿಯಲ್ಲಿರುವ ಎಕ್ಸೈಜ್ ಕಾನೂನುಗಳಿಗೆ ವಿರೋಧವಾಗಿ ನಡಿಸಿದ ತಕ್ಸೀರಿಗೆ ಲೈಸೆನ್ಸ್‌ದಾರರನ್ನಾಗಲಿ ಯಾ ಆತನ ನೌಕರರನ್ನಾಗಲಿ ಆಪಾದಿಸಿ ಇಲಾಖೆ ಕ್ರಮ ನಡಿಸಲು ಆತಂಕ ಪಡಿಸುವದಿಲ್ಲ.

1904—1905ನೇ ವರುಷಕ್ಕಾಗಿ ಮೈಸೂರು ಶೀಮೆಯಲ್ಲಿ ಇರತಕ್ಕ ಗಾಂಜಾ ವ ಅಫೀಂ ಅಂಗಡಿಗಳ ಹರಾಜು ನೋಟಿಸ್.

ನಂಬರು 7402—7, ತಾರೀಖು 11ನೆ ಏಪ್ರಿಲ್ 1904.

1. ಇದಕ್ಕೆ ಲಗತ್ತು ಮಾಡಿರುವ ಪಟ್ಟಿಯಲ್ಲಿ ನಮೂದು ಮಾಡಿರುವ ಅಂಗಡಿಗಳಲ್ಲಿ ಮದಕ ಪದಾರ್ಥಗಳನ್ನು 1904ನೆ ಇಸವಿ ಜುಲೈ ಗುರ್ರೇ ತಾರೀಖಿಗೆ ಪ್ರಾರಂಭವಾಗಿ 1905ನೆ ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12 ತಿಂಗಳ ಕಾಲಕ್ಕಾಗಿ ಬಿಕರೀ ಮಾಡತಕ್ಕ ಏಟ್ಟು ಸ್ವಾತಂತ್ರ್ಯದ ಹಕ್ಕನ್ನು ಇದರಡಿ ಕಂಡ ಷರತ್ತುಗಳಿಗೆ ಒಳಪಟ್ಟು ಸದರೀ ಪಟ್ಟಿಯಲ್ಲಿ ನಮೂದ್ಮಾಡಿರುವ ತಾರೀಖುಗಳಲ್ಲಿ ಆಯಾಯ ಡೆಪ್ಯೂಟಿ ಕಮಿಷನರವರು ಅಥವಾ ಅದಕ್ಕಾಗಿ ಅವರಿಂದ ಅಧಿಕಾರಹೊಂದಿದ ಅಸಿಸ್ಟೆಂಟ್ ಕಮಿಷನರವರು ಆಯಾಯ ತಾಲ್ಲೂಕು ಯಾ ಸಬ್ ತಾಲ್ಲೂಕು ಕಸಬಾಗಳಲ್ಲಿ ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟನಪಟ್ಟಿದೆ.

2. ಹರಾಜಿನಲ್ಲಿ ಪ್ರತಿ ಸವಾಲುದಾರನೂ ಸವಾಲು ಮಾಡುವದಕ್ಕೆ ಮುಂಚಿತವಾಗಿ 5 ರೂಪಾಯಿ ಯಾ ಹರಾಜು ಮಾಡತಕ್ಕ ಆಫೀಸರರು ಗೊತ್ತು ಮಾಡುವ ಬೇರೆ ಇತರ ನ್ಯಾಯವಾದ ಮೊಬಲಗನ್ನು ಠೇವಣಾತಿ ಇಡತಕ್ಕದು ಹಾಗೆ ಪ್ರಾರಂಭದಲ್ಲಿ ಠೇವಣಿ ಮೊಬಲಗು ಅವಶ್ಯಕವಿಲ್ಲವೆಂದು ಸರ್ಕಾರದವರು ಯಾವಾಗಬೇಕಾದರೂ ಬಿಟ್ಟುಬಿಡಬಹುದು. ಪ್ರತಿ ಅಂಗಡಿಗೆ ಯಾರ ಜಡ ದರಖಾಸ್ತು ಅಂಗೀಕರಿಸಲ್ಪಡುತ್ತೋ ಅಂಥಾವರಿಗೆ ಆ ಅಂಗಡಿಯು ಡೆಪ್ಯೂಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತದೆ. ಡೆಪ್ಯೂಟಿ ಕಮಿಷನರವರು ಸದರೀ ದರಖಾಸ್ತನ್ನ ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳು ಉಲ್ಲೇಖಿಸದೆ ಮಂಜೂರು ಯಾ ತಳ್ಳುಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತನ್ನ ಗವರ್ನಮೆಂಟಿನವರು ತಿದ್ದುಪಡಿ ಮಾಡದೆ ಇರುವ ಪಕ್ಷದಲ್ಲಿ, ಅಂಗೀಕರಿಸಿದಂತೆ ಭಾವಿಸತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು. ಅಥವಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದು ಇರುವ ಅವರ ತರಫ್ ಮುತಾಲೀಕರನ್ನ ಕಳುಹಿಸಬೇಕು. ಯಾವ ಅಂಗಡಿಯನ್ನು ಒಬ್ಬ ಆಸಾಮಿಗಿಂತ, ಯಾ ಕ್ರಮವಾಗಿ ಏರ್ಪಟ್ಟಿರುವ ಒಂದು ಕಂಪನಿ ಯಾ ಫರಂಗಿಂತ ಹೆಚ್ಚಾದ ಸಂಖ್ಯೆಯುಳ್ಳವರ ಹೆಸರಿಗೆ ಛಡಸವಾಲಿನಲ್ಲಿ ನಿಲ್ಲಿಸಕೂಡದು. ಹರಾಜು ಮಾಡುವ ಅಧಿಕಾರಿಯು ಯಾರ ಹೆಸರಿನಿಂದ ಸವಾಲು ಬಂದಿರುವದಿಲ್ಲವೋ ಆತನ ಹೆಸರನ್ನು ಕೊಂಡುಕೊಂಡವನೆಂದು ದಾಖಲ್ಮಾಡಲು ತಿರಸ್ಕರಿಸತಕ್ಕದ್ದು.

3. ಹರಾಜು ಪೂರೈಸಿದ ಕೂಡಲೆ ನಾಮಂಜೂರಾದ ಸವಾಲ್‌ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡದೇ ಇರುವ ಪಕ್ಷಕ್ಕೆ ಅವರುಗಳಿಗೆ ವಾಪಸು ಮಾಡಲ್ಪಡುತ್ತವೆ. ಹರಾಜು ನಡೆಯುತ್ತಿರುವಾಗ ಯಾರ ಸವಾಲ್ ಅಂಗೀಕರಿಸಲ್ಪಡುತ್ತೋ ಅವರವರು ತಕ್ಷಣವೇ ಆ ಅಂಗಡಿಯು ಒಂದು ತಿಂಗಳ ಗುತ್ತಿಗೆ ಹಣದಲ್ಲಿ ರೂಪಾಯಿ 1ಕ್ಕೆ 10 ಆಣೆ ಭಾಗದ ಮೊಬಲಗನ್ನ ಠೇವಣೀ ಇಡಬೇಕು. ಇದಕ್ಕೆ ಯಾರಾದರೂ ತಪ್ಪಿದಲ್ಲಿ ಮೇಲೆ 2ನೇ ಕಲಂನಲ್ಲಿ ಕಂಡಂತೆ ಆತನು ಇಟ್ಟಿರುವ ಠೇವಣೀ ಮೊಬಲಗು ಸರ್ಕಾರಕ್ಕೆ ದಾಖಲಾಗಿ ಸದರೀ ಅಂಗಡಿಯು ಪುನಹ ಮೇಲೆ ನಮೂದಿಸಿರುವ ಷರತ್ತುಗಳಿಗೆ ಅನುಸಾರವಾಗಿ ಹರಾಜಾಗುವದಲ್ಲದೆ ಆತನು ಈ ಅಂಗಡಿ ಯಾ ಇತರ ಅಂಗಡಿಗಳನ್ನು ಸವಾಲ್ ಮಾಡಕೂಡದು.

4. ಯಾರ ಹೆಸರಿಗೆ ಹರಾಜಿನಲ್ಲಿ ಈ ಅಂಗಡಿಗಳು ನಿಂತು ಮೇಲಿನ 2 ವ 3ನೇ ಕಲಂಗಳಲ್ಲಿ ಕಂಡಂತೆ ಠೇವಣೀ ಮೊಬಲಗುಗಳನ್ನ ಕಟ್ಟಿರುತ್ತಾರೋ ಅವರು ಹರಾಜು ಮಂಜೂರಾದ ವಿಷಯವನ್ನು ನೋಟಿಸ್ ಮೂಲಕ ತಿಳಿಸಲು ಸಾಧ್ಯವಾಗುವಂತೆ ತಮ್ಮ ವಿಳಾಸವನ್ನು ಹರಾಜು ನಡಿಸತಕ್ಕ ಆಫೀಸರವರಲ್ಲಿ ಕೊಟ್ಟು ಹೋಗತಕ್ಕದ್ದು. ಸದರಿ ನೋಟಿಸ್ ಅವರಿಗಾಗಲೀ ಅಥವಾ ಸದರಿ ವಿಳಾಸದಲ್ಲಿ ಕೊಟ್ಟಿರುವ ಸ್ಥಳದಲ್ಲಿ ಅವರ ಕುಟುಂಬದ ಇತರ ವಯಸ್ಸಾದ ಗಂಡಸಿಗಾಗಲೀ ರೂಬರೂಬು ಜಾರಿ ಮಾಡೇ ಆಗಲೀ ಅಥವಾ ಅವರ ವಾಸಸ್ಥಾನಕ್ಕೆ ಅಂಟಿಸುವದರಿಂದ ಯಾ ಕ್ರಮವಾಗಿ ರಿಜಿಸ್ಟರ್ಡ್ ಪೋಸ್ಟ್ ಮೂಲಕ ಕಳುಹಿಸಿದ್ದರಿಂದಲೇ ಆಗಲೀ ಜಾರಿಯಾದ 7 ದಿವಸಗಳೊಳಗಾಗಿ ಅವರಿಗೆ ಹರಾಜಿನಲ್ಲಿ ಬಿಡಲ್ಪಟ್ಟಿರುವ ಪ್ರತಿ ಅಂಗಡಿಯು ಎರಡು ತಿಂಗಳ ಗುತ್ತಿಗೆ ಹಣಕ್ಕೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನ ಅವರ ಮೊದಲನೇ ಮತ್ತು ಎರಡನೇ ಠೇವಣಾತಿಗಳಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನ ತಾಲ್ಲೂಕು ಖಜಾನೆಯಲ್ಲಿ ಠೇವಣಿ ಕಟ್ಟಿ ವಿಧಾಯಕವಾದ ನಮೂನೆಯಲ್ಲಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸ್‌ಗಳನ್ನ ಪಡಿಯತಕ್ಕದ್ದು, ಮತ್ತು ಒಂದು ಎದುರು ಒಡಂಬಡಿಕೆಯನ್ನು ಬರೆದು ಕೊಡತಕ್ಕದ್ದು. ಈ ರೀತೀಲಿ ಠೇವಣಿ ಇಡುವದಕ್ಕೆ ಯಾ ಲೈಸೆನ್ಸ್ ಪಡೆಯಲಿಕ್ಕೆ ಯಾ ಎದುರು ಒಡಂಬಡಿಕೆಯನ್ನು ಬರೆದು ಕೊಡಲಿಕ್ಕೆ ತಪ್ಪಿದರೆ ಸದರೀ ಅಂಗಡಿಯು ಹಾಗೆ ತಪ್ಪಿದ ಮನುಷ್ಯರ ಜವಾಬ್‌ದಾರಿ ಮೇಲೆ ಪುನಹ ಹರಾಜು ಮಾಡಲ್ಪಡುತ್ತೆ. ಅಥವಾ ಈ ಇಸ್ತಿಹಾರಿನಲ್ಲಿ ಕಂಡ ಹರಾಜು ಮೊದಲೇ ಪೂರೈಸಿಹೋಗಿರುವ ಪಕ್ಷಕ್ಕೆ ಡೆಪ್ಯೂಟಿ ಕಮಿಷನರವರು ಅವರಿಗೆ ಯುಕ್ತತೋರುವಂತೆ ಬೇರೆ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ. ಹರಾಜು ಮಂಜೂರಾದನಂತರ ಕೊಂಡುಕೊಂಡವನು ಮೃತಪಟ್ಟರೆ ಜವಾಬ್‌ದಾರಿಯು ಆತನ ವಾರಸುದಾರರು ಅಥವಾ ಆತನಿಂದ ವರ್ಗಪಡೆದವರನ್ನ ಹೊಂದಿರುತ್ತೆ.

5. ಮೇಲಿನ 4ನೆ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್‌ದಾರಿಮೇಲೆ ನಡಿಯುತ್ತವೆ. ಇದರಿಂದ ಆತನು ಆದಾಯವನ್ನೆಲ್ಲಾ ಕಳೆದುಕೊಂಡವನಾಗುತ್ತಾನೆ. ಮತ್ತು ದುಸರೆ ಹರಾಜು ಮಾಡುವಲ್ಲಿ ಯಾ ಅನ್ಯಥಾ ವಿಲೇವಾರಿಯಿಂದ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ

ಬಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೇ ಹರಾಜಾದ್ದರಲ್ಲಿ ಯಾ ಅನ್ಯಥಾ ವಿಲೇವಾರಿ ಮಾಡಿದ್ದರಲ್ಲಿ ಬಿಡಿಸಿ ಹಾಲ್‌ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾ ಬಾಕಿ ಉಳಿಯುವದರನ್ನು ಆತನು ಭರ್ತಿ ಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಠೇವಣಿ ಮೊಬಲಗುಗಳನ್ನು ವಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನು ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡೋಣಾಗುತ್ತೆ. ಆದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಸದರೀ ಠೇವಣಿ ಮೊಬಲಗು ದುಸರೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಆ ಠೇವಣಿ ಮೊಬಲಗನ್ನೆಲ್ಲಾ ಸರ್ಕಾರಕ್ಕೇನೆ ಜಮಾ ಮಾಡಿಕೊಳ್ಳತಕ್ಕದ್ದು.

6. ಮೇಲಿನ 4ನೇ ಕಲಂನಲ್ಲಿ ಕಂಡವರಿಗೆ ಹೊಂದಬೇಕಾದ ಲೈಸೆನ್ಸ್ ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:—

(1) ಸದರೀ ಒಟ್ಟು ಸ್ವತಂತ್ರದ ಹಕ್ಕನ್ನು ಪಡಕೊಂಡದ್ದಕ್ಕೆ ಕೊಡಬೇಕಾದ ಮೊಬಲಗನ್ನು ವಿಧಾಯಕವಾದ ಚಲನ್‌ನಲ್ಲಿ ತಾಲ್ಲೂಕು ಖಜಾನೆಗೆ 1904ನೇ ಇಸವಿ ಜುಲೈ ಮಾಹೆ ಲಾಗಾಯತು ಸರಿಯಾದ ತಿಂಗಳುಗಳ ಕಿಸ್ತು ಪ್ರಕಾರ ಪಾವತಿ ಮಾಡುತ್ತಾ ಬರತಕ್ಕದ್ದು. ಪ್ರತಿಯೊಂದು ಕಿಸ್ತು ಯಾವ ತಿಂಗಳಿಗೆ ಪಾವತಿ ಆಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಪ್ರತಿಯೊಂದು ತಿಂಗಳ ಗುತ್ತಿಗೆ ಮೊಬಲಗು ಇದಕ್ಕಾಗಿ ಗೊತ್ತಾಗಿರುವ ಚಲನ್ ಮೂಲಕ ಅದೇ ತಿಂಗಳ 20ನೇ ತಾರೀಖಿನಲ್ಲಿ ಅಥವಾ ಅದಕ್ಕೆ ಮುಂಚಿತವಾಗಿ ಪಾವತಿಯಾಗತಕ್ಕದ್ದು. ಅಂಥಾ ಮೊಬಲಗು 12 ರೂಪಾಯಿಗಳಿಗೆ ಕಮ್ಮಿಯಾಗಿದ್ದರೆ ಮೂರು ತ್ರೈಮಾಸಿಕದ ಕಿಸ್ತುಗಳಿಗೆ ಅತಿಕ್ರಮಿಸದಂತೆ 1904ನೇ ಇಸವಿ ಜುಲೈ ಗುರ್ರೆ ಲಾಗಾಯಿತು ಪಾವತಿ ಮಾಡಲ್ಪಡಬೇಕು. ಲೈಸೆನ್ಸ್‌ದಾರನಿಂದ ಠೇವಣಿ ಇಡಲ್ಪಟ್ಟಿರುವ 2 ತಿಂಗಳ ಗುತ್ತಿಗೆ ಮೊಬಲಗು ಗುತ್ತಿಗೆ ಅವಧಿಯ ಕೊನೇ 2 ತಿಂಗಳಿನ ಕಿಸ್ತುಗಳಿಗೋಸ್ಕರ ಉಪಯೋಗಿಸಲ್ಪಡತಕ್ಕದ್ದು. ಸದರೀ 20 ನೇ ತಾರೀಖಿನೊಳಗಾಗಲಿ ಅಥವಾ ಯಾವ ತ್ರೈಮಾಸಿಕಕ್ಕೆ ಬಾಕಿ ನಿಲ್ಲುತ್ತೆಯೋ ಆ ತ್ರೈಮಾಸಿಕದ ಆಖೈರೊಳಗಾಗಲಿ ಪಾವತಿ ಮಾಡಲಿಕ್ಕೆ ತಪ್ಪಿದಲ್ಲಿ ಡೆಪ್ಯುಟಿ ಕಮ್ಮಿಷನರವರು ಜಮೀನ್ ಕಂದಾಯ ವಸೂಲ್ಮಾಡುವದಕ್ಕೆ ಜಾರೀಲಿರುವ ನಿಬಂಧನೆಗಳ ಪ್ರಕಾರ ವರುಷಕ್ಕೆ ಸೇಕಡಾ 6 ರೂಪಾಯಿಯಂತೆ ಬಡ್ಡಿ ಸಹಿತ ಬಾಕಿ ಮೊಬಲಗನ್ನು ವಸೂಲ್ಮಾಡುವದಕ್ಕೆ ತಕ್ಷಣ ಪ್ರವರ್ತಿಸತಕ್ಕದ್ದು. ಲೈಸೆನ್ಸ್‌ದಾರನು ತಾನು ಕೊಡಬೇಕಾಗಿರುವ ಗುತ್ತಿಗೆ ಮೊಬಲಗಿನಲ್ಲಿ ಯಾವ ಕಾರಣದಿಂದಲಾಗಲಿ ಮಾಫಿ ವಜಾ ಮುಂತಾದ್ದನ್ನು ಪಡೆಯುವದಕ್ಕೆ ಹಕ್ಕುದಾರನಾಗಿರುವದಿಲ್ಲಾ.

(2) ಲೈಸೆನ್ಸ್‌ದಾರನು ಯಾವದಾದರೂ ಬಾಂಡೆಡ್ ಡಿಪೋದಿಂದ ಗಾಂಜಾ 80 ತೊಲೆಗಳುಳ್ಳ ಸೇರು 1ಕ್ಕೆ ರೂಪಾಯಿ 0—13—4 ಪ್ರಕಾರವೂ, ಮಾಜಂ ರೂ. 0—5—4 ಪ್ರಕಾರವೂ ಖರೀದಿ ಕೊಟ್ಟು ಸದರಿ ಪದಾರ್ಥಗಳನ್ನು ಕೊಂಡುಕೊಳ್ಳತಕ್ಕದ್ದು.

(3) ಮೇಲ್ಕಂಡ ಖರೀದಿ ಸಿವಾಯಿ, ಗಾಂಜಾ ಸೇರು 1ಕ್ಕೆ (ಲೋಕಲ್ ಸೆಸ್ ಸಹಿತವಾಗಿ) ರೂ. 3—6—8 ದರದಂತೆಯೂ, ಮಾಜಂ ಸೇರು 1ಕ್ಕೆ ರೂ. 0—11—8 ದರದಂತೆಯೂ ಡ್ಯೂಟಿ ಯನ್ನು ಹಾಸಲನ್ನು ತಾಲ್ಲೂಕು ಖಜಾನೆಗೆ ಅಥವಾ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಅನುಮತಿ ಮೇಲೆ ಬೇರೆ ಇತರ ಸರ್ಕಾರದ ಖಜಾನೆಗೆ ಮುಂಗಡವಾಗಿ ಪಾವತಿ ಮಾಡತಕ್ಕದ್ದು.

(4) ಲೈಸೆನ್ಸ್‌ದಾರನಿಂದ ಮಾರಲ್ಪಡುವ ಗಾಂಜಾ ಒಳ್ಳೇ ಗುಣವುಳ್ಳದ್ದಾಗಿಯೂ, ಬೆರಿಕೆ ಇಲ್ಲದ್ದಾಗಿಯೂ, ಇರತಕ್ಕದ್ದು. ಮತ್ತು ಗಾಂಜಾ 80 ತೊಲೆ ಸೇರು ಒಂದಕ್ಕೆ 10 ರೂಪಾಯಿ ಪ್ರಕಾರವೂ ಯಾ ತೊಲೆ 1ಕ್ಕೆ ಎರಡಾಣೆ ಪ್ರಕಾರವೂ, ಮಾಜಂ ಸೇರು 1ಕ್ಕೆ ರೂ. 1—10—8 ಪ್ರಕಾರವೂ, ಆತನಿಂದ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹಾಜರಿರುವ ತಮಾಂ ಗಾಂಜಾ ಮತ್ತು ಮಾಜಂ ಲೈಸೆನ್ಸು ಪಡೆದ ದುಕಾನಿನಲ್ಲಿ ಇಡಲ್ಪಡತಕ್ಕದ್ದೇ ಹೊರ್ತು ಯಾವ ನೆಪದಿಂದಲೂ ವಿಶೇಷ ಅಪ್ಪಣೆ ಇಲ್ಲದೆ ಅನ್ಯತ್ರ ಎಲ್ಲಿಯೂ ಇಡಲ್ಪಡತಕ್ಕದ್ದಲ್ಲವು.

(5) ಲೈಸೆನ್ಸ್‌ದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ತ್ರಾಸು ವ ಬಟ್ಟುಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲೆಕ್ಕ ಮದತ್ ಪದಾರ್ಥಗಳನ್ನು ಸಾಗಿಸುವ ಬಗ್ಯೆ ಬೇಕಾದ ರಹದಾರೀ ಅಥವಾ ಪ್ಯಾಸ್ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೇ ಬರೆಗಿಸಿಕೊಳ್ಳತಕ್ಕದ್ದು.

(6) ಲೈಸೆನ್ಸ್‌ದಾರನು 1904ನೆ ಇಸವಿ ಜುಲೈ ಗುರ್ರೇಯಲ್ಲಿ ಹಳೇ ಲೈಸೆನ್ಸ್‌ದಾರನ ಬಾಬತು ಸದರೀ ಅಂಗಡಿಯಲ್ಲಿ ದಾಸ್ತಾನ್ ಇರಬಹುದಾದ ಮದತ್ ಪದಾರ್ಥಗಳನ್ನು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರದ್ರವ್ಯವನ್ನು ಹಳೇ ಲೈಸೆನ್ಸ್‌ದಾರನಿಗೆ ಪಾವತಿಮಾಡಿ ತೆಗದುಕೊಳ್ಳಲು ಸಿದ್ಧನಾಗತಕ್ಕದ್ದು.

(7) ಲೈಸೆನ್ಸ್‌ದಾರನು ಹಾಲಿ ಜಾರೀಲಿರುವ ನಿಬಂಧನೆಗಳು ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡದುಕೊಳ್ಳಲು ಬದ್ಧನಾಗಿರತಕ್ಕದ್ದು. ಲೈಸೆನ್ಸ್‌ದಾರನು ತನ್ನ ಲೈಸೆನ್ಸಿನ ವಾಯಿದೆ ಆಂದರ್‌ವಾರ್ ಎಕ್ಸೈಸ್ ಕಮ್ಮಿಷನರವರ ಲಿಖಿತ ಮೂಲಕವಾದ ಹುಕುಂ ಇಲ್ಲದೆ, ಮೈಸೂರು ಸೀಮೆಯ ಹೊರಗಾಗಲಿ ಯಾ ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ನಲ್ಲಾಗಲಿ ಯಾವದೊಂದು ಮದತ್ ಪದಾರ್ಥಗಳ ಅಂಗಡಿಯಲ್ಲಿ ಪ್ರತ್ಯಕ್ಷವಾದ ಯಾ ಪರೋಕ್ಷವಾದ ಸಂಬಂಧವನ್ನು ಇಟ್ಟುಕೊಂಡಿರಕೂಡದು.

(8) ಮುವತ್ ಪದಾರ್ಥಗಳನ್ನು ಮಾರಲಿಕ್ಕೆ ಯಾವ ಹೆಂಗಸನ್ನೂ ಇಡಕೂಡದು.

(9) ಬಾಕಿ ಕರಾರುಗಳು ವ ಷರತ್ತುಗಳು ವಿಧಾಯಕವಾಗಿರುವ ಲೈಸೆನ್ಸಿನಲ್ಲಿ ಉದಹರಿಸಿರುವ ಪ್ರಕಾರ ಇರತಕ್ಕದ್ದು.

7. ಲೈಸೆನ್ಸದಾರನು ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಸೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಯನ್ನು ತೆಗೆಯುವವರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣಿ ಮೊಬಲಗನ್ನು ದಂಡವಾಗಿ ಸರ್ಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೇವೆಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನು ರದ್ದುಮಾಡಿ ಸದರೀ ಲೈಸೆನ್ಸದಾರನ ಜವಾಬ್ದಾರಿ ಮೇಲೆ ಮೇಲ್ಕಂಡ ಹಕ್ಕನ್ನು ಪುನಹ ಹರಾಜು ಮಾಡಲಿಕ್ಕೂ ಯಾ ಇತರ ವಿಧವಾಗಿ ವಿಲೇ ಮಾಡಲಿಕ್ಕೂ ಡೆಪ್ಯುಟಿ ಕಮಿಷನರವರು ಮುಖ್ತ್ಯಾರರಾಗಿರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನು 1904ನೇ ಇಸವಿ ಜುಲೈ ಗುರ್ರೆ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗೆದು, ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟ ದೇಖೀಲು ಸದರೀ ಲೈಸೆನ್ಸದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಲೈಸೆನ್ಸ್ ರದ್ದುಮಾಡಲ್ಪಟ್ಟರೆ ಪೂರಾ ಕಾಲದ ಗುತ್ತಿಗೆ ಹಣವು ಕೂಡ್ಲೆ ಪಾವತಿ ಮಾಡಲಿಕ್ಕೆ ಗುರಿಯಾಗತಕ್ಕದ್ದು. ಮತ್ತು ಅಂಥಾ ಮೊಬಲಗು ಜಮೀನ್ ಕಂದಾಯದ ಬಾಕಿಯಂತೆ ಎಲ್ಲಾ ನಷ್ಟಗಳ ಸಹಿತವಾಗಿ ವಸೂಲ್ಮಾಡತಕ್ಕದ್ದು.

8. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ್ ಯಾ ನಿಬಂಧನೆಗಳಿಗೆ ವಿರೋಧವಾಗಿ ನಡಿಸಿದ ತಕ್ಸೀರಿಗೆ ಲೈಸೆನ್ಸದಾರನನ್ನಾಗಲಿ ಯಾ ಆತನ ನೌಕರನನ್ನಾಗಲಿ ಆಪಾದಿಸಿ ದರ್ಯಾಫ್ತು ಕ್ರಮ ನಡಿಸಲು ಅತಂಕ ಪಡಿಸುವದಿಲ್ಲ.

ಷೆಡ್ಯೂಲ್.

ಈ ಬಗ್ಗೆ 1904ನೆ ಮಾರ್ಚಿ 31ನೆ ತಾರೀಖಿನ ಮೈಸೂರು ಗೆಜೆಟ್ ಸಪ್ಲಿಮೆಂಟಿನಲ್ಲಿ ಪ್ರಾಯಿಷಾದ ಗಾಂಜಾ ಮತ್ತು ಅಫೀಂ ಬಾಬತು ಷೆಡ್ಯೂಲುಗಳನ್ನು ನೋಡತಕ್ಕದ್ದು. ಸದರೀ ಷೆಡ್ಯೂಲುಗಳಲ್ಲಿ ನಮೂದಿಸಲ್ಪಟ್ಟ ಹರಾಜು ತಾರೀಖುಗಳು ಇದರಡೀ ಕಂಡ ಬದಲಾವಣೆಗೆ ಒಳಪಟ್ಟಿರತಕ್ಕದ್ದು:—

1ನೇ ಪುಟದಲ್ಲಿ ..	11ನೆ ಏಪ್ರಿಲ್ 1904	ಎಂಬದಕ್ಕೆ ಬದಲಾಗಿ ...	2ನೆ ಮೇ 1904	ಎಂಬದಾಗಿ ಓದಿಕೊಳ್ಳತಕ್ಕದ್ದು.	
	14ನೆ ಡಿಟೋ	,,	2ನೆ ಡಿಟೋ	,,	
	16ನೆ ಡಿಟೋ	,, ...	3ನೆ ಡಿಟೋ	,,	
	18ನೆ ಡಿಟೋ	,, ...	4ನೆ ಡಿಟೋ	,,	
2ನೇ ಡಿಟೋ ...	19ನೆ ಡಿಟೋ	,,	5ನೆ ಡಿಟೋ	,,	
	20ನೆ ಡಿಟೋ	,,	7ನೆ ಡಿಟೋ	,,	
6ನೇ ಡಿಟೋ ...	16ನೆ ಡಿಟೋ	,, ..	20ನೆ ಡಿಟೋ	,,	
7ನೇ ಪುಟದಲ್ಲಿ	18ನೆ ಏಪ್ರಿಲ್ 1904	ಎಂಬದಕ್ಕೆ ಬದಲಾಗಿ ...	21ನೆ ಮೇ 1904	ಎಂಬದಾಗಿ ಓದಿಕೊಳ್ಳತಕ್ಕದ್ದು.	
	20ನೆ ಡಿಟೋ	,, ..	23ನೆ ಡಿಟೋ	,,	
	22ನೆ ಡಿಟೋ	,, ..	24ನೆ ಡಿಟೋ	,,	
	26ನೆ ಡಿಟೋ	,, ..	30ನೆ ಡಿಟೋ	,,	
	25ನೆ ಡಿಟೋ	,, ..	27ನೆ ಡಿಟೋ	,,	
8ನೇ ಡಿಟೋ ..	30ನೆ ಡಿಟೋ	,, ..	2ನೆ ಜೂನ್ 1904	,,	
9ನೇ ಡಿಟೋ ..	20ನೆ ಡಿಟೋ	,, ..	19ನೆ ಮೇ 1904	,,	
	2[illegible]ನೆ ಡಿಟೋ	,, ..	21ನೆ ಡಿಟೋ	,,	
	2[illegible]ನೆ ಡಿಟೋ	,, ...	23ನೆ ಡಿಟೋ	,,	
10ನೇ ಡಿಟೋ ..	28ನೆ ಡಿಟೋ	,, ..	27ನೆ ಡಿಟೋ	,,	ಮೂಡಿಗೆರೆಗೆ ಎದುರಾಗಿ
	16ನೆ ಡಿಟೋ	,, ..	25ನೆ ಡಿಟೋ	,,	
	18ನೆ ಡಿಟೋ	,, ..	18ನೆ ಡಿಟೋ	,,	
	28ನೆ ಡಿಟೋ	,, ..	7ನೆ ಜೂನ್ 1904	,,	ಚನ್ನಗಿರಿಗೆ ಎದುರಾಗಿ
	11ನೆ ಡಿಟೋ	,, ..	21ನೆ ಮೇ 1904	,,	
11ನೇ ಡಿಟೋ ...	25ನೆ ಡಿಟೋ	,, ..	4ನೆ ಜೂನ್ 1904	,,	
	22ನೆ ಡಿಟೋ	,, ...	1ನೆ ಡಿಟೋ	,,	
	20ನೆ ಡಿಟೋ	,, ...	30ನೆ ಮೇ 1904	,,	
	18ನೆ ಡಿಟೋ	,, ..	27ನೆ ಡಿಟೋ	,,	
	16ನೆ ಡಿಟೋ	,, ...	25ನೆ ಡಿಟೋ	,,	
12ನೇ ಡಿಟೋ ...	14ನೆ ಡಿಟೋ	,, ..	24ನೆ ಡಿಟೋ	,,	

ಪಿ. ಎನ್. ಪೂರ್ಣಯ್ಯ,
ಮೈಸೂರು ಶೀಮೆಯ ಎಕ್ಸೈಜ್ ಕಮಿಷನರ್.

ಫಾರೆಸ್ಟ್ ಇಲಾಖಾ.

ನೋಟಿಸ.

ತಾರೀಖು 13ನೆ ಏಪ್ರೈಲ್ 1904ನೆ ಇಸವಿ.

1900ನೆ ಇಸವಿ ಫಾರೆಷ್ಟು ರೆಗ್ಯುಲೇಷನ್ 40ನೆ ಸೆಕ್ಷನ್ ಮೇರೆ ಈ ಕೆಳಗೆ ನಮೂದಿರುವ ಸಾಗುವಾನಿ ಮತ್ತು ಬೀಟೆ ಮರಗಳು ಹೋದವರುಷ ಕಪಿಲಾನದಿಮೇಲೆ ತೇಲಿಕೊಂಡುಬಂದವುಗಳು ಹೆಗ್ಗಡದೇವನಕೋಟೆ ರೇಂಜ್ ಆಫೀಸರವರ ಚಾರ್ಜಿನಲ್ಲಿರುತ್ತವೆ. ಇದರ ಹಕ್ಕುದಾರರು ಯಾರಾದರೂ ಇದ್ದಲ್ಲಿ ಸದರಿ ಮರಗಳ ಹಕ್ಕನ್ನು ಸ್ಥಿರಪಡಿಸಿ ಇರತಕ್ಕ ಲಿಖಿತವಾದ ಸ್ಟೇಟ್‌ಮೆಂಟನ್ನು ಈ ಲಾಗಾಯತು ಒಂದು ತಿಂಗಳ ಒಳಗಾಗಿ ಮೈಸೂರು ಡಿಸ್ಟ್ರಿಕ್ಟು ಫಾರೆಷ್ಟು ಆಫೀಸರವರಲ್ಲಿ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಸದರಿ ಮರಗಳ ಬಾಧ್ಯತೆಯು ಯಾವ ಆಟಂಕವೂ ಇಲ್ಲದಂತೆ ಸರ್ಕಾರಕ್ಕೆ ಒಳಪಡಿಸಿಕೊಳ್ಳುವುದು.

ಸದರಿ ನಾಟಗಳನ್ನು ಸ್ವಾಧೀನಪಡಿಸಿಕೊಳ್ಳಲು ಹಕ್ಕುದಾರರಾಗತಕ್ಕವರು ಸದರಿ ತೊಲೆ ಪತ್ತೆದಾರಿ ಮತ್ತು ಭದ್ರ ಪಡಿಸಿದ್ದಕ್ಕೆ ತಗಲಿದ ಲಾಗವಡನ್ನು ಫಾರೆಷ್ಟು ಅಧಿಕಾರಿಗಳಿಗೆ ಕೊಡಲು ಬದ್ಧರಾಗಿರುತ್ತಾರೆ:—

ನಂಬರು.	ತೊಲೆ ವಿವರ.	ಗುರ್ತು.	ಲಾಂಬಿ.		ಸುತ್ತು.	ಸಲೆ ಅಡಿ.
			ಅಡಿ.	ಇಂಚ್.		
1	ಸಾಗುವಾನಿ ನಾಟ ..	92ನೆ ನಂಬರು ತೊಲೆ. ಇಟ್ನಹಳ್ಳಿ ಕಾಡಿನಲ್ಲಿ ಬಿದ್ದಿದೆ.	13	9	6′—6″	35
2	ಬೀಟೆ ನಾಟ ..	ಯಾವ ಗುರ್ತು ಮರದಮೇಲೆ ಇರುವದಿಲ್ಲ. ಪಟೇಲರ ಸ್ವಾಧೀನದಲ್ಲಿ ಕಿತ್ತೂರು ಗ್ರಾಮದಲ್ಲಿ ಬಿದ್ದಿರುತ್ತೆ.	17	0	3′—0″	10

1904ನೆ ಇಸವಿ ಏಪ್ರೈಲ್ ತಾರೀಖು 17ರಲ್ಲು.

ಇದರಿಂದ ಸಮಸ್ತ ಜನಗಳಿಗು ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿಸುವ ಮೈಸೂರು ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ಡಿಪೋ ಮತ್ತು ಕೋಠಿಗಳಲ್ಲಿ ಪಸಾರೆ ಜಿನಸಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ:—

ನಂಬರು.	ಡಿಪೋ ಯಾ ಕೋಠಿ ಹೆಸರು.	ಹರಾಜು ತಾರೀಖು.	ಹರಾಜು ಮಾಡಿಸಲ್ಪಡುವ ಆಫೀಸರ ಹೆಸರು.	ಪಸಾರೆ ಜಿನಸಿ. ಅಳಲೇಕಾಯಿ.		ಜೇನುತುಪ್ಪ.		ಜೇನುಮೇಣ.		ಸೀಗದ ಕಾಯಿ.		ಚಿಗೇಕಾಯಿ.		ಅಗರ ಅರಗು.		ಬಿದ್ರಂ ಅರಗು.	
				ಮಣ.	ಸೇರು	ಮ.	ಪೌ	ಮ	ಪೌ	ಮ.	ಪೌ	ಮ.	ಪೌ	ಮ.	ಪೌ	ಮ.	ಪೌ
1	ಮೈಸೂರು ವುಡಿಯಾರ್ಡು.	2—5—04	ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರವರು.	2,423	7	9	17	8	27	11	24	97	...	..	..	...	..
2	ಶ್ರೀರಂಗಪಟ್ಟಣದ ಕೋಠಿ	3—5—04	ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರವರು.	1,678	...	1	26	1	22	....	....	.	..	44	..	...	7
3	ಚಾಮರಾಜನಗರದ ಡಿಪೋ.	5—5—04	ಚಾಮರಾಜನಗರದ ರೇಂಜ್ ಆಫೀಸರವರು.	2,000	..	...	..	.	..	..	...	...	..	...	..	...	..
4	ಗುಂಡ್ಲು ಡಿಪೋ ...	7—5—04	ಗುಂಡ್ಲುಪೇಟೆ ಡಿಪೋ	4,000	...	1	26	6	27	1	5	..	...	...	..	...	...
5	ಹುಣಸೂರು ಕೋಠಿ.	9—5—04	ಹುಣಸೂರು ಡಿಪೋ	1,794	21	...	..	...	..	...	...	..	..	...	..	..	...

ಷರತ್ತು:—1887ನೆ ಇಸವಿ ಜೂನ್ 18ನೆ ತಾರೀಖಿನ ಮೈಸೂರು ಗೆಜೆಟ್ಟು 287–288ನೆ ಪೇಜುಗಳಲ್ಲಿ ಪ್ರಾಯಿಷು ಆಗಿರುವ 1887ನೆ ಇಸವಿ 11ನೆ ಜೂನ್ ತಾರೀಖಿನ ಮೈಸೂರು ಫಾರೆಸ್ಟು ಇಲಾಖಾ ಇನ್ಸ್‌ಪೆಕ್ಟರ್‌ರವರ ನೋಟಿಫಿಕೇಷನ್ ನೋಡಿ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಮೈಸೂರು ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾರೀಖು 29ನೆ ಮಾರ್ಚಿ 1904ನೆ ಇಸವಿ.

ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಇನಾಂ ಗ್ರಾಮಗಳು, ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ ಆಯಾಯ ತಾಲ್ಲೂಕು ಅಮಲ್ದಾರ್ರುಗಳ ಕಚೇರಿಯಲ್ಲಿ 1904ನೆ ಇಸವಿ ಮೇ ಮಾಹೆ 20ನೆ ತಾ|| ದಿವಸ ಬಹಿರಂಗವಾಗಿ ಹರಾಜ್ ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

1. ಬವರಿಂಗಪೇಟೆ ತಾಲ್ಲೂಕು ಬೇತಮಂಗಲದ ಹೋಬಳಿ ಜೋಡಿ ಪೋತರಾಜಪಲ್ಲಿ.
2. ಡಿಟೋ ಡಿಟೋ ಜೋಡಿ ಬಡಮಾಕಲಹಳ್ಳಿ.
3. ಮಾಲೂರು ತಾಲ್ಲೂಕು ನರಸಾಪುರದ ಹೋಬಳಿ ಜೋಡಿ ಕೀತನ್ನನಹಳ್ಳಿ.
4. ಗೋರಿಬಿದನೂರು ತಾಲ್ಲೂಕು ನಗರಗೆರೆ ಹೋಬಳಿ ಬಾಯುಂಗುತ್ತಾ ಮುತ್ತಲಹಳ್ಳಿ.

(ಹೆಚ್ಚು ತಪಶೀಲ್ ಬಗ್ಗೆ 1904ನೆ ಮಾರ್ಚಿ 15ನೆ ನಂ. ಮೈಸೂರ ಗೆಜೆಟ್ಟಿನ 2ನೆ ಭಾಗದ 229, 230, 231, 232, 233ನೆ ನಂ. ಪೇಜು ನೋಡತಕ್ಕದ್ದು)

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಡೆಪ್ಯುಟಿ ಕಮಿಷ್ನರ್.

ತುಮಕೂರು ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತುಮಕೂರು ಡಿಸ್ಟ್ರಿಕ್ಟು ತುರ್ವೇಕೆರೆ ಸಬ್ ತಾಲ್ಲೂಕು ಜೋಡಿ ಅರಕಿನದಹಳ್ಳಿ ಗ್ರಾಮವು 1904ನೆ ಮೇ ಮಾಹೆ 23ನೆ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ತುಮಕೂರು ಡಿಸ್ಟ್ರಿಕ್ಟು ಮಧುಗಿರಿ ತಾಲ್ಲೂಕು ಜೋಡಿ ಚಿಕ್ಕ ತಿಮ್ಮನಹಳ್ಳಿ ಗ್ರಾಮವು 1904ನೆ ಇಸವಿ ಮೇ ಮಾಹೆ 23ನೆ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಬಿ. ಭೀಮರಾವ್,
ಫಾರ್ ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾರೀಖು 12ನೆ ಏಪ್ರೆಲ್ 1904.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—1904ನೆ ಇಸವಿ ಜುಲೈ ಗುರ್ರು ಲಾಗಾಯತು 1905ನೆ ಇಸವಿ ಜೂನ್ ಆಖೈರು ವರಿಗೆ (1 ವರುಷಕ್ಕೆ) ಕಡೂರು ಡಿಸ್ಟ್ರಿಕ್ಟಿನ ಇದರಡಿ ಕಾಣಿಕಿರುವ ಟೋಲು ಗೇಟುಗಳಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ಡೆಪ್ಯುಟಿ ಕಮಿಷನರ್ ಯಾ ಅವರಿಂದ ಈ ಕೆಲಸಕ್ಕೆ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರ್ ಅವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ:—

ನಂಬರು	ಟೋಲು ಗೇಟು ಹೆಸರು.	ಹರಾಜು ತಾರೀಖು.	ಹರಾಜು ನಡಿಯುವ ಸ್ಥಳ.
1	ಬಾಳೆಹೊನ್ನೂರು (ಭದ್ರಾನದಿ ಸೇತುವೆ)	28ನೆ ಮೇ 1904.	ಬಾಳೆಹೊನ್ನೂರು ಮುಸಾಫರ್ ಬಂಗ್ಲೆಯಲ್ಲಿ.
2	ತಡಸ (ಭದ್ರಾನದಿ ಸೇತುವೆ)	23ನೆ ಡಿಟೋ	ಯಡೆಹಳ್ಳಿ ಸಬ್ ತಾಲ್ಲೂಕು ಕಚೇರಿಯಲ್ಲಿ.
3	ಹರಿಹರಪುರ (ತುಂಗಾನದಿ ಸೇತುವೆ)	25ನೆ ಡಿಟೋ	ಕೊಪ್ಪದ ತಾಲ್ಲೂಕು ಕಚೇರಿಯಲ್ಲಿ.

ಇತರ ತಪಶೀಲುಗಳನ್ನು 1904ನೆ ಇಸವಿ ಏಪ್ರೆಲ್ ತಿಂಗಳು 7ನೆ ತಾರೀಖಿನ ಗೆಜೆಟ್ಟಿನ 218ನೆ ಪೇಜಿನಲ್ಲಿ ಪ್ರಾಯಿಷ್ ಮಾಡಿರುವ 1904ನೆ ಇಸವಿ ಮಾರ್ಚಿ 31ನೆ ತಾರೀಖಿನ ಮುರು ಇಸ್ತಿಹಾರ್ನಾಮೆಯ ಮೂಲಕ ತಿಳಿದುಕೊಳ್ಳತಕ್ಕದ್ದು.

ತಾರೀಖು 12ನೆ ಏಪ್ರಿಲ್ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—1904ನೆ ಇಸವಿ ಜುಲೈ ಗುರ್ರ್ ಲಾಗಾಯಿತು 1906ನೆ ಇಸವಿ ಜೂನ್ ಆಖೈರು ವರಿಗೆ (2 ವರುಷಗಳಿಗೆ) ಕಡೂರು ಡಿಸ್ಟ್ರಿಕ್ಟಿನ ಮೂಡಿಗೆರೆ ತಾಲ್ಲೂಕು ಕೊಟ್ಟಿಗೆಹಾರು (ಬೂಂದು ಘಾಟಿ) ನಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ಬರುವ ಮೇ ತಿಂಗಳು 16ನೆ ತಾರೀಖಿನ ದಿನ ಮೂಡಿಗೆರೆ ತಾಲ್ಲೂಕು ಕಚೇರಿ ಬಳಿ ಡೆಪ್ಯೂಟಿ ಕಮಿಷನರ್ ಯಾ ಈ ಕೆಲಸಕ್ಕೆ ಅವರಿಂದ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಇತರ ತಪಶೀಲುಗಳನ್ನು 1904ನೆ ಇಸವಿ ಏಪ್ರಿಲ್ ತಿಂಗಳು 7ನೆ ತಾರೀಖಿನ ಗೆಜೆಟ್ಟಿನ 217ನೆ ಪೇಜಿನಲ್ಲಿ ಪ್ರಾಯಿಷ್ ಮಾಡಿರುವ 1904ನೆ ಇಸವಿ ಮಾರ್ಚಿ 31ನೆ ಮುರ್ಕ್ಕಾಮಿನ ಇಸ್ತಿಹಾರ್ನಾಮೆಯ ಮೂಲಕ ತಿಳಿದುಕೊಳ್ಳತಕ್ಕದ್ದು.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಬೆಂಗಳೂರು ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1903—1904ನೆ ಇಸವಿ ಮಿ|| ಅರ್ಜೀ ನಂಬರ್ 367.

ಮೃತಪಟ್ಟ ಕೆ. ಗರುಡಾಚಾರ್ಯರೆಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಶಿವಮೊಗ್ಗಾದಲ್ಲಿರುವ ಗರುಡಾಚಾರ್ಯರ ಮಗ ಶ್ರೀನಿವಾಸಮೂರ್ತಿ ಮೈನರು, ಗಾರ್ಡಿಯನ್ ಕೆ. ತಿರುನಾರಣೈಯ್ಯಂಗಾರ್ರು, ಮೃತಪಟ್ಟ ಸದರೀ ಕೆ. ಗರುಡಾಚಾರ್ಯರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಹೊಸಕೋಟೆ ತಾಲ್ಲೂಕು ಹೆಡ್ ಗುಮಾಸ್ತೆಯಾಗಿದ್ದ ಬೆಂಗಳೂರಲ್ಲಿ ಮೃತಪಟ್ಟ ಸದರಿ ಕೆ. ಗರುಡಾಚಾರ್ಯರ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಫಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶ್ರೀನಿವಾಸಮೂರ್ತಿ ಮೈನರ್, ಗಾರ್ಡಿಯನ್ ಕೆ. ತಿರುನಾರಣೈಯ್ಯಂಗಾರ್ರ ಅರ್ಜಿಯನ್ನು ಸನ್ 1904ನೆ ಇಸವಿ ಜೂನ್ ತಿಂಗಳು ತಾರೀಖು 6ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೆ. ಗರುಡಾಚಾರ್ಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ಏಪ್ರಿಲ್ ತಿಂಗಳು 13ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಮ್ಮ ದಸ್ತಖತ್ತೂಡನೆ ಕೊಡೋಣಾಗಿದೆ.

ಸನ್ 1903—1904ನೆ ಇಸವಿ ಮಿ|| ಅರ್ಜೀ ನಂಬರ್ 373.

ಮೃತಪಟ್ಟ ವಿ. ಎಸ್. ರಾಮರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಚಿಕ್ಕಬಳ್ಳಾಪುರದಲ್ಲಿರುವ ಫವತಿ ಬೆಂಗಳೂರು ಅಡಿಷನಲ್ ಮುನ್ಸಿಫ್‌ಕೋರ್ಟು ಲೇಟ್ ನಾಜರು ವಿ. ಎಸ್. ರಾಮರಾಯರ ಹೆಂಡತಿ ಜಾನಕೀಬಾಯಮ್ಮನು, ಮೃತಪಟ್ಟ ಸದರೀ ವಿ. ಎಸ್. ರಾಮರಾಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ವಿ. ಎಸ್. ರಾಮರಾಯರ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರಟಫಿಕೇಟ್ ಬಗ್ಗೆ ಈ ಕೋರ್ಟಿಗೆ ಫಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಜಾನಕೀಬಾಯಮ್ಮನವರ ಅರ್ಜಿಯನ್ನು 1904ನೆ ಇಸವಿ ಜೂನ್ ತಿಂಗಳು ತಾರೀಖು 6ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವಿ. ಎಸ್. ರಾಮರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ಏಪ್ರಿಲ್ ತಿಂಗಳು 13ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಶಿ ನಮ್ಮ ದಸ್ತಖತ್ತೂಡನೆ ಕೊಡೋಣಾಗಿದೆ.

ಎಸ್. ಆರ್. ಸುಬ್ರಾಯ ಅಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಚಿಕ್ಕಮಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1903—1904ನೆ ಇಸವಿ ಅರ್ಜೀ ನಂಬರ್ 472.

ಮೃತಪಟ್ಟ ಶಿದ್ದಗೌಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕಡೂರು ಡಿಸ್ಟ್ರಿಕ್ಟ್ ಮೂಡಗೆರೆ ತಾಲ್ಲೂಕು ಹರಿಮಕ್ಕಿ ಸ್ಥಳದಲ್ಲಿರುವ 1ನೆ ಕುಮಾರೆಗೌಡ, 2ನೆ ಹೀರೆಗೌಡ, 3ನೆ ನಿಂಗೆಗೌಡ, 4ನೆ ಚಿಕ್ಕಗೌಡ, 5ನೆ ಶಿದ್ದಗೌಡ, 3—4—5 ಅರ್ಜೀದಾರ್ರುಗಳು ಮೈನರ್, ಗಾರ್ಡಿಯನ್ 1—2ನೆ ಅರ್ಜೀದಾರ್ರು, ಮೃತಪಟ್ಟ ಶಿದ್ದಗೌಡರವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿಯ ಮೇಲೆ ಮೂಡಗೆರೆ ತಾಲ್ಲೂಕು ಹರಿಮಕ್ಕಿ ಸ್ಥಳದಲ್ಲಿ ವಾಸಸ್ಥರಾಗಿ ಮೃತಪಟ್ಟ ಶಿದ್ದಗೌಡರವರ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಫಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಕುಮಾರೆಗೌಡ ವಗೈರೇರ ಅರ್ಜಿಯನ್ನು ಸನ್ 1904ನೆ ಇಸವಿ ಜೂನ್ ತಿಂಗಳು ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿದ್ದಗೌಡರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ಮಾರ್ಚಿ 14ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಶಿ ನಮ್ಮ ದಸ್ತಖತ್ತೂಡನೆ ಕೊಡೋಣಾಗಿದೆ.

688

ಸನ್ 1903—1904ನೆ ಇಸವಿ ಅರ್ಜೀ ನಂಬರ 505.

ಮೃತಪಟ್ಟ ಚನ್ನಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಬೀಕನಹಳ್ಳಿಯಲ್ಲಿರುವ ಮಲ್ಲಪ್ಪ, ಮೃತಪಟ್ಟ ಚನ್ನಪ್ಪನಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಮಗಳೂರು ತಾಲ್ಲೂಕು ಬೀಕನಹಳ್ಳಿಯಲ್ಲಿ ವಾಸಸ್ಥರಾಗಿ ಮೃತಪಟ್ಟ ಚನ್ನಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮಲ್ಲಪ್ಪ ಯವರ ಅರ್ಜಿಯನ್ನು ಸನ್ 1904ನೆ ಇಸವಿ ಜೂನ್ ತಿಂಗಳು ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸ ಇದೆ.

ಸನ್ 1904ನೆ ಇಸವಿ ಮಾರ್ಚಿ ತಿಂಗಳು 31ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1903—1904ನೆ ಇಸವಿ ವಿಶೇ ಅರ್ಜೀ ನಂಬರ 545.

ಮೃತಪಟ್ಟ ದೇವಪ್ಪಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಕಳ್ಳಿವಾಶಿ ಮಾಗಣಿ ಶಿರವಾಸಿಯಲ್ಲಿರುವ ದೇವಪ್ಪಗೌಡರ ಮಗ ಲಿಂಗಪ್ಪಗೌಡ, ಮೃತಪಟ್ಟ ದೇವಪ್ಪಗೌಡನವರಿಗೆ ಖಾಸಾ ಅಣ್ಣ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಮಗಳೂರು ತಾ|| ಕಳ್ಳಿ ವಾಶಿ ಮಾಗಣಿ ಶಿರವಾಸಿಯಲ್ಲಿ ವಾಸಸ್ಥರಾಗಿ ಮೃತಪಟ್ಟ ದೇವಪ್ಪಗೌಡನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಿಂಗಪ್ಪಗೌಡ ಯವರ ಅರ್ಜಿಯನ್ನು ಸನ್ 1904ನೆ ಇಸವಿ ಜೂನ್ ತಿಂಗಳು ತಾರೀಖು 20 ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೇವಪ್ಪಗೌಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸ ಇದೆ.

ಸನ್ 1904ನೆ ಇಸವಿ ಏಪ್ರೆಲ್ 2ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1903—1904ನೆ ಇಸವಿ ಅರ್ಜೀ ನಂಬರ 548.

ಮೃತಪಟ್ಟ ರಾಮಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಕಚೇರಿ ದಫ್ತರಬಂದಿ ಸೂರ್ಯನಾರಣಪ್ಪ, ಮೃತಪಟ್ಟ ರಾಮಯ್ಯನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಮಗಳೂರಿನಲ್ಲಿ ವಾಸಸ್ಥರಾಗಿ ಮೃತಪಟ್ಟ ರಾಮಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸೂರ್ಯನಾರಣಪ್ಪನವರ ಅರ್ಜಿಯನ್ನು ಸನ್ 1904ನೆ ಇಸವಿ ಮೇ ತಿಂಗಳು ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ಮಾರ್ಚಿ 31ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1903—1904ನೆ ಇಸವಿ ಅರ್ಜೀ ನಂಬರ 557.

ಮೃತಪಟ್ಟ ಕೃಷ್ಣಸ್ವಾಮಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರು ಸುಲ್ತಾನಪೇಟೆ ಬಂಗ್ಲಾ ಮಠಾರದಲ್ಲಿ ಸ್ಟೋರು ಕೀಪರ ಕೇಶವಯ್ಯಂಗಾರ್ ಮನೆಯಲ್ಲಿರುವ ಮೋತಿಖಾನೆ ಕೃಷ್ಣಸ್ವಾಮಯ್ಯಂಗಾರ್ರ ಹೆಂಡತಿ ಕನಕಮ್ಮ, ಮೃತಪಟ್ಟ ಕೃಷ್ಣಸ್ವಾಮಯ್ಯಂಗಾರ್ರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿಯ ಮೇಲೆ ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರಿನಲ್ಲಿ ವಾಸಸ್ಥರಾಗಿ ಮೃತಪಟ್ಟ ಕೃಷ್ಣಸ್ವಾಮಯ್ಯಂಗಾರ್ರವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲು ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಕನಕಮ್ಮ ಯವರ ಅರ್ಜಿಯನ್ನು ಸನ್ 1904ನೆ ಇಸವಿ ಜೂನ್ ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಕೃಷ್ಣಸ್ವಾಮಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರು ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ಏಪ್ರೆಲ್ ತಿಂಗಳು 11ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ 1903—1904ನೆ ಇಸವಿ ಅರ್ಜೀ ನಂಬರ 563.
ಮೃತಪಟ್ಟ ದೊಡ್ಡಿ ಸುಬ್ಬಾರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಬೆಳವಾಡಿ ಗ್ರಾಮದಲ್ಲಿರುವ 1ನೆ ಗುಂಡಪ್ಪ ಯಾನೆ ವೆಂಕಟಸುಬ್ಬಯ್ಯ, 2ನೆ ನಾಗೇಶರಾವ್, ಮೃತಪಟ್ಟ ದೊಡ್ಡಿ ಸುಬ್ಬಾರಾಯರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿಯ ಮೇಲೆ ಚಿಕ್ಕಮಗಳೂರು ತಾಲ್ಲೂಕು ಬೆಳವಾಡಿ ಗ್ರಾಮದಲ್ಲಿ ವಾಸಸ್ಥರಾಗಿ ಮೃತಪಟ್ಟ ದೊಡ್ಡಿ ಸುಬ್ಬಾರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾರೆ.

ಸದರಿ ದರಖಾಸ್ತುದಾರರಾದ ಗುಂಡಪ್ಪ ಯಾನೆ ವೆಂಕಟಸುಬ್ಬಯ್ಯ, 2ನೆ ನಾಗೇಶರಾವ್ ಯವರ ಅರ್ಜಿಯನ್ನು ಸ್ 1904ನೆ ಇಸವಿ ಜೂನ್ ತಿಂಗಳು ತಾರೀಖು 24ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೊಡ್ಡಿ ಸುಬ್ಬಾರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ 1904ನೆ ಇಸವಿ ಏಪ್ರೈಲ್ ತಿಂಗಳು 4ನೆ ತಾರೀಖಿನಲ್ಲಿ ಕೋರ್ಟು ಮೊಹರುನಿಶಿ ನಮ್ಮ ದಸ್ತುಖತ್ತುಡನೆ ಕೊಡೋಣಾಗಿಧೆ.

ಸ್ 1903—1904ನೆ ಇಸವಿ ಅರ್ಜೀ ನಂಬರ 583.
ಮೃತಪಟ್ಟ ಮರಿಗೌಡರ ಆಸ್ತೀ ವಿಷಯದಲ್ಲಿ—

ಅರ್ಜಿದಾರು ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಕಳಸಾಪುರದಲ್ಲಿರುವ 1ನೆ ಚಿಕ್ಕರಂಗೇಗೌಡ, 2ನೆ ದೊಡ್ಡ ರಂಗೇಗೌಡ, ಮೃತಪಟ್ಟ ಮರಿಗೌಡನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿಯ ಮೇಲೆ ಚಿಕ್ಕಮಗಳೂರು ತಾಲ್ಲೂಕು ಕಳಸಾಪುರದಲ್ಲಿ ವಾಸಸ್ಥರಾಗಿ ಮೃತಪಟ್ಟ ಮರಿಗೌಡನವರ ಜಿಂದಿಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಚಿಕ್ಕ ರಂಗೇಗೌಡ, 2ನೆ ದೊಡ್ಡ ರಂಗೇಗೌಡಯವರ ಅರ್ಜಿಯನ್ನು ಸ್ 1904ನೆ ಇಸವಿ ಜುಲೈ ತಿಂಗಳು ತಾರೀಖು 14ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮರಿಗೌಡರಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ 1904ನೆ ಇಸವಿ ಏಪ್ರೈಲ್ ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತುಖತ್ತುಡನೆ ಕೊಡೋಣಾಗಿಧೆ.

ಸ್ 1903—1904ನೆ ಇಸವಿ ಅರ್ಜೀ ನಂಬರ 591.
ಮೃತಪಟ್ಟ ಶಿದ್ದರಾಮಶೆಟ್ಟಿ ಯವರ ಆಸ್ತೀ ವಿಷಯದಲ್ಲಿ—

ಅರ್ಜಿದಾರು ಕಡೂರು ಡಿಸ್ಟ್ರಿಕ್ಟು ಮೂಡಗೆರೆ ತಾಲ್ಲೂಕು ಗೋಣೀಬೀಡುನಲ್ಲಿರುವ ಚನ್ನಬಸಪ್ಪ ಮೈನರ್, ಗಾರ್ಡಿಯನ್ ತಾಯಿ ಚನ್ನಬಸಮ್ಮ, ಮೃತಪಟ್ಟ ಶಿದ್ದರಾಮಶೆಟ್ಟಿ ಯವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೂಡಗೆರೆ ತಾ|| ಗೋಣೀಬೀಡುನಲ್ಲಿ ವಾಸಸ್ಥರಾಗಿ ಮೃತಪಟ್ಟ ಶಿದ್ದರಾಮಶೆಟ್ಟಿ ಯವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚನ್ನಬಸಪ್ಪ ಮೈನರ್, ಗಾರ್ಡಿಯನ್ ತಾಯಿ ಚನ್ನಬಸಮ್ಮ ಯವರ ಅರ್ಜಿಯನ್ನು ಸ್ 1904ನೆ ಇಸವಿ ಜುಲೈ ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿದ್ದರಾಮಶೆಟ್ಟಿ ಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ 1904ನೆ ಇಸವಿ ಏಪ್ರೈಲ್ ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತುಖತ್ತುಡನೆ ಕೊಡೋಣಾಗಿಧೆ.

ಸ್ 1903—1904ನೆ ಇಸವಿ ಅರ್ಜೀ ನಂಬರ 599.
ಮೃತಪಟ್ಟ ರಾಮಚಂದ್ರರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಕೋಲಾರ ಡಿಸ್ಟ್ರಿಕ್ಟು ಬೌರಿಂಗ್‌ಪೇಟೆ ತಾಲ್ಲೂಕು ಜಯಮಂಗಲದಲ್ಲಿರುವ ಶೀತಾಬಾಯಿ ಮೈನರ್, ಗಾರ್ಡಿಯನ್ ತಂದೆ ಗುಂಡಾಚಾರ್ಯರು, ಮೃತಪಟ್ಟ ರಾಮಚಂದ್ರರಾಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಕಡೂರುನಲ್ಲಿ ವಾಸಸ್ಥರಾಗಿ ಮೃತಪಟ್ಟ ರಾಮಚಂದ್ರರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶೀತಾಬಾಯಿ ಮೈನರ್, ಗಾರ್ಡಿಯನ್ ಗುಂಡಾಚಾರ್ಯರವರ ಅರ್ಜಿಯನ್ನು ಸ್ 1904ನೆ ಇಸವಿ ಜೂನ್ ತಿಂಗಳು ತಾರೀಖು 30ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಚಂದ್ರರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ 1904ನೆ ಇಸವಿ ಏಪ್ರೈಲ್ ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತುಖತ್ತುಡನೆ ಕೊಡೋಣಾಗಿಧೆ.

ಟಿ. ಪರಮಶಿವ ಅಯ್ಯರ್,
ಸಬ್ ಜಡ್ಜಿ.

ಮೈಸೂರ ಗೆಜೆಟ್.

ಸಂ. 39] ಸರ್ಕಾರದಿಂದ ಪ್ರಸಿದ್ಧ ಆದ್ದು. [ಸಂ. 16.

ಬೆಂಗಳೂರು, ಗುರುವಾರ, ಏಪ್ರೈಲ್ ತಾ|| 21, ಸನ್ 1904.

IIIನೆ ಭಾಗ.

ಲೆಜಿಸ್ಲೆಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಲೆಜಿಸ್ಲೆಟಿವು ಇಲಾಖೆ.

ಇಸ್ತಿಹಾರ್ನಾಮೆ, ನಂ: 147—ಲೆ. 5—03, ಬೆಂಗಳೂರು, 7ನೇ ಮಾರ್ಚಿ 1904ನೇ ವರುಷ.

1902ನೇ ವರುಷದ ಮೈಸೂರು ಸೀಮೆಯ ತೂಕಗಳ ಮತ್ತು ಅಳತೆಗಳ ನಿಬಂಧನೆಯಂತೆ ಜಾರಿಯಲ್ಲಿರತಕ್ಕದ್ದಾಗಿ ಉದ್ದೇಶಿಸಲ್ಪಟ್ಟ ನೇಮಗಳ ಈ ಕೆಳಗೆ ಬರುವ ಮಸ್ವಿದೆಯನ್ನು ಎಲ್ಲರ ತಿಳುವಳಿಕೆ ಬಗ್ಗಾಗಿ ಪ್ರಕಟಿಸಲ್ಪಟ್ಟಿರುತ್ತೆ. ಸದರೀ ಪ್ರಕಟನೆಯ ತಾರೀಖಿನಿಂದ ಎರಡು ತಿಂಗಳುಗಳು ಕಳೆದ ನಂತರ ಆ ಮಸ್ವಿದೆಯು ಆಲೋಚಿಸಲ್ಪಡುತ್ತೆ. ಆಸಕ್ತರಾದ ಜನಗಳು ಸೂಚಿಸಬಹುದಾದ ದೋಷಗಳು ಮತ್ತು ಸಲಹೆಗಳು, ಈ ಕಾಲದೊಳಗಾಗಿ ಕಳುಹಿಸಲ್ಪಟ್ಟರೆ; ತಕ್ಕ ಹಾಗೆ ಆಲೋಚಿಸಲ್ಪಡುತ್ತವೆ.

ಕೆ. ಎಸ್. ಚಂದ್ರಶೇಖರ ಅಯ್ಯರ್,
ಫಾರ್ ಸೆಕ್ರೆಟೆರಿ.

ಮೈಸೂರು ಸೀಮೆಯ ತೂಕಗಳ ಮತ್ತು ಅಳತೆಗಳ ನಿಬಂಧನೆಯಂತೆ ಜಾರಿಯಲ್ಲಿ ಬರತಕ್ಕದ್ದಾಗಿ ಉದ್ದೇಶಿಸಲ್ಪಟ್ಟಿರುವ ನೇಮಗಳ ಮಸ್ವಿದ.

1902ನೇ ವರುಷದ IIIನೇ ನಂಬರಿನ ರೆಗ್ಯುಲೇಷನಿಂದ ಹೊಂದಿದ ಅಧಿಕಾರಗಳನ್ನು ಮತ್ತು ಈ ವಿಷಯದಲ್ಲಿ ಹೊಂದಿರುವ ಇತರ ಎಲ್ಲಾ ಅಧಿಕಾರಗಳನ್ನು ನಡಿಸುವದರಲ್ಲಿ ಘನವನ್ನು ಹೊಂದಿದ ಶ್ರೀಮನ್ಮಹಾರಾಜರವರ ಗವರ್ನಮೆಂಟಿನವರು, 1904ನೇ ವರುಷದ . . ತಿಂಗಳಿನ ಮೊದಲು ತಾರೀಖಿನಿಂದ ಮತ್ತು ತರುವಾಯ ಮೈಸೂರು ಸೀಮೆಯ ಎಲ್ಲಾ ಭಾಗಗಳಲ್ಲಿಯೂ ತೂಕಗಳ ಮತ್ತು ಅಳತೆಗಳ ಉಪಯೋಗವನ್ನು ಕ್ರಮಪಡಿಸುವ ಬಗ್ಗಾಗಿ, ಈ ಕೆಳಗೆ ಬರುವ ನೇಮಗಳನ್ನು ವಿಧಿಸಿರುತ್ತಾರೆ:

ಬ್ರಿಟಿಷ್ ಅಥವಾ ಮೆಟ್ರಿಕ್ ರೀತಿಗಳನ್ನು ಅನುಸರಿಸುವ 'ತೂಕಗಳ ಮತ್ತು ಅಳತೆಗಳ ಉಪಯೋಗಕ್ಕಾಗಲಿ, ಅಥವಾ "ಶೇರು" ಎಂದು ಕರಿಯಲ್ಪಡುವದನ್ನೆ ಅಥವಾ ಅದರ ಒಳಭಾಗ ಯಾ ಗುಣಿತವನ್ನೆ ಅಳತೆಯ ಪ್ರಮಾಣವಾಗಿ ವುಳ್ಳ ಒಂದು ತೂಕವನ್ನು ಅಥವಾ ಅಳತೆಯನ್ನು ಆಧಾರ ಉಂಟಾಗಿಲ್ಲದೆ ಇರುವ, ಅಂಗೀಕರಿಸಲ್ಪಟ್ಟ ಇತರ ಯಾವ ರೀತಿಯ ಆಚರಣೆಗಾಗಲಿ, ಈ ನೇಮಗಳ ಯಾವ ನಿಯಮವೂ ಪ್ರಯೋಗವಾಗುವದಾಗಿಯಾದರೂ ಅಡ್ಡಿ ಮಾಡುವದಾಗಿಯಾದರೂ ಉದ್ದೇಶಿಸಲ್ಪಟ್ಟಿರುವದಿಲ್ಲ.

1\. (1) ತೂಕದ ಪ್ರಮಾಣವು "ಶೇರು" ತೂಕವಾಗಿರತಕ್ಕದ್ದು; ಆ ಶೇರಿನ ತೂಕವು, ಗವರ್ನಮೆಂಟಿನವರ ಸ್ವಾಧೀನದಲ್ಲಿರುವ ಬ್ರಿಟಿಷ್ ಇಂಡಿಯ ಚಲಾವಣೆಗೆ ಸೇರಿದ ಇಪ್ಪತ್ತನಾಲ್ಕು ರೂಪಾಯಿಗಳ (ಟ್ರಾಯಿ 180 ಗ್ರೇನ್ಸ್ ಉಳ್ಳ) ತೂಕಕ್ಕೆ ಸಮಾನವಾದ ತೂಕವುಳ್ಳ ಲೋಹದ ಮುದ್ದೆಯಾಗಿರುತ್ತೆ.

(2) ಅಳತೆಯ ಪರಿಮಾಣವು "ಶೇರು ಅಳತೆ" ಯಾಗಿರಬೇಕು. ಅದು ಗವರ್ನಮೆಂಟಿನವರ ಸ್ವಾಧೀನದಲ್ಲಿರುವ ಕಂಚಿನ ಟೊಳ್ಳಾದ ಸ್ತಂಭವಾಗಿದೆ; ಮತ್ತು ಅದು ಕಂಠದವರಿಗೆ ತುಂಬಲ್ಪಟ್ಟಾಗ್ಯೆ, ಸರಿಯಾಗಿ ಎಂಭತ್ತು ರೂಪಾಯಿ ತೂಕವುಳ್ಳ ಮತ್ತು ಬಟ್ಟಿದ ಮಹತ್ಪರಿಮಾಣವುಳ್ಳ ಬಟ್ಟಿ ಇಳಿಸಿದ ನೀರನ್ನು ಗಾಳಿಯ ಕ್ರಮವಾದ ಒತ್ತಾಯದಲ್ಲಿ ಹಿಡಿಯತಕ್ಕದ್ದಾಗಿ ಇದೆ.

2. (1) ಮೇಲ್ಕಂಡ ತೂಕದ ಸೇರಿನ ಮತ್ತು ಅಳತೆ ಸೇರಿನ ಪ್ರಮಾಣಗಳು ಸ್ಟೇಟ್ ಹಜೂರು ಖಜಾನೆಯಲ್ಲಿ ಜತನದಿಂದ ಭದ್ರಪಡಿಸಿ ಟ್ರೆಜರಿಯ ಚಾರ್ಜಿನಲ್ಲಿರತಕ್ಕ ಆಫೀಸರ ಸ್ವಂತ ಕಾವಲಿನಲ್ಲಿರತಕ್ಕದ್ದು.

(2) ತೂಕದ ಸೇರು ಮತ್ತು ಅಳತೆ ಸೇರು—ಇವುಗಳ ಪ್ರಮಾಣದ ಒಂದು ಮಾದರಿಯು ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಜೈಲಿನ ಸೂಪರಿಂಟೆಂಡೆಂಟರ ಸ್ವಂತ ಕಾವಲಿನಲ್ಲಿ ಇಡತಕ್ಕದ್ದು; ಮತ್ತು ಆ ಮಾದರಿಯು ಹತ್ತು ವರುಷಗಳಲ್ಲಿ ಒಂದಾವರ್ತಿಗೆ ಕಮ್ಮಿ ಇಲ್ಲದಂತೆ ಸ್ಟೇಟ್ ಹಜೂರು ಖಜಾನೆಯಲ್ಲಿ ಇಡಲ್ಪಟ್ಟಿರುವ ಮಾದರಿಗಳೊಂದಿಗೆ ಸರಿನೋಡಲ್ಪಡತಕ್ಕದ್ದು.

3. ಈ ಕೆಳಗೆ ಬರುವ ತೂಕಗಳು ಮತ್ತು ಅಳತೆಗಳು ಇದರಿಂದ ಒಪ್ಪಲ್ಪಟ್ಟಿರುತ್ತವೆ.

(A) ತೂಕಗಳು:—

ತೊಲಾ (180 ಗ್ರೈನ್ಸ್), 2 (1) ನೇ ನೇಮದಲ್ಲಿ ನಿಶ್ಚಯಿಸಲ್ಪಟ್ಟ ಒಂದು ಸೇರಿನ ಇಪ್ಪತ್ತುನಾಲ್ಕನೆ ಭಾಗದಲ್ಲಿ ಒಂದು ಭಾಗಕ್ಕೆ ಸಮವಾಗಿರುವದು;

ಅರ್ಧ ತೊಲಾ; ಕಾಲು ತೊಲಾ; ಮತ್ತು ಒಂದು ತೊಲಾವಿನ ಇನ್ನು ಚಿಕ್ಕ ಉಪಭಾಗಗಳು;

ಒಂದು ತೊಲಾವಿನ ಅಪವರ್ತ್ಯಗಳು ಅಷ್ಟು ತೊಲಾಗಳೆಂದು ವಿವರಿಸಲ್ಪಡತಕ್ಕದ್ದು;

ಸೇರು, 2 (1)ನೇ ನೇಮದಲ್ಲಿ ನಿಶ್ಚಯಿಸಲ್ಪಟ್ಟ ತೂಕದ ಸೇರಿನ ಪ್ರಮಾಣಕ್ಕೆ ಸಮವಾಗಿರುವದು;

ಅಚ್ಚೇರು =12 ತೊಲಾಗಳು;

ಪಾವು =6 ತೊಲಾಗಳು;

ಅರಪಾವು—3 ತೊಲಾಗಳು;

ಮಣ, 40 ಸೇರುಗಳಿಗೆ ಸಮವಾಗಿರುವದು;

ಒಂದು ಸೇರಿನ ಚಿಕ್ಕ ಅಪವರ್ತ್ಯಗಳು, ಅಷ್ಟು ಸೇರುಗಳೆಂದು ವಿವರಿಸಲ್ಪಡತಕ್ಕದ್ದು. (ಅಪೂರ್ಣಭಾಗಗಳೊಂದಿಗಾಗಲಿ ಯಾ ಇಲ್ಲದೇನೆ ಆಗಲಿ), ಅಥವಾ ಒಂದು ಮಣದ ಅಂಥಾ ಅಪೂರ್ಣಾಂಕವೆಂದು ವಿವರಿಸಲ್ಪಡತಕ್ಕದ್ದು;

ಉದಾಹರಣೆ: 5 ಸೇರುಗಳು (ಪಂಚೇರು); 10 ಸೇರುಗಳು (ಧಡಿಯು); $\frac{1}{2}$ (ಅರ್ಧ) ಮಣ; $\frac{1}{4}$ (ಕಾಲು) ಮಣ, ಮುಂತಾದ್ದು;

ಒಂದು ಮಣದ ಗುಣಿಜಗಳು, ಅಷ್ಟು ಮಣಗಳೆಂದು ವಿವರಿಸಲ್ಪಡತಕ್ಕದ್ದು. (ಅಪೂರ್ಣಭಾಗಗಳೊಂದಿಗಾಗಲಿ ಯಾ ಇಲ್ಲದೇನೆ ಆಗಲಿ); ಉದಾಹರಣೆ: 3 ಮಣಗಳು; $2\frac{1}{2}$ (ಎರಡುವರೆ) ಮಣಗಳು; ಮುಂತಾದ್ದು;

ದೊಡ್ಡಸೇರು=80 ತೊಲಾಗಳು; ದೊಡ್ಡಮಣ, ಪ್ರತಿ ಒಂದು ದೊಡ್ಡ ಸೇರು 80 ತೊಲಾಗಳು ಉಳ್ಳದ್ದಾಗಿರುವ 40 ದೊಡ್ಡಸೇರುಗಳಿಗೆ ಸಮವಾಗಿರುವದು;

ದೊಡ್ಡಸೇರು ಮತ್ತು ಮಣ—ಇವುಗಳ ಗುಣಿಜಗಳು, ಅಷ್ಟು ದೊಡ್ಡ ಸೇರುಗಳು ಅಥವಾ ದೊಡ್ಡ ಮಣಗಳೆಂದು ವಿವರಿಸಲ್ಪಡತಕ್ಕದ್ದು.

(B) ಅಳತೆಗಳು:—

ಸೇರು, 2 (2)ನೇ ನೇಮದಲ್ಲಿ ನಿಶ್ಚಯಿಸಲ್ಪಟ್ಟ ಅಳತೆ ಸೇರಿನ ಪ್ರಮಾಣಕ್ಕೆ ಸಮವಾಗಿರುವದು;

ಒಂದು ಸೇರಿನ ಉಪಭಾಗಗಳು, ಅದು ಹ್ಯಾಗೆಂದರೆ ...

ಅಚ್ಚೇರು (ಸೇರಿನ ಅರ್ಧಭಾಗ);

ಪಾವು (ಸೇರಿನ ಕಾಲುಭಾಗ);

ಅರಪಾವು (ಸೇರಿನ ಎಂಟನೆ ಭಾಗ);

ಚಟಾಕು (ಸೇರಿನ ಹದಿನಾರನೆ ಭಾಗ);

ಕೊಳಗ = 8 ಸೇರುಗಳು;

ಒಂದು ಸೇರಿನ ಕಮ್ಮಿಯಾದ ಗುಣಿಜಗಳು ಅಷ್ಟು ಸೇರುಗಳೆಂದು ವಿವರಿಸಲ್ಪಡತಕ್ಕದ್ದು. (ಅಪೂರ್ಣಭಾಗಗಳೊಂದಿಗಾಗಲಿ ಯಾ ಇಲ್ಲದೇನೆ ಆಗಲಿ), ಅಥವಾ ಒಂದು ಕೊಳಗದ ಅಂಥ ಅಪೂರ್ಣಾಂಕವೆಂದು ವಿವರಿಸಲ್ಪಡತಕ್ಕದ್ದು;

ಪಲ್ಲಾ=$12\frac{1}{2}$ ಕೊಳಗಗಳು ಅಥವಾ 100 ಸೇರುಗಳು;

ಕಂಡಗ=20 ಕೊಳಗಗಳು ಅಥವಾ 160 ಸೇರುಗಳು;

ಒಂದು ಕೊಳಗದ ಕಮ್ಮಿಯಾದ ಗುಣಿಜಗಳು ಅಷ್ಟು ಕೊಳಗಗಳೆಂದು ವಿವರಿಸಲ್ಪಡತಕ್ಕದ್ದು. (ಅಪೂರ್ಣಭಾಗಗಳೊಂದಿಗಾಗಲಿ ಯಾ ಇಲ್ಲದೇನೆ ಆಗಲಿ), ಅಥವಾ ಒಂದು ಪಲ್ಲಾ ಯಾ ಕಂಡಗದ ಅಂಥಾ ಅಪೂರ್ಣಾಂಕವೆಂದು ವಿವರಿಸಲ್ಪಡತಕ್ಕದ್ದು.

4. ವಿಶೇಷವಾಗಿ ಮಾಡಿಕೆಯಲ್ಲಿರುವ ತೂಕಗಳ ಮತ್ತು ಅಳತೆಗಳ ಮಾದ್ರಿಗಳನ್ನು, ಬೆಂಗಳೂರು ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರು ಮಾಡಿಸತಕ್ಕದ್ದಲ್ಲದೆ, ಸದರೀ ಮಾದ್ರಿಗಳು, ಜಾಗರೂಕತೆಯಿಂದ ಸರಿನೋಡಲ್ಪಟ್ಟು ಸರಿಯಾಗಿರುವದೆಂಬುವದಕ್ಕಾದ ಮುದ್ರೆಯಿಂದ ಮುದ್ರಿಸಲ್ಪಟ್ಟ ತರುವಾಯ, ಅವುಗಳನ್ನು ಮಾಡತಕ್ಕ ಶಿಬ್ಬಂದಿ ಖರ್ಚಿಗಾಗಿ ನೂರಿಗೆ ಇಷ್ಟೆಂತ ನ್ಯಾಯವಾಗಿ ನಿರ್ಣಯಿಸಲ್ಪಟ್ಟ ಸಂಖ್ಯೆಯು ಸೇರಿದ ಅವುಗಳ ಅಸಲ್ ಖರೀದಿಗೆ ಸಮರದಂತಿರುವ ಬೆಲೆಗಳಿಗೆ ವಿಕ್ರಯಿಸಲ್ಪಡುವ ಬಗ್ಗಾಗಿ, ದೊರಕುವಂತಿರಬೇಕು.

5. ತೂಕದ ಮತ್ತು ಅಳತೆಯ ಪ್ರಮಾಣಗಳ ಸರಿಯಾದ ಮಾದ್ರಿಗಳನ್ನು ಮತ್ತು ವಿಶೇಷ ಮಾಡಿಕೆಯಲ್ಲಿರುವ ತೂಕಗಳ ಮತ್ತು ಅಳತೆಗಳ ಮಾದ್ರಿಗಳನ್ನೂ, ಬೆಂಗಳೂರು ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರು, ಈ ರೆಗ್ಯುಲೇಷನಿನ 3ನೇ ಪ್ರಕರಣದಲ್ಲಿ ನಮೂದಿಸಲ್ಪಟ್ಟ ಕಚೇರಿಗಳಿಗೂ ಮತ್ತು ಪ್ರತಿ ಒಂದು ತಾಲ್ಲೂಕು ಕಚೇರಿಗೂ ಮತ್ತು ಪೋಲೀಸ್ ಸ್ಟೇಷನಿಗೂ ಒದಗಿಸತಕ್ಕದ್ದು. ಇವುಗಳು, 10 ವರುಷಗಳಿಗೆ ಒಂದಾವರ್ತಿ ಕಮ್ಮಿಯಿಲ್ಲದಂತೆ, ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರಿಂದ ಸರಿನೋಡಲ್ಪಡಬೇಕು, ಮತ್ತು ಅವಶ್ಯವಿದ್ದಾಗೆಲ್ಲ ಆ ಅವುಗಳಿಗೆ ಬದಲಾಗಿ ಹೊಸದಾದವುಗಳನ್ನು ಮಾಡಿಸಬೇಕು.

6. ಮಾಡಿಕೆಯಾಗಲೀ, ಸ್ಪಷ್ಟವಾದ ಅಥವಾ ಭಾವದಿಂದಾದ ಕರಾರಾಗಲೀ ವಿರೋಧವಾಗಿದ್ದರೇನೇಹೊರತು, ಯಾವ ಪದಾರ್ಥವನ್ನಾಗಲೀ ಅಂಗೀಕರಿಸಲ್ಪಟ್ಟ ಪರಿಮಾಣದ ಅಳತೆಗಳಲ್ಲಿ ಅಳೆಯುವಾಗ್ಯೆ, ಅಳತೆ ಮೇಲೆ ಗುಡ್ಡೆ ಮಾಡದೆ, ಅಳತೆಬಾಯಿಗೆ ಸರಿಯಾಗಿರುವಂತೆ ದುಂಡುಕೋಲಿನಿಂದ ಅದರಲ್ಲಿರುವ ಆ ಪದಾರ್ಥವನ್ನು ಸಮವಾಗಿ ತೆಗೆಯುವದಾಗಲೀ, ಅಥವಾ ಆ ಪದಾರ್ಥವು ಆಕಾರದಿಂದಲಾದರೂ, ಗಾತ್ರದಿಂದಲಾದರೂ, ಅಳತೆಬಾಯಿ ಮೇಲೆ ಸಮವಾಗಿರುವಹಾಗೆ ಮಾಡಲು ಸಾಧ್ಯವಿಲ್ಲದ ಪಕ್ಷದಲ್ಲಿ ಆ ಅಳತೆಯ ಕಂಠದ ಸಮಕ್ಕೆ ಆ ಪದಾರ್ಥದ ಆಕಾರ ಮತ್ತು ಘಾತ್ರ ಅವಕಾಶ ಕೊಡುವಷ್ಟು ತುಂಬುವದಾಗಲೀ—ಇದು ನಡಿಯತಕ್ಕದೆಂದು ಊಹಿಸಲ್ಪಟ್ಟಿರುತ್ತೆ.

7. ಮಾದ್ರಿ ತೂಕಗಳ ಅಥವಾ ಅಳತೆಗಳ ಸರಿಯಾದ ಪ್ರಮಾಣದಿಂದ ಈ ಕೆಳಗಿನ ಪಟ್ಟಿಯಲ್ಲಿ ಕಂಡ ತಪ್ಪಿಗಿಂತ ಹೆಚ್ಚಿಲ್ಲದಂತೆ ವೆತ್ಯಾಸವಾಗುವ ಯಾವ ತೂಕವನ್ನಾಗಲೀ ಅಥವಾ ಅಳತೆಯನ್ನಾಗಲೀ, ಅಂಥಾ ವೆತ್ಯಾಸದಿಂದಲೇನೇ ಒಂದು ಸುಳ್ಳು ತೂಕ ಅಥವಾ ಅಳತೆ ಎಂದು ಭಾವಿಸಕೂಡದು:—

ವೆತ್ಯಾಸವಾಗಿರುವ ತೂಕಗಳಿಗೂ ಅಳತೆಗಳಿಗೂ ಗಣನೆ ಮಾಡಬೇಕಾಗಿಲ್ಲದ ತಪ್ಪನ್ನು ತೋರಿಸುವ ಪಟ್ಟಿ:—

ತೂಕಗಳು.

ತೂಕಗಳು.	ಬಿಡಲ್ಪಟ್ಟ ತಪ್ಪು (ಟ್ರಾಯಿ, ಗ್ರೇನ್ಸ್‌ನಲ್ಲಿ).	
	ಹೆಚ್ಚಿನಲ್ಲಿ.	ಕಮ್ಮಿಯಲ್ಲಿ.
4 ಮಣಗಳಿಗೆ ಮತ್ತು ಅದಕ್ಕೆ ಕಡಮೆಯಾಗಿ 20 ಶೇರುಗಳ ವರಿಗೆ ..	5	2·5
20 ಶೇರುಗಳಿಗೆ ಕಡಮೆಯಾಗಿ $2\frac{1}{2}$ ಶೇರುಗಳ ವರಿಗೆ ...	2	·1
$2\frac{1}{2}$ ಶೇರುಗಳಿಗೆ ಕಡಮೆಯಾಗಿ $\frac{1}{2}$ ಶೇರಿನ ವರಿಗೆ	·5	·25
$\frac{1}{2}$ ಶೇರಿಗೆ ಕಡಮೆಯಾಗಿ 1 ತೊಲಾದ ವರಿಗೆ	·2	·1
1 ತೊಲಾಕ್ಕೆ ಕಡಿಮೆಯಾಗಿ $\frac{1}{8}$ ತೊಲಾದ ವರಿಗೆ	·1	·05
$\frac{1}{8}$ ತೊಲಾಕ್ಕೆ ಕಡಮೆಯಾಗಿ	·05	·025

ಅಳತೆಗಳು.

ಅಳತೆಗಳು.	ಅಂಶ ಮಾಡಲ್ಪಟ್ಟ ಗಾಜಿನ ಕೊಳವೆಯಿಂದ ಅಳತೆ ಮಾಡಲ್ಪಟ್ಟು ಬಿಡಬೇಕಾದ ತಪ್ಪು (ಗ್ರೇನ್ಸ್‌ನಲ್ಲಿ).
ಒಂದು ಕಂಡಗ.	1,000 ಗ್ರೇನ್ಸು
ಒಂದು ಕಂಡಗಕ್ಕೆ ಕಡಮೆಯಾಗಿ $2\frac{1}{2}$ ಶೇರುಗಳ ವರಿಗೆ	ಪ್ರತಿ 5 ಶೇರುಗಳಿಗೆ 5 ಗ್ರೇನ್ಸು
$2\frac{1}{2}$ ಶೇರುಗಳಿಗೆ ಕಡಮೆಯಾಗಿ $\frac{1}{4}$ ಶೇರಿನ ವರಿಗೆ	8 ಗ್ರೇನ್ಸು
$\frac{1}{4}$ ಶೇರಿಗೆ ಕಡಮೆಯಾಗಿ $\frac{1}{8}$ ಶೇರಿನ ವರಿಗೆ	4 ,,
$\frac{1}{8}$ ಶೇರಿಗೆ ಕಡಮೆಯಾಗಿ	2 ,,

8\. ಅಳತೆ ಸೇರಿನ ಪ್ರಮಾಣದ ಯಾವ ಪರಿಮಾಣವನ್ನಾಗಲೀ ಉಂಟಾಗಿರುತ್ತೆಂದು ತೋರಿಸಲ್ಪಡದೆ ಇರುವ ಯಾವ ಪಾತ್ರೆಯಿಂದಲಾದರೂ ಒಂದು ಪದಾರ್ಥವನ್ನು ವಿಕ್ರಯಿಸೋಣವು ನಿಬಂಧನೆಗೆ ವಿರುದ್ಧವೆಂದು ; ಅಥವಾ

ಯಾವ ಪದಾರ್ಥದ ಪರಿಮಾಣವನ್ನಾದರೂ ತೂಕದಿಂದಾಗಲೀ ಅಥವಾ ಅಳತೆಯಿಂದಾಗಲೀ ಅಥವಾ ಸ್ವಲ್ಪ ಒಂದು ರೀತಿಯಿಂದಾಗಲೀ ಸ್ವಲ್ಪ ಮತ್ತೊಂದು ರೀತಿಯಿಂದಾಗಲೀ ನಿಶ್ಚಯಿಸುವ ಬಗ್ಗೆ ಒಪ್ಪಿಕೊಳ್ಳೋಣವನ್ನು ನಿಷೇಧಿಸುತ್ತೆಂದು,

ಈ ನೇಮಗಳಲ್ಲಿನ ಯಾವ ನಿಯಮವೂ ಎಣಿಸಲ್ಪಡಕೂಡದು.

9\. ತೂಕಗಳು ಮತ್ತು ಅಳತೆಗಳು ಲೋಹದಲ್ಲಿ ಮಾಡಲ್ಪಟ್ಟಿರಬೇಕು ; ಆದರೆ ಒಂದು ಸೇರಿಗೆ ಕಡಿಮೆಯಾದ ಅಳತೆಗಳು, ಲೋಹದಲ್ಲಾಗಲೀ, ಮರದಲ್ಲಾಗಲೀ, ಅಥವಾ ಬಿದರಿನಲ್ಲಾಗಲೀ ಮಾಡಲ್ಪಡಬಹುದು.

10\. ತೂಕಗಳ ಆಕಾರವು, ಎತ್ತುವ ಬಗ್ಗೆ ಹಿಡಿಗಳಾಗಲೀ ಹಳ್ಳಗಳಾಗಲೀ ಇರುವ ಸಂದರ್ಭ ವಿನಹ, ಸಾಧ್ಯವಿರುವ ಮಟ್ಟಿಗೆ ಮೇಲುಭಾಗದಲ್ಲಿಯೂ ಕೆಳಭಾಗದಲ್ಲಿಯೂ ಚಪ್ಪಟೆಯಾಗಿರತಕ್ಕದ್ದು ಮತ್ತು ನಿಲ್ಲುವ ಭಾಗಗಳು ದುಂಡಾಗಿಯಾಗಲೀ ಸಮಕೋಣವುಳ್ಳದ್ದಾಗಿಯಾಗಲೀ ಇರತಕ್ಕದ್ದು.

ಅಳತೆಗಳು, ಸಮವಾದ ತಳವುಳ್ಳದ್ದಾಗಿಯೂ ಒಳಗಿನ ಅಡ್ಡಳತೆಯು ಆಳದ ಅರ್ಧ ಭಾಗಕ್ಕೆ ಸಮಾನವಾಗಿಯೂ ಇರುವ ಟೊಳ್ಳಾದ ಸ್ತಂಭಗಳಾಗಿ ಇರತಕ್ಕದ್ದು.

11\. ಪ್ರತಿ ತೂಕದಲ್ಲಿಯೂ, ಅದರ ಚಿಕ್ಕ ಘಾತ್ರದಿಂದ ಅಸಾಧ್ಯವಾಗಿರುವ ಸಂದರ್ಭದಲ್ಲಿ ವಿನಹ, ಅದರ ತೂಕದ ಹೆಸರು ಮೇಲಾಗಲೀ ಪಕ್ಕದಲ್ಲಾಗಲೀ ಓದಬಹುದಾದ ಸಂಖ್ಯೆಗಳಲ್ಲಿಯೂ ಮತ್ತು ಅಕ್ಷರಗಳಲ್ಲಿಯೂ ಮುದ್ರಿಸಲ್ಪಟ್ಟಿರತಕ್ಕದ್ದು.

ಪ್ರತಿ ಅಳತೆಯಲ್ಲಿಯೂ, ಅದರ ಹೊರಗಿನ ಭಾಗದಲ್ಲಿ ಓದಬಹುದಾದ ಸಂಖ್ಯೆಗಳಲ್ಲಿಯೂ ಮತ್ತು ಅಕ್ಷರಗಳಲ್ಲಿಯೂ ಅದರ ಹೆಸರು ಮುದ್ರಿಸಲ್ಪಟ್ಟಿರತಕ್ಕದ್ದು.

ಈ ನೇಮಕ್ಕೆ ವಿರುದ್ಧವಾದ ಯಾವ ತೂಕಕ್ಕಾಗಲೀ ಅಳತೆಗಾಗಲೀ ವೆರಿಫಿಕೇಷನ್ ಮೊಹರನ್ನು ಈ ನೇಮಗಳಂತೆ ಮುದ್ರಿಸೋಣ ನಿಷೇಧಿಸಲ್ಪಟ್ಟಿರುತ್ತೆ.

12\. ಪ್ರತಿ ತೂಕವೂ, ಅದರ ಚಿಕ್ಕಘಾತ್ರದಿಂದ ಅಸಾಧ್ಯವಾಗಿರುವ ಸಂದರ್ಭದಲ್ಲಿ ವಿನಹ, ಮತ್ತು ಪ್ರತಿ ಅಳತೆಯು ಸರಿನೋಡಲ್ಪಡಬೇಕಲ್ಲದೆ, ಕೆಳಗೆ ಕೊಟ್ಟಿರುವ ಮಾದ್ರಿಯಲ್ಲಿ ಒಂದು ವೆರಿಫಿಕೇಷನ್ ಮುದ್ರೆಯಿಂದ ಮುದ್ರಿಸಲ್ಪಡಬೇಕು, ಮತ್ತು ಆ ಬಳಿಕ ಪ್ರತಿ ಐದು ವರುಷಗಳಲ್ಲಿ ಒಂದಾವರ್ತಿಗೆ ಕಮ್ಮಿಯಿಲ್ಲದಂತೆ ಸರಿನೋಡಲ್ಪಡುವ ಬಗ್ಗೆ ಹಾಜರ್ ಮಾಡಲ್ಪಡಬೇಕು.



ಮುದ್ರೆಯ ಆಕಾರ —ಮೈಸೂರು ಮಹಾರಾಜರ ಬಿರುದು ಮಧ್ಯೆ, ಅದನ್ನು ಸುತ್ತಿಕೊಂಡು ಇರುವ ಚಕ್ರದ ಹೊರಗೆ "ಮೈಸೂರು" ಎಂಬ ಪದವು ಮುದ್ರಿಸುವ ವರುಷವನ್ನು ತೋರಿಸುವ ಸಂಖ್ಯೆಗಳು ಸಹ, ಜೊತೆಯಲ್ಲಿರುವ ಮಾದ್ರಿಯಂತೆ ಇರತಕ್ಕದ್ದು.

13\. (1) ಪ್ರತಿ ಡಿಸ್ಟ್ರಿಕ್ಟಿನಲ್ಲಿಯು ತೂಕಗಳ ಮತ್ತು ಅಳತೆಗಳ ಒಂದು ಇನ್‌ಸ್ಪೆಕ್ಟರು ಮತ್ತು ಅವಶ್ಯಕವಿರುವ ಇತರ ಶಿಬ್ಬಂದಿಯೂ ನೇಮಕ ಮಾಡಲ್ಪಡಬೇಕು. ಅವರುಗಳೆಲ್ಲರು ಡೆಪ್ಯುಟಿ ಕಮ್ಮಿಷನರ ಅಧಿಕಾರಕ್ಕೆ ಒಳಪಟ್ಟಿರತಕ್ಕದ್ದು.

(2) ಇನ್‌ಸ್ಪೆಕ್ಟರು ಡಿಸ್ಟ್ರಿಕ್ಟಿನಲ್ಲಿ ಎಲ್ಲಾ ಸಂಚರಿಸತಕ್ಕದ್ದಲ್ಲದೆ, 14ನೇ ನೇಮದಂತೆ ಸರಿನೋಡುವ ಉದ್ದೇಶಕ್ಕಾಗಿಯೂ ಮತ್ತು ತೂಕಗಳಿಗೂ ಅಳತೆಗಳಿಗೂ ಮುದ್ರೆ ಹಾಕುವದಕ್ಕಾಗಿಯೂ ಅವರಿಗೆ ಕಳುಹಿಸಲ್ಪಟ್ಟ ಎಲ್ಲಾ ಅರ್ಜಿಗಳನ್ನು ವ್ಯವಸ್ಥೆ ಮಾಡತಕ್ಕದ್ದು.

(3) ಇನ್‌ಸ್ಪೆಕ್ಟರು ತಾವು ಇಡಬೇಕಾದ ಒಂದು ಪುಸ್ತಕದಲ್ಲಿ ಪ್ರತಿ ಸರಿನೋಡುವಿಕೆಯನ್ನು ಕುರಿತು ಟಿಪ್ಪಣಿಯನ್ನು ಬರಿಯತಕ್ಕದ್ದಲ್ಲದೆ, ತಾವು ಪ್ರತಿ ಒಂದಾವರ್ತಿ ಮುದ್ರೆ ಹಾಕಿದ್ದಕ್ಕೂ ಒಂದು ಸರ್ಟಿಫಿಕೇಟನ್ನು ತಮ್ಮ ದಸ್ತತ್ತೂಡನೆ, ಬೇಕಾಗಿದ್ದರೆ ಕೊಡತಕ್ಕದ್ದು.

(4) ತೂಕಗಳು ಅಳತೆಗಳು ಮತ್ತು ಉಪಯೋಗದಲ್ಲಿರತಕ್ಕ ತೂಕ ಮಾಡುವ ಉಪಕರಣಗಳು—ಇವುಗಳ ಮೇಲ್ವಿಚಾರಣೆಯೂ ಕೂಡ ಅವರ ಕರ್ತವ್ಯಗಳ ಅಂಶವಾಗಿರುತ್ತೆ ; ಮತ್ತು ಈ ಉದ್ದೇಶಕ್ಕೋಸ್ಕರ ಮತ್ತು ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡಿನ 153ನೆ ಪ್ರಕರಣದ ಉದ್ದೇಶಕ್ಕೋಸ್ಕರ, ಅವರ ಅಧಿಕಾರಕ್ಕೆ ಒಳಪಟ್ಟ ಎಲ್ಲಾ ಸ್ಥಳಿಕ ಪ್ರದೇಶದ ವಿಷಯದಲ್ಲಿ ಒಂದು ಪೊಲೀಸ್ ಸ್ಟೇಷನು ಅಧೀನದಲ್ಲಿ ಉಂಟಾಗಿರುವ ಒಬ್ಬ ಆಫೀಸರಾಗಿ ನೌಕರರ್ಮಾಡಲ್ಪಟ್ಟಿರುತ್ತಾರೆಂದು ಅವರು ಎಣಿಸಲ್ಪಡತಕ್ಕದ್ದು. ಆ ಪ್ರಕಾರವಾಗಿ, ತಮ್ಮ ಅಧಿಕಾರಕ್ಕೊಳಪಟ್ಟ ಯಾವ ಸ್ಥಳಗಲ್ಲಾದಲೀ ಸುಳ್ಳಾದ ಯಾವ ತೂಕಗಳಾದರೂ ಅಳತೆಗಳಾದರೂ ಅಥವಾ ತೂಕಗಳಾದರೂ ಅಳತೆಗಳಾದರೂ ಅಥವಾ ತೂಕಮಾಡುವ ಉಪಕರಣಗಳಾದರೂ ಇರುತ್ತೆವೆಂದು ಸಂಶಯಪಡಕ್ಕೆ ಅವರು ಕಾರಣ ಉಂಟಾಗಿರುವ ಸಂದರ್ಭದಲ್ಲಿ, ಅಲ್ಲಿ ಉಪಯೋಗಿಸಲ್ಪಡುವ ಅಥವಾ ಇಡಲ್ಪಟ್ಟ ಯಾವ ತೂಕಗಳನ್ನಾದರೂ ಅಳತೆಗಳನ್ನಾದರೂ ಅಥವಾ ತೂಕ ಮಾಡುವ ಉಪಕರಣಗಳನ್ನಾದರೂ ಪರಿಶೀಲನೆ ಮಾಡುವ ಉದ್ದೇಶಕ್ಕಾಗಲೀ ಅಥವಾ ಹುಡುಕುವ ಉದ್ದೇಶಕ್ಕಾಗಲೀ, ಅಂಥಾ ಸ್ಥಳವನ್ನು ಅವರು ಒಂದು ವಾರೆಂಟು ಇಲ್ಲದೇನೆ ಪ್ರವೇಶಿಸಬಹುದು. ಅಂಥಾ ಸ್ಥಳದಲ್ಲಿ ಸುಳ್ಳಾದ ಯಾವ ತೂಕಗಳನ್ನಾದರೂ ಅಳತೆಗಳನ್ನಾದರೂ ಅಥವಾ ತೂಕ ಮಾಡುವ ಉಪಕರಣಗಳನ್ನಾದರೂ ಅವರು ಕಂಡರೆ, ಅವುಗಳನ್ನು ಅವರು ಹಿಡಿಯ ಬಹುದಲ್ಲದೆ, ಹಾಗೆ ಹಿಡಿದಿರುವದನ್ನು ಕುರಿತು ವರ್ತಮಾನವನ್ನು ಅಧಿಕಾರವುಳ್ಳ ಒಬ್ಬ ಮ್ಯಾಜಿಸ್ಟ್ರೇಟರಿಗೆ ಕೂಡ್ಲೆ ಕೊಡತಕ್ಕದ್ದು.

14. (1) ಸರಿನೋಡುವ ಬಗ್ಗೆಯೂ ಮತ್ತು ತೂಕಗಳಿಗೂ ಅಳತೆಗಳಿಗೂ ಮುದ್ರೆ ಹಾಕುವ ಬಗ್ಗೆಯೂ ಪ್ರತಿ ಅರ್ಜಿಯನ್ನು ಸ್ಥಳಿಕ ಅಮಲ್‌ದಾರ್ರಿಗಾಗಲೀ ಅಥವಾ ಡೆಪ್ಯುಟಿ ಅಮಲ್‌ದಾರ್ರಿಗಾಗಲೀ ಕಳುಹಿಸತಕ್ಕದ್ದು, ಮತ್ತು ಅದರೊಂದಿಗೆ, ವ್ಯವಸ್ಥೆಸಲ್ಪಡಬೇಕಾದ ಪ್ರತಿ ಒಂದು ತೂಕಕ್ಕಾಗಲೀ ಅಥವಾ ಅಳತೆಗಾಗಲೀ ಒಂದು ಆಣೆ ಫೀಜು ಸಹ ಕೊಡತಕ್ಕದ್ದು.

(2) ಆ ಫೀಜು ಖಜಾನಿಗೆ ಕಳುಹಿಸತಕ್ಕದ್ದು ಮತ್ತು 13ನೇ ನೇಮದಂತೆ ಮುದ್ರೆ ಹಾಕುವದಕ್ಕಾಗಿ ಇಡಲ್ಪಟ್ಟ ಪ್ರತ್ಯೇಕ ಶಿಬ್ಬಂದಿಯ ಕರ್ಚಿಗೆ ಜಮೆ ಕಟ್ಟತಕ್ಕದ್ದು.

(3) ಈ ನೇಮಗಳಿಗೆ ಶೇರಿಸಲ್ಪಟ್ಟ ಪಟ್ಟಿಯಲ್ಲಿ ನಮೂದಾಗಿರುವ ಉಪದೇಶಗಳಿಗೆ ಅನುಗುಣವಾಗಿ ವ್ಯವಸ್ಥೆ ಮಾಡುವ ಬಗ್ಗೆ ಆ ಅರ್ಜಿಯು ತೂಕಗಳ ಮತ್ತು ಅಳತೆಗಳ ಇನ್ಸ್‌ಪೆಕ್ಟರಿಗೆ ಕೊಡತಕ್ಕದ್ದು.

15. (1) ತೂಕಗಳನ್ನು ಅಳತೆಗಳನ್ನು ಲೋಪವಿಲ್ಲದೆ ಸರಿಮಾಡುವ ಬಗ್ಗೆ ಅವಶ್ಯಕವೆಂದು ತೋರಿಬರಬಹುದಾದ ಸ್ವಲ್ಪ ಕ್ರಮಪಡಿಸೋಣಕ್ಕೆಲ್ಲಾ ಯಾವ ಕರ್ಚು ಹಾಕದೇನೇ, ತೂಕಗಳ ಮತ್ತು ಅಳತೆಗಳ ಇನ್ಸ್‌ಪೆಕ್ಟರು ಕ್ರಮಪಡಿಸುವ ಕೆಲಸವನ್ನು ನಡಿಸತಕ್ಕದ್ದು.

(2) ಈ ನೇಮಗಳಿಗೆ ವಿರುದ್ಧವಾಗಿರುವ ಕಾರಣದಿಂದ ಸರಿನೋಡುವದಕ್ಕಾಗಲಿ ತಿದ್ದುವದಕ್ಕಾಗಲಿ ಅರ್ಹವಾಗಿಲ್ಲವೆಂದು ಅವರಿಗೆ ತೋರಿಬರುವ ಯಾವ ತೂಕವನ್ನಾಗಲೀ ಅಳತೆಯನ್ನಾಗಲೀ, ಸರಿನೋಡುವ ಬಗ್ಗೆ ಅಥವಾ ತಿದ್ದುವ ಬಗ್ಗೆ ಅದು ತಮ್ಮಲ್ಲಿ ತರಲ್ಪಟ್ಟಾಗ್ಯೂ, ಕೆಡಿಸುವದಕ್ಕಾದರೂ, ಉಪಯೋಗವಾಗದಂತೆ ಮಾಡುವದಕ್ಕಾದರೂ, ಅಥವಾ ಸರಿನೋಡುವದಕ್ಕೂ ತಿದ್ದುವದಕ್ಕೂ ಯಾ ಮುದ್ರೆಹಾಕುವದಕ್ಕೂ ನಿರಾಕರಿಸುವದಕ್ಕಾದರೂ, ತೂಕಗಳ ಮತ್ತು ಅಳತೆಗಳ ಇನ್ಸ್‌ಪೆಕ್ಟರಿಗೆ ಅಧಿಕಾರ ಕೊಡಲ್ಪಟ್ಟಿರುತ್ತೆ.

ಷೆಡ್ಯೂಲ್.

I. ತೂಕಗಳ ಪರೀಕ್ಷೆ.

ತ್ರಾಸಿನ ಸೂಕ್ಷ್ಮತೆ.—ಪ್ರಮಾಣವಾದ ತೂಕಗಳಿಂದ ತೂಕಗಳನ್ನು ಸರಿನೋಡುವ ಬಗ್ಗೆ ಸಾಧಾರಣವಾದ ತ್ರಾಸುಗಳು ಮಾತ್ರವೆ ದೊರಕುವ ಸಂದರ್ಭದಲ್ಲಿ, ಮೊದಲು ಮಾಡಬೇಕಾದ್ದೇನಂದರೆ ಆ ತ್ರಾಸಿನ ಸೂಕ್ಷ್ಮತೆಯ ತರವನ್ನು ಪರೀಕ್ಷಿಸಬೇಕು ಅದರ ಸಮತೂಕದ ವಿಷಯ ಬೇರೆ ಇರಲಿ. 40 ಶೇರಿನ ಒಂದು ಮಣ ತೂಕವು ಸರಿನೋಡುವ ಬಗ್ಗಾಗಿ ಬಂದಿರುತ್ತೆಂದು ಒಂದು ಉದಾಹರಣೆ ಯೋಚಿಸಬಹುದು. ಬಲಕಡೆ ತಕ್ಕಡಿಯಲ್ಲಿ ಮಣ ತೂಕದ ಒಂದು ಪ್ರಮಾಣವನ್ನು ಹಾಕಿ ಅದಕ್ಕೆ ಸರಿಯಾಗಿ ಸಮತೂಕವಾಗುವ ಹಾಗೆ ಎಡಗಡೆ ತಕ್ಕಡಿಯಲ್ಲಿ ತೂಕಗಳನ್ನು ಹಾಕಬೇಕು. ಈ ಎರಡು ಪಾರ್ಶ್ವಗಳಲ್ಲಿ ಇಡಲ್ಪಟ್ಟ ತೂಕಗಳಿಗೆ 40 ಗ್ರೇನ್ಸ್ ತೂಕವನ್ನು ಸೇರಿಸಿದಾಗ ವ್ಯತ್ಯಾಸ ತೋರುವ ಪಕ್ಷದಲ್ಲಿ, ವ್ಯಾಪಾರದ ಒಂದು ಸಾಮಾನ್ಯವಾದ ಮಣ ತೂಕವನ್ನು ಸರಿನೋಡುವ ಬಗ್ಗೆ ಆ ತ್ರಾಸನ್ನು ಒಳ್ಳೆದಾಗಿರುತ್ತೆಂದು ಎಣಿಸಬಹುದು. ತ್ರಾಸಿನ ಒಂದು ಕೈಯ್ಯಲ್ಲಿ ಇಡಲ್ಪಟ್ಟಿರುವ ತೂಕದ $\frac{1}{500}$ನೇ ಭಾಗದ ಭಾರಕ್ಕೆ ಅದರ ದಂಡಿಗೆ ಯಾ ಕಂಬಿ ತಿರುಗದೆ ಇದ್ದರೆ, ಆ ತ್ರಾಸು ಸರಿಯಾದ ಉದ್ದೇಶಗಳಿಗೆ ಉಪಯೋಗಿಸುವದಕ್ಕಾಗುವದಿಲ್ಲ.

ತೂಕಗಳ ಸರಿನೋಡುವಿಕೆ.—ಸರಿನೋಡುವ ಬಗ್ಗೆ ಹೊಂದಲ್ಪಟ್ಟ ಮಣ ತೂಕವನ್ನು ಹೀಗೆ ಪರೀಕ್ಷಿಸಬೇಕು:—

ತಕ್ಕಡಿಯ ಬಲಗೈನಲ್ಲಿ ಮಣ ತೂಕದ ಪ್ರಮಾಣವನ್ನು ಇಡಬೇಕು, ಅದಕ್ಕೆ ಎಡಗಡೆಯಲ್ಲಿ ಸಮತೂಕ ಇಡಬೇಕು. ಬಳಿಕ ಆ ಮಣ ತೂಕದ ಪ್ರಮಾಣವನ್ನು ತೆಗದು, ಅದಕ್ಕೆ ಬದಲಾಗಿ ಸರಿನೋಡಲ್ಪಡಬೇಕಾದ ತೂಕವನ್ನು ಇಡಬೇಕು. ದಂಡಿಗೆ ಸಮವಾಗಿದ್ದರೆ ತೂಕ ಸರಿಯಾದ್ದಾಗಿರುತ್ತೆ. ದಂಡಿಗೆಯ ಕೈಯಿಗಳು ಸಮವಾಗಿರುವದರಿಂದಾಗಲಿ, ಇಲ್ಲದೆ ಇರುವದರಿಂದಾಗಲೀ, ವಿಶೇಷವಿಲ್ಲ; ಅಂದರೆ, ತ್ರಾಸು ಸರಿಯಾಗಿರಲಿ ಇಲ್ಲದಿರಲಿ, ಇದೇನೂ ಯೋಚಿಸತಕ್ಕದ್ದಿಲ್ಲಾ.

ತ್ರಾಸಿನ ಸಮಭಾರ.—ತ್ರಾಸು ಸಮಭಾರವಾಗಿದೆಯೋ ಇಲ್ಲವೊ ಎಂಬುವದನ್ನು ತಿಳಿಯಬೇಕಾಗಿದ್ದರೆ, ಅದರ ಬಲಗೈಯಲ್ಲಿ ಮಣ ತೂಕದ ಪ್ರಮಾಣವನ್ನು ಹಾಕಿ, ಅದರ ಎಡಗೈಯಲ್ಲಿ ಸರಿಯಾಗಿ ಸಮನಾದ ಭಾರವನ್ನಿಡಬೇಕು. ಬಳಿಕ ಆ ಮಣ ತೂಕದ ಪ್ರಮಾಣವನ್ನು ತೆಗದು, ಅದರ ಬದಲಾಗಿ ಬಲಗೈಯಲ್ಲಿ ಇತರ ತೂಕಗಳನ್ನು ಹಾಕಿ ಸರಿಯಾದ ಸಮಭಾರವನ್ನುಂಟುಮಾಡಬೇಕು, ಈಸಾರಿ ಬಲಗೈಯಲ್ಲಿ, ಎಡಗೈಯಲ್ಲಿ ಅಲ್ಲಾ. ಈಗ ವ್ಯಕ್ತವಾಗಿರುವದೇನಂದರೆ, ಬಲಗೈಯಲ್ಲಿ ಇಡಲ್ಪಟ್ಟ ಎರಡು ತೂಕಗಳು ಸಮಭಾರವಾಗಿರುತ್ತವೆ: ಎಡಗೈಯಲ್ಲಿರುವ ಭಾರವನ್ನು ತೆಗದು, ಅದರ ಬದಲಾಗಿ, ಬಲಗೈಯಿಂದ ತೆಗಿಯಲ್ಪಟ್ಟ ತೂಕವನ್ನು ಎಡಗೈಯಲ್ಲಿಡಬೇಕು. ಈಗ ದಂಡಿಗೆ ನಿಜವಾದ ಸಮಭಾರ ತೋರಿಸಿದರೆ, ತ್ರಾಸು ಸರಿಯಾದ್ದು; ಇಲ್ಲದ ಪಕ್ಷದಲ್ಲಿ, ತಕ್ಕ ಕಾರೇಗಾರನಿಂದ ತ್ರಾಸನ್ನು ಸರಿಮಾಡಿಸಬೇಕು. ದೊಡ್ಡದಾದ ಅಥವಾ ಚಿಕ್ಕದಾದ ಇತರ ಎಲ್ಲಾ ತ್ರಾಸುಗಳ ವಿಷಯದಲ್ಲಿಯೂ ಇದೇ ಮಾತು ಪ್ರಯೋಗವಾಗುತ್ತೆ.

II. ಧಾನ್ಯಗಳ ಮತ್ತು ದ್ರವದ ಅಳತೆಗಳು ಪರೀಕ್ಷಿಸುವದು.

ಧಾನ್ಯದ ಅಳತೆಗಳ ಅಡ್ಡಳತೆ.—ಮುದ್ರೆ ಹಾಕುವ ಬಗ್ಗೆ ಒಂದು ಧಾನ್ಯದ ಅಳತೆ ಬಂದಾಗ್ಯೂ, ಮೊದಲು ಮಾಡಬೇಕಾದ್ದೇನಂದರೆ ಅದರ ಅಡ್ಡಗಲವನ್ನು ಚನ್ನಾಗಿ ಅಳತೆ ಮಾಡತಕ್ಕದ್ದು. ಅದರ ಅಡ್ಡಳತೆಯು ಅಳತೆಯ ಪ್ರಮಾಣದ ಅಡ್ಡಳತೆಗೆ ಸರಿ

ಯಾಗಿರುವದಾದರೆ, ಆ ಅಳತೆಯನ್ನು ಪರೀಕ್ಷಿಸುವದಕ್ಕೋಸ್ಕರ ಅಂಗೀಕರಿಸಬಹುದು. ಇಲ್ಲದಿದ್ದರೆ, ಅದನ್ನು ತೆಗೆದುಕೊಳ್ಳಕೂಡದು. (ನೋಟು.— ಒಂದು ಅಳತೆಯು ಸರಿಯಾಗಿ ದುಂಡಾಗಿಲ್ಲದೆ ಹೋದರೆ, ಅದರ ಅತ್ಯಂತ ದೊಡ್ಡದಾದ ಮತ್ತು ಅತ್ಯಂತ ಚಿಕ್ಕದಾದ ಅಡ್ಡಳತೆಗಳ ಮಧ್ಯ ಪದವನ್ನು ತೆಗೆದುಕೊಳ್ಳಬೇಕು.

7. ಪ್ರತಿ ಒಬ್ಬ ಕಂಟ್ರಾಕ್ಟರು ಟೋಲು ಗೇಟುಗಳ ಮುಖಾಂತರ ಬರತಕ್ಕ ಗಾಡಿ ಯಾ ಜಾನವರುಗಳ ತಪಶೀಲು ಲೆಖ್ಖವನ್ನು 6ನೆ ಕಲಂನಲ್ಲಿ ನಮೂದಿಸಿರುವಂತೆ, ಇಡತಕ್ಕ ಬಗ್ಯೆ ಆಯಾಯ ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಪ್ರತಿಒಂದು ಟೋಲುಗೇಟಿನಲ್ಲಿಯೂ, ಒಬ್ಬೊಬ್ಬ ಮುತ್ಸದ್ದಿಯನ್ನಿಡುವದಕ್ಕೆ ಬದ್ಧನಾಗಿರತಕ್ಕದ್ದು.

8. ಹಾಲಿ ಇರುವ ಟೋಲುಗೇಟುಗಳನ್ನು ಮತ್ತು ಮನೆಗಳನ್ನು ಕಂಟ್ರಾಕ್ಟರು ಒಳ್ಳೇ ಸ್ಥಿತಿಯಲ್ಲಿಟ್ಟುಕೊಂಡು, ಅವುಗಳನ್ನು ಉಪಯೋಗ ಮಾಡಿಕೊಳ್ಳಬಹುದು.

9. ಈ ಮೇಲ್ಕಂಡ ಷರತ್ತುಗಳಿಗೆ ಒಳಪಟ್ಟು ಕಂಟ್ರಾಕ್ಟು ಬಾಬನ್ನು ಸಲೀಸು ನಡೆಸಿಕೊಂಡು ಹೋಗತಕ್ಕ ವಿಚಾರದಲ್ಲಿ ಕಂಟ್ರಾಕ್ಟರು ಪ್ರೆಸಿಡೆಂಟರವರಿಂದ ವಿಧಾಯಕವಾದ ನಮೂನೆಯಲ್ಲಿ ಛಾಪಾ ಕಾಗದದಲ್ಲಿ ರೂಲ್ಸ್ ಪ್ರಕಾರ ಮುಚ್ಚಳಿಕೆ ಬರೆದು ಕೊಡಬೇಕು.

10 ಈ ಕೆಳಗೆ ನಮೂದಾಗುವವುಗಳ ಮೇಲೆ ಕಂಟ್ರಾಕ್ಟರು ಟೋಲನ್ನು ವಸೂಲ್ಮಾಡಕೂಡದು.

(1) ಮ್ಯುನಿಸಿಪಾಲಿಟಿಗೆ ತೆರಿಗೆ ಪಾವತಿಮಾಡಿ ನಂಬರು ಹಾಕಿಸಿಕೊಂಡಿರತಕ್ಕ ಗಾಡಿಗಳು ಅಥವಾ ಕ್ಯಾರೇಜುಗಳು ಮ್ಯುನಿಸಿಪಾಲಿಟಿಯಿಂದ ಪಡೆದಿರತಕ್ಕ ಪ್ಯಾಸುಗಳನ್ನು ಹಾಜರ್ಮಾಡುವ ಗಾಡಿಗಳು ಅಥವಾ ಜಾನವರುಗಳು ಮತ್ತು ಗವರ್ನ್ಮೆಂಟ್ ಯಾ ಮ್ಯುನಿಸಿಪಲ್ ಕಮಿಷನರಿಗೆ ಸೇರಿದ ಅಥವಾ ಸಾಮಾನು ವಗೈರೆ ಸಾಗಿಸುವದಕ್ಕಾಗಿ ನೌಕರರ್ಮಾಡಲ್ಪಟ್ಟ ಕ್ಯಾರೇಜುಗಳು, ಗಾಡಿಗಳು ಮತ್ತು ಜಾನವರುಗಳ ಮೇಲೆ ಮತ್ತು ಒಂದು ದಿವಸದಲ್ಲಿ 24 ಘಂಟೆಯ ಕಾಲದೊಳಗಾಗಿ ಅಂದರೆ ಒಂದು ಮಧ್ಯರಾತ್ರಿಯಿಂದ ಇನ್ನೊಂದು ಮಧ್ಯರಾತ್ರಿಯವರಿಗೂ, ಯಾವ ಕ್ಯಾರೇಜುಗಾಡಿ ಅಥವಾ ಜಾನವರುಗಳ ಮೇಲೆಯೇ ಆಗಲಿ, ಒಂದುಸಾರಿಗಿಂತಲೂ ಹೆಚ್ಚಾಗಿ ಟೋಲು ವಸೂಲ್ಮಾಡಕೂಡದು.

(2) ಟೋಲು ಮುಖಾಂತರ ಬರತಕ್ಕ ಸೈನಿಕರ ವಾಹನಕ್ಕಾಗಿ ಅಥವಾ ಅಂಥಾ ಸೈನಿಕರ ಸಾಮಾನು ವಗೈರೆ ಸಾಗಿಸತಕ್ಕ ಬಗ್ಯೆ ಉಪಯೋಗಿಸುವ ಗಾಡಿ ಅಥವಾ ಜಾನವರುಗಳ ಮೇಲೆ ಮಿಲಿಟರಿ ಅಥವಾ ಗವರ್ನ್ಮೆಂಟ್ ಸ್ಟೋರಿಗೆ ಸಾಗಿಸಲ್ಪಡುವ ಸಾಮಾನುಗಳು ಇರತಕ್ಕ ಗಾಡಿ ಅಥವಾ ಜಾನವರುಗಳ ಮೇಲೆ ಸರ್ಕಾರಿ ಡ್ಯೂಟಿಯ ಮೇಲೆ ಬರತಕ್ಕ ಪೊಲೀಸು ಆಫಿಸರರು, ನೌಕರರವರು ಅವರ ಕ್ಯಾರೇಜುಗಳು, ಗಾಡಿಗಳು ಮತ್ತು ಜಾನವರುಗಳು ಇವುಗಳ ಮೇಲೆ ಮತ್ತು ಅರಮನೆ ಇಲಾಖೆಗೆ ಸೇರಿದ ಗಾಡಿಗಳು, ಕ್ಯಾರೇಜುಗಳು, ಜಾನವರುಗಳು ಇವುಗಳಮೇಲೆ ಸಹಾ.

ನಂಬರು.	ಷೆಡ್ಯೂಲ್ A.	
1	ರೈಲ್ವೆ ಸ್ಟೇಷನ್ ರಸ್ತೆ ...	ಬಳಗುಳದ ರಸ್ತೆ ಮತ್ತು ಸಿಕ್ ಲೈನ್ ರಸ್ತೆ ಇವೆರಡು ಜಂಕ್ಷನ್ ಆಗುವ ಸ್ಥಳದಲ್ಲಿರುವ ಉಕ್ಕಡ
2	ಬಳಗುಳದ ರಸ್ತೆ ..	ಕೆಂಪನಕಟ್ಟೆ ಉಕ್ಕಡ
3	ಶ್ರೀರಂಗಪಟ್ಟಣದ ರಸ್ತೆ ..	ಏರೆಕಟ್ಟೆ ಡಿಟೋ
4	ಬೆಂಗಳೂರು ರಸ್ತೆ ..	ವೀರನಗೆರೆ ಡಿಟೋ
5	ಸೆಮಿಟರಿ ರಸ್ತೆ ..	ಬಂಗ್ಲಿ ಸಂತ್ರಿ ಡಿಟೋ
6	ಮಹದೇವಪುರದ ರಸ್ತೆ ..	ಜಲಪುರಿ ಡಿಟೋ
7	ಆಲನಹಳ್ಳಿ ರಸ್ತೆ ..	ಇಟ್ಟಿಗೆಗೂಡು ಡಿಟೋ
8	ರೇಸುಕೋರ್ಸ್ ರಸ್ತೆ ...	ರೋಣಸಂತ್ರಿ ಡಿಟೋ
9	ನಂಜನಗೂಡು ರಸ್ತೆ ..	ನಂಜನಗೂಡು ಡಿಟೋ
10	ಡಿಟೋ ..	ಹಾಲಿ ಉಕ್ಕಡದಬಳಿ ವಿಧಾಯಕ ಮಾಡಿರುವಂತೆ ನಾಚನಹಳ್ಳಿ ಉಕ್ಕಡ
11	ಮಾನಂದವಾಡಿ ರಸ್ತೆ ..	ಚಟ್ಟನಹಳ್ಳಿ ಉಕ್ಕಡ
12	ವೈನ್ರಾಯಿ ರಸ್ತೆ ..	ಹೊಲಗೇರಿ ಡಿಟೋ
13	ಚಾಮರಾಜ ಅಗ್ರಹಾರದ ಹಿಂಭಾಗದ ರಸ್ತೆ ...	ಡಿಟೋ
14	ಜ್ಯಾಬಿಲಿ ರಸ್ತೆ ...	ಕುಕ್ಕನಹಳ್ಳಿ ಡಿಟೋ
15	ಇಲವಾಲದ ರಸ್ತೆ ..	ಶ್ರೀರಾಮಪೇಟೆ ಡಿಟೋ

ನಂಬರು.	ಷೆಡ್ಯೂಲ್ B.	ರೂ.	ಆ.	ಪೈ.
	ಟೋಲುಗೇಟುಗಳಲ್ಲಿ ವಸೂಲು ಮಾಡತಕ್ಕ ದರಗಳ ತಪಸೀಲು.			
1	ಸ್ಪ್ರಿಂಗು ಇರತಕ್ಕ ಪ್ರತಿ ಒಂದು ನಾಲ್ಕು ಚಕ್ರದ ಕ್ಯಾರೇಜಿಗೆ	0	4	0
2	ಡಿಟ್ಟೋ 2 ಚಕ್ರದ ಕ್ಯಾರೇಜಿಗೆ	0	2	0
3	ಮನುಷ್ಯರು ಯಾ ಎತ್ತುಗಳು, ಕುದುರೆಗಳು, ಹೇಸರಕತ್ತೆಗಳು ಇವುಗಳಿಂದ ಎಳೆಯಲ್ಪಟ್ಟ ಭರ್ತಿಗಾಡಿಗಳು ಅಥವಾ ಹ್ಯಾಕ್ನಿ ಗಾಡಿ 1ಕ್ಕೆ	0	2	0
4	ಡಿಟ್ಟೋ ಖಾಲಿ ಇರತಕ್ಕ ಪ್ರತಿ ಒಂದು ಗಾಡಿಗೆ	0	1	0
5	ಡಿಟ್ಟೋ ಹೇರು ಹೇರಿಕೊಂಡು ಬರತಕ್ಕ ಕೋಣ ಯಾ ಎತ್ತು 1ಕ್ಕೆ ..	0	0	6
6	ಡಿಟ್ಟೋ ಸವಾರಿ ಅಥವಾ ಹೇರು ಹೇರಿಕೊಂಡು ಬರತಕ್ಕ 13 ಹಿಡಿಗಳಿಗಿಂತಲೂ ಮೀರಿದ ಕುದುರೆ 1ಕ್ಕೆ	0	1	0
7	ಹೇರು ಇಲ್ಲದೆ ಅಥವಾ ಸವಾರಿ ಇಲ್ಲದೆ ಬರತಕ್ಕ ಕುದುರೆ 1ಕ್ಕೆ	0	0	6
8	13 ಹಿಡಿಗಳು ಅಥವಾ ಅದಕ್ಕಿಂತ ಕಮ್ಮಿಯಾಗಿರತಕ್ಕ ಸವಾರಿ ಅಥವಾ ಹೇರು ಇರುವ ಕುದರೆ 1ಕ್ಕೆ	0	0	6
9	ಡಿಟ್ಟೋ ಆನೆ 1ಕ್ಕೆ	0	8	0
10	ಡಿಟ್ಟೋ ಒಂಟೆ 1ಕ್ಕೆ	0	1	0

ಕೆ. ಶ್ರೀನಿವಾಸರಾವ್,
ಫಾರ್ ಪ್ರೆಸಿಡೆಂಟ್.

ಮೈಸೂರು ಗೆಜೆಟ್.

ನಂ. 39]   ಸರ್ಕಾರದಿಂದ ಪ್ರಾಯಿಷ್ಷಾ ಆದ್ದು.   [ನಂ. 17.

ಬೆಂಗಳೂರು, ಗುರುವಾರ, ಏಪ್ರೈಲ್ ತಾ|| 28, ಸ|| 1904.

IIIನೆ ಭಾಗ.

ಲೆಜಿಸ್ಲೆಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಲೆಜಿಸ್ಲೆಟಿವು ಇಲಾಖೆ.

ಇಸ್ತಿಹಾರ್‌ನಾಮೆ, ನಂ. 147—ಲೆ. 5–03, ಬೆಂಗಳೂರು, 7ನೇ ಮಾರ್ಚಿ 1904ನೇ ವರುಷ.

1902ನೇ ವರುಷದ ಮೈಸೂರು ಸೀಮೆಯು ತೂಕಗಳ ಮತ್ತು ಅಳತೆಗಳ ನಿಬಂಧನೆಯಂತೆ ಜಾರಿಯಲ್ಲಿರತಕ್ಕದ್ದಾಗಿ ಉದ್ದೇಶಿಸಲ್ಪಟ್ಟ ನೇಮಗಳ, ಈ ಕೆಳಗೆ ಬರುವ ಮಸ್ವಿದೆಯನ್ನು ಎಲ್ಲರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಟ್ಟಿರುತ್ತೆ. ಸದರೀ ಪ್ರಕಟನೆಯ ತಾರೀಖಿನಿಂದ ಎರಡು ತಿಂಗಳುಗಳು ಕಳದ ನಂತರ ಆ ಮಸ್ವಿದೆಯು ಆಲೋಚಿಸಲ್ಪಡುತ್ತೆ. ಆಸಕ್ತರಾದ ಜನಗಳು ಸೂಚಿಸಬಹುದಾದ ದೋಷಗಳು ಮತ್ತು ಸಲಹೆಗಳು, ಈ ಕಾಲದೊಳಗಾಗಿ ಕಳುಹಿಸಲ್ಪಟ್ಟರೆ, ತಕ್ಕ ಹಾಗೆ ಆಲೋಚಿಸಲ್ಪಡುತ್ತವೆ.

ಕೆ. ಎಸ್. ಚಂದ್ರಶೇಖರ ಅಯ್ಯರ್,
ಫಾರ್ ಸೆಕ್ರಟರಿ.

ಮೈಸೂರು ಸೀಮೆಯ ತೂಕಗಳ ಮತ್ತು ಅಳತೆಗಳ ನಿಬಂಧನೆಯಂತೆ ಜಾರಿಯಲ್ಲಿ ಬರತಕ್ಕದ್ದಾಗಿ ಉದ್ದೇಶಿಸಲ್ಪಟ್ಟಿರುವ ನೇಮಗಳ ಮಸ್ವಿದೆ.

1902ನೇ ವರುಷದ IIIನೇ ನಂಬರಿನ ರೆಗ್ಯುಲೇಷನಿಂದ ಹೊಂದಿದ್ದ ಅಧಿಕಾರಗಳನ್ನು ಮತ್ತು ಈ ವಿಷಯದಲ್ಲಿ ಹೊಂದಿರುವ ಇತರ ಎಲ್ಲಾ ಅಧಿಕಾರಗಳನ್ನು ನಡಿಸುವದರಲ್ಲಿ ಘನವನ್ನು ಹೊಂದಿದ್ದ ಶ್ರೀಮನ್ಮಹಾರಾಜರವರ ಗವರ್ನಮೆಂಟಿನವರು, 1904ನೇ ವರುಷದ   ತಿಂಗಳಿನ ಮೊದಲು ತಾರೀಖಿನಿಂದ ಮತ್ತು ತರುವಾಯ ಮೈಸೂರು ಸೀಮೆಯ ಎಲ್ಲಾ ಭಾಗಗಳಲ್ಲಿಯೂ ತೂಕಗಳ ಮತ್ತು ಅಳತೆಗಳ ಉಪಯೋಗವನ್ನು ಕ್ರಮಪಡಿಸುವ ಬಗ್ಗೆ, ಈ ಕೆಳಗೆ ಬರುವ ನೇಮಗಳನ್ನು ವಿಧಿಸಿರುತ್ತಾರೆ.

ಬ್ರಿಟಿಷ್ ಅಥವಾ ಮೆಟ್ರಿಕ್ ರೀತಿಗಳನ್ನು ಅನುಸರಿಸುವ ತೂಕಗಳ ಮತ್ತು ಅಳತೆಗಳ ಉಪಯೋಗಕ್ಕಾಗಲಿ, ಅಥವಾ "ಶೇರು" ಎಂದು ಕರಿಯಲ್ಪಡುವದನ್ನೆ ಅಥವಾ ಅದರ ಬಳಭಾಗ ಯಾ ಗುಣಿತವನ್ನೇ ಅಳತೆಯ ಪ್ರಮಾಣವಾಗಿ ವುಳ್ಳ ಬೇರೆ ತೂಕವನ್ನು ಅಥವಾ ಅಳತೆಯನ್ನು ಆಧಾರ ಉಂಟಾಗಿಲ್ಲದೆ ಇರುವ, ಅಂಗೀಕರಿಸಲ್ಪಟ್ಟ ಇತರ ಯಾವ ರೀತಿಯ ಆಚರಣೆಗಾಗಲಿ, ಈ ನೇಮಗಳಲ್ಲಿ ಯಾವ ನಿಯಮವೂ ಪ್ರಯೋಗವಾಗುವದಾಗಿಯಾದರೂ ಅಡ್ಡಿ ಮಾಡುವದಾಗಿಯಾದರೂ ಉದ್ದೇಶಿಸಲ್ಪಟ್ಟಿರುವದಿಲ್ಲ.

1\. (1) ತೂಕದ ಪ್ರಮಾಣವು "ಶೇರು" ತೂಕವಾಗಿರತಕ್ಕದ್ದು; ಆ ಶೇರಿನ ತೂಕವು, ಗವರ್ನಮೆಂಟಿನವರ ಸ್ವಾಧೀನದಲ್ಲಿರುವ ಬ್ರಿಟಿಷ್ ಇಂಡಿಯ ಚಲಾವಣೆಗೆ ಸೇರಿದ ಇಪ್ಪತ್ತುನಾಲ್ಕು ರೂಪಾಯಿಗಳ (ಟ್ರಾಯಿ 180 ಗ್ರೇನ್ಸ್ ಉಳ್ಳ) ತೂಕಕ್ಕೆ ಸಮಾನವಾದ ತೂಕವುಳ್ಳ ಲೋಹದ ಮುದ್ದೆಯಾಗಿರುತ್ತೆ.

(2) ಅಳತೆಯ ಪರಿಮಾಣವು "ಶೇರು ಅಳತೆ" ಯಾಗಿರಬೇಕು. ಅದು ಗವರ್ನಮೆಂಟಿನವರ ಸ್ವಾಧೀನದಲ್ಲಿರುವ ಕಂಚಿನ ಟೊಳ್ಳಾದ ಸ್ತಂಭವಾಗಿದೆ; ಮತ್ತು ಅದು ಕಂಠದವರೆಗೆ, ತುಂಬಲ್ಪಟ್ಟಾಗ್ಯೆ, ಸರಿಯಾಗಿ ಎಂಭತ್ತು ರೂಪಾಯಿ ತೂಕವುಳ್ಳ ಮತ್ತು ದಟ್ಟದ ಮಹತ್ಪರಿಮಾಣವುಳ್ಳ ಬಟ್ಟಿ ಇಳಿಸಿದ ನೀರನ್ನು ಗಾಳಿಯ ಕ್ರಮವಾದ ಉತ್ತಾಯದಲ್ಲಿ ಹಿಡಿಯತಕ್ಕದ್ದಾಗಿ ಇದೆ.

2\. (1) ಮೇಲ್ಕಂಡ ತೂಕದ ಶೇರಿನ ಮತ್ತು ಅಳತೆ ಶೇರಿನ ಪ್ರಮಾಣಗಳು ಸ್ಟೇಟ್ ಹಜೂರು ಖಜಾನೆಯಲ್ಲಿ ಜತನದಿಂದ ಬಪ್ಪದಿಸಿ ಟ್ರೆಜರಿಯು ಚಾರ್ಜಿನಲ್ಲಿರತಕ್ಕ ಆಫೀಸರ ಸ್ವಂತ ಕಾವಲಿನಲ್ಲಿರತಕ್ಕದ್ದು.

(2) ತೂಕದ ಶೇರು ಮತ್ತು ಅಳತೆ ಶೇರು—ಇವುಗಳ ಪ್ರಮಾಣದ ಒಂದು ಮಾದ್ರಿಯು ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಜೈಲಿನ ಸೂಪರಿಂಟೆಂಡೆಂಟರ ಸ್ವಂತ ಕಾವಲಿನಲ್ಲಿ ಇಡತಕ್ಕದ್ದು; ಮತ್ತು ಆ ಮಾದ್ರಿಯು ಹತ್ತು ವರುಷಗಳಲ್ಲಿ ಒಂದಾವರ್ತಿಗೆ ಕಮ್ಮಿ ಇಲ್ಲದಂತೆ ಸ್ಟೇಟ್ ಹಜೂರು ಖಜಾನೆಯಲ್ಲಿ ಇಡಲ್ಪಟ್ಟಿರುವ ಮಾದ್ರಿಗಳೊಂದಿಗೆ ಸರಿನೋಡಲ್ಪಡತಕ್ಕದ್ದು.

3\. ಈ ಕೆಳಗೆ ಬರುವ ತೂಕಗಳು ಮತ್ತು ಅಳತೆಗಳು ಇದರಿಂದ ಒಪ್ಪಲ್ಪಟ್ಟಿರುತ್ತವೆ.

(A) ತೂಕಗಳು :—

ತೊಲಾ (180 ಗ್ರೆನ್ಸ್), 2 (1) ನೇ ನೇಮದಲ್ಲಿ ನಿಶ್ಚಯಿಸಲ್ಪಟ್ಟ ಒಂದು ಸೇರಿನ ಇಪ್ಪತ್ತುನಾಲ್ಕನೆ ಭಾಗದಲ್ಲಿ ಒಂದು ಭಾಗಕ್ಕೆ ಸಮವಾಗಿರುವದು ;

ಅರ್ಧ ತೊಲಾ ; ಕಾಲು ತೊಲಾ ; ಮತ್ತು ಒಂದು ತೊಲಾವಿನ ಇನ್ನು ಚಿಕ್ಕ ಉಪಭಾಗಗಳು ;

ಒಂದು ತೊಲಾವಿನ ಅಪವರ್ತ್ಯಗಳು ಅಷ್ಟು ತೊಲಾಗಳೆಂದು ವಿವರಿಸಲ್ಪಡತಕ್ಕದ್ದು ;

ಶೇರು, 2 (1)ನೇ ನೇಮದಲ್ಲಿ ನಿಶ್ಚಯಿಸಲ್ಪಟ್ಟ ತೂಕದ ಶೇರಿನ ಪ್ರಮಾಣಕ್ಕೆ ಸಮವಾಗಿರುವದು ;

ಅಚ್ಚೇರು = 12 ತೊಲಾಗಳು ;

ಪಾವು = 6 ತೊಲಾಗಳು ;

ಅರಪಾವು = 3 ತೊಲಾಗಳು ;

ಮಣ, 40 ಶೇರುಗಳಿಗೆ ಸಮವಾಗಿರುವದು ;

ಒಂದು ಶೇರಿನ ಚಿಕ್ಕ ಅಪವರ್ತ್ಯಗಳು, ಅಷ್ಟು ಶೇರುಗಳೆಂದು ವಿವರಿಸಲ್ಪಡತಕ್ಕದ್ದು. (ಅಪೂರ್ಣಭಾಗಗಳೊಂದಿಗಾಗಲಿ ಯಾ ಇಲ್ಲದೇನೆ ಆಗಲಿ), ಅಥವಾ ಒಂದು ಮಣದ ಅಂಥಾ ಅಪೂರ್ಣಾಂಕವೆಂದು ವಿವರಿಸಲ್ಪಡತಕ್ಕದ್ದು ;

ಉದಾಹರಣೆ : 5 ಶೇರುಗಳು (ಪಂಚೇರು) ; 10 ಶೇರುಗಳು (ಧಡಿಯು) ; ½ (ಅರ್ಧ) ಮಣ ; ¼ (ಕಾಲು) ಮಣ, ಮುಂತಾದ್ದು ;

ಒಂದು ಮಣದ ಗುಣಿಜಗಳು, ಅಷ್ಟು ಮಣಗಳೆಂದು ವಿವರಿಸಲ್ಪಡತಕ್ಕದ್ದು. (ಅಪೂರ್ಣಭಾಗಗಳೊಂದಿಗಾಗಲಿ ಯಾ ಇಲ್ಲದೇನೆ ಆಗಲಿ) ; ಉದಾಹರಣೆ : 2 ಮಣಗಳು ; 2½ (ಎರಡುವರೆ) ಮಣಗಳು ; ಮುಂತಾದ್ದು ;

ದೊಡ್ಡಶೇರು = 80 ತೊಲಾಗಳು ; ದೊಡ್ಡ ಮಣ, ಪ್ರತಿ ಒಂದು ದೊಡ್ಡ ಶೇರು 80 ತೊಲಾಗಳು ಉಳ್ಳದ್ದಾಗಿರುವ 40 ದೊಡ್ಡಶೇರುಗಳಿಗೆ ಸಮವಾಗಿರುವದು ;

ದೊಡ್ಡಶೇರು ಮತ್ತು ಮಣ—ಇವುಗಳ ಗುಣಿಜಗಳು, ಅಷ್ಟು ದೊಡ್ಡ ಶೇರುಗಳು ಅಥವಾ ದೊಡ್ಡ ಮಣಗಳೆಂದು ವಿವರಿಸಲ್ಪಡತಕ್ಕದ್ದು.

(B) ಅಳತೆಗಳು :—

ಶೇರು, 2 (2)ನೇ ನೇಮದಲ್ಲಿ ನಿಶ್ಚಯಿಲ್ಪಟ್ಟ ಅಳತೆ ಶೇರಿನ ಪ್ರಮಾಣಕ್ಕೆ ಸಮವಾಗಿರುವದು :

ಒಂದು ಶೇರಿನ ಉಪಭಾಗಗಳು, ಅದು ಹ್ಯಾಗಂದರೆ :—

ಅಚ್ಚೇರು (ಶೇರಿನ ಅರ್ಧಭಾಗ) ;

ಪಾವು (ಶೇರಿನ ಕಾಲುಭಾಗ) ;

ಅರಪಾವು (ಶೇರಿನ ಎಂಟನೆ ಭಾಗ) ;

ಚಟಾಕು (ಶೇರಿನ ಹದಿನಾರನೆ ಭಾಗ) ;

ಕೊಳಗ = 8 ಶೇರುಗಳು ;

ಒಂದು ಶೇರಿನ ಕಮ್ಮಿಯಾದ ಗುಣಿಜಗಳು ಅಷ್ಟು ಶೇರುಗಳೆಂದು ವಿವರಿಸಲ್ಪಡತಕ್ಕದ್ದು. (ಅಪೂರ್ಣಭಾಗಗಳೊಂದಿಗಾಗಲಿ ಯಾ ಇಲ್ಲದೇನೆ ಆಗಲಿ), ಅಥವಾ ಒಂದು ಕೊಳಗದ ಅಂಥ ಅಪೂರ್ಣಾಂಕವೆಂದು ವಿವರಿಸಲ್ಪಡತಕ್ಕದ್ದು ;

ಪಲ್ಲಾ = 12½ ಕೊಳಗಗಳು ಅಥವಾ 100 ಶೇರುಗಳು ;

ಕಂಡಗ = 20 ಕೊಳಗಗಳು ಅಥವಾ 160 ಶೇರುಗಳು ;

ಒಂದು ಕೊಳಗದ ಕಮ್ಮಿಯಾದ ಗುಣಿಜಗಳು ಅಷ್ಟು ಕೊಳಗಗಳೆಂದು ವಿವರಿಸಲ್ಪಡತಕ್ಕದ್ದು. (ಅಪೂರ್ಣಭಾಗಗಳೊಂದಿಗಾಗಲಿ ಯಾ ಇಲ್ಲದೇನೆ ಆಗಲಿ), ಅಥವಾ ಒಂದು ಪಲ್ಲಾ ಯಾ ಕಂಡಗದ ಅಂಥಾ ಅಪೂರ್ಣಾಂಕವೆಂದು ವಿವರಿಸಲ್ಪಡತಕ್ಕದ್ದು.

4. ವಿಶೇಷವಾಗಿ ವಾಡಿಕೆಯಲ್ಲಿರುವ ತೂಕಗಳ ಮತ್ತು ಅಳತೆಗಳ ಮಾದ್ರಿಗಳನ್ನು, ಬೆಂಗಳೂರು ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರು ಮಾಡಿಸತಕ್ಕದ್ದಲ್ಲದೆ, ಸದರೀ ಮಾದ್ರಿಗಳು, ಜಾಗರೂಕತೆಯಿಂದ ಸರಿನೋಡಲ್ಪಟ್ಟು ಸರಿಯಾಗಿರುವದೆಂಬುವದಕ್ಕಾಗಿ ಮುದ್ರೆಯಿಂದ ಮುದ್ರಿಸಲ್ಪಟ್ಟ ತರುವಾಯ, ಅವುಗಳನ್ನು ಮಾಡತಕ್ಕ ಶಿಬ್ಬಂದಿ ಖರ್ಚಿಗಾಗಿ ನೂರಿಗೆ ಇಷ್ಟೆಂತ ನ್ಯಾಯವಾಗಿ ನಿರ್ಣಯಿಸಲ್ಪಟ್ಟ ಸಂಖ್ಯೆಯು ಸೇರಿದ ಅವುಗಳ ಅಸಲ್ ಖರೀದಿಗೆ ಮಿಾರದಂತಿರುವ ಬೆಲೆಗಳಿಗೆ ವಿಕ್ರಯಿಸಲ್ಪಡುವ ಬಗ್ಗಾಗಿ, ದೊರಕುವಂತಿರಬೇಕು.

5. ತೂಕದ ಮತ್ತು ಅಳತೆಯ ಪ್ರಮಾಣಗಳ ಸರಿಯಾದ ಮಾದ್ರಿಗಳನ್ನು ಮತ್ತು ವಿಶೇಷ ವಾಡಿಕೆಯಲ್ಲಿರುವ ತೂಕಗಳ ಮತ್ತು ಅಳತೆಗಳ ಮಾದ್ರಿಗಳನ್ನೂ, ಬೆಂಗಳೂರು ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರು, ಈ ರೆಗ್ಯುಲೇಷನಿನ 3ನೇ ಪ್ರಕರಣದಲ್ಲಿ ನಮೂದಿಸಲ್ಪಟ್ಟ ಕಚೇರಿಗಳಿಗೂ ಮತ್ತು ಪ್ರತಿ ಒಂದು ತಾಲ್ಲೂಕು ಕಚೇರಿಗೂ ಮತ್ತು ಪೊಲೀಸ್ ಸ್ಟೇಷನಿಗೂ ಒದಗಿಸತಕ್ಕದ್ದು. ಇವುಗಳು, 10 ವರುಷಗಳಿಗೆ ಒಂದಾವರ್ತಿ ಕಮ್ಮಿಯಿಲ್ಲದಂತೆ, ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರಿಂದ ಸರಿನೋಡಲ್ಪಡಬೇಕು, ಮತ್ತು ಅವಶ್ಯವಿದ್ದಾಗೆಲ್ಲಾ ಅವುಗಳಿಗೆ ಬದಲಾಗಿ ಹೊಸದಾದವುಗಳನ್ನು ಮಾಡಿಸಬೇಕು.

6. ವಾಡಿಕೆಯಾಗಲೀ, ಸ್ಪಷ್ಟವಾದ ಅಥವಾ ಭಾವದಿಂದಾದ ಕರಾರಾಗಲೀ ವಿರೋಧವಾಗಿದ್ದರೇನೇಹೊರ್ತು, ಯಾವ ಪದಾರ್ಥವನ್ನಾಗಲೀ ಅಂಗೀಕರಿಸಲ್ಪಟ್ಟ ಪರಿಮಾಣದ ಅಳತೆಗಳಲ್ಲಿ ಅಳೆಯುವಾಗ್ಯೆ, ಅಳತೆ ಮೇಲೆ ಗುಡ್ಡೆ ಮಾಡದೆ, ಅಳತೆಬಾಯಿಗೆ ಸರಿಯಾಗಿರುವಂತೆ ದುಂಡುಕೋಲಿನಿಂದ ಅದರಲ್ಲಿರುವ ಆ ಪದಾರ್ಥವನ್ನು ಸಮವಾಗಿ ತೆಗೆಯುವದಾಗಲೀ, ಅಥವಾ ಆ ಪದಾರ್ಥವು ಆಕಾರದಿಂದಲಾದರೂ, ಗಾತ್ರದಿಂದಲಾದರೂ, ಅಳತೆಬಾಯಿ ಮೇಲೆ ಸಮವಾಗಿರುವಹಾಗೆ ಮಾಡಲು ಸಾಧ್ಯವಿಲ್ಲದ ಪಕ್ಷದಲ್ಲಿ ಆ ಅಳತೆಯ ಕಂಠದ ಸಮಕ್ಕೆ ಆ ಪದಾರ್ಥದ ಆಕಾರ ಮತ್ತು ಘಾತ್ರ ಅವಕಾಶ ಕೊಡುವಷ್ಟು ತುಂಬುವದಾಗಲೀ—ಇದು ನಡಿಯತಕ್ಕದೆಂದು ಊಹಿಸಲ್ಪಟ್ಟಿರುತ್ತೆ.

7. ಮಾದ್ರಿ ತೂಕಗಳ ಅಥವಾ ಅಳತೆಗಳ ಸರಿಯಾದ ಪ್ರಮಾಣದಿಂದ ಈ ಕೆಳಗಿನ, ಪಟ್ಟಿಯಲ್ಲಿ ಕಂಡ ತಪ್ಪಿಗಿಂತ ಹೆಚ್ಚಿಲ್ಲದಂತೆ ವೆತ್ಯಾಸವಾಗುವ ಯಾವ ತೂಕವನ್ನಾಗಲೀ ಅಥವಾ ಅಳತೆಯನ್ನಾಗಲೀ, ಅಂಥಾ ವೆತ್ಯಾಸದಿಂದಲೇನೇ ಒಂದು ಸುಳ್ಳು ತೂಕ ಅಥವಾ ಅಳತೆ ಎಂದು ಭಾವಿಸಕೂಡದು:—

ವೆತ್ಯಾಸವಾಗಿರುವ ತೂಕಗಳಿಗೂ ಅಳತೆಗಳಿಗೂ ಗಣನೆ ಮಾಡಬೇಕಾಗಿಲ್ಲದ ತಪ್ಪನ್ನು ತೋರಿಸುವ ಪಟ್ಟಿ:—

ತೂಕಗಳು.

ತೂಕಗಳು.	ಬಿಡಲ್ಪಟ್ಟ ತಪ್ಪು (ಟ್ರಾಯಿ, ಗ್ರೇನ್ಸ್‌ನಲ್ಲಿ).	
	ಹೆಚ್ಚಿನಲ್ಲಿ.	ಕಮ್ಮಿಯಲ್ಲಿ.
4 ಮಣಗಳಿಗೆ ಮತ್ತು ಅದಕ್ಕೆ ಕಡಮೆಯಾಗಿ 20 ಶೇರುಗಳ ವರಿಗೆ ...	5	2·5
20 ಶೇರುಗಳಿಗೆ ಕಡಮೆಯಾಗಿ $2\frac{1}{2}$ ಶೇರುಗಳ ವರಿಗೆ	2	1
$2\frac{1}{2}$ ಶೇರುಗಳಿಗೆ ಕಡಮೆಯಾಗಿ $\frac{1}{2}$ ಶೇರಿನ ವರಿಗೆ ...	·5	·25
$\frac{1}{2}$ ಶೇರಿಗೆ ಕಡಮೆಯಾಗಿ 1 ತೊಲಾದ ವರಿಗೆ	·2	·1
1 ತೊಲಾಕ್ಕೆ ಕಡಿಮೆಯಾಗಿ $\frac{1}{8}$ ತೊಲಾದ ವರಿಗೆ	·1	·05
$\frac{1}{8}$ ತೊಲಾಕ್ಕೆ ಕಡಮೆಯಾಗಿ	·05	·025

ಅಳತೆಗಳು.

ಅಳತೆಗಳು.	ಅಂಶ ಮಾಡಲ್ಪಟ್ಟ ಗಾಜಿನ ಕೊಳವೆಯಿಂದ ಅಳತೆ ಮಾಡಲ್ಪಟ್ಟು ಬಿಡಬೇಕಾದ ತಪ್ಪು (ಗ್ರೇನ್ಸ್‌ನಲ್ಲಿ).
ಒಂದು ಕಂಡಗ.	1,000 ಗ್ರೇನ್ಸು.
ಒಂದು ಕಂಡಗಕ್ಕೆ ಕಡಮೆಯಾಗಿ $2\frac{1}{2}$ ಶೇರುಗಳ ವರಿಗೆ	ಪ್ರತಿ 5 ಶೇರುಗಳಿಗೆ 5 ಗ್ರೇನ್ಸು
$2\frac{1}{2}$ ಶೇರುಗಳಿಗೆ ಕಡಮೆಯಾಗಿ $\frac{1}{4}$ ಶೇರಿನ ವರಿಗೆ ..	8 ಗ್ರೇನ್ಸು
$\frac{1}{4}$ ಶೇರಿಗೆ ಕಡಮೆಯಾಗಿ $\frac{1}{8}$ ಶೇರಿನ ವರಿಗೆ	4 ,,
$\frac{1}{8}$ ಶೇರಿಗೆ ಕಡಮೆಯಾಗಿ	2 ,,

8. ಅಳತೆ ಶೇರಿನ ಪ್ರಮಾಣದ ಯಾವ ಪರಿಮಾಣವನ್ನಾಗಲೀ ಉಂಟಾಗಿರುತ್ತೆಂದು ತೋರಿಸಲ್ಪಡದೆ ಇರುವ ಯಾವ ಪಾತ್ರೆಯಿಂದಲಾದರೂ ಒಂದು ಪದಾರ್ಥವನ್ನು ವಿಕ್ರಯಿಸೋಣವು ನಿಬಂಧನೆಗೆ ವಿರುದ್ಧವೆಂದು ; ಅಥವಾ

ಯಾವ ಪದಾರ್ಥದ ಪರಿಮಾಣವನ್ನಾದರೂ ತೂಕದಿಂದಾಗಲೀ ಅಥವಾ ಅಳತೆಯಿಂದಾಗಲೀ ಅಥವಾ ಸ್ವಲ್ಪ ಒಂದು ರೀತಿಯಿಂದಾಗಲೀ ಸ್ವಲ್ಪ ಮತ್ತೊಂದು ರೀತಿಯಿಂದಾಗಲೀ ನಿಶ್ಚಯಿಸುವ ಬಗ್ಗೆ ಒಪ್ಪಿಕೊಳ್ಳೋಣವನ್ನು ನಿಷೇಧಿಸುತ್ತೆಂದು,

ಈ ನೇಮಗಳಲ್ಲಿನ ಯಾವ ನಿಯಮವೂ ಎಣಿಸಲ್ಪಡಕೂಡದು.

9. ತೂಕಗಳು ಮತ್ತು ಅಳತೆಗಳು ಲೋಹದಲ್ಲಿ ಮಾಡಲ್ಪಟ್ಟಿರಬೇಕು ; ಆದರೆ ಒಂದು ಶೇರಿಗೆ ಕಡಿಮೆಯಾದ ಅಳತೆಗಳು, ಲೋಹದಲ್ಲಾಗಲೀ, ಮರದಲ್ಲಾಗಲೀ, ಅಥವಾ ಬಿದರಿನಲ್ಲಾಗಲೀ ಮಾಡಲ್ಪಡಬಹುದು.

10. ತೂಕಗಳ ಆಕಾರವು, ಎತ್ತುವ ಬಗ್ಗೆ ಹಿಡಿಗಳಾಗಲೀ ಹಳ್ಳಗಳಾಗಲೀ ಇರುವ ಸಂದರ್ಭ ವಿನಹ, ಸಾಧ್ಯವಿರುವ ಮಟ್ಟಿಗೆ ಮೇಲುಭಾಗದಲ್ಲಿಯೂ ಕೆಳಭಾಗದಲ್ಲಿಯೂ ಚಪ್ಪಟೆಯಾಗಿರತಕ್ಕದ್ದು ಮತ್ತು ನಿಲ್ಲುವ ಭಾಗಗಳು ದುಂಡಾಗಿಯಾಗಲೀ ಸಮಕೋಣವುಳ್ಳದ್ದಾಗಿಯಾಗಲೀ ಇರತಕ್ಕದ್ದು.

ಅಳತೆಗಳು, ಸಮವಾದ ತಳವುಳ್ಳದ್ದಾಗಿಯೂ ಒಳಗಿನ ಅಗಲ ಅಳತೆಯು ಆಳದ ಅರ್ಧ ಭಾಗಕ್ಕೆ ಸಮಾನವಾಗಿಯೂ ಇರುವ ಟೊಳ್ಳಾದ ಸ್ತಂಭಗಳಾಗಿ ಇರತಕ್ಕದ್ದು.

11. ಪ್ರತಿ ತೂಕದಲ್ಲಿಯೂ, ಅದರ ಚಿಕ್ಕ ಗಾತ್ರದಿಂದ ಅಸಾಧ್ಯವಾಗಿರುವ ಸಂದರ್ಭದಲ್ಲಿ ವಿನಹ, ಅದರ ತೂಕದ ಹೆಸರು ಮೇಲಾಗಲೀ ಪಕ್ಕದಲ್ಲಾಗಲೀ ಓದಬಹುದಾದ ಸಂಖ್ಯೆಗಳಲ್ಲಿಯೂ ಮತ್ತು ಅಕ್ಷರಗಳಲ್ಲಿಯೂ ಮುದ್ರಿಸಲ್ಪಟ್ಟಿರತಕ್ಕದ್ದು.

ಪ್ರತಿ ಅಳತೆಯಲ್ಲಿಯೂ, ಅದರ ಹೊರಗಿನ ಭಾಗದಲ್ಲಿ ಓದಬಹುದಾದ ಸಂಖ್ಯೆಗಳಲ್ಲಿಯೂ ಮತ್ತು ಅಕ್ಷರಗಳಲ್ಲಿಯೂ ಅದರ ಹೆಸರು ಮುದ್ರಿಸಲ್ಪಟ್ಟಿರತಕ್ಕದ್ದು.

ಈ ನೇಮಕ್ಕೆ ವಿರುದ್ಧವಾದ ಯಾವ ತೂಕಕ್ಕಾಗಲೀ, ಅಳತೆಗಾಗಲೀ ವೆರಿಫಿಕೇಷನ್ ಮೊಹರನ್ನು ಈ ನೇಮಗಳಂತೆ ಮುದ್ರಿಸೋಣ ನಿಷೇಧಿಸಲ್ಪಟ್ಟಿರುತ್ತೆ.

12. ಪ್ರತಿ ತೂಕವೂ, ಅದರ ಚಿಕ್ಕಗಾತ್ರದಿಂದ ಅಸಾಧ್ಯವಾಗಿರುವ ಸಂದರ್ಭದಲ್ಲಿ ವಿನಹ, ಮತ್ತು ಪ್ರತಿ ಅಳತೆಯು ಸರಿನೋಡಲ್ಪಡಬೇಕಲ್ಲದೆ, ಕೆಳಗೆ ಕೊಟ್ಟಿರುವ ಮಾದ್ರಿಯಲ್ಲಿ ಒಂದು ವೆರಿಫಿಕೇಷನ್ ಮುದ್ರೆಯಿಂದ ಮುದ್ರಿಸಲ್ಪಡಬೇಕು, ಮತ್ತು ಆ ಬಳಿಕ ಪ್ರತಿ ಐದು ವರುಷಗಳಲ್ಲಿ ಒಂದಾವರ್ತಿಗೆ ಕಮ್ಮಿಯಿಲ್ಲದಂತೆ ಸರಿನೋಡಲ್ಪಡುವ ಬಗ್ಗೆ ಹಾಜರ್ ಮಾಡಲ್ಪಡಬೇಕು.

ಮುದ್ರೆಯ ಆಕಾರ — ಮೈಸೂರು ಮಹಾರಾಜರ ಬಿರುದು ಮಧ್ಯೆ, ಅದನ್ನು ಸುತ್ತಿಕೊಂಡು ಇರುವ ಚಕ್ರದ ಹೊರಗೆ "ಮೈಸೂರು" ಎಂಬ ಪದವು ಮುದ್ರಿಸುವ ವರುಷವನ್ನು ತೋರಿಸುವ ಸಂಖ್ಯೆಗಳು ಸಹ, ಜೊತೆಯಲ್ಲಿರುವ ಮಾದ್ರಿಯಂತೆ ಇರತಕ್ಕದ್ದು.

13. (1) ಪ್ರತಿ ಡಿಸ್ಟ್ರಿಕ್ಟಿನಲ್ಲಿಯು ತೂಕಗಳ ಮತ್ತು ಅಳತೆಗಳ ಒಂದು ಇನ್ಸ್‌ಪೆಕ್ಟರು ಮತ್ತು ಅವಶ್ಯಕವಿರುವ ಇತರ ಶಿಬ್ಬಂದಿಯೂ ನೇಮಕ ಮಾಡಲ್ಪಡಬೇಕು. ಅವರುಗಳೆಲ್ಲರು ಡೆಪ್ಯುಟಿ ಕಮಿಷನರ ಅಧಿಕಾರಕ್ಕೆ ಒಳಪಟ್ಟಿರತಕ್ಕದ್ದು.

(2) ಇನ್ಸ್‌ಪೆಕ್ಟರು ಡಿಸ್ಟ್ರಿಕ್ಟಿನಲ್ಲಿ ಎಲ್ಲಾ ಸಂಚರಿಸತಕ್ಕದ್ದಲ್ಲದೆ, 14ನೇ ನೇಮದಂತೆ ಸರಿನೋಡುವ ಉದ್ದೇಶಕ್ಕಾಗಿಯೂ ಮತ್ತು ತೂಕಗಳಿಗೂ ಅಳತೆಗಳಿಗೂ ಮುದ್ರೆ ಹಾಕುವದಕ್ಕಾಗಿಯೂ ಅವರಿಗೆ ಕಳುಹಿಸಲ್ಪಟ್ಟ ಎಲ್ಲಾ ಅರ್ಜಿಗಳನ್ನು ವ್ಯವಸ್ಥೆ ಮಾಡತಕ್ಕದ್ದು.

(3) ಇನ್ಸ್‌ಪೆಕ್ಟರು ತಾವು ಇಡಬೇಕಾದ ಒಂದು ಪುಸ್ತಕದಲ್ಲಿ ಪ್ರತಿ ಸರಿನೋಡುವಿಕೆಯನ್ನು ಕುರಿತು ಟಿಪ್ಪಣಿಯನ್ನು ಬರಿಯತಕ್ಕದ್ದಲ್ಲದೆ, ತಾವು ಪ್ರತಿ ಒಂದಾವರ್ತಿ ಮುದ್ರೆ ಹಾಕಿದ್ದಕ್ಕೂ ಒಂದು ಸರ್ಟಿಫಿಕೇಟನ್ನು ತಮ್ಮ ದಸ್ಕತ್ತಿನೊಡನೆ, ಬೇಕಾಗಿದ್ದರೆ ಕೊಡತಕ್ಕದ್ದು.

(4) ತೂಕಗಳು ಅಳತೆಗಳು ಮತ್ತು ಉಪಯೋಗದಲ್ಲಿರತಕ್ಕ ತೂಕ ಮಾಡುವ ಉಪಕರಣಗಳು — ಇವುಗಳ ಮೇಲ್ವಿಚಾರಣೆಯೂ ಕೂಡ ಅವರ ಕರ್ತವ್ಯಗಳ ಅಂಶವಾಗಿರುತ್ತೆ ; ಮತ್ತು ಈ ಉದ್ದೇಶಕ್ಕೋಸ್ಕರ ಮತ್ತು ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡಿನ 153ನೆ ಪ್ರಕರಣದ ಉದ್ದೇಶಕ್ಕೋಸ್ಕರ, ಅವರ ಅಧಿಕಾರಕ್ಕೆ ಒಳಪಟ್ಟ ಎಲ್ಲಾ ಸ್ಥಳೀಕ ಪ್ರದೇಶದ ವಿಷಯದಲ್ಲಿ ಒಂದು ಪೋಲೀಸ್ ಸ್ಟೇಷನು ಅಧೀನದಲ್ಲಿ ಉಂಟಾಗಿರುವ ಒಬ್ಬ ಆಫೀಸರಾಗಿ ನೌಕರರ್ಮಾಡಲ್ಪಟ್ಟಿರುತ್ತಾರೆಂದು ಅವರು ಎಣಿಸಲ್ಪಡತಕ್ಕದ್ದು. ಆ ಪ್ರಕಾರವಾಗಿ, ತಮ್ಮ ಅಧಿಕಾರಕ್ಕೊಳಪಟ್ಟ ಯಾವ ಸ್ಥಳಗಳಲ್ಲಾದಲೀ ಸುಳ್ಳಾದ ಯಾವ ತೂಕಗಳಾದರೂ ಅಳತೆಗಳಾದರೂ ಅಥವಾ ತೂಕಗಳಾದರೂ ಅಳತೆಗಳಾದರೂ ಅಥವಾ ತೂಕಮಾಡುವ ಉಪಕರಣಗಳಾದರೂ ಇರುತ್ತವೆಂದು ನಂಬುವದಕ್ಕೆ ಅವರು ಕಾರಣ ಉಂಟಾಗಿರುವ ಸಂದರ್ಭದಲ್ಲಿ, ಅಲ್ಲಿ ಉಪಯೋಗಿಸಲ್ಪಡುವ ಅಥವಾ ಇಡಲ್ಪಟ್ಟ ಯಾವ ತೂಕಗಳನ್ನಾದರೂ ಅಳತೆಗಳನ್ನಾದರೂ ಅಥವಾ ತೂಕ ಮಾಡುವ ಉಪಕರಣಗಳನ್ನಾದರೂ ಪರಶೀಲನೆ ಮಾಡುವ ಉದ್ದೇಶಕ್ಕಾಗಲೀ ಅಥವಾ ಹುಡುಕುವ ಉದ್ದೇಶಕ್ಕಾಗಲೀ, ಅಂಥಾ ಸ್ಥಳವನ್ನು ಅವರು ಒಂದು ವಾರೆಂಟು ಇಲ್ಲದೇನೆ ಪ್ರವೇಶಿಸಬಹುದು. ಅಂಥಾ ಸ್ಥಳದಲ್ಲಿ ಸುಳ್ಳಾದ ಯಾವ ತೂಕಗಳನ್ನಾದರೂ ಅಳತೆಗಳನ್ನಾದರೂ ಅಥವಾ ತೂಕ ಮಾಡುವ ಉಪಕರಣಗಳನ್ನಾದರೂ ಅವರು ಕಂಡರೆ, ಅವುಗಳನ್ನು ಅವರು ಹಿಡಿಯಬಹುದಲ್ಲದೆ, ಹಾಗೆ ಹಿಡಿದಿರುವದನ್ನು ಕುರಿತು ವರ್ತಮಾನವನ್ನು ಅಧಿಕಾರವುಳ್ಳ ಒಬ್ಬ ಮ್ಯಾಜಿಸ್ಟ್ರೇಟರಿಗೆ ಕೂಡಲೇ ಕೊಡತಕ್ಕದ್ದು.

14. (1) ಸರಿನೋಡುವ ಬಗ್ಗೆಯೂ ಮತ್ತು ತೂಕಗಳಿಗೂ ಅಳತೆಗಳಿಗೂ ಮುದ್ರೆ ಹಾಕುವ ಬಗ್ಗೆಯೂ ಪ್ರತಿ ಅರ್ಜಿಯು ನ್ನು ಸ್ಥಳಿಕ ಅಮಲ್ದಾರ್ರಿಗಾಗಲೀ ಅಥವಾ ಡೆಪ್ಯುಟಿ ಅಮಲ್ದಾರ್ರಿಗಾಗಲೀ ಕಳುಹಿಸತಕ್ಕದ್ದು, ಮತ್ತು ಅದರೊಂದಿಗೆ, ವ್ಯವಸ್ಥಿಸಲ್ಪಡಬೇಕಾದ ಪ್ರತಿ ಒಂದು ತೂಕಕ್ಕಾಗಲೀ ಅಥವಾ ಅಳತೆಗಾಗಲೀ ಒಂದು ಆಣೆ ಫೀಜು ಸಹ ಕೊಡತಕ್ಕದ್ದು.

(2) ಆ ಫೀಜು ಕಜಾನಿಗೆ ಕಳುಹಿಸತಕ್ಕದ್ದು ಮತ್ತು 13ನೇ ನೇಮದಂತೆ ಮುದ್ರೆ ಹಾಕುವದಕ್ಕಾಗಿ ಇಡಲ್ಪಟ್ಟ ಪ್ರತ್ಯೇಕ ಶಿಬ್ಬಂದಿಯ ಕರ್ಚಿಗೆ ಜಮೆ ಕಟ್ಟತಕ್ಕದ್ದು.

(3) ಈ ನೇಮಗಳಿಗೆ ಸೇರಿಸಲ್ಪಟ್ಟ ಪಟ್ಟಿಯಲ್ಲಿ ನಮೂದಾಗಿರುವ ಉಪದೇಶಗಳಿಗೆ ಅನುಗುಣವಾಗಿ ವ್ಯವಸ್ಥೆ ಮಾಡುವ ಬಗ್ಗೆ ಆ ಅರ್ಜಿಯು ತೂಕಗಳ ಮತ್ತು ಅಳತೆಗಳ ಇನ್ಸ್ಪೆಕ್ಟರಿಗೆ ಕೊಡತಕ್ಕದ್ದು.

15. (1) ತೂಕಗಳನ್ನು ಅಳತೆಗಳನ್ನು ಲೋಪವಿಲ್ಲದೆ ಸರಿಮಾಡುವ ಬಗ್ಗೆ ಅವಶ್ಯಕವೆಂದು ತೋರಿಬರಬಹುದಾದ ಸ್ವಲ್ಪ ಕ್ರಮಪಡಿಸೋಣಕ್ಕೆಲ್ಲಾ ಬ್ಯಾರೆ ಕರ್ಚು ಹಾಕದೇನೇ, ತೂಕಗಳ ಮತ್ತು ಅಳತೆಗಳ ಇನ್ಸ್ಪೆಕ್ಟರು ಕ್ರಮಪಡಿಸುವ ಕೆಲಸವನ್ನು ನಡಿಸತಕ್ಕದ್ದು.

(2) ಈ ನೇಮಗಳಿಗೆ ವಿರುದ್ಧವಾಗಿರುವ ಕಾರಣದಿಂದ ಸರಿನೋಡುವದಕ್ಕಾಗಲಿ ತಿದ್ದುವದಕ್ಕಾಗಲಿ ಅರ್ಹವಾಗಿಲ್ಲವೆಂದು ಅವರಿಗೆ ತೋರಿಬರುವ ಯಾವ ತೂಕವನ್ನಾಗಲೀ ಅಳತೆಯನ್ನಾಗಲೀ, ಸರಿನೋಡುವ ಬಗ್ಗೆ ಅಥವಾ ತಿದ್ದುವ ಬಗ್ಗೆ ಅದು ತಮ್ಮಲ್ಲಿ ತರಲ್ಪಟ್ಟಾಗ್ಯೆ, ಕೆಡಿಸುವದಕ್ಕಾದರೂ, ಉಪಯೋಗವಾಗದಂತೆ ಮಾಡುವದಕ್ಕಾದರೂ, ಅಥವಾ ಸರಿನೋಡುವದಕ್ಕೂ ತಿದ್ದುವದಕ್ಕೂ ಯಾ ಮುದ್ರೆಹಾಕುವದಕ್ಕೂ ನಿರಾಕರಿಸುವದಕ್ಕಾದರೂ, ತೂಕಗಳ ಮತ್ತು ಅಳತೆಗಳ ಇನ್ಸ್ಪೆಕ್ಟರಿಗೆ ಅಧಿಕಾರ ಕೊಡಲ್ಪಟ್ಟಿರುತ್ತೆ.

ಷೆಡ್ಯೂಲ್.

I. ತೂಕಗಳ ಪರೀಕ್ಷೆ.

ತ್ರಾಸಿನ ಸೂಕ್ಷ್ಮತೆ.—ಪ್ರಮಾಣವಾದ ತೂಕಗಳಿಂದ ತೂಕಗಳನ್ನು ಸರಿನೋಡುವ ಬಗ್ಗೆ ಸಾಧಾರಣವಾದ ತ್ರಾಸುಗಳು ಮಾತ್ರವೆ ದೊರಕುವ ಸಂದರ್ಭದಲ್ಲಿ, ಮೊದಲು ಮಾಡಬೇಕಾದ್ದೇನಂದರೆ ಆ ತ್ರಾಸಿನ ಸೂಕ್ಷ್ಮತೆಯ ತರವನ್ನು ಪರೀಕ್ಷಿಸಬೇಕು ಅದರ ಸಮತೂಕದ ವಿಷಯ ಬೇರೆ ಇರಲಿ. 40 ಸೇರಿನ ಒಂದು ಮಣ ತೂಕವು ಸರಿನೋಡುವ ಬಗ್ಗಾಗಿ ಬಂದಿರುತ್ತೆಂದು ಒಂದು ಉದಾಹರಣೆ ಯೋಚಿಸಬಹುದು. ಬಲಕಡೆ ತಕ್ಕಡಿಯಲ್ಲಿ ಮಣ ತೂಕದ ಒಂದು ಪ್ರಮಾಣವನ್ನು ಹಾಕಿ ಅದಕ್ಕೆ ಸರಿಯಾಗಿ ಸಮತೂಕವಾಗುವ ಹಾಗೆ ಎಡಗಡೆ ತಕ್ಕಡಿಯಲ್ಲಿ ತೂಕಗಳನ್ನು ಹಾಕಬೇಕು. ಈ ಎರಡು ಪಾರ್ಶ್ವಗಳಲ್ಲಿ ಇಡಲ್ಪಟ್ಟ ತೂಕಗಳಿಗೆ 40 ಗ್ರೇನ್ಸ್ ತೂಕವನ್ನು ಸೇರಿಸಿದಾಗ ವ್ಯತ್ಯಾಸ ತೋರುವ ಪಕ್ಷದಲ್ಲಿ, ವ್ಯಾಪಾರದ ಒಂದು ಸಾಮಾನ್ಯವಾದ ಮಣ ತೂಕವನ್ನು ಸರಿನೋಡುವ ಬಗ್ಗೆ ಆ ತ್ರಾಸನ್ನು ಒಳ್ಳೆದಾಗಿರುತ್ತೆಂದು ಎಣಿಸಬಹುದು. ತ್ರಾಸಿನ ಒಂದು ಕೈಯಲ್ಲಿ ಇಡಲ್ಪಟ್ಟಿರುವ ತೂಕದ $\frac{1}{500}$ನೇ ಭಾಗದ ಭಾರಕ್ಕೆ ಅದರ ದಂಡಿಗೆ ಯಾ ಕಂಬಿ ತಿರುಗದೆ ಇದ್ದರೆ, ಆ ತ್ರಾಸು ಸರಿಯಾದ ಉದ್ದೇಶಗಳಿಗೆ ಉಪಯೋಗಿಸುವದಕ್ಕಾಗುವದಿಲ್ಲ.

ತೂಕಗಳ ಸರಿನೋಡುವಿಕೆ.—ಸರಿನೋಡುವ ಬಗ್ಗೆ ಹೊಂದಲ್ಪಟ್ಟ ಮಣ ತೂಕವನ್ನು ಹೀಗೆ ಪರೀಕ್ಷಿಸಬೇಕು :—

ತಕ್ಕಡಿಯ ಬಲಗೈನಲ್ಲಿ ಮಣ ತೂಕದ ಪ್ರಮಾಣವನ್ನು ಇಡಬೇಕು, ಅದಕ್ಕೆ ಎಡಗಡೆಯಲ್ಲಿ ಸಮತೂಕ ಇಡಬೇಕು. ಬಳಿಕ ಆ ಮಣ ತೂಕದ ಪ್ರಮಾಣವನ್ನು ತೆಗದು, ಅದಕ್ಕೆ ಬದಲಾಗಿ ಸರಿನೋಡಲ್ಪಡಬೇಕಾದ ತೂಕವನ್ನು ಇಡಬೇಕು. ದಂಡಿಗೆ ಸಮವಾಗಿದ್ದರೆ ತೂಕ ಸರಿಯಾದ್ದಾಗಿರುತ್ತೆ. ದಂಡಿಗೆಯ ಕೈಯಿಗಳು ಸಮವಾಗಿರುವದರಿಂದಾಗಲಿ, ಇಲ್ಲದೆ ಇರುವದರಿಂದಾಗಲೀ, ವಿಶೇಷವಿಲ್ಲ; ಅಂದರೆ, ತ್ರಾಸು ಸರಿಯಾಗಿರಲಿ ಇಲ್ಲದಿರಲಿ, ಇದೇನೂ ಯೋಚಿಸತಕ್ಕದ್ದಿಲ್ಲ.

ತ್ರಾಸಿನ ಸಮಭಾರ.—ತ್ರಾಸು ಸಮಭಾರವಾಗಿದೆಯೋ ಇಲ್ಲವೊ ಎಂಬುವದನ್ನು ತಿಳಿಯಬೇಕಾಗಿದ್ದರೆ, ಅದರ ಬಲಗೈಯಲ್ಲಿ ಮಣ ತೂಕದ ಪ್ರಮಾಣವನ್ನು ಹಾಕಿ, ಅದರ ಎಡಗೈಯಲ್ಲಿ ಸರಿಯಾಗಿ ಸಮನಾದ ಭಾರವನ್ನಿಡಬೇಕು: ಬಳಿಕ ಆ ಮಣ ತೂಕದ ಪ್ರಮಾಣವನ್ನು ತೆಗದು, ಅದರ ಬದಲಾಗಿ ಬಲಗೈಯಲ್ಲಿ ಇತರ ತೂಕಗಳನ್ನು ಹಾಕಿ ಸರಿಯಾದ ಸಮಭಾರವನ್ನುಂಟು ಮಾಡಬೇಕು, ಈಸಾರಿ ಬಲಗೈಯಲ್ಲಿ, ಎಡಗೈಯಲ್ಲಿ ಅಲ್ಲಾ. ಈಗ ವ್ಯಕ್ತವಾಗಿರುವದೇನಂದರೆ, ಬಲಗೈಯಲ್ಲಿ ಇಡಲ್ಪಟ್ಟ ಎರಡು ತೂಕಗಳು ಸಮಭಾರವಾಗಿರುತ್ತವೆ : ಎಡಗೈಯಲ್ಲಿರುವ ಭಾರವನ್ನು ತೆಗದು, ಅದರ ಬದಲಾಗಿ, ಬಲಗೈಯಿಂದ ತೆಗಿಯಲ್ಪಟ್ಟ ತೂಕವನ್ನು ಎಡಗೈಯಲ್ಲಿಡಬೇಕು. ಈಗ ದಂಡಿಗೆ ನಿಜವಾದ ಸಮಭಾರ ತೋರಿಸಿದರೆ, ತ್ರಾಸು ಸರಿಯಾದ್ದು; ಇಲ್ಲದ ಪಕ್ಷದಲ್ಲಿ, ತಕ್ಕ ಕಾರೇಗಾರನಿಂದ ತ್ರಾಸನ್ನು ಸರಿಮಾಡಿಸಬೇಕು. ದೊಡ್ಡದಾದ ಅಥವಾ ಚಿಕ್ಕದಾದ ಇತರ ಎಲ್ಲಾ ತ್ರಾಸುಗಳ ವಿಷಯದಲ್ಲಿಯೂ ಇದೇ ಮಾತು ಪ್ರಯೋಗವಾಗುತ್ತೆ.

II. ಧಾನ್ಯಗಳ ಮತ್ತು ದ್ರವದ ಅಳತೆಗಳು ಪರೀಕ್ಷಿಸುವದು.

ಧಾನ್ಯದ ಅಳತೆಗಳ ಅಡ್ಡಳತೆ.—ಮುದ್ರೆ ಹಚ್ಚುವ ಬಗ್ಗೆ ಒಂದು ಧಾನ್ಯದ ಅಳತೆ ಬಂದಾಗ್ಯೆ, ಮೊದಲು ಮಾಡಬೇಕಾದ್ದೇನಂದರೆ ಅದರ ಅಡ್ಡಗಲವನ್ನು ಚನ್ನಾಗಿ ಅಳತೆ ಮಾಡತಕ್ಕದ್ದು. ಅದರ ಅಡ್ಡಳತೆಯು ಅಳತೆಯ ಪ್ರಮಾಣದ ಅಡ್ಡಳತೆಗೆ ಸರಿ

ಯಾಗಿರುವದಾದರೆ, ಆ ಅಳತೆಯನ್ನು ಪರೀಕ್ಷಿಸುವದಕ್ಕೋಸ್ಕರ ಅಂಗೀಕರಿಸಬಹುದು. ಇಲ್ಲದಿದ್ದರೆ, ಅದನ್ನು ತೆಗದುಕೊಳ್ಳಕೂಡದು. (ನೋಟು.—ಒಂದು ಅಳತೆಯು ಸರಿಯಾಗಿ ದುಂಡಾಗಿಲ್ಲದೆ ಹೋದರೆ, ಅದರ ಅತ್ಯಂತ ದೊಡ್ಡದಾದ ಮತ್ತು ಅತ್ಯಂತ ಚಿಕ್ಕದಾದ ಅಡ್ಡಳತೆಗಳ ಮಧ್ಯ ಪದವನ್ನು ತೆಗದುಕೊಳ್ಳಬೇಕು.

ಪರೀಕ್ಷಿಸುವ ರೀತಿ ಹ್ಯಾಗೆ ಉಪಯೋಗಿಸುವದು.—ಮುದ್ರಿಸುವ ಬಗ್ಯೆ ತರಲ್ಪಟ್ಟ ಅಳತೆಗಳನ್ನು ಪರೀಕ್ಷಿಸುವದರಲ್ಲಿ ಉಪಯೋಗಿಸಬೇಕಾದ ಪರೀಕ್ಷೆ ಕ್ರಮವು, ನೀರಿನ ಪರಿಮಾಣದಿಂದ ಆಗತಕ್ಕದ್ದಾಗಿದೆ. ಈ ಕ್ರಮವನ್ನು ಸರಿಯಾಗಿ ಅನುಸರಿಸುವದಕ್ಕೋಸ್ಕರ ಮುದ್ರೆ ಹಾಕುವ ಉದ್ಯೋಗಸ್ಥರಿಗೆ ಪ್ರತ್ಯೇಕವಾಗಿ ಮಾಡಲ್ಪಟ್ಟ ಪ್ರಮಾಣವಾಗಿರುವ ಪರೀಕ್ಷೆ ಮಾಡುವದಕ್ಕೆ ಬೇಕಾದ ಪಾತ್ರೆಗಳು ಕೊಡಲ್ಪಟ್ಟ, ಅಥವಾ ಪರೀಕ್ಷೆ ಮಾಡುವದಕ್ಕೆ ಬೇಕಾದ ಎರಡು ಗ್ಲಾಸುಗಳು, ಒಂದು ಸೀಸೆಯ ಅಳತೆಗೆ ಸಮಾನವಾದ ಇಪ್ಪತ್ತು ಔನ್ಸಿನ ಒಂದು ಗ್ಲಾಸು ಮತ್ತು ಔನ್ಸಿನ ಕಾಲು ಭಾಗಗಳಿಗೆ ಅಂಶ ಮಾಡಲ್ಪಟ್ಟ ಒಂದು ಐದು ಔನ್ಸಿನ ಗ್ಲಾಸು — ಇವುಗಳು ಹೊಂದಿಸಲ್ಪಟ್ಟಿರುತ್ತವೆ. ಈ ಪರೀಕ್ಷೆಯು ಬಹಳ ಸಂಚಿಕೆಯಾದ್ದಲ್ಲದೆ ಸುಲಭವಾಗಿ ಪ್ರಯೋಗಿಸಬಹುದಾದ್ದಾಗಿದೆ.

ಪರೀಕ್ಷಿಸುವದಕ್ಕೆ ಮುಂಚೆ ಆಗಬೇಕಾದ ಸನ್ನಾಹ.—ಪರೀಕ್ಷಿಸುವ ಕಾರ್ಯವನ್ನಾರಂಭಿಸುವದಕ್ಕೆ ಮುಂಚೆ, ಈ ಕೆಳಗೆ ಬರುವ ಸನ್ನಾಹಗಳು ಆಗಬೇಕು. ದೊರಕಬಹುದಾದ ಸರ್ವೋತ್ಕೃಷ್ಟವಾದ ಕುಡಿಯುವ ನೀರನ್ನು ಒದಗಿಸಿಕೊಳ್ಳಬೇಕು, ಯಾತಕ್ಕೆಂದರೆ ಅಂಥಾ ನೀರು ಅತ್ಯಂತ ತಿಳಿಯಾದ್ದಾಗಿಯೂ ಇರುತ್ತೆ. ಪರೀಕ್ಷಿಸಬೇಕಾದ ಅಳತೆಯನ್ನು ಚನ್ನಾಗಿ ತೊಳಿಯಬೇಕು. ಅದು ಮರದಿಂದಾಗಿರುವ ಪಕ್ಷದಲ್ಲಿ, ಪರೀಕ್ಷಿಸುವದಕ್ಕೆ ಮುಂಚೆ ಒಂದು ಕಾಲು ಘಂಟೆ ವರಿಗೂ ನೀರನ್ನು ಅದರಲ್ಲಿ ಹಾಕಿಟ್ಟಿರಬೇಕು. ಹಾಗೆ ಮಾಡೋಣದರಿಂದ ಪರೀಕ್ಷಿಸುವಾಗ್ಯೆ ನೀರು ಹೀರಿಕೊಂಡು ತಪ್ಪು ನಿರ್ಣಯ ಉಂಟಾಗುವದಿಲ್ಲ. ಆ ಅಳತೆಯು ಸೋರಿದರೆ, ರಂಧ್ರಗಳಿಗೆ ರಾಳವನ್ನಾಗಲೀ ಮುದ್ರೆ ಅರಗನ್ನಾಗಲೀ ಹಚ್ಚಬೇಕು.

ಪರೀಕ್ಷಿಸುವ ಕ್ರಮ.—ಪರೀಕ್ಷೆಯನ್ನು ಕೆಳಗೆ ಬರುವ ವಿಧಾನದಲ್ಲಿ ನಡಿಸಬೇಕು.—

ಅಳತೆಯ ಕಂಠವನ್ನು ನೆನೆಸಬೇಕು, ಇಲ್ಲವಾದರೆ ಇಂಚಿನ ಹದಿನಾರು ಭಾಗಗಳಲ್ಲಿ ಒಂದುಭಾಗ, ನೀರು ಚಲ್ಲಿಹೋಗದೇನೆ ಆ ಕಂಠದಮೇಲೆ ನಿಲ್ಲಬಹುದು; ಮತ್ತು 5 ಇಂಚುಗಳ ಅಡ್ಡಳತೆಯುಳ್ಳ ಒಂದು ಅಳತೆಯಲ್ಲಿ ಇದು 1.39 ತೊಲಾಗಳಷ್ಟು ಅಕ್ಕಿಯನ್ನು ಸೂಚಿಸುತ್ತೆ. ಬಳಿಕ ಆ ಅಳತೆಯಲ್ಲಿ ನೀರನ್ನು ತುಂಬಬೇಕು. ಇದು ಹ್ಯಾಗೆಂದರೆ, ದೊಡ್ಡ 20 ಔನ್ಸು ಗ್ಲಾಸಿನಿಂದಾಗಲೀ ಅಥವಾ ಚಿಕ್ಕ 5 ಔನ್ಸು ಗ್ಲಾಸಿನಿಂದಾಗಲೀ ಪರೀಕ್ಷೆ ಮಾಡುವ ಇಂಥಾ ಗ್ಲಾಸಿನಿಂದ ಆ ಅಳತೆಗೆ ನೀರನ್ನು ಸುರಿಯಬೇಕು, ಪರೀಕ್ಷೆ ಮಾಡತಕ್ಕ ಅಳತೆಯ ಘಾತ್ರಕ್ಕೆ ಬೇಕಾದಂತೆ ಆ ಎರಡು ಗ್ಲಾಸುಗಳನ್ನಾಗಲೀ ಒಂದನ್ನಾಗಲೀ ಉಪಯೋಗಿಸಬಹುದು. ಪರೀಕ್ಷೆ ಗ್ಲಾಸಿನಿಂದ ಅಳತೆಯೊಳಗೆ ನೀರನ್ನು ಸುರಿಯುವದರಲ್ಲಿ, ಅಳತೆಯ ಕಂಠದಮೇಲೆ ನೀರು ಬರದಂತೆ ಎಚ್ಚರಿಕೆಯಿಂದಿರಬೇಕು. ನೀರಿನ ಮೇಲ್ಭಾಗ ಕಂಠಕ್ಕೆ ಮಟ್ಟವಾಗಿರಬೇಕು. ಪರೀಕ್ಷೆ ಗ್ಲಾಸುಗಳಿಂದ ಎಷ್ಟಾವರ್ತಿ ನೀರು ಸುರಿಯಲ್ಪಟ್ಟಿತೊ ಅದರಿಂದಲೂ, ಅವುಗಳಲ್ಲಿ ಉಳಿದಿರುವ ನೀರಿನ ಪರಿಮಾಣದಿಂದಲೂ, ಎಷ್ಟು ಔನ್ಸುಗಳ ನೀರು ಅಳತೆಯನ್ನು ತುಂಬುವ ಬಗ್ಯೆ ಉಪಯೋಗಿಸಲ್ಪಟ್ಟಿತೆಂಬುವದನ್ನು ನಿರ್ಣಯಿಸಬಹುದು. ಪರೀಕ್ಷೆ ಗ್ಲಾಸಿನಿಂದ ಸುರಿಯಲ್ಪಟ್ಟ ನೀರಿನ ಒಟ್ಟು ಪರಿಮಾಣದಿಂದ, ನೀರು ಚಲ್ಲಿದ ಪಕ್ಷದಲ್ಲಿ ಚಲ್ಲಿದ ನೀರಿನ ಪರಿಮಾಣವನ್ನು ಕಳಿಯಬೇಕು. ಸೋರುವ ಅಳತೆಯನ್ನು ಸೋರದಂತೆ ಮಾಡುವದು ಸಾಧ್ಯವಿಲ್ಲದ ಪಕ್ಷದಲ್ಲಿ, ಸೋರುವ ನೀರನ್ನು ಹಿಡಿದು ಆ ನೀರನ್ನು ಅಳತೆಮಾಡಿ, ಅದರ ಪರಿಮಾಣವನ್ನು ಅಳತೆಯೊಳಗೆ ಪರೀಕ್ಷೆ ಗ್ಲಾಸಿನಿಂದ ಸುರಿಯಲ್ಪಟ್ಟ ನೀರಿನ ಪರಿಮಾಣದಿಂದ ಕಳಿಯಬೇಕು. ಉಳಿದಿರುವ ನೀರು ಅಳತೆಯ ತಪ್ಪಿಲ್ಲದ ಪರಿಮಾಣವನ್ನು ನೀರಿನ ಔನ್ಸುಗಳ ಸಂಖ್ಯೆಯಲ್ಲಿ ಸೂಚಿಸುತ್ತೆ. ಇದು, ಶೇರು ಅಳತೆಯ ಪ್ರಮಾಣಕ್ಕೆ 41 ಔನ್ಸುಗಳಂತೆ ಲೆಖ್ಖ ಮಾಡಲ್ಪಟ್ಟ ಅಳತೆಯ ಸರಿಯಾದ ಪರಿಮಾಣಕ್ಕೆ ಸಮನಾಗಿದ್ದರೆ, ಅಳತೆಯು ಸರಿಯಾದ್ದಾಗಿ ಭಾವಿಸಬಹುದು, ಮತ್ತು ಅದನ್ನು ಆ ಪ್ರಕಾರವಾಗಿ ಮುದ್ರಿಸಬಹುದು; ಇಲ್ಲವಾದರೆ ಅದನ್ನು ವರ್ಜಿಸಬೇಕು. ಈ ಪರೀಕ್ಷೆಯನ್ನು ಮಾಡುವದರಲ್ಲಿ ಅಳತೆಗಳ ಸರಿಯಾದ ಮಾದ್ರಿಗಳನ್ನು ಎಂದಿಗೂ ಉಪಯೋಗಿಸಕೂಡದು, ಯಾತಕ್ಕೆಂದರೆ ಕಂಠದ ವರಿಗು ತುಂಬಲ್ಪಟ್ಟ ಅಂಥ ಅಳತೆಗಳಿಂದ ನೀರನ್ನು ಚಲ್ಲದಂತೆ ಬಿಡುವದು ಬಹುಮಟ್ಟಿಗೆ ಅಸಾಧ್ಯವಾಗಿರುತ್ತೆ. ಆದಾಗ್ಯೂ, ಪ್ರಮಾಣವಾದ ಪರಿಮಾಣಗಳುಳ್ಳ ಪಾತ್ರೆಗಳು, ಕಿರಿದಾದ ಕುತ್ತಿಗೆಯುಳ್ಳದ್ದಾಗಿಯೂ ನೀರನ್ನು ಬಿಡುವದಕ್ಕೆ ತುಟಿಯುಳ್ಳದ್ದಾಗಿಯೂ ಎಕ್ಸೈಜು ಡಿಪಾರ್ಟ್ಮೆಂಟಿನಲ್ಲಿ ಉಪಯೋಗಿಸುವ ಗ್ಯಾಲ್ಲನ್ ಪಾತ್ರದಂತೆ ಆಕಾರವುಳ್ಳದ್ದಾಗಿಯೂ ದ್ರವವನ್ನು ಬಿಡುವ ಔನ್ಸುಗಳಿಗೆ ಪ್ರಮಾಣವಾದ್ದಾಗಿಯೂ ಪ್ರತ್ಯೇಕವಾಗಿ ಮಾಡಲ್ಪಟ್ಟಿದ್ದರೆ, ಪರೀಕ್ಷಿಸುವ ಉದ್ದೇಶಕ್ಕೆ ಅಂಥಾ ಅಳತೆಗಳನ್ನು ಉಪಯೋಗಿಸಲು ಅಭ್ಯಂತರ ವಿರುವದಿಲ್ಲ. ಅಂಥಾ ಪ್ರತ್ಯೇಕವಾದ ಅಳತೆಗಳ ಪರಿಮಾಣವನ್ನು ಪ್ರಥಮತಾ ಪರೀಕ್ಷಿಸೋಣದರಲ್ಲಿ ಔನ್ಸು ಗ್ಲಾಸುಗಳು ಆಗ್ಯೆ ಉಪಯೋಗಕ್ಕೆ ಬೇಕಾಗುತ್ತವೆ.

III. ಮುದ್ರೆಹಾಕುವ ಕ್ರಮ.

ಮುದ್ರೆ ಹಾಕುವ ಬಗ್ಗೆ ಬೋಧನೆಗಳು.—ತೂಕಗಳಿಗೂ ಅಳತೆಗಳಿಗೂ ಮುದ್ರೆಹಾಕುವ ಕ್ರಮವನ್ನು ನಡಿಸುವ ಬಗ್ಗೆ ಈ ಕೆಳಗೆ ಬರುವಂಥಾವುಗಳು ಬೋಧನೆಗಳಾಗಿರುತ್ತವೆ:—

(1) ಲೋಹದಿಂದ ಮಾಡಲ್ಪಟ್ಟ ದೊಡ್ಡ ತೂಕಗಳಿಗೆ ಮೇಲ್ಭಾಗದಲ್ಲಿ ಹಿಡಿಯ ಎರಡು ಕಡೆಗಳಲ್ಲಿಯೂ ಮುದ್ರೆ ಹಾಕಬೇಕು; ಚಿಕ್ಕ ತೂಕಗಳಿಗೆ, ಹಿಡಿಗಳು ವಿನಹ, ಮಿಕ್ಕ ಯಾವ ಪ್ರದೇಶದಲ್ಲಿ ಆಗಲೀ ಮುದ್ರೆ ಸಮವಾಗಿ ಬೀಳುವ ಬಗ್ಗೆ ಸಾಕಾದಷ್ಟು ಮಟ್ಟವಾದ ಮೇಲ್ಭಾಗದಲ್ಲಿ ಮುದ್ರೆ ಹಾಕಬಹುದು. ಚಪ್ಪಟೆಯಾದ ತೂಕಗಳಿಗೆ ಮೇಲ್ಭಾಗದಲ್ಲಾಗಲೀ ಕೆಳಭಾಗದಲ್ಲಾಗಲೀ ಮುದ್ರೆ ಹಾಕಬೇಕು.

(2) ಕಬ್ಬಿಣದ ಅಥವಾ ಇತರ ಲೋಹದ ಅಳತೆಗಳಿಗೆ ಕಂಠದ ಕೆಳಗೆ ಮುದ್ರೆ ಹಾಕಬೇಕು, ಇದನ್ನು ಮಾಡುವದಕ್ಕಾಗಿ ಅಡಿಗಲ್ಲಿನ ಮೂತಿಯನ್ನಾಗಲೀ ಮೊನೆಯಾದ ಕಬ್ಬಿಣವನ್ನಾಗಲೀ ಪಾತ್ರದೊಳಗೆ ಇಡಬೇಕು ಮತ್ತು ಆ ಪಾತ್ರವನ್ನು ಅಡ್ಡವಾಗಿ ಹಿಡಿದುಕೊಳ್ಳಬೇಕು. ಮುದ್ರೆ ಹಾಕಬೇಕಾದ ಭಾಗವನ್ನು ಒಬ್ಬ ಮನುಷ್ಯನು ಬಿಗಿಯಾಗಿ ಮತ್ತು ಕಬ್ಬಿಣದ ಮೊನೆಯಮೇಲೆ ಘಟ್ಟಿಯಾಗಿ ಹಿಡಿದುಕೊಳ್ಳಬೇಕು, ಆಗ ಮತ್ತೊಬ್ಬ ಮನುಷ್ಯನು ಮೇಲ್ಭಾಗದಲ್ಲಿ ಮೊಹರನ್ನು ಹಚ್ಚಬೇಕು, ಮತ್ತು ಮೂರನೆ ಮನುಷ್ಯನು ಬೇಕಾದ ಮುದ್ರೆಯು ಉಂಟಾಗುವ ಪರ್ಯಂತರ ಒಂದು ಚಮ್ಮಟಿಗೆಯಿಂದಾಗಲೀ ಅಥವಾ ಒಂದು ಕೈಸುತ್ತಿಗೆಯಿಂದಾಗಲೀ ಏಕಪ್ರಕಾರವಾಗಿ ಹೊಡಿಯುತ್ತಲಿರಬೇಕು.

(3) ಮುದ್ರೆಗಿಂತ ಸ್ವಲ್ಪ ದೊಡ್ಡದಾದ ಚಪ್ಪಟೆಯಾಗಿರುವ ತಲೆಯುಳ್ಳ ಒಂದು ಕಬ್ಬಿಣದ ಗೂಟದ ಮೇಲೆ ತಲೆಕೆಳಗಾಗಿ ಇಟ್ಟು ಅಳತೆಗಳಿಗೆ ತಳಭಾಗದಲ್ಲಿ ಮುದ್ರೆಯನ್ನು ಹಾಕಲೂ ಬಹುದು.

(4) ಹಿತ್ತಾಳೆಮೇಲಾಗಲೀ ಕಬ್ಬಿಣದಮೇಲಾಗಲೀ ದೊಡ್ಡ ಮುದ್ರೆಯನ್ನು ಹಚ್ಚುವದರಲ್ಲಿ ಚಮ್ಮಟಿಗೆಯನ್ನು ಉಪಯೋಗಿಸಬೇಕು ; ಚಿಕ್ಕ ಮುದ್ರೆಗೋಸ್ಕರ ಭಾರವಾದ ಕೈಸುತ್ತಿಗೆ ಸಾಕಾಗಿದೆ.

(5) ಈ ಕೆಲಸವು, ಒಬ್ಬ ಲೋಹ ಕೆಲಸದವನಿಂದಲೂ, ಸುತ್ತಿಗೆ ಮನುಷ್ಯನಿಂದಲೂ ಮತ್ತು ತಿದಿ ಒತ್ತುವನಿಂದಲೂ, ಬಹಳ ಚನ್ನಾಗಿ ಮಾಡಲ್ಪಡುತ್ತೆ.

(6) ಅಂಗಡಿಯವರ ಮತ್ತು ವರ್ತಕರ ಉಪಯೋಗದಲ್ಲಿರುವ ಅಡ್ನಾತಿಡ್ಡಿಯಾದ ತೂಕಗಳಿಗೂ ಅಳತೆಗಳಿಗೂ ಒಂದೇ ವಿಧವಾದ ಕ್ರಮ ಹೇಳಲಿಕ್ಕಾಗುವದಿಲ್ಲ. ಆದರೆ ಬಹುಮಟ್ಟಿಗೂ, ಯಾವ ಭಾಗದಲ್ಲಿ ಮುದ್ರೆಯನ್ನು ಸಮನಾಗಿ ಹಚ್ಚಬಹುದೊ ಅಲ್ಲಿ ಮುದ್ರೆಯನ್ನು ಹಾಕಬಹುದು.

(7) ಒಂದು ಅಳತೆಯ ಕಡೆಯಲ್ಲಿ ಜೋಡಿಗೆ ಒಂದು ಇದ್ದರೆ ಅದಕ್ಕೆ ಅಡ್ಡವಾಗಿ ಒಂದು ಮುದ್ರೆಯನ್ನು ಹಾಕಬೇಕು.

(8) ಮರದಲ್ಲಿ ಅಥವಾ ಬಿದರಿನಲ್ಲಿ ಮಾಡಲ್ಪಟ್ಟ ಅಳತೆಗಳಿಗೆ, 12ನೇ ನೇಮದಲ್ಲಿ ವಿಶೇಷಿಸಲ್ಪಟ್ಟ ಮುದ್ರೆಯನ್ನು ಒಂದು ಉಕ್ಕಿನ ಮುದ್ರೆಯಿಂದ ಅಳತೆಯ ತಲೆಮೇಲೆ ಅದು ಕತ್ತರಿಸಲ್ಪಡದಂತೆ ಹಾಕಬೇಕು.

IV. ಮೇಲ್ವಿಚಾರಣೆ ಮತ್ತು ರಿಪೋರ್ಟು ಮಾಡೋಣ.

ಮೇಲ್ವಿಚಾರಣೆ.— ಪರೀಕ್ಷಿಸುವ ಮತ್ತು ಮುದ್ರೆ ಹಾಕುವ ಕಾರ್ಯವು ಏಕಪ್ರಕಾರವಾಗಿ ಸರಿಯಾದ ಸರಾರದ ಮೇಲ್ವಿಚಾರಣೆಯಲ್ಲಿ ನಡಿಯತಕ್ಕದ್ದು. ಡೆಪ್ಯುಟಿ ಕಮ್ಮಿಷನರುಗಳು ಮತ್ತು ಅಸಿಸ್ಟೆಂಟ್ ಕಮ್ಮಿಷನರುಗಳು ಮುದ್ರೆ ಹಾಕುವ ಪ್ರತಿ ಶಿಬ್ಬಂದಿಯನ್ನು ಸಾಧ್ಯವಾದಾಗ್ಗೆಲ್ಲಾ ನೋಡಬೇಕಲ್ಲದೆ, ಆ ಮನುಷ್ಯರು ತಮ್ಮ ಕೆಲಸವನ್ನು ತಿಳಿದುಕೊಂಡು ಇದ್ದಾರೊ ಇಲ್ಲವೊ ಎಂಬುವದನ್ನು ಮತ್ತು ಅವರು ವರ್ತಕರಿಂದ ಅಪ್ಪಣೆಯಿಲ್ಲದೆ ಫೀಜುಗಳನ್ನು ವಸೂಲ್ಮಾಡುತ್ತಾರೊ ಇಲ್ಲವೊ ಎಂಬುವದನ್ನು ವಿಚಾರಿಸಬೇಕು.

ವರುಷಗಟ್ಲೆ ರಿಪೋರ್ಟು.— ಪ್ರತಿ ವರುಷದ ನವೆಂಬರು ಮೊದಲನೆ ತಾರೀಖಿನಲ್ಲಿ ಆಗಲೀ ಅದಕ್ಕೆ ಮುಂಚೆಯಾಗಲೀ ಡೆಪ್ಯುಟಿ ಕಮ್ಮಿಷನರುಗಳು ಗವರ್ನಮೆಂಟಿನವರಿಂದ ವಿಧಿಸಲ್ಪಟ್ಟ ಮಾದ್ರಿಯಲ್ಲಿ ಮುದ್ರೆ ಹಾಕುವ ಕೆಲಸಗಳ ಪಟ್ಟಿಯನ್ನು ಒಪ್ಪಿಸತಕ್ಕದ್ದು.

ಕೆ. ಎಸ್. ಚಂದ್ರಶೇಖರ ಐಯ್ಯರ್.

729
234

ಮೈಸೂರ ಗೆಜೆಟ್.

ಸಂ. 39. ಸರ್ಕಾರದಿಂದ ಛಾಯಿಪ್ ಆದ್ದು. [ನಂ. 18.

ಬೆಂಗಳೂರು, ಗುರುವಾರ, ಮೇ ತಾ|| 5, ಸನ್ 1904.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿ ಷ ಯ ಸೂ ಚಿ ಕೆ .

1ನೆ ಭಾಗ–ಮೈಸೂರು ಸೀಮೆಯ ಶ್ರೀಮರ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ ಆಫಿಸರಗಳು, ಫಾರೆಸ್ಟು, ರಜಿಸ್ಟ್ರೇಷನ್ ವ ಯಜ್ಯುಕೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸಗಳು.

3ನೆ ಭಾಗ–ಲೆಜಿಸಲೇಟಿವ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ–ಸರ್ಕಾರೀ ಕಾಗದಪತ್ರಗಳು – ಇಲ್ಲಾ.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮರ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜ ನ ರ ಲ್ ಮ ತ್ತು ರೆ ವಿ ನ್ಯೂ .

ತಾರೀಖು 20ನೆ ಏಪ್ರಿಲ್ 1904.

ನಂ ಲೋ. ಬೋ. ಪಿ. 1337, ಅದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮರ್ಕೂಂ 9383—ಮಿ. ಫೈ. 21–96ನೆ ಮತ್ತು 9384—ಮಿ. ಫೈ. 21–96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಕೋಲಾರ ವ ಮೈಸೂರು ಡಿಸ್ಟ್ರಿಕ್ಟುಗಳಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು.

ಕೋಲಾರ ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.
1. ತುಮಕುಂಟೆಹಳ್ಳಿ ...	ಚಿಕ್ಕಬಳ್ಳಾಪುರ.

ಮೈಸೂರು ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಅತ್ತಿಗೋಡು ..	ಹುಣಸೂರು	4. ಹಿರಿಕಾಟಿ ...	ಗುಂಡ್ಲು ಪೇಟೆ
2. ಅರನಲ್ಲಿ ..	ಡಿಟೋ	5. ಪಡಗೂರು ..	ಡಿಟೋ
3. ದ್ಯಾವೇಗೌಡನದೊಡ್ಡಿ ..	ಮಳವಳ್ಳಿ	6. ಯಣಗುಂಬ ...	ಚಾಮರಾಜನಗರ

ತಾರೀಖು 20ನೆ ಏಪ್ರಿಲ್ 1904.

ನಂ. ಲೋ. ಬೋ. ಪಿ. 1335, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಆಗಾಗ್ಯೆ ರೋಗ ತಗಲಿದ ಪ್ರದೇಶಗಳಾಗಿ ಪ್ರಸಿದ್ಧಪಡಿಸಲ್ಪಟ್ಟ ಇದರಡಿ ಕಂಡ ಸ್ಥಳಗಳು ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ:—

ಹಾಸನ ಡಿಸ್ಟ್ರಿಕ್ಟ್.

	ಸ್ಥಳ.	ತಾಲ್ಲೂಕು.
1.	ಶಾಮಪುರ	ಹಾಸನ.
2.	ಯಮ್ಮೆದೇವರಹಳ್ಳಿ	ಡಿಟೋ
3.	ಹೊಸೂರು	ಡಿಟೋ
4.	ತ್ಯಗಟೂರು	ಡಿಟೋ
5.	ಕಾಟಿಹಳ್ಳಿ	ಡಿಟೋ
6.	ಕ್ಯಾತನಹಳ್ಳಿ	ಡಿಟೋ
7.	ಬಿದರಕೆರೆ	ಡಿಟೋ
8.	ನ್ಯಾಗಣೆ	ಡಿಟೋ
9.	ಕಾಳತಮ್ಮನಹಳ್ಳಿ	ಡಿಟೋ
10.	ಗೂಳೇನಹಳ್ಳಿ	ಡಿಟೋ
11.	ದ್ಯಾವಲಾಪುರ	ಡಿಟೋ
12.	ಗುಡ್ಡನಹಳ್ಳಿ	ಡಿಟೋ
13.	ಚನ್ನಪಟ್ಣ	ಡಿಟೋ
14.	ಚಿಕ್ಕ ಬ್ಯಾಡಗೆರೆ	ಬೇಲೂರು.
15.	ಅಂದಲೆ	ಡಿಟೋ
16.	ಬೇಲೂರು	ಡಿಟೋ
17.	ಮಾದಾಪುರ	ಡಿಟೋ
18.	ಭಂಡಿ ಲಕ್ಕರ್ ಕೊಪ್ಪಲ್	ಡಿಟೋ
19.	ತಗರೆ	ಡಿಟೋ
20.	ಹಡವಳಲು	ಡಿಟೋ
21.	ದೊಡ್ಡಮೇದೂರು	ಡಿಟೋ
22.	ಗೋತ್ರವಳ್ಳಿ	ಡಿಟೋ
23.	ಶಂಕರದೇವರಪೇಟೆ	ಡಿಟೋ
24.	ಚಲುವನಹಳ್ಳಿ	ಅರಸೀಕೆರೆ.
25.	ಗರುಡಗೆರೆ	ಡಿಟೋ
26.	ಹೆಬ್ಬ್ಯಾರನಹಳ್ಳಿ	ಡಿಟೋ
27.	ಬನ್ನಸಮುದ್ರ	ಡಿಟೋ
28.	ತಳಲೂರು	ಡಿಟೋ
29.	ಕರಗುಂದ	ಅರಸೀಕೆರೆ
30.	ಕಾಲೇಗೆರೆ	ಡಿಟೋ
31.	ಬಸವನಹಳ್ಳಿ	ಡಿಟೋ
32.	ಒಡ್ಡರಹಟ್ಟಿ	ಡಿಟೋ
33.	ಗೊಲ್ಲರಹಟ್ಟಿ	ಡಿಟೋ
34.	ರಂಗಾಪುರ	ಡಿಟೋ
35.	ಬಾಗೂರು	ಚನ್ನರಾಯಪಟ್ಣ
36.	ಮೂಡ್ನಹಳ್ಳಿ	ಡಿಟೋ
37.	ಆದಿಹಳ್ಳಿ	ಡಿಟೋ
38.	ಓಬಳಾಪುರ	ಡಿಟೋ
39.	ಚಾವೆನಹಳ್ಳಿ	ಡಿಟೋ
40.	ಹೊನ್ನೇನಹಳ್ಳಿ	ಡಿಟೋ
41.	ಕುಂಬಾರಹಳ್ಳಿ	ಡಿಟೋ
42.	ಚೋಕೇನಹಳ್ಳಿ	ಡಿಟೋ
43.	ಬಡ್ಡಿಕೆರೆ	ಡಿಟೋ
44.	ಚಾವಲಗೆರೆ	ಡಿಟೋ
45.	ಸಾಸಲಪುರ	ಡಿಟೋ
46.	ವಾರನಹಳ್ಳಿ	ಡಿಟೋ
47.	ಮಾಯನವಲೆ	ಡಿಟೋ
48.	ನವಲೆ	ಡಿಟೋ
49.	ಹಳ್ಳಿಮೈಸೂರು	ಹೊಳೇನರಸೀಪುರ
50.	ಹೊಳೇನರಸೀಪುರ ಟವರ್	ಡಿಟೋ
51.	ಗೋಹಳ್ಳಿ	ಡಿಟೋ
52.	ಕಲ್ಲಹಳ್ಳಿ	ಡಿಟೋ
53.	ಹಂಗರಹಳ್ಳಿ	ಡಿಟೋ
54.	ಬಸದಹಳ್ಳಿ	ಅರಕಲಗೂಡು
55.	ಕುಂದೂರು	ಆಲೂರು ಸಬ್ ತಾಲ್ಲೂಕು.

ತಾರೀಖು 22ನೆ ಏಪ್ರಿಲ್ 1904.

ನಂ. ಲೋ. ಬೋ. ಪಿ. 1351, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಆಗಾಗ್ಯೆ ರೋಗ ತಗಲಿದ ಪ್ರದೇಶಗಳಾಗಿ ಪ್ರಸಿದ್ಧಪಡಿಸಲ್ಪಟ್ಟ ಇದರಡಿ ಕಂಡ ಸ್ಥಳಗಳು ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ:—

ಶಿವಮೊಗ್ಗ ಡಿಸ್ಟ್ರಿಕ್ಟ್.

	ಸ್ಥಳ.	ತಾಲ್ಲೂಕು.
1.	ಹೊಸಮನೆ	ಶಿವಮೊಗ್ಗ
2.	ಸೀಗೆಬಾಗಿ	ಡಿಟೋ
3.	ಮಿಲ್ಲಘಟ್ಟ	ಡಿಟೋ
4.	ಕೋಟೆ ಗಂಗೂರು	ಡಿಟೋ
5.	ಅನವೇರಿ	ಡಿಟೋ
6.	ಆನೆಹಳ್ಳಿ	ಡಿಟೋ
7.	ಮಾದರಿಪಾಳ್ಯ	ಡಿಟೋ
8.	ಹುತ	ಡಿಟೋ
9.	ಗೌಡರಹಳ್ಳಿ	ಡಿಟೋ
10.	ಆರಕೆರೆ	ಡಿಟೋ
11.	ಕನ್ನಕಟ್ಟೆ	ಡಿಟೋ
12.	ಕೋಹಳ್ಳಿ	ಕುಂಸಿ ಸಬ್ ತಾ
13.	ಇಟ್ಟಿಗೆಹಳ್ಳಿ	ಡಿಟೋ
14.	ಯಲವಳ್ಳಿ	ಡಿಟೋ
15.	ದೇವಸ್ಥಾನ ಹಕ್ಕಲು	ಸೊರಬ
16.	ಆನವಟ್ಟಿ	ಡಿಟೋ
17.	ಚಿಕ್ಕೈದಗೋಡು	ಡಿಟೋ
18.	ಕಲ್ಲುಕೊಪ್ಪ	ಡಿಟೋ
19.	ತಡಸನಹಳ್ಳಿ	ಷಿಕಾರಿಪುರ.
20.	ಹೊಟ್ಯಾಪುರ	ಹೊನ್ನಾಳಿ.
21.	ಬೀರಗೊಂಡನಹಳ್ಳಿ	ಹೊನ್ನಾಳಿ.
22.	ಕುಂದೂರು	ಡಿಟೋ
23.	ಯಕ್ಕನಹಳ್ಳಿ	ಡಿಟೋ
24.	ಹೊಳೆ ಅರಳೇಹಳ್ಳಿ	ಡಿಟೋ
25.	ನಲ್ಲೂರು	ಚನ್ನಗಿರಿ.
26.	ಗರಗ	ಡಿಟೋ
27.	ಗೊಳಿಹಳ್ಳಿ	ಡಿಟೋ
28.	ಬೂಸೇನಹಳ್ಳಿ	ಡಿಟೋ
29.	ಬಸವಾಪಟ್ಣ	ಡಿಟೋ
30.	ಹಿರೆಕೋಗಲೂರು	ಡಿಟೋ
31.	ಸಂತೆಬೆನ್ನೂರು	ಡಿಟೋ
32.	ಕಾಮಸಾಗರ	ಡಿಟೋ
33.	ನಾಗೇನಹಳ್ಳಿ	ಡಿಟೋ
34.	ಯರಹಳ್ಳಿ	ಡಿಟೋ
35.	ತಿಮ್ಮಾಪುರ	ಡಿಟೋ
36.	ಗಾಣದಕಟ್ಟೆ	ಡಿಟೋ
37.	ದೊಣೆಹಳ್ಳಿ	ಡಿಟೋ
38.	ಹರೋನಹಳ್ಳಿ	ಡಿಟೋ
39.	ತ್ಯಾವಣಿಗೆ	ಡಿಟೋ

731

ತಾರೀಖು 20ನೆ ಏಪ್ರೆಲ್ 1904.

ನಂ. ಲೋ. ಬೋ. ಪಿ. 1339, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳಲ್ಲಿ ನಡೆಯುವ ಕೆಳಗೆ ನಮೂದು ಮಾಡಲ್ಪಟ್ಟ ಜಾತ್ರೆಗಳ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಗಳಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ತಾರೀಖು.	
			ಯಾವ ಲಗಾಯ್ತು.	ಯಾವ ವರಿವಿಗೆ.
ರಬ್ಬಿ ಅವಾಲ್ ಪಾಷಾ …	ಗಂಜಾಂ …	ಶ್ರೀರಂಗಪಟ್ಟಣ …	20—5—04	30—5—04
ಶ್ರೀಲಕ್ಷ್ಮೀನರಸಿಂಹಸ್ವಾಮಿಯ ರಥೋತ್ಸವ ..	ಮಾರೇಹಳ್ಳಿ …	ಮಳವಳ್ಳಿ …	25—5—04	5—6—04

ಸನ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ 11ನೆ ನಂಬರು ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಪ್ರತಿ ಒಂದರ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಮೇಲ್ಕಂಡ ಜಾತ್ರೆಗಳಿಗೆ ಜನಗಳು ಸೇರುವದನ್ನು ಅಡ್ಡಿಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರಿ ಜಾತ್ರೆಗಳಿಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 22ನೆ ಏಪ್ರೆಲ್ 1904.

ನಂ. ಲೋ. ಬೋ. ಪಿ. 1349, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಆಗಾಗ್ಯೆ ರೋಗ ತಗಲಿದ ಪ್ರದೇಶಗಳಾಗಿ ಪ್ರಸಿದ್ಧಪಡಿಸಲ್ಪಟ್ಟ ಇದರಡೀ ಕಂಡ ಸ್ಥಳಗಳು ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ :—

ಚಿತ್ರದುರ್ಗ ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಗುಡ್ಡರಂಗವ್ವನಹಳ್ಳಿ ..	ಚಿತ್ರದುರ್ಗ.	11. ಕಕ್ಕರಗೊಳ ..	ದಾವಣಗೆರೆ.
2. ಕೋಗುಂಡೆ ..	ಡಿಟೋ	12. ಕಲ್ಪನಹಳ್ಳಿ ….	ಡಿಟೋ
3. ಹರಳಾಪುರ …	ಹರಿಹರ ಸಬ್ ತಾ॥	13. ಹುಣಸೆಕಟ್ಟೆ ..	ಡಿಟೋ
4. ಗುಟ್ಟೂರು ..	ಡಿಟೋ	14. ಚಿಕ್ಕೇರಹಳ್ಳಿ …	ಮೊಳಕಾಲಮೂರು.
5. ಅಮರಾವತಿ ..	ಡಿಟೋ	15. ಮೊಳಕಾಲಮೂರು …	ಡಿಟೋ
6. ಬಿಲ್ಲನೂರು …	ಡಿಟೋ	16. ಬೊಂಗೊಂಡನಕೆರೆ ..	ಡಿಟೋ
7. ಕಮಲಾಪುರ …	ಡಿಟೋ	17. ಹೊಳಲಕೆರೆ ..	ಹೊಳಲಕೆರೆ.
8. ಸಾಬನೂರು …	ದಾವಣಗೆರೆ.	18. ತಲ್ಯ ..	ಡಿಟೋ
9. ಅವರಗೊಳ …	ಡಿಟೋ	19. ಹೊಸದುರ್ಗ ಟವ್ನ …	ಹೊಸದುರ್ಗ.
10. ಬೇತೂರು …	ಡಿಟೋ	20. ಬಾಗೂರು ..	ಡಿಟೋ

ತಾರೀಖು 30ನೆ ಏಪ್ರೆಲ್ 1904.

ನಂ. ಲೋ. ಬೋ. ಪಿ. 1388, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರುವರಿ 10ನೆ ಮುಕ್ಕಾಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.
1. ಅಂಬಾಳೆ	ಚಿಕ್ಕಮಗಳೂರು.
2. ತೇಗೂರು …	ಡಿಟೋ

ತಾರೀಖು 30ನೆ ಏಪ್ರೆಲ್ 1904.

ನಂ. ಲೋ. ಬೋ. ಪಿ. 1390, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರುವರಿ 10ನೆ ಮುಕ್ಕಾಂ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಹಾಸನದ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಆಲೂರು …	ಆಲೂರು ಸಬ್ ತಾ॥	5. ಸಂತೆ ಕೊಪಲ್ …	ಹಾಸನ
2. ಅಗುಂದ …	ಅರಸೀಕೆರೆ	6. ಮಡಬ …	ಚನ್ನರಾಯಪಟ್ಟ
3. ಕಾಸಿಕ …	ಹಾಸನ	7. ಜೋಡಿ ಮಾಲೇನಹಳ್ಳಿ …	ಬೇಲೂರು
4. ಅಮ್ಮನಹಳ್ಳಿ ಕೊಪ್ಪಲ್ …	ಡಿಟೋ		

ತಾರೀಖು 30ನೆ ಏಪ್ರಿಲ್ 1904.

ನಂ. ಲೋ. ಬೋ. ಪಿ. 1396, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನೆಂದರೆ, ಇದರಡೀ ಕಂಡ ಜಾತ್ರೆಗೆ ಯಾತ್ರಾರ್ಥವಾಗಿ ಹೋಗುವದನ್ನು ಮದರಾಸು ಗವರ್ನ್ಮೆಂಟನವರು ಅಡ್ಡೀ ಪಡಿಸುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಧಾರಿಟಿ.
				ಯಾವ ಲಾಗಾಯತು.	ಯಾವ ವರಿವಿಗೆ.	
ಕಾಳಿಯಪ್ಪನ ಜಾತ್ರೆ.	ಸಾರ್ತಟ್ಟಿ	ಧರ್ಮಾಪುರಿ	ಸೇಲಂ	26—4—04	11—5—04	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎಂಡಾರ್ಸ್ಮೆಂಟ್ ನಂ. 622-ಪಿ., ತಾ|| 29-4-04

ತಾರೀಖು 2ನೆ ಮೇ 1904.

ನಂ. 4163—ಲೋ. ಫಂ. 78-03, ಸ್ 1904ನೆ ಮಾರ್ಚಿ 4ನೆ ಮುಸ್ತಂ 3347—ಲೋ. ಫಂ. 78-03ನೆ ನಂಬರ ಇಸ್ತಿಹಾರ್ನಾಮೆಯನ್ನನುಸರಿಸಿ 1904ನೆ ಮಾರ್ಚಿ 10ನೆ, 17ನೆ ಮತ್ತು 24ನೆ ತಾರೀಖು ಮೈಸೂರು ಗೆಜೆಟ್ಟಿನ Iನೆ ಭಾಗದ 189 ವ 190, 198 ವ 199 ಮತ್ತು 211ನೆ ಪುಟಗಳಲ್ಲಿ ಛಾಯಿಷಾದ ಮಧುಗಿರಿ ವ ಕೊರಟಗೆರೆ ತಾಲ್ಲೂಕು ಬೋರ್ಡುಗಳ ಮೆಂಬರುಗಳ ಪಟ್ಟಿಯಲ್ಲಿ—

ತಾಲ್ಲೂಕು.	ಜಂಜರ್ ನಂ.	ಹೆಸರು.
ಮಧುಗಿರಿ ...	12	ಮೆ|| ಜಿ. ಶಿವರಂಗಯ್ಯನವರು
ಕೊರಟಗೆರೆ ...	6	ಮೆ|| ಶಾಂಪೂರ್ ಸಂಜೀವಪ್ಪನವರು
ಡಿಟೋ ...	8	ಮೆ|| ತೋರ್ವಿಕೆರೆ ನೇಮುರಾಯಶೆಟ್ಟರು

ಎಂಬದಕ್ಕೆ ಬದಲಾಗಿ,

ತಾಲ್ಲೂಕು.	ಜಂಜರ್ ನಂ.	ಹೆಸರು.
ಮಧುಗಿರಿ ..	12	ಮೆ|| ಜಿ. ಶಿವರಾಮಯ್ಯನವರು
ಕೊರಟಗೆರೆ ...	6	ಮೆ|| ಸೋಂಪೂರು ಸಂಜೀವಪ್ಪನವರು
ಡಿಟೋ ..	8	ಮೆ|| ತೋರ್ವಿಕೆರೆ ನೇಮುರಾಜಿ ಶೆಟ್ಟರು

ಎಂಬದಾಗಿ ಓದಿಕೊಳ್ಳ ತಕ್ಕದ್ದು.

ತಾರೀಖು 4ನೆ ಮೇ 1904.

ನಂ. 2317—ಜು., ಪೋಲೀಸು ಇಲಾಖೆಯ ಆಫೀಸರುಗಳ ಇದರಡೀ ಕಂಡ ಬಡ್ತಿಗಳು 1904ನೆ ಫೆಬ್ರುವರಿ 21ನೆ ತಾರೀಖಿ ನಾರಭ್ಯ ಮಂಜೂರ್ಮಾಡಲ್ಪಟ್ಟಿರುತ್ತವೆ:—

1. ಮೃತಪಟ್ಟ ಮೆ|| ಜೆ. ಕೃಷ್ಣರಾಯರಿಗೆ ಬದಲಾಗಿ ಪೋಲೀಸು ಸೂಪರಿಂಟೆಂಡೆಂಟರಾದ ಮೆ|| ಎಲ್. ಕೃಷ್ಣರಾಯರು ಎರಡನೇ ಕ್ಲಾಸಿನಿಂದ ಮೊದಲನೇ ಕ್ಲಾಸಿಗೆ.

2. ಮೊದಲನೇ ಕ್ಲಾಸಿನ ಪೋಲೀಸು ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮೆ|| ಜಹಿರುದ್ದೀನ್ ಮೆಕ್ಕಿಯವರು, ಎರಡನೇ ಕ್ಲಾಸಿನ ಪೋಲೀಸು ಸೂಪರಿಂಟೆಂಡೆಂಟರಾಗಿರತಕ್ಕದ್ದು.

3. ಪೋಲೀಸು ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮೆ|| ಸೈದುದ್ದೀನ್ ಹುಸೇನ್ ಯವರು ಎರಡನೇ ಕ್ಲಾಸಿನಿಂದ ಮೊದಲನೇ ಕ್ಲಾಸಿಗೆ.

ತಾರೀಖು 23ನೇ ಏಪ್ರೈಲ್ 1904.

ನಂ. 4052—ಲೋ. ಫಂ. 76-03, ಸನ್ 1903ನೇ ಸೆಪ್ಟಂಬರ 9ನೇ ಮಾರ್ಚು 30—ಲೆಜಿಸ್. 4-03ನೇ ನಂಬರ ಇಸ್ತಿಹಾರ್ನಾಮೆಯೊಡನೆ ಫಾಯಿಷಾದ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ 7ನೇ ಪ್ಯಾರಾವಿನಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಕ್ಲೋಸಪೇಟೆ ಸಬ್ ತಾಲ್ಲೂಕಿನ ತಾಲ್ಲೂಕು ಬೋರ್ಡಿಗೋಸ್ಕರ ಮೊಕರರ್ಮಾಡಲ್ಪಟ್ಟ ಇದರಡಿ ಕಂಡ ಮೆಂಬರುಗಳ ಪಟ್ಟಿಯು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಫಾಯಿಷ್ಮಾಡಲ್ಪಟ್ಟಿರುತ್ತೆ:—

ಎಕ್ಸ್ ಅಫೀಷಿಯೋ ಮೆಂಬರುಗಳು.

1. ಸಬ್ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು .. ಪ್ರೆಸಿಡೆಂಟರು.
2. ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರು .. .. ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು ಮೆಂಬರು.
4. ಚನ್ನಪಟ್ಟಣದಲ್ಲಿರುವ ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫಿಸರು ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5. ಮ|| ಚನ್ನವೀರರಾಜಯ್ಯನವರು, ಬಿಡದಿ ಪಟೇಲರು .. ಡಿಟೋ
6. ,, ನಂಜುಂಡೆಗೌಡರು, ಬೈರಮಂಗಲದ ಪಟೇಲರು .. ಡಿಟೋ
7. ,, ಹಾಲಮಲದ ಕೃಷ್ಣಪ್ಪನವರು .. ಡಿಟೋ
8. ,, ರಂಗೆಗೌಡರು, ಜಾಲಮಂಗಲದ ಪಟೇಲರು .. ಡಿಟೋ

(f) ಕ್ಲಾಜ್ ಅನುಸರಿಸಿ.

9. ,, ಕರೆಭಾಮೆ ನರಸಿಂಹಯ್ಯನವರು .. ಡಿಟೋ

(g) ಕ್ಲಾಜ್ ಅನುಸರಿಸಿ.

10. ,, ಬಾಳಾಜೆರಾಯರು ... ... ಡಿಟೋ
11. ,, ನರಸಿಂಹಯ್ಯ ಸೆಟ್ಟರು ... ... ಡಿಟೋ
12. ,, ಹುಸೇನ್‌ಖಾನರವರು ... ... ಡಿಟೋ

ತಾರೀಖು 25ನೇ ಏಪ್ರೈಲ್ 1904.

ನಂ. 4084—ಲೋ. ಫಂ. 79-03, ಸನ್ 1903ನೇ ಸೆಪ್ಟಂಬರ 9ನೇ ಮಾರ್ಚು 30—ಲೆಜಿಸ್. 4—03ನೇ ನಂಬರ ಇಸ್ತಿಹಾರ್ನಾಮೆಯೊಡನೆ ಫಾಯಿಷಾದ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ 7ನೇ ಪ್ಯಾರಾವಿನಲ್ಲಿರುವ ವಿಧಿಗಳನುಸರಿಸಿ ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಟಿ. ನರಸೀಪುರ ತಾಲ್ಲೂಕು ಬೋರ್ಡನ್ನು ಉಂಟುಮಾಡಲಿಕ್ಕೆ ಇದರಡಿ ಕಂಡ ಮೆಂಬರುಗಳು ಮೊಕರರ್ಮಾಡಲ್ಪಟ್ಟಿರುತ್ತಾರೆ:—

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು .. ... ಪ್ರೆಸಿಡೆಂಟರು.
2. ಅಮಲ್ದಾರು ... ... ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು.. ಮೆಂಬರು.
4. ಪಬ್ಲಿಕ ವರ್ಕ್ಸ ಇಲಾಖೆಯ ಸಬ್ ಡಿವಿಜನ್ ಆಫಿಸರು .. .... ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5. ಮ|| ಸೋಸಲೆ ಸಿದ್ಧಲಿಂಗಮರಿದೇವರು, ಜಮೀನ್ದಾರು ... ಡಿಟೋ
6. ,, ಗರ್ಗೇಶ್ವರಿ ಶ್ರೀನಿವಾಸರಾಯರು, ಡಿಟೋ .. ಡಿಟೋ
7. ,, ತಲಕಾಡು ಕದೀಂ ಸೂರ್ಯನಾರಣಪ್ಪನವರು, ಜಮೀನ್ದಾರು .. ಡಿಟೋ
8. ,, ಅಟ್ಟಹಳ್ಳಿ ವೆಂಕಟನಾರಣಪ್ಪನವರು, ಶಾನಭೋಗರು ಮತ್ತು ಜಮೀನ್ದಾರು ಡಿಟೋ

(f) ಕ್ಲಾಜ್ ಅನುಸರಿಸಿ.

9. ,, ವೆಂಕಟರಮಣ ಸೆಟ್ಟರು, ವರ್ತಕರು ಮತ್ತು ಜಮೀನ್ದಾರು ... ಡಿಟೋ

(g) ಕ್ಲಾಜ್ ಅನುಸರಿಸಿ.

10. ,, ಮೊಹದೀನ್‌ಖಾನ್ ಸಾಹೇಬರು, ಜಮೀನ್ದಾರು .. ಡಿಟೋ
11. ,, ಕಾಲಮಾಡಿಗೌಡರು, ಜಮೀನ್ದಾರು ... .. ಡಿಟೋ
12. ,, ಪೇಯಾಪಟ್ಣ ನಂಜಪ್ಪನವರು, ಜಮೀನ್ದಾರು .. .. ಡಿಟೋ

ತಾರೀಖು 4ನೆ ಮೇ 1904.

ನಂ. 4198—ಲೋ. ಫಂ. 76–03, ಸನ್ 1904ನೆ ಏಪ್ರೆಲ್ 2ನೆ ಮಾರ್ಕಂ 3781—ಲೋ. ಫಂ. 76–03ನೆ ನಂಬರ ಇಸ್ತಿಹಾರ್ನಾಮೆಯನ್ನನುಸರಿಸಿ 1904ನೆ ಏಪ್ರೆಲ್ 7ನೆ, 14ನೆ ಮತ್ತು 21ನೆ ತಾರೀಖು ಮೈಸೂರು ಗೆಜೆಟ್ Iನೆ ಭಾಗದ 227, 228 ವ 229ನೆ, 260 ವ 261ನೆ ಮತ್ತು 293 ವ 294ನೆ ಪುಟಗಳಲ್ಲಿ ಛಾಯಿಷಾದ ಹೊಸಕೋಟೆ, ಕಾನಕಾನಹಳ್ಳಿ ವ ತಾಲ್ಲೂಕು ಬೋರ್ಡುಗಳ ಮೆಂಬರುಗಳ ಪಟ್ಟಿಯಲ್ಲಿ:—

ತಾಲ್ಲೂಕು.	ನಂಬರ್.	ಹೆಸರು.
ಹೊಸಕೋಟೆ	4	ಪಬ್ಲಿಕ್‌ವರ್ಕ್ಸ್ ಇಲಾಖೆಯ ಸಬ್ ಓವರ್ಸಿಯರು
ಕಾನಕಾನಹಳ್ಳಿ	5	ಮ॥ ಲಿಂಗೆಗೌಡರು, ಗುರಿಕಾರರು
	9	ಮ॥ ತಿಮ್ಮೆಗೌಡರು
ಆನೆಕಲ್	4	ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಓವರ್ಸಿಯರು

ಎಂಬದಕ್ಕೆ ಬದಲಾಗಿ,

ತಾಲ್ಲೂಕು.	ನಂಬರ್.	ಹೆಸರು.
ಹೊಸಕೋಟೆ	4	ಪಬ್ಲಿಕ್‌ವರ್ಕ್ಸ್ ಇಲಾಖಾ IIನೆ ನಂಬರ್ ಡಿವಿಜನಿನ ಸೂಪರ್‌ವೈಜರು
ಕಾನಕಾನಹಳ್ಳಿ	5	ಮ॥ ಲಿಂಗೆಗೌಡರು
	9	ಮ॥ ತಿಮ್ಮೆಗೌಡರು, ಗುರಿಕಾರರು
ಆನೆಕಲ್	4	ಪಬ್ಲಿಕ್‌ವರ್ಕ್ಸ್ ಇಲಾಖಾ IIನೆ ನಂಬರ್ ಡಿವಿಜನಿನ ಸೂಪರ್‌ವೈಜರು

ಎಂಬದಾಗಿ ಓದಿಕೊಳ್ಳತಕ್ಕದ್ದು.

ತಾರೀಖು 22ನೆ ಏಪ್ರೆಲ್ 1904.

ನಂ. ರೆ. 3175, ಸನ್ 1894ನೆ ಇಸವಿಯ VIIನೆ ನಂಬರ ಲ್ಯಾಂಡ್ ಆಕ್ವಿಜಿಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡಿ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರಿ ಕೆಲಸಕ್ಕೆ ಅಂದರೆ, ಶಿವಮೊಗ್ಗಾದಲ್ಲಿರುವ ರೈಲ್ವೆ ಸ್ಟೇಷನ್ ಯಾರ್ಡನ್ನು ಬಡಾಯಿಸುವ ಬಗ್ಗೆ ಬೇಕಾಗಿರುತ್ತವೆ. ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟಿನ ಮೊದಲನೇ ಅಸಿಸ್ಟೆಂಟ್ ಕಮಿಷನರವರು ಮೇಲ್ಕಂಡ ರೆಗ್ಯುಲೇಷನಿನ 3 (c) ವ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಗ್ರಾಮದ ಹೆಸರು.	ಖಾತೇದಾರ್ರ ಹೆಸರು.	ಸರ್ವೆ ನಂಬರು		ಆಕಾರ	ತೆಗೆದುಕೊಳ್ಳಬೇಕಾಗಿರುವ ಜಮೀನು.		ಚಕ್ಕುಬಂದಿ.			
		ನಂಬರ್	ವಿವರ		ಎಕರೆ ವ ಗುಂಟೆ.	ಆಕಾರ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಶಿವಮೊಗ್ಗ (ಶಿವಮೊಗ್ಗ ತಾಲ್ಲೂಕು)	ಉಜ್ಜನ್ನಯ್ಯ ಪಟೇಲ್	93	ಖುಷ್ಕಿ 4—10	4—8—0	0—4	..	ಸರ್ವೆ ನಂ. 93	ಸರ್ವೆ ನಂ 94	ಸರ್ವೆ ನಂ. 13	ರೈಲ್ವೆ ರಸ್ತೆ
	ಡಿಟ್ಟೋ ...	94	ಖುಷ್ಕಿ 2—5	1—8—0	1—28	..	ಎಸ್. ನಂ. 94ರ ಭಾಗ	ರೈಲ್ವೆರಸ್ತೆ	ಎಸ್. ನಂ. 18 ಮತ್ತು ಹೊಳೇಹೊನ್ನೂರು-ಶಿವಮೊಗ್ಗದ ರಸ್ತೆ	ಗುಡ್ಸ್ ಷೆಡ್ಡಿಗಾಗಿ ತೆಗೆದುಕೊಂಡ ಜಮೀನು
	ಸರ್ಕಾರ ಬಂಜರ್ ...	18	0—3	..	0—3	..	ಎಸ್. ನಂ. 94ರ ಭಾಗ	ಡಿಟ್ಟೋ	ಶಿವಮೊಗ್ಗ-ಹೊಳೇಹೊನ್ನೂರು ರಸ್ತೆ	ತೆಗೆದುಕೊಳ್ಳಬೇಕಾಗಿರುವ ಎಸ್. ನಂ. 94ರ ಭಾಗ

ತಾರೀಖು 28ನೆ ಏಪ್ರೆಲ್ 1904.

ನಂ. ರೆ. 3244, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಈಚೆಗೆ ಮಾಲೂರು ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟಿದ್ದ ಗೋರಿಬಿದನೂರು ತಾಲ್ಲೂಕಿನ ಅಮಲ್ದಾರ್ರಾದ ಮ॥ ಮಾಚಯ್ಯನವರಿಗೆ 1903ನೆ ಸೆಪ್ಟಂಬರ 25ನೆ ತಾರೀಖಿನಾರಭ್ಯ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು, ಗೋರಿಬಿದನೂರು ಮತ್ತು ಮಾಲೂರು ತಾಲ್ಲೂಕುಗಳ ಷಿರಸ್ತೆದಾರ್ರುಗಳು ಕಾಯಂ ಅಮಲ್ದಾರ್ರುಗಳಿಗೆ ಚಾರ್ಜ್ ಒಪ್ಪಿಸುವ ಮೇಲ್ಕಂಡ ರಜಾ ಕಾಲದ ಭಾಗದಲ್ಲಿ ಆಯಾ ತಾಲ್ಲೂಕುಗಳ ಚಾರ್ಜಿನಲ್ಲಿದ್ದರು.

ತಾರೀಖು 18ನೆ ಏಪ್ರೆಲ್ 1904.

ನಂ. ರೆ. 3146, ಸನ್ 1891ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನೆಂದರೆ, ಇದರಡೀ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಬೆಂಗಳೂರು ತಾಲ್ಲೂಕಿನ ಹೆಬ್ಬಾಳದಲ್ಲಿ ಎಕ್ಸ್‌ಪೆರಿಮೆಂಟಲ್ ಫಾರಮನ್ನು ಸ್ಥಾಪಿಸುವ ಬಗ್ಗೆ ಬೇಕಾಗಿರುತ್ತವೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ಸದರೀ ಜಮೀನುಗಳು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರ್ರ ಹೆಸರು.	ಸರ್ವೆ ನಂ.	ವರ್ಗ.	ಜಮೀನಿನ ತಪಶೀಲು. ವಿಸ್ತೀರ್ಣ.		ಆಕಾರ.			ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ.	ಗು.	ರೂ.	ಆ.	ಪೈ.				
ಬೆಂಗಳೂರು.	ಬೆಂಗಳೂರು.	ಯಶವಂತಪುರ.	ಹೆಬ್ಬಾಳ.	ತೋಟಿ ಚಿಕ್ಕರಂಗ (ನೌಕರಿ ಇನಾಂ).	41/1	ಖುಷ್ಕಿ.	2	21	3	0	0	ರಾಮಚಂದ್ರಯ್ಯನ ಹೊಲ ಎಸ್. ನಂ. 42	ರೈಫಲ್ ರೇಂಜಿಗೆ ಸೇರಿದ ಎಸ್. ನಂ. 41ರ ಭಾಗ	ಎಸ್. ನಂ. 44 ನಂಜುಂಡಯ್ಯನ ಜಮೀನು	ಚಿಕ್ಕರಂಗ ವಗೈರೇರ ಎಸ್. ನಂ. 34
				ರಾಮಚಂದ್ರಯ್ಯ (ಭಟವಮಾನ್ಯ)	42	ಡಿಟ್ಟೋ	3	9	4	0	0	ಚೌಡಿಗನ ಎಸ್. ನಂ. 46	ಹೇಗೂರು ಬೈರನ ಎಸ್. ನಂ. 13ರ ಭಾಗ; ತೋಟಿ ಚಿಕ್ಕರಂಗನ ಎಸ್. ನಂ. 41; ನಂಜುಂಡಯ್ಯ ಮತ್ತು ಇತರರ ಎಸ್. ನಂ. 44	ಈಶ್ವರದೇವರ ಇನಾಂ ಎಸ್. ನಂ. 43; ನಂಜುಂಡಯ್ಯನ ಎಸ್. ನಂ. 44ರ ಭಾಗ	ಬೈರನ ಎಸ್. ನಂ. 13ರ ಭಾಗ
				ಈಶ್ವರದೇವರ ಇನಾಂ	43	ಡಿಟ್ಟೋ	0	37	1	0	0	ಮುನಿನಾಗಯ್ಯನ ಎಸ್. ನಂ. 46	ನಂಜುಂಡಯ್ಯನ ಎಸ್. ನಂ. 44	ಶಾನಭೋಗ ರಾಘವೇಂದ್ರಪ್ಪನ ಎಸ್. ನಂ. 45	ರಾಮಚಂದ್ರಯ್ಯನ ಎಸ್. ನಂ. 42
				ನಂಜುಂಡ ಬಿನ್ ನಂಜಯ್ಯ ...	44	ಡಿಟ್ಟೋ	3	31	4	8	0	ಈಶ್ವರದೇವರ ಇನಾಂ ಎಸ್. ನಂ. 43; ಎಸ್. ನಂ. 45 ಶಾನಭೋಗ ರಾಘವೇಂದ್ರಪ್ಪ; ರಾಮಚಂದ್ರಯ್ಯನ ಎಸ್. ನಂ. 42	ರೈಫಲ್ ರೇಂಜಿನ ಎಸ್. ನಂ. 44ರ ಭಾಗ	ಶಾನಭೋಗ ರಾಘವೇಂದ್ರಪ್ಪನ ಎಸ್. ನಂ. 45	ತೋಟಿ ಚಿಕ್ಕರಂಗನ ಎಸ್. ನಂ. 41; ರಾಮಚಂದ್ರಯ್ಯನ ಎಸ್. ನಂ. 42
				ಶಾನಭೋಗ ರಾಘವೇಂದ್ರಪ್ಪನ ನೌಕರಿ ಇನಾಂ	45	ಡಿಟ್ಟೋ	2	30	3	8	0	ಮುನಿಪ್ಪನ ಎಸ್. ನಂ. 46	ಡಿಟ್ಟೋ ಎಸ್. ನಂ. 45	ಮುನಿಯ ಬಿನ್ ತಿಂಮಣ್ಣ	ನಂಜುಂಡಯ್ಯನ ಎಸ್. ನಂ. 44; ಎಸ್. ನಂ. 43 ಈಶ್ವರದೇವರ ಇನಾಂ

ಜಿಲ್ಲಾ.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರರ ಹೆಸರು.	ಸರ್ವೆ ನಂ.	ವರ್ಗ.	ಜಮೀನಿನ ತಪಶೀಲು. ವಿಸ್ತೀರ್ಣ. ಎ.	ಗು.	ಆಕಾರ. ರೂ.	ಆ.	ಪೈ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಬೆಂಗಳೂರು	ಬೆಂಗಳೂರು	ಯಶವಂತಪುರ	ಜಿಬ್ಬಾಳ	ಚವಡಿಗ ಬಿ‍ᐟ ಮಾರಿಗ ...	46/1	ಖುಷ್ಕಿ	0	14	0	8	0	ನಂದಿ ರಸ್ತೆ	ಮುನಿಯ ಬಿ‍ᐟ ತಿಂಮನ ಎಸ್. ನಂ. 47 ಎಸ್. ನಂ. 45 ಶಾನಭೋಗ ರಾಘವೇಂದ್ರಪ್ಪ	ಸೊಂಣೆಗೌಡನ ಎಸ್. ನಂ. 50	ಬೈರ ಮತ್ತು ಇತರರ ಎಸ್. ನಂ. 13
				ದಾಸರ ನರಸಿಂಹ ...	46/2	ಡಿಟೋ	0	13	0	8	0				
				ಸೊಂಣೆಗೌಡ ...	46/3	ಡಿಟೋ	0	27	7	0	0	ಡಿಟೋ	ಎಸ್. ನಂ. 43 ಈಶ್ವರದೇವರ ಇನಾಂ	ಡಿಟೋ	ಡಿಟೋ
				ಮುನಿಸಾಮಯ್ಯ ..	46/4	ಡಿಟೋ	3	28	4	0	0		ರಾಮಚಂದ್ರಯ್ಯನ ಎಸ್. ನಂ. 42	ಡಿಟೋ	ಡಿಟೋ
				ಮುನಿಯ ಬಿ‍ᐟ ತಿಮ್ಮ ...	47	ಡಿಟೋ	3	18	4	0	0	ಮುನಿಸಾಮಯ್ಯನ ಮತ್ತು ಸೊಂಣೆಗೌಡನ ಎಸ್. ನಂ. 46	ರೈಫಲ್ ರೇಂಜಿನ ಎಸ್. ನಂ. 46ರ ಭಾಗ	ಸೊಂಣೆಗೌಡನ ಎಸ್. ನಂ. 50	ಶಾನಭೋಗ ರಾಘವೇಂದ್ರಪ್ಪನ ಎಸ್. ನಂ 45
				ಸೊಂಣೆಗೌಡ ಬಿ‍ᐟ ಪಾಪಂಣ ..	50	ಡಿಟೋ	7	1	8	8	0	ನಂದಿ ರಸ್ತೆ	ಡಿಟೋ ಎಸ್. ನಂ. 50ರ ಭಾಗ	ಮುನಿಯನ ಎಸ್. ನಂ. 53; ಸೊಂಣೆಗೌಡನ ಎಸ್. ನಂ. 55	ಎಸ್. ನಂ. 58 ಕೆರೆ
				ಮುನಿಯ ಬಿ‍ᐟ ಕರಿಯಪ್ಪ..	53	ಡಿಟೋ	5	10	6	8	0	ಡಿಟೋ ಮತ್ತು ಎಸ್. ನಂ. 58 (ಕೆರೆ)	ನಂಜುಂಡಯ್ಯನ ಎಸ್. ನಂ. 54; ಸೊಂಣೆಗೌಡನ ಎಸ್. ನಂ. 55	ಎಸ್. ನಂ. 58 (ಕೆರೆ)	ಸೊಂಣೆಗೌಡನ ಎಸ್. ನಂ. 50
						ತರಿ	0	31	2	0	0				
						ಬಾಗಾಯತು	0	6	1	8	0				
				ನಂಜುಂಡ ಬಿ‍ᐟ ನಂಜಯ್ಯ ..	54	ಖುಷ್ಕಿ	1	5	1	0	0	ಮುನಿಯನ ಎಸ್. ನಂ. 53	ರೈಫಲ್ ರೇಂಜಿನ ಎಸ್. ನಂ. 5ರ ಭಾಗ	ಸೊಂಣೆಗೌಡನ ಎಸ್. ನಂ. 55	ಡಿಟೋ
						ತರಿ	1	24	3	12	0				
				ಸೊಂಣೆಗೌಡ ಬಿ‍ᐟ ಪಾಪಂಣ ..	55	ಡಿಟೋ	1	0	2	4	0	ಡಿಟೋ	ಡಿಟೋ ಎಸ್. ನಂ. 55ರ ಭಾಗ	ಎಸ್. ನಂ. 58 ಕೆರೆ	ನಂಜುಂಡನ ಎಸ್. ನಂ. 54

ಡಿಟೋ	ಡಿಟೋ	ಡಿಟೋ	ಡಿಟೋ	ಮುನಿಯ ಬಿನ್ ಕರಪಾಪ ...	76	ಖುಷ್ಕಿ ತರಿ	0 1	39 35	1 7	0 6	0 0	ಕೆರೆಕೋಡಿಯ ಹಳ್ಳ	ವೆ|| ಬ್ರಾಹ್ಮಯವರ ಎಸ್. ನಂ. 77 ಮತ್ತು ನಂದಿ ರಸ್ತೆ	ನಂದಿ ರಸ್ತೆ ಮತ್ತು ಎಸ್. ನಂ. 75ರ ಭಾಗ	ಬೈರನ ಎಸ್. ನಂ. 79ರ ಭಾಗ; ವೆ|| ಬ್ರಾಹ್ಮಯವರ ಎಸ್. ನಂ. 77
				ವೆ|| ಬ್ರಾಹ್ಮಯವರು (ಅನುಭವದಾರ)	77	ತರಿ	1	30	8	0	0	ಮುನಿಯನ ಎಸ್. ನಂ. 76	ಕೆರೆ ಏರಿ ರಸ್ತೆ	ಮುನಿಯನ ಎಸ್. ನಂ. 76	ನಂಜಪ್ಪ ಮತ್ತು ಮುನಿಯನ ಎಸ್. ನಂ. 78
				ಸೊಂಣಪ್ಪ ಅಕ್ಕಮ್ಮ, ತೋಟಿ ಪಿಲ್ಲಪ್ಪ	ಡಿಟೋ	ಡಿಟೋ	0	32	4	0	0				
				ನಂಜಪ್ಪ ಬಿನ್ ಹನುಮಯ್ಯ ..	78/1	ಡಿಟೋ	1	9	6	0	0	ಬೈರ ಮತ್ತು ನಂಜಪ್ಪನ ಎಸ್. ನಂ. 79	ಕೆರೆ ಏರಿ, ಹೊಳೆ ರಸ್ತೆ	ಅಕ್ಕಮ್ಮನ ಎಸ್. ನಂ. 77	ತಿಮ್ಮ ಮತ್ತು ಮುನಿಗನ ನಾಕರಿ ಇನಾಂ ಎಸ್. ನಂ. 80
				ಮುನಿಯ ಬಿನ್ ತಿಮ್ಮಣ್ಣ ...	78/2	ಡಿಟೋ	1	10	6	0	0				
				ಬೈರ ಬಿನ್ ಬೇಗೂರು ಬಿಚೇಲು..	79/1	ಡಿಟೋ	1	23	7	8	0	ಕೆರೆಕೋಡಿಹಳ್ಳ ಮತ್ತು ರಜಾ ಹುಸೇನ್ ದರ್ಗೆದ ಇನಾಂ ಎಸ್. ನಂ. 95	ನಂಜ ಮತ್ತು ಮುನಿಯನ ಎಸ್. ನಂ. 78; ತಿಮ್ಮನ ಎಸ್. ನಂ. 80; ಚಿಕ್ಕರಂಗನ ಎಸ್. ನಂ. 81	ಮುನಿಯ ಬಿನ್ ಕರಪಾಪನ ಎಸ್. ನಂ. 76	ನಂಜುಂಡಭಟ್ಟನ ಎಸ್. ನಂ. 94; ರಾಮಚಂದ್ರಯ್ಯನ ಎಸ್. ನಂ. 83; ಚಿಕ್ಕರಂಗನ ಎಸ್. ನಂ. 81; ತಿಮ್ಮನ ಎಸ್. ನಂ. 30
				ತಿಮ್ಮ, ಮುನಿಗ (ಇನಾಂ)	80	ಡಿಟೋ	1	36	9	0	0	ಬೈರ ಮತ್ತು ನಂಜಪ್ಪನ ಎಸ್. ನಂ. 79	ಕೆರೆ ಏರಿ, ಹೊಳೆ ರಸ್ತೆ	ಮುನಿಯ ಮತ್ತು ನಂಜಪ್ಪನ ಎಸ್. ನಂ. 78; ಬೈರ ಮತ್ತು ನಂಜಪ್ಪನ ಎಸ್. ನಂ. 79	
				ಸೀರಗಂಟು ಚಿಕ್ಕರಂಗ (ಇನಾಂ)	81	ಡಿಟೋ	1	12	6	0	0	ಬೈರ ಮತ್ತು ನಂಜಪ್ಪನ ಎಸ್. ನಂ. 79	ಕೆರೆ ಏರಿ, ಹೊಳೆ ರಸ್ತೆ	ತಿಮ್ಮ ಮತ್ತು ಮುನಿಗನ ನಂ. 80	ಮುದುರಸೆಟ್ಟಿಯ ಎಸ್. ನಂ. 82; ರಾಮಚಂದ್ರಯ್ಯನ ಎಸ್. ನಂ. 83 (ಇನಾಂ)

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರರ ಹೆಸರು.	ಸರ್ವೆ ನಂ.	ತರಹ.	ಜಮೀನಿನ ತಪಸೀಲು. ವಿಸ್ತೀರ್ಣ. ಎ.	ಗುಂ	ಆಕಾರ. ರೂ.	ಆ.	ಪೈ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಬೆಂಗಳೂರು.	ಬೆಂಗಳೂರು.	ಉತ್ತರಹಳ್ಳಿ.	[illegible]	ಮದರ ಸೆಟ್ಟಿ ..	82	ತರಿ	0	25	3	0	0	ಚಿಕ್ಕರಂಗನ ಎಸ್. ನಂ. 81 (ಇನಾಂ); ರಾಮಚಂದ್ರಯ್ಯನ ಎಸ್. ನಂ. 83 (ಇನಾಂ)	ಕೆರೆಏರಿ, ಹೊಳೆ ರಸ್ತೆ	ಚಿಕ್ಕರಂಗನ ಇನಾಂ ಎಸ್. ನಂ. 81	ರಾಮಚಂದ್ರಯ್ಯನ ಇನಾಂ ಎಸ್. ನಂ. 83
				ರಾಮಚಂದ್ರಯ್ಯ (ಇನಾಂ) ..	83	ಡಿಟೋ	0	39	5	0	0	ನಂಜುಂಡಭಟ್ಟನ ಎಸ್. ನಂ. 94	ಡಿಟೋ	ಬೈರ ಮತ್ತು ನಂಜಪ್ಪನ ಎಸ್. ನಂ.; ಚಿಕ್ಕರಂಗನ ಎಸ್. ನಂ. 81 (ಇನಾಂ); ಮದುರಸೆಟ್ಟಿಯ ಎಸ್. ನಂ. 82	ಬೈಯಣ್ಣ ಮತ್ತು ಬೆಸ್ತರ ಮುದ್ದಣ್ಣನ ಎಸ್. ನಂ. 84
				ಬೈಯಣ್ಣ ಬಿನ್ ತಿಮ್ಮಣ್ಣ	84/1	ಡಿಟೋ	1	38	9	8	0	ಡಿಟೋ	ಡಿಟೋ ಮತ್ತು ಸೊಣ್ಣಪ್ಪ ಮತ್ತು ಕರೀಂಸಾಬಿಯ ಎಸ್. ನಂ. 85	ರಾಮಚಂದ್ರಯ್ಯನ ಎಸ್. ನಂ. 83	ಸೊಣ್ಣಪ್ಪ ಮತ್ತು ಕಾಶಿಂಸಾಬಿಯ ಎಸ್. ನಂ. 85 ; ರಾಘವೇಂದ್ರಪ್ಪನ ಎಸ್. ನಂ. 86
				ಬೆಸ್ತರ ಮುದ್ದಣ್ಣ ..	84/2	ಡಿಟೋ	1	38	9	8	0				
				ಸೊಣ್ಣಪ್ಪ ಬಿನ್ ದೊಡ್ಡಣ್ಣಯ್ಯ.	85/1	ಡಿಟೋ	1	21	7	8	0	ಬೈಯಣ್ಣನ ಎಸ್. ನಂ. 84	ಕೆರೆ ಏರಿ ರಸ್ತೆ	ಬೈಯಣ್ಣ ಮತ್ತು ಬೆಸ್ತರ ಮುದ್ದಣ್ಣನ ಎಸ್. ನಂ. 84	ಬಸವಣ್ಣದೇವರ ಇನಾಂ ಎಸ್. ನಂ 88; ಶಾನಭೋಗ ರಾಘವೇಂದ್ರಪ್ಪನ ಇನಾಂ ಎಸ್. ನಂ. 87
				ಕಾಸಿಂಸಾಬ್ ..	85/2	ಡಿಟೋ	1	16	7	8	0	ರಾಘವೇಂದ್ರಪ್ಪನ ಎಸ್. ನಂ. 86			
				ಶಾನಭೋಗ ರಾಘವೇಂದ್ರಪ್ಪ .	86	ಡಿಟೋ	1	12	6	8	0	ನಂಜುಂಡಭಟ್ಟನ ಎಸ್. ನಂ. 94	ಸೊಣ್ಣಪ್ಪ ಮತ್ತು ಕಾಸಿಂಸಾಬಿಯ ಎಸ್. ನಂ. 85	ಬೈಯಣ್ಣ ಮತ್ತು ಬೆಸ್ತರ ಮುದ್ದಣ್ಣನ ಎಸ್. ನಂ. 84 ; ಸೊಣ್ಣಪ್ಪನ ಎಸ್. ನಂ. 85	ರಾಘವೇಂದ್ರಪ್ಪನ ಶಾನಭೋಗಿ ಇನಾಂ ಎಸ್. ನಂ. 87

ಡಿಟೋ	ಡಿಟೋ	ಡಿಟೋ	ಡಿಟೋ	ಬಸವಣ್ಣದೇವರು(ಇನಾಂ) ...	88	ಬಾಗಾಯತು ಖುಷ್ಕಿ	1 0	18 3	12 0	13 1	0 0	ರಾಘವೇಂದ್ರಪ್ಪನ ಇನಾಂ ಎಸ್. ನಂ. 87; ಮರಿಶಾಮಣ್ಣನ ಎಸ್. ನಂ. 92	ಕೆರೆ	ಸೋಣಪ್ಪ ಮತ್ತು ಕಾಸಿಂಸಾಬಿಯ ಎಸ್. ನಂ. 85	ದೊಡ್ಡ ಕಾಲವೆ
				ಬೆಸ್ತರ ವೆಂಕಟರಮಣಪ್ಪ ...	89	ಬಾಗಾಯತು	0	23	4	8	0	ಪಾಪಣ್ಣನ ಬಾಗಾಯತು ಎಸ್. ನಂ. 90	ಬಂಜರ್ ಎಸ್. ನಂ. 52	ದೊಡ್ಡ ಕಾಲವೆ	ಬಂಜರ್ ಎಸ್. ನಂ. 52
				ತಿಗಳರ ಪಾಪ ...	90	ಖುಷ್ಕಿ ಬಾಗಾಯತು	0 0	4 37	0 7	2 6	0 0	ತಿಗಳರ ಅಭಿಮನ್ಯನ ಬಾಗಾಯತು ಎಸ್. ನಂ. 128	ಬೆಸ್ತರ ವೆಂಕಟರಮಣಪ್ಪನ ಎಸ್. ನಂ. 89; ಬಂಜರ್ ಎಸ್. ನಂ. 52	ಡಿಟೋ	ಡಿಟೋ
				ತಿಗಳರ ಅಭಿಮನ್ಯ	91	ಖುಷ್ಕಿ ಬಾಗಾಯತು	0 0	4 33	0 6	2 6	0 0	ತಿಗಳರ ಪಂಚರಾಮನ ಬಾಗಾಯತು ಎಸ್. ನಂ. 128	ತಿಗಳರ ಪಾಪನ ಬಾಗಾಯತು ಎಸ್. ನಂ. 90	ಡಿಟೋ	ಬಂಜರ್ ಎಸ್. ನಂ. 52; ತಿಗಳರ ಕುಳ್ಳಪ್ಪ, ಕಾಳಪ್ಪನ ಬಾಗಾಯತು ಎಸ್. ನಂ. 130
				ಮರಿಶಾಮಣ್ಣ ಬಿನ್ ಸಾದರಹಳ್ಳಿ	92	ಡಿಟೋ	0	22	6	8	0	ತಿಮ್ಮಣ್ಣನ ಎಸ್. ನಂ. 93	ಬಸವಣ್ಣದೇವರ ಎಸ್. ನಂ. 88	ರಾಘವೇಂದ್ರಪ್ಪನ ಇನಾಂ ಎಸ್. ನಂ. 87	ದೊಡ್ಡ ಕಾಲವೆ
				ತಿಮ್ಮಣ್ಣ ಬಿನ್ ಮರಿಸಾಮಿ ..	93/1	ಡಿಟೋ	0	13	4	0	0	ಗ್ರಾಮ ಠಣ್ಯದ ನಂಜುಂಡನ ಬಾಗಾಯತು ಎಸ್ ನಂ. 113	ಮರಿಸಾಮಿಯ ಬಾಗಾಯತು ಎಸ್. ನಂ. 92	ನಂಜುಂಡಭಟ್ಟನ ಎಸ್. ನಂ. 94; ರಾಘವೇಂದ್ರಪ್ಪನ ಎಸ್. ನಂ. 87	ಡಿಟೋ
				ತಿಗಳರ ಅಯ್ಯ ..	93/2	ಡಿಟೋ	0	12	3	12	0				
				ಬೆಸ್ತರ ಮುದ್ದಣ್ಣ ...	93/3	ಡಿಟೋ	0	24	7	4	0				
				ನಂಜುಂಡಭಟ್ಟ ...	94	ತರಿ	1	5	5	8	0	ರಜಾಹುಸೇನ್ ದರ್ಗಾ ಇನಾಂ ಎಸ್. ನಂ. 95	ರಾಮಚಂದ್ರಯ್ಯನ ಎಸ್. ನಂ. 83; ಬೈರಯಣ್ಣ ಮತ್ತು ಇತರರ ಎಸ್. ನಂ. 84; ಶಾನಭೋಗ ರಾಘವೇಂದ್ರಪ್ಪನ ಎಸ್. ನಂ. 86; ಡಿಟೋ ಎಸ್. ನಂ. 87	ಬೈರ ಮತ್ತು ನಂಜಪ್ಪನ ಎಸ್. ನಂ. 79	ತಿಮ್ಮಣ್ಣ ಮತ್ತು ಇತರರ ಎಸ್. ನಂ. 93

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರ್ರ ಹೆಸರು.	ಸರ್ವೆ ನಂ.	ವಿವರ.	ಜಮೀನಿನ ತಪಶೀಲು. ಎಸ್ಟೇಟ್		ಆಕಾರ.			ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ.	ಗು.	ರೂ.	ಆ.	ಪೈ.				
ಬೆಂಗಳೂರು.	ಬೆಂಗಳೂರು.	ಯಶವಂತಪುರ.	ಹೆಬ್ಬಾಳ.	ರಜಾಹುಸೇನ್ (ದರ್ಗಾ ಇನಾಂ)	95	ತರಿ	1	27	8	0	0	ಗ್ರಾಮಫಣ್ಯ್ವದ ನಂಜುಂಡನ ಎಸ್. ನಂ. 97; ಅಗಸರ ವೆಂಕಟನ ಎಸ್. ನಂ. 96	ಬೈರ ಮತ್ತು ನಂಜಪ್ಪನ ಎಸ್. ನಂ. 79; ನಂಜುಂಡಭಟ್ಟನ ಎಸ್. ನಂ. 94	ಕೋಡಿ ಕಾಲುವೆ	ಗ್ರಾಮಫಣ್ಯ್ವದ ನಂಜುಂಡನ ಎಸ್. ನಂ. 113
				ಅಗಸರ ವೆಂಕಟ ...	96	ಡಿಟ್ಟೋ	0	22	2	8	0	ನಾಗಪ್ಪನ ಎಸ್. ನಂ. 99	ರಜಾಹುಸೇನ್ ದರ್ಗಾ ಇನಾಂ ಎಸ್. ನಂ. 95	ಡಿಟ್ಟೋ	ಡಿಟ್ಟೋ ನಂ. 97
				ಗ್ರಾಮಫಣ್ಯ್ವದ ನಂಜುಂಡ ...	97	ಡಿಟ್ಟೋ	11	19	57	0	0	ಮೆ|| ಬರ್ನ್ ಯವರ ಎಸ್. ನಂ. 98	ಡಿಟ್ಟೋ	ಅಗಸರ ವೆಂಕಟನ ಎಸ್. ನಂ. 96; ನಾಗಪ್ಪನ ಎಸ್. ನಂ. 99	ಡಿಟ್ಟೋ ನಂ. 113
				ಡಿಟ್ಟೋ .	113	ಬಾಗಾಯತು	4	36	49	0	0	ಫಕ್ರುದೀನಿನ ಬಾಗಾಯತು ಎಸ್. ನಂ. 112	ತಿಮ್ಮಣ್ಣ ಮತ್ತು ಇತರರ ಬಾಗಾಯತು ಎಸ್. ನಂ. 93	ರಜಾಹುಸೇನ್ ದರ್ಗಾವಿನ ಎಸ್. ನಂ. 95; ಗ್ರಾಮಫಣ್ಯ್ವದ ನಂಜುಂಡನ ಎಸ್. ನಂ. 97; ಮೆ|| ಬರ್ನ್ ಯವರ ಎಸ್. ನಂ. 98; ನೀರಗಂಟಿ ಮುನಿಗನ ಎಸ್. ನಂ. 107	ದೊಡ್ಡ ಕಾಲುವೆ; ಕಾಳಪ್ಪನ ಬಾಗಾಯತು ಎಸ್. ನಂ. 126; ಗಿರಪ್ಪನ ಬಾಗಾಯತು ಎಸ್. ನಂ. 125; ಗೋಣಪ್ಪನ ಬಾಗಾಯತು ಎಸ್. ನಂ. 120; ಬಸಂಣನ ಬಾಗಾಯತು ಎಸ್. ನಂ. 118; ಬೈರನ ಬಾಗಾಯತು ಎಸ್. ನಂ. 117; ಅರಸಕುಂಟನ ಬಾಗಾಯತು ಎಸ್. ನಂ. 115 ವ 114

ಡಿಟೋ	ಡಿಟೋ	ಡಿಟೋ	ಡಿಟೋ	ತಿಗಳರ ಕಾಂಡವ ..	126	ಬಾಗಾಯತು	0	23	4	8	0	ಈರಪ್ಪನ ಬಾಗಾಯತು ಎಸ್. ನಂ. 125	ಪರಶುರಾಮನ ಬಾಗಾಯತು ಎಸ್. ನಂ. 127	ಗ್ರಾಮ ಠಾಣ್ಯದ ನಂ. ಜುಂಡಯ್ಯನ ಎಸ್. ನಂ. 113	ಹಜಾಂ ಮುನಿಗನ ಬಾಗಾಯತು ಎಸ್. ನಂ. 124
				ತಿಗಳರ ಪರಶುರಾಮ ..	127	ಖುಷ್ಕಿ	0	3	0	2	0	ಕಾಂಡವನ ಬಾಗಾಯತು ಎಸ್. ನಂ. 126	ಪರಶುರಾಮನ ಬಾಗಾಯತು ಎಸ್. ನಂ. 128	ದೊಡ್ಡ ಕಾಲವೆ	ಪರಶುರಾಮ ಮತ್ತು ತಿಗಳರ ರಾಚನ ಬಾಗಾಯತು ಎಸ್. ನಂ. 128
						ಬಾಗಾಯತು	1	3	8	6	0				
				ಡಿಟೋ ..	128	ಡಿಟೋ	0	30	6	0	0	ತಿರಾವಿನ ಬಾಗಾಯತು ಎಸ್. ನಂ. 127	ಅಭಿಮನ್ಯನ ಬಾಗಾಯತು ಎಸ್. ನಂ. 91	ಡಿಟೋ	ತಿಗಳರ ರಾಚನ ಬಾಗಾಯತು ಎಸ್. ನಂ. 129; ಎಸ್. ನಂ. 130 ಕುಳ್ಳಪ್ಪ ಕೊಳ್ಳಪ್ಪನ ಬಾಗಾಯತು
				ಡಿಟೋ ..	129/1	ಡಿಟೋ	0	15	2	8	0	ಪರಶುರಾಮನ ಬಾಗಾಯತು ಎಸ್. ನಂ. 128	ಕುಳ್ಳಪ್ಪ ಕೊಳ್ಳಪ್ಪನ ಬಾಗಾಯತು ಎಸ್. ನಂ. 130	ಪರಶುರಾಮನ ಬಾಗಾಯತು ಎಸ್. ನಂ. 127, 128	ಕರಿಸಿದ್ದವಡಯರ ಎಸ್. ನಂ. 132
				ತಿಗಳರ ರಾಚ ..	129/2	ಡಿಟೋ	0	15	2	8	0				
				ತಿಗಳರ ಕುಳ್ಳಪ್ಪ ..	130/1	ಖುಷ್ಕಿ	0	4	0	2	0	ಪರಶುರಾಮ ಮತ್ತು ರಾಚನ ಎಸ್. ನಂ. 129	ತಿಗಳರ ಹೊನ್ನೂರನ ಎಸ್. ನಂ. 131	ಅಭಿಮನ್ಯನ ಬಾಗಾಯತು ಎಸ್. ನಂ. 91; ಪರಶುರಾಮನ ಬಾಗಾಯತು ಎಸ್. ನಂ. 128	ಡಿಟೋ
						ಬಾಗಾಯತು	0	11	2	0	0				
				ಕಾಳಪ್ಪ ..	130/2	ಡಿಟೋ	0	15	2	6	0				
				ತಿಗಳರ ಹೊನ್ನೂರ ..	131	ಖುಷ್ಕಿ	0	1	0	2	0	ಕುಳ್ಳಪ್ಪ ಕಾಳಪ್ಪನ ಬಾಗಾಯತು ಎಸ್. ನಂ. 130	ರಸ್ತೆ	ರಸ್ತೆ	ಡಿಟೋ
				ಶಾನಭೋಗ ರಾಘವೇಂದ್ರಪ್ಪ (ನೌಕರಿ ಇನಾಂ).	87	ತರಿ	1	13	6	8	0	ನಂಜುಂಡಭಟ್ಟನ ಎಸ್. ನಂ. 94	ಬಸವಣ್ಣದೇವರ ಇನಾಂ ಎಸ್. ನಂ. 88; ಕೋಣಪ್ಪ ಮತ್ತು ಕಾಸಿಂಸಾಬಿಯ ಎಸ್. ನಂ. 85	ಶಾನಭೋಗ ರಾಘವೇಂದ್ರಪ್ಪನ ಎಸ್. ನಂ. 86	ಮುನಿಸಾಮಿಯ ಎಸ್. ನಂ. 92; ತಿಮ್ಮಣ್ಣ, ತಿಗಳರ ಅಯ್ಯ, ಬೆಸ್ತರ ಮುದ್ದಣ್ಣ ಇವರ ಎಸ್. ನಂ. 93.

ತಾರೀಖು 22ನೆ ಏಪ್ರೆಲ್ 1904.

ನಂ. ರೆ. 3166, ಸರ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಬೆಂಗಳೂರ ಡಿಸ್ಟ್ರಿಕ್ಟಿನ ದೊಡ್ಡಬಳ್ಳಾಪುರ ಮತ್ತು ನೆಲಮಂಗಲ ತಾಲ್ಲೂಕುಗಳಲ್ಲಿರುವ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಹೆಸರಘಟ್ಟ ಕೆರೆಯನ್ನು ಬಡಾಯಿಸುವ ಬಗ್ಗೆ ಬೇಕಾಗಿರುತ್ತವೆ. ಮತ್ತು ಬೆಂಗಳೂರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ತಾಲ್ಲೋಕು.	ಗ್ರಾಮ.	ಸ. ನಂ.	ಹಿಡುವಳೀದಾರನ ಹೆಸರು.	ಖುಷ್ಕಿ, ತರಿ ಯಾ ಬಾಗಾಯತು.	ತೆಗೆದುಕೊಳ್ಳ ಬೇಕಾಗಿರುವ ವಿಸ್ತೀರ್ಣ.		ಆಕಾರ.			ಷರಾ.
					ಎ.	ಗು.	ರೂ.	ಆ.	ಪೈ.	
ದೊಡ್ಡಬಳ್ಳಾಪುರ.	ಬಾಶೆಟ್ಟಿ.	42	1. ಹನುಮಂತದೇವರು ...	ಖುಷ್ಕಿ	3	10	5	0	0	ಸ್ವಲ್ಪ ಹೆಚ್ಚು ಕಡಿಮೆ ವಿಸ್ತೀರ್ಣ ಗ್ರಾಮಗಳು ತೆಗೆದುಕೊಳ್ಳಬೇಕಾಗಿರುವದರಿಂದ ವಿಸ್ತೀರ್ಣ ಸರ್ವೆ ಮಾಡಿದ ಬಳಿಕ ವ್ಯತ್ಯಾಸವಾಗುವ ಸಂಭವ ಇದೆ.
		33	1. ಸಂಜೀವಿ ಮತ್ತು ದೊಡ್ಡ	ಡಿಟೋ	2	22	4	0	0	
		33	2. ಅಕ್ಕಿ ..	ಡಿಟೋ	2	17	4	0	0	
		33	3. ಚಿಕ್ಕಣ್ಣ ..	ಡಿಟೋ	2	16	4	0	0	
		34	1. ನರಸಿ	ಡಿಟೋ	1	30	2	8	0	
		34	2. ಸೀನಪ್ಪ ...	ಡಿಟೋ	2	27	3	12	0	
		34	3. ಡಿಟೋ ..	ಡಿಟೋ	7	11	10	12	0	
		35	1. ನರಸಣ್ಣ ..	ಡಿಟೋ	0	27	1	1	4	
		35	2. ನಂಜ ..	ಡಿಟೋ	1	21	2	10	0	
		35	3. ಚಿಕ್ಕವೀರಪ್ಪ ..	ಡಿಟೋ	1	17	2	8	4	
		35	4. ಮಲ್ಲಯ್ಯ ..	ಡಿಟೋ	0	25	1	2	9	
		38	1. ನರಸಿಂಹ ...	ಡಿಟೋ	5	25	8	3	7	
		39	1. ಹನುಮ ..	ಡಿಟೋ	4	20	6	12	0	
		39	2. ಅಯ್ಯಣ್ಣ .	ಡಿಟೋ	2	27	4	4	0	
		40	1. ಹನುಮಂತ .	ಡಿಟೋ	2	5	3	4	0	
		40	2. ಹನುಮಿ ..	ಡಿಟೋ	5	3	8	8	0	
		40	3. ಭಾಗೀರತಮ್ಮ ..	ಡಿಟೋ	3	10	5	4	0	
		41	1. ಬೈರ ...	ಡಿಟೋ	3	0	4	8	0	
		41	2. ಬಸವ ...	ಡಿಟೋ	1	37	3	0	0	
		41	3. ಹನುಮಂತ ..	ಡಿಟೋ	2	5	3	8	0	
		41	4. ನರಸಿಂಹ .	ಡಿಟೋ	1	32	3	0	0	
		44	1. ವೆಂಕಟಮ್ಮ ...	ಡಿಟೋ	0	35	1	6	10	
		45	1. ದೊಡ್ಡಯ್ಯ ಮತ್ತು ಸಂಜೀವಿ .	ಡಿಟೋ	0	30	1	6	6	
		45	2. ಬೈರ ..	ಡಿಟೋ	4	17	7	8	0	
		43	1. ಕೆಂಪ ...	ಡಿಟೋ	6	18	10	0	0	
		88	1. ಸೀನಪ್ಪ ..	ಡಿಟೋ	3	8	5	4	0	
		88	2. ನಂಜಿ ..	ಡಿಟೋ	0	22	1	0	0	
		88	3. ಸುಬ್ಬಣ್ಣ ..	ಡಿಟೋ	2	20	4	0	0	
		88	4. ಅರೆಲಿಂಗೆ ..	ಡಿಟೋ	1	38	3	4	0	
		88	5. ಸಂಜೀವಿ ಮತ್ತು ದೊಡ್ಡಯ್ಯ ..	ಡಿಟೋ	0	22	1	0	0	
		88	6. ಚನ್ನರಾಯ ಮತ್ತು ಬೈರ ...	ಡಿಟೋ	0	35	1	8	0	
			ಜುಮ್ಲಾ ..		80	32	127	15	4	
	ಕಾಕೋಳು.	56	1. ಆಂಜನೇಯಸ್ವಾಮಿ	ಖುಷ್ಕಿ	2	0	2	12	0	
		57	1. ವೆಂಕಟರಾಂ ಮತ್ತು ಮತ್ತೊಬ್ಬ ಭಟ್ಟರು ...	ಡಿಟೋ	2	0	3	0	0	
		59	1. ಎಚ್. ರಾಮಾಚಾರ್ರು ..	ಡಿಟೋ	5	38	9	8	0	
		65	1. ನರಸಣ್ಣ ...	ಡಿಟೋ	10	11	13	0	0	
		54	1. ಬಾಲಯ್ಯ ...	ಡಿಟೋ	2	35	4	4	0	
		54	2. ನರಸಣ್ಣ ...	ಡಿಟೋ	3	35	6	8	0	
		54	3. ತಿರುಮಲಿ ...	ಡಿಟೋ	1	13	2	4	0	
		55	1. ಬಾಲಯ್ಯ ...	ಡಿಟೋ	4	8	6	8	0	

ತಾಲ್ಲೂಕು.	ಗ್ರಾಮ.	ಸರ್ವೆ ನಂ.	ಹಿಡುವಳೀದಾರ್ರ ಹೆಸರು.	ಖುಷ್ಕಿ, ತರಿ ಯಾ ಬಾಗಾಯತು.	ತೆಗದುಕೊಳ್ಳ ಬೇಕಾಗಿರುವ ವಿಸ್ತೀರ್ಣ.		ಆಕಾರ.			ಷರಾ.
					ಎ.	ಗು.	ರೂ.	ಆ.	ಪೈ.	
ದೊಡ್ಡಬಳ್ಳಾಪುರ.	ಕಾಕೋಳು.	55	2. ಕೆಂಪ ...	ಖುಷ್ಕಿ	2	38	5	0	0	ಸ್ವಲ್ಪ ಹೆಚ್ಚು ಕಡಮೆ ವಿಸ್ತೃ ಗ್ರಾಮಗಳು ತೆಗದುಕೊಳ್ಳಬೇಕಾಗಿರುವದರಿಂದ ವ್ಯತ್ಯಾಸವುಳ್ಳ ನಮೂನೆ ನಂಬರ್ ಚೆಕ್ಕು ಬಂದಿರುವ ಜಾಗ ನಮೂದಿಸಲ್ಪಟ್ಟಿದೆ.
		55	3. ನರಸಂಣ ...	ಡಿಟ್ಟೋ	3	14	5	12	0	
		55	4. ತಿರುಮ ..	ಡಿಟ್ಟೋ	1	0	1	12	0	
		58	1. ನರಸಂಣ .	ಡಿಟ್ಟೋ	4	35	8	0	0	
		60	1. ಸೀನಪ್ಪ ..	ಡಿಟ್ಟೋ	4	9	7	0	0	
		60	2. ದೊಡ್ಡ ವೆಂಕಟ ..	ಬಾಗಾಯತು	0	28	4	4	0	
		60	3. ಕೆಂಪ ...	ಖುಷ್ಕಿ	2	24	4	4	0	
		60	4. ಎಚ್. ವೆಂಕಟ ..	ಡಿಟ್ಟೋ	1	23	2	8	0	
		61	1. ಜಗಲಿಗ ..	ಡಿಟ್ಟೋ	1	33	2	8	0	
		61	2. ನರಸಂಣ ...	ಡಿಟ್ಟೋ	1	5	1	12	0	
		61	3. ಮುನಿಯ ..	ಡಿಟ್ಟೋ	4	27	6	12	0	
		62	ತೋಪು ..	ಡಿಟ್ಟೋ	1	23		...		
		63	1. ಭಾಗಿರತಮ್ಮ ..	ಡಿಟ್ಟೋ	1	36	3	0	0	
		63	2. ಬೈಲ ..	ಡಿಟ್ಟೋ	0	19	1	0	0	
		63	3. ನರಸಿಂಹಮೂರ್ತಿರಾಯರು ...	ಡಿಟ್ಟೋ	9	10	19	0	0	
		64	1. ನರಸಂಣ ..	ಡಿಟ್ಟೋ	5	10	7	0	0	
		66	1. ನರಸಂಣ .	ಡಿಟ್ಟೋ	6	5	9	12	0	
		76	1. ಬಾಲಯ್ಯ ...	ಡಿಟ್ಟೋ	2	14	3	8	0	
		76	2. ಹೊನ್ನಪ್ಪ ..	ಡಿಟ್ಟೋ	2	18	4	4	0	
		76	3. ತಿಮ್ಮರಸಯ್ಯ ..	ಡಿಟ್ಟೋ	1	8	2	0	0	
		76	4. ನರಸಂಣ ..	ಡಿಟ್ಟೋ	1	17	2	4	0	
			ಜುಮ್ಲಾ ..		93	16	149	0	0	
	ಸೊಂಣೇನಹಳ್ಳಿ.	17	1. ರಾಜಂಣ ..	ಖುಷ್ಕಿ	1	24	2	4	0	
		33	1. ತಳವಾರ ಹನುಮ ..	ಡಿಟ್ಟೋ	1	25	2	4	0	
		18	1. ಬಿ. ನರಸಿಂಹಯ್ಯ ..	ಡಿಟ್ಟೋ	3	30	5	0	0	
		25	1. ಚಿಕ್ಕರಾಮ ಮತ್ತು ಮಲಿಗಪ್ಪ..	ಡಿಟ್ಟೋ	6	28	9	8	0	
		26	1. ಹಳ್ಳಿತಿಮ್ಮ ..	ಡಿಟ್ಟೋ	1	1	1	0	0	
		38	1. ಚಿಕ್ಕಂಣ ...	ಡಿಟ್ಟೋ	2	18	5	0	0	
		31ಭಾಗ	1. ಅಪ್ಪಯ್ಯ ...	ಡಿಟ್ಟೋ	1	33	3	0	0	
		ಡಿಟ್ಟೋ	2. ಸಂಜೀವ ...	ಡಿಟ್ಟೋ	1	10	2	4	0	
		32	1. ಚಿಕ್ಕ	ಡಿಟ್ಟೋ	0	20	0	8	0	
			ಜುಮ್ಲಾ ..		20	29	30	12	0	
ನೆಲಮಂಗಲ.	ದಾಸೇನಹಳ್ಳಿ.	1—1	ಹನುಮಂತನ ಮಗ ಅಂಜನಿ ...	ಖುಷ್ಕಿ	2	25	3	0	0	
		1—2	ಚನ್ನೆಗೌಡನ ಮಗ ಚನ್ನ ..	ಡಿಟ್ಟೋ	3	11	3	8	0	
		1—3	ಗುಬ್ಬಿಸೆಟ್ಟಿ ..	ಡಿಟ್ಟೋ	2	9	2	8	0	
		2	ನಾಗಂಭಟ್ಟ ಸರಸ್ವತಮ್ಮ ...	ಡಿಟ್ಟೋ	1	35	2	4	0	
		3	ಗುಬ್ಬಿಯ ಮಗ ರಡ್ಡಿ ..	ಡಿಟ್ಟೋ	3	0	3	8	0	
		4—1	ಹನುಮಂತನ ಮಗ ಕೂಗಟಪ್ಪ ...	ಡಿಟ್ಟೋ	11	10	13	4	0	
		4—2	ಲಿಂಗಂಣನ ಮಗ ಬೈರ ...	ಡಿಟ್ಟೋ	1	33	2	4	0	
		4—3	ವೆಂಕಟಸುಬ್ಬಯ್ಯನ ಮಗ ಶೇಷಪ್ಪ...	ಡಿಟ್ಟೋ	2	2	2	8	0	
		5—1	ಡಿಟ್ಟೋ ..	ಡಿಟ್ಟೋ	4	2	5	4	0	
		5—2	ಚನ್ನೆಗೌಡನ ಮಗ ಮಲಿಗಪ್ಪ ...	ಡಿಟ್ಟೋ	2	38	3	12	0	
		5—3	ಕಾಟೆಗೌಡ	ಡಿಟ್ಟೋ	4	1	5	0	0	
		28—1	ಕಾಟೆಗೌಡ ಹನುಮಂತನ ಮಗ ಅಂಜನಿ	ಡಿಟ್ಟೋ	2	25	3	4	0	
		28—2	ಮಂಚೆಪಲ್ಲಿ ನಂಜುಂಡಯ್ಯ ...	ಡಿಟ್ಟೋ	1	18	1	12	0	
		28—3	ಕಾಟೆಗೌಡ ...	ಡಿಟ್ಟೋ	1	14	1	8	0	
		28—4	ಚನ್ನೆಗೌಡನ ಮಗ ಚನ್ನ ..	ಡಿಟ್ಟೋ	1	20	1	8	0	

ತಾಲ್ಲೂಕು.	ಗ್ರಾಮ.	ಸರ್ವೆ ನಂ.	ಹಿಡುವಳೀದಾರ್ರ ಹೆಸರು.	ಖುಷ್ಕಿ, ತರಿ ಯಾ ಬಾಗಾಯತು.	ತೆಗೆದುಕೊಳ್ಳಬೇಕಾಗಿರುವ ವಿಸ್ತೀರ್ಣ. ಎ.	ಗು.	ಆಕಾರ. ರೂ.	ಆ.	ಪೈ.	ಷರಾ.
ನೆಲಮಂಗಲ.	ದಾಸೇನಹಳ್ಳಿ.	28—5	ಗುಬ್ಬಿ ಮಗ ರಡ್ಡಿ ...	ಖುಷ್ಕಿ	2	25	3	0	0	ಸ್ವಲ್ಪ ಹೆಚ್ಚು ಕಡಮೆ ವಿಶಿಷ್ಟ ಗ್ರಾಮಗಳು ತೆಗದುಕೊಳ್ಳಬೇಕಾಗಿರುವದ್ದರಿಂದ ವಿಧಿಸಲ್ಪಟ್ಟ ನಮೂನೆ ಮೇರೆ ಚಕ್ಕುಬಂದಿಯು ಇಲ್ಲಿ ನಮೂದಿಸಲ್ಪಟ್ಟಿಲ್ಲ
		29	ಬೆಂಗಳೂರು ಶಂಕರಭಟ್ಟ, ಶಾಮಭಟ್ಟ	ಡಿಟೋ	1	1	1	4	0	
		30	ವಡಿಗೇನಹಳ್ಳಿ ಲಕ್ಷ್ಮೀನಾರಣಭಟ್ಟ, ಮತ್ತು ಸೂರಿಭಟ್ಟ	ಡಿಟೋ	1	10	1	8	0	
		31—1	ಭೈರಸಂದ್ರ ನಂಜನ ಮಗ ಹನುಮಂತ	ಡಿಟೋ	5	4	6	0	0	
		31—2	ಮಾಂಚೆಪಲ್ಲಿ ನಂಜುಂಡಯ್ಯ ..	ಡಿಟೋ	0	18	0	8	0	
		31—3	ಮಾಜರ್ ಪಿಲ್ಲಯ್ಯನ ಮಗ ಮುನಿಯ ...	ಡಿಟೋ	1	37	2	4	0	
		31—4	ಹನುಮಂತನ ಮಗ ದಾಸ ..	ಡಿಟೋ	0	39	1	4	0	
		31—5	ಚಿಕ್ಕಕನ್ನನ ಮಗ ಮತ್ತೆಹಳ್ಳಿ ..	ಡಿಟೋ	1	37	2	4	0	
		31—6	ಕಾಟೆಗೌಡ ..	ಡಿಟೋ	0	30	0	12	0	
		32	ವಸಂತಾಚಾರಿ, ನರಸಿಂಹಾಚಾರಿ .	ಡಿಟೋ	1	15	1	8	0	
		33	ಆಂಜನೇಯದೇವರು	ಡಿಟೋ	2	2	2	0	0	
		63—2	ಮಲ್ಲನ ಮಗ ಬ್ಯರ ...	ಡಿಟೋ	4	0	4	8	0	
		63—4	ಮುನಿನರಸನ ಮಗ ಚಿಕ್ಕನರಸ	ಡಿಟೋ	5	0	5	0	0	
		63—5	ಕೂಗಟಪ್ಪ ...	ಡಿಟೋ	5	20	6	0	0	
		67	ಉಮ್ಮರಸಾಬಿ ...	ಡಿಟೋ	9	0	5	8	0	
		126	ರಾಮಭದ್ರಶಾಸ್ತ್ರಿ .	ಡಿಟೋ	3	34	4	8	0	
		127	ಶಂಕರಿನಾರಾಯಣರಾಯ ಮತ್ತು ರಾಮಣ್ಣ.	ಡಿಟೋ	2	31	3	8	0	
		64	ಸರ್ಕಾರ ಬಂಜರ್ ..	ಡಿಟೋ	16	0	15	0	0	
		66	ಗೋಮಾಳ ಜಮೀನು ..	ಡಿಟೋ	26	14	...			
		125	ಶಾನಭೋಗ ಜನಾಮುತಿ ಲಕ್ಷ್ಮೀದೇವಮ್ಮ	ಡಿಟೋ	7	3	9	0	0	
		123—4	ರಾಯಪ್ಪ ...	ಡಿಟೋ	2	7	2	4	0	
		123—3	ಚಿಕ್ಕ ತಿರುಮಲ ..	ಡಿಟೋ	0	13	0	8	0	
			ಜುಮ್ಲಾ ...		147	23	132	12	0	
	ಹೆಸರಘಟ್ಟ.	93—1	ಸೇನರ ವೆಂಕಟರಾಮನ ಮಗ ಚೆಂಡ.	ಖುಷ್ಕಿ	1	31	2	4	0	
		93—5	ಸುಬ್ಬನ ಮಗ ಬ್ಯರ	ಡಿಟೋ	0	14	0	7	0	
		95—2	ವೆಂಕಟರಮಣಶಾಸ್ತ್ರಿಯವರು ...	ಡಿಟೋ	4	14	5	4	0	
		95—3	ಬೆಂಗಳೂರ ವೀರರಾಘವ ಭಟ್ಟರು ...	ಡಿಟೋ	1	0	1	4	0	
		88—1	ಸಿದ್ಧವೀರಯ್ಯ	ಡಿಟೋ	2	15	2	12	0	
		88—6	ಸಂಜೀವನ ಹನುಮಂತನ ಮಗ ವೆಂಕಟ	ಡಿಟೋ	4	30	5	4	0	
			ಜುಮ್ಲಾ ..		14	24	17	3	0	
	ಜೋಡಿ ಐವರಖಂಡಪುರ.	20	ಸದಾಶಿವ ದೀಕ್ಷಿತರು ಮತ್ತು ಇತರರು.	ಜೋಡಿ ಗ್ರಾಮವಾದ್ದರಿಂದ ತಪಸೀಲು ಗೊತ್ತಿಲ್ಲಾ.	14	8	...			
		22	ತಿಳುಕೊಳ್ಳಲಿಲ್ಲ ..		2	32	...			
		23	ಭೀಮಣ್ಣ, ರಾಮಸ್ವಾಮಯ್ಯ ಮತ್ತು ಇತರರು.		11	7	...			
		24	ಶೇಷಪ್ಪ, ರಾಮಕ್ಕ ಮತ್ತು ಇತರರು		9	28	..			
		27	ಪುಟ್ಟಯ್ಯಣ್ಣ, ಅಣ್ಣಪ್ಪ ಮತ್ತು ಇತರರು.		12	13	...			
		28	ಭೀಮಣ್ಣ ಮತ್ತು ಇತರರು ...		11	36	...			
		29	ರಾಮೇಶ್ವರಯ್ಯ, ರಾಮರಾವು ಮತ್ತು ಇತರರು.		13	31	..			
		33	ಶೇಷಪ್ಪ, ರಾಮಯ್ಯ ಮತ್ತು ಇತರರು		16	33	...			
		32	ತಿಳುಕೊಳ್ಳಲಿಲ್ಲ		3	8	..			
		34	ಭೀಮನಮುನಿಯಪ್ಪಶಾಸ್ತ್ರಿ ಮತ್ತು ಇತರರು.		17	17	..			
		35	ದೋಭಿ ಇನಾಂ ...		5	27	...			

ತಾಲ್ಲೂಕು.	ಗ್ರಾಮ.	ಸರ್ವೆ ನಂ.	ಹಿಡುವಳಿದಾರರ ಹೆಸರು.	ಖುಷ್ಕಿ, ತರಿ ಯಥವಾ ಬಾಗಾಯತು.	ತೆಗದುಕೊಳ್ಳ ಬೇಕಾಗಿರುವ ವಿಸ್ತೀರ್ಣ.		ಆಕಾರ.			ಷರಾ.
					ಎ.	ಗು.	ರೂ.	ಆ.	ಪೈ.	
ನೆಲಮಂಗಲ.	[illegible]	36	ಮಾರಮ್ಮ ಪೂಜಾರಿ ಇನಾಂ ...	[illegible]	4	19	...			[illegible]
		37	ಕಜಾಂ ಇನಾಂ ...		3	1	..			
		38	ತಳ್ವಾರಿ ಇನಾಂ ...		3	19	..			
		39	ಸೀಪಪ್ಪ, ಭೀಮಣ್ಣ ಮತ್ತು ಇತರರು.		20	30	..			
		40	ತೋಟ ಇನಾಂ ..		2	26	...			
			ಜುಮ್ಲಾ		153	15	..			
	[illegible]	88	[illegible]	ಖುಷ್ಕಿ	12	6	14	0	0	
		89		ಡಿಟೋ	7	26	8	0	0	
		90		ಡಿಟೋ	5	12	4	8	0	
		91		ಡಿಟೋ	12	27	14	0	0	
		95		ಡಿಟೋ	13	29	17	0	0	
		96		ಡಿಟೋ	6	38	8	8	0	
		98		ಡಿಟೋ	11	3	14	0	0	
		100		ಡಿಟೋ	10	17	11	0	0	
		101		ಡಿಟೋ	1	14	1	8	0	
		102		ಡಿಟೋ	2	3	2	4	0	
		92 (98)		ಡಿಟೋ	11	39	13	0	0	
					95	14	107	12	0	

ತಾರೀಖು 28ನೆ ಏಪ್ರೆಲ್ 1904.

ನಂ. ರೆ. 3249, ಸನ್ 1888ನೆ ಇಸವಿಯ IVನೆ ನಂಬರ್ ರೆಗ್ಯುಲೇಷನ್ ಆದ ವೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 236ನೆ ಸೆಕ್ಷನ್ ಅನುಸರಿಸಿ ಮಾಗಡಿ ತಾಲ್ಲೂಕಿನ ಸಾತನೂರು ಹೋಬಳಿಯಲ್ಲಿರುವ ಸುಬ್ರಾಯ ಬೇಡರಹಳ್ಳಿ ಜೋಡಿ ಗ್ರಾಮಕ್ಕೆ ಸದರೀ ಕೋಡಿನ VIII ರಿಂದ X ವರಿಗಿನ ಅಧ್ಯಾಯಗಳ ನಿಯಮಗಳನ್ನು ಲಗಾವು ಮಾಡುವ ಬಗ್ಯೆ ವೈಸೂರು ಸೀಮೆಯ ಘನವನ್ನೈರಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಅಪ್ಪಣೆ ಕೊಡುತ್ತಾರೆ.

ತಾರೀಖು 30ನೆ ಏಪ್ರೆಲ್ 1904.

ನಂ. ರೆ. 3262, ಸೀನಿಯರ್ ಅಸಿಸ್ಟೆಂಟ್ ಕಮಿಷನರಾದ ಮ॥ ಎಸ್. ವೈದ್ಯನಾಥ ಅಯ್ಯರ್ ಯವರಿಗೆ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರವರ ಕೋರ್ಟಿನ ಚಾರ್ಜಿನಲ್ಲಿದ್ದಾಗ 1904ನೆ ಜನವರಿ 30ನೆ ಮಾರ್ಕ್ಕಂ ರೆ. 2157ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಮಂಜೂರ್ಮಾಡಲ್ಪಟ್ಟಿದ್ದ ಆರು ದಿನಗಳ ಪ್ರಿವಿಲೇಜ್ ರಜಾ ರದ್ದು ಮಾಡಲ್ಪಟ್ಟಿರುತ್ತೆ. ಆ ಕಾಲದಲ್ಲಿ ಅವರಿಂದ ಉಪಯೋಗಿಸಲ್ಪಟ್ಟಿದ್ದ ನಾಲ್ಕು ದಿನಗಳ ರಜಾ ಪ್ರತ್ಯೇಕವಾಗಿ ಕ್ಯಾಜುಯಲ್ ರಜಾವಿನಂತೆ ಎಣಿಸಲ್ಪಟ್ಟಿರುತ್ತೆ.

ತಾರೀಖು 2ನೆ ಮೇ 1904.

ನಂ. ರೆ. 3270—ರೆ. ಷೈ. 30—1898, ಸನ್ 1904ನೆ ಮಾರ್ಚಿ 16ನೆ ಮಾರ್ಕ್ಕಂ 4632ನೆ ನಂಬರ್ ಗವರ್ನ್ಮೆಂಟಿನ ಇಸ್ತಿಹಾರ್ನಾಮೆಯಲ್ಲಿರುವ ಹುಕುಮಿನ ಅನುಸಾರವಾಗಿ ಮ॥ ಎಫ್. ಇ. ಸಿ. ಕಾರ್ ಯವರು 1904ನೆ ಮಾರ್ಚಿ 26ನೆ ತಾರೀಖಿನ ಪೂರ್ವಾಹ್ನದಲ್ಲಿ ಕೋಲಾರ ಡಿಸ್ಟ್ರಿಕ್ಟಿನ ಟ್ರೆಜರಿಯ ಚಾರ್ಜನ್ನು ಡೆಪ್ಯುಟಿ ಕಮಿಷನರಾದ ಮ॥ ಕೆ. ಪಿ. ಪುಟ್ಟಣ್ಣಶೆಟ್ಟಿಯವರಿಗೆ ಒಪ್ಪಿಸಿರುತ್ತಾರೆ.

ತಾರೀಖು 2ನೆ ಮೇ 1904.

ನಂ. ರೆ. 3274—ರೆ. ಷೈ. 35—1899, ವೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಚನ್ನಪಟ್ಟಣ ತಾಲ್ಲೂಕಿನ ಅಮಲ್ದಾರಾದ ಮ॥ ಎಚ್. ಸೀತಾರಾಮಯ್ಯನವರಿಗೆ 1904ನೆ ಫೆಬ್ರವರಿ 3ನೆ ತಾರೀಖಿನಾರಭ್ಯ 6 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು, ತಾಲ್ಲೂಕಿನ ಷಿರಸ್ತೇದಾರರು ಸದರೀ ಅಮಲ್ದಾರರು ರಜಾದಲ್ಲಿದ್ದ ಕಾಲದಲ್ಲಿ ಸದರೀ ತಾಲ್ಲೂಕಿನ ಚಾಲ್ತಿ ಕೆಲಸಗಳ ಚಾರ್ಜಿನಲ್ಲಿದ್ದರು.

ತಾರೀಖು 3ನೆ ಮೇ 1904.

ನಂ. ರ. 3283—ರೆ. ಫೈ. 54—1896, ಸ್1904ನೆ ಮಾರ್ಚಿ 16ನೆ ಮರ್ಸಂ ಜ. 4632ನೆ ನಂಬರ್ ಗವರ್ನ್ಮೆಂಟಿನ ಇಸ್ತಿಹಾರ್ನಾಮೆಯಲ್ಲಿ ಹುಕುಂ ಮಾಡಲ್ಪಟ್ಟಿದ್ದ ವರ್ಗಾವರ್ಗಿಗಳ ದೆಸೆಯಿಂದ, ತುಮಕೂರು ಡಿಸ್ಟ್ರಿಕ್ಟಿನ ಟ್ರೆಜರಿಯ ಚಾರ್ಜನ್ನು ಇದರಡೀ ಕಂಡಂತೆ ಒಪ್ಪಿಸಿರುತ್ತೆ :—

ಚಾರ್ಜ್ ಒಪ್ಪಿಸಿದ ಆಫಿಸರು.	ಚಾರ್ಜ್ ವಹಿಸಿದ ಆಫಿಸರು.	ಚಾರ್ಜ್ ಒಪ್ಪಿಸಿದ ತಾರೀಖು.
1. ಡೆಪ್ಯುಟಿ ಕಮಿಷನರಾದ ಮೆ|| ಕೆ. ಪಿ. ಪುಟ್ಟಣ್ಣ ಚೆಟ್ಟಿಯವರು.	ಅಸಿಸ್ಟೆಂಟ್ ಕಮಿಷನರಾದ ಮೆ|| ಪಿ. ಶ್ರೀನಿವಾಸರಾಯರು.	1904ನೆ ಮಾರ್ಚಿ 19ನೆ ತಾರೀಖು, ಪೂರ್ವಾಹ್ನದಲ್ಲಿ.
2. ಅಸಿಸ್ಟೆಂಟ್ ಕಮಿಷನರಾದ ಮೆ|| ಪಿ. ಶ್ರೀನಿವಾಸರಾಯರು.	ಅಫೀಷಿಯೇಟಿಂಗ್ ಡೆಪ್ಯುಟಿ ಕಮಿಷನರಾದ ಮೆ|| ಕೆ. ಎಸ್. ದೊರಸ್ವಾಮಿ ಅಯ್ಯರ್ ಯವರು.	1904ನೆ ಮಾರ್ಚಿ 26ನೆ ತಾರೀಖು, ಮಧ್ಯಾಹ್ನಾತ್ಪರ.

ತಾರೀಖು 3ನೆ ಮೇ 1904.

ನಂ. ರೆ. 3287—ಜ. ಫೈ. 86—1902—3, ಹಾಲಿ ಜಾರೀಲಿರತಕ್ಕ ಹುಕುಮಿಗೆ ಬದಲಾಗಿ ಘನವನ್ನೈದಿದ ಶ್ರೀಮನ್ಮಹಾರಾಜಾ ಸರ್ಕಾರದವರು, ಕಾಡು ಮೃಗಗಳನ್ನು ನಾಶಪಡಿಸಲಿಕ್ಕೋಸ್ಕರ ಎಲ್ಲಾ ಡಿಸ್ಟ್ರಿಕ್ಟುಗಳಲ್ಲಿ ಒಂದೇವಿಧವಾಗಿ ಆಚರಿಸುವ ಬಗ್ಗೆ ಇನಾಮುಗಳ ಇದರಡೀ ಕಂಡ ದರಗಳು ವಿಧಿಸಿರುತ್ತಾರೆ :—

ಕಾಡು ಮೃಗಗಳ ಹೆಸರು.	ಪ್ರತಿ ಒಂದು ಮೃಗಕ್ಕೆ ಕೊಡತಕ್ಕ ಇನಾಮಿನ ದರ.
	ರೂ.
1. ಹುಲಿಗಳು	35
2. ಚಿರತೆಗಳು	20
3. ಕಾಡು ನಾಯಿಗಳು	10
4. ತೋಳಗಳು	10
5. ಕತ್ತೆಕಿರುಬಗಳು	5
6. ಕಾಡು ಬೆಕ್ಕುಗಳು	2

2. ಖಜಾನೆಗಳಲ್ಲಿ ಕಾಡುಮೃಗಗಳ ಚರ್ಮಗಳಿಗೋಸ್ಕರ ಕೊಡತಕ್ಕ ಕ್ರಯಗಳು.—ಹುಲಿ ಚರ್ಮಗಳಿಗೆ 6 ರೂಪಾಯಿಗಳಂತೆಯೂ, ಚಿರತೆಗಳ ಚರ್ಮಗಳಿಗೆ 2 ರೂಪಾಯಿಗಳಂತೆಯೂ ಜಾಸ್ತಿ ಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,
ಎಲ್. ಅನಂತಸ್ವಾಮಿರಾವ್,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್ಮೆಂಟ್ ಅಫೀಷಿಯೇಟಿಂಗ್ ಸೆಕ್ರಿಟೆರಿ.

ಫಾರೆಸ್ಟು.

ಇಸ್ತಿಹಾರ್ನಾಮೆ.

ತಾರೀಖು 30ನೆ ಏಪ್ರೆಲ್ 1904.

ನಂ. 796—8962, ಮೈಸೂರು ಸರ್ವಿಸ್ ರೆಗ್ಯುಲೇಷನ್ಗಳ 188ನೆ ಆರ್ಟಿಕಲ್ ಅನುಸರಿಸಿ ಶಿವಮೊಗ್ಗ ಡಿಸ್ಟ್ರಿಕ್ಟಿನ ಫಾರೆಸ್ಟು ಸಬ್ ಅಸಿಸ್ಟೆಂಟ್ ಕನ್ಸರ್ವೇಟರಾದ ಮೆ|| ಪಿ. ನರಸಿಂಹಮೂರ್ತಿರಾಯರಿಗೆ 1904ನೆ ಮಾರ್ಚಿ 24ರ ಲಾಗಾಯತು 31ರ ವರಿವಿಗೆ 8 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

ಹುಕುಂ ಬಮೋಜಿಬ್,
ಎಂ. ಮುತ್ತಣ್ಣ,
ಫಾರೆಸ್ಟು ಇಲಾಖೆಯ ಗವರ್ನ್ಮೆಂಟ್ ಅಫೀಷಿಯೇಟಿಂಗ್ ಸೆಕ್ರಿಟೆರಿ.

ಪಬ್ಲಿಕ್ ವರ್ಕ್ಸ.

ಇಸ್ತಿಹಾರ್ನಾಮೆ.

ತಾರೀಖು 28ನೆ ಏಪ್ರೆಲ್ 1904.

ನಂ. 435—2555, ಮೆ|| ಎಸ್. ಶ್ರೀನಿವಾಸ ಅಯ್ಯರ್, ಬಿ. ಎ., ಎ. ಸಿ. ಇ., ಯವರು ಮಾಹೆ ಮುಜಕೂರು 27ನೆ ತಾರೀಖಿನಾರಭ್ಯ ಮಾಹೆಯಾನ 80 ರೂಪಾಯಿಗಳ ತಲಬಿನ ಮೇಲೆ ಹಂಗಾಮಿ ಮೂರನೆ ಕ್ಲಾಸಿನ ಸಬ್ ಅಸಿಸ್ಟೆಂಟ್ ಇಂಜನಿಯರಾಗಿ ನೊಕರರ್ನ್ಮಾಡಲ್ಪಟ್ಟು ಮೈಸೂರ ಪ್ಯಾಲೇಸ್ ಡಿವಿಜನಿಗೆ ನೇಮಿಸಲ್ಪಟ್ಟಿರುತ್ತಾರೆ.

ತಾರೀಖು 30ನೆ ಏಪ್ರೈಲ್ 1904.

ನಂ. 58—414, ತುಮಕೂರ ಡಿವಿಜನಿನ ಅಫೀಷಿಯೇಟಿಂಗ್ ಎಗ್ಜಿಕ್ಯೂಟಿವ್ ಇಂಜನಿಯರಾದ ಮೆ|| ಸಿ. ಮಾಧವರಾಯರಿಗೆ ಬರುವ ತಿಂಗಳಿನ 2ನೆ ತಾರೀಖಿನ ಲಾಗಾಯ್ತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 4ನೆ ಮೇ 1904.

ನಂ. 447—2620, ಕೋಲಾರ ಡಿವಿಜನಿಗೆ ಸೇರಿದ ಅಸಿಸ್ಟೆಂಟ್ ಇಂಜನಿಯರ್ ಮೆ|| ವಿ. ಅಯ್ಯಾಸ್ವಾಮಿ ಅಯ್ಯರ್, ಬಿ. ಎ., ಬಿ. ಸಿ. ಇ., ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,
ಡಬ್ಲ್ಯೂ. ಮೆಕಹರ್ಚೀ,
ಪಬ್ಲಿಕ್ ವರ್ಕ್ಸ್ ಇಲಾಖಾ, ಮೈಸೂರು ಗವರ್ನಮೆಂಟ್ ಸೆಕ್ರೆಟರಿ.

ಮುಜರೈ.

ಇಸ್ತಿಹಾರ್ನಾಮೆ.

ತಾರೀಖು 26ನೆ ಏಪ್ರೈಲ್ 1904, ಕ್ಯಾಂಪ್ ಯಳಂದೂರು.

ನಂ. 3358, ಇದರಡೀ ಕಂಡ ದೊಡ್ಡ ಮನುಷ್ಯರು ಮೈಸೂರಲ್ಲಿರುವ ನಂಜರಾಜ ಬಹದ್ದೂರು ಛತ್ರದ ಆಡಳಿತಕ್ಕೋಸ್ಕರ ಉಂಟಾದ ಕಮಿಟಿಯ ಮೆಂಬರುಗಳಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ:—

(I) ಮೈಸೂರು ಡಿಸ್ಟ್ರಿಕ್ಟಿನ ತತ್ಕಾಲದ ಡೆಪ್ಯುಟಿ ಕಮಿಷನರವರು .. ಪ್ರೆಸಿಡೆಂಟರು.
(II) ಮೈಸೂರು ಡಿವಿಜನಿನ ತತ್ಕಾಲದ ಎಗ್ಜಿಕ್ಯೂಟಿವ್ ಇಂಜನಿಯರು .. ಸೆಕ್ರೆಟೆರಿಯವರು.

(III) ಮೆ|| ಪುಟ್ಟಯ್ಯಾಜಿ ಅರಸಿನವರು .. ..
(IV) ಕೆಲಸದಿಂದ ನಿವೃತ್ತರಾದ ಅಸಿಸ್ಟೆಂಟ್ ಕಮಿಷನರ್ ಮೆ|| ಕೃಷ್ಣಮೂರ್ತಿರಾಯರು ..
(V) ಮೆ|| ಗುರಿಕಾರ್ ಬಸವಲಿಂಗಯ್ಯನವರು .. ...
} ಮೆಂಬರುಗಳು.

ಹುಕುಂ ಬಮೋಜಿಬ್,
ಎಂ. ಶಾಮರಾವ್,
ಅಫೀಷಿಯೇಟಿಂಗ್ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಛಾಪಿಸಿದ್ದು. [ನಂ. 18.

ಬೆಂಗಳೂರು, ಗುರುವಾರ, ಮೇ ತಾ|| 5, ಸನ 1904.

IIನೆ ಭಾಗ.

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀಲು ವಗೈರೇರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ.

ತಾರೀಖು 13ನೆ ಏಪ್ರೈಲ್ 1904ನೆ ಇಸವಿ.

1900ನೆ ಇಸವಿ ಫಾರೆಷ್ಟ್ ರೆಗ್ಯೂಲೇಷನ 40ನೆ ಸೆಕ್ಷನ ಮೇರೆ ಈ ಕೆಳಗೆ ನಮೂದಿರುವ ಸಾಗುವಾನಿ ಮತ್ತು ಬೀಟೆ ಮರಗಳು ಹೋದವರುಷ ಕಪಿಲಾನದಿಮೇಲೆ ತೇಲಿಕೊಂಡುಬಂದವುಗಳು ಹೆಗ್ಗಡದೇವನಕೋಟೆ ರೇಂಜ್ ಆಫಿಸರವರ ಚಾರ್ಜಿನಲ್ಲಿರುತ್ತವೆ. ಇದರ ಹಕ್ಕುದಾರು ಯಾರಾದರೂ ಇದ್ದಲ್ಲಿ ಸದರಿ ಮರಗಳ ಹಕ್ಕನ್ನು ಸ್ಥಿರಪಡಿಸಿ ಇರತಕ್ಕ ಲಿಖಿತವಾದ ಸ್ಟೇಟ್‌ಮೆಂಟನ್ನು ಈ ಲಾಗಾಯತು ಒಂದು ತಿಂಗಳ ವಳಗಾಗಿ ಮೈಸೂರು ಡಿಸ್ಟ್ರಿಕ್ಟ್ ಫಾರೆಷ್ಟ್ ಆಫಿಸರವರಲ್ಲಿ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಸದರಿ ಮರಗಳ ಬಾಧ್ಯತೆಯು ಯಾವ ಅಟಂಕವೂ ಇಲ್ಲದಂತೆ ಸರ್ಕಾರಕ್ಕೆ ಒಳಪಡಿಸಿಕೊಳ್ಳುವುದು.

ಸದರಿ ನಾಟಗಳನ್ನು ಸ್ವಾಧೀನಪಡಿಸಿಕೊಳ್ಳಲು ಹಕ್ಕುದಾರರಾಗತಕ್ಕವರು ಸದರಿ ತೊಲೆ ಪತ್ತೆದಾರಿ ಮತ್ತು ಭದ್ರಪಡಿಸಿದ್ದಕ್ಕೆ ತಗಲಿದ ಲಾಗವಡನ್ನು ಫಾರೆಷ್ಟ್ ಅಧಿಕಾರಿಗಳಿಗೆ ಕೊಡಲು ಬದ್ಧರಾಗಿರುತ್ತಾರೆ:—

ನಂಬರು.	ತೊಲೆ ವಿವರ.	ಗುರ್ತು.	ಲಾಂಬಿ.		ಸುತ್ತು.	ಸಲೆ ಅಡಿ.
			ಅಡಿ.	ಇಂಚ್.		
1	ಸಾಗುವಾನಿ ನಾಟ ..	92ನೆ ನಂಬರು ತೊಲೆ. ಇಟ್ನಹಳ್ಳಿ ಕಾಡಿನಲ್ಲಿ ಬಿದ್ದಿದೆ.	13	9	6′—6″	35
2	ಬೀಟೆ ನಾಟ ..	ಯಾವ ಗುರ್ತು ಮರದಮೇಲೆ ಇರುವದಿಲ್ಲ. ಪಟೇಲರ ಸ್ವಾಧೀನದಲ್ಲಿ ಕಿತ್ತೂರು ಗ್ರಾಮದಲ್ಲಿ ಬಿದ್ದಿರುತ್ತೆ.	17	0	3′—0″	10

1904ನೆ ಇಸವಿ ಏಪ್ರಲ್ ತಾರೀಖು 17ರಲ್ಲು.

ಇದರಿಂದ ಸಮಸ್ತ ಜನಗಳಿಗು ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿಸುವ ಮೈಸೂರು ಡಿಸ್ಟ್ರಿಕ್ಟಿಗೆ ಸಂಬಂಧ ಪಟ್ಟ ಡಿಪೋ ಮತ್ತು ಕೋಠಿಗಳಲ್ಲಿ ಪಸಾರೆ ಜಿನಸಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ :—

ನಂಬರು.	ಡಿಪೋ ಯಾ ಕೋಠಿ ಹೆಸರು.	ಹರಾಜು ತಾರೀಖು.	ಹರಾಜು ಮಾಡಿಸಲ್ಪಡುವ ಆಫಿಸರ ಹೆಸರು.	ಪಸಾರೆ ಜಿನಸಿ. ಅಳಲೆಕಾಯಿ.		ಜೇನುತುಪ್ಪ.		ಜೇನುಮೇಣ.		ಸಾಂಗದ ಕೊಂಬು.		ಸೀಗೆಕಾಯಿ.		ಅವಲ್ ಅರಗು.		ದುಯ್ಯಂ ಅರಗು.	
				ಮಣ	ವೀಸೆ	ಮ	ಪಾ	ಮ	ಪಾ	ಮ	ಪಾ	ಮ	ಪಾ	ಮ	ಪಾ	ಮ	ಪಾ
1	ಮೈಸೂರು ಫೊಡಿಯಾರ್ತು.	2—5—04	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು.	2,423	7	9	17	8	27	11	24	97	...	..	..	...	..
2	ಶ್ರೀರಂಗಪಟ್ಟಣದ ಕೋಠಿ	3—5—04	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು.	1,678	...	1	26	1	22	...	...		.	44	..	...	7
3	ಚಾಮರಾಜನಗರದ ಡಿಪೋ.	5—5—04	ಚಾಮರಾಜನಗರದ ರೇಂಜ್ ಆಫಿಸರವರು.	2,000	.	...	...	...	...	...	...	...	...	...	...	...	...
4	ಗುಂಡ್ಲು ಡಿಪೋ ...	7—5—04	ಗುಂಡ್ಲುಪೇಟೆ ಡಿಪೋ	4,000	...	1	26	6	27	1	5	..	...	...	...	...	...
5	ಹುಣಸೂರು ಕೋಠಿ.	9—5—04	ಹುಣಸೂರು ಡಿಪೋ	1,794	21	...	...	...	...	...	...	...	...	...	...	...	...

ಷರತ್ತು :—1887ನೆ ಇಸವಿ ಜೂನ್ 18ನೆ ತಾರೀಖಿನ ಮೈಸೂರು ಗೆಜೆಟ್ಟು 287–288ನೆ ಪೇಜುಗಳಲ್ಲಿ ಪ್ರಾಯಿಷು ಆಗಿರುವ 1887ನೆ ಇಸವಿ 11ನೆ ಜೂನ್ ತಾರೀಖಿನ ಮೈಸೂರು ಫಾರೆಸ್ಟು ಅಲಾಖಾ ಇನ್ಸ್ಪೆಕ್ಟರವರ ನೋಟಿಫಿಕೇಷನ್ ನೋಡಿ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ನೋಟಿಫಿಕೇಷನ್, ತಾರೀಖು 2ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗಿನ ತಖ್ತೆಯಲ್ಲಿ ಕಂಡ ಕಡೂರು ಡಿಸ್ಟ್ರಿಕ್ಟಿನ ಡಿಪೋಗಳಲ್ಲಿ ಆಯಾಯ ಡಿಪೋಗಳ ಬಾಜಾದಲ್ಲಿ ನಮೂದಿಸಿರುವ ನಾಟುಗಳನ್ನು ಆಯಾಯ ತಾರೀಖುಗಳಲ್ಲಿ ಕಡೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಹರಾಜು ಕೂಗಿಸಲ್ಪಡುತ್ತೆ.

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	ನಾಟುಗಳ ಜಾತಿ.	ಸಲೆ ಅಡಿ. ಅದದು.	ಅಡಿ.	ಷರಾ.
1	ತರೀಕೆರೆ ಡಿಪೋ ...	23ನೆ ಮೇ 1904	ಸಾಗುವಾನಿ ನಾಟು ..	200	6,000	ಹೆಚ್ಚು ಕಡಿಮೆ.
			ಸಾಗುವಾನಿ ಜಲಗುಗಳು ..	703	1,596	
			ನಂದಿ ನಾಟುಗಳು ...	25	852	
			ಮತ್ತಿ ...	171	4,039	
			ಯತ್ತ್ಯಾಗ ..	30	906	
			ಹುನ್ನಾಲು ...	20	600	
			ಕೊಯಿದ ಮತ್ತಿ ತೀರುಗಳು ..	210	419	
2	ಬೆಂಕೀಪುರ ಡಿಪೋ...	24ನೆ ಮೇ 1904	ಸಾಗುವಾನಿ ನಾಟು ..	15	400	
			ಮತ್ತಿ ನಾಟುಗಳು ...	100	1,500	
3	ದಾನಿವಾಸದ ಡಿಪೋ.	26ನೆ ಮೇ 1904	ಡಿಟೋ ..	150	4,500	
			ನಂದಿ ನಾಟುಗಳು ...	53	1,918	
			ಯತ್ತ್ಯಾಗ ...	54	2,088	
			ಹುನ್ನಾಲು ...	43	1,414	
4	ಬುರ್ಡ್ಸ ಡಿಪೋ ...	28ನೆ ಮೇ 1904	ಮತ್ತಿ ನಾಟುಗಳು ...	150	4,500	

ಹರಾಜು ಷರತ್ತು :—1895ನೆ ಇಸವಿ ಏಪ್ರಲ್ 25ನೆ ಮರ್ಸ್ಯಂ 15ನೆ ನಂಬರ ಗೆಜೆಟ್ಟಿನಲ್ಲಿ ಪ್ರಾಯಿಷ್ ಆಗಿರುವ 95ನೆ ಇಸವಿ ಮಾರ್ಚಿ 10ನೆ ಮರ್ಸ್ಯಂ ನಂಬರ 1529—R. F. 155–92ನೆ ಇಸ್ತಿಹಾರ್ನಂತೆ ನಡದುಕೊಳ್ಳಬೇಕು.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಕಡೂರು.

ಇಸ್ತಿಹಾರ್ನಾಮೆ.

ತಾರೀಖು 21ನೆ ಏಪ್ರಿಲ್ 1904.

1900ನೆ ಇಸವಿ XIನೆ ನಂಬರ ಮೈಸೂರು ಸೀಮೆಯ ಫಾರೆಸ್ಟು ರೆಗ್ಯುಲೇಷನ 17ನೆ ಸೆಕ್ಷನಿನ ವಿಧಿಗಳನುಸರಿಸಿ ಈ ಇಸ್ತಿಹಾರಿಗೆ ಜಂಟಿಸಿ ಇರುವ ಷೆಡ್ಯೂಲಿನಲ್ಲಿ ನಮೂದಿಸಿರುವ ಚಕ್ಕು ಬಂದಿಯುಳ್ಳ ಪ್ರದೇಶವು 1903ನೆ ನವಂಬರು ಗುರ್ತಿಗೆ ಲಾಗಾಯತು ಈ ಇಸ್ತಿಹಾರಿನ ಅಡೀಲಿ ವಿವರಿಸಿ ಇರುವ ಹಕ್ಕುಗಳ ಚಲಾವಣಿಗೆ ಒಳಪಟ್ಟು ಸ್ಟೇಟ್ ಫಾರೆಸ್ಟು ಆಗಿರುತ್ತದೆ.

ಷೆಡ್ಯೂಲ್.

ಡಿಸ್ಟ್ರಿಕ್ಟು	ತಾಲ್ಲೋಕು ಅಥವಾ ಉಪ ತಾಲ್ಲೋಕು	ಅಂದಾಜು ವಿಸ್ತೀರ್ಣ	ಫಾರೆಸ್ಟಿನ ಹೆಸರು	ಚಕ್ಕು ಬಂದಿ.
ಚಿತ್ರದುರ್ಗ.	ಹೊಳಲ್ಕೆರೆ ಮತ್ತು ಹೊಸದುರ್ಗದ ತಾಲ್ಲೋಕುಗಳು.	21¼ ಚದರ ಮೈಲಿ.	ಜೋಗಿನ ಗುಡ್ಡ	ಉತ್ತರಕ್ಕೆ.—ಲೋಕದೊಳಲು ಗ್ರಾಮದ ಸರ್ವೆ ನಂ. 7ರ ಈಶಾನ್ಯ ಮೂಲೆಯಿಂದ ಹೊರಟು ಲೈನ್ ಹೊಳಲ್ಕೆರೆಯ ಸರ್ವೆ ನಂ. 300ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ಸರ್ವೆ ನಂಬರ ಪೂರ್ವಪಾರ್ಶ್ವದ ಉದ್ದಕ್ಕೂ ಹುಣಸೇಪೇಟೆಯ ಸರ್ವೆ ನಂ. 3ರ ನೈರುತ್ಯ ಮೂಲೆಗೆ ಹೋಗಿ, ಸದರಿ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ.—ತರುವಾಯ ಮಲಸಿಂಗನಹಳ್ಳಿ ಸರ್ವೆ ನಂ. 102ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ; ಅನಂತರ ಸರ್ವೆ ನಂ. 99 ವ 98 ಇವುಗಳ ನಡುವೆ 4 ಫರ್ಲಾಂಗುಗಳ ದೂರ ಹೋಗಿ ಸರ್ವೆ ನಂ. 97ರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 89 ವ 87ರ ನಡುವೆ 3 ಫರ್ಲಾಂಗು ದೂರ ಹೋಗಿ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 84ರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 84, 83 ವ 82 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಅಖೈರು ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಅನಂತರ ಅದರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ದುಗ್ಗಾವಾರದ, ಸರ್ವೆ ನಂ. 48ರ ವಾಯವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 48, 46, 47, 54, 55, 58, 59 ಮತ್ತು 60 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಅಖೈರು ಸರ್ವೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದರ ದಕ್ಷಿಣಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 36ರ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 36, 37, 38, 40, 41, ವ 42 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಗೂಳೀಹಟ್ಟಿಯ ಸರ್ವೆ ನಂ. 21ರ ವಾಯುವ್ಯ ಮೂಲೆಗೆ ಹೋಗುತ್ತದೆ. ಅನಂತರ ಸರ್ವೆ ನಂ. 21, 22 ವ 5 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 24ರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ಸರ್ವೇ ನಂಬರಿನ ಉತ್ತರ ಪಾರ್ಶ್ವದ ಉದ್ದಕ್ಕೂ (ಅದರ ವಾಯುವ್ಯ ಮೂಲೆಗೆ) ಮಲ್ಲಾಪುರದ ಸರ್ವೆ ನಂ. 6ರ ಉತ್ತರ ಮೂಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಆಮೇಲೆ ಸರ್ವೆ ನಂ. 6 ವ 8 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 9ರ ಕೇವಲ ಉತ್ತರ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 9ರ ಉತ್ತರ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ಅನಂತರ ಸರ್ವೆ ನಂ. 9, 10, 12, 19, 20, ವ 31 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ, ದೊಡ್ಡಗಟ್ಟದ ಸರ್ವೆ ನಂ. 25ರ ವಾಯುವ್ಯ ಮೂಲೆಗೆ ಹೋಗುತ್ತದೆ. ಅನಂತರ ಅದೇ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 86ರ ಉತ್ತರ ಮತ್ತು ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ವ ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಚಕ್ಕುಬಂದಿ.
ಚಿತ್ರದುರ್ಗ.	ಹೊಳಲ್ಕೆರೆ ಮತ್ತು ಹೊಸದುರ್ಗದ ತಾಲ್ಲೂಕುಗಳು.	21¼ ಚದರ ಮೈಲಿ.	ದೇವರ ಗುಡ್ಡ.	ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 86 ವ 85 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ (ಸರ್ವೆ ನಂ. 85ರ ಆಗ್ನೇಯ ಮೂಲೆಗೆ) ಬೈಲಹಳ್ಳಿ ಸರ್ವೆ ನಂ. 10ರ ವಾಯುವ್ಯ ಮೂಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ತರುವಾಯ ಅದೇ ಗ್ರಾಮದ ಸರ್ವೆ ನಂ. 10, 3 ವ 8 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಕರಡೀಕಟ್ಟೆಯ ಸರ್ವೆ ನಂ. 3ರ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 3, 5, 6, ವ 7 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ನಂಸೀಪುರದ ಸರ್ವೆ ನಂ. 11ರ ವಾಯುವ್ಯ ಮೂಲೆಗೆ ಹೋಗುತ್ತದೆ. ಅನಂತರ ಸರ್ವೆ ನಂ. 11 ವ 9 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ದೇವಪುರದ ಸರ್ವೆ ನಂ. 217ರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ಸರ್ವೇ ನಂಬರಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 210ರ ವಾಯುವ್ಯ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ಅನಂತರ ಸರ್ವೇ ನಂ. 214ರ ಉತ್ತರ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯಮೂಲೆಗೆ ಹೋಗಿ ತರುವಾಯ ಸರ್ವೇ ನಂ. 214 ಮತ್ತು 213ರ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಹೋಗುತ್ತದೆ. ಆಮೇಲೆ ಸರ್ವೆ ನಂ. 213ರ ನೈರುತ್ಯ ಪಾರ್ಶ್ವದ ಉದ್ದಕ್ಕೂ ಹೊನ್ನೇನಹಳ್ಳಿ ಸರ್ವೆ ನಂ. 110ರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಸದರಿ ಗ್ರಾಮದ ಸರ್ವೆ ನಂ. 110 ವ 107 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 107ರ ನೈರುತ್ಯ ಮೂಲೆಗೆ ಹೋಗುತ್ತದೆ. ಅನಂತರ ಸರ್ವೆ ನಂ. 107ರ ದಕ್ಷಿಣ ಪಾರ್ಶ್ವದ ಮತ್ತು ಸರ್ವೆ ನಂ. 104ರ ಪಶ್ಚಿಮ ಮತ್ತು ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 102ರ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 102, 101, 99 ವ 95 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಗೊರವಿನ ಕಲ್ಲಿನ ಸರ್ವೆ ನಂ. 89ರ ವಾಯುವ್ಯ ಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ.—ತರುವಾಯ ಗೊರವಿನಕಲ್ಲಿನ ಸರ್ವೆ ನಂ. 89ರ ಉತ್ತರ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಚಿನ್ನಾಪುರದ ಸರ್ವೆ ನಂ. 17ರ ನಡುವೆ 4 ಫರಲಾಂಗುದೂರ ಹೋಗಿ, ಶಿವನೀಕಟ್ಟೆ ಗ್ರಾಮದ ಸರ್ವೆ ನಂ. 15ರ ವಾಯುವ್ಯ ಮೂಲೆಗೆ ಹೋಗುತ್ತದೆ. ಪಶ್ಚಿಮಕ್ಕೆ.—ಆಮೇಲೆ ಶಿವನಿಕಟ್ಟೆಯ ಸರ್ವೆ ನಂ. 15ರ ಈಶಾನ್ಯದ ಮೂಲೆಯ ಉದ್ದಕ್ಕೂ ಚಿನ್ನಾಪುರದ ಸರ್ವೆ ನಂ. 18ರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 18, 15 ವ 14 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ 14ರ ಈಶಾನ್ಯ ಮೂಲೆಗೆ ಹೋಗುತ್ತದೆ. ಅನಂತರ ಸರ್ವೆ ನಂ. 14ರ ಉತ್ತರ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 11ರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 11 ವ 12 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಹೋಗುತ್ತದೆ. ತರುವಾಯ ಸರ್ವೆ ನಂ. 13ರ ನಡುವೆ ಸುಮಾರು 300 ಗಜಗಳದೂರ ಹೋಗಿ ಮಥರೆಯ ಸರ್ವೆ ನಂ. 35ರ ಆಗ್ನೇಯ ಮೂಲೆಗೆ ಹೋಗುತ್ತದೆ. ಅನಂತರ ಸರ್ವೆ ನಂ. 35, 34 ವ 32 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಅಜ್ಜೈರು ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. (ಮತ್ತು

ಷೆಡ್ಯೂಲ್.

ಜಿಲ್ಲೆ.	ತಾಲ್ಲೂಕು, ಜಹಗೀರು ಗ್ರಾಮ.	ಸುಮಾರು ವಿಸ್ತೀರ್ಣ.	ಪ್ಲಾಂಟು ಹೆಸರು.	ಚೆಕ್ಕುಬಂದಿ.
ಚಿತ್ರದುರ್ಗ.	ಹೊಳಲ್ಕೆರೆ ಮತ್ತು ಹೊಸದುರ್ಗದ ತಾಲ್ಲೂಕುಗಳು.	21¼ ಚದರ ಮೈಲಿ.	ಕೆಲ್ದುರ್ಗ.	ದಾಸರಹಳ್ಳಿ ಸರ್ವೆ ನಂ. 9ರ ಆಗ್ನೇಯ ಮೂಲೆಗೆ ಹೋಗುತ್ತದೆ.) ಆಮೇಲೆ ಸರ್ವೆ ನಂ. 9, 1, 2 ವ 3 ಇವುಗಳ ಪೂರ್ವ ಪಾರ್ಶ್ವಗಳ ಸರ್ವೆ ನಂ. 3ರ ಉತ್ತರ ಪಾರ್ಶ್ವದ ಮತ್ತು ಸರ್ವೆ ನಂ. 5ರ ಪೂರ್ವ ಪಾರ್ಶ್ವದ ಉದ್ದಕ್ಕೂ ದೇವಗೆರೆಯ ಸರ್ವೆ ನಂ. 44ರ ಆಗ್ನೇಯ ಮೂಲೆಗೆ ಹೋಗುತ್ತದೆ. ಅನಂತರ ಸರ್ವೆ ನಂ. 44, 43, 40 ವ 33 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಆಖೈರು ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಈಶಾನ್ಯ ದಿಕ್ಕಿಗೆ ತಿರುಗಿ ಸರ್ವೆ ನಂ. 35ರ ನಡುವೆ 4 ಫರಲಾಂಗು ದೂರವೂ, ಕಲ್ಲಹಳ್ಳಿಯ ಸರ್ವೆ ನಂ. 20ರ ನಡುವೆ 132 ಗಜಗಳ ಫಾಸಲೆಯೂ ಹೋಗಿ, ಸರ್ವೆ ನಂ. 21ರ ಆಗ್ನೇಯ ಮೂಲೆಗೆ ಹೋಗುತ್ತದೆ. ಅನಂತರ ಸದರಿ ಸರ್ವೆ ನಂ. 21ರ ಪೂರ್ವ ಪಾರ್ಶ್ವದ ಉದ್ದಕ್ಕೂ, ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 21 ವ 22ರ ಉತ್ತರ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 22ರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 28 ವ 15ರ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಹೀರೂರ ಸರ್ವೆ ನಂ. 54ರ ನೈರುತ್ಯ ಮೂಲೆಗೆ ಹೋಗುತ್ತದೆ. ಅನಂತರ ಸರ್ವೆ ನಂ. 54ರ ದಕ್ಷಿಣ ಮತ್ತು ಪೂರ್ವ ಪಾರ್ಶ್ವಗಳ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗಿ ಮತ್ತು ಮಾವಿನಕಟ್ಟೆಯ ಸರ್ವೆ ನಂ. 25ರ ನಡುವೆ 3 ಫರ್ಲಾಂಗುದೂರ ಹೋಗಿ ಆಮೇಲೆ ಸರ್ವೆ ನಂ. 24ರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 24 ವ 22ರ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 22ರ ಈಶಾನ್ಯ ಮೂಲೆಗೆ ಹೋಗುತ್ತದೆ. ಅನಂತರ ಮಾವಿನ ಕಟ್ಟೆಯ ಸರ್ವೆ ನಂ. 25ರ ನಡುವೆ 1½ ಫರ್ಲಾಂಗು ಫಾಸಲೆಯೂ ಬೀಸನಹಳ್ಳಿಯ ಸರ್ವೆ ನಂ. 25ರ ನಡುವೆ 4⅛ ಫರ್ಲಾಂಗು ದೂರವೂ ಹೋಗಿ ತರುವಾಯ ಕಬ್ಬಳದ ಸರ್ವೆ ನಂ. 23ರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಕಬ್ಬಳದ ಸರ್ವೆ ನಂ. 23, 24, ವ 21ರ ಮತ್ತು ಉಗಣೆ ಕಟ್ಟೆಯ ಸರ್ವೆ ನಂ. 11, 12 ವ 9ರ ಪೂರ್ವ ಪಾರ್ಶ್ವಗಳ ಉದ್ದಕ್ಕೂ, ಆಖೈರು ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ಅನಂತರ ಸರ್ವೆ ನಂ. 9 ವ 8ರ ಉತ್ತರ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 70ರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಸೊಂತೇನಹಳ್ಳಿಯ ಸರ್ವೆ ನಂ. 70, 66 ವ 48 ಇವುಗಳ ಪೂರ್ವ ಭಾಗಗಳ ಉದ್ದಕ್ಕೂ, ಸರ್ವೆ ನಂ. 47ರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ನಂಬರಿನ ದಕ್ಷಿಣ ಮತ್ತು ಪೂರ್ವ ಪಾರ್ಶ್ವಗಳ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ಅನಂತರ ಸರ್ವೆ ನಂ. 46ರ ವಾಯುವ್ಯ ಮತ್ತು ಉತ್ತರ ಪಾರ್ಶ್ವಗಳ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ (ಗುಡ್ಡಸಾಲಿನ ತಪ್ಪಲ ಉದ್ದಕ್ಕೂ) ಸರ್ವೆ ನಂ. 23ರ ಈಶಾನ್ಯ ಮೂಲೆಯಿಂದ 90 ಗಜಗಳ ಫಾಸಲೆಯಲ್ಲಿ ಸರ್ವೆ ನಂ. 26ರ ಉತ್ತರ ಭಾಗವನ್ನು ಹಾದು ಅದೇ ಸರ್ವೆ ನಂಬರ ನಡುವೆ 9¾ ಫರ್ಲಾಂಗುದೂರ ಹೋಗಿ ಮತ್ತು ಸರ್ವೆ ನಂ. 25ರ ನಡುವೆ 5⅛ ಫರ್ಲಾಂಗುದೂರ ಹೋಗಿ 88 ಗಜಗಳ ಫಾಸಲೆಯಲ್ಲಿ ಸರ್ವೆ ನಂ. 24 ವ 13 ಇವುಗಳ ಪೂರ್ವ ಪಾರ್ಶ್ವಗಳಿಗೆ ಸಮಾನಾಂತರವಾಗಿ ಹೋಗಿ ಲೋಕದೊಳಲು ಗ್ರಾಮದ ದಕ್ಷಿಣ ಸರಹದ್ದನ್ನು ಮುಟ್ಟುತ್ತದೆ. ಅನಂತರ ಆ ಸರಹದ್ದಿನ ಉದ್ದಕ್ಕೂ 1 ಫರ್ಲಾಂಗುದೂರ ಪಶ್ಚಿಮಕ್ಕೆ ಹೋಗುತ್ತದೆ. ತರುವಾಯ ಲೋಕದೊಳಲು ಗ್ರಾಮದ ಸರ್ವೆ ನಂ. 16ರ ನಡುವೆ ಉತ್ತರಕ್ಕೆ 2⅕ ಫರ್ಲಾಂಗುದೂರ ಹೋಗಿ ಸರ್ವೆ ನಂ 15ರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 15, 14 ವ 13 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಆಖೈರು ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಹೋಗಿ ಅನಂತರ 3⅛ ಫರ್ಲಾಂಗುದೂರ ಸರ್ವೆ ನಂ. 8ರ ನಡುವೆ ಹೋಗಿ, ಸರ್ವೆ ನಂ. 7ರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 7ರ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

ಷರಾ — (ಎ) ಹಾದಿಯ ಇದರಡಿ ಕಂಡ ಹಕ್ಕುಗಳು ಬ್ಲಾಕಿನಲ್ಲಿ ಕೊಡಲ್ಪಟ್ಟಿರುತ್ತವೆ —

(1) ಮಲಸಿಂಗನ ಹಳ್ಳಿಯಿಂದ ಲೋಕದೊಳಲು ವರೆವಿಗೆ 6 ಅಡಿ ಅಗಲವುಳ್ಳ ಮತ್ತು ಸುಮಾರು 1¼ ಮೈಲಿ ಉದ್ದವಾದ ಕಾಲುಹಾದಿಯು ವರ್ಷವೆಲ್ಲಾ ಜನಗಳಿಗೂ ಮತ್ತು ದನಗಳಿಗೂ ಬಿಟ್ಟಿರುತ್ತದೆ. ಈ ಹಾದಿಯು ಸ್ಟೇಟ್ ಫಾರೆಸ್ಟನ್ನು ಮಲಸಿಂಗನ ಹಳ್ಳಿ ಸರ್ವೆ ನಂ. 87ರ ಈಶಾನ್ಯ ಮೂಲೆಯ ಸಮೀಪದಲ್ಲಿ ಪ್ರವೇಶಿಸಿ ನೈರುತ್ಯದಿಕ್ಕಾಗಿಯೂ ಅನಂತರ ಪಶ್ಚಿಮ ದಿಕ್ಕಾಗಿಯೂ ಸುಮಾರು 1¼ ಮೈಲಿ ಹೋಗಿ ಲೋಕದೊಳಲು ಸರ್ವೆ ನಂ. 13ರ ಈಶಾನ್ಯ ಮೂಲೆಯಿಂದ ಸುಮಾರು ಅರ್ಧ ಫರ್ಲಾಂಗ್ ಫಾಸಲೆಯಲ್ಲಿ ಸ್ಟೇಟು ಫಾರೆಸ್ಟನ್ನು ಬಿಡುತ್ತದೆ.

(2) ಗೊಲ್ಲಹಟ್ಟಿಯಿಂದ ಮಾವಿನ ಕಟ್ಟೆಯ ವರೆವಿಗೆ 12 ಅಡಿ ಅಗಲ ಮತ್ತು ಸುಮಾರು 1¼ ಮೈಲಿ ಉದ್ದವುಳ್ಳ ಭಂಡಿ ಜಾಡು ವರ್ಷವೆಲ್ಲಾ ಜನಗಳಿಗೂ, ದನಗಳಿಗೂ, ವ ಭಂಡಿಗಳಿಗೂ ಬಿಟ್ಟಿರುತ್ತೆ. ಈ ಭಂಡಿಜಾಡು ಮಲ್ಲಾಪುರದ ಸರ್ವೆ ನಂ. 12ರ ನೈರುತ್ಯ ಮೂಲೆಯಲ್ಲಿ ಸ್ಟೇಟ್ ಫಾರೆಸ್ಟನ್ನು ಪ್ರವೇಶಿಸಿ ಸ್ವಲ್ಪ ಪಶ್ಚಿಮದಿಕ್ಕಾಗಿ ಸುಮಾರು 1¼ ಮೈಲಿದೂರ ಹೋಗಿ ಮಾವಿನಕಟ್ಟೆ ಸರ್ವೆ ನಂ. 24ರ ಈಶಾನ್ಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

(3) ದೊಡ್ಡ ಗಟ್ಟದಿಂದ ಸಂತೇನಹಳ್ಳಿ ವರೆವಿಗೆ 2¾ ಮೈಲಿ ಉದ್ದವಾದ ಮತ್ತು 12 ಅಡಿ ಅಗಲವುಳ್ಳ ಭಂಡೀಜಾಡು ಜನಗಳಿಗೂ, ದನಗಳಿಗೂ ಮತ್ತು ಭಂಡಿಗಳಿಗೂ ಸಂವತ್ಸರವೆಲ್ಲಾ ಬಿಟ್ಟಿರುತ್ತದೆ. ಈ ಭಂಡೀಜಾಡು ಮಲ್ಲಾಪುರದ ಸರ್ವೆ ನಂ. 1ರ ಉತ್ತರದ ಅಂಚಿನಲ್ಲಿ (ಸ್ವಲ್ಪಮಟ್ಟಿಗೆ) ಮಧ್ಯಸ್ಥಳದಲ್ಲಿ ಸ್ಟೇಟ್ ಫಾರೆಸ್ಟನ್ನು ಪ್ರವೇಶಿಸಿ ವಾಯುವ್ಯ ದಿಕ್ಕಿಗೆ ಸುಮಾರು 2¾ ಮೈಲಿ ದೂರ ಹೋಗಿ ಸಂತೇನಹಳ್ಳಿ ಸರ್ವೆ ನಂ. 46ರ ಉತ್ತರದ ಅಂಚಿನ ಮಧ್ಯಸ್ಥಳದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(4) ಜಾನಕಲ್ಲಿನಿಂದ ಮಧ್ರೆ ವರೆಗೆ 2¾ ಮೈಲಿಗಳು ಉದ್ದವಾದ ಮತ್ತು 18 ಅಡಿ ಅಗಲವುಳ್ಳ ಭಂಡೀಜಾಡು ಜನಗಳಿಗೂ ದನಗಳಿಗೂ ಮತ್ತೂ ಗಾಡಿಗಳಿಗೂ ಸಂವತ್ಸರವೆಲ್ಲಾ ಬಿಟ್ಟಿರುತ್ತದೆ. ಈ ಭಂಡೀಜಾಡು ಹೊನ್ನೇನಹಳ್ಳಿ ಸರ್ವೆ ನಂ. 99ರ ವಾಯುವ್ಯ ಮೂಲೆಯಲ್ಲಿ ಸ್ಟೇಟ್ ಫಾರೆಸ್ಟನ್ನು ಪ್ರವೇಶಿಸಿ ನೈರುತ್ಯ ದಿಕ್ಕಾಗಿ ಸುಮಾರು 2¾ ಮೈಲಿ ದೂರ ಹೋಗಿ ಮಧ್ರೆ ಸರ್ವೆ ನಂ. 34ರ ಆಗ್ನೇಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

(5) ಈ ಕೆಳಗೆ ನಮೂದಿರುವ ದೇವಾಲಯಗಳಿಗೂ, ಪುಣ್ಯಸ್ಥಳಗಳಿಗೂ, ಹಾದಿಗಳು ಕೆಳಗೆ ಹೇಳಿರುವ ಮೇರೆಗೆ ಸಮಸ್ತ ಜನಗಳ ಉಪಯೋಗದ ಬಗ್ಗೆ ಬಿಡಲ್ಪಟ್ಟಿರುತ್ತವೆ :—

ನಂಬರು.	ದೇವಸ್ಥಾನ ವೊದ ಲಾದವುಗಳ ಹೆಸರು.	ಸ್ಥಳ.	ದೇವಾಲಯ ಮೊದಲಾದವುಗಳಿಗೆ ದಾರಿ.
1	ರಂಗನಾಥಸ್ವಾಮಿ ದೇವಸ್ಥಾನ.	ದುಗ್ಗಾವಾರದ ಸರ್ವೆ ನಂ. 45ರ ದಕ್ಷಿಣ ಭಾಗದಲ್ಲಿ	ದುಗ್ಗಾವಾರದ ಸರ್ವೆ ನಂ. 59ರಿಂದ ಹೋಗುವ 2¾ ಫರ್ಲಾಂಗ್ ಉದ್ದ ಮತ್ತು 6 ಅಡಿ ಅಗಲವುಳ್ಳ ಕಾಲುಹಾದಿಯು ಜನಗಳಿಗೆ ಮಾತ್ರ ಬಿಡಲ್ಪಟ್ಟಿರುತ್ತೆ.
2	ದೇವಗನ್ನಿಕೆ ಕೊಳ ..	ದುಗ್ಗಾವಾರದ ಗ್ರಾಮದ ಸರಹದ್ದಿಗೆ ಸಮೀಪದಲ್ಲಿ ಸರ್ವೆ ನಂ. 45ರಲ್ಲಿ.	1½ ಫರ್ಲಾಂಗು ಉದ್ದವುಳ್ಳ ಮತ್ತೂ 6 ಅಡಿ ಅಗಲವಾದ ಕಾಲು ಹಾದಿಯು ಜನಗಳಿಗೆ ಮಾತ್ರ ಬಿಡಲ್ಪಟ್ಟಿರುತ್ತೆ. ಈ ಹಾದಿಯು ಮೇಲೆ ಹೇಳಿದ ಹಾದಿಯಿಂದ ಪಡೆದು ನೈರುತ್ಯ ದಿಕ್ಕಿಗೆ ಹೋಗುತ್ತದೆ.
3	ಕಾರಂಣನಕೆರೆ ..	ಕರಡೀಕಟ್ಟೆಯ ಸರ್ವೆ ನಂ 18ರಲ್ಲಿ.	8½ ಫರ್ಲಾಂಗು ಉದ್ದವೂ 6 ಅಡಿ ಅಗಲವೂ ವುಳ್ಳ ಕಾಲುಹಾದಿಯು ಜನ ಮತ್ತೂ ಜಾನುವಾರುಗಳಿಗೆ ಬಿಡಲ್ಪಟ್ಟಿರುತ್ತೆ. ಈ ಹಾದಿಯು ಬೈಲಹಳ್ಳಿ ಸರ್ವೆ ನಂ. 8ರ ನೈರುತ್ಯ ಮೂಲೆಯಲ್ಲಿ ಸ್ಟೇಟ್ ಫಾರೆಸ್ಟನ್ನು ಪ್ರವೇಶಿಸಿ ಕರಡೀಕಟ್ಟೆಯ ಸರ್ವೆ ನಂ. 4ರ ನಡುವೆಯೂ, ಸರ್ವೆ ನಂ. 8ರ ನಡುವೆಯೂ ಹೋಗುತ್ತದೆ.
4	ಮಾರಮ್ಮನಗುಡಿ ..	ಗಲಜೇನಹಳ್ಳಿ ಸರ್ವೆ ನಂ. 5ರಲ್ಲಿ.	ಜಾನಕಲ್ಲಿನಿಂದ ಮಧ್ರೆಗೆ ಹೋಗುವ ಭಂಡೀಜಾಡು.
5	ಡಿಟೋ ...	ಗಲಜೇನಹಳ್ಳಿ ಸರ್ವೆ ನಂ. 12ರಲ್ಲಿ.	
6	ಉಜ್ಜಯಿನಿ ದೇವರ ಗುಡಿ.	ದಾಸರಹಳ್ಳಿಯ ಸರ್ವೆ ನಂ. 6ರಲ್ಲಿ.	3 ಫರ್ಲಾಂಗ ಉದ್ದವೂ 20 ಅಡಿ ಅಗಲವೂ ವುಳ್ಳ ಭಂಡೀಜಾಡು, ಜನ, ಜಾನುವಾರು ವ ಭಂಡಿಗಳಿಗೆ ಬಿಡಲ್ಪಟ್ಟಿರುತ್ತೆ. ಈ ಜಾಡು ದಾಸರಹಳ್ಳಿ ಸರ್ವೆ ನಂ. 2ರ ಪೂರ್ವ ದಿಕ್ಕಿನ ಮೂಲೆಯಲ್ಲಿ ಸ್ಟೇಟ್ ಫಾರೆಸ್ಟನ್ನು ಪ್ರವೇಶಿಸಿ ಸರ್ವೆ ನಂ. 6ರ ನಡುವೆ ಹೋಗುತ್ತದೆ.

ನಂಬರು.	ದೇವಸ್ಥಾನ ಮೊದಲಾದವುಗಳ ಹೆಸರು.	ಸ್ಥಳ.	ದೇವಾಲಯ ಮೊದಲಾದವುಗಳಿಗೆ ದಾರಿ.
7	ಶಂಭುಲಿಂಗಸ್ವಾಮಿ ದೇವಸ್ಥಾನ.	ದೇವಗೆರೆಯ ಸರ್ವೇ ನಂ. 39ರಲ್ಲಿ.	3 ಫರ್ಲಾಂಗ್ ಉದ್ದವೂ, 20 ಅಡಿ ಅಗಲವೂ ವುಳ್ಳ ಭಂಡಿ ಜಾಡು, ಜನಗಳಿಗೂ, ದನಗಳಿಗೂ ಮತ್ತು ಭಂಡಿಗಳಿಗೂ ಬಿಡಲ್ಪಟ್ಟಿರುತ್ತದೆ. ಈ ಜಾಡು ದೇವಗೆರೆಯ ಸರ್ವೆ ನಂ. 40ರ ಆಗ್ನೇಯ ಮೂಲೆಯ ಸಮೀಪದಲ್ಲಿ ಸ್ಟೇಟ್ ಫಾರೆಸ್ಟನ್ನು ಪ್ರವೇಶಿಸಿ ಸರ್ವೆ ನಂ. 39ರ ನಡುವೆ ಹೋಗುತ್ತದೆ.
8	ರಂಗಸ್ವಾಮಿ ದೇವಸ್ಥಾನ.	ಕಲ್ಲಹಳ್ಳಿಯ ಸರ್ವೆ ನಂ. 16ರಲ್ಲಿ.	3 ಫರ್ಲಾಂಗ್ ಉದ್ದವೂ, 6 ಅಡಿ ಅಗಲವೂ ವುಳ್ಳ ಕಾಲುಹಾದಿಯು ಜನಗಳಿಗೂ ಮತ್ತು ದನಗಳಿಗೂ ಬಿಡಲ್ಪಟ್ಟಿರುತ್ತದೆ. ಈ ಕಾಲುಹಾದಿಯು ಕಲ್ಲಹಳ್ಳಿ ಸರ್ವೆ ನಂ. 21ರ ವಾಯುವ್ಯ ಮೂಲೆಯಲ್ಲಿ ಸ್ಟೇಟ್ ಫಾರೆಸ್ಟನ್ನು ಪ್ರವೇಶಿಸಿ ಸರ್ವೆ ನಂ. 18ರ ನಡುವೆ ಹೋಗುತ್ತದೆ.
9	ಆಂಜನೇಯ್ಯನ ದೇವಸ್ಥಾನ.	ಮಾವಿನ ಕಟ್ಟೆಯ ಸರ್ವೆ ನಂ. 25ರಲ್ಲಿ.	80 ಗಜ ಉದ್ದವಾದ ಮತ್ತೂ 12 ಅಡಿ ಅಗಲವುಳ್ಳ ಭಂಡೀಜಾಡು ಜನಗಳಿಗೂ, ದನಗಳಿಗೂ ವ ಭಂಡಿಗಳಿಗೂ ಬಿಡಲ್ಪಟ್ಟಿರುತ್ತದೆ. ಈ ಜಾಡು ಮಾವಿನಕಟ್ಟೆಯಿಂದ ಗೂಳೀಹಟ್ಟಿಗೆ ಹೋಗುವ ಭಂಡೀಜಾಡಿನಿಂದ ಹೊರಡುತ್ತದೆ.
10	ಬೀರದೇವರ ಕಲ್ಲು ..	ಕಬ್ಬದ ಸರ್ವೆ ನಂ. 22ರಲ್ಲಿ.	100 ಗಜ ವುದ್ದವುಳ್ಳ ಮತ್ತೂ 6 ಅಡಿ ಅಗಲವಾದ ಕಾಲುಹಾದಿಯು ಜನಗಳಿಗೆ ಮಾತ್ರ ಬಿಡಲ್ಪಟ್ಟಿರುತ್ತದೆ. ಈ ಹಾದಿಯು ಕಬ್ಬದ ಸರ್ವೆ ನಂ. 23ರ ಈಶಾನ್ಯಮೂಲೆಯಲ್ಲಿ ಸ್ಟೇಟ್ ಫಾರೆಸ್ಟನ್ನು ಪ್ರವೇಶಿಸಿ ಸರ್ವೆ ನಂ. 22ರ ನಡುವೆ ಹೋಗುತ್ತದೆ.
11	ಶ್ರೀ ರಂಗನಾಥಸ್ವಾಮಿ ದೇವಸ್ಥಾನ.	ಲೋಕದೊಳಲು ಸರ್ವೆ ನಂ. 16ರಲ್ಲಿ.	6 ಫರ್ಲಾಂಗು ಉದ್ದವುಳ್ಳ ಮತ್ತೂ 10 ಅಡಿ ಅಗಲವಾದ ಕಾಲುಹಾದಿಯು ಜನಗಳಿಗೆ ಮಾತ್ರ ಬಿಡಲ್ಪಟ್ಟಿರುತ್ತದೆ. ಈ ಹಾದಿಯು ಲೋಕದೊಳಲು ಸರ್ವೆ ನಂ. 13ರ ಪೂರ್ವಭಾಗದ ಅಂಚಿನ ಮಧ್ಯಸ್ಥಳದಲ್ಲಿ ಸ್ಟೇಟ್ ಫಾರೆಸ್ಟನ್ನು ಪ್ರವೇಶಿಸಿ ಸರ್ವೆ ನಂ. 16ರ ನಡುವೆ ಹೋಗುತ್ತದೆ.

(B) ಮೇಲೆ (A) 5ನೆ ಕಾಲಂನಲ್ಲಿ ನಮೂದಿಸಲ್ಪಟ್ಟ ಈ ಕೆಳಗೆ ಕಂಡ ದೇವಸ್ಥಾನ ಮತ್ತೂ ಕೊಳಗಳಿಗೆ ಹಕ್ಕು ಕೊಡಲ್ಪಟ್ಟಿರುತ್ತದೆ. ಈ ದೇವಸ್ಥಾನಗಳು, ಕೊಳಗಳೂ ಮತ್ತೂ ಇವುಗಳ ಭಕ್ತಾದಿಗಳು ಇಳಿದುಕೊಳ್ಳುವ ಸ್ಥಳಗಳೂ ಫಾರೆಸ್ಟು ಸರಹದ್ದಿನಿಂದ ಪ್ರತ್ಯೇಕಿಸಲ್ಪಡಬೇಕು ಮತ್ತೂ ಇವುಗಳು ಆವರ್ಣವಾಗಿ ಎಣಿಸಲ್ಪಟ್ಟಿರುತ್ತವೆ.

ನಂಬರು.	ದೇವಸ್ಥಾನ ಮತ್ತೂ ಕೊಳದ ಹೆಸರು.	ಬಿಡಲ್ಪಟ್ಟ ಆವರ್ಣಗಳು.
1	ರಂಗನಾಥಸ್ವಾಮಿ ದೇವಸ್ಥಾನ ..	ದೇವಸ್ಥಾನದ ಸುತ್ತಲೂ ಒಂದು ಫರ್ಲಾಂಗು ಚದರ.
2	ದೇವಗನ್ನಿಕೆ ಕೊಳ ...	ಇಲ್ಲಾ.
3	ಈರಣ್ಣನ ಕೆರೆ ...	ಇಲ್ಲಾ.
4	ಮಾರಿಮ್ಮನ ಗುಡಿ ..	} ಜಾನಕಲ್ಲಿನಿಂದ ಮಧ್ರೆಗೆ ಹೋಗುವ ರಸ್ತೆಯ ಸಮೀಪದಲ್ಲಿ ಪ್ರತಿಯೊಂದಕ್ಕೂ ಹತ್ತು ಎಕರೆ.
5	ಡಿಟ್ಟೋ ..	
6	ಉಜ್ಜಯಿನಿ ದೇವರ ಗುಡಿ ...	ದೇವಸ್ಥಾನದ ಸುತ್ತಲೂ ನಲವತ್ತು ಎಕರೆಗಳು.
7	ಶಂಭುಲಿಂಗಸ್ವಾಮಿ ದೇವಸ್ಥಾನ ...	ದೇವಸ್ಥಾನದ ಸುತ್ತಲೂ ಹತ್ತು ಎಕರೆ.
8	ರಂಗಸ್ವಾಮಿ ದೇವಸ್ಥಾನ ...	ದೇವಸ್ಥಾನದ ಮುಂದೆ ಐದು ಎಕರೆ.
9	ಆಂಜನೇಯಸ್ವಾಮಿ ದೇವಸ್ಥಾನ ...	ಹತ್ತು ಎಕರೆ (ಇದರ ಪಕ್ಕದಲ್ಲಿರುವ ಒಂದು ತೋಪು ಮತ್ತು ಕೊಳ ಈ ಪ್ರದೇಶದೊಳಗಿರತಕ್ಕದ್ದು.
10	ಬೀರದೇವರ ಕಲ್ಲು ...	ದೇವಸ್ಥಾನದ ಮುಂಭಾಗದಲ್ಲಿ ಐದು ಎಕರೆ.
11	ಶ್ರೀ ರಂಗನಾಥಸ್ವಾಮಿ ದೇವಸ್ಥಾನ..	ದೇವಸ್ಥಾನದ ಸುತ್ತಲೂ ಹತ್ತು ಎಕರೆ, ಗುಡ್ಡದಮೇಲಕ್ಕೆ ಹತ್ತುವ ದಾರಿಯಲ್ಲಿ ಒಂದು ಕೆರೆ ಮತ್ತೂ ಕೆಲವು ಮಂಟಪಗಳಿರತಕ್ಕ ಪ್ರದೇಶ ಇಪ್ಪತ್ತು ಎಕರೆ.

ತಾ॥ 21 ಏಪ್ರೆಲ್ 1904.

1900ನೆ ಇಸವಿ XIನೆ ನಂ. ಮೈಸೂರು ಶೀಮೆಯ ಫಾರೆಸ್ಟು ರೆಗ್ಯುಲೇಷನ್ 18ನೆ ಸೆಕ್ಷನ್ನಿನ ವಿಧಿಗಳನ್ನು ಅನುಸರಿಸಿ ಈ ಇಸ್ತಿಹಾರಿಗೆ ಜಂಟಿಸಿ ಇರುವ ಷೆಡ್ಯೂಲಿನಲ್ಲಿ ನಮೂದಿರುವ ಚೆಕ್ಕುಬಂದಿಯುಳ್ಳ ಪ್ರದೇಶವು 1904ನೆ ಏಪ್ರೆಲ್ ಗುರ್ರು ಲಾಗಾಯಿತು ಈ ಇಸ್ತಿಹಾರಿನ ಅಡಿಯಲ್ಲಿ ವಿವರಿಸಿರುವ ಹಕ್ಕುಗಳ ಚಲಾವಣೆಗೆ ಬಳಪಟ್ಟು ಸ್ಟೇಟ್ ಫಾರೆಸ್ಟು ಆಗಿರುತ್ತದೆ :—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಭಾಗದ ಹೆಸರು.	ಚೆಕ್ಕುಬಂದಿ.
ಚಿತ್ರದುರ್ಗ.	ಮೊಳಕಾಲ್ಮೂರು.	5 ಚದರ ಮೈಲಿಗಳು.	ಬಾಂಡರಾವಿ.	ಉತ್ತರಕ್ಕೆ.—ಲೈನು ಬಾಂಡರಾವಿಯ ಸರ್ವೆ ನಂ. 112ನೆ ನೈರುತ್ಯ ಮೂಲೆಯಿಂದ ಹೊರಟು ಸರ್ವೆ ನಂ. 112, 104ನೆ ನಂ. ಆಗ್ನೇಯ ಭಾಗದ ಸರಹದ್ದಿನೊಂದಿಗೆ 104ನೆ ನಂ. ಆಗ್ನೇಯ ಮೂಲಿಗೆ ತಗಲಿ 105ನೆ ನಂಬರಿನ ಮೂಲಕ $2\frac{1}{8}$ ಫರಲಾಂಗುದೂರ ಅದೇ ದಿಕ್ಕಿನಲ್ಲಿ ಹೋಗಿ 106ನೆ ನಂ. ದಕ್ಷಿಣದ ಮೂಲೆಯನ್ನು ಮುಟ್ಟಿ ತರುವಾಯ ಸದರಿ ನಂಬರಿನ ಆಗ್ನೇಯ, ಪೂರ್ವ ಮತ್ತು ಉತ್ತರ ಭಾಗಗಳಲ್ಲಿ ಬಂದು ಸರ್ವೆ ನಂ. 109ನೆ ಆಗ್ನೇಯ ಮೂಲೆಯನ್ನು ಮುಟ್ಟಿ ನಂತರ ನೇರವಾಗಿ ಉತ್ತರಕ್ಕೆ ಹೊರಟು ಸರ್ವೆ 109, 110, 133, 132ನೆ ನಂಬರುಗಳ ಪೂರ್ವಕ್ಕೆ ಹೋಗಿ ಕೊನೆಯ ನಂಬರಿನ ಈಶಾನ್ಯ ಮೂಲೆಯನ್ನು ಮುಟ್ಟಿ ನಂತರ ಪೂರ್ವಕ್ಕೆ ನೇರವಾಗಿ ಹೊರಟು ಬಳ್ಳಾರಿ ಡಿಸ್ಟ್ರಿಕ್ಟಿಗೆ ಲಗತ್ತಾಗಿ ಪ್ರಾವಿನ್ಸ್ ಎಲ್ಲೆಯೊಂದಿಗೆ ಹೋಗುತ್ತದೆ. ಪೂರ್ವಕ್ಕೆ.—ಬಳ್ಳಾರಿ ಜಿಲ್ಲಾ ಸರಹದ್ದನ್ನು ಅನುಸರಿಸಿರುವ ಮೈಸೂರು ಶೀಮೆ ಗಡಿ. ದಕ್ಷಿಣಕ್ಕೆ.—ನಂತರ ಲೈನು ಸಂತೆಗುಡ್ಡದ ಸರ್ವೆ 8, 11 ನಂಬರುಗಳ ಉತ್ತರಕ್ಕೂ ಮತ್ತು 11ನೆ ನಂಬರಿನ ವಾಯುವ್ಯ ಮೂಲೆಗೂ ಹೋಗಿ ನಂತರ ಸರ್ವೆ ನಂ. 23ರ ವರೆಗೆ ಪಶ್ಚಿಮಕ್ಕೆ ಹೊರಟು (ಅಂದರೆ ಸರ್ವೆ ನಂ. 21, 22 ನ್ನು ಸರಹದ್ದಿನ ಉತ್ತರಕ್ಕೆ ಬಿಟ್ಟು) $6\frac{1}{2}$ ಫರಲಾಂಗುವರೆಗೆ ಹೋಗಿ ಅಲ್ಲಿ ಬಳಗೆ ಶೇರುವ ಸರ್ವೆ ನಂ. 25ನೆ ಆಗ್ನೆಯ ಮೂಲೆಗೆ ತಗಲಿ ತರುವಾಯ ಸರ್ವೆ ನಂ. 26ನೆ ಉತ್ತರಕ್ಕೆ ಹೊರಡುತ್ತದೆ. ಆಮೇಲೆ ಸರ್ವೆ ನಂ. 36ರ ಬಳಗಡೆ $3\frac{1}{8}$ ಫರ್ಲಾಂಗು ದೂರ ಹೋಗಿ ಸರ್ವೆ ನಂ. 35ರ ಈಶಾನ್ಯ ಮೂಲೆಯನ್ನು ಮುಟ್ಟುತ್ತದೆ. ತರುವಾಯ ಸರ್ವೆ ನಂ. 35, 39, 43 ಮತ್ತು 45ರ ಉತ್ತರಭಾಗದ ಎಲ್ಲೆಯೊಡನೆ ಹೋಗಿ ಕೊನೆ ನಂಬರಿನ ನೈರುತ್ಯ ಮೂಲೆಯನ್ನು ತಲ್ಪುತ್ತದೆ. ನಂತರ ಗುಡಿಹಳ್ಳದ ಎಡಭಾಗದ ಧಡದೊಡನೆ ಹೊರಟು ಸರ್ವೆ ನಂ. 54ನೆ ಅತ್ಯಂತ ಉತ್ತರ ಮೂಲೆಯನ್ನು ಮುಟ್ಟುತ್ತೆ. ನಂತರ ಸರ್ವೆ ನಂ. 54, 53ನೆ ನಂಬರುಗಳ ಪಶ್ಚಿಮ ಭಾಗದಿಂದ 53ನೆ ನಂಬರಿನ ಅತ್ಯಂತ ದಕ್ಷಿಣ ಮೂಲೆಯನ್ನು ಮುಟ್ಟುತ್ತದೆ. ತರುವಾಯ ಗುಡಿಹಳ್ಳ ಎಡಭಾಗದ ಧಡವನ್ನನುಸರಿಸಿ ಬಳ್ಳಾರಿ ಡಿಸ್ಟ್ರಿಕ್ಟಿನ ಗಡಿವರೆಗೆ ಹೋಗಿ ತರುವಾಯ ಬಳ್ಳಾರಿ ಡಿಸ್ಟ್ರಿಕ್ಟಿನ ಸರಹದ್ದನ್ನು ಅನುಸರಿಸಿರುವ ಮೈಸೂರು ಶೀಮೆಯ ಸರಹದ್ದಿನೊಡನೆ ಐಕ್ಯವಾಗುತ್ತೆ. ಪಶ್ಚಿಮಕ್ಕೆ.—ತರುವಾಯ ಸೊಂಡೂರು ರಾಜ್ಯಕ್ಕು ಮೈಸೂರು ಶೀಮೆಗೂ ಮಧ್ಯದ ಸರಹದ್ದಿನೊಡನೆ ಹೊರಟು ಬಾಂಡರಾವಿ ಸರ್ವೆ ನಂ. 20ನೆ ನೈರುತ್ಯ ಮೂಲೆಯನ್ನು ಮುಟ್ಟುತ್ತದೆ. ತರುವಾಯ ಸರ್ವೆ ನಂ. 20, 21, 22, 16, 15, 14, ಮತ್ತು 9ನೆ ನಂಬರುಗಳ ದಕ್ಷಿಣದಿಕ್ಕಿನಿಂದ ಕೊನೆಯ ನಂಬರಿನ ಆಗ್ನೇಯ ಮೂಲೆಯ ವರೆಗೆ ಹೋಗಿ ಗುಡಿಹಳ್ಳದ ಬಲಗಡೆ ಧಡದೊಡನೆ ಹೊರಟು ಸರ್ವೆ ನಂ. 169ನೆ ನಂ. ನೈರುತ್ಯದ ಮೂಲೆವರೆಗೆ ಹೋಗುತ್ತದೆ. ನಂತರ ಸರ್ವೆ ನಂ. 169, 168ನೆ ದಕ್ಷಿಣ ಭಾಗದಿಂದ ಅಖೈರು ನಂಬರಿನ ಆಗ್ನೇಯಮೂಲೆ ವರೆಗೆ ಹೋಗುತ್ತೆ. ನಂತರ ಸರ್ವೆ ನಂ. 168, 89, 90, 92, 73, 72, 71ನೆ ನಂಬರುಗಳ ಪೂರ್ವಕ್ಕೆ ಹೊರಟು ಕೊನೇ ನಂಬರಿನ ಈಶಾನ್ಯ ಮೂಲೆಯನ್ನು ಮುಟ್ಟುತ್ತೆ. ಆಮೇಲೆ ಗುಡಿಹಳ್ಳದ ಬಲಭಾಗದ ಧಡದೊಡನೆ ಹೊರಟು ಸರ್ವೆ ನಂ. 112ನೆ ನೈರುತ್ಯ ಮೂಲೆಯಲ್ಲಿ ಮೊದಲು ಹೊರಟ ಸ್ಥಾನದಲ್ಲಿ ಕಲೆಯುತ್ತೆ.

ಷರಾ.—ಮೇಲ್ಕಂಡ ಸ್ಟೇಟ್ ಫಾರೆಸ್ಟಿನಲ್ಲಿ ಈ ಕೆಳಗೆ ನಮೂದಿಸಿರುವ ದಾರಿಯ ಹಕ್ಕುಗಳು ಕೊಡಲ್ಪಟ್ಟಿವೆ.

(1) ಬಾಂಡರಾವಿಯಿಂದ ಬಳ್ಳಾರಿಗೆ ಹೋಗತಕ್ಕ ಗಾಡಿದಾರಿ—15 ಅಡಿ ಅಗಲ $2\frac{1}{4}$ ಮೈಲಿ ಉದ್ದ ಯಾವಾಗ್ಯೂ ಜನ ಜಾನುವಾರು, ಗಾಡಿಗಳ ಓಡ್ಯಾಟದ ಬಗ್ಯೆ ಈ ರಸ್ತೆಯು ಬಾಂಡರಾವಿ ಗ್ರಾಮದ ಸರ್ವೆ ನಂ. 92ನೆ ಈಶಾನ್ಯ ಮೂಲೆಯಲ್ಲಿ ಸ್ಟೇಟು ಫಾರೆಸ್ಟನ್ನು ಪ್ರವೇಶಿಸಿ, ಇದೇ ಗ್ರಾಮದ ಸರ್ವೆ 94, 144, 143, 142, 141 ಮತ್ತು 140ನೆ ಸರ್ವೆ ನಂಬರ್‌ಗಳ ಈಶಾನ್ಯ ಭಾಗದಲ್ಲಿ ಹೋಗಿ ಸ್ಟೇಟ್ ಫಾರೆಸ್ಟನ್ನು ಸರ್ವೆ ನಂ. 140ನೆ ಪೂರ್ವದ ಕೊನೇ ಭಾಗದ ಮಧ್ಯಪ್ರದೇಶದಲ್ಲಿ ಬಿಡುತ್ತದೆ.

(2) ಗಾಡಿದಾರಿ—ಬಳ್ಳಾರಿಯಿಂದ ಹನುಮಾಪುರಕ್ಕೆ ಹೋಗತಕ್ಕದ್ದು—15 ಅಡಿ ಅಗಲ, 1 ಮೈಲು 3 ಫರ್ಲಾಂಗು ಉದ್ದ—ಸದಾ ಜನ, ಜಾನುವಾರು, ಗಾಡಿಗಳ ಓಡ್ಯಾಟದ ಬಗ್ಯೆ. ಇದು ಬಾಂಡರಾವಿ ಸರ್ವೆ 107ನೆ ನಂ. ಉತ್ತರಭಾಗದಲ್ಲಿ ಫಾರೆಸ್ಟನ್ನು ಪ್ರವೇಶಿಸಿ 108, 138, 137ನೆ ಸರ್ವೆ ನಂಬರುಗಳ ಪೂರ್ವದಲ್ಲಿ ಹೋಗಿ ಕೊನೇ ಸರ್ವೆ ನಂ. ಪೂರ್ವಭಾಗದ ಮಧ್ಯಪ್ರದೇಶದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(3) ಕಾಲುದಾರಿ—ಸಂತೆಗುಡ್ಡದಿಂದ ಸೊಂಡೂರು ಶೀಮೆ ಅಪ್ಪನಹಳ್ಳಿಗೆ ಹೋಗತಕ್ಕ ಮಾರ್ಗ 12 ಅಡಿ ಅಗಲ $1\frac{1}{4}$ ಮೈಲಿ ಉದ್ದ—ಸದಾ ಜನ, ಜಾನವರು ಉಪಯೋಗಕ್ಕೆ ಮಾತ್ರ ಬಿಟ್ಟಿದೆ. ಇದು ಸಂತೆಗುಡ್ಡದ ಸರ್ವೆ 53ನೆ ನಂ. ವಾಯುವ್ಯ ದಿಕ್ಕಿನಲ್ಲಿ ಅರ್ಧ ಫರ್ಲಾಂಗು ದೂರದಲ್ಲಿ ಫಾರೆಸ್ಟನ್ನು ಪ್ರವೇಶಿಸಿ ಸರ್ವೆ ನಂ. 55ನೆ ಪಶ್ಚಿಮ ಭಾಗದಲ್ಲಿ ಹೊರಟು ಅದೇ ಸರ್ವೆ ನಂ. ಪಶ್ಚಿಮ ಭಾಗದ ಮಧ್ಯಪ್ರದೇಶದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(4) ಕಾಲುದಾರಿ—ಸಂತೆಗುಡ್ಡದಿಂದ ಬಾಂಡರಾವಿಗೆ ಹೋಗತಕ್ಕದ್ದು—12 ಅಡಿ ಅಗಲ $1\frac{1}{4}$ ಮೈಲಿ ಉದ್ದ, ಜನ ಜಾನುವಾರುಗಳಿಗೆ ಮಾತ್ರ—ಇದು ಸಂತೆಗುಡ್ಡದ ಸರ್ವೆ ನಂ. 35ನೆ ಉತ್ತರ ಭಾಗದಲ್ಲಿ ಫಾರೆಸ್ಟನ್ನು ಪ್ರವೇಶಿಸಿ ಆ ಗ್ರಾಮದ ಸರ್ವೆ ನಂ. 37, 38 ಮತ್ತು ಬಾಂಡರಾವಿಯ 173, 171ನೆ ನಂ. ವಾಯುವ್ಯ ದಿಕ್ಕಿಗೆ ಹೋಗಿ ಸರ್ವೆ ನಂ. 171ನೆ ವಾಯುವ್ಯ ಮೂಲೆಯಿಂದ ಒಂದು ಫರಲಾಂಗು ದೂರದಲ್ಲಿ ಫಾರೆಸ್ಟನ್ನು ಬಿಡುತ್ತೆ.

(5) ಗಾಡಿದಾರಿ—ಸಂತೆಗುಡ್ಡದಿಂದ ಬಾಂಡರಾವಿಗೆ ಹೋಗತಕ್ಕದ್ದು—15 ಅಡಿ ಅಗಲ 3 ಮೈಲಿ ಉದ್ದ, ಸದಾ ಜನ ಜಾನವರು, ಗಾಡಿಗಳ ಉಪಯೋಗದ ಬಗ್ಯೆ—ಈ ರಸ್ತೆಯು ಸಂತೆಗುಡ್ಡದ ಸರ್ವೆ ನಂ. 11ನೆ ಈಶಾನ್ಯ ಮೂಲೆಯಲ್ಲಿ ಫಾರೆಸ್ಟನ್ನು ಪ್ರವೇಶಿಸಿ ಸಂತೆಗುಡ್ಡದ 10, 23ನೆ ಸರ್ವೆ ನಂ. ಮತ್ತು ಬಾಂಡರಾವಿಯ 172, 159, 160, 163, 162, 153, 151, 93 ಮತ್ತು 94ನೆ ಸರ್ವೆ ನಂಬರುಗಳ ಅತಿ ಈಶಾನ್ಯಕ್ಕೆ ಹೋಗಿ ನಂ. 1ನೆ ಗಾಡಿ ದಾರಿಯನ್ನು ಡಿಮಾರ್ಕೇಷನ್ ಲೈನಿಂದ 1 ಫರಲಾಂಗು ದೂರದಲ್ಲಿ ಸೇರುತ್ತೆ.

(B) ಈ ಕೆಳಗಿನ ಹಕ್ಕುಗಳು ಕೊಡಲ್ಪಟ್ಟಿರುತ್ತವೆ:—

1. ಹನುಮಾಪುರ ಗ್ರಾಮಸ್ಥರು ಅರ್ಧ ಹುಲ್ಲುಬನ್ನಿ ಕೊಟ್ಟು ಸ್ಟೇಟು ಫಾರೆಸ್ಟಿನಲ್ಲಿ ದನಗಳನ್ನು ಮೇಯಿಸಬಹುದು ಮತ್ತು ಇವರು ಹುಲ್ಲು ಕಟ್ಟಿಗೆ ಜಿರಾಯಿತಿ ಸಾಮಾನಿಗೋಸ್ಕರ ಉಳಿಸಿಕೊಳ್ಳದೆ ಇರತಕ್ಕ ಬಾಕಿ ಮರವನ್ನು ಮುಫತ್ತು ಕಡಿದು ಸಾಗಿಸಬಹುದು.

2. ಈ ಕೆಳಗಿನ ಜಮೀನುಗಳ ಪಟ್ಟೆ ಹಕ್ಕುದಾರಿಗಳು ಕೊಡಲ್ಪಟ್ಟಿವೆ. ಈ ಜಮೀನುಗಳ ಸುತ್ತಲೂ ಲೈನು ಹಾಕಿ ಫಾರೆಸ್ಟಿನೊಳಗೆ ಇರತಕ್ಕ ಹಿಡುವಳಿ ನಂಬರುಗಳಂತೆ ಭಾವಿಸಬೇಕು.

ಗ್ರಾಮ.	ಸರ್ವೆ ನಂ.	ವಿಸ್ತೀರ್ಣ.	ಷರಾ.
ಸಂತೆಗುಡ್ಡ ...	21 22	8—22 8—25	ಸಂತೆಗುಡ್ಡದ ಸರ್ವೆ ನಂ. 21ನೆ ನೈರುತ್ಯ ಭಾಗದಲ್ಲಿರುವ 4 ಅಡಿ ಅಗಲದ ಹಾದಿ ಮೂಲಕ ಜನರು ಮತ್ತು ವ್ಯವಸಾಯದ ಜಾನುವಾರು ಓಡ್ಯಾಡುವದಕ್ಕೆ ಅಪ್ಪಣೆ ಕೊಟ್ಟಿದೆ.

ಕೆ. ಶಾಮಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್, ಚಿತ್ರದುರ್ಗ.

2 c

ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 27ನೆ ಏಪ್ರೆಲ್ 1904ನೆ ಇಸವಿ.

1904ನೆ ಜುಲೈ ಮಾಹೆ ಗುರ್ರೆ ತಾರೀಖು ಲಾಗಾಯಿತು 1905ನೆ ಇಸವಿ ಜೂನ್ ಮಾಹೆ 30ರ ವರಿಗೆ ಷೆಡ್ಯೂಲ್ A ಯಲ್ಲಿ ನಮೂದು ಮಾಡಿರುವ ಟೋಲ್ ಗೇಟುಗಳಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ಅದರಲ್ಲಿ ಕಂಡ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫೀಸರಿಂದ ಬಹಿರಂಗವಾಗಿ ಪುನಹಾ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟುದಾರನು ಷೆಡ್ಯೂಲ್ Bಯಲ್ಲಿ ನಮೂದುಮಾಡುವ ರೇಟಿನಂತೆಯೇ ಗೇಟುಗಳ ಮುಖಾಂತರ ಹೋಗುವ ಮತ್ತು ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲೀ ಮಂಜೂರ್ಮಾಡುವ ಅಧಿಕಾರವು ಡೆಪ್ಯುಟಿ ಕಮಿಷನರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು ಹತ್ತನೆ ತಾರೀಖಿನ ಪ್ರೊಳಗಾಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಪಾವತೀ ಮಾಡಬೇಕು. ಹರಾಜು ಆಖೈರು ಆದಕೂಡ್ಲೆ, ಬಾಬನ್ನು ಪಡೆಯತಕ್ಕ ಕಂಟ್ರಾಕ್ಟುದಾರನು ಎರಡು ಮಾಹೆಗಳ ಖಿಸ್ತಿಗೆ ಸಮನಾದ ಮೊಬಲಗನ್ನು ಡಿಪಾಜಿಟ್ಟು ಬಗ್ಯೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಯೆ ಜಮೆಗೆ ತೆಗೆದುಕೊಳ್ಳುತ್ತೆ.

5. ಹರಾಜು ಆಖೈರಾದ ಕೂಡ್ಲೆ ಡಿಪಾಜಿಟ್ಟು ಬಗ್ಯೆ ಮೊಬಲಗನ್ನು ಹಾಜರ್ಮಾಡದಿದ್ದರೆ, ಖರ್ಚಿಗೂ ಮತ್ತು ಲುಕ್ಸಾನಿಗೂ ಅವಲ್ ಕಂಟ್ರಾಕ್ಟುದಾರನನ್ನು ಗುರಿಪಡಿಸಿ, ಪುನಹಾ ಹರಾಜು ಮಾಡಲ್ಪಡುತ್ತೆ. ಖಿಸ್ತು ಮೊಬಲಗನ್ನು ವಾಯಿದೆಪ್ರೊಳಗೆ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡುವ ತಾರೀಖಿನವರಿವಿಗೆ ಮಾಹೆಯಾನಾ ರೂಪಾಯಿಗೆ ಒಂದು ಪೈನಂತೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಉಳಿದ ಕಂಟ್ರಾಕ್ಟನ್ನು ಪುನಹಾ ಹರಾಜುಮಾಡಿ ಲುಕ್ಸಾನಾದಲ್ಲಿ, ಸದರೀ ಮೊಬಲಗನ್ನು ಅವಲ್ ಕಂಟ್ರಾಕ್ಟುದಾರನಿಂದ ವಸೂಲ್ಮಾಡುತ್ತೆ. ಎರಡನೇ ಹರಾಜಿನಲ್ಲಿ ನಫೇಬಂದಲ್ಲಿ, ಮೊದಲು ಕಂಟ್ರಾಕ್ಟುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲಾ.

6. ಮೇಲ್ಕಂಡ 5 ಮತ್ತು 4ನೆ ಪ್ಯಾರಾಗಳಲ್ಲಿ ನಮೂದು ಮಾಡಿರುವ ಷರತ್ತುಗಳ ಬಳಿಪನ್ನು ಕಂಟ್ರಾಕ್ಟುದಾರ್ರು ಹರಾಜು ಮೊಬಲಿಗಿನ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸನ್ನೂ ಸಹ ಸೇರಿಸಿ, ಪಾವತೀ ಮಾಡಬೇಕು.

7. ಪ್ರತಿ ದಿವಸದಲ್ಲೂ ಉತ್ಪತ್ತಿ ಆಗುವ ಮೊಬಲಗನ್ನ ತೋರಿಸುವಂತೆ ಖಬರ್ದಾರ್ಯಾಕವಾಗಿ ಲೆಖ್ಖಪನ್ನು ಕಂಟ್ರಾಕ್ಟುದಾರ್ರು ಇಡಬೇಕು. ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಉದ್ಯೋಗಸ್ತರು ಅಪೇಕ್ಷಿಸಿದ ಕಾಲದಲ್ಲಿ, ಇನ್ಸ್ಪೆಕ್ಷನ್ ಬಗ್ಯೆ ಹಾಜರ್ಮಾಡಬೇಕು.

8. ಮೇಲ್ಕಂಡ 7ನೆ ಪ್ಯಾರಾದಲ್ಲಿ ನಮೂದು ಮಾಡಿರುವಂತೆ ಗೇಟುಗಳ ಮುಖಾಂತರ ಹೋಗತಕ್ಕ ಗಾಡಿ ವಗೈರೆ ಟ್ರಾಫಿಕ್‌ಗಳ ಲೆಖ್ಖಗಳನ್ನು ಖಬರ್ದಾರ್ಯಾಕವಾಗಿ ಇಡಲು, ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಒಬ್ಬ ಮುತ್ಸದ್ದಿಯನ್ನು ಇಡಬೇಕು.

9. ಹಾಲಿಯಿರುವ ಟೋಲ್ ಗೇಟುಗಳನ್ನು ಮತ್ತು ಮನೆಗಳನ್ನು ಒಳ್ಳೇಸ್ಥಿತಿಯಲ್ಲಿ ಇಟ್ಟುಕೊಂಡು ಇರುವದು ಕಂಟ್ರಾಕ್ಟುದಾರನ ಕೆಲಸವಾಗಿರುತ್ತೆ. ಹೊಸ ಗೇಟುಗಳೇ ಆಗಲಿ ಮನೆಗಳೇ ಆಗಲಿ ಅವಶ್ಯಕವಿದ್ದಲ್ಲಿ ಗೌರ್ನಮೆಂಟಿನ ಖರ್ಚಿನಿಂದ ತಯಾರ್ಮಾಡಿಸಲ್ಪಡುತ್ತೆ.

10. ಲೇಟ್ ಚೀಫ್ ಕಮಿಷನರ್ ಸಾಹೇಬರವರ 4—11—1876ನೆ ಮುರ್ಕ್ಕಂ 274ನೆ ನಂಬರು ನೋಟಿಫಿಕೇಷನ್ ನೊಡನೆ ಸಾದರ್ಮಾಡಿರುವ ರೂಲ್ಸುಗಳಿಗೆ ಕಂಟ್ರಾಕ್ಟುದಾರ್ರು ಬದ್ಧರಾಗಿರಬೇಕು.

11. ಮೂಳೆ ಅಥವಾ ಗೊಬ್ಬರದಿಂದ ಭರ್ತಿಯಾಗಿರುವ ಗಾಡಿಗಳನ್ನು ಖಾಲಿಗಾಡಿಯಂತೆ ಭಾವಿಸಿ, ಅದೇರೀತಿಯೇ ಸುಂಕ ವಸೂಲ್ಮಾಡಬೇಕು.

ಷೆಡ್ಯೂಲ್. A

ರಸ್ತೆಗಳು.	ಸ್ಟೇಷನ್‌ಗಳು.	ಹರಾಜಾಗತಕ್ಕ ಸ್ಥಳ.	ಹರಾಜು ತಾರೀಖು.
1. ಬೆಂಗಳೂರು—ಮಂಗಳೂರು ರಸ್ತೆ, ಸಿದ್ಧಾಪುರದ ಬ್ರ್ಯಾಂಚು ರಸ್ತೆ	ಪೆರ್ಯಾಪಟ್ಟದ ಕೋಟೆಗೆಪಶ್ಚಿಮ ಎರಡು ರಸ್ತೆಗಳು ಸೇರುವ ಸ್ಥಳ.	ಹುಣಸೂರು ತಾಲ್ಲೂಕ್ ಕಚೇರಿ	1904ನೆ ಜೂನ್ ತಾರೀಖು 3ರಲ್ಲು.
2. ಹಾಸನ-ಪೆರ್ಯಾಪಟ್ಣ—ಕನ್ನ್ಯಾನೂರು ರಸ್ತೆ ...	ಪೆರ್ಯಾಪಟ್ಣಕ್ಕೂ ಅಂಕನಹಳ್ಳಿಗೂ ಮಧ್ಯೆ		
3. ಮದರಾಸು—ಕನ್ನ್ಯಾನೂರು ರಸ್ತೆ ...	ಪಂಜವಳ್ಳಿ		

ಷೆಡ್ಯೂಲ್ B ರೇಟುಗಳು.

ತಪಶೀಲು.	ರೇಟುಗಳು.			ಷರಾ.
	ರೂ.	ಆ.	ಪೈ.	
ಪ್ರಯಾಣಸ್ಥರೊಡನೆ ನಾಲ್ಕು ಚಕ್ರದ ಗಾಡಿ	0	12	0	
ಡಿಟೋ ಇಲ್ಲದೆ ಇರುವ ಡಿಟೋ	0	6	0	
ಡಿಟೋ ಇರುವ ಎರಡು ಚಕ್ರದ ಗಾಡಿ	0	8	0	
ಪ್ರಯಾಣಸ್ಥರೊಡನೆ ಇಲ್ಲದೆ ಇರುವ ಎರಡುಚಕ್ರದ ಗಾಡಿ	0	4	0	
ಗಾಡಿ ಬೋಜಾ ಸಹಿತವಾದದ್ದು	0	4	0	
ಡಿಟೋ ಬೋಜಾ ಇಲ್ಲದ್ದು	0	2	0	
ಆನೆ	1	0	0	
ಒಂಟೆ	0	4	0	
ಕುದುರೆ ಸವಾರನುಳ್ಳದ್ದು	0	1	6	
ಡಿಟೋ ಸವಾರನಿಲ್ಲದ್ದು	0	0	9	
ಕುದುರೆ ಮರಿ ಸವಾರನುಳ್ಳದ್ದು	0	0	9	
ಡಿಟೋ ಸವಾರನಿಲ್ಲದ್ದು	0	0	6	
ಎತ್ತು ಬೋಜಾ ವುಳ್ಳದ್ದು	0	1	0	
ಡಿಟೋ ಬೋಜಾ ಇಲ್ಲದ್ದು	0	0	6	
ಕತ್ತೆ ಬೋಜಾ ವುಳ್ಳದ್ದು	0	0	6	
ಡಿಟೋ ಬೋಜಾ ಇಲ್ಲದ್ದು	0	0	3	
ಪಲ್ಲಕ್ಕಿ	0	4	0	
ಕುರಿ, ಆಡು ಯಾ ಹಂದಿ	0	0	1	

ಸಿ. ಕೃಷ್ಣರಾವ್,
ಫಾರ್ ಪ್ರೆಸಿಡೆಂಟ್ ಡಿಸ್ಟ್ರಿಕ್ಟ್ ಫಂಡ್ ಬೋರ್ಡ್.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ತಾರೀಖು 23ನೆ ಮಾಹೆ ಏಪ್ರೆಲ್ 1904.

ಸರ್ 1904ನೆ ಇಸವಿ ಜುಲೈ ಮಾಹೆ ತಾರೀಖು 1ರ ಲಾಗಾಯಿತು 1905ನೆ ಇಸವಿ ಜೂನ್ ಮಾಹೆ ತಾರೀಖು 30ರ ವರಿಗೆ ಈ ಕೆಳಗಿನ ಎ. ಷೆಡ್ಯೂಲಿನಲ್ಲಿ ನಮೂದಿಸುವ ಮೈಸೂರು ಸಿಟಿಗೆ ಸೇರಿದ ತಮಾಂ ಟೋಲು ಗೇಟುಗಳ ಮುಖಾಂತ್ರ ಸಿಟಿ ಪಳಕ್ಕೆ ಬರುವ ಗಾಡಿಗಳು, ಜಾನವರುಗಳು ವಗೈರೆಗಳ ಮೇಲೆ ಬಿ. ಷೆಡ್ಯೂಲಿನಲ್ಲಿ ನಮೂದಾಗುವ ದರದಂತೆ, ಸಿಟಿ ಮ್ಯುನಿಸಿಪಲ್ ರೆಗ್ಯುಲೇಷನ್ 49 ಮತ್ತು 51ನೆ ಸೆಕ್ಷನ್‌ಗಳಲ್ಲಿ ನಮೂದಿರುವ ಷರತ್ತುಗಳಿಗೆ ಒಳಪಡಿಸಿ ಪ್ರತಿಬಂದು ಟೋಲುಗೇಟಿನಲ್ಲಿಯಾಗಲಿ ಅಥವಾ ದರೋಬಸ್ತು ಗೇಟುಗಳಲ್ಲಿಯಾಗಲಿ, ಟೋಲು ವಸೂಲ್ಮಾಡುವ ಬಾಬನ್ನು 1904ನೆ ಇಸವಿ ಮೇ ಮಾಹೆ ತಾರೀಖು 14ನೆ ಮಧ್ಯಾನ್ಹ 1 ಘಂಟೆಯ ಲಾಗಾಯಿತು ರಂಗಾಚಾರ್ಲು ಯವರ ಮಮೋರಿಯಲ್ ಹಾಲಿನಲ್ಲಿ ಪ್ರೆಸಿಡೆಂಟರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫಿಸರವರಿಂದ, ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟರು ಬಿ. ಷೆಡ್ಯೂಲಿನಲ್ಲಿ ನಮೂದಾಗುವ ರೇಟಿನಂತೆಯೇ ಗೇಟುಗಳ ಮುಖಾಂತರ ಸಿಟಿ ಪಳಕ್ಕೆ ಬರುವ ಗಾಡಿ ವಗೈರೆಗಳ ಮೇಲೆ ಟೋಲು ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು ಶಿವಾಯಿ ಪ್ರೆಸಿಡೆಂಟರವರಿಂದ ವಿಧಾಯಕ ಮಾಡಲ್ಪಡುವ ಫಾರಂನಲ್ಲಿ ಕ್ರಮವಾಗಿ ನಂಬರು ಮಾಹೆ ತಾರೀಖು ನಿಶಿ ಟೋಲು ಪಾವತಿ ಮಾಡತಕ್ಕ ಆಸಾಮಿಗಳಿಗೆ ರಶೀದಿ ಕೊಡಬೇಕು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲಿ ಮಂಜೂರು ಮಾಡುವ ಅಧಿಕಾರವು ಪ್ರೆಸಿಡೆಂಟರವರಲ್ಲಿರುತ್ತದೆ.

4. ಪ್ರತಿ ತಿಂಗಳು 10ನೆ ತಾರೀಖುವಳಗಾಗಿ ಹಿಂದಣ ಮಾಹೆಯ ಖಿಸ್ತು ಮೊಬಲಗನ್ನು ಪಾವತಿ ಮಾಡಬೇಕು. ಹರಾಜು ಆಖೈರಾದ ಕೂಡ್ಲೆ ಬಾಬನ್ನು ಪಡೆಯತಕ್ಕ ಕಂಟ್ರಾಕ್ಟರು ಎರಡು ಮಾಹೆಗಳ ಖಿಸ್ತಿಗೆ ಸಮವಾದ ಮೊಬಲಗನ್ನು ಡಿಪಾಜಟ್ ಬಗ್ಯೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಯೆ ಜಮೆಗೆ ತೆಗೆದುಕೊಳ್ಳುತ್ತೆ.

5. ಹರಾಜು ಆಖೈರಾದ ಕೂಡ್ಲೆ ಡಿಪಾಜಟ್ ಬಗ್ಯೆ ಮೊಬಲಗನ್ನು ಹಾಜರ್ಮಾಡದೆ ಇದ್ದರೆ, ಖರ್ಚಿಗು ಮತ್ತು ಲುಕ್ಸಾನಿಗೂ, ಅವ್ವಲ್ ಕಂಟ್ರಾಕ್ಟದಾರನನ್ನು ಗುರಿಪಡಿಸಿ ಪುನಹಾ ಹರಾಜು ಮಾಡಿಸುತ್ತೆ. ಖಿಸ್ತು ಮೊಬಲಗನ್ನು ವಾಯಿದೆ ಒಳಗೆ ಹಾಜರ್ಮಾಡಲು ತಪ್ಪಿದರೆ, ಡಿಪಾಜಟ್ ಮೊಬಲಗನ್ನು ದಂಡವಾಗಿ ತೆಗದುಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಿ ಅದರಲ್ಲಿ ನಷ್ಟವೇನಾದರೂ ಆದಲ್ಲಿ ಆ ನಷ್ಟಕ್ಕೆ ಅವ್ವಲ್ ದರಖಾಸ್ತು ದಾರನನ್ನು ಗುರಿಪಡಿಸುತ್ತೆ. ಎರಡನೆ ಹರಾಜಿನಲ್ಲಿ ನಫೆ ಬಂದಲ್ಲಿ, ಮೊದಲು ದರಖಾಸ್ತುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.

6. ಪ್ರತಿ ಒಬ್ಬ ಕಂಟ್ರಾಕ್ಟರು ರೋಜೀನಾ ಟೋಲುಗೇಟುಗಳ ಮುಖಾಂತ್ರ ಪ್ರವೇಶಮಾಡುವ ತರಹಾವಾರಿ ಗಾಡಿ ಯಾ ಜಾನವರುಗಳು ಇವುಗಳ ಮೇಲೆ ವಸೂಲಾದ ಟೋಲ್ ಯಾನೆ ಸುಂಕ ಇವುಗಳ ತಪಶೀಲು ತೋರಿಸುವ ಲೆಖ್ಖವನ್ನು ಪ್ರೆಸಿಡೆಂಟರವರು ವಿಧಾಯಕ ಮಾಡುವ ನಮೂನೆಯಲ್ಲಿಟ್ಟು, ಅಂಥಾ ಲೆಖ್ಖವನ್ನು ಕಂಟ್ರಾಕ್ಟರು ಪ್ರತಿ ಮಾಹೆಯಲ್ಲಿಯೂ, ಪ್ರೆಸಿಡೆಂಟರವರ ಇನ್ಸ್ಪೆಕ್ಷನ್ ಬಗ್ಯೆ ಹಾಜರ್ಮಾಡಬೇಕು. ಶಿವಾಯಿ ಸಾಯರು ಅಥವಾ ಮ್ಯುನಿಸಿಪಲ್ ಉದ್ಯೋಗಸ್ಥರು ಅಪೇಕ್ಷಿಸಿದಾಗ ಅಂಥಾ ಲೆಖ್ಖಗಳನ್ನು ಅವರ ಇನ್ಸ್ಪೆಕ್ಷನ್ ಬಗ್ಯೆ ಹಾಜರ್ಮಾಡುವದಕ್ಕೂ ಬದ್ಧನಾಗಿರತಕ್ಕದ್ದು.

7. ಪ್ರತಿ ಒಬ್ಬ ಕಂಟ್ರಾಕ್ಟರು ಟೋಲು ಗೇಟುಗಳ ಮುಖಾಂತರ ಬರತಕ್ಕ ಗಾಡಿ ಯಾ ಜಾನವರುಗಳ ತಪಶೀಲು ಲೆಖ್ಖವನ್ನು 6ನೆ ಕಲಂನಲ್ಲಿ ನಮೂದಿಸಿರುವಂತೆ, ಇಡತಕ್ಕ ಬಗ್ಯೆ ಆಯಾಯ ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಪ್ರತಿಯೊಂದು ಟೋಲುಗೇಟಿನಲ್ಲಿಯೂ, ಒಬ್ಬೊಬ್ಬ ಮುತ್ಸದ್ದಿಯನ್ನಿಡುವದಕ್ಕೆ ಬದ್ಧನಾಗಿರತಕ್ಕದ್ದು.

8. ಹಾಲಿ ಇರುವ ಟೋಲುಗೇಟುಗಳನ್ನು ಮತ್ತು ಮನೆಗಳನ್ನು ಕಂಟ್ರಾಕ್ಟರು ಒಳ್ಳೇ ಸ್ಥಿತಿಯಲ್ಲಿಟ್ಟುಕೊಂಡು, ಅವುಗಳನ್ನು ಉಪಯೋಗ ಮಾಡಿಕೊಳ್ಳಬಹುದು.

9. ಈ ಮೇಲ್ಕಂಡ ಷರತ್ತುಗಳಿಗೆ ಒಳಪಟ್ಟು ಕಂಟ್ರಾಕ್ಟು ಬಾಬನ್ನು ಸಲೀಸು ನಡೆಸಿಕೊಂಡು ಹೋಗತಕ್ಕ ವಿಚಾರದಲ್ಲಿ ಕಂಟ್ರಾಕ್ಟರು ಪ್ರೆಸಿಡೆಂಟರವರಿಂದ ವಿಧಾಯಕವಾದ ನಮೂನೆಯಲ್ಲಿ ಛಾಪಾ ಕಾಗದದಲ್ಲಿ ರೂಲ್ಸ್ ಪ್ರಕಾರ ಮುಚ್ಚಳಿಕೆ ಬರೆದು ಕೊಡಬೇಕು.

10 ಈ ಕೆಳಗೆ ನಮೂದಾಗುವವುಗಳ ಮೇಲೆ ಕಂಟ್ರಾಕ್ಟರು ಟೋಲನ್ನು ವಸೂಲ್ಮಾಡಕೂಡದು.

(1) ಮ್ಯುನಿಸಿಪಾಲಿಟಿಗೆ ತೆರಿಗೆ ಪಾವತಿಮಾಡಿ ನಂಬರು ಹಾಕಿಸಿಕೊಂಡಿರತಕ್ಕ ಗಾಡಿಗಳು ಅಥವಾ ಕ್ಯಾರೇಜುಗಳು ಮ್ಯುನಿಸಿಪಾಲಿಟಿಯಿಂದ ಪಡೆದಿರತಕ್ಕ ಪ್ಯಾಸುಗಳನ್ನು ಹಾಜರ್ಮಾಡುವ ಗಾಡಿಗಳು ಅಥವಾ ಜಾನವರುಗಳು ಮತ್ತು ಗವರ್ನಮೆಂಟ್ ಯಾ ಮ್ಯುನಿಸಿಪಲ್ ಕಮಿಷನ್‌ಗೆ ಸೇರಿದ ಅಥವಾ ಸಾಮಾನು ವಗೈರೆ ಸಾಗಿಸುವದಕ್ಕಾಗಿ ಮೊಕರರ್ಮಾಡಲ್ಪಟ್ಟ ಕ್ಯಾರೇಜುಗಳು, ಗಾಡಿಗಳು ಮತ್ತು ಜಾನವರುಗಳ ಮೇಲೆ ಮತ್ತು ಒಂದು ದಿವಸದಲ್ಲಿ 24 ಘಂಟೆಯ ಕಾಲದೊಳಗಾಗಿ ಅಂದರೆ ಒಂದು ಮಧ್ಯರಾತ್ರಿಯಿಂದ ಇನ್ನೊಂದು ಮಧ್ಯರಾತ್ರಿಯವರಿಗೂ, ಯಾವ ಕ್ಯಾರೇಜುಗಾಡಿ ಅಥವಾ ಜಾನವರುಗಳ ಮೇಲೆಯೇ ಆಗಲಿ, ಒಂದುಸಾರಿಗಿಂತಲೂ ಹೆಚ್ಚಾಗಿ ಟೋಲು ವಸೂಲ್ಮಾಡಕೂಡದು.

(2) ಟೋಲು ಮುಖಾಂತರ ಬರತಕ್ಕ ಸೈನಿಕರ ವಾಹನಕ್ಕಾಗಿ ಅಥವಾ ಅಂಥಾ ಸೈನಿಕರ ಸಾಮಾನು ವಗೈರೆ ಸಾಗಿಸತಕ್ಕ ಬಗ್ಯೆ ಉಪಯೋಗಿಸುವ ಗಾಡಿ ಅಥವಾ ಜಾನವರುಗಳ ಮೇಲೆ ಮಿಲಿಟರಿ ಅಥವಾ ಗವರ್ನಮೆಂಟ್ ಸ್ಟೋರಿಗೆ ಸಾಗಿಸಲ್ಪಡುವ ಸಾಮಾನುಗಳು ಇರತಕ್ಕ ಗಾಡಿ ಅಥವಾ ಜಾನವರುಗಳ ಮೇಲೆ ಸರ್ಕಾರಿ ಡ್ಯೂಟಿಯ ಮೇಲೆ ಬರತಕ್ಕ ಪೋಲೀಸು ಆಫಿಸರರು, ನೌಕರರು ಮೇರು ಅವರ ಕ್ಯಾರೇಜುಗಳು, ಗಾಡಿಗಳು ಮತ್ತು ಜಾನವರುಗಳು ಇವುಗಳ ಮೇಲೆ ಮತ್ತು ಅರಮನೆ ಇಲಾಖೆಗೆ ಸೇರಿದ ಗಾಡಿಗಳು, ಕ್ಯಾರೇಜುಗಳು, ಜಾನವರುಗಳು ಇವುಗಳಮೇಲೆ ಸಹಾ.

ನಂಬರು.	ಷೆಡ್ಯೂಲ್ A.	
1	ರೈಲ್ವೆ ಸ್ಟೇಷನ್ ರಸ್ತೆ ...	ಬಳಗುಳದ ರಸ್ತೆ ಮತ್ತು ಸಿಕ್ ಲೈನ್ ರಸ್ತೆ ಇವೆರಡು ಜಂಕ್ಷನ್ ಆಗುವ ಸ್ಥಳದಲ್ಲಿರುವ ಉಕ್ಕಡ
2	ಬಳಗುಳದ ರಸ್ತೆ ..	ಕೆಂಪನಕಟ್ಟೆ ಉಕ್ಕಡ
3	ಶ್ರೀರಂಗಪಟ್ಟಣದ ರಸ್ತೆ ..	ಎರಕಟ್ಟೆ ಡಿಟೋ
4	ಬೆಂಗಳೂರು ರಸ್ತೆ ..	ವೀರನಗೆರೆ ಡಿಟೋ
5	ಸೆಮಿಟೆರಿ ರಸ್ತೆ ..	ಬಂಡಿ ಸಂತ್ರಿ ಡಿಟೋ
6	ಮಹದೇವಪುರದ ರಸ್ತೆ ..	ಜಲಪುರಿ ಡಿಟೋ
7	ಆಲನಹಳ್ಳಿ ರಸ್ತೆ ..	ಇಟ್ಟಿಗೆಗೂಡು ಡಿಟೋ
8	ರೇಸುಕೋರ್ಸ್ ರಸ್ತೆ ...	ರೋಣಸಂತ್ರಿ ಡಿಟೋ
9	ನಂಜನಗೂಡು ರಸ್ತೆ ..	ನಂಜನಗೂಡು ಡಿಟೋ
10	ಡಿಟೋ ..	ಹಾಲಿ ಉಕ್ಕಡದಬಳಿ ವಿಧಾಯಕ ಮಾಡಿರುವಂತೆ ನಾಚನಹಳ್ಳಿ ಉಕ್ಕಡ
11	ಮಾನಂದವಾಡಿ ರಸ್ತೆ ...	ಚಟ್ಟನಹಳ್ಳಿ ಉಕ್ಕಡ
12	ವೈಸ್ರಾಯಿ ರಸ್ತೆ ..	ಹೊಲಗೇರಿ ಡಿಟೋ
13	ಚಾಮರಾಜ ಅಗ್ರಹಾರದ ಹಿಂಭಾಗದ ರಸ್ತೆ ...	ಡಿಟೋ
14	ಜ್ಯುಬಿಲಿ ರಸ್ತೆ ...	ಕುಕ್ಕನಹಳ್ಳಿ ಡಿಟೋ
15	ಇಲವಾಲದ ರಸ್ತೆ ..	ಶ್ರೀರಾಮಪೇಟೆ ಡಿಟೋ

ನಂಬರು.	ಷೆಡ್ಯೂಲ್ B.	ರು.	ಆ.	ಪೈ.
	ಟೋಲುಗೇಟುಗಳಲ್ಲಿ ವಸೂಲು ಮಾಡತಕ್ಕ ದರಗಳ ತಪಸೀಲು.			
1	ಸ್ಪ್ರಿಂಗು ಇರತಕ್ಕ ಪ್ರತಿ ಒಂದು ನಾಲ್ಕು ಚಕ್ರದ ಕ್ಯಾರೇಜಿಗೆ	0	4	0
2	ಡಿಟೋ 2 ಚಕ್ರದ ಕ್ಯಾರೇಜಿಗೆ	0	2	0
3	ಮನುಷ್ಯರು ಯಾ ಎತ್ತುಗಳು, ಕುದುರೆಗಳು, ಹೇಸರಕತ್ತೆಗಳು ಇವುಗಳಿಂದ ಎಳೆಯಲ್ಪಟ್ಟ ಭರ್ತಿಗಾಡಿಗಳು ಅಥವಾ ಹ್ಯಾಕ್ನಿ ಗಾಡಿ 1ಕ್ಕೆ	0	2	0
4	ಡಿಟೋ ಖಾಲಿ ಇರತಕ್ಕ ಪ್ರತಿ ಒಂದು ಗಾಡಿಗೆ	0	1	0
5	ಡಿಟೋ ಹೇರು ಹೇರಿಕೊಂಡು ಬರತಕ್ಕ ಕೋಣ ಯಾ ಎತ್ತು 1ಕ್ಕೆ ..	0	0	6
6	ಡಿಟೋ ಸವಾರಿ ಅಥವಾ ಹೇರು ಹೇರಿಕೊಂಡು ಬರತಕ್ಕ 13 ಹಿಡಿಗಳಿಗಿಂತಲೂ, ಮಿಾರಿದ ಕುದುರೆ 1ಕ್ಕೆ	0	1	0
7	ಹೇರು ಇಲ್ಲದೆ ಅಥವಾ ಸವಾರಿ ಇಲ್ಲದೆ ಬರತಕ್ಕ ಕುದುರೆ 1ಕ್ಕೆ	0	0	6
8	13 ಹಿಡಿಗಳು ಅಥವಾ ಅದಕ್ಕಿಂತ ಕಮ್ಮಿಯಾಗಿರತಕ್ಕ ಸವಾರಿ ಅಥವಾ ಹೇರು ಇರುವ ಕುದರೆ 1ಕ್ಕೆ	0	0	6
9	ಡಿಟೋ ಆನೆ 1ಕ್ಕೆ	0	8	0
10	ಡಿಟೋ ಒಂಟೆ 1ಕ್ಕೆ	0	1	0

ಕೆ. ಶ್ರೀನಿವಾಸರಾವ್,
ಫಾರ್ ಪ್ರೆಸಿಡೆಂಟ್.

266 763

ಮೈಸೂರ ಗೆಜೆಟ್.

ಸಂ. 39] ಸರ್ಕಾರದಿಂದ ಪಬ್ಲಿಷ್ ಆದ್ದು. [ನಂ. 18.

ಬೆಂಗಳೂರು, ಗುರುವಾರ, ಮೇ ತಾ|| 5, ಸನ್ 1904.

IIIನೆ ಭಾಗ.

ಲೆಜಿಸ್ಲೆಟಿವ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಲೆಜಿಸ್ಲೆಟಿವು ಇಲಾಖೆ.

ಇಸ್ತಿಹಾರ್ನಾಮೆ, ನಂ. 147—ಲೆ. 5-03, ಬೆಂಗಳೂರು, 7ನೇ ಮಾರ್ಚಿ 1904ನೇ ವರುಷ.

1902ನೇ ವರುಷದ ಮೈಸೂರು ಸೀಮೆಯ ತೂಕಗಳ ಮತ್ತು ಅಳತೆಗಳ ನಿಬಂಧನೆಯಂತೆ ಜಾರಿಯಲ್ಲಿರತಕ್ಕದ್ದಾಗಿ ಉದ್ದೇಶಿಸಲ್ಪಟ್ಟ ನೇಮಗಳ್ಗೆ ಈ ಕೆಳಗೆ ಬರುವ ಮಸ್ವಿದೆಯನ್ನು ಎಲ್ಲರ ತಿಳುವಳಿಕೆ ಬಗ್ಗಾಗಿ ಪ್ರಕಟಿಸಲ್ಪಟ್ಟಿರುತ್ತೆ. ಸದರೀ ಪ್ರಕಟನೆಯ ತಾರೀಖಿನಿಂದ ಎರಡು ತಿಂಗಳುಗಳು ಕಳದ ನಂತರ ಆ ಮಸ್ವಿದೆಯು ಆಲೋಚಿಸಲ್ಪಡುತ್ತೆ. ಆಸಕ್ತರಾದ ಜನಗಳು ಸೂಚಿಸಬಹುದಾದ ದೋಷಗಳು ಮತ್ತು ಸಲಹೆಗಳು, ಈ ಕಾಲದೊಳಗಾಗಿ ಕಳುಹಿಸಲ್ಪಟ್ಟರೆ, ತಕ್ಕ ಹಾಗೆ ಆಲೋಚಿಸಲ್ಪಡುತ್ತವೆ.

ಕೆ. ಎಸ್. ಚಂದ್ರಶೇಖರ ಅಯ್ಯರ್,
ಛೀಫ್ ಸೆಕ್ರಿಟೆರಿ.

ಮೈಸೂರು ಸೀಮೆಯ ತೂಕಗಳ ಮತ್ತು ಅಳತೆಗಳ ನಿಬಂಧನೆಯಂತೆ ಜಾರಿಯಲ್ಲಿ ಬರತಕ್ಕದ್ದಾಗಿ ಉದ್ದೇಶಿಸಲ್ಪಟ್ಟಿರುವ ನೇಮಗಳ ಮಸ್ವಿದ.

1902ನೇ ವರುಷದ IIIನೇ ನಂಬರಿನ ರೆಗ್ಯುಲೇಷನಿಂದ್ಲ ಹೊಂದಿದ ಅಧಿಕಾರಗಳನ್ನು ಮತ್ತು ಈ ವಿಷಯದಲ್ಲಿ ಹೊಂದಿರುವ ಇತರ ಎಲ್ಲಾ ಅಧಿಕಾರಗಳನ್ನು ನಡಿಸುವದರಲ್ಲಿ ಘನವನ್ನು ಹೊಂದಿದ್ದ ಶ್ರೀಮನ್ಮಹಾರಾಜರವರ ಗವರ್ನಮೆಂಟಿನವರು, 1904ನೇ ವರುಷದ .... ತಿಂಗಳಿನ ಮೊದಲು ತಾರೀಖಿನಿಂದ ಮತ್ತು ತರುವಾಯ ಮೈಸೂರು ಸೀಮೆಯ ಎಲ್ಲಾ ಭಾಗಗಳಲ್ಲಿಯೂ ತೂಕಗಳ ಮತ್ತು ಅಳತೆಗಳ ಉಪಯೋಗವನ್ನು ಕ್ರಮಪಡಿಸುವ ಬಗ್ಗಾಗಿ, ಈ ಕೆಳಗೆ ಬರುವ ನೇಮಗಳನ್ನು ವಿಧಿಸಿರುತ್ತಾರೆ.

ಬ್ರಿಟಿಷ್ ಅಥವಾ ಮೆಟ್ರಿಕ್ ರೀತಿಗಳನ್ನು ಅನುಸರಿಸುವ ತೂಕಗಳ ಮತ್ತು ಅಳತೆಗಳ ಉಪಯೋಗಕ್ಕಾಗಲಿ, ಅಥವಾ " ಶೇರು " ಎಂದು ಕರಿಯಲ್ಪಡುವದನ್ನೆ ಅಥವಾ ಅದರ ಬಳಭಾಗ ಯಾ ಗುಣಿಜವನ್ನೆ ಅಳತೆಯ ಪ್ರಮಾಣವಾಗಿ ಪುಳ್ಳ ಒಂದು ತೂಕವನ್ನು ಅಥವಾ ಅಳತೆಯನ್ನು ಆಧಾರ ಉಂಟಾಗಿಲ್ಲದೆ ಇರುವ, ಅಂಗೀಕರಿಸಲ್ಪಟ್ಟ ಇತರ ಯಾವ ರೀತಿಯ ಆಚರಣೆಗಾಗಲಿ, ಈ ನೇಮಗಳ ಯಾವ ನಿಯಮವೂ ಪ್ರಯೋಗವಾಗುವದಾಗಿಯಾದರೂ ಅಡ್ಡಿ ಮಾಡುವದಾಗಿಯಾದರೂ ಉದ್ದೇಶಿಸಲ್ಪಟ್ಟಿರುವದಿಲ್ಲ.

1. (1) ತೂಕದ ಪ್ರಮಾಣವು " ಶೇರು " ತೂಕವಾಗಿರತಕ್ಕದ್ದು; ಆ ಶೇರಿನ ತೂಕವು, ಗವರ್ನಮೆಂಟಿನವರ ಸ್ವಾಧೀನದಲ್ಲಿರುವ ಬ್ರಿಟಿಷ್ ಇಂಡಿಯ ಚಲಾವಣೆಗೆ ಸೇರಿದ ಇಪ್ಪತ್ತನಾಲ್ಕು ರೂಪಾಯಿಗಳ (ಟ್ರಾಯಿ 180 ಗ್ರೇನ್ಸುಳ್ಳ) ತೂಕಕ್ಕೆ ಸಮಾನವಾದ ತೂಕವುಳ್ಳ ಲೋಹದ ಮುದ್ದೆಯಾಗಿರುತ್ತೆ.

(2) ಅಳತೆಯ ಪರಿಮಾಣವು " ಶೇರು ಅಳತೆ " ಯಾಗಿರಬೇಕು. ಅದು ಗವರ್ನಮೆಂಟಿನವರ ಸ್ವಾಧೀನದಲ್ಲಿರುವ ಕಂಚಿನ ಟೊಳ್ಳಾದ ಸ್ತಂಭವಾಗಿದ್ದೆ; ಮತ್ತು ಅದು ಕಂಠದವರಿಗೆ ತುಂಬಲ್ಪಟ್ಟಾಗ್ಯೆ ಸರಿಯಾಗಿ ಎಂಭತ್ತು ರೂಪಾಯಿ ತೂಕವುಳ್ಳ ಮತ್ತು ದಟ್ಟದ ಮಹತ್ಪರಿಮಾಣವುಳ್ಳ ಬಟ್ಟಿ ಇಳಿಸಿದ ನೀರನ್ನು ಗಾಳಿಯ ಕ್ರಮವಾದ ಒತ್ತಾಯದಲ್ಲಿ ಹಿಡಿಯುತಕ್ಕದ್ದಾಗಿ ಇದೆ.

2. (1) ಮೇಲ್ಕಂಡ ತೂಕದ ಶೇರಿನ ಮತ್ತು ಅಳತೆ ಶೇರಿನ ಪ್ರಮಾಣಗಳು ಸ್ಟೇಟ್ ಹಜೂರು ಖಜಾನೆಯಲ್ಲಿ ಜತನದಿಂದ ಭದ್ರಪಡಿಸಿ ಟ್ರೆಜರಿಯ ಚಾರ್ಜಿನಲ್ಲಿರತಕ್ಕ ಆಫೀಸರ ಸ್ವಂತ ಕಾವಲಿನಲ್ಲಿರತಕ್ಕದ್ದು.

(2) ತೂಕದ ಶೇರು ಮತ್ತು ಅಳತೆ ಶೇರು—ಇವುಗಳ ಪ್ರಮಾಣದ ಒಂದು ಮಾದರಿಯು ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಜೈಲಿನ ಸೂಪರಿಂಟೆಂಡೆಂಟರ ಸ್ವಂತ ಕಾವಲಿನಲ್ಲಿ ಇಡತಕ್ಕದ್ದು; ಮತ್ತು ಆ ಮಾದರಿಯು ಹತ್ತು ವರುಷಗಳಲ್ಲಿ ಒಂದಾವರ್ತಿಗೆ ಕಮ್ಮಿ ಇಲ್ಲದಂತೆ ಸ್ಟೇಟ್ ಹಜೂರು ಖಜಾನೆಯಲ್ಲಿ ಇಡಲ್ಪಟ್ಟಿರುವ ಮಾದರಿಗಳೊಂದಿಗೆ ಸರಿನೋಡಲ್ಪಡತಕ್ಕದ್ದು.

3. ಈ ಕೆಳಗೆ ಬರುವ ತೂಕಗಳು ಮತ್ತು ಅಳತೆಗಳು ಇದರಿಂದ ಒಪ್ಪಲ್ಪಟ್ಟಿರುತ್ತವೆ.

(A) ತೂಕಗಳು :—

ತೊಲಾ (180 ಗ್ರೈನ್ಸ್), 2 (1) ನೇ ನೇಮದಲ್ಲಿ ನಿಶ್ಚಯಿಸಲ್ಪಟ್ಟ ಒಂದು ಸೇರಿನ ಇಪ್ಪತ್ತುನಾಲ್ಕನೆ ಭಾಗದಲ್ಲಿ ಒಂದು ಭಾಗಕ್ಕೆ ಸಮವಾಗಿರುವದು;

ಅರ್ಧ ತೊಲಾ; ಕಾಲು ತೊಲಾ; ಮತ್ತು ಒಂದು ತೊಲಾವಿನ ಇನ್ನು ಚಿಕ್ಕ ಉಪಭಾಗಗಳು;

ಒಂದು ತೊಲಾವಿನ ಅಪವರ್ತ್ಯಗಳು ಅಷ್ಟು ತೊಲಾಗಳೆಂದು ವಿವರಿಸಲ್ಪಡತಕ್ಕದ್ದು;

ಶೇರು, 2 (1)ನೇ ನೇಮದಲ್ಲಿ ನಿಶ್ಚಯಿಸಲ್ಪಟ್ಟ ತೂಕದ ಶೇರಿನ ಪ್ರಮಾಣಕ್ಕೆ ಸಮವಾಗಿರುವದು;

ಅಚ್ಚೇರು=12 ತೊಲಾಗಳು;

ಪಾವು=6 ತೊಲಾಗಳು;

ಅರಪಾವು=3 ತೊಲಾಗಳು;

ಮಣ, 40 ಶೇರುಗಳಿಗೆ ಸಮವಾಗಿರುವದು;

ಒಂದು ಶೇರಿನ ಚಿಕ್ಕ ಅಪವರ್ತ್ಯಗಳು, ಅಷ್ಟು ಶೇರುಗಳೆಂದು ವಿವರಿಸಲ್ಪಡತಕ್ಕದ್ದು. (ಅಪೂರ್ಣಭಾಗಗಳೊಂದಿಗಾಗಲಿ ಯಾ ಇಲ್ಲದೇನೆ ಆಗಲಿ), ಅಥವಾ ಒಂದು ಮಣದ ಅಂಥಾ ಅಪೂರ್ಣಾಂಕವೆಂದು ವಿವರಿಸಲ್ಪಡತಕ್ಕದ್ದು;

ಉದಾಹರಣೆ: 5 ಶೇರುಗಳು (ಪಂಚೇರು); 10 ಶೇರುಗಳು (ಧಡಿಯ); ½ (ಅರ್ಧ) ಮಣ; ¼ (ಕಾಲು) ಮಣ, ಮುಂತಾದ್ದು;

ಒಂದು ಮಣದ ಗುಣಿಜಗಳು, ಅಷ್ಟು ಮಣಗಳೆಂದು ವಿವರಿಸಲ್ಪಡತಕ್ಕದ್ದು. (ಅಪೂರ್ಣಭಾಗಗಳೊಂದಿಗಾಗಲಿ ಯಾ ಇಲ್ಲದೇನೆ ಆಗಲಿ); ಉದಾಹರಣೆ: 2 ಮಣಗಳು; 2½ (ಎರಡುವರೆ) ಮಣಗಳು; ಮುಂತಾದ್ದು;

ದೊಡ್ಡಶೇರು=80 ತೊಲಾಗಳು; ದೊಡ್ಡ ಮಣ, ಪ್ರತಿ ಒಂದು ದೊಡ್ಡ ಶೇರು 80 ತೊಲಾಗಳು ಉಳ್ಳದ್ದಾಗಿರುವ 40 ದೊಡ್ಡಶೇರುಗಳಿಗೆ ಸಮವಾಗಿರುವದು;

ದೊಡ್ಡಶೇರು ಮತ್ತು ಮಣ—ಇವುಗಳ ಗುಣಿಜಗಳು, ಅಷ್ಟು ದೊಡ್ಡ ಶೇರುಗಳು ಅಥವಾ ದೊಡ್ಡ ಮಣಗಳೆಂದು ವಿವರಿಸಲ್ಪಡತಕ್ಕದ್ದು.

(B) ಅಳತೆಗಳು :—

ಶೇರು, 2 (2)ನೇ ನೇಮದಲ್ಲಿ ನಿಶ್ಚಯಿಸಲ್ಪಟ್ಟ ಅಳತೆ ಶೇರಿನ ಪ್ರಮಾಣಕ್ಕೆ ಸಮವಾಗಿರುವದು;

ಒಂದು ಶೇರಿನ ಉಪಭಾಗಗಳು, ಅದು ಹ್ಯಾಗೆಂದರೆ ...

ಅಚ್ಚೇರು (ಶೇರಿನ ಅರ್ಧಭಾಗ);

ಪಾವು (ಶೇರಿನ ಕಾಲುಭಾಗ);

ಅರಪಾವು (ಶೇರಿನ ಎಂಟನೆ ಭಾಗ);

ಚಟಾಕು (ಶೇರಿನ ಹದಿನಾರನೆ ಭಾಗ);

ಕೊಳಗ=8 ಶೇರುಗಳು;

ಒಂದು ಶೇರಿನ ಕಮ್ಮಿಯಾದ ಗುಣಿಜಗಳು ಅಷ್ಟು ಶೇರುಗಳೆಂದು ವಿವರಿಸಲ್ಪಡತಕ್ಕದ್ದು. (ಅಪೂರ್ಣಭಾಗಗಳೊಂದಿಗಾಗಲಿ ಯಾ ಇಲ್ಲದೇನೆ ಆಗಲಿ), ಅಥವಾ ಒಂದು ಕೊಳಗದ ಅಂಥ ಅಪೂರ್ಣಾಂಕವೆಂದು ವಿವರಿಸಲ್ಪಡತಕ್ಕದ್ದು;

ಪಲ್ಲಾ=12½ ಕೊಳಗಗಳು ಅಥವಾ 100 ಶೇರುಗಳು;

ಕಂಡಗ=20 ಕೊಳಗಗಳು ಅಥವಾ 160 ಶೇರುಗಳು;

ಒಂದು ಕೊಳಗದ ಕಮ್ಮಿಯಾದ ಗುಣಿಜಗಳು ಅಷ್ಟು ಕೊಳಗಗಳೆಂದು ವಿವರಿಸಲ್ಪಡತಕ್ಕದ್ದು. (ಅಪೂರ್ಣಭಾಗಗಳೊಂದಿಗಾಗಲಿ ಯಾ ಇಲ್ಲದೇನೆ ಆಗಲಿ), ಅಥವಾ ಒಂದು ಪಲ್ಲಾ ಯಾ ಕಂಡಗದ ಅಂಥಾ ಅಪೂರ್ಣಾಂಕವೆಂದು ವಿವರಿಸಲ್ಪಡತಕ್ಕದ್ದು.

4. ವಿಶೇಷವಾಗಿ ವಾಡಿಕೆಯಲ್ಲಿರುವ ತೂಕಗಳ ಮತ್ತು ಅಳತೆಗಳ ಮಾದ್ರಿಗಳನ್ನು, ಬೆಂಗಳೂರು ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರು ಮಾಡಿಸತಕ್ಕದ್ದಲ್ಲದೆ, ಸದರೀ ಮಾದ್ರಿಗಳು, ಜಾಗರೂಕತೆಯಿಂದ ಸರಿನೋಡಲ್ಪಟ್ಟು ಸರಿಯಾಗಿರುವದೆಂಬುವದಕ್ಕಾದ ಮುದ್ರೆಯಿಂದ ಮುದ್ರಿಸಲ್ಪಟ್ಟ ತರುವಾಯ, ಅವುಗಳನ್ನು ಮಾಡತಕ್ಕ ಶಿಬ್ಬಂದಿ ಕರ್ಚಿಗಾಗಿ ನೂರಿಗೆ ಇಷ್ಟೆಂತ ನ್ಯಾಯವಾಗಿ ನಿರ್ಣಯಿಸಲ್ಪಟ್ಟ ಸಂಖ್ಯೆಯು ಸೇರಿದ ಅವುಗಳ ಅಸಲ್ ಕರೀದಿಗೆ ವಿಾರದಂತಿರುವ ಬೆಲೆಗಳಿಗೆ ವಿಕ್ರಯಿಸಲ್ಪಡುವ ಬಗ್ಗೆ, ದೊರಕುವಂತಿರಬೇಕು.

5. ತೂಕದ ಮತ್ತು ಅಳತೆಯ ಪ್ರಮಾಣಗಳ ಸರಿಯಾದ ಮಾದ್ರಿಗಳನ್ನು ಮತ್ತು ವಿಶೇಷ ವಾಡಿಕೆಯಲ್ಲಿರುವ ತೂಕಗಳ ಮತ್ತು ಅಳತೆಗಳ ಮಾದ್ರಿಗಳನ್ನೂ, ಬೆಂಗಳೂರು ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರು, ಈ ರೆಗ್ಯುಲೇಷನಿನ 3ನೇ ಪ್ರಕರಣದಲ್ಲಿ ನಮೂದಿಸಲ್ಪಟ್ಟ ಕಚೇರಿಗಳಿಗೂ ಮತ್ತು ಪ್ರತಿ ಒಂದು ತಾಲ್ಲೂಕು ಕಚೇರಿಗೂ ಮತ್ತು ಪೊಲೀಸ್ ಸ್ಟೇಷನಿಗೂ ಒದಗಿಸತಕ್ಕದ್ದು. ಇವುಗಳು, 10 ವರುಷಗಳಿಗೆ ಒಂದಾವರ್ತಿ ಕಮ್ಮಿಯಿಲ್ಲದಂತೆ, ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರಿಂದ ಸರಿನೋಡಲ್ಪಡಬೇಕು, ಮತ್ತು ಅವಶ್ಯವಿದ್ದಾಗೆಲ್ಲಾ ಅವುಗಳಿಗೆ ಬದಲಾಗಿ ಹೊಸದಾದವುಗಳನ್ನು ಮಾಡಿಸಬೇಕು.

6. ವಾಡಿಕೆಯಾಗಲೀ, ಸ್ಪಷ್ಟವಾದ ಅಥವಾ ಭಾವದಿಂದಾದ ಕರಾರಾಗಲೀ ವಿರೋಧವಾಗಿದ್ದರೇನೇ ಹೊರ್ತು, ಯಾವ ಪದಾರ್ಥವನ್ನಾಗಲೀ ಅಂಗೀಕರಿಸಲ್ಪಟ್ಟ ಪರಿಮಾಣದ ಅಳತೆಗಳಲ್ಲಿ ಅಳೆಯುವಾಗ್ಯೆ, ಅಳತೆ ಮೇಲೆ ಗುಡ್ಡೆ ಮಾಡದೆ, ಅಳತೆಬಾಯಿಗೆ ಸರಿಯಾಗಿರುವಂತೆ ದುಂಡುಕೋಲಿನಿಂದ ಅದರಲ್ಲಿರುವ ಆ ಪದಾರ್ಥವನ್ನು ಸಮವಾಗಿ ತೆಗೆಯುವದಾಗಲೀ, ಅಥವಾ ಆ ಪದಾರ್ಥವು ಆಕಾರದಿಂದಲಾದರೂ, ಗಾತ್ರದಿಂದಲಾದರೂ, ಅಳತೆಬಾಯಿ ಮೇಲೆ ಸಮವಾಗಿರುವಹಾಗೆ ಮಾಡಲು ಸಾಧ್ಯವಿಲ್ಲದ ಪಕ್ಷದಲ್ಲಿ ಆ ಅಳತೆಯ ಕಂಠದ ಸಮಕ್ಕೆ ಆ ಪದಾರ್ಥದ ಆಕಾರ ಮತ್ತು ಗಾತ್ರ ಅವಕಾಶ ಕೊಡುವಷ್ಟು ತುಂಬುವದಾಗಲೀ—ಇದು ನಡಿಯತಕ್ಕದೆಂದು ಊಹಿಸಲ್ಪಟ್ಟಿರುತ್ತೆ.

7. ಮಾದ್ರಿ ತೂಕಗಳ ಅಥವಾ ಅಳತೆಗಳ ಸರಿಯಾದ ಪ್ರಮಾಣದಿಂದ ಈ ಕೆಳಗಿನ ಪಟ್ಟಿಯಲ್ಲಿ ಕಂಡ ತಪ್ಪಿಗಿಂತ ಹೆಚ್ಚಿಲ್ಲದಂತೆ ವೆತ್ಯಾಸವಾಗುವ ಯಾವ ತೂಕವನ್ನಾಗಲೀ ಅಥವಾ ಅಳತೆಯನ್ನಾಗಲೀ, ಅಂಥಾ ವೆತ್ಯಾಸದಿಂದಲೇನೇ ಒಂದು ಸುಳ್ಳು ತೂಕ ಅಥವಾ ಅಳತೆ ಎಂದು ಭಾವಿಸಕೂಡದು:—

ವೆತ್ಯಾಸವಾಗಿರುವ ತೂಕಗಳಿಗೂ ಅಳತೆಗಳಿಗೂ ಗಣನೆ ಮಾಡಬೇಕಾಗಿಲ್ಲದ ತಪ್ಪನ್ನು ತೋರಿಸುವ ಪಟ್ಟಿ :—

ತೂಕಗಳು.

ತೂಕಗಳು.	ಬಿಡಲ್ಪಟ್ಟ ತಪ್ಪು (ಟ್ರಾಯಿ, ಗ್ರೇನ್ಸನಲ್ಲಿ).	
	ಹೆಚ್ಚಿನಲ್ಲಿ.	ಕಮ್ಮಿಯಲ್ಲಿ.
4 ಮಣಗಳಿಗೆ ಮತ್ತು ಅದಕ್ಕೆ ಕಡಮೆಯಾಗಿ 20 ಶೇರುಗಳ ವರಿಗೆ ..	5	2·5
20 ಶೇರುಗಳಿಗೆ ಕಡಮೆಯಾಗಿ $2\frac{1}{2}$ ಶೇರುಗಳ ವರಿಗೆ	2	1
$2\frac{1}{2}$ ಶೇರುಗಳಿಗೆ ಕಡಮೆಯಾಗಿ $\frac{1}{2}$ ಶೇರಿನ ವರಿಗೆ ..	·5	·25
$\frac{1}{2}$ ಶೇರಿಗೆ ಕಡಮೆಯಾಗಿ 1 ತೊಲಾದ ವರಿಗೆ	·2	·1
1 ತೊಲಾಕ್ಕೆ ಕಡಿಮೆಯಾಗಿ $\frac{1}{8}$ ತೊಲಾದ ವರಿಗೆ	·1	·05
$\frac{1}{8}$ ತೊಲಾಕ್ಕೆ ಕಡಮೆಯಾಗಿ	·05	·025

ಅಳತೆಗಳು.

ಅಳತೆಗಳು.	ಅಂಶ ಮಾಡಲ್ಪಟ್ಟ ಗಾಜಿನ ಕೊಳವೆಯಿಂದ ಅಳತೆ ಮಾಡಲ್ಪಟ್ಟು ಬಿಡಬೇಕಾದ ತಪ್ಪು (ಗ್ರೇನ್ಸನಲ್ಲಿ).
ಒಂದು ಕಂಡಗ.	1,000 ಗ್ರೇನ್ಸು
ಒಂದು ಕಂಡಗಕ್ಕೆ ಕಡಮೆಯಾಗಿ $2\frac{1}{2}$ ಶೇರುಗಳ ವರಿಗೆ	ಪ್ರತಿ 5 ಶೇರುಗಳಿಗೆ 5 ಗ್ರೇನ್ಸು
$2\frac{1}{2}$ ಶೇರುಗಳಿಗೆ ಕಡಮೆಯಾಗಿ $\frac{1}{4}$ ಶೇರಿನ ವರಿಗೆ	8 ಗ್ರೇನ್ಸು
$\frac{1}{4}$ ಶೇರಿಗೆ ಕಡಮೆಯಾಗಿ $\frac{1}{8}$ ಶೇರಿನ ವರಿಗೆ	4 „
$\frac{1}{8}$ ಶೇರಿಗೆ ಕಡಮೆಯಾಗಿ	2 „

8. ಅಳತೆ ಶೇರಿನ ಪ್ರಮಾಣದ ಯಾವ ಪರಿಮಾಣವನ್ನಾಗಲೀ ಉಂಟಾಗಿರುತ್ತೆಂದು ತೋರಿಸಲ್ಪಡದೆ ಇರುವ ಯಾವ ಪಾತ್ರೆಯಿಂದಲಾದರೂ ಒಂದು ಪದಾರ್ಥವನ್ನು ವಿಕ್ರಯಿಸೋಣವು ನಿಬಂಧನೆಗೆ ವಿರುದ್ಧವೆಂದು ; ಅಥವಾ

ಯಾವ ಪದಾರ್ಥದ ಪರಿಮಾಣವನ್ನಾದರೂ ತೂಕದಿಂದಾಗಲೀ ಅಥವಾ ಅಳತೆಯಿಂದಾಗಲೀ ಅಥವಾ ಸ್ವಲ್ಪ ಒಂದು ರೀತಿಯಿಂದಾಗಲೀ ಸ್ವಲ್ಪ ಮತ್ತೊಂದು ರೀತಿಯಿಂದಾಗಲೀ ನಿಶ್ಚಯಿಸುವ ಬಗ್ಗೆ ಒಪ್ಪಿಕೊಳ್ಳೋಣವನ್ನು ನಿಷೇಧಿಸುತ್ತೆಂದು,

ಈ ನೇಮಗಳಲ್ಲಿನ ಯಾವ ನಿಯಮವೂ ಎಣಿಸಲ್ಪಡಕೂಡದು.

9. ತೂಕಗಳು ಮತ್ತು ಅಳತೆಗಳು ಲೋಹದಲ್ಲಿ ಮಾಡಲ್ಪಟ್ಟಿರಬೇಕು ; ಆದರೆ ಒಂದು ಶೇರಿಗೆ ಕಡಿಮೆಯಾದ ಅಳತೆಗಳು, ಲೋಹದಲ್ಲಾಗಲೀ, ಮರದಲ್ಲಾಗಲೀ, ಅಥವಾ ಬಿದರಿನಲ್ಲಾಗಲೀ ಮಾಡಲ್ಪಡಬಹುದು.

10. ತೂಕಗಳ ಆಕಾರವು, ಎತ್ತುವ ಬಗ್ಗೆ ಹಿಡಿಗಳಾಗಲೀ ಹಳ್ಳಗಳಾಗಲೀ ಇರುವ ಸಂದರ್ಭ ವಿನಹ, ಸಾಧ್ಯವಿರುವ ಮಟ್ಟಿಗೆ ಮೇಲುಭಾಗದಲ್ಲಿಯೂ ಕೆಳಭಾಗದಲ್ಲಿಯೂ ಚಪ್ಪಟೆಯಾಗಿರತಕ್ಕದ್ದು ಮತ್ತು ನಿಲ್ಲುವ ಭಾಗಗಳು ದುಂಡಾಗಿಯಾಗಲೀ ಸಮಕೋಣವುಳ್ಳದ್ದಾಗಿಯಾಗಲೀ ಇರತಕ್ಕದ್ದು.

ಅಳತೆಗಳು, ಸಮವಾದ ತಳವುಳ್ಳದ್ದಾಗಿಯೂ ಒಳಗಿನ ಅಡ್ಡಳತೆಯು ಆಳದ ಅರ್ಧ ಭಾಗಕ್ಕೆ ಸಮಾನವಾಗಿಯೂ ಇರುವ ಟೊಳ್ಳಾದ ಸ್ತಂಭಗಳಾಗಿ ಇರತಕ್ಕದ್ದು.

11. ಪ್ರತಿ ತೂಕದಲ್ಲಿಯೂ, ಅದರ ಚಿಕ್ಕ ಗಾತ್ರದಿಂದ ಅಸಾಧ್ಯವಾಗಿರುವ ಸಂದರ್ಭದಲ್ಲಿ ವಿನಹ, ಅದರ ತೂಕದ ಹೆಸರು ಮೇಲಾಗಲೀ ಪಕ್ಕದಲ್ಲಾಗಲೀ ಓದಬಹುದಾದ ಸಂಖ್ಯೆಗಳಲ್ಲಿಯೂ ಮತ್ತು ಅಕ್ಷರಗಳಲ್ಲಿಯೂ ಮುದ್ರಿಸಲ್ಪಟ್ಟಿರತಕ್ಕದ್ದು.

ಪ್ರತಿ ಅಳತೆಯಲ್ಲಿಯೂ, ಅದರ ಹೊರಗಿನ ಭಾಗದಲ್ಲಿ ಓದಬಹುದಾದ ಸಂಖ್ಯೆಗಳಲ್ಲಿಯೂ ಮತ್ತು ಅಕ್ಷರಗಳಲ್ಲಿಯೂ ಅದರ ಹೆಸರು ಮುದ್ರಿಸಲ್ಪಟ್ಟಿರತಕ್ಕದ್ದು.

ಈ ನೇಮಕ್ಕೆ ವಿರುದ್ಧವಾದ ಯಾವ ತೂಕಕ್ಕಾಗಲೀ ಅಳತೆಗಾಗಲೀ ವೆರಿಫಿಕೇಷನ್ ಮೊಹರನ್ನು ಈ ನೇಮಗಳಂತೆ ಮುದ್ರಿಸೋಣ ನಿಷೇಧಿಸಲ್ಪಟ್ಟಿರುತ್ತೆ.

12. ಪ್ರತಿ ತೂಕವೂ, ಅದರ ಚಿಕ್ಕಗಾತ್ರದಿಂದ ಅಸಾಧ್ಯವಾಗಿರುವ ಸಂದರ್ಭದಲ್ಲಿ ವಿನಹ, ಮತ್ತು ಪ್ರತಿ ಅಳತೆಯು ಸರಿನೋಡಲ್ಪಡಬೇಕಲ್ಲದೆ, ಕೆಳಗೆ ಕೊಟ್ಟಿರುವ ಮಾದ್ರಿಯಲ್ಲಿ ಒಂದು ವೆರಿಫಿಕೇಷನ್ ಮುದ್ರೆಯಿಂದ ಮುದ್ರಿಸಲ್ಪಡಬೇಕು, ಮತ್ತು ಆ ಬಳಿಕ ಪ್ರತಿ ಐದು ವರುಷಗಳಲ್ಲಿ ಒಂದಾವರ್ತಿಗೆ ಕಮ್ಮಿಯಿಲ್ಲದಂತೆ ಸರಿನೋಡಲ್ಪಡುವ ಬಗ್ಗೆ ಹಾಜರ್ ಮಾಡಲ್ಪಡಬೇಕು.

ಮುದ್ರೆಯ ಆಕಾರ —ಮೈಸೂರು ಮಹಾರಾಜರ ಬಿರದು ಮಧ್ಯೆ, ಅದನ್ನು ಸುತ್ತಿಕೊಂಡು ಇರುವ ಚಕ್ರದ ಹೊರಗೆ "ಮೈಸೂರು" ಎಂಬ ಪದವು ಮುದ್ರಿಸುವ ವರುಷವನ್ನು ತೋರಿಸುವ ಸಂಖ್ಯೆಗಳು ಸಹ, ಜೊತೆಯಲ್ಲಿರುವ ಮಾದ್ರಿಯಂತೆ ಇರತಕ್ಕದ್ದು.

13. (1) ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ತೂಕಗಳ ಮತ್ತು ಅಳತೆಗಳ ಒಂದು ಇನ್‌ಸ್ಪೆಕ್ಟರು ಮತ್ತು ಅವಶ್ಯಕವಿರುವ ಇತರ ಶಿಬ್ಬಂದಿಯೂ ನೇಮಕ ಮಾಡಲ್ಪಡಬೇಕು. ಅವರುಗಳೆಲ್ಲರು ಡೆಪ್ಯುಟಿ ಕಮ್ಮಿಷನರ ಅಧಿಕಾರಕ್ಕೆ ಒಳಪಟ್ಟಿರತಕ್ಕದ್ದು.

(2) ಇನ್‌ಸ್ಪೆಕ್ಟರು ಡಿಸ್ಟ್ರಿಕ್ಟಿನಲ್ಲಿ ಎಲ್ಲಾ ಸಂಚರಿಸತಕ್ಕದ್ದಲ್ಲದೆ, 14ನೇ ನೇಮದಂತೆ ಸರಿನೋಡುವ ಉದ್ದೇಶಕ್ಕಾಗಿಯೂ ಮತ್ತು ತೂಕಗಳಿಗೂ ಅಳತೆಗಳಿಗೂ ಮುದ್ರೆ ಹಾಕುವದಕ್ಕಾಗಿಯೂ ಅವರಿಗೆ ಕಳುಹಿಸಲ್ಪಟ್ಟ ಎಲ್ಲಾ ಅರ್ಜಿಗಳನ್ನು ವ್ಯವಸ್ಥೆ ಮಾಡತಕ್ಕದ್ದು.

(3) ಇನ್‌ಸ್ಪೆಕ್ಟರು ತಾವು ಇಡಬೇಕಾದ ಒಂದು ಪುಸ್ತಕದಲ್ಲಿ ಪ್ರತಿ ಸರಿನೋಡುವಿಕೆಯನ್ನು ಕುರಿತು ಟಿಪ್ಪಣಿಯನ್ನು ಬರೆಯತಕ್ಕದ್ದಲ್ಲದೆ, ತಾವು ಪ್ರತಿ ಒಂದಾವರ್ತಿ ಮುದ್ರೆ ಹಾಕಿದ್ದಕ್ಕೂ ಒಂದು ಸರ್ಟಿಫಿಕೇಟನ್ನು ತಮ್ಮ ದಸ್ಕತ್ತಿನೊಡನೆ, ಬೇಕಾಗಿದ್ದರೆ ಕೊಡತಕ್ಕದ್ದು.

(4) ತೂಕಗಳು ಅಳತೆಗಳು ಮತ್ತು ಉಪಯೋಗದಲ್ಲಿರತಕ್ಕ ತೂಕ ಮಾಡುವ ಉಪಕರಣಗಳು—ಇವುಗಳ ಮೇಲ್ವಿಚಾರಣೆಯೂ ಕೂಡ ಅವರ ಕರ್ತವ್ಯಗಳ ಅಂಶವಾಗಿರುತ್ತೆ ; ಮತ್ತು ಈ ಉದ್ದೇಶಕ್ಕೋಸ್ಕರ ಮತ್ತು ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನ 153ನೆ ಪ್ರಕರಣದ ಉದ್ದೇಶಕ್ಕೋಸ್ಕರ, ಅವರ ಅಧಿಕಾರಕ್ಕೆ ಒಳಪಟ್ಟ ಎಲ್ಲಾ ಸ್ಥಳಿಕ ಪ್ರದೇಶದ ವಿಷಯದಲ್ಲಿ ಒಂದು ಪೊಲೀಸ್ ಸ್ಟೇಷನು ಅಧೀನದಲ್ಲಿ ಉಂಟಾಗಿರುವ ಒಬ್ಬ ಆಫೀಸರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆಂದು ಅವರು ಎಣಿಸಲ್ಪಡತಕ್ಕದ್ದು. ಆ ಪ್ರಕಾರವಾಗಿ, ತಮ್ಮ ಅಧಿಕಾರಕ್ಕೊಳಪಟ್ಟ ಯಾವ ಸ್ಥಳಗಳಲ್ಲಾದಲೀ ಸುಳ್ಳಾದ ಯಾವ ತೂಕಗಳಾದರೂ ಅಳತೆಗಳಾದರೂ ಅಥವಾ ತೂಕಗಳಾದರೂ ಅಳತೆಗಳಾದರೂ ಅಥವಾ ತೂಕಮಾಡುವ ಉಪಕರಣಗಳಾದರೂ ಇರುತ್ತವೆಂದು ನಂಬುವದಕ್ಕೆ ಅವರು ಕಾರಣ ಉಂಟಾಗಿರುವ ಸಂದರ್ಭದಲ್ಲಿ, ಅಲ್ಲಿ ಉಪಯೋಗಿಸಲ್ಪಡುವ ಅಥವಾ ಇಡಲ್ಪಟ್ಟ ಯಾವ ತೂಕಗಳನ್ನಾದರೂ ಅಳತೆಗಳನ್ನಾದರೂ ಅಥವಾ ತೂಕ ಮಾಡುವ ಉಪಕರಣಗಳನ್ನಾದರೂ ಪರಿಶೀಲನೆ ಮಾಡುವ ಉದ್ದೇಶಕ್ಕಾಗಲೀ ಅಥವಾ ಹುಡುಕುವ ಉದ್ದೇಶಕ್ಕಾಗಲೀ, ಅಂಥಾ ಸ್ಥಳವನ್ನು ಅವರು ಒಂದು ವಾರೆಂಟು ಇಲ್ಲದೇನೆ ಪ್ರವೇಶಿಸಬಹುದು. ಅಂಥಾ ಸ್ಥಳದಲ್ಲಿ ಸುಳ್ಳಾದ ಯಾವ ತೂಕಗಳನ್ನಾದರೂ ಅಳತೆಗಳನ್ನಾದರೂ ಅಥವಾ ತೂಕ ಮಾಡುವ ಉಪಕರಣಗಳನ್ನಾದರೂ ಅವರು ಕಂಡರೆ, ಅವುಗಳನ್ನು ಅವರು ಹಿಡಿಯ ಬಹುದಲ್ಲದೆ, ಹಾಗೆ ಹಿಡಿದಿರುವದನ್ನು ಕುರಿತು ವರ್ತಮಾನವನ್ನು ಅಧಿಕಾರವುಳ್ಳ ಒಬ್ಬ ಮ್ಯಾಜಿಸ್ಟ್ರೇಟರಿಗೆ ಕೂಡ್ಲೆ ಕೊಡತಕ್ಕದ್ದು.

14. (1) ಸರಿನೋಡುವ ಬಗ್ಗೆಯೂ ಮತ್ತು ತೂಕಗಳಿಗೂ ಅಳತೆಗಳಿಗೂ ಮುದ್ರೆ ಹಾಕುವ ಬಗ್ಗೆಯೂ ಪ್ರತಿ ಅರ್ಜಿಯನ್ನು ಸ್ಥಳಿಕ ಅಮಲ್‌ದಾರ್‌ರಿಗಾಗಲೀ ಅಥವಾ ಡೆಪ್ಯುಟಿ ಅಮಲ್‌ದಾರ್‌ರಿಗಾಗಲೀ ಕಳುಹಿಸತಕ್ಕದ್ದು, ಮತ್ತು ಅದರೊಂದಿಗೆ, ವ್ಯವಸ್ಥಿಸಲ್ಪಡಬೇಕಾದ ಪ್ರತಿ ಒಂದು ತೂಕಕ್ಕಾಗಲೀ ಅಥವಾ ಅಳತೆಗಾಗಲೀ ಒಂದು ಆಣೆ ಫೀಜು ಸಹ ಕೊಡತಕ್ಕದ್ದು.

(2) ಆ ಫೀಜು ಕಜಾನಿಗೆ ಕಳುಹಿಸತಕ್ಕದ್ದು ಮತ್ತು 13ನೇ ನೇಮದಂತೆ ಮುದ್ರೆ ಹಾಕುವದಕ್ಕಾಗಿ ಇಡಲ್ಪಟ್ಟ ಪ್ರತ್ಯೇಕ ಶಿಬ್ಬಂದಿಯ ಕರ್ಚಿಗೆ ಜಮೆ ಕಟ್ಟತಕ್ಕದ್ದು.

(3) ಈ ನೇಮಗಳಿಗೆ ಶೇರಿಸಲ್ಪಟ್ಟ ಪಟ್ಟಿಯಲ್ಲಿ ನಮೂದಾಗಿರುವ ಉಪದೇಶಗಳಿಗೆ ಅನುಗುಣವಾಗಿ ವ್ಯವಸ್ಥೆಮಾಡುವ ಬಗ್ಗೆ ಆ ಅರ್ಜಿಯು ತೂಕಗಳ ಮತ್ತು ಅಳತೆಗಳ ಇನ್‌ಸ್ಪೆಕ್ಟರಿಗೆ ಕೊಡತಕ್ಕದ್ದು.

15. (1) ತೂಕಗಳನ್ನು ಅಳತೆಗಳನ್ನು ಲೋಪವಿಲ್ಲದೆ ಸರಿಮಾಡುವ ಬಗ್ಗೆ ಅವಶ್ಯಕವೆಂದು ತೋರಿಬರಬಹುದಾದ ಸ್ವಲ್ಪ ಕ್ರಮಪಡಿಸೋಣಕ್ಕೆಲ್ಲಾ ಬ್ಯಾರೆ ಕರ್ಚು ಹಾಕದೇನೇ, ತೂಕಗಳ ಮತ್ತು ಅಳತೆಗಳ ಇನ್‌ಸ್ಪೆಕ್ಟರು ಕ್ರಮಪಡಿಸುವ ಕೆಲಸವನ್ನು ನಡಿಸತಕ್ಕದ್ದು.

(2) ಈ ನೇಮಗಳಿಗೆ ವಿರುದ್ಧವಾಗಿರುವ ಕಾರಣದಿಂದ ಸರಿನೋಡುವದಕ್ಕಾಗಲಿ ತಿದ್ದುವದಕ್ಕಾಗಲಿ ಅರ್ಹವಾಗಿಲ್ಲವೆಂದು ಅವರಿಗೆ ತೋರಿಬರುವ ಯಾವ ತೂಕವನ್ನಾಗಲೀ ಅಳತೆಯನ್ನಾಗಲೀ, ಸರಿನೋಡುವ ಬಗ್ಗೆ ಅಥವಾ ತಿದ್ದುವ ಬಗ್ಗೆ ಅದು ತಮ್ಮಲ್ಲಿ ತರಲ್ಪಟ್ಟಾಗ್ಯೆ, ಕೆಡಿಸುವದಕ್ಕಾದರೂ, ಉಪಯೋಗವಾಗದಂತೆ ಮಾಡುವದಕ್ಕಾದರೂ, ಅಥವಾ ಸರಿನೋಡುವದಕ್ಕೂ ತಿದ್ದುವದಕ್ಕೂ ಯಾ ಮುದ್ರೆಹಾಕುವದಕ್ಕೂ ನಿರಾಕರಿಸುವದಕ್ಕಾದರೂ, ತೂಕಗಳ ಮತ್ತು ಅಳತೆಗಳ ಇನ್‌ಸ್ಪೆಕ್ಟರಿಗೆ ಅಧಿಕಾರ ಕೊಡಲ್ಪಟ್ಟಿರುತ್ತೆ.

ಷೆಡ್ಯೂಲ್.

I. ತೂಕಗಳ ಪರೀಕ್ಷೆ.

ತ್ರಾಸಿನ ಸೂಕ್ಷ್ಮತೆ.—ಪ್ರಮಾಣವಾದ ತೂಕಗಳಿಂದ ತೂಕಗಳನ್ನು ಸರಿನೋಡುವ ಬಗ್ಗೆ ಸಾಧಾರಣವಾದ ತ್ರಾಸುಗಳು ಮಾತ್ರವೆ ದೊರಕುವ ಸಂದರ್ಭದಲ್ಲಿ, ಮೊದಲು ಮಾಡಬೇಕಾದ್ದೇನಂದರೆ ಆ ತ್ರಾಸಿನ ಸೂಕ್ಷ್ಮತೆಯ ತರವನ್ನು ಪರೀಕ್ಷಿಸಬೇಕು ಅದರ ಸಮತೂಕದ ವಿಷಯ ಬೇರೆ ಇರಲಿ. 40 ಶೇರಿನ ಒಂದು ಮಣ ತೂಕವು ಸರಿನೋಡುವ ಬಗ್ಗಾಗಿ ಬಂದಿರುತ್ತೆಂದು ಒಂದು ಉದಾಹರಣೆ ಯೋಚಿಸಬಹುದು. ಬಲಕಡೆ ತಕ್ಕಡಿಯಲ್ಲಿ ಮಣ ತೂಕದ ಒಂದು ಪ್ರಮಾಣವನ್ನು ಹಾಕಿ ಅದಕ್ಕೆ ಸರಿಯಾಗಿ ಸಮತೂಕವಾಗುವ ಹಾಗೆ ಎಡಗಡೆ ತಕ್ಕಡಿಯಲ್ಲಿ ತೂಕಗಳನ್ನು ಹಾಕಬೇಕು. ಈ ಎರಡು ಪಾರ್ಶ್ವಗಳಲ್ಲಿ ಇಡಲ್ಪಟ್ಟ ತೂಕಗಳಿಗೆ 40 ಗ್ರೇನ್ಸ್ ತೂಕವನ್ನು ಸೇರಿಸಿದಾಗ ವ್ಯತ್ಯಾಸ ತೋರುವ ಪಕ್ಷದಲ್ಲಿ, ವ್ಯಾಪಾರದ ಒಂದು ಸಾಮಾನ್ಯವಾದ ಮಣ ತೂಕವನ್ನು ಸರಿನೋಡುವ ಬಗ್ಗೆ ಆ ತ್ರಾಸನ್ನು ಒಳ್ಳೆದಾಗಿರುತ್ತೆಂದು ಎಣಿಸಬಹುದು. ತ್ರಾಸಿನ ಒಂದು ಕೈಯ್ಯಲ್ಲಿ ಇಡಲ್ಪಟ್ಟಿರುವ ತೂಕದ $\frac{1}{500}$ನೇ ಭಾಗದ ಭಾರಕ್ಕೆ ಅದರ ದಂಡಿಗೆ ಯಾ ಕಂಬಿ ತಿರುಗದೆ ಇದ್ದರೆ, ಆ ತ್ರಾಸು ಸರಿಯಾದ ಉದ್ದೇಶಗಳಿಗೆ ಉಪಯೋಗಿಸುವದಕ್ಕಾಗುವದಿಲ್ಲ.

ತೂಕಗಳ ಸರಿನೋಡುವಿಕೆ.—ಸರಿನೋಡುವ ಬಗ್ಗೆ ಹೊಂದಲ್ಪಟ್ಟ ಮಣ ತೂಕವನ್ನು ಹೀಗೆ ಪರೀಕ್ಷಿಸಬೇಕು :—

ತಕ್ಕಡಿಯ ಬಲಗೈನಲ್ಲಿ ಮಣ ತೂಕದ ಪ್ರಮಾಣವನ್ನು ಇಡಬೇಕು, ಅದಕ್ಕೆ ಎಡಗಡೆಯಲ್ಲಿ ಸಮತೂಕ ಇಡಬೇಕು. ಬಳಿಕ ಆ ಮಣ ತೂಕದ ಪ್ರಮಾಣವನ್ನು ತೆಗದು, ಅದಕ್ಕೆ ಬದಲಾಗಿ ಸರಿನೋಡಲ್ಪಡಬೇಕಾದ ತೂಕವನ್ನು ಇಡಬೇಕು. ದಂಡಿಗೆ ಸಮವಾಗಿದ್ದರೆ ತೂಕ ಸರಿಯಾದ್ದಾಗಿರುತ್ತೆ. ದಂಡಿಗೆಯ ಕೈಯಿಗಳು ಸಮವಾಗಿರುವದರಿಂದಾಗಲಿ, ಇಲ್ಲದೆ ಇರುವದರಿಂದಾಗಲೀ, ವಿಶೇಷವಿಲ್ಲ ; ಅಂದರೆ, ತ್ರಾಸು ಸರಿಯಾಗಿರಲಿ ಇಲ್ಲದಿರಲಿ, ಇದೇನೂ ಯೋಚಿಸತಕ್ಕದ್ದಿಲ್ಲಾ.

ತ್ರಾಸಿನ ಸಮಭಾರ — ತ್ರಾಸು ಸಮಭಾರವಾಗಿವೆಯೋ ಇಲ್ಲವೊ ಎಂಬುವದನ್ನು ತಿಳಿಯಬೇಕಾಗಿದ್ದರೆ, ಅದರ ಬಲಗೈಯಲ್ಲಿ ಮಣ ತೂಕದ ಪ್ರಮಾಣವನ್ನು ಹಾಕಿ, ಅದರ ಎಡಗೈಯಲ್ಲಿ ಸರಿಯಾಗಿ ಸಮನಾದ ಭಾರವನ್ನಿಡಬೇಕು. ಬಳಿಕ ಆ ಮಣ ತೂಕದ ಪ್ರಮಾಣವನ್ನು ತೆಗದು, ಅದರ ಬದಲಾಗಿ ಬಲಗೈಯಲ್ಲಿ ಇತರ ತೂಕಗಳನ್ನು ಹಾಕಿ ಸರಿಯಾದ ಸಮಭಾರವನ್ನುಂಟುಮಾಡಬೇಕು, ಈಸಾರಿ ಬಲಗೈಯಲ್ಲಿ, ಎಡಗೈಯಲ್ಲಿ ಅಲ್ಲಾ. ಈಗ ವ್ಯಕ್ತವಾಗಿರುವದೇನಂದರೆ, ಬಲಗೈಯಲ್ಲಿ ಇಡಲ್ಪಟ್ಟ ಎರಡು ತೂಕಗಳು ಸಮಭಾರವಾಗಿರುತ್ತವೆ : ಎಡಗೈಯಲ್ಲಿರುವ ಭಾರವನ್ನು ತೆಗದು, ಅದರ ಬದಲಾಗಿ, ಬಲಗೈಯಿಂದ ತೆಗಿಯಲ್ಪಟ್ಟ ತೂಕವನ್ನು ಎಡಗೈಯಲ್ಲಿಡಬೇಕು. ಈಗ ದಂಡಿಗೆ ನಿಜವಾದ ಸಮಭಾರ ತೋರಿಸಿದರೆ, ತ್ರಾಸು ಸರಿಯಾದ್ದು ; ಇಲ್ಲದ ಪಕ್ಷದಲ್ಲಿ, ತಕ್ಕ ಕಾರೇಗಾರನಿಂದ ತ್ರಾಸನ್ನು ಸರಿಮಾಡಿಸಬೇಕು. ದೊಡ್ಡದಾದ ಅಥವಾ ಚಿಕ್ಕದಾದ ಇತರ ಎಲ್ಲಾ ತ್ರಾಸುಗಳ ವಿಷಯದಲ್ಲಿಯೂ ಇದೇ ಮಾತು ಪ್ರಯೋಗವಾಗುತ್ತೆ.

II. ಧಾನ್ಯಗಳ ಮತ್ತು ದ್ರವದ ಅಳತೆಗಳು ಪರೀಕ್ಷಿಸುವದು.

ಧಾನ್ಯದ ಅಳತೆಗಳ ಅಡ್ಡಳತೆ.—ಮುದ್ರೆ ಹಚ್ಚುವ ಬಗ್ಗೆ ಒಂದು ಧಾನ್ಯದ ಅಳತೆ ಬಂದಾಗ್ಯೆ, ಮೊದಲು ಮಾಡಬೇಕಾದ್ದೇನಂದರೆ ಅದರ ಅಡ್ಡಗಲವನ್ನು ಚನ್ನಾಗಿ ಅಳತೆ ಮಾಡತಕ್ಕದ್ದು. ಅದರ ಅಡ್ಡಳತೆಯು ಅಳತೆಯ ಪ್ರಮಾಣದ ಅಡ್ಡಳತೆಗೆ ಸರಿ

(6) ಕಂಟ್ರಾಕ್ಟುದಾರನು (1) ಕುಂದರಸನಹಳ್ಳಿ, (2) ಮುತ್ತನಹಳ್ಳಿ ಈ ಎರಡು ಟೋಲ್ ಗೇಟಿನಲ್ಲಿ ಶಿವಾಯಿ ಇತರ ಸ್ಥಳದಲ್ಲಿ ಟೋಲ್ ವಸೂಲ್ಮಾಡಕೂಡದು.

(7) ಇನ್ನೇನಾದರೂ ತಪಶೀಲು ಬೇಕಾದರೆ ಕೋಲಾರ್ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಗೆ ಬರದುಕೊಂಡು ತಿಳದುಕೊಳ್ಳಬಹುದು.

ನೋಟಿಸ.

ತಾರೀಖು 8ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಗೋರೀಬಿದನೂರ್ ತಾಲ್ಲೂಕಿನಲ್ಲಿ ದೊರಿಯಬಹುದಾದ ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನು ಎರಡು ವರುಷ ಮತ್ತು ನಾಲ್ಕು ತಿಂಗಳ ಕಾಲದವರಿಗೆ ಅಂದರೆ, 1904ನೆ ಇಸವಿ ಜೂನ್ 1ನೆ ತಾರೀಖು ಲಾಗಾಯಿತು 1906ನೆ ಇಸವಿ ಸೆಪ್ಟಂಬರ್ ಆಖ್ಯೆರುವರಿಗೆ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಹಕ್ಕನ್ನು ಕೋಲಾರ್ ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರವರು ಗೋರೀಬಿದನೂರ ಟ್ರಾವಲರ್ಸ್ ಬಂಗ್ಲೆಯಲ್ಲಿ 1904ನೆ ಇಸವಿ ಮೇ 30ನೆ ತಾರೀಖು ಮಧ್ಯಾಹ್ನ 2 ಘಂಟೆಗೆ ಹರಾಜು ಮಾಡಿಸುವರು.

(1) ಇನಾಂ, ಜೋಡಿ, ಕಾಯಂಗುತ್ತಾ, ಸರ್ವಮಾನ್ಯ, ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿ ಫಸಲು ಈ ಹರಾಜಿಗೆ ಸೇರಿರುವದಿಲ್ಲ.

(2) ಮೇಲೆ ನಮೂದಿಸಿರುವ ಚಕ್ಕೇ ಜಮಾವಣೆ ಹಕ್ಕನ್ನು ಆಖ್ಯೆರು ಚಡದರಖಾಸ್ತುದಾರನಿಗೆ ವಹಿಸಲ್ಪಡುವದು. ಆದರೆ ಹರಾಜು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟಿರುವದಲ್ಲದೆ ಯಾವ ಸವಾಲನ್ನೇ ಆಗಲಿ ಕಾರಣ ನಮೂದಿಲ್ಲದೆ ಮಂಜೂರ್ಮಾಡುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಡೆಪ್ಯುಟಿ ಕಮಿಷನರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ.

(3) ಚಡದರಖಾಸ್ತು ಮಾಡಲು ಇಷ್ಟವುಳ್ಳವರು ಖುದ್ದಾಗಿಯಾಗಲಿ ಅಥವಾ ಅವರಿಂದ ಕ್ರಮವಾಗಿ ಅಪ್ಪಣೆ ಪಡದ ಏಜಂಟರ ಮೂಲಕವಾಗಿಯಾಗಲಿ ಸವಾಲು ಮಾಡಬೇಕು. ಯಾವ ಮನುಷ್ಯನೇ ಆಗಲಿ 200 ರೂಪಾಯಿ ಠೇವಣಿ ಇಡದೇ ಇದ್ದಲ್ಲಿ ಚಡಸವಾಲ್ಮಾಡಲು ಅಪ್ಪಣೆ ಇಲ್ಲ. ಆಖ್ಯೆರು ಚಡಸವಾಲ್ದಾರನ ವಿನಹಾ ಇತರರ ಠೇವಣಿ ಮೊಬಲಗನ್ನ ಹರಾಜು ಖೈದಾದ ವಹನೆ ವಾಪಸ್ ಮಾಡಲಾಗುತ್ತೆ.

(4) ಸವಾಲ್ ಮಾಡತಕ್ಕವರು ತಮಗಾಗಿ ಸವಾಲ್ ಮಾಡುತ್ತಾರೋ ಅಥವಾ ಇತರರಿಗೋಸ್ಕರವಾಗಿಯೋ ಎಂಬುವದನ್ನು ಹರಾಜು ಕಾಲದಲ್ಲಿ ತಿಳಿಸಬೇಕು. ಹರಾಜು ಖೈದಾದ ನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿ ಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರವರ ಮಂಜೂರಾತಿಯನ್ನು ಪಡಿಯಬೇಕು. ವರ್ಗ ರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನು ವಸೂಲ್ಮಾಡಲು ಡೆಪ್ಯುಟಿ ಕಮಿಷನರವರು ಅಧಿಕಾರವುಳ್ಳವರಾಗಿರುತ್ತಾರೆ.

(5) ಆಖೈರು ದರಖಾಸ್ತುದಾರರಿಗೆ ಹರಾಜು ಮಂಜೂರಾದ ಸಂಗತಿ ತಿಳಿಯಪಡಿಸಿದ ಮೂರು ದಿನಗಳಲ್ಲಿ ಈ ಕೆಳಗೆ ಕಂಡ ಷರತ್ತುಗಳಂತೆ ನಡೆದುಕೊಳ್ಳುತ್ತೇವೆಂಬ ಬಗ್ಗೆ ಮುಚ್ಚಳಿಕೆ ಬರೆದುಕೊಟ್ಟ ನಂತರ ಅವರು ಇಟ್ಟಿದ್ದ ಠೇವಣಿ ಮೊಬಲಗು ಸೇರಿ ಹರಾಜು ಮೊಬಲಗಿನಲ್ಲಿ ಮೂರರಲ್ಲಿ ಒಂದು ಭಾಗದ ಹಣವನ್ನು ಮತ್ತು ಇದರ ಮೇಲೆ ರೂಪಾಯಿಗೆ ಒಂದಾಣೆಯಂತೆ ಆಗು ವ ಲೋಕಲ್ ಸೆಸ್ಸನ್ನು ಗೋರೀಬಿದನೂರ್ ತಾಲ್ಲೂಕು ಖಜಾನೆಗೆ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದರೆ ಮೊದಲು ಇಟ್ಟಿದ್ದ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಛಾಬು ದುಸರಾ ಹರಾಜು ಮಾಡಲ್ಪಡುವದು.

(6) ಮೇಲ್ಕಂಡಂತೆ ನಡಿಸಲ್ಪಡುವ ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಚಡ ದರಖಾಸ್ತುದಾರನು ಗುರಿಯಾಗ ತಕ್ಕದ್ದು. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿಯಾದಲ್ಲಿ ಅಂತಾ ಜಾಸ್ತಿ ಮೊಬಲಗಿನ ಮೇಲೆ ಅವನಿಗೆ ಯಾವ ಹಕ್ಕೂ ಇರುವದಿಲ್ಲ. ಆದರೆ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಗಿಗೆ ಕಮ್ಮಿಯಾದಲ್ಲಿ ಆ ರೀತಿ ಕಮ್ಮಿಯಾಗುವ ಮೊಬಲಗನ್ನು ಮೇಲ್ಕಂಡ ಚಡದರಖಾಸ್ತುದಾರನು ಪಾವತಿಮಾಡಲು ಬದ್ಧನಾಗಿರುತ್ತಾನೆ. ಕಮ್ಮಿಯಾಗುವ ಮೊಬಲಗನ್ನು ಪಾವತಿ ಮಾಡಲು ತಪ್ಪಿದರೆ ಇದನ್ನು ರೆವಿನ್ಯೂ ಬಾಕಿಯಂತೆ ಭಾವಿಸಿ ವಸೂಲ್ಮಾಡಲಾದೀತು.

ಷರತ್ತುಗಳು.

(i) ಇಜಾರೆದಾರನು ಒಟ್ಟು ಇಜಾರೆ ಮೊಬಲಗಿನಲ್ಲಿ 6ನೆ ಪ್ಯಾರಾದಲ್ಲಿ ಕಂಡಂತೆ ಸರ್ಕಾರಕ್ಕೆ ಪಾವತಿ ಮಾಡಿದ್ದು ಜಾತಾ ಬಾಕಿ ಉಳಿಯುವ ಮೊಬಲಗನ್ನು ನಾಲ್ಕು ಖಿಸ್ತುಗಳಲ್ಲಿ ಈ ಕೆಳಗೆ ನಮೂದಿಸಿರುವ ತಾರೀಖುವಳಗಾಗಿ ಖಜಾನೆಗೆ ಪಾವತಿ ಮಾಡಬೇಕು.

ಒಂದನೇ ಖಿಸ್ತು	...	1904ನೆ ಇಸವಿ ಸೆಪ್ಟಂಬರ್	ಒಂದನೇ ತಾರೀಖಿನೊಳಗಾಗಿ.
ಎರಡನೇ ಖಿಸ್ತು	...	1905ನೆ ಇಸವಿ ಜನವರಿ	ಡಿಟೋ
ಮೂರನೇ ಖಿಸ್ತು	...	ಡಿಟೋ ಜುಲೈ	ಡಿಟೋ
ನಾಲ್ಕನೇ ಖಿಸ್ತು	...	1906ನೆ ಇಸವಿ ಜನವರಿ	ಡಿಟೋ

ಮೇಲೆ ನಮೂದಿಸಿರುವ ಮೇರಿಗೆ ಯಾವ ಒಂದು ಖಿಸ್ತು ಆದರು ಕೊಡಲು ಇಜಾರೆದಾರನು ತಪ್ಪಿದರೆ ಅವನ ಇಜಾರೆ ಹಕ್ಕನ್ನು ಹಿಂದೆ ಕೊಟ್ಟಿರುವ ಮೊಬಲಗು ಸಹಾ ಕಳೆದುಕೊಳ್ಳುವದಲ್ಲದೆ ಇನ್ನು ಬಾಕಿ ಇರುವ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಕೊಡಲು ಗುರಿಯಾಗುತ್ತಾನೆ. ಸದರಿ ಮೇರಿಗೆ ಬಾಕಿ ಆಗತಕ್ಕ ಮೊಬಲಗು ರೆವಿನ್ಯೂ ಬಾಕಿಯಂತೆ ಸದರಿಯವನಿಂದ ವಸೂಲ್ಮಾಡಲ್ಪಡುವದು.

(ii) ಇಜಾರೆದಾರನ ನೌಕರನೇ ಆಗಲಿ ಅಥವಾ ಷಿಕಿಮಿ ಕಂಟ್ರಾಕ್ಟರೇ ಆಗಲಿ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(iii) ಚಕ್ಕೆ ಜಮಾವಣೆ ನಡಿಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಒಂದು ತಃಖ್ತೆಯನ್ನು ಕೊಡಬೇಕು.

(iv) ತೊಗಟೆ ತೆಗೆದನಂತರ ಉಳಿಯುವ ಆ ಸಂಬಂಧವಾದ ವಿಶಿಷ್ಟ ಸಾಮಾನು ಇಜಾರೆದಾರನಿಗೆ ಸೇರಿದ್ದಾಗಿರುತ್ತೆ.

(v) ಇಜಾರೆ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನು ಡೆಪ್ಯೂಟಿ ಕಮಿಷನರ್ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್ರವರಾಗಲಿ ಅವರಿಂದ ನೇಮಕವಾದ ಇತರ ಆಫಿಸರೇ ಆಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

(vi) ಚಕ್ಕೆ ಸಾಗಿಸುವದರಲ್ಲಿ ಪ್ರತಿ ಗಾಡಿ ಚಕ್ಕೆ ಸಂಗಡವೂ ಒಂದು ಪ್ಯಾಸ್ ಇರತಕ್ಕದ್ದು. ಸದರಿ ಪ್ಯಾಸ್ ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರವರ ಸೈನ್ ಮೊಹರ್ ನಿಶಿ ಪಡದ ಅಚ್ಚು ಫಾರಂ ಬುಕ್ಕಿನಿಂದ ಕಂಟ್ರಾಕ್ಟರು ಯಾ ಅವರ ರಿಜಿಸ್ಟರಡ್ ಏಜಂಟ್ ಕೊಡತಕ್ಕದ್ದಾಗಿರುತ್ತೆ. ಸದರಿ ಪ್ರತಿ ಒಂದು ಪ್ಯಾಸ್ ಬುಕ್ಕು ಪೂರೈಸಿದ ಕೂಡಲೆ ಕೌಂಟರ್ ಫಾಯಿಲ್‌ಗಳನ್ನು ಕಂಟ್ರಾಕ್ಟರು ಡಿಸ್ಟ್ರಿಕ್ಟ ಫಾರೆಸ್ಟ ಆಫೀಸಿಗೆ ಕಳುಹಿಸತಕ್ಕದ್ದು.

(vii) ಕಂಟ್ರಾಕ್ಟರ್ ಯಾ ಆತನ ಜನಗಳ ಅಜಾಗರೂಕತೆಯಿಂದ ಸ್ಟೇಟ್ ಫಾರೆಸ್ಟ ಮತ್ತು ಪ್ಲಾಂಟೇಷನ್‌ಗಳಲ್ಲಿ ಬೆಂಕಿ ಬಾಧೆ ಉಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(viii) 1906ನೆ ಜುಲೈ ಮಾಹೆ 15ನೆ ತಾರೀಖಿನೊಳಗಾಗಿ ಇಜಾರೆ ವಾಯಿದೆಯಲ್ಲಿ ಕಡೆದು ಜಮಾವಣೇ ಮಾಡಿ ದಾಸ್ತಾನ್ ಮಾಡಿರುವ ಎಲ್ಲಾ ಚಕ್ಕೆಯನ್ನು ಕೋಲಾರ್ ಡಿಸ್ಟ್ರಿಕ್ಟು ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(ix) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವುದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡುತ್ತೆ. ಮತ್ತು ಅದುವರಿಗೂ ಜಮಾಯಿಸಿರುವ ವಿಶಿಷ್ಟ ಚಕ್ಕೆಯನ್ನೂ ಸರಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುತ್ತೆ. ಅಲ್ಲದೆ ಡೆಪ್ಯೂಟಿ ಕಮಿಷನರ್ ಸಾಹೇಬರವರು (1,000) ರೂಪಾಯಿಗೆ ಜಾಸ್ತಿ ಇಲ್ಲದಂತೆ ಜುರ್ಮಾನೆಯನ್ನು ಸಹಾ ವಿಧಿಸಬಹುದು.

ಎಸ್. ಎ. ಬಾಪುರಾವ್,
ಡಿಸ್ಟ್ರಿಕ್ಟು ಫಾರೆಸ್ಟ ಆಫಿಸರ್, ಕೋಲಾರ ಡಿಸ್ಟ್ರಿಕ್ಟು.

ತಾರೀಖು 6ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ವಿವರಿಸಿರುವ ಮೈಸೂರು ಡಿಸ್ಟ್ರಿಕ್ಟು ತಾಲ್ಲೂಕುಗಳ ಸರಕಾರಿ ಬಂಜರ್ ಜಮೀನುಗಳಲ್ಲಿ ಇರತಕ್ಕ ತಂಗಡಿ, ಕಕ್ಕೆ, ಸೋಮೆ ಮತ್ತು ಪಪ್ಲಿ ಚಕ್ಕೆಯನ್ನು 1904ನೆ ಜುಲೈ ತಾರೀಖು 1ರ ಲಾಗಾಯತು 1906ನೆ ಇಸವಿ ಜೂನ್ 30ರ ವರೆಗೆ ಜಮಾಯಿಸಿಕೊಳ್ಳತಕ್ಕ ಹಕ್ಕು ತಾಲ್ಲೂಕ್‌ವಾರ್ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಿಂದ 1904ನೆ ಇಸವಿ ಜೂನ್ ತಾರೀಖು 15ರಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ. ಸ್ಟೇಟ್ ಫಾರೆಸ್ಟುಗಳು ಮತ್ತು ಪ್ಲಾಂಟೇಷನ್‌ಗಳು ಇದಕ್ಕೆ ಸೇರಿ ಇರುವದಿಲ್ಲ. ಅವುಗಳು ಅಲಾಯಿದಾ ವಿಲೇ ಮಾಡಲ್ಪಡುವವು.

ತಾಲ್ಲೂಕುಗಳ ಹೆಸರು.

(1) ಶ್ರೀರಂಗಪಟ್ಣ (2) ಕೃಷ್ಣರಾಜಪೇಟೆ (3) ನಾಗಮಂಗಲ (4) ಮಂಡ್ಯ

2. ಹರಾಜು, ಹರಾಜು ತಾರೀಖಿನ ಮಧ್ಯಾಹ್ನ 2 ಘಂಟೆಗೆ ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದೇ ಇದ್ದ ಪಕ್ಷದಲ್ಲಿ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುತ್ತದೆ.

3. ಈ ಮೇಲೆ ನಮೂದಿಸಿರುವ ಹಕ್ಕು ಚಡದರಖಾಸ್ತುದಾರನಿಗೆ ವಹಿಸಲ್ಪಡುವದು. ಆದರೆ ಈ ಹರಾಜು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟದ್ದಾಗಿದೆ. ಮತ್ತು ಅವರು ಯಾವ ಸವಾಲನ್ನಾದರೂ ಕಾರಣವನ್ನು ಕೊಡದೆ ಮಂಜೂರು ಮಾಡುವದಕ್ಕೂ ಅಥವಾ ತಿರಸ್ಕರಿಸತಕ್ಕದ್ದಕ್ಕೂ ಸ್ವತಂತ್ರರಾಗಿದ್ದಾರೆ

4. ಚಡದರಖಾಸ್ತು ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಲಿ ಅಥವಾ ಕ್ರಮಪ್ರಕಾರ ಅಪ್ಪಣೆ ಪಡದ ಏಜಂಟರ ಮೂಲಕವಾಗಿಯಾಗಲಿ ಹಾಜರಾಗಬೇಕು. ಮತ್ತು ಯಾವ ಮನುಷ್ಯನಾಗಲಿ ಒಂದು ನೂರು ರೂಪಾಯಿಗಳು ಡಿಪಾಜಿಟ್ ಇಡುವದಕ್ಕೆ ಮುಂಚಿತವಾಗಿ ತನಿಗೋಸ್ಕರವಾಗಲಿ ಅಥವಾ ಇತರರಿಗೋಸ್ಕರವಾಗಲಿ ಚಡಸವಾಲ್ ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಚಡಸವಾಲ್‌ದಾರನಲ್ಲದ ಇತರ ಡಿಪಾಜಿಟ್‌ದಾರರ ಮೊಬಲಗನ್ನ ಹರಾಜ್ ಕೈದಾದ ಒಡನೆ ವಾಪಸ್ ಮಾಡಲ್ಪಡುವದು. ಚಡದರಖಾಸ್ತುದಾರನು ಅವನ ದರಖಾಸ್ತು ಮಂಜೂರಾತಿಯನ್ನ ಅವನಿಗೆ ತಿಳಿಸಿದ ತಾರೀಖು ಲಾಗಾಯತು ಮೂರು ದಿವಸಗಳ ಒಳಗಾಗಿ ಅವನು ಮೊದಲು ಇಟ್ಟಿದ್ದ ಇರತಕ್ಕ ಡಿಪಾಜಿಟ್ ಮೊಬಲಗು ಸೇರಿ ಹರಾಜಿನ ಒಟ್ಟು ಮೊಬಲಗಿನ ಕಾಲುಹಿಸ್ಸೆ ಹಣವನ್ನು ಮೈಸೂರು ಡಿಸ್ಟ್ರಿಕ್ಟು ಖಜಾನೆಗೆ ಪಾವತಿ ಮಾಡಬೇಕು. ಹೀಗೆ ಮಾಡದೆ ತಪ್ಪಿದಲ್ಲಿ ಮೊದಲ್ ಇಟ್ಟಿದ್ದ ಠೇವಣಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಹರಾಜು ಮಾಡುತ್ತಾ ಇದ್ದ ಆಫೀಸರವರಿಂದ ದುಸರಾ ಹರಾಜು ಮಾಡಲ್ಪಡುವದು.

5. ಮೇಲ್ಕಂಡ ಪ್ರಕಾರದಲ್ಲಿ ನಮೂದಿಸುವಂತೆ ನಡಿಸಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನ ರಿಸ್ಕಿಗೆ ಒಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ದರಖಾಸ್ತುದಾರನಿಗೆ ಇರುವದಿಲ್ಲ. ಆದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜ್ ಮೊಬಲಗ್ಗೆ ಕಡಮೆ ಆದಲ್ಲಿ ಅಂಥಾ ಕಮ್ಮಿ ಆಗುವ ಮೊಬಲಗು ಅವಲ್ ದರಖಾಸ್ತುದಾರನು ಪಾವತಿ ಮಾಡತಕ್ಕದ್ದಾಗಿರುತ್ತದೆ. ಕಮ್ಮಿ ಬಂದ ಹಣವನ್ನು ಕೇಳಿದಕೂಡ್ಲೆ ಕೊಡದೆ ಇದ್ದರೆ ಅದನ್ನು ರೆವಿನ್ಯೂ ಡಿಮ್ಯಾಂಡಿನಂತೆ ವಸೂಲ್ಮಾಡಿಕೊಳ್ಳಲ್ಪಡುತ್ತೆ.

6. ಇಜಾರೆದಾರನು ಈ ಕೆಳಗೆ ನಮೂದಿಸಿರುವ ಷರತ್ತುಗಳ ಮೇರೆ ನಡದುಕೊಳ್ಳತಕ್ಕ ಬಗ್ಗೆ ಬಧ್ಧನಾಗಿ ಒಂದು ಮುಚ್ಚಳಿಕೆ ಬರದು ಕೊಡತಕ್ಕದ್ದು. ಮತ್ತು ಮುಚ್ಚಳಿಕೆಯು ಇಜಾರೆ ಮಂಜೂರಾದ ಸಂಗತಿ ಇಜಾರೆದಾರನಿಗೆ ತಿಳಿಸಿದ ತಾರೀಖು ಲಾಗಾಯತು ಮೂರು ದಿವಸಗಳ ಒಳಗಾಗಿ ಬರದು ಕೊಡತಕ್ಕದ್ದಾಗಿರುತ್ತೆ. ಇದಕ್ಕೆ ತಪ್ಪಿದರೆ, ಡಿಪಾಜಿಟ್ ಹಣವನ್ನ ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳುವದಲ್ಲದೆ ಬಾಬು ದುಸರಾ ಹರಾಜು ಮಾಡಲ್ಪಡುವದು.

7. ಬಾಕಿ ಆಗುವ ಮೊಬಲಗು ಮತ್ತು ಪೂರಾ ಮೊಬಲಗಿಗೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಫಂಡ್ ಸಹ ಪೂರ್ತಿಯಾಗಿ 1904ನೆ ಜುಲೈ ಆಖೈರು ಒಳಗಾಗಿ ಪಾವತಿ ಮಾಡಲ್ಪಡಬೇಕು. ಅಥವಾ ಅಡ್ವಾನ್ಸಾಗಿ ಕ್ವಾರ್ಟರ್ಲಿ ಕಿಸ್ತು ಮೇರೆ ಅಂದರೆ, 1904ನೆ ಡಿಸೆಂಬರ್ 1ನೆ ತಾರೀಖಿನಲ್ಲಿ ಒಂದನೆ ಕಿಸ್ತು 1905ನೆ ಇಸವಿ ಜೂನ್ 2ನೆ ತಾರೀಖಿನಲ್ಲಿ ಎರಡನೆ ಕಿಸ್ತು ಮತ್ತು 1905ನೆ ಇಸವಿ ಡಿಸೆಂಬರ್ 1ನೆ ತಾರೀಖಿನಲ್ಲಿ ಮೂರನೆ ಕಿಸ್ತು ಪಾವತಿ ಮಾಡಬೇಕು. ಈ ಮೇಲೆ ನಮೂದಿಸಿರುವ ಮೇರೆ ಕಿಸ್ತಿನ ಹಣ ಪಾವತಿ ಮಾಡಲ್ಪಡದೆ ಇದ್ದರೆ ಚಕ್ಕೆಯ ಜಮಾವಣೆ ಮತ್ತು ರಫ್ತು ಕೆಲಸ ನಿಲ್ಲಿಸಲ್ಪಡುವದಲ್ಲದೆ ಇಜಾರೆಯ ಬಾಕಿ ಆಗುವ ವಿಸಿಷ್ಟ ಮೊಬಲಗು ಮತ್ತು ಲೋಕಲ್ ಫಂಡ್ ಸಹಾ ರೆವಿನ್ಯೂ ಬಾಕಿಯಂತೆ ವಸೂಲ್ಮಾಡಿಕೊಳ್ಳಲ್ಪಡುತ್ತೆ.

ಷ ರ ತ್ತು ಗ ಳು .

1. ಒಂದು ವರುಷಕ್ಕೆ ಒಳಪಟ್ಟ ಎಳೇ ಗಿಡ ಯಾ ಕೊಂಬೆಯನ್ನು ಕಡಿಯಕೂಡದು. ಅಥವಾ ಅದರ ತೊಗಟೆಯನ್ನು ತೆಗಿಯಕೂಡದು.

2. ಇಜಾರೇದಾರನ ನಾಕರರೇ ಆಗಲಿ ಅಥವಾ ಪಿಕಮಿ ಕಂಟ್ರಾಕ್ಟುದಾರನೆ ಆಗಲಿ ಎಳೇ ಗಿಡಗಳನ್ನು ಕಡಿಯುವಂತೆ ಅಡ್ಡಿ ಮಾಡಲು ಇಜಾರೇದಾರನು ಜವಾಬುದಾರನಾಗಿ ಇರತಕ್ಕದ್ದು.

3. ಕೆಲಸ ನಡಿಸಲು ವಿಂಗಡಿಸಲ್ಪಟ್ಟು ಇರುವ ಸರ್ಕಲ್‌ಗಳಲ್ಲಿ ಚಕ್ಕೆ ಜಮಾಯಿಸುವದಕ್ಕೆ ನೇಮಿಸಲ್ಪಟ್ಟ ಮೇಸ್ತ್ರಿಗಳ ಮತ್ತು ಪಿಕಮಿ ಕಂಟ್ರಾಕ್ಟರುಗಳ ಹೆಸರಿನ ಒಂದು ಪಟ್ಟಿಯನ್ನು ಕೊಡತಕ್ಕದ್ದು.

4. ತೊಗಟೆ ತೆಗಿಯಲ್ಪಟ್ಟ ಸವದೆ ಇಜಾರೆದಾರನಿಗೆ ಸೇರಿದ್ದಾಗಿದೆ.

5. ಇಜಾರೆಗೆ ಸಂಬಂಧಪಟ್ಟ ಚಕ್ಕೆ ಯಾ ಜವಾವಣೆ ಪೊತ್ತ ತೋರಿಸುವ ತಪಶೀಲು ಲೆಖ್ಖವನ್ನು ಇಡಬೇಕು ಮತ್ತು ಅಂಥಾ ಲೆಖ್ಖವನ್ನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರೇ ಆಗಲಿ, ಫಾರೆಸ್ಟ್ ರೇಂಜ್ ಆಫಿಸರೇ ಆಗಲಿ ಅಮಲ್ದಾರ್ರೇ ಆಗಲಿ ಅಥವ ಅವರುಗಳಿಂದ ನೇಮಿಸಲ್ಪಡುವ ಇತರ ಆಫಿಸರವರೇ ಆಗಲಿ ತನಿಖೆಗೆ ಬಂದಾಗ ಅವರತನಿಖೆಗೆ ಮೇಲ್ಕಂಡ ಲೆಖ್ಖಗಳನ್ನು ಹಾಜರ್ಮಾಡತಕ್ಕದ್ದು.

6. ಸಾಗಿಸಿಕೊಂಡು ಹೋಗುವ ಪ್ರತಿ ಒಂದು ಗಾಡಿ ಬೋಜಾ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಮೊಕರರ್ಮಾಡುವ ರೀತಿಯಲ್ಲಿ ಪ್ಯಾಸ್ ಪಡಿಯತಕ್ಕದ್ದು.

7. ದಾಸ್ತಾನ್ ಇಡಲ್ಪಟ್ಟ ಮತ್ತು ಜವಾಯಿಸಲ್ಪಟ್ಟ ವಿಸಿಷ್ಟ ಚಕ್ಕೆಯನ್ನು 1906ನೆ ಇಸವಿ ಜೂನ್ ಆಖೈರು ಒಳಗಾಗಿ ಮೈಸೂರು ಡಿಸ್ಟ್ರಿಕ್ಟಿನ ಸರಹದ್ದು ಹೊರಕ್ಕೆ ತೆಗೆದುಕೊಂಡು ಹೋಗತಕ್ಕದ್ದು.

8. ಮೇಲೆ ನಮೂದಿಸುವ ಷರತ್ತಿನ ಯಾವದಾದರೂ ಒಂದು ಷರತ್ತಿಗಾದರೂ ತಪ್ಪಿ ನಡದಲ್ಲಿ ಇಜಾರೆಯ ಹಕ್ಕು ರದ್ದು ಮಾಡಲ್ಪಡುವದಲ್ಲದೆ ಅದುವರೆಗೆ ಜವಾಯಿಸೋಣವಾಗಿದ್ದ ಚಕ್ಕೆ ವಿಸಿಷ್ಟವು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡತಕ್ಕದ್ದು. ಮತ್ತು ಡೆಪ್ಯುಟಿ ಕಮಿಷನರವರಿಂದ ಹುಕುಂ ಆದಹಾಗೆ ಅವನಿಂದ ಪಾವತಿಯಾಗಿದ್ದ ಪೂರಾ ಮೊಬಲಗಾಗಲಿ ಅಥವಾ ಅದರ ಒಂದು ಭಾಗವಾಗಲಿ ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತದೆ.

9. ಸೋಮಚಕ್ಕೆ ವಿಷಯದಲ್ಲಿ ಕೊರೆಯು ಮತ್ತು ವಿರೂಪವಾದ ಮರಗಳನ್ನು ಮಾತ್ರ ಚಕ್ಕೆಗೋಸ್ಕರ ಕಡಿಯತಕ್ಕದ್ದಿದೆ. ಚಿಕ್ಕದಾಗಿಯೂ, ಆರೋಗ್ಯವಾದ ಮತ್ತು ಒಳ್ಳೆ ಪುಷ್ಟಿಯಾಗಿ ಬೆಳೆಯುತ್ತಿರುವ ಮರಗಳನ್ನು ಸುತರಾಂ ಕಡಿಯಕೂಡದು.

(10) ಪಪ್ಪಿಚಕ್ಕೆ ಜವಾವಣೆ ವಿಷಯದಲ್ಲಿ:— ಬಣ್ಣ ಹಾಕುವದಕ್ಕೆ ಸರಿಯಾಗಿ ಪಕ್ವವಾಗಿರುವ ಪಪ್ಪಿ ಬಳ್ಳಿಯ ಪಕ್ಕಗಳ ಬೇರುಗಳನ್ನು ತೆಗಿಯುವಾಗ್ಯೆ ಬಹಳ ಹುಷಾರೆಯಾಗಿ ತೆಗಿಯಬೇಕಲ್ಲದೆ, ಆ ಬೇರಿಗೆ ಯಾವ ವಿಧವಾದ ಅಪಾಯವೂ ಸಂಭವಿಸಬಾರದು. ಈ ಕೆಲಸವನ್ನು ಮಳೆಗಾಲದಲ್ಲಿ ಮಾಡತಕ್ಕದ್ದಿದೆ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು.

ತಾರೀಖು 3ನೆ ಮೇ 1904.

1. ಚಿತ್ರದುರ್ಗದ ಡಿಸ್ಟ್ರಿಕ್ಟ್ ಬಾಬತು ಫಾರೆಸ್ಟು ಇಲಾಖೆ ಮಾರ್ಫತ್ತು ಜವಾವಣೆಯಾಗಿ ಈ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ಇಡಲ್ಪಟ್ಟು ಇರುವ ಪಸಾರೆ ಜಿನಸಿಯು ಈ ಕೆಳಗೆ ನಮೂದಿರುವ ಸ್ಥಳ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರವರಿಂದ ಹರಾಜು ಮಾಡಲ್ಪಡುವದು. ಇಷ್ಟವುಳ್ಳವರು ರೂಬರೂಬ್ ಹಾಜರಾಗಿ ಸವಾಲು ಮಾಡಬಹುದು.

2. ಹರಾಜು ತಾರೀಖು ಲಾಗಾಯಿತು ಅಥವಾ ಮೊಬಲಗು ಕೊಟ್ಟ ಲಾಗಾಯಿತು ಈ ಸಾಮಾನುಗಳ ದೇಖರೇಖಿಯು ಹರಾಜುದಾರನಿಗೆ ಸಂಬಂಧಪಟ್ಟು ಇರುತ್ತದೆ.

3. ಹರಾಜು ಷರತ್ತುಗಳು—ಹರಾಜು ಕೈದಾದ ವಡನೆ ಹರಾಜು ಮೊಬಲಗು ಪೈಕಿ ಶೇಕಡಾ 25ರಂತೆ ಆಗುವ ಮೊಬಲಗನ್ನು ಛಡ ಸವಾಲುದಾರನು ಡಿಪಾಜಿಟ್ ಇಡಬೇಕು. ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯಿತು ಮೂರು ದಿವಸದೊಳಗಾಗಿ ಪಾವತಿ ಮಾಡಲ್ಪಡಬೇಕು. ಹಾಗೆ ಹಾಜರ್ಮಾಡಲು ತಪ್ಪಿದರೆ ಸದರಿ ಜಿನಸಿಯನ್ನು ದುಸರಾ ಹರಾಜು ಮಾಡಿ ಲುಕ್ಸಾನಿಗೆ ಅವಲ್ ಹರಾಜುದಾರನನ್ನು ಗುರಿಪಡಿಸುತ್ತೆ. ಮತ್ತು ಡಿಪಾಜಿಟ್ ಇಟ್ಟಿರತಕ್ಕ ಮೊಬಲಗನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಲಾಗುತ್ತೆ. ದುಸರೆ ಹರಾಜಿನಲ್ಲಿ ಮೊದಲು ಹರಾಜಿಗಿಂತ ಹೆಚ್ಚಿಗೆ ಮೊಬಲಗು ಉತ್ಪತ್ತಿಯಾದರೆ ಆ ಫಾಯಿದಾಕ್ಕೆ ಅವಲ್ ಹರಾಜುದಾರನು ಭಾಗಿಯಾಗಲಾರನು.

4. ಇನ್ನೂ ಹೆಚ್ಚಿಗೆ ತಪಶೀಲ ಬಗ್ಯೆ 15-3-95ನೆ ಮುಕ್ಕಾಂ 15229—R. F. 155-92 ಗವರ್ನಮೆಂಟ್ ಪ್ರೊಸೀಡಿಂಗ್ಸನ್ನು ನೋಡತಕ್ಕದ್ದು.

ಸಂಖೆ	ಸ್ಥಳ	ಜಿನಸಿ ವಿವರ	ಅದದು ಸ್ವಲ್ಪ ಹೆಚ್ಚು ಕಡಮೆ	ಹರಾಜು ಸ್ಥಳ	ಹರಾಜು ತಾರೀಖು
1	ಹೊಳಲಕೆರೆ ...	ಗೋಂದು	42 ಮಣ	ಹೊಳಲಕೆರೆ ರೇಂಜ್ ಆಫೀಸ್	4—6—04
	ಡಿಟ್ಟೋ ...	ಅಳಲೆಕಾಯಿ	303 ಮಣ	ಡಿಟ್ಟೋ	ಡಿಟ್ಟೋ
	ಡಿಟ್ಟೋ ...	ಇಂಗ್ಲಾರ	$13\frac{1}{2}$ ಮಣ	ಡಿಟ್ಟೋ	ಡಿಟ್ಟೋ
	ಡಿಟ್ಟೋ ...	ತಾರೆಕಾಯಿ	$20\frac{1}{4}$ ಮಣ	ಡಿಟ್ಟೋ	ಡಿಟ್ಟೋ
2	ಚಿತ್ರದುರ್ಗ ...	ಗೋಂದು	24 ಮಣ	ಚಿತ್ರದುರ್ಗದ ಡಿಪೋ	6—6—04
	ಡಿಟ್ಟೋ ...	ಅಳಲೆಕಾಯಿ	600 ಮಣ	ಡಿಟ್ಟೋ	ಡಿಟ್ಟೋ

ಇಸ್ತಿಹಾರನಾಮೆ.

ತಾರೀಖು 28ನೆ ಏಪ್ರೈಲ್ 1904.

1900ನೆ ಇಸವಿಯ XIನೆ ನಂ. ಮೈಸೂರು ಶೀಮೆಯ ಫಾರೆಸ್ಟು ರೆಗ್ಯುಲೇಷ 18ನೆ ಸೆಕ್ಷನ್ನಿನ ವಿಧಿಗಳನುಸರಿಸಿ ಈ ಇಸ್ತಿಹಾರ್ನಾಮೆಗೆ ಜಂಟಿಸಿರುವ ಷೆಡ್ಯೂಲಿನಲ್ಲಿ ನಮೂದಿಸಿರುವ ಚಕ್ಕುಬಂದಿಯುಳ್ಳ ಪ್ರದೇಶವು 1904ನೆ ಏಪ್ರೈಲ್ ಗುರ್ರ್ಯ ಲಾಗಾಯಿತು ಸದರಿ ಇಸ್ತಿಹಾರಿನ ಅಡೀಲಿ ವಿವರಿಸಿರುವ ಹಕ್ಕುಗಳ ಚಲಾವಣೆಗೆ ಬಳಪಟ್ಟು ಸ್ಟೇಟ್ ಫಾರೆಸ್ಟಾಗಿರತಕ್ಕದ್ದೆಂದು ಎಣಿಸಲ್ಪಟ್ಟಿರುತ್ತೆ.

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ವ ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಚಕ್ಕುಬಂದಿ.
ಚಿತ್ರದುರ್ಗ.	ಮೊಳಕಾಲ್ಮುರು.	$10\frac{1}{3}$ ಚದರ ಮೈಲುಗಳು.	ಹಿರೇ ಅಡವಿ.	ಉತ್ತರಕ್ಕೆ —ಕಾಟೇನಹಳ್ಳಿ ಗ್ರಾಮದ ಸರ್ವೆ ನಂ. 25ರ ದಕ್ಷಿಣ ಮೂಲೆಯಲ್ಲಿ ಅಂದರೆ ಹಾನಗಲ್ಲಿನ ಸರ್ವೆ ನಂ. 29ರ ಈಶಾನ್ಯ ಮೂಲೆಯಲ್ಲಿ ಹೊರಟು ಲೈನು ಕಾಟೇನಹಳ್ಳಿಯ ಸರ್ವೆ ನಂ. 25, 24, 21, 20, 19, 18, 17 ವ 14 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆಖೈರು ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ ; ತರವಾಯ ಆ ನಂಬರಿನ ಪೂರ್ವಪಾರ್ಶ್ವವನ್ನೇ ಅನುಸರಿಸಿ ನಾಗಸಮುದ್ರದ ಸರ್ವೆ ನಂ. 138ರ ನೈರುತ್ಯ ಮೂಲೆಗೆ ಹೋಗುತ್ತದೆ ; ನಂತರ ಅದೇ ಗ್ರಾಮದ ಸರ್ವೆ ನಂ. 138 ವ 135 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಎರಡನೇ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ ; ಬಳಿಕ ಈ ನಂಬರಿನ ಪೂರ್ವ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 134ರ ನೈರುತ್ಯ ಮೂಲೆಗೆ ಹೋಗುತ್ತದೆ ; ತರುವಾಯ ಸರ್ವೆ ನಂ. 134 133, 130, 131, 128, 122, 120, 117 ವ 118 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆಖೈರು ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ ; ಬಳಿಕ ಈ ನಂಬರಿನ ಪೂರ್ವ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 113ರ ನೈರುತ್ಯ ಮೂಲೆಗೆ ಹೋಗುತ್ತದೆ ; ನಂತರ ಸರ್ವೆ ನಂ. 113 ವ 114 ಇವುಗಳ ದಕ್ಷಿಣಪಾರ್ಶ್ವಗಳ ಉದ್ದಕ್ಕೂ ಹೋಗಿ ಬಳ್ಳಾರಿ ಡಿಸ್ಟ್ರಿಕ್ಟು ಪ್ರೊವಿನ್ಷಿಯಲ್ ಎಲ್ಲೆಯನ್ನು ಕೂಡುತ್ತದೆ. ಪೂರ್ವಕ್ಕೆ—ಬಳ್ಳಾರಿ ಡಿಸ್ಟ್ರಿಕ್ಟು ಸರಹದ್ದನ್ನೇ ಅನುಸರಿಸಿ ಚಿತ್ರದುರ್ಗದಿಂದ ರಾಯದುರ್ಗಕ್ಕೆ ಹೋಗುವ ರಸ್ತೆಯನ್ನು ಶೇರುತ್ತದೆ. ದಕ್ಷಿಣಕ್ಕೆ—ತರುವಾಯ ಸದರಿ ರಸ್ತೆಯ ಉತ್ತರ ಪಾರ್ಶ್ವದ ಉದ್ದಕ್ಕೂ ಮೊಳಕಾಲ್ಮುರು ಗ್ರಾಮದ ಸರ್ವೆ ನಂ. 19ರ ಆಗ್ನೇಯ ಮೂಲೆಗೆ ಹೋಗುತ್ತದೆ ; ಬಳಿಕ ಈ ನಂಬರಿನ ಪೂರ್ವ, ಉತ್ತರ, ಪಶ್ಚಿಮ ಪಾರ್ಶ್ವಗಳನ್ನು ಬಳಸಿಕೊಂಡು ನೈರುತ್ಯ ಮೂಲೆಯಲ್ಲಿ ಪುನಹಾ ಮೇಲೆ ಹೇಳಿದ ರಸ್ತೆಯನ್ನು ಕೂಡುತ್ತದೆ ; ನಂತರ ಸದರಿ ರಸ್ತೆಯ ಉತ್ತರ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 22ರ ಆಗ್ನೇಯ ಮೂಲೆಗೆ ಹೋಗುತ್ತದೆ ; ತರುವಾಯ ಈ ನಂಬರಿನ ಪೂರ್ವ ಪಾರ್ಶ್ವದ ಉದ್ದಕ್ಕೂ ಈಶಾನ್ಯ ಮೂಲೆಗೆ ಹೋಗುತ್ತದೆ ; ಬಳಿಕ ವಾಯುವ್ಯ ದಿಕ್ಕಿಗೆ ಸರ್ವೆ ನಂ. 25ರ ಮಧ್ಯೆ ಮೂರು ಫರ್ಲಾಂಗು ದೂರ ಹೋಗಿ ಸರ್ವೆ ನಂ. 34ರ ಈಶಾನ್ಯ ಮೂಲೆಯನ್ನು ಶೇರುತ್ತದೆ ; ಈ ನಂಬರಿನ ಉತ್ತರ ಪಾರ್ಶ್ವದ ಉದ್ದಕ್ಕೂ ಪಕ್ಕದಲ್ಲಿರುವ ಕೆರೆಯ ಉತ್ತರಪಾರ್ಶ್ವದ ಉದ್ದಕ್ಕೂ ಹೋಗಿ ಸರ್ವೆ ನಂ. 25ರ ನೈರುತ್ಯ ಮೂಲೆಗೆ ಸುಮಾರು 1 ಫರ್ಲಾಂಗು ದೂರದಲ್ಲಿ ಈ ನಂಬರಿನ ದಕ್ಷಿಣ ಪಾರ್ಶ್ವವನ್ನು ಕೂಡುತ್ತದೆ ; ತರುವಾಯ ಉತ್ತರಕ್ಕೆ ಈ ನಂಬರಿನ ಮಧ್ಯೆ $5\frac{1}{3}$ ಫರ್ಲಾಂಗು ದೂರ ಹೋಗಿ ಸರ್ವೆ ನಂ. 5ರ ಪೂರ್ವ ಪಾರ್ಶ್ವದ ಮಧ್ಯಸ್ಥಳವನ್ನು ಶೇರುತ್ತದೆ ; ಬಳಿಕ ಈ

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ವ ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಚೆಕ್ಕುಬಂದಿ.
ಚಿತ್ರದುರ್ಗ.	ಮೊಳಕಾಲ್ಮೂರು.	$10\frac{1}{3}$ ಚದರ ಮೈಲುಗಳು.	ಹಿರೇ ಅಡವಿ.	ನಂಬರಿನ ಪೂರ್ವಪಾರ್ಶ್ವದ ಉದ್ದಕ್ಕೂ ಈಶಾನ್ಯಮೂಲೆಗೆ ಹೋಗುತ್ತದೆ; ನಂತರ ಇದರ ವಾಯುವ್ಯ ಪಾರ್ಶ್ವದ ಉದ್ದಕ್ಕೂ ನೈರುತ್ಯ ಮೂಲೆಗೆ ಹೋಗಿ ಸರ್ವೆ ನಂ. 8ರ ವಾಯುವ್ಯ ಮೂಲೆಯನ್ನು ಕೂಡುತ್ತದೆ; ಪಶ್ಚಿಮಕ್ಕೆ—ತರುವಾಯ ಉತ್ತರ ವಾಯುವ್ಯ ದಿಕ್ಕಿಗೆ ಮೊಳಕಾಲ್ಮೂರು ಸರ್ವೆ ನಂ. 9 ಮತ್ತು ಹಾನಗಲ್ಲು ಸರ್ವೆ ನಂ. 34ರ ಮಧ್ಯೆ ತೋಟ್ಲಗುಂದಿ ಕಣಿವೆ ದಾರಿಯನ್ನು ಅನುಸರಿಸಿ ಹೋಗುತ್ತದೆ; ಬಳಿಕ ಎರಡನೇ ಗ್ರಾಮದ ಸರ್ವೆ ನಂ. 29ರಲ್ಲಿ ಗುಡ್ಡಗಳ ವಳಗಡೆ ಇಳಿಜಾರನ್ನು ಅನುಸರಿಸಿಕೊಂಡು ದೇವರ ಗುಡ್ಡ ಗ್ರಾಮ, ದೇವಸ್ಥಾನಗಳು, ತೋಪುಗಳು, ಕೊಳಗಳು, ತೇರಿನಬೀದಿ ಮೊದಲಾದವುಗಳನ್ನು ಸರ್ವೆ ನಂ. 30, 31, 32 ವ 33 ಇವುಗಳನ್ನು ಫಾರೆಸ್ಟಿನ ಹೊರಗೆ ಬಿಟ್ಟು ಹೋಗುತ್ತದೆ. ನಂತರ ಇದೇ ನಂಬರಿನಲ್ಲಿ ಚೆನ್ನ ಮಲ್ಲಪ್ಪನ ಕಣಿವೆಯಲ್ಲಿ ಹಾದು ಹೊರಟ ಸ್ಥಳವನ್ನು ಸೇರುತ್ತದೆ.

ಷರಾ:—

A. ಇದರಡೀ ಕಂಡ ಹಾದಿಯು ಈ ಬ್ಲಾಕಿನಲ್ಲಿ ಕೊಡಲ್ಪಟ್ಟಿರುತ್ತದೆ:—

ವರ್ಷವೆಲ್ಲಾ ಜನಗಳ ಮತ್ತು ದನಗಳ ಉಪಯೋಗಕ್ಕೋಸ್ಕರ ಮೊಳಕಾಲ್ಮೂರುವಿನಿಂದ ದೇವರ ಗುಡ್ಡಕ್ಕೆ (ಹಾನಗಲ್ಲು ಗ್ರಾಮದ ಮಜರೆ) ಹೋಗುವ 8 ಅಡಿ ಅಗಲವುಳ್ಳ ಮತ್ತು 1 ಮೈಲಿ 6 ಫರ್ಲಾಂಗು ಉದ್ದವುಳ್ಳ ಕಾಲುಹಾದಿ. ಈ ಹಾದಿಯು ಫಾರೆಸ್ಟನ್ನು ಮೊಳಕಾಲ್ಮೂರು ಸರ್ವೆ ನಂ. 5ರ ಪೂರ್ವ ಮೂಲೆಯಲ್ಲಿ ಪ್ರವೇಶಿಸಿ, ಉತ್ತರಕ್ಕೆ ಸರ್ವೆ ನಂ. 25, 24, ವ 13 ಇವುಗಳ ಮಧ್ಯೆ ಹೋಗಿ, ತರುವಾಯ ಪಶ್ಚಿಮಕ್ಕೆ ಸರ್ವೆ ನಂ. 13 ವ 12 ಇವುಗಳ ಮಧ್ಯೆ ಹಾದು ಹಾನಗಲ್ಲು ಸರ್ವೆ ನಂ. 29ರ ಪೂರ್ವ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

B. ಇದರಡೀ ಕಂಡ ಹಕ್ಕುಗಳು ಈ ಬ್ಲಾಕಿನಲ್ಲಿ ಕೊಡಲ್ಪಟ್ಟಿರುತ್ತವೆ:—

(1) ದೇವರ ಗುಡ್ಡ (ಹಾನಗಲ್ಲು ಮಜರೆ) ಮತ್ತು ಹನುಮಾಪುರ (ನಾಗಸಮುದ್ರದ ಮಜರೆ) ಇವುಗಳ ಗ್ರಾಮಸ್ಥರು ವಿಧಾಯಕವಾದ ದರದಲ್ಲಿ ನಾಲ್ಕರಲ್ಲಿ ಒಂದು ಭಾಗವನ್ನು ಕೊಟ್ಟು ತಮ್ಮ ದನಗಳನ್ನು ಸ್ಟೇಟು ಫಾರೆಸ್ಟಿನಲ್ಲಿ ಮೇಯಿಸಿಕೊಳ್ಳುವದು.

(2) ದೇವರ ಗುಡ್ಡದ ಜಾತ್ರೆಗೆ ಬರುವ ಯಾತ್ರಾರ್ಥಿಗಳು ಅಲ್ಲಿರುವವರಿಗೂ ಮುಫತ್ತಾಗಿ ತಮ್ಮೊಂದಿಗೆ ತಂದ ದನಕರಗಳನ್ನು ಫಾರೆಸ್ಟಿನಲ್ಲಿ ಮೇಯಿಸಿಕೊಳ್ಳುವದು; ಮುಫತ್ತಾಗಿ ಸೌದೆಯನ್ನು ಫಾರೆಸ್ಟಿನಲ್ಲಿ ತೆಗದುಕೊಳ್ಳುವದು.

(3) ದೇವರಗುಡ್ಡದ ಗ್ರಾಮಸ್ಥರು ತಮ್ಮ ಸ್ವಂತ ಉಪಯೋಗಕ್ಕೆ ಮುಫತ್ತಾಗಿ ಫಾರೆಸ್ಟಿನಿಂದ ಸೌದೆ ತಂದುಕೊಳ್ಳುವದು; ತೇರುಕಟ್ಟುವದಕ್ಕೂ ದೇವಸ್ಥಾನದ ಇತರೆ ಉಪಯೋಗಕ್ಕೂ ಬೇಕಾಗುವ ಮನ್ನಾಜಾತಿಗೆ ಸೇರಿದ ಮರಗಳನ್ನು ಫಾರೆಸ್ಟಿನಿಂದ ಮುಫತ್ತಾಗಿ ತಂದುಕೊಳ್ಳುವದು.

(4) ನಾಗಸಮುದ್ರದ ಗ್ರಾಮಸ್ಥರಿಗೆ (ಅಸಲಿ ಮತ್ತು ಮಜರೆ ಗ್ರಾಮಗಳು ಕೂಡಿದೆ) ಫಾರೆಸ್ಟಿನ ಹೊರಗೆ ಜಿರಾಯಿತಿ ಮುಟ್ಟಿಗೆ ಬೇಕಾಗುವ ಮನ್ನಾಜಾತಿಗೆ ಸೇರದೆ ಇರುವ ಮರಗಳು ಇಲ್ಲದೇ ಇರುವ ಪಕ್ಷದಲ್ಲಿ, ಫಾರೆಸ್ಟಿನಲ್ಲಿ ಅಂಥಾ ಮರಗಳನ್ನು ಮುಫತ್ತಾಗಿ ತಂದುಕೊಳ್ಳುವದು.

(5) ಚಿಕ್ಕೇನಹಳ್ಳಿ ಗ್ರಾಮದ ಆಂಜನೇಯಸ್ವಾಮಿ ತೇರನ್ನು ರಿಪೇರಿ ಮಾಡತಕ್ಕ ಬಗ್ಗೆ ಪ್ರತಿ ವರ್ಷವೂ ಮುಫತ್ತಾಗಿ 1 ಗಾಡಿ ಜೋಡಾ ಬಿದರು 2 ಗಾಡಿ ಜೋಡಾ ಕಾಡುಮುಟ್ಟನ್ನು ಕತರಾಯಿಸಿಕೊಂಡು ಹೋಗುವದು; ಸದರಿ ತೇರಿನ ಚಕ್ರಗಳೇ ಆಗಲಿ ಅಚ್ಚುಗಳೇ ಆಗಲಿ ಹೊಸದಾಗಿ ಮಾಡಲ್ಪಡಬೇಕಾದರೆ ಸಾಕಾದಷ್ಟು ಸಾಮಾನುಗಳನ್ನು ಕೊಡುವದು.

ತಾರೀಖು 28ನೆ ಏಪ್ರೆಲ್ 1904.

1900ನೆ ಇಸವಿ XIನೆ ನಂಬರ ಮೈಸೂರು ಸೀಮೆಯ ಫಾರೆಸ್ಟು ರೆಗ್ಯುಲೇಷರ್ 18ನೆ ಸೆಕ್ಷನಿನ ವಿಧಿಗಳನುಸರಿಸಿ ಈ ಇಸ್ತಿಹಾರಿಗೆ ಜಂಟಿಸಿ ಇರುವ ಷೆಡ್ಯೂಲಿನಲ್ಲಿ ನಮೂದಿಸಿರುವ ಚಕ್ಕುಬಂದಿಯುಳ್ಳ ಪ್ರದೇಶವು 1904ನೆ ಏಪ್ರೆಲ್ ಗುರ್ರೆ ಲಾಗಾಯತು ಈ ಇಸ್ತಿಹಾರಿನ ಅಡೀಲಿ ವಿವರಿಸಿ ಇರುವ ಹಕ್ಕುಗಳ ಚಲಾವಣಿಗೆ ಒಳಪಟ್ಟು ಸ್ಟೇಟ್ ಫಾರೆಸ್ಟು ಆಗಿರುತ್ತದೆ.

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಸೆಕ್ಷನ್ ನಂಬರು.	ಹಳ್ಳಿಯ ಹೆಸರು.	ಚಕ್ಕುಬಂದಿ.
ಚಿತ್ರದುರ್ಗ.	ಮೊಳಕಾಲ್ಮೂರು.	೧ ನೇ ಬ್ಲಾಕುಗಳು.	ಕೃಷ್ಣ ರಾಜಪುರ.	ಉತ್ತರಕ್ಕೆ.—ಕೃಷ್ಣರಾಜಪುರದ ಸರ್ವೆ ನಂ. 42ರ ನೈರುತ್ಯ ಮೂಲೆಗೆ ದಕ್ಷಿಣಕ್ಕೆ ಮೂರು ಸರಪಣಿ ದೂರದಲ್ಲಿ ಹೊರಟು, ಲೈನು ಪೂರ್ವಾಭಿಮುಖವಾಗಿ ಮೂರು ಸರಪಣಿ ಫಾಸಲೆಯನ್ನು ಬಿಟ್ಟು ಸಮಾನಾಂತರವಾಗಿ ಸರ್ವೆ ನಂ. 43ರಲ್ಲಿ ಹಾದು ಇದೇ ಗ್ರಾಮದ ಸರ್ವೆ ನಂ. 42, 41, 44, 48, 49, 51, 1, 2 ಮತ್ತು 6 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಹೋಗುತ್ತದೆ. ತರುವಾಯ ಉತ್ತರಕ್ಕೆ ತಿರುಗಿ ಸರ್ವೆ ನಂ. 43 ವ 6ರ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಹೋಗಿ ಮೇಲಿನ ಕಣಿವೆಯ ಸರ್ವೆ ನಂ. 26ರ ನೈರುತ್ಯ ಮೂಲೆಯನ್ನು ಸೇರುತ್ತದೆ; ಈ ನಂಬರಿನ ದಕ್ಷಿಣ ಪಾರ್ಶ್ವವನ್ನು ಅನುಸರಿಸಿ, ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 25 ವ 23 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಹೋಗಿ ಎರಡನೇ ನಂಬರಿನ ನೈರುತ್ಯ ಮೂಲೆಯನ್ನು ಕೂಡುತ್ತದೆ. ತರುವಾಯ ಸರ್ವೆ ನಂ. 23 ವ 24 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಎರಡನೇ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 18 ವ 21 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಎರಡನೇ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 21 ವ 20 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಎರಡನೇ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂ. 20 ವ 18 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಎರಡನೇ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 17, 16 ವ 15 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆಖೈರು ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 13ರ ಆಗ್ನೇಯ ಪಾರ್ಶ್ವದ ಉದ್ದಕ್ಕೂ ಹೋಗಿ ಬಳ್ಳಾರಿ ಡಿಸ್ಟ್ರಿಕ್ಟಿನ ಪ್ರೊವಿನ್ಷಿಯಲ್ ಎಲ್ಲೆಯನ್ನು ಕೂಡುತ್ತದೆ. ಪೂರ್ವಕ್ಕೆ.—ತರುವಾಯ ಅದೇ ಎಲ್ಲೆಯನ್ನೇ ಅನುಸರಿಸಿ ಬೊಮ್ಮದೇವರಹಳ್ಳಿ ಸರ್ವೆ ನಂ. 32ರ ವಾಯುವ್ಯ ಮೂಲೆಗೆ ಹೋಗುತ್ತದೆ. ಈ ನಂಬರಿನ ವಾಯುವ್ಯ ಪಾರ್ಶ್ವವನ್ನು ಅನುಸರಿಸಿ ಪಶ್ಚಿಮ ಮೂಲೆಯನ್ನು ಕೂಡುತ್ತದೆ. ತರುವಾಯ ನೈರುತ್ಯಕ್ಕೆ ಒಂದು ಮೈಲು ದೂರದ ವರಿಗೂ ಸರ್ವೆ ನಂ. 31ರ ಮಧ್ಯೆ, ಸರ್ವೆ ನಂ. 59ರ ವಾಯುವ್ಯ ಮೂಲೆಗೆ ಹೋಗುತ್ತದೆ; ತರುವಾಯ ಈ ನಂಬರಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ದಕ್ಷಿಣಕ್ಕೆ ಸರ್ವೆ ನಂ. 60ರ ಮಧ್ಯೆ 2 ಫರ್ಲಾಂಗುದೂರದವರಿಗೂ ಹೋಗಿ ಇದರ ದಕ್ಷಿಣ ಪಾರ್ಶ್ವವನ್ನು ಕೂಡುತ್ತದೆ. ತರುವಾಯ ಪಶ್ಚಿಮಕ್ಕೆ ರಾಜಾಪುರದ ಸರ್ವೆ ನಂ. 62ರ ಮಧ್ಯೆ 5 ಫರ್ಲಾಂಗುದೂರ, ಕೆಳಗಿನ ಕಣಿವೆಯ ಸರ್ವೆ ನಂ. 8ರ ಮಧ್ಯೆ 2 ಫರ್ಲಾಂಗುದೂರ ಹೋಗಿ ಸರ್ವೆ ನಂ. 5ರ ಈಶಾನ್ಯ ಮೂಲೆಯನ್ನು ಸೇರುತ್ತದೆ. ತರುವಾಯ ಸರ್ವೆ ನಂ. 5 ವ 4 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಹೋಗುತ್ತದೆ. ತರುವಾಯ ನೈರುತ್ಯಕ್ಕೆ ಸರ್ವೆ ನಂ. 8ರ ಮಧ್ಯೆ 3 ಫರ್ಲಾಂಗುದೂರ, ಸರ್ವೆ ನಂ. 40ರ ಮಧ್ಯೆ ಒಂದು ಮೈಲುದೂರ, ನಲ್ಲರೆಡ್ಡಿ ಕೊಂಡಾಪುರದ ಸರ್ವೆ ನಂ. 20ರ ಮಧ್ಯೆ 5½ ಫರ್ಲಾಂಗುದೂರ ಹೋಗಿ ಸರ್ವೆ ನಂ. 19ರ ವಾಯುವ್ಯ ಮೂಲೆಯನ್ನು ಸೇರುತ್ತದೆ.

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಚೆಕ್ಕು ಬಂದಿ.
ಚಿತ್ರದುರ್ಗ.	ಮೊಳಕಾಲ್ಮೂರು.	9 ಚದರ ಮೈಲಿಗಳು.	ಕೃಷ್ಣರಾಜಪುರ.	ದಕ್ಷಿಣಕ್ಕೆ.—ತರುವಾಯ ಪಶ್ಚಿಮಕ್ಕೆ ಸರ್ವೆ ನಂ. 20ರ ಮಧ್ಯೆ 1 ಫರ್ಲಾಂಗು ದೂರ, ಪಕುರ್ತಿಯ ಸರ್ವೆ ನಂ. 36ರ ಮಧ್ಯೆ 2 ಫರ್ಲಾಂಗುದೂರ ಹೋಗುತ್ತದೆ. ತರುವಾಯ ವಾಯುವ್ಯಕ್ಕೆ ಮರೇನಹಳ್ಳಿ ಸರ್ವೆ ನಂ. 14ರ ಮಧ್ಯೆ 2 ಫರ್ಲಾಂಗುದೂರ ಹೋಗಿ ಸರ್ವೆ ನಂ. 3ರ ಆಗ್ನೇಯ ಮೂಲೆಯನ್ನು ಸೇರುತ್ತದೆ. ತರುವಾಯ ಸರ್ವೆ ನಂ. 3ರ ಉತ್ತರ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 2, 1, 12 ವ 13 ಇವುಗಳ ಪೂರ್ವ ವ ಉತ್ತರ ಪಾರ್ಶ್ವಗಳ ಉದ್ದಕ್ಕೂ, ಸರ್ವೆ ನಂ. 12ರ ಉತ್ತರಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 11ರ ಪೂರ್ವ ವ ಉತ್ತರ ಪಾರ್ಶ್ವಗಳ ಉದ್ದಕ್ಕೂ ಹೋಗಿ ಕಡೇ ನಂಬರಿನ ವಾಯುವ್ಯ ಮೂಲೆಯನ್ನು ಸೇರುತ್ತದೆ. ತರುವಾಯ ಪಶ್ಚಿಮಕ್ಕೆ ½ ಫರ್ಲಾಂಗುದೂರ, ದಕ್ಷಿಣಕ್ಕೆ 1 ಮೈಲಿ 1½ ಫರ್ಲಾಂಗುದೂರ ಸರ್ವೆ ನಂ. 10ರ ಮಧ್ಯೆ, ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಪಶ್ಚಿಮಕ್ಕೆ ಜಿಲ್ಲದಗುಂದಿ ಸರ್ವೆ ನಂ. 2ರ ಮಧ್ಯೆ 2 ಫರ್ಲಾಂಗುದೂರ ಹೋಗಿ ಸರ್ವೆ ನಂ. 11ರ ಈಶಾನ್ಯ ಮೂಲೆಯನ್ನು ಕೂಡುತ್ತದೆ. ತರುವಾಯ ಈ ನಂಬರಿನ, ಉತ್ತರ ವ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 9, 8, ವ 3 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಆಖೈರು ನಂಬರಿನ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ನೈರುತ್ಯಕ್ಕೆ ಸರ್ವೆ ನಂ. 2ರ ಮಧ್ಯೆ 2 ಫರ್ಲಾಂಗುದೂರ ಹೋಗಿ ಚಿನ್ನವಾಲದ ಗುಡ್ಡದ ಸರ್ವೆ ನಂ. 1ರ ಆಗ್ನೇಯ ಮೂಲೆಗೆ ಸೇರುತ್ತದೆ; ತರುವಾಯ ಪಶ್ಚಿಮಕ್ಕೆ ಇದೇ ನಂಬರಿನ ಮಧ್ಯೆ 1 ಮೈಲಿ 2½ ಫರ್ಲಾಂಗುದೂರ ಹೋಗಿ ಬಳ್ಳಾರಿ ಡಿಸ್ಟ್ರಿಕ್ಟು ಪ್ರಾವಿನ್ಷಿಯಲ್ ಎಲ್ಲೆಯನ್ನು ಸೇರುತ್ತದೆ. ಪಶ್ಚಿಮಕ್ಕೆ.—ಬಳ್ಳಾರಿ ಡಿಸ್ಟ್ರಿಕ್ಟಿನ ಪ್ರಾವಿನ್ಷಿಯಲ್ ಎಲ್ಲೆ.

ಷರಾ:—A. ಇದರಡೀ ಕಂಡ ಹಾದೀ ಹಕ್ಕುಗಳು ಈ ಬ್ಲಾಕಿನಲ್ಲಿ ಕೊಡಲ್ಪಟ್ಟಿರುತ್ತವೆ:—

(1) ಜನಗಳ ಮತ್ತು ದನಗಳ ಉಪಯೋಗಕ್ಕೋಸ್ಕರ ಸಂತೆಗುಡ್ಡದಿಂದ ಮಲ್ಲೇಹರವಿಗೆ ಹೋಗುವ 8 ಅಡಿ ಅಗಲವುಳ್ಳ ಮತ್ತು 1 ಮೈಲಿ ದೂರವುಳ್ಳ ಕಾಲುಹಾದಿ. ಈ ಹಾದಿಯು ಫಾರೆಸ್ಟನ್ನು ಕೃಷ್ಣರಾಜಪುರದ ಸರ್ವೆ ನಂ. 43ರ ವಾಯುವ್ಯ ಮೂಲೆಗೆ ಸುಮಾರು 1 ಫರ್ಲಾಂಗು ದೂರದಲ್ಲಿ ಪ್ರವೇಶಿಸಿ ಆಗ್ನೇಯ ದಿಕ್ಕಿಗೆ ಈ ನಂಬರು ಮತ್ತು ಮಲ್ಲೇಹರವಿನ ಸರ್ವೆ ನಂ. 12ರ ಮಧ್ಯೆ ಹೋಗಿ ಎರಡನೇ ಗ್ರಾಮದ ಸರ್ವೆ ನಂ. 13ರ ಈಶಾನ್ಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

(2) ಜನಗಳ ಮತ್ತು ದನಗಳ ಉಪಯೋಗಕ್ಕೋಸ್ಕರ ಕೃಷ್ಣರಾಜಪುರದಿಂದ ಮಲ್ಲೇಹರವಿಗೆ ಹೋಗುವ 8 ಅಡಿ ಅಗಲವುಳ್ಳ ಮತ್ತು 1 ಮೈಲು ದೂರವುಳ್ಳ ಕಾಲುಹಾದಿ. ಈ ಹಾದಿಯು ಫಾರೆಸ್ಟನ್ನು ಕೃಷ್ಣರಾಜಪುರದ ಸರ್ವೆ ನಂ. 43ರ ಈಶಾನ್ಯ ಮೂಲೆಗೆ ಸುಮಾರು 1½ ಫರ್ಲಾಂಗು ದೂರದಲ್ಲಿ ಪ್ರವೇಶಿಸಿ ನೈರುತ್ಯ ದಿಕ್ಕಿಗೆ ಈ ನಂಬರಿನಲ್ಲಿಯೂ ಮಲ್ಲೇಹರವಿನ ಸರ್ವೆ ನಂ. 12 ರಲ್ಲಿಯೂ ಹೋಗಿ ಎರಡನೇ ಗ್ರಾಮದ ಸರ್ವೆ ನಂ. 1ರ ವಾಯುವ್ಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

(3) ಜನಗಳ ಮತ್ತು ದನಗಳ ಉಪಯೋಗಕ್ಕೋಸ್ಕರ ಮೇಲಿನ ಕಣಿವೆಯಿಂದ ಕೆಳಗಿನ ಕಣಿವೆಗೆ ಹೋಗುವ 8 ಅಡಿ ಅಗಲವುಳ್ಳ ಮತ್ತು 1 ಮೈಲಿ ಉದ್ದವುಳ್ಳ ಕಾಲುಹಾದಿ. ಈ ಹಾದಿಯು ಫಾರೆಸ್ಟನ್ನು ಮೇಲಿನ ಕಣಿವೆ ಸರ್ವೆ ನಂ. 21ರ ಆಗ್ನೇಯ ಮೂಲೆಯಲ್ಲಿ ಪ್ರವೇಶಿಸಿ, ಆಗ್ನೇಯ ದಿಕ್ಕಿಗೆ ಇದೇ ಗ್ರಾಮದ ಸರ್ವೆ ನಂ. 22, ಕೆಳಗಿನ ಕಣಿವೆ ಸರ್ವೆ ನಂ. 40 ವ 8 ಇವುಗಳ ಮಧ್ಯೆ ಹೋಗಿ ಕೊನೇ ಗ್ರಾಮದ ಸರ್ವೆ ನಂ. 44ರ ವಾಯುವ್ಯ ಮೂಲೆಗೆ 100 ಗಜ ದೂರದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(4) ಜನಗಳ ಮತ್ತು ದನಗಳ ಉಪಯೋಗಕ್ಕೋಸ್ಕರ ಬೊಮ್ಮದೇವರ ಹಳ್ಳಿಯಿಂದ ಪೆರ್ಲಘಟ್ಟ ಹಳ್ಳಕ್ಕೆ (ಸರ್ವೆ ನಂ. 60ರ ವಾಯುವ್ಯ ಮೂಲೆಯಲ್ಲಿ) ಹೋಗುವ 20 ಅಡಿ ಅಗಲವುಳ್ಳ ಮತ್ತು 4½ ಫರ್ಲಾಂಗು ಉದ್ದವುಳ್ಳ ಕಾಲುಹಾದಿ. ಈ ಹಾದಿಯು ಬೊಮ್ಮದೇವರ ಹಳ್ಳಿಯ ಸರ್ವೆ ನಂ. 59ರ ನೈರುತ್ಯ ಮೂಲೆಯಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮಾಭಿಮುಖವಾಗಿ ಸರ್ವೆ ನಂ. 31ರಲ್ಲಿ ಹೋಗುತ್ತದೆ.

(5) ಜನಗಳ ಮತ್ತು ದನಗಳ ಉಪಯೋಗಕ್ಕೋಸ್ಕರ ಕೆಳಗಿನ ಕಣಿವೆಯಿಂದ, ಇದೇ ಗ್ರಾಮದ ಸರ್ವೆ ನಂ. 7ರಲ್ಲಿರತಕ್ಕ ಭಾವಿಗೆ ಹೋಗುವ 15 ಅಡಿ ಅಗಲವುಳ್ಳ ಮತ್ತು 2½ ಫರ್ಲಾಂಗು ಉದ್ದವುಳ್ಳ ಕಾಲುಹಾದಿ. ಈ ಹಾದಿಯು ಫಾರೆಸ್ಟನ್ನು ಕೆಳಗಿನ ಕಣಿವೆಯ ಸರ್ವೆ ನಂ. 4ರ ವಾಯುವ್ಯ ಮೂಲೆಯ ಸಮೀಪದಲ್ಲಿ ಪ್ರವೇಶಿಸಿ, ಈಶಾನ್ಯ ದಿಕ್ಕಿಗೆ ಸರ್ವೆ ನಂ. 81 ವ 7 ಇವುಗಳ ಮಧ್ಯೆ ಹೋಗುತ್ತದೆ.

(6) ಜನಗಳ ಮತ್ತು ದನಗಳ ಉಪಯೋಗಕ್ಕೋಸ್ಕರ ಯರೇನಹಳ್ಳಿಯಿಂದ ಮಲ್ಲೆ ಹರವಿಗೆ ಹೋಗುವ 8 ಅಡಿ ಅಗಲವುಳ್ಳ ಮತ್ತು 4½ ಫರ್ಲಾಂಗು ಉದ್ದವುಳ್ಳ ಕಾಲುಹಾದಿ ; ಈ ಹಾದಿಯು ಫಾರೆಸ್ಟನ್ನು ಯರೇನಹಳ್ಳಿಯ ಸರ್ವೆ ನಂ. 11ರ ಈಶಾನ್ಯ ಮೂಲೆಯಲ್ಲಿ ಪ್ರವೇಶಿಸಿ ಉತ್ತರಕ್ಕೆ ಮಲ್ಲೆಹರವು ಗ್ರಾಮದ ಸರ್ವೆ ನಂ. 7ರ ಮಧ್ಯೆ ಹೋಗಿ, ಈ ಕೊನೇ ನಂಬರಿನ ವಾಯುವ್ಯ ಮೂಲೆ ಸಮೀಪದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(7) ಜನಗಳ, ದನಗಳ ಮತ್ತು ಗಾಡಿಗಳ ಉಪಯೋಗಕ್ಕೋಸ್ಕರ ಬುಡೇನಹಳ್ಳಿಯಿಂದ ಬೊಮ್ಮಗಟ್ಟಕ್ಕೆ ಹೋಗುವ 15 ಅಡಿ ಅಗಲವುಳ್ಳ ಮತ್ತು 1 ಫರ್ಲಾಂಗು ಉದ್ದವುಳ್ಳ ಗಾಡಿಹಾದಿ. ಈ ಹಾದಿಯು ಫಾರೆಸ್ಟನ್ನು ಚಿನ್ನವಾಳದ ಗುಡ್ಡದ ಸರ್ವೆ ನಂ. 1ರ ವಾಯುವ್ಯ ಮೂಲೆಗೆ 150 ಗಜ ದೂರದಲ್ಲಿ ಪ್ರವೇಶಿಸಿ ವಾಯುವ್ಯ ದಿಕ್ಕಿಗೆ ಇದೇ ನಂಬರಿನಲ್ಲಿ ಹೋಗಿ ಸದರಿ ಮೂಲೆಗೆ, ಸುಮಾರು 100 ಗಜ ದೂರದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(8) ಜನಗಳ ಮತ್ತು ದನಗಳ ಉಪಯೋಗಕ್ಕೋಸ್ಕರ ಮಲ್ಲೆ ಹರವಿನಿಂದ ಕೆಳಗಿನ ಕಣಿವೆಗೆ ಹೋಗುವ 8 ಅಡಿ ಅಗಲವುಳ್ಳ ಮತ್ತು 1 ಮೈಲಿ 4 ಫರ್ಲಾಂಗು ಉದ್ದವುಳ್ಳ ಕಾಲುಹಾದಿ. ಈ ಹಾದಿಯು ಫಾರೆಸ್ಟನ್ನು ಮಲ್ಲೆ ಹರವಿನ ಸರ್ವೆ ನಂ. 2ರ ಪೂರ್ವ ಮೂಲೆಯಲ್ಲಿ ಪ್ರವೇಶಿಸಿ ಈಶಾನ್ಯದಿಕ್ಕಿಗೆ ಈ ಗ್ರಾಮದ ಸರ್ವೆ ನಂ. 12, ವ ಕೆಳಗಿನ ಕಣಿವೆಯ ಸರ್ವೆ ನಂ. 40ರ ಮಧ್ಯೆ ಹೋಗಿ ಮೇಲೆ ವಿವರಿಸಿದ (3) ನೇ ಕಾಲು ಹಾದಿಯನ್ನು ಕೂಡುತ್ತದೆ.

B.—ಇದರಡೀ ಕಂಡ ಹಕ್ಕುಗಳು ಈ ಫಾರೆಸ್ಟಿನಲ್ಲಿ ಕೊಡಲ್ಪಟ್ಟಿವೆ :—

(1) ಮಲ್ಲೆ ಹರವು ಗ್ರಾಮದ ಗ್ರಾಮ ನಿವೇಶನ ಮತ್ತು ಸರ್ವೆ ನಂ. 1, 2, 3, 4, 5, 6, 8, 9, 10, 11, ವ 13 ಇವುಗಳನ್ನು (ಸುತ್ತಲೂ 2 ಸರಪಣಿ ಬಂಜರು ಜಮೀನು ಬಿಟ್ಟು) ಆವರಣವಾಗಿ ಮಾಡಿ ಫಾರೆಸ್ಟು ಸರಹದ್ದಿನಿಂದ ಪ್ರತ್ಯೇಕಿಸಲ್ಪಡುತ್ತದೆ.

(2) 1. ಮಲ್ಲೇ ಹರವಿನ ಗ್ರಾಮಸ್ಥರು ಸ್ಟೇಟು ಫಾರೆಸ್ಟಿನಲ್ಲಿ ತಮ್ಮ ದನಗಳನ್ನು ಮುಫತ್ತಾಗಿ ಮೇಯಿಸಿಕೊಳ್ಳಬಹುದು. ಈ ಗ್ರಾಮಸ್ಥರು ಫಾರೆಸ್ಟಿಗೆ ಬೆಂಕಿ ಬಿದ್ದಾಗ ಆರಿಸುವದಕ್ಕು ಫಾರೆಸ್ಟು ತಕ್ಸೀರು ನಡೆಯದಹಾಗೆ ನೋಡಿಕೊಳ್ಳುವದಕ್ಕು ಫಾರೆಸ್ಟು ಇಲಾಖೆಗೆ ಸಹಾಯ ಮಾಡುವ ಪಕ್ಷದಲ್ಲಿ ಮುಫತ್ತಾಗಿ ಬಾರೆ ಹುಲ್ಲನ್ನು ಸೌದೆಯನ್ನು ಜಿರಾಯಿತಿ ಸಾಮಾನಿಗೆ ಬೇಕಾಗುವ ಮನ್ನಾ ಜಾತಿಗೆ ಸೇರದೇ ಇರುವ ಮರಗಳನ್ನು ತಂದುಕೊಳ್ಳಬಹುದು.

2. ಬೊಮ್ಮದೇವರಹಳ್ಳಿ ಗ್ರಾಮಸ್ಥರು ನ್ಯಾಯವಾಗಿ ವಿಧಿಸಲ್ಪಟ್ಟ ದರದಲ್ಲಿ ಅರ್ಧ ಮೊಬಲಗನ್ನು ಕೊಟ್ಟು ತಮ್ಮ ದನಗಳನ್ನು ಸ್ಟೇಟು ಫಾರೆಸ್ಟಿನಲ್ಲಿ ಮೇಯಿಸಿಕೊಳ್ಳಬಹುದು.

ತಾರೀಖು 28ನೇ ಏಪ್ರೆಲ್ 1904.

1900ನೇ ಇಸವಿ XIನೇ ನಂಬರ್ ಮೈಸೂರು ಸೀಮೆಯ ಫಾರೆಸ್ಟು ರೆಗ್ಯುಲೇಷನ್ 18ನೇ ಸೆಕ್ಷನಿನ ವಿಧಿಗಳನುಸರಿಸಿ ಈ ಇಸ್ತಿಹಾರಿಗೆ ಜಂಟಿಸಿ ಇರುವ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಚಕ್ಕುಬಂದಿಯುಳ್ಳ ಪ್ರದೇಶವು 1904ನೇ ಏಪ್ರೆಲ್ ಗುರ್ರೆ ಲಾಗಾಯತು ಈ ಇಸ್ತಿಹಾರಿನ ಅಡಿಯಲ್ಲಿ ವಿವರಿಸಿ ಇರುವ ಹಕ್ಕುಗಳ ಚಲಾವಣೆಗೆ ಒಳಪಟ್ಟು ಸ್ಟೇಟ್ ಫಾರೆಸ್ಟು ಆಗಿರುತ್ತದೆ.

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಫಾರೆಸ್ಟಿನ ಹೆಸರು.	ಚಕ್ಕುಬಂದಿ.
ಚಿತ್ರದುರ್ಗ.	ಹೊಳಲ್ಕೆರೆ.	16½ ಚದರ ಮೈಲಿ.	ಕಣಿವೆ ಕಾವಲ್.	ಉತ್ತರಕ್ಕೆ.—ಚಿಕುವಿತ್ತಿಯ ಸರ್ವೆ ನಂ. 18ರ ನೈರುತ್ಯ ಮೂಲೆಯಿಂದ ಹೊರಟು ಲೈನು ಅದೇ ಗ್ರಾಮದ ಸರ್ವೆ ನಂ. 18, 14 ವ 15ರ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ದೊಡ್ಡತಮ್ಮನಹಳ್ಳಿಯ ಸರ್ವೆ ನಂ. 2ರ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದ ಉದ್ದಕ್ಕೂ ತುಮಕೂರನಹಳ್ಳಿಯ ಸರ್ವೆ ನಂ. 42ರ ವಾಯುವ್ಯ ಮೂಲೆಗೆ ಹೋಗುತ್ತದೆ. ಅನಂತರ ಈ ಸರ್ವೆ ನಂಬರಿನ ಪಶ್ಚಿಮ, ದಕ್ಷಿಣ ಮತ್ತು ಪೂರ್ವ ಪಾರ್ಶ್ವಗಳ ಉದ್ದಕ್ಕೂ ಅದರ ಆತ್ಯಂತ ಪೂರ್ವ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 38, 34, 35 ವ 36ರ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆಖೈರ್ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಬಳಿಕ ಸರ್ವೆ ನಂ. 36 ವ 31ರ ಪೂರ್ವ ಪಾರ್ಶ್ವಗಳ ಉದ್ದಕ್ಕೂ

ಷೆಡ್ಯೂಲ್.

ಜಿಲ್ಲೆ.	ತಾಲ್ಲೂಕು.	ಸರಾಸರಿ ವಿಸ್ತೀರ್ಣ.	ಮುಖ್ಯ ಗ್ರಾಮ.	ಚಕ್ಕುಬಂದಿ.
ಚಿತ್ರದುರ್ಗ.	ಮೊಳಕಾಲ್ಮೂರು.	16½ ಚದರ ಮೈಲಿ.	ಕೋಣಸಾಗರ.	ಎರಡನೇ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅಡವಿ ಮಲ್ಲಾಪುರದ ಸರ್ವೆ ನಂ. 5ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಆದರ ಆಗ್ನೇಯ ಮೂಲೆಗೆ ಹೋಗುತ್ತದೆ. ಇಲ್ಲಿ ಬೆಂಗಳೂರಿಂದ ಬಳ್ಳಾರಿಗೆ ಹೋಗುವ ಭಾಟಾ ಮಾರ್ಗವನ್ನು ಸೇರುತ್ತದೆ. ಅನಂತರ ಅದೇ ಭಾಟಾ ಮಾರ್ಗದ ಬಲಭಾಗದ ಉದ್ದಕ್ಕೂ ಅಡವಿ ಮಲ್ಲಾಪುರದ ಸರ್ವೆ ನಂ. 2ರ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ.—ಆಮೇಲೆ ಅಡವಿ ಮಲ್ಲಾಪುರದ ಸರ್ವೆ ನಂ. 8 ವ 9ರ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಎರಡನೇ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ಬಳಿಕ ಅದೇ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಅದರ ದಕ್ಷಿಣ ಮೂಲೆಗೆ ಹೋಗುತ್ತದೆ. ಇಲ್ಲಿ ನೇರ್ಲಹಳ್ಳಿಯ ಸರ್ವೆ ನಂ. 82ರ ಅತ್ಯಂತ ಉತ್ತರ ಮೂಲೆಯನ್ನು ಸೇರುತ್ತದೆ. ತರುವಾಯ ಅದೇ ಸರ್ವೆ ನಂಬರಿನ ವಾಯುವ್ಯ ಮತ್ತು ನೈರುತ್ಯ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 79ರ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 79, 75 ವ 69ರ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಆಖೈರ್ ಸರ್ವೆ ನಂಬರಿನ ದಕ್ಷಿಣ ಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ.—ಅನಂತರ ಮಾರಮ್ಮನಹಳ್ಳಿಯ ಸರ್ವೆ ನಂ. 28 ವ 23ರ ಉತ್ತರ ಪಾರ್ಶ್ವಗಳ ಉದ್ದಕ್ಕೂ ಎರಡನೆ ನಂಬರಿನ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 23, 24 ವ 20ರ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಆಖೈರ್ ಸರ್ವೆ ನಂಬರಿನ ಪಶ್ಚಿಮ ಮೂಲೆಗೆ ಹೋಗುತ್ತದೆ. ಆಮೇಲೆ ದುಪ್ಪಿಯ ಸರ್ವೆ ನಂ. 5, 4 ವ 3ರ ಉತ್ತರ ಪಾರ್ಶ್ವಗಳ ಉದ್ದಕ್ಕೂ ಆಖೈರ್ ಸರ್ವೆ ನಂಬರಿನ ವಾಯುವ್ಯ ಮೂಲೆಗೆ ಹೋಗುತ್ತದೆ. ಅನಂತರ ಅದೇ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ದುಪ್ಪಿಯ ಸರ್ವೆ ನಂ. 1ರ ಮತ್ತು ಬೊಮ್ಮಗೊಂಡನಕೆರೆ ಸರ್ವೆ ನಂ. 28ರ ಉತ್ತರ ಪಾರ್ಶ್ವಗಳ ಉದ್ದಕ್ಕೂ ಎರಡನೆ ನಂಬರಿನ ವಾಯುವ್ಯ ಮೂಲೆಗೆ ಹೋಗುತ್ತದೆ. ಇಲ್ಲಿ ಬೆಂಗಳೂರಿಂದ ಬಳ್ಳಾರಿಗೆ ಹೋಗುವ ಭಾಟಾ ಮಾರ್ಗವನ್ನು ಸೇರುತ್ತದೆ. ತರುವಾಯ ಅದೇ ಭಾಟಾ ಮಾರ್ಗದ ಎಡಭಾಗದ ಉದ್ದಕ್ಕೂ ಸರ್ವೆ ನಂ. 25ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ಸರ್ವೆ ನಂಬರಿನ ಉತ್ತರ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಮುತ್ತಗಾರಹಳ್ಳಿ ಸರ್ವೆ ನಂ. 42 ವ 41ರ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಎರಡನೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 41 ವ 40ರ ಉತ್ತರ ಪಾರ್ಶ್ವಗಳ ಉದ್ದಕ್ಕೂ ಎರಡನೆ ನಂಬರಿನ ಉತ್ತರ ಕೊನೆಗೆ ಹೋಗುತ್ತದೆ. ಆಮೇಲೆ ಅದೇ ನಂಬರಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ಪಶ್ಚಿಮ ಮೂಲೆಗೆ ಹೋಗುತ್ತದೆ. ಅನಂತರ ಸರ್ವೆ ನಂ. 29ರ ಉತ್ತರ ಪಾರ್ಶ್ವದ ಉದ್ದಕ್ಕೂ ಅದರ ಉತ್ತರ ಮೂಲೆಗೆ ಹೋಗುತ್ತದೆ. ಬಳಿಕ ಸರ್ವೆ ನಂ. 29, 30, 31, 32, 20 ವ 21ರ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಆಖೈರ್ ಸರ್ವೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 22ರ ಉತ್ತರ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ.

ಷೆಡ್ಯೂಲ್.

ಡಿಸ್ಟ್ರಿಕ್ಟು	ತಾಲ್ಲೂಕು	ಸುಮಾರು ವಿಸ್ತೀರ್ಣ ಎಕರೆ	ಪ್ಲಾಂಟಿನ ಹೆಸರು.	ಚೆಕ್ಕು ಬಂದಿ.
ಚಿತ್ರದುರ್ಗ.	ಹೊಳಲ್ಕೆರೆ.	161 ಎಕರೆಗಳು.	ಕಮರಾ ಕಾವಲ್.	ಪಶ್ಚಿಮಕ್ಕೆ.—ಆಮೇಲೆ ಚಳ್ಳಕೆರೆ ತಾಲ್ಲೂಕು ಚೌಳುಕೆರೆ ಮತ್ತು ಮುಸ್ತಲಗುಮ್ಮಿ ಗ್ರಾಮಗಳ ಪೂರ್ವ ಸರಹದ್ದುಗಳ ಉದ್ದಕ್ಕೂ ಸೂರಪ್ಪನಹಳ್ಳಿ ಸರ್ವೆ ನಂ. 27ರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ಗ್ರಾಮದ ಸರ್ವೆ ನಂ. 27, 28 ವ 23ರ ಮತ್ತು ಹರವಿನದೊಡ್ಡಿ ಸರ್ವೆ ನಂ. 12, 13 ವ 14ರ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಆಖೈರ್ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ಬಳಿಕ ಅದೇ ಸರ್ವೆ ನಂಬರಿನ ಮತ್ತು ಸರ್ವೆ ನಂ. 2ರ ಉತ್ತರ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 3ರ (ಸೇರಿರುತ್ತೆ.) ನೈರುತ್ಯ ಮೂಲೆಗೆ ಹೋಗುತ್ತದೆ. ಅನಂತರ ಹರವಿನ ದೊಡ್ಡಿ ಸರ್ವೆ ನಂ. 5 ವ 4ರ ಮತ್ತು ಚಿಕ್ಕೋಬನಹಳ್ಳಿ ಸರ್ವೆ ನಂ. 34 ವ 32ರ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಆಖೈರ್ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ ತರುವಾಯು ಸರ್ವೆ ನಂ. 18ರ ದಕ್ಷಿಣ ಮತ್ತು ಪೂರ್ವ ಪಾರ್ಶ್ವಗಳ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಉತ್ತರ ದಿಕ್ಕಾಗಿ 300 ಗಜಗಳ ದೂರ ಸರ್ವೆ ನಂ. 16ರ ನಡುವೆ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯು ಚಿಕ್ಕೋಬನಹಳ್ಳಿಯ ಸರ್ವೆ ನಂ 15ರ ಮತ್ತು ಚಿಕುಮ್ಮಿಯ ಸರ್ವೆ ನಂ. 19ರ ಪೂರ್ವ ಪಾರ್ಶ್ವದ ಉದ್ದಕ್ಕೂ ಹೊರಟ ಸ್ಥಳಕ್ಕೆ ಹೋಗುತ್ತದೆ.

ಷರಾ.—ಹಾದಿಯ ಇದರಡಿ ಕಂಡ ಹಕ್ಕುಗಳು ಬ್ಯಾಕಿನಲ್ಲಿ ಕೊಡಲ್ಪಟ್ಟಿರುತ್ತವೆ.

(1) ವರ್ಷವೆಲ್ಲಾ ಜನಗಳ, ದನಗಳ ಮತ್ತು ಭಂಡಿಗಳ ಉಪಯೋಗಕ್ಕೋಸ್ಕರ ಚಿಕ್ಕೋಬನಹಳ್ಳಿಯಿಂದ ಹೊಳಕಾಲ್ಲೂರಿಗೆ ಹೋಗುವ 12 ಅಡಿ ಅಗಲವುಳ್ಳ ಮತ್ತು 1 ಮೈಲ್ 3 ಫರ್ಲಾಂಗ್ ದೂರವುಳ್ಳ ಭಂಡಿ ಜಾಡು. ಇದು ಫಾರೆಸ್ಟನ್ನು ಚಿಕ್ಕೋಬನಹಳ್ಳಿ ಸರ್ವೆ ನಂ. 16ರ ಈಶಾನ್ಯ ಮೂಲೆಯ ಹತ್ತರ ಪ್ರವೇಶಿಸಿ ನೆಟ್ಟಗೆ ಪೂರ್ವಾಭಿಮುಖವಾಗಿ ಕಮರಾಕಾವಲ್ ಸರ್ವೆ ನಂ. 1ರ ಮಧ್ಯೆ ಹೋಗಿ ತುಮಕೂರನಹಳ್ಳಿ ಸರ್ವೆ ನಂ. 42ರ ವಾಯುವ್ಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

(2) ವರ್ಷವೆಲ್ಲಾ ಜನಗಳ, ದನಗಳ ಮತ್ತು ಭಂಡಿಗಳ ಉಪಯೋಗಕ್ಕೋಸ್ಕರ ಬೆಂಗಳೂರಿಂದ ಬಳ್ಳಾರಿಗೆ ಹೋಗುವ 75 ಅಡಿ ಅಗಲ ಮತ್ತು 3 ಮೈಲಿ 5⅔ ಫರ್ಲಾಂಗ್ ದೂರವುಳ್ಳ ಪ್ರಾವಿನ್ಷಲ್ ಹೈರೋಡ್ ಇದು ಫಾರೆಸ್ಟನ್ನು ಬೊಮ್ಮಗೊಂಡನಕೆರೆಯ ಸರ್ವೆ ನಂ. 23ರ ವಾಯುವ್ಯ ಮೂಲೆಯಲ್ಲಿ ಪ್ರವೇಶಿಸಿ ಈಶಾನ್ಯ ದಿಕ್ಕಾಗಿ ಬೊಮ್ಮಗೊಂಡನಕೆರೆ, ಕಮರಾಕಾವಲ್ ಮತ್ತು ಅಡವಿ ಮಲ್ಲಾಪುರ ಗ್ರಾಮಗಳ ಮಧ್ಯೆ ಹೋಗಿ ಅಡವಿ ಮಲ್ಲಾಪುರದ ಸರ್ವೆ ನಂ. 5ರ ಈಶಾನ್ಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

(3) ವರ್ಷವೆಲ್ಲಾ ಜನಗಳ, ಜಾನುವಾರುಗಳ ಮತ್ತು ಭಂಡಿಗಳ ಉಪಯೋಗಕ್ಕೋಸ್ಕರ ನೇರ್ಲಹಳ್ಳಿಯಿಂದ ಬಳ್ಳಾರಿ ಡಿಸ್ಟ್ರಿಕ್ಟಿಗೆ ಸೇರಿದ ಹುಡೇಂಗಿಗೆ ಹೋಗುವ 12 ಅಡಿ ಅಗಲವುಳ್ಳ ಮತ್ತು 5 ಮೈಲ್ 2⅓ ಫರ್ಲಾಂಗ್ ದೂರವುಳ್ಳ ಭಂಡಿ ಜಾಡು. ಇದು ಫಾರೆಸ್ಟನ್ನು ನೇರ್ಲಹಳ್ಳಿಯ ಸರ್ವೆ ನಂ. 76ರ (ಆಗ್ನೇಯ ಮೂಲೆಯ ಬಾಂದಿನಿಂದ ಸುಮಾರು 1 ಫರ್ಲಾಂಗ್ ದೂರದಲ್ಲಿ) ಪೂರ್ವ ಅಂಚಿನಲ್ಲಿ ಪ್ರವೇಶಿಸಿ ನೈರುತ್ಯಾಭಿಮುಖವಾಗಿ, ನೇರ್ಲಹಳ್ಳಿ, ಮಾರೆಮ್ಮನಹಳ್ಳಿ ಮತ್ತು ಕಮರಾಕಾವಲ್ ಈ ಗ್ರಾಮಗಳ ಮಧ್ಯೆ ಹೋಗಿ ಮುತ್ತಗಾರಹಳ್ಳಿಯಿಂದ ಚಿಕ್ಕೋಬನಹಳ್ಳಿಗೆ ಹೋಗುವ ಭಂಡಿ ಜಾಡನ್ನು ಸೇರುತ್ತದೆ.

(4) ವರ್ಷವೆಲ್ಲಾ ಜನಗಳ, ದನಗಳ ಮತ್ತು ಭಂಡಿಗಳ ಉಪಯೋಗಕ್ಕೋಸ್ಕರ ಮುತ್ತಗಾರಹಳ್ಳಿಯಿಂದ ಚೌಳಕೆರೆಗೆ ಹೋಗುವ 12 ಅಡಿ ಅಗಲವೂ 1 ಮೈಲ್ 2½ ಫರ್ಲಾಂಗ್ ಉದ್ದವೂ ಉಳ್ಳ ಭಂಡಿಜಾಡು. ಇದು ಫಾರೆಸ್ಟನ್ನು ಸರ್ವೆ ನಂ. (20ರ ನೈರುತ್ಯ ಮೂಲೆಯ ಬಾಂದಿನಿಂದ ಸುಮಾರು 150 ಗಜಗಳ ದೂರದಲ್ಲಿ) ಪಶ್ಚಿಮ ಸರಹದ್ದಿನಲ್ಲಿ ಪ್ರವೇಶಿಸಿ, ಪಶ್ಚಿಮಾಭಿಮುಖವಾಗಿ ಮುತ್ತಗಾರಹಳ್ಳಿ ಸರ್ವೆ ನಂ. 25, 26 ವ 23 ಇವುಗಳ ಮಧ್ಯೆ ಹೋಗಿ ಚೌಳಕೆರೆ ಸರ್ವೆ ನಂ. 32ರ ಪೂರ್ವ ಅಂಚಿನಲ್ಲಿ ಅದೇ ಸರ್ವೆ ನಂಬರಿನ ಈಶಾನ್ಯ ಮೂಲೆಯ ಬಾಂದಿನಿಂದ ಸುಮಾರು (0 ಗಜಗಳ ದೂರದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(5) ವರ್ಷವೆಲ್ಲಾ ಜನಗಳ, ಜಾನುವಾರುಗಳ ಮತ್ತು ಭಂಡಿಗಳ ಉಪಯೋಗಕ್ಕೋಸ್ಕರ ಮುತ್ತಗಾರಹಳ್ಳಿಯಿಂದ ಮುಸ್ತಲಗುಮ್ಮಿಗೆ ಹೋಗುವ 12 ಅಡಿ ಅಗಲವೂ 1 ಮೈಲ್ 1⅓ ಫರ್ಲಾಂಗ್ ಉದ್ದವೂ ಉಳ್ಳ ಭಂಡಿ ಜಾಡು. ಇದು ಫಾರೆಸ್ಟನ್ನು ಮುತ್ತಗಾರಹಳ್ಳಿ ಸರ್ವೆ ನಂ. 32ರ ಪಶ್ಚಿಮ ಅಂಚಿನ ಮಧ್ಯಸ್ಥಳದಲ್ಲಿ ಪ್ರವೇಶಿಸಿ ಪಶ್ಚಿಮದಿಕ್ಕಾಗಿ ಅದೇ ಗ್ರಾಮದ ಸರ್ವೆ ನಂ. 26ರ ನಡುವೆ ಹೋಗಿ ಮುಸ್ತಲ ಗುಮ್ಮಿ ಸರ್ವೆ ನಂ. 17ರ ಆಗ್ನೇಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

(6) ವರ್ಷವೆಲ್ಲಾ ಜನಗಳ, ದನಗಳ ಮತ್ತು ಬಂಡಿಗಳ ಉಪಯೋಗಕ್ಕೋಸ್ಕರ ಮುತ್ತುಗಾರಹಳ್ಳಿಯಿಂದ ಚಿಕ್ಕೋಬನಹಳ್ಳಿಗೆ ಹೋಗುವ 12 ಅಡಿ ಅಗಲವೂ 1 ಮೈಲಿ 7½ ಫರ್ಲಾಂಗ್ ದೂರವೂ ಉಳ್ಳ ಬಂಡಿ ಜಾಡು. ಇದು ಫಾರೆಸ್ಟನ್ನು ಮುತ್ತುಗಾರಹಳ್ಳಿ ಸರ್ವೆ ನಂ. 29ರ ಪಶ್ಚಿಮ ಅಂಚಿನಲ್ಲಿ ಪ್ರವೇಶಿಸಿ, ವಾಯುವ್ಯ ದಿಕ್ಕಾಗಿ ಅದೇ ಗ್ರಾಮದ ಸರ್ವೆ ನಂ. 28ರ, ಕವಾಡಕಾವಲಿ ಸರ್ವೆ ನಂ. 1ರ ಮತ್ತು ಸೂರವ್ವನಹಳ್ಳಿ ಸರ್ವೆ ನಂ. 24ರ ಮಧ್ಯೆ ಹೋಗಿ ಹರವಿನದೊಡ್ಡಿ ಸರ್ವೆ ನಂ. 12ರ ಆಗ್ನೇಯ ಮೂಲೆಯ ಸಮೀಪದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(7) ವರ್ಷವೆಲ್ಲಾ ಜನಗಳ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕೋಸ್ಕರ ಮುತ್ತುಗಾರಹಳ್ಳಿಯಿಂದ ಸೂರವ್ವನ ಹಳ್ಳಿಗೆ ಹೋಗುವ 12 ಅಡಿ ಅಗಲವೂ 1 ಮೈಲಿ 4 ಫರ್ಲಾಂಗ್ ದೂರವೂ ಉಳ್ಳ ಬಂಡಿ ಜಾಡು. ಇದು ಫಾರೆಸ್ಟನ್ನು ಮುತ್ತುಗಾರಹಳ್ಳಿ ಸರ್ವೆ ನಂ. 31ರ ಪಶ್ಚಿಮ ಅಂಚಿನ ಮಧ್ಯಸ್ಥಳದಲ್ಲಿ ಪ್ರವೇಶಿಸಿ ವಾಯುವ್ಯದಿಕ್ಕಾಗಿ ಅದೇ ಗ್ರಾಮದ ಸರ್ವೆ ನಂ. 26 ವ 27ರ ಮಧ್ಯೆ ಸೂರವ್ವನ ಹಳ್ಳಿ ಸರ್ವೆ ನಂ. 26ರ ಉದ್ದಕ್ಕೂ ಹೋಗಿ ಸೂರವ್ವನ ಹಳ್ಳಿ ಸರ್ವೆ ನಂ. 27ರ ಈಶಾನ್ಯ ಮೂಲೆಯ ಸಮೀಪದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(8) ವರ್ಷವೆಲ್ಲಾ ಜನಗಳ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕೋಸ್ಕರ ನಾಯಕನಹಟ್ಟಿಯಿಂದ ಮೊಳಕಾಲ್ಮೂರಿಗೆ ಹೋಗುವ 12 ಅಡಿ ಅಗಲವೂ 6 ಫರ್ಲಾಂಗ್ ದೂರವೂ ಉಳ್ಳ ಬಂಡಿಜಾಡು. ಇದು ಫಾರೆಸ್ಟನ್ನು ಹಾವಿನ ದೊಡ್ಡಿ ಸರ್ವೆ ನಂ. 14ರ ವಾಯುವ್ಯ ಮೂಲೆಯಲ್ಲಿ ಪ್ರವೇಶಿಸಿ ಉತ್ತರ ದಿಕ್ಕಾಗಿ ಅದೇ ಗ್ರಾಮದ ಸರ್ವೆ ನಂ. 3ರ ಮತ್ತು ಚಿಕ್ಕೋಬನಹಳ್ಳಿ ಸರ್ವೆ ನಂ. 33ರ ಮಧ್ಯೆ ಹೋಗಿ ಆಚೈರ ಗ್ರಾಮದ ಸರ್ವೆ ನಂ. 18ರ ಆಗ್ನೇಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

(9) ಯಾವಾಗಲೂ ಜನಗಳ ಮತ್ತು ಜಾನುವಾರುಗಳ ಉಪಯೋಗಕ್ಕೋಸ್ಕರ, ನೀರು ಕುಡಿಸುವದಕ್ಕೆ ಹೋಗಲು ಮೇಲೆ ವಿವರಿಸಿದ 3ನೆ ಬಂಡಿ ಜಾಡಿನಿಂದ ಒಡೆಯುವ ನೇರ್ಲಹಳ್ಳಿ ಸರ್ವೆ ನಂ. 77ರಲ್ಲಿರತಕ್ಕ ನೇರ್ಲಹಳ್ಳಿಯಿಂದ ವಡಕ ಕುಂಟೆಗೆ ಹೋಗುವ 12 ಅಡಿ ಅಗಲವೂ 2 ಫರ್ಲಾಂಗ್ ಉದ್ದವೂ ಉಳ್ಳ ಕಾಲುಹಾದಿ.

(B) ಈ ಕೆಳಗೆ ಕಂಡ ಹಕ್ಕುಗಳು ಬ್ಲಾಕಿನಲ್ಲಿ ಕೊಡಲ್ಪಟ್ಟಿವೆ :—

(a) ಬಿಡಗಲಬಂಡೆ ಪೋಲೀಸ್ ಸ್ಟೇಷನ್, ಇತರ ಮನೆಗಳು ಮತ್ತು ಸಮೀಪದಲ್ಲಿ ಬಾದು ಬಾಯಿಯೂ ಉಳ್ಳ, ಅಡವಿ ಮಲ್ಲಾಪುರದ ಸರ್ವೆ ನಂ. 6ರಲ್ಲಿ ಒಂದೂವರೆ ಫರ್ಲಾಂಗ್ ಚದರ ಪ್ರದೇಶವು ಫಾರೆಸ್ಟ್ ಸರಹದ್ದಿನಿಂದ ಪ್ರತ್ಯೇಕಿಸಲ್ಪಟ್ಟು ಒಂದು ಆವರ್ಣವಾಗಿ ಗಣಿಸಲ್ಪಟ್ಟಿದೆ. ಈ ಆವರ್ಣವು ಬೆಂಗಳೂರಿಂದ ಬಳ್ಳಾರಿಗೆ ಹೋಗುವ ಬಾಟು ಮಾರ್ಗದ ಪಶ್ಚಿಮಕ್ಕಿದೆ.

ತಾರೀಖು 29ನೆ ಏಪ್ರಿಲ್ 1904.

1900ನೆ ಇಸವಿ XIನೆ ನಂಬರ್ ಮೈಸೂರು ಸೀಮೆಯ ಫಾರೆಸ್ಟು ರೆಗ್ಯುಲೇಷನ್ 18ನೆ ಸೆಕ್ಷನಿನ ವಿಧಿಗಳನುಸರಿಸಿ ಈ ಇಸ್ತಿಹಾರಿಗೆ ಜಂಟಿಸಿ ಇರುವ ಷೆಡ್ಯೂಲ್‌ನಲ್ಲಿ ಸಮೂದಿಸಿರುವ ಚಕ್ಕುಬಂದಿಯುಳ್ಳ ಪ್ರದೇಶವು 1904ನೆ ಏಪ್ರಿಲ್ ಗುರ್ರ್ಯಾ ಆಗಾಯತು ಈ ಇಸ್ತಿಹಾರಿನ ಅಡೀಲಿ ವಿವರಿಸಿ ಇರುವ ಹಕ್ಕುಗಳ ಚಲಾವಣೆಗೆ ಬಳಿಪಟ್ಟು ಸ್ಟೇಟ್ ಫಾರೆಸ್ಟು ಆಗಿರುತ್ತದೆ.

ಷೆಡ್ಯೂಲ್.

ಜಿಲ್ಲೆ.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಫಾರೆಸ್ಟಿನ ಹೆಸರು.	ಚಕ್ಕುಬಂದಿ.
ಚಿತ್ರದುರ್ಗ.	ಜಗಳೂರು.	15 ಚದರ ಮೈಲಿಗಳು.	ಅಣಬೂರು.	ಉತ್ತರಕ್ಕೆ— ಯೆರಮಲ್ಲನಹಳ್ಳಿಯ ಸರ್ವೆ ನಂ. 1ರ ನೈರುತ್ಯ ಮೂಲೆಯಿಂದ ಹೊರಟು, ಲೈನು ಅದೇ ಸರ್ವೆ ನಂಬರಿನ ದಕ್ಷಿಣ ಮತ್ತು ಪೂರ್ವ ಪಾರ್ಶ್ವಗಳ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ 6 ಫರ್ಲಾಂಗ ದೂರ, ಪೂರ್ವಕ್ಕೆ, ಬಳ್ಳಾರಿ ಜಿಲ್ಲಾ ಬ್ರಿಟಿಷ ಸರಹದ್ದಿನ ಅಂಚಿನ ಉದ್ದಕ್ಕೂ ಹೋಗುತ್ತದೆ. ಪೂರ್ವಕ್ಕೆ—ತರುವಾಯ, ದಕ್ಷಿಣಾಭಿಮುಖವಾಗಿ, ಅದೇ ಸರಹದ್ದಿನ ಉದ್ದಕ್ಕೂ ಹನುಮನಾಗತಿಹಳ್ಳಿಯ ಸರ್ವೆ ನಂ. 21ರ ವಾಯುವ್ಯ ಮೂಲೆಯ ವರಿಗೆ ಹೋಗುತ್ತದೆ. ಅನಂತರ ಅದೇ ಗ್ರಾಮದ ಸರ್ವೆ ನಂ. 21, 22, 20, 19 ವ 13ರ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಆಚೈರ ಸರ್ವೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ದೊಡ್ಡ ಬೊಮ್ಮನ ಹಳ್ಳಿಯ ಸರ್ವೆ ನಂ. 16ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಬಳಿಕ ಜೋಗಿ ಹಳ್ಳಿಯ ಸರ್ವೆ ನಂ. 27, 26, ವ 25ರ

306

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲೂಕು.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಚೆಕ್ಕುಬಂದಿ.
ಚಿತ್ರದುರ್ಗ.	ಜಗಳೂರು.	15 ಚದರಮೈಲಿಗಳು.	ಅಣಬೂರು.	ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ, ಆಖೈರ ನಂಬರಿನ ನೈರುತ್ಯ ಮೂಲೆಗೆ ಹೊಗುತ್ತದೆ. ಅನಂತರ, ಜೋಗಿಹಳ್ಳಿಯ ಸರ್ವೆ ನಂ. 25 ವ 24ರ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಎರಡನೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಆ ಮೇಲೆ ಅದೇ ಗ್ರಾಮದ ಅದೇ ಗ್ರಾಮದ ಸರ್ವೆ ನಂ. 25ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಹೋಗಿ ಬೇಟಗಾರನಹಳ್ಳಿಯ ಸರ್ವೆ ನಂ. 18ರ ವಾಯುವ್ಯ ಮೂಲೆಯನ್ನು ಸೇರುತ್ತದೆ. ತರುವಾಯ ಅದೇ ಗ್ರಾಮದ ಸರ್ವೆ ನಂ. 18 ವ 13ರ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಎರಡನೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ಆ ಮೇಲೆ ಅದೆ ಸರ್ವೆ ನಂಬರಿನ ಮತ್ತು ಸರ್ವೆ ನಂ. 11 ವ 10ರ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಅನಂತರ ಆಗ್ನೇಯ ದಿಕ್ಕಾಗಿ 3 ಫರ್ಲಾಂಗ ದೂರ ಸರ್ವೆ ನಂ. 5ರ ಮಧ್ಯೆ ಅಣಬೂರಿನ ಸರ್ವೆ ನಂ. 133ರ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ, ಅದೇ ನಂಬರಿನ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಈಶಾನ್ಯ ದಿಕ್ಕಾಗಿ 3 ಫರ್ಲಾಂಗ ದೂರ ಸರ್ವೆ ನಂ. 134ರ ಮಧ್ಯೆ, ಸರ್ವೆ ನಂ. 136ರ ನೈರುತ್ಯ ಮೂಲೆಗೆ ಹೊಗುತ್ತದೆ. ಅನಂತರ, ಅದೇ ಗ್ರಾಮದ ಸರ್ವೆ ನಂ. 136, 8, 15, 20, 21 ವ 120ರ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಬಳಿಕ, ಕಾನನ ಮಡುವಿನ (ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿ ಒಂದು ಗ್ರಾಮ) ಪಶ್ಚಿಮ ಪಾರ್ಶ್ವದ ಉದ್ದಕ್ಕೂ, ಮೂಗ್ಗಿ ಚಿಕ್ಕೇನಹಳ್ಳಿಯ ಸರ್ವೆ ನಂ. 1ರ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ಗ್ರಾಮದ ಸರ್ವೆ ನಂ. 1, 5, 6. ವ 7ರ ಪಶ್ಚಿಮಪಾರ್ಶ್ವಗಳ ಉದ್ದಕ್ಕೂ ಕಾನನಕಟ್ಟೆ ಸರ್ವೆ ನಂ. 23ರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ, ಅದೇ ನಂಬರಿನ ಉತ್ತರ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ನಂಬರಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಹೋಗಿ ಅದೇ ಗ್ರಾಮದ ಸರ್ವೆ ನಂ. 19ರ ಈಶಾನ್ಯ ಮೂಲೆಯನ್ನು ಸೇರುತ್ತದೆ. ತರುವಾಯ ಅದೇ ನಂಬರಿನ ಉತ್ತರ ಮತ್ತು ಪಶ್ಚಿಮ ಪಾರ್ಶ್ವಗಳ ಸುತ್ತಲೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 19ರ ವಾಯುವ್ಯ ಮತ್ತು ಪಶ್ಚಿಮ ಪಾರ್ಶ್ವಗಳ ಮತ್ತು ಕಾನನ ಕಟ್ಟೆಯ ಸರ್ವೆ ನಂ. 9ರ ಪಶ್ಚಿಮ ಮತ್ತು ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಭಂಗಾರಕ್ಕನ ಗುಡ್ಡದ ಸರ್ವೆ ನಂ. 10ರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ಗ್ರಾಮದ ಸರ್ವೆ ನಂ. 10 ವ 11ರ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಎರಡನೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ಅನಂತರ ದಕ್ಷಿಣಾಭಿಮುಖವಾಗಿ 3 ಫರ್ಲಾಂಗ ದೂರ ಸರ್ವೆ ನಂ. 12ರ ಮಧ್ಯೆ ಸರ್ವೆ ನಂ. 13ರ ಪಶ್ಚಿಮ ಮೂಲೆಗೆ ಹೋಗುತ್ತದೆ. ಆಮೇಲೆ ಈ ನಂಬರಿನ ಪಶ್ಚಿಮ ಪಾರ್ಶ್ವದ ಮತ್ತು ಭಂಗಾರಕ್ಕನ ಗುಡ್ಡದ ಸರ್ವೆ ನಂ. 3ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಸಿದ್ಧಮ್ಮನಹಳ್ಳಿಯ ಸರ್ವೆ ನಂ. 37ರ ಈಶಾನ್ಯ ಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ—ತರುವಾಯ ಸಿದ್ದಮ್ಮನ ಹಳ್ಳಿಯ ಸರ್ವೆ ನಂ. 37, 39, ವ 40ರ ಉತ್ತರ ಪಾರ್ಶ್ವಗಳ ಉದ್ದಕ್ಕೂ ಅದೇ ಗ್ರಾಮದ ಸರ್ವೆ ನಂ. 3ರ ಈಶಾನ್ಯ ಮೂಲೆಗೆ ಹೋಗುತ್ತದೆ. ಅನಂತರ ವಾಯುವ್ಯದಿಕ್ಕಾಗಿ, 4 ಫರ್ಲಾಂಗ ದೂರ ಭಂಗಾರಕ್ಕನ ಗುಡ್ಡದ ಸರ್ವೆ ನಂ. 5ರ ಮಧ್ಯೆ ಭರ್ಮಸಮುದ್ರದ ಸರ್ವೆ

ಷೆಡ್ಯೂಲ್.

ಜಿಲ್ಲೆ.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಫಾರೆಸ್ಟಿನ ಹೆಸರು.	ಚಕ್ಕುಬಂದಿ.
ಚಿತ್ರದುರ್ಗ.	ಜಗಳೂರು.	15 ಚದರ ಮೈಲಿಗಳು.	ಅಣಬೂರು.	ನಂ. 124ರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ನಂಬರಿನ ಪೂರ್ವ ಮತ್ತು ಉತ್ತರ ಪಾರ್ಶ್ವಗಳ ಮತ್ತು ಅದೇ ಗ್ರಾಮದ ಸರ್ವೆ ನಂ. 123ರ ಉತ್ತರ ಪಾರ್ಶ್ವದ ಉದ್ದಕ್ಕೂ ತಿಮ್ಮಲಾಪುರದ ಸರ್ವೆ ನಂ. 4ರ ಈಶಾನ್ಯ ಮೂಲೆಗೆ ಹೋಗುತ್ತದೆ. ಪಶ್ಚಿಮಕ್ಕೆ—ತರುವಾಯ, ವಾಯವ್ಯ ದಿಕ್ಕಾಗಿ, $2\frac{1}{2}$ ಫರ್ಲಾಂಗ್ ದೂರ ತಿಮ್ಮಲಾಪುರದ ಸರ್ವೆ ನಂ. 25ರ ಮಧ್ಯೆ ಸರ್ವೆ ನಂ. 24ರ ಈಶಾನ್ಯ ಮೂಲೆಗೆ ಹೋಗುತ್ತದೆ. ಪುನಃ ವಾಯವ್ಯಾಭಿಮುಖವಾಗಿ, $2\frac{1}{2}$ ಫರ್ಲಾಂಗ್ ದೂರ ಸರ್ವೆ ನಂ. 23ರ ಮಧ್ಯೆ ಸರ್ವೆ ನಂ. 29ರ ಆಗ್ನೇಯ ಮೂಲೆಗೆ ಹೋಗುತ್ತದೆ. ಅನಂತರ, ಅದೇ ನಂಬರಿನ ಪೂರ್ವ ಮತ್ತು ಉತ್ತರ ಪಾರ್ಶ್ವಗಳ ಉದ್ದಕ್ಕೂ ಗೋಗುಡ್ಡದ ಸರ್ವೆ ನಂ. 23ರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 23, 18, ವ 17ರ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ನಂಬರಿನ ಉತ್ತರ ಪಾರ್ಶ್ವದ ಉದ್ದಕ್ಕೂ, ಸರ್ವೆ ನಂ. 10ರ ಈಶಾನ್ಯ ಮೂಲೆಗೆ ಹೋಗುತ್ತದೆ. ಅನಂತರ, ವಾಯವ್ಯಾಭಿಮುಖವಾಗಿ, 3 ಫರ್ಲಾಂಗ್ ದೂರ, ಸರ್ವೆ ನಂ. 11ರ ಮಧ್ಯೆ, ಕೇಸವನಹಳ್ಳಿಯ ಸರ್ವೆ ನಂ. 57ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ನಂಬರಿನ ಈಶಾನ್ಯ ಪಾರ್ಶ್ವದ ಉದ್ದಕೂ ಸರ್ವೆ ನಂ. 55ರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ, ಅದರ ಪೂರ್ವ ಪಾರ್ಶ್ವದ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ಅನಂತರ ಪಶ್ಚಿಮಾಭಿಮುಖವಾಗಿ, 1 ಫರ್ಲಾಂಗ್ ದೂರ ಸರ್ವೆ ನಂ. 53ರ ಮಧ್ಯೆ, ಸರ್ವೆ ನಂ. 54ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 48ರ ಪೂರ್ವ ಪಾರ್ಶ್ವದ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ, ವಾಯುವ್ಯ ದಿಕ್ಕಾಗಿ, $5\frac{1}{2}$ ಫರ್ಲಾಂಗ್ ದೂರ, ಸರ್ವೆ ನಂ. 49ರ ಮಧ್ಯೆ ಸರ್ವೆ ನಂ. 42ರ ಈಶಾನ್ಯ ಮೂಲೆಗೆ ಹೋಗುತ್ತದೆ. ಅನಂತರ ಅದೇ ನಂಬರಿನ ಉತ್ತರ ಪಾರ್ಶ್ವದ ಉದ್ದಕ್ಕೂ, ಕೇಸವನಹಳ್ಳಿಯ ಸರ್ವೆ ನಂ. 41ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಲಕ್ಕೇನಹಳ್ಳಿಯ ಸರ್ವೆ ನಂ. 11ರ ಪೂರ್ವ ಪಾರ್ಶ್ವದ ಉದ್ದಕ್ಕೂ, ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ವಾಯವ್ಯಾಭಿಮುಖವಾಗಿ, 3 ಫರ್ಲಾಂಗ್ ದೂರ ಸರ್ವೆ ನಂ. 10ರ ಮಧ್ಯೆ, ಸರ್ವೆ ನಂ. 9ರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಈಶಾನ್ಯ ದಿಕ್ಕಾಗಿ $1\frac{1}{2}$ ಫರ್ಲಾಂಗ್ ದೂರ ಸರ್ವೆ ನಂ. 8ರ ಮಧ್ಯೆ, ಸರ್ವೆ ನಂ. 6ರ ಆಗ್ನೇಯ ಮೂಲೆಗೆ ಹೋಗುತ್ತದೆ. ಅನಂತರ ಅದೇ ನಂಬರಿನ ಪೂರ್ವಪಾರ್ಶ್ವದ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 6, 17, 16, ವ 15 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ, ಆಖೈರ ನಂಬರಿನ ವಾಯವ್ಯ ಮೂಲೆಗೆ ಹೋಗುತ್ತದೆ. ಅನಂತರ ಗುಡ್ಡೋಬನಹಳ್ಳಿಯ ಸರ್ವೆ ನಂ. 3ರ ಪೂರ್ವ ಮತ್ತು ಉತ್ತರ ಪಾರ್ಶ್ವಗಳ ಉದ್ದಕ್ಕೂ, ಅದರ ವಾಯವ್ಯ ಮೂಲೆಗೆ ಹೋಗುತ್ತದೆ. ಇಲ್ಲಿ ಸರ್ವೆ ನಂ. 2ನ್ನು ಅದರ ಪೂರ್ವಪಾರ್ಶ್ವದ ಮಧ್ಯಸ್ಥಳದಲ್ಲಿ ಸೇರುತ್ತದೆ. ಆಮೇಲೆ ಅದೇ ನಂಬರಿನ ಪೂರ್ವ ಮತ್ತು ಉತ್ತರ ಪಾರ್ಶ್ವಗಳ ಉದ್ದಕ್ಕೂ, ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ಬಳಿಕ, ಸರ್ವೆ ನಂ. 6ರ ಈಶಾನ್ಯಪಾರ್ಶ್ವದ, ಮತ್ತು ಸರ್ವೆ ನಂ. 10ರ ಪೂರ್ವ ಪಾರ್ಶ್ವದ ಉದ್ದಕ್ಕೂ ಎರಡನೆ ನಂಬರಿನ ಈಶಾನ್ಯ ಮೂಲೆಗೆ

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಫಾರೆಸ್ಟಿನ ಹೆಸರು.	ಚಕ್ಕುಬಂದಿ.
ಚಿತ್ರದುರ್ಗ.	ಜಗಳೂರು.	15 ಚದರ ಮೈಲಿಗಳು.	ಅಣಬೂರು.	ಹೋಗುತ್ತದೆ. ತರುವಾಯ, ಅದೇ ನಂಬರಿನ ಉತ್ತರ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ, ಗುಡ್ಡೋಬನಹಳ್ಳಿಯ ಸರ್ವೆ ನಂ. 11 ಮತ್ತು ಕ್ಯಾಸೇನಹಳ್ಳಿಯ ಸರ್ವೆ ನಂ. 59, ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 58ರ ನೈರುತ್ಯ ಮೂಲೆಗೆ ಹೋಗುತ್ತದೆ. ಅನಂತರ ಅದೇ ನಂಬರಿನ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 58 ವ 31ರ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 32ರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ಸರ್ವೆ ನಂಬರಿನ ದಕ್ಷಿಣ ಮತ್ತು ಪೂರ್ವ ಪಾರ್ಶ್ವಗಳ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ, ಸರ್ವೆ ನಂ. 30ರ ದಕ್ಷಿಣ ಮತ್ತು ಪೂರ್ವ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 37ರ ನೈರುತ್ಯ ಮೂಲೆಗೆ ಹೋಗುತ್ತದೆ. ಬಳಿಕ ಸರ್ವೆ ನಂ. 37 ವ 36ರ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಎರಡನೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 36 ವ 49ರ ಪೂರ್ವಪಾರ್ಶ್ವಗಳ ಉದ್ದಕ್ಕೂ ಎರಡನೆ ನಂಬರಿನ ಈಶಾನ್ಯಮೂಲೆಗೆ ಹೋಗುತ್ತದೆ. ಅನಂತರ, ಸರ್ವೆ ನಂ. 46ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಕ್ಯಾಸೇನಹಳ್ಳಿಯ ಸರ್ವೆ ನಂ. 46 ವ 45, ಮತ್ತು ಮರಿಕಟ್ಟೆಯ ಸರ್ವೆ ನಂ. 11, 10 ವ 9 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಹೊರಟ ಸ್ಥಳಕ್ಕೆ ಹೋಗುತ್ತದೆ.

ಷರಾ.

(A) ಹಾದಿಯ ಇಗರಮೀ ಕಂಡ ಹಕ್ಕುಗಳು ಬ್ಲಾಕಿನಲ್ಲಿ ಕೊಡಲ್ಪಟ್ಟಿರುತ್ತವೆ :—

(1) ವರ್ಷವೆಲ್ಲಾ ಜನಗಳ, ದನಗಳ ಮತ್ತು ಭಂಡಿಗಳ ಉಪಯೋಗಕ್ಕೋಸ್ಕರ, ತಿಮ್ಲಾಪುರದಿಂದ ಅಣಬೂರಿಗೆ ಹೋಗುವ, 12 ಅಡಿ ಅಗಲವೂ, 2 ಮೈಲ್ 3 ಫರ್ಲಾಂಗ್ ದೂರವೂ ಉಳ್ಳ ಭಂಡಿಜಾಡು. ಇದು ಫಾರೆಸ್ಟನ್ನು ತಿಮ್ಲಾಪುರದ ಸರ್ವೆ ನಂ. 29ರ ಉತ್ತರಪಾರ್ಶ್ವದ ಮಧ್ಯಸ್ಥಳದಲ್ಲಿ ಪ್ರವೇಶಿಸಿ, ಉತ್ತರಾಭಿಮುಖವಾಗಿ ಅದೇ ಗ್ರಾಮದ ಸರ್ವೆ ನಂ. 30ರ ಮಧ್ಯೆ ಹೋಗಿ, ಗೋಗುದ್ದುವ ಸರ್ವೆ ನಂ. 18ರ ದಕ್ಷಿಣ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ. ಈ ಜಾಡು, ಪುನಃ, ಫಾರೆಸ್ಟನ್ನು ಸರ್ವೆ ನಂ. 17ರ ಉತ್ತರ ಪಾರ್ಶ್ವದ ಮಧ್ಯಸ್ಥಳದಲ್ಲಿ ಪ್ರವೇಶಿಸಿ, ಈಶಾನ್ಯಾಭಿಮುಖವಾಗಿ, ಗೋಗುದ್ದುವ ಸರ್ವೆ ನಂ. 16, 15 ವ 13 ಮತ್ತು ಅಣಬೂರ್ ಸರ್ವೆ ನಂ. 131 ವ 132, ಇವುಗಳ ಮಧ್ಯೆ ಹೋಗಿ, ಅಣಬೂರಿನ ಸರ್ವೆ ನಂ. 133ರ ದಕ್ಷಿಣ ಪಾರ್ಶ್ವದ ಮಧ್ಯಸ್ಥಳದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(2) ವರ್ಷವೆಲ್ಲಾ ಜನಗಳ, ಜಾನುವಾರುಗಳ, ಮತ್ತು ಭಂಡಿಗಳ ಉಪಯೋಗಕ್ಕೋಸ್ಕರ ತಮಟೆಹಳ್ಳಿಯಿಂದ ಹನುಮನಾಗತಿ ಹಳ್ಳಿಗೆ ಹೋಗುವ 12 ಅಡಿ ಅಗಲವೂ, 1 ಮೈಲ 7 ಫರ್ಲಾಂಗ್ ಉದ್ದವೂ ವುಳ್ಳ ಭಂಡಿಜಾಡು. ಇದು ಫಾರೆಸ್ಟನ್ನು ಲಕ್ಕೇನಹಳ್ಳಿಯ ಸರ್ವೆ ನಂ. 17ರ ಈಶಾನ್ಯ ಮೂಲೆಯಲ್ಲಿ ಪ್ರವೇಶಿಸಿ, ಈಶಾನ್ಯ ದಿಕ್ಕಾಗಿ ಲಕ್ಕೇನಹಳ್ಳಿಯ ಸರ್ವೆ ನಂ. 18, 5, 4, ವ 1 ಮತ್ತು ಕ್ಯಾಸೇನಹಳ್ಳಿಯ ಸರ್ವೆ ನಂ. 55 ವ 54 ಇವುಗಳ ಮಧ್ಯೆ ಹೋಗಿ, ಹನುಮನಾಗತಿ ಹಳ್ಳಿ ಸರ್ವೆ ನಂ. 13ರ ನೈರುತ್ಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

(3) ವರ್ಷವೆಲ್ಲಾ ಜನಗಳ ಮತ್ತು ದನಗಳ ಉಪಯೋಗಕ್ಕೋಸ್ಕರ ತಮಟೆ ಹಳ್ಳಿಯಿಂದ ಜೋಗಿಹಳ್ಳಿಗೆ ಹೋಗುವ, 6 ಅಡಿ ಅಗಲವೂ 6½ ಫರ್ಲಾಂಗ್ ದೂರವೂ ವುಳ್ಳ ಕಾಲುಹಾದಿ. ಇದು ಫಾರೆಸ್ಟನ್ನು ಲಕ್ಕೇನಹಳ್ಳಿಯ ಸರ್ವೆ ನಂ. 6ರ ಪೂರ್ವ ಪಾರ್ಶ್ವದ ಮಧ್ಯಸ್ಥಳದಲ್ಲಿ ಪ್ರವೇಶಿಸಿ; ಈಶಾನ್ಯಾಭಿಮುಖವಾಗಿ, ಲಕ್ಕೇನಹಳ್ಳಿಯ ಸರ್ವೆ ನಂ. 7 ಮತ್ತು ಬ್ಯಾಟಗಾರನ ಹಳ್ಳಿಯ ಸರ್ವೆ ನಂ. 17 ಇವುಗಳ ಮಧ್ಯೆ ಹೋಗಿ, ಜೋಗಿಹಳ್ಳಿಯ ಸರ್ವೆ ನಂ. 23ರ ನೈರುತ್ಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

(4) ವರ್ಷವೆಲ್ಲಾ ಜನಗಳ, ದನಗಳ ಮತ್ತು ಭಂಡಿಗಳ ಉಪಯೋಗಕ್ಕೋಸ್ಕರ ತಮಟೆಹಳ್ಳಿಯಿಂದ ಕ್ಯಾಸೇನಹಳ್ಳಿಗೆ ಹೋಗುವ 12 ಅಡಿ ಅಗಲವೂ 1½ ಮೈಲ್ ದೂರವೂ ವುಳ್ಳ ಭಂಡಿಜಾಡು. ಇದು ಫಾರೆಸ್ಟನ್ನು ಗುಡ್ಡೋಬನಹಳ್ಳಿಯ ಸರ್ವೆ

ನಂ. 3ರ ಉತ್ತರ ಪಾರ್ಶ್ವದ ಮಧ್ಯಸ್ಥಳದಲ್ಲಿ ಪ್ರವೇಶಿಸಿ, ವಾಯುವ್ಯಾಭಿಮುಖವಾಗಿ, ಗುಡ್ಡೋಬನಹಳ್ಳಿ ಸರ್ವೆ ನಂ. 1 ವ 12 ಮತ್ತು ಕ್ಯಾಸೇನಹಳ್ಳಿಯ ಸರ್ವೆ ನಂ. 57 ಇವುಗಳ ಮಧ್ಯೆ ಹೋಗಿ, ಕ್ಯಾಸೇನಹಳ್ಳಿಯ ಸರ್ವೆ ನಂ. 58ರ ಆಗ್ನೇಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

(5) ವರ್ಷವೆಲ್ಲಾ ಜನಗಳ, ಜಾನುವಾರುಗಳ ಮತ್ತು ಭಂಡಿಗಳ ಉಪಯೋಗಕ್ಕೋಸ್ಕರ ಕ್ಯಾಸೇನಹಳ್ಳಿಯಿಂದ ಜೋಗೀಹಳ್ಳಿಗೆ ಹೋಗುವ, 12 ಅಡಿ ಅಗಲವೂ, 2 ಮೈಲ್ 1 ಫರ್ಲಾಂಗ್ ದೂರವೂ ವುಳ್ಳ ಭಂಡಿಜಾಡು. ಇದು ಫಾರೆಸ್ಟನ್ನು ಕ್ಯಾಸೇನಹಳ್ಳಿಯ ಸರ್ವೆ ನಂ. 37ರ ನೈರುತ್ಯ ಮೂಲೆಯಲ್ಲಿ ಪ್ರವೇಶಿಸಿ, ಆಗ್ನೇಯ ದಿಕ್ಕಾಗಿ ಕ್ಯಾಸೇನಹಳ್ಳಿಯ ಸರ್ವೆ ನಂ. 35, 34 ವ 55ರ ಮಧ್ಯೆ ಹೋಗಿ ಜೋಗಿಹಳ್ಳಿಯ ಸರ್ವೆ ನಂ. 27ರ ವಾಯುವ್ಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

(6) ವರ್ಷವೆಲ್ಲಾ ಜನಗಳ, ದನಗಳ, ಮತ್ತು ಭಂಡಿಗಳ ಉಪಯೋಗಕ್ಕೋಸ್ಕರ ಕ್ಯಾಸೇನಹಳ್ಳಿಯಿಂದ ಹನುಮನಾಗತಿಹಳ್ಳಿಗೆ ಹೋಗುವ 12 ಅಡಿ ಅಗಲವೂ 1 ಮೈಲ್ 3 ಫರ್ಲಾಂಗ್ ಉದ್ದವೂ ವುಳ್ಳ ಭಂಡಿಜಾಡು. ಇದು ಫಾರೆಸ್ಟನ್ನು ಕ್ಯಾಸೇನಹಳ್ಳಿಯ ಸರ್ವೆ ನಂ. 49ರ ಪೂರ್ವ ಪಾರ್ಶ್ವದ ಮಧ್ಯಸ್ಥಳದಲ್ಲಿ ಪ್ರವೇಶಿಸಿ, ಪೂರ್ವಾಭಿಮುಖವಾಗಿ, ಕ್ಯಾಸೇನ ಹಳ್ಳಿಯ ಸರ್ವೆ ನಂ. 50ರ ಮಧ್ಯೆ, ಅನಂತರ ಪೂರ್ವದಿಕ್ಕಾಗಿ ಮತ್ತು ಆಗ್ನೇಯಾಭಿಮುಖವಾಗಿ ಜಯರಾಮನ ಹಳ್ಳಿಯ ಸರ್ವೆ ನಂ. 10, 6, ವ 8ರ ಮಧ್ಯೆ ಹೋಗಿ, ಹನುಮನಾಗತಿಹಳ್ಳಿ ಸರ್ವೆ ನಂ. 20ರ ನೈರುತ್ಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

(7) ವರ್ಷವೆಲ್ಲಾ ಜನಗಳ, ದನಗಳ, ಮತ್ತು ಭಂಡಿ ಜಾಡುಗಳ ಉಪಯೋಗಕ್ಕೋಸ್ಕರ ಮರಿಕಟ್ಟೆಯಿಂದ ದೊಡ್ಡ ಬೂವ್ಮೇನ ಹಳ್ಳಿಗೆ ಹೋಗುವ, 12 ಅಡಿ ಅಗಲವೂ 1¼ ಮೈಲ್ ದೂರವೂ ವುಳ್ಳ ಭಂಡಿಜಾಡು. ಇದು ಫಾರೆಸ್ಟನ್ನು ಮರಿಕಟ್ಟೆಯ ಸರ್ವೆ ನಂ. 11ರ ಪೂರ್ವ ಪಾರ್ಶ್ವದ ಮಧ್ಯಸ್ಥಳದಲ್ಲಿ ಪ್ರವೇಶಿಸಿ, ಆಗ್ನೇಯಾಭಿಮುಖವಾಗಿ, ಯರಮಲ್ಲನಹಳ್ಳಿ ಸರ್ವೆ ನಂ. 4 ಮತ್ತು ಜಯರಾಮನ ಹಳ್ಳಿ ಸರ್ವೆ ನಂ. 1, 2, 3, 6 ವ 8 ಇವುಗಳ ಮಧ್ಯೆ ಹೋಗಿ, ಹನುಮನಾಗತಿ ಹಳ್ಳಿಯ ಸರ್ವೆ ನಂ. 20ರ ನೈರುತ್ಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

(8) ವರ್ಷವೆಲ್ಲಾ ಜನಗಳ, ದನಗಳ ಮತ್ತು ಭಂಡಿಗಳ ಉಪಯೋಗಕ್ಕೋಸ್ಕರ ಕಾನನಕಟ್ಟೆಯಿಂದ ಕಣಕುಪ್ಪಕ್ಕೆ ಹೋಗುವ 12 ಅಡಿ ಅಗಲವೂ 2 ಮೈಲ್ ಉದ್ದವೂ ವುಳ್ಳ ಭಂಡಿಜಾಡು. ಇದು ಫಾರೆಸ್ಟನ್ನು ಕಾನನಕಟ್ಟೆಯ ಸರ್ವೆ ನಂ. 9ರ ವಾಯುವ್ಯ ಮೂಲೆಯಲ್ಲಿ ಪ್ರವೇಶಿಸಿ, ಪಶ್ಚಿಮಾಭಿಮುಖವಾಗಿ ಕಾನನಕಟ್ಟೆಯ ಸರ್ವೆ ನಂ. 11 ವ 10 ; ಬಡಬಡಬನಹಳ್ಳಿಯ ಸರ್ವೆ ನಂ. 15, 17, 10, 11, 8, 13, ವ 14 ; ಮತ್ತು ತಿಮ್ಮಾಪುರದ ಸರ್ವೆ ನಂ. 32 ಇವುಗಳ ಮಧ್ಯೆ ಹೋಗಿ, ಗೋಗುಡ್ಡದ ಸರ್ವೆ ನಂ. 18ರ ಪೂರ್ವ ಪಾರ್ಶ್ವದ ಮಧ್ಯಸ್ಥಳದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(9) ಎಲ್ಲಾ ಜನಗಳ ಉಪಯೋಗಕ್ಕೋಸ್ಕರ, ಈ ಕೆಳಗೆ ನಮೂದಿರುವ ದೇವಸ್ಥಾನಗಳು, ಪುಣ್ಯತೀರ್ಥ ಕೊಳಗಳು ಮತ್ತು ಕಟ್ಟೆಗಳಿಗೆ ಈ ಕೆಳಗೆ ಹೇಳಿರುವ ಮೇರೆಗೆ ದಾರಿಗಳು ಬಿಡಲ್ಪಟ್ಟಿವೆ.

ನಂಬರು	ದೇವಸ್ಥಾನ ಮೊದಲಾದವುಗಳ ಹೆಸರು.	ಇರತಕ್ಕ ಸ್ಥಳ.	ದೇವಾಲಯ ಮುಂತಾದವುಗಳಿಗೆ ದಾರಿ.
1	ಚಾಮುಂಡಮ್ಮನ ಗುಡಿ .	ಬಡಬಡಬನಹಳ್ಳಿ ಸರ್ವೆ ನಂ. 2ರ ಉತ್ತರ ಮೂಲೆಯಲ್ಲಿ.	ವರ್ಷವೆಲ್ಲಾ ಜನಗಳ ಮತ್ತು ದನಗಳ ಉಪಯೋಗಕ್ಕೋಸ್ಕರ 6 ಅಡಿ ಅಗಲವೂ 6 ಅಡಿ ಉದ್ದವೂ ವುಳ್ಳ ಕಾಲುಹಾದಿ. ಇದು ಫಾರೆಸ್ಟನ್ನು ಭರ್ಮಸಮುದ್ರದ ಸರ್ವೆ ನಂ. 123ರ ವಾಯುವ್ಯ ಮೂಲೆಯಲ್ಲಿ ಪ್ರವೇಶಿಸಿ ಬಡಬಡಬನಹಳ್ಳಿ ಸರ್ವೆ ನಂ. 5, 6, 7, 8, 9, ವ 2ರ ಮಧ್ಯೆ ಹೋಗುತ್ತದೆ.
2	ದೇವಕನ್ನಿಕೆ ಕೊಳ	ಭಂಗಾರಕ್ಕನ ಗುಡ್ಡದ ಸರ್ವೆ ನಂ. 4ರ ಉತ್ತರ ಮೂಲೆಯಿಂದ ಸುಮಾರು 2 ಫರ್ಲಾಂಗ್ ದೂರದಲ್ಲಿ.	ಯಾವಾಗಲೂ ಜನಗಳ ಮತ್ತು ಜಾನುವಾರುಗಳ ಉಪಯೋಗಕ್ಕೋಸ್ಕರ 6 ಅಡಿ ಅಗಲವೂ 3 ಫರ್ಲಾಂಗ್ ಉದ್ದವೂ ವುಳ್ಳ ಕಾಲುಹಾದಿ. ಇದು ಫಾರೆಸ್ಟನ್ನು ಭಂಗಾರಕ್ಕನ ಗುಡ್ಡದ ಸರ್ವೆ ನಂ. 12ರ ದಕ್ಷಿಣ ಮೂಲೆಯಿಂದ, ಒಂದು ಫರ್ಲಾಂಗ್ ದೂರದಲ್ಲಿ ಪ್ರವೇಶಿಸಿ, ಆ ಗ್ರಾಮದ ಸರ್ವೆ ನಂ. 12 ವ 4ರ ಮಧ್ಯೆ ಹೋಗುತ್ತದೆ.
3	ಕಟ್ಟೆ ..	ಅಣಬೂರಿನ ಸರ್ವೆ ನಂ. 132ರ ಪಶ್ಚಿಮ ಪಾರ್ಶ್ವದ ಮಧ್ಯಸ್ಥಳದಲ್ಲಿ.	ತಿಮ್ಮಾಪುರದಿಂದ ಅಣಬೂರಿಗೆ ಹೋಗುವ ಭಂಡಿಜಾಡು.
4	ಚಿಲುಮೆ ..	ಜಯರಾಮನ ಹಳ್ಳಿಯ ಸರ್ವೆ ನಂ. 4ರ ಮಧ್ಯಸ್ಥಳದಲ್ಲಿ.	ಜನಗಳ ಮತ್ತು ಜಾನುವಾರುಗಳ ಉಪಯೋಗಕ್ಕೋಸ್ಕರ, 12 ಅಡಿ ಅಗಲವೂ, 1½ ಫರ್ಲಾಂಗ್ ಉದ್ದವೂ ವುಳ್ಳ ದನಗಳ ಜಾಡು. ಇದು ಮರಿಕಟ್ಟೆಯಿಂದ ಹನುಮನಾಗತಿಹಳ್ಳಿಗೆ ಹೋಗುವ ಭಂಡಿಜಾಡಿನಿಂದ ಒಡೆಯುತ್ತದೆ.

(13) ಈ ಕೆಳಗೆ ಕಂಡ ಹಕ್ಕುಗಳು ಬ್ಲಾಕಿನಲ್ಲಿ ಕೊಡಲ್ಪಟ್ಟಿವೆ.

(1) ಮೇಲೆ ವಿವರಿಸಲ್ಪಟ್ಟ (A. 9ರಲ್ಲಿ) ಚೌಡಮ್ಮನ ಗುಡಿಗೂ ಮತ್ತು ದೇವಕನ್ನಿಕೆ ಕೊಳಕ್ಕೂ ಹಕ್ಕು ಕೊಡಲ್ಪಟ್ಟಿದೆ. ಈ ದೇವಸ್ಥಾನ ಮತ್ತು ಕೊಳಗಳು, ಅವುಗಳ ಪ್ರತಿಯೊಂದರ ಸುತ್ತಲೂ 5 ಎಕರೆ ಪ್ರದೇಶ ಸಹಿತ, ಫಾರೆಸ್ಟ್ ಸರಹದ್ದಿನಿಂದ ಪ್ರತ್ಯೇಕಿಸಲ್ಪಟ್ಟು ಆವರ್ಣಗಳಾಗೆಣಿಸಲ್ಪಟ್ಟಿವೆ.

(2) ಈ ಕೆಳಗೆ ನಮೂದಿಸಿರುವ ಜಮೀನುಗಳ ಪಟ್ಟಿ ಹಕ್ಕುಗಳು ಕೊಡಲ್ಪಟ್ಟಿವೆ. ಇವುಗಳು ಫಾರೆಸ್ಟ್ ಸರಹದ್ದಿನಿಂದ ಪ್ರತ್ಯೇಕಿಸಲ್ಪಟ್ಟು ಆವರ್ಣಗಳಾಗೆಣಿಸಲ್ಪಟ್ಟಿವೆ.

ಗ್ರಾಮ.	ಸರ್ವೆ ನಂ.	ವಿಸ್ತೀರ್ಣ.	ಷರಾ.
		ಎ. ಗುಂ.	
ಯೆರೆಮಲ್ಲನ ಹಳ್ಳಿ ...	5	24—38	ಯೆರೆಮಲ್ಲನ ಹಳ್ಳಿಯ ಸರ್ವೆ ನಂ. 5ರ ನೈರುತ್ಯ ಮೂಲೆಯಲ್ಲಿ, ಮರಿಕಟ್ಟೆಯಿಂದ ಹನುಮನಾಗತಿ ಹಳ್ಳಿಗೆ ಹೋಗುವ ಬಂಡಿಜಾಡಿನಲ್ಲಿ, ಜನಗಳು ಮತ್ತು ವ್ಯವಸಾಯದಲ್ಲಿ ಉಪಯೋಗಿಸುವ ದನಗಳು ತಿರುಗಾಡಬಹುದು.
	6	27— 0	
	7	33—16	
	9	30— 0	
	10	23— 0	

ಕೆ. ಶಾಮಯ್ಯಂಗಾರ್,
ಫರ್ ಡೆಪ್ಯುಟಿ ಕಮಿಷನರ್, ಚಿತ್ರದುರ್ಗದ ಡಿಸ್ಟ್ರಿಕ್ಟ್.

ಹಾಸನ ಡಿಸ್ಟ್ರಿಕ್ಟು.

ನೋಟಿಫಿಕೇಷನ್.

ತಾರೀಖು 30ನೆ ಏಪ್ರಲ್ 1904ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಹಾಸನದ ಡಿಸ್ಟ್ರಿಕ್ಟ್ ಮಂಜರಾಬಾದ್ ತಾಲ್ಲೂಕಿನಲ್ಲಿ ಇರುವ ಮೂರನೆ ಹಳ್ಳಿ ಟೋಲ್‌ಗೇಟಿನಲ್ಲಿ ಸರ್ 1904ನೆ ಇಸವಿ ಜುಲೈ ಮಾಹೆ 1ನೆ ಮರ್ಸ್ತಿಂ ಲಾಗಾಯತು ಸರ್ 1905ನೆ ಜೂನ್ 30ರ ವರೆಗಿನ 12 ತಿಂಗಳು ಕಾಲದಲ್ಲಿ ಸುಂಕ ವಸೂಲ್ಮಾಡುವ ಸ್ವಾತಂತ್ರ್ಯವು ಸರ್ 1904ನೆ ಇಸವಿ ಜೂನ್ ಮಾಹೆ ತಾರೀಖು 6ನೆ ಸೋಮವಾರ ಹಗಲು 12 ಘಂಟೆಗೆ ಸಕಲೇಶಪುರದ ಮೊಕ್ಕಾಂನಲ್ಲಿ ತಾಲ್ಲೂಕ್ ಕಚೇರಿಬಳಿ ಡೆಪ್ಯುಟಿ ಕಮಿಷನರವರ ಅಥವಾ ಅವರಿಂದ ಅಧಿಕಾರ ಹೊಂದಿದ ಆಫೀಸರವರ ರೂಬರೂಬು ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಭಿಡ ಸವಾಲನ್ನೆ ಆಗಲಿ ಅಥವಾ ಯಾವ ಸವಾಲನ್ನೇ ಆಗಲಿ ಕಾರಣವನ್ನು ಹೇಳದೇನೆ ಅಂಗೀಕರಿಸುವ ಅಧಿಕಾರವನ್ನು ಹಾಸನದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರು ಉಳಿಸಿಕೊಂಡಿರುತ್ತಾರೆ. ಮತ್ತು ಡೆಪ್ಯುಟಿ ಕಮಿಷನರವರಿಂದ ಮಂಜೂರಾದ ಹೊರ್ತು ಹರಾಜು ಖಾಯಂ ಆದ ಹಾಗೆ ತಿಳಿಯಕೂಡದು.

3. ಭಿಡದರಖಾಸ್ತುದಾರನು ಹರಾಜು ಮೊಬಲಗಿನ ಪೈಕಿ ನಾಲ್ಕರಲ್ಲಿ ಒಂದು ಭಾಗವನ್ನು ಆ ಕೂಡಲೆ ಡಿಪಾಜಿಟ್ಟು ಇಡಬೇಕಲ್ಲದೆ ಬಾಕಿ ಉಳಿದ ಮೊಬಲಗನ್ನು ಸರ್ 1904ನೆ ಇಸವಿ ಜುಲೈ 20ರ ಲಾಗಾಯತು ಸಮವಾದ ಮೂರು ಖಿಸ್ತುಗಳಾಗಿ ಪ್ರತಿ ಮಾಹೆ 20ನೆ ತಾರೀಖಿಗೆ ಪಾವತಿ ಮಾಡಲು ಬದ್ಧನಾಗಿ ಇರಬೇಕು. ಹರಾಜು ಮಂಜೂರಿಯು ಆತನಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು ಹದಿನೈದು ದಿವಸಗಳ ವಳಗೆ ಕ್ರಮವಾದ ಮುಚ್ಚಳಿಕೆ ಬರೆದುಕೊಡಬೇಕು. ಅಲ್ಲದೆ ಈ ಕೆಳಗೆ ನಮೂದಿಸುವ ಷರತ್ತಿಗೆ ವಳಪಟ್ಟು ಕಂಟ್ರಾಕ್ಟಿನಂತೆ ತಾನು ಸರಿಯಾಗಿ ನಡೆದುಕೊಳ್ಳತಕ್ಕ ಬಗ್ಯೆ ಖಾತರೆ ಜಾಮೀನ್ ಕೊಡಬೇಕು. ಡಿಪಾಜಿಟ್ಟು ಮೊಬಲಗು ಹಾಜರ್ಮಾಡದೆಯೂ ಮುಚ್ಚಳಿಕೆ ಬರೆದುಕೊಡದೆಯೂ ಜಾಮೀನ್ ಕೊಡದೆಯೂ ತಪ್ಪಿದರೆ ಬಾಬನ್ನು ದುಸರೆ ಹರಾಜು ಮೂಲಕ ವಿಕ್ರಯಿಸುವದಲ್ಲದೆ ನಷ್ಟಕ್ಕೆ ತಪ್ಪಿತಸ್ಥನಾದ ಇಜಾರೆದಾರನನ್ನು ಗುರಿಪಡಿಸುತ್ತೆ ಶಿವಾಯಿ ಹಾಂಗೆ ಬಾಬನ್ನು ದುಸರೆ ಹರಾಜು ಮಾಡೋಣದರಲ್ಲಿ ಉಂಟಾಗುವ ಆದಾಯಕ್ಕೆ ಅವನು ಭಾಗಿಯಾಗಲಾರನು.

4. ಖಿಸ್ತು ಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಹಾಂಗೆ ಬಾಕಿ ಇದ ಮೊಬಲಗಿಗೆ ಪಾವತೀ ತಾರೀಖಿನವರಿಗೆ ಮಾಹೆಯಾನಾ ರೂಪಾಯಿ 1ಕ್ಕೆ ಒಂದು ಪೈನಂತೆ ಬಡ್ಡಿ ಸೇರಿಸಿ ವಸೂಲ್ಮಾಡಲ್ಪಡುತ್ತೆ. ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಯುಕ್ತ ತೋರಿದರೆ ಅಥವಾ ಜಾಮೀನ್ದಾರನು ಅಪೇಕ್ಷಿಸಿದರೆ ಕಂಟ್ರಾಕ್ಟು ದುಸರೆ ಹರಾಜು ಮಾಡಲ್ಪಡುವದಕ್ಕೆ ಗುರಿಯಾಗುವದು. ಅದರಿಂದ ಸರ್ಕಾರಕ್ಕೇನಾದರೂ ನಷ್ಟ ಸಂಭವಿಸಿದಲ್ಲಿ ಅದನ್ನು ಕಂಟ್ರಾಕ್ಟುದಾರನಿಂದಲೆ ಆಗಲಿ ಜಾಮೀನ್ದಾರನಿಂದಲೆ ಆಗಲಿ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುತ್ತೆ.

5. ಹರಾಜು ಮೊಬಲಗು ಶಿವಾಯಿ 3—4ನೆ ಕಾಲಂಗಳಲ್ಲಿ ನಮೂದಾಗುವ ಷರತ್ತುಗಳಿಗೆ ವಳಪಟ್ಟು ಖಜಾನೆಗೆ ಸಲ್ಲಿಸುವ ಸದರಿ ಕಂಟ್ರಾಕ್ಟು ಮೊಬಲಗಿನ ರೂಪಾಯಿ 1ಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ ಕೊಡಲಿಕ್ಕೆ ಇಜಾರೆದಾರನು ಬದ್ಧನಾಗಿರಬೇಕು.

6. ವಸೂಲಿ ಹಕ್ಕನ್ನು ಕೊಂಡುಕೊಳ್ಳುವ ಕಂಟ್ರಾಕ್ಟುದಾರನು ಇದಕ್ಕೆ ಲಗತ್ತಿಸಿರುವ ಷೆಡ್ಯೂಲಿನಲ್ಲಿ ನಮೂದು ಇರುವ ದರಗಳ ಮೇರಿಗೇನೇ ಟೋಲ್ ವಸೂಲ್ಮಾಡಬೇಕು. ಮತ್ತು ಸ೯ 1876ನೆ ಇಸವಿ ನವಂಬರು 4ನೆ ತಾರೀಖಿನ ಲೇಟ್ ಚೀಫ್ ಕಮಿಷನರ್ ಸಾಹೇಬರವರ ನೋಟಿಫಿಕೇಷನಲ್ಲಿ ಫಾಯಿಷ್ ಆಗಿ ಇರುವ ರೂಲ್ಸು ಪ್ರಕಾರ ನಡೆದುಕೊಳ್ಳಬೇಕು.

7. ಪ್ರತಿ ದಿನದ ಟೋಲ್‌ಯಾನೆ ಸುಂಕದ ವಸೂಲಿ ತೋರಿಸುವ ನಿಜವಾದ ಮತ್ತು ಕರಾರ್ವಾಕಾದ ಲೆಖ್ಖವನ್ನು ಇಡಲು ಸಹ ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಡಿಸ್ಟ್ರಿಕ್ಟು ಮತ್ತು ತಾಲ್ಲೂಕ ಅಧಿಕಾರಿಗಳ ತನಿಖೆಗೆ ಸದರೀ ಲೆಖ್ಖವು ವಳಪಟ್ಟಿರತಕ್ಕದ್ದು.

8. 7ನೆ ಷರತ್ತಿನಲ್ಲಿ ನಮೂದಿಸಿರುವ ಮೇರೆ ಕರಾರ್ವಾಕ ಅಪ್ಪುರೇಖ್ತು ಲೆಖ್ಖವನ್ನು ಇಡಲೋಸ್ಕರ ಸಿಬ್ಬಂದಿ ಅಂದರೆ ಒಬ್ಬ ಮುತ್ಸದ್ದಿ ಖರ್ಚನ್ನು ಕಂಟ್ರಾಕ್ಟುದಾರನೆ ವಹಿಸಬೇಕು.

9. ಗವರ್ನಮೆಂಟ್ ಟೋಲ್ ಮನೆ ಮತ್ತು ಟೋಲ್ ಗೇಟನ್ನು ಸಹಾ ಕಂಟ್ರಾಕ್ಟುದಾರನು ಉಪಯೋಗಿಸತಕ್ಕದ್ದು ಮತ್ತು ಅವುಗಳನ್ನು ಪೂರಾ ದುರಸ್ತಿನಲ್ಲಿ ಆತನು ಇಟ್ಟುಕೊಂಡಿರತಕ್ಕದ್ದು. ಹಾಗೆ ದುರಸ್ತಿನಲ್ಲಿ ಇಟ್ಟುಕೊಳ್ಳದೆ ಹೋದಲ್ಲಿ ಅದರ ದುರಸ್ತಿನ ಬಗ್ಯೆ ತಗಲತಕ್ಕ ಖರ್ಚು ಕಂಟ್ರಾಕ್ಟುದಾರನಿಂದ ರೆವಿನ್ಯೂ ಬಾಕೀ ವಸೂಲೀ ರೂಲ್ಸು ಅನುಸರಿಸಿ ವಸೂಲ್ಮಾಡಲ್ಪಡುತ್ತೆ.

10. ಕಂಟ್ರಾಕ್ಟುದಾರನು ಪ್ರತಿ ಮಾಹೆ ಗುರ್ರೆ ತಾರೀಖಿನಲ್ಲಿ ಹಿಂದಣ ತಿಂಗಳ ಟೋಲ್ ವಸೂಲಿ ಲೆಖ್ಖವನ್ನು ಮಂಜರಾಬಾದ್ ತಾಲ್ಲೂಕು ಕಚೇರಿಗೆ ಕಳುಹಿಸತಕ್ಕದ್ದು.

11. ಕಂಟ್ರಾಕ್ಟುದಾರ ವಸೂಲ್ಮಾಡಬೇಕಾದ ದರಗಳ ತಪಶೀಲು ಈ ಕೆಳಗಿನ ಷೆಡ್ಯೂಲಿನಲ್ಲಿ ನಮೂದ್ಮಾಡಿಧೆ.

	ತಪಶೀಲು.	ಮೊಬಲಗು.		
		ರೂ.	ಅ.	ಪೈ.
1.	ಪ್ರತಿ ನಾಲ್ಕು ಚಕ್ರದ ಭಂಡಿಗೆ	2	0	0
2.	ಡಿಟೋ ಎರಡು ಚಕ್ರದ ಭಂಡಿಗೆ	1	0	0
3.	ಡಿಟೋ ಯಕ್ಕಮಲಿ	0	4	0
4.	ಡಿಟೋ ಸ್ಪ್ರಿಂಗ್‌ಯಾನೆ ಬಿಲ್ಲಿನ ಮೇಲೆ ಇರುವ ಭಂಡಿ ಬಂದಕ್ಕೆ	0	2	0
5.	ಡಿಟೋ ಎಂಟು ಎತ್ತುಗಳಿಂದ, ಕೋಣಗಳಿಂದ, ಕುದುರೆಗಳಿಂದ, ಟಾಕಣಗಳಿಂದ, ಕತ್ತೆಗಳಿಂದ, ಯಾ ಹೇಸರಕತ್ತೆಗಳಿಂದ ಎಳೆಯಲ್ಪಟ್ಟ ಮತ್ತು ಬಿಲ್ಲಿನ ಮೇಲೆ ಇಲ್ಲದ ಗಾಡಿ ಯಾ ಭಂಡಿ ಬಂದಕ್ಕೆ.	1	8	0
6.	ಡಿಟೋ ಎಂಟು ಎತ್ತುಗಳಿಂದ, ಕೋಣಗಳಿಂದ, ಕುದುರೆಗಳಿಂದ ಟಾಕಣಗಳಿಂದ, ಕತ್ತೆಗಳಿಂದ, ಯಾ ಹೇಸರಕತ್ತೆಗಳಿಂದ ಯಳೆಯಲ್ಪಟ್ಟ ಮತ್ತು ಬಿಲ್ಲಿನ ಮೇಲೆ ಇಲ್ಲದ ಭರ್ತಿ ಇಲ್ಲದ ಗಾಡಿ ಯಾ ಭಂಡಿ ಬಂದಕ್ಕೆ.	0	8	0
7.	ಡಿಟೋ ಆರು ಎತ್ತುಗಳು ವಗ್ಯೆರೆಗಳಿಂದ ಎಳೆಯಲ್ಪಟ್ಟ ಗಾಡಿ ವ ಭಂಡಿ ಬಂದಕ್ಕೆ ಭರ್ತಿ ಆಗಿದ್ದರೆ	0	12	0
8.	ಡಿಟೋ ಡಿಟೋ ಡಿಟೋ ಭರ್ತಿ ಇಲ್ಲದೆ ಇದ್ದರೆ	0	6	0
9.	ಡಿಟೋ ನಾಲ್ಕು ಎತ್ತುಗಳು ಡಿಟೋ ಭರ್ತಿ ಆಗಿದ್ದರೆ	0	8	0
10.	ಡಿಟೋ ಡಿಟೋ ಡಿಟೋ ಭರ್ತಿ ಇಲ್ಲದೆ ಇದ್ದರೆ ..	0	4	0
11.	ಡಿಟೋ ಎರಡು ಎತ್ತುಗಳು ವಗ್ಯೆರೆ ಡಿಟೋ ಭರ್ತಿ ಆಗಿದ್ದರೆ	0	4	0
12.	ಡಿಟೋ ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ ..	0	2	0
13.	ಡಿಟೋ ಕೋಣಗಳು ಯಾ ಎತ್ತುಗಳು ರಾಸು 1ಕ್ಕೆ ಹೊರಿಸಲ್ಪಟ್ಟು ಇದ್ದರೆ ..	0	1	0
14.	ಡಿಟೋ ಡಿಟೋ ಹೊರಿಸಲ್ಪಡದ ಇದ್ದರೆ ..	0	0	3
15.	ಡಿಟೋ ಆನೆಗೂ	1	8	0
16.	ಡಿಟೋ ಒಂಟೆಗೂ ಹೊರಿಸಲ್ಪಟ್ಟು ಇದ್ದರೆ	0	8	0
17.	ಡಿಟೋ ಡಿಟೋ ಹೊರಿಸಲ್ಪಡದ ಇದ್ದರೆ	0	4	0
18.	ಡಿಟೋ ಕುದುರೆಗೂ ಹೊರಿಸಲ್ಪಟ್ಟಿದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ ...	0	1	6
19.	ಡಿಟೋ ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗುವ ಪ್ರತಿ ಒಂದು ಕುದುರೆಗೂ ...	0	0	9
20.	ಡಿಟೋ ತಟ್ಟು ಯಾ ಹೇಸರಕತ್ತೆ ಹೊರೆ ಹೊರಸಿ ಇದ್ದರೆ ಯಾ ಸವಾರಿ ಮಾಡುತ್ತಿದ್ದರೆ	0	0	9
21.	ಡಿಟೋ ಡಿಟೋ ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ ...	0	0	6
22.	ಡಿಟೋ ಕತ್ತೆಗೂ ಹೊರೆಹೊರಿಸಿ ಇದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ ...	0	0	6
23.	ಡಿಟೋ ಹೊರೆ ಇಲ್ಲದೆ ಯಾ ಹಿಡಿದುಕೊಂಡು ಹೋಗಲ್ಪಡುವ ಪ್ರತಿ ಕತ್ತೆಗೂ	0	0	1
24.	ಪ್ರತಿ ಕುರಿ, ಮೇಕೆ, ಯಾ ಹಂದಿ ...	0	0	1
25.	ಎಂಟು ಬೋಯಿಗಳ ವಡನೆ ಪ್ರತಿ ಡೋಲಿ ಯಾ ಪಾಲಕಿ ಪಾಲ್ಕಾ ಯಾ ಟಾಂಜಾನಿಗೂ ...	1	0	0
26.	ಆರು ಡಿಟೋ ಡಿಟೋ ...	0	12	0
27.	ನಾಲ್ಕು ಡಿಟೋ ಡಿಟೋ	0	8	0
28.	ಇಬ್ಬರು ಡಿಟೋ ಡಿಟೋ ...	0	4	0

N. B.— ನಡದುಬರುವ ಮಾರ್ಗಸ್ಥರಮೇಲೆ ಟೋಲ್ ವಸೂಲ್ಮಾಡತಕ್ಕದ್ದಲ್ಲಾ.

ಬೇಲೂರು ಸೇತುವೆಮೇಲೆ ಸುಂಕ ವಸೂಲ್ಮಾಡುವ ಹುಕ್ಕು ಹರಾಜು ಇಸ್ತಿಹಾರ್.

ತಾರೀಖು 30ನೇ ಏಪ್ರೆಲ್ 1904.

ಹಾಸನದ ಡಿಸ್ಟ್ರಿಕ್ಟು ಬೇಲೂರು ತಾಲ್ಲೂಕು ಬೇಲೂರು ಸೇತುವೆ ಮೇಲೆ 1904ನೇ ಜುಲೈ ಗುರ್ರೆ ಲಾಗಾಯಿತು 1905ನೇ ಜೂನ್ ಆಖೈರುವರೆಗೆ ಸುಂಕ ವಸೂಲ್ಮಾಡುವ ಹಕ್ಕನ್ನು ಬೇಲೂರು ತಾಲ್ಲೂಕು ಕಚೇರಿಯಲ್ಲಿ 1904ನೇ ಇಸವಿ 13ನೇ ಜೂನ್ ಮಾಹೆ ತಾರೀಖು ಸೋಮವಾರ ದಿವಿ 12 ಘಂಟೆಗೆ ಹಾಸನದ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಅಥವಾ ಅವರಿಂದ ಅಧಿಕಾರ ಹೊಂದಿದ ಇತರ ಉದ್ಯೋಗಸ್ಥರ ರೂಬರೂಬು ಹರಾಜು ಮಾಡಿಸಲ್ಪಡುತ್ತೆ. ಮತ್ತು ಆ ತಾರೀಖಿನವರಿಗೆ ಕ್ರಮವಾಗಿ ಬರುವ ಬರಹ ಮೂಲಕವಾದ ದರಖಾಸ್ತುಗಳನ್ನು ಬೇಲೂರು ತಾಲ್ಲೂಕು ಅಮಿಲ್ದಾರು ಅಂಗೀಕರಿಸುತ್ತಾರೆ.

(2) ಧಡ ಸವಾಲನ್ನು ಹಾಸನದ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರು ಕಾರಣ ಸಮೂದಿಸದೆ ಮಂಜೂರು ಮಾಡುವದಕ್ಕೂ ಯಾವ ಸವಾಲನ್ನೇ ಆಗಲಿ ತಿರಸ್ಕರಿಸುವದಕ್ಕೂ ಸ್ವಾತಂತ್ರ್ಯವನ್ನು ವಹಿಸಿರುತ್ತಾರೆ.

ಸರ್ಕ 1901ನೆ ಇಸವಿ 11ನೆ ಖಾನೂನಾದ ಮೈಸೂರ ಫಾರೆಸ್ಟ್ ರೆಗ್ಯುಲೇಷನ್ 5ನೆ ಪ್ರಕರಣವನ್ನು ಅನುಸರಿಸಿ ಸಮಸ್ತ ಜನಗಳಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—

1902ನೆ ಇಸವಿ ಅಕ್ಟೋಬರ ಮಾಹೆ 23ನೆ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಪ್ರಕಟಪಡಿಸಿರುವ ಮೇರೆಗೆ ಈ ಕೆಳಗೆ ತಪಸೀಲು ಕಂಡ ಜಮೀನ ಪ್ರದೇಶವನ್ನೆಲ್ಲಾ ಸರ್ಕಾರ ಮನ್ನಾ ಜಂಗ್ಲಿಯಾಗಿ ಮಾಡಬೇಕೆಂದು ನಿಶ್ಚೈಸಲ್ಪಟ್ಟಿದೆಯಾದ್ದರಿಂದ ಈ ಇಸ್ತಿಹಾರು ಘೋಷಿತವಾದ ಲಾಗಾಯಿತು ಮೈಸೂರ ಫಾರೆಸ್ಟ್ ರೆಗ್ಯುಲೇಷನ್ 17ನೆ ಪ್ರಕರಣವನ್ನು ಅನುಸರಿಸಿ, ಇನ್ನೊಂದು ಹೊಸ ಇಸ್ತಿಹಾರು ಕೊಡಲ್ಪಡುವ ವರೆಗೆ, ಸದರೀ ಪ್ರದೇಶದಲ್ಲಿ ಅಡಗಿರುವ ಯಾವ ಜಮೀನಿನಲ್ಲಾಗಲೀ ಯಾವ ಹಕ್ಕೂ ನೂತನವಾಗಿ ಸಂಪಾದಿಸಲ್ಪಡತಕ್ಕದ್ದಲ್ಲವು. ಆದರೆ ವಾರಸ್ತಾರಿಯಿಂದ ಪಡೆದ ಹಕ್ಕೂ, 1903ನೆ ಇಸವಿ ಅಕ್ಟೋಬರು ಮಾಹೆ 23ನೆ ತಾರೀಖಿಗೆ

ಹಿಂದೆ ಸರ್ಕಾರದಿಂದಲಾಗಲೀ, ಅಥವಾ ಬೇರೆ ಕಾರ್ಯಕರ್ತರಿಂದಾಗಲೀ ಮೊದಲೇ ಹುಟ್ಟಿ, ಲಿಖಿತಮೂಲಕ ನಿರ್ಧರಿಸಲ್ಪಟ್ಟಿರುವ ದಾನ, ದೃಷ್ಟಿ, ವಗೈರೆ ಲೇವಾದೇವಿಯಿಂದುಂಟಾದ ಯಾವ ಬಾಧ್ಯತೆಯೂ ಸಹ, ಇದರಿಂದ ನಿರೋಧಿಸಲ್ಪಡುವದಿಲ್ಲವು. [ಅನುಮಾನಾಸ್ಪದವಾದ ಸಂದರ್ಭಗಳಲ್ಲಿ ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟು ಸೆಟಲ್‌ಮೆಂಟ್ ಆಫೀಸರಿಗೆ ಬರೆದುಕೊಂಡು ಅವರಿಂದ ಲಿಖಿತಮೂಲಕವಾದ ಅಪ್ಪಣೆ ಪಡೆದು ನಡೆದುಕೊಳ್ಳತಕ್ಕದ್ದು.]

ಸದರೀ ಪ್ರದೇಶದಲ್ಲಿ ಯಾವ ಕಡೆಯಲ್ಲೂ ಸಾಗುವಳೀಗಾಗಲೀ, ಇನ್ಯಾವ ಉದ್ದೇಶಕ್ಕಾಗಲಿ, ಫಾರೆಸ್ಟು ಸೆಟಲ್‌ಮೆಂಟ್ ಆಫೀಸರವರ ಅಪ್ಪಣೆ ಶಿವಾಯಿ, ಗಿಡ ಕತರಾವಣೆ ವಗೈರೆ ಮಾಡಲ್ಪಡಕೂಡದು.

ಫಾರೆಸ್ಟು ಸೆಟಲ್‌ಮೆಂಟ್ ಆಫೀಸರ ಅನುಮತಿ ಇಲ್ಲದೆ ಆ ಪ್ರದೇಶದಲ್ಲಿ ಯಾವ ಜಮೀನಿಗೂ ಸಾಗುವಳಿ ಪಟ್ಟೆ ಕೊಡಲ್ಪಡುವದಿಲ್ಲವು.

ಆದುದರಿಂದ ಮೇಲ್ಕಂಡ ಜಮೀನಿನ ಪೈಕಿ ಯಾವದಕ್ಕಾದರೂ ಹಕ್ಕುದಾರರೆಂದು ವಾದಿಸುವ ಸಮಸ್ತ ಜನಗಳು, ಈ ಇಸ್ತಿಹಾರು ಮೈಸೂರ ಗೆಜೆಟ್ಟಿನಲ್ಲಿ ಪ್ರಾಯಿಷಾದ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ, ತಮ್ಮ ಹಕ್ಕುಗಳ ಸ್ವಭಾವವನ್ನು ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟು ಸೆಟಲ್‌ಮೆಂಟ್ ಆಫೀಸರವರಲ್ಲಿ ರೂಬರೂಬ್ ಹಾಜರಾಗಿ, ಮೂಜಬಾನಿಯಿಂದಾಗಲೀ, ಅರ್ಜೆ ಮೂಲಕವಾಗಿಯಾಗಲೀ, ಮನಿವೆ ಮಾಡಿಕೊಳ್ಳತಕ್ಕದ್ದಲ್ಲದೆ ತಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕೆ ಸಾಧಕವಾಗಬಹುದಾದ ದಸ್ತೈವಜು ವಗೈರೆಗಳನ್ನು ಸಹ ಹಾಜರ್ಮಾಡತಕ್ಕದ್ದು.

ಫಾರೆಸ್ಟು ರಗ್ಯುಲೇಷನ್ 17ನೆ ಪ್ರಕರಣವನ್ನು ಅನುಸರಿಸಿ ಮೇಲ್ಕಂಡೆ ಜಮೀನ್ ಪ್ರದೇಶವು ಸರ್ಕಾರಿ ಮೀಸಲು ಜಂಗ್ಲಿಯಾಗಿ ಮಾಡಲ್ಪಟ್ಟ ಬಗ್ಗೆ ಮೈಸೂರ ಗೆಜೆಟ್ಟಿನಲ್ಲಿ ಇಸ್ತಿಹಾರ್ ಪ್ರಕಟನೆಯಾಗುವದಕ್ಕೆ ಮುಂಚೆ (ಅಂದರೆ ಮೇಲ್ಕಂಡ ವಾಯಿದೆಯೊಳಗಾಗಿ) ಯಾವ ಹಕ್ಕುಗಳ ಬಾಧ್ಯತೆಯು ವಾದಿಸಲ್ಪಡುವದಿಲ್ಲವೋ ಅಂಥ ತಮಾಂ ಹಕ್ಕುಗಳು ರದ್ದಾಗುವದಲ್ಲದೆ, ಅನಂತರ ಯಾವ ಮನಿವೆಯೂ ತಕರಾರೂ ಅಂಗೀಕರಿಸಲ್ಪಡುವದಿಲ್ಲವು.

ಪ್ರದೇಶದ ವಿವರ.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ವ ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಬೆಂಗಳೂರು.	ದೊಡ್ಡ ಬಳ್ಳಾಪುರ ಮತ್ತು ದೇವನಹಳ್ಳಿ ತಾಲ್ಲೂಕುಗಳು.	510 ಎಕರೆಗಳು, 33 ಗುಂಟೆಗಳು.	ದಿಬ್ಬಗಿರಿ ಪಟ್ಟ.	ಸ್ಥಳ.—ಪ್ರದೇಶವು ಕಾರೆಹಳ್ಳಿಯ ಎಸ್. ನಂ. 199 ಮತ್ತು ಗೊಳ್ಳಯ್ಯನಂದಿಗುಂಡದ ನಂ. 24 ವ 25 ಇವುಗಳನ್ನು ಉಂಟಾಗಿದೆ. **ಚಕ್ಕುಬಂದಿ.** ಉತ್ತರಕ್ಕೆ.—ಹೆಗ್ಗಡಿಹಳ್ಳಿಯ ಎಸ್. ನಂ. 119ರ ನೈರುತ್ಯ ಮೂಲೆಯಿಂದ ಹೊರಟು ಲೈನು ಅದೇ ಗ್ರಾಮದ ಎಸ್. ನಂ. 119 ವ 109 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ; ಆ ಮೇಲೆ ಕೆಂಪತಿಮ್ಮನ ಹಳ್ಳಿಯ ಎಸ್. ನಂ. 12ರ ಪಶ್ಚಿಮ ಮತ್ತು ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಅದೇ ಗ್ರಾಮದ ಎಸ್. ನಂ. 10 ಮತ್ತು ಜೋಡಿ ಇನಾಂ ಮುದಗೇನಹಳ್ಳಿಯ ಎಸ್. ನಂ. 2 ಇವುಗಳನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಪೂರ್ವಕ್ಕೆ.—ತರುವಾಯ ಮುದಗೇನಹಳ್ಳಿಯ ಎಸ್. ನಂ. 2ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಯರ್ರಪ್ಪನ ಹಳ್ಳಿಯ ಎಸ್. ನಂ. 5 ಮತ್ತು ಕಾರೆಹಳ್ಳಿಯ ನಂ. 204 ಇವುಗಳನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ; ಆಮೇಲೆ ಅದೇ ಎಸ್. ನಂ. 204ರ ಉತ್ತರ ಮತ್ತು ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ; ತರುವಾಯ ಎಸ್. ನಂ. 203ರ ಉತ್ತರ ಮತ್ತು ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಆಮೇಲೆ ಎಸ್. ನಂ. 201ರ ಉತ್ತರ ಪಾರ್ಶ್ವದ ಉದ್ದಕ್ಕೂ, ಮತ್ತು ಎಸ್. ನಂ. 200ರ ಉತ್ತರ ಮತ್ತು ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಕಾರೆಹಳ್ಳಿಯ ಎಸ್. ನಂ 197 ವ 199 ಇವುಗಳನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ದಕ್ಷಿಣಕ್ಕೆ.—ಆಮೇಲೆ ಕಾರೆಹಳ್ಳಿಯ ಎಸ್. ನಂ. 197ರ ಉತ್ತರ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ಪಶ್ಚಿಮಕ್ಕೆ.—ತರುವಾಯ ಗೊಳ್ಳಯ್ಯನಂದಿಗುಂಡದ ಎಸ್. ನಂ. 26ರ ಪೂರ್ವ ಮತ್ತು ಉತ್ತರ ಪಾರ್ಶ್ವಗಳ ಉದ್ದಕ್ಕೂ, ಎಸ್. ನಂ. 27ರ ಆಗ್ನೇಯ, ಪೂರ್ವ ಮತ್ತು ಉತ್ತರ ಪಾರ್ಶ್ವಗಳ ಉದ್ದಕ್ಕೂ, ಎಸ್. ನಂ. 23ರ ಪೂರ್ವ ಮತ್ತು ಉತ್ತರ ಪಾರ್ಶ್ವಗಳ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ; ಆಮೇಲೆ ಅದೇ ಗ್ರಾಮದ ಎಸ್. ನಂ. 15ರ ಪೂರ್ವ ಪಾರ್ಶ್ವದ ಉದ್ದಕ್ಕೂ ಹೊರಟ ಸ್ಥಳಕ್ಕೆ ಹೋಗುತ್ತದೆ.

ಬಿ. ರಾಮಸ್ವಾಮಯ್ಯಂಗಾರ್,
ಫಾರೆಸ್ಟು ಸೆಟ್ಲ್‌ಮೆಂಟ್ ಆಫೀಸರ್, ಕಡೂರು ಡಿಸ್ಟ್ರಿಕ್ಟು.

ಇಸ್ತಿಹಾರ್ ನಂಬರ್ 412, ತಾರೀಖು 11ನೆ ಮೇ 1904ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಬವರಿಂಗ್‌ಪ್ಯಾಟೆ ತಾಲ್ಲೂಕಿನಲ್ಲಿರುವ ಕಾಮಸಂದ್ರ ಸ್ಟೇಟ್ ಫಾರೆಸ್ಟು ಪೈಕಿ ಈ ಕೆಳಗೆ ಕಂಡ ತಾಕುಗಳಲ್ಲಿರುವ ಮರಗಳನ್ನು 1904ನೆ ಇಸವಿ ಜುಲೈ 1ನೆ ತಾರೀಖು ಲಾಗಾಯಿತು 1905ನೆ ಇಸವಿ ಜೂನ್ ಆಖೈರ್ ವರೆಗೆ ಕಡಿದು ಸಾಗಿಸಿಕೊಂಡು ಹೋಗತಕ್ಕ ಹಕ್ಕನ್ನು 1904ನೆ ಇಸವಿ ಜೂನ್ 15ನೆ ತಾರೀಖು ಬುಧವಾರ ಮಧ್ಯಾಹ್ನ 2 ಘಂಟೆಗೆ ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ನೇಮಕ ಮಾಡಲ್ಪಡುವ ಅಸಿಸ್ಟೆಂಟ್ ಕಮಿಷನರವರೊಂದಿಗೆ ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರವರು ಬವರಿಂಗ್‌ಪ್ಯಾಟೆ ಟ್ರಾವಲರ್ಸ್ ಬಂಗ್ಲೆಯಲ್ಲಿ ಹರಾಜು ಮಾಡುವರು :—

ಸ್ಥಳ.		ಸುಮಾರು ವಿಸ್ತೀರ್ಣ ಎಕರೆ.	ಕಡಿಯತಕ್ಕ ಮರಗಳ ಜಾತಿ.	ಷರಾ.
ಬ್ಲಾಕ್ ನಂಬರ್.	ತಾಕು ನಂಬರ್.			
I	5	334	ಚಿಗರೆ ಯಾನೆ ಚುಜ್ಜಲು, ನಲ್ಲಬಲಸು, ದೇವದಾರಿ, ಗೊರವಿ ಮತ್ತು ಚಾಬೀನೆಗೆ ನಾಲಾಯಖ್ ಆಗಿರತಕ್ಕ ಇತರ ಸೌದೆ ಜಾತಿ ಮರಗಳು.	
III	5	458	ಡಿಟೋ	
ಎಲ್ಲಾ ಫಾರೆಸ್ಟು ...		10,823	ಸರ್ಕಾರಕ್ಕೆ ಉಳಿಸಿಕೊಳ್ಳುವ ಮರಗಳು ವಿನಹಾ ಎಲ್ಲಾ ಜಾತಿಯ ಮಣಸೌದೆ.	ಕಡರಾವಣಿ ನಡಿಯಲ್ಪಟ್ಟ ತಾಕುಗಳು ಇದರಲ್ಲಿ ಸೇರಿರುವದಿಲ್ಲ.

2. ಮೇಲ್ಕಂಡ ತಾಕುಗಳು ಪ್ರತ್ಯೇಕವಾಗಿಯಾಗಲಿ ಎರಡೂ ಸೇರಿಸಿಯಾಗಲಿ ಅಥವಾ ಎಕರೆ 1ಕ್ಕೆ ಇಷ್ಟು ಮೊಬಲಗಿನಿಂದಾಗಲಿ ಹರಾಜು ಮಾಡುವಂಥ ಆಫಿಸರವರಿಗೆ ಸೂಕ್ತ ಕಂಡುಬರುವ ರೀತಿಯಲ್ಲಿ ಹರಾಜು ಮಾಡಲ್ಪಡುವದು. ಈ ಹರಾಜು ಕನ್ಸರ್ವೇಟರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

3. ಹರಾಜು ಮಾಡತಕ್ಕ ಆಫಿಸರವರು ಯಾವ ಕಾರಣವನ್ನು ನಮೂದಿಸದೇನೆ ಯಾವ ಒಂದು ಅಥವಾ ಎಲ್ಲಾ ದರಖಾಸ್ತನ್ನೇ ಆಗಲಿ ತಿರಸ್ಕರಿಸಲು ಸ್ವತಂತ್ರರಾಗಿರುತ್ತಾರೆ.

4. ಪ್ರತಿ ಒಬ್ಬ ಸವಾಲ್‌ದಾರನು ಹರಾಜಿನಲ್ಲಿ ಸವಾಲ್ ಮಾಡುವದಕ್ಕೆ ಮುಂಚೆ (100) (ಒಂದು ನೂರು) ರೂಪಾಯಿಗಳನ್ನು ಠೇವಣಿ ಕಟ್ಟಬೇಕು. ಈ ಮೊಬಲಗು ಹರಾಜು ಖೈದಾದ ಕೂಡಲೆ ಅಂಗೀಕರಿಸಲ್ಪಟ್ಟ ಸವಾಲ್‌ದಾರ್ರ ಮೊಬಲಗು ವಿನಹಾ ಬಾಕಿ ಸವಾಲ್‌ದಾರರುಗಳ ಮೊಬಲಗು ವಾಪಸ್ಸು ಮಾಡಲ್ಪಡುತ್ತೆ.

5. ಅಂಗೀಕರಿಸಲ್ಪಟ್ಟ ಸವಾಲ್‌ದಾರನು ಹರಾಜು ಮಂಜೂರು ಆದ ಸಂಗತಿಯ ನೋಟಿಸ್ ತಲ್ಪಿದ ತಾರೀಖ್ ಲಾಗಾಯಿತು ಒಂದು ವಾರದೊಳಗಾಗಿ ಹರಾಜು ಮೊಬಲಗು ಪೈಕಿ ಅರ್ಧ ಹಿಸ್ಸೆ ಮೊಬಲಗನ್ನು ಬವರಿಂಗ್‌ಪ್ಯಾಟೆ ತಾಲ್ಲೂಕು ಖಜಾನೆಗೆ ಇರಸಾಲ್ ಮಾಡಬೇಕು ಮತ್ತು ಈ ನೋಟಿಫಿಕೇಷನ್‌ನಲ್ಲಿ ನಮೂದಿರುವ ಷರತ್ತುಗಳು ಅನುಸರಿಸಿ ಮುಚ್ಚಳಿಕೆಯು ಬರದುಕೊಡಬೇಕು. ಬಾಕಿ ಅರ್ಧ ಹಿಸ್ಸೆ ಮೊಬಲಗನ್ನು ಎರಡು ಸಮಕಿಸ್ತುಗಳಾಗಿ ಭಾಗಿಸಿ ಒಂದನೆ ಕಿಸ್ತು 1904ನೆ ಇಸವಿ ಅಕ್ಟೋಬರ್ 5ನೆ ತಾರೀಖಿನೊಳಗಾಗಿಯು ಎರಡನೆ ಕಿಸ್ತು 1905ನೆ ಇಸವಿ ಜನವರಿ 5ನೆ ತಾರೀಖಿನೊಳಗಾಗಿಯು ಪಾರಖಾವಣೆ ಮಾಡಬೇಕು.

6. ಮೇಲ್ಕಂಡ ಪ್ರಕಾರದಲ್ಲಿ ನಮೂದಿಸಿರುವ ಯಾವ ಒಂದು ವಾಯಿದೆಯಲ್ಲಾದರೂ ಮೊಬಲಗನ್ನು ಪಾವತಿ ಮಾಡುವದು ಇಜಾರೆದಾರರು ತಪ್ಪಿದರೆ ಅಥವಾ ನಮೂದಿರುವ ಕಾಲದಲ್ಲಿ ಮುಚ್ಚಳಿಕೆ ಬರದುಕೊಡಲು ತಪ್ಪುವ ಸಂದರ್ಭದಲ್ಲಿ ಅಂಥಾ ತಪ್ಪುವ ತಾರೀಖ್ ವರೆಗೆ ಇಜಾರೆದಾರನು ಸಲ್ಲಿಸಿರುವ ಮೊಬಲಗನ್ನು ಮತ್ತು ಡಿಪಾಜಿಟ್ ಕಟ್ಟಿರುವ 100 ರೂಪಾಯಿಗಳನ್ನು ಸಹಾ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡು ಕಂಟ್ರಾಕ್ಟಿನ ಹಕ್ಕನ್ನ ತಪ್ಪಿಸಿ ಬಾಬನ್ನು ದುಸರಾ ಹರಾಜು ಮಾಡಿಸಲ್ಪಡುತ್ತೆ. ಸದರಿ ಎರಡನೆ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಮೊದಲಿನ ಇಜಾರೆದಾರನು ಗುರಿಯಾಗುತ್ತಾನೆಯೆ ಶಿವಾಯಿ ಅದರಿಂದ ಉಂಟಾಗಬಹುದಾದ ಫಾಯಿದೆಗೆ ಈತನಿಗೆ ಹಕ್ಕು ಇರುವದಿಲ್ಲ. ನಷ್ಟದ ಮೊಬಲಗನ್ನು ರೆವಿನ್ಯೂ ರೂಲ್ಸ್ ಅನುಸರಿಸಿ ತಪ್ಪಿತಸ್ಥನಾದ ಇಜಾರೆದಾರನಿಂದ ವಸೂಲ್ ಮಾಡಲ್ಪಡುತ್ತೆ.

7. ಕಂಟ್ರಾಕ್ಟ್‌ದಾರನು ಪೂರಾ ಮೊಬಲಗು ಸಲ್ಲಿಸಿದ್ದಾಗ್ಯೂ ಮತ್ತು ಹಾತಃ ಲಾಗುವಡಿನಿಂದ ಸ್ಟೇಟ್ ಫಾರೆಸ್ಟಿನಲ್ಲಿ ಕಟ್ಟಿಗೆಯನ್ನು ಕಡಿಸಿ ಜಮಾಯಿಸಿದ್ದಾಗ್ಯೂ 1905ನೆ ಇಸವಿ ಜೂನ್ ಆಖೈರ್ ಆದ ನಂತರ ಮೇಲೆ ನಮೂದಿಸಿರುವ ಕೂಪುಗಳಲ್ಲಿ ಉಳಿದು ಹೋಗುವ ಮರಗಳಿಗು ಮತ್ತು ಸ್ಟೇಟ್ ಫಾರೆಸ್ಟು ಎಲ್ಲೆಯಿಂದ ಹೊರಪಡಿಸದೆ ಉಳಿದು ಹೋಗುವ ಕಟ್ಟಿಗೆಗೂ ಸಹಾ ಇವರಿಗೆ ಹಕ್ಕು ಇರುವದಿಲ್ಲ.

8. ಉಳಿಸಲ್ಪಟ್ಟಿರುವ ಜಾತಿ ಮರಗಳನ್ನು, ಬೀಜಕ್ಕೋಸ್ಕರ ಗುರ್ತುಮಾಡಿ ನಂಬರು ಹಾಕಿರುವ ಮರಗಳನ್ನು ಒಂದು ಅಡಿ ಸುತ್ತಳತೆಗೆ ಕಮ್ಮಿ ಇರತಕ್ಕ ಸಸಿಗಳನ್ನು, ಫಲವೃಕ್ಷಗಳನ್ನು, ಫಸಾರೆ ಜಿನಸಿ ಆಗತಕ್ಕ ಮರಗಳನ್ನು ಕಡಿಯಕೂಡದು ಮತ್ತು ಇತರ ಕೆಲಸ ಮಾಡುವದರಲ್ಲಿ ಅವುಗಳಿಗೆ ಇಜಾ ಸಹಾ ಉಂಟುಮಾಡಕೂಡದು.

9. ಕಡಿಯಲ್ಪಟ್ಟ ಮರಗಳ ಮೋಟುಗಳನ್ನು 3 ಇಂಚಿಗಿಂತಾ ಹೆಚ್ಚು ಎತ್ತರವಾಗಿ ಬಿಡಕೂಡದು ಮತ್ತು ಅವುಗಳನ್ನು ಕಾಫಿ ಸಿಸ್ಟಂ ಅನುಸರಿಸಿ ಕತ್ತರಿಸಬೇಕು.

10. ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಂದ ಪ್ಯಾಸ್ ಕೊಡಲು ನಿಯಮಿಸಲ್ಪಟ್ಟ ಫಾರೆಸ್ಟ್ ನೌಕರರಿಂದ ಪ್ರತಿ ಒಂದು ಗಾಡಿಗು ಒಂದೊಂದು ರಹದಾರಿ ಪಡೆದ ಶಿವಾಯಿ ಸಾಮಾನು ಭರ್ತಿ ಗಾಡಿಗಳನ್ನ ಫಾರೆಸ್ಟಿನಿಂದ ರಫ್ತು ಮಾಡಕೂಡದು. ಈ ಸಾಮಾನು ಗಾಡಿಗಳನ್ನು ಮತ್ತು ರಹದಾರಿಗಳನ್ನು ಸಹಾ ಮಾಲೂರು, ಬೂದಿಕೋಟೆ, ಕಾಮಸಂದ್ರ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರು ಗೊತ್ತು ಮಾಡಲ್ಪಡುವ ಇತರ ಸ್ಥಳಗಳಲ್ಲಿ ತನಿಖೆ ಬಗ್ಯೆ ಹಾಜರ್ಮಾಡಬೇಕು.

11. ರಾತ್ರಿಕಾಲದಲ್ಲಿ ಅಂದರೆ ಸೂರ್ಯ ಅಸ್ತಮಾನವಾದ ನಂತರ ಮತ್ತು ಸೂರ್ಯೋದಯ ಆಗುವದಕ್ಕೆ ಮುಂಚಿತವಾಗಿ ಸಾಮಾನನ್ನು ಸ್ಟೇಟ್ ಫಾರೆಸ್ಟಿನಿಂದಲಾಗಲಿ ಯಾ ಸ್ಟೇಟ್ ಫಾರೆಸ್ಟ್ ಮಾರ್ಗವಾಗಿಯಾಗಲಿ ಸಾಗಿಸಿಕೊಂಡು ಹೋಗಕೂಡದು.

12. ಸ್ಟೇಟ್ ಫಾರೆಸ್ಟಿಗೆ 500 ಗಜದೊಳಗಾಗಿ ಕಂಟ್ರಾಕ್ಟರ್ ಯಾ ಅವರ ಕಡೆ ಕೂಲಿ ಜನಗಳು ಬೆಂಕಿಯನ್ನು ತೆಗದುಕೊಂಡು ಹೋಗಕೂಡದು ಅಥವಾ ಉಂಟುಮಾಡಕೂಡದು.

13. ಇಜಾರೆದಾರನು ಮಾಡುವ ಅಹವಾಲ್ ವಿಷಯದಲ್ಲಿ ಕನ್ಸರ್ವೇಟರ್ ಸಾಹೇಬರವರ ಹುಕುಂ ಅಖೈರಾಗಿರುತ್ತೆ.

14. ಕಂಟ್ರಾಕ್ಟರು ಬರದುಕೊಡಬೇಕಾದ ಮುಚ್ಚಳಿಕೆ ನಕಲನ್ನು ಹರಾಜು ಕಾಲದಲ್ಲಿ ಓದಲ್ಪಡುತ್ತೆ.

ಎಸ್. ಎ. ಬಾಪೂರಾವ್,
ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ್, ಕೋಲಾರ ಡಿಸ್ಟ್ರಿಕ್ಟು.

ನೋಟಿಸ.

ತಾರೀಖು 11ನೆ ಮೇ 1904.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ; ಈ ಕೆಳಗೆ ನಮೂದಿಸಿರುವ ಚಿತ್ರದುರ್ಗದ ಡಿಸ್ಟ್ರಿಕ್ಟಿನ ಡಿಪೋದಲ್ಲಿ ಚೌಬೀನವನ್ನು ಈ ಕೆಳಗೆ ನಮೂದಿಸಿದ ತಾರೀಖಿನಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರಿಂದ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುವುದು. ಹರಾಜು ಮಧ್ಯಾಹ್ನ 2 ಘಂಟೆಗೆ ಷುರು ಮಾಡಲ್ಪಡುತ್ತೆ.

ನಂಬರು	ಡಿಪೋ ಹೆಸರು	ಹರಾಜು ತಾರೀಖು	ಸಾಗುವಾನಿ ನಾಟು		ಮತ್ತಿನಾಟ		ನಂದಿನಾಟ		ಬೀಟೆನಾಟ		ಕಾಡುಜಾತಿ ನಾಟ		ಬಿದಿರು		ಷರಾ
			ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	ದೊಡ್ಡದು	ಚಿಕ್ಕದು	
1	ಹೊಳಲಕೆರೆ ರೈಲ್ಸ್ಟೇಷನ್	4-6-1904	24	707¼	6	149½	2	48¾	2	50	1	33½	399	2969	[illegible]
2	ಚಿತ್ರದುರ್ಗ ಡಿಪೋ ..	6-6-1904	..	..	3	97½	..	..	...	...	10	334			

ಹರಾಜ್ ಷರತ್ತು:—1895ನೆ ಇಸವಿ ಏಪ್ರಿಲ್ 25ನೆ ಮುದ್ರಾಂ ನಂಬರು 15ನೆ ಮೈಸೂರು ಗೆಜೆಟನಲ್ಲಿ ಛಾಯಿಷಾಗಿರುವ 1895ನೆ ಇಸವಿ ಮಾರ್ಚಿ 15ನೆ ಮುದ್ರಾಂ ನಂಬರು 15229-R. F. 155—92ನೆ ನೋಟಿಫಿಕೇಷನ್ ನೋಡಬೇಕು.

ಕೆ. ಶಾಮಯ್ಯಂಗಾರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ್, ಚಿತ್ರದುರ್ಗ ಡಿಸ್ಟ್ರಿಕ್ಟು.

338

857

ಬೆಂಗಳೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಖಾ|| ಕಾಳೇನ ಅಗ್ರಹಾರದ ಟಿ. ರಂಗರಾವುನಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ಬೆಂಗಳೂರು ತಾಲ್ಲೂಕು ಕಛೇರಿ ಬಳಿ 1904ನೆ ಇಸವಿ ಜೂನ್ 25ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903—1904ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರೆಗೆ 106—13—6 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿರ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೇ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ವ್ಯತ್ಯಾಸಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೋಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕ್ರಯ.	ಜಮೀನು. ನಂಬರ್ ಅಥವಾ ಹಿಸ್ಸಾ ನಂಬರು.	ಸ್ವಾಸ್ಥ್ಯ ಅಥವಾ ಜಮೀನಿನ ಬಾಬತು.	ವಿಸ್ತೀರ್ಣ.	ಆಕಾರ.	ಸರ್ಕಾರಕ್ಕೆ ಬರಬೇಕಾದ ನೋಟಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.
					ರೂ.			ಎ. ಗು.	ರೂ. ಆ. ಪೈ.	ರೂ. ಆ. ಪೈ.
ಬೆಂಗಳೂರು	ಬೇಗೂರು	ಕಾಳೇನ ಅಗ್ರಹಾರ ಶ್ರೀರಂಗಪುರ	ಟಿ. ರಂಗರಾವ	...	1,000	ಚಕ್ಕುಬಂದಿ. ಉತ್ತರಕ್ಕೆ.—ಹುಳಿಮಾವು, ಕೊತ್ತನೂರು. ದಕ್ಷಿಣಕ್ಕೆ.—ಗೊಟ್ಟಿಗೆರೆ ಎಲ್ಲೆ. ಪೂರ್ವಕ್ಕೆ.—ಗೊಟ್ಟಿಗೆರೆ, ಹುಳಿಮಾವು. ಪಶ್ಚಿಮಕ್ಕೆ.—ಕೊತ್ತನೂರು, ಗೊಟ್ಟಿಗೆರೆ. ಈ ಮಧ್ಯೆ ಇರುವ ಪೂರಾಗ್ರಾಮ.		217 8	105 5 6	105—5—6 ಗುತ್ತ ಮೊಬಲಗು 0—8—0 ನೋಟಿಸ್ ಫೀ 1—0—0 ಹರಾಜು ಫೀ 106-13—6

* ಯಾ ಬಾಕೀ ಇರುವ ವ್ಯಾಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಡಿ. ದೇವರಾಜ್ ಅರಸ್,
ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 13ನೆ ಮೇ 1904, ಕ್ಯಾಂಪ್ ಮುಳಬಾಗಲ್.

ಇದರಿಂದ ಬವರಿಂಗಪೇಟೆ ತಾಲ್ಲೂಕು ಬೇತಮಂಗಲ ದೊಡ್ಡಕೆರೆ ಕೆಳಗಿನ ತರಿ ಮತ್ತು ಬಾಗಾಯತು ಕಂದಾಯದಾರರಾದ ಈ ಕೆಳಗೆ ಛಾಯಿಸ್ಲಾಡಿರುವ ಲಿಸ್ಟಿನಲ್ಲಿ ಕಂಡ ಜನರಿಗೆ ತಿಳಿಯಪಡಿಸುವದೇನಂದರೆ :—

ಕೋಲಾರ ಗೋಲ್ಡ್ ಫೀಲಡ್ಸ್‌ಗೆ ನೀರನ್ನ ಸರಬರಾಯಿ ಮಾಡತಕ್ಕ ಸಂದರ್ಭದಲ್ಲಿ ಬೇತಮಂಗಲ ದೊಡ್ಡಕೆರೆ ಮತ್ತು ಅದರ ಬಾಬತು ನಾಲೆಗಳ ನೀರನ್ನ ಸಾಗುವಳಿಗೆ ಬಿಡದೆ ಸರ್ಕಾರದವರು ಉಳಿಸಿಕೊಂಡದ್ದರಿಂದ ನಿಮ್ಮಗಳ ಬಾಬತು ತರಿ ಮತ್ತು ಬಾಗಾಯತು ಜಮೀನುಗಳಿಗೆ ಕಂಪೆನ್ಸೇಷನ್ ಠರಾಯಿಸತಕ್ಕ ಬಗ್ಗೆ ಅಸಿಸ್ಟೆಂಟ್ ಸ್ಪೆಷಲ್ ಸೆಟಲ್‌ಮೆಂಟ್ ಆಫಿಸರ ರೂಬರೂ ಹಾಜರಾಗಲು ಬೇರೆ ಬೇರೆ ತಾರೀಖುಗಳನಿಶಿ ನಿಮಗೆ ನೋಟಿಸ ಕೊಟ್ಟದ್ದಾಗ್ಯೂ ಮತ್ತು ನಿಮಗೆ ಸಲ್ಲಬೇಕಾದ ಹಣವನ್ನ ಪಡಿಯಲು ನಮ್ಮ ರೂಬರೂ ಹಾಜರಾಗತಕ್ಕ ಭಾಗದಲ್ಲಿ 15—3—04ನೆ ಮರ್ಹುಂ ಮೈಸೂರು ಗವರ್ನಮೆಂಟ್ ಗೆಜೆಟ್ಟಿನಲ್ಲಿ ಮತ್ತು 7—4—04ನೆ ತಾರೀಖಿನಲ್ಲಿ ಅಲಾಹಿದ ನೋಟಿಸನ್ನ ಛಾಯಿಸ್ಲಾಡಿದ್ದಾಗ್ಯೂ ನೀವು ಇದುವರಿಗೆ ಹಾಜರಾಗಿ ಹಣವನ್ನ ಪಡೆದವರಾಗಲಿಲ್ಲ.

ನಿಮ್ಮ ಖಾತೆ ಜಮೀನ ಪೈಕಿ ಕೆಲವು ಜಮೀನ ಖರೀದಿ ಯಾ ಭೋಗ್ಯ ಮಾಡಿರುವಂತೆಯೂ ಅದರ ಬಾಬತು ಪರಿಹಾರದ್ರವ್ಯ ತಮಗೆ ಪಾವತಿ ಮಾಡಿಸಬೇಕೆಂತ ವಗ್ಯೆರೆ ಇತರ ಜನರಿಂದ ತಕರಾರ್ ಬಂದಿರುತ್ತೆ. ಈ ಲಾಗಾಯತು ಒಂದು ತಿಂಗಳ ವಳಗಾಗಿ ನೀವುಗಳು ಮತ್ತು ತಕರಾರ್‌ದಾರರು ಫೈಸಲ್ಮಾಡಿಕೊಂಡು ಅಸಿಸ್ಟೆಂಟ್ ಸ್ಪೆಷಲ್ ಸೆಟಲ್‌ಮೆಂಟ್ ಆಫಿಸರ್ Mr. S. ನಾರಾಯಣರಾಯರ ರೂಬರೂ ಹಾಜರಾಗಿ ಠರಾವಾಗಿರತಕ್ಕ ಕಂಪೆನ್ಸೇಷನ್ ಹಣವನ್ನ ಪಡಿಯಬೇಕು. ತಪ್ಪಿದರೆ ಯುಕ್ತಾನುಸಾರ ಫೈಸಲ್ಮಾಡಲಾದೀತು. ನಂತರ ನೀವು ತರಬಹುದಾದ ಯಾವ ತಕರಾರನ್ನೂ ಅಂಗೀಕರಿಸುವದಿಲ್ಲ. ತಿಳಿಯುವದು.

ಯಾದಾಸ್ತು ಕೋಲಾರ ಭಂಗಾರ ಗಣಿಗೆ ನೀರನ್ನ ಸರಬರಾಯಿ ಮಾಡತಕ್ಕ ಸಂದರ್ಭದಲ್ಲಿ ಕಸರ್ವೆಯಾನೆ ಅಮಾನತ್ತು ಮಾಡಿದ ಬವರಿಂಗಪೇಟೆ ತಾಲ್ಲೂಕು ಬೇತಮಂಗಲ ಹೋಬಳಿ ಬೇತಮಂಗಲ ಗ್ರಾಮದ ದೊಡ್ಡಕೆರೆ ಕೆಳಗಿನ ತರಿ ಮತ್ತು ಬಾಗಾಯತು ಜಮೀನಗಳಿಗೆ ಪಾವತಿ ಆಗತಕ್ಕ ಪರಿಹಾರದ್ರವ್ಯ ತಮ್ಮಗಳಿಗೆ ಸಲ್ಲಬೇಕೆಂತ ವಗ್ಯೆರೆ ಖಾತೆದಾರ್ರಲ್ಲದ ಇತರ ಜನರಿಂದ ಬಂದಿರತಕ್ಕ ತಕರಾರು ವಗ್ಯೆರೆ ತೋರಿಸತಕ್ಕ ತಪಸೀಲ್ ತಖ್ತೆ.

ಗ್ರಾಮದ ಹೆಸರು.	ಸರ್ವೆ ನಂಬರು.	ಖಾತೆದಾರ್ರ ಅಥವಾ ಅನುಭವದಾರನ ಹೆಸರು.	ಪಾವತಿ ಆಗಬೇಕಾದ ಮೊಬಲಗು. ರೂ.	ಆ.	ಪೈ.	ಷರಾ.
ಬೇತಮಂಗಲ.	4—5	ಕದಿರೆಪ್ಪ ಬಿನ ವೆಂಕಟರಾಮೈಯ್ಯ	158	5	4	ಕೋಲಾರ ಮುನ್ಸೀಫ್ ಕೋರ್ಟಿನಿಂದ ತಲಪಿದ ಅಟ್ಯಾಚ್‌ಮೆಂಟ್ ವಾರಂಟು ಪ್ರಕಾರ ಅಮಾನತ್ತು ಇಟ್ಟಿರುತ್ತೆ.
	9—10	ಷೇಕುಬಿರಾಂ ಫವತಿ ಹೆಂಡತಿ	74	8	0	ಖಾತೆದಾರ ಮೊದಲಿನ ಹೆಂಡತಿ, ಮಗ, ತಮ್ಮ ಸಾಲಿ ಇರತಕ್ಕ ಹೆಂಡತಿ ಖಾತುಂಬಿ, 3 ಜನರು ತಮಗೆ ಭಾಗಾ ಬರಬೇಕೆಂತ ತಕರಾರು ಮಾಡಿದ್ದಾರೆ.
	23—24	ಚಂದಾ ಶೀತಾರಾಮೈಯ್ಯ..	13	8	0	ಖಾತೆದಾರ್ ಫವತಿ, ಇವನ ಮಗ ರಾಮೈಯ್ಯ ಜಮೀನನ್ನ ಮರಾಟಿ ವೆಂಕಣ್ಣನಿಗೆ ಖರೀದಿ ಮಾಡಿರುವಂತೆಯು ಹಣ ತನಿಗೆ ಬರಬೇಕೆಂತ ವೆಂಕಣ್ಣ ತಕರಾರು ಮಾಡಿರುತ್ತಾನೆ.
	31—33	ನಾರಾಯಣರಾವ್ ಬಿನ ಅಪ್ಪಾಜಿರಾವ್	44	4	0	ಫವತಿ, ಈತನ ತಮ್ಮ ಸುಬ್ಬರಾವು ಮುಳಬಾಗಲ್‌ನಲ್ಲಿರುತ್ತಾನೆ. ಈ ಪೈಕಿ ಕೆಲವು ಜಮೀನ ಸುಂದರ ಪಾಳ್ಯದಲ್ಲಿರುವ ಹನುಮಂತಾಚಾರಿ ಭೋಗ್ಯ ಮಾಡಿಕೊಂಡಿರುತ್ತಾನೆ ಸದರೀ ಹಣ ತನಿಗೆ ಬರಬೇಕೆಂತ ತಕರಾರು ಮಾಡಿರುತ್ತಾನೆ.
	125—130	ಅಲ್ಲಿಹುಸೇನ್‌ಖಾನ್ ಬಿನ ಸಾದುಲ್ಲಾಖಾನ್	199	12	0	ಖಾತೆದಾರ್ ಮೈಸೂರಲ್ಲಿಧಾನೆ. ಈ ಜಮೀನಗಳ ಪೈಕಿ ಕೆಲವು ತೇಲಿ ಪೆರಣ್ಣ, ಕೆಲವು ಅಂಕತಟ್ಟಿಹಳ್ಳಿ, ಸೊಣ್ಣೆಗೌಡ, ಮುಂಚಾಮಣ್ಣ, ವಾಸುದೇವಾಚಾರಿ, ಹೈದರ್‌ಬೇಗ್ ಇವರುಗಳಿಗೆ ಭೋಗ್ಯವಾಗಿರುವಂತೆಯೂ ಆ ಮೊಬಲಗು ತಮಗೆ ಕೊಡಿಸಬೇಕೆಂತ ತಕರಾರು ಮಾಡಿರುತ್ತಾರೆ.
	158—164	ತ್ಯಾಕಲ್, ನರಸಿಂಹ್ಮಾಚಾರಿ ಫವತಿ, ಖರೀದಿದಾರ್ ರಾಮಚಂದ್ರಾಚಾರಿ	11	4	0	ಈ ಜಮೀನನ್ನ ರಾಮಚಂದ್ರಾಚಾರ್ರಿಂದ ವೇಲೂರು ರಾಮಾಚಾರಿ ಖರೀದಿಗೆ ಪಡದಿರುವಂತೆಯು ಅದರ ಬಾಬತು ಪರಿಹಾರ ದ್ರವ್ಯ ತನಿಗೆ ಕೊಡಿಸಬೇಕೆಂತ ತಕರಾರು ಮಾಡ್ತಾರೆ.

ಗ್ರಾಮದ ಹೆಸರು.	ಸರ್ವೆ ನಂಬರು.	ಖಾತೇದಾರ, ಅಥವಾ ಅನುಭವದಾರನ ಹೆಸರು.	ಪಾವತಿ ಆಗಬೇಕಾದ ಮೊಬಲಗು.	ಷರಾ.
			ರೂ. ಅ. ಪೈ.	
[illegible]	193-206	ರಾಣೋಜಿ ಬಿನ್ ರಾಮೋಜಿ.	45 0 0	ಈ ಜಮೀನನ್ನ ಖರೀದಿಗೆ ಪಡದು 70 ರೂಪಾಯಿಗೆ ಭೋಗ್ಯಮಾಡಿ ಆ ಪೈಕಿ ಅರ್ಧ ಮೊಬಲಗನ್ನ ಭೋಗ್ಯದಾರಿಗೆ ಪಾವತಿ ಮಾಡುವಂತೆಯೂ ಇದರ ಬಾಬತು ಪರಿಹಾರ ದ್ರವ್ಯ ತನಿಗೆ ಬರಬೇಕೆಂತ ಕದಿರಪ್ಪ ತಿಳಿಸುತ್ತಾನೆ.
	221-229	ಮಹಮ್ಮದಸಾಬ್ ಬಿನ್ ಅಲ್ಲಿಸಾಬ್ ಫವತಿ, ಆಳಿಯ ಷೇಕಲ್ಲಿ	42 12 0	ಈ ಜಮೀನನ್ನ ಸಿವಿಲ್ ಕೋರ್ಟು ಹರಾಜಿನಲ್ಲಿ 126 ರೂಪಾಯಿಗಳಿಗೆ ಪಡೆದಿರುವಂತೆಯೂ ತನಿಗೆ ಹಣ ಪಾವತಿ ಮಾಡಬೇಕೆಂತ ಆನೇಕಲ್ ಶ್ರೀನಿವಾಸಾಚಾರ್ ತಕರಾರು ಪಡ್ಡಿರುತ್ತಾರೆ. ಕೋಲಾರ ಭಂಗಾರ ಗಣಿ ಕೋರ್ಟು ವಾರಂಟು ಪ್ರಕಾರ ಅಮಾನತ್ತು ಮಾಡಿಧೆ.
	247-257	ಶೇಷಗಿರಿರಾವ್ ಬಿನ್ ಅನಂದರಾವ್, ಖರೀದಿದಾರ್ ಹಿಂಡಿಗನಾಳ್ ನಾರಣಾಚಾರ್	23 0 0	ಈ ಜಮೀನು ತನಿಗೆ ದಾನಾ ಬಂದಿರುವಂತೆಯೂ ಹಣ ತನಿಗೆ ಪಾವತಿ ಮಾಡಿಸಬೇಕೆಂತಲು ದಾನ ಪತ್ರ ಹಾಜರ್ಪಡಿಸುವಂತೆ ಆನೇಕಲ್ ಶ್ರೀನಿವಾಸಾಚಾರ್ ಅಪವಾಲ್ ತಿಳಿಸಿರುತ್ತಾರೆ.
[illegible]	236-245	ಅಚ್ಚಮ್ಮ ಕೋಂ ಅಚ್ಚಪ್ಪ	122 10 0	ಅಚ್ಚಮ್ಮ ಎಂಬ ಹೆಸರಿನ ಇಬ್ಬರು ಹೆಂಗಸರು ತಮತ ವಿಗೆ ಹಣ ಬರಬೇಕೆಂತ ತಕರಾರು ಪಡ್ಡಿರುತ್ತಾರೆ.
	318-354	ಷೇಕು ಇಸ್ಮಾಯಿಲ್ ..	31 8 0	ಇವನ ಹೆಸರಿಗೆ ನೆಪಮಾತ್ರಕ್ಕೆ ಪಟ್ಟೆ ಇರುವಂತೆಯೂ ಈ ಜಮೀನನ್ನ ತಾನೇ ಅನುಭವಿಸಿ ಕಂದಾಯ ಕಟ್ಟುತ್ತಿರುವದ್ದರಿಂದ ತನಿಗೆ ಪರಿಹಾರದ್ರವ್ಯ ಕೊಡಿಸಬೇಕೆಂತ ಷೇಕ್ ಹೈದರ್ ತಕರಾರು ಪಡ್ಡಿರುತ್ತಾನೆ
	348-562	ವೆಂಕಟಾಚಾರಿ	271 0 0	ಈ ಪೈಕಿ 1 ಸರ್ವೆ ನಂಬರಿನ ಹಣ ತನಿಗೆ ಬರಬೇಕೆಂತ ಕದಿರಪ್ಪ ತಕರಾರು ಪಡ್ಡಿರುತ್ತಾನೆ.
	364-417	ಕವಲಗಿ ನರಸಿಂಹಾಚಾರ್ ..	39 0 0	ಈ ಜಮೀನನ್ನ ಕಂದಾಯಕ್ಕೆ ಮಾಡಿಕೊಂಡಿರುವಂತೆಯೂ ಜಮೀನ್ ತನ್ನ ಸ್ವಾಧೀನದಲ್ಲಿರುತ್ತೆ ಹಣ ತನಿಗೆ ಬರಬೇಕೆಂತ ಕಂಟ್ರಾಕ್ಟರ್ ಗುಂಡೂರಾವು ತಕರಾರು ತಂದಿಧಾರೆ.
	366-419	ಅಣ್ಣಯ್ಯಾಚಾರು, ಲಾಲ್‌ಖಾನ್ ಮತ್ತು ಅಲ್ಲಿಹುಸೇನ್‌ಖಾನ್	37 2 0	ಈ ಜಮೀನನ್ನ ಲಾಲ್‌ಖಾನ್ ಮತ್ತು ಅಲ್ಲಿಹುಸೇನ್‌ಖಾನ್ ಖರೀದಿಗೆ ಪಡದಿರುವಂತೆಯೂ ಅಲ್ಲಿಹುಸೇನ್‌ಖಾನ್ ಬಾಬತು ಜಮೀನನ್ನ ಭೋಗ್ಯ ಮಾಡಿಕೊಂಡು ಇರುವಂತೆಯೂ ಆನೆಕಲ ಶ್ರೀನಿವಾಸಾಚಾರ್ರಿಂದ ತಕರಾರು ಬಂದಿರುತ್ತೆ.
	368-421	ಶಿವಶಾಸ್ತ್ರಿ ಮತ್ತು ಮೈಕಮ್ಮ	32 10 0	ಈ ಜಮೀನನ್ನ ಖಂದಗೆ ಪಡದು ಅನುಭವಿಸುತ್ತಿರುವಂತ ಸಂಗನಹಳ್ಳಿ ಸುಬ್ಬರಾಮಪ್ಪ ತನಿಗೆ ಹಣ ಬರಬೇಕೆಂತ ಹೇಳುತ್ತಾನೆ. ಈ ಜಮೀನ್ ಭೋಗ್ಯ ಮಾಡಿಕೊಂಡಿರುವಂತೆಯೂ ಈ ಬಾಬತು ಪರಿಹಾರದ್ರವ್ಯ ತನಿಗೆ ಬರಬೇಕೆಂತ ಕುಸುವನ ರಂಗಯ್ಯ ತಕರಾರು ತಂದಿಧಾನೆ.
	376-432	ರಾಘವೇಂದ್ರಾಚಾರ್ ಮತ್ತು ರಾಮಾಚಾರ್	54 0 0	
	380-386	ಮನ್ನಾರ ಗೋವಿಂದಾಚಾರಿ ಮತ್ತು ಕ್ರಿಷ್ಣಾಚಾರ್	9 0 0	
	381-387	ಖೂಬಿಕೋಟೆ ಗೋವಿಂದಾಚಾರು	34 14 0	
	384-393	ಕಾರಿ ಶ್ಯಾನುಭೋಗರಾಮರಾವು	199 0 0	ರಾಮರಾವು ಫವತಿ, ಈತನ ಹೆಂಡತಿ ನಾಗಮ್ಮಬಾಯಿಗೆ 18ರಲ್ಲಿ ಒಂದು ಹಿಸ್ಸೆ ಜಮೀನ್ ಬಾಬತು ಹಣ ಕೊಡಬೇಕೆಂತಲು ಬಾಕೀ ಹಣ ಧಾರ್ವಾಡಾ ಡಿಸ್ಟ್ರಿಕ್ಟಿನಲ್ಲಿ ಡೆಪ್ಯುಟಿ ಕಲೆಕ್ಟರ್ ಕೆಲಸದಲ್ಲಿ ರಾಘವೇಂದ್ರರಾವ್ ಅವರಿಗೆ ಸಲ್ಲಬೇಕೆಂತ ಕದಿರಪ್ಪ ತಕರಾರು ತಂದಿರುತ್ತಾನೆ.
		ಜುಮ್ಲಾ	1,143 1 4	
[illegible]	5	ರಾಜಾರಾವು ...	2 4 0	ಡಿಟೋ
		ಜುಮ್ಲಾ	2 4 0	
[illegible]	2	ನೊಳಪಲ್ಲಿ ಗಂಗ ..	17 0 0	
			17 0 0	
		ಒಟ್ಟು ಜುಮ್ಲಾ	1,462 5 4	

ತಾರೀಖು 13ನೆ ಮೇ 1904, ಕ್ಯಾಂಪ್ ಮುಳಬಾಗಲ್.

ಇದರಿಂದ ಬವರಿಂಗ್‌ಪ್ಯಾಟೆ ತಾಲ್ಲೂಕು ಬೇತಮಂಗಲ ದೊಡ್ಡ ಕೆರೆ ಕೆಳಗಿನ ತರಿ ಮತ್ತು ಬಾಗಾಯತು ಕಂದಾಯದಾರರಾದ ಈ ಕೆಳಗೆ ಷರಾಯಿಸ್ಪಾಡಿರುವ ಲಿಸ್ಟಿನಲ್ಲಿ ಕಂಡ ಜನರಿಗೆ ತಿಳಿಯಪಡಿಸುವದೇನೆಂದರೆ :—

ಕೋಲಾರ ಗೋಲ್ಡ್ ಫೀಲ್ಡ್ಸಿಗೆ ನೀರನ್ನು ಸರಬರಾಯಿ ಮಾಡತಕ್ಕ ಸಂದರ್ಭದಲ್ಲಿ ಬೇತಮಂಗಲ ದೊಡ್ಡಕೆರೆ ಮತ್ತು ಅದರ ಬಾಬತು ನಾಲೆಗಳ ನೀರನ್ನು ಸಾಗುವಳಿಗೆ ಬಿಡದೆ ಸರ್ಕಾರದವರು ವುಳಿಸಿಕೊಂಡಿರುವದ್ದರಿಂದ ನಿಮ್ಮ ಬಾಬತು ತರಿ ಮತ್ತು ಬಾಗಾಯತು ಜಮೀನುಗಳಿಗೆ ಕಂಪೆನ್‌ಸೇಷನ್ ತರಾಯಿಸತಕ್ಕ ಬಗ್ಗೆ ಅಸಿಸ್ಟೆಂಟ್ ಸ್ಪೆಷಲ್ ಸೆಟಲ್‌ಮೆಂಟ್ ಆಫೀಸರವರ ರೂಬರೂ ಹಾಜರಾಗಲು ದೀರ್ಘದ ತಾರೀಖುಗಳನ್ನಿ ನಿಮ್ಮಗಳಿಗೆ ನೋಟಿಸ್ ಕೊಟ್ಟಿದ್ದಾಗ್ಯೂ ಮತ್ತು ನಿಮಗೆ ಸಲ್ಲಬೇಕಾದ ಹಣವನ್ನು ಪಡಿಯಲ್ಕು ನಮ್ಮ ರೂಬರೂ ಹಾಜರಾಗತಕ್ಕ ಭಾಗದಲ್ಲಿ 15—3—04 ಮೈಸೂರು ಗೆಜೆಟ್ಟಿನಲ್ಲಿ ಮತ್ತು 7—4—04ನೆ ತಾರೀಖಿನಲ್ಲಿ ಅಲಾಹಿದ ನೋಟಿಸನ್ನು ಷರಾಯಿಸ್ಪಾಡಿಸಿದ್ದಾಗ್ಯೂ ನೀವುಗಳು ಇದುವರಿಗೆ ಹಾಜರಾಗಿ ಹಣವನ್ನು ಪಡೆದವರಾಗಲಿಲ್ಲ.

ಈಗಲೂ ಈ ನೋಟಿಸ್ ಕಂಡ ಲಾಗಾಯಿತು ಒಂದು ತಿಂಗಳವಳಗಾಗಿ ನಮ್ಮ ರೂಬರೂ ನೀವೇ ಖುದ್ದಾಗಿ ಆಗಲಿ ಅಥವಾ ನಿಮ್ಮ ತರಫ್ ಅಧಿಕಾರ ಪಡೆದ ಏಜೆಂಟ್ ಮೂಲಕವಾಗಿಯಾಗಲಿ ಹಾಜರಾಗಿ ನೀವು ಹಣವನ್ನು ಪಡಿಯಬೇಕು. ತಪ್ಪಿದರೆ ಯುಕ್ತಾನುಸಾರ ಫೈಸಲ್ಮಾಡಲ್ಪಡುತ್ತೆ. ನಂತರ ನೀವು ತರಬಹುದಾದ ಯಾವ ತಕರಾರನ್ನೂ ಅಂಗೀಕರಿಸುವದಿಲ್ಲ. ತಿಳಿಯುವದು.

ಯಾದಾಸ್ತು ಕೋಲಾರ ಗೋಲ್ಡ್ ಫೀಲ್ಡ್ಸಿಗೆ ನೀರನ್ನು ಸರಬರಾಯಿ ಮಾಡತಕ್ಕ ಸಂದರ್ಭದಲ್ಲಿ ಕಾ॥ ಸ್ವಾಯಾನೆ ಅಮಾನತ್ತು ಮಾಡಿದ ಬವರಿಂಗಪೇಟೆ ತಾಲ್ಲೂಕು ಬೇತಮಂಗಲ ಹೋಬಳಿ ಬೇತಮಂಗಲ ಗ್ರಾಮದ ದೊಡ್ಡಕೆರೆ ಕೆಳಗಿನ ತರಿ ಮತ್ತು ಬಾಗಾಯಿತು ಜಮೀನುಗಳ ಪರಿಹಾರದ್ರವ್ಯವನ್ನು ಪಡಿಯಲು ಇದುವರಿಗೆ ಅನೇಕ ದಫೆ ನೋಟೀಸು ಮೂಲಕ ಎಚ್ಚರಿಸಿದ್ದಾಗ್ಯೂ ಹಾಜರಾಗದೆ ಇರತಕ್ಕ ಜನಗಳ ತಖ್ತೆ.

ಗ್ರಾಮದ ಹೆಸರು.	ಖಾತೆ ನಂಬರು.	ಖಾತೆದಾರ್ರು ಅಥವಾ ಅನುಭವದಾರನ ಹೆಸರು.	ಬಾಪತಿ ಆಗಬೇಕಾದ ಮೊಬಲಗು. ರೂ.	ಆ.	ಪೈ.	ಷರಾ.
ಬೇತಮಂಗಲ.	25—26	ಪುಟ್ಟಗಾ ..	8	12	0	ಮಾಲೂರು ತಾಲ್ಲೂಕಿನಲ್ಲಿ ವಾಸವಾಗಿರುವಂತೆ ತಿಳಿಬರುತ್ತೆ.
	26—28	ದ್ಯುಗಾ ಬಿನ್ ದಾಸರಾಮ.	7	14	0	ಡಿಟೋ
	29—31	ವಲಗಮಾದಿ ವಂಕಟಾಚಾರಿ	17	8	0	ದಾಸರಹೊಸಳ್ಳಿ ಹೋಬಳಿ ವಲಗಮಾದಿ ಗ್ರಾಮದಲ್ಲಿ ವಾಸವಾಗಿರುವಂತೆ ತಿಳಿಯುಬರುತ್ತೆ.
	84—88	ಚಂಬಡಿಮಾಪ ಭವತಿ, ಪಂಡತಿ ಮುತ್ತಕ್ಕಾ.	9	0	0	ಬೆಂಗಳೂರು ತಾಲ್ಲೂಕಿನಲ್ಲಿ ವಾಸಮಾಡುತ್ತಾ ಇರುವಂತೆ ತಿಳಿಯುಬರುತ್ತೆ.
	100—104	ಸೈದುಗಾಸ್	13	8	0	ಬವರಿಂಗುಪ್ಯಾಟೆ ಹೋಬಳಿ ಸೂಲಿಕುಂಟೇಲಿ ವಾಸವಾಗಿರುವಂತೆ ತಿಳಿಯುಬರುತ್ತೆ.
	113—118	ನಸುರೊದ್ದೀನ್ ..	67	8	0	ಇವ, ಮಾಲೂರು ತಾಲ್ಲೂಕಿನಲ್ಲಿರುವಂತೆ ತಿಳಿಯುಬರುತ್ತೆ.
	176—182	ಅರ್ಲಕುಂಟೆ ವೆಂಕಟಸ್ವಾಮಿ.	83	4	0	ಮದರಾಸಿನಲ್ಲಿ ವಾಸವಾಗಿರುವಂತೆ ತಿಳಿಬರುತ್ತೆ.
	224—232	ಛತ್ರ ಸುಬ್ಬಣ್ಣ ಬಿನ್ ಹನುಮಪ್ಪ.	65	0	0	ಮುಳಬಾಗಲ್ ತಾಲ್ಲೂಕಿನಲ್ಲಿರುವಂತೆ ತಿಳಿಯುಬರುತ್ತೆ.
	330—368	ಪಟೇಲ ವೆಂಕಟೇಗೌಡ	9	0	0	ಬೇತಮಂಗಲದಲ್ಲಿ ವಾಸವಾಗಿದ್ದಾನೆ.
	363—416	ಶೇಷಾಚಾರ್ ...	25	0	0	ಕ್ಯಾಸಂಬಳ್ಳಿ ಹೋಬಳಿ ಕರಡಗೂರಲ್ಲಿ ವಾಸವಾಗಿರುತ್ತಾರೆ.
	378—384	ದೇಶಮುಖಿ ಶೇಷಗಿರಿರಾವ್..	145	2	0	ಮುಳಬಾಗಲ್ ತಾಲ್ಲೂಕಿನಲ್ಲಿ ವಾಸವಾಗಿರುವಂತೆ ತಿಳಿಯುಬರುತ್ತೆ.
ದೊಡ್ಡಕಾರಿ.	1	ವೆಂಕಟ ..	3	0	0	ದೊಡ್ಡಕಾರಿ ಗ್ರಾಮದಲ್ಲಿ ವಾಸವಾಗಿರುವಂತೆ ತಿಳಿಬರುತ್ತೆ.
		ಜುಮ್ಲಾ .	3	0	0	
ಕೊಳೂರು.	2	ಚೂರಕತ್ತಿ ಪಾಪ .	17	8	0	ಕೊಳೂರು ಗ್ರಾಮದಲ್ಲಿ ವಾಸವಾಗಿರುವಂತೆ ತಿಳಿಯುಬರುತ್ತೆ.
		ಜುಮ್ಲಾ .	17	8	0	
		ಒಟ್ಟು ಜುಮ್ಲಾ	470	0	0	

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಡೆಪ್ಯುಟಿ ಕಮಿಷನರ್.

849

ಹಾಸನ ಡಿಸ್ಟ್ರಿಕ್ಟ್.

ಇಸ್ತಿಹಾರನಾಮೆ ಗೋಷ್ವಾರೆ.

[illegible] ತಾರೀಖು 30ನೆ ಏಪ್ರೆಲ್ 1904ನೆ ಮಾರ್ಕ್ [illegible]

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನದ ಡಿಸ್ಟ್ರಿಕ್ಟ್ ಮಂಜರಾಬಾದು ತಾಲ್ಲೂಕಿನಲ್ಲಿರುವ ಮಾರ್ನಹಳ್ಳಿ ಟೋಲ್‌ಗೇಟಿನಲ್ಲಿ 1904ನೆ ಇಸವಿ ಜುಲೈ ಗುರ್ರೆ ತಾರೀಖು ಲಾಗಾಯಿತು 1905ನೆ ಇಸವಿ ಜೂನ್ 30ರ ವರಿಗೆ ಹನ್ನೆರಡು ತಿಂಗಳ ಕಾಲದಲ್ಲಿ ಸುಂಕ ವಸೂಲ್ಮಾಡುವ ಬಾಬನ್ನು ಸರ್ 1904ನೆ ಇಸವಿ ಜೂನ್ ಮಾಹೆ [illegible]ನೆ ತಾರೀಖು ಸೋಮವಾರ ಮಧ್ಯಾನ್ಹ 12 ಘಂಟೆಗೆ ಸಕಲೇಶಪುರದ ಮೊಕ್ಕಾಂನಲ್ಲಿ ತಾಲ್ಲೂಕು ಕಚೇರಿಬಳಿ ಹಾಸನದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಅಥವಾ ಅವರಿಂದ ಅಧಿಕಾರ ಹೊಂದಿದ ಇತರ ಆಫೀಸರವರ ರೂಬರೂಬು ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸತಕ್ಕ [illegible]

ಹರಾಜು ಷರತ್ತು ತಪಶೀಲುಗಳನ್ನು 1904 ಇಸವಿ ಮೇ ತಿಂಗಳು 12ನೆ ತಾರೀಖಿನ ಮೈಸೂರು ಗೆಜೆಟ್ಟು IIನೆ ಭಾಗ 289ನೆ ಪುಟದಲ್ಲಿ ಪ್ರಾಯಿಷ್ ಮಾಡಿರುತ್ತೆ.

ಇಸ್ತಿಹಾರನಾಮೆ ಗೋಷ್ವಾರೆ.

ತಾರೀಖು 30ನೆ ಏಪ್ರೆಲ್ 1904.

ಹಾಸನದ ಡಿಸ್ಟ್ರಿಕ್ಟ್ ಬೇಲೂರು ತಾಲ್ಲೂಕ್ ಬೇಲೂರು ಸೇತುವೆ ಮೇಲೆ 1904ನೆ ಜುಲೈ ಗುರ್ರೆ ಲಗಾಯಿತು 1905ನೆ ಜೂನ್ ಆಖೈರು ವರಿವಿಗೆ ಹನ್ನೆರಡು ತಿಂಗಳು ಕಾಲ ಸುಂಕ ವಸೂಲ್ಮಾಡುವ ಹಕ್ಕನ್ನು ಬೇಲೂರು ತಾಲ್ಲೂಕು ಕಚೇರಿ ನಲ್ಲಿ 1904ನೆ ಇಸವಿ ಜೂನ್ 13ನೆ ತಾರೀಖು ಸೋಮವಾರ ಬವಿ 12 ಘಂಟೆಗೆ ಹಾಸನದ ಡಿ|| ಡೆಪ್ಯುಟಿ ಕಮಿಷನರ್ ಸಾಹೇಬರವರ ಅಥವಾ ಅವರಿಂದ ಅಧಿಕಾರ ಹೊಂದಿದ ಇತರ ಆಫೀಸರವರ ರೂಬರೂಬು ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಮತ್ತು ಹರಾಜು ತಾರೀಖಿನ ವರಿಗೆ ಕ್ರಮವಾಗಿ ಬರುವ ಬರಹಮೂಲಕವಾದ ದರಖಾಸ್ತುಗಳನ್ನು ಬೇಲೂರು ತಾಲ್ಲೂಕು ಅಮಲ್ದಾರು ಅಂಗೀಕರಿಸುತ್ತಾರೆ.

ಹರಾಜು ಷರತ್ತುಗಳು ಮತ್ತು ಇತರ ತಪಶೀಲುಗಳನ್ನು 1904ನೆ ಇಸವಿ ಮೇ ತಿಂಗಳು 12ನೆ ತಾರೀಖಿನ ಮೈಸೂರ ಗೆಜೆಟ್ಟು IIನೆ ಭಾಗ 291ನೆ ಪುಟದಲ್ಲಿ ಪ್ರಾಯಿಷ್ ಮಾಡಿರುತ್ತೆ.

ಪಿ. ಆರ್. ಡಬ್ಲ್ಯೂ. ವೆದರಾಲ್,
ಆ|| ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಇಸ್ತಿಹಾರನಾಮೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ— ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ತಾಲ್ಲೂಕು ಜೋಡಿ ಹೆಜ್ಜೆಗೇನಹಳ್ಳಿ ಗ್ರಾಮದಲ್ಲಿ ಸುಬ್ಬಣ್ಣಾಚಾರ್ ಅರ್ಧ ಹಿಸ್ಸೆ ಜಮೀನಿನಲ್ಲಿ ಅಣ್ಣಿಗಿರಿ ಶಾಮರಾವು ಮತ್ತು ಭೀಮರಾವು ಇವರಿಗೆ ಇರುವ ಹಕ್ಕು ಬಾಧ್ಯತೆ ಪಟ್ಟಿಗೆ ಸದರೀ ಶಾಮರಾವು ಮತ್ತು ಭೀಮರಾಯರಿಂದ ಸರ್ಕಾರಿಗೆ ಗ್ರಾಮಕ್ಕೆ ಸರ್ 1901—02, 1902—03 ಮತ್ತು 1903—04ನೆ ಸಾಲಿನ ಬಾಬತು ಬರಬೇಕಾದ ಕಂದಾಯ ಬಾಕಿ ಬಗ್ಗೆ ಚಿಕ್ಕಮಗಳೂರು ತಾಲ್ಲೂಕು ಮರ್ಲೆ ಹೋಬಳಿ ಹೆಜ್ಜೆಗೇನಹಳ್ಳಿ ಅರ್ಧ ಜೋಡಿ ಗ್ರಾಮವನ್ನು ಹಜರತ್ ಕಡೂರು ಡಿಸ್ಟ್ರಿಕ್ಟ್ ಡೆ|| ಕ|| ಸಾಹೇಬರವರ ರೂಬರೂಬ್ ಯಾಗಲಿ ಯಾ ಅ|| ಕ|| ಸಾಹೇಬರವರ ರೂಬರೂಬ್ ಯಾಗಲಿ ಸರ್ 1904ನೆ ಇಸವಿ ಜುಲೈ ತಾರೀಖು 4ನೆ ಸೋಮವಾರ ದಿವಸ ಬವಿ 11 ಘಂಟೆಗೆ ಚಿಕ್ಕಮಗಳೂರು ಮೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ.

ಜಾಸ್ತಿ ತಪಶೀಲು ಹಿಂದಿನ ವಾರದ ಗೆಜೆಟಿನಲ್ಲಿ ನಮೂದಿರುವದು ನೋಡಲಾಗಿ ತಿಳಿಯಲಾಗುತ್ತೆ.

ಪೀಟರ್ಸ್ ಜಾರ್ಜ್ ಡಿಸೋಜ,
ಫಾರ್ ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟ್ ಚಿಂತಾಮಣಿ ಡಿವಿಜನ್ ಅಸಿಸ್ಟೆಂಟ್ ಕಮಿಷನರು ಮತ್ತು ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟು.

ಇಸ್ತಿಹಾರು.

ಇದರಿಂದ ಸಮಸ್ತ ಜನಗಳಿಗು ತಿಳಿಯಪಡಿಸುವದೇನಂದರೆ:—

ಇರ್ರೇಬಿಯಲ್ಲಿ ಕಂಡ ಮಾಲುಗಳು ಕಳವಾದ ಮಾಲುಗಳೆಂದು ನಮ್ಮ ಕೋರ್ಟು ಚಾಲ್ತಿ ಸಾಲ್ 1903–4ನೆ ಕ್ರಿಮಿನಲ್ 18ನೆ

ನಂಬರ್ 46. ಒಂದು ಸರಿಗೆ ಕೆಂಪು ರುಮಾಲು. ,, 47. ಒಂದು ಬುಗಡಿ ಅಂಚಿನ ಪಂಚೆ. ,, 48. ಒಂದು ಹಸರು ಶೀರೆ. ,, 49. ಒಂದು ಕರಿ ಶೀರೆ. ,, 50. ಒಂದು ಪೈಟ್ನ ಶೀರೆ.	ಕೋಲಾರ ಡಿಸ್ಟ್ರಿಕ್ಟ್ ಮುಳಬಾಗಲ ತಾಲ್ಲೂಕು ನಂಗ್ಲಿ ಗ್ರಾಮದ ಬಳಿ ತೆಂಗಿನ ತೋಟದಲ್ಲಿ ಸಿಕ್ಕಿದ್ದಾಗಿರುತ್ತೆ.	ನಂಬರ್ ಮೊಕದ್ದಮೆಯಲ್ಲಿ ಹಾಜರ್ಪಡಿಸಲ್ಪಟ್ಟಿರತಕ್ಕದ್ದು ವಾರಸುದಾರರಿಲ್ಲದೆ ಕೋರ್ಟಿನಲ್ಲಿ ಅಮಾನತ್ತಿನಲ್ಲಿ ಇಟ್ಟು ಇರುತ್ತೆ. ಈ ಮಾಲುಗಳಿಗೆ ಹಕ್ಕುದಾರತಕ್ಕವರು ಈ ತಾರೀಖು ಲಾಗಾಯಿತು 6 (ಆರು) ತಿಂಗಳ ವಳಗಾಗಿ ಈ

ಕೋರ್ಟು ರೂಬರೂಬು ಖುದ್ದು ಹಾಜರಾಗಿ ತಮ್ಮಗಳ ಹಕ್ಕನ್ನ ಸ್ಥಿರಪಡಿಸಿ ಮಾಲುಗಳನ್ನ ಪಡಿಯತಕ್ಕದ್ದು.

ಮೇಲ್ಕಂಡ ವಾಯಿದೆ ಗತಿಸಿದ ನಂತರ ಡಿಟೋ ಮಾಲುಗಳನ್ನ ಹರಾಜು ಮೂಲಕ ವಿಲೇವಾರಿ ಮಾಡಿ ಹರಾಜು ಮೊಬಲಗನ್ನ ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಡುತ್ತೆ.

ಕೆ. ಆರ್. ಶ್ರೀನಿವಾಸೈಯ್ಯಂಗಾರ್,
ಅಸಿಸ್ಟೆಂಟ್ ಕಮ್ಮಿಷನರ್ ಮತ್ತು ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್.

ಬೆಂಗಳೂರು ಸೆಂಟ್ರಲ್ ಜೈಲ್.

ತಾರೀಖು 15ನೆ ಮೇ 1904.

ಸರ್1904ನೆ ಇಸವಿ ಜುಲೈ 1ರ ಲಾಗಾಯತು ಸರ್1905ನೆ ಇಸವಿ ಜೂನ್ 30ರ ವರಿವಿಗೆ, ಆ ಎರಡು ದಿವಸಗಳೂ ಸೇರಿ, 12 ತಿಂಗಳ ತನಕ, ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿಗಳ ಉಪಯೋಗಕ್ಕಾಗಿ ಈ ಕೆಳಗೆ ನಮೂದಿಸುವ ಸರಕುಗಳನ್ನು ಸರಬರಾಯಿ ಮಾಡಲು ಕಂಟ್ರಾಕ್ಟು ತೆಗದುಕೊಳ್ಳುವದಕ್ಕಾಗಿ, ಕವರಿನಲ್ಲಿ ಹಾಕಿ ಮೊಹರು ಮಾಡಿದ ದರಖಾಸ್ತುಗಳನ್ನು ಸರ್1904ನೆ ಇಸವಿ ಜೂನ್ 15ನೆ ಬುಧವಾರ ಹಗಲು 10 ಘಂಟೆಯು ವರಿಗೆ, ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರು ತೆಗದುಕೊಳ್ಳುವರೆಂದು ಇದರಿಂದ ಫೈಯಿಷ್ ಮಾಡಿಧೆ.

2. ಮೇಲೆ ಕಂಡ ತಾರೀಖಾದ ತರುವಾಯ ದರಖಾಸ್ತುಗಳನ್ನು ಹಿಡಿಯುವದಿಲ್ಲ.

3. ದರಖಾಸ್ತು ಕವರಿನ ಮೇಲ್‌ಭಾಗದಲ್ಲಿ ಬರದಿರಬೇಕಾದ ಮೇಲ್ವಿಳಾಸವೇನಂದರೆ,—

"I. ಕುರೀ ಮಾಂಸದ ಸರಬರಾಯಿ ದರಖಾಸ್ತು"

"II. ಸವದೆ ಸರಬರಾಯಿ ದರಖಾಸ್ತು"

4. ಕುರೀ ಮಾಂಸದ ಸರಬರಾಯಿಗೆ 75 ರೂಪಾಯಿ, ಸವದೇ ಸರಬರಾಯಿಗೆ 50 ರೂಪಾಯಿ, ಈ ಮೇರೆ ನಗದಾಗಿಯಾಗಲಿ ಕರೆನ್ಸೀ ನೋಟಿನ ಮೂಲಕವಾಗಿಯಾಗಲಿ ಠೇವಣಾತಿಯನ್ನು ದರಖಾಸ್ತಿನ ಸಂಗಡ ಹಾಜರ್ಮಾಡಿದ ಹೊರತು, ದರಖಾಸ್ತುಗಳನ್ನು ಹಿಡಿಯುವದಿಲ್ಲ.

5. ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಮೇಲೆ ನಮೂದಾದ ತಾರೀಖಿನಲ್ಲಿ ಆ ಕಾಲದೊಳು ಹಾಜರಿರುವುದಕ್ಕೆ ಇಷ್ಟವುಳ್ಳಂಥಾ ದರಖಾಸ್ತುದಾರರ ರೂಬರೂ ಸದರೀ ದರಖಾಸ್ತುಗಳನ್ನು ತಮ್ಮ ಆಫೀಸಿನಲ್ಲಿ ಒಡೆಯುವರು.

6. ಈ ಕೆಳಗೆ ನಮೂದಿಸುವ ಪದಾರ್ಥಗಳನ್ನು ಒಂದು ರೂಪಾಯಿಗೆ ಇಷ್ಟು ಪೌಂಡು ತೂಕದ ಮೇರೆ ಸರಬರಾಯಿ ಮಾಡಲಾದೀತೆಂದು ಎಲ್ಲಾ ದರಖಾಸ್ತುಗಳಲ್ಲಿಯೂ ದರವು ನಮೂದಾಗಿರತಕ್ಕದ್ದು. ಮತ್ತು ಸರಬರಾಯಿ ಮಾಡತಕ್ಕ ಪದಾರ್ಥಗಳೆಲ್ಲಾ ಒಳ್ಳೇದಾಗಿಯೂ ಸೂಪರಿಂಟೆಂಡೆಂಟರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

ಸಂವತ್ಸರದ ಅಂದಾಜಾ ಖರ್ಚು.

I. ಮೂಳೆ ಇಲ್ಲದ ಮಾಂಸ—20,000 ಪೌಂಡುಗಳು.

II. ಒಣಗಿದ ಸವದೆ—ಕೈದಿಗಳ ಕೈಲಿ ಕಡಿಸತಕ್ಕದ್ದು, ತುಂಡುಗಳ ಪ್ರಮಾಣ ಒಂದು ಮೊಳ ಉದ್ದವೂ $1\frac{1}{2}$ ಲಾಗಾಯತು 3 ಅಂಗುಲ ಘಾತ್ರವಾಗಿಯೂ ಇರತಕ್ಕದ್ದು 300,000 ಪೌಂಡುಗಳು.

ಪದಾರ್ಥಗಳು ಮೇಲೆ ಕಂಡ ಪರಿಮಾಣದ ಮೇಲೆ ಇಷ್ಟಿಷ್ಟೆ ಆಗಬೇಕೆಂದು ಖಾತರಿ ಯಾವದೂ ದೊರೆಯುವದಿಲ್ಲ.

7. ಸೂಪರಿಂಟೆಂಡೆಂಟರವರು ಯಾವ ದರಖಾಸ್ತನ್ನೇ ಆಗಲಿ ಯಾವ ಕಾರಣವನ್ನೂ ಕೊಡದೆ ತಿರಸ್ಕರಿಸುವ ಹಕ್ಕನ್ನು ವುಳಿಸಿಕೊಂಡಿಧಾರೆ.

8. ಯಾರ ದರಖಾಸ್ತನ್ನು ಮಂಜೂರ್ಮಾಡಿಕೊಳ್ಳುತ್ತಾರೆಯೋ ಅಂಥಾ ದರಖಾಸ್ತುದಾರರು ಹಾಜರ್ಮಾಡಿದ ಠೇವಣಿ ಮೊಬಲಗು ಇಟ್ಟುಕೊಳ್ಳಲ್ಪಡುವದು. ಮತ್ತು ಅವರ ದರಖಾಸ್ತು ಮಂಜೂರಾಗಿಧೆಯೆಂದು ಅವರಿಗೆ ತಿಳಿಯಪಡಿಸಿದ ಒಂದು ವಾರದೊಳಗಾಗಿ ಅವರು ಕಂಟ್ರಾಕ್ಟು ಕರಾರನ್ನು ಬರದುಕೊಡದೇ ಹೋದರೂ ಸರಿಯೇ, ಅಥವಾ ಕುರೀ ಮಾಂಸಕ್ಕೆ 150 ರೂಪಾಯಿ, ಸವದೆಗೆ 100, ಈ ಮೇರೆ ನಗದಾಗಿಯಾಗಲಿ ಸರ್ಕಾರೀ ಬಾಂಡುಗಳ ಮೂಲಕವಾಗಿಯಾಗಲಿ ಸೆಕ್ಯೂರಿಟಿಯನ್ನು ಕೊಡದೆ ಇದ್ದರೂ ಸರಿಯೆ ಮೇಲೆ ಕಂಡ ಠೇವಣಿ ಮೊಬಲಗು ಸಿಪಾಯಿ ಜಮೆಯಾಗಿ ತೆಗದುಕೊಳ್ಳಲಾದೀತು.

9. ಕಂಟ್ರಾಕ್ಟರು ಯಾ ಇಜಾರೆದಾರರಿಗೆ ನಗದು ಹಣ ಮುಂಗಡವಾಗಿ ಪಾವತಿಯಾಗಲಾರದು. ಸಾಮಾನುಗಳನ್ನು ಸರಬರಾಯಿ ಮಾಡಿದ್ದಕ್ಕಾಗಿ ಹಣವನ್ನು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಪ್ರತಿ ತಿಂಗಳ ಗುರ್ರೇ ತಾರೀಖಾದ ತರುವಾಯ ಸಾಧ್ಯವಾದ ಮಟ್ಟಿಗೂ ಜಾಗ್ರತೆಯಲ್ಲಿ ಪಾವತಿ ಮಾಡುವರು.

10. ಸ್ಟೋರ್ ರೂಂ ಎಂಬ ಒಂದು ಉಗ್ರಾಣವನ್ನು ಸವದೇ ಇಜಾರೆದಾರರ ವಶಕ್ಕೆ ಕೊಡಲಾಗುತ್ತು; ಅತನು ಅದರಲ್ಲಿ ಸವುದೆಯನ್ನು ಇಟ್ಟುಕೊಳ್ಳತಕ್ಕದ್ದು. ಮತ್ತು ಅದರಲ್ಲಿ ಯಾವಾಗ್ಯೂ ಒಂದು ತಿಂಗಳಿಗೆ ಕೊರತೆ ಇಲ್ಲದಂತೆ ಸರಬರಾಯಿಯನ್ನು ಇಟ್ಟಿರಬೇಕು. ಕುರೀ ಮಾಂಸವು ಪ್ರತಿ ದಿನವೂ ಬೆಳಿಗ್ಗೆ 7 ಘಂಟೆ ಒಳಗಾಗಿ ಜೈಲ್‌ನಲ್ಲಿ ಸಿದ್ಧಪಡಿಸತಕ್ಕದ್ದು.

11. ಈ ಕಂಟ್ರಾಕ್ಟನ್ನು ಷಿಕ್ಮಿ ಇಜಾರೆಯಾಗಿ ಕೊಡಕೂಡದು.

12. ಕಂಟ್ರಾಕ್ಟು ಷರತ್ತಿಗೆ ಯಿನಾದರೂ ವಿರುದ್ಧವಾಗಿ ನಡೆದರೂ ಸರಿಯೆ, ಗುಣದಲ್ಲಿ ಕಡಮೆಯಾಗಿರತಕ್ಕ ಪದಾರ್ಥಗಳನ್ನು ಸರಬರಾಯಿ ಮಾಡಿದರೂ ಸರಿಯೆ ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಮುನಾಸಬು ಆರತು 50 ರೂಪಾಯಿಗಳಿಗೆ ಹೆಚ್ಚದೆ ಜುರ್ಮಾನೆಯನ್ನು ವಸೂಲ್ಮಾಡಬಹುದು; ಪದೇ ಪದೇ ಕರಾರಿಗೆ ತಪ್ಪಿಹೋದರೆ ಕಂಟ್ರಾಕ್ಟನ್ನು ರದ್ದುಮಾಡಿ ಸೆಕ್ಯೂರಿಟಿಯನ್ನು ಸರ್ಕಾರಕ್ಕೆ ಮುಟ್ಟುಗೋಲಾಗಿ ತೆಗದುಕೊಳ್ಳಬಹುದು.

13. ಕಂಟ್ರಾಕ್ಟು ಕರಾರಿಗೆ ವಿರೋಧವಾಗಿ ನಡೆವ ಸಂಗತಿಗಳೆಲ್ಲಾ ಸದರೀ ಸೆಂಟ್ರಲ್ ಜೈಲ್ ಸೂಪರ್ರಿಂಟೆಂಡೆಂಟರ ಫೈಸಲೇ ಆಖೈರ್ ಫೈಸಲಾಗಿರತಕ್ಕದ್ದು.

14. ಮತ್ತೆ ಯಾವ ಸಂಗತಿ ಬೇಕಾಗಿದ್ದರೂ ಸೂಪರ್ರಿಂಟೆಂಡೆಂಟರ ಆಫೀಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

15. ಈ ಕಂಟ್ರಾಕ್ಟುಗಳು ಮೈಸೂರ ಜೈಲ್ ಇನ್ಸ್ಪೆಕ್ಟರ್ ಜನರಲ್‌ರವರ ಮಂಜೂರಾತಿಗೆ ಒಳಪಟ್ಟು ಇರುವವು.

16. ಕಂಟ್ರಾಕ್ಟುದಾರರು ಇಜಾರೆಯನ್ನು ತೆಗೆದುಕೊಂಡ ತರುವಾಯ ತಮ್ಮ ಕರಾರಿನಂತೆ ನಡೆಯಲು ಇಷ್ಟಪಡದ್ದರೆ ಒಂದು ತಿಂಗಳಿಗೆ ಮುಂಚಿತವಾಗಿಯೇ ನೋಟಿಸ್ ಕೊಡಬೇಕು, ಮತ್ತು ಅವರ ಸೆಕ್ಯೂರಿಟಿ ಹಣವನ್ನು ಸರ್ಕಾರಕ್ಕೆ ಬಿಟ್ಟುಬಿಡತಕ್ಕದ್ದು.

17. ಇಜಾರೆದಾರರು ತಪ್ಪಿಹೋಗುವದರಿಂದ ಸರ್ಕಾರಕ್ಕೆ ಆಗುವ ನಷ್ಟವನ್ನೂ ಅಥವಾ ಕಂಟ್ರಾಕ್ಟಿನಲ್ಲಿ ನಮೂದಾಗುವ ಪದಾರ್ಥಗಳನ್ನೂ ಸರ್ಕಾರದವರು ಕಂಟ್ರಾಕ್ಟು ದರಕ್ಕಿಂತಲೂ ಹೆಚ್ಚು ದರದ ಮೇರೆ ಬಾಜಾರದಲ್ಲಿ ಕೊಂಡುಕೊಂಡರೆ ಆ ನಷ್ಟವನ್ನೂ ಇಜಾರೆದಾರರು ಸರ್ಕಾರಕ್ಕೆ ಭರ್ತಿಮಾಡಿ ಕೊಡಬೇಕು. ವಿಚಾರ ಮೇಲೆ ನಮೂದಾದ ಕಂಟ್ರಾಕ್ಟುಗಳ ವಿಷಯದಲ್ಲಿ ಯಾವ ವಿಧವಾದ ರಿಯಾಯಿತಿಯೂ ದೊರೆಯಲಾರದು.

ಜೆ. ಹ್ಯೂಂ ರೈಟ್,
ಸೂಪರ್ರಿಂಟೆಂಡೆಂಟ್.

ಮೈಸೂರ ಜೈಲ್.

ತಾರೀಖು 13ನೆ ಮೇ 1904ನೆ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ,—ಮೈಸೂರು ಜೈಲ್‌ನಲ್ಲಿ ಖೈದು ಮಾಡಲ್ಪಟ್ಟು ಇರುವ ಖೈದಿಗಳ ಉಪಯೋಗದ ಬಗ್ಗೆ ಸ್ 1904ನೆ ಇಸವಿ ಜುಲೈ ಗುರ್ರ್ಲು ಲಾಗಾಯತು 1905ನೆ ಇಸವಿ ಜೂನ್ 30ನೆ ತಾರೀಖಿನ ವರಿಗೂ (ಆ ಎರಡು ದಿನಗಳೂ ಸೇರಿ) ಕೆಳಗೆ ನಮೂದು ಮಾಡುವ ಜಿನಸುಗಳನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಗೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳನ್ನು ಮೈಸೂರ್ ಜೈಲ್ ಸೂಪರ್ರಿಂಟೆಂಡೆಂಟರವರಿಂದ, ಸ್ 1904ನೆ ಇಸವಿ ಜೂನ್ 11ನೆ ಶನಿವಾರ ಹಗಲು 9 ಘಂಟೆವರಿಗೆ ತೆಗೆದುಕೊಳ್ಳಲ್ಪಡುವದು :—

(2) ಮೇಲೆ ನಮೂದು ಮಾಡಿರುವ ತಾರೀಖಿನ ನಂತರ ಯಾವ ದರಖಾಸ್ತುಗಳು ತೆಗೆದುಕೊಳ್ಳಲ್ಪಡುವದಿಲ್ಲಾ.

(3) ಟೆಂಡರುಗಳಿಗೆ ಈ ಕೆಳಗೆ ನಮೂದು ಮಾಡಿರುವಂತೆ ಬೇರೆಬೇರೆ ವಿಳಾಸ ಬರೆದು ಇರತಕ್ಕದ್ದು.

1ನೇ ಧಾನ್ಯ ಮತ್ತು ಚಿಲ್ಲರೆ ಸಾಮಾನುಗಳಿಗೆ	ದರಖಾಸ್ತು.
2ನೇ ಮಾಂಸಕ್ಕೆ	ದರಖಾಸ್ತು.
ಧಾನ್ಯ ಮತ್ತು ಇತರ ಚಿಲ್ಲರೆ ಸಾಮಾನುಗಳಿಗೆ ...	400 ರೂಪಾಯಿ.
ಮಾಂಸಕ್ಕೆ	100 ರೂಪಾಯಿ.

(4) ಈ ಮೇರಿಗೆ ನಗದಾಗಲಿ, ಕರೆನ್ಸಿ ನೋಟಾಗಿ ಆಗಲಿ ಠೇವಣಾತಿ ಮೊಬಲಗು ಇಲ್ಲದೆ ಬರುವ ದರಖಾಸ್ತುಗಳು ಅಂಗೀಕರಿಸಲ್ಪಡುವದಿಲ್ಲ.

(5) ದರಖಾಸ್ತುಗಳು ಮೈಸೂರು ಜೈಲ್ ಸೂಪರ್ರಿಂಟೆಂಡೆಂಟರವರಿಂದ ಅವರ ಆಫೀಸಿನಲ್ಲಿ ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರುಗಳ ರೂಬರೂಬ್ ಮೇಲ್ಕಂಡ ತಾರೀಖಿನಲ್ಲಿ ಖುಲ್ಲಾ ಮಾಡಲ್ಪಡುವವು.

(6) ದರಖಾಸ್ತುಗಳಲ್ಲಿ ಕೆಳಗೆ ವಿವರಿಸುವ ಸರಬರಾಯಿ ಆಗುವ ಜಿನಸಿಗಳ ದರ ರೂಪಾಯಿ ಒಂದಕ್ಕೆ ಇಷ್ಟು ಪೌಂಡು ಯೆಂತ ನಮೂದಾಗಬೇಕು, ಮತ್ತು ಜಿನಸಿಗಳು ಒಳ್ಳೇದಾಗಿರಬೇಕು. ಹಾಲಿಗೆ ಮಾತ್ರ ರೂಪಾಯಿ ಒಂದಕ್ಕೆ ಇಷ್ಟು ಪಿಂಟ್ ಎಂದು ನಮೂದಿರಬೇಕು.

ಒಂದು ವರುಷಕ್ಕೆ ಬೇಕಾದ ಜಿನಸಿಗಳ ಪಟ್ಟಿ.

1ನೇ ಧಾನ್ಯ ಮತ್ತು ಇತರ ಚಿಲ್ಲರೆ ಸಾಮಾನುಗಳು.

	ಸುಮಾರು ಎಷ್ಟು ಪೌಂಡು ಬೇಕಾದ್ದು.		ಸುಮಾರು ಎಷ್ಟು ಪೌಂಡು ಬೇಕಾದ್ದು.
ಅಕ್ಕಿ (ಕುಸಲಕ್ಕಿ ಮತ್ತು ಬೆಣತಕ್ಕಿ) ...	30,000	ತುಪ್ಪ (ಅವಲ್ ಥರಹ)	800
ರಾಗಿ (ಅವಲ್ ಥರಹಾ) ...	1,30,000	ಬೆಳ್ಳುಳ್ಳಿ ...	1,340
ತೊಗರಿಬೇಳೆ ಡಿಟೋ ...	10,000	ತರಕಾರಿ	40,000
ಅವರೆಬೇಳೆ ಡಿಟೋ ...	8,000	ಒಣಗಿದ ಸೌದೆ	2,00,000
ಖಾರಕ ಸಾಮಾನು ಯಾ ಪುಡಿ (ಮೆಣಸಿನ ಪುಡಿ)	2,400	ಸಕ್ಕರೆ ...	400
ಉಪ್ಪು	4,000	ರವೆ ...	500
ಈರುಳ್ಳಿ	4,000	ರೊಟ್ಟಿ ..	200
ಬೆಳ್ಳುಳ್ಳಿ ...	400	ಹಾಲು ...	3,600
ಹುಣಿಸೆಹಣ್ಣು	4,000	ಮೊಸರು	8,400

2ನೆ ಮಾಂಸ.

ಮೂಳೆ ಇಲ್ಲದ ಮಾಂಸ ... 8,400 ಫೌಂಡು.

ಮೇಲೆ ನಮೂದು ಮಾಡಿರುವ ಜಿನಸಿನ ಮೊತ್ತಗಳು ಇಷ್ಟೇ ತೆಗೆದುಕೊಳ್ಳುತ್ತೇವೆಂದು ಖಾತರ್ ದೊರೆಯಲಾರದು.

(7) ಕಂಟ್ರಾಕ್ಟುದಾರನು ಖೈದಿಗಳಿಂದ ಬೀಸಲ್ಪಡುವದಕ್ಕೆ ರಾಗಿ ಸರಬರಾಯಿ ಮಾಡಬೇಕು. ಹಾಗೆ ತಯಾರಾದ ಹಿಟ್ಟನ್ನು ಖೈದಿಗಳಿಗೆ ಕೊಡಲ್ಪಡುವದು, ಹಾಗೆ ಸರಬರಾಯಿ ಮಾಡಲ್ಪಟ್ಟಂಥಾ ಹಿಟ್ಟಿನ ಮೊತ್ತಕ್ಕೆ ರಾಗಿ ಬಗ್ಗೆ ದಾಖಲಾಗಿ ಇರುವ ದರದಂತೆ ಖರೀದಿ ಕೊಡೋಣಾದೀತು.

(8) ಸೂಪರಿಂಟೆಂಡೆಂಟರವರು ಅತ್ಯಂತ ಕಮ್ಮಿ ದರದ ಅಥವಾ ಇತರ ದರಖಾಸ್ತನ್ನು ಒಪ್ಪಿಕೊಳ್ಳುವದಕ್ಕೆ ಕಾರಣ ಹೇಳಲು ಬದ್ಧರಾಗಿರುವದಿಲ್ಲ.

(9) ಮಂಜೂರಾದ ದರಖಾಸ್ತುದಾರರ ಠೇವಣಿ ಮೊಬಲಗು ಇಟ್ಟುಕೊಳ್ಳಲ್ಪಡುವದು. ಮತ್ತು ಅವರ ದರಖಾಸ್ತು ಮಂಜೂರಾದ ಸಂಗತಿ ಅವರಿಗೆ ತಿಳಿಸಿದ ಲಾಗಾಯತು ಒಂದು ವಾರದೊಳಗೆ ಅವರು ಸೂಪರಿಂಟೆಂಡೆಂಟರವರ ಆಫೀಸಿನಲ್ಲಿ ತೋರಿಸುವ ನಮೂನೆ ಮೇರೆ ಕಂಟ್ರಾಕ್ಟು ಮುಚ್ಚಳಿಕೆ ಬರೆದುಕೊಡುವದಕ್ಕೆ ತಪ್ಪಿದರೆ ಆಗಲಿ ಅಥವಾ ನಗದಾಗಲಿ ಗವರ್ನಮೆಂಟ್ ಬಾಂಡ ಮೂಲಕ ಆಗಲಿ ಜಾಮೀನ್ ಕೊಡುವದಕ್ಕೆ ಅಂದರೆ, —

ಧಾನ್ಯಕ್ಕೆ ಮತ್ತು ಇತರ ಚಿಲ್ಲರೆ ಸಾಮಾನುಗಳಿಗೆ	..	..	400 ರೂಪಾಯಿ.
ಮಾಂಸಕ್ಕೆ ...	..	..	100 ರೂಪಾಯಿ.

ತಪ್ಪಿದರೆ ಅಂಥಾ ಠೇವಣಿ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುವದು.

(10) ಒಂದು ತಿಂಗಳಲ್ಲಿ ಸರಬರಾಯಿ ಮಾಡಲ್ಪಟ್ಟಂಥಾ ಸಾಮಾನುಗಳ ಕಿಮ್ಮತ್ತು ಮಾರನೇ ತಿಂಗಳ ಹತ್ತನೇ ತಾರೀಖಿನ ಒಳಗಾಗಿ ತಕ್ಕಮಟ್ಟಿಗೂ ಜಾಗ್ರತೆಯಾಗಿ ಕಂಟ್ರಾಕ್ಟುದಾರರಿಗೆ ಮೈಸೂರು ಜೈಲ್ ಸೂಪರಿಂಟೆಂಡೆಂಟ್ ಸಾಹೇಬರವರಿಂದ ಪಾವತಿ ಮಾಡಲ್ಪಡುವದು.

(11) ಉಗ್ರಾಣದ ಕೊಠಡಿಗಳ ಸ್ವಾಧೀನ ಕಂಟ್ರಾಕ್ಟುದಾರರಿಗೆ ಕೊಡಲ್ಪಡುವವು. ಅವುಗಳಲ್ಲಿ ಅವರು ಕೆಟ್ಟುಹೋಗದೆ ಇರತಕ್ಕ ಎಲ್ಲಾ ಜಿನಸುಗಳನ್ನು ಒಂದು ತಿಂಗಳ ಸರಬರಾಯಿಗೆ ಕಮ್ಮಿ ಇಲ್ಲದಂತೆ ಯಾವಾಗಲು ಇಟ್ಟಿರಬೇಕು. ಕೆಟ್ಟುಹೋಗತಕ್ಕಂಥಾ ಪದಾರ್ಥಗಳು ಅಂದರೆ, ತರಕಾರಿ ಮುಂತಾದ್ದು ಪ್ರತಿದಿನವು ಬೆಳಿಗ್ಗೆ 7 ಘಂಟೆಗೆ ಸರಿಯಾಗಿ ಜೈಲ್‌ನಲ್ಲಿ ಹಾಜರ್ಮಾಡಬೇಕು.

(12) ಈ ಕಂಟ್ರಾಕ್ಟನ್ನು ಒಳಗುತ್ತಿಗೆಯಾಗಿ ಕೊಡಬಾರದು.

(13) ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮುಚ್ಚಳಿಕೆಯ ಷರತ್ತಿಗೆ ತಪ್ಪಿ ನಡೆದರೂ ಮತ್ತು ನಾಲಾಯಖಾದ ಸಾಮಾನನ್ನು ಸರಬರಾಯಿ ಮಾಡಿದರೂ, ಮೈಸೂರು ಜೈಲ್ ಸೂಪರಿಂಟೆಂಡೆಂಟರವರು ಅವರ ಯುಕ್ತಾನುಸಾರ 50 ರೂಪಾಯಿಗೆ ಮೀರದ ಜುಲ್ಮಾನೆ ಹಾಕುವರು. ಮತ್ತು ಪದೇಪದೆ ಆ ಮುಚ್ಚಳಿಕೆ ಷರತ್ತಿಗೆ ವಿರೋಧವಾಗಿ ನಡದರೆ ಆ ಕಂಟ್ರಾಕ್ಟು ರದ್ದುಮಾಡಿ ಠೇವಣಾತಿ ಮೊಬಲಗು ಸರಕಾರಕ್ಕೆ ದಂಡವಾಗಿ ತಕ್ಕೊಳ್ಳಲ್ಪಟ್ಟೀತು.

(14) ಮುಚ್ಚಳಿಕೆ ಷರತ್ತಿಗೆ ನಡೆದ ಎಲ್ಲಾ ಪ್ರಮಯಗಳಲ್ಲೂ ಮೈಸೂರು ಜೈಲ್ ಸೂಪರಿಂಟೆಂಡೆಂಟರವರಿಂದ ಮಾಡಲ್ಪಟ್ಟ ಫೈಸಲ್ ಆಖೈರಾಗಿರತಕ್ಕದ್ದು.

(15) ಜೈಲ್ ತೋಟದಲ್ಲಿ ಬೆಳೆಯತಕ್ಕ ತರಕಾರಿಯನ್ನು ಖೈದಿಗಳ ಉಪಯೋಗಕ್ಕಾಗಿ ಕೊಂಡುಕೊಳ್ಳಬೇಕೆಂತ ಅಪೇಕ್ಷಿಸಿದ ಪಕ್ಷದಲ್ಲಿ ಕಂಟ್ರಾಕ್ಟುದಾರನು ಮುಚ್ಚಳಿಕೆಯಲ್ಲಿ ನಮೂದಾಗುವ ದರದಂತೆ ಕೊಂಡುಕೊಳ್ಳಲು ಬದ್ಧನಾಗಿರುವನು.

(16) ಈ ವಿಷಯವಾಗಿ ಇನ್ನೇನಾದರೂ ಹೆಚ್ಚು ವರ್ತಮಾನ ಅಗತ್ಯವಾದಲ್ಲಿ ಸೂಪರಿಂಟೆಂಡೆಂಟರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

(17) ಕಂಟ್ರಾಕ್ಟುಗಳು ಮೈಸೂರು ಸಂಸ್ಥಾನದ ಜೈಲುಗಳ ಇನ್ಸ್ಪೆಕ್ಟರ್ ಜನರಲ್‌ರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

(18) ಕಂಟ್ರಾಕ್ಟುದಾರರು ಈ ಕಂಟ್ರಾಕ್ಟು ತೆಗದುಕೊಂಡ ತರುವಾಯ, ತಮ್ಮ ಕರಾರುಮೇರಿಗೆ ನಡಿಯಲು ಇಷ್ಟವಿಲ್ಲದವರಾಗಿದ್ದರೆ, ಅವರು ಕೊನೇಪಕ್ಷ ಒಂದು ತಿಂಗಳು ಮುಂಚಿತವಾಗಿ ನೋಟೀಸು ಕೊಟ್ಟು ತಮ್ಮ ಠೇವಣಾತಿ ಹಣವನ್ನು ಸರ್ಕಾರಕ್ಕೆ ದಂಡವಾಗಿ ಬಿಟ್ಟುಬಿಡಬೇಕು.

(19) ಅಲ್ಲದೆ ಆಪ್ರಕಾರ ಸದರಿ ಕಂಟ್ರಾಕ್ಟುದಾರರು ತಮ್ಮ ಕರಾರಿಗೆ ತಪ್ಪಿದ್ದರಿಂದ ಅಥವಾ ತಮ್ಮ ಮುಚ್ಚಳಿಕೆಯಲ್ಲಿ ನಮೂದಾದ ಪದಾರ್ಥಗಳನ್ನು ಸರ್ಕಾರದವರು, ಸ್ಥಳೀಯವಾದ ಬಜಾರಿನಲ್ಲಿ ಮುಚ್ಚಳಿಕೆ ದರಕ್ಕಿಂತಲೂ ಹೆಚ್ಚು ದರ ಕೊಟ್ಟು ತಕ್ಕೊಳ್ಳುವದ್ದರಿಂದ ಸರ್ಕಾರದವರಿಗೆ ಉಂಟಾಗಬಹುದಾದ ನಷ್ಟವನ್ನು ಭರ್ತಿ ಮಾಡುವದಕ್ಕೂ ಸಹ ಬದ್ಧರಾಗಿರಬೇಕು.

ಷರಾ. – ಈ ಕಂಟ್ರಾಕ್ಟಿನಲ್ಲಿ ಯಾವ ವಿಧವಾದ ರಿಯಾಯತಿಯನ್ನು ಮಾಡೋಣಾಗಲಾರದು. ಎರಡು ಬಾಬುಗಳಿಗೂ ಒಬ್ಬನೇ ಬೇಕಾದರೂ 500 ರೂಪಾಯಿಗಳನ್ನು ಠೇವಣಿ ಇಟ್ಟು ಟೆಂಡರ್ ಕೊಡಬಹುದು.

ಪಿ. ಎಸ್. ಅಚ್ಯುತರಾವ್,
ಸೂಪರಿಂಟೆಂಡೆಂಟ್.

ಮೈಸೂರ ಗೆಜೆಟ್.

ಸಂ. 39] ಸರ್ಕಾರದಿಂದ ಪ್ರಸಿದ್ಧ ಪಡಿಸಲ್ಪಟ್ಟದ್ದು. [ಸಂ. 20.

ಬೆಂಗಳೂರು, ಗುರುವಾರ, ಮೇ ತಾ|| 19, ಸಃ 1904.

IIIನೇ ಭಾಗ.

ನಿಬಂಧನೆಗಳು ಮತ್ತು ಅವುಗಳಂತೆ ಆದ ನೇಮಗಳು.

ಲೆಜಿಸ್ಲೆಟಿವ ಇಲಾಖೆ.

1904ನೇ ವರುಷದ 1ನೇ ನಂಬರಿನ ರೆಗ್ಯುಲೇಷನು.

(1904ನೇ ವರುಷದ ಫೆಬ್ರುವರಿ 5ನೇ ತಾರೀಖಿನಲ್ಲಿ ನಿರ್ಣಯಿಸಲಾಯಿತು.)

ಮೈಸೂರಲ್ಲಿ ಜಾರಿಯಲ್ಲಿರುವ 1860ನೇ ವರುಷದ ಇಂಡಿಯನ್ ಪೀನಲ್ ಕೋಡನ್ನು ತಿದ್ದುಪಾಟು ಮಾಡುವ ಬಗ್ಗೆ ಆದ ಒಂದು ರೆಗ್ಯುಲೇಷನು.

1. (1) ಈ ರೆಗ್ಯುಲೇಷನಲ್ಲಿ, "ಮೈಸೂರಲ್ಲಿ ಜಾರಿಯಲ್ಲಿರುವ ಇಂಡಿಯನ್ ಪೀನಲ್ ಕೋಡ್" ಮತ್ತು "ಸದರೀ ಕೋಡು" ಎಂಬುವ ಪದಗಳಿಗೆ, 1870ನೇ ವರುಷದ XXVIIನೇ ನಂಬರಿನ, 1872ನೇ ವರುಷದ XIXನೇ ನಂಬರಿನ ಮತ್ತು 1873ನೇ ವರುಷದ Xನೇ ನಂಬರಿನ ಆಕ್ಟುಗಳಿಂದಲೂ, 1886ನೇ ವರುಷದ 1ನೇ ನಂಬರಿನ ರೆಗ್ಯುಲೇಷನು ಮತ್ತು 1892ನೇ ವರುಷದ 1ನೇ ನಂಬರಿನ 1894ನೇ ವರುಷದ IIನೇ ನಂಬರಿನ ಮತ್ತು 1894ನೇ ವರುಷದ IVನೇ ನಂಬರಿನ ರೆಗ್ಯುಲೇಷನುಗಳು ಇವುಗಳಿಂದ ಮೈಸೂರಲ್ಲಿ ಜಾರಿಗೆ ತರಲ್ಪಟ್ಟ ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡಿನಿಂದಲೂ, ತಿದ್ದುಪಾಟು ಮಾಡಲ್ಪಟ್ಟ ಇಂಡಿಯನ್ ಪೀನಲ್ ಕೋಡೆಂದು ಅರ್ಥ.

(2) 1899ನೇ ವರುಷದ ಜನರಲ್ ಕ್ಲಾಜಸ್ ರೆಗ್ಯುಲೇಷನಿನ 31ನೇ ಪ್ರಕರಣದಲ್ಲಿರುವ ಅನ್ವಯಸೂತ್ರವು, ಮೈಸೂರಲ್ಲಿ ಜಾರಿಯಲ್ಲಿರುವ ಇಂಡಿಯನ್ ಪೀನಲ್ ಕೋಡು ತಕ್ಕ ಬದಲಾವಣೆಗಳೊಂದಿಗೆ ಮೈಸೂರಿಗೆ ಪ್ರಯೋಗವಾಗಬೇಕೆಂದು ಸೂಚಿಸಲ್ಪಟ್ಟಂತೆ, ಸದರಿ ಕೋಡಿಗೆ, ಈ ರೆಗ್ಯುಲೇಷನಿನ ನಿಯಮಗಳಿಗೆ ಒಳಪಟ್ಟು, ಪ್ರಯೋಗವಾಗತಕ್ಕದ್ದು.

2. (1) ಸದರಿ ಕೋಡಿನ 1ನೇ ಪ್ರಕರಣದಲ್ಲಿ "1861ನೇ ವರುಷದ ಮೇ ಮೊದಲನೇ ತಾರೀಖಿನಲ್ಲಿಯೂ ಮತ್ತು ತಾರೀಖಿನಿಂದಲೂ" ಎಂಬ ಪದಗಳು ಮತ್ತು ಸಂಖ್ಯೆಗಳು ರದ್ದು ಮಾಡಲ್ಪಟ್ಟಿರುತ್ತವೆ.

(2) ಸದರಿ ಕೋಡಿನ 2ನೇ ಪ್ರಕರಣದಲ್ಲಿ "1861ನೇ ವರುಷದ ಮೇ ಮೊದಲನೇ ತಾರೀಖಿನಲ್ಲಾಗಲೀ ಅಥವಾ ಮೊದಲನೇ ತಾರೀಖಿನ ಬಳಿಕವಾಗಲೀ" ಎಂಬ ಪದಗಳು ಮತ್ತು ಸಂಖ್ಯೆಗಳು ರದ್ದು ಮಾಡಲ್ಪಟ್ಟಿರುತ್ತವೆ.

3. ಸದರಿ ಕೋಡಿನ 4ನೆ ಪ್ರಕರಣವು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ. ಮತ್ತು ಅದಕ್ಕೆ ಬದಲಾಗಿ ಈ ಕೆಳಗೆ ಬರುವ ಪ್ರಕರಣವು ಇಡಲ್ಪಟ್ಟಿರುತ್ತೆ, ಅದೇನೆಂದರೆ :—

ದೇಶಾಂತರದಲ್ಲಿ ಮಾಡಲ್ಪಟ್ಟ ಅಪರಾಧಗಳಿಗೆ ಕೋಡಿನ ವ್ಯಾಪ್ತಿ.

"4. ಈ ಕೋಡಿನ ನಿಯಮಗಳು, ಮೈಸೂರು ಹೊರಗೆ ಯಾವ ಪ್ರದೇಶದಲ್ಲಿಯಾದರೂ ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರ ಯಾವ ಪ್ರಜೆಯಿಂದಲಾದರೂ ಮಾಡಲ್ಪಟ್ಟ ಯಾವ ಅಪರಾಧಕ್ಕಾದರೂ ಕೂಡ ಪ್ರಯೋಗವಾಗತಕ್ಕದ್ದು.

"ವಿವರ. – ಈ ಪ್ರಕರಣದಲ್ಲಿ, "ಅಪರಾಧ" ವೆಂಬುವದು, ಮೈಸೂರಲ್ಲಿ ಮಾಡಲ್ಪಟ್ಟಿದ್ದ ಪಕ್ಷಕ್ಕೆ ಈ ಕೋಡಿನ ಪ್ರಕಾರ ದಂಡಿಸಲ್ಪಡತಕ್ಕದಾದ ಮೈಸೂರು ಹೊರಗೆ ಮಾಡಲ್ಪಟ್ಟ ಪ್ರತಿ ಒಂದು ಕೃತ್ಯವನ್ನೂ ಅಡಗಿಸಿಕೊಳ್ಳುತ್ತೆ.

ಉದಾಹರಣೆಗಳು.

" (a) ಘನವನ್ನು ಹೊಂದಿದ ಮಹಾರಾಜರವರ ಪ್ರಜೆಯಾದ A, ಎಂಬ ಒಬ್ಬ ಕೂಲಿಯು ಉಗಾಂಡಾದಲ್ಲಿ ಒಂದು ಖೂನಿಯನ್ನು ಮಾಡುತ್ತಾನೆ. ಮೈಸೂರು ದೇಶದೊಳಗೆ ಯಾವ ಸ್ಥಳದಲ್ಲಿ ಅವನು ಶಿಕ್ಕಿದರೂ ಅಲ್ಲಿ ಅವನು ವಿಚಾರಣೆ ಮಾಡಲ್ಪಟ್ಟು ಖೂನಿಗೆ ತಪ್ಪು ಸಾಬೀತು ಮಾಡಲ್ಪಡಬಹುದು.

" (b) ಘನವನ್ನು ಹೊಂದಿದ ಮಹಾರಾಜರವರ ಒಂದು ಪ್ರಜೆಯಾದ D, ಎಂಬುವನು, ಇಂದೋರಿನಲ್ಲಿ ವಾಸವಾಗಿದ್ದು ಮೈಸೂರಿನಲ್ಲಿ ಒಂದು ಖೂನಿಯನ್ನು ಮಾಡುವದಕ್ಕೋಸ್ಕರ E ಎಂಬುವನಿಗೆ ದುಷ್ಪ್ರೇರಣೆ ಮಾಡುತ್ತಾನೆ. D ಎಂಬುವನು ಖೂನಿಗೆ ಸಹಕರಿಸುವ ಅಪರಾಧವನ್ನು ಮಾಡಿರುತ್ತಾನೆ."

4. ಸದರಿ ಕೋಡಿನ 28ನೇ ಪ್ರಕರಣದ ವಿವರಕ್ಕೆ ಬದಲಾಗಿ ಈ ಕೆಳಗೆ ಬರುವದನ್ನು ಇಡತಕ್ಕದ್ದು, ಅದೇನಂದರೆ:—

" ವಿವರ 1.—ಬನಾವಣೆ ಬಗ್ಗೆ ಅನುಕರಣವು ಸರಿಯಾಗಿರಬೇಕಾದ್ದು ಅವಶ್ಯವಾಗಿಲ್ಲ.

" ವಿವರ 2.—ಒಬ್ಬ ಮನುಷ್ಯನು ಒಂದು ಪದಾರ್ಥವನ್ನು ಮತ್ತೊಂದು ಪದಾರ್ಥದಂತೆ ಇರುವ ಹಾಗೆ ಮಾಡಿದಾಗಲೂ ಮತ್ತು ಆ ಹೋಲ್ಕಿಕೆಯಿಂದ ಒಬ್ಬ ಮನುಷ್ಯನು ಮೋಸಮಾಡಲ್ಪಡಬಹುದಾಗಿರುವಾಗಲೂ, ಸದರೀ ಒಂದು ಪದಾರ್ಥವನ್ನು ಸದರೀ ಮತ್ತೊಂದು ಪದಾರ್ಥದಂತೆ ಸದರೀ ಮನುಷ್ಯನು ಆ ಹೋಲ್ಕಿಕೆಯ ದೆಶೆಯಿಂದ ಮೋಸಮಾಡಲು ಉದ್ದೇಶಿಸಿದ್ದಾನೆಂತ, ಅಥವಾ ಆ ಹೋಲ್ಕಿಕೆಯ ದೆಶೆಯಿಂದ ಮೋಸಮಾಡೋಣವು ಆಗಬಹುದೆಂದು ತಿಳಿದಿದ್ದನೆಂತ, ಅದಕ್ಕೆ ವಿರೋಧವಾದ್ದು ರುಜುವಾತು ಆಗುವವರಿಗೂ, ಭಾವಿಸಲ್ಪಡತಕ್ಕದ್ದು."

5. ಸದರೀ ಕೋಡಿನ 40ನೇ ಪ್ರಕರಣದ ಎರಡನೆ ಕಲಮಿನಲ್ಲಿ, " 109 " ಸಂಖ್ಯೆಗಳ ಮುಂದೆ, " 64, 65, 66, 67, 71, " ಸಂಖ್ಯೆಗಳನ್ನು ಇಡತಕ್ಕದ್ದು.

6. ಸದರೀ ಕೋಡಿನ 64ನೇ ಪ್ರಕರಣದಲ್ಲಿ ಮೊದಲನೇ ಹನ್ನೆರಡು* ಪದಗಳ ಬದಲಾಗಿ ಈ ಕೆಳಗೆ ಬರುವದನ್ನು ಇಡತಕ್ಕದ್ದು. ಏನಂದರೆ :—

" ಜುರ್ಮಾನೆ ಮತ್ತು ಕೈದು ಇವೆರಡಕ್ಕೂ ಗುರಿಯಾದ ಯಾವ ಅಪರಾಧದ ವಿಷಯದಲ್ಲಿ ಅಪರಾಧಿಯು ಕೈದಿನ ಸಜಾನಿಕೀ ಅಥವಾ ಇಲ್ಲದೆ ಒಂದು ಜುರ್ಮಾನೆ ಸಜಾ ವಿಧಿಸಲ್ಪಡುತ್ತಾನೊ ಅಂಥಾ ಪ್ರತಿ ಸಂಗತಿಯಲ್ಲಿ,

" ಮತ್ತು ಕೈದಿನ ಮೂಲಕವಾಗಿಯಾಗಲೀ ಜುಲ್ಮಾನೆ ಮೂಲಕವಾಗಿಯಾಗಲೀ ಅಥವಾ ಜುಲ್ಮಾನೆ ಮಾತ್ರ ವಿಧಿಸಲ್ಪಟ್ಟು, ಶಿಕ್ಷಿಸಲ್ಪಡತಕ್ಕ ಯಾವ ಅಪರಾಧದ ವಿಷಯದಲ್ಲಿ ಅಪರಾಧಿಯು ಒಂದು ಜುಲ್ಮಾನೆ ಸಜಾ ವಿಧಿಸಲ್ಪಡುತ್ತಾನೋ, ಅಂಥಾ ಪ್ರತಿ ಸಂಗತಿಯಲ್ಲಿ."

7. ಸದರೀ ಕೋಡಿನ 67ನೇ ಪ್ರಕರಣದಲ್ಲಿ, " ಜುಲ್ಮಾನೆ ಮಾತ್ರ " ಎಂಬ ಪದಗಳ ತರುವಾಯ " ಜುಲ್ಮಾನೆಯು ಪಾವತಿಯಾಗದಿದ್ದರೆ ಕೋರ್ಟಿನವರು ಅದಕ್ಕಾಗಿ ವಿಧಿಸುವ ಕೈದು ಬರೀ ಕೈದಾಗಿರತಕ್ಕದ್ದು ಮತ್ತು " ಎಂಬ ಪದಗಳನ್ನು ಇಡತಕ್ಕದ್ದು.

8. ಸದರಿ ಕೋಡಿನ 71ನೇ ಪ್ರಕರಣಕ್ಕೆ ಈ ಕೆಳಗೆ ಬರುವ ಕಲಮನ್ನು ಸೇರಿಸತಕ್ಕದ್ದು, ಅದೇನಂದರೆ :—

" ಆಯಾ ಕಾಲದಲ್ಲಿ ಜಾರಿಯಲ್ಲಿರುವ ಯಾವ ನಿಬಂಧನೆಯಿಂದ ಅಪರಾಧಗಳು ವಿಧಿಸಲ್ಪಡುತ್ತವೆಯೋ ಅಥವಾ ಶಿಕ್ಷಿಸಲ್ಪಡುತ್ತವೆಯೋ ಅಂಥಾ ನಿಬಂಧನೆಯ ಎರಡು ಅಥವಾ ಹೆಚ್ಚು ಬೇರೆಬೇರೆ ವಿವರಣೆಗಳಿಗೊಳಗಾಗಿ ಯಾವದಾಗಲೀ ಒಂದು ಅಪರಾಧವಾದರೆ, ಅಥವಾ

" ಅನೇಕ ಕೃತ್ಯಗಳು ನಡದು, ಅವುಗಳ ಪೈಕಿ ಒಂದು ಅದರಷ್ಟಕ್ಕೆ, ಅಥವಾ ಅವುಗಳ ಪೈಕಿ ಒಂದಕ್ಕಿಂತ ಹೆಚ್ಚು ತವ್ಮಷ್ಟಕ್ಕೆ, ಒಂದು ಅಪರಾಧವಾಗಿ, ಎಲ್ಲಾ ಕೂಡಿದಾಗ ಬೇರೆ ಒಂದು ಅಪರಾಧವಾದರೆ,

" ಅಪರಾಧಿಯನ್ನು ದರ್ಯಾಪ್ತಿ ಮಾಡುವ ಕೋರ್ಟಿನವರು ಅಂಥಾ ಅಪರಾಧಗಳೊಳಗೆ ಯಾವದೊಂದಕ್ಕಾಗಲೀ ವಿಧಿಸಬಹುದಾದಂಥಾ ಸಜಾಗಿಂತ ಹೆಚ್ಚು ಕಠಿಣವಾದ ಸಜಾವನ್ನು ಸದರೀ ಅಪರಾಧಿಗೆ ಕೊಡಕೂಡದು."

9. ಸದರೀ ಕೋಡಿನ 73ನೇ ಪ್ರಕರಣದಲ್ಲಿ " ಕಮ್ಮಿಯಾಗಿರಬೇಕು " ಎಂಬುವ ಪದಗಳಿಗೆ ಬದಲಾಗಿ " ಒಂದಕ್ಕೆ ಮೀರಕೂಡದು " ಎಂಬ ಪದಗಳನ್ನು ಇಡತಕ್ಕದ್ದು.

10. ಸದರೀ ಕೋಡಿನ 75ನೇ ಪ್ರಕರಣದಲ್ಲಿ " ಅಥವಾ ದಂಡನೆಯ ಪರಿಮಾಣಕ್ಕೆ ಎರಡಷ್ಟು " ಎಂಬುವಲ್ಲಿಂದ ಹಿಡಿದು ಪ್ರಕರಣದ ಕೊನೆಯವರೇಗಿನ ಪದಗಳಿಗೆ ಬದಲಾಗಿ, ಈ ಕೆಳಗೆ ಬರುವದನ್ನು ಇಡತಕ್ಕದ್ದು, ಅದೇನಂದರೆ :—

" ಅಥವಾ ಹತ್ತು ಸಂವತ್ಸರಕ್ಕೆ ಮೀರದ ಒಂದು ವಾಯಿದೆ ಪರ್ಯಂತ ಯಾವದಾದರೂ ಒಂದು ತರಹ ಕೈದಿಗಾಗಲಿ ಗುರಿಯಾಗತಕ್ಕದ್ದು."

11. ಸದರೀ ಕೋಡಿನ 108ನೇ ಪ್ರಕರಣಕ್ಕೆ ಈ ಕೆಳಗೆ ಬರುವ ಪ್ರಕರಣವನ್ನು ಸೇರಿಸತಕ್ಕದ್ದು, ಏನಂದರೆ:—

ಮೈಸೂರು ಹೊರಗೆ ನಡಿಯುವ ಅಪರಾಧಗಳಿಗೆ ಮೈಸೂರಲ್ಲಿ ಸಹಕರಿಸುವುದು.

" 108 A. ಯಾವ ಕೃತ್ಯವು ಮೈಸೂರೊಳಗೆ ಮಾಡಲ್ಪಟ್ಟಿದ್ದರೆ ಒಂದು ಅಪರಾಧವಾಗುತ್ತಿತ್ತೊ ಅಂಥಾ ಕೃತ್ಯವು ಮೈಸೂರು ಹೊರಗೆ ನಡಿಯಲಿಕ್ಕೆ ಯಾವ ಮನುಷ್ಯನು ಸಹಕರಿಸುತ್ತಾನೊ ಅಂಥಾ ಮನುಷ್ಯನು ಈ ಕೋಡಿನ ಅರ್ಥಕ್ಕೆ ಅನುಗುಣವಾಗಿ ಒಂದು ಅಪರಾಧಕ್ಕೆ ಸಹಕರಿಸುತ್ತಾನೆ.

* ಷರಾ :—ಮೊದಲನೇ ಹನ್ನೆರಡು ಪದಗಳೆಂದರೆ [English Code] ಮೂಲಗ್ರಂಥದ 64ನೆ ಪ್ರಕರಣದಲ್ಲಿರುವಂತ ಎಂದು ತಿಳಿಯತಕ್ಕದ್ದು. ಭಾಷಾಂತರದಲ್ಲಿ ಕೂಡಾ ಸದರೀ ಪದಗಳ ಅರ್ಥವು ಪ್ರಕರಣದ ಆದಿಯಲ್ಲಾಗಲಿ ಹನ್ನೆರಡೇ ಪದಗಳಾಗಿ ಆಗಲಿ, ಇದ್ದೀತೆಂದು ಭಾವಿಸಕೂಡದು.

ಉದಾಹರಣೆ.

“ಮೈಸೂರೊಳಗೆ A ಎಂಬುವವನು ಗೋವಾದಲ್ಲಿರುವ ಅನ್ಯದೇಶೀಯನಾದ B ಎಂಬುವನಿಗೆ ಗೋವಾದಲ್ಲಿ ಒಂದು ಖೂನಿಯನ್ನು ಮಾಡುವಂತೆ ದುಬೋ೯ಧನೆ ಮಾಡುತ್ತಾನೆ. A. ಎಂಬುವವನು ಖೂನಿಗೆ ಸಹಕರಿಸುವ ಅಪರಾಧವನ್ನು ಮಾಡಿರುತ್ತಾನೆ.”

12. ಸದರೀ ಕೋಡಿನ 124 A ಪ್ರಕರಣವು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ ಮತ್ತು ಅದಕ್ಕೆ ಬದಲಾಗಿ ಈ ಕೆಳಗೆ ಬರುವ ಪ್ರಕರಣವು ಇಡಲ್ಪಟ್ಟಿರುತ್ತೆ; ಅದೇನಂದರೆ :—

ರಾಜದ್ರೋಹ.

“124 A ಯಾವನು ವಾಚ್ಯವಾದ ಅಥವಾ ಬರಹ ಮೂಲಕವಾದ ಮಾತಿನಿಂದಾಗಲಿ, ಗುರ್ತಿನಿಂದಾಗಲಿ, ಕಣ್ಣಿಗೆ ತಿಳಿಯುವ ಚಿತ್ರದಿಂದಾಗಲಿ, ಇನ್ಯಾವ ವಿಧದಿಂದಾಗಲಿ, ಇಂಡಿಯಾದೇಶದ ಚಕ್ರವರ್ತಿನೀಯವರಾದ, ಮಹಿಮೆಯನ್ನು ಹೊಂದಿದ ಶ್ರೀಮನ್ ಮಹಾರಾಜರವರ, ಅಥವಾ ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರ, ಅಥವಾ ಬ್ರಿಟಿಷ್ ಇಂಡಿಯಾದಲ್ಲಿಯೂ ಮತ್ತು ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರ ದೇಶದಲ್ಲಿಯೂ ನಿಬಂಧನೆ ಮೇರೆಗೆ ಸ್ಥಾಪಿಸಲ್ಪಟ್ಟ ಗವರನ್ಮೆಂಟಿನವರುಗಳ ವಿಷಯದಲ್ಲಿ ದ್ವೇಷವನ್ನು ಅಥವಾ ತಿರಸ್ಕಾರವನ್ನು ಉಂಟುಮಾಡುತ್ತಾನೋ ಅಥವಾ ಉಂಟುಮಾಡಲು ಯತ್ನಿಸುತ್ತಾನೋ ಅಥವಾ ಅವರುಗಳ ವಿಷಯದಲ್ಲಿ ಅಪ್ರೀತಿಯುಂಟಾಗುವಂತೆ ಪ್ರೇರೇಪಿಸುತ್ತಾನೋ ಅಥವಾ ಪ್ರೇರೇಪಿಸಲು ಯತ್ನಿಸುತ್ತಾನೋ ಅಂಥಾ ಪ್ರತಿ ಮನುಷ್ಯನು ಯಾವಜ್ಜೀವವೂ ಅಥವಾ ಕಡಿಮೆ ಕಾಲದವರೆಗೆ, ಅದಕ್ಕೆ ಜುಲುಮಾನೆ ಸೇರಿಸಬಹುದಾಗಿದ್ದು, ನೀರಿನಮೇಲೆ ಕಳುಹಿಸಲ್ಪಡುವದರ ಮೂಲಕವಾಗಿಯಾಗಲಿ, ಅಥವಾ ಜುಲುಮಾನೆ ಸೇರಿಸಬಹುದಾಗಿದ್ದು ಮೂರು ವರುಷಗಳ ಪರ್ಯಂತ ವ್ಯಾಪಿಸಬಹುದಾದ ಕೈದಿನ ಮೂಲಕವಾಗಿಯಾಗಲಿ, ಅಥವಾ ಜುಲುಮಾನೆ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಡತಕ್ಕದ್ದು.

“ವಿವರ 1.—“ಅಪ್ರೀತಿ” ಎಂಬ ಪದದಲ್ಲಿ ರಾಜಭಕ್ತಿ ಶೂನ್ಯತೆ ಮತ್ತು ಸಮಸ್ತ ದ್ವೇಷಭಾವನೆಗಳು ಅಡಗಿರುತ್ತವೆ.

“ವಿವರ 2.—ಇಂಡಿಯ ಗವರನ್ಮೆಂಟಿನವರ ಅಥವಾ ಮೈಸೂರು ಗವರನ್ಮೆಂಟಿನವರ ಕಾರ್ಯಗಳನ್ನು ನ್ಯಾಯಸಮ್ಮತವಾದ ಉಪಾಯಗಳಿಂದ ಬದಲು ಮಾಡಿಸುವ ಉದ್ದೇಶ್ಯ ದ್ವೇಷ, ತಿರಸ್ಕಾರ ಅಥವಾ ಅಪ್ರೀತಿ ಉಂಟಾಗುವಂತೆ ಪ್ರೇರೇಪಿಸದೆ ಅಥವಾ ಪ್ರೇರೇಪಿಸಲಿಕ್ಕೆ ಯತ್ನಿಸದೆ, ಸದರೀ ಕಾರ್ಯಗಳ ವಿಷಯವಾಗಿ ಅಸಮ್ಮತಿಯನ್ನು ವ್ಯಕ್ತಪಡಿಸುವ ವ್ಯಾಖ್ಯಾನಗಳು ಈ ಪ್ರಕರಣಕ್ಕೊಳಪಡುವ ಒಂದು ಅಪರಾಧವಾಗುವದಿಲ್ಲ.

“ವಿವರ 3.—ದ್ವೇಷ, ತಿರಸ್ಕಾರ, ಅಥವಾ ಅಪ್ರೀತಿ ಉಂಟಾಗುವಂತೆ ಪ್ರೇರೇಪಿಸದೆ ಅಥವಾ ಪ್ರೇರೇಪಿಸಲಿಕ್ಕೆ ಯತ್ನಿಸದೆ, ಇಂಡಿಯ ಗವರನ್ಮೆಂಟಿನವರ ಅಥವಾ ಮೈಸೂರು ಗವರನ್ಮೆಂಟಿನವರ ರಾಜ್ಯಭಾರಿಕ ಅಥವಾ ಇತರ ಚರ್ಯೆಯ ವಿಷಯವಾಗಿ ಅಸಮ್ಮತಿಯನ್ನು ವ್ಯಕ್ತಪಡಿಸುವ ವ್ಯಾಖ್ಯಾನಗಳು ಈ ಪ್ರಕರಣಕ್ಕೊಳಪಡುವ ಒಂದು ಅಪರಾಧವಾಗುವದಿಲ್ಲ.”

13. ಸದರೀ ಕೋಡಿನ 153ನೇ ಪ್ರಕರಣದ ತರುವಾಯ ಈ ಕೆಳಗೆ ಬರುವ ಪ್ರಕರಣವನ್ನು ಇಡತಕ್ಕದ್ದು, ಯಾವದೆಂದರೆ :—

ಬೇರೆಬೇರೆ ವರ್ಗಗಳೊಳಗೆ ದ್ವೇಷವನ್ನು ಅಭಿವೃದ್ಧಿಪಡಿಸೋಣ.

“153 A ಯಾವನು ವಾಚ್ಯವಾದ ಅಥವಾ ಬರಹ ಮೂಲಕವಾದ ಮಾತಿನಿಂದಾಗಲಿ, ಗುರ್ತಿನಿಂದಾಗಲಿ, ಕಣ್ಣಿಗೆ ತಿಳಿಯುವ ಚಿತ್ರದಿಂದಾಗಲಿ ಇನ್ಯಾವ ವಿಧದಿಂದಾಗಲಿ, ಮಹಿಮೆಯನ್ನು ಹೊಂದಿದ ಶ್ರೀಮನ್ ಮಹಾರಾಜ ಚಕ್ರವರ್ತಿನಿಯವರ, ಅಥವಾ ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರ ಪ್ರಜೆಗಳ ಬೇರೆಬೇರೆ ವರ್ಗಗಳೊಳಗೆ ದ್ವೇಷಭಾವನೆಗಳನ್ನು ಅಥವಾ ವೈರಭಾವನೆಗಳನ್ನು ಹೆಚ್ಚಿಸುತ್ತಾನೋ ಅಥವಾ ಹೆಚ್ಚಿಸಲಿಕ್ಕೆ ಯತ್ನಿಸುತ್ತಾನೋ ಅಂಥಾ ಪ್ರತಿ ಮನುಷ್ಯನು ಎರಡು ವರುಷಗಳ ಪರ್ಯಂತ ವ್ಯಾಪಿಸಬಹುದಾದ ಕೈದಿನ ಮೂಲಕವಾಗಿಯಾಗಲಿ, ಜುಲುಮಾನೆ ಮೂಲಕವಾಗಿಯಾಗಲಿ, ಇವೆರಡರ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಡತಕ್ಕದ್ದು.

“ವಿವರ.—ಮಹಿಮೆಯನ್ನು ಹೊಂದಿದ ಶ್ರೀಮನ್ ಮಹಾರಾಜ ಚಕ್ರವರ್ತಿನಿಯವರ ಅಥವಾ ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರ ಪ್ರಜೆಗಳ ಬೇರೆಬೇರೆ ವರ್ಗಗಳೊಳಗೆ ದ್ವೇಷ ಅಥವಾ ವೈರಭಾವನೆಗಳನ್ನು ಹುಟ್ಟಿಸುವಂಥಾ ಅಥವಾ ಹುಟ್ಟಿಸುವ ಸ್ವಭಾವವುಳ್ಳಂಥಾ ವಿಷಯಗಳನ್ನು ನಿವೃತ್ತಿ ಪಡಿಸುವ ಬಗ್ಗೆ, ದುರಭಿಪ್ರಾಯವಿಲ್ಲದೆ ಮತ್ತು ಅಂಥಾ ವಿಷಯಗಳು ಪರಿಹಾರವಾಗಬೇಕೆಂಬ ನಿಸ್ಪೃಹವಾದ ಉದ್ದೇಶದಿಂದ ಅವುಗಳನ್ನು ತೋರಿಸಿ ಕೊಡುವದು, ಈ ಪ್ರಕರಣದ ಅರ್ಥಕ್ಕೊಳಪಡುವ ಒಂದು ಅಪರಾಧವಾಗುವದಿಲ್ಲ.”

14. ಸದರೀ ಕೋಡಿನ 177ನೇ ಪ್ರಕರಣಕ್ಕೆ ಈ ಕೆಳಗೆ ಬರುವದನ್ನು ಸೇರಿಸತಕ್ಕದ್ದು, ಏನಂದರೆ :—

“ವಿವರ.—176ನೆ ಪ್ರಕರಣದಲ್ಲಿ ಮತ್ತು ಈ ಪ್ರಕರಣದಲ್ಲಿ “ಅಪರಾಧ” ಎಂಬ ಪದವು, ಮೈಸೂರಿನ ಹೊರಗೆ ಯಾವದೊಂದು ಸ್ಥಳದಲ್ಲಿ ನಡಿಸಲ್ಪಟ್ಟು, ಮೈಸೂರಿನೊಳಗೆ ನಡಿಸಲ್ಪಟ್ಟಿದ್ದರೆ 302, 304, 382, 392, 393, 394, 395, 396, 397, 398, 399, 402, 435, 436, 449, 450, 457, 458, 459, ಮತ್ತು 460ನೇ ಪ್ರಕರಣಗಳ ಪ್ರಕಾರ ಯಾವದಾದರೂ ಒಂದರಮೇರೆಗೆ ಶಿಕ್ಷಿಸಲ್ಪಡಬಹುದಾದ ಯಾವದೊಂದು ಕೃತ್ಯವನ್ನು ಅಡಗಿಸಿಕೊಳ್ಳುತ್ತದೆ; ಮತ್ತು “ಅಪರಾಧಿ” ಎಂಬುವ ಪದವು ಅಂಥಾ ಯಾವದೊಂದು ಕೃತ್ಯನಡಿಸಿದ ತಪ್ಪು ಸಾಬೀತು ಪಟ್ಟಿದ್ದಾಗಿ ಕಂಡುಬಂದ ಯಾವನೊಬ್ಬ ಮನುಷ್ಯನನ್ನು ಅಡಗಿಸಿಕೊಳ್ಳುತ್ತದೆ.

15. ಸದರೀ ಕೋಡಿನ 182ನೇ ಪ್ರಕರಣಕ್ಕೆ ಬದಲಾಗಿ ಈ ಕೆಳಗೆ ಬರುವದನ್ನು ಇಡತಕ್ಕದ್ದು ಏನಂದರೆ :—

ಇನ್ನೊಬ್ಬ ಮನುಷ್ಯನಿಗೆ ಹಾನಿಕರವಾಗಿ ಸರಕಾರದ ಉದ್ಯೋಗಸ್ಥನು ತನ್ನ ನ್ಯಾಯವಾದ ಅಧಿಕಾರವನ್ನು ನಡಿಸುವಂತೆ ಮಾಡಬೇಕೆಂಬ ಅಭಿಪ್ರಾಯದಿಂದ ಸುಳ್ಳು ವರ್ತಮಾನವನ್ನು ಕೊಡೋಣ.

"182. ಯಾವನು ಸುಳ್ಳೆಂತ ತನಿಗೆ ತಿಳಿದಿರುವ ಅಥವಾ ಸುಳ್ಳೆಂತ ತಾನು ನಂಬಿ ಇರುವ ವರ್ತಮಾನವನ್ನು ಕೊಡುವದರ ಮೂಲಕವಾಗಿ ಯಾವನೊಬ್ಬ ಸರಕಾರಿ ಉದ್ಯೋಗಸ್ಥನ ಕೈಯಲ್ಲಿ—

(a) ಆತನಿಗೆ ಯಾವದರ ಕುರಿತು ಅಂಥಾ ವರ್ತಮಾನ ಕೊಡೋಣಾಗಿದೆಯೋ ಆ ವಿಧ್ಯಮಾನದ ನಿಜಸ್ಥಿತಿ ಅವನಿಗೆ ತಿಳಿದಿದ್ದರೆ ಅವನು ಯಾವದನ್ನು ಮಾಡಕೂಡದೊ ಅದನ್ನು ಮಾಡಿಸಬೇಕೆಂಬ ಅಥವಾ ಯಾವದನ್ನು ಮಾಡದೆ ಬಿಡಕೂಡದೊ ಅದನ್ನು ಮಾಡಬೇಕೆಂಬ ; ಅಥವಾ

(b) ಯಾವನೊಬ್ಬ ಮನುಷ್ಯನಿಗೆ ಹಾನಿಕರ ಅಥವಾ ರೋಷ್ಟಕರವಾಗುವ ಹಾಗೆ ಅಂಥಾ ಸರಕಾರಿ ಉದ್ಯೋಗಸ್ಥನ ನ್ಯಾಯವಾದ ಅಧಿಕಾರವನ್ನು ನಡಿಸುವಹಾಗೆ ಮಾಡಿಸಬೇಕೆಂಬ,

ಅಭಿಪ್ರಾಯದಿಂದ ಅಥವಾ ಅಂಥಾದ್ದನ್ನು ನಡಿಸುವ ಸಂಭವ ಉಂಟೆಂದು ತಿಳಿದು ಹಾಗೆ ಸುಳ್ಳು ವರ್ತಮಾನ ಕೊಡುತ್ತಾನೊ ಅಂಥಾ ಪ್ರತಿ ಮನುಷ್ಯನು ಆರು ತಿಂಗಳ ವರೆಗಿನ ಯಾವದಾದರೂ ಒಂದುವಿಧವಾದ ಕೈದಿನ ಮೂಲಕವಾಗಲಿ, ಸಾವಿರ ರೂಪಾಯಿ ವರೆಗಿನ ಜುಲುಮಾನೆ ಮೂಲಕವಾಗಲಿ, ಇವೆರಡರ ಮೂಲಕವಾಗಲಿ ಶಿಕ್ಷಿಸಲ್ಪಡತಕ್ಕದ್ದು.

" ಉದಾಹರಣೆಗಳು.

"(a) A ಎಂಬುವನು ತಾನು ಸುಳ್ಳು ವರ್ತಮಾನ ಕೊಡುವದರಿಂದ ಒಬ್ಬ ಮೇಜಿಸ್ಟ್ರೇಟು ತನ್ನ ತಾಬೇದಾರಿ ಪೋಲೀಸ್ ಆಫಿಸರಾದ Z ಎಂಬುವನನ್ನು ತಗ್ಗಿರು ಮಾಡುವ ಸಂಭವ ಉಂಟೆಂತ ತಿಳಿದವನಾಗಿ Z ಎಂಬುವನು ತನ್ನ ಉದ್ಯೋಗದ ಕೆಲಸದಲ್ಲಿ ಅಸಡ್ಡೆ ಅಥವಾ ದುರ್ನಡತೆ ಮಾಡಿದ್ದಾನೆಂತ ಸದರೀ ಮೇಜಿಸ್ಟ್ರೇಟಿಗೆ ಸುಳ್ಳು ವರ್ತಮಾನ ತಿಳಿಸುತ್ತಾನೆ. ಇದರಿಂದ A ಎಂಬುವನು ಈ ಪ್ರಕರಣದಲ್ಲಿ ನಮೂದಿರುವ ಅಪರಾಧವನ್ನು ಮಾಡಿದವನಾಗುತ್ತಾನೆ.

(b) Z ಎಂಬುವನು ಛವಾವು ಉಪ್ಪನ್ನು ಒಂದು ಗುಪ್ತಸ್ಥಳದಲ್ಲಿಟ್ಟುಕೊಂಡಿದ್ದಾನೆಂತ A ಎಂಬುವನು ಒಬ್ಬ ಸರಕಾರ ಉದ್ಯೋಗಸ್ಥನಿಗೆ ಸುಳ್ಳು ಸುದ್ದಿ ತಿಳಿಸುತ್ತಾನೆ. ಹಾಗೆ ತಿಳಿಸುವ ಕಾಲದಲ್ಲಿ ಆ ವರ್ತಮಾನವು ಸುಳ್ಳೆಂತ A ಎಂಬುವನಿಗೆ ತಿಳಿದಿತ್ತು ಮತ್ತು ಆ ವರ್ತಮಾನ ಕೊಟ್ಟ ದೆಸೆಯಿಂದ Z ಎಂಬುವನ ಮನೆಯು ಅವನಿಗೆ ರೋಷ್ಟಕರವಾಗುವಹಾಗೆ ಝಡ್ತಿ ಮಾಡಲ್ಪಡುವ ಸಂಭವವುಂಟೆಂತ ಸಹಾ ತಿಳಿದಿತ್ತು. A ಎಂಬುವನು ಈ ಪ್ರಕರಣದಲ್ಲಿ ವಿವರಿಸಲ್ಪಟ್ಟ ಅಪರಾಧ ಮಾಡಿದವನಾಗುತ್ತಾನೆ.

(c) A ಎಂಬುವನು ಫಲಾನೆ ಗ್ರಾಮದ ಬಳಿಯಲ್ಲಿ ತನ್ನ ಮೇಲೆ ಜುಲುಂ ನಡಿಸಿದ್ದಾರೆಂತ ಸುಳ್ಳು ವರ್ತಮಾನ ಪೋಲೀಸಿನವರಿಗೆ ಕೊಡುತ್ತಾನೆ ; ಆದರೆ ಜುಲುಂ ನಡಿಸಿದವರು ಇಂಥವರೆಂದು ಯಾರೊಬ್ಬನ ಹೆಸರು ಹೇಳುವದಿಲ್ಲ. ಆದರೆ ಈ ವರ್ತಮಾನದ ದೆಸೆಯಿಂದ ಸದರೀ ಗ್ರಾಮಸ್ಥರಿಗೆ ಅಥವಾ ಅವರ ಪೈಕಿ ಕೆಲವರಿಗೆ ಉಪದ್ರವಾಗುವಹಾಗೆ ಪೋಲೀಸಿನವರು ಸದರೀ ಗ್ರಾಮದಲ್ಲಿ ತನಖಿಗಳನ್ನು ಮತ್ತು ಝಡ್ತಿಗಳನ್ನು ನಡಿಸುವ ಸಂಭವ ಉಂಟೆಂತ ಅವನಿಗೆ ತಿಳಿದಿರುತ್ತದೆ. ಇದರಿಂದ A ಯು ಈ ಪ್ರಕರಣಕ್ಕನುಗುಣವಾದ ಅಪರಾಧ ಮಾಡಿದವನಾಗುತ್ತಾನೆ.

16. ಸದರೀ ಕೋಡಿನ 193ನೇ ಪ್ರಕರಣದ 1ನೇ ವಿವರದಲ್ಲಿ " ಅಥವಾ ಒಂದು ಮಿಲಿಟೆರಿ ಕೋರ್ಟ್ ಆಫ್ ರಿಕ್ವೈರ್ಮಿಯ ಮುಂದೆ " ಎಂಬುವ ಪದಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತವೆ.

17. ಸದರೀ ಕೋಡಿನ 203ನೇ ಪ್ರಕರಣಕ್ಕೆ ಇದರ ಕೆಳಗೆ ಬರುವದನ್ನು ಸೇರಿಸತಕ್ಕದ್ದು, ಏನಂದರೆ :—

" ವಿವರ.—201 ಮತ್ತು 202ನೇ ಪ್ರಕರಣಗಳಲ್ಲಿ ಮತ್ತು ಈ ಪ್ರಕರಣದಲ್ಲಿ " ಅಪರಾಧ " ಎಂಬ ಪದವು, ಮೈಸೂರು ಹೊರಗೆ ಯಾವದೊಂದು ಸ್ಥಳದಲ್ಲಿ ನಡಿಸಲ್ಪಟ್ಟಿದ್ದು, ಮೈಸೂರಲ್ಲಿ ನಡಿಸಲ್ಪಟ್ಟರೆ 302, 304, 382, 392, 393, 394, 395, 396, 397, 398, 399, 402, 435, 436, 449, 450, 457, 458, 459, ಮತ್ತು 460ನೇ ಪ್ರಕರಣಗಳ ಪೈಕಿ ಯಾವದಾದರೊಂದಕ್ಕನುಗುಣವಾಗಿ ಶಿಕ್ಷಿಸಲ್ಪಡಬಹುದಾದ ಯಾವದೊಂದು ಕೃತ್ಯವನ್ನು ಅಡಗಿಸಿಕೊಂಡಿರುತ್ತೆ.

18. ಸದರೀ ಕೋಡಿನ 212ನೇ ಪ್ರಕರಣದಲ್ಲಿ ವಿನಹಾಯಿತಿಗೆ ಕೂಡಲೆ ಮುಂದೆ ಈ ಕೆಳಗೆ ಬರುವದನ್ನು ಇಡತಕ್ಕದ್ದು, ಏನಂದರೆ :—

" ಈ ಪ್ರಕರಣದಲ್ಲಿ " ಅಪರಾಧ " ಎಂಬುವದು ಮೈಸೂರಿನ ಹೊರಗೆ ಯಾವದೊಂದು ಸ್ಥಳದಲ್ಲಿ ನಡಿಸಲ್ಪಟ್ಟಿದ್ದು ಮೈಸೂರಲ್ಲಿ ನಡಿಸಲ್ಪಟ್ಟರೆ 302, 304, 382, 392, 393, 394, 395, 396, 397, 398, 399, 402, 435, 436, 449, 450, 457, 458, 459, ಮತ್ತು 460ನೇ ಪ್ರಕರಣಗಳ ಪೈಕಿ ಯಾವದಾದರೊಂದಕ್ಕನುಗುಣವಾಗಿ ಶಿಕ್ಷಿಸಲ್ಪಡಬಹುದಾದ ಯಾವದೊಂದು ಕೃತ್ಯವನ್ನು ಅಡಗಿಸಿಕೊಂಡಿರುತ್ತದೆ ; ಮತ್ತು ಅಂಥಾ ಪ್ರತಿ ಕೃತ್ಯವು ಅಪಾದನೆ ಪಟ್ಟವನು ಮೈಸೂರಿನಲ್ಲಿ ಅದನ್ನು ನಡಿಸಿದ ತಪ್ಪಿತಸ್ಥನಾಗಿದ್ದರೆ ಹ್ಯಾಗೊ ಹಾಗೆಯು ಈ ಪ್ರಕರಣದ ಉದ್ದೇಶಾರ್ಥಗಳ ಬಗ್ಗೆ ಶಿಕ್ಷಿಸಲ್ಪಡತಕ್ಕದ್ದೆಂದು ಭಾವಿಸಾಗತಕ್ಕದ್ದು."

19. ಸದರೀ ಕೋಡಿನ 214ನೇ ಪ್ರಕರಣದಲ್ಲಿ ವಿನಹಾಯಿತಿಗೆ ಬದಲಾಗಿ ಈ ಕೆಳಗೆ ಬರುವದನ್ನು ಇಡತಕ್ಕದ್ದು, ಏನಂದರೆ :—

" ವಿನಹಾಯಿತಿ.—213ನೇ 214ನೇ ಪ್ರಕರಣಗಳ ನಿಯಮಗಳು ಯಾವ ಸಂಗತಿಯಲ್ಲಿ ನ್ಯಾಯಸಮ್ಮತವಾಗಿ ರಾಜಿ ಮಾಡಿಕೊಳ್ಳಬಹುದೊ ಅಂಥಾ ಯಾವ ಸಂಗತಿಗೂ ವ್ಯಾಪಿಸುವದಿಲ್ಲ."

20. ಸದರೀ ಕೋಡಿನ 216ನೇ ಪ್ರಕರಣದ ಮೊದಲನೇ ಕಲಮಿನ ತರುವಾಯು ಈ ಕೆಳಗೆ ಬರುವದನ್ನು ಇಡತಕ್ಕದ್ದು; ಏನಂದರೆ :—

" ಈ ಪ್ರಕರಣದಲ್ಲಿ " ಅಪರಾಧ " ಎಂಬ ಮಾತಿನಲ್ಲಿ, ಒಬ್ಬ ಮನುಷ್ಯನು ಮೈಸೂರಲ್ಲಿ ಯಾವದರ ಕುರಿತು ತಪ್ಪಿತಸ್ಥನಾಗಿದ್ದರೆ ಅಪರಾಧಿ ಎಂಬದಾಗಿ ಎಣಿಸಲ್ಪಟ್ಟು ಶಿಕ್ಷಿಸಲ್ಪಡುತಿದ್ದನೊ, ಮತ್ತು ಯಾವದರ ಬಗ್ಗೆ ಅವನು ಎಕ್ಸ್‌ಟ್ರಾಡಿಶನಿಗೆ (ತಪ್ಪಿತಸ್ಥರನ್ನು ಅನ್ಯ ಸಂಸ್ಥಾನಗಳಿಗೆ ಒಪ್ಪಿಸಿಕೊಡುವದರ ಕುರಿತು) ಸಂಬಂಧಿಸುವ ಯಾವದೊಂದು ನಿಬಂಧನೆಗನುಗುಣವಾಗಿ ಮೈಸೂರಲ್ಲಿ ಹಿಡಿಯಲ್ಪಟ್ಟು ಸೆರೆಯಲ್ಲಿ ಇಡಲ್ಪಡಲಿಕ್ಕೆ ಗುರಿಯಾಗುತ್ತಾನೊ ಅಂಥಾ ಕೃತ್ಯ ಅಥವಾ ಲೋಪವು, ಮೈಸೂರು ಹೊರಗೆ ನಡದಿರುವದಾಗಿ ಹೇಳೋಣಾಗುವಲ್ಲಿ ಅದು ಸಹ ಅಡಗಿರುತ್ತದೆ; ಮತ್ತು ಅಂಥಾ ಪ್ರತಿ ಕೃತ್ಯವು ಅಥವಾ ಲೋಪವು, ಅಪಾದನೆ ಪಟ್ಟ ಮನುಷ್ಯನು ಮೈಸೂರಲ್ಲಿ ಅವರ ಕುರಿತು ತಪ್ಪಿತಸ್ಥನಾಗಿದ್ದರೆ ಹ್ಯಾಗೊ ಹಾಗೆಯೇ ಶಿಕ್ಷೆಗೆ ಗುರಿಯಾಗತಕ್ಕದ್ದೆಂಬದಾಗಿ ಈ ಪ್ರಕರಣದ ಉದ್ದೇಶಾರ್ಥವಾಗಿ ಎಣಿಸಲ್ಪಡತಕ್ಕದ್ದು."

21. ಸದರೀ ಕೋಡಿನ 216ನೇ ಪ್ರಕರಣದ ತರುವಾಯು ಈ ಕೆಳಗೆ ಬರುವದನ್ನು ಇಡತಕ್ಕದ್ದು; ಏನಂದರೆ :—

ಚೋರಿ ನಡಿಸಿದಂಥಾವರಿಗೆ ಅಥವಾ ದರೋಡೆ ಕಳ್ಳರಿಗೆ ಆಸರೆ ಕೊಟ್ಟ ಬಗ್ಗೆ ಶಿಕ್ಷೆ.

" 216 A. ಯಾರಾಗಲಿ ಚೋರಿ ಅಥವಾ ದರೋಡೆ ಕಳವು ನಡಿಸಲಿಕ್ಕುದ್ಯುಕ್ತರಾಗಿದ್ದಾರೆ ಅಥವಾ ಇತ್ತಲಾಗಿ ನಡಿಸಿದ್ದಾರೆ ಎಂಬದನ್ನು ತಿಳದು ಅಥವಾ ನಂಬಲಿಕ್ಕೆ ಕಾರಣವಿದ್ದು ಅಂಥಾ ಚೋರಿ ಅಥವಾ ದರೋಡೆ ಕಳವು ಮಾಡುವಂಥಾದ್ದನ್ನು ಸುಲಭ ಪಡಿಸುವ ಅಥವಾ ಅವರನ್ನು ಅಥವಾ ಅವರ ಪೈಕಿ ಯಾರನ್ನಾಗಲಿ ಶಿಕ್ಷೆಯಿಂದ ತಪ್ಪಿಸುವ ಅಭಿಪ್ರಾಯದಿಂದ ಅವರಿಗೆ ಅಥವಾ ಅವರ ಪೈಕಿ ಯಾರಿಗಾಗಲಿ ಯಾವನು ಆಸರೆ ಕೊಡುತ್ತಾನೊ ಅಂಥಾ ಮನುಷ್ಯನು ಏಳು ಸಂವತ್ಸರಗಳವರೆಗೆ ವ್ಯಾಪಿಸಬಹುದಾದಂಥಾ ಒಂದು ವಾಯಿದೆ ಪರ್ಯಂತ ಕಠಿಣ ಕೈದಿನ ಮೂಲಕವಾಗಿ ಶಿಕ್ಷಿಸಲ್ಪಡತಕ್ಕದ್ದು; ಮತ್ತು ಜುಲುಮಾನೆಗೆ ಸಹಾ ಗುರಿಯಾಗತಕ್ಕದ್ದು.

" ವಿವರ.—ಈ ಪ್ರಕರಣದ ಉದ್ದೇಶಾರ್ಥಗಳ ಬಗ್ಗೆ ಚೋರಿ ಅಥವಾ ದರೋಡೆ ಕಳವು ಮಾಡಲಿಕ್ಕೆ ಯತ್ನಿಸಲ್ಪಟ್ಟದ್ದು ಅಥವಾ ಮಾಡಲ್ಪಟ್ಟದ್ದು ಮೈಸೂರಿನಲ್ಲಿಯೊ ಅಥವಾ ಮೈಸೂರು ಹೊರಗೊ ಎಂಬ ಸಂಗತಿಯು ಮುಖ್ಯವಾದದ್ದಲ್ಲ.

" ವಿನಹಾಯಿತಿ.—ಈ ನಿಯಮವು ಅಪರಾಧಿಯ ಗಂಡ ಅಥವಾ ಹೆಂಡತಿಯು ಆಸರೆ ಕೊಟ್ಟ ಸಂಗತಿಗೆ ವ್ಯಾಪಿಸುವದಿಲ್ಲ.

212, 216 ಮತ್ತು 216 Aನೇ ಪ್ರಕರಣಗಳಲ್ಲಿ " ಆಸರೆ ಕೊಡು " ಎಂಬದರ ಅರ್ಥ ವಿವರಣೆ.

" 216 B. 212, 216, ಮತ್ತು 216 A ನೇ ಪ್ರಕರಣಗಳಲ್ಲಿ " ಆಸರೆ ಕೊಡು " ಎಂಬ ಮಾತು ಒಬ್ಬ ಮನುಷ್ಯನಿಗೆ ಆಶ್ರಯ, ಆಹಾರ, ಪಾನ, ಹಣ, ತೊಡಿಗೆ, ಆಯುಧ, ಕೋವಿಮದ್ದು ಅಥವಾ ಪ್ರಯಾಣ ಮಾಡುವದಕ್ಕೆ ಉಪಯೋಗಿಸುವ ವಾಹನ ವಗೈರೆಯನ್ನು ಕೊಡೋಣವನ್ನು ಮತ್ತು ಒಬ್ಬ ಮನುಷ್ಯನನ್ನು ಹಿಡಿಯೋಣದಿಂದ ತಪ್ಪಿಸಿಕೊಳ್ಳುವದಕ್ಕೆ ಯಾವವಿಧದಲ್ಲಾದರೂ ಸಹಾಯ ಮಾಡೋಣವನ್ನು ಸಹಾ ಅಡಗಿಸಿಕೊಂಡಿರುತ್ತದೆ.

22. ಸದರೀ ಕೋಡಿನ 225 A ನೇ ಪ್ರಕರಣಕ್ಕೆ ಬದಲಾಗಿ ಈ ಕೆಳಗೆ ಬರುವ ಪ್ರಕರಣಗಳನ್ನು ಇಡತಕ್ಕದ್ದು, ಏನಂದರೆ :—

ಅನ್ಯಥಾ ನಿಬಂಧಿಸೋಣಾಗದಿರುವ ಸಂಗತಿಗಳಲ್ಲಿ ಸರ್ಕಾರಿ ಉದ್ಯೋಗಸ್ಥನು ಹಿಡಿಯದೆ ಇರೋಣ ಅಥವಾ ತಪ್ಪಿಸಿಕೊಳ್ಳಲಿಕ್ಕೆ ಬಿಡೋಣ.

" 225 A. ಸರ್ಕಾರಿ ಉದ್ಯೋಗಸ್ಥನಾಗಿದ್ದುಕೊಂಡು, ಹಾಗೆ ಸರ್ಕಾರಿ ಉದ್ಯೋಗಸ್ಥನಾಗಿರುವ ಕಾರಣ 221ನೇ, 222ನೇ ಅಥವಾ 223ನೇ ಪ್ರಕರಣದಲ್ಲಿ ಅಥವಾ ತಾತ್ಕಾಲಿಕವಾಗಿ ಜಾರಿಯಲ್ಲಿರುವ ಇತರ ಯಾವದಾದರೂ ನಿಬಂಧನೆಯಲ್ಲಿ ವಿಧಿಸೋಣಾಗದಿರುವ ಯಾವದೊಂದು ಸಂಗತಿಯಲ್ಲಿ ಯಾವ ಮನುಷ್ಯನನಾದರೂ ಹಿಡಿಯಲಿಕ್ಕೆ ಅಥವಾ ಕೈದಿನಲ್ಲಿ ಇಡಲಿಕ್ಕೆ ನ್ಯಾಯವಾಗಿ ಬದ್ಧನಾಗಿರುವ ಯಾವನು, ಅಂಥಾ ಮನುಷ್ಯನನ್ನು ಹಿಡಿಯದೆ ಇರುತ್ತಾನೋ ಅಥವಾ ಕೈದಿನಿಂದ ಅಂಥಾ ಮನುಷ್ಯನು ತಪ್ಪಿಸಿಕೊಳ್ಳುವದನ್ನು ಸಹಿಸುತ್ತಾನೊ ಅಂಥಾ ಪ್ರತಿ ಮನುಷ್ಯನು—

(*a*) ಅವನು ಮನಃಪೂರ್ವಕವಾಗಿ ಹಾಗೆ ಮಾಡುತ್ತಾನಾದರೆ, ಮೂರು ಸಂವತ್ಸರತನಕ ವ್ಯಾಪಿಸಬಹುದಾದ ಒಂದು ವಾಯಿದೆ ಪರ್ಯಂತ ಯಾವದಾದರೂ ಒಂದು ವಿಧದ ಕೈದಿನ ಮೂಲಕವಾಗಿಯಾಗಲಿ ಜುಲುಮಾನೆಯ ಮೂಲಕವಾಗಿಯಾಗಲಿ, ಈ ಎರಡು ಮೂಲಕವಾಗಿ ಯಾಗಲಿ, ಶಿಕ್ಷಿಸಲ್ಪಡತಕ್ಕದ್ದು; ಮತ್ತು

(*b*) ಅವನು ಅಶ್ರದ್ಧೆಯಿಂದ ಹಾಗೆ ಮಾಡುತ್ತಾನಾದರೆ, ಎರಡು ಸಂವತ್ಸರದ ತನಕ ವ್ಯಾಪಿಸಬಹುದಾದ ಒಂದು ವಾಯಿದೆ ಪರ್ಯಂತ ಬರೀ ಕೈದು ಮೂಲಕವಾಗಿಯಾಗಲಿ, ಜುಲುಮಾನೆಯು ಮೂಲಕವಾಗಿಯಾಗಲಿ, ಈ ಎರಡರ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಡತಕ್ಕದ್ದು.

"225 B. 224ನೇ ಅಥವಾ 225ನೇ ಪ್ರಕರಣದಲ್ಲಾಗಲಿ, ತಾತ್ಕಾಲಿಕವಾಗಿ ಜಾರಿಯಲ್ಲಿರುವ ಇತರ ಯಾವದಾದರೂ ನಿಬಂಧನೆಯಲ್ಲಾಗಲಿ ವಿಧಿಸೋಣಾಗದಿರುವ ಯಾವದೊಂದು ಸಂಗತಿಯಲ್ಲಿ ಯಾವನು, ತನ್ನನ್ನು ಅಥವಾ ಇತರ ಯಾವನೊಬ್ಬ ಮನುಷ್ಯನನ್ನು ನ್ಯಾಯವಾಗಿ ಹಿಡಿಯುವಾಗ ಮನಃಪೂರ್ವಕವಾಗಿ ಎದುರಿಸುತ್ತಾನೊ, ಅಥವಾ ಅಕ್ರಮವಾಗಿ ಆತಂಕ ಪಡಿಸುತ್ತಾನೊ, ಅಥವಾ ನ್ಯಾಯಪ್ರಕಾರ ತನ್ನನ್ನು ಇಟ್ಟಿರುವ ಕೈದಿನಿಂದ ತಪ್ಪಿಸಿಕೊಳ್ಳುತ್ತಾನೊ, ಅಥವಾ ತಪ್ಪಿಸಿಕೊಳ್ಳಲಿಕ್ಕೆ ಯತ್ನಿಸುತ್ತಾನೊ, ಅಥವಾ ಮತ್ತೊಬ್ಬನನ್ನು ನ್ಯಾಯವಾಗಿ ಕೈದುಪಡಿಸಿ ಇರುವ ಕೈದಿನಿಂದ ಅವನನ್ನು ತಪ್ಪಿಸುತ್ತಾನೊ ಅಥವಾ ತಪ್ಪಿಸಲಿಕ್ಕೆ ಯತ್ನಿಸುತ್ತಾನೊ, ಅಂಥಾ ಪ್ರತಿ ಮನುಷ್ಯನು ಆರು ತಿಂಗಳಿಗೆ ಮಿಾರದ ಒಂದು ವಾಯಿದೆ ಪರ್ಯಂತ ಯಾವದಾದರೂ ಒಂದು ವಿಧದ ಕೈದಿನ ಮೂಲಕವಾಗಿಯಾಗಲಿ, ಜುಲುಮಾನೆಯ ಮೂಲಕವಾಗಿಯಾಗಲಿ, ಈ ಎರಡರ ಮೂಲಕವಾಗಿಯಾಗಲಿ, ಶಿಕ್ಷಿಸಲ್ಪಡತಕ್ಕದ್ದು."

ಅನ್ಯಥಾ ವಿಧಿಸೋಣಾಗದಿರುವ ಸಂಗತಿಗಳಲ್ಲಿ ನ್ಯಾಯವಾಗಿ ಹಿಡಿಯುವಾಗ್ಯೆ ಎದುರಿಸುವದು ಅಥವಾ ಆತಂಕ ಮಾಡುವದು ಅಥವಾ ತಪ್ಪಿಸಿಕೊಂಡು ಹೋಗುವದು ಅಥವಾ ತಪ್ಪಿಸುವದು.

23. (1) ಸದರೀ ಕೋಡಿನ 230ನೆ ಪ್ರಕರಣದ ಎರಡನೆ ಕಲಮಿಗೆ ಬದಲಾಗಿ ಈ ಕೆಳಗೆ ಬರುವದನ್ನು ಇಡತಕ್ಕದ್ದು. ಏನಂದರೆ :—

"ಹಣವಾಗಿ ಉಪಯೋಗಿಸಲ್ಪಡುವ ಬಗ್ಗೆ ಮಹಾರಾಜಚಕ್ರವರ್ತಿಯವರ ಅಪ್ಪಣೆಪ್ರಕಾರ, ಅಥವಾ ಇಂಡಿಯಾ ಗವರನ್ಮೆಂಟಿನವರ ಅಥವಾ ಪ್ರೆಸಿಡೆನ್ಸಿ ಗವರನ್ಮೆಂಟಿನವರ ಅಪ್ಪಣೆ ಪ್ರಕಾರ ಅಥವಾ ಮಹಾರಾಜಚಕ್ರವರ್ತಿಯವರ ರಾಜ್ಯಗಳಲ್ಲಿನ ಇತರ ಗವರನ್ಮೆಂಟಿನವರ ಅಪ್ಪಣೆ ಪ್ರಕಾರ ಮುದ್ರೆ ಹಾಕೋಣವಾಗಿ ಅವರಿಂದ ಚಲಾವಣಿಗೆ ಬಿಡೋಣಾದ ಲೋಹವು ಮಹಾರಾಜರವರ ನಾಣ್ಯವಾಗಿರುತ್ತದೆ ; ಮತ್ತು ಈ ಮೇರೆಗೆ ಮುದ್ರೆ ಹಾಕೋಣಾಗಿ ಚಲಾವಣಿಗೆ ಬಿಡೋಣಾದ ಲೋಹದ ತುಂಡು ಹಣವಾಗಿ ಉಪಯೋಗಿಸಲ್ಪಡುವದು ನಿಂತುಹೋಗಿದ್ದರೂ ಈ ಅಧ್ಯಾಯದ ಉದ್ದೇಶಾರ್ಥವಾಗಿ ಅದನ್ನು ಮಹಾರಾಜರವರ ನಾಣ್ಯವೆಂಬದಾಗಿ ತಿಳಕೊಳ್ಳತಕ್ಕದ್ದು."

ಮಹಾರಾಜರವರ ನಾಣ್ಯ.

(2) ಅದೇ ಪ್ರಕರಣಕ್ಕೆ ಸೇರಿಸಲ್ಪಟ್ಟ ಉದಾಹರಣೆಗಳಿಗೆ ಈ ಕೆಳಗೆ ಬರುವದನ್ನು ಸೇರಿಸತಕ್ಕದ್ದು, ಏನಂದರೆ :—

(c) "ಇಂಡಿಯಾಗವರನ್ಮೆಂಟಿನವರ ಅಪ್ಪಣೆಯ ಮೇರೆಗೆ ಮುಂಚೆ ಹಣವಾಗಿ ಉಪಯೋಗಿಸಲ್ಪಟ್ಟ 'ಫರಕಾಬಾದ್ ರೂಪಾಯಿಯು' ಈಗ ಆ ಮೇರೆಗೆ ಉಪಯೋಗಿಸಲ್ಪಡುವದಿಲ್ಲವಾದರೂ 'ಮಹಾರಾಜರವರ ನಾಣ್ಯವಾಗಿರುತ್ತದೆ."

24. ಸದರೀ ಕೋಡಿನ XIIನೇ ಅಧ್ಯಾಯಕ್ಕೆ ಈ ಕೆಳಗೆ ಬರುವದನ್ನು ಸೇರಿಸತಕ್ಕದ್ದು, ಏನಂದರೆ :—

"263 A. (1) ಯಾವನು:—

(a) ಯಾವದೊಂದು ಬನಾವಣಿ ಸ್ಟ್ಯಾಂಪನ್ನು ಮಾಡುತ್ತಾನೊ, ತಿಳಿದಿದ್ದು ಚಲಾವಣಿ ಮಾಡುತ್ತಾನೊ, ಅದರ ವ್ಯಾಪಾರ ನಡಿಸುತ್ತಾನೊ ಅಥವಾ ವಿಕ್ರಯಿಸುತ್ತಾನೊ ಅಥವಾ ಯಾವದೊಂದು ಬನಾವಣಿ ಸ್ಟ್ಯಾಂಪನ್ನು ತಿಳಿದಿದ್ದರೂ ಟಪ್ಪಾಲಿನ ಸಹ್ಮಂಥವಾದ ಯಾವದೊಂದು ಉದ್ದೇಶದ ಬಗ್ಗೆ ಉಪಯೋಗಿಸುತ್ತಾನೊ, ಅಥವಾ

ಬನಾವಣಿ ಸ್ಟ್ಯಾಂಪುಗಳನ್ನು ಮನ್ನಾಪಡಿಸೋಣ.

(b) ನ್ಯಾಯವಾದ ಕಾರಣವಿಲ್ಲದೆ ತನ್ನ ಸ್ವಾಧೀನದಲ್ಲಿ ಬನಾವಣಿ ಸ್ಟ್ಯಾಂಪನ್ನು ಇಟ್ಟುಕೊಳ್ಳುತ್ತಾನೊ, ಅಥವಾ

(c) ಯಾವದೊಂದು ಬನಾವಣಿ ಸ್ಟ್ಯಾಂಪನ್ನು ಮಾಡುವ ಬಗ್ಗಿನ ಯಾವದಾದರೂ ಅಚ್ಚನ್ನಾಗಲಿ, ತಗಡನ್ನಾಗಲಿ, ಯಂತ್ರವನ್ನಾಗಲಿ, ಅಥವಾ ಸಾಮುಗ್ರಿಗಳನ್ನಾಗಲಿ ನಿರ್ಮಿಸುತ್ತಾನೊ, ಅಥವಾ ನ್ಯಾಯವಾದ ಕಾರಣವಿಲ್ಲದೆ ಸ್ವಾಧೀನದಲ್ಲಿಟ್ಟುಕೊಳ್ಳುತ್ತಾನೊ,

ಅಂಥಾ ಪ್ರತಿ ಮನುಷ್ಯನು ಇನ್ನೂರು ರೂಪಾಯಿಗಳ ವರೆಗಿನ ಜುಲುಮಾನೆ ಮೂಲಕ ಶಿಕ್ಷಿಸಲ್ಪಡತಕ್ಕದ್ದು.

"(2) ಯಾವದೊಂದು ಬನಾವಣಿ ಸ್ಟ್ಯಾಂಪನ್ನು ಮಾಡುವ ಬಗ್ಗಿನ ಅಂಥಾ ಯಾವದೊಂದು ಮೊಹರನ್ನು, ಅಚ್ಚನ್ನು, ತಗಡನ್ನು, ಯಂತ್ರವನ್ನು ಅಥವಾ ಸಾಮುಗ್ರಿಗಳನ್ನು ಯಾವನೊಬ್ಬ ಮನುಷ್ಯನ ಸ್ವಾಧೀನದಲ್ಲಿಂದ ಹಿಡಿದು ಮುಟ್ಟುಗೋಲು ವಿಧಿಸತಕ್ಕದ್ದು.

"(3) ಈ ಪ್ರಕರಣದಲ್ಲಿ "ಬನಾವಣಿ ಸ್ಟ್ಯಾಂಪು" ಅಂದರೆ ಟಪ್ಪಾಲ್ ಹಾಸಲಿನ ಒಂದು ದರವನ್ನು ತೋರಿಸುವ ಬಗ್ಗೆ ಗವರ್ನಮೆಂಟಿನವರಿಂದ ಹುಟ್ಟಿಸಲ್ಪಟ್ಟದ್ದೆಂದು, ಸುಳ್ಳು ಭಾವನೆಯಾಗುವ ಯಾವದೊಂದು ಸ್ಟ್ಯಾಂಪು, ಅಥವಾ ಗವರ್ನಮೆಂಟಿನವರಿಂದ ಆ ಉದ್ದಿಶ್ಯ ಹುಟ್ಟಿಸಲ್ಪಟ್ಟ ಯಾವದೊಂದು ಸ್ಟ್ಯಾಂಪಿನ ಮಾತೃಕೆ ನಕಲು ಅಥವಾ ಪ್ರತಿ ರೂಪ ಎಂಬ ಅರ್ಥವಾಗುತ್ತದೆ, ಇದು ಕಾಗದದಮೇಲೆ ಇದ್ದರೂ ಅನ್ಯಥಾ ಬರೆಯಲ್ಪಟ್ಟರೂ ಸರಿಗೋ.

"(4) ಈ ಪ್ರಕರಣದಲ್ಲಿ ಮತ್ತು 255ರಿಂದ 263ರ ವರೆಗಿನ (ಎರಡು ಸೇರಿ) ಪ್ರಕರಣಗಳಲ್ಲಿ "ಗವರ್ನಮೆಂಟು" ಎಂಬ ಶಬ್ದವನ್ನು ಒಂದು ಟಪ್ಪಾಲ್ ಹಾಸಲಿನ ದರವನ್ನು ತೋರಿಸುವ ಉದ್ದಿಶ್ಯದ ಬಗ್ಗೆ ಹುಟ್ಟಿಸಲ್ಪಟ್ಟ ಯಾವದೊಂದು ಸ್ಟ್ಯಾಂಪಿನ ಸಂದರ್ಭದಲ್ಲಿ ಅಥವಾ ಅದರ ವಿಷಯವಾಗಿ ಉಪಯೋಗಿಸಿದಾಗ್ಗೆ 17ನೇ ಪ್ರಕರಣದಲ್ಲಿ ಏನು ನಮೂದಿದ್ದಾಗ್ಯೂ ಇಂಡಿಯಾವಿನ ಯಾವದೊಂದು ಭಾಗದಲ್ಲಿ ಮತ್ತು ಶ್ರೀಮದ್ ಮಹಾರಾಜ ಚಕ್ರವರ್ತಿಯವರ ಸ್ವಾಸ್ಥ್ಯಗಳ ಯಾವದೊಂದು ಭಾಗದಲ್ಲಿ, ಅಥವಾ ಯಾವದೊಂದು ಪರಾಯ ದೇಶದಲ್ಲಿ ಎಕ್ಸಿಕ್ಯೂಟಿವ್ ಗವರ್ನಮೆಂಟನ್ನು ನಡಿಸಲಿಕ್ಕೆ ನಿಬಂಧನೆಯ ಮೇರೆಗೆ ಅಧಿಕಾರಗೊಳಿಸಲ್ಪಟ್ಟ ಮನುಷ್ಯನನ್ನು ಅಥವಾ ಮನುಷ್ಯರನ್ನು ಅದು ಅಡಗಿಸಿಕೊಳ್ಳುತ್ತದೆ ಎಂದು ಎಣಿಸತಕ್ಕದ್ದು."

25. ಸದರೀ ಕೋಡಿನ 294ನೇ ಪ್ರಕರಣಕ್ಕೆ ಬದಲಾಗಿ ಈ ಕೆಳಗೆ ಬರುವದನ್ನು ಇಡತಕ್ಕದ್ದು, ಏನಂದರೆ :—

"294. ಯಾವನು ಬೇರೆಯವರಿಗೆ ಉಪದ್ರವಾಗುವಹಾಗೆ,—

ಅಸಹ್ಯಕರವಾದ ಕೃತ್ಯಗಳು ಮತ್ತು ಹಾಡುಗಳು.

(a) ಯಾವದೊಂದು ಬಹಿರಂಗವಾದ ಸ್ಥಳದಲ್ಲಿ ಭಂಡ ಕೃತ್ಯವನ್ನು ಮಾಡುತ್ತಾನೋ, ಅಥವಾ

(b) ಯಾವದೊಂದು ಬಹಿರಂಗವಾದ ಸ್ಥಳದಲ್ಲಿ ಅಥವಾ ಅದರ ಸಮೀಪ ಭಂಡ ಪದ್ಯಗಳನ್ನು, ಹಾಡನ್ನು ಅಥವಾ ಮಾತುಗಳನ್ನು ಹಾಡುತ್ತಾನೊ, ಹೇಳುತ್ತಾನೊ ಅಥವಾ ಉಚ್ಚರಿಸುತ್ತಾನೊ, ಅವನು ಮೂರು ತಿಂಗಳುಗಳವರೆಗೆ ವ್ಯಾಪಿಸಬಹುದಾದ ಯಾವದೊಂದು ವಿಧದ ಕೈದಿನ ಮೂಲಕವಾಗಿಯಾಗಲಿ ಜುಲುಮಾನೆಯ ಮೂಲಕವಾಗಿಯಾಗಲಿ ಇವೆರಡರ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಡತಕ್ಕದ್ದು."

26. ಸದರೀ ಕೋಡಿನ 307ನೇ ಪ್ರಕರಣದ (c) ಉದಾಹರಣೆಯಲ್ಲಿ "ದ" (of) ಎಂಬದರ ತರುವಾಯ "ಒಂದನೇ ಕಲಮಿನ" ಎಂಬ ಪದಗಳನ್ನು ಇಡತಕ್ಕದ್ದು.

27. ಸದರೀ ಕೋಡಿನ 309ನೇ ಪ್ರಕರಣದಲ್ಲಿ ಕಡೇ ಏಳು ಪದಗಳಿಗೆ* ಬದಲಾಗಿ "ಜುಲುಮಾನೆಯ ಮೂಲಕವಾಗಿಯಾಗಲಿ ಈ ಎರಡರ ಮೂಲಕವಾಗಿಯಾಗಲಿ" ಎಂಬ ಪದಗಳನ್ನು ಇಡತಕ್ಕದ್ದು.

28. ಸದರೀ ಕೋಡಿನ 335ನೇ ಪ್ರಕರಣದಲ್ಲಿ "ಮಾಡುತ್ತಾನೋ" ಎಂಬ ಪದಕ್ಕೆ ಮುಂಚೆ "ಮನಃಪೂರ್ವಕವಾಗಿ" ಎಂಬ ಪದವನ್ನು ಇಡತಕ್ಕದ್ದು.

29. ಸದರೀ ಕೋಡಿನ 375ನೇ ಪ್ರಕರಣದಲ್ಲಿ ಐದನೇದು ಎಂದು ಸೂಚಿಸಲ್ಪಟ್ಟ ಕಲಮಿನಲ್ಲಿಯೂ ಮತ್ತು ವಿನಹಾಯಿತಿ ಯಲ್ಲಿಯೂ "ಹತ್ತು" ಎಂಬ ಪದಕ್ಕೆ ಬದಲಾಗಿ "ಹನ್ನೆರಡು" ಎಂಬ ಪದವನ್ನು ಇಡತಕ್ಕದ್ದು.

30. (1) ಸದರೀ ಕೋಡಿನ 410ನೇ ಪ್ರಕರಣದಲ್ಲಿ "ವಿಶ್ವಾಸ ಘಾತಕ ತಪ್ಪಿತ" ಎಂಬ ಪದಗಳ ಮುಂದೆ ಬರುವ "ಅಪರಾಧವಾಗಿರುವ" ಎಂಬ ಪದವನ್ನು ರದ್ದು ಮಾಡಲ್ಪಟ್ಟಿರುತ್ತೆ.

(2) ಅದೇ ಪ್ರಕರಣದಲ್ಲಿ "'ಚೋರಿಮಾಲು' ಎಂದು ಅನ್ನಿಸಿಕೊಳ್ಳುತ್ತದೆ" ಎಂಬಪದಗಳ ತರುವಾಯ ಈ ಕೆಳಗೆ ಬರುವ ಪದಗಳನ್ನು ಇಡತಕ್ಕದ್ದು, ಏನಂದರೆ :—

"ಆ ಸೊತ್ತು ಮೈಸೂರೊಳಗಾಗಿ ಅಥವಾ ಮೈಸೂರು ಹೊರಗೆ ಪರಭಾರೆಯನ್ನು ಮಾಡಿದ್ದಾಗ್ಯೂ ಅಥವಾ ದುರುಪಯೋಗವನ್ನು ಅಥವಾ ವಿಶ್ವಾಸಘಾತಕವನ್ನು ನಡಿಸಿದ್ದಾಗ್ಯೂ."

31. ಸದರೀ ಕೋಡಿನ 435ನೇ ಪ್ರಕರಣದಲ್ಲಿ "ಅಥವಾ ಅದಕ್ಕೆ ಮೇಲ್ಪಟ್ಟ" ಎಂಬ ಪದಗಳ ತರುವಾಯ ಈ ಕೆಳಗೆ ಬರುವ ಪದಗಳನ್ನು ಇಡತಕ್ಕದ್ದು, ಏನಂದರೆ :—

"ಅಥವಾ (ಸೊತ್ತು ವ್ಯವಸಾಯದ ಫಲವಾಗಿದ್ದರೆ) ಹತ್ತು ರೂಪಾಯಿ.........ಅಥವಾ ಅದಕ್ಕೆ ಮೇಲ್ಪಟ್ಟ........"

32. ಸದರೀ ಕೋಡಿನ 477ನೆ ಪ್ರಕರಣದ ತರುವಾಯ ಈ ಕೆಳಗೆ ಬರುವದನ್ನು ಸೇರಿಸತಕ್ಕದ್ದು, ಏನಂದರೆ :—

"477 A. ಯಾವನು ಒಬ್ಬ ಗುಮಾಸ್ತ, ಆಫಿಸರ ಅಥವಾ ಉದ್ಯೋಗಸ್ಥನಾಗಿದ್ದು ಅಥವಾ ಒಬ್ಬ ಗುಮಾಸ್ತನ, ಆಫಿಸರನ ಅಥವಾ ಉದ್ಯೋಗಸ್ಥನ ಉದ್ಯೋಗದಲ್ಲಿ ನೇಮಕಪಟ್ಟಿದ್ದು ಅಥವಾ ಕೆಲಸ ನೋಡುತ್ತಿದ್ದು ಮನಃಪೂರ್ವಕವಾಗಿ ಮತ್ತು ವಂಚನೆ ಮಾಡುವ ಅಭಿಪ್ರಾಯದಿಂದ ತನ್ನ ಯಜಮಾನನಿಗೆ ಸಮ್ಮಂಧಿಸುವ ಅಥವಾ ಆತನ ಸ್ವಾಧೀನದಲ್ಲಿರುವ ಅಥವಾ ತನ್ನ ಯಜಮಾನನ ಬಗ್ಗೆ ಅಥವಾ ಆತನ ಕಡೆಯಿಂದ ತಾನು ಪಡಕೊಂಡ ಯಾವದಾದರೂ ಪುಸ್ತಕವನ್ನು, ಕಾಗದವನ್ನು, ಪತ್ರವನ್ನು, ಬೆಲೆಯುಳ್ಳ ಸಾಧನವನ್ನು ಅಥವಾ ಲೆಕ್ಕವನ್ನು ನಾಶಪಡಿಸುತ್ತಾನೊ, ಬದಲಾಯಿಸುತ್ತಾನೊ, ವಿರೂಪ ಪಡಿಸುತ್ತಾನೊ, ಅಥವಾ ಸುಳ್ಳು ಮಾಡುತ್ತಾನೊ ಅಥವಾ ಮನಃಪೂರ್ವಕವಾಗಿ ಮತ್ತು ವಂಚನೆ ಮಾಡಬೇಕೆಂಬ ಅಭಿಪ್ರಾಯದಿಂದ ಅಂಥಾ ಯಾವದಾದರೂ ಪುಸ್ತಕ, ಕಾಗದ, ಪತ್ರ, ಬೆಲೆಯುಳ್ಳ ಸಾಧನ ಅಥವಾ ಲೆಕ್ಕದಲ್ಲಿ ಸುಳ್ಳು ಖತಾಯಿತಿಯನ್ನು ಮಾಡುತ್ತಾನೊ ಅಥವಾ ಮಾಡಲಿಕ್ಕೆ ಸಹಾಯ ಮಾಡುತ್ತಾನೊ ಅಥವಾ ಅದರಿಂದ ಅಥವಾ ಅದರಲ್ಲಿ ಯಾವದೊಂದು ಮುಖ್ಯವಾದ ವಿಷಯವನ್ನು ಲೋಪಿಸುತ್ತಾನೊ ಅಥವಾ ಬದಲಾಯಿಸುತ್ತಾನೊ ಅಥವಾ ಲೋಪಿಸಲಿಕ್ಕೆ ಅಥವಾ ಬದಲಾಯಿಸಲಿಕ್ಕೆ ಸಹಾಯ ಮಾಡುತ್ತಾನೊ, ಅಂಥಾ ಪ್ರತಿ ಮನುಷ್ಯನು ಏಳು ವರುಷಗಳ ವರಿಗೆ ವ್ಯಾಪಿಸಬಹುದಾದ ಯಾವದೊಂದು ವಿಧದ ಕೈದಿನ ಮೂಲಕವಾಗಲಿ, ಜುಲುಮಾನೆಯ ಮೂಲಕವಾಗಲಿ, ಇವೆರಡರ ಮೂಲಕವಾಗಲಿ ಶಿಕ್ಷಿಸಲ್ಪಡತಕ್ಕದ್ದು.

ಸುಳ್ಳು ಲೆಕ್ಕಗಳನ್ನು ಮಾಡೋಣ.

"ವಿವರ.—ಈ ಪ್ರಕರಣಕ್ಕನುಗುಣವಾದ ಯಾವದೊಂದು ಆಪಾದನೆಯಲ್ಲಿ, ಫಲಾನೆ ಒಬ್ಬ ಮನುಷ್ಯನನ್ನು, ಅಥವಾ ಫಲಾನೆ ಒಂದು ಮೊಬಲಗಿನ ವಿಷಯವಾಗಿ, ವಂಚಿಸುವ ಅಭಿಪ್ರಾಯ ಇತ್ತು ಅಥವಾ ಫಲಾನೆ ಒಂದು ದಿವಸದಲ್ಲಿ ಅಪರಾಧ ಮಾಡಲ್ಪಟ್ಟಿತು ಎಂದು ನಮೂದಿಸದೇನೆ ವಂಚಿಸುವದಕ್ಕೆ ಸಾಮಾನ್ಯ ಅಭಿಪ್ರಾಯವಿತ್ತು ಎಂದು ಸಾಧಿಸಿದರೆ ಸಾಕು."

33. ಸದರೀ ಕೋಡಿನ 489ನೆ ಪ್ರಕರಣಕ್ಕೆ ತರುವಾಯ ಈ ಕೆಳಗೆ ಬರುವ ಪ್ರಕರಣಗಳನ್ನು ಸೇರಿಸತಕ್ಕದ್ದು, ಏನಂದರೆ :—

* ಇಂಗ್ಲಿಷ್ ಕೋಡಿನಲ್ಲಿರುವ ಪ್ರಕಾರ ಕಡೆ ಏಳು ಪದಗಳೆಂದು ತಿಳಿಯತಕ್ಕದ್ದು.—

"ಕರನ್ಸಿ ನೋಟುಗಳ ಮತ್ತು ಬ್ಯಾಂಕ್ ನೋಟುಗಳ ಕುರಿತು.

ಕರೆನ್ಸಿ ನೋಟುಗಳನ್ನು ಅಥವಾ ಬ್ಯಾಂಕ್ ನೋಟುಗಳನ್ನು ಬನಾವಣಿ ಮಾಡೋಣ.

"489 A. ಯಾವನು ಯಾವದೊಂದು ಕರೆನ್ಸಿ ನೋಟನ್ನಾಗಲಿ, ಬ್ಯಾಂಕ್ ನೋಟನ್ನಾಗಲಿ ಬನಾವಣಿ ಮಾಡುತ್ತಾನೊ ಅಥವಾ ಬನಾವಣಿ ಮಾಡುವ ಕೆಲಸವನ್ನು ಎಷ್ಟುಮಾತ್ರವಾದರೂ ತಿಳದು ನಡಿಸುತ್ತಾನೊ ಅಂಥಾ ಮನುಷ್ಯನು ಯಾವಜ್ಜೀವವೂ ನೀರಿನಮೇಲೆ ಕಳುಹಿಸಲ್ಪಡುವದರ ಮೂಲಕವಾಗಿಯಾಗಲಿ, ಅಥವಾ ಹತ್ತು ವರುಷಗಳ ವರಿಗೆ ವ್ಯಾಪಿಸಬಹುದಾದ ಒಂದು ವಾಯಿದೆ ಪರ್ಯಂತ ಯಾವದಾದರೂ ಒಂದು ವಿಧದ ಕೈದಿನ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಟ್ಟು ಜುಲುಮಾನೆ ತೆರಲಿಕ್ಕೆ ಸಹಾ ಗುರಿಯಾಗಿರತಕ್ಕದ್ದು.

"ವಿವರ.—ಈ ಪ್ರಕರಣದ ಮತ್ತು 489 B, 489 C ಮತ್ತು 489 Dನೇ ಪ್ರಕರಣಗಳ ಉದ್ದೇಶಗಳ ಬಗ್ಗೆ 'ಬ್ಯಾಂಕ್ ನೋಟ್' ಎಂಬ ಪದವು ಹಾಜರು ಮಾಡುವವನಿಗೆ ಕೇಳಿದ ಕೂಡಲೆ ಹಣ ಕೊಡುವದಾಗಿ ಒಪ್ಪಿಕೊಂಡು, ಲೋಕದ ಯಾವಕಡೆಯಲ್ಲಾಗಲಿ ಹಣ ಬಡ್ಡಿಗೆ ಕೊಡುವ ಕಸಬು ನಡಿಸುತ್ತಿರುವ ಯಾವನೊಬ್ಬ ಮನುಷ್ಯನಿಂದ ಬರೆದು ಕೊಡಲ್ಪಟ್ಟು, ಅಥವಾ ಯಾವದೊಂದು ಸಂಸ್ಥಾನದವರಿಂದ ಅಥವಾ ಸರ್ಕಾರದವರಿಂದ ಅಥವಾ ಅವರ ಅಪ್ಪಣೆ ಮೇರೆಗೆ ಬರೆದು ಕೊಡಲ್ಪಟ್ಟು, ಹಣಕ್ಕೆ ಸಮಾನವಾಗಿ ಅಥವಾ ಬದಲಾಗಿ ಉಪಯೋಗಿಸಲ್ಪಡತಕ್ಕದ್ದೆಂದು ಉದ್ದೇಶಿಸಲ್ಪಟ್ಟ ಒಂದು ಪ್ರೊಮಿಸರಿ ನೋಟು ಅಥವಾ ಒಡಂಬಡಿಕೆ ಎಂದು ಅರ್ಥ ಕೊಡುತ್ತದೆ.

ಸೃಷ್ಟನೆಯಾದ ಅಥವಾ ಬನಾವಣಿಯಾದ ಕರೆನ್ಸಿ ನೋಟುಗಳನ್ನು ಅಥವಾ ಬ್ಯಾಂಕ್ ನೋಟುಗಳನ್ನು ನಿಜವಾದ್ದೆಂತ ಉಪಯೋಗಿಸೋಣ.

"489 B. ಯಾವನು, ಸೃಷ್ಟನೆಯಾದದ್ದು ಅಥವಾ ಬನಾವಣಿಯಾದದ್ದು ಎಂದು ತಿಳದು ಅಥವಾ ನಂಬಲಿಕ್ಕೆ ಕಾರಣವಿದ್ದು, ಸೃಷ್ಟನೆಯಾದ ಅಥವಾ ಬನಾವಣಿಯಾದ ಯಾವ ಕರೆನ್ಸಿ ನೋಟನ್ನಾಗಲಿ, ಬ್ಯಾಂಕ್ ನೋಟನ್ನಾಗಲಿ, ಇತರ ಯಾವನೊಬ್ಬ ಮನುಷ್ಯನಿಗೆ ಮಾರುತ್ತಾನೊ ಅಥವಾ ಅವನಿಂದ ಕೊಂಡುಕೊಳ್ಳುತ್ತಾನೊ, ಇಸುಕೊಳ್ಳುತ್ತಾನೊ, ಅಥವಾ ಇತರ ವಿಧವಾಗಿ ಅವುಗಳ ವ್ಯಾಪಾರ ಮಾಡುತ್ತಾನೊ ಅಥವಾ ವಾಸ್ತವಿಕವಾದದ್ದೆಂಬದಾಗಿ ಉಪಯೋಗಿಸುತ್ತಾನೊ ಅಂಥಾ ಮನುಷ್ಯನು ಯಾವಜ್ಜೀವವೂ ನೀರಿನಮೇಲೆ ಕಳುಹಿಸಲ್ಪಡುವದರ ಮೂಲಕವಾಗಿಯಾಗಲಿ, ಹತ್ತು ವರುಷಗಳ ವರಿಗೆ ವ್ಯಾಪಿಸಬಹುದಾದ ಒಂದು ವಾಯಿದೆ ಪರ್ಯಂತ ಯಾವದಾದರೂ ಒಂದುವಿಧದ ಕೈದಿನ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಟ್ಟು ಜುಲುಮಾನೆ ತೆರಲಿಕ್ಕೆ ಸಹಾ ಗುರಿಯಾಗತಕ್ಕದ್ದು.

ಸೃಷ್ಟನೆಯಾದ ಅಥವಾ ಬನಾವಣಿಯಾದ ಕರೆನ್ಸಿ ನೋಟನ್ನು ಅಥವಾ ಬ್ಯಾಂಕ್ ನೋಟನ್ನು ಸ್ವಾಧೀನದಲ್ಲಿಟ್ಟುಕೊಳ್ಳೋಣ.

"489 C. ಯಾವನು, ಸೃಷ್ಟನೆಯಾದದ್ದು ಅಥವಾ ಬನಾವಣಿಯಾದದ್ದು ಎಂದು ತಿಳದು ಅಥವಾ ನಂಬಲಿಕ್ಕೆ ಕಾರಣವಿದ್ದು, ಸೃಷ್ಟನೆಯಾದ ಅಥವಾ ಬನಾವಣಿಯಾದ ಯಾವ ಕರೆನ್ಸಿ ನೋಟನ್ನು ಅಥವಾ ಬ್ಯಾಂಕ್ ನೋಟನ್ನು, ಅದು ವಾಸ್ತವಿಕವಾದದ್ದೆಂಬದಾಗಿ ಉಪಯೋಗಿಸುವ ಅಭಿಪ್ರಾಯದಿಂದ ಅಥವಾ ವಾಸ್ತವಿಕವಾದದ್ದೆಂಬದಾಗಿ ಉಪಯೋಗಿಸಲ್ಪಡಬಹುದೆಂಬ ಅಭಿಪ್ರಾಯದಿಂದ ಸ್ವಾಧೀನದಲ್ಲಿ ಇಟ್ಟುಕೊಂಡು ಇರುತ್ತಾನೊ ಅಂಥಾ ಮನುಷ್ಯನು ಏಳು ವರುಷಗಳ ವರಿಗೆ ವ್ಯಾಪಿಸಬಹುದಾದ ಒಂದು ವಾಯಿದೆ ಪರ್ಯಂತ ಯಾವದಾದರೂ ಒಂದು ವಿಧದ ಕೈದಿನ ಮೂಲಕವಾಗಿಯಾಗಲಿ, ಜುಲುಮಾನೆ ಮೂಲಕವಾಗಿಯಾಗಲಿ, ಇವೆರಡರ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಡತಕ್ಕದ್ದು.

ಕರೆನ್ಸಿ ನೋಟುಗಳನ್ನು ಅಥವಾ ಬ್ಯಾಂಕ್ ನೋಟುಗಳನ್ನು ಸೃಷ್ಟನೆ ಅಥವಾ ಬನಾವಣಿ ಮಾಡುವ ಬಗ್ಗೆ ಸಾಧನಗಳನ್ನು ಅಥವಾ ಸಾಮುಗ್ರಿಗಳನ್ನು ಮಾಡೋಣ ಅಥವಾ ಸ್ವಾಧೀನದಲ್ಲಿ ಇಟ್ಟುಕೊಳ್ಳೋಣ.

"489 D. ಯಾವನು, ಯಾವದಾದರೂ ಕರೆನ್ಸಿ ನೋಟನ್ನು ಅಥವಾ ಬ್ಯಾಂಕ್ ನೋಟನ್ನು ಸೃಷ್ಟನೆ ಅಥವಾ ಬನಾವಣಿ ಮಾಡುವದರಲ್ಲಿ ಉಪಯೋಗಿಸುವ ಬಗ್ಗೆ ಅಥವಾ ಉಪಯೋಗಿಸಲು ಉದ್ದೇಶಿಸಲ್ಪಟ್ಟಿದೆ ಎಂತ ತಿಳದು ಅಥವಾ ನಂಬಲಿಕ್ಕೆ ಕಾರಣವಿದ್ದು ಯಾವದೊಂದು ಯಂತ್ರ ಸಾಮುಗ್ರಿ, ಸಾಧನ, ಅಥವಾ ಸಾಮಾನನ್ನು ಮಾಡುತ್ತಾನೊ ಅಥವಾ ಮಾಡುವ ಕೆಲಸವನ್ನು ಎಷ್ಟುಮಾತ್ರವನ್ನಾದರೂ ನಡಿಸುತ್ತಾನೊ ಅಥವಾ ಕೊಂಡುಕೊಳ್ಳುತ್ತಾನೊ ಅಥವಾ ವಿಕ್ರಯಿಸುತ್ತಾನೊ ಅಥವಾ ವಿನಿಯೋಗಿಸುತ್ತಾನೊ ಅಥವಾ ಸ್ವಾಧೀನದಲ್ಲಿ ಇಟ್ಟುಕೊಳ್ಳುತ್ತಾನೊ ಅಂಥಾ ಮನುಷ್ಯನು ಯಾವಜ್ಜೀವವೂ ನೀರಿನಮೇಲೆ ಕಳುಹಿಸಲ್ಪಡುವದರ ಮೂಲಕವಾಗಿಯಾಗಲಿ, ಹತ್ತು ವರುಷಗಳ ವರಿಗೆ ವ್ಯಾಪಿಸಬಹುದಾದ ಒಂದು ವಾಯಿದೆ ಪರ್ಯಂತ ಯಾವದಾದರೂ ಒಂದು ವಿಧದ ಕೈದಿನ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಟ್ಟು, ಜುಲುಮಾನೆ ತೆರಲಿಕ್ಕೆ ಸಹಾ ಗುರಿಯಾಗಿರತಕ್ಕದ್ದು.

34. ಸದರೀ ಕೋಡಿನ 505ನೇ ಪ್ರಕರಣವು ಈ ಮೂಲಕ ರದ್ದು ಮಾಡಲ್ಪಟ್ಟು ಅದರ ಬದಲಾಗಿ ಈ ಕೆಳಗೆ ಬರುವ ಪ್ರಕರಣವು ಇಡಲ್ಪಟ್ಟಿದೆ, ಯಾವದೆಂದರೆ :—

"505. ಯಾವನು,—

ಪ್ರಜಾಜನಕ್ಕೆ ಕೆಡಕನ್ನು ಉಂಟು ಮಾಡುವ ಹೇಳಿಕೆಗಳು.

(a) ಮಹಿಮೆಯುಳ್ಳ ಶ್ರೀ ಮಹಾರಾಜ ಚಕ್ರವರ್ತಿಯವರ ದಂಡಿನಲ್ಲಿ ಅಥವಾ ನಾವೇದಂಡಿನಲ್ಲಿ ಅಥವಾ ರೋಯಲ್ ಇಂಡಿಯನ್ ಮೆರೀನ್ ಎಂಬ ನಾವೇ ದಂಡಿನಲ್ಲಿ ಅಥವಾ ಇಂಪೀರಿಯಲ್ ಸರ್ವಿಸ್ ಟ್ರೂಪ್ಸ್ ಎಂಬ ದಂಡಿನಲ್ಲಿ ಇರುವ ಯಾವನೊಬ್ಬ ಆಫಿಸರನನ್ನು, ಸೋಲ್ಜರನನ್ನು ಅಥವಾ ಸೈಲರನನ್ನು ಸರ್ಕಾರದವರ ಮೇಲೆ ತಿರಿಗಿ ಬೀಳುವಹಾಗೆ ಅಥವಾ ಆತನ ಉದ್ಯೋಗ ಪ್ರಯುಕ್ತವಾದ ಕೆಲಸವನ್ನು ಅನ್ಯಥಾ ಅಲಕ್ಷಿಸುವ ಅಥವಾ ನಡಿಸದಹಾಗೆ ಮಾಡಬೇಕೆಂಬ ಅಭಿಪ್ರಾಯದಿಂದ ಅಥವಾ ಹಾಗೆ ಮಾಡುವ ಸಂಭವವುಳ್ಳ ; ಅಥವಾ

(b) ಸರ್ವ ಜನರಿಗೆ ಅಥವಾ ಅವರ ಪೈಕಿ ಒಂದು ಭಾಗದವರಿಗೆ ಭಯವನ್ನು ಅಥವಾ ದಿಗಿಲನ್ನು ಹುಟ್ಟಿಸಿ ತದ್ವಾರಾ ಒಬ್ಬನಿಂದ ಸರಕಾರದವರಿಗೆ ವಿರೋಧವಾದ ಅಥವಾ ಜನಗಳ ನೆಮ್ಮದಿಗೆ ವಿರೋಧವಾದ ಅಪರಾಧವನ್ನು ಮಾಡಿಸಬೇಕೆಂಬ ಅಭಿಪ್ರಾಯದಿಂದ ಅಥವಾ ಹಾಗೆ ಮಾಡಿಸುವ ಸಂಭವವುಳ್ಳ ; ಅಥವಾ

(c) ಒಂದು ಜಾತಿ ಅಥವಾ ಸಮಾಜದ ಜನರು ಇನ್ನೊಂದು ಜಾತಿಯ ಅಥವಾ ಸಮಾಜದವರ ಮೇಲೆ ಯಾವದೊಂದು ಅಪರಾಧವನ್ನು ನಡಿಸುವಂತೆ ಅವರನ್ನು ಪ್ರೇರೇಪಿಸುವ ಅಭಿಪ್ರಾಯದಿಂದ ಅಥವಾ ಹಾಗೆ ಪ್ರೇರೇಪಿಸುವ ಸಂಭವವುಳ್ಳ ಯಾವದೊಂದು (ಹೇಳಿಕೆ) ವರ್ತಮಾನವನ್ನು, ಸುದ್ದಿಯನ್ನು ಅಥವಾ ವದಂತಿಯನ್ನು ಕೊಡುತ್ತಾನೋ ಅಥವಾ ಬಹಿರಂಗ ಪಡಿಸುತ್ತಾನೊ ಅಥವಾ ಫಾಯಿಷ್ ಮಾಡುತ್ತಾನೊ ಅಂಥಾ ಪ್ರತಿ ಮನುಷ್ಯನು ಎರಡು ವರುಷಗಳ ವರೆಗಿನ ಕೈದಿನ ಮೂಲಕವಾಗಿಯಾಗಲಿ, ಜುಲುಮಾನೆಯ ಮೂಲಕವಾಗಿಯಾಗಲಿ, ಇವೆರಡರ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಡತಕ್ಕದ್ದು.

" ವಿನಹಾಯಿತಿ.—ಅಂಥಾ ಯಾವದೊಂದು ವರ್ತಮಾನವನ್ನು, ಸುದ್ದಿಯನ್ನು ಅಥವಾ ವದಂತಿಯನ್ನು ಕೊಡುವ, ಬಹಿರಂಗಪಡಿಸುವ ಅಥವಾ ಫಾಯಿಷ್ ಮಾಡುವ ಮನುಷ್ಯನಿಗೆ ಅಂಥಾ ವರ್ತಮಾನವು, ಸುದ್ದಿಯು ಅಥವಾ ವದಂತಿಯು ನಿಜವಾದದ್ದೆಂತ ನಂಬಲಿಕ್ಕೆ ನ್ಯಾಯವಾದ ಕಾರಣಗಳಿದ್ದು ಮೇಲೆ ನಮೂದಿಸಲ್ಪಟ್ಟ ಯಾವದೊಂದು ಅಭಿಪ್ರಾಯ ಇಲ್ಲದೇನೆ ಅದನ್ನು ಕೊಟ್ಟರೆ, ಬಹಿರಂಗ ಪಡಿಸಿದರೆ ಅಥವಾ ಫಾಯಿಷ್ ಮಾಡಿದರೆ ಅದು ಈ ಪ್ರಕರಣದ ಅರ್ಥಕ್ಕೊಳಪಡುವ ಒಂದು ಅಪರಾಧವಾಗುವದಿಲ್ಲ. "

ಈ ರೆಗ್ಯುಲೇಷನಿನ ಆರಂಭ.

35. ಈ ರೆಗ್ಯುಲೇಷನ್ 1904ನೇ ವರುಷದ ಏಪ್ರೈಲ್ ಮೊದಲನೇ ದಿವಸದಿಂದ ಜಾರಿಗೆ ಬರತಕ್ಕದ್ದು.

ಪಿ. ಎನ್. ಕೃಷ್ಣಮೂರ್ತಿ,
ಮೈಸೂರು ದಿವಾನರು.

Mysore Govt. Central Press, Bangalore.—1904.

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಛಾಪಿಸಲ್ಪಟ್ಟದ್ದು. [ನಂ. 21.

ಬೆಂಗಳೂರು, ಗುರುವಾರ, ಮೇ ತಾ॥ 26, ಸನ್ 1904.

IIನೆ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 5ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ನಮೂದಾಗುವ ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಫಾರೆಸ್ಟುಗಳಲ್ಲಿರತಕ್ಕ ಬೊಂಬು, ಸಣ್ಣ ಮತ್ತು ದಪ್ಪ ಬಿದಿರುಗಳನ್ನು 1905ನೆ ಇಸವಿ ಜೂನ್ 30ನೆ ತಾರೀಖಿನ ವರೆವಿಗೆ ಸಾಗಿಸುವ ಹಕ್ಕನ್ನು ಕೆಳಗೆ ನಮೂದಾಗುವ ತಾರೀಖು ಮತ್ತು ಸ್ಥಳಗಳಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸುತ್ತೆ. ಈ ಹರಾಜು ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ :—

ನಂಬರು	ತಾಲ್ಲೂಕು.	ಫಾರೆಸ್ಟು ಹೆಸರು.	ಹರಾಜು ತಾರೀಖು.	ಹರಾಜಾಗುವ ಸ್ಥಳ.	ಹರಾಜು ಮಾಡುವ ಆಫಿಸರ ಹೆಸರು.
1	ಆನೆಕಲ್ ..	ಬಿಳವನಕುಪ್ಪೆ ಶೇರಿ ರಾಗಿಹಳ್ಳಿ	1—6—1904	ಬನ್ನೇರಘಟ್ಟ	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಬೆಂಗಳೂರು ಡಿಸ್ಟ್ರಿಕ್ಟ್
2	ಕನ್ಕಾನಹಳ್ಳಿ ..	ಬಿಳಿಕಲ್			
		ಬಾಣಂತಿಮಾರಿ	6—6—1904	ಕನ್ಕಾನಹಳ್ಳಿ	
3	ಡಿಟೋ ...	ಮಾಗೂರು			
		ರಾಮದೇವರಬೆಟ್ಟ ರಿಜರ್ವ್	8—6—1904	ಕೋಡಿಹಳ್ಳಿ	
		ಮುನೇಶ್ವರಬೆಟ್ಟ ರಿಜರ್ವ್			
		ಮಂಜುನಾಥ ರಿಜರ್ವ್ ...			
4	ಡಿಟೋ ..	ಚಿಲಂದ್ವಾಡಿ	10—6—1904	ಸಾತನೂರು	
		ಅಚ್ಚಲು ರಿಜರ್ವ್			
5	ಮಳವಳ್ಳಿ	ಬಸವನಬೆಟ್ಟ ...	11—6—1904	ಹಲಗೂರು	
6	ಕನ್ಕಾನಹಳ್ಳಿ ..	ಕಬ್ಬಾಳು			
		ತ್ಯಲೂರು ರಿಜರ್ವ್	13—6—1904	ಹನಿಯೂರು	
7	ಮಾಗಡಿ ..	ಸಾವನದುರ್ಗ	17—6—1904	ಮಾಗಡಿ	

2. ಹರಾಜು ಖೈದಾದ ಕೂಡಲೆ ಆಖೈರು ಸವಾಲ್‌ದಾರನು ಪೂರಾ ಮೊಬಲಗಿನ ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ಟು ಇಡಬೇಕು. ಬಾಕಿ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳೊಳಗಾಗಿ ಸಂದಾಯಮಾಡಬೇಕು. ಈ ಮೇರ ಪಾವತಿ ಮಾಡಲು ತಪ್ಪಿದರೆ ಡಿಪಾಜಿಟ್ಟು ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು. ಅಲ್ಲದೆ ಮೊದಲು ಸವಾಲ್ ದಾರನಿಗೆ ನಷ್ಟಕ್ಕೆ ಗುರಿಪಡಿಸಿ ದುಸರಾ ಹರಾಜು ಮಾಡಲ್ಪಡುವದು. ಈ ಹರಾಜಿನಲ್ಲಿ ಜಾಸ್ತಿ ಉತ್ಪತ್ತಿಯಾಗುವ ಪಕ್ಷ ಅದಕ್ಕೆ ಅವಲ ದರಖಾಸ್ತುದಾರನಿಗೆ ಏನೂ ಹಕ್ಕು ಇರುವದಿಲ್ಲ ಪೂರಾ ಹಣ ಸಂದಾಯವಾದ ಕೂಡಲೆ ಗಳ ಜಮಾವಣಿ ಮಾಡಿಕೊಳ್ಳಲು ಲೈಸೆನ್ಸ್ ಕೊಡಲ್ಪಡುತ್ತೆ.

3. ಬಿದಿರು ಜಮಾಯಿಸುವ ಫಾರೆಸ್ಟು ಯಾ ಫಾರೆಸ್ಟಿನ ಯಾವ ಭಾಗದಲ್ಲಿಯೇ ಆಗಲಿ ಬೆಂಕಿ ಬಾಧೆ ಏನಾದರೂ ಉಂಟಾದಲ್ಲಿ ಕಂಟ್ರಾಕ್ಟುದಾರನನ್ನು ಅದಕ್ಕೆ ಜವಾಬ್ದಾರನನ್ನಾಗಿ ಮಾಡುತ್ತೆ. ಕಂಟ್ರಾಕ್ಟುದಾರನಿಂದಲಾಗಲಿ ಅಥವಾ ಆತನ ಕಡೆ ಮನುಷ್ಯರಿಂದಲಾಗಲಿ ಯಾವುದಾದರೂ ಫಾರೆಸ್ಟು ತಕ್ಸೀರು ನಡೆದಲ್ಲಿ ಅಂಥಾದ್ದಕ್ಕೆ ಫಾರೆಸ್ಟು ರೂಲಿಮೇರ ಕ್ರಮ ಜರಿಗಿಸಲ್ಪಡುವುದು.

4. ಬೊಂಬು ಬಿದಿರು ತೆಗದುಕೊಳ್ಳುವವರು ಸಾವಿರ ಗಳು ಕಟ್ಟುವದಕ್ಕೆ ಆಗುವ ಪಟ್ಟಿ ಗಳಗಳಿಗೆ ನಾಲ್ಕಾಣೆಯಂತೆ ಪೇರಿ ಹಣ ಕೊಟ್ಟು ಲೈಸೆನ್ಸ್ ಮೂಲಕ ಕಟ್ಟುಗಳನ್ನು ತಗದುಕೊಳ್ಳಬೇಕು.

ಟಿ. ಅಬ್ದುಲ್ ಕರೀಂ, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 16ನೆ ಮೇ 1904.

ಇದರಿಂದ ತಿಳಿಯಪಡಿಸುವದೇನಂದರೆ—ಕೋಲಾರ್ ಡಿಸ್ಟ್ರಿಕ್ಟ್ ಗೋರೀಬಿದನೂರ್ ತಾಲ್ಲೂಕಿನ ತಂಗಡಿ ಮತ್ತು ಕಕ್ಕೆ ಚೆಕ್ಕೆ ಹರಾಜು ವಿಷಯವಾಗಿ 12—5—04ನೆ ತಾರೀಖು ಮೈಸೂರ್ ಗೆಜೆಟ್ಟಿನ 273ನೆ ಪುಟದಲ್ಲಿ ಪ್ರಾಯಿಷ್ ಮಾಡಿರತಕ್ಕ 8-5-04ನೆ ಮರ್ಸ್ಕಂ 408ನೆ ನಂಬರ್ ಇಸ್ತಿಹಾರ್‌ನಾಮೆಗೆ ಈ ಬಾಬಿನ ಕಂಟ್ರಾಕ್ಟ್ ಪಡೆಯಲು ಇಚ್ಛೈಸುವರು ಗಮನ ಕೊಡಬೇಕು.

ಎಸ್. ಎ. ಬಾಪುರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ತಾರೀಖು 18ನೆ ಮೇ 1904ನೆ ಇಸವಿ.

ಮೈಸೂರು ಡಿಸ್ಟ್ರಿಕ್ಟಿನ ಕೆಲವು ತಾಲ್ಲೂಕುಗಳಲ್ಲಿರುವ ತಂಗಡಿ, ಕಕ್ಕೆ, ಸೋಮೆ ಮತ್ತು ಪಪ್ಪಳಿ ಚೆಕ್ಕೆ ಜಮಾವಣೆ ವಿಷಯದಲ್ಲಿ 12–5–04ನೆ ಮರ್ಸ್ಕಂ 19ನೆ ನಂಬರು ಮೈಸೂರು ಗೆಜೆಟ್ಟಿನ ಎರಡನೇ ಭಾಗದ 275—276ನೆ ಪುಟಗಳಲ್ಲಿ ಪ್ರಾಯಿಷ್ ಮಾಡಿರುವ 6–5–1904ನೆ ಮರ್ಸ್ಕಂ ನೋಟಿಫಿಕೇಷನನ್ನು ನೋಡಿ.

ತಾರೀಖು 19ನೆ ಮೇ 1904ನೆ ಇಸವಿ.

ಈ ಕೆಳಗೆ ನಮೂದಿಸಿರುವ ಪಸಾರೆ ಜಿನಸಿಗಳಿಗೆ ಶೀಲ್ಡ್ ಟೆಂಡರುಗಳು ಅಂಗೀಕರಿಸಲ್ಪಡುತ್ತವೆ:—

ಡಿಪೋ ಅಥವಾ ಕೋಠಿ ಹೆಸರು.	ತಪಸೀಲು.	ಮೊತ್ತ.	
		ವರಾ.	ಪಾಂ.
ಹುಣಸೂರು ಕೋಠಿ	ಅಳಲೆಕಾಯಿ	2794	21

(2) 1904ನೆ ಇಸವಿ ಜೂನ್ 15ನೆ ತಾರೀಖಿನ ದಿವಸ ಮೈಸೂರು ಫಾರೆಸ್ಟ್ ಆಫೀಸಿನಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಹಾಜರಿರುವ ಟೆಂಡರುದಾರುಗಳ ರೂಬರೂ ಟೆಂಡರುಗಳನ್ನು ಪಡಿಯುತ್ತಾರೆ.

(3) ಪ್ರತಿಒಂದು ಟೆಂಡರಿನ ಸಂಗಡ (100) ಒಂದು ನೂರು ರೂಪಾಯಿಯನ್ನು ಹಾಜರು ಮಾಡತಕ್ಕದ್ದು. ಹಾಗೆ ತಿರಸ್ಕಾರದ ಟೆಂಡರು ಬಾಬತು ಹಣವನ್ನು ಕೂಡ್ಲೆ ವಾಪಸು ಮಾಡಲಾಗುತ್ತೆ.

(4) ಮಂಜೂರು ಮಾಡಲ್ಪಟ್ಟ ಟೆಂಡರುದಾರನು ಮಂಜೂರಾದ ಕೂಡ್ಲೆ ಡಿಪಾಜಟ್ಟು ಮೊಬಲಗು ವಜಾ ಜಾತಾ ಕಾಲುಹಿಸ್ಸೆ ಆಗುವ ಮೊಬಲಗನ್ನು 1904ನೆ ಜೂನ್ ತಾರೀಖು 20ರ ವಳಗಾಗಿ ಪಾವತಿ ಮಾಡಬೇಕು. ಮುಕ್ಕಾಲು ಹಿಸ್ಸೆ ಮೊಬಲಗನ್ನು 1904ನೆ ಇಸವಿ ಜೂನ್ 31ರ ವಳಗಾಗಿ ಪಾವತಿ ಮಾಡಬೇಕು.

(5) ಮೇಲೆ ಕಂಡ ಷರತ್ತಿನಂತೆ ಯಾವ ಮೊಬಲಗನ್ನಾಗಲೀ ಪಾವತಿ ಮಾಡಲಿಕ್ಕೆ ಟೆಂಡರುದಾರನು ತಪ್ಪಿದಲ್ಲಿ ಠೇವಣಿಗಾಗಿ ಹಾಜರು ಮಾಡಿದ ಯಾ ಪಾವತಿ ಮಾಡಿದ ಮೊಬಲಗು ಎಲ್ಲಾ ಸರ್ಕಾರಕ್ಕೆ ಸೇರಿಸಲ್ಪಡುವದಲ್ಲದೆ ಸದರಿ ಮಾಲು ಪುನಃ ಹರಾಜು ಮಾಡಿಸಲ್ಪಡುವದು. ಈ 2ನೆ ಹರಾಜಿನಲ್ಲಿ ಪೂರಾ ಹಣ ಹುಟ್ಟದೆಹೋದಪಕ್ಷ ರವಿನ್ಯೂ ಕಂದಾಯ ಬಾಕಿಯಂತೆ ಸದರಿ ಮೊಬಲಗು ವಸೂಲ್ಮಾಡಲ್ಪಡುವದು. 2ನೆ ಹರಾಜಿನಲ್ಲಿ ಸರ್ಕಾರಕ್ಕೆ ಫಾಯಿದೆ ಆದರೆ ಮೊದಲು ಹರಾಜುದಾರನು ಫಾಯಿದೆ ಆಗುವ ಮೊಬಲಿಗ್ಗೆ ಬದ್ಧನಾಗುವದಿಲ್ಲ.

(6) ಹರಾಜುದಾರನು ಹಣವನ್ನು ಪೂರ್ತಿಯಾಗಿ ಪಾವತಿಯಿಂದ 1904ನೆ ಇಸವಿ ಜುಲೈ ತಾರೀಖು 15ರ ವಳಗಾಗಿ ಜಿನಸಿ ರವಾನೆ ಮಾಡಿಕೊಳ್ಳತಕ್ಕದ್ದು. ಅದಕ್ಕೆ ತಪ್ಪಿದರೆ ಮಾಹೆಯಾನಾ ಶೇಕಡಾ ಒಂದು ರೂಪಾಯಿನಂತೆ ಬಟ್ಟು ಮೊಬಲಿಗ್ಗೆ ಬಾಡಿಗೆ ವಸೂಲಿ ಮಾಡಲ್ಪಡುವದು.

(7) ಟೆಂಡರುದಾರನು ಹರಾಜು ತಾರೀಖು ಲಗಾಯಿತು ಆರು ತಿಂಗಳ ವಳಗಾಗಿ ರವಾನೆ ಮಾಡಿಕೊಳ್ಳದೆ ಇದ್ದಲ್ಲಿ ಹರಾಜಿನಲ್ಲಿ ತೆಗೆದುಕೊಂಡ ಬಟ್ಟು ಜಿನಸಿಯ ಮತ್ತು ಮಾಡಿದ ಹಣದ ಹಕ್ಕು ಕಳೆಕೊಳ್ಳುತ್ತಾನೆ.

(8) ಇತರ ತಪಸೀಲುಗಳನ್ನು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ಕೇಳಿ ತಿಳುಕೊಳ್ಳಬಹುದು.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು.

ಬೆಂಗಳೂರು ಡಿಸ್ಟ್ರಿಕ್ಟ್.

ಸರ್ 1904ನೆ ಇಸವಿ ತಾರೀಖು

ಟಿ. ರಂಗರಾವ್‌ನಿಂದ ಸರ್ 1903—04ನೆ ಸಾಲಿನ ಕಂದಾಯ ಬಾಕಿ ಬಗ್ಯೆ ಬೆಂಗಳೂರು ತಾಲ್ಲೂಕು ಬೇಗೂರು ಹೋಬಳಿ ಕಾಳೇನ ಅಗ್ರಹಾರವೆಂಬ ಕಾಯಂಗುತ್ತಾ ಪೂರಾ ಗ್ರಾಮವನ್ನು ಬೆಂಗಳೂರು ತಾಲ್ಲೂಕು ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರ ರೂಬರೂಬು 1904ನೆ ಇಸವಿ ಜೂನ್ ತಾರೀಖು 25ನೆ ಶನಿವಾರದ ದಿವಸ ಬೆಳಿಗ್ಗೆ 11 ಘಂಟೆಗೆ ಬೆಂಗಳೂರು ತಾಲ್ಲೂಕು ಕಛೇರಿ ಬಳಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುವದು.

ತಪಸೀಲ್ 1904ನೆ ಇಸವಿ ಮೇ ತಾರೀಖು 19ನೆ ಮರ್ಸ್ಕೂಮಿನ 20ನೆ ನಂಬರ್ ಮೈಸೂರು ಗೆಜೆಟ್ IIನೆ ಭಾಗದ 299ನೆ ಪುಟದಲ್ಲಿ ಪ್ರಾಯಿಷ್ ಆಗಿರುತ್ತೆ.

ಡಿ. ದೇವರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ನೋಟಿಸ.

ತಾರೀಖು 13ನೆ ಮೇ 1904, ಕ್ಯಾಂಪ್ ಮುಳಬಾಗಲ್.

ಇದರಿಂದ ಬವರಿಂಗಪೇಟೆ ತಾಲ್ಲೂಕು ಬೇತಮಂಗಲ ದೊಡ್ಡಕೆರೆ ಕೆಳಗಿನ ತರಿ ಮತ್ತು ಬಾಗಾಯತು ಕಂದಾಯದಾರರಾದ ಈ ಕೆಳಗೆ ಫಾಯಿಸ್ಮಾಡಿರುವ ಲಿಸ್ಟಿನಲ್ಲಿ ಕಂಡ ಜನರಿಗೆ ತಿಳಿಯಪಡಿಸ್ಸುವದೇನೆಂದರೆ :—

ಕೋಲಾರ ಗೋಲ್ಡ್ ಫೀಲ್ಡ್ಸ್‌ಗೆ ನೀರನ್ನ ಸರಬರಾಯಿ ಮಾಡತಕ್ಕ ಸಂದರ್ಭದಲ್ಲಿ ಬೇತಮಂಗಲ ದೊಡ್ಡಕೆರೆ ಮತ್ತು ಅದರ ಬಾಬತು ನಾಲಗಳ ನೀರನ್ನ ಸಾಗುವಳಿಗೆ ಬಿಡದೆ ಸರ್ಕಾರದವರು ಉಳಿಸಿಕೊಂಡದ್ದರಿಂದ ನಿಮ್ಮಗಳ ಬಾಬತು ತರಿ ಮತ್ತು ಬಾಗಾಯತು ಜಮೀನುಗಳಿಗೆ ಕಂಪೆನ್ಸೇಷನ್ ಠರಾಯಿಸತಕ್ಕ ಬಗ್ಗೆ ಅಸಿಸ್ಟೆಂಟ್ ಸ್ಪೆಷಲ್ ಸೆಟಲ್‌ಮೆಂಟ್ ಆಫಿಸರ ರೂಬರೂ ಹಾಜರಾಗಲು ಬೇರೆ ಬೇರೆ ತಾರೀಖುಗಳನಿತಿ ನಿಮಿಗೆ ನೋಟಿಸ್ ಕೊಟ್ಟದ್ದಾಗ್ಯೂ ಮತ್ತು ನಿಮಿಗೆ ಸಲ್ಲಬೇಕಾದ ಹಣವನ್ನ ಪಡಿಯಲು ನಮ್ಮ ರೂಬರೂ ಹಾಜರಾಗತಕ್ಕ ಭಾಗದಲ್ಲಿ 15—3—04ನೆ ಮಾರ್ಚಿ ಮೈಸೂರು ಗವರ್ನ್‌ಮೆಂಟ್ ಗೆಜೆಟ್ಟಿನಲ್ಲಿ ಮತ್ತು 7—4—04ನೆ ತಾರೀಖಿನಲ್ಲಿ ಅಲಾಹಿದ ನೋಟಿಸನ್ನ ಫಾಯಿಸ್ಮಾಡಿದ್ದಾಗ್ಯೂ ನೀವು ಇದುವರಿಗೆ ಹಾಜರಾಗಿ ಹಣವನ್ನ ಪಡೆದವರಾಗಲಿಲ್ಲ.

ನಿಮ್ಮ ಖಾತೆ ಜಮೀನ್ ಪೈಕಿ ಕೆಲವು ಜಮೀನ್ ಖರೀದಿ ಯಾ ಭೋಗ್ಯ ಮಾಡಿರುವಂತೆಯೂ ಅದರ ಬಾಬತು ಪರಿಹಾರದ್ರವ್ಯ ತಮಿಗೆ ಪಾವತಿ ಮಾಡಿಸಬೇಕೆಂತ ವಗೈರೆ ಇತರ ಜನರಿಂದ ತಕರಾರ್ ಬಂದಿರುತ್ತೆ. ಈ ಲಾಗಾಯತು ಒಂದು ತಿಂಗಳ ವಳಗಾಗಿ ನೀವುಗಳು ಮತ್ತು ತಕರಾರ್‌ದಾರರು ಫೈಸಲ್ಮಾಡಿಕೊಂಡು ಅಸಿಸ್ಟೆಂಟ್ ಸ್ಪೆಷಲ್ ಸೆಟಲ್‌ಮೆಂಟ್ ಆಫಿಸರ್ Mr. S. ನಾರಾಯಣರಾಯರ ರೂಬರೂ ಹಾಜರಾಗಿ ರಾಜಿಯಾಗಿರತಕ್ಕ ಕಂಪೆನ್ಸೇಷನ್ ಹಣವನ್ನ ಪಡಿಯಬೇಕು. ತಪ್ಪಿದರೆ ಯುಕ್ತಾನುಸಾರ ಫೈಸಲ್ಮಾಡಲಾದೀತು. ನಂತರ ನೀವು ತರಬಹುದಾದ ಯಾವ ತಕರಾರನ್ನೂ ಅಂಗೀಕರಿಸುವದಿಲ್ಲ, ತಿಳಿಯುವದು.

ಯಾದಾಸ್ತು ಕೋಲಾರ ಭಂಗಾರ ಗಣಿಗೆ ನೀರನ್ನ ಸರಬರಾಯಿ ಮಾಡತಕ್ಕ ಸಂದರ್ಭದಲ್ಲಿ ಕಂಪೆನ್ಸೇಷನ್ ಅಮಾನತ್ತು ಮಾಡಿದ ಬವರಿಂಗಪೇಟೆ ತಾಲ್ಲೂಕು ಬೇತಮಂಗಲ ಹೋಬಳಿ ಬೇತಮಂಗಲ ಗ್ರಾಮದ ದೊಡ್ಡಕೆರೆ ಕೆಳಗಿನ ತರಿ ಮತ್ತು ಬಾಗಾಯತು ಜಮೀನ್‌ಗಳಿಗೆ ಪಾವತಿ ಆಗತಕ್ಕ ಪರಿಹಾರದ್ರವ್ಯ ತಮ್ಮಗಳಿಗೆ ಸಲ್ಲಬೇಕೆಂತ ವಗೈರೆ ಖಾತೆದಾರ್ರಲ್ಲದ ಇತರ ಜನರಿಂದ ಬಂದಿರತಕ್ಕ ತಕರಾರು ವಗೈರೆ ತೋರಿಸತಕ್ಕ ತಪಸೀಲ್ ತಖ್ತೆ.

ಗ್ರಾಮದ ಹೆಸರು.	ಖಾತೆ ನಂಬರು.	ಖಾತೆದಾರ್ರ ಅಥವಾ ಅನುಭವದಾರನ ಹೆಸರು.	ಪಾವತಿ ಆಗಬೇಕಾದ ಮೊಬಲಗು. ರೂ.	ಆ.	ಪೈ.	ಷರಾ.
ಬೇತಮಂಗಲ.	4—5	ಕದಿರಪ್ಪ ಬಿನ್ ವೆಂಕಟರಾಮೈಯ್ಯ	158	5	4	ಕೋಲಾರ ಮುನ್ಸೀಫ್ ಕೋರ್ಟಿನಿಂದ ತಲಪಿದ ಅಟ್ಯಾಚ್‌ಮೆಂಟ್ ವಾರಂಟು ಪ್ರಕಾರ ಅಮಾನತ್ತು ಇಟ್ಟಿರುತ್ತೆ.
	9—10	ಷೇಕುಬಿರಾಂ ಫವತಿ ಹೆಂಡತಿ	74	8	0	ಖಾತೆದಾರ ಮೊದಲಿನ ಹೆಂಡತಿ, ಮಗ, ತಮ್ಮ ಸಾಲಿ, ಇರತಕ್ಕ ಹೆಂಡತಿ ಖಾತುಂಬಿ, 3 ಜನರು ತಮಗೆ ಭಾಗಾ ಬರಬೇಕೆಂತ ತಕರಾರು ಮಾಡ್ಡಿದ್ದಾರೆ.
	23—24	ಚಂದಾ ಶೀತಾರಾಮೈಯ್ಯ..	13	8	0	ಖಾತೆದಾರ್ ಫವತಿ, ಇವನ ಮಗ ರಾಮೈಯ್ಯ ಜಮೀನನ್ನ ಮರಾಟೆ ವೆಂಕಣ್ಣನಿಗೆ ಖರೀದಿ ಮಾಡಿರುವಂತೆಯು ಹಣ ತನಿಗೆ ಬರಬೇಕೆಂತ ವೆಂಕಣ್ಣ ತಕರಾರು ಮಾಡ್ಡಿರುತ್ತಾನೆ.
	31—33	ನಾರಾಯಣರಾವ್ ಬಿನ್ ಅಪ್ಪಾಜಿರಾವ್	44	4	0.	ಫವತಿ, ಈತನ ತಮ್ಮ ಸುಬ್ಬರಾವು ಮುಳಬಾಗಲ್‌ನಲ್ಲಿರುತ್ತಾನೆ. ಈ ಪೈಕಿ ಕೆಲವು ಜಮೀನ್ ಸುಂಡರ ಪಾಳ್ಯದಲ್ಲಿರುವ ಹನುಮಂತಾಚಾರಿ ಭೋಗ್ಯ ಮಾಡಿಕೊಂಡಿರುತ್ತಾನೆ ಸದರೀ ಹಣ ತನಿಗೆ ಬರಬೇಕೆಂತ ತಕರಾರು ಮಾಡ್ಡಿರುತ್ತಾನೆ.
	125—130	ಅಲ್ಲಿಹುಸೇನ್‌ಖಾನ್ ಬಿನ್ ಸಾದುಲ್ಲಾಖಾನ್	199	12	0	ಖಾತೆದಾರ್ ಮೈಸೂರಲ್ಲಿದ್ದಾನೆ. ಈ ಜಮೀನ್‌ಗಳ ಪೈಕಿ ಕೆಲವು ತೇಲಿ ಪೆರಣ್ಣ, ಕೆಲವು ಅಂಕತಟ್ಟಿಹಳ್ಳಿ ಸೊಣ್ಣೆಗೌಡ, ಮುಂಚಾಮಣ್ಣ, ವಾಸುದೇವಾಚಾರಿ; ಹೈದರ್‌ಬೇಗ್ ಇವರುಗಳಿಗೆ ಭೋಗ್ಯವಾಗಿರುವಂತೆಯೂ ಆ ಮೊಬಲಗು ತಮಗೆ ಕೊಡಿಸಬೇಕೆಂತ ತಕರಾರು ಮಾಡ್ಡಿರುತ್ತಾರೆ.
	158—164	ತ್ಯಾಕಲ್ ನರಸಿಂಹ್ಮಾಚಾರಿ ಫವತಿ, ಖರೀದಿದಾರ್ ರಾಮಚಂದ್ರಾಚಾರಿ	11	4	0	ಈ ಜಮೀನನ್ನ ರಾಮಚಂದ್ರಾಚಾರ್ರಿಂದ ವೇಲೂರು ರಾಮಾಚಾರಿ ಖರೀದಿಗೆ ಪಡದಿರುವಂತೆಯು ಅದರ ಬಾಬತು ಪರಿಹಾರ ದ್ರವ್ಯ ತನಿಗೆ ಕೊಡಿಸಬೇಕೆಂತ ತಕರಾರು ಮಾಡ್ಡಿದ್ದಾರೆ.

ಗ್ರಾಮದ ಹೆಸರು.	ಸರ್ವೆ ನಂಬರು.	ಖಾತೇದಾರ್ರ ಅಥವಾ ಅನುಭವದಾರನ ಹೆಸರು.	ಪಾವತಿ ಆಗಬೇಕಾದ ಮೊಬಲಗು. ರೂ.	ಆ.	ಪೈ.	ಷರಾ.
ಚಿತ್ರಮಂಗಲ.	198—206	ರಾಣೋಜಿ ಬಿನ್ ರಾಮೋಜಿ.	45	0	0	ಈ ಜಮೀನನ್ನು ಖರೀದಿಗೆ ಪಡದು 70 ರೂಪಾಯಿಗೆ ಭೋಗ್ಯಮಾಡಿ ಆ ಪೈಕಿ ಅರ್ಧ ಮೊಬಲಗನ್ನು ಭೋಗ್ಯದಾರ್ರಿಗೆ ಪಾವತಿ ಮಾಡುವಂತೆಯೂ ಇದರ ಬಾಬತು ಪರಿಹಾರ ದ್ರವ್ಯ ತನಿಗೆ ಬರಬೇಕೆಂತ ಕದಿರಪ್ಪ ತಿಳಿಸುತ್ತಾನೆ.
	221—229	ಮಹಮ್ಮದಸಾಬ್ ಬಿನ್ ಅಲ್ಲಿಸಾಬ್ ಫವತಿ, ಆಳಿಯಾ ಷೇಕಲ್ಲಿ	42	12	0	ಈ ಜಮೀನನ್ನು ಸಿವಿಲ್ ಕೋರ್ಟಿನ ಹರಾಜಿನಲ್ಲಿ 126 ರೂಪಾಯಿಗಳಿಗೆ ಪಡದಿರುವಂತೆಯೂ ತನಿಗೆ ಹಣ ಪಾವತಿ ಮಾಡಬೇಕೆಂತ ಆನೆಕಲ್ ಶ್ರೀನಿವಾಸಾಚಾರ್ ತಕರಾರು ಪಡ್ಡಿರುತ್ತಾರೆ. ಕೋಲಾರ ಭಂಗಾರ ಗಣಿ ಕೋರ್ಟಿನ ವಾರಂಟು ಪ್ರಕಾರ ಅಮಾನತ್ತು ಮಾಡಿದೆ.
	247—257	ಶೇಷಗಿರಿರಾವ್ ಬಿನ್ ಆನಂದರಾವ್, ಖರೀದಿದಾರ ಹಿಂಡಿಗನಾಳ್ ನಾರಣಾಚಾರ್	23	0	0	ಈ ಜಮೀನು ತನಿಗೆ ದಾನಾ ಬಂದಿರುವಂತೆಯೂ ಹಣ ತನಿಗೆ ಪಾವತಿ ಮಾಡಿಸಬೇಕೆಂತಲು ದಾನ ಪತ್ರ ಹಾಜರ್ಪಡಿಸುವಂತೆ ಆನೆಕಲ್ ಶ್ರೀನಿವಾಸಾಚಾರ್ ಅಹವಾಲ್ ತಿಳಿಸಿರುತ್ತಾರೆ.
	236—245	ಅಚ್ಚಮ್ಮ ಕೋಂ ಅಚ್ಚಪ್ಪ	122	10	0	ಅಚ್ಚಮ್ಮ ಎಂಬ ಹೆಸರಿನ ಇಬ್ಬರು ಹೆಂಗಸರು ತಮತಮಿಗೆ ಹಣ ಬರಬೇಕೆಂತ ತಕರಾರು ಪಡ್ಡಿರುತ್ತಾರೆ.
	318—354	ಷೇಕು ಇಸ್ಮಾಯಿಲ್ ..	31	8	0	ಇವನ ಹೆಸರಿಗೆ ನೆಪಮಾತ್ರಕ್ಕೆ ಪಟ್ಟೆ ಇರುವಂತೆಯೂ ಈ ಜಮೀನನ್ನು ತಾನೇ ಅನುಭವಿಸಿ ಕಂದಾಯ ಕಟ್ಟುತ್ತಿರುವದ್ದರಿಂದ ತನಿಗೆ ಪರಿಹಾರದ್ರವ್ಯ ಕೊಡಿಸಬೇಕೆಂತ, ಷೇಕು ಹೈದರ್ ತಕರಾರು ಪಡ್ಡಿರುತ್ತಾನೆ.
	348—562	ವೆಂಕಟಾಚಾರಿ	271	0	0	ಈ ಪೈಕಿ 1 ಸರ್ವೆ ನಂಬರಿನ ಹಣ ತನಿಗೆ ಬರಬೇಕೆಂತ ಕದಿರಪ್ಪ ತಕರಾರು ಪಡ್ಡಿರುತ್ತಾನೆ.
	364—417	ಕನಲಗಿ ನರಸಿಂಹ್ಮಾಚಾರ್..	39	0	0	ಈ ಜಮೀನನ್ನು ಕಂದಾಯಕ್ಕೆ ಮಾಡಿಕೊಂಡಿರುವಂತೆಯೂ ಜಮೀನ್ ತನ್ನ ಸ್ವಾಧೀನದಲ್ಲಿರುತ್ತೆ ಹಣ ತನಿಗೆ ಬರಬೇಕೆಂತ ಕಂಟ್ರ್ಯಾಕ್ಟರ್ ಗುಂಡೂರಾವು ತಕರಾರು ತಂದಿದ್ದಾರೆ.
	366—419	ಅಣ್ಣಯ್ಯಾಚಾರ್ರು, ಲಾಲ್ ಖಾನ್ ಮತ್ತು ಅಲ್ಲಿಹುಸೇನ್ ಖಾನ್	37	2	0	ಈ ಜಮೀನನ್ನು ಲಾಲ್‌ಖಾನ್ ಮತ್ತು ಅಲ್ಲಿಹುಸೇನ್‌ಖಾನ್ ಖರೀದಿಗೆ ಪಡದಿರುವಂತೆಯೂ ಅಲ್ಲಿಹುಸೇನ್‌ಖಾನ್ ಬಾಬತು ಜಮೀನನ್ನು ಭೋಗ್ಯ ಮಾಡಿಕೊಂಡು ಇರುವಂತೆಯೂ ಆನೆಕಲ್ ಶ್ರೀನಿವಾಸಾಚಾರ್ರಿಂದ ತಕರಾರು ಬಂದಿರುತ್ತೆ.
	368—424	ಶಿವಶಾಸ್ತ್ರಿ ಮತ್ತು ವೆಂಕಮ್ಮ	32	10	0	ಈ ಜಮೀನನ್ನು ಖರೀದಿಗೆ ಪಡದು ಅನುಭವಿಸುತ್ತಿರುವಂತೆ ಸಂಗನಹಳ್ಳಿ ಸುಬ್ಬರಾಯಪ್ಪ ತನಿಗೆ ಹಣ ಬರಬೇಕೆಂತ ಹೇಳುತ್ತಾನೆ. ಈ ಜಮೀನ್ ಭೋಗ್ಯ ಮಾಡಿಕೊಂಡಿರುವಂತೆಯೂ ಈ ಬಾಬತು ಪರಿಹಾರದ್ರವ್ಯ ತನಿಗೆ ಬರಬೇಕೆಂತ ಕುಸುಮಾ ರಂಗೈಯ್ಯ ತಕರಾರು ತಂದಿದ್ದಾನೆ.
	376—432	ರಾಘವೇಂದ್ರಾಚಾರ್ ಮತ್ತು ರಾಮಾಚಾರ್	54	0	0	
	380—386	ಮನ್ನಾರ ಗೋವಿಂದಾಚಾರಿ ಮತ್ತು ಕ್ರಿಷ್ಣಾಚಾರ್	9	0	0	
	381—387	ಬೂದಿಕೋಟೆ ಗೋವಿಂದಾಚಾರ್ರು	34	14	0	
	384—393	ಕಾರ ಶಾನುಭೋಗರಾಮರಾವು	199	0	0	ರಾಮರಾವು ಫವತಿ, ಈತನ ಹೆಂಡತಿ ನಾಗೂಬಾಯಿಗೆ 18ರಲ್ಲಿ ಒಂದು ಹಿಸ್ಸೆ ಜಮೀನ್‌ಬಾಬತು ಹಣ ಸೇರಬೇಕೆಂತಲು ಬಾಕೀ ಹಣ ಧಾರ್‍ವಾಡ ಡಿಸ್ಟ್ರಿಕ್ಟಿನಲ್ಲಿ ಡೆಪ್ಯುಟಿ ಕಲೆಕ್ಟರ್ ಕೆಲಸದಲ್ಲಿ ರಾಘವೇಂದ್ರರಾವ್ ವಗೈರೇರಿಗೆ ಸಲ್ಲಬೇಕೆಂತ ಕದಿರಪ್ಪ ತಕರಾರು ತಂದಿರುತ್ತಾನೆ.
		ಜುಮ್ಲಾ	1,143	1	4	
ಬೆಳ್ಳಕ್ಕಾರ.	5	ರಾಜಾರಾವು ...	2	4	0	ಡಿಟ್ಟೋ
		ಜುಮ್ಲಾ ..	2	4	0	
ಕಾಳಿಹಾರು.	2	ಸೂಲಪ್ಪಳ್ಳಿ ಗಂಗೆ ..	17	0	0	
			17	0	0	
		ಒಟ್ಟು ಜುಮ್ಲಾ ..	1,462	5	4	

ತಾರೀಖು 13ನೆ ಮೇ 1904, ಕ್ಯಾಂಪ್ ಮುಳಬಾಗಲ್. 859

ಇದರಿಂದ ಬವರಿಂಗಪ್ಯಾಟೆ ತಾಲ್ಲೂಕು ಬೇತಮಂಗಲ ದೊಡ್ಡಕೆರೆ ಕೆಳಗಿನ ತರಿ ಮತ್ತು ಬಾಗಾಯತು ಕಂದಾಯದಾರರಾದ ಈ ಕೆಳಗೆ ಕಾಣಿಸಿರುವ ಲಿಸ್ಟಿನಲ್ಲಿ ಕಂಡ ಜನರಿಗೆ ತಿಳಿಯಪಡಿಸುವದೇನೆಂದರೆ:—

ಕೋಲಾರ ಗೋಲ್ಡ್ ಫೀಲ್ಡ್ಸಿಗೆ ನೀರನ್ನ ಸರಬರಾಯಿ ಮಾಡತಕ್ಕ ಸಂದರ್ಭದಲ್ಲಿ ಬೇತಮಂಗಲ ದೊಡ್ಡಕೆರೆ ಮತ್ತು ಅದರ ಬಾಬತು ನಾಲೆಗಳ ನೀರನ್ನ ಸಾಗುವಳಿಗೆ ಬಿಡದೆ ಸರ್ಕಾರದವರು ವಶಪಡಿಸಿಕೊಂಡಿದ್ದುದರಿಂದ ನಿಮ್ಮ ಬಾಬತು ತರಿ ಮತ್ತು ಬಾಗಾಯತು ಜಮೀನುಗಳಿಗೆ ಕಂಪೆನ್ಸೇಷನ್ ಠರಾಯಿಸತಕ್ಕ ಬಗ್ಗೆ ಅಸಿಸ್ಟೆಂಟ್ ಸ್ಪೆಷಲ್ ಸೆಟಲ್‌ಮೆಂಟ್ ಆಫೀಸರವರ ರೂಬರೂ ಹಾಜರಾಗಲು ಬೇರೆಬೇರೆ ತಾರೀಖುಗಳ ನಿಶ್ಚಯಿಸಿ ನಿಮ್ಮಗಳಿಗೆ ನೋಟಿಸ್ ಕೊಟ್ಟಿದ್ದಾಗ್ಯೂ ಮತ್ತು ನಿಮಿಗೆ ಸಲ್ಲಬೇಕಾದ ಹಣವನ್ನ ಪಡಿಯಲು ನಮ್ಮ ರೂಬರೂ ಹಾಜರಾಗತಕ್ಕ ಭಾಗದಲ್ಲಿ 15—3—04 ಮೈಸೂರು ಗೆಜೆಟ್ಟಿನಲ್ಲಿ ಮತ್ತು 7—4—04ನೆ ತಾರೀಖಿನಲ್ಲಿ ಆಲಾಹಿದ ನೋಟಿಸನ್ನ ಕಾಣಿಸಿದ್ದಾಗ್ಯೂ ನೀವುಗಳು ಇದುವರಿಗೆ ಹಾಜರಾಗಿ ಹಣವನ್ನ ಪಡೆದವರಾಗಲಿಲ್ಲ.

ಈಗಲೂ ಈ ನೋಟಿಸ್ ಕಂಡ ಲಾಗಾಯಿತು ಒಂದು ತಿಂಗಳೊಳಗಾಗಿ ನಮ್ಮ ರೂಬರೂ ನೀವೇ ಖುದ್ದಾಗಿ ಆಗಲಿ ಅಥವಾ ನಿಮ್ಮ ತರಫ್ ಅಧಿಕಾರ ಪಡೆದ ಏಜಂಟ್ ಮೂಲಕವಾಗಿಯಾಗಲಿ ಹಾಜರಾಗಿ ನೀವು ಹಣವನ್ನ ಪಡಿಯಬೇಕು. ತಪ್ಪಿದರೆ ಯುಕ್ತಾನುಸಾರ ಫೈಸಲ್ಮಾಡಲ್ಪಡುತ್ತೆ. ನಂತರ ನೀವು ತರಬಹುದಾದ ಯಾವ ತಕರಾರನ್ನೂ ಅಂಗೀಕರಿಸುವದಿಲ್ಲ. ತಿಳಿಯುವದು.

ಯಾದಾಸ್ತು ಕೋಲಾರ ಗೋಲ್ಡ್ ಫೀಲ್ಡ್ಸಿಗೆ ನೀರನ್ನ ಸರಬರಾಯಿ ಮಾಡತಕ್ಕ ಸಂದರ್ಭದಲ್ಲಿ ಸರ್ಕಾರ್ಸ್ವಾಧೀನ ಅಮಾನತ್ತು ಮಾಡಿದ ಬವರಿಂಗಪೇಟೆ ತಾಲ್ಲೂಕು ಬೇತಮಂಗಲ ಹೋಬಳಿ ಬೇತಮಂಗಲ ಗ್ರಾಮದ ದೊಡ್ಡಕೆರೆ ಕೆಳಗಿನ ತರಿ ಮತ್ತು ಬಾಗಾಯಿತು ಜಮೀನುಗಳ ಪರಿಹಾರದ್ರವ್ಯವನ್ನು ಪಡಿಯಲು ಇದುವರಿಗೆ ಅನೇಕ ದಫೆ ನೋಟೀಸು ಮೂಲಕ ಎಚ್ಚರಿಸಿದ್ದಾಗ್ಯೂ ಹಾಜರಾಗದೆ ಇರತಕ್ಕ ಜನಗಳ ತಖ್ತೆ.

ಗ್ರಾಮದ ಹೆಸರು.	ಸರ್ವೆ ನಂಬರು.	ಖಾತೆದಾರ್ರು ಅಥವಾ ಅನುಭವದಾರನ ಹೆಸರು.	ಪಾವತಿ ಆಗಬೇಕಾದ ಮೊಬಲಗು. ರೂ.	ಆ.	ಪೈ.	ಷರಾ.
ಬೇತಮಂಗಲ.	25—26	ಪುಪ್ಪಗಾ ..	8	12	0	ಮಾಲೂರು ತಾಲ್ಲೂಕಿನಲ್ಲಿ ವಾಸವಾಗಿರುವಂತೆ ತಿಳಿಬರುತ್ತೆ.
	26—28	ಯಲ್ಲಗಾ ಬಿನ್ ಪರಶುರಾಮ.	7	14	0	ಡಿಟೋ
	29—31	ವಲಗಮಾದಿ ವೆಂಕಟಾಚಾರಿ	17	8	0	ದಾಸರಹೊಸಳ್ಳಿ ಹೋಬಳಿ ವಲಗಮಾದಿ ಗ್ರಾಮದಲ್ಲಿ ವಾಸವಾಗಿರುವಂತೆ ತಿಳಿಯುಬರುತ್ತೆ.
	84—88	ಚೆಂಬಡಿಪಾಪ ಧವತಿ, ಹೆಂಡತಿ ಮುತ್ತಕ್ಕಾ.	9	0	0	ಬೆಂಗಳೂರು ತಾಲ್ಲೂಕಿನಲ್ಲಿ ವಾಸಮಾಡುತ್ತಾ ಇರುವಂತೆ ತಿಳಿದುಬರುತ್ತೆ.
	100—104	ಸೈದುಗೌಸ್	13	8	0	ಬವರಿಂಗು ಪ್ಯಾಟೆ ಹೋಬಳಿ ಸೂಲಿಕುಂಟೇಲಿ ವಾಸವಾಗಿರುವಂತೆ ತಿಳಿಯುಬರುತ್ತೆ.
	113—118	ನಸುರೊದ್ದೀನ್ ..	67	8	0	ಇವ, ಮಾಲೂರು ತಾಲ್ಲೂಕಿನಲ್ಲಿರುವಂತೆ ತಿಳಿಯುಬರುತ್ತೆ.
	176—182	ಅರ್ಲ ಕುಂಟೆ ವೆಂಕಟಸ್ವಾಮಿ.	83	4	0	ಮದರಾಸಿನಲ್ಲಿ ವಾಸವಾಗಿರುವಂತೆ ತಿಳಿಬರುತ್ತೆ.
	224—232	ಛತ್ರ ಸುಬ್ಬಣ್ಣ ಬಿನ್ ಹನುಮಪ್ಪ.	63	0	0	ಮುಳುಬಾಗಲ್ ತಾಲ್ಲೂಕಿನಲ್ಲಿರುವಂತೆ ತಿಳಿಯುಬರುತ್ತೆ.
	330—368	ಪಟೇಲ ವೆಂಕಟೇಗೌಡ ..	9	0	0	ಬೇತಮಂಗಲದಲ್ಲಿ ವಾಸವಾಗಿದ್ದಾನೆ.
	363—416	ಶೇಷಾಚಾರ್ ..	25	0	0	ಕ್ಯಾಸಂಬಳ್ಳಿ ಹೋಬಳಿ ಕರಡಗೂರಲ್ಲಿ ವಾಸವಾಗಿರುತ್ತಾರೆ.
	378—384	ದೇಶಮುಖಿ ಶೇಷಗಿರಿರಾವ್..	145	2	0	ಮುಳಬಾಗಲ್ ತಾಲ್ಲೂಕಿನಲ್ಲಿ ವಾಸವಾಗಿರುವಂತೆ ತಿಳಿಯುಬರುತ್ತೆ.
ದೊಡ್ಡಕಾರಿ.	1	ವೆಂಕಟ ..	3	0	0	ದೊಡ್ಡಕಾರಿ ಗ್ರಾಮದಲ್ಲಿ ವಾಸವಾಗಿರುವಂತೆ ತಿಳಿಬರುತ್ತೆ.
		ಜುಮ್ಲಾ ..	3	0	0	
ಕೊಳ್ಳೂರು.	2	ಚೂರಕತ್ತಿ ಪಾಪ ..	17	8	0	ಕೊಳ್ಳೂರು ಗ್ರಾಮದಲ್ಲಿ ವಾಸವಾಗಿರುವಂತೆ ತಿಳಿಯುಬರುತ್ತೆ.
		ಜುಮ್ಲಾ ..	17	8	0	
		ಒಟ್ಟು ಜುಮ್ಲಾ ..	470	0	0	

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟ.

ಇಸ್ತಿಹಾರ್ನಾಮೆ ಗೋಷ್ವಾರೆ.

ತಾರೀಖು 30ನೆ ಏಪ್ರೆಲ್ 1904ನೆ ವರುಷಂ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನದ ಡಿಸ್ಟ್ರಿಕ್ಟ್ ಮಂಜರಾಬಾದು ತಾಲ್ಲೂಕಿನಲ್ಲಿರುವ ಮಾರ್ನಹಳ್ಳಿ ಟೋಲಗೇಟಿನಲ್ಲಿ 1904ನೆ ಇಸವಿ ಜುಲೈ ಗುರ್ರೇ ತಾರೀಖು ಲಾಗಾಯಿತು 1905ನೆ ಇಸವಿ ಜೂನ್ 30ರ ವರೆಗೆ ಹನ್ನೆರಡು ತಿಂಗಳಕಾಲದಲ್ಲಿ ಸುಂಕ ವಸೂಲ್ಮಾಡುವ ಬಾಬನ್ನು ಸರ್ 1904ನೆ ಇಸವಿ ಜೂನ್ ಮಾಹೆ ೬ನೆ ತಾರೀಖು ಸೋಮವಾರ ಮಧ್ಯಾಹ್ನ 12 ಘಂಟೆಗೆ ಸಕಲೇಶಪುರದ ಮೊಕ್ಕಾಂನಲ್ಲಿ ತಾಲ್ಲೂಕು ಕಚೇರಿಬಳಿ ಹಾಸನದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಅಥವಾ ಅವರಿಂದ ಅಧಿಕಾರ ಹೊಂದಿದ ಇತರ ಆಫೀಸರವರ ರೂಬರೂಬು ಬಹಿರಂಗವಾಗಿ ಹರಾಜುಮೂಲಕ ವಿಕ್ರಯಿಸುತ್ತೆ.

ಹರಾಜು ಷರತ್ತು ತಪಶೀಲುಗಳನ್ನು 1904 ಇಸವಿ ಮೇ ತಿಂಗಳು 12ನೆ ತಾರೀಖಿನ ಮೈಸೂರು ಗೆಜೆಟ್ಟು IIನೆ ಭಾಗ 289ನೆ ಪುಟದಲ್ಲಿ ಪ್ರಾಯಿಷ್ ಮಾಡಿರುತ್ತೆ.

ಇಸ್ತಿಹಾರ್ನಾಮೆ ಗೋಷ್ವಾರೆ.

ತಾರೀಖು 30ನೆ ಏಪ್ರೆಲ್ 1904.

ಹಾಸನದ ಡಿಸ್ಟ್ರಿಕ್ಟ್ ಬೇಲೂರು ತಾಲ್ಲೂಕ್ ಬೇಲೂರು ಸೇತುವೆ ಮೇಲೆ 1904ನೆ ಜುಲೈ ಗುರ್ರೆ ಲಾಗಾಯಿತು 1905ನೆ ಜೂನ್ ಆಖೈರು ವರಿವಿಗೆ ಹನ್ನೆರಡು ತಿಂಗಳುಕಾಲ ಸುಂಕ ವಸೂಲ್ಮಾಡುವ ಹಕ್ಕನ್ನು ಬೇಲೂರು ತಾಲ್ಲೂಕು ಕಚೇರಿಯಲ್ಲಿ 1904ನೆ ಇಸವಿ ಜೂನ್ 13ನೆ ತಾರೀಖು ಸೋಮವಾರ ದಿವಿ 12 ಘಂಟೆಗೆ ಹಾಸನದ ಡಿ|| ಡೆಪ್ಯುಟಿ ಕಮಿಷನರ್ ಸಾಹೇಬರವರ ಅಥವಾ ಅವರಿಂದ ಅಧಿಕಾರ ಹೊಂದಿದ ಇತರ ಆಫೀಸರವರ ರೂಬರೂಬು ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಮತ್ತು ಹರಾಜು ತಾರೀಖಿನ ವರಿಗೆ ಕ್ರಮವಾಗಿ ಬರುವ ಬರಹಮೂಲಕವಾದ ದರಖಾಸ್ತುಗಳನ್ನು ಬೇಲೂರು ತಾಲ್ಲೂಕು ಅಮಲ್ದಾರರು ಅಂಗೀಕರಿಸುತ್ತಾರೆ.

ಹರಾಜು ಷರತ್ತುಗಳು ಮತ್ತು ಇತರ ತಪಶೀಲುಗಳನ್ನು 1904ನೆ ಇಸವಿ ಮೇ ತಿಂಗಳು 12ನೆ ತಾರೀಖಿನ ಮೈಸೂರ ಗೆಜೆಟ್ಟು IIನೆ ಭಾಗ 291ನೆ ಪುಟದಲ್ಲಿ ಪ್ರಾಯಿಷ್ ಮಾಡಿರುತ್ತೆ.

ಪಿ. ಆರ್. ಡಬ್ಲ್ಯೂ. ವೆದರಾಲ್,
ಆ|| ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ತಾಲ್ಲೂಕು ಜೋಡಿ ಹೆಜ್ಜೆಗೇನಹಳ್ಳಿ ಗ್ರಾಮದಲ್ಲಿ ಸುಬ್ಬಣ್ಣಾಚಾರ್ ಅರ್ಧ ಹಿಸ್ಸೆ ಜಮೀನಿನಲ್ಲಿ ಅಣ್ಣಗಿರಿ ಶಾಮರಾವ್ ಮತ್ತು ಭೀಮರಾವು ಇವರಿಗೆ ಇರುವ ಹಕ್ಕು ಬಾಧ್ಯತೆ ವಗೈರೆಗೆ ಸದರೀ ಶಾಮರಾವು ಮತ್ತು ಭೀಮರಾಯರಿಂದ ವಸ್ತ್ರೆ ಗ್ರಾಮಕ್ಕೆ ಸರ್ 1901—02, 1902—03 ಮತ್ತು 1903—04ನೆ ಸಾಲಿನ ಬಾಬತು ಬರಬೇಕಾದ ಕಂದಾಯ ಬಾಕಿ ಬಗ್ಗೆ ಚಿಕ್ಕಮಗಳೂರು ತಾಲ್ಲೂಕು ಮರ್ಲೆ ಹೋಬಳಿ ಹೆಜ್ಜೆಗೇನಹಳ್ಳಿ ಅರ್ಧ ಜೋಡಿ ಗ್ರಾಮವನ್ನು ಹಜರತ್ ಕಡೂರು ಡಿಸ್ಟ್ರಿಕ್ಟ್ ಡೆ|| ಕ|| ಸಾಹೇಬರವರ ರೂಬರೂಬ್ಯಾಗಲಿ ಯಾ ಆ|| ಕ|| ಸಾಹೇಬರವರ ರೂಬರೂಬ್ ಯಾಗಲಿ ಸರ್ 1904ನೆ ಇಸವಿ ಜುಲೈ ತಾರೀಖು 4ನೆ ಸೋಮವಾರ ದಿವಸ ದಿವಿ 11 ಘಂಟೆಗೆ ಚಿಕ್ಕಮಗಳೂರು ಮೊಕ್ಕಾಮಿನಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ.

ಜಾಸ್ತಿ ತಪಶೀಲು ಹಿಂದಿನ ವಾರದ ಗೆಜೆಟನಲ್ಲಿ ನಮೂದಿರುವದು ನೋಡಲಾಗಿ ತಿಳಿಯಲಾಗುತ್ತೆ.

ಪೀಟರ್ಸ್ ಜಾರ್ಜ್ ಡಿಸೋಜ,
ಫಾರ್ ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟ್ ಚಿಂತಾಮಣಿ ಡಿವಿಜನ್ ಅಸಿಸ್ಟೆಂಟ ಕಮಿಷನರು ಮತ್ತು ಫಸ್ಟ್‌ಕ್ಲಾಸ ಮ್ಯಾಜಿಸ್ಟ್ರೇಟ ಕೋರ್ಟು.

ಇಸ್ತಿಹಾರು.

ಇದರಿಂದ ಸಮಸ್ತ ಜನಗಳಿಗು ತಿಳಿಯಪಡಿಸುವದೇನಂದರೆ:—

ಇದೇಬಿಯಲ್ಲಿ ಕಂಡ ಮಾಲುಗಳು ಕಳವಾದ ಮಾಲುಗಳೆಂದು ನನ್ನ ಕೋರ್ಟು ಚಾಲ್ತಿ ಸಾಲ್ 1903—4ನೆ ಕ್ರಿಮಿನಲ್ 18ನೆ ನಂಬರ್ ಮೊಕದ್ದಮೆಯಲ್ಲಿ ಹಾಜರ್ಪಡಿಸಲ್ಪಟ್ಟಿರತಕ್ಕವು ವಾರಸುದಾರರಿಲ್ಲದೆ ಕೋರ್ಟಿನಲ್ಲಿ ಅಮಾನತ್ತಿನಲ್ಲಿ ಇಟ್ಟು ಇರುತ್ತೆ.

ನಂಬರ್ 46.	ಒಂದು ನರಿಗೆ ಕೆಂಪು ರುಮಾಲು.	ಕೋಲಾರ ಡಿಸ್ಟ್ರಿಕ್ಟ್ ಮುಳಬಾಗಲ ತಾಲ್ಲೂಕು ನಂಗ್ಲಿ ಗ್ರಾಮದ ಬಳಿ ತೆಂಗಿನ ತೋಟದಲ್ಲಿ ಸಿಕ್ಕಿದ್ದಾಗಿರುತ್ತೆ.
,, 47.	ಒಂದು ಬುಗಡಿ ಅಂಚಿನ ಪಂಚೆ.	
,, 48.	ಒಂದು ಹಸರು ಶೀರೆ.	
,, 49.	ಒಂದು ಕರಿ ಶೀರೆ.	
,, 50.	ಒಂದು ಪೈಟ್ನಿ ಶೀರೆ.	

ಈ ಮಾಲುಗಳಿಗೆ ಹಕ್ಕುದಾರತಕ್ಕವರು ಈ ತಾರೀಖು ಲಾಗಾಯಿತು 6 (ಆರು) ತಿಂಗಳ ವಳಗಾಗಿ ಈ ಕೋರ್ಟು ರೂಬರೂಬು ಖುದ್ದು ಹಾಜರಾಗಿ ತಮ್ಮಗಳ ಹಕ್ಕನ್ನು ಸ್ಥಿರಪಡಿಸಿ ಮಾಲುಗಳನ್ನ ಪಡಿಯತಕ್ಕದ್ದು.

ಮೇಲ್ಕಂಡ ಮಾಯಿದೆ ಗತಿಸಿದ ನಂತರ ಡಿಟೋ ಮಾಲುಗಳನ್ನ ಹರಾಜು ಮೂಲಕ ವಿಲೇವಾರಿ ಮಾಡಿ ಹರಾಜು ಮೊಬಲಗನ್ನ ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಡುತ್ತೆ.

ಕೆ. ಆರ್. ಶ್ರೀನಿವಾಸ್ಯಯ್ಯಂಗಾರ್,
ಅಸಿಸ್ಟೆಂಟ ಕಮ್ಮಿಷನರ್ ಮತ್ತು ಫಸ್ಟ್‌ಕ್ಲಾಸ ಮ್ಯಾಜಿಸ್ಟ್ರೇಟ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಚೇರ್ಮನ್ ಆಫೀಸಿನಿಂದ.

ನೋಟಿಸ್.

ತಾರೀಖು 11ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಬೆಂಗಳೂರು ಸಿಟಿ ಮ್ಯುನಿಸಿಪಲ್ ಸರಹದ್ದಿನಲ್ಲಿ ಇರುವ ತರಕಾರಿ, ಮೀನು ಮತ್ತು ಕೋಳಿ ಮಾರ್ಕೆಟ್ಟುಗಳಲ್ಲಿ 1904ನೆ ಇಸವಿ ಜುಲೈ 1ನೆ ತಾರೀಖು ಲಾಗಾಯಿತು 1905ನೆ ಇಸವಿ ಜೂನ್ 30ನೆ ತಾರೀಖಿನ ವರಿವಿಗೆ, ಮಂಜೂರಾಗಿರುವ ದರಗಳ ಮೇರಿಗೆ ತೆರಿಗೆ ಮತ್ತು ಬಾಡಿಗೆಯನ್ನ ವಸೂಲ್ ಮಾಡುವದಕ್ಕೆ ಮೊಹರಿನಿಸಿ ದರಖಾಸ್ತುಗಳು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1904ನೆ ಇಸವಿ ಜೂನ್ 14ನೆ ತಾರೀಖು ಮಧ್ಯಾನ್ಹ 3 ಘಂಟೆ ಒಳಗಾಗಿ ಕೊಡಬಹುದು.

I. ಸಿಟಿ ಮಾರ್ಕೆಟ್ಟು ಸರಹದ್ದಿನೊಳಗೆ ಬಿಟ್ಟಾಗಿ ಆಗಲಿ ಅಥವಾ ಚಿಲ್ಲರೆಯಾಗಿ ಆಗಲಿ ಮಾರುವದಕ್ಕೋಸ್ಕರ ತರುವ ತರಕಾರಿ ಮತ್ತು ಹಣ್ಣುಗಳು, ಪುರುಳುಗಡ್ಡೆ, ಈರುಳ್ಳಿ, ಕಡ್ಲೆಕಾಯಿ, ತೆಂಗಿನಕಾಯಿ ಮತ್ತು ಇತರ ಜಿನಸಿಗಳ ಗೂಡೆಗಳಿಗೂ ಗಾಡಿಗಳಿಗೂ ಮತ್ತು ಮೀನು ಮತ್ತು ಕೋಳಿ ಮಾರ್ಕೆಟ್ಟುಗಳಿಗೆ ತರುವ ಮೀನು, ಕೋಳಿ, ಕೋಳಿಮೊಟ್ಟೆಗಳ ಗೂಡೆಗಳಿಗೂ ಇದರಡಿ ನಮೂದಿಸಿರುವ ರೇಟುಗಳು ಅನುಸರಿಸಿ ತೆರಿಗೆ ವಸೂಲ್ ಮಾಡುವದಕ್ಕೆ.

II. ಸೆಂಟ್ರಲ್ ಮಾರ್ಕೆಟ್ಟು ಅಲ್ಲದೆ ಈ ಕೆಳಗೆ ನಮೂದಿಸಿರುವ ಮಾರ್ಕೆಟ್ಟುಗಳಲ್ಲಿ ತರಕಾರಿ ಮಾರುವವರಿಂದ (ರುಸುಂ) ವಸೂಲ್ಮಾಡುವದಕ್ಕೆ.

ರಂಗಸ್ವಾಮಿ ದೇವಸ್ಥಾನದ ಬಳಿ ಇರುವ ಟೈಲ್ ಮಾರ್ಕೆಟ್ಟು.	
ಉಪ್ಪಾರಪೇಟೆ ..	ಡಿಟೋ
ತಿಗಳರಪೇಟೆ ಧರ್ಮರಾಯನ ಗುಡಿಬಳಿ ಟೈಲ್	ಡಿಟೋ
ಕಲಾಸಿಪಾಳ್ಯ	ಡಿಟೋ
ಅಕ್ಕಿ ಪೇಟೆಯಲ್ಲಿರುವ ...	ಡಿಟೋ

III. ಗುಜರಿಯಲ್ಲಿ ಗೊತ್ತು ಮಾಡಲ್ಪಟ್ಟ ಸ್ಥಳಗಳಲ್ಲಿ ಹಂಗಾಮಿಯಾಗಿ ವ್ಯಾಪಾರ ಮಾಡುವವರಿಂದ ವ್ಯಾಪಾರ ಮಾಡುವ ಜಮೀನಿಗೆ ಬಾಡಿಗೆ ವಸೂಲ್ಮಾಡುವದಕ್ಕೆ.

IV. ತೆಗರದ ಸ್ಟಾಲ್‌ಗಳಲ್ಲಿ ಹಂಗಾಮಿಯಾಗಿ ಪೆಕರಿ ಮಾಡುವ ಅಂಗಡಿಯವರಿಂದ ವ್ಯಾಪಾರ ಮಾಡುವ ಸ್ಥಳಕ್ಕೆ ಬಾಡಿಗೆ ವಸೂಲ್ ಮಾಡುವದಕ್ಕೆ.

V. ಮೀನು ಮತ್ತು ಕೋಳಿ ಮಾರ್ಕೆಟ್ಟುಗಳಲ್ಲಿ ಹಂಗಾಮಿಯಾಗಿ ವ್ಯಾಪಾರ ಮಾಡುವವರಿಂದ ಜಮೀನ್ ಬಾಡಿಗೆ ವಸೂಲ್ ಮಾಡುವದಕ್ಕೆ ಮೇಲ್ಕಂಡ ಮಾರ್ಕೆಟ್ಟುಗಳಲ್ಲಿ ಮುನಿಸಿಪಾಲಿಟಿಗೆ ತಿಂಗಳುಗಟ್ಲೆ ಬಾಡಿಗೆ ಕೊಡುವವರಿಂದ ಜಮೀನು ಬಾಡಿಗೆಯನ್ನ ಕಂಟ್ರಾಕ್ಟುದಾರನು ವಸೂಲ್ ಮಾಡಕೂಡದು ಮತ್ತು ಹಗಲುರಾತ್ರೆ ಸಹ ಸಾಮಾನುಗಳು ತೆಗಿಯದೆ ಅಂಗಡಿಗಳನ್ನು ಖಾಯಂ ಇಟ್ಟುಕೊಂಡಿರುವವರಿಂದ ಸಹ ಜಮೀನ್ ಬಾಡಿಗೆಯನ್ನ ವಸೂಲ್ ಮಾಡಕೂಡದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಸಿಟಿ ಮುನಿಸಿಪಲ್ ತರಕಾರಿ, ಮೀನು ಮತ್ತು ಕೋಳಿ ಮಾರ್ಕೆಟ್ಟುಗಳಲ್ಲಿ ತೆರಿಗೆ ಮತ್ತು ಜಮೀನ್ ಬಾಡಿಗೆ ವಸೂಲ್ಮಾಡುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಕೂಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿ ಠೇವಣಿ ಹಣವನ್ನ ಹಾಜರ್ಮಾಡಿದಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೆ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೆ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು. ಮತ್ತು ಯಾವ ಸಬಬನ್ನೂ ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಹಣವು ಅವನ ದರಖಾಸ್ತಿನ 1 ತಿಂಗಳ ಕಂಟ್ರಾಕ್ಟು ಮೊಬಲಗಿಗೆ ಕಮ್ಮಿಯಾಗಿದ್ದರೆ ಆ ಕಮ್ಮಿ ಮೊಬಲಗನ್ನ ಅವನು ಫಡನೆ ಹಾಜರ್ಮಾಡಬೇಕು. ಮತ್ತು ಅಂಥಾ ದರಖಾಸ್ತುದಾರನು ಅವನ ದರಖಾಸ್ತನ್ನ ಅಂಗೀಕರಿಸಿದ್ದನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯತು ಒಂದು ವಾರದೊಳಗೆ ಅವಶ್ಯಕವಾದ ಇಜಾರೆ ಮುಚ್ಚಳಿಕೆಯನ್ನ ಬರದುಕೊಡಬೇಕು. ಹಾಗೆ ತಪ್ಪಿದರೆ ಆ ಠೇವಣಿ ಮೊಬಲಗು ಬೋರ್ಡಿಗೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು. ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡಲ್ಪಡುವದರಲ್ಲಿ ಉಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

6. ಕಂಟ್ರಾಕ್ಟುದಾರನು ಇದರ ಕೆಳಗೆ ಕಾಣಿಸಿದ ಪ್ರಕಾರ ತೆರಿಗೆ ಅಥವಾ ಬಾಡಿಗೆ ವಸೂಲ್ಮಾಡಿಕೊಳ್ಳತಕ್ಕದ್ದಾಗಿದೆ.

A. ಕಿದ್ದಿಕಟ್ಟೆಯಲ್ಲಿರುವ ಎನ್‌ಕ್ಲೋಜರ್ ವೆಜಿಟೆಬಲ್ ಮಾರ್ಕೆಟ್ಟಿನಲ್ಲಿ. } ಇದರ ತಪ್ಸೀಲ್ ನಮೂದಿನಿಂದ ಕಂಟ್ರಾಕ್ಟುದಾರನು ಕಂಟ್ರಾಕ್ಟಿಗೆ ಸಮ್ಮಂಧಪಟ್ಟ ಪ್ರತಿಒಂದು ಸ್ಥಳದಲ್ಲಿಯೂ ಸ್ವಂತ ಲಾಗವಡಿನಿಂದ ಒಂದು ಬೋರ್ಡ್ ಹಾಕಿರಬೇಕು.

		ರೂ.	ಆ.	ಪೈ.
1.	ದೊಡ್ಡ ಮಂಕ್ರಿ 1ಕ್ಕೆ ತರಕಾರಿ	0	0	2
2.	ಹರಿವೆಸೊಪ್ಪುಗಳ ಮಂಕ್ರಿ 1ಕ್ಕೆ	0	0	1
3.	ಭಂಡಿತುಂಬಾ ತರಕಾರಿ, ಹಣ್ಣುಗಳು ಒಟ್ಟು ಬಿಕರಿಗೆ ಬಂದರೆ ... - ...	0	2	0
4.	ಮಾರ್ಕೆಟ್ಟಿನಲ್ಲಿ ಅಂಗಡಿ ಇಟ್ಟುಕೊಳ್ಳುವ ಉದ್ದಿಶ್ಯ ಬರುವ ತರಕಾರಿ ಭಂಡಿ 1ಕ್ಕೆ ..	0	1	0
5.	ಸೇಬು, ಅಂಜೂರ, ದಾಳಿಂಬ, ಚಕ್ಕೋತ ಮತ್ತು ಮಾವು ವಗೈರೆ ಹಣ್ಣುಗಳ ಮಂಕ್ರಿ 1ಕ್ಕೆ	0	0	3
6.	ಮಾರ್ಕೆಟ್ಟಿನಲ್ಲಿ ಅಂಗಡಿ ಇಟ್ಟುಕೊಳ್ಳುವ ಉದ್ದಿಶ್ಯ ತರಗಿನಪೇಟೆ ವಗೈರೆ ಸ್ಥಳದಿಂದ ಬರುವ ಉರಳಗಡ್ಡೆ, ಈರುಳ್ಳಿ, ಕಡ್ಲೆಕಾಯಿ ವಗೈರೆ ಮೂಟೆ 1ಕ್ಕೆ.	0	0	3
7.	ರೈಲ್‌ನಿಂದ ಬರುವ ಮೂಟೆಭಂಡಿ ಭರ್ತಿ ಕಡ್ಲೆಕಾಯಿ, ಉರಳಗಡ್ಡೆ, ಈರುಳ್ಳಿ, ಮಾವಿನಹಣ್ಣು, ಬಾಳೆಹಣ್ಣು ವಗೈರೆ ಒಂದೇವಿಧವಾದ ಬಾಬಿಗೆ.	0	1	0
8.	ಕೋಳಿ, ಕೋಳಿಮೊಟ್ಟೆ ಅಥವಾ ಆಹಾರಕ್ಕೆ ಉಪಯುಕ್ತವಾದ ಇತರ ಪಕ್ಷಿಗಳ ಗೂಡೆ 1ಕ್ಕೆ	0	0	3
9.	5 × 5 ಅಡಿಯುಳ್ಳ ಪ್ರತಿ ಜಮೀನಿನಲ್ಲಿ ಸಾಯಂಕಾಲದ ಅಂಗಡಿಗೆ .. .	0	0	3
10.	ಸದರಿ ಅಳತೆಯುಳ್ಳ ಜಮೀನನ್ನು ಉಪಯೋಗಿಸಿಕೊಂಡು ಹರಾಜು ಮಾಡಿಸುವ ಜಾಗಾಕ್ಕೆ	0	1	0
11.	ವೆಜಿಟೆಬಲ್ ಮಾರ್ಕೆಟ್ಟು ವಳಗಾಗಿ ಟೆಂಪರರಿಯಾಗಿ ಇಟ್ಟುಕೊಳ್ಳುವ ಸದರಿ ಅಳತೆಯುಳ್ಳ ಜಾಗಾಕ್ಕೆ ತರಕಾರಿ ಮಾರಾಟಕ್ಕೆ.	0	0	2
12.	ಮೀನಿನ ಸ್ಟಾಲ್ 1ಕ್ಕೆ	0	0	2

VII. ವೆಜಿಟಬಲ್ ಮಾರ್ಕೆಟ್ಟು ಹಿಂಭಾಗದಲ್ಲಿರುವ ಮೈದಾನದ ಯಾವ ಭಾಗದಲ್ಲಾದರೂ ಕಬ್ಬಿಣ ವಗೈರೆ ಸಾಮಾನುಗಳು ರಾತ್ರಿ ಹಗಲು ಸಹ ತೆಗಿಯದೆ ಇಟ್ಟುಕೊಂಡು ವ್ಯಾಪಾರ ಮಾಡುವವರಿಂದ ಅಮಾನಿಯಾಗಿ ಮಾಹೆಯಾನಾ ಬಾಡಿಗೆ ವಸೂಲ್ಮಾಡಲ್ಪಡುತ್ತೆ. ಟೆಂಪರರಿಯಾಗಿ ಇಡುವವರಿಂದ ಕಂಟ್ರಾಕ್ಟುದಾರನು ವಸೂಲ್ಮಾಡಿಕೊಳ್ಳಬಹುದು.

VIII. ಕಂಟ್ರಾಕ್ಟುದಾರನು ಪ್ರತಿ ತಿಂಗಳ 5ನೆ ತಾರೀಖು ವಳಗಾಗಿ ಕಂಟ್ರಾಕ್ಟು ಬಾಬತು ಆಯಾಯ ತಿಂಗಳ ಮೊಬಲಗನ್ನು ಮುಂದಾಗಿ ಯಾ ಹಾಜರ್ಮಾಡಿ ರಶೀತಿ ಪಡದುಕೊಳ್ಳಬೇಕು.

IX. ಕೋಟೆ ಅಂಜನೇಯ ದೇವಸ್ಥಾನಕ್ಕೆ ಬಿಟ್ಟಿರುವ ಮೆಯಿನ್‌ಡ್ರೈನ್ ಪಕ್ಕದ ಖಾಲಿ ಜಮೀನಿನಲ್ಲಿ ವಸೂಲಾಗತಕ್ಕದ್ದು ವೆಜಿಟಬಲ್ ಮಾರ್ಕೆಟ್ಟು ಕಂಟ್ರಾಕ್ಟುದಾರ್ರೆ ವಸೂಲ್ಮಾಡಿಕೊಂಡು ಮಾಹೆ 1ಕ್ಕೆ 2 ರೂಪಾಯಿಗಳಂತೆ ಡಿಟೋ ದೇವಸ್ಥಾನದ ಏಜಂಟರಿಗಾಗಿ ಅವರಿಗೆ ಪಾವತಿ ಬಗ್ಗೆ ಕಂಟ್ರಾಕ್ಟು ಮೊಬಲಗಿನ ಸಂಗಡ ಇರಸಾಲ್ ಮಾಡಬೇಕು.

X. ಠೇವಣಿ ಮೊಬಲಗು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖ್ಯೆರಾಗುವ ವರಿವಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಮುಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟು ಸಾಹೇಬರು ಇವನಿಗೆ ವಿಧಿಸುವ ಜುರ್ಮಾನೆಗಳನ್ನು ಇವನು ಅಲಾಯಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ಪಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಗೆ ಕಂಟ್ರಾಕ್ಟುದಾರನಿಗೆ ನೋಟೀಸು ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸು ಮಾಡಲ್ಪಡುವದು.

XI. ಈ ಷರತ್ತುಗಳಿಗೆ ವಿರೋಧವಾಗಿ ನಡದುಕೊಳ್ಳುವ ಪಕ್ಷಕ್ಕೆ ಕೂಡ್ಲೆ ಕಂಟ್ರಾಕ್ಟು ರದ್ದುಮಾಡಿ ಬೇರೆ ಜನರಿಗೆ ಕೊಡಲ್ಪಡುವದಲ್ಲದೆ ಠೇವಣಿ ಮೊಬಲಗನ್ನು ದಂಡವಾಗಿ ಅಥವಾ ಅವನ ಬಾಕಿಗೆ ತೆಗದುಕೊಂಡು ಲುಕ್ಸಾನ್ ಮೊಬಲಗಿಗೆ ಕಂಟ್ರಾಕ್ಟುದಾರನನ್ನ ಜವಾಬ್ದಾರಿ ಮಾಡಿ ಅವನ ಜಿಂದಗಿ ಜಫ್ತಿ ಹರಾಜುಮೂಲಕ ವಸೂಲ್ ಮಾಡಲ್ಪಡುತ್ತೆ.

XII. ಮಿಕ್ಕ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳಿದುಕೊಳ್ಳಬೇಕು.

XIII. ಪ್ರೆಸಿಡೆಂಟರವರ ಮಂಜೂರಿ ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರವರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನು ಬಿನ್ ತಕರಾರು ತೆಗದುಕೊಳ್ಳಲು ಸಲೀಸ್ ವಿಳಾಸ ಇಡತಕ್ಕದ್ದು.

ತಾರೀಖು 11ನೆ ಮೇ 1904.

ಇದರಿಂದ ಸಫಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ರೋಡು ಹಳೆ ಟಿಂಬರು ಯಾರ್ಡು ಬಳಿ ಇರುವ ಮ್ಯುನಿಸಿಪಲ್ ಖಾಲಿ ಜಮೀನಿನಲ್ಲಿ ಭಂಡಿಗಳು ವಗೈರೆ ನಿಲ್ಲುವವರ ಕಡೆಯಿಂದ ಜಮೀನು ಬಾಡಿಗೆಯನ್ನು 1904ನೆ ಇಸವಿ ಜುಲೈ ಒಂದನೇ ತಾರೀಖು ಮೊದಲುಗೊಂಡು 1905ನೆ ಇಸವಿ ಜೂನ್ ಆಖೈರು ವರಿವಿಗೆ ರೋಜ್ವೋಸಾ ಇದರಡಿ ನಮೂದಿಸಿರುವ ದರಗಳಂತೆ ವಸೂಲ್ ಮಾಡಿಕೊಳ್ಳತಕ್ಕದ್ದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1904ನೆ ಜೂನ್ 14ನೆ ತಾರೀಖು ಮಧ್ಯಾಹ್ನ 2 ಘಂಟೆ ಒಳಗಾಗಿ ಕೊಡಬಹುದು.

2. ಮೇಲ್ಕಂಡ ಜಾಗದಲ್ಲಿ ಬಾಡಿಗೆ ರುಸುಂ ವಸೂಲ್ ಮಾಡತಕ್ಕ ದರಗಳ ತಪಶೀಲ್ :—

		ರೂ.	ಅ.	ಪೈ.
1.	ಕಟ್ಟಿಗೆ ಮತ್ತು ಹುಲ್ಲು ಭಂಡಿ 1ಕ್ಕೆ	0	2	0
2.	ಕಟ್ಟಿಗೆ ಹೊರೆ 1ಕ್ಕೆ	0	0	1
3.	ಹುಲ್ಲು ಹೊರೆ 1ಕ್ಕೆ	0	0	2

3. ದರಖಾಸ್ತುಗಳ ಮೇಲ್ಭಾಗದಲ್ಲಿ "ಸಿಟಿ ಮಜಕೂರು ಮೈಸೂರ್ರು ರೋಡು ಹಳೆ ಟಿಂಬರು ಯಾರ್ಡು ಬಳಿ ಇರುವ ಮ್ಯುನಿಸಿಪಲ್ ಖಾಲಿ ಜಮೀನಿನಲ್ಲಿ ಭಂಡಿಗಳು ವಗೈರೆ ನಿಲ್ಲುವವರ ಕಡೆಯಿಂದ ಜಮೀನು ಬಾಡಿಗೆ ವಸೂಲ್ ಮಾಡಿಕೊಳ್ಳುವದಕ್ಕೆ ದರಖಾಸ್ತು" ಎಂಬದಾಗಿ ಬರೆದು ಇರತಕ್ಕದ್ದು.

4. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ ಮಾಡಿದಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

5. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿ ಇರುವವರು ಬದ್ಧರಾಗಿ ಇರುವದಿಲ್ಲವು. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

6. ಕಂಟ್ರಾಕ್ಟು ಮೊಬಲಗಿನ ಪೈಕಿ 1 ತಿಂಗಳ ಮೊಬಲಗನ್ನು ಅಮಾನತ್ತು ಇಡಬೇಕು.

7. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನು ಪ್ರತಿ ತಿಂಗಳು 5ನೆ ತಾರೀಖು ಒಳಗಾಗಿ ಮುಂದಾಗಿಯೆ ಪಾವತಿ ಮಾಡಿ ರಸೀತಿ ಪಡಿಯುತ್ತಾ ಬರಬೇಕು. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಕೆಲಸವನ್ನು ಸರಿಯಾಗಿ ನೆರವೇರಿಸುವ ಬಗ್ಗೆ ಆತನ ಕಂಟ್ರಾಕ್ಟು ಮಂಜೂರಾದ 7 ದಿವಸದ ಒಳಗಾಗಿ ಛಾಪಾಕಾಗದದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

8. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಇಟ್ಟುಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸಿದ ಜುಲ್ಮಾನೆಗಳನ್ನು ಇವನು ಅಲಾಹಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಗೆ ಕಂಟ್ರಾಕ್ಟುದಾರನಿಗೆ ನೋಟೀಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

9. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳದುಕೊಳ್ಳಬಹುದು.

10. ಸರ್ಕಾರಿ ಉಪಯೋಗಕ್ಕೋಸ್ಕರವಾಗಿ ಈ ಸ್ಥಳ ಬೇಕಾದಲ್ಲಿ ಬೇರೆ ಸ್ಥಳ ನೇಮಿಸಲ್ಪಡುತ್ತೆ. ಯಾಗಿ ಆಗ ಯಾವ ಕಂಪೆನ್ಸೇಷನ್ ಅಪೇಕ್ಷಿಸದೆ ಕಂಟ್ರಾಕ್ಟು ಷರತ್ತಿನಂತೆ ನಡದುಕೊಳ್ಳಬೇಕಾಗಿರುತ್ತೆ.

11. ಕಂಟ್ರಾಕ್ಟು ಪದ್ದಿನ ಸ್ಥಳಕ್ಕೆ ಹುಲ್ಲು, ಕಟ್ಟಿಗೆ ವಗೈರೆ ಭಂಡಿಗಳ ಆಗಲಿ ಅಥವಾ ಹುಲ್ಲು, ಕಟ್ಟಿಗೆ ವಗೈರೆ ಹೊರೆಗಳ ಆಗಲಿ ಬಾರದೆ ಇದ್ದಲ್ಲಿ ಇದಕ್ಕಾಗಿ ಯಾವ ಲುಕ್ಸಾನಿಗೂ ಪರಿಹಾರ ದೊರಿಯಲಾರದು.

12. ಮೇಲ್ಕಂಡ ಜಾಗಾ ವಿನಹಾ ಇತರ ಸ್ಥಳಗಳಲ್ಲಿ ಭಂಡಿಗಳಿಗೆ ಆಗಲಿ ಅಥವಾ ಹುಲ್ಲು, ಕಟ್ಟಿಗೆ ವಗೈರೆಗಳಿಗೆ ಆಗಲಿ ರುಸುಂ ವಸೂಲ್ ಮಾಡಿಕೊಳ್ಳಕೂಡದು.

13. ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡದುಕೊಂಡಲ್ಲಿ ಅಂಥಾವರ ಕಂಟ್ರಾಕ್ಟನ್ನು ರದ್ದು ಮಾಡಿ ಬೇರೆ ಜನಕ್ಕೆ ಕೊಡಲ್ಪಡುತ್ತೆ. ಹಾಗೆ ಬೇರೆ ಕಂಟ್ರಾಕ್ಟು ಕೊಡುವದರಲ್ಲಿ ಉಂಟಾಗುವ ಲುಕ್ಸಾನ್ ಮೊಬಲಗನ್ನು ಬೋರ್ಡಿನವರು ಮೊದಲಿನ ಕಂಟ್ರಾಕ್ಟುದಾರನ ಚರ ಸ್ಥಿರ ಜಿಂದಗಿಯನ್ನು ಜಫ್ತಿ ಹರಾಜ್ ಮೂಲಕ ವಸೂಲ್ ಮಾಡಿಕೊಳ್ಳಲು ಸ್ವತಂತ್ರರಾಗಿ ಇರುತ್ತಾರೆ.

14. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನು ಬಿಲಾ ತಕರಾರು ತೆಗದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

ತಾರೀಖು 11ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ, ನಾಲ್ಕನೇ ಡಿವಿಜನ್ ತಾರಾಮಂಡಲಪೇಟೆ ನಾಲ್ಕು ಭಾವಿ ಬಳಿಯಣ ಖಾಲಿ ಜಮೀನಿನಲ್ಲಿ ಛಂಡಿಗಳು ವಗೈರೆ ನಿಲ್ಲುವವರ ಕಡೆಯಿಂದ ಜಮೀನ್ ಬಾಡಿಗೆಯನ್ನು 1904ನೆ ಇಸವಿ ಜುಲೈ ಗುರ್ರೇ ಲಾಗಾಯತು 1905ನೆ ಇಸವಿ ಜೂನ್ ಆಖೈರ ವರಿಗೆ ರೋಜಿನಾ ಇದರಡಿ ನಮೂದಿಸಿರುವ ದರಗಳಂತೆ ವಸೂಲ್ ಮಾಡಿಕೊಳ್ಳತಕ್ಕದ್ದಕ್ಕೆ ಮೊಹರ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1904ನೆ ಜೂನ್ 14ನೆ ತಾರೀಖು ಮಧ್ಯಾಹ್ನ 2 ಘಂಟೆ ಒಳಗಾಗಿ ಕೊಡಬಹುದು:—

2. ಮೇಲ್ಕಂಡ ಜಾಗಾದಲ್ಲಿ ಬಾಡಿಗೆ ರುಸುಂ ವಸೂಲ್ ಮಾಡತಕ್ಕ ದರಗಳ ತಪಶೀಲ್:—

		ರೂ. ಆ. ಪೈ.
1.	ಕಟ್ಟಿಗೆ ಮತ್ತು ಹುಲ್ಲುಛಂಡಿ 1ಕ್ಕೆ ...	0—2—0
2.	ಕಟ್ಟಿಗೆ ಹೊರೆ 1ಕ್ಕೆ	0—0—1
3.	ಹುಲ್ಲು ಹೊರೆ 1ಕ್ಕೆ	0—0—2
4.	ತರಕಾರಿ ಅಂಗಡಿ ಜಾಗಾಕ್ಕೆ	0—0—2
5.	ಕುಂಬಾರರು ಸಾಮಾನು ಮಂಕ್ರಿ 1ಕ್ಕೆ	0—0—2
6.	ಮಿಠಾಯಿ ವಗೈರೆ ಅಂಗಡಿ 1ಕ್ಕೆ ..	0—0—2

3. ದರಖಾಸ್ತುಗಳ ಮೇಲ್ಭಾಗದಲ್ಲಿ "ತಾರಾಮಂಡಲಪೇಟೆ ನಾಲ್ಕು ಭಾವಿ ಬಳಿಯಣ ಖಾಲಿ ಜಮೀನಿನಲ್ಲಿ ಕಟ್ಟಿಗೆ ಮತ್ತು ಹುಲ್ಲುಛಂಡಿ ವಗೈರೆ ಇಟ್ಟುಕೊಂಡು ಮಾರುವವರಿಂದ ಜಮೀನ್ ಬಾಡಿಗೆ ವಸೂಲ್ ಮಾಡಿಕೊಳ್ಳುವದಕ್ಕೆ ದರಖಾಸ್ತು" ಎಂಬದಾಗಿ ಬರೆದು ಇರತಕ್ಕದ್ದು.

4. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

5. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿ ಇರುವವರು ಬದ್ಧರಾಗಿ ಇರುವದಿಲ್ಲವು. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

6. ಕಂಟ್ರಾಕ್ಟು ಮೊಬಲಗಿನ ಪೈಕಿ 1 ತಿಂಗಳ ಮೊಬಲಗನ್ನ ಅಮಾನತ್ತು ಇಡಬೇಕು.

7. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನ ಪ್ರತಿ ತಿಂಗಳು 5ನೆ ತಾರೀಖು ಒಳಗಾಗಿ ಮುಂದಾಗಿಯೆ ಪಾವತಿ ಮಾಡಿ ರಶೀತಿ ಪಡಿಯುತ್ತಾ ಇರಬೇಕು. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಕೆಲಸವನ್ನು ಸರಿಯಾಗಿ ನೆರವೇರಿಸುವ ಬಗ್ಗೆ ಆತನ ಕಂಟ್ರಾಕ್ಟು ಮಂಜೂರಾದ 7 ದಿವಸದ ಒಳಗಾಗಿ ಛಾಪಾಕಾಗದದಲ್ಲಿ ಮುಚ್ಚಳಿಕೆ ಬರಸಿಕೊಡಬೇಕು.

8. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವವರೆಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಇಟ್ಟುಕೊಳ್ಳಲ್ಪಡುವದು. ಇವನ ಕಂಟ್ರಾಕ್ಟ ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸಿದ ಜುಲ್ಮಾನೆಗಳನ್ನ ಇವನು ಅಲಾಹಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಗೆ ಕಂಟ್ರಾಕ್ಟುದಾರನಿಗೆ ನೋಟೀಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

9. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳದುಕೊಳ್ಳಬಹುದು.

10. ಸರ್ಕಾರಿ ಉಪಯೋಗಕ್ಕೋಸ್ಕರವಾಗಿ ಈ ಸ್ಥಳ ಬೇಕಾದಲ್ಲಿ ಬೇರೆ ಸ್ಥಳ ನೇಮಿಸಲ್ಪಡುತ್ತೆಯಾಗಿ ಆಗ ಯಾವ ಕಂಪೆನ್ಸೇಷನ್ ಅಪೇಕ್ಷಿಸದೆ ಕಂಟ್ರಾಕ್ಟು ಷರತ್ತಿನಂತೆ ನಡದುಕೊಳ್ಳಬೇಕಾಗಿರುತ್ತೆ.

11. ಕಂಟ್ರಾಕ್ಟು ಹದ್ದಿನ ಸ್ಥಳಕ್ಕೆ ಹುಲ್ಲು, ಕಟ್ಟಿಗೆ ವಗೈರೆ ಛಂಡಿಗಳ ಆಗಲಿ ಅಥವಾ ಹುಲ್ಲು, ಕಟ್ಟಿಗೆ ವಗೈರೆ ಹೊರೆಗಳ ಆಗಲಿ ಬಾರದೆ ಇದ್ದಲ್ಲಿ ಇದಕ್ಕಾಗಿ ಯಾವ ಲುಕ್ಸಾನಿಗೂ ಪರಿಹಾರ ದೊರಿಯಲಾರದು.

12. ಮೇಲ್ಕಂಡ ಜಾಗಾ ವಿನಹಾ ಇತರ ಸ್ಥಳಗಳಲ್ಲಿ ಛಂಡಿಗಳಿಗೆ ಆಗಲಿ ಅಥವಾ ಹುಲ್ಲು, ಕಟ್ಟಿಗೆ ವಗೈರೆಗಳಿಗೆ ಆಗಲಿ ರುಸುಂ ವಸೂಲ್ ಮಾಡಿಕೊಳ್ಳಕೂಡದು.

13. ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡದುಕೊಂಡಲ್ಲಿ ಅಂಥಾವರ ಕಂಟ್ರಾಕ್ಟನ್ನು ರದ್ದುಮಾಡಿ ಬೇರೆ ಜನಕ್ಕೆ ಕೊಡಲ್ಪಡುತ್ತೆ. ಹಾಗೆ ಬೇರೆ ಕಂಟ್ರಾಕ್ಟು ಕೊಡುವದರಲ್ಲಿ ಉಂಟಾಗುವ ಲುಕ್ಸಾನ್ ಮೊಬಲಗನ್ನು ಬೋರ್ಡಿನವರು ಮೊದಲಿನ ಕಂಟ್ರಾಕ್ಟುದಾರನ ಚರ ಸ್ಥಿರ ಜಿಂದಗಿಯನ್ನು ಜಫ್ತಿ ಹರಾಜ್ ಮೂಲಕ ವಸೂಲ್ ಮಾಡಿಕೊಳ್ಳಲು ಸ್ವತಂತ್ರರಾಗಿ ಇರುತ್ತಾರೆ.

14. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಸಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನ ಬಿಲ ತಕರಾರು ತೆಗೆದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

ತಾರೀಖು 11ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ — ಸಿಟಿ ಮುಜಕೂರು ಕಸಾಯಿ ಮಾರ್ಕೆಟ್ಟಿನಲ್ಲಿ ರೋಜೀನಾ ಸಾಯಂಕಾಲದ ವ್ಯಾಳೆ ಕಟಾವು ಆಗುವ ಕುರಿ ಅಥವಾ ಮೇಕೆ ರಾಸ 1ಕ್ಕೆ 0—2—0 ಎರಡು ಆಣೆ ಮೇರಿಗೆ 1904ನೆ ಇಸವಿ ಜುಲೈ ಗುರ‍್ರ ಲಾಗಾಯಿತು 1905ನೆ ಇಸವಿ ಜೂನ ಆಖೈರ ಮಿನಹ್ಹು ವಸೂಲ್ಮಾಡಿಕೊಳ್ಳುವದಕ್ಕೆ ಮೊಹರ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ ಮಾಡಿರುವವರಿಗೆ ಸನ 1904ನೆ ಇಸವಿ ಜೂನ 14ನೆ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಮ್ಯೂನಿಸಿಪಲ ಸ್ಲಾಟರ ಹೌಸಿನ ರುಸುಂ ವಸೂಲ್ಮಾಡುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರ್ರೆನ್ಸಿ ನೋಟುಗಳು ಆಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರತು ಯಾವ ದರಖಾಸ್ತನ್ನೂ ತೆಗೆದುಕೊಳ್ಳುವದಿಲ್ಲ.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ನಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ ಮಾಡಿರುವವರು ಬದ್ಧರಾಗಿರುವದಿಲ್ಲವು. ಯಾವ ಸಬಬನ್ನೂ ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಒಂದು ತಿಂಗಳ ಕಂಟ್ರಾಕ್ಟು ಮೊಬಲಗು ಅಮಾನತ್ತು ಇಡಬೇಕು. ಮತ್ತು ಮಂಜೂರಾದ ಸಂಗತಿಯನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಇಜಾರೆ ಮುಚ್ಚಳಿಕೆಯನ್ನು ಬರದು ಕೊಡಬೇಕು. ಹಾಗೆ ತಪ್ಪಿದರೆ ಠೇವಣಿ ಮೊಬಲಗು ಬೋರ್ಡಿಗೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಇತರರಿಗೆ ವಿಲೇವಾರಿ ಮಾಡುವದರಲ್ಲಿ ಉಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

6. ಸ್ಲಾಟರ ಹೌಸನ್ನ ಸಾಫ್ ಮಾಡಿಸಲು ನೇಮಿಸಲ್ಪಡುವ ಎಸ್ಟಾಬ್ಲಿಷ್ಮೆಂಟ ಛಾರ್ಜಿಗಾಗಿ ಮಾಹೇಯಾನ 25 ರೂಪಾಯಿ ಮೇರಿಗೆ ಹರಯೇಕ ತಿಂಗಳು 5ನೆ ತಾರೀಖು ವಳಗಾಗಿ ಕಂಟ್ರಾಕ್ಟು ಮೊಬಲಗಿನ ಸಂಗಡ ಹಾಜರ್ಮಾಡಬೇಕು. ಸ್ಲಾಟರ ಹೌಸಿನಲ್ಲಿ ಬೀಳುವ ಕಚರಾ ಕಂಟ್ರಾಕ್ಟುದಾರರಿಗೆ ಶೇರತಕ್ಕದ್ದಿಲ್ಲಾ.

7. ಕಂಟ್ರಾಕ್ಟುದಾರನು ಪ್ರತಿ ತಿಂಗಳ 5ನೆ ತಾರೀಖು ಒಳಗಾಗಿ ಆ ಕಂಟ್ರಾಕ್ಟು ಬಾಬತು ಆಯಾಯ ತಿಂಗಳ ಮೊಬಲಗನ್ನು ಮತ್ತು ಎಸ್ಟಾಬ್ಲಿಷ್ಮೆಂಟ ಛಾರ್ಜನ್ನು ಮುಂದಾಗಿಯೇ ಹಾಜರ್ಮಾಡಿ ರಶೀತಿ ಪಡಿಯಬೇಕಾಗಿದೆ.

8. ಅಮಾನತನಲ್ಲಿ ಇಡಲ್ಪಟ್ಟ ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರ ಆಗುವವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ ಉಳಿಸಿಕೊಳ್ಳಲ್ಪಡುವದು ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ ಸಾಹೇಬರವರು ಇವನಿಗೆ ವಿಧಿಸುವ ಜುರ್ಮಾನೆಗಳನ್ನ ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟೀಸು ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ ಮಾಡಲ್ಪಡುವದು.

9. ಕಸಮ ವಿಷಯಗಳನ್ನ ಈ ಕೆಳಗೆ ಸೈನ ಮಾಡಿರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

10. ಸದರೀ ಸ್ಲಾಟರ ಹೌಸನ್ನ ಕಂಟ್ರಾಕ್ಟು ಕಾಲದಲ್ಲಿ ಬ್ಯಾರೆ ಸ್ಥಳಕ್ಕೆ ವರ್ಗ ಮಾಡಿದ್ದೇ ಆದರೆ ಜಿರ್ಹಾ ತಕರಾರ ಅಲ್ಲಿಗೆ ಹೋಗಬೇಕು.

11. ಪ್ರೆಸಿಡೆಂಟರವರ ಮಂಜೂರಿ ಇಲ್ಲದೆ ಬಾಬು ಇತರರಿಗೆ ಶಿಕ್ಮಿ ಕಂಟ್ರಾಕ್ಟು ವಗ್ಯೆರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗ್ಯೆರೆಗಳನ್ನ ಜಿರ್ಹಾ ತಕರಾರು ತೆಗದುಕೊಳ್ಳಲು ಸಲೀಸ ಏರ್ಪಾಡು ಇಡತಕ್ಕದ್ದು.

12. ಮಾರ್ಕೆಟ್‌ಷೋ ಎಂಬ ವಿನೋದವು ಯಾವ ದಿವಸ ನಡಿಸಲ್ಪಡುತ್ತೋ ಅದಕ್ಕೆ ಹಿಂದಿನ ದಿನ ಸ್ಲಾಟರ ಹೌಸಿನಲ್ಲಿ ಮಾರ್ಕೆಟ್‌ಷೋಗೋಸ್ಕರ ಕಟಾವಾಗುವ ಕುರಿಗಳು ಅಥವಾ ಮೇಕೆಗಳ ಮೇಲೆ ರುಸುಂ ವಸೂಲ್ಮಾಡಕೂಡದು. ಈ ನಷ್ಟಕ್ಕಾಗಿ ಬೋರ್ಡಿನವರು ರಿಮಿಷನ ಕೊಡತಕ್ಕದ್ದಿಲ್ಲ.

13. ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಕ್ಕಾದರೂ ವಿರೋಧವಾಗಿ ನಡದುಕೊಂಡರೂ ಮೇಲಿನ ರೇಟಿಗಿಂತ ಜಾಸ್ತಿಯಾಗಿಯೂ ಮತ್ತು ಸ್ಲಾಟರಹೌಸ ವಿನಹ ಇತರ ಯಾವ ಸ್ಥಳಗಳಲ್ಲಿ ಆಗಲಿ ರುಸುಂ ವಸೂಲ್ಮಾಡಿಕೊಂಡರೂ ಕೂಡ್ಲೆ ಕಂಟ್ರಾಕ್ಟನ್ನ ರದ್ದುಮಾಡಿ ಬೇರೆ ಜನರಿಗೆ ಕೊಡಲ್ಪಡುವದಲ್ಲದೆ ಠೇವಣಿ ಮೊಬಲಗನ್ನ ದಂಡವಾಗಿ ಅಥವಾ ಅವನ ಬಾಕಿ ಭರ್ತಿಗಾಗಿ ತೆಗದುಕೊಂಡು ಲುಕ್ಸಾನ ಮೊಬಲಗಿಗೆ ಕಂಟ್ರಾಕ್ಟುದಾರನ್ನ ಜವಾಬ್ದಾರನನ್ನಾಗಿಮಾಡಿ ಅವನ ಸ್ಥಿರ ಚರ ಜಿಂದಗಿ ಜಫ್ತು ಮೂಲಕ ವಸೂಲ್ಮಾಡಲ್ಪಡುತ್ತೆ.

ತಾರೀಖು 11ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, - ಸಿಟಿ ಮಜಕೂರು ಕೋಟೆ ಮುಂಭಾಗದಲ್ಲಿ ಕಲ್ಯಾಣಿ ಇದ್ದ ಮೈದಾನದ ದಕ್ಷಿಣ ಭಾಗದಲ್ಲಿ ಭಂಡಿಗಳು ನಿಲ್ಲುವದಕ್ಕೆ ಹದ್ದುಮಾಡಿರುವ ಸ್ಥಳದಲ್ಲಿ ಬಂದು ನಿಲ್ಲುವ ಕಲ್ಲು ಭರ್ತಿ ಪ್ರತಿ ಭಂಡಿಗೂ 1904ನೆ ಇಸವಿ ಜುಲೈ ಗುರ್ರೆ ಲಾಗಾಯತು 1905ನೆ ಇಸವಿ ಜೂನ್ ಆಖೈರು ವರಿವಿಗೆ ರೋಜೀನಾ ದರ ಭಂಡಿ 1ಕ್ಕೆ 0—0—6 ಆರು ಪೈ ಮೇರಿಗೆ ರುಸುಂ ವಸೂಲ್ಮಾಡಿಕೊಳ್ಳುವದಕ್ಕೂ ಮತ್ತು ಅದರಲ್ಲಿ ಬೀಳುವ ಕಚರಾವನ್ನು ರೂಢಿಸಿಕೊಳ್ಳುವದಕ್ಕೂ ಸಹ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1904ನೆ ಜೂನ್ 14ನೆ ತಾರೀಖು ಮಧ್ಯಾನ್ಹ 2 ಘಂಟೆ ವಳಗಾಗಿ ಕೊಡಬಹುದು. ಸದರೀ ಸ್ಥಳದ ಪ್ಲಾನ್ ಮ್ಯುನಿಸಿಪಲ್ ಆಫೀಸಿನಲ್ಲಿ ನೋಡಬಹುದು.

2. ದರಖಾಸ್ತುಗಳ ಮೇಲ್‌ಭಾಗದಲ್ಲಿ "ಸಿಟಿ ಮಜಕೂರು ಕೋಟೆ ಮುಂಭಾಗದಲ್ಲಿ ಕಲ್ಯಾಣಿ ಇದ್ದ ಬೈಲು ಜಮೀನಿನ ದಕ್ಷಿಣ ಭಾಗದಲ್ಲಿ ಕಲ್ಲು ಭಂಡಿ ರುಸುಂ ವಸೂಲ್ಮಾಡಿಕೊಳ್ಳುವದಕ್ಕೂ ಮತ್ತು ಕಚರಾ ರೂಢಿಸಿಕೊಳ್ಳುವದಕ್ಕೂ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತುಸಂಗಡ ನಗದಾಗಲಿ ಅಥವಾ ಕರ್ರೆನ್ಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನ ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

4. ಎಲ್ಲಾ ವರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿ ಇರುವವರು ಬದ್ಧರಾಗಿ ಇರುವದಿಲ್ಲವು; ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

5 ಕಂಟ್ರಾಕ್ಟು ಮೊಬಲಗಿನ ಪೈಕಿ 1 ತಿಂಗಳ ಮೊಬಲಗನ್ನ ಅಮಾನತ್ತು ಇಡಬೇಕು.

6. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನ ಪ್ರತಿ ತಿಂಗಳು 5ನೆ ತಾರೀಖು ವಳಗಾಗಿ ಮುಂದಾಗಿಯೇ ಪಾವತಿ ಮಾಡಿ ರಶೀತಿ ಪಡಿಯುತ್ತಾ ಬರಬೇಕು. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಕೆಲಸವನ್ನು ಸರಿಯಾಗಿ ನೆರವೇರಿಸುವ ಬಗ್ಯೆ ಆತನ ಕಂಟ್ರಾಕ್ಟು ಮಂಜೂರಾದ 7 ದಿವಸದ ವಳಗಾಗಿ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

7. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವ ವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಮುಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುಲ್ಮಾನೆಗಳನ್ನ ಇವನು ಅಲಾಹಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟೀಸ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸು ಮಾಡಲ್ಪಡುವದು.

8. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

9. ಸರ್ಕಾರಿ ಉಪಯೋಗಕ್ಕೋಸ್ಕರವಾಗಿ ಈ ಸ್ಥಳ ಬೇಕಾದಲ್ಲಿ ಬೇರೆ ಸ್ಥಳ ನೇಮಿಸಲ್ಪಡುತ್ತೆಯಾಗಿ ಆಗ ಯಾವ ಕಾಂಪೆನ್ಸೇಷನ್ ಅಪೇಕ್ಷಿಸದೆ ಕಂಟ್ರಾಕ್ಟು ಷರತ್ತಿನಂತೆ ನಡದುಕೊಳ್ಳಬೇಕಾಗಿರುತ್ತೆ.

10. ಕಂಟ್ರಾಕ್ಟು ಹದ್ದಿನ ಸ್ಥಳಕ್ಕೆ ಭಂಡಿ ಬಾರದೇ ಇದ್ದಲ್ಲಿ ಇದಕ್ಕಾಗಿ ಯಾವ ಲುಕ್ಸಾನು ದೊರಿಯಲಾರದು.

11. ಪ್ರೆಸಿಡೆಂಟ್ ಸಾಹೇಬರವರ ಮಂಜೂರಿ ಇಲ್ಲದೆ ಬಾಬು ಇತರರಿಗೆ ಷಿಕಮಿ ಕಂಟ್ರಾಕ್ಟು ವಗೈರೆ ಕೊಡಕೂಡದು ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನ ಬಿನ್ ತಕರಾರು ತೆಗದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದು.

12. ಇವುಗಳ ಪೈಕಿ ಯಾವ ಷರತ್ತಿಗಾಗಲಿ ತಪ್ಪಿಸಿಕೊಂಡರೆ ತಕ್ಷಣ ಕಂಟ್ರಾಕ್ಟನ್ನ ಬೇರೆ ಜನರಿಗೆ ಕೊಟ್ಟು ಲುಕ್ಸಾನು ಮೊಬಲಗಿಗೆ ಕಂಟ್ರಾಕ್ಟುದಾರನನ್ನ ಗುರಿಮಾಡುವದಲ್ಲದೆ ಠೇವಣಿ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುತ್ತೆ.

ತಾರೀಖು 11ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಟೌನ್ ಮಜಕೂರಿನಲ್ಲಿರತಕ್ಕ ಅಂದರೆ, ಮಾಮೂಲ್ ಅನುಸರಿಸಿ ಮಾಫಿ ನಡಿಯತಕ್ಕ ತೆಂಗಿನ ಮರಗಳು ಶಿವಾಯಿ ಬೋರ್ಡಿಗೆ ಶೇರಿದ ತೆಂಗಿನ ಮರಗಳ ಫಸಲ್ ಪೈಕಿ ಆಯಾಯ ಮನೆ ಅಥವಾ ಅಂಗಡಿ ಮಾಲೀಕರಿಗೆ ಸಲ್ಲತಕ್ಕ ಅರ್ಧ ಹಿಸ್ಸೆ ಜಾತಾ ಉಳಿದ ಅರ್ಧ ಹಿಸ್ಸೆ ಫಸಲನ್ನು 1904ನೆ ಇಸವಿ ಜುಲೈ ಗುರ್ರೇ ಲಾಗಾಯತು 1905ನೆ ಇಸವಿ ಜೂನ್ ಆಖೈರುವರಿವಿಗೂ ಬಂದು ಸಾಲ್ ಪೂರ್ತಿ ರೂಢಿಸಿಕೊಳ್ಳುವದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1904ನೆ ಇಸವಿ ಜೂನ್ 14ನೆ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಷಹರ್ ಮಜಕೂರಿಗೆ ಶೇರಿದ ತೆಂಗಿನ ಫಸಲು ರೂಢಿಸಿಕೊಳ್ಳುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆಂಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲೀ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು ಮತ್ತು ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

5. ಮುಂಜೂರಾದ ದರಖಾಸ್ತುದಾರನು ಅತನ ದರಖಾಸ್ತು ಮುಂಜೂರಾದ ಸಂಗತಿಯನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಕಂಟ್ರಾಕ್ಟಿನ ವಿಶಿಷ್ಟ ಹಣವನ್ನು ಹಾಜರ್ಮಾಡಿ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತೇನೆಂಬುವದಕ್ಕೆ ಛಾಪಾ ಕಾಗದ್ದಲ್ಲಿ ಇಖಾರ ಮುಚ್ಚಳಿಕೆಯನ್ನ ಬರದುಕೊಡಬೇಕು. ಅದಕ್ಕೆ ತಪ್ಪಿದರೆ ಆ ಠೇವಣಿ ಹಣವು ಬೋರ್ಡಿಗೆ ಸೇರಿಸಿಕೊಳ್ಳಲ್ಪಡುವದು. ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡುವದರಲ್ಲಿ ಆಗುವ ಲುಕ್ಸಾನಿಗೆ ಅವನು ಗುರಿಯಾಗುತ್ತಾನೆ. ಈಗ ಇರತಕ್ಕ ಮರಗಳ ಪೈಕಿ ಪಬ್ಲಿಕ್ ಅನುಕೂಲತೆ ಬಗ್ಗೆ ಆಗಲಿ ಅಥವಾ ಇನ್ಯಾವ ಕಾರಣದಿಂದಾಗಲಿ ಮರಗಳನ್ನ ಕಡಿಸಿದಲ್ಲಿ ಆ ಬಗ್ಯೆ ಯಾವ ಲುಕ್ಸಾನು ಕೇಳತಕ್ಕದ್ದಲ್ಲ.

6. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿ ಇರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

7. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವವರಿವಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟು ಸಾಹೇಬರು ಇವನಿಗೆ ವಿಧಿಸುವ ಜುಲ್ಮಾನೆಗಳನ್ನ ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟಿಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣವು ವಾಪಸು ಮಾಡಲ್ಪಡುವದು.

8. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಶಿಕ್ಮಿ ಕಂಟ್ರಾಕ್ಟು ವಗ್ಯೆರೆ ಕೊಡಕೂಡದು ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗ್ಯೆರೆಗಳನ್ನ ಬಿಲ್ಕುಲ್ ತಕರಾರು ತೆಗದುಕೊಳ್ಳಲು ಸಲೀಸು ವಿರ್ಪಾಡು ಇಡತಕ್ಕದ್ದು.

ತಾರೀಖು 11ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಇದರಡಿ ನಮೂದಿಸಿ ಇರುವ ಹುಲ್ಲುಗಾವಲುಗಳನ್ನು 1904—05ನೆ ಸಾಲಿಗೆ ಅಂದರೆ 1904ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1905ನೆ ಇಸವಿ ಜೂನ್ ಆಖೈರ್ ಮಿನಹು ರೂಢಿಸಿಕೊಳ್ಳಲು ಮೊಹರ್ಮಾಡಿದ ದರಖಾಸ್ತುಗಳನ್ನು ಇಷ್ಟವುಳ್ಳವರು ಈ ಕೆಳಗೆ ಸೈನ್ ಮಾಡಿರುವವರಿಗೆ 1904ನೆ ಇಸವಿ ಜೂನ್ 14ನೆ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು.

2. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡುವ ಅಥವಾ ಕಾರಣವಿಲ್ಲದೆ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಈ ಕೆಳಗೆ ಸೈನ್ ಮಾಡಿರುವವರು ಉಳಿಸಿಕೊಂಡಿರುತ್ತಾರೆ. ಎಲ್ಲಾದಕ್ಕಿಂತ ಹೆಚ್ಚಾದ ದರಖಾಸ್ತನ್ನೇ ಅಂಗೀಕರಿಸಬೇಕೆಂಬುವದಕ್ಕೆ ಪ್ರೆಸಿಡೆಂಟರು ಬದ್ಧರಾಗಿರುವದಿಲ್ಲ.

3. ಆಯಾಯ ಹುಲ್ಲುಗಾವಲುಗಳಲ್ಲಿ ಇರುವ ಮರಗಳಿಗೆ ಅಪಾಯವಿಲ್ಲದಂತೆ ಜಾಗ್ರತೆಯಿಂದ ನೋಡಿಕೊಳ್ಳಬೇಕು.

4. ಕೋಟೆಯ ಹುಲ್ಲುಗಾವಲನ್ನು ಪಡದವರು, ಮ್ಯುನಿಸಿಪಾಲಿಟಿಯವರು ಅಲ್ಲಿರತಕ್ಕ ಜಮೀನ್ ಯಾರಿಗಾದರೂ ಮನೆ ಕಟ್ಟುವದಕ್ಕೆ ಕೊಟ್ಟಲ್ಲಿ ಹರಕತ್ ಮಾಡಕೂಡದು ಮತ್ತು ಯಾವ ಲುಕ್ಸಾನು ಕೇಳಕೂಡದು. ಕೋಟೆ ರ್ಯಾಂಪಾರ್ಟ್ ಕಂದಕದ ಸುತ್ತು ರಸ್ತೆ ವರಿಗಿನ ಹುಲ್ಲುಗಾವಲ್ ಶಿವಾಯಿ ಕೋಟೆಯೊಳಗೆ ಯಾವ ಪ್ರದೇಶದಲ್ಲೂ ದನಗಳನ್ನ ಮೇಯಿಸಕೂಡದು. ಮತ್ತು ಕತ್ತೆಗಳನ್ನು ಬಿಡಕೂಡದು.

5. ದನಗಳನ್ನು ಮೇಯಿಸುವದರಲ್ಲಿ ಸಾಲ್ ಮರಗಳನ್ನು ಮೇದದ್ದೇ ಆದರೆ ಅದಕ್ಕಾಗಿ ಮರ 1ಕ್ಕೆ 5—0—0 ರೂಪಾಯಿ ಮೇರಿಗೆ ಲುಕ್ಸಾನ್ ಕೊಡಬೇಕು. ಮತ್ತು ರಸ್ತೆಗಳ ಬಾಜೂದಲ್ಲಿಯೂ ಮೊಹರಿಗಳ ಬಾಜೂದಲ್ಲಿಯೂ ಸಹಾ ದನಗಳನ್ನು ಬಿಟ್ಟು ಮೇಯಿಸಕೂಡದು. ಹುಲ್ಲು ಕೊಯಿದುಕೊಳ್ಳಬೇಕೇ ವಿನಹಾ ಕೆತ್ತಕೂಡದು. ಹಾಗೆ ಕೆತ್ತಿದ್ದೇ ಆದರೆ 5 ರೂಪಾಯಿ ಜುರ್ಮಾನೆ ವಿಧಿಸಲಾದೀತು.

6. ಡಿಟೋ ಹುಲ್ಲುಗಾವಲ್‌ಗಳ ಪೈಕಿ ಯಾವಾಗಲಾದರೂ ಮ್ಯುನಿಸಿಪಾಲಿಟಿಯವರು ಬಿಟ್ಟುಕೊಡಬೇಕೆಂದು ವಾಯಿದೆ ಅಂದರ್‌ವಾರ್ ಹೇಳಿದ ಕೂಡ್ಲೆ ಬಿನ್ ತಕರಾರ್ ಬಿಟ್ಟುಕೊಡಬೇಕು. ಅದಕ್ಕಾಗಿ ದರಖಾಸ್ತು ಮೊಬಲಗಿನಲ್ಲಿ ನಿಂತ ದಿನಗಳಿಗೆ ದಾಮಾಷಾಯಿ ಮೇರಿಗೆ ವಾಪಸು ಕೊಡಲ್ಪಡುತ್ತೆ.

7. ದರಖಾಸ್ತುಗಳ ಮೇಲ್‌ಭಾಗದಲ್ಲಿ "ಹುಲ್ಲುಗಾವಲುಗಳನ್ನು ರೂಢಿಸಿಕೊಳ್ಳುವದಕ್ಕೆ" ಎಂಬದಾಗಿ ಬರಮ ಇರತಕ್ಕದ್ದು.

8. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆಂಸಿ ನೋಟುಗಳು ಆಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನು ತೆಗದುಕೊಳ್ಳುವದಿಲ್ಲ.

9. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಆವನದರಖಾಸ್ತನ್ನು ಅಂಗೀಕರಿಸಿದ್ದನ್ನು ತಾನು ತಿಳಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಅವನ ದರಖಾಸ್ತಿನ ಪೂರಾ ಮೊಬಲಗನ್ನು ಪಾವತಿ ಮಾಡಬೇಕು. ಹಾಗೆ ಮಾಡದೆ ತಪ್ಪಿದರೆ ಠೇವಣಿ ಮೊಬಲಗು ದಂಡವಾಗಿ ಮ್ಯುನಿಸಿಪಾಲಿಟಿಗೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡಲ್ಪಡುವದರಲ್ಲಿ ಉಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

10. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಮೊಬಲಗು ಕಂಟ್ರಾಕ್ಟು ಆಖೈರಾಗುವವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರಿಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುರ್ಮಾನೆಗಳನ್ನು ಇವನು ಅಲಾಯಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟಿಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

ತಪಶೀಲ್.

ನಂಬರು.	ಹುಲ್ಲುಗಾವಲುಗಳ ಹೆಸರು.	ತಪಶೀಲ್.
1	ಧರ್ಮಾಂಬುಧಿಕೆರೆ ಒಳಗೆರೆ ಮತ್ತು ಕೆರೆಕಟ್ಟೆ ಹುಲ್ಲು ...	ಹುಲ್ಲು ಕೊಯಿದುಕೊಳ್ಳುವ ಮಾತ್ರವೆ ದನಗಳನ್ನು ಬಿಟ್ಟು ಮೇಯಿಸಕೂಡದು.
2	ಧರ್ಮಾಂಬುಧಿ ಕಟ್ ಕಾಲ್ವೆ 2ಕ್ಕೆ ...	ಡಿಟೋ
3	ಮ್ಯುನಿಸಿಪಲ್ ತೋಟ	ಡಿಟೋ
4	ಜಕ್ಕರಾಯನ ಕೆರೆಕಟ್ಟೆ ಕೆಳಗೆ ...	ದನಗಳನ್ನು ಮೇಯಿಸಿಕೊಳ್ಳುವದಕ್ಕೆ.
5	ಈ ಪೈಕಿ ಸ್ಮಶಾನದ ಬೈಲ್ ಹುಲ್ಲು ...	ಡಿಟೋ
6	ಕೋಟೆ ರ್‍ಯಾಂಪಾರ್ಟಿನ ಹುಲ್ಲು ಕಂದಕದ ಸುತ್ತು ರಸ್ತೆವರಿಗೆ. ಈ ಸ್ಥಳಗಳಲ್ಲಿನ ಅವಿನ್ಯೂ ಗಿಡಗಳು ಇರತಕ್ಕ ಪ್ರದೇಶ ವಿನಹ (ಆಸ್ಪತ್ರೆ ಕಡೆಗೆ ಹೋಗಕೂಡದು.)	ಕೋಟೆಯೊಳಗೆ ದನಗಳನ್ನು ಬಿಟ್ಟು ಮೇಯಿಸಕೂಡದು. ಹುಲ್ಲು ಕೊಯಿದುಕೊಳ್ಳಬೇಕು. ಕಂದಕದ ಸುತ್ತು ಮೇಯಿಸಬಹುದು.
7	ಲಾಲ್‌ಬಾಗ ಮಾವಳ್ಳಿ ಕೆರೆ	ದನಗಳನ್ನು ಬಿಟ್ಟು ಮೇಯಿಸಿಕೊಳ್ಳಲು, ಕೆರೆಗೆ ಅಪಾಯವಿಲ್ಲದಂತೆ.
8	ದೊಡ್ಡ ಬೈಲ್‌ಖಾನೆ	ಡಿಟೋ
9	ಕುಂಬಾರಗುಂಡಿ ಹುಲ್ಲುಗಾವಲ್ (ಸ್ಲಾಟರ್ ಹೌಸಿಗೆ ತೆಗದುಕೊಂಡಿರುವ ಜಾಗ ವಿನಹ ಉಳಿದದ್ದು.)	ಡಿಟೋ
10	ಆರ್ಸಕುಂಟೆ ಪಕ್ಕದ ಮತ್ತು ಒಳಗಿನ ಹುಲ್ಲು ..	ಗಿಡಗಳಿಗೆ ಅಪಾಯವಿಲ್ಲದಂತ ದನಗಳನ್ನು ಬಿಟ್ಟು ಮೇಯಿಸಿಕೊಳ್ಳುವದಕ್ಕೆ, ಒಳಹುಲ್ಲು ಕೊಯಿದುಕೊಳ್ಳುವದಕ್ಕೆ ಸಹ.
11	ದಂಡಿಗೆ ಹೋಗುವ ಶಿಡ್ಲಿ ರೋಡ್ ರಸ್ತೆಗೆ ಪಶ್ಚಿಮ ಭಾಗ ಇರತಕ್ಕ ಹುಲ್ಲು.	ಡಿಟೋ
12	ಲಂಡನ್‌ಮಿಷನ್ ಸ್ಕೂಲ್ ಪಕ್ಕದ ಹುಲ್ಲುಗಾವಲ್	ಡಿಟೋ
13	ಎಲಹಂಕದಬಾಗಲಿನಿಂದ ಬಳೇ ಬಾಗಲಿಗೆ ಹೋಗುವ ಸ್ತೆ ಬಲ ಭಾಗದ ಕಾಲುವೆ ದಡದ ಹುಲ್ಲು.	ಡಿಟೋ
14	ಸಂಪಂಗಿಕೆರೆ ಒಳಗೆರೆ ಹುಲ್ಲುಗಾವಲ್, ಚರ್ಚ್ ಸಾಹೇಬರಿಗೆ ಸೇರಿದ್ದು ವಿನಹಾ, ಮ್ಯುನಿಸಿಪಾಲಿಟಿಗೆ ಸೇರಿದ್ದು.	ದನಗಳನ್ನು ಬಿಟ್ಟು ಮೇಯಿಸುವದಕ್ಕೆ.
15	ಕೆಂಗೇರಿಬಾಗಲ್ ಬಾರಕೋಸ್‌ಬಳಿ ಇರುವ ಕಾವಲ್ ಜಮೀನಿನಲ್ಲಿ, ನಾಟಾಗಳು ಹಾಕತಕ್ಕ ಬಗ್ಯೆ ಉಪಯೋಗಿಸಿಕೊಂಡಿರುವ ಜಮೀನು ಶಿವಾಯಿ, ಮಕಾನ್ ಹದ್ದುಬಸ್ತು ಮಾರ್ಕ ಮಾಡಿರುವ ಸ್ಥಳ ವಿನಹ, ನಿಂತ ಜಮೀನಿನಲ್ಲಿ ಬೀಳತಕ್ಕ ಹುಲ್ಲು.	ದನಗಳನ್ನು ಬಿಟ್ಟು ಮೇಯಿಸುವದಕ್ಕೆ.
16	ಮ್ಯುನಿಸಿಪಲ್ ಲಿಮಿಟ್‌ಗೆ ಸೇರಿದ ವೆಸ್ಟರ್ನ್ ಎಕ್ಸ್‌ಟೆನ್ಷನ್‌ನಲ್ಲಿ ಮನೆಗಳಿಗೆ ಕೊಟ್ಟು ಇರುವ ತಾಕುಗಳು ಜಾತಾ ಉಳಿದ ಬೋರ್ಡಿಗೆ ಸೇರಿದ ಜಮೀನಿನಲ್ಲಿಯೂ, ಭೋಗೇನಹಳ್ಳಿ ದಿನ್ನೇಬಳಿಯಲ್ಲಿಯೂ ಇರತಕ್ಕ ಜಮೀನಿನಲ್ಲಿಯೂ ಸಹಾ.	ಮನೆ ಸಾಗುವಳಿಗೆ ಮತ್ತು ಮೋಹರಿ ರೋಡ್ ವಗೈರೆ ತಯಾರ್ಮಾಡಿಸುವದಕ್ಕೆ ಉಪಯೋಗಿಸಿಕೊಳ್ಳುವಾಗ ಹರಕತ್ತಿಲ್ಲದಂತೆ ಕೊಯಿದುಕೊಳ್ಳುವದಕ್ಕೆ ಮತ್ತು ಇತರ ಕಡೆ ಮೇಯಿಸಿಕೊಳ್ಳುವದಕ್ಕೆ.
17	ಕೆಂಪಾಂಬುಧಿ ಕೆರೆಕಟ್ಟೆ ಹುಲ್ಲು	ಮೇಯಿಸಿಕೊಳ್ಳುವದಕ್ಕೆ.
18	ದಂಡು ಉಪ್ಪಾರಹಳ್ಳಿ ಊರುಮುಂದಿನ ಹುಲ್ಲುಗಾವಲು ..	ರೈಲ್ವೆ ಕಾಂಪಾಂಡಿನ ಬೇಲಿ ಮತ್ತು ಜಮೀನು ಶಿವಾಯಿ, ಮೇಯಿಸಿಕೊಳ್ಳುವದಕ್ಕೆ.
19	ಮಿಲ್ಲರ್ ಒಳಗೆರೆ ಹುಲ್ಲು	ಕೊಯಿದುಕೊಳ್ಳುವದಕ್ಕೆ.

ಎ. ಎಸ್. ನಾಗಾಕರ್,
ಪ್ರೆಸಿಡೆಂಟ್.

ನೋಟೀಸ್.

ತಾರೀಖು 20ನೇ ಮೇ 1904.

ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ವೈಸ್ ಪ್ರೆಸಿಡೆಂಟ್ ಸಾಹೇಬರವರ ಆಫೀಸಿನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸನ್ 1904ನೇ ಇಸವಿ ಜುಲೈ ಗುರ್ರು ಲಾಗಾಯತು 1905ನೇ ಇಸವಿ ಜೂನ್ ಆಖೈರು ವರಿಗೆ ಅಂದರೆ ಒಂದು ವರುಷಕ್ಕೆ ಮೈಸೂರು ಟೌನನ್ನಲ್ಲಿರತಕ್ಕ ಮ್ಯುನಿಸಿಪಲ್ ದೀಪಗಳಿಗೆ ಬೇಕಾಗುವ ಈ ಕೆಳಗೆ ನಮೂದು ಮಾಡುವ ಕೆರೋಸೀನ್ ಎಣ್ಣೆ ಟಿನ್‌ಗಳನ್ನು ಸರಬರಾಯಿ ಮಾಡಲು ಇಚ್ಛೆಯುಳ್ಳವರು ಡಿಟೋ ಎಣ್ಣೆ ಟಿನ್ 1ಕ್ಕೆ ಯಾವ ದರದ ಮೇರೆಗೆ ಖರೀದಿಗೆ ಕೊಡುವರೆಂಬುವದಕ್ಕೆ ದರಖಾಸ್ತು ಕೊಡಬಹುದು.

ದರಖಾಸ್ತುಗಳನ್ನ ಲಕ್ಕೋಟೆಗಳಲ್ಲಿ ಗರ್ಭೀಕರಿಸಿ ಮೊಹರು ಮಾಡಬೇಕು. ಡಿಪಾಜೆಟ್ಟಾಗಿ (50—0—0) ಐವತ್ತು ರೂಪಾಯಿಗಳನ್ನು ನಗದೇ ಆಗಲಿ ಅಥವಾ ಮದ್ರಾಸ್ ಕರೆನ್ಸಿ ನೋಟು ಮೂಲಕವೇ ಆಗಲಿ ವೈಸ್ ಪ್ರೆಸಿಡೆಂಟ್ ಸಾಹೇಬರವರ ಆಫೀಸಿಗೆ ಜೂನ್ ಮಾಹೆ 22ನೇ ತಾರೀಖಿನ ವೊಳಗಾಗಿ ಡಿಟೋ ದರಖಾಸ್ತುಗಳ ಕೂಡಾ ಕಳುಹಿಸಬೇಕು.

ಡಿಟೋ ಮಾಹೆ 22ನೇ ತಾರೀಖಿನ ವರಿಗೂ ಮೇಲ್ಕಂಡ ದರಖಾಸ್ತುಗಳನ್ನ ತೆಗದುಕೊಳ್ಳಲ್ಪಡುವದು.

ಸನ್ 1904ನೇ ಇಸವಿ ಜೂನ್ 22ನೇ ತಾರೀಖಿನ ಮಧ್ಯಾಹ್ನ 2 ಘಂಟೆಗೆ ಟೌನ್ ಹಾಲಿನಲ್ಲಿ ಪ್ರೆಸಿಡೆಂಟ್ ಸಾಹೇಬರವರಿಂದ ಅಥವಾ ವೈಸ್ ಪ್ರೆಸಿಡೆಂಟ್ ಸಾಹೇಬರವರಿಂದ ಹಾಜರು ಇರತಕ್ಕ ದರಖಾಸ್ತುದಾರುಗಳ ರೂಬರೂಬು ಸದರೀ ದರಖಾಸ್ತುಗಳನ್ನು ತೆರಿಯಲ್ಪಡುವದು.

ಪ್ರೆಸಿಡೆಂಟ್ ಸಾಹೇಬರವರು ಅಥವಾ ವೈಸ್ ಪ್ರೆಸಿಡೆಂಟ್ ಸಾಹೇಬರವರು ಯಾವದೊಂದು ಕಾರಣವನ್ನು ಹೇಳದೆ ಕಮ್ಮಿ ದರಕ್ಕೆ ಕೇಳುವ ದರಖಾಸ್ತುಗಳನ್ನೇ ಆಗಲಿ ಅಥವಾ ಇತರ ಯಾವ ದರಖಾಸ್ತುಗಳನ್ನೇ ಆಗಲಿ ವಜಾ ಮಾಡಲು ಅಧಿಕಾರವುಳ್ಳವರಾಗಿಧಾರೆ.

ಮಂಜೂರಾದ ದರಖಾಸ್ತುದಾರ್ರು ಡಿಟೋ ದರಖಾಸ್ತು ಮಂಜೂರಾದ ತಾರೀಖು ಲಾಗಾಯತು 5 ಐದು ದಿವಸಗಳ ವೊಳಗಾಗಿ ವೊದಲು ಹಾಜರ್ಮಾಡಿದ (50—0—0) ಐವತ್ತು ರೂಪಾಯಿಗಳು ಡಿಪಾಜೆಟ್ಟು ಅಲ್ಲದೆ ಜಾಸ್ತಿ (150—0—0) ಒಂದು ನೂರು ಐವತ್ತು ರೂಪಾಯಿಗಳು ಡಿಪಾಜೆಟ್ಟಾಗಿ ಪಾವತಿ ಮಾಡಿ ರೂಲ್ಸು ಪ್ರಕಾರ ಮುಚ್ಚಳಿಕೆಯನ್ನು ಬರದುಕೊಡಬೇಕು. ಹಾಗೆ ಮಾಡಲು ತಪ್ಪಿದರೆ ವೊದಲು ಹಾಜರ್ಮಾಡಿದ ಡಿಪಾಜೆಟ್ಟು ಮೊಬಲಗನ್ನು ಕಳದುಕೊಳ್ಳುವರು.

ಬರದುಕೊಡತಕ್ಕ ಮುಚ್ಚಳಿಕೆಯ ಕರಾರುಗಳು ಮತ್ತು ಇತರ ತಪಸೀಲುಗಳು ಸಹ ಮ್ಯುನಿಸಿಪಲ್ ಆಫೀಸ್ನಲ್ಲಿ ತಿಳಿದುಕೊಳ್ಳಬಹುದು:

(1) ಛಸ್ಟರ್ ಮಾರ್ಕು ಕೀಮೋಯಣ್ಣೆ ಟಿನ್‌ಗಳು.

(2) ರಷಿಯನ್ ಎಣ್ಣೆ ಟಿನ್ 125ನೇ ಡಿಗ್ರಿ ಬಾಬತ್ತು.

ತಿಂಗಳು 1ಕ್ಕೆ ಸಮಾರು 200 ಎರಡು ನೂರು ಟಿನ್‌ಗಳ ವರಿಗೆ ಛಸ್ಟರ್ ಮಾರ್ಕು ಕೀಮೋಯೆಣ್ಣೆ ಟಿನ್‌ಗಳು ಖರೀದಿಗೆ ತೆಗದುಕೊಳ್ಳಲ್ಪಡುತ್ತೆ.

ಕೆ. ಶ್ರೀನಿವಾಸರಾವ್,
ವೈಸ್ ಪ್ರೆಸಿಡೆಂಟ್.

ಬೆಂಗಳೂರು ಸೆಂಟ್ರಲ್ ಜೈಲ್.

ತಾರೀಖು 15ನೇ ಮೇ 1904.

ಇದರಿಂದ ತಿಳಿಯಪಡಿಸುವದೇನಂದರೆ :—ಸನ್ 1904ನೇ ಇಸವಿ ಜುಲೈ 1ರ ಲಾಗಾಯತು ಸನ್ 1905ನೇ ಇಸವಿ ಜೂನ್ 30ರ ವರಿವಿಗೆ ಆ ಎರಡು ದಿವಸಗಳು ಸೇರಿ, 12 ತಿಂಗಳತನಕ, ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿಗಳ ಉಪಯೋಗಕ್ಕಾಗಿ ಕುರಿಮಾಂಸ ಮತ್ತು ಸವದೆ ಸರಬ್ಬರಾಯಿ ಮಾಡಲು ಕಂಟ್ರಾಕ್ಟು ತೆಗದುಕೊಳ್ಳುವದಕ್ಕಾಗಿ, ಕವರಿನಲ್ಲಿ ಹಾಕಿ ಮೊಹರು ಮಾಡಿದ ದರಖಾಸ್ತುಗಳನ್ನು ಸನ್ 1904ನೇ ಇಸವಿ 15ನೇ ಜೂನ್ ಬುಧವಾರ ಹಗಲು 10 ಘಂಟೆಯ ವರಿಗೆ, ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರು ತೆಗದುಕೊಳ್ಳುವರೆಂದು ಇದರಿಂದ ಘಾಯಿಷ್ ಮಾಡಿಧೆ.

ಸರಬರಾಯಿ ಆಗಬೇಕಾದ ಪದಾರ್ಥಗಳ ತಪಶೀಲು ಮತ್ತು ದರಖಾಸ್ತುಗಳ ಸಂಬಂಧವಾದ ಕರಾರುಗಳು 1904ನೇ ಇಸವಿ ಮೇ 19ನೇ ತಾರೀಖಿನ ಮೈಸೂರು ಗೆಜೆಟ್ಟನಲ್ಲಿ ಪ್ರಕಟಮಾಡಿ ಇರುತ್ತದೆ.

ಜಿ. ಹ್ಯಾರೈಟ್,
ಸೂಪರಿಂಟೆಂಡೆಂಟ್, ಸೆಂಟ್ರಲ್ ಜೈಲ್.

ಮೈಸೂರ್ ಜೈಲ್.

ಪ್ರಕಟನೆ.

ತಾರೀಖು 13ನೇ ಮೇ 1904ನೇ ಇಸವಿ.

ಮೈಸೂರು ಜೈಲಿನಲ್ಲಿ ಇರತಕ್ಕ ಖೈದಿಗಳ ಆಹಾರ ಉಪಯುಕ್ತವಾದ ಜಿನಸಿಗಳನ್ನ 1904ನೇ ಇಸವಿ ಜುಲೈ 1ನೇ ತಾರೀಖು ಲಾಗಾಯಿತು 1905ನೇ ಇಸವಿ ಜೂನ್ 30ನೇ ತಾರೀಖಿನ ವರಿಗೆ 1 ವರುಷಕಾಲ ಗುತ್ತಿಗೆ ಮೂಲಕ ಸರಬರಾಯಿ ಮಾಡಲು ಬರುವ ಮೊಹರು ಮಾಡಿದ ದರಖಾಸ್ತುಗಳನ್ನ ಮೈಸೂರು ಜೈಲ್ ಸೂಪರಿಂಟೆಂಡೆಂಟರವರು ಇದೇ 1904ನೇ ಇಸವಿ ಜೂನ್ 11ನೇ ತಾರೀಖು ಶನಿವಾರ ಪ್ರಾತಃಕಾಲ 9 ಘಂಟೆ ವರಿಗೂ ಒರವಮಾಡಿಕೊಳ್ಳುತ್ತಾರೆಂದು ಇದರಿಂದ ಪ್ರಸಿದ್ಧಪಡಿಸಿರುತ್ತೆ.

ಈ ಬಾಬತು ತಪಶೀಲ್‌ವಾರು ಪ್ರಕಟನೆಯು 1904ನೇ ಇಸವಿ ಮೇ 19ನೇ ತಾರೀಖಿನ ಗೆಜೆಟ್ IIನೇ ಭಾಗದ 636ನೇ ಪುಟದಲ್ಲಿ ಘಾಯಿಷ್ ಮಾಡಲ್ಪಟ್ಟಿದೆ.

ಟಿ. ಎಸ್. ನಂಜಪ್ಪ,
ಪರಸನಲ್ ಅಸಿಸ್ಟೆಂಟ್ ಫಾರ್ ಆಫಿಷಿಯೇಟಿಂಗ್ ಇನ್ಸ್‌ಪೆಕ್ಟರ್ ಜನರಲ್ ಆಫ್ ಪ್ರಿಜನ್ಸ್.

ಮೈಸೂರ ಗೆಜೆಟ್ ಚಂದಾದಾರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟೀಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 0	1 12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಚಷ್ ಮಾಹೇ ಯಾ ಕ್ವಾರ್ಟರಿಗೆ		ದಾಮಾಷಾಯಿ ಪ್ರಕಾರ ದರಗಳು
		ರೂ. ಆ.
ಚಾಲತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.		0 8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮುರ್ಸಂ 155ನೇ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿದ್ದಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ಒಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೇ ಇಸವಿ ಜೂನ್ 21ನೇ ಮುರ್ಸಂ 24205—6—ಜಿ, 6200ನೇ ನಂಬರ್ ಗವರ್ನಮೆಂಟ್ ಆರಡರ್ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ್ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟಿಸಗಳು:—		ರೂ. ಆ.
ಮೊದಲನೇ ದಫಾ ಪ್ರಯಿಷ್ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ	..	2 8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ	..	1 4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಯೆ ನೋಟಿಸಗಳಿಗೆ:—		
ಮೊದಲನೇ ಸಲಕ್ಕೆ	..	5 0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ	..	2 0
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.		
ಡುಪ್ಲಿಕೇಟ್ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಯೆ ರೆವಿನ್ಯೂ ಆಫೀಸರಗಳು ಕೊಡುವ ನೋಟಿಸಗಳಿಗೆ:—		
ಮೊದಲನೇ ಸಲಕ್ಕೆ ಪುಟ 1ಕ್ಕೆ	..	10 0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ ,,	..	5 0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—		
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಙ್ತಿ 1ಕ್ಕೆ	..	0 8
ಎರಡನೇ ದಫಾ ಡಿಟೋ ಡಿಟೋ		0 6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ ..	..	0 4

ಷರಾ.—ಚಂದಾ ವಗೈರೆ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ್ ಆರಡರ್ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲುಪಲಿಲ್ಲವೆಂಬ ಫಿರ್ಯಾದಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟೀಸ ವ ಇಸ್ತಿಹಾರನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ವಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಇಲ್ಲ.

ಜಿ. ಹ್ಯೂಂ ರೈಟ್,
ಕಂಪೈಲರ್, ಮೈಸೂರ ಗೆಜೆಟ್.

ಮೈಸೂರ ಗೆಜೆಟ್.

ನಂ. 39]　　ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು.　　[ನಂ. 21.

ಬೆಂಗಳೂರು, ಗುರುವಾರ, ಮೇ ತಾ॥ 26, ಸನ್ 1904.

IIIನೆ ಭಾಗ.

ನಿಬಂಧನೆಗಳು ಮತ್ತು ಅವುಗಳಂತೆ ಆದ ನೇಮಗಳು.

ಲೆಜಿಸ್ಲೇಟಿವ್ ಇಲಾಖೆ.

1904ನೇ ವರುಷದ 1ನೇ ನಂಬರಿನ ರೆಗ್ಯುಲೇಷನು.

(1904ನೇ ವರುಷದ ಫೆಬ್ರುವರಿ 5ನೇ ತಾರೀಖಿನಲ್ಲಿ ನಿರ್ಣಯಿಸಲಾಯಿತು.)

ಮೈಸೂರಲ್ಲಿ ಜಾರಿಯಲ್ಲಿರುವ 1860ನೇ ವರುಷದ ಇಂಡಿಯನ್ ಪೀನಲ್ ಕೋಡನ್ನು ತಿದ್ದುಪಾಟು ಮಾಡುವ ಬಗ್ಗೆ ಆದ ಒಂದು ರೆಗ್ಯುಲೇಷನು.

1. (1) ಈ ರೆಗ್ಯುಲೇಷನಲ್ಲಿ, "ಮೈಸೂರಲ್ಲಿ ಜಾರಿಯಲ್ಲಿರುವ ಇಂಡಿಯನ್ ಪೀನಲ್ ಕೋಡ್" ಮತ್ತು "ಸದರೀ ಕೋಡು" ಎಂಬುವ ಪದಗಳಿಗೆ, 1870ನೇ ವರುಷದ XXVIIನೇ ನಂಬರಿನ, 1872ನೇ ವರುಷದ XIXನೇ ನಂಬರಿನ ಮತ್ತು 1873ನೇ ವರುಷದ Xನೇ ನಂಬರಿನ ಆಕ್ಟುಗಳಿಂದಲೂ, 1886ನೇ ವರುಷದ 1ನೇ ನಂಬರಿನ ರೆಗ್ಯುಲೇಷನು ಮತ್ತು 1892ನೇ ವರುಷದ 1ನೇ ನಂಬರಿನ 1894ನೇ ವರುಷದ IIನೇ ನಂಬರಿನ ಮತ್ತು 1894ನೇ ವರುಷದ IVನೇ ನಂಬರಿನ ರೆಗ್ಯುಲೇಷನುಗಳು ಇವುಗಳಿಂದ ಮೈಸೂರಲ್ಲಿ ಜಾರಿಗೆ ತರಲ್ಪಟ್ಟ ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡಿನಿಂದಲೂ, ತಿದ್ದುಪಾಟು ಮಾಡಲ್ಪಟ್ಟ ಇಂಡಿಯನ್ ಪೀನಲ್ ಕೋಡೆಂದು ಅರ್ಥ.

(2) 1899ನೇ ವರುಷದ ಜನರಲ್ ಕ್ಲಾಜಸ್ ರೆಗ್ಯುಲೇಷನ್ನಿನ 31ನೇ ಪ್ರಕರಣದಲ್ಲಿರುವ ಅನ್ವಯಸೂತ್ರವು, ಮೈಸೂರಲ್ಲಿ ಜಾರಿಯಲ್ಲಿರುವ ಇಂಡಿಯನ್ ಪೀನಲ್ ಕೋಡು ತಕ್ಕ ಬದಲಾವಣೆಗಳೊಂದಿಗೆ ಮೈಸೂರಿಗೆ ಪ್ರಯೋಗವಾಗಬೇಕೆಂದು ಸೂಚಿಸಲ್ಪಟ್ಟಂತೆ, ಸದರಿ ಕೋಡಿಗೆ, ಈ ರೆಗ್ಯುಲೇಷನ್ನಿನ ನಿಯಮಗಳಿಗೆ ಒಳಪಟ್ಟು ಪ್ರಯೋಗವಾಗತಕ್ಕದ್ದು.

2. (1) ಸದರಿ ಕೋಡಿನ 1ನೇ ಪ್ರಕರಣದಲ್ಲಿ "1861ನೇ ವರುಷದ ಮೇ ಮೊದಲನೇ ತಾರೀಖಿನಲ್ಲಿಯೂ ಮತ್ತು ತಾರೀಖಿನಿಂದಲೂ" ಎಂಬ ಪದಗಳು ಮತ್ತು ಸಂಖ್ಯೆಗಳು ರದ್ದು ಮಾಡಲ್ಪಟ್ಟಿರುತ್ತವೆ.

(2) ಸದರಿ ಕೋಡಿನ 2ನೇ ಪ್ರಕರಣದಲ್ಲಿ "1861ನೇ ವರುಷದ ಮೇ ಮೊದಲನೇ ತಾರೀಖಿನಲ್ಲಾಗಲೀ ಅಥವಾ ಮೊದಲನೇ ತಾರೀಖಿನ ಬಳಿಕವಾಗಲೀ" ಎಂಬ ಪದಗಳು ಮತ್ತು ಸಂಖ್ಯೆಗಳು ರದ್ದು ಮಾಡಲ್ಪಟ್ಟಿರುತ್ತವೆ.

3. ಸದರಿ ಕೋಡಿನ 4ನೆ ಪ್ರಕರಣವು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ; ಮತ್ತು ಅದಕ್ಕೆ ಬದಲಾಗಿ ಈ ಕೆಳಗೆ ಬರುವ ಪ್ರಕರಣವು ಇಡಲ್ಪಟ್ಟಿರುತ್ತೆ, ಅದೇನೆಂದರೆ:—

ದೇಶಾಂತರದಲ್ಲಿ ಮಾಡಲ್ಪಟ್ಟ ಅಪರಾಧಗಳಿಗೆ ಕೋಡಿನ ವ್ಯಾಪ್ತಿ.

"4. ಈ ಕೋಡಿನ ನಿಯಮಗಳು, ಮೈಸೂರು ಹೊರಗೆ ಯಾವ ಪ್ರದೇಶದಲ್ಲಿಯಾದರೂ ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರ ಯಾವ ಪ್ರಜೆಯಿಂದಲಾದರೂ ಮಾಡಲ್ಪಟ್ಟ ಯಾವ ಅಪರಾಧಕ್ಕಾದರೂ ಕೂಡ ಪ್ರಯೋಗವಾಗತಕ್ಕದ್ದು.

"ವಿವರ.—ಈ ಪ್ರಕರಣದಲ್ಲಿ, "ಅಪರಾಧ" ವೆಂಬುವದು, ಮೈಸೂರಲ್ಲಿ ಮಾಡಲ್ಪಟ್ಟಿದ್ದ ಪಕ್ಷಕ್ಕೆ ಈ ಕೋಡಿನ ಪ್ರಕಾರ ದಂಡಿಸಲ್ಪಡತಕ್ಕದಾದ ಮೈಸೂರು ಹೊರಗೆ ಮಾಡಲ್ಪಟ್ಟ ಪ್ರತಿ ಒಂದು ಕೃತ್ಯವನ್ನೂ ಅಡಗಿಸಿಕೊಳ್ಳುತ್ತೆ.

372

ಉದಾಹರಣೆಗಳು.

" (a) ಘನವನ್ನು ಹೊಂದಿದ ಮಹಾರಾಜರವರ ಪ್ರಜೆಯಾದ A, ಎಂಬ ಒಬ್ಬ ಕೂಲಿಯು ಉಗಾಂಡಾದಲ್ಲಿ ಒಂದು ಖೂನಿಯನ್ನು ಮಾಡುತ್ತಾನೆ. ಮೈಸೂರು ದೇಶದೊಳ್ಳಗೆ ಯಾವ ಸ್ಥಳದಲ್ಲಿ ಅವನು ಶಿಕ್ಕಿದರೂ ಅಲ್ಲಿ ಅವನು ವಿಚಾರಣೆ ಮಾಡಲ್ಪಟ್ಟು ಖೂನಿಗೆ ತಪ್ಪು ಸಾಬೀತು ಮಾಡಲ್ಪಡಬಹುದು.

" (b) ಘನವನ್ನು ಹೊಂದಿದ್ದ ಮಹಾರಾಜರವರ ಒಂದು ಪ್ರಜೆಯಾದ್ದ ಡಿ, ಎಂಬುವನು, ಇಡೋರಿನಲ್ಲಿ ವಾಸವಾಗಿದ್ದು ಮೈಸೂರಿನಲ್ಲಿ ಒಂದು ಖೂನಿಯನ್ನು ಮಾಡುವದಕ್ಕೋಸ್ಕರ E ಎಂಬುವನಿಗೆ ದುಬೋರ್ಧನೆ ಮಾಡುತ್ತಾನೆ. D ಎಂಬುವನು ಖೂನಿಗೆ ಸಹಕರಿಸುವ ಅಪರಾಧವನ್ನು ಮಾಡಿರುತ್ತಾನೆ."

4. ಸದರಿ ಕೋಡಿನ 28ನೇ ಪ್ರಕರಣದ ವಿವರಕ್ಕೆ ಬದಲಾಗಿ ಈ ಕೆಳಗೆ ಬರುವದನ್ನು ಇಡತಕ್ಕದ್ದು, ಅದೇನಂದರೆ;—

" ವಿವರ 1.—ಬನಾವಣೆ ಬಗ್ಗೆ ಅನುಕರಣವು ಸರಿಯಾಗಿರಬೇಕಾದ್ದು ಅವಶ್ಯವಾಗಿಲ್ಲ.

" ವಿವರ 2.—ಒಬ್ಬ ಮನುಷ್ಯನು ಒಂದು ಪದಾರ್ಥವನ್ನು ಮತ್ತೊಂದು ಪದಾರ್ಥದಂತೆ ಇರುವ ಹಾಗೆ ಮಾಡಿದಾಗಲೂ ಮತ್ತು ಆ ಹೋಲ್ಕೆಯಿಂದ ಒಬ್ಬ ಮನುಷ್ಯನು ಮೋಸಮಾಡಲ್ಪಡಬಹುದಾಗಿರುವಾಗಲೂ, ಸದರೀ ಒಂದು ಪದಾರ್ಥವನ್ನು ಸದರೀ ಮತ್ತೊಂದು ಪದಾರ್ಥದಂತೆ ಸದರೀ ಮನುಷ್ಯನು ಆ ಹೋಲ್ಕೆಯ ದೆಶೆಯಿಂದ ಮೋಸಮಾಡಲು ಉದ್ದೇಶಿಸಿದ್ದಾನೆಂತ, ಅಥವಾ ಆ ಹೋಲ್ಕೆಯ ದೆಶೆಯಿಂದ ಮೋಸಮಾಡೋಣವು ಆಗಬಹುದೆಂದ್ದು ತಿಳದಿದ್ದನೆಂತ, ಅದಕ್ಕೆ ವಿರೋಧವಾದ್ದು ರುಜುವಾತು ಆಗುವವರಿಗೂ, ಭಾವಿಸಲ್ಪಡತಕ್ಕದ್ದು."

5. ಸದರೀ ಕೋಡಿನ 40ನೇ ಪ್ರಕರಣದ ಎರಡನೆ ಕಲಮಿನಲ್ಲಿ, " 109 " ಸಂಖ್ಯೆಗಳ ಮುಂದೆ, " 64, 65, 66, 67, 71, " ಸಂಖ್ಯೆಗಳನ್ನು ಇಡತಕ್ಕದ್ದು.

6. ಸದರೀ ಕೋಡಿನ 64ನೇ ಪ್ರಕರಣವಲ್ಲಿ ಮೊದಲನೇ ಹನ್ನೆರಡು *ಪದಗಳ ಬದಲಾಗಿ ಈ ಕೆಳಗೆ ಬರುವದನ್ನು ಇಡತಕ್ಕದ್ದು. ಏನಂದರೆ :—

" ಜುರ್ಮಾನೆ ಮತ್ತು ಕೈದು ಇವೆರಡಕ್ಕೂ ಗುರಿಯಾದ ಯಾವ ಅಪರಾಧದ ವಿಷಯದಲ್ಲಿ ಅಪರಾಧಿಯು ಕೈದಿನ ಸಜಾನಿಕೀ ಅಥವಾ ಇಲ್ಲದೆ ಒಂದು ಜುರ್ಮಾನೆ ಸಜಾ ವಿಧಿಸಲ್ಪಡುತ್ತಾನೊ ಅಂಥಾ ಪ್ರತಿ ಸಂಗತಿಯಲ್ಲಿ,

" ಮತ್ತು ಕೈದಿನ ಮೂಲಕವಾಗಿಯಾಗಲೀ ಜುಲ್ಮಾನೆ ಮೂಲಕವಾಗಿಯಾಗಲೀ ಅಥವಾ ಜುಲ್ಮಾನೆ ಮಾತ್ರ ವಿಧಿಸಲ್ಪಟ್ಟು, ಶಿಕ್ಷಿಸಲ್ಪಡತಕ್ಕ ಯಾವ ಅಪರಾಧದ ವಿಷಯದಲ್ಲಿ ಅಪರಾಧಿಯು ಒಂದು ಜುಲ್ಮಾನೆ ಸಜಾ ವಿಧಿಸಲ್ಪಡುತ್ತಾನೋ, ಅಂಥಾ ಪ್ರತಿ ಸಂಗತಿಯಲ್ಲಿ."

7. ಸದರೀ ಕೋಡಿನ 67ನೇ ಪ್ರಕರಣದಲ್ಲಿ, " ಜುಲ್ಮಾನೆ ಮಾತ್ರ " ಎಂಬ ಪದಗಳ ತರುವಾಯ " ಜುಲ್ಮಾನೆಯು ಪಾವತಿಯಾಗದಿದ್ದರೆ ಕೋರ್ಟಿನವರು ಅದಕ್ಕಾಗಿ ವಿಧಿಸುವ ಕೈದು ಬರೀ ಕೈದಾಗಿರತಕ್ಕದ್ದು ಮತ್ತು " ಎಂಬ ಪದಗಳನ್ನು ಇಡತಕ್ಕದ್ದು.

8. ಸದರಿ ಕೋಡಿನ 71ನೇ ಪ್ರಕರಣಕ್ಕೆ ಈ ಕೆಳಗೆ ಬರುವ ಕಲಮನ್ನು ಸೇರಿಸತಕ್ಕದ್ದು, ಅದೇನಂದರೆ :—

" ಆಯಾ ಕಾಲದಲ್ಲಿ ಜಾರಿಯಲ್ಲಿರುವ ಯಾವ ನಿಬಂಧನೆಯಿಂದ ಅಪರಾಧಗಳು ವಿಧಿಸಲ್ಪಡುತ್ತವೆಯೋ ಅಥವಾ ಶಿಕ್ಷಿಸಲ್ಪಡುತ್ತವೆಯೋ ಅಂಥಾ ನಿಬಂಧನೆಯ ಎರಡು ಅಥವಾ ಹೆಚ್ಚು ಬೇರೆಬೇರೆ ವಿವರಣೆಗಳಿಗೊಳಗಾಗಿ ಯಾವದಾಗಲೀ ಒಂದು ಅಪರಾಧವಾದರೆ, ಅಥವಾ

" ಅನೇಕ ಕೃತ್ಯಗಳು ನಡದು, ಅವುಗಳ ಪೈಕಿ ಒಂದು ಅದರಷ್ಟಕ್ಕೆ, ಅಥವಾ ಅವುಗಳ ಪೈಕಿ ಒಂದಕ್ಕಿಂತ ಹೆಚ್ಚು ತಮ್ಮಷ್ಟಕ್ಕೆ, ಒಂದು ಅಪರಾಧವಾಗಿ, ಎಲ್ಲಾ ಕೂಡಿದಾಗ ಬೇರೆ ಒಂದು ಅಪರಾಧವಾದರೆ,

" ಅಪರಾಧಿಯನ್ನು ದರ್ಯಾಪ್ತು ಮಾಡುವ ಕೋರ್ಟಿನವರು ಅಂಥಾ ಅಪರಾಧಗಳೊಳಗೆ ಯಾವದೊಂದಕ್ಕಾಗಲೀ ವಿಧಿಸಬಹುದಾದಂಥಾ ಸಜಾಗಿಂತ ಹೆಚ್ಚು ಕಠಿಣವಾದ ಸಜಾವನ್ನು ಸದರೀ ಅಪರಾಧಿಗೆ ಕೊಡಕೂಡದು."

9. ಸದರೀ ಕೋಡಿನ 73ನೇ ಪ್ರಕರಣದಲ್ಲಿ " ಕಮ್ಮಿಯಾಗಿರಬೇಕು " ಎಂಬುವ ಪದಗಳಿಗೆ ಬದಲಾಗಿ " ಒಂದಕ್ಕೆ ಮೀರಕೂಡದು " ಎಂಬ ಪದಗಳನ್ನು ಇಡತಕ್ಕದ್ದು.

10. ಸದರೀ ಕೋಡಿನ 75ನೇ ಪ್ರಕರಣವಲ್ಲಿ " ಅಥವಾ ದಂಡನೆಯ ಪರಿಮಾಣಕ್ಕೆ ಎರಡಷ್ಟು " ಎಂಬುವಲ್ಲಿಂದ ಹಿಡಿದು ಪ್ರಕರಣದ ಕೊನೆಯವರೇಗಿನ ಪದಗಳಿಗೆ ಬದಲಾಗಿ, ಈ ಕೆಳಗೆ ಬರುವದನ್ನು ಇಡತಕ್ಕದ್ದು, ಅದೇನಂದರೆ :—

" ಅಥವಾ ಹತ್ತು ಸಂವತ್ಸರಕ್ಕೆ ಮೀರದ ಒಂದು ಮಾಯಿದೆ ಪರ್ಯಂತ ಯಾವದಾದರೂ ಒಂದು ತರಹ ಕೈದಿಗಾಗಲಿ ಗುರಿಯಾಗತಕ್ಕದ್ದು."

11. ಸದರೀ ಕೋಡಿನ 108ನೇ ಪ್ರಕರಣಕ್ಕೆ ಈ ಕೆಳಗೆ ಬರುವ ಪ್ರಕರಣವನ್ನು ಸೇರಿಸತಕ್ಕದ್ದು, ಏನಂದರೆ: —

ಮೈಸೂರು ಹೊರಗೆ ನಡಿಯುವ ಅಪರಾಧಗಳಿಗೆ ಮೈಸೂರಲ್ಲಿ ಸಹಕರಿಸುವುದು.

" 108 A. ಯಾವ ಕೃತ್ಯವು ಮೈಸೂರೊಳಗೆ ಮಾಡಲ್ಪಟ್ಟಿದ್ದರೆ ಒಂದು ಅಪರಾಧವಾಗುತ್ತಿತ್ತೊ ಅಂಥಾ ಕೃತ್ಯವು ಮೈಸೂರು ಹೊರಗೆ ನಡಿಯಲಿಕ್ಕೆ ಯಾವ ಮನುಷ್ಯನು ಸಹಕರಿಸುತ್ತಾನೊ ಅಂಥಾ ಮನುಷ್ಯನು ಈ ಕೋಡಿನ ಅರ್ಥಕ್ಕೆ ಅನುಗುಣವಾಗಿ ಒಂದು ಅಪರಾಧಕ್ಕೆ ಸಹಕರಿಸುತ್ತಾನೆ.

---

* ಷರಾ:—ಮೊದಲನೇ ಹನ್ನೆರಡು ಪದಗಳೆಂದರೆ [English Code ಮೂಲಗ್ರಂಥದ 64ನೆ ಪ್ರಕರಣದಲ್ಲಿರುವಂತೆ ಎಂದು ತಿಳಿಯತಕ್ಕದ್ದು. ಭಾಷಾಂತರದಲ್ಲಿ ಕೂಡಾ ಸದರೀ ಪದಗಳ ಅರ್ಥವು ಪ್ರಕರಣದ ಆದಿಯಲ್ಲಾಗಲಿ ಹನ್ನೆರಡೇ ಪದಗಳಾಗಿ ಆಗಲಿ, ಇದ್ದೀತೆಂದು ಭಾವಿಸಕೂಡದು.

ಉದಾಹರಣೆ.

"ಮೈಸೂರೊಳಗೆ A ಎಂಬುವವನು ಗೋವಾದಲ್ಲಿರುವ ಅನ್ಯದೇಶಿಯಾದ B ಎಂಬುವನಿಗೆ ಗೋವಾದಲ್ಲಿ ಒಂದು ಖೂನಿಯನ್ನು ಮಾಡುವಂತೆ ದುರ್ಬೋಧನೆ ಮಾಡುತ್ತಾನೆ. A ಎಂಬುವನನು ಖೂನಿಗೆ ಸಹಕರಿಸುವ ಅಪರಾಧವನ್ನು ಮಾಡಿರುತ್ತಾನೆ."

12. ಸದರೀ ಕೋಡಿನ 124 A ಪ್ರಕರಣವು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ ಮತ್ತು ಅದಕ್ಕೆ ಬದಲಾಗಿ ಈ ಕೆಳಗೆ ಬರುವ ಪ್ರಕರಣವು ಇಡಲ್ಪಟ್ಟಿರುತ್ತೆ, ಅದೇನಂದರೆ :—

ರಾಜದ್ರೋಹ.

"124 A ಯಾವನು ವಾಚ್ಯವಾದ ಅಥವಾ ಬರಹ ಮೂಲಕವಾದ ಮಾತಿನಿಂದಾಗಲಿ, ಗುರ್ತಿನಿಂದಾಗಲಿ, ಕಣ್ಣಿಗೆ ತಿಳಿಯುವ ಚಿತ್ರದಿಂದಾಗಲಿ, ಇನ್ಯಾವ ವಿಧದಿಂದಾಗಲಿ, ಇಂಡಿಯಾದೇಶದ ಚಕ್ರವರ್ತಿಯವರಾದ, ಮಹಿಮೆಯನ್ನು ಹೊಂದಿದ ಶ್ರೀಮಾನ್ ಮಹಾರಾಜರವರ, ಅಥವಾ ಘನವನ್ನು ಹೊಂದಿದ ಶ್ರೀಮಾನ್ ಮಹಾರಾಜರವರ, ಅಥವಾ ಬ್ರಿಟಿಷ್ ಇಂಡಿಯದಲ್ಲಿಯು ಮತ್ತು ಘನವನ್ನು ಹೊಂದಿದ ಶ್ರೀಮಾನ್ ಮಹಾರಾಜರವರ ದೇಶದಲ್ಲಿಯು ನಿಬಂಧನೆ ಮೇರೆಗೆ ಸ್ಥಾಪಿಸಲ್ಪಟ್ಟ ಗವರನ್ಮೆಂಟಿನವರುಗಳ ವಿಷಯದಲ್ಲಿ ದ್ವೇಷವನ್ನು ಅಥವಾ ತಿರಸ್ಕಾರವನ್ನು ಉಂಟುಮಾಡುತ್ತಾನೊ ಅಥವಾ ಉಂಟುಮಾಡಲು ಯತ್ನಿಸುತ್ತಾನೊ ಅಥವಾ ಅವರುಗಳ ವಿಷಯದಲ್ಲಿ ಅಪ್ರೀತಿಯುಂಟಾಗುವಂತೆ ಪ್ರೇರೇಪಿಸುತ್ತಾನೊ ಅಥವಾ ಪ್ರೇರೇಪಿಸಲು ಯತ್ನಿಸುತ್ತಾನೊ ಅಂಥಾ ಪ್ರತಿ ಮನುಷ್ಯನು ಯಾವಜ್ಜೀವವೂ ಅಥವಾ ಕಡಿಮೆ ವಾಯಿದೆವರೆಗೆ ಅದಕ್ಕೆ ಜುಲುಮಾನೆ ಸೇರಿಸಬಹುದಾಗಿದ್ದು, ನೀರಿನಮೇಲೆ ಕಳುಹಿಸಲ್ಪಡುವದರ ಮೂಲಕವಾಗಿಯಾಗಲಿ, ಅಥವಾ ಜುಲುಮಾನೆ ಸೇರಿಸಬಹುದಾಗಿದ್ದು ಮೂರು ವರುಷಗಳ ಪರ್ಯಂತ ವ್ಯಾಪಿಸಬಹುದಾದ ಕೈದಿನ ಮೂಲಕವಾಗಿಯಾಗಲಿ, ಅಥವಾ ಜುಲುಮಾನೆ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಡತಕ್ಕದ್ದು.

"ವಿವರ 1.—"ಅಪ್ರೀತಿ" ಎಂಬ ಪದದಲ್ಲಿ ರಾಜಭಕ್ತಿ ಶೂನ್ಯತೆ ಮತ್ತು ಸಮಸ್ತ ದ್ವೇಷಭಾವನೆಗಳು ಅಡಗಿರುತ್ತವೆ.

"ವಿವರ 2.—ಇಂಡಿಯ ಗವರನ್ಮೆಂಟಿನವರ ಅಥವಾ ಮೈಸೂರು ಗವರನ್ಮೆಂಟಿನವರ ಕಾರ್ಯಗಳನ್ನು ನ್ಯಾಯ ಸಮ್ಮತವಾದ ಉಪಾಯಗಳಿಂದ ಬದಲು ಮಾಡಿಸುವ ಉದ್ದೇಶ್ಯ ದ್ವೇಷ, ತಿರಸ್ಕಾರ ಅಥವಾ ಅಪ್ರೀತಿ ಉಂಟಾಗುವಂತೆ ಪ್ರೇರೇಪಿಸದೆ ಅಥವಾ ಪ್ರೇರೇಪಿಸಲಿಕ್ಕೆ ಯತ್ನಿಸದೆ, ಸದರೀ ಕಾರ್ಯಗಳ ವಿಷಯವಾಗಿ ಅಸಮ್ಮತಿಯನ್ನು ವ್ಯಕ್ತಪಡಿಸುವ ವ್ಯಾಖ್ಯಾನಗಳು ಈ ಪ್ರಕರಣಕ್ಕೊಳಪಡುವ ಒಂದು ಅಪರಾಧವಾಗುವದಿಲ್ಲ.

"ವಿವರ 3.—ದ್ವೇಷ, ತಿರಸ್ಕಾರ, ಅಥವಾ ಅಪ್ರೀತಿ ಉಂಟಾಗುವಂತೆ ಪ್ರೇರೇಪಿಸದೆ ಅಥವಾ ಪ್ರೇರೇಪಿಸಲಿಕ್ಕೆ ಯತ್ನಿಸದೆ, ಇಂಡಿಯ ಗವರನ್ಮೆಂಟಿನವರ ಅಥವಾ ಮೈಸೂರು ಗವರನ್ಮೆಂಟಿನವರ ರಾಜ್ಯಾಧಿಕಾರಿಕ ಅಥವಾ ಇತರ ಚರ್ಯೆಯ ವಿಷಯವಾಗಿ ಅಸಮ್ಮತಿಯನ್ನು ವ್ಯಕ್ತಪಡಿಸುವ ವ್ಯಾಖ್ಯಾನಗಳು ಈ ಪ್ರಕರಣಕ್ಕೊಳಪಡುವ ಒಂದು ಅಪರಾಧವಾಗುವದಿಲ್ಲ."

13. ಸದರೀ ಕೋಡಿನ 153ನೇ ಪ್ರಕರಣದ ತರುವಾಯ ಈ ಕೆಳಗೆ ಬರುವ ಪ್ರಕರಣವನ್ನು ಇಡತಕ್ಕದ್ದು, ಯಾವದಂದರೆ :—

ಬೇರೆಬೇರೆ ವರ್ಗಗಳೊಳಗೆ ದ್ವೇಷವನ್ನು ಅಭಿವೃದ್ಧಿಪಡಿಸೋಣ.

"153 A ಯಾವನು ವಾಚ್ಯವಾದ ಅಥವಾ ಬರಹ ಮೂಲಕವಾದ ಮಾತಿನಿಂದಾಗಲಿ, ಗುರ್ತಿನಿಂದಾಗಲಿ, ಕಣ್ಣಿಗೆ ತಿಳಿಯುವ ಚಿತ್ರದಿಂದಾಗಲಿ ಇನ್ಯಾವ ವಿಧದಿಂದಾಗಲಿ, ಮಹಿಮೆಯನ್ನು ಹೊಂದಿದ ಶ್ರೀಮಾನ್ ಮಹಾರಾಜ-ಚಕ್ರವರ್ತಿಯವರ ಅಥವಾ ಘನವನ್ನು ಹೊಂದಿದ ಶ್ರೀಮಾನ್ ಮಹಾರಾಜರವರ ಪ್ರಜೆಗಳ ಬೇರೆಬೇರೆ ವರ್ಗಗಳೊಳಗೆ ದ್ವೇಷಭಾವನೆಗಳನ್ನು ಅಥವಾ ವೈರಭಾವನೆಗಳನ್ನು ಹೆಚ್ಚಿಸುತ್ತಾನೊ ಅಥವಾ ಹೆಚ್ಚಿಸಲಿಕ್ಕೆ ಯತ್ನಿಸುತ್ತಾನೊ ಅಂಥಾ ಪ್ರತಿ ಮನುಷ್ಯನು ಎರಡು ವರುಷಗಳ ಪರ್ಯಂತ ವ್ಯಾಪಿಸಬಹುದಾದ ಕೈದಿನ ಮೂಲಕವಾಗಿಯಾಗಲಿ, ಜುಲುಮಾನೆ ಮೂಲಕವಾಗಿಯಾಗಲಿ, ಇವೆರಡರ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಡತಕ್ಕದ್ದು."

"ವಿವರ.—ಮಹಿಮೆಯನ್ನು ಹೊಂದಿದ ಶ್ರೀಮಾನ್ ಮಹಾರಾಜ ಚಕ್ರವರ್ತಿಯವರ ಅಥವಾ ಘನವನ್ನು ಹೊಂದಿದ ಶ್ರೀಮಾನ್ ಮಹಾರಾಜರವರ ಪ್ರಜೆಗಳ ಬೇರೆಬೇರೆ ವರ್ಗಗಳೊಳಗೆ ದ್ವೇಷ ಅಥವಾ ವೈರಭಾವನೆಗಳನ್ನು ಹುಟ್ಟಿಸುವಂಥಾ ಅಥವಾ ಹುಟ್ಟಿಸುವ ಸ್ವಭಾವವುಳ್ಳಂಥಾ ವಿಷಯಗಳನ್ನು ನಿವೃತ್ತಿ ಪಡಿಸುವ ಬಗ್ಗೆ, ದುರಭಿಪ್ರಾಯವಿಲ್ಲದೆ ಮತ್ತು ಅಂಥಾ ವಿಷಯಗಳು ಪರಿಹಾರವಾಗಬೇಕೆಂಬ ನಿಸ್ಪೃಹವಾದ ಉದ್ದೇಶದಿಂದ ಅವುಗಳನ್ನು ತೋರಿಸಿ ಕೊಡುವದು, ಈ ಪ್ರಕರಣದ ಅರ್ಥಕ್ಕೊಳಪಡುವ ಒಂದು ಅಪರಾಧವಾಗುವದಿಲ್ಲ."

14. ಸದರೀ ಕೋಡಿನ 177ನೇ ಪ್ರಕರಣಕ್ಕೆ ಈ ಕೆಳಗೆ ಬರುವದನ್ನು ಸೇರಿಸತಕ್ಕದ್ದು, ಏನಂದರೆ :—

"ವಿವರ.—176ನೆ ಪ್ರಕರಣದಲ್ಲಿ ಮತ್ತು ಈ ಪ್ರಕರಣದಲ್ಲಿ "ಅಪರಾಧ" ಎಂಬ ಪದವು, ಮೈಸೂರಿನ ಹೊರಗೆ ಯಾವದೊಂದು ಸ್ಥಳದಲ್ಲಿ ನಡಿಸಲ್ಪಟ್ಟು, ಮೈಸೂರಿನೊಳಗೆ ನಡಿಸಲ್ಪಟ್ಟಿದ್ದರೆ 302, 304, 382, 392, 393, 394, 395, 396, 397, 398, 399, 402, 435, 436, 449, 450, 457, 458, 459, ಮತ್ತು 460ನೇ ಪ್ರಕರಣಗಳ ಪೈಕಿ ಯಾವದಾದರೂ ಒಂದರಮೇರೆಗೆ ಶಿಕ್ಷಿಸಲ್ಪಡಬಹುದಾದ ಯಾವದೊಂದು ಕೃತ್ಯವನ್ನು ಅಡಗಿಸಿಕೊಳ್ಳುತ್ತದೆ; ಮತ್ತು "ಅಪರಾಧಿ" ಎಂಬುವ ಪದವು ಅಂಥಾ ಯಾವದೊಂದು ಕೃತ್ಯನಡಿಸಿದ ತಪ್ಪು ಸಾಬೀತು ಪಟ್ಟದ್ದಾಗಿ ಕಂಡು ಬಂದ ಯಾವನೊಬ್ಬ ಮನುಷ್ಯನನ್ನು ಅಡಗಿಸಿಕೊಳ್ಳುತ್ತದೆ.

15. ಸದರೀ ಕೋಡಿನ 182ನೇ ಪ್ರಕರಣಕ್ಕೆ ಬದಲಾಗಿ ಈ ಕೆಳಗೆ ಬರುವದನ್ನು ಇಡತಕ್ಕದ್ದು ಏನಂದರೆ :—

ಇನ್ನೊಬ್ಬ ಮನುಷ್ಯನಿಗೆ ಹಾನಿಕರವಾಗಿ ಸರಕಾರದ ಉದ್ಯೋಗಸ್ಥನು ತನ್ನ ನ್ಯಾಯವಾದ ಅಧಿಕಾರವನ್ನು ನಡಿಸುವಂತೆ ಮಾಡಬೇಕೆಂಬ ಅಭಿಪ್ರಾಯದಿಂದ ಸುಳ್ಳು ವರ್ತಮಾನವನ್ನು ಕೊಡೋಣ.

"182. ಯಾವನು ಸುಳ್ಳೆಂತ ತನಿಗೆ ತಿಳಿದಿರುವ ಅಥವಾ ಸುಳ್ಳೆಂತ ತಾನು ನಂಬಿ ಇರುವ ವರ್ತಮಾನವನ್ನು ಕೊಡುವದರ ಮೂಲಕವಾಗಿ ಯಾವನೊಬ್ಬ ಸರಕಾರಿ ಉದ್ಯೋಗಸ್ಥನ ಕೈಯಲ್ಲಿ—

(a) ಆತನಿಗೆ ಯಾವದರ ಕುರಿತು ಅಂಥಾ ವರ್ತಮಾನ ಕೊಡೋಣಾಗಿದೆಯೋ ಆ ವಿದ್ಯಮಾನದ ನಿಜಸ್ಥಿತಿ ಅವನಿಗೆ ತಿಳಿದಿದ್ದರೆ ಅವನು ಯಾವದನ್ನು ಮಾಡಕೂಡದೊ ಅದನ್ನು ಮಾಡಿಸಬೇಕೆಂಬ ಅಥವಾ ಯಾವದನ್ನು ಮಾಡದೆ ಬಿಡಕೂಡದೊ ಅದನ್ನು ಮಾಡಬೇಕೆಂಬ ; ಅಥವಾ

(b) ಯಾವನೊಬ್ಬ ಮನುಷ್ಯನಿಗೆ ಹಾನಿಕರ ಅಥವಾ ರೋಷಸ್ಪೃಕರವಾಗುವ ಹಾಗೆ ಅಂಥಾ ಸರಕಾರಿ ಉದ್ಯೋಗಸ್ಥನ ನ್ಯಾಯವಾದ ಅಧಿಕಾರವನ್ನು ನಡಿಸುವಹಾಗೆ ಮಾಡಿಸಬೇಕೆಂಬ,

ಅಭಿಪ್ರಾಯದಿಂದ ಅಥವಾ ಅಂಥಾದ್ದನ್ನು ನಡಿಸುವ ಸಂಭವ ಉಂಟೆಂದು ತಿಳಿದು ಹಾಗೆ ಸುಳ್ಳು ವರ್ತಮಾನ ಕೊಡುತ್ತಾನೊ ಅಂಥಾ ಪ್ರತಿ ಮನುಷ್ಯನು ಆರು ತಿಂಗಳ ವರೆಗಿನ ಯಾವದಾದರೂ ಒಂದುವಿಧವಾದ ಕೈದಿನ ಮೂಲಕವಾಗಲಿ, ಸಾವಿರ ರೂಪಾಯಿ ವರೆಗಿನ ಜುಲುಮಾನೆ ಮೂಲಕವಾಗಲಿ, ಇವೆರಡರ ಮೂಲಕವಾಗಲಿ ಶಿಕ್ಷಿಸಲ್ಪಡತಕ್ಕದ್ದು.

" ಉದಾಹರಣೆಗಳು.

" (a) A ಎಂಬುವನು ತಾನು ಸುಳ್ಳು ವರ್ತಮಾನ ಕೊಡುವದರಿಂದ ಒಬ್ಬ ಮೇಜಿಸ್ಟ್ರೇಟು ತನ್ನ ತಾಬೇದಾರಿ ಪೋಲೀಸ್ ಆಫೀಸರಾದ Z ಎಂಬುವನನ್ನು ತಗ್ಗೈರು ಮಾಡುವ ಸಂಭವ ಉಂಟೆಂತ ತಿಳಿದವನಾಗಿ Z ಎಂಬುವನು ತನ್ನ ಉದ್ಯೋಗದ ಕೆಲಸದಲ್ಲಿ ಅಸಡ್ಡೆ ಅಥವಾ ದುರ್ನಡತೆ ಮಾಡಿದ್ದಾನೆಂತ ಸದರೀ ಮೇಜಿಸ್ಟ್ರೇಟಗೆ ಸುಳ್ಳು ವರ್ತಮಾನ ತಿಳಿಸುತ್ತಾನೆ. ಇದರಿಂದ A ಎಂಬುವನು ಈ ಪ್ರಕರಣದಲ್ಲಿ ನಮೂದಿರುವ ಅಪರಾಧವನ್ನು ಮಾಡಿದವನಾಗುತ್ತಾನೆ.

(b) Z ಎಂಬುವನು ಛವಾನು ಉಪ್ಪನ್ನು ಒಂದು ಗುಪ್ತಸ್ಥಳದಲ್ಲಿಟ್ಟುಕೊಂಡಿದ್ದಾನೆಂತ A ಎಂಬುವನು ಒಬ್ಬ ಸರಕಾರ ಉದ್ಯೋಗಸ್ಥನಿಗೆ ಸುಳ್ಳು ಸುದ್ದಿ ತಿಳಿಸುತ್ತಾನೆ. ಹಾಗೆ ತಿಳಿಸುವ ಕಾಲದಲ್ಲಿ ಆ ವರ್ತಮಾನವು ಸುಳ್ಳೆಂತ A ಎಂಬುವನಿಗೆ ತಿಳಿದಿತ್ತು ಮತ್ತು ಆ ವರ್ತಮಾನ ಕೊಟ್ಟ ದೆಶೆಯಿಂದ Z ಎಂಬುವನ ಮನೆಯು ಅವನಿಗೆ ರೋಷಸ್ಪೃಕರವಾಗುವಹಾಗೆ ಝಡ್ತಿ ಮಾಡಲ್ಪಡುವ ಸಂಭವವುಂಟೆಂತ ಸಹಾ ತಿಳಿದಿತ್ತು. A ಎಂಬುವನು ಈ ಪ್ರಕರಣದಲ್ಲಿ ವಿವರಿಸಲ್ಪಟ್ಟ ಅಪರಾಧ ಮಾಡಿದವನಾಗುತ್ತಾನೆ.

(c) A ಎಂಬುವನು ಫಲಾನೆ ಗ್ರಾಮದ ಬಳಿಯಲ್ಲಿ ತನ್ನಮೇಲೆ ಜುಲುಂ ನಡಿಸಿದ್ದಾರೆಂತ ಸುಳ್ಳು ವರ್ತಮಾನ ಪೋಲೀಸಿನವರಿಗೆ ಕೊಡುತ್ತಾನೆ ; ಆದರೆ ಜುಲುಂ ನಡಿಸಿದವರು ಇಂಥವರೆಂದು ಯಾರೊಬ್ಬನ ಹೆಸರು ಹೇಳುವದಿಲ್ಲ. ಆದರೆ ಈ ವರ್ತಮಾನದ ದೆಶೆಯಿಂದ ಸದರೀ ಗ್ರಾಮಸ್ಥರಿಗೆ ಅಥವಾ ಅವರ ಪೈಕಿ ಕೆಲವರಿಗೆ ಉಪದ್ರವಾಗುವಹಾಗೆ ಪೋಲೀಸಿನವರು ಸದರೀ ಗ್ರಾಮದಲ್ಲಿ ತನಖಿಗಳನ್ನು ಮತ್ತು ಝಡ್ತಿಗಳನ್ನು ನಡಿಸುವ ಸಂಭವ ಉಂಟೆಂತ ಅವನಿಗೆ ತಿಳಿದಿರುತ್ತದೆ. ಇದರಿಂದ A ಯು ಈ ಪ್ರಕರಣಕ್ಕನುಗುಣವಾದ ಅಪರಾಧ ಮಾಡಿದವನಾಗುತ್ತಾನೆ.

16. ಸದರೀ ಕೋಡಿನ 193ನೇ ಪ್ರಕರಣದ 1ನೇ ವಿವರದಲ್ಲಿ " ಅಥವಾ ಒಂದು ಮಿಲಿಟೆರಿ ಕೋರ್ಟ್ ಆಫ್ ರಿಕ್ವೈಷ್ಟಿನ ಮುಂದೆ " ಎಂಬುವ ಪದಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತವೆ.

17. ಸದರೀ ಕೋಡಿನ 203ನೇ ಪ್ರಕರಣಕ್ಕೆ ಇದರ ಕೆಳಗೆ ಬರುವದನ್ನು ಸೇರಿಸತಕ್ಕದ್ದು, ಏನಂದರೆ :—

" ವಿವರ.—201 ಮತ್ತು 202ನೇ ಪ್ರಕರಣಗಳಲ್ಲಿ ಮತ್ತು ಈ ಪ್ರಕರಣದಲ್ಲಿ " ಅಪರಾಧ " ಎಂಬ ಪದವು, ಮೈಸೂರು ಹೊರಗೆ ಯಾವದೊಂದು ಸ್ಥಳದಲ್ಲಿ ನಡಿಸಲ್ಪಟ್ಟದ್ದು, ಮೈಸೂರಲ್ಲಿ ನಡಿಸಲ್ಪಟ್ಟರೆ 302, 304, 382, 392, 393, 394, 395, 396, 397, 398, 399, 402, 435, 436, 449, 450, 457, 458, 459, ಮತ್ತು 460ನೇ ಪ್ರಕರಣಗಳ ಪೈಕಿ ಯಾವದಾದರೊಂದಕ್ಕನುಗುಣವಾಗಿ ಶಿಕ್ಷಿಸಲ್ಪಡಬಹುದಾದ ಯಾವದೊಂದು ಕೃತ್ಯವನ್ನು ಅಡಗಿಸಿಕೊಂಡಿರುತ್ತೆ.

18. ಸದರೀ ಕೋಡಿನ 212ನೇ ಪ್ರಕರಣದಲ್ಲಿ ವಿನಹಾಯಿತಿಗೆ ಕೂಡಲೆ ಮುಂದೆ ಈ ಕೆಳಗೆ ಬರುವದನ್ನು ಇಡತಕ್ಕದ್ದು, ಏನಂದರೆ :—

" ಈ ಪ್ರಕರಣದಲ್ಲಿ " ಅಪರಾಧ " ಎಂಬುವದು ಮೈಸೂರಿನ ಹೊರಗೆ ಯಾವದೊಂದು ಸ್ಥಳದಲ್ಲಿ ನಡಿಸಲ್ಪಟ್ಟದ್ದು ಮೈಸೂರಲ್ಲಿ ನಡಿಸಲ್ಪಟ್ಟರೆ 302, 304, 382, 392, 393, 394, 395, 396, 397, 398, 399, 402, 435, 436, 449, 450, 457, 458, 459, ಮತ್ತು 460ನೇ ಪ್ರಕರಣಗಳ ಪೈಕಿ ಯಾವದಾದರೊಂದಕ್ಕನುಗುಣವಾಗಿ ಶಿಕ್ಷಿಸಲ್ಪಡಬಹುದಾದ ಯಾವದೊಂದು ಕೃತ್ಯವನ್ನು ಅಡಗಿಸಿಕೊಂಡಿರುತ್ತದೆ; ಮತ್ತು ಅಂಥಾ ಪ್ರತಿ ಕೃತ್ಯವು ಆಪಾದನೆ ಪಟ್ಟವನು ಮೈಸೂರಿನಲ್ಲಿ ಅದನ್ನು ನಡಿಸಿದ ತಪ್ಪಿತಸ್ಥನಾಗಿದ್ದರೆ ಹ್ಯಾಗೊ ಹಾಗೆಯೆ ಈ ಪ್ರಕರಣದ ಉದ್ದೇಶಾರ್ಥಗಳ ಬಗ್ಯೆ ಶಿಕ್ಷಿಸಲ್ಪಡತಕ್ಕದ್ದೆಂದು ಭಾವವಾಗತಕ್ಕದ್ದು. "

19. ಸದರೀ ಕೋಡಿನ 214ನೇ ಪ್ರಕರಣದಲ್ಲಿ ವಿನಹಾಯಿತಿಗೆ ಬದಲಾಗಿ ಈ ಕೆಳಗೆ ಬರುವದನ್ನು ಇಡತಕ್ಕದ್ದು. ಏನೆಂದರೆ :—

"ವಿನಹಾಯಿತಿ.—213ನೇ 214ನೇ ಪ್ರಕರಣಗಳ ನಿಯಮಗಳು ಯಾವ ಸಂಗತಿಯಲ್ಲಿ ನ್ಯಾಯಸಮ್ಮತವಾಗಿ ರಾಜಿ ಮಾಡಿಕೊಳ್ಳಬಹುದೊ ಅಂಥಾ ಯಾವ ಸಂಗತಿಗೂ ವ್ಯಾಪಿಸುವದಿಲ್ಲ."

20. ಸದರೀ ಕೋಡಿನ 216ನೇ ಪ್ರಕರಣದ ಮೊದಲನೇ ಕಲ್ಪಿನ ತರುವಾಯ ಈ ಕೆಳಗೆ ಬರುವದನ್ನು ಇಡತಕ್ಕದ್ದು ; ಏನೆಂದರೆ :—

"ಈ ಪ್ರಕರಣದಲ್ಲಿ "ಅಪರಾಧ" ಎಂಬ ಮಾತಿನಲ್ಲಿ, ಒಬ್ಬ ಮನುಷ್ಯನು ಮೈಸೂರಲ್ಲಿ ಯಾವದರ ಕುರಿತು ತಪ್ಪಿತಸ್ಥನಾಗಿದ್ದರೆ ಅಪರಾಧಿ ಎಂಬದಾಗಿ ಎಣಿಸಲ್ಪಟ್ಟು ಶಿಕ್ಷಿಸಲ್ಪಡುತಿದ್ದನೊ, ಮತ್ತು ಯಾವದರ ಬಗ್ಗೆ ಅವನು ಎಕ್ಸ್‌ಟ್ರಾಡಿಶನಿಗೆ (ತಪ್ಪಿತಸ್ಥರನ್ನು ಅನ್ಯ ಸಂಸ್ಥಾನಗಳಿಗೆ ಒಪ್ಪಿಸಿಕೊಡುವದರ ಕುರಿತು) ಸಂಬಂಧಿಸುವ ಯಾವದೊಂದು ನಿಬಂಧನೆಗನುಗುಣವಾಗಿ ಮೈಸೂರಲ್ಲಿ ಹಿಡಿಯಲ್ಪಟ್ಟು ಕೆಲೆಯಲ್ಲಿ ಇಡಲ್ಪಡಲಿಕ್ಕೆ ಗುರಿಯಾಗುತ್ತಾನೊ ಅಂಥಾ ಕೃತ್ಯ ಅಥವಾ ಲೋಪವು, ಮೈಸೂರು ಹೊರಗೆ ನಡೆದಿರುವದಾಗಿ ಹೇಳೋಣಾಗುವಲ್ಲಿ ಅದು ಸಹ ಅಡಗಿರುತ್ತದೆ ; ಮತ್ತು ಅಂಥಾ ಪ್ರತಿ ಕೃತ್ಯವು ಅಥವಾ ಲೋಪವು ಆಪಾದನೆ ಪಟ್ಟ ಮನುಷ್ಯನು ಮೈಸೂರಲ್ಲಿ ಅದರ ಕುರಿತು ತಪ್ಪಿತಸ್ಥನಾಗಿದ್ದರೆ ಹ್ಯಾಗೊ ಹಾಗೆಯೇ ಶಿಕ್ಷೆಗೆ ಗುರಿಯಾಗತಕ್ಕದ್ದೆಂಬದಾಗಿ ಈ ಪ್ರಕರಣದ ಉದ್ದೇಶಾರ್ಥವಾಗಿ ಎಣಿಸಲ್ಪಡತಕ್ಕದ್ದು."

21. ಸದರೀ ಕೋಡಿನ 216ನೇ ಪ್ರಕರಣದ ತರುವಾಯ ಈ ಕೆಳಗೆ ಬರುವದನ್ನು ಇಡತಕ್ಕದ್ದು ; ಏನೆಂದರೆ :—

ಚೋರಿ ನಡಿಸಿದಂಥಾವರಿಗೆ ಅಥವಾ ದರೋಡೆ ಕಳ್ಳರಿಗೆ ಆಸರೆ ಕೊಟ್ಟ ಬಗ್ಗೆ ಶಿಕ್ಷೆ.

"216 A. ಯಾರಾಗಲಿ ಚೋರಿ ಅಥವಾ ದರೋಡೆ ಕಳವು ನಡಿಸಲಿಕ್ಕೆ ಉದ್ಯುಕ್ತರಾಗಿದ್ದಾರೆ ಅಥವಾ ಇತ್ತಲಾಗಿ ನಡಿಸಿದ್ದಾರೆ ಎಂಬದನ್ನು ತಿಳಿದು ಅಥವಾ ನಂಬಲಿಕ್ಕೆ ಕಾರಣವಿದ್ದು ಅಂಥಾ ಚೋರಿ ಅಥವಾ ದರೋಡೆ ಕಳವು ಮಾಡುವಂಥಾದ್ದನ್ನು ಸುಲಭ ಪಡಿಸುವ ಅಥವಾ ಅವರನ್ನು ಅಥವಾ ಅವರ ಪೈಕಿ ಯಾರನ್ನಾಗಲಿ ಶಿಕ್ಷೆಯಿಂದ ತಪ್ಪಿಸುವ ಅಭಿಪ್ರಾಯದಿಂದ ಅವರಿಗೆ ಅಥವಾ ಅವರ ಪೈಕಿ ಯಾರಿಗಾಗಲಿ ಯಾವನು ಆಸರೆ ಕೊಡುತ್ತಾನೊ ಅಂಥಾ ಮನುಷ್ಯನು ಏಳು ಸಂವತ್ಸರಗಳವರೆಗೆ ವ್ಯಾಪಿಸಬಹುದಾದಂಥಾ ಒಂದು ವಾಯಿದೆ ಪರ್ಯಂತ ಕಠಿಣ ಕೈದಿನ ಮೂಲಕವಾಗಿ ಶಿಕ್ಷಿಸಲ್ಪಡತಕ್ಕದ್ದು ; ಮತ್ತು ಜುಲುಮಾನೆಗೆ ಸಹಾ ಗುರಿಯಾಗತಕ್ಕದ್ದು.

"ವಿವರ.—ಈ ಪ್ರಕರಣದ ಉದ್ದೇಶಾರ್ಥಗಳ ಬಗ್ಗೆ ಚೋರಿ ಅಥವಾ ದರೋಡೆ ಕಳವು ಮಾಡಲಿಕ್ಕೆ ಯುಕ್ತಿಸಲ್ಪಟ್ಟದ್ದು ಅಥವಾ ಮಾಡಲ್ಪಟ್ಟದ್ದು ಮೈಸೂರಿನಲ್ಲಿಯೊ ಅಥವಾ ಮೈಸೂರು ಹೊರಗೊ ಎಂಬ ಸಂಗತಿಯು ಮುಖ್ಯವಾದದ್ದಲ್ಲ.

"ವಿನಹಾಯಿತಿ.—ಈ ನಿಯಮವು ಅಪರಾಧಿಯ ಗಂಡ ಅಥವಾ ಹೆಂಡತಿಯು ಆಸರೆ ಕೊಟ್ಟ ಸಂಗತಿಗೆ ವ್ಯಾಪಿಸುವದಿಲ್ಲ.

212, 216 ಮತ್ತು 216 A ನೇ ಪ್ರಕರಣಗಳಲ್ಲಿ "ಆಸರೆ ಕೊಡು" ಎಂಬದರ ಅರ್ಥ ವಿವರಣೆ.

"216 B. 212, 216, ಮತ್ತು 216 A ನೇ ಪ್ರಕರಣಗಳಲ್ಲಿ "ಆಸರೆ ಕೊಡು" ಎಂಬ ಮಾತು ಒಬ್ಬ ಮನುಷ್ಯನಿಗೆ ಆಶ್ರಯ, ಆಹಾರ, ಪಾನ, ಹಣ, ತೊಡಿಗೆ, ಆಯುಧ, ಕೋವಿಮದ್ದು ಅಥವಾ ಪ್ರಯಾಣ ಮಾಡುವದಕ್ಕೆ ಉಪಯೋಗಿಸುವ ವಾಹನ ವಗೈರೆಯನ್ನು ಕೊಡೋಣವನ್ನು ಮತ್ತು ಒಬ್ಬ ಮನುಷ್ಯನನ್ನು ಹಿಡಿಯೋಣದಿಂದ ತಪ್ಪಿಸಿಕೊಳ್ಳುವದಕ್ಕೆ ಯಾವವಿಧದಲ್ಲಾದರೂ ಸಹಾಯ ಮಾಡೋಣವನ್ನು ಸಹಾ ಅಡಗಿಸಿಕೊಂಡಿರುತ್ತದೆ."

22. ಸದರೀ ಕೋಡಿನ 225 A ನೇ ಪ್ರಕರಣಕ್ಕೆ ಬದಲಾಗಿ ಈ ಕೆಳಗೆ ಬರುವ ಪ್ರಕರಣಗಳನ್ನು ಇಡತಕ್ಕದ್ದು, ಏನೆಂದರೆ :—

ಅನ್ಯಥಾ ನಿಬಂಧಿಸೋಣಾಗದಿರುವ ಸಂಗತಿಗಳಲ್ಲಿ ಸರ್ಕಾರಿ ಉದ್ಯೋಗಸ್ಥನು ಹಿಡಿಯದೆ ಇರೋಣ ಅಥವಾ ತಪ್ಪಿಸಿಕೊಳ್ಳಲಿಕ್ಕೆ ಬಿಡೋಣ.

"225 A. ಸರ್ಕಾರಿ ಉದ್ಯೋಗಸ್ಥನಾಗಿದ್ದುಕೊಂಡು, ಹಾಗೆ ಸರ್ಕಾರಿ ಉದ್ಯೋಗಸ್ಥನಾಗಿರುವ ಕಾರಣ 221ನೇ, 222ನೇ ಅಥವಾ 223ನೇ ಪ್ರಕರಣದಲ್ಲಿ ಅಥವಾ ತಾತ್ಕಾಲಿಕವಾಗಿ ಜಾರಿಯಲ್ಲಿರುವ ಇತರ ಯಾವದಾದರೂ ನಿಬಂಧನೆಯಲ್ಲಿ ವಿಧಿಸೋಣಾಗದಿರುವ ಯಾವದೊಂದು ಸಂಗತಿಯಲ್ಲಿ ಯಾವ ಮನುಷ್ಯನನಾದರೂ ಹಿಡಿಯಲಿಕ್ಕೆ ಅಥವಾ ಕೈದಿನಲ್ಲಿ ಇಡಲಿಕ್ಕೆ ನ್ಯಾಯವಾಗಿ ಬದ್ಧನಾಗಿರುವ ಯಾವನು, ಅಂಥಾ ಮನುಷ್ಯನನ್ನು ಹಿಡಿಯದೆ ಇರುತ್ತಾನೋ ಅಥವಾ ಕೈದಿನಿಂದ ಅಂಥಾ ಮನುಷ್ಯನು ತಪ್ಪಿಸಿಕೊಳ್ಳುವದನ್ನು ಸಹಿಸುತ್ತಾನೊ ಅಂಥಾ ಪ್ರತಿ ಮನುಷ್ಯನು—

(*a*) ಅವನು ಮನಃಪೂರ್ವಕವಾಗಿ ಹಾಗೆ ಮಾಡುತ್ತಾನಾದರೆ, ಮೂರು ಸಂವತ್ಸರತನಕ ವ್ಯಾಪಿಸಬಹುದಾದ ಒಂದು ವಾಯಿದೆ ಪರ್ಯಂತ ಯಾವದಾದರೂ ಒಂದು ವಿಧದ ಕೈದಿನ ಮೂಲಕವಾಗಿಯಾಗಲಿ ಜುಲುಮಾನೆಯ ಮೂಲಕವಾಗಿಯಾಗಲಿ, ಈ ಎರಡು ಮೂಲಕವಾಗಿ ಯಾಗಲಿ, ಶಿಕ್ಷಿಸಲ್ಪಡತಕ್ಕದ್ದು ; ಮತ್ತು

(*b*) ಅವನು ಅಶ್ರದ್ಧೆಯಿಂದ ಹಾಗೆ ಮಾಡುತ್ತಾನಾದರೆ, ಎರಡು ಸಂವತ್ಸರದ ತನಕ ವ್ಯಾಪಿಸಬಹುದಾದ ಒಂದು ವಾಯಿದೆ ಪರ್ಯಂತ ಬರೀ ಕೈದು ಮೂಲಕವಾಗಿಯಾಗಲಿ, ಜುಲುಮಾನೆಯ ಮೂಲಕವಾಗಿಯಾಗಲಿ, ಈ ಎರಡರ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಡತಕ್ಕದ್ದು.

"225 B. 224ನೇ ಅಥವಾ 225ನೇ ಪ್ರಕರಣದಲ್ಲಾಗಲಿ, ತಾತ್ಕಾಲಿಕವಾಗಿ ಜಾರಿಯಲ್ಲಿರುವ ಇತರ ಯಾವದಾದರೂ ನಿಬಂಧನೆಯಲ್ಲಾಗಲಿ, ವಿಧಿಸೋಣಾಗದಿರುವ ಯಾವದೊಂದು ಸಂಗತಿಯಲ್ಲಿ ಯಾವನು, ತನ್ನನ್ನು ಅಥವಾ ಇತರ ಯಾವನೊಬ್ಬ ಮನುಷ್ಯನನ್ನು ನ್ಯಾಯವಾಗಿ ಹಿಡಿಯುವಾಗ ಮನಃಪೂರ್ವಕವಾಗಿ ಎದುರಿಸುತ್ತಾನೊ, ಅಥವಾ ಅಕ್ರಮವಾಗಿ ಆತಂಕಪಡಿಸುತ್ತಾನೊ, ಅಥವಾ ನ್ಯಾಯಪ್ರಕಾರ ತನ್ನನ್ನು ಇಟ್ಟಿರುವ ಕೈದಿನಿಂದ ತಪ್ಪಿಸಿಕೊಳ್ಳುತ್ತಾನೊ, ಅಥವಾ ತಪ್ಪಿಸಿಕೊಳ್ಳಲಿಕ್ಕೆ ಯತ್ನಿಸುತ್ತಾನೊ, ಅಥವಾ ಮತ್ತೊಬ್ಬನನ್ನು ನ್ಯಾಯವಾಗಿ ಕೈದುಪಡಿಸಿ ಇರುವ ಕೈದಿನಿಂದ ಅವನನ್ನು ತಪ್ಪಿಸುತ್ತಾನೊ ಅಥವಾ ತಪ್ಪಿಸಲಿಕ್ಕೆ ಯತ್ನಿಸುತ್ತಾನೊ, ಅಂಥಾ ಪ್ರತಿ ಮನುಷ್ಯನು ಆರು ತಿಂಗಳಿಗೆ ಮೀರದ ಒಂದು ವಾಯಿದೆ ಪರ್ಯಂತ ಯಾವದಾದರೂ ಒಂದು ವಿಧದ ಕೈದಿನ ಮೂಲಕವಾಗಿಯಾಗಲಿ, ಜುಲುಮಾನೆಯ ಮೂಲಕವಾಗಿಯಾಗಲಿ, ಈ ಎರಡರ ಮೂಲಕವಾಗಿಯಾಗಲಿ, ಶಿಕ್ಷಿಸಲ್ಪಡತಕ್ಕದ್ದು."

ಅನ್ಯಥಾ ವಿಧಿಸೋಣಾಗದಿರುವ ಸಂಗತಿಗಳಲ್ಲಿ ನ್ಯಾಯವಾಗಿ ಹಿಡಿಯುವಾಗ್ಯೆ ಎದುರಿಸುವದು ಅಥವಾ ಆತಂಕ ಮಾಡುವದು ಅಥವಾ ತಪ್ಪಿಸಿಕೊಂಡು ಹೋಗುವದು ಅಥವಾ ತಪ್ಪಿಸುವದು.

23. (1) ಸದರೀ ಕೋಡಿನ 230ನೆ ಪ್ರಕರಣದ ಎರಡನೆ ಕಲಮಿಗೆ ಬದಲಾಗಿ ಈ ಕೆಳಗೆ ಬರುವದನ್ನು ಇಡತಕ್ಕದ್ದು. ಏನಂದರೆ :—

"ಹಣವಾಗಿ ಉಪಯೋಗಿಸಲ್ಪಡುವ ಬಗ್ಗೆ ಮಹಾರಾಜಚಕ್ರವರ್ತಿಯವರ ಅಪ್ಪಣೆಪ್ರಕಾರ, ಅಥವಾ ಇಂಡಿಯಾ ಗವರನ್ಮೆಂಟಿನವರ ಅಥವಾ ಪ್ರೆಸಿಡೆನ್ಸಿ ಗವರನ್ಮೆಂಟಿನವರ ಅಪ್ಪಣೆ ಪ್ರಕಾರ ಅಥವಾ ಮಹಾರಾಜಚಕ್ರವರ್ತಿಯವರ ರಾಜ್ಯಗಳಲ್ಲಿನ ಇತರ ಗವರನ್ಮೆಂಟಿನವರ ಅಪ್ಪಣೆ ಪ್ರಕಾರ ಮುದ್ರೆ ಹಾಕೋಣವಾಗಿ ಅವರಿಂದ ಚಲಾವಣಿಗೆ ಬಿಡೋಣಾದ ಲೋಹವು ಮಹಾರಾಜರವರ ನಾಣ್ಯವಾಗಿರುತ್ತದೆ; ಮತ್ತು ಈ ಮೇರೆಗೆ ಮುದ್ರೆ ಹಾಕೋಣಾಗಿ ಚಲಾವಣಿಗೆ ಬಿಡೋಣಾದ ಲೋಹದ ತುಂಡು ಹಣವಾಗಿ ಉಪಯೋಗಿಸಲ್ಪಡುವದು ನಿಂತುಹೋಗಿದ್ದರೂ ಈ ಅಧ್ಯಾಯದ ಉದ್ದೇಶಾರ್ಥವಾಗಿ ಅದನ್ನು ಮಹಾರಾಜರವರ ನಾಣ್ಯವೆಂಬದಾಗಿ ತಿಳಕೊಳ್ಳತಕ್ಕದ್ದು."

ಮಹಾರಾಜರವರ ನಾಣ್ಯ

(2) ಅದೇ ಪ್ರಕರಣಕ್ಕೆ ಸೇರಿಸಲ್ಪಟ್ಟ ಉದಾಹರಣೆಗಳಿಗೆ ಈ ಕೆಳಗೆ ಬರುವದನ್ನು ಸೇರಿಸತಕ್ಕದ್ದು, ಏನಂದರೆ :—

(e) "ಇಂಡಿಯಾಗವರನ್ಮೆಂಟಿನವರ ಅಪ್ಪಣೆಯ ಮೇರೆಗೆ ಮುಂಚೆ ಹಣವಾಗಿ ಉಪಯೋಗಿಸಲ್ಪಟ್ಟ 'ಫರಕಾಬಾದ್ ರೂಪಾಯಿಯು ಈಗ ಆ ಮೇರೆಗೆ ಉಪಯೋಗಿಸಲ್ಪಡುವದಿಲ್ಲವಾದರೂ 'ಮಹಾರಾಜರವರ ನಾಣ್ಯವಾಗಿರುತ್ತದೆ."

24. ಸದರೀ ಕೋಡಿನ XIIನೇ ಅಧ್ಯಾಯಕ್ಕೆ ಈ ಕೆಳಗೆ ಬರುವದನ್ನು ಸೇರಿಸತಕ್ಕದ್ದು, ಏನಂದರೆ :—

"263 A. (1) ಯಾವನು:—

(a) ಯಾವದೊಂದು ಬನಾವಣಿ ಸ್ಟಾಂಪನ್ನು ಮಾಡುತ್ತಾನೊ, ತಿಳದಿದ್ದು ಚಲಾವಣಿ ಮಾಡುತ್ತಾನೊ, ಅದರ ವ್ಯಾಪಾರ ನಡಿಸುತ್ತಾನೊ ಅಥವಾ ವಿಕ್ರಯಿಸುತ್ತಾನೊ ಅಥವಾ ಯಾವದೊಂದು ಬನಾವಣಿ ಸ್ಟಾಂಪನ್ನು ತಿಳದಿದ್ದರೂ ಟಪ್ಪಾಲಿನ ಸಮ್ಮಂಧವಾದ ಯಾವದೊಂದು ಉದ್ದೇಶದ ಬಗ್ಗೆ ಉಪಯೋಗಿಸುತ್ತಾನೊ, ಅಥವಾ

ಬನಾವಣಿ ಸ್ಟಾಂಪುಗಳನ್ನು ಮನ್ನಾಪಡಿಸೋಣ.

(b) ನ್ಯಾಯವಾದ ಕಾರಣವಿಲ್ಲದೆ ತನ್ನ ಸ್ವಾಧೀನದಲ್ಲಿ ಬನಾವಣಿ ಸ್ಟಾಂಪನ್ನು ಇಟ್ಟುಕೊಳ್ಳುತ್ತಾನೊ, ಅಥವಾ

(c) ಯಾವದೊಂದು ಬನಾವಣಿ ಸ್ಟಾಂಪನ್ನು ಮಾಡುವ ಬಗ್ಗಿನ ಯಾವದಾದರೂ ಅಚ್ಚನ್ನಾಗಲಿ, ತಗಡನ್ನಾಗಲಿ, ಯಂತ್ರವನ್ನಾಗಲಿ, ಅಥವಾ ಸಾಮಗ್ರಿಗಳನ್ನಾಗಲಿ ನಿರ್ಮಿಸುತ್ತಾನೊ, ಅಥವಾ ನ್ಯಾಯವಾದ ಕಾರಣವಿಲ್ಲದೆ ಸ್ವಾಧೀನದಲ್ಲಿಟ್ಟುಕೊಳ್ಳುತ್ತಾನೊ.

ಅಂಥಾ ಪ್ರತಿ ಮನುಷ್ಯನು ಇನ್ನೂರು ರೂಪಾಯಿಗಳ ವರೆಗಿನ ಜುಲುಮಾನೆ ಮೂಲಕ ಶಿಕ್ಷಿಸಲ್ಪಡತಕ್ಕದ್ದು.

"(2) ಯಾವದೊಂದು ಬನಾವಣಿ ಸ್ಟಾಂಪನ್ನು ಮಾಡುವ ಬಗ್ಗಿನ ಅಂಥಾ ಯಾವದೊಂದು ಮೊಹರನ್ನು, ಅಚ್ಚನ್ನು, ತಗಡನ್ನು, ಯಂತ್ರವನ್ನು ಅಥವಾ ಸಾಮಗ್ರಿಗಳನ್ನು ಯಾವನೊಬ್ಬ ಮನುಷ್ಯನ ಸ್ವಾಧೀನದಲ್ಲಿಂದ ಹಿಡಿದು ಮುಟ್ಟುಗೋಲು ವಿಧಿಸತಕ್ಕದ್ದು.

"(3) ಈ ಪ್ರಕರಣದಲ್ಲಿ "ಬನಾವಣಿ ಸ್ಟಾಂಪು" ಅಂದರೆ ಟಪ್ಪಾಲ್ ಹಾಸಲಿನ ಒಂದು ದರವನ್ನು ತೋರಿಸುವ ಬಗ್ಗೆ ಗವರ್ನಮೆಂಟಿನವರಿಂದ ಹುಟ್ಟಿಸಲ್ಪಟ್ಟಿದ್ದೆಂದು, ಸುಳ್ಳು ಭಾವನೆಯಾಗುವ ಯಾವದೊಂದು ಸ್ಟಾಂಪು, ಅಥವಾ ಗವರ್ನಮೆಂಟಿನವರಿಂದ ಆ ಉದ್ದಿಶ್ಯ ಹುಟ್ಟಿಸಲ್ಪಟ್ಟ ಯಾವದೊಂದು ಸ್ಟಾಂಪಿನ ಮಾತೃಕೆ ನಕಲು ಅಥವಾ ಪ್ರತಿ ರೂಪ ಎಂಬ ಅರ್ಥವಾಗುತ್ತದೆ, ಇದು ಕಾಗದದಮೇಲೆ ಇದ್ದರೂ ಅನ್ಯಥಾ ಬರೆಯಲ್ಪಟ್ಟಿರೂ ಸರಿಯೇ.

"(4) ಈ ಪ್ರಕರಣದಲ್ಲಿ ಮತ್ತು 255ರಿಂದ 263ರ ವರೆಗಿನ (ಎರಡು ಸೇರಿ) ಪ್ರಕರಣಗಳಲ್ಲಿ "ಗವರ್ನಮೆಂಟು" ಎಂಬ ಶಬ್ದವನ್ನು ಒಂದು ಟಪ್ಪಾಲ್ ಹಾಸಲಿನ ದರವನ್ನು ತೋರಿಸುವ ಉದ್ದಿಶ್ಯದ ಬಗ್ಗೆ ಹುಟ್ಟಿಸಲ್ಪಟ್ಟ ಯಾವದೊಂದು ಸ್ಟಾಂಪಿನ ಸಂದರ್ಭದಲ್ಲಿ ಅಥವಾ ಅದರ ವಿಷಯವಾಗಿ ಉಪಯೋಗಿಸಿದಾಗ್ಗೆ 17ನೇ ಪ್ರಕರಣದಲ್ಲಿ ಏನು ನಮೂದಿದ್ದಾಗ್ಯೂ ಇಂಡಿಯಾವಿನ ಯಾವದೊಂದು ಭಾಗದಲ್ಲಿ ಮತ್ತು ಶ್ರೀಮಯ ಮಹಾರಾಜ ಚಕ್ರವರ್ತಿಯವರ ಸ್ವಾಸ್ಥ್ಯಗಳ ಯಾವದೋದು ಭಾಗದಲ್ಲಿ, ಅಥವಾ ಯಾವದೊಂದು ಪರಾಯ ದೇಶದಲ್ಲಿ ಎಕ್ಸಿಕ್ಯೂಟಿವ್ ಗವರ್ನಮೆಂಟನ್ನು ನಡಿಸಲಿಕ್ಕೆ ನಿಬಂಧನೆಯ ಮೇರೆಗೆ ಅಧಿಕಾರಗೊಳಿಸಲ್ಪಟ್ಟ ಮನುಷ್ಯನನ್ನು ಅಥವಾ ಮನುಷ್ಯರನ್ನು ಅದು ಅಡಗಿಸಿಕೊಳ್ಳುತ್ತದೆ ಏಂದು ಎಣಿಸತಕ್ಕದ್ದು."

25. ಸದರೀ ಕೋಡಿನ 294ನೇ ಪ್ರಕರಣಕ್ಕೆ ಬದಲಾಗಿ ಈ ಕೆಳಗೆ ಬರುವದನ್ನು ಇಡತಕ್ಕದ್ದು, ಏನಂದರೆ :—

ಅಸಹ್ಯಕರವಾದ ಕೃತ್ಯಗಳು ಮತ್ತು ಹಾಡುಗಳು.

" 294. ಯಾವನು ಬೇರೆಯವರಿಗೆ ಉಪದ್ರವಾಗುವಹಾಗೆ,—

(a) ಯಾವದೊಂದು ಬಹಿರಂಗವಾದ ಸ್ಥಳದಲ್ಲಿ ಭಂಡ ಕೃತ್ಯವನ್ನು ಮಾಡುತ್ತಾನೋ, ಅಥವಾ

(b) ಯಾವದೊಂದು ಬಹಿರಂಗವಾದ ಸ್ಥಳದಲ್ಲಿ ಅಥವಾ ಅದರ ಸಮೀಪ ಭಂಡ ಪದ್ಯಗಳನ್ನು, ಹಾಡನ್ನು ಅಥವಾ ಮಾತುಗಳನ್ನು ಹಾಡುತ್ತಾನೊ, ಹೇಳುತ್ತಾನೊ ಅಥವಾ ಉಚ್ಚರಿಸುತ್ತಾನೋ, ಅವನು ಮೂರು ತಿಂಗಳುಗಳವರೆಗೆ ವ್ಯಾಪಿಸಬಹುದಾದ ಯಾವದೊಂದು ವಿಧದ ಕೈದಿನ ಮೂಲಕವಾಗಿಯಾಗಲಿ ಜುಲುಮಾನೆಯ ಮೂಲಕವಾಗಿಯಾಗಲಿ ಇವೆರಡರ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಡತಕ್ಕದ್ದು."

26. ಸದರೀ ಕೋಡಿನ 307ನೇ ಪ್ರಕರಣದ (c) ಉದಾಹರಣೆಯಲ್ಲಿ "ದ" (of) ಎಂಬದರ ತರುವಾಯ "ಬಂದನೇ ಕಲಮಿನ" ಎಂಬ ಪದಗಳನ್ನು ಇಡತಕ್ಕದ್ದು.

27. ಸದರೀ ಕೋಡಿನ 309ನೇ ಪ್ರಕರಣದಲ್ಲಿ ಕಡೇ ಏಳು ಪದಗಳಿಗೆ* ಬದಲಾಗಿ "ಜುಲುಮಾನೆಯ ಮೂಲಕವಾಗಿಯಾಗಲಿ ಈ ಎರಡರ ಮೂಲಕವಾಗಿಯಾಗಲಿ" ಎಂಬ ಪದಗಳನ್ನು ಇಡತಕ್ಕದ್ದು.

28. ಸದರೀ ಕೋಡಿನ 335ನೇ ಪ್ರಕರಣದಲ್ಲಿ "ಮಾಡುತ್ತಾನೋ" ಎಂಬ ಪದಕ್ಕೆ ಮುಂಚೆ "ಮನಃಪೂರ್ವಕವಾಗಿ" ಎಂಬ ಪದವನ್ನು ಇಡತಕ್ಕದ್ದು.

29. ಸದರೀ ಕೋಡಿನ 375ನೇ ಪ್ರಕರಣದಲ್ಲಿ ಐದನೇದು ಎಂದು ಸೂಚಿಸಲ್ಪಟ್ಟ ಕಲಮಿನಲ್ಲಿಯೂ ಮತ್ತು ವಿನಹಾಯಿತಿ ಯಲ್ಲಿಯೂ "ಹತ್ತು" ಎಂಬ ಪದಕ್ಕೆ ಬದಲಾಗಿ "ಹನ್ನೆರಡು" ಎಂಬ ಪದವನ್ನು ಇಡತಕ್ಕದ್ದು.

30. (1) ಸದರೀ ಕೋಡಿನ 410ನೇ ಪ್ರಕರಣದಲ್ಲಿ "ವಿಶ್ವಾಸ ಘಾತಕ ತಪ್ಪಿತ" ಎಂಬ ಪದಗಳ ಮುಂದೆ ಬರುವ "ಅಪರಾಧವಾಗಿರುವ" ಎಂಬ ಪದವನ್ನು ರದ್ದು ಮಾಡಲ್ಪಟ್ಟಿರುತ್ತೆ.

(2) ಅದೇ ಪ್ರಕರಣದಲ್ಲಿ "'ಚೋರಿಮಾಲು' ಎಂದು ಅನ್ನಿಸಿಕೊಳ್ಳುತ್ತದೆ" ಎಂಬಪದಗಳ ತರುವಾಯ ಈ ಕೆಳಗೆ ಬರುವ ಪದಗಳನ್ನು ಇಡತಕ್ಕದ್ದು, ಏನಂದರೆ :—

"ಆ ಸೊತ್ತು ಮೈಸೂರೊಳಗಾಗಿ ಅಥವಾ ಮೈಸೂರು ಹೊರಗೆ ಪರಭಾರೆಯನ್ನು ಮಾಡಿದ್ದಾಗ್ಯೂ ಅಥವಾ ದುರುಪಯೋಗವನ್ನು ಅಥವಾ ವಿಶ್ವಾಸಘಾತಕವನ್ನು ನಡಿಸಿದ್ದಾಗ್ಯೂ."

31. ಸದರೀ ಕೋಡಿನ 435ನೇ ಪ್ರಕರಣದಲ್ಲಿ "ಅಥವಾ ಅದಕ್ಕೆ ಮೇಲ್ಪಟ್ಟ" ಎಂಬ ಪದಗಳ ತರುವಾಯ ಈ ಕೆಳಗೆ ಬರುವ ಪದಗಳನ್ನು ಇಡತಕ್ಕದ್ದು, ಏನಂದರೆ :—

"ಅಥವಾ (ಸೊತ್ತು ವ್ಯವಸಾಯದ ಫಲವಾಗಿದ್ದರೆ) ಹತ್ತು ರೂಪಾಯಿ.........ಅಥವಾ ಅದಕ್ಕೆ ಮೇಲ್ಪಟ್ಟ......"

32. ಸದರೀ ಕೋಡಿನ 477ನೆ ಪ್ರಕರಣದ ತರುವಾಯ ಈ ಕೆಳಗೆ ಬರುವದನ್ನು ಸೇರಿಸತಕ್ಕದ್ದು, ಏನಂದರೆ:—

ಸುಳ್ಳು ಲೆಕ್ಕಗಳನ್ನು ಮಾಡೋಣ.

"477 A. ಯಾವನು ಒಬ್ಬ ಗುಮಾಸ್ತೆ, ಆಫಿಸರ್ ಅಥವಾ ಉದ್ಯೋಗಸ್ಥನಾಗಿದ್ದು ಅಥವಾ ಒಬ್ಬ ಗುಮಾಸ್ತನ, ಆಫಿಸರನ ಅಥವಾ ಉದ್ಯೋಗಸ್ಥನ ಉದ್ಯೋಗದಲ್ಲಿ ನೇಮಕಪಟ್ಟಿದ್ದು ಅಥವಾ ಕೆಲಸ ನೋಡುತ್ತಿದ್ದು ಮನಃಪೂರ್ವಕವಾಗಿ ಮತ್ತು ವಂಚನೆ ಮಾಡುವ ಅಭಿಪ್ರಾಯದಿಂದ ತನ್ನ ಯಜಮಾನನಿಗೆ ಸಮ್ಮಂಧಿಸುವ ಅಥವಾ ಆತನ ಸ್ವಾಧೀನದಲ್ಲಿರುವ ಅಥವಾ ತನ್ನ ಯಜಮಾನನ ಬಗ್ಗೆ ಅಥವಾ ಆತನ ಕಡೆಯಿಂದ ತಾನು ಪಡಕೊಂಡ ಯಾವದಾದರೂ ಪುಸ್ತಕವನ್ನು, ಕಾಗದವನ್ನು, ಪತ್ರವನ್ನು, ಬೆಲೆಯುಳ್ಳ ಸಾಧನವನ್ನು ಅಥವಾ ಲೆಕ್ಕವನ್ನು ನಾಶಪಡಿಸುತ್ತಾನೊ, ಬದಲಾಯಿಸುತ್ತಾನೊ, ವಿರೂಪ ಪಡಿಸುತ್ತಾನೊ, ಅಥವಾ ಸುಳ್ಳು ಮಾಡುತ್ತಾನೊ ಅಥವಾ ಮನಃಪೂರ್ವಕವಾಗಿ ಮತ್ತು ವಂಚನೆ ಮಾಡಬೇಕೆಂಬ ಅಭಿಪ್ರಾಯದಿಂದ ಅಂಥಾ ಯಾವದಾದರೂ ಪುಸ್ತಕ, ಕಾಗದ, ಪತ್ರ, ಬೆಲೆಯುಳ್ಳ ಸಾಧನ ಅಥವಾ ಲೆಕ್ಕದಲ್ಲಿ ಸುಳ್ಳು ಖತಾಯಿತಿಯನ್ನು ಮಾಡುತ್ತಾನೊ ಅಥವಾ ಮಾಡಲಿಕ್ಕೆ ಸಹಾಯ ಮಾಡುತ್ತಾನೊ ಅಥವಾ ಅದರಿಂದ ಅಥವಾ ಅದರಲ್ಲಿ ಯಾವದೊಂದು ಮುಖ್ಯವಾದ ವಿಷಯವನ್ನು ಲೋಪಿಸುತ್ತಾನೊ ಅಥವಾ ಬದಲಾಯಿಸುತ್ತಾನೊ ಅಥವಾ ಲೋಪಿಸಲಿಕ್ಕೆ ಅಥವಾ ಬದಲಾಯಿಸಲಿಕ್ಕೆ ಸಹಾಯ ಮಾಡುತ್ತಾನೊ, ಅಂಥಾ ಪ್ರತಿ ಮನುಷ್ಯನು ಏಳು ವರುಷಗಳ ವರಿಗೆ ವ್ಯಾಪಿಸಬಹುದಾದ ಯಾವದೊಂದು ವಿಧದ ಕೈದಿನ ಮೂಲಕವಾಗಲಿ, ಜುಲುಮಾನೆಯ ಮೂಲಕವಾಗಲಿ, ಇವೆರಡರ ಮೂಲಕವಾಗಲಿ ಶಿಕ್ಷಿಸಲ್ಪಡತಕ್ಕದ್ದು.

"ವಿವರ.—ಈ ಪ್ರಕರಣಕ್ಕನುಗುಣವಾದ ಯಾವದೊಂದು ಆಪಾದನೆಯಲ್ಲಿ, ಫಲಾನೆ ಒಬ್ಬ ಮನುಷ್ಯನನ್ನು, ಅಥವಾ ಫಲಾನೆ ಒಂದು ಮೊಬಲಗಿನ ವಿಷಯವಾಗಿ, ವಂಚಿಸುವ ಅಭಿಪ್ರಾಯ ಇತ್ತು ಅಥವಾ ಫಲಾನೆ ಒಂದು ದಿವಸದಲ್ಲಿ ಅಪರಾಧ ಮಾಡಲ್ಪಟ್ಟಿತು ಎಂದು ನಮೂದಿಸದೇನೆ ವಂಚಿಸುವದಕ್ಕೆ ಸಾಮಾನ್ಯ ಅಭಿಪ್ರಾಯವಿತ್ತು ಎಂದು ಸಾಧಿಸಿದರೆ ಸಾಕು."

33. ಸದರೀ ಕೋಡಿನ 489ನೆ ಪ್ರಕರಣಕ್ಕೆ ತರುವಾಯ ಈ ಕೆಳಗೆ ಬರುವ ಪ್ರಕರಣಗಳನ್ನು ಸೇರಿಸತಕ್ಕದ್ದು, ಏನಂದರೆ :—

* ಇಂಗ್ಲಿಷ್ ಕೋಡಿನಲ್ಲಿರುವ ಪ್ರಕಾರ ಕಡೆ ಏಳು ಪದಗಳೆಂದು ತಿಳಿಯತಕ್ಕದ್ದು.—

" ಕರೆನ್ಸಿ ನೋಟುಗಳ ಮತ್ತು ಬ್ಯಾಂಕ್ ನೋಟುಗಳ ಕುರಿತು.

ಕರೆನ್ಸಿ ನೋಟುಗಳನ್ನು ಅಥವಾ ಬ್ಯಾಂಕ್ ನೋಟುಗಳನ್ನು ಬನಾವಣಿ ಮಾಡೋಣ.

" 489 A. ಯಾವನು ಯಾವದೊಂದು ಕರೆನ್ಸಿ ನೋಟನ್ನಾಗಲಿ, ಬ್ಯಾಂಕ್ ನೋಟನ್ನಾಗಲಿ ಬನಾವಣಿ ಮಾಡುತ್ತಾನೋ ಅಥವಾ ಬನಾವಣಿ ಮಾಡುವ ಕೆಲಸವನ್ನು ಎಷ್ಟುಮಾತ್ರವಾದರೂ ತಿಳಿದು ನಡೆಸುತ್ತಾನೋ ಅಂಥಾ ಮನುಷ್ಯನು ಯಾವಜ್ಜೀವವೂ ನೀರಿನಮೇಲೆ ಕಳುಹಿಸಲ್ಪಡುವದರ ಮೂಲಕವಾಗಿಯಾಗಲಿ, ಅಥವಾ ಹತ್ತು ವರುಷಗಳ ವರಿಗೆ ವ್ಯಾಪಿಸಬಹುದಾದ ಒಂದು ವಾಯಿದೆ ಪರ್ಯಂತ ಯಾವದಾದರೂ ಒಂದು ವಿಧದ ಕೈದಿನ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಟ್ಟು ಜುಲುಮಾನೆ ತೆರಲಿಕ್ಕೆ ಸಹಾ ಗುರಿಯಾಗಿರತಕ್ಕದ್ದು.

" ವಿವರ.—ಈ ಪ್ರಕರಣದ ಮತ್ತು 489 B, 489 C ಮತ್ತು 489 Dನೇ ಪ್ರಕರಣಗಳ ಉದ್ದೇಶಗಳ ಬಗ್ಗೆ 'ಬ್ಯಾಂಕ್ ನೋಟ್' ಎಂಬ ಪದವು ಹಾಜರು ಮಾಡುವವನಿಗೆ ಕೇಳಿದ ಕೂಡಲೆ ಹಣ ಕೊಡುವದಾಗಿ ಒಪ್ಪಿಕೊಂಡು, ಲೋಕದ ಯಾವಕಡೆಯಲ್ಲಾಗಲಿ ಹಣ ಬಡ್ಡಿಗೆ ಕೊಡುವ ಕಸಬು ನಡಿಸುತ್ತಿರುವ ಯಾವನೊಬ್ಬ ಮನುಷ್ಯನಿಂದ ಬರೆದು ಕೊಡಲ್ಪಟ್ಟು, ಅಥವಾ ಯಾವದೊಂದು ಸಂಸ್ಥಾನದವರಿಂದ ಅಥವಾ ಸರ್ಕಾರದವರಿಂದ ಅಥವಾ ಅವರ ಅಪ್ಪಣೆ ಮೇರೆಗೆ ಬರೆದು ಕೊಡಲ್ಪಟ್ಟು, ಹಣಕ್ಕೆ ಸಮಾನವಾಗಿ ಅಥವಾ ಬದಲಾಗಿ ಉಪಯೋಗಿಸಲ್ಪಡತಕ್ಕದ್ದೆಂದು ಉದ್ದೇಶಿಸಲ್ಪಟ್ಟ ಒಂದು ಪ್ರೊಮಿಸರಿ ನೋಟು ಅಥವಾ ಒಡಂಬಡಿಕೆ ಎಂದು ಅರ್ಥ ಕೊಡುತ್ತದೆ.

ಸೃಷ್ಟನೆಯಾದ ಅಥವಾ ಬನಾವಣಿಯಾದ ಕರೆನ್ಸಿ ನೋಟುಗಳನ್ನು ಅಥವಾ ಬ್ಯಾಂಕ್ ನೋಟುಗಳನ್ನು ನಿಜವಾದ್ದೆಂತ ಉಪಯೋಗಿಸೋಣ.

" 489 B. ಯಾವನು, ಸೃಷ್ಟನೆಯಾದದ್ದು ಅಥವಾ ಬನಾವಣಿಯಾದದ್ದು ಎಂದು ತಿಳಿದು ಅಥವಾ ನಂಬಲಿಕ್ಕೆ ಕಾರಣವಿದ್ದು, ಸೃಷ್ಟನೆಯಾದ ಅಥವಾ ಬನಾವಣಿಯಾದ ಯಾವ ಕರೆನ್ಸಿ ನೋಟನ್ನಾಗಲಿ, ಬ್ಯಾಂಕ್ ನೋಟನ್ನಾಗಲಿ, ಇತರ ಯಾವನೊಬ್ಬ ಮನುಷ್ಯನಿಗೆ ಮಾರುತ್ತಾನೋ ಅಥವಾ ಅವನಿಂದ ಕೊಂಡುಕೊಳ್ಳುತ್ತಾನೋ, ಇಸುಕೊಳ್ಳುತ್ತಾನೋ, ಅಥವಾ ಇತರ ವಿಧವಾಗಿ ಅವುಗಳ ವ್ಯಾಪಾರ ಮಾಡುತ್ತಾನೋ ಅಥವಾ ವಾಸ್ತವಿಕವಾದದ್ದೆಂಬದಾಗಿ ಉಪಯೋಗಿಸುತ್ತಾನೋ ಅಂಥಾ ಮನುಷ್ಯನು ಯಾವಜ್ಜೀವವೂ ನೀರಿನಮೇಲೆ ಕಳುಹಿಸಲ್ಪಡುವದರ ಮೂಲಕವಾಗಿಯಾಗಲಿ, ಹತ್ತು ವರುಷಗಳ ವರಿಗೆ ವ್ಯಾಪಿಸಬಹುದಾದ ಒಂದು ವಾಯಿದೆ ಪರ್ಯಂತ ಯಾವದಾದರೂ ಒಂದುವಿಧದ ಕೈದಿನ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಟ್ಟು ಜುಲುಮಾನೆ ತೆರಲಿಕ್ಕೆ ಸಹಾ ಗುರಿಯಾಗತಕ್ಕದ್ದು.

ಸೃಷ್ಟನೆಯಾದ ಅಥವಾ ಬನಾವಣಿಯಾದ ಕರೆನ್ಸಿ ನೋಟನ್ನು ಅಥವಾ ಬ್ಯಾಂಕ್ ನೋಟನ್ನು ಸ್ವಾಧೀನದಲ್ಲಿಟ್ಟುಕೊಳ್ಳೋಣ.

" 489 C. ಯಾವನು, ಸೃಷ್ಟನೆಯಾದದ್ದು ಅಥವಾ ಬನಾವಣಿಯಾದದ್ದು ಎಂದು ತಿಳಿದು ಅಥವಾ ನಂಬಲಿಕ್ಕೆ ಕಾರಣವಿದ್ದು, ಸೃಷ್ಟನೆಯಾದ ಅಥವಾ ಬನಾವಣಿಯಾದ ಯಾವ ಕರೆನ್ಸಿ ನೋಟನ್ನು ಅಥವಾ ಬ್ಯಾಂಕ್ ನೋಟನ್ನು, ಅದು ವಾಸ್ತವಿಕವಾದದ್ದೆಂಬದಾಗಿ ಉಪಯೋಗಿಸುವ ಅಭಿಪ್ರಾಯದಿಂದ ಅಥವಾ ವಾಸ್ತವಿಕವಾದದ್ದೆಂಬದಾಗಿ ಉಪಯೋಗಿಸಲ್ಪಡಬಹುದೆಂಬ ಅಭಿಪ್ರಾಯದಿಂದ ಸ್ವಾಧೀನದಲ್ಲಿ ಇಟ್ಟುಕೊಂಡು ಇರುತ್ತಾನೋ ಅಂಥಾ ಮನುಷ್ಯನು ಏಳು ವರುಷಗಳ ವರಿಗೆ ವ್ಯಾಪಿಸಬಹುದಾದ ಒಂದು ವಾಯಿದೆ ಪರ್ಯಂತ ಯಾವದಾದರೂ ಒಂದು ವಿಧದ ಕೈದಿನ ಮೂಲಕವಾಗಿಯಾಗಲಿ, ಜುಲುಮಾನೆ ಮೂಲಕವಾಗಿಯಾಗಲಿ, ಇವೆರಡರ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಡತಕ್ಕದ್ದು.

ಕರೆನ್ಸಿ ನೋಟುಗಳನ್ನು ಅಥವಾ ಬ್ಯಾಂಕ್ ನೋಟುಗಳನ್ನು ಸೃಷ್ಟನೆ ಅಥವಾ ಬನಾವಣಿ ಮಾಡುವ ಬಗ್ಗೆ ಸಾಧನಗಳನ್ನು ಅಥವಾ ಸಾಮಗ್ರಿಗಳನ್ನು ಮಾಡೋಣ ಅಥವಾ ಸ್ವಾಧೀನದಲ್ಲಿ ಇಟ್ಟುಕೊಳ್ಳೋಣ.

" 489 D. ಯಾವನು, ಯಾವದಾದರೂ ಕರೆನ್ಸಿ ನೋಟನ್ನು ಅಥವಾ ಬ್ಯಾಂಕ್ ನೋಟನ್ನು ಸೃಷ್ಟನೆ ಅಥವಾ ಬನಾವಣಿ ಮಾಡುವದರಲ್ಲಿ ಉಪಯೋಗಿಸುವ ಬಗ್ಗೆ ಅಥವಾ ಉಪಯೋಗಿಸಲು ಉದ್ದೇಶಿಸಲ್ಪಟ್ಟಿದೆ ಎಂತ ತಿಳಿದು ಅಥವಾ ನಂಬಲಿಕ್ಕೆ ಕಾರಣವಿದ್ದು ಯಾವದೊಂದು ಯಂತ್ರ ಸಾಮಗ್ರಿ, ಸಾಧನ, ಅಥವಾ ಸಾಮಾನನ್ನು ಮಾಡುತ್ತಾನೋ ಅಥವಾ ಮಾಡುವ ಕೆಲಸವನ್ನು ಎಷ್ಟುಮಾತ್ರವನ್ನಾದರೂ ನಡಿಸುತ್ತಾನೋ ಅಥವಾ ಕೊಂಡುಕೊಳ್ಳುತ್ತಾನೋ ಅಥವಾ ವಿಕ್ರಯಿಸುತ್ತಾನೋ ಅಥವಾ ವಿನಿಯೋಗಿಸುತ್ತಾನೋ ಅಥವಾ ಸ್ವಾಧೀನದಲ್ಲಿ ಇಟ್ಟುಕೊಳ್ಳುತ್ತಾನೋ ಅಂಥಾ ಮನುಷ್ಯನು ಯಾವಜ್ಜೀವವೂ ನೀರಿನಮೇಲೆ ಕಳುಹಿಸಲ್ಪಡುವದರ ಮೂಲಕವಾಗಿಯಾಗಲಿ, ಹತ್ತು ವರುಷಗಳ ವರಿಗೆ ವ್ಯಾಪಿಸಬಹುದಾದ ಒಂದು ವಾಯಿದೆ ಪರ್ಯಂತ ಯಾವದಾದರೂ ಒಂದು ವಿಧದ ಕೈದಿನ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಟ್ಟು, ಜುಲುಮಾನೆ ತೆರಲಿಕ್ಕೆ ಸಹಾ ಗುರಿಯಾಗಿರತಕ್ಕದ್ದು.

34. ಸದರೀ ಕೋಡಿನ 505ನೇ ಪ್ರಕರಣವು ಈ ಮೂಲಕ ರದ್ದು ಮಾಡಲ್ಪಟ್ಟು ಅದರ ಬದಲಾಗಿ ಈ ಕೆಳಗೆ ಬರುವ ಪ್ರಕರಣವು ಇಡಲ್ಪಟ್ಟಿದೆ, ಯಾವದಂದರೆ :—

ಪ್ರಜಾಜನಕ್ಕೆ ಕೆಡಕನ್ನು ಉಂಟು ಮಾಡುವ ಹೇಳಿಕೆಗಳು.

" 505. ಯಾವನು,—

(a) ಮಹಿಮೆಯುಳ್ಳ ಶ್ರೀ ಮಹಾರಾಜ ಚಕ್ರವರ್ತಿಯವರ ದಂಡಿನಲ್ಲಿ ಅಥವಾ ನಾವೇದಂಡಿನಲ್ಲಿ ಅಥವಾ ರೋಯಲ್ ಇಂಡಿಯನ್ ಮೆರೀನ್ ಎಂಬ ನಾವೇ ದಂಡಿನಲ್ಲಿ ಅಥವಾ ಇಂಪೀರಿಯಲ್ ಸರ್ವಿಸ್ ಟ್ರೂಪ್ಸ್ ಎಂಬ ದಂಡಿನಲ್ಲಿ ಇರುವ ಯಾವನೊಬ್ಬ ಆಫಿಸರನನ್ನು, ಸೋಲ್ಜರನನ್ನು ಅಥವಾ ಸೈಲರನನ್ನು ಸರ್ಕಾರದವರ ಮೇಲೆ ತಿರಿಗಿ ಬೀಳುವಹಾಗೆ ಅಥವಾ ಆತನ ಉದ್ಯೋಗ ಪ್ರಯುಕ್ತವಾದ ಕೆಲಸವನ್ನು ಅನ್ಯಥಾ ಅಲಕ್ಷಿಸುವ ಅಥವಾ ನಡಿಸದಹಾಗೆ ಮಾಡಬೇಕೆಂಬ ಅಭಿಪ್ರಾಯದಿಂದ ಅಥವಾ ಹಾಗೆ ಮಾಡುವ ಸಂಭವವುಳ್ಳ ; ಅಥವಾ

(b) ಸರ್ವ ಜನರಿಗೆ ಅಥವಾ ಅವರ ಪೈಕಿ ಒಂದು ಭಾಗದವರಿಗೆ ಭಯವನ್ನು ಅಥವಾ ದಿಗಿಲನ್ನು ಹುಟ್ಟಿಸಿ ತದ್ವಾರಾ ಒಬ್ಬನಿಂದ ಸರಕಾರದವರಿಗೆ ವಿರೋಧವಾದ ಅಥವಾ ಜನಗಳ ನೆಮ್ಮದಿಗೆ ವಿರೋಧವಾದ ಅಪರಾಧವನ್ನು ಮಾಡಿಸಬೇಕೆಂಬ ಅಭಿಪ್ರಾಯದಿಂದ ಅಥವಾ ಹಾಗೆ ಮಾಡಿಸುವ ಸಂಭವವುಳ್ಳ ; ಅಥವಾ

(c) ಒಂದು ಜಾತಿ ಅಥವಾ ಸಮಾಜದ ಜನರು ಇನ್ನೊಂದು ಜಾತಿಯ ಅಥವಾ ಸಮಾಜದವರ ಮೇಲೆ ಯಾವದೊಂದು ಅಪರಾಧವನ್ನು ನಡಿಸುವಂತೆ ಅವರನ್ನು ಪ್ರೇರೇಪಿಸುವ ಅಭಿಪ್ರಾಯದಿಂದ ಅಥವಾ ಹಾಗೆ ಪ್ರೇರೇಪಿಸುವ ಸಂಭವವುಳ್ಳ ಯಾವದೊಂದು (ಹೇಳಿಕೆ) ವರ್ತಮಾನವನ್ನು, ಸುದ್ದಿಯನ್ನು ಅಥವಾ ವದಂತಿಯನ್ನು ಕೊಡುತ್ತಾನೊ ಅಥವಾ ಬಹಿರಂಗ ಪಡಿಸುತ್ತಾನೊ ಅಥವಾ ಘಾಯಿಷ್ ಮಾಡುತ್ತಾನೊ ಅಂಥಾ ಪ್ರತಿ ಮನುಷ್ಯನು ಎರಡು ವರುಷಗಳ ವರೆಗಿನ ಕೈದಿನ ಮೂಲಕವಾಗಿಯಾಗಲಿ, ಜುಲುಮಾನೆಯ ಮೂಲಕವಾಗಿಯಾಗಲಿ, ಇವೆರಡರ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಡತಕ್ಕದ್ದು.

"ವಿನಹಾಯಿತಿ.—ಅಂಥಾ ಯಾವದೊಂದು ವರ್ತಮಾನವನ್ನು, ಸುದ್ದಿಯನ್ನು ಅಥವಾ ವದಂತಿಯನ್ನು ಕೊಡುವ, ಬಹಿರಂಗಪಡಿಸುವ ಅಥವಾ ಘಾಯಿಷ್ ಮಾಡುವ ಮನುಷ್ಯನಿಗೆ ಅಂಥಾ ವರ್ತಮಾನವು, ಸುದ್ದಿಯು ಅಥವಾ ವದಂತಿಯು ನಿಜವಾದದ್ದೆಂತ ನಂಬಲಿಕ್ಕೆ ನ್ಯಾಯವಾದ ಕಾರಣಗಳಿದ್ದು ಮೇಲೆ ನಮೂದಿಸಲ್ಪಟ್ಟ ಯಾವದೊಂದು ಅಭಿಪ್ರಾಯ ಇಲ್ಲದೇನೆ ಅದನ್ನು ಕೊಟ್ಟರೆ, ಬಹಿರಂಗ ಪಡಿಸಿದರೆ ಅಥವಾ ಘಾಯಿಷ್ ಮಾಡಿದರೆ ಅದು ಈ ಪ್ರಕರಣದ ಅರ್ಥಕ್ಕೊಳಪಡುವ ಒಂದು ಅಪರಾಧವಾಗುವದಿಲ್ಲ."

ಈ ರೆಗ್ಯುಲೇಷನಿನ ಆರಂಭ.

35. ಈ ರೆಗ್ಯುಲೇಷನ್ 1904ನೇ ವರುಷದ ಏಪ್ರಿಲ್ ಮೊದಲನೇ ದಿವಸದಿಂದ ಜಾರಿಗೆ ಬರತಕ್ಕದ್ದು.

ಪಿ. ಎನ್. ಕೃಷ್ಣಮೂರ್ತಿ,
ಮೈಸೂರು ದಿವಾನರು.

ಮೈಸೂರ ಗೆಜೆಟ್.

ಸಂ. 39. ಸರ್ಕಾರದಿಂದ ಛಾಪಿಸಲ್ಪಟ್ಟ ಆಜ್ಞು. ನಂ. 21.

ಬೆಂಗಳೂರು, ಗುರುವಾರ, ಮೇ ತಾ|| 26, ಸನ್ 1904.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ನಂಬರ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ ಆಫೀಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಯಜ್ಯುಕೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫೀಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರಗ್ಯುಲೇಷನಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದಪತ್ರಗಳು — ಇಲ್ಲಾ.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 5ನೆ ಮೇ 1904.

ನಂ. ಲೋ. ಬೋ. ಪಿ. 1398, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರುವರಿ 10ನೆ ಮಾರ್ಕು 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರಗ್ಯುಲೇಷನಗಳ ಉದ್ದೇಶಗಳಿಗೋಸ್ಕರ ಮೈಸೂರು ವ ಕಡೂರು ಡಿಸ್ಟ್ರಿಕ್ಟುಗಳಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು.

ಮೈಸೂರು ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
ಐರಹಳ್ಳಿ ..	ಹುಣಸೂರು	ದೊಡ್ಡ ಅರಸಿನಕೆರೆ ...	ಮಳವಳ್ಳಿ
ಚಿಕ್ಕದ್ಯಾವನಹಳ್ಳಿ ..	ಡಿಟೋ	ಶ್ರೀನಿವಾಸಪುರದ ಅಗ್ರಹಾರ ...	ಶ್ರೀರಂಗಪಟ್ಟಣ
ಹುಲ್ಲಂಬಳ್ಳಿ ..	ಮಳವಳ್ಳಿ		

ಕಡೂರು ಡಿಸ್ಟ್ರಿಕ್ಟು.

ಹಿರೆಮಗಳೂರು ..	ಚಿಕ್ಕಮಗಳೂರು	ಗೌರಾಪುರ ...	ತರೀಕೆರೆ
ಬೀಕನಹಳ್ಳಿ ..	ಡಿಟೋ		

ತಾರೀಖು 7ನೆ ಮೇ 1904.

ನಂ. ಲೋ. ಬೋ. ಪಿ. 1408, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ರೋಗ ತಗಲಿದ ಪ್ರದೇಶಗಳಾಗಿ ಆಗಿಂದಾಗ್ಗೆ ಪ್ರಸಿದ್ಧಪಡಿಸಲ್ಪಟ್ಟ ಇದರಡೀ ಕಂಡ ಸ್ಥಳಗಳು ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ.

ಹಾಸನ ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
ಚಿನ್ನಯಿನಹಳ್ಳಿ ...	ಬೇಲೂರು	ಶಿಂಗಟಗೆರೆ ...	ಅರಸೀಕೆರೆ
ಕಾನ್ನಿಘಟ್ಟಹಳ್ಳಿ ..	ಅರಸೀಕೆರೆ	ಸೂರನಹಳ್ಳಿ ...	ಹೊಳೇನರಸೀಪುರ

ತಾರೀಖು 7ನೆ ಮೇ 1904.

ನಂ. ಲೋ. ಬೋ. ಪಿ. 1410, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ರೋಗ ತಗಲಿದ ಪ್ರದೇಶಗಳಾಗಿ ಆಗಿಂದಾಗ್ಗೆ ಪ್ರಸಿದ್ಧ ಪಡಿಸಲ್ಪಟ್ಟ ಇದರಡೀ ಕಂಡ ಸ್ಥಳಗಳು ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ :—

ಚಿತ್ರದುರ್ಗ ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
ಆವರಗೆರೆ	ದಾವಣಗೆರೆ	ಹನಗವಾಡಿ ..	ಹರಿಹರ ಸಬ್ ತಾಲ್ಲೂಕು
ಬಿಳಚೋಡಿ	ಜಗಳೂರು		

ತಾರೀಖು 17ನೆ ಮೇ 1904.

ನಂ. ಲೋ. ಬೋ. ಪಿ. 1439, ಕೋಲಾರ ಡಿಸ್ಟ್ರಿಕ್ಟು ಶಿಡ್ಲಘಟ್ಟ ತಾಲ್ಲೂಕಿನ ಸಾದಲಿಯಲ್ಲಿ ನಡೆಯುವ ಗ್ರಾಮ ಜಾತ್ರೆಯ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳದಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ, ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದ, 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು 1904ನೆ ಜೂನ್ 17ರ ಲಾಗಾಯತು 18ರ ವರಿವಿಗೆ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಕ್ಕೆ ಬರುವದನ್ನು ಅಸ್ವೀಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ಜಾತ್ರೆಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 18ನೆ ಮೇ 1904.

ನಂ. 4483—ಲೋ. ಫಂ. 81–03, ಸನ್ 1902ನೆ ಇಸವಿಯ IIನೆ ನಂಬರ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ಮತ್ತು 1903ನೆ ಸಪ್ಟಂಬರ್ 9ನೆ ಮುರ್ಕಂ 30—ಲೆಜಿಸ್. 4–03ನೆ ನಂಬರ ಇಸ್ತಿಹಾರ್ನಾಮೆಯೊಡನೆ ಪ್ರಾಯಿಷಾದ ರೂಲುಗಳ 21ನೆ ಪ್ಯಾರಾ ಅನುಸರಿಸಿ, ಸದರೀ ರೂಲುಗಳ 7ನೆ ಪ್ಯಾರಾವಿನಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಶಿವಮೊಗ್ಗ ಮತ್ತು ತೀರ್ಥಹಳ್ಳಿ ತಾಲ್ಲೂಕು ಬೋರ್ಡುಗಳ ಇದರಡೀ ಕಂಡ ಮೆಂಬರುಗಳ ಪಟ್ಟಿಯು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಾಯಿಷ್ಯಾಡಲ್ಪಟ್ಟಿರುತ್ತೆ :—

ಶಿವಮೊಗ್ಗ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು .. ... ಪ್ರೆಸಿಡೆಂಟರು.
2. ಅಮಲ್ದಾರರು .. .. ವೈಸ್ ಪ್ರೆಸಿಡೆಂಟರು.
3. ಶಿವಮೊಗ್ಗೆಯಲ್ಲಿರುವ ಸಿವಿಲ್ ಡಿಸ್ಪೆನ್ಸರಿ ಚಾರ್ಜಿನಲ್ಲಿರುವ ಮೆಡಿಕಲ್ ಆಫೀಸರು ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು .. ಡಿಟೋ

ಇತರ ಮೆಂಬರುಗಳು.

(e) ಕ್ಲಾಜು ಅನುಸರಿಸಿ.

5. ಮೆ|| ಹಿರಿಯೂರು ಶ್ಯಾನಭೋಗ ನಂಜಪ್ಪನವರು, ಶಾನಭೋಗರು .. ಡಿಟೋ
6. ,, ನಾಡಿಗ ಶಂಕರಪ್ಪನವರು, ಪಟೇಲರು .. .. ಡಿಟೋ
7. ,, ಗರ್ಜಿನ ಮಲ್ಲಪ್ಪಯ್ಯನವರು, ಡಿಟೋ .. ಡಿಟೋ
8. ,, ಕೆರೋಡಿ ರಾಮರಾಯರು, ಪ್ಲೀಡರು .. .. ಡಿಟೋ

883

(*f*) ಕ್ಲಾಜು ಅನುಸರಿಸಿ.

9. ಮ|| ಸೈಯದ್ ಮೊಹರ್ದೀನ್ ಸಾಹೇಬರು, ಜಮೀನ್ದಾರು .. ಮೆಂಬರು.

(*g*) ಕ್ಲಾಜು ಅನುಸರಿಸಿ.

10. ,, ಶಾನಭೋಗ ಬಸಪ್ಪನವರು, ಜಮೀನ್ದಾರು .. ಡಿಟೋ

11. ,, ಚನ್ನಗಿರಿ ರಾಮಣ್ಣನವರು, ಜಮೀನ್ದಾರು ಮತ್ತು ಸಾಹುಕಾರು .. ಡಿಟೋ

12. ,, ಎ. ಕೃಷ್ಣಸ್ವಾಮಿ ರಾಯರು, ಜಮೀನ್ದಾರು ಮತ್ತು ಶಿವಮೊಗ್ಗ ಡೆಪ್ಯುಟಿ ಕಮಿಷನರವರ ಆಫೀಸಿನ ಆಕ್ಟಿಂಗ್ ಜುಡಿಷಿಯಲ್ ಹೆಡ್ ಮುನ್ಷೀರು. ಡಿಟೋ

ತೀರ್ಥಹಳ್ಳಿ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು ... .. ಪ್ರೆಸಿಡೆಂಟರು.
2. ಅಮಲ್ದಾರು ... . ವೈಸ್ ಪ್ರೆಸಿಡೆಂಟರು.
3. ತೀರ್ಥಹಳ್ಳಿಯಲ್ಲಿರುವ ಲೋಕಲ್ ಫಂಡ್ ಡಿಸ್ಪೆನ್ಸರಿ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು. .. .. ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫೀಸರು .. .. ಡಿಟೋ

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

5. ಮ|| ಹರದಗದ್ದೆ ಪುಟ್ಟನಾಯಕರು, ಜಮೀನ್ದಾರು ಮತ್ತು ಪಟೇಲರು .. ಡಿಟೋ

6. ,, ಭಾಂಡ್ಯದ ಶಿವಪ್ಪಗೌಡರು, ಜಮೀನ್ದಾರು ಮತ್ತು ಸಾಹುಕಾರು .. ಡಿಟೋ

7. ,, ಮಲಿಗೆ ಪರಮೇಶ್ವರಯ್ಯನವರು, ಡಿಟೋ ಡಿಟೋ .. ಡಿಟೋ

8. ,, ಮೇಗಾರವಳ್ಳಿ ಅಪ್ಪಾಭಟ್ಟರು, ಡಿಟೋ ಡಿಟೋ .. ಡಿಟೋ

(*f*) ಕ್ಲಾಜ್ ಅನುಸರಿಸಿ.

9. ,, ಉಂಡಿಪ ರಾಘವಾಚಾರು, ಜಮೀನ್ದಾರು .. .. ಡಿಟೋ

(*g*) ಕ್ಲಾಜ್ ಅನುಸರಿಸಿ.

10. ,, ಹುಮಚದಕಟ್ಟೆ ರಾಮರಾಯರು, ಜಮೀನ್ದಾರು ಮತ್ತು ಸಾಹುಕಾರು ಡಿಟೋ

11. ,, ಚಾವಲಿ ಮಂಜಪ್ಪನವರು, ಡಿಟೋ ಡಿಟೋ .. ಡಿಟೋ

12. ,, ಕಿಟ್ಟಂದೂರು ತಿಮ್ಮಣ್ಣ ಭಟ್ಟರು, ಡಿಟೋ ಡಿಟೋ .. ಡಿಟೋ

ತಾರೀಖು 20ನೆ ಮೇ 1904.

ನಂ. ಜ. 5827—ಎಜ್ಯು., ಇದರಡೀ ಕಂಡ ದೊಡ್ಡಮನುಷ್ಯರುಗಳುಳ್ಳ ಒಂದು ಕಮಿಟಿಯು ಚಿತ್ರದುರ್ಗದಲ್ಲಿರುವ ಸರ್ಕಾರಿ ಕಸಬು ಕಲಿಸುವ ಶಾಲೆಯ ಮೇಲ್ವಿಚಾರಣೆ ಬಗ್ಯೆ ಸ್ಥಾಪಿಸಲ್ಪಡುವ ತಾರೀಖಿನಾರಭ್ಯ ಮೊಕರರ್ಮಾಡಲ್ಪಡತಕ್ಕದ್ದು:—

ಪ್ರೆಸಿಡೆಂಟರು.

ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರು.

ಮೆಂಬರುಗಳು.

1. ಡಿವಿಜನಿನ ಎಕ್ಸಿಕ್ಯೂಟಿವ್ ಇಂಜನಿಯರು.
2. ಹೈಸ್ಕೂಲಿನ ಹೆಡ್ ಮಾಸ್ಟರು.
3. ಸಬಾರ್ಡಿನೇಟ್ ಜಡ್ಜಿರು.
4. ಹೆಡ್ ಕ್ವಾರ್ಟರಿನ ಸೀನಿಯರ್ ಅಸಿಸ್ಟೆಂಟ್ ಕಮಿಷನರು.
5. ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರು.
6. ಮ|| ಬಿ. ಕೃಷ್ಣರಾಯರು, ಅಡ್ವೋಕೇಟರು.
7. ,, ಸಿ. ಚನ್ನಕೇಶವಯ್ಯನವರು, ಪ್ಲೀಡರು.
8. ,, ಸಿ. ರಾಘವೇಂದ್ರರಾಯರು.

ತಾರೀಖು 20ನೆ ಮೇ 1904.

ನಂ. 4542—ಲೋ. ಫಂ. 91-96, ಸನ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನ್ 6ನೆ ಸೆಕ್ಷನಿನ ನಿಯಮಗಳನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನೆಂದರೆ, ಇದರಡೀ ಕಂಡ ಕಟ್ಟಡಗಳು ಮತ್ತು ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಜಗಳೂರು ಮ್ಯುನಿಸಿಪಾಲಿಟಿಯ ರಾಮದೇವರ ದೇವಸ್ಥಾನದ ಮುಂದಗಡೇಲಿ ರಸ್ತೆಯನ್ನು ಬಿಡಾಯಿಸುವ ಬಗ್ಗೆ ಬೇಕಾಗಿರುತ್ತವೆ:—

ಮ್ಯುನಿಸಿಪಾಲಿಟಿಯ ಹೆಸರು.	ಮಾಲೀಕರ ಹೆಸರು.	ಜಮೀನು ಯಾ ಕಟ್ಟಡದ ವಿವರ.	ಕಟ್ಟಡಗಳ ನಂಬರು.	ಬೇಕಾಗಿರುವ ವಿಸ್ತೀರ್ಣ ಗಜಗಳು.			ಚೆಕ್ಕುಬಂದಿ.			
				ಉದ್ದ	ಅಗಲ	ಚದರ ಗಜಗಳು.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಜಗಳೂರು.	ಮಾಲೇನಹಳ್ಳಿ ಕಲ್ಲಪ್ಪ ...	ಮನೆ	331	3	7	21	ರಸ್ತೆ	ಚೆನ್ನ ಕೇಶವ ದೇವರ ದೇವಸ್ಥಾನ	ಖಾಲಿ ಜಮೀನು	ಮಾಲೀಕರ ಮನೆ
	ಡಿಟ್ಟೋ ...	ಡಿಟ್ಟೋ	330	9	18	162	ಡಿಟ್ಟೋ	ಪಾಪಗನ ಮನೆ	ಕಲ್ಲಪ್ಪನ ಮನೆ	ಅಡ್ಡ ರಸ್ತೆ
	ಸಕ್ಕರ ತಿಮ್ಮಯ್ಯ ...	ಡಿಟ್ಟೋ	324	3	13	39	ಡಿಟ್ಟೋ	ದಾಸರ ತಿಮ್ಮಯ್ಯನ ಮನೆ	ಅಡ್ಡ ರಸ್ತೆ	ಸಾಹುಕಾರ ಚೆನ್ನಪ್ಪನ ಮನೆ
	ದಾಸರ ತಿಮ್ಮಯ್ಯ ...	ಡಿಟ್ಟೋ	325	5	11	55	ಸಕ್ಕರ ತಿಮ್ಮಯ್ಯನ ಮನೆ	ಸಾಹುಕಾರ ಚೆನ್ನಪ್ಪನ ಮನೆ	ಡಿಟ್ಟೋ	ಡಿಟ್ಟೋ
	ಸಾಹುಕಾರ ಚೆನ್ನಪ್ಪ ...	ಡಿಟ್ಟೋ	323	5	16	80	ಮಾಲೀಕರ ಮನೆ	ಮಾರಿಗಪ್ಪನ ಮನೆ	ಡಿಟ್ಟೋ	ಸಣ್ಣ ಈರಪ್ಪನ ಮನೆ
	ಡಿಟ್ಟೋ ...	ಡಿಟ್ಟೋ	323	5	14	70	ರಸ್ತೆ	ಮಾಲೀಕರ ಮನೆ	ಸಕ್ಕರ ತಿಮ್ಮಪ್ಪನ ಮನೆ	ಮಾಲೀಕರ ಮನೆ
	ಡಿಟ್ಟೋ ...	ಡಿಟ್ಟೋ	313	10	11	110	ಸಣ್ಣ ಈರಪ್ಪನ ಮನೆ	ಸಣ್ಣ ಈರಪ್ಪನ ಮನೆ	ಮಾಲೀಕರ ಮನೆ	ರಾಮಚಂದ್ರಪ್ಪನ ಮನೆ
	ರಾಮಚಂದ್ರಪ್ಪ ...	ಡಿಟ್ಟೋ	312	3	6	18	ಡಿಟ್ಟೋ	ಡಿಟ್ಟೋ	ಡಿಟ್ಟೋ	ಅಡ್ಡ ರಸ್ತೆ
	ಡಿಟ್ಟೋ ...	ಖಾಲಿಜಮೀನು	311	4	6	24	ವೆಂಕಟಪ್ಪನ ಮನೆ	ಹೊಂಗೆ ಕೊಟ್ರಬಸಪ್ಪನ ಮನೆ	ಅಡ್ಡ ರಸ್ತೆ	ಹೊಂಗೆ ಕೊಟ್ರಬಸಪ್ಪನ ಮನೆ
	ಹೊಂಗೆ ಕೊಟ್ರ ಬಸಪ್ಪ ..	ಡಿಟ್ಟೋ	315	10	13	130	ಗೊಂಚಿಗಾರ ತಿಮ್ಮನ ಮನೆ	ಡಿಟ್ಟೋ	ಡಿಟ್ಟೋ	ಹನುಮಂತಯ್ಯನ ಮನೆ
	ಬಂಡ್ಲ ದೊಡ್ಡತಿಮ್ಮಯ್ಯ ...	ಮನೆ	2920	1½	11	16½	ಬಾಬಯ್ಯನ ಮನೆ	ಡಿಟ್ಟೋ	ವೆಂಕಟಪ್ಪನ ಮನೆ	ತಿಮ್ಮಯ್ಯನ ಮನೆ
	ಬಂಡ್ಲ ತಿಮ್ಮಯ್ಯ ...	ಡಿಟ್ಟೋ	291ವ293	1½	13	19½	ಡಿಟ್ಟೋ	ಹನುಮಂತಯ್ಯನ ಮನೆ	ದೊಡ್ಡತಿಮ್ಮಯ್ಯನ ಮನೆ	ಅಡ್ಡ ರಸ್ತೆ
	ಕರಿಯಣ್ಣ ಹನುಮಂತ ...	ಡಿಟ್ಟೋ	280ವ281	5	6	30	ತಿಮ್ಮಯ್ಯನ ಮನೆ	ಡಿಟ್ಟೋ	ಹೊಂಗೆ ಕೊಟ್ರಬಸಪ್ಪನ ಮನೆ	ಹನುಮಂತಯ್ಯನ ಮನೆ
	ಕುರುಬರ ದೊಡ್ಡನಾಗ ...	ಡಿಟ್ಟೋ	282	8	8	64	ವೆಂಕಟಪ್ಪನ ಮನೆ	ತಿಮ್ಮಯ್ಯನ ಮನೆ	ಅಡ್ಡ ರಸ್ತೆ	ಸಣ್ಣನಾಗನ ಮನೆ
	ಮೊಸಲಪ್ಪನ ತಿಮ್ಮಯ್ಯನ ಮನೆ.	ಡಿಟ್ಟೋ	279	2	18	36	ದೊಡ್ಡನಾಗನ ಮನೆ	ಕೊಟ್ರವ್ವನ ಮನೆ	ಡಿಟ್ಟೋ	ಯಲ್ಲಪ್ಪನ ಮನೆ
	ಕುರುಬರ ದೊಡ್ಡನಾಗ ...	ಡಿಟ್ಟೋ	282	13	9	117	ವೆಂಕಣ್ಣಯ್ಯನ ಮನೆ	ತಿಮ್ಮಯ್ಯನ ಮನೆ	ದೊಡ್ಡನಾಗನ ಮನೆ	ಗಾಣಪ್ಪನ ರುದ್ರಪ್ಪನ ಮನೆ
	ಗಾಣಪ್ಪನ ರುದ್ರ ...	ಡಿಟ್ಟೋ	284	4	6	24	ನಿಂಗನ ಮನೆ	ಮರಿನಿಂಗನ ಮನೆ	ಸಣ್ಣನಾಗನ ಮನೆ	ನರಸವ್ವನ ರುದ್ರನ ಮನೆ
	ಕುರುಬರ ಮರಿನಿಂಗ ...	ಖಾಲಿಜಮೀನು	283	2	17	34	ರುದ್ರನ ಮನೆ	ತಿಮ್ಮಯ್ಯನ ಮನೆ	ಡಿಟ್ಟೋ	ಯಲ್ಲಪ್ಪನ ಮನೆ
	ನರಸವ್ವನ ರುದ್ರ ...	ಮನೆ	285	6	8	48	ವೆಂಕಟಮ್ಮನ ಮನೆ	ಮರಿನಿಂಗನ ಮನೆ	ನಿಂಗನಮಗಳು ನಿಂಗಿಯ ಮನೆ	ಪಾಪಣ್ಣನ ಮನೆ
	ನಿಂಗಿಯಮಗಳು ನಿಂಗಿ ...	ಖಾಲಿಜಮೀನು	236	4	17	68	ಡಿಟ್ಟೋ	ರುದ್ರನ ಮನೆ	ಅಡ್ಡ ರಸ್ತೆ	ನರಸವ್ವನ ರುದ್ರನ ಮನೆ
	ಗೊಂಚಿಗರ ಹೂಳೆಪ್ಪ	ಡಿಟ್ಟೋ	459	8	19	152	ಸಣ್ಣಬಸಪ್ಪನ ಜಮೀನು	ಯಲ್ಲಪ್ಪನ ಮನೆ	ನರಸವ್ವನ ರುದ್ರ	ಅಡ್ಡ ರಸ್ತೆ
	ಬರಿಕಾರ ಪಾಪಗ ..	ಮನೆ	460	2	8	16	ರಸ್ತೆ	ಮಾಲೀಕರ ಅಂಗಳ	ಅಡ್ಡ ರಸ್ತೆ	ಖಾಲಿ ಜಮೀನು

ತಾರೀಖು 23ನೆ ಮೇ 1904.

ನಂ. ಜ. 5853, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಅಸಿಸ್ಟೆಂಟ್ ಸರ್ಜನ್ ಸೂಪರಿಂಟೆಂಡೆಂಟರಾದ ಮ|| ಟಿ. ಲಕ್ಷ್ಮೀನರಸಿಂಹಯ್ಯನವರಿಗೆ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 24ನೆ ಮೇ 1904.

ನಂ. 2513—ಜಾ. ಕ್ಷೈ. 11-99-00, ಕೋಲಾರ ಗೋಲ್ಡ್ ಫೀಲ್ಡ್ಸ್‌ಗಳ ಪೋಲೀಸು ಸುಪರಿಂಟೆಂಡೆಂಟರಾದ ಮ|| ಬಿ. ಬಿ. ಫ್ರಾಂಸಿಸ್ ರವರಿಗೆ 1904ನೆ ಮೇ 7ನೆ ತಾರೀಖು 231—ಜ. ಕೇ. ನಂಬರ್ ಗವರ್ನ್ಮೆಂಟಿನ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 1 ತಿಂಗಳ ಪ್ರಿವಿಲೇಜ್ ರಜಾ ಇನ್ನೂ 2 ವಾರಗಳು ಅದರಿಂದ ಜಾಸ್ತಿ ಮಾಡಲ್ಪಟ್ಟಿರುತ್ತೆ.

ತಾರೀಖು 24ನೆ ಮೇ 1904.

ನಂ. 4571—ಲೋ. ಫಂ. 148-03, ಮ|| ಡಿ. ದೇವರಾಜ್ ಅರಸಿನವರು 1904ನೆ ಮೇ 11ನೆ ತಾರೀಖಿನ ಪೂರ್ವಾಹ್ನದಲ್ಲಿ ಬೆಂಗಳೂರು ಸಿವಿಲ್ ಮ್ಯುನಿಸಿಪಾಲಿಟಿ ಕಮೀಷನರುಗಳ ಪ್ರೆಸಿಡೆಂಟರವರ ಆಫೀಸಿನ ಚಾರ್ಜನ್ನು ಮ|| ವೈ. ಎಸ್. ನಾಗವೇಕರ್ ರವರಿಗೆ ಒಪ್ಪಿಸಿರುತ್ತಾರೆ.

ತಾರೀಖು 24ನೆ ಮೇ 1904.

ನಂ. 5889, ಎರಡನೇ ಕೌನ್ಸಿಲರಾದ ಮ|| ರಾವ್ ಬಹದೂರ್ ಸಿ. ಮಾಧವಯ್ಯನವರಿಗೆ 1904ನೆ ಮಾರ್ಚಿ 16ನೆ ತಾರೀಖು ಜ. 4626ನೆ ನಂಬರು ಗವರ್ನ್ಮೆಂಟಿನ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 2½ ತಿಂಗಳುಗಳ ಪ್ರಿವಿಲೇಜ್ ರಜಾ ಇನ್ನೂ 15 ದಿನಗಳು ಅದರಿಂದ ಜಾಸ್ತಿ ಮಾಡಲ್ಪಟ್ಟಿರುತ್ತೆ.

2. ಮ|| ರಾವ್ ಬಹದೂರ್ ಸಿ. ಮಾಧವಯ್ಯನವರು ರಜಾದಲ್ಲಿರುವ ಕಾಲದಲ್ಲಿ ಯಾ [illegible] ಹುಕುಂ ಕೊಡುವ [illegible] ಮೇಲ್ಕಂಡ ಇಸ್ತಿಹಾರ್ನಾಮೆಯಲ್ಲಿ ನಮೂದು ಮಾಡಲ್ಪಟ್ಟ ಆಫಿಸಿಂಗ್ ಏರ್ಪಾಟುಗಳಂತೆಯೇ ಇರತಕ್ಕದ್ದು.

ತಾರೀಖು 17ನೆ ಮೇ 1904.

ನಂ. ರೆ. 3489, ಸನ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನೆಂದರೆ, ಇದರಡಿ ವಿವರಿಸಲ್ಪಟ್ಟ ಜಮೀನು ಸರ್ಕಾರದ ಕೆಲಸಕ್ಕೆ ಅಂದರೆ, ಹೆಗ್ಗಡದೇವನಕೋಟೆ ತಾಲ್ಲೂಕು ಭೀಮನಹಳ್ಳಿ ಗ್ರಾಮದಲ್ಲಿ ಅಗ್ರಿಕಲ್ಚರ್ ಫಾರ್ಮ್‌ಗೋಸ್ಕರ ಬೇಕಾಗಿರುತ್ತೆ. ಮತ್ತು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು—ಮೈಸೂರು.
ತಾಲ್ಲೂಕು—ಹೆಗ್ಗಡದೇವನಕೋಟೆ.
ಗ್ರಾಮ—ಭೀಮನಹಳ್ಳಿ.
ವಹಿವಾಟುದಾರರ ಹೆಸರು—ನಾಗಪ್ಪ.

ಜಮೀನಿನ ತಪಶೀಲು—ಖುಷ್ಕಿ ಜಮೀನು ಸರ್ವೆ ನಂ. 36.
ಬೇಕಾಗಿರುವ ವಿಸ್ತೀರ್ಣ—ಒಂದು ಎಕರೆ 17 ಗುಂಟೆಗಳು.
ಚಕ್ಕುಬಂದಿ—ಪೂರ್ವಕ್ಕೆ ಸರ್ವೆ ನಂ. 36, ಪಶ್ಚಿಮಕ್ಕೆ—ಹುಣಸೂರು—ಬೇಗೂರು ರಸ್ತೆ, ಉತ್ತರಕ್ಕೆ—ಸರ್ವೆ ನಂ. 35, ದಕ್ಷಿಣಕ್ಕೆ—ಸರ್ವೆ ನಂ. 37.

ತಾರೀಖು 17ನೆ ಮೇ 1904.

ನಂ. ರೆ. 3472, ಸನ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನೆಂದರೆ, ಇದರಡಿ ವಿವರಿಸಲ್ಪಟ್ಟ ಜಮೀನು ಸರ್ಕಾರದ ಕೆಲಸಕ್ಕೆ ಅಂದರೆ, ಬೆಂಗಳೂರು—ಮಂಗಳೂರು ರಸ್ತೆ ಮತ್ತು ಆನೆಮಹಲ್—ಮುದ್ಗೆರೆ ರಸ್ತೆ ಗೋಸ್ಕರ ಜಲ್ಲಿ ತೆಗೆಯುವ ಗಣಿ ಬಗ್ಗೆ ಬೇಕಾಗಿರುತ್ತೆ. ಮತ್ತು ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರವರು ಮೇಲ್ಕಂಡ ರೆಗ್ಯುಲೇಷನಿನ 3 (ಬಿ) ವ 7ನೆ ಸೆಕ್ಷನುಗಳನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ವಹಿವಾಟುದಾರರ ಹೆಸರು.	ಸರ್ವೆ ನಂ.		ವಿಸ್ತೀರ್ಣ.	ಕಂದಾಯ.	ಬೇಕಾಗಿರುವ ಜಮೀನಿನ ಭಾಗ.		ಚಕ್ಕುಬಂದಿ.			
				ನಂಬರು.	[illegible]			ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಹಾಸನ	ಮಂಜರಾಬಾದು	[illegible]	[illegible]	12	[illegible]	ಎ. ಗುಂ. 23—33	ರೂ. ಆ. ಪೈ. 11—0—0	ಎ. ಗುಂ. 0—13	ರೂ. ಆ. ಪೈ. 0—6—0	[illegible]	ಸರ್ವೆ ನಂ. 20 ಮತ್ತು 21	ಸರ್ವೆ ನಂ. 9, 10 ಮತ್ತು 11	[illegible]

ತಾರೀಖು 17ನೆ ಮೇ 1904.

ನಂ. ರೆ. 3493, ಸ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ ನಂಜನಗೂಡು—ಹಸನೂರು ಘಾಟ್ ರಸ್ತೆಯಲ್ಲಿ ಗ್ರಾವಲ್ ತೆಗೆಯುವ ಗಣಿಗಳಿಗೋಸ್ಕರ ಬೇಕಾಗಿರುತ್ತವೆ. ಮೈಸೂರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರರ ಹೆಸರು.	ಬೇಕಾಗಿರುವ ಜಮೀನಿನ ತಪಶೀಲು		ಚಕ್ಕುಬಂದಿ.				ಷರಾ.
					ಸರ್ವೆ ನಂ.	ವಿಸ್ತೀರ್ಣ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	
ಮೈಸೂರು	ನಂಜನಗೂಡು	ಕಸಬಾ	ಗೂಳೂರು	1. ಕಾಳನ ಮಗ ನಂಜ 2. ಸಿದ್ಧನ ಹೆಂಡತಿ ಅಂಕಿ 3. ಮಾದನ ದತ್ತು ಮಗ ಮರಿಯ	19ರ (ಭಾಗ)	ಎ. ಗುಂ. 0—25	ಸರ್ವೆ ನಂ. 20	ಸರ್ವೆ ನಂ. 18	ಸರ್ವೆ ನಂ. 19ರ ಮಿಕ್ಕ ಭಾಗ	ಚಾಮರಾಜನಗರ ರಸ್ತೆ	

ತಾರೀಖು 18ನೆ ಮೇ 1904.

ನಂ. ರೆ. 3511, ಸ್1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಗಾಂಠಾಣ ಯಾ ಗ್ರಾಮವನ್ನು ಉಂಟುಮಾಡಲಿಕ್ಕೆ ಬೇಕಾಗಿರುತ್ತದೆ. ಮತ್ತು ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಆಫಿಸರವರು ಮೇಲ್ಕಂಡ ರೆಗ್ಯುಲೇಷನಿನ 3 (c) ವ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರರ ಹೆಸರು.	ಬೇಕಾಗಿರುವ ಜಮೀನಿನ ವಿವರ.			ಚಕ್ಕುಬಂದಿ.			
					ಸರ್ವೆ ನಂ.	ವಿಸ್ತೀರ್ಣ.	ದುಮಾಷಾ ಅಕಾರ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕೋಲಾರ	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ಅಂಗಟ್ಟಪುರ.	ಪಟೇಲ ನಲ್ಲಪ್ಪ	28ರ ಭಾಗ	ಎ. ಗುಂ. 2-0	ರೂ. ಆ. ಪೈ. 3—0—0	ಸರ್ವೆ ನಂ. 29	ಸರ್ವೆ ನಂ. 31 ಮತ್ತು ಹಳೇ ಗಾಂಠಾಣ	ಸರ್ವೆ ನಂ. 26 ವ 27	ಸರ್ವೆ ನಂ. 30

ತಾರೀಖು 18ನೆ ಮೇ 1904.

ನಂ. ರೆ. 3528, ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟಿನ ಅಸಿಸ್ಟೆಂಟ್ ಸೆಕ್ರೆಟೆರಿಯವರಾದ ಮೆ॥ ಸಿ. ರಾಮರಾಯರು ಕೋಲಾರ ಡಿಸ್ಟ್ರಿಕ್ಟಿನ IIನೆ ಗ್ರೂಪಿನಲ್ಲಿರುವ ತಾಲ್ಲೂಕುಗಳಿಗೋಸ್ಕರ ಚಿಕ್ಕಬಳ್ಳಾಪುರಕ್ಕೆ ಅಸಿಸ್ಟೆಂಟ್ ಕಮಿಷನರಾಗಿ ವರ್ಗ ಮಾಡಲ್ಪಟ್ಟಿರುತ್ತಾರೆ.

2. ಸೀನಿಯರ್ ಅಸಿಸ್ಟೆಂಟ್ ಕಮಿಷನರಾದ ಮೆ॥ ಸ್ಯೆಯದ್ ಅಮೀರ್‌ಹಸನ್‌ಯವರು, ಮಂಜರಾಬಾದು ಮತ್ತು ಬೇಲೂರು ತಾಲ್ಲೂಕುಗಳ ಚಾರ್ಜಿನಲ್ಲಿರಲಿಕ್ಕೆ ಹಾಸನ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

3. ಕಡೂರು ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಕಮಿಷನರಾದ ಮೆ॥ ಪಿ. ಜೆ. ಡಿಸೌಜಾ, ಬಿ. ಎ., ಬಿ. ಎಲ್., ಯವರು, ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟಿನ ಅಸಿಸ್ಟೆಂಟ್ ಸೆಕ್ರೆಟೆರಿಯವರಾಗಿ ನೌಕರರ್ಮಾಡಲ್ಪಟ್ಟಿರುತ್ತಾರೆ.

88

ತಾರೀಖು 18ನೆ ಮೇ 1904.

ನಂ. ರೆ. 3513, ಸ್ತ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಶಿವಸಮುದ್ರಂ ಜಹಗೀರಿಗೆ ಸೇರಿದ ಬೆಳಕವಾಡಿಯಲ್ಲಿ ಕಾವೇರಿ ಪವರ್ ಕೆಲಸಗಳಿಗೋಸ್ಕರ ಬೇಕಾಗಿರುತ್ತವೆ. ಮತ್ತು ಮೈಸೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಮಾಲೀಕರ ಹೆಸರು.	ವಿವರ.	ಸರ್ವೆ ನಂ.	ಜಮೀನಿನ ತಪಸೀಲು. ವಿಸ್ತೀರ್ಣ.	ಜಮೀನಿನ ತಪಸೀಲು. ಆಕಾರ.	ತೆಗದುಕೊಳ್ಳಬೇಕಾಗಿರು ಜಮೀನು.	ಚಕ್ಕುಬಂದಿ. ಪೂರ್ವ.	ಚಕ್ಕುಬಂದಿ. ಪಶ್ಚಿಮ.	ಚಕ್ಕುಬಂದಿ. ಉತ್ತರ.	ಚಕ್ಕುಬಂದಿ. ದಕ್ಷಿಣ.
ಮೈಸೂರು	ಮಳವಳ್ಳಿ	ಪುರಿಗಳ್ಳಿ	ಸರ್ವಮಾನ್ಯ ಬೆಳವಾಡಿ	ಶಿವಸಮುದ್ರದ ಜಹಗೀರದಾರ್ರಾದ ಮೆ॥ ಆನಂದರಾಯ ಮೊದಲಿಯಾರು	ಖರಾಬ್	371	ಎ. ಗು. 492—29	...	ಎ. ಗು. 32—0	ಕಾವೇರಿನದಿ ಮತ್ತು ಸರ್ವೆ ನಂ. 371ರ ಭಾಗ	ಸರ್ವೆ ನಂ. 371ರ ಭಾಗ	ಸರ್ವೆ ನಂ. 371 ವ 374ರ ಭಾಗ	ಸರ್ವೆ ನಂ. 371ರ ಭಾಗ

ತಾರೀಖು 18ನೆ ಮೇ 1904.

ನಂ. 3517, ಸ್ತ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ಕೋಲಾರ ತಾಲ್ಲೂಕು ಚಳ್ಳಹಳ್ಳಿ ಹೊಸ ಗ್ರಾಮ ನಿವೇಶನಕ್ಕೋಸ್ಕರ ಬೇಕಾಗಿರುತ್ತದೆ. ಮತ್ತು ಕೋಲಾರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಮಾಲೀಕರ ಹೆಸರು.	ಸರ್ವೆ ನಂ. ಮತ್ತು ತರಹೆ.	ವಿಸ್ತೀರ್ಣ.	ಆಕಾರ.	ಬೇಕಾಗಿರುವ ವಿಸ್ತೀರ್ಣ.	ಚಕ್ಕುಬಂದಿ. ಪೂರ್ವ.	ಚಕ್ಕುಬಂದಿ. ಪಶ್ಚಿಮ.	ಚಕ್ಕುಬಂದಿ. ಉತ್ತರ.	ಚಕ್ಕುಬಂದಿ. ದಕ್ಷಿಣ.
ಕೋಲಾರ	ಕೋಲಾರ	ವಕ್ಕಲೇರಿ	ಚಲ್ಲಹಳ್ಳಿ	ಮುನಿಯಪ್ಪ ಬಿನ್ ಬೈರಪ್ಪ	69—2 ಖುಷ್ಕಿ	ಎ. ಗು. 2—20	ರೂ. 5—0—0	ಎ. ಗು. 1—20	ಮುನಿಕೊಂಡನ ಕಂದಾಯದ ಜಮೀನು	ತೋಟ ಇನಾಂ ಸರ್ವೆ ನಂ. 68	ರಾಮಣ್ಣನ ಕಂದಾಯದ ಜಮೀನು ಸರ್ವೆ ನಂ. 7	ಸರ್ವೆ ನಂ. 70 ಸರ್ಕಾರಿ

ತಾರೀಖು 19ನೆ ಮೇ 1904.

ನಂ. ರೆ. 3548—ರೆ. ಫೈ. 43-1901, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಶಿವಮೊಗ್ಗ ಡಿಸ್ಟ್ರಿಕ್ಟು ಸೊರಬ ತಾಲ್ಲೂಕಿನ ಅಮಲ್‌ದಾರ್ರಾದ ಮೆ॥ ಎಸ್. ಕೃಷ್ಣಪ್ಪನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ $1\frac{1}{2}$ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

2. ಮೇಲ್ಕಂಡ ರಜಾ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಕುಂಸಿ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್‌ದಾರ್ರಾದ ನರಸಿಂಹಲು ನಾಯಿಡು ಯವರು ಸೊರಬ ತಾಲ್ಲೂಕಿನ ಅಮಲ್‌ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗು ತರೀಕು ಕೆಲಸ ನೋಡತಕ್ಕದ್ದು. ಮತ್ತು ಶಿವಮೊಗ್ಗ ತಾಲ್ಲೂಕಿನ ಷಿರಸ್ತೆದಾರ್ರಾದ ಗರುಡಾಚಾರ್ರು ಕುಂಸಿ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್‌ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕು ಕೆಲಸ ನೋಡತಕ್ಕದ್ದು.

ತಾರೀಖು 18ನೆ ಮೇ 1904.

ನಂ. 3519, ಸ‌1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷ‌ ರೆಗ್ಯುಲೇಷನಿನ 6ನೆ ಸೆಕ್ಷ‌ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಮಂಡ್ಯದ ತಾಲ್ಲೂಕು ಕೀಲಘಟ್ಟ ಗ್ರಾಮದಲ್ಲಿರುವ ಅಣೆ ಕಾಲವೆ ಏರಿಯು ಕಾಪಾಡುವದಕ್ಕೋಸ್ಕರ ನೀರು ಹರಿದುಹೋಗುವ ಮಾರ್ಗವನ್ನು ಸಮೀಪದಲ್ಲಿರುವ ಕಾಡುಹೊಳೆಗೆ ತಿರುಗಿಸುವ ಬಗ್ಗೆ ಬೇಕಾಗಿರುತ್ತವೆ. ಮತ್ತು ಮೈಸೂರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷ‌ ಅನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಮಾಲೀಕರ ಹೆಸರು.	ವಿವರ.	ಸರ್ವೆ ನಂ.	ಜಮೀನಿನ ವಿವರ. ವಿಸ್ತೀರ್ಣ. ಎ.	ಗು.	ಆಕಾರ. ರೂ.	ಆ.	ಪೈ.	ತೆಗೆದುಕೊಳ್ಳುವ ಜಮೀನು.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಹುಟ್ಟುವಳಿ ಯಾ ಬೇರೀಜು.			ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.				ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.				ಹರಾಜು ತಾರೀಖು ವಗೈರೆ.
					ಎ. ಗು.	ರೂ.	ಆ.	ಪೈ.		ರೂ.	ಆ.	ಪೈ.		ರೂ.	ಆ.	ಪೈ.	
ಹಾಸನ	ಮಂಜರಾಬಾದು	ಬೆಳಗೋಡು	ಜೋಡಿ ಆಲವಳ್ಳಿ	ನಾರಾಯಣ ಭಟ್ಟ ವಗೈರೆ (9) ಜನಾ ಖರೀದಿ ಮೂಲಕ ಪಡದು ಅನುಭವ ಮಾಡುತ್ತ ಲಿರುವವರು	ಖುಷ್ಕಿ 134—8	21	4	0	ಜೋಡಿ	216	0	0	ವಿಕಾರಿ ಶಾರ್ವರಿ ಪ್ಲವ ಶುಭಕೃತು	121	13	6	1904ನೆ ಜೂನ್ 27ನೆ ಸೋಮವಾರ ಮಂಜರಾಬಾದು ತಾಲ್ಲೂಕು ಕಚೇರಿಯಲ್ಲಿ ಹಾಸನದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾಗಲಿ ಅವರಿಂದ ನೇಮಿಸಲ್ಪಟ್ಟ ಇತರ ಆಫೀಸರಾಗಲಿ ಹರಾಜು ಮಾಡಿಸುವರು.
									ಲೋಕಲ್ ಫಂಡ್	25	12	6		241	12	6	
					ತರಿ 115—25	389	0	0						241	12	6	
														241	12	6	
										241	12	6		847	3	0	
				1 ನಂಜುಂಡೈಯ್ಯ ಫವತಿ ಮಾಗ ಹಿರಿಯಂಣೈಯ್ಯ	ಬಾಗಾಯತು 1—11	0	4	0	ನೋಟಿಸ ಫೀ ...					2	0	0	
									ವಸೂಲ್ ತಾ॥ ವರಿಗೆ ಬಡ್ಡಿ								
				2 ಪುಟ್ಟಣ್ಣೈಯ್ಯ ಫವತಿ ಮಾಗ ಹಿರಿಯಂಣೈಯ್ಯ	ಪರಂಬೋಕು 141—13	2	0	0	ಲ್ಯಾಂಡ್ ಇಂಪ್ರೂವ್ಮೆಂಟಿಗಾಗಿ ಪಡದಿದ್ದ ಲೋನ್ ಮೊಬಲಗು					6000	0	0	
									ಈ ಮೊಬಲಗಿಗೆ ಆಗುವ ಬಡ್ಡಿ								
					392—17	412	8	0									

ಸಿ. ಬಿ. ಶೇಷಗಿರಿರಾವ್, ಫಾರ ಡೆಪ್ಯುಟಿ ಕಮಿಷನರ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 25ನೆ ಮೇ 1904.

ಇದರಿಂದ ತಿಳಿಯಪಡಿಸುವದೇನಂದರೆ—ಈ ಕೆಳಗೆ ವಿವರಿಸಿ ಇರುವ ರಿಜಿಷ್ಟ್ರಾದ ದಸ್ತೈವಜುಗಳು ಎರಡು ವರುಷಗಳಿಗೆ ಮೆಲ್ಪಟ್ಟು ಈ ಕೆಳಗೆ ಕಂಡ ಸಬ್ ರಿಜಿಷ್ಟ್ರಿ ಆಫೀಸುಗಳಲ್ಲಿ ವಾರಸದಾರು ಹಾಜರಾಗಿ ವಾಪಸು ಪಡಿಯದೆ ನಿಂತಿರುತ್ತವೆ. ಈ ತಾರೀಖು ಲಾಗಾಯಿತು ಒಂದು ತಿಂಗಳು ವಳಗಾಗಿ ಸದರಿ ದಸ್ತೈವಜು ಹಾಜರ್ಮಾಡಿದವರಾಗಲಿ ಅಥವಾ ಅವರ ಪ್ರತಿನಿಧಿಗಳಾಗಲಿ ಮತ್ತು ದಸ್ತೈವಜುಗಳಿಗೆ ಬಾಧ್ಯವುಳ್ಳವರಾಗಲಿ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಹಾಜರಾಗಿ ತಮ್ಮ ದಸ್ತೈವಜು ವಾಪಸು ಪಡಿಯಬೇಕು. ತಪ್ಪಿದರೆ ರಿಜಿಸ್ಟ್ರೇಷನ್ ಆಕ್ಟು 85ನೆ ಸೆಕ್ಷನ್ ಮೇರಿಗೆ ನಾಶಪಡಿಸಲ್ಪಡುತ್ತೆ. ತಾರೀಖು 25ನೆ ಮೇ 1904ನೆ ಇಸವಿ ಚಿತ್ರದುರ್ಗ.

ಸಬ್ ರಿಜಿಸ್ಟ್ರಿಗಳು.	ಬುಕ್ಕು ಮತ್ತು ರಿಜಿಷ್ಟರ್ ನಂಬರು.	ದಸ್ತೈವಜು ಬರದು ಕೊಟ್ಟವನ ಹೆಸರು.	ಬರಸಿಕೊಂಡವನ ಹೆಸರು.	ದಸ್ತೈವಜು ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತೈವಜು ಸ್ವಭಾವ.
1	2	3	4	5	6	7
ಚಿತ್ರದುರ್ಗ.	ಬುಕ್ಕು 1. ನಂ. 429	ಚಿತ್ತೈಯ್ಯನ ಹೆಂಡತಿ ಪಾಪವ್ವ.	ಉಪ್ಪರಿಗೆ ಮಲ್ಲಪ್ಪ	25 4 1901	25 4 1901	25 ರೂ. ಕ್ರಯ
	ಡಿಟೋ 520	ಮೂಡೆಪ್ಪ ...	ಶಿದ್ದಲಿಂಗಪ್ಪ ..	25 5 1901	31 5 1901	100 ಡಿಟೋ
	ಡಿಟೋ 248	ಸಣಪೋಲು ...	ಬಸಪ್ಪ ..	30 10 1901	30 10 1901	148 ಡಿಟೋ
	ಡಿಟೋ 286	ಕೃಷ್ಣರಾಯ ...	ಶ್ರೀನಿವಾಸರಾಯ ..	30 10 1901	28 11 1901	50 ಡಿಟೋ
	ಡಿಟೋ 323	ಕಾಮೈಯ್ಯ ..	ಮಲ್ಲಪ್ಪ ..	16 12 1901	16 12 1901	50 ಡಿಟೋ
ದಾವಣಗೆರೆ.	ಬುಕ್ಕು 1. ನಂ. 635	ಕಲ್ಲಪ್ಪ ಅವರಗೆರೆ..	ಹನುಮಪ್ಪ ಅವರಗೆರೆ	10 5 1901	23 5 1901	32 ಡಿಟೋ
	ಡಿಟೋ 700	ದುಗ್ಗಣ ...	ಗುಡ್ಡಪ್ಪ ..	5 6 1901	5 6 1901	50 ಡಿಟೋ
	ಡಿಟೋ 141	ಫಕೀರಸಾಬಿ ...	ಜಂಬಣ್ಣ ..	22 8 1901	23 8 1901	200 ರೂ. ಆಧಾರ
	1901—02 ಡಿಟೋ IV. ನಂ. 24	ದ್ಯಾಮವ್ವ ಯಾನೆ ವೆಂಕವ್ವ.	ಶಿದ್ದಲಿಂಗಪ್ಪ ದಾವಣಗೆರೆ.	5 6 1901	6 6 1901	ಮುಖಾಸಿಪತ್ರ
ಹಿರಿಯೂರು.	ಬುಕ್ಕು 1. ನಂ. 45 1901—02	ಸಣ್ಣ ಶಿದ್ದಪ್ಪ ..	ಹೊಂಸ್ನ ಕೆರಪ್ಪ ..	3 8 1901	5 8 1901	40 ರೂ. ಕ್ರಯ

ಹೆಚ್. ರಾಮಾನುಜೈಯ್ಯಂಗಾರ್,
ಡಿಸ್ಟ್ರಿಕ್ಟು ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟು ಜಡ್ಜಿರವರ ಕೋರ್ಟಿನಲ್ಲಿ.

ಸನ್ 1903—1904ನೆ ಇಸವಿ ಅರ್ಜೀ ನಂಬರ್ 514.

ಅರ್ಜೀದಾರು) ಮೈಸೂರು ಕಿಲ್ಲೆಯಲ್ಲಿರುವ ಫವತಿ ಅದ ಜಿ. ಕೃಷ್ಣರಾಯರ ಕುಟುಂಬ ಕೃಷ್ಣಮ್ಮ, ಮೈನರಾದ ಮೈಸೂರು ಸ್ಥಳದ ಫವತಿ ಆದ ಜಿ. ಕೃಷ್ಣರಾಯರ ಮಕ್ಕಳು 1. ಮಾಧವರಾವು, 2. ಸುಬ್ಬರಾವು ಯವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಮಾಧವರಾವು, ಸುಬ್ಬರಾವು ಇವರಿಗೆ ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ಮೈಸೂರು ಸ್ಥಳದ ಕೃಷ್ಣಮ್ಮನವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸನ್ 1904ನೆ ಇಸವಿ ಜೂನ್ ತಾರೀಖು 17ರಲ್ಲು ಮೊಕದ್ದಮೆ ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸನ್ 1904ನೆ ಇಸವಿ ಏಪ್ರೆಲ್ ತಿಂಗಳು 13ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಮ್ಮ ದಸ್ತಖತ್ತಿನೊಡನೆ ಕೊಡೋಣಾಗಿದೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜಿ.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1903—1904ನೆ ಇಸವಿ ಮಿ॥ ಅರ್ಜಿ ನಂಬರ 320.

ತೀರ್ಥಹಳ್ಳಿ ತಾಲ್ಲೂಕು ಮತ್ತೂರ ಮಜರೆ ಹೊಸ ಅಗ್ರಹಾರದಲ್ಲಿ ವಾಸವಾಗಿದ್ದು ಮೃತಪಟ್ಟ ಕೆರೆಗದ ಶಾಂಭಟ್ಟರವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ವೆಂಕಟರಮಣಭಟ್ಟ ಬಿನ್ ಶಾಂಭಟ್ಟ ಮೈನರ್, ಗಾರ್ಡಿಯನ್ ಈತನ ಅಣ್ಣ ಮಂಜಪ್ಪ, ಮೃತಪಟ್ಟ ಸದರೀ ಶಾಂಭಟ್ಟರಿಗೆ ದತ್ತು ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಹೊಸ ಅಗ್ರಹಾರ ಸ್ಥಳದ ವೆಂಕಟರಮಣಭಟ್ಟ ಬಿನ್ ಶಾಂಭಟ್ಟರು ಹೊಸ ಅಗ್ರಹಾರ ವಾಸಸ್ಥರಾಗಿ ಮೃತಪಟ್ಟ ಶಾಂಭಟ್ಟರವರ ಜೆಂದಗಿ ಬಗ್ಯಾಗಿ ಬರತಕ್ಕ 100—0—0 ರೂಪಾಯಿಗಳ ಸಾಲವನ್ನು ವಸೂಲು ಮಾಡುವದಕ್ಕೆ ಸನ್ 1901ನೆ ಇಸವಿ VIIನೆ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ವೆಂಕಟರಮಣಭಟ್ಟ ಬಿನ್ ಶಾಂಭಟ್ಟ ಮೈನರ್, ಗಾರ್ಡಿಯನ್ ಅಣ್ಣ ಮಂಜಪ್ಪನವರ ಅರ್ಜಿಯನ್ನು ಸನ್ 1904ನೆ ಇಸವಿ ಜೂನ್ ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಶಾಂಭಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರು ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ಏಪ್ರೆಲ್ ತಿಂಗಳು 6ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1903—1904ನೆ ಇಸವಿ ಮಿ॥ ಅರ್ಜೀ ನಂಬರ್ 333.

ಚನ್ನಗಿರಿ ತಾಲ್ಲೂಕು ದಿಗ್ಗೇನಹಳ್ಳಿಯಲ್ಲಿದ್ದ ಮೃತಪಟ್ಟ ಅಂಕಳಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ರುದ್ರಪ್ಪ ಬಿನ್ ಅಂಕಳಪ್ಪ ಮೈನರ್, ಗಾರ್ಡಿಯನ್ ತಾಯಿ ಸಿದ್ದವ್ವ ಚನ್ನಗಿರಿ ತಾಲ್ಲೂಕು ದಿಗೇನಹಳ್ಳಿ ವಾಸ್ತಿ, ಮೃತಪಟ್ಟ ಸದರೀ ಅಂಕಳಪ್ಪನವರಿಗೆ ರುದ್ರಪ್ಪನು ಮಗ ಮತ್ತು ಸಿದ್ದವ್ವನು ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ದಿಗ್ಗೇನಹಳ್ಳಿ ಸ್ಥಳದ ರುದ್ರಪ್ಪ ಬಿನ್ ಅಂಕಳಪ್ಪನವರು ದಿಗ್ಗೇನಹಳ್ಳಿ ವಾಸಸ್ಥರಾಗಿ ಮೃತಪಟ್ಟ ಅಂಕಳಪ್ಪನವರ ಜೆಂದಗಿ ಬಗ್ಯಾಗಿ ಬರತಕ್ಕ 152—9—10 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ VIIನೆ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರುದ್ರಪ್ಪ ಬಿನ್ ಅಂಕಳಪ್ಪ ಮೈನರ್, ಗಾರ್ಡಿಯನ್ ತಾಯಿ ಸಿದ್ದವ್ವನವರ ಅರ್ಜಿಯನ್ನು ಸನ್ 1904ನೆ ಇಸವಿ ಜೂನ್ ತಿಂಗಳು ತಾರೀಖು 17ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಂಕಳಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ಏಪ್ರೆಲ್ ತಿಂಗಳು 10ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ವೆಂಕಟವರದನ್ ಅಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ.

ಕೋಲಾರ ಡಿಸ್ಟ್ರಿಕ್ಟ್ ಚಿಂತಾಮಣಿ ಡಿವಿಜನ್ ಅಸಿಸ್ಟೆಂಟ್ ಕಮಿಷನರು ಮತ್ತು ಫಸ್ಟ್‌ಕ್ಲಾಸ ಮ್ಯಾಜಿಸ್ಟ್ರೇಟ್ ಕೋರ್ಟು.

ಇಸ್ತಿಹಾರು.

ಇದರಿಂದ ಸಮಸ್ತ ಜನಗಳಿಗು ತಿಳಿಯಪಡಿಸುವದೇನೆಂದರೆ:—

ಇರೇಬಿಯಲ್ಲಿ ಕಂಡ ಮಾಲುಗಳು ಕಳವಾದ ಮಾಲುಗಳೆಂದು ನಮ್ಮ ಕೋರ್ಟ್ಟು ಚಾಲ್ತಿ ಸಾಲ್ 1903-4ನೆ ಕ್ರಿಮಿನಲ್ 18ನೆ

ನಂಬರ್ 46.	ಒಂದು ಸರಿಗೆ ಕೆಂಪು ರುಮಾಲು.	ಕೋಲಾರ ಡಿಸ್ಟ್ರಿಕ್ಟು ಮುಳಬಾಗಲ ತಾಲ್ಲೂಕು ನಂಗ್ಲಿ ಗ್ರಾಮದ ಬಳಿ ತೆಂಗಿನ ತೋಟದಲ್ಲಿ ಸಿಕ್ಕಿದ್ದಾಗಿರುತ್ತೆ.
,, 47.	ಒಂದು ಬುಗಡಿ ಅಂಚಿನ ಪಂಚೆ.	
,, 48.	ಒಂದು ಹಸರು ಶೀರೆ.	
,, 49.	ಒಂದು ಕರಿ ಶೀರೆ.	
,, 50.	ಒಂದು ಪೈಟ್ನಿ ಶೀರೆ.	

ನಂಬರ್ ಮೊಕದ್ದಮೆಯಲ್ಲಿ ಹಾಜರ್ಪಡಿಸಲ್ಪಟ್ಟರತಕ್ಕದ್ದು ವಾರಸುದಾರರಿಲ್ಲದೆ ಕೋರ್ಟ್ಟಿನಲ್ಲಿ ಅಮಾನತ್ತುನಲ್ಲಿ ಇಟ್ಟು ಇರುತ್ತೆ. ಈ ಮಾಲುಗಳಿಗೆ ಹಕ್ಕಿರತಕ್ಕವರು ಈ ತಾರೀಖು ಲಗಾಯಿತು 6 (ಆರು) ತಿಂಗಳ ವಳಗಾಗಿ ಈ ಕೋರ್ಟ್ಟು ರೂಬರೂಬು ಖುದ್ದು ಹಾಜರಾಗಿ ತಮ್ಮಗಳ ಹಕ್ಕನ್ನ ಸ್ಥಿರಪಡಿಸಿ ಮಾಲುಗಳನ್ನ ಪಡಿಯತಕ್ಕದ್ದು.

ಮೇಲ್ಕಂಡ ಮಾಯಿದೆ ಗಳಿಸಿದ ನಂತರ ಡಿಟೋ ಮಾಲುಗಳನ್ನ ಹರಾಜು ಮೂಲಕ ವಿಲೇವಾರಿ ಮಾಡಿ ಹರಾಜು ಮೊಬಲಗನ್ನ ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಡುತ್ತೆ.

ಕೆ. ಆರ್. ಶ್ರೀನಿವಾಸೈಯ್ಯಂಗಾರ್,
ಅಸಿಸ್ಟೆಂಟ್ ಕಮಿಷನರ್ ಮತ್ತು ಫಸ್ಟ್‌ಕ್ಲಾಸ ಮ್ಯಾಜಿಸ್ಟ್ರೇಟ್.

ಬೆಂಗಳೂರು ಸಿಟಿ ಮ್ಯುನಿಸಿಪಲ ಬೋರ್ಡ್ ಆಫೀಸಿನಿಂದ.

ನೋಟಿಸ.

ತಾರೀಖು 11ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.—ಬೆಂಗಳೂರು ಶಿಟಿ ಮ್ಯುನಿಸಿಪಲ್ ಸರಹದ್ದಿನಲ್ಲಿ ಇರುವ ತರಕಾರಿ, ಮೀನು ಮತ್ತು ಕೋಳಿ ಮಾರ್ಕೆಟ್ಟುಗಳಲ್ಲಿ 1904ನೆ ಇಸವಿ ಜುಲೈ 1ನೆ ತಾರೀಖು ಲಾಗಾಯಿತು 1905ನೆ ಇಸವಿ ಜೂನ್ 30ನೆ ತಾರೀಖಿನ ವರಿವಿಗೆ, ಮಂಜೂರಾಗಿರುವ ದರಗಳ ಮೇರಿಗೆ ತೆರಿಗೆ ಮತ್ತು ಬಾಡಿಗೆಯನ್ನು ವಸೂಲ ಮಾಡುವದಕ್ಕೆ ಮೊಹರಸಿಕಿ ದರಖಾಸ್ತುಗಳು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1904ನೆ ಇಸವಿ ಜೂನ್ 14ನೆ ತಾರೀಖು ಮಧ್ಯಾಹ್ನ 3 ಘಂಟೆ ಒಳಗಾಗಿ ಕೊಡಬಹುದು.

I. ಶಿಟಿ ಮಾರ್ಕೆಟ್ಟು ಸರಹದ್ದಿನೊಳಗೆ ಒಟ್ಟಾಗಿ ಆಗಲಿ ಅಥವಾ ಚಿಲ್ಲರೆಯಾಗಿ ಆಗಲಿ ಮಾರುವದಕ್ಕೋಸ್ಕರ ತರುವ ತರಕಾರಿ ಮತ್ತು ಹಣ್ಣುಗಳು, ಪುರುಳುಗಡ್ಡೆ, ಈರುಳ್ಳಿ, ಕಡ್ಲೆಕಾಯಿ, ತೆಂಗಿನಕಾಯಿ ಮತ್ತು ಇತರ ಜಿನಸಿಗಳ ಗೂಡೆಗಳಿಗೂ ಗಾಡಿಗಳಿಗೂ ಮತ್ತು ಮೀನು ಮತ್ತು ಕೋಳಿ ಮಾರ್ಕೆಟ್ಟುಗಳಿಗೆ ತರುವ ಮೀನು, ಕೋಳಿ, ಕೋಳಿಮೊಟ್ಟೆಗಳ ಗೂಡೆಗಳಿಗೂ ಇದರಡಿ ನಮೂದಿಸಿರುವ ರೇಟುಗಳು ಅನುಸರಿಸಿ ತೆರಿಗೆ ವಸೂಲ್ ಮಾಡುವದಕ್ಕೆ.

II. ಸೆಂಟ್ರಲ್ ಮಾರ್ಕೆಟ್ಟು ಅಲ್ಲದೆ ಈ ಕೆಳಗೆ ನಮೂದಿಸಿರುವ ಮಾರ್ಕೆಟ್ಟುಗಳಲ್ಲಿ ತರಕಾರಿ ಮಾರುವವರಿಂದ (ರುಸುಂ) ವಸೂಲ್ಮಾಡುವದಕ್ಕೆ.

ರಂಗಸ್ವಾಮಿ ದೇವಸ್ಥಾನದ ಬಳಿ ಇರುವ ಚೈಲ್ ಮಾರ್ಕೆಟ್ಟು.	
ಉಪ್ಪಾರಪೇಟೆ ..	ಡಿಟೋ
ತಿಗಳರಪೇಟೆ ಧರ್ಮರಾಯನ ಗುಡಿಬಳಿ ಚೈಲ್	ಡಿಟೋ
ಕಲಾಸಿಪಾಳ್ಯ	ಡಿಟೋ
ಅಕ್ಕಿಪೇಟೆಯಲ್ಲಿರುವ ...	ಡಿಟೋ

III. ಗುಜರಿಯಲ್ಲಿ ಗೊತ್ತು ಮಾಡಲ್ಪಟ್ಟ ಸ್ಥಳಗಳಲ್ಲಿ ಹಂಗಾಮಿಯಾಗಿ ವ್ಯಾಪಾರ ಮಾಡುವವರಿಂದ ವ್ಯಾಪಾರ ಮಾಡುವ ಜಮೀನಿಗೆ ಬಾಡಿಗೆ ವಸೂಲ್ಮಾಡುವದಕ್ಕೆ.

IV. ತಗರದ ಸ್ಟಾಲ್‌ಗಳಲ್ಲಿ ಹಂಗಾಮಿಯಾಗಿ ವಿಕ್ರಯ ಮಾಡುವ ಅಂಗಡಿಯವರಿಂದ ವ್ಯಾಪಾರ ಮಾಡುವ ಸ್ಥಳಕ್ಕೆ ಬಾಡಿಗೆ ವಸೂಲ್ ಮಾಡುವದಕ್ಕೆ.

V. ಮೀನು ಮತ್ತು ಕೋಳಿ ಮಾರ್ಕೆಟ್ಟುಗಳಲ್ಲಿ ಹಂಗಾಮಿಯಾಗಿ ವ್ಯಾಪಾರ ಮಾಡುವವರಿಂದ ಜಮೀನ್ ಬಾಡಿಗೆ ವಸೂಲ್ ಮಾಡುವದಕ್ಕೆ. ಮೇಲ್ಕಂಡ ಮಾರ್ಕೆಟ್ಟುಗಳಲ್ಲಿ ಮುನಿಸಿಪಾಲಿಟಿಗೆ ತಿಂಗಳುಗಟ್ಟಲೆ ಬಾಡಿಗೆ ಕೊಡುವವರಿಂದ ಜಮೀನು ಬಾಡಿಗೆಯನ್ನು ಕಂಟ್ರಾಕ್ಟದಾರನು ವಸೂಲ ಮಾಡಕೂಡದು ಮತ್ತು ಹಗಲುರಾತ್ರಿ ಸಹ ಸಾಮಾನುಗಳು ತೆಗಿಯದೆ ಅಂಗಡಿಗಳನ್ನು ಖಾಯಂ ಇಟ್ಟುಕೊಂಡಿರುವವರಿಂದ ಸಹ ಜಮೀನ್ ಬಾಡಿಗೆಯನ್ನು ವಸೂಲ್ ಮಾಡಕೂಡದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಶಿಟಿ ಮುನಿಸಿಪಲ್ ತರಕಾರಿ, ಮೀನು ಮತ್ತು ಕೋಳಿ ಮಾರ್ಕೆಟ್ಟುಗಳಲ್ಲಿ ತೆರಿಗೆ ಮತ್ತು ಜಮೀನ್ ಬಾಡಿಗೆ ವಸೂಲ್ಮಾಡುವದಕ್ಕೆ ದರಖಾಸ್ತು" ಎಂಬದಾಗಿ ಬರೆದು ಇರತಕ್ಕದ್ದು.

3. ದರಖಾಸ್ತು ಕೂಡೆ ನಗದಾಗಲಿ ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿ ಠೇವಣಿ ಹಣವನ್ನು ಹಾಜರ್ಮಾಡದಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೆ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೆ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು. ಮತ್ತು ಯಾವ ಸಬಬನ್ನೂ ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಹಣವು ಅವನ ದರಖಾಸ್ತಿನ 1 ತಿಂಗಳ ಕಂಟ್ರಾಕ್ಟು ಮೊಬಲಗಿಗೆ ಕಮ್ಮಿಯಾಗಿದ್ದರೆ ಆ ಕಮ್ಮಿ ಮೊಬಲಗನ್ನು ಅವನು ವಡನೆ ಹಾಜರ್ಮಾಡಬೇಕು. ಮತ್ತು ಅಂಥಾ ದರಖಾಸ್ತುದಾರನು ಅವನ ದರಖಾಸ್ತನ್ನ ಅಂಗೀಕರಿಸಿದ್ದನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯತು ಒಂದು ವಾರದೊಳಗೆ ಅವಶ್ಯಕವಾದ ಇಜಾರೆ ಮುಚ್ಚಳಿಕೆಯನ್ನು ಬರೆದುಕೊಡಬೇಕು. ಹಾಗೆ ತಪ್ಪಿದರೆ ಆ ಠೇವಣಿ ಮೊಬಲಗು ಬೋರ್ಡಿಗೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು. ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡಲ್ಪಡುವದರಲ್ಲಿ ಉಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

6. ಕಂಟ್ರಾಕ್ಟುದಾರನು ಇದರ ಕೆಳಗೆ ಕಾಣಿಸಿದ ಪ್ರಕಾರ, ತೆರಿಗೆ ಅಥವಾ ಬಾಡಿಗೆ ವಸೂಲ್ಮಾಡಿಕೊಳ್ಳತಕ್ಕದ್ದಾಗಿಧೆ.

A. ಶಿದ್ದಿಕಟ್ಟೆಯಲ್ಲಿರುವ ಎನ್ಕ್ಲೋಜರ್ ವೆಜಿಟೆಬಲ್ ಮಾರ್ಕೆಟ್ಟಿನಲ್ಲಿ. } ಇದರ ತಪ್ಸೀಲ್ ನಮೂದಿನಿಂದ ಕಂಟ್ರಾಕ್ಟುದಾರನು ಕಂಟ್ರಾಕ್ಟಿಗೆ ಸಮ್ಮಂಧಪಟ್ಟ ಪ್ರತಿಒಂದು ಸ್ಥಳದಲ್ಲಿಯೂ ಸ್ವಂತ ಲಾಗವಡಿನಿಂದ ಒಂದು ಬೋರ್ಡು ಹಾಕಿರಬೇಕು.

	ರೂ.	ಆ.	ಪೈ.
1. ದೊಡ್ಡ ಮಂಕ್ರಿ 1ಕ್ಕೆ ತರಕಾರಿ	0	0	2
2. ಹರಿವೆಸೊಪ್ಪುಗಳ ಮಂಕ್ರಿ 1ಕ್ಕೆ	0	0	1
3. ಭಂಡಿತುಂಬಾ ತರಕಾರಿ, ಹಣ್ಣುಗಳು ಒಟ್ಟು ಬಿಕರಿಗೆ ಬಂದರೆ	0	2	0
4. ಮಾರ್ಕೆಟ್ಟಿನಲ್ಲಿ ಅಂಗಡಿ ಇಟ್ಟುಕೊಳ್ಳುವ ಉದ್ದಿಶ್ಯ ಬರುವ ತರಕಾರಿ ಭಂಡಿ 1ಕ್ಕೆ ..	0	1	0
5. ಸೇಬು, ಅಂಜೂರ, ದಾಳಿಂಬ, ಚಕ್ಕೋತ ಮತ್ತು ಮಾವು ವಗೈರೆ ಹಣ್ಣುಗಳ ಮಂಕ್ರಿ 1ಕ್ಕೆ	0	0	3
6. ಮಾರ್ಕೆಟ್ಟಿನಲ್ಲಿ ಅಂಗಡಿ ಇಟ್ಟುಕೊಳ್ಳುವ ಉದ್ದಿಶ್ಯ ತರಗಿನಪೇಟೆ ವಗೈರೆ ಸ್ಥಳದಿಂದ ಬರುವ ಉರಳಗಡ್ಡೆ, ಈರುಳ್ಳಿ, ಕಡ್ಲೆಕಾಯಿ ವಗೈರೆ ಮೂಟೆ 1ಕ್ಕೆ.	0	0	3
7. ರೈಲ್‌ನಿಂದ ಬರುವ ಮೂಟೆಭಂಡಿ ಭರ್ತಿ ಕಡ್ಲೆಕಾಯಿ, ಉರಳಗಡ್ಡೆ, ಈರುಳ್ಳಿ, ಮಾವಿನಹಣ್ಣು, ಬಾಳೆಹಣ್ಣು ವಗೈರೆ ಒಂದೇವಿಧವಾದ ಬಾಬಿಗೆ.	0	1	0
8. ಕೋಳಿ, ಕೋಳಿಮೊಟ್ಟೆ ಅಥವಾ ಆಹಾರಕ್ಕೆ ಉಪಯುಕ್ತವಾದ ಇತರ ಪಕ್ಷಿಗಳ ಗೂಡೆ 1ಕ್ಕೆ	0	0	3
9. 5 × 5 ಅಡಿಯುಳ್ಳ ಪ್ರತಿ ಜಮೀನಿನಲ್ಲಿ ಸಾಯಂಕಾಲದ ಅಂಗಡಿಗೆ	0	0	3
10. ಸದರಿ ಅಳತೆಯುಳ್ಳ ಜಮೀನನ್ನು ಉಪಯೋಗಿಸಿಕೊಂಡು ಹರಾಜು ಮಾಡಿಸುವ ಜಾಗಾಕ್ಕೆ	0	1	0
11. ವೆಜಿಟೆಬಲ್ ಮಾರ್ಕೆಟ್ಟು ವಳಗಾಗಿ ಟೆಂಪರರಿಯಾಗಿ ಇಟ್ಟುಕೊಳ್ಳುವ ಸದರಿ ಅಳತೆಯುಳ್ಳ ಜಾಗಾಕ್ಕೆ ತರಕಾರಿ ಮಾರಾಟಕ್ಕೆ.	0	0	2
12. ಮೀನಿನ ಸ್ಟಾಲ್ 1ಕ್ಕೆ	0	0	2

VII. ವೆಜಿಟೆಬಲ್ ಮಾರ್ಕೆಟ್ಟು ಹಿಂಭಾಗದಲ್ಲಿರುವ ಮೈದಾನದ ಯಾವ ಭಾಗದಲ್ಲಾದರೂ ಕಬ್ಬಿಣ ವಗೈರೆ ಸಾಮಾನುಗಳು ರಾತ್ರಿ ಹಗಲು ಸಹ ತೆಗಿಯದೆ ಇಟ್ಟುಕೊಂಡು ವ್ಯಾಪಾರ ಮಾಡುವವರಿಂದ ಅಮಾನಿಯಾಗಿ ಮಾಹೆಯಾನಾ ಬಾಡಿಗೆ ವಸೂಲ್ಮಾಡಲ್ಪಡುತ್ತೆ. ಟೆಂಪರರಿಯಾಗಿ ಇಡುವವರಿಂದ ಕಂಟ್ರಾಕ್ಟುದಾರನು ವಸೂಲ್ಮಾಡಿಕೊಳ್ಳಬಹುದು.

VIII. ಕಂಟ್ರಾಕ್ಟುದಾರನು ಪ್ರತಿ ತಿಂಗಳ 5ನೆ ತಾರೀಖು ವಳಗಾಗಿ ಕಂಟ್ರಾಕ್ಟು ಬಾಬತು ಆಯಾಯ ತಿಂಗಳ ಮೊಬಲಗನ್ನು ಮುಂದಾಗಿ ಯಾ ಹಾಜರ್ಮಾಡಿ ರಶೀತಿ ಪಡದುಕೊಳ್ಳಬೇಕು.

IX. ಕೋಟೆ ಆಂಜನೇಯ ದೇವಸ್ಥಾನಕ್ಕೆ ಬಿಟ್ಟಿರುವ ಮೆಯಿನ್‌ಡ್ರೈನ್ ಪಕ್ಕದ ಖಾಲಿ ಜಮೀನಿನಲ್ಲಿ ವಸೂಲಾಗತಕ್ಕದ್ದು ವೆಜಿಟೆಬಲ್ ಮಾರ್ಕೆಟ್ಟು ಕಂಟ್ರಾಕ್ಟುದಾರ್ರು ವಸೂಲ್ಮಾಡಿಕೊಂಡು ಮಾಹೆ 1ಕ್ಕೆ 2 ರೂಪಾಯಿಗಳಂತೆ ಡಿಟ್ಟೋ ದೇವಸ್ಥಾನದ ಏಜಂಟರಿಗಾಗಿ ಅವರಿಗೆ ಪಾವತಿ ಬಗ್ಯೆ ಕಂಟ್ರಾಕ್ಟು ಮೊಬಲಗಿನ ಸಂಗಡ ಇರಸಾಲ್ ಮಾಡಬೇಕು.

X. ಠೇವಣಿ ಮೊಬಲಗು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವ ವರಿವಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಮುಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟು ಸಾಹೇಬರು ಇವನಿಗೆ ವಿಧಿಸುವ ಜುರ್ಮಾನೆಗಳನ್ನು ಇವನು ಅಲಾಯಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟೀಸು ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸು ಮಾಡಲ್ಪಡುವದು.

XI. ಈ ಷರತ್ತುಗಳಿಗೆ ವಿರೋಧವಾಗಿ ನಡದುಕೊಳ್ಳುವ ಪಕ್ಷಕ್ಕೆ ಕೂಡ್ಲೆ ಕಂಟ್ರಾಕ್ಟು ರದ್ದುಮಾಡಿ ಬೇರೆ ಜನರಿಗೆ ಕೊಡಲ್ಪಡುವದಲ್ಲದೆ ಠೇವಣಿ ಮೊಬಲಗನ್ನು ದಂಡವಾಗಿ ಅಥವಾ ಅವನ ಬಾಕಿಗೆ ತೆಗದುಕೊಂಡು ಲುಕ್ಸಾನ್ ಮೊಬಲಗಿಗೆ ಕಂಟ್ರಾಕ್ಟುದಾರನನ್ನ ಜವಾಬ್ದಾರಿ ಮಾಡಿ ಅವನ ಜಿಂದಗಿ ಜಫ್ತು, ಹರಾಜುಮೂಲಕ ವಸೂಲ್ ಮಾಡಲ್ಪಡುತ್ತೆ.

XII. ಮಿಕ್ಕ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳಿದುಕೊಳ್ಳಬೇಕು.

XIII. ಪ್ರೆಸಿಡೆಂಟರವರ ಮಂಜೂರಿ ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರವರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನು ಬಿನ್ ತಕರಾರು ತೆಗದುಕೊಳ್ಳಲು ಸಲೀಸ್ ಏರ್ಪಾಡು ಇಡತಕ್ಕದ್ದು.

ತಾರೀಖು 11ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ —ಮೈಸೂರು ರೋಡು ಹಳೆ ಟಿಂಬರುಯಾರ್ಡು ಬಳಿ ಇರುವ ಮ್ಯೂನಿಸಿಪಲ್ ಖಾಲಿ ಜಮೀನಿನಲ್ಲಿ ಭಂಡಿಗಳು ವಗೈರೆ ನಿಲ್ಲುವವರ ಕಡೆಯಿಂದ ಜಮೀನು ಬಾಡಿಗೆಯನ್ನು 1904ನೆ ಇಸವಿ ಜುಲೈ ಗುರ್ರೆಲಾಗಾಯತು 1905ನೆ ಇಸವಿ ಜೂನ್ ಆಖೈರು ವರಿವಿಗೆ ಠೋಕ್ಕೇನಾ ಇಧರಡೀ ನಮೂದಿಸಿರುವ ದರಗಳಂತೆ ವಸೂಲ್ಮಾಡಿ ಕೊಳ್ಳತಕ್ಕದ್ದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1904ನೆ ಜೂನ್ 14ನೆ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು.

2. ಮೇಲ್ಕಂಡ ಜಾಗದಲ್ಲಿ ಬಾಡಿಗೆ ರುಸುಂ ವಸೂಲ್ ಮಾಡತಕ್ಕ ದರಗಳ ತಪಸೀಲ್ :—

		ರೂ.	ಆ.	ಪೈ.
1.	ಕಟ್ಟಿಗೆ ಮತ್ತು ಹುಲ್ಲು ಭಂಡಿ 1ಕ್ಕೆ	0	2	0
2.	ಕಟ್ಟಿಗೆ ಹೊರೆ 1ಕ್ಕೆ	0	0	1
3.	ಹುಲ್ಲು ಹೊರೆ 1ಕ್ಕೆ	0	0	2

3. ದರಖಾಸ್ತುಗಳ ಮೇಲ್ಭಾಗದಲ್ಲಿ "ಸಿಟಿ ಮುಜಕೂರು ಮೈಸೂರು ರೋಡು ಹಳೆ ಟಿಂಬರುಯಾರ್ಡು ಬಳಿ ಇರುವ ಮ್ಯೂನಿಸಿಪಲ್ ಖಾಲಿ ಜಮೀನಲ್ಲಿ ಭಂಡಿಗಳು ವಗೈರೆ ನಿಲ್ಲುವವರ ಕಡೆಯಿಂದ ಜಮೀನು ಬಾಡಿಗೆ ವಸೂಲ್ ಮಾಡಿಕೊಳ್ಳುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

4. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರ್ರೆನ್ಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

5. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿ ಇರುವವರು ಬದ್ಧರಾಗಿ ಇರುವದಿಲ್ಲವು. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

6. ಕಂಟ್ರಾಕ್ಟು ಮೊಬಲಗಿನ ಪೈಕಿ 1 ತಿಂಗಳ ಮೊಬಲಗನ್ನು ಅಮಾನತ್ತು ಇಡಬೇಕು.

7. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನು ಪ್ರತಿ ತಿಂಗಳು 5ನೆ ತಾರೀಖು ವಳಗಾಗಿ ಮುಂದಾಗಿಯೆ ಪಾವತಿ ಮಾಡಿ ರಸೀತಿ ಪಡಿಯುತ್ತಾ ಬರಬೇಕು. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಕೆಲಸವನ್ನು ಸರಿಯಾಗಿ ನೆರವೇರಿಸುವ ಬಗ್ಗೆ ಆತನ ಕಂಟ್ರಾಕ್ಟು ಮಂಜೂರಾದ 7 ದಿವಸದ ಒಳಗಾಗಿ ಛಾಪಾಕಾಗದದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

8. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಇಟ್ಟುಕೊಳ್ಳಲ್ಪಡುವದು. ಇವನು ಕಂಟ್ರಾಕ್ಟ್ ಕಾಲದಲ್ಲಿ ಪ್ರೆಸಿಡೆಂಟ್ ಸ್ಸಾಹೇಬರು ಇವನಿಗೆ ವಿಧಿಸಿದ ಜುಲ್ಮಾನೆಗಳನ್ನು ಇವನು ಅಲಾಹಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟ ಠೇವಣಿ ಭರ್ತಿ ಬಗ್ಗೆ ಕಂಟ್ರಾಕ್ಟುದಾರನಿಗೆ ನೋಟೀಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

9. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳದುಕೊಳ್ಳಬಹುದು.

10. ಸರ್ಕಾರಿ ಉಪಯೋಗಕ್ಕೋಸ್ಕರವಾಗಿ ಈ ಸ್ಥಳ ಬೇಕಾದಲ್ಲಿ ಬೇರೆ ಸ್ಥಳ ನೇಮಿಸಲ್ಪಡುತ್ತಯಾಗಿ ಆಗ ಯಾವ ಕಂಪೆನ್ಸೇಷನ್ ಅಪೇಕ್ಷಿಸದೆ ಕಂಟ್ರಾಕ್ಟು ಷರತ್ತಿನಂತೆ ನಡದುಕೊಳ್ಳಬೇಕಾಗಿರುತ್ತೆ.

11. ಕಂಟ್ರಾಕ್ಟು ಹದ್ದಿನ ಸ್ಥಳಕ್ಕೆ ಹುಲ್ಲು, ಕಟ್ಟಿಗೆ ವಗೈರೆ ಭಂಡಿಗಳೆ ಆಗಲಿ ಅಥವಾ ಹುಲ್ಲು, ಕಟ್ಟಿಗೆ ವಗೈರೆ ಹೊರೆಗಳೆ ಆಗಲಿ ಬಾರದೆ ಇದ್ದಲ್ಲಿ ಇದಕ್ಕಾಗಿ ಯಾವ ಲುಕ್ಸಾನಿಗೂ ಪರಿಹಾರ ದೊರಿಯುಲಾರದು.

12. ಮೇಲ್ಕಂಡ ಜಾಗಾ ವಿನಹಾ ಇತರ ಸ್ಥಳಗಳಲ್ಲಿ ಭಂಡಿಗಳಿಗೆ ಆಗಲಿ ಅಥವಾ ಹುಲ್ಲು, ಕಟ್ಟಿಗೆ ವಗೈರೆಗಳಿಗೆ ಆಗಲಿ ರುಸುಂ ವಸೂಲ್ ಮಾಡಿಕೊಳ್ಳಕೂಡದು.

13. ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡದುಕೊಂಡಲ್ಲಿ ಅಂಥಾವರ ಕಂಟ್ರಾಕ್ಟನ್ನು ರದ್ದು ಮಾಡಿ ಬೇರೆ ಜನಕ್ಕೆ ಕೊಡಲ್ಪಡುತ್ತೆ. ಹಾಗೆ ಬೇರೆ ಕಂಟ್ರಾಕ್ಟು ಕೊಡುವದರಲ್ಲಿ ಉಂಟಾಗುವ ಲುಕ್ಸಾನ್ ಮೊಬಲಗನ್ನು ಬೋರ್ಡಿನವರು ಮೊದಲಿನ ಕಂಟ್ರಾಕ್ಟುದಾರನ ಚರ ಸ್ಥಿರ ಜಿಂದಗಿಯನ್ನು ಜಫ್ತಿ ಹರಾಜ್ ಮೂಲಕ ವಸೂಲ್ ಮಾಡಿಕೊಳ್ಳಲು ಸ್ವತಂತ್ರರಾಗಿ ಇರುತ್ತಾರೆ.

14. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬ್ತು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನ ಬಿನ ತಕರಾರು ತೆಗದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

ತಾರೀಖು 11ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ನಾಲ್ಕನೇ ಡಿವೀಜನ್ ತಾರಾಮಂಡಲಪೇಟೆ ನಾಲ್ಕುಭಾವಿ ಬಳಿಯಣ ಖಾಲಿ ಜಮೀನನಲ್ಲಿ ಭಂಡಿಗಳು ವಗ್ಯೆರೆ ನಿಲ್ಲುವವರ ಕಡೆಯಿಂದ, ಜಮೀನ್ ಬಾಡಿಗೆಯನ್ನು 1904ನೆ ಇಸವಿ ಜುಲೈ ಗುರ್ರೇ ಲಾಗಾಯತು 1905ನೆ ಇಸವಿ ಜೂನ್ ಆಖ್ಯೆರ ವರಿಗೆ ರೋಜೇನಾ ಇದರಡಿ ನಮೂದಿಸಿರುವ ದರಗಳಂತೆ ವಸೂಲ್ ಮಾಡಿಕೊಳ್ಳತಕ್ಕದ್ದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1904ನೆ ಜೂನ್ 14ನೆ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು :—

2. ಮೇಲ್ಕಂಡ ಜಾಗಾದಲ್ಲಿ ಬಾಡಿಗೆ ರುಸುಂ ವಸೂಲ್ ಮಾಡತಕ್ಕ ದರಗಳ ತಪಶೀಲ್ :—

			ರೂ. ಆ. ಪೈ.
1. ಕಟ್ಟಿಗೆ ಮತ್ತು ಹುಲ್ಲುಭಂಡಿ 1ಕ್ಕೆ	..	...	0—2—0
2. ಕಟ್ಟಿಗೆ ಹೊರೆ 1ಕ್ಕೆ	..	...	0–0—1
3. ಹುಲ್ಲು ಹೊರೆ 1ಕ್ಕೆ	...	...	0–0—2
4. ತರಕಾರಿ ಅಂಗಡಿ ಜಾಗಾಕ್ಕೆ	..	...	0—0—2
5. ಕುಂಬಾರ್ರ ಸಾಮಾನು ಮಂಕ್ರಿ 1ಕ್ಕೆ	..	..	0—0—2
6. ವಿರ್ಗ ವಗ್ಯೆರೆ ಅಂಗಡಿ 1ಕ್ಕೆ	..	...	0—0—2

3. ದರಖಾಸ್ತುಗಳ ಮೇಲ್ಭಾಗದಲ್ಲಿ "ತಾರಾಮಂಡ್ಲಪೇಟೆ ನಾಲ್ಕುಭಾವಿ ಬಳಿಯಣ ಖಾಲಿ ಜಮೀನಿನಲ್ಲಿ ಕಟ್ಟಿಗೆ ಮತ್ತು ಹುಲ್ಲುಭಂಡಿ ವಗ್ಯೆರೆ ಇಟ್ಟುಕೊಂಡು ಮಾರುವವರಿಂದ ಜಮೀನ್-ಬಾಡಿಗೆ ವಸೂಲ್ ಮಾಡಿಕೊಳ್ಳುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

4. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

5. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿ ಇರುವವರು ಬದ್ಧರಾಗಿ ಇರುವದಿಲ್ಲವು. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

6. ಕಂಟ್ರಾಕ್ಟ ಮೊಬಲಗಿನ ಪೈಕಿ 1 ತಿಂಗಳ ಮೊಬಲಗನ್ನು ಅಮಾನತ್ತು ಇಡಬೇಕು.

7. ಕಂಟ್ರಾಕ್ಟದಾರನು ಅವನ ಕಂಟ್ರಾಕ್ಟು ಮೊಬಲಗನ್ನು ಪ್ರತಿ ತಿಂಗಳು 5ನೆ ತಾರೀಖು ವಳಗಾಗಿ ಮುಂದಾಗಿಯೆ ಪಾವತಿ ಮಾಡಿ ರಶೀತಿ ಪಡಿಯುತ್ತಾ ಬರಬೇಕು. ಕಂಟ್ರಾಕ್ಟದಾರನು ಅವನ ಕಂಟ್ರಾಕ್ಟು ಕೆಲಸವನ್ನು ಸರಿಯಾಗಿ ನೆರವೇರಿಸುವ ಬಗ್ಯೆ ಆತನ ಕಂಟ್ರಾಕ್ಟ ಮಂಜೂರಾದ 7 ದಿವಸದ ಒಳಗಾಗಿ ಛಾಪಾಕಾಗದದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

8. ಠೇವಣಿ ಹಣವು ಕಂಟ್ರಾಕ್ಟದಾರನು ತನ್ನ ಕಂಟ್ರಾಕ್ಟ ಆಖ್ಯೆರಾಗುವವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಇಟ್ಟುಕೊಳ್ಳಲ್ಪಡುವದು. ಇವನ ಕಂಟ್ರಾಕ್ಟ ಕಾಲದಲ್ಲಿ ಪ್ರೆಶಿಡೆಂಟ್ ಸಾಹೇಬರು ಇವನಿಗೆ ವಿಧಿಸಿದ ಜುಲ್ಮಾನೆಗಳನ್ನು ಇವನು ಅಲಾಹಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟದಾರನಿಗೆ ನೋಟೀಸ್ ಕೊಡಲ್ಪಡುವದು. ಕಂಟ್ರಾಕ್ಟ ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

9. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳದುಕೊಳ್ಳಬಹುದು.

10. ಸರ್ಕಾರಿ ಉಪಯೋಗಕ್ಕೋಸ್ಕರವಾಗಿ ಈ ಸ್ಥಳ ಬೇಕಾದಲ್ಲಿ ಬೇರೆ ಸ್ಥಳ ನೇಮಿಸಲ್ಪಡುತ್ತೆಯಾಗಿ ಆಗ ಯಾವ ಕಂಪೆನ್ಸೇಷನ್ ಅಪೇಕ್ಷಿಸದೆ ಕಂಟ್ರಾಕ್ಟು ಷರತ್ತಿನಂತೆ ನಡದುಕೊಳ್ಳಬೇಕಾಗಿರುತ್ತೆ.

11. ಕಂಟ್ರಾಕ್ಟು ಹದ್ದಿನ ಸ್ಥಳಕ್ಕೆ ಹುಲ್ಲು, ಕಟ್ಟಿಗೆ ವಗ್ಯೆರೆ ಭಂಡಿಗಳ ಆಗಲಿ ಅಥವಾ ಹುಲ್ಲು, ಕಟ್ಟಿಗೆ ವಗ್ಯೆರೆ ಹೊರೆಗಳ ಆಗಲಿ ಬಾರದೆ ಇದ್ದಲ್ಲಿ ಇದಕ್ಕಾಗಿ ಯಾವ ಲುಕ್ಸಾನಿಗೂ ಪರಿಹಾರ ದೊರಿಯಲಾರದು.

12. ಮೇಲ್ಕಂಡ ಜಾಗಾ ವಿನಹಾ ಇತರ ಸ್ಥಳಗಳಲ್ಲಿ ಭಂಡಿಗಳಿಗೆ ಆಗಲಿ ಅಥವಾ ಹುಲ್ಲು, ಕಟ್ಟಿಗೆ ವಗ್ಯೆರೆಗಳಿಗೆ ಆಗಲಿ ರುಸುಂ ವಸೂಲ್ ಮಾಡಿಕೊಳ್ಳಕೂಡದು.

13. ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡದುಕೊಂಡಲ್ಲಿ ಅಂಥಾವರ ಕಂಟ್ರಾಕ್ಟನ್ನು ರದ್ದುಮಾಡಿ ಬೇರೆ ಜನಕ್ಕೆ ಕೊಡಲ್ಪಡುತ್ತೆ. ಹಾಗೆ ಬೇರೆ ಕಂಟ್ರಾಕ್ಟ ಕೊಡುವದರಲ್ಲಿ ಉಂಟಾಗುವ ಲುಕ್ಸಾನ್ ಮೊಬಲಗನ್ನು ಬೋರ್ಡಿನವರು ಮೊದಲಿನ ಕಂಟ್ರಾಕ್ಟದಾರನ ಚರ ಸ್ಥಿರ ಜಿಂದಗಿಯನ್ನು ಜಫ್ತಿ ಹರಾಜ್ ಮೂಲಕ ವಸೂಲ್ ಮಾಡಿಕೊಳ್ಳಲು ಸ್ವತಂತ್ರರಾಗಿ ಇರುತ್ತಾರೆ.

14. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟ ವಗ್ಯೆರೆ ಕೊಡಕೂಡದು. ಮತ್ತು ಪ್ರೆಶಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗ್ಯೆರೆಗಳನ್ನು ಬಿಲ್ ತಕಗಾರು ತೆಗೆದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

933

ತಾರೀಖು 11ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,— ಸಿಟಿ ಮಜಕೂರು ಕಸಾಯಿ ಮಾರ್ಕೆಟ್ಟಿನಲ್ಲಿ ರೋಜಿನಾ ಸಾಯಂಕಾಲದ ವ್ಯಾಳೆ ಕಟಾವು ಆಗುವ ಕುರಿ ಅಥವಾ ಮೇಕೆ ರಾಸ್ 1ಕ್ಕೆ 0—2—0 ಎರಡು ಆಣೆ ಮ್ಯಾರಿಗೆ 1904ನೆ ಇಸವಿ ಜ್ಯುಲೈ ಗುರ್ರೆ ಲಾಗಾಯಿತು 1905ನೆ ಇಸವಿ ಜೂನ್ ಆಖೈರ್ ಮಿನಹು ವಸೂಲ್ಮಾಡಿಕೊಳ್ಳುವದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟ್ಯವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ ಸನ್ 1904ನೆ ಇಸವಿ ಜೂನ್ 14ನೆ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು.

2. ದರಖಾಸ್ತುಗಳ ಮೇಲ್‌ಭಾಗದಲ್ಲಿ "ಮ್ಯುನಿಸಿಪಲ್ ಸ್ಲಾಟರ್ ಹೌಸಿನ ರುಸುಂ ವಸೂಲ್ಮಾಡುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳು ಆಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಒಂದು ತಿಂಗಳ ಕಂಟ್ರಾಕ್ಟು ಮೊಬಲಗು ಅಮಾನತ್ತು ಇಡಬೇಕು. ಮತ್ತು ಮಂಜೂರಾದ ಸಂಗತಿಯನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಇಜಾರೆ ಮುಚ್ಚಳಿಕೆಯನ್ನು ಬರದು ಕೊಡಬೇಕು. ಹಾಗೆ ತಪ್ಪಿದರೆ ಠೇವಣಿ ಮೊಬಲಗು ಬೋರ್ಡಿಗೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಇತರರಿಗೆ ವಿಲೇವಾರಿ ಮಾಡುವದರಲ್ಲಿ ವುಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

6. ಸ್ಲಾಟರ್ ಹೌಸನ್ನ ಪಾಕ್ ಮಾಡಿಸಲು ನೇಮಿಸಲ್ಪಡುವ ಎಸ್ಟಾಬ್ಲಿಷಮೆಂಟ್ ಛಾರ್ಜಿಗಾಗಿ ಮಾಹೆಯಾನ 25 ರೂಪಾಯಿ ಮೇರಿಗೆ ಹರಯೇಕ್ ತಿಂಗಳು 5ನೆ ತಾರೀಖು ವಳಗಾಗಿ ಕಂಟ್ರಾಕ್ಟು ಮೊಬಲಗಿನ ಸಂಗಡ ಹಾಜರ್ಮಾಡಬೇಕು. ಸ್ಲಾಟರ್ ಹೌಸಿನಲ್ಲಿ ಬೀಳುವ ಕಚರಾ, ಕಂಟ್ರಾಕ್ಟುದಾರ್ರಿಗೆ ಸೇರತಕ್ಕದ್ದಿಲ್ಲಾ.

7. ಕಂಟ್ರಾಕ್ಟುದಾರನು ಪ್ರತಿ ತಿಂಗಳ 5ನೆ ತಾರೀಖು ಒಳಗಾಗಿ ಆ ಕಂಟ್ರಾಕ್ಟು ಬಾಬತು ಆಯಾಯ ತಿಂಗಳ ಮೊಬಲಗನ್ನು ಮತ್ತು ಎಸ್ಟಾಬ್ಲಿಷಮೆಂಟ್ ಛಾರ್ಜನ್ನು ಮುಂದಾಗಿಯೇ ಹಾಜರ್ಮಾಡಿ ರಶೀತಿ ಪಡಿಯಬೇಕಾಗಿಧೆ.

8. ಅಮಾನತನಲ್ಲಿ ಇಡಲ್ಪಟ್ಟ ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟ್ ಆಖೈರ್ ಆಗುವವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರಿಯಾಗಿ ಅಮಾನತ ಉಳಿಸಿಕೊಳ್ಳಲ್ಪಡುವದು ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರವರು ಇವನಿಗೆ ವಿಧಿಸುವ ಜುರ್ಮಾನೆಗಳನ್ನು ಇವನು ಅಲಾಯಿಧಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಗೆ ಕಂಟ್ರಾಕ್ಟುದಾರನಿಗೆ ನೋಟೀಸು ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

9. ಕಡಮೆ ವಿಷಯಗಳನ್ನ ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳದುಕೊಳ್ಳಬಹುದು.

10. ಸದರೀ ಸ್ಲಾಟರ್ ಹೌಸನ್ನ ಕಂಟ್ರಾಕ್ಟು ಕಾಲದಲ್ಲಿ ಬ್ಯಾರೆ ಸ್ಥಳಕ್ಕೆ ವರ್ಗ ಮಾಡಿದ್ದೇ ಆದರೆ ಬೆ ತಕರಾರ್ ಅಲ್ಲಿಗೆ ಹೋಗಬೇಕು.

11. ಪ್ರೆಸಿಡೆಂಟರವರ ಮಂಜೂರಿ ಇಲ್ಲಧೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನ ಬೆ ತಕರಾರು ತೆಗದುಕೊಳ್ಳಲು ಸರೀನ್ ಏರ್ಪಾಡು ಇಡತಕ್ಕದ್ದು.

12. ಮಾರ್ಕೆಟ್‌ಷೋ ಎಂಬ ವಿನೋದವು ಯಾವ ದಿವಸ ನಡಿಸಲ್ಪಡುತ್ತೋ ಆದಕ್ಕೆ ಹಿಂದಿನ ದಿನ ಸ್ಲಾಟರ್ ಹೌಸಿನಲ್ಲಿ ಮಾರ್ಕೆಟ್‌ಷೋಗೋಸ್ಕರ ಕಟಾವಾಗುವ ಕುರಿಗಳು ಅಥವಾ ಮೇಕೆಗಳ ಮೇಲೆ ರುಸುಂ ವಸೂಲ್ಮಾಡಕೂಡದು. ಈ ನಷ್ಟಕ್ಕಾಗಿ ಬೋರ್ಡಿನವರು ರಿಮಿಷನ್ ಕೊಡತಕ್ಕದ್ದಿಲ್ಲ.

13. ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಕ್ಕಾದರೂ ವಿರೋಧವಾಗಿ ನಡಕೊಂಡರೂ ಮೇಲಿನ ರೇಟಿಗಿಂತ ಜಾಸ್ತಿಯಾಗಿಯೂ ಮತ್ತು ಸ್ಲಾಟರ್‌ಹೌಸ್ ವಿನಹ ಇತರ ಯಾವ ಸ್ಥಳಗಳಲ್ಲಿ ಆಗಲಿ ರುಸುಂ ವಸೂಲ್ಮಾಡಿಕೊಂಡರೂ ಕೂಡ್ಲೆ ಕಂಟ್ರಾಕ್ಟನ್ನ ರದ್ದುಮಾಡಿ ಬೇರೆ ಜನರಿಗೆ ಕೊಡಲ್ಪಡುವದಲ್ಲದೆ ಠೇವಣಿ ಮೊಬಲಗನ್ನ ದಂಡವಾಗಿ ಅಥವಾ ಅವನ ಬಾಕಿ ಭರ್ತಿಗಾಗಿ ತೆಗದುಕೊಂಡು ಬಾಕಿ ಮೊಬಲಗಿಗೆ ಕಂಟ್ರಾಕ್ಟುದಾರ್ರನ್ನ ಜವಾಬ್ದಾರನನ್ನಾಗಿಮಾಡಿ ಅವನ ಸ್ಥಿರ ಚರ ಜಿಂದಗಿ ಜಪ್ತು ಮೂಲಕ ವಸೂಲ್ಮಾಡಲ್ಪಡುತ್ತೆ.

ತಾರೀಖು 11ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ, ಸಿಟಿ ಮುಜಕೂರು ಕೋಟೆ ಮುಂಭಾಗದಲ್ಲಿ ಕಲ್ಯಾಣಿ ಇದ್ದ ಮೈದಾನದ ದಕ್ಷಿಣ ಭಾಗದಲ್ಲಿ ಭಂಡಿಗಳು ನಿಲ್ಲುವದಕ್ಕೆ ಹದ್ದುಮಾಡಿರುವ ಸ್ಥಳದಲ್ಲಿ ಬಂದು ನಿಲ್ಲುವ ಕಲ್ಲು ಭರ್ತಿ ಪ್ರತಿ ಭಂಡಿಗೂ 1904ನೆ ಇಸವಿ ಜುಲೈ ಗುರ್ರೆ ಲಾಗಾಯತು 1905ನೆ ಇಸವಿ ಜೂನ್ ಆಖೈರು ವರಿವಿಗೆ ರೋಜೇನಾ ದರ ಭಂಡಿ 1ಕ್ಕೆ 0—0—6 ಆರು ಪೈ ಮೇರಿಗೆ ರುಸುಂ ವಸೂಲ್ಮಾಡಿಕೊಳ್ಳುವದಕ್ಕೂ ಮತ್ತು ಅದರಲ್ಲಿ ಬೀಳುವ ಕಚಕರಾವನ್ನು ರೂಢಿಸಿಕೊಳ್ಳುವದಕ್ಕೂ ಸಹ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1904ನೆ ಜೂನ್ 14ನೆ ತಾರೀಖು ಮಧ್ಯಾನ್ಹ 2 ಘಂಟೆ ವಳಗಾಗಿ ಕೊಡಬಹುದು. ಸದರೀ ಸ್ಥಳದ ಪ್ಲಾನ್ ಮ್ಯುನಿಸಿಪಲ್ ಆಫೀಸಿನಲ್ಲಿ ನೋಡಬಹುದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಸಿಟಿ ಮುಜಕೂರು ಕೋಟೆ ಮುಂಭಾಗದಲ್ಲಿ ಕಲ್ಯಾಣಿ ಇದ್ದ ಬೈಲು ಜಮೀನಿನ ದಕ್ಷಿಣ ಭಾಗದಲ್ಲಿ ಕಲ್ಲು ಭಂಡಿ ರುಸುಂ ವಸೂಲ್ಮಾಡಿಕೊಳ್ಳುವದಕ್ಕೂ ಮತ್ತು ಕಚಕರಾ ರೂಢಿಸಿಕೊಳ್ಳುವದಕ್ಕೂ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರ್ರೆನ್ಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿ ಇರುವವರು ಬದ್ಧರಾಗಿ ಇರುವದಿಲ್ಲವು; ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

5 ಕಂಟ್ರಾಕ್ಟು ಮೊಬಲಗಿನ ಪೈಕಿ 1 ತಿಂಗಳ ಮೊಬಲಗನ್ನು ಅಮಾನತ್ತು ಇಡಬೇಕು.

6. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನು ಪ್ರತಿ ತಿಂಗಳು 5ನೆ ತಾರೀಖು ವಳಗಾಗಿ ಮುಂದಾಗಿಯೇ ಪಾವತಿ ಮಾಡಿ ರಶೀತಿ ಪಡಿಯುತ್ತಾ ಬರಬೇಕು. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಕೆಲಸವನ್ನು ಸರಿಯಾಗಿ ನೆರವೇರಿಸುವ ಬಗ್ಯೆ ಅತನ ಕಂಟ್ರಾಕ್ಟು ಮಂಜೂರಾದ 7 ದಿವಸದ ವಳಗಾಗಿ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

7. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವ ವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಮಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುಲ್ಮಾನೆಗಳನ್ನು ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟೀಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸು ಮಾಡಲ್ಪಡುವದು.

8. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

9. ಸರ್ಕಾರಿ ಉಪಯೋಗಕ್ಕೋಸ್ಕರವಾಗಿ ಈ ಸ್ಥಳ ಬೇಕಾದಲ್ಲಿ ಬೇರೆ ಸ್ಥಳ ನೇಮಿಸಲ್ಪಡುತ್ತೆಯಾಗಿ ಆಗ ಯಾವ ಕಂಪೆನ್ಸೇಷನ್ ಅಪೇಕ್ಷಿಸದೆ ಕಂಟ್ರಾಕ್ಟು ಷರತ್ತಿನಂತೆ ನಡದುಕೊಳ್ಳಬೇಕಾಗಿರುತ್ತೆ.

10. ಕಂಟ್ರಾಕ್ಟು ಹದ್ದಿನ ಸ್ಥಳಕ್ಕೆ ಭಂಡಿ ಬಾರದೇ ಇದ್ದಲ್ಲಿ ಇದಕ್ಕಾಗಿ ಯಾವ ಲುಕ್ಸಾನು ದೊರಿಯಲಾರದು.

11. ಪ್ರೆಸಿಡೆಂಟ್ ಸಾಹೇಬರವರ ಮಂಜೂರಿ ಇಲ್ಲದೆ ಬಾಬು ಇತರರಿಗೆ ಷಿಕಮಿ ಕಂಟ್ರಾಕ್ಟು ವಗೈರೆ ಕೊಡಕೂಡದು ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನು ಬೆನ್ ತಕರಾರು ತೆಗದುಕೊಳ್ಳಲು ಸಲೀಸು ವಿಧಾನಡು ಇಡತಕ್ಕದು.

12. ಇವುಗಳ ಪೈಕಿ ಯಾವ ಷರತ್ತಿಗಾಗಲಿ ತಪ್ಪಿಸಿಕೊಂಡರೆ ತಕ್ಷಣ ಕಂಟ್ರಾಕ್ಟನ್ನು ಬೇರೆ ಜನರಿಗೆ ಕೊಟ್ಟು ಲುಕ್ಸಾನು ಮೊಬಲಗಿಗೆ ಕಂಟ್ರಾಕ್ಟುದಾರನನ್ನು ಗುರಿಮಾಡುವದಲ್ಲದೆ ಠೇವಣಿ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುತ್ತೆ.

ತಾರೀಖು 11ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,—ಟೌನ್ ಮುಜಕೂರಿನಲ್ಲಿರತಕ್ಕ ಅಂದರೆ, ಮಾಮೂಲ್ ಅನುಸರಿಸಿ ಮಾಫಿ ನಡಿಯುತಕ್ಕ ತೆಂಗಿನ ಮರಗಳು ಶಿವಾಯಿ ಬೋರ್ಡಿಗೆ ಸೇರಿದ ತೆಂಗಿನ ಮರಗಳ ಫಸಲ್ ಪೈಕಿ ಆಯಾಯ ಮನೆ ಅಥವಾ ಅಂಗಡಿ ಮಾಲೀಕರಿಗೆ ಸಲ್ಲತಕ್ಕ ಅರ್ಧ ಹಿಸ್ಸೆ ಜಾತಾ ಉಳಿದ ಅರ್ಧ ಹಿಸ್ಸೆ ಫಸಲನ್ನು 1904ನೆ ಇಸವಿ ಜುಲೈ ಗುರ್ರೇ ಲಾಗಾಯತು 1905ನೆ ಇಸವಿ ಜೂನ್ ಆಖೈರುವರಿವಿಗೂ ಒಂದು ಸಾಲ್ ಪೂರ್ತಿ ರೂಢಿಸಿಕೊಳ್ಳುವದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1904ನೆ ಇಸವಿ ಜೂನ್ 14ನೆ ತಾರೀಖು ಮಧ್ಯಾಹ್ನ 2 ಘಂಟೆ ಒಳಗಾಗಿ ಕೊಡಬಹುದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಷಹರ್ ಮುಜಕೂರಿಗೆ ಸೇರಿದ ತೆಂಗಿನ ಫಸಲು ರೂಢಿಸಿಕೊಳ್ಳುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲೀ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು ಮತ್ತು ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

5. ಮುಂಜೂರಾದ ದರಖಾಸ್ತುದಾರನು ಆತನ ದರಖಾಸ್ತು ಮುಂಜೂರಾದ ಸಂಗತಿಯನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಕಂಟ್ರಾಕ್ಟಿನ ವಿಶಿಷ್ಟ ಹಣವನ್ನು ಹಾಜರ್ಮಾಡಿ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತೇನೆಂಬುವದಕ್ಕೆ ಛಾಪಾ ಕಾಗದದಲ್ಲಿ ಇಜಾರೆ ಮುಚ್ಚಳಿಕೆಯನ್ನು ಬರದುಕೊಡಬೇಕು. ಅದಕ್ಕೆ ತಪ್ಪಿದರೆ ಆ ಠೇವಣಿ ಹಣವು ಬೋರ್ಡಿಗೆ ಸೇರಿಸಿಕೊಳ್ಳಲ್ಪಡುವದು. ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡುವದರಲ್ಲಿ ಆಗುವ ನುಕ್ಸಾನಿಗೆ ಅವನು ಗುರಿಯಾಗುತ್ತಾನೆ. ಈಗ ಇರತಕ್ಕ ಮರಗಳ ಪೈಕಿ ಪಬ್ಲಿಕ್ ಅನುಕೂಲತೆ ಬಗ್ಯೆ ಆಗಲಿ ಅಥವಾ ಇನ್ಯಾವ ಕಾರಣದಿಂದಾಗಲಿ ಮರಗಳನ್ನು ಕಡಿಸಿದಲ್ಲಿ ಆ ಬಗ್ಯೆ ಯಾವ ನುಕ್ಸಾನು ಕೇಳತಕ್ಕದ್ದಲ್ಲ.

6. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿ ಇರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

7. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವವರಿವಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟು ಸಾಹೇಬರು ಇವನಿಗೆ ವಿಧಿಸುವ ಜುಲ್ಮಾನೆಗಳನ್ನು ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟೀಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣವು ವಾಪಸು ಮಾಡಲ್ಪಡುವದು.

8. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಪಿಕ್ಕಿ ಕಂಟ್ರಾಕ್ಟು ವಗೈರೆ ಕೊಡಕೂಡದು ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನು ಬಿಲಾ ತಕರಾರು ತೆಗದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

ತಾರೀಖು 11ನೇ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:— ಇದರಡಿ ನಮೂದಿಸಿ ಇರುವ ಹುಲ್ಲುಗಾವಲುಗಳನ್ನು 1904-05ನೇ ಸಾಲಿಗೆ ಅಂದರೆ 1904ನೇ ಇಸವಿ ಜುಲೈ ಗುರ್ರು ಲಾಗಾಯಿತು 1905ನೇ ಇಸವಿ ಜೂನ್ ಆಖೈರ್ ಮಿನಹು ರೂಢಿಸಿಕೊಳ್ಳಲು ಮೊಹರ್ಮಾಡಿದ ದರಖಾಸ್ತುಗಳನ್ನು ಇಷ್ಟಪಡುವವರು ಈ ಕೆಳಗೆ ಸೈನ್ ಮಾಡಿರುವವರಿಗೆ 1904ನೇ ಇಸವಿ ಜೂನ್ 14ನೇ ತಾರೀಖು ಮಧ್ಯಾಹ್ನ 2 ಘಂಟೆ ಒಳಗಾಗಿ ಕೊಡಬಹುದು.

1. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡುವ ಅಥವಾ ಕಾರಣವಿಲ್ಲದೆ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಈ ಕೆಳಗೆ ಸೈನ್ ಮಾಡಿರುವವರು ಉಳಿಸಿಕೊಂಡಿರುತ್ತಾರೆ. ಎಲ್ಲಾದಕ್ಕಿಂತ ಹೆಚ್ಚಾದ ದರಖಾಸ್ತನ್ನೇ ಅಂಗೀಕರಿಸಬೇಕೆಂಬುವದಕ್ಕೆ ಪ್ರೆಸಿಡೆಂಟರು ಬದ್ಧರಾಗಿರುವದಿಲ್ಲ.

3. ಆಯಾಯ ಹುಲ್ಲುಗಾವಲುಗಳಲ್ಲಿ ಇರುವ ಮರಗಳಿಗೆ ಅಪಾಯವಿಲ್ಲದಂತೆ ಜಾಗ್ರತೆಯಿಂದ ನೋಡಿಕೊಳ್ಳಬೇಕು.

4. ಕೋಟೆಯ ಹುಲ್ಲುಗಾವಲನ್ನು ಪಡದವರು, ಮ್ಯುನಿಸಿಪಾಲಿಟಿಯವರು ಅಲ್ಲಿರತಕ್ಕ ಜಮೀನ್ನ ಯಾರಿಗಾದರೂ ಮನೆ ಕಟ್ಟುವದಕ್ಕೆ ಕೊಟ್ಟಲ್ಲಿ ಹರಕತ್ ಮಾಡಕೂಡದು ಮತ್ತು ಯಾವ ನುಕ್ಸಾನು ಕೇಳಕೂಡದು. ಕೋಟೆ ರ್ಯಾಂಪಾರ್ಟ್ ಕಂದಕದ ಸುತ್ತು ರಸ್ತೆ ವರಿಗಿನ ಹುಲ್ಲುಗಾವಲ್ ಶಿವಾಯಿ ಕೋಟೆಯೊಳಗೆ ಯಾವ ಪ್ರದೇಶದಲ್ಲೂ ದನಗಳನ್ನು ಮೇಯಿಸಕೂಡದು. ಮತ್ತು ಕತ್ತೆಗಳನ್ನು ಬಿಡಕೂಡದು.

5. ದನಗಳನ್ನು ಮೇಯಿಸುವದರಲ್ಲಿ ಸಾಲ್ ಮರಗಳನ್ನು ಮೇದದ್ದೇ ಆದರೆ ಅದಕ್ಕಾಗಿ ಮರ 1ಕ್ಕೆ 5—0—0 ರೂಪಾಯಿ ಮೇರಿಗೆ ನುಕ್ಸಾನ್ ಕೊಡಬೇಕು. ಮತ್ತು ರಸ್ತೆಗಳ ಬಾಜೂದಲ್ಲಿಯೂ ಮೋಹರಿಗಳ ಬಾಜೂದಲ್ಲಿಯೂ ಸಹಾ ದನಗಳನ್ನು ಬಿಟ್ಟು ಮೇಯಿಸಕೂಡದು. ಹುಲ್ಲು ಕೊಯಿದುಕೊಳ್ಳಬೇಕೇ ವಿನಹಾ ಕೆತ್ತಕೂಡದು. ಹಾಗೆ ಕೆತ್ತಿದ್ದೇ ಆದರೆ 5 ರೂಪಾಯಿ ಜುರ್ಮಾನೆ ವಿಧಿಸಲಾದೀತು.

6. ಡಿಟೋ ಹುಲ್ಲುಗಾವಲ್‌ಗಳ ಪೈಕಿ ಯಾವಾಗಲಾದರೂ ಮ್ಯುನಿಸಿಪಾಲಿಟಿಯವರು ಬಿಟ್ಟುಕೊಡಬೇಕೆಂದು ಪಾಯಿದೆ ಅಂದರ್‌ವಾರ್ ಹೇಳಿದ ಕೂಡಲೆ ಬಿಲಾ ತಕರಾರ್ ಬಿಟ್ಟುಕೊಡಬೇಕು. ಅದಕ್ಕಾಗಿ ದರಖಾಸ್ತು ಮೊಬಲಗಿನಲ್ಲಿ ಇಂತ ದಿನಗಳಿಗೆ ದಾಮಾಷ್ಠಾಯಿ ಮೇರಿಗೆ ವಾಪಸು ಕೊಡಲ್ಪಡುತ್ತೆ.

7. ದರಖಾಸ್ತುಗಳ ಮೇಲ್ಭಾಗದಲ್ಲಿ "ಹುಲ್ಲುಗಾವಲುಗಳನ್ನು ರೂಢಿಸಿಕೊಳ್ಳುವದಕ್ಕೆ" ಎಂಬದಾಗಿ ಬರೆದು ಇರತಕ್ಕದ್ದು.

2. G

8. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳು ಆಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

9. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಅವನದರಖಾಸ್ತನ್ನ ಅಂಗೀಕರಿಸಿದ್ದನ್ನ ತಾನು ತಿಳಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಅವನ ದರಖಾಸ್ತಿನ ಪೂರಾ ಮೊಬಲಗನ್ನು ಪಾವತಿ ಮಾಡಬೇಕು. ಹಾಗೆ ಮಾಡದೆ ತಪ್ಪಿದರೆ ಠೇವಣಿ ಮೊಬಲಗು ದಂಡವಾಗಿ ಮ್ಯುನಿಸಿಪಾಲಿಟಿಗೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡಲ್ಪಡುವದರಲ್ಲಿ ಉಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

10. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಮೊಬಲಗು ಕಂಟ್ರಾಕ್ಟು ಆಖೈರಾಗುವವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರಿಯಾಗಿ ಅಮಾನತ್ತು ಇಟ್ಟುಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುರ್ಮಾನೆಗಳನ್ನ ಇವನು ಆಲಾಯಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟಿಸ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ ಮಾಡಲ್ಪಡುವದು.

ತಪಶೀಲ್.

ನಂಬರು	ಹುಲ್ಲುಗಾವಲುಗಳ ಹೆಸರು.	ತಪಶೀಲ್.
1	ಧರ್ಮಾಂಬುಧಿಕೆರೆ ಒಳಗೆರೆ ಮತ್ತು ಕೆರೆಕಟ್ಟೆ ಹುಲ್ಲು ...	ಹುಲ್ಲು ಕೊಯಿದುಕೊಳ್ಳುವ ಮಾತ್ರವೆ ದನಗಳನ್ನು ಬಿಟ್ಟು ಮೇಯಿಸಕೂಡದು.
2	ಧರ್ಮಾಂಬುಧಿ ಕಟ್ ಕಾಲ್ವೆ 2ಕ್ಕೆ ...	ಡಿಟೋ
3	ಮ್ಯುನಿಸಿಪಲ್ ತೋಟ	ಡಿಟೋ
4	ಚಿಕ್ಕರಾಯನ ಕೆರೆಕಟ್ಟೆ ಕೆಳಗೆ ...	ದನಗಳನ್ನ ಮೇಯಿಸಿಕೊಳ್ಳುವದಕ್ಕೆ.
5	ಈ ಪೈಕಿ ಸ್ಮಶಾನದ ಬೈಲ್ ಹುಲ್ಲು	ಡಿಟೋ
6	ಕೋಟೆ ರ್‍ಯಾಂಪಾರ್ಟಿನ ಹುಲ್ಲು ಕಂದಕದ ಸುತ್ತು ರಸ್ತೆವರಿಗೆ. ಈ ಸ್ಥಳಗಳಲ್ಲಿನ ಅವಿನ್ಯೂ ಗಿಡಗಳು ಇರತಕ್ಕ ಪ್ರದೇಶ ವಿನಹ (ಆಸ್ಪತ್ರೆ ಕಡೆಗೆ ಹೋಗಕೂಡದು.)	ಕೋಟೆಯೊಳಗೆ ದನಗಳನ್ನು ಬಿಟ್ಟು ಮೇಯಿಸಕೂಡದು. ಹುಲ್ಲು ಕೊಯದುಕೊಳ್ಳಬೇಕು. ಕಂದಕದ ಸುತ್ತು ಮೇಯಿಸಬಹುದು.
7	ಲಾಲ್‌ಬಾಗ ಮಾವಳ್ಳಿ ಕೆರೆ	ದನಗಳನ್ನು ಬಿಟ್ಟು ಮೇಯಿಸಿಕೊಳ್ಳಲು, ಕೆರೆಗೆ ಅಪಾಯವಿಲ್ಲದಂತೆ.
8	ದೊಡ್ಡ ಬೈಲ್‌ಖಾನೆ	ಡಿಟೋ
9	ಕುಂಬಾರಗುಂಡಿ ಹುಲ್ಲುಗಾವಲ್ (ಸ್ಲಾಟರ್ ಹೌಸಿಗೆ ತೆಗದುಕೊಂಡಿರುವ ಜಾಗ ವಿನಹ ಉಳಿದದ್ದು.)	ಡಿಟೋ
10	ಆರ್ಸಕುಂಟೆ ಪಕ್ಕದ ಮತ್ತು ಒಳಗಿನ ಹುಲ್ಲು ...	ಗಿಡಗಳಿಗೆ ಅಪಾಯವಿಲ್ಲದಂತೆ ದನಗಳನ್ನು ಬಿಟ್ಟು ಮೇಯಿಸಿಕೊಳ್ಳುವದಕ್ಕೆ, ಒಳಹುಲ್ಲು ಕೊಯಿದುಕೊಳ್ಳುವದಕ್ಕೆ ಸಹ.
11	ದಂಡಿಗೆ ಹೋಗುವ ಕಿಡ್ನಿ ರೋಡ್ ರಸ್ತೆಗೆ ಪಶ್ಚಿಮ ಭಾಗ ಇರತಕ್ಕ ಹುಲ್ಲು.	ಡಿಟೋ
12	ಲಂಡನ್‌ಮಿಷನ್ ಸ್ಕೂಲ್ ಪಕ್ಕದ ಹುಲ್ಲುಗಾವಲ್	ಡಿಟೋ
13	ಎಲಹಂಕದಬಾಗಲಿನಿಂದ ಬಳೇ ಬಾಗಲಿಗೆ ಹೋಗುವ ರಸ್ತೆ ಬಲಭಾಗದ ಕಾಲುವೆ ದಡದ ಹುಲ್ಲು.	ಡಿಟೋ
14	ಸಂಪಂಗಿಕೆರೆ ಒಳಗೆರೆ ಹುಲ್ಲುಗಾವಲ್, ಬ್ರೌನ್ ಸಾಹೇಬರಿಗೆ ಸೇರಿದ್ದು ವಿನಹಾ, ಮ್ಯುನಿಸಿಪಾಲಿಟಿಗೆ ಸೇರಿದ್ದು.	ದನಗಳನ್ನ ಬಿಟ್ಟು ಮೇಯಿಸುವದಕ್ಕೆ.
15	ಕೆಂಗೇರಿಬಾಗಲ್ ಬಾರ್‌ಕೋಸ್‌ಬಳಿ ಇರುವ ಕಾವಲ್ ಜಮೀನಿನಲ್ಲಿ, ನಾಟಾಗಳು ಹಾಕತಕ್ಕ ಬಗ್ಯೆ ಉಪಯೋಗಿಸಿಕೊಂಡಿರುವ ಜಮೀನ್ ಶಿವಾಯಿ, ಮರ್ಕಾ ಹದ್ದುಬಸ್ತು ಮಾರ್ಕ್ ಮಾಡಿರುವ ಸ್ಥಳ ವಿನಹ, ನಿಂತ ಜಮೀನಿನಲ್ಲಿ ಬೀಳತಕ್ಕ ಹುಲ್ಲು.	ದನಗಳನ್ನ ಬಿಟ್ಟು ಮೇಯಿಸುವದಕ್ಕೆ.
16	ಮ್ಯುನಿಸಿಪಲ್ ಲಿಮಿಟ್‌ಗೆ ಸೇರಿದ ವೆಸ್ಟರ್ನ್ ಎಕ್ಸ್‌ಟೆನ್ಷನ್‌ನಲ್ಲಿ ಮನೆಗಳಿಗೆ ಕೊಟ್ಟು ಇರುವ ತಾಕುಗಳು ಜಾತಾ ಉಳಿದ ಬೋರ್ಡಿಗೆ ಸೇರಿದ ಜಮೀನಿನಲ್ಲಿಯೂ, ಭೋಗೇನಹಳ್ಳಿ ದಿನ್ನೇಬಳಿಯಲ್ಲಿಯೂ ಇರತಕ್ಕ ಜಮೀನಿನಲ್ಲಿಯೂ ಸಹಾ.	ಮನೆ ಸಾಗುವಳಿಗೆ ಮತ್ತು ಮೊಹರಿ ರೋಡ್ ವಗೈರೆ ತಯಾರ್ಮಾಡಿಸುವದಕ್ಕೆ ಉಪಯೋಗಿಸಿಕೊಳ್ಳುವಾಗ ಹರಕತ್ತಿಲ್ಲದಂತೆ ಕೊಯಿದುಕೊಳ್ಳುವದಕ್ಕೆ ಮತ್ತು ಇತರ ಕಡೆ ಮೇಯಿಸಿಕೊಳ್ಳುವದಕ್ಕೆ.
17	ಕೆಂಪಾಂಬುಧಿ ಕೆರೆಕಟ್ಟೆ ಹುಲ್ಲು ...	ಮೇಯಿಸಿಕೊಳ್ಳುವದಕ್ಕೆ.
18	ದಂಡು ಉಪ್ಪಾರಹಳ್ಳಿ ಊರುಮುಂದಿನ ಹುಲ್ಲುಗಾವಲು ...	ರೈಲ್ವೆ ಕಾಂಪೌಂಡಿನ ಬೇಲಿ ಮತ್ತು ಜಮೀನ್ ಶಿವಾಯಿ, ಮೇಯಿಸಿಕೊಳ್ಳುವದಕ್ಕೆ.
19	ಮಿಲ್ಲರ್ ಒಳಗೆರೆ ಹುಲ್ಲು	ಕೊಯಿದುಕೊಳ್ಳುವದಕ್ಕೆ.

ತಾರೀಖು 27ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ :— ಇದರಡಿ ನಮೂದಿಸಿ ಇರುವ ಹುಲ್ಲುಗಾವಲುಗಳನ್ನು 1904–05ನೆ ಸಾಲಿಗೆ ಅಂದರೆ 1904ನೆ ಇಸವಿ ಜುಲೈ ಗುರ್ರು ಲಾಗಾಯತು 1905ನೆ ಇಸವಿ ಜೂನ್ ಅಖೈರ್ ವಿನಹ ರೂಢಿ ಸಿಕೊಳ್ಳಲು ಮೊಹರ್ಮಾಡಿದ ದರಖಾಸ್ತುಗಳನ್ನು ಇಷ್ಟವುಳ್ಳವರು ಈ ಕೆಳಗೆ ಸೈನ್ ಮಾಡಿರುವವರಿಗೆ 1904ನೆ ಇಸವಿ ಜೂನ್ 14ನೆ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು.

2. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡುವ ಅಥವಾ ಕಾರಣವಿಲ್ಲದೆ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಈ ಕೆಳಗೆ ಸೈನ್ ಮಾಡಿರುವವರು ಉಳಿಸಿಕೊಂಡಿರುತ್ತಾರೆ. ಎಲ್ಲಾ ದರಕ್ಕಿಂತ ಹೆಚ್ಚಾದ ದರಖಾಸ್ತನ್ನೇ ಅಂಗೀಕರಿಸಬೇಕೆಂಬುವದಕ್ಕೆ ಪ್ರೆಸಿಡೆಂಟರು ಬದ್ಧರಾಗಿರುವದಿಲ್ಲ.

3. ಆಯಾಯ ಹುಲ್ಲುಗಾವಲುಗಳಲ್ಲಿ ಇರುವ ಮರಗಳಿಗೆ ಅಪಾಯವಿಲ್ಲದಂತೆ ಜಾಗ್ರತೆಯಿಂದ ನೋಡಿಕೊಳ್ಳಬೇಕು.

4. ಕೋಟೆಯ ಹುಲ್ಲುಗಾವಲನ್ನು ಪಡದವರು, ಮ್ಯುನಿಸಿಪಾಲಿಟಿಯವರು ಅಲ್ಲಿರತಕ್ಕ ಜಮೀನ್ ಯಾರಿಗಾದರೂ ಮನೆ ಕಟ್ಟುವದಕ್ಕೆ ಕೊಟ್ಟಲ್ಲಿ ಹರಕತ್ ಮಾಡಕೂಡದು ಮತ್ತು ಯಾವ ಲುಕ್ಸಾನು ಕೇಳಕೂಡದು. ಕೋಟೆ ರ್ಯಾಂಪಾರ್ಟ್ ಕಂದಕದ ಸುತ್ತು ರಸ್ತೆವರಿಗಿನ ಹುಲ್ಲುಗಾವಲ್ ಶಿವಾಯಿ ಕೋಟೆಯೊಳಗೆ ಯಾವ ಪ್ರದೇಶದಲ್ಲೂ ದನಗಳನ್ನ ಮೇಯಿಸಕೂಡದು. ಮತ್ತು ಕತ್ತೆಗಳನ್ನು ಬಿಡಕೂಡದು.

5. ದನಗಳನ್ನು ಮೇಯಿಸುವದರಲ್ಲಿ ಸಾಲ ಮರಗಳನ್ನು ಮೇದದ್ದೇ ಆದರೆ ಅದಕ್ಕಾಗಿ ಮರ 1ಕ್ಕೆ 5—0—0 ರೂಪಾಯಿ ಮೇರಿಗೆ ಲುಕ್ಸಾನ್ ಕೊಡಬೇಕು. ಮತ್ತು ರಸ್ತೆಗಳ ಬಾಜೂದಲ್ಲಿಯೂ ಮೊಹರಿಗಳ ಬಾಜೂದಲ್ಲಿಯೂ ಸಹಾ ದನಗಳನ್ನು ಬಿಟ್ಟು ಮೇಯಿಸಕೂಡದು. ಹುಲ್ಲು ಕೊಯಿದುಕೊಳ್ಳಬೇಕೇ ವಿನಹಾ ಕೆತ್ತಕೂಡದು. ಹಾಗೆ ಕೆತ್ತಿದ್ದೇ ಆದರೆ 5 ರೂಪಾಯಿ ಜುರ್ಮಾನೆ ವಿಧಿಸಲಾದೀತು.

6. ಡಿಟೋ ಹುಲ್ಲುಗಾವಲ್‌ಗಳ ಪೈಕಿ ಯಾವಾಗಲಾದರೂ ಮ್ಯುನಿಸಿಪಾಲಿಟಿಯವರು ಬಿಟ್ಟುಕೊಡಬೇಕೆಂದು ವಾಯಿದೆ ಅಂದರ್‌ವಾರ್ ಹೇಳಿದ ಕೂಡಲೆ ಬಿಲಾ ತಕರಾರ್ ಬಿಟ್ಟುಕೊಡಬೇಕು. ಅದಕ್ಕಾಗಿ ದರಖಾಸ್ತು ಮೊಬಲಗಿನಲ್ಲಿ ನಿಂತ ದಿನಗಳಿಗೆ ದಾಮಾಷಾಯಿ ಮೇರಿಗೆ ವಾಪಸು ಕೊಡಲ್ಪಡುತ್ತೆ.

7. ದರಖಾಸ್ತುಗಳ ಮೇಲ್‌ಭಾಗದಲ್ಲಿ "ಹುಲ್ಲುಗಾವಲುಗಳನ್ನು ರೂಢಿಸಿಕೊಳ್ಳುವದಕ್ಕೆ" ಎಂಬದಾಗಿ ಬರದು ಇರತಕ್ಕದ್ದು.

8. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳು ಆಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

9. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಅವನ ದರಖಾಸ್ತನ್ನ ಅಂಗೀಕರಿಸಿದ್ದನ್ನ ತಾನು ತಿಳಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಅವನ ದರಖಾಸ್ತಿನ ಪೂರಾ ಮೊಬಲಗನ್ನು ಪಾವತಿ ಮಾಡಬೇಕು. ಹಾಗೆ ಮಾಡದೆ ತಪ್ಪಿದರೆ ಠೇವಣಿ ಮೊಬಲಗು ದಂಡವಾಗಿ ಮ್ಯುನಿಸಿಪಾಲಿಟಿಗೆ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡಲ್ಪಡುವದರಲ್ಲಿ ಉಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

10. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಮೊಬಲಗು ಕಂಟ್ರಾಕ್ಟು ಅಖೈರಾಗುವ ವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರಿಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲವಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುರ್ಮಾನೆಗಳನ್ನ ಇವನು ಅಲಾಯಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟಿಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

ತಪಶೀಲ್.

ನಂಬರು	ಹುಲ್ಲುಗಾವಲುಗಳ ಹೆಸರು.	ತಪಶೀಲ್.
1	ಮುನಿಸಿಪಲ್ ಲಿಮಿಟ್ಸಿಗೆ ಸೇರಿದ ಬಸವನಗುಡಿ ಎಕ್ಸ್‌ಟೆನ್ಷನ್‌ನಲ್ಲಿ ಮನೆಗಳಿಗೆ ಕೊಟ್ಟು ಇರುವ ತಾಕುಗಳು ಜಾತಾ ಉಳಿದ ಬೋರ್ಡಿಗೆ ಸೇರಿದ ಜಮೀನ್‌ನಲ್ಲಿ.	ಮನೆ ಸಾಗುವಳಿಗೆ ಮತ್ತು ಮೊಹರಿ ರೋಡ್ ವಗೈರೆ ತಯಾರ್ಮಾಡುವದಕ್ಕೆ ಉಪಯೋಗಿಸಿಕೊಳ್ಳುವಾಗ ಹರಕತ್ತಿಲ್ಲದಂತೆ ಕೊಯಿದುಕೊಳ್ಳುವದಕ್ಕೆ ಮತ್ತು ಇತರಕಡೆ ಮೇಯಿಸಿಕೊಳ್ಳುವದಕ್ಕೆ.
2	ಮುನಿಸಿಪಲ್ ಲಿಮಿಟ್ಸಿಗೆ ಸೇರಿದ ಮಲ್ಲೇಶ್ವರದ ಎಕ್ಸ್‌ಟೆನ್ಷನ್‌ನಲ್ಲಿ ಮನೆಗಳಿಗೆ ಕೊಟ್ಟಿರುವ ತಾಕುಗಳು ಜಾತಾ ಉಳಿದ ಬೋರ್ಡಿಗೆ ಸೇರಿದ ಜಮೀನ್‌ನಲ್ಲಿ.	ಡಿಟೋ ಮೇರಿಗೆ.
3	ಸಿಟಿ ಮುನಿಸಿಪಲ್ ಆಫೀಸು ಕಾಂಪೌಂಡು ಒಳಗೂ ಮತ್ತು ಹೊರಗೂ.	ದನಗಳನ್ನು ಬಿಟ್ಟು ಮೇಯಿಸುವದಕ್ಕೆ.

ಎ. ಎಸ್. ನಾಗಾಕರ್,
ಪ್ರೆಸಿಡೆಂಟ್.

ಬೆಂಗಳೂರು ಸೆಂಟ್ರಲ್ ಜೈಲ್.

ತಾರೀಖು 15ನೆ ಮೇ 1904.

ಇದರಿಂದ ತಿಳಿಯಪಡಿಸುವದೇನಂದರೆ :—ಸನ್ 1904ನೆ ಇಸವಿ ಜುಲೈ 1ರ ಲಾಗಾಯತು ಸನ್ 1905ನೆ ಇಸವಿ ಜೂನ್ 30ರ ವರಿವಿಗೆ ಆ ಎರಡು ದಿವಸಗಳು ಸೇರಿ, 12 ತಿಂಗಳತನಕ, ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿಗಳ ಉಪಯೋಗಕ್ಕಾಗಿ ಕುರಿಮಾಂಸ ಮತ್ತು ಸವದೆ ಸರಬರಾಯಿ ಮಾಡಲು ಕಂಟ್ರಾಕ್ಟು ತೆಗದುಕೊಳ್ಳುವದಕ್ಕಾಗಿ, ಕವರಿನಲ್ಲಿ ಹಾಕಿ ಮೊಹರು ಮಾಡಿದ ದರಖಾಸ್ತುಗಳನ್ನು ಸನ್ 1904ನೆ ಇಸವಿ 15ನೆ ಜೂನ್ ಬುಧವಾರ ಹಗಲು 10 ಘಂಟೆಯ ವರಿಗೆ, ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರು ತೆಗದುಕೊಳ್ಳುವರೆಂದು ಇದರಿಂದ ಫಾಯಿಷ್ ಮಾಡಿಧೆ.

ಸರಬರಾಯಿ ಆಗಬೇಕಾದ ಪದಾರ್ಥಗಳ ತಪಶೀಲು ಮತ್ತು ದರಖಾಸ್ತುಗಳ ಸಂಬಂಧವಾದ ಕರಾರುಗಳು 1904ನೆ ಇಸವಿ ಮೇ 19ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಮಾಡಿ ಇರುತ್ತದೆ.

ಜಿ. ಹ್ಯೂರೈಟ್,
ಸೂಪರಿಂಟೆಂಡೆಂಟ್, ಸೆಂಟ್ರಲ್ ಜೈಲ್.

ಮೈಸೂರ್ ಜೈಲ್.

ಪ್ರಕಟನೆ.

ತಾರೀಖು 13ನೆ ಮೇ 1904ನೆ ಇಸವಿ.

ಮೈಸೂರು ಜೈಲಿನಲ್ಲಿ ಇರತಕ್ಕ ಖೈದಿಗಳ ಆಹಾರ ಉಪಯುಕ್ತವಾದ ಜಿನಸಿಗಳನ್ನು 1904ನೆ ಇಸವಿ ಜುಲೈ 1ನೆ ತಾರೀಖು ಲಾಗಾಯಿತು 1905ನೆ ಇಸವಿ ಜೂನ್ 30ನೆ ತಾರೀಖಿನ ವರಿಗೆ 1 ವರುಷಕಾಲ ಗುತ್ತಿಗೆ ಮೂಲಕ ಸರಬರಾಯಿ ಮಾಡಲು ಬರುವ ಮೊಹರು ಮಾಡಿದ ದರಖಾಸ್ತುಗಳನ್ನು ಮೈಸೂರು ಜೈಲ್ ಸೂಪರಿಂಟೆಂಡೆಂಟರವರು ಇದೇ 1904ನೆ ಇಸವಿ ಜೂನ್ 11ನೆ ತಾರೀಖು ಶನಿವಾರ ಪ್ರಾತಃಕಾಲ 9 ಘಂಟೆ ವರಿಗೂ ಒಪ್ಪಿಸಿಕೊಳ್ಳುತ್ತಾರೆಂದು ಇದರಿಂದ ಪ್ರಸಿದ್ಧಪಡಿಸಿರುತ್ತೆ.

ಈ ಬಾಬಿನ ತಪಶೀಲ್‌ವಾರು ಪ್ರಕಟನೆಯು 1904ನೆ ಇಸವಿ ಮೇ 19ನೆ ತಾರೀಖಿನ ಗಜೆಟ್ IIನೆ ಭಾಗದ 696ನೆ ಪುಟದಲ್ಲಿ ಫಾಯಿಷ್ ಮಾಡಲ್ಪಟ್ಟಿಧೆ.

ಟಿ. ಎಸ್. ನಂಜಪ್ಪ,
ಪರ್ಸನಲ್ ಅಸಿಸ್ಟೆಂಟ್ ಫಾರ್ ಅಫಿಷಿಯೇಟಿಂಗ್ ಇನ್ಸ್‌ಪೆಕ್ಟರ್ ಜನರಲ್ ಆಫ್ ಪ್ರಿಜನ್ಸ್.

ಮೈಸೂರ ಗೆಜೆಟ್.

ಸಂ. 39] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 22.

ಬೆಂಗಳೂರು, ಗುರುವಾರ, ಜೂನ್ ತಾ॥ 2, ಸ॥ 1904.

IIIನೆ ಭಾಗ.

ನಿಬಂಧನೆಗಳು ಮತ್ತು ಅವುಗಳಂತೆ ಆದ ನೇಮಗಳು.

ಲೆಜಿಸ್ಲೆಟಿವ್ ಇಲಾಖೆ.

1904ನೇ ವರುಷದ 1ನೇ ನಂಬರಿನ ರೆಗ್ಯುಲೇಷನು.

(1904ನೇ ವರುಷದ ಫೆಬ್ರುವರಿ 5ನೇ ತಾರೀಖಿನಲ್ಲಿ ನಿರ್ಣಯಿಸಲಾಯಿತು.)

ಮೈಸೂರಲ್ಲಿ ಜಾರಿಯಲ್ಲಿರುವ 1860ನೇ ವರುಷದ ಇಂಡಿಯನ್ ಪೀನಲ್ ಕೋಡನ್ನು ತಿದ್ದುಪಾಟು ಮಾಡುವ ಬಗ್ಗೆ ಆದ ಒಂದು ರೆಗ್ಯುಲೇಷನು.

1. (1) ಈ ರೆಗ್ಯುಲೇಷನಲ್ಲಿ, "ಮೈಸೂರಲ್ಲಿ ಜಾರಿಯಲ್ಲಿರುವ ಇಂಡಿಯನ್ ಪೀನಲ್ ಕೋಡ್" ಮತ್ತು "ಸದರೀ ಕೋಡು" ಎಂಬುವ ಪದಗಳಿಗೆ, 1870ನೇ ವರುಷದ XXVIIನೇ ನಂಬರಿನ, 1872ನೇ ವರುಷದ XIXನೇ ನಂಬರಿನ ಮತ್ತು 1873ನೇ ವರುಷದ Xನೇ ನಂಬರಿನ ಆಕ್ಟುಗಳಿಂದಲೂ, 1886ನೇ ವರುಷದ 1ನೇ ನಂಬರಿನ ರೆಗ್ಯುಲೇಷನು ಮತ್ತು 1892ನೇ ವರುಷದ 1ನೇ ನಂಬರಿನ 1894ನೇ ವರುಷದ IIನೇ ನಂಬರಿನ ಮತ್ತು 1894ನೇ ವರುಷದ IVನೇ ನಂಬರಿನ ರೆಗ್ಯುಲೇಷನುಗಳು ಇವುಗಳಿಂದ ಮೈಸೂರಲ್ಲಿ ಜಾರಿಗೆ ತರಲ್ಪಟ್ಟ ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡಿನಿಂದಲೂ, ತಿದ್ದುಪಾಟು ಮಾಡಲ್ಪಟ್ಟ ಇಂಡಿಯನ್ ಪೀನಲ್ ಕೋಡೆಂದು ಅರ್ಥ.

(2) 1899ನೇ ವರುಷದ ಜನರಲ್ ಕ್ಲಾಜಸ್ ರೆಗ್ಯುಲೇಷನಿನ 31ನೇ ಪ್ರಕರಣದಲ್ಲಿರುವ ಅನ್ವಯಸೂತ್ರವು, ಮೈಸೂರಲ್ಲಿ ಜಾರಿಯಲ್ಲಿರುವ ಇಂಡಿಯನ್ ಪೀನಲ್ ಕೋಡು ತಕ್ಕ ಬದಲಾವಣೆಗಳೊಂದಿಗೆ ಮೈಸೂರಿಗೆ ಪ್ರಯೋಗವಾಗಬೇಕೆಂದು ಸೂಚಿಸಲ್ಪಟ್ಟಂತೆ, ಸದರಿ ಕೋಡಿಗೆ, ಈ ರೆಗ್ಯುಲೇಷನಿನ ನಿಯಮಗಳಿಗೆ ಒಳಪಟ್ಟು, ಪ್ರಯೋಗವಾಗತಕ್ಕದ್ದು.

2. (1) ಸದರಿ ಕೋಡಿನ 1ನೇ ಪ್ರಕರಣದಲ್ಲಿ "1861ನೇ ವರುಷದ ಮೇ ಮೊದಲನೇ ತಾರೀಖಿನಲ್ಲಿಯೂ ಮತ್ತು ತಾರೀಖಿನಿಂದಲೂ" ಎಂಬ ಪದಗಳು ಮತ್ತು ಸಂಖ್ಯೆಗಳು ರದ್ದು ಮಾಡಲ್ಪಟ್ಟಿರುತ್ತವೆ.

(2) ಸದರಿ ಕೋಡಿನ 2ನೇ ಪ್ರಕರಣದಲ್ಲಿ "1861ನೇ ವರುಷದ ಮೇ ಮೊದಲನೇ ತಾರೀಖಿನಲ್ಲಾಗಲೀ ಅಥವಾ ಮೊದಲನೇ ತಾರೀಖಿನ ಬಳಿಕವಾಗಲೀ" ಎಂಬ ಪದಗಳು ಮತ್ತು ಸಂಖ್ಯೆಗಳು ರದ್ದು ಮಾಡಲ್ಪಟ್ಟಿರುತ್ತವೆ.

3. ಸದರಿ ಕೋಡಿನ 4ನೆ ಪ್ರಕರಣವು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ. ಮತ್ತು ಅದಕ್ಕೆ ಬದಲಾಗಿ ಈ ಕೆಳಗೆ ಬರುವ ಪ್ರಕರಣವು ಇಡಲ್ಪಟ್ಟಿರುತ್ತೆ, ಅದೇನಂದರೆ:—

ದೇಶಾಂತರದಲ್ಲಿ ಮಾಡಲ್ಪಟ್ಟ ಅಪರಾಧಗಳಿಗೆ ಕೋಡಿನ ವ್ಯಾಪ್ತಿ.

"4. ಈ ಕೋಡಿನ ನಿಯಮಗಳು, ಮೈಸೂರು ಹೊರಗೆ ಯಾವ ಪ್ರದೇಶದಲ್ಲಿಯಾದರೂ ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರ ಯಾವ ಪ್ರಜೆಯಿಂದಲಾದರೂ ಮಾಡಲ್ಪಟ್ಟ ಯಾವ ಅಪರಾಧಕ್ಕಾದರೂ ಕೂಡ ಪ್ರಯೋಗವಾಗತಕ್ಕದ್ದು.

ವಿವರಣೆ.—ಈ ಪ್ರಕರಣದಲ್ಲಿ, "ಅಪರಾಧ" ವೆಂಬುವದು, ಮೈಸೂರಲ್ಲಿ ಮಾಡಲ್ಪಟ್ಟದ್ದ ಪಕ್ಷಕ್ಕೆ ಈ ಕೋಡಿನ ಪ್ರಕಾರ ದಂಡಿಸಲ್ಪಡತಕ್ಕದಾದ ಮೈಸೂರು ಹೊರಗೆ ಮಾಡಲ್ಪಟ್ಟ ಪ್ರತಿ ಒಂದು ಕೃತ್ಯವನ್ನೂ ಅಡಗಿಸಿಕೊಳ್ಳುತ್ತೆ.

ಉದಾಹರಣೆಗಳು.

" (a) ಘನವೆತ್ತ ಹೊಂದಿದ ಮಹಾರಾಜರವರ ಪ್ರಜೆಯಾದ A, ಎಂಬ ಒಬ್ಬ ಕೂಲಿಯು ಉಗಾಂಡಾದಲ್ಲಿ ಒಂದು ಖೂನಿಯನ್ನು ಮಾಡುತ್ತಾನೆ. ಮೈಸೂರು ದೇಶದೊಳಗೆ ಯಾವ ಸ್ಥಳದಲ್ಲಿ ಅವನು ಸಿಕ್ಕಿದರೂ ಅಲ್ಲಿ ಅವನು ವಿಚಾರಣೆ ಮಾಡಲ್ಪಟ್ಟು ಖೂನಿಗೆ ತಪ್ಪು ಸಾಬೀತು ಮಾಡಲ್ಪಡಬಹುದು.

" (b) ಘನವೆತ್ತ ಹೊಂದಿದ ಮಹಾರಾಜರವರ ಒಂದು ಪ್ರಜೆಯಾದ D, ಎಂಬುವನು, ಇಂದೋರಿನಲ್ಲಿ ವಾಸವಾಗಿದ್ದು ಮೈಸೂರಿನಲ್ಲಿ ಒಂದು ಖೂನಿಯನ್ನು ಮಾಡುವದಕ್ಕೋಸ್ಕರ E ಎಂಬುವನಿಗೆ ದುಬೋಧನೆ ಮಾಡುತ್ತಾನೆ. D ಎಂಬುವನು ಖೂನಿಗೆ ಸಹಕರಿಸುವ ಅಪರಾಧವನ್ನು ಮಾಡಿರುತ್ತಾನೆ."

4. ಸದರಿ ಕೋಡಿನ 28ನೇ ಪ್ರಕರಣದ ವಿವರಕ್ಕೆ ಬದಲಾಗಿ ಈ ಕೆಳಗೆ ಬರುವದನ್ನು ಇಡತಕ್ಕದ್ದು, ಅದೇನಂದರೆ;—

" ವಿವರ 1.—ಬನಾವಣೆ ಬಗ್ಗೆ ಅನುಕರಣವು ಸರಿಯಾಗಿರಬೇಕಾದ್ದು ಅವಶ್ಯವಾಗಿಲ್ಲ.

" ವಿವರ 2.—ಒಬ್ಬ ಮನುಷ್ಯನು ಒಂದು ಪದಾರ್ಥವನ್ನು ಮತ್ತೊಂದು ಪದಾರ್ಥದಂತೆ ಇರುವ ಹಾಗೆ ಮಾಡಿದಾಗಲೂ ಮತ್ತು ಆ ಹೋಲ್ಕೆಯಿಂದ ಒಬ್ಬ ಮನುಷ್ಯನು ಮೋಸಮಾಡಲ್ಪಡಬಹುದಾಗಿರುವಾಗಲೂ, ಸದರೀ ಒಂದು ಪದಾರ್ಥವನ್ನು ಸದರೀ ಮತ್ತೊಂದು ಪದಾರ್ಥದಂತೆ ಸದರೀ ಮನುಷ್ಯನು ಆ ಹೋಲ್ಕೆಯ ದೆಸೆಯಿಂದ ಮೋಸಮಾಡಲು ಉದ್ದೇಶಿಸಿದ್ದಾನೆಂತ, ಅಥವಾ ಆ ಹೋಲ್ಕೆಯ ದೆಸೆಯಿಂದ ಮೋಸಮಾಡೋಣವು ಆಗಬಹುದೆಂದು ತಿಳಿದಿದ್ದನೆಂತ, ಅದಕ್ಕೆ ವಿರೋಧವಾದ್ದು ರುಜುವಾತು ಆಗುವವರೆಗೂ, ಭಾವಿಸಲ್ಪಡತಕ್ಕದ್ದು."

5. ಸದರೀ ಕೋಡಿನ 40ನೇ ಪ್ರಕರಣದ ಎರಡನೆ ಕಲಮಿನಲ್ಲಿ, " 109 " ಸಂಖ್ಯೆಗಳ ಮುಂದೆ, " 64, 65, 66, 67, 71, " ಸಂಖ್ಯೆಗಳನ್ನು ಇಡತಕ್ಕದ್ದು.

6. ಸದರೀ ಕೋಡಿನ 64ನೇ ಪ್ರಕರಣದಲ್ಲಿ ಮೊದಲನೇ ಹನ್ನೆರಡು* ಪದಗಳ ಬದಲಾಗಿ ಈ ಕೆಳಗೆ ಬರುವದನ್ನು ಇಡತಕ್ಕದ್ದು, ಏನಂದರೆ :—

" ಜುರ್ಮಾನೆ ಮತ್ತು ಕೈದು ಇವೆರಡಕ್ಕೂ ಗುರಿಯಾದ ಯಾವ ಅಪರಾಧದ ವಿಷಯದಲ್ಲಿ ಅಪರಾಧಿಯು ಕೈದಿನ ಸಜಾನಿಶೀ ಅಥವಾ ಇಲ್ಲದೆ ಒಂದು ಜುರ್ಮಾನೆ ಸಜಾ ವಿಧಿಸಲ್ಪಡುತ್ತಾನೊ ಅಂಥಾ ಪ್ರತಿ ಸಂಗತಿಯಲ್ಲಿ,

" ಮತ್ತು ಕೈದಿನ ಮೂಲಕವಾಗಿಯಾಗಲೀ ಜುಲ್ಮಾನೆ ಮೂಲಕವಾಗಿಯಾಗಲೀ ಅಥವಾ ಜುಲ್ಮಾನೆ ಮಾತ್ರ ವಿಧಿಸಲ್ಪಟ್ಟು, ಶಿಕ್ಷಿಸಲ್ಪಡತಕ್ಕ ಯಾವ ಅಪರಾಧದ ವಿಷಯದಲ್ಲಿ ಅಪರಾಧಿಯು ಒಂದು ಜುಲ್ಮಾನೆ ಸಜಾ ವಿಧಿಸಲ್ಪಡುತ್ತಾನೋ, ಅಂಥಾ ಪ್ರತಿ ಸಂಗತಿಯಲ್ಲಿ."

7. ಸದರೀ ಕೋಡಿನ 67ನೇ ಪ್ರಕರಣದಲ್ಲಿ, " ಜುಲ್ಮಾನೆ ಮಾತ್ರ " ಎಂಬ ಪದಗಳ ತರುವಾಯ " ಜುಲ್ಮಾನೆಯು ಪಾವತಿಯಾಗದಿದ್ದರೆ ಕೋರ್ಟಿನವರು ಅದಕ್ಕಾಗಿ ವಿಧಿಸುವ ಕೈದು ಬರೀ ಕೈದಾಗಿರತಕ್ಕದ್ದು ಮತ್ತು " ಎಂಬ ಪದಗಳನ್ನು ಇಡತಕ್ಕದ್ದು.

8. ಸದರಿ ಕೋಡಿನ 71ನೇ ಪ್ರಕರಣಕ್ಕೆ ಈ ಕೆಳಗೆ ಬರುವ ಕಲಮನ್ನು ಸೇರಿಸತಕ್ಕದ್ದು, ಅದೇನಂದರೆ :—

" ಆಯಾ ಕಾಲದಲ್ಲಿ ಜಾರಿಯಲ್ಲಿರುವ ಯಾವ ನಿಬಂಧನೆಯಿಂದ ಅಪರಾಧಗಳು ವಿಧಿಸಲ್ಪಡುತ್ತವೆಯೋ ಅಥವಾ ಶಿಕ್ಷಿಸಲ್ಪಡುತ್ತವೆಯೋ ಅಂಥಾ ನಿಬಂಧನೆಯ ಎರಡು ಅಥವಾ ಹೆಚ್ಚು ಬೇರೆಬೇರೆ ವಿವರಣೆಗಳಿಗೊಳಗಾಗಿ ಯಾವದಾಗಲೀ ಒಂದು ಅಪರಾಧವಾದರೆ, ಅಥವಾ

" ಅನೇಕ ಕೃತ್ಯಗಳು ನಡದು, ಅವುಗಳ ಪೈಕಿ ಒಂದು ಆದರಷ್ಟಕ್ಕೆ, ಅಥವಾ ಅವುಗಳ ಪೈಕಿ ಒಂದಕ್ಕಿಂತ ಹೆಚ್ಚು ತಮ್ಮಷ್ಟಕ್ಕೆ, ಒಂದು ಅಪರಾಧವಾಗಿ, ಎಲ್ಲಾ ಕೂಡಿದಾಗ ಬೇರೆ ಒಂದು ಅಪರಾಧವಾದರೆ,

" ಅಪರಾಧಿಯನ್ನು ದರ್ಯಾಪ್ತಿ ಮಾಡುವ ಕೋರ್ಟಿನವರು ಅಂಥಾ ಅಪರಾಧಗಳೊಳಗೆ ಯಾವದೊಂದಕ್ಕಾಗಲೀ ವಿಧಿಸಬಹುದಾದಂಥಾ ಸಜಾಗಿಂತ ಹೆಚ್ಚು ಕಠಿಣವಾದ ಸಜಾವನ್ನು ಸದರೀ ಅಪರಾಧಿಗೆ ಕೊಡಕೂಡದು."

9. ಸದರೀ ಕೋಡಿನ 73ನೇ ಪ್ರಕರಣದಲ್ಲಿ " ಕಮ್ಮಿಯಾಗಿರಬೇಕು " ಎಂಬುವ ಪದಗಳಿಗೆ ಬದಲಾಗಿ " ಒಂದಕ್ಕೆ ಮೀರಕೂಡದು " ಎಂಬ ಪದಗಳನ್ನು ಇಡತಕ್ಕದ್ದು.

10. ಸದರೀ ಕೋಡಿನ 75ನೇ ಪ್ರಕರಣದಲ್ಲಿ " ಅಥವಾ ದಂಡನೆಯ ಪರಿಮಾಣಕ್ಕೆ ಎರಡಷ್ಟು " ಎಂಬುವಲ್ಲಿಂದ ಹಿಡಿದು ಪ್ರಕರಣದ ಕೊನೆಯವರೇಗಿನ ಪದಗಳಿಗೆ ಬದಲಾಗಿ, ಈ ಕೆಳಗೆ ಬರುವದನ್ನು ಇಡತಕ್ಕದ್ದು, ಅದೇನಂದರೆ :—

" ಅಥವಾ ಹತ್ತು ಸಂವತ್ಸರಕ್ಕೆ ಮೀರದ ಒಂದು ವಾಯಿದೆ ಪರ್ಯಂತ ಯಾವದಾದರೂ ಒಂದು ತರಹ ಕೈದಿಗಾಗಲಿ ಗುರಿಯಾಗತಕ್ಕದ್ದು."

11. ಸದರೀ ಕೋಡಿನ 108ನೇ ಪ್ರಕರಣಕ್ಕೆ ಈ ಕೆಳಗೆ ಬರುವ ಪ್ರಕರಣವನ್ನು ಸೇರಿಸತಕ್ಕದ್ದು, ಏನಂದರೆ:—

ಮೈಸೂರು ಹೊರಗೆ ನಡಿಯುವ ಅಪರಾಧಗಳಿಗೆ ಮೈಸೂರಲ್ಲಿ ಸಹಕರಿಸುವುದು.

" 108 A. ಯಾವ ಕೃತ್ಯವು ಮೈಸೂರೊಳಗೆ ಮಾಡಲ್ಪಟ್ಟದ್ದರೆ ಒಂದು ಅಪರಾಧವಾಗುತ್ತಿತ್ತೊ ಅಂಥಾ ಕೃತ್ಯವು ಮೈಸೂರು ಹೊರಗೆ ನಡಿಯುಲಿಕ್ಕೆ ಯಾವ ಮನುಷ್ಯನು ಸಹಕರಿಸುತ್ತಾನೊ ಅಂಥಾ ಮನುಷ್ಯನು ಈ ಕೋಡಿನ ಅರ್ಥಕ್ಕೆ ಅನುಗುಣವಾಗಿ ಒಂದು ಅಪರಾಧಕ್ಕೆ ಸಹಕರಿಸುತ್ತಾನೆ.

---

* ಷರಾ :—ಮೊದಲನೇ ಹನ್ನೆರಡು ಪದಗಳೆಂದರೆ [English Code]ಮೂಲಗ್ರಂಥದ 64ನೆ ಪ್ರಕರಣದಲ್ಲಿರುವಂತೆ ಎಂದು ತಿಳಿಯತಕ್ಕದ್ದು. ಭಾಷಾಂತರದಲ್ಲಿ ಕೂಡಾ ಸದರೀ ಪದಗಳ ಅರ್ಥವು ಪ್ರಕರಣದ ಆದಿಯಲ್ಲಾಗಲಿ, ಹನ್ನೆರಡೇ ಪದಗಳಾಗಿ ಆಗಲಿ, ಇದ್ದೀತೆಂದು ಭಾವಿಸಕೂಡದು.

ಉದಾಹರಣೆ:

"ಮೈಸೂರೊಳಗೆ A ಎಂಬುವವನು ಗೋವಾದಲ್ಲಿರುವ ಅನ್ಯದೇಶಿಯಾದ B ಎಂಬುವನಿಗೆ ಗೋವಾದಲ್ಲಿ ಒಂದು ಖೂನಿಯನ್ನು ಮಾಡುವಂತೆ ದುರ್ಬೋಧನೆ ಮಾಡುತ್ತಾನೆ. A ಎಂಬುವವನು ಖೂನಿಗೆ ಸಹಕರಿಸುವ ಅಪರಾಧವನ್ನು ಮಾಡಿರುತ್ತಾನೆ."

12. ಸದರೀ ಕೋಡಿನ 124 A ಪ್ರಕರಣವು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ ಮತ್ತು ಅದಕ್ಕೆ ಬದಲಾಗಿ ಈ ಕೆಳಗೆ ಬರುವ ಪ್ರಕರಣವು ಇಡಲ್ಪಟ್ಟಿರುತ್ತೆ, ಅದೇನಂದರೆ:—

ರಾಜದ್ರೋಹ.

"124 A ಯಾವನು ವಾಕ್ಯವಾದ ಅಥವಾ ಬರಹ ಮೂಲಕವಾದ ಮಾತಿನಿಂದಾಗಲಿ, ಗುರ್ತಿನಿಂದಾಗಲಿ, ಕಣ್ಣಿಗೆ ತಿಳಿಯುವ ಚಿತ್ರದಿಂದಾಗಲಿ, ಇನ್ಯಾವ ವಿಧದಿಂದಾಗಲಿ, ಇಂಡಿಯಾದೇಶದ ಚಕ್ರವರ್ತಿಯವರಾದ, ಮಹಿಮೆಯನ್ನು ಹೊಂದಿದ ಶ್ರೀಮನ್ ಮಹಾರಾಜರವರ, ಅಥವಾ ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರ, ಅಥವಾ ಬ್ರಿಟಿಷ್ ಇಂಡಿಯದಲ್ಲಿಯು ಮತ್ತು ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರ ದೇಶದಲ್ಲಿಯು ನಿಬಂಧನೆ ಮೇರೆಗೆ ಸ್ಥಾಪಿಸಲ್ಪಟ್ಟ ಗವರನ್ಮೆಂಟಿನವರಗಳ ವಿಷಯದಲ್ಲಿ ದ್ವೇಷವನ್ನು ಅಥವಾ ತಿರಸ್ಕಾರವನ್ನು ಉಂಟುಮಾಡುತ್ತಾನೋ ಅಥವಾ ಉಂಟುಮಾಡಲು ಯತ್ನಿಸುತ್ತಾನೋ ಅಥವಾ ಅವರಗಳ ವಿಷಯದಲ್ಲಿ ಅಪ್ರೀತಿಯು ಉಂಟಾಗುವಂತೆ ಪ್ರೇರೇಪಿಸುತ್ತಾನೋ ಅಥವಾ ಪ್ರೇರೇಪಿಸಲು ಯತ್ನಿಸುತ್ತಾನೋ ಅಂಥಾ ಪ್ರತಿ ಮನುಷ್ಯನು ಯಾವಜ್ಜೀವವೂ ಅಥವಾ ಕಡಿಮೆ ಪಾಯಿದೆವರೆಗೆ, ಅದಕ್ಕೆ ಜುಲ್ಮಾನೆ ಸೇರಿಸಬಹುದಾಗಿದ್ದು, ನೀರಿನಮೇಲೆ ಕಳುಹಿಸಲ್ಪಡುವದರ ಮೂಲಕವಾಗಿಯಾಗಲಿ, ಅಥವಾ ಜುಲುಮಾನೆ ಸೇರಿಸಬಹುದಾಗಿದ್ದು ಮೂರು ವರುಷಗಳ ಪರ್ಯಂತ ವ್ಯಾಪಿಸಬಹುದಾದ ಕೈದಿನ ಮೂಲಕವಾಗಿಯಾಗಲಿ, ಅಥವಾ ಜುಲುಮಾನೆ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಡತಕ್ಕದ್ದು.

"ವಿವರ 1.—"ಅಪ್ರೀತಿ" ಎಂಬ ಪದದಲ್ಲಿ ರಾಜಭಕ್ತಿ ಶೂನ್ಯತೆ ಮತ್ತು ಸಮಸ್ತ ದ್ವೇಷಭಾವನೆಗಳು ಅಡಗಿರುತ್ತವೆ.

"ವಿವರ 2.—ಇಂಡಿಯ ಗವರನ್ಮೆಂಟಿನವರ ಅಥವಾ ಮೈಸೂರು ಗವರನ್ಮೆಂಟಿನವರ ಕಾರ್ಯಗಳನ್ನು ನ್ಯಾಯ ಸಮ್ಮತವಾದ ಉಪಾಯಗಳಿಂದ ಬದಲು ಮಾಡಿಸುವ ಉದ್ದೇಶ್ಯ ದ್ವೇಷ, ತಿರಸ್ಕಾರ ಅಥವಾ ಅಪ್ರೀತಿ ಉಂಟಾಗುವಂತೆ ಪ್ರೇರೇಪಿಸದೆ ಅಥವಾ ಪ್ರೇರೇಪಿಸಲಿಕ್ಕೆ ಯತ್ನಿಸದೆ, ಸದರೀ ಕಾರ್ಯಗಳ ವಿಷಯವಾಗಿ ಅಸಮ್ಮತಿಯನ್ನು ವ್ಯಕ್ತಪಡಿಸುವ ವ್ಯಾಖ್ಯಾನಗಳು ಈ ಪ್ರಕರಣಕ್ಕೊಳಪಡುವ ಒಂದು ಅಪರಾಧವಾಗುವದಿಲ್ಲ.

"ವಿವರ 3.—ದ್ವೇಷ, ತಿರಸ್ಕಾರ, ಅಥವಾ ಅಪ್ರೀತಿ ಉಂಟಾಗುವಂತೆ ಪ್ರೇರೇಪಿಸದೆ ಅಥವಾ ಪ್ರೇರೇಪಿಸಲಿಕ್ಕೆ ಯತ್ನಿಸದೆ, ಇಂಡಿಯ ಗವರನ್ಮೆಂಟಿನವರ ಅಥವಾ ಮೈಸೂರು ಗವರನ್ಮೆಂಟಿನವರ ರಾಜ್ಯಭಾರಿಕ ಅಥವಾ ಇತರ ಚರ್ಯೆಯ ವಿಷಯವಾಗಿ ಅಸಮ್ಮತಿಯನ್ನು ವ್ಯಕ್ತಪಡಿಸುವ ವ್ಯಾಖ್ಯಾನಗಳು ಈ ಪ್ರಕರಣಕ್ಕೊಳಪಡುವ ಒಂದು ಅಪರಾಧವಾಗುವದಿಲ್ಲ."

13. ಸದರೀ ಕೋಡಿನ 153ನೇ ಪ್ರಕರಣದ ತರುವಾಯ ಈ ಕೆಳಗೆ ಬರುವ ಪ್ರಕರಣವನ್ನು ಇಡತಕ್ಕದ್ದು, ಯಾವದಂದರೆ:—

ಬೇರೆಬೇರೆ ವರ್ಗಗಳೊಳಗೆ ದ್ವೇಷವನ್ನು ಅಭಿವೃದ್ಧಿಪಡಿಸೋಣ.

"153 A ಯಾವನು ವಾಕ್ಯವಾದ ಅಥವಾ ಬರಹ ಮೂಲಕವಾದ ಮಾತಿನಿಂದಾಗಲಿ, ಗುರ್ತಿನಿಂದಾಗಲಿ, ಕಣ್ಣಿಗೆ ತಿಳಿಯುವ ಚಿತ್ರದಿಂದಾಗಲಿ ಇನ್ಯಾವ ವಿಧದಿಂದಾಗಲಿ, ಮಹಿಮೆಯನ್ನು ಹೊಂದಿದ ಶ್ರೀಮನ್ ಮಹಾರಾಜ ಚಕ್ರವರ್ತಿಯವರ ಅಥವಾ ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರ ಪ್ರಜೆಗಳ ಬೇರೆಬೇರೆ ವರ್ಗಗಳೊಳಗೆ ದ್ವೇಷಭಾವನೆಗಳನ್ನು ಅಥವಾ ವೈರಭಾವನೆಗಳನ್ನು ಹೆಚ್ಚಿಸುತ್ತಾನೋ ಅಥವಾ ಹೆಚ್ಚಿಸಲಿಕ್ಕೆ ಯತ್ನಿಸುತ್ತಾನೋ ಅಂಥಾ ಪ್ರತಿ ಮನುಷ್ಯನು ಎರಡು ವರುಷಗಳ ಪರ್ಯಂತ ವ್ಯಾಪಿಸಬಹುದಾದ ಕೈದಿನ ಮೂಲಕವಾಗಿಯಾಗಲಿ, ಜುಲುಮಾನೆ ಮೂಲಕವಾಗಿಯಾಗಲಿ, ಇವೆರಡರ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಡತಕ್ಕದ್ದು."

"ವಿವರ.—ಮಹಿಮೆಯನ್ನು ಹೊಂದಿದ ಶ್ರೀಮನ್ ಮಹಾರಾಜ ಚಕ್ರವರ್ತಿಯವರ ಅಥವಾ ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರ ಪ್ರಜೆಗಳ ಬೇರೆಬೇರೆ ವರ್ಗಗಳೊಳಗೆ ದ್ವೇಷ ಅಥವಾ ವೈರಭಾವನೆಗಳನ್ನು ಹುಟ್ಟಿಸುವಂಥಾ ಅಥವಾ ಹುಟ್ಟಿಸುವ ಸ್ವಭಾವವುಳ್ಳಂಥಾ ವಿಷಯಗಳನ್ನು ನಿವೃತ್ತಿ ಪಡಿಸುವ ಬಗ್ಗೆ, ದುರಭಿಪ್ರಾಯವಿಲ್ಲದೆ ಮತ್ತು ಅಂಥಾ ವಿಷಯಗಳು ಪರಿಹಾರವಾಗಬೇಕೆಂಬ ನಿಸ್ಪೃಹವಾದ ಉದ್ದೇಶದಿಂದ ಅವುಗಳನ್ನು ತೋರಿಸಿ ಕೊಡುವದು, ಈ ಪ್ರಕರಣದ ಅರ್ಥಕ್ಕೊಳಪಡುವ ಒಂದು ಅಪರಾಧವಾಗುವದಿಲ್ಲ."

14. ಸದರೀ ಕೋಡಿನ 177ನೇ ಪ್ರಕರಣಕ್ಕೆ ಈ ಕೆಳಗೆ ಬರುವದನ್ನು ಸೇರಿಸತಕ್ಕದ್ದು, ಏನಂದರೆ:—

"ವಿವರ.—176ನೆ ಪ್ರಕರಣದಲ್ಲಿ ಮತ್ತು ಈ ಪ್ರಕರಣದಲ್ಲಿ "ಅಪರಾಧ" ಎಂಬ ಪದವು, ಮೈಸೂರಿನ ಹೊರಗೆ ಯಾವದೊಂದು ಸ್ಥಳದಲ್ಲಿ ನಡಿಸಲ್ಪಟ್ಟು, ಮೈಸೂರಿನೊಳಗೆ ನಡಿಸಲ್ಪಟ್ಟಿದ್ದರೆ 302, 304, 382, 392, 393, 394, 395, 396, 397, 398, 399, 402, 435, 436, 449, 450, 457, 458, 459, ಮತ್ತು 460ನೇ ಪ್ರಕರಣಗಳ ಪೈಕಿ ಯಾವದಾದರೂ ಒಂದರಮೇರೆಗೆ ಶಿಕ್ಷಿಸಲ್ಪಡಬಹುದಾದ ಯಾವದೊಂದು ಕೃತ್ಯವನ್ನು ಅಡಗಿಸಿಕೊಳ್ಳುತ್ತದೆ. ಮತ್ತು "ಅಪರಾಧಿ" ಎಂಬುವ ಪದವು ಅಂಥಾ ಯಾವದೊಂದು ಕೃತ್ಯನಡಿಸಿದ ತಪ್ಪು ಸಾಬೀತು ಪಟ್ಟಿದ್ದಾಗಿ ಕಂಡು ಬಂದ ಯಾವನೊಬ್ಬ ಮನುಷ್ಯನನ್ನು ಅಡಗಿಸಿಕೊಳ್ಳುತ್ತದೆ.

15. ಸದರೀ ಕೋಡಿನ 182ನೇ ಪ್ರಕರಣಕ್ಕೆ ಬದಲಾಗಿ ಈ ಕೆಳಗೆ ಬರುವದನ್ನು ಇಡತಕ್ಕದ್ದು ಏನಂದರೆ :—

ಇನ್ನೊಬ್ಬ ಮನುಷ್ಯನಿಗೆ ಹಾನಿಕರವಾಗಿ ಸರಕಾರದ ಉದ್ಯೋಗಸ್ಥನು ತನ್ನ ನ್ಯಾಯವಾದ ಅಧಿಕಾರವನ್ನು ನಡಿಸುವಂತೆ ಮಾಡಬೇಕೆಂಬ ಅಭಿಪ್ರಾಯದಿಂದ ಸುಳ್ಳು ವರ್ತಮಾನವನ್ನು ಕೊಡೋಣ.

"182. ಯಾವನು ಸುಳ್ಳೆಂತ ತನಿಗೆ ತಿಳಿದಿರುವ ಅಥವಾ ಸುಳ್ಳೆಂತ ತಾನು ನಂಬಿ ಇರುವ ವರ್ತಮಾನವನ್ನು ಕೊಡುವದರ ಮೂಲಕವಾಗಿ ಯಾವನೊಬ್ಬ ಸರಕಾರಿ ಉದ್ಯೋಗಸ್ಥನ ಕೈಯಲ್ಲಿ—

(a) ಆತನಿಗೆ ಯಾವದರ ಕುರಿತು ಅಂಥಾ ವರ್ತಮಾನ ಕೊಡೋಣಾಗಿದೆಯೋ ಆ ವಿದ್ಯಮಾನದ ನಿಜಸ್ಥಿತಿ ಅವನಿಗೆ ತಿಳಿದಿದ್ದರೆ ಅವನು ಯಾವದನ್ನು ಮಾಡಕೂಡದೊ ಅದನ್ನು ಮಾಡಿಸಬೇಕೆಂಬ ಅಥವಾ ಯಾವದನ್ನು ಮಾಡದೆ ಬಿಡಕೂಡದೊ ಅದನ್ನು ಮಾಡಬೇಕೆಂಬ ; ಅಥವಾ

(b) ಯಾವನೊಬ್ಬ ಮನುಷ್ಯನಿಗೆ ಹಾನಿಕರ ಅಥವಾ ರೋಷ್ಟಕರವಾಗುವ ಹಾಗೆ ಅಂಥಾ ಸರಕಾರಿ ಉದ್ಯೋಗಸ್ಥನ ನ್ಯಾಯವಾದ ಅಧಿಕಾರವನ್ನು ನಡಿಸುವಹಾಗೆ ಮಾಡಿಸಬೇಕೆಂಬ,

ಅಭಿಪ್ರಾಯದಿಂದ ಅಥವಾ ಅಂಥಾದ್ದನ್ನು ನಡಿಸುವ ಸಂಭವ ಉಂಟೆಂದು ತಿಳಿದು ಹಾಗೆ ಸುಳ್ಳು ವರ್ತಮಾನ ಕೊಡುತ್ತಾನೊ ಅಂಥಾ ಪ್ರತಿ ಮನುಷ್ಯನು ಆರು ತಿಂಗಳ ವರೆಗಿನ ಯಾವದಾದರೂ ಒಂದುವಿಧವಾದ ಕೈದಿನ ಮೂಲಕವಾಗಲಿ, ಸಾವಿರ ರೂಪಾಯಿ ವರೆಗಿನ ಜುಲುಮಾನೆ ಮೂಲಕವಾಗಲಿ, ಇವೆರಡರ ಮೂಲಕವಾಗಲಿ ಶಿಕ್ಷಿಸಲ್ಪಡತಕ್ಕದ್ದು.

"ಉದಾಹರಣೆಗಳು.

"(a) A ಎಂಬುವನು ತಾನು ಸುಳ್ಳು ವರ್ತಮಾನ ಕೊಡುವದರಿಂದ ಒಬ್ಬ ಮೇಜಿಸ್ಟ್ರೇಟು ತನ್ನ ತಾಬೇದಾರಿ ಪೋಲೀಸ್ ಆಫಿಸರಾದ Z ಎಂಬುವನನ್ನು ತಗ್ಗೈರು ಮಾಡುವ ಸಂಭವ ಉಂಟೆಂತ ತಿಳಿದವನಾಗಿ Z ಎಂಬುವನು ತನ್ನ ಉದ್ಯೋಗದ ಕೆಲಸದಲ್ಲಿ ಅಸಡ್ಡೆ ಅಥವಾ ದುರ್ನಡತೆ ಮಾಡಿದ್ದಾನೆಂತ ಸದರೀ ಮೇಜಿಸ್ಟ್ರೇಟಿಗೆ ಸುಳ್ಳು ವರ್ತಮಾನ ತಿಳಿಸುತ್ತಾನೆ. ಇದರಿಂದ A ಎಂಬುವನು ಈ ಪ್ರಕರಣದಲ್ಲಿ ನಮೂದಿರುವ ಅಪರಾಧವನ್ನು ಮಾಡಿದವನಾಗುತ್ತಾನೆ.

(b) Z ಎಂಬುವನು ಛಾವಾವು ಉಪ್ಪನ್ನು ಒಂದು ಗುಪ್ತಸ್ಥಳದಲ್ಲಿಟ್ಟುಕೊಂಡಿದ್ದಾನೆಂತ A ಎಂಬುವನು ಒಬ್ಬ ಸರಕಾರ ಉದ್ಯೋಗಸ್ಥನಿಗೆ ಸುಳ್ಳು ಸುದ್ದಿ ತಿಳಿಸುತ್ತಾನೆ. ಹಾಗೆ ತಿಳಿಸುವ ಕಾಲದಲ್ಲಿ ಆ ವರ್ತಮಾನವು ಸುಳ್ಳೆಂತ A ಎಂಬುವನಿಗೆ ತಿಳಿದಿತ್ತು ಮತ್ತು ಆ ವರ್ತಮಾನ ಕೊಟ್ಟ ದೆಸೆಯಿಂದ Z ಎಂಬುವನ ಮನೆಯು ಅವನಿಗೆ ರೋಷ್ಟಕರವಾಗುವಹಾಗೆ ಝಡ್ತಿ ಮಾಡಲ್ಪಡುವ ಸಂಭವವುಂಟೆಂತ ಸಹಾ ತಿಳಿದಿತ್ತು. A ಎಂಬುವನು ಈ ಪ್ರಕರಣದಲ್ಲಿ ವಿವರಿಸಲ್ಪಟ್ಟ ಅಪರಾಧ ಮಾಡಿದವನಾಗುತ್ತಾನೆ.

(c) A ಎಂಬುವನು ಫಲಾನೆ ಗ್ರಾಮದ ಬಳಿಯಲ್ಲಿ ತನ್ನಮೇಲೆ ಜುಲುಂ ನಡಿಸಿದ್ದಾರೆಂತ ಸುಳ್ಳು ವರ್ತಮಾನ ಪೋಲೀಸಿನವರಿಗೆ ಕೊಡುತ್ತಾನೆ; ಆದರೆ ಜುಲುಂ ನಡಿಸಿದವರು ಇಂಥವರೆಂದು ಯಾರೊಬ್ಬನ ಹೆಸರು ಹೇಳುವದಿಲ್ಲ. ಆದರೆ ಈ ವರ್ತಮಾನದ ದೆಸೆಯಿಂದ ಸದರೀ ಗ್ರಾಮಸ್ಥರಿಗೆ ಅಥವಾ ಅವರ ಪೈಕಿ ಕೆಲವರಿಗೆ ಉಪದ್ರವಾಗುವಹಾಗೆ ಪೋಲೀಸಿನವರು ಸದರೀ ಗ್ರಾಮದಲ್ಲಿ ತನಖಿಗಳನ್ನು ಮತ್ತು ಝಡ್ತಿಗಳನ್ನು ನಡಿಸುವ ಸಂಭವ ಉಂಟೆಂತ ಅವನಿಗೆ ತಿಳಿದಿರುತ್ತದೆ. ಇದರಿಂದ A ಯು ಈ ಪ್ರಕರಣಕ್ಕನುಗುಣವಾದ ಅಪರಾಧ ಮಾಡಿದವನಾಗುತ್ತಾನೆ.

16. ಸದರೀ ಕೋಡಿನ 193ನೇ ಪ್ರಕರಣದ 1ನೇ ವಿವರದಲ್ಲಿ "ಅಥವಾ ಒಂದು ಮಿಲಿಟೆರಿ ಕೋರ್ಟ್ ಆಫ್ ರಿಕ್ವೆಷ್ಟಿನ ಮುಂದೆ" ಎಂಬುವ ಪದಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತವೆ.

17. ಸದರೀ ಕೋಡಿನ 203ನೇ ಪ್ರಕರಣಕ್ಕೆ ಇದರ ಕೆಳಗೆ ಬರುವದನ್ನು ಸೇರಿಸತಕ್ಕದ್ದು, ಏನಂದರೆ :—

"ವಿವರ.—201 ಮತ್ತು 202ನೇ ಪ್ರಕರಣಗಳಲ್ಲಿ ಮತ್ತು ಈ ಪ್ರಕರಣದಲ್ಲಿ "ಅಪರಾಧ" ಎಂಬ ಪದವು, ಮೈಸೂರು ಹೊರಗೆ ಯಾವದೊಂದು ಸ್ಥಳದಲ್ಲಿ ನಡಿಸಲ್ಪಟ್ಟದ್ದು, ಮೈಸೂರಲ್ಲಿ ನಡಿಸಲ್ಪಟ್ಟರೆ 302, 304, 382, 392, 393, 394, 395, 396, 397, 398, 399, 402, 435, 436, 449, 450, 457, 458, 459, ಮತ್ತು 460ನೇ ಪ್ರಕರಣಗಳ ಪೈಕಿ ಯಾವದಾದರೊಂದಕ್ಕನುಗುಣವಾಗಿ ಶಿಕ್ಷಿಸಲ್ಪಡಬಹುದಾದ ಯಾವದೊಂದು ಕೃತ್ಯವನ್ನು ಅಡಗಿಸಿಕೊಂಡಿರುತ್ತೆ.

18. ಸದರೀ ಕೋಡಿನ 212ನೇ ಪ್ರಕರಣದಲ್ಲಿ ವಿನಹಾಯಿತಿಗೆ ಕೂಡಲೆ ಮುಂದೆ ಈ ಕೆಳಗೆ ಬರುವದನ್ನು ಇಡತಕ್ಕದ್ದು, ಏನಂದರೆ :—

"ಈ ಪ್ರಕರಣದಲ್ಲಿ "ಅಪರಾಧ" ಎಂಬುವದು ಮೈಸೂರಿನ ಹೊರಗೆ ಯಾವದೊಂದು ಸ್ಥಳದಲ್ಲಿ ನಡಿಸಲ್ಪಟ್ಟದ್ದು ಮೈಸೂರಲ್ಲಿ ನಡಿಸಲ್ಪಟ್ಟರೆ 302, 304, 382, 392, 393, 394, 395, 396, 397, 398, 399, 402, 435, 436, 449, 450, 457, 458, 459, ಮತ್ತು 460ನೇ ಪ್ರಕರಣಗಳ ಪೈಕಿ ಯಾವದಾದರೊಂದಕ್ಕನುಗುಣವಾಗಿ ಶಿಕ್ಷಿಸಲ್ಪಡಬಹುದಾದ ಯಾವದೊಂದು ಕೃತ್ಯವನ್ನು ಅಡಗಿಸಿಕೊಂಡಿರುತ್ತದೆ; ಮತ್ತು ಅಂಥಾ ಪ್ರತಿ ಕೃತ್ಯವು ಅಪಾದನೆ ಪಟ್ಟವನು ಮೈಸೂರಿನಲ್ಲಿ ಅದನ್ನು ನಡಿಸಿದ ತಪ್ಪಿತಸ್ಥನಾಗಿದ್ದರೆ ಹ್ಯಾಗೊ ಹಾಗೆಯೆ ಈ ಪ್ರಕರಣದ ಉದ್ದೇಶಾರ್ಥಗಳ ಬಗ್ಯೆ ಶಿಕ್ಷಿಸಲ್ಪಡತಕ್ಕದ್ದೆಂದು ಭಾವವಾಗತಕ್ಕದ್ದು."

19. ಸದರೀ ಕೋಡಿನ 214ನೇ ಪ್ರಕರಣದಲ್ಲಿ ವಿನಹಾಯಿತಿಗೆ ಬದಲಾಗಿ ಈ ಕೆಳಗೆ ಬರುವದನ್ನು ಇಡತಕ್ಕದ್ದು, ಏನಂದರೆ :—

"ವಿನಹಾಯಿತಿ.—213ನೇ 214ನೇ ಪ್ರಕರಣಗಳ ನಿಯಮಗಳು ಯಾವ ಸಂಗತಿಯಲ್ಲಿ ನ್ಯಾಯಸಮ್ಮತವಾಗಿ ರಾಜಿ ಮಾಡಿಕೊಳ್ಳಬಹುದೊ ಅಂಥಾ ಯಾವ ಸಂಗತಿಗೂ ವ್ಯಾಪಿಸುವದಿಲ್ಲ."

20. ಸದರೀ ಕೋಡಿನ 216ನೇ ಪ್ರಕರಣದ ಮೊದಲನೇ ಕಲಮಿನ ತರುವಾಯ ಈ ಕೆಳಗೆ ಬರುವದನ್ನು ಇಡತಕ್ಕದ್ದು; ಏನಂದರೆ :—

"ಈ ಪ್ರಕರಣದಲ್ಲಿ "ಅಪರಾಧ" ಎಂಬ ಮಾತಿನಲ್ಲಿ, ಒಬ್ಬ ಮನುಷ್ಯನು ಮೈಸೂರಲ್ಲಿ ಯಾವದರ ಕುರಿತು ತಪ್ಪಿತಸ್ಥನಾಗಿದ್ದರೆ ಅಪರಾಧಿ ಎಂಬದಾಗಿ ಎಣಿಸಲ್ಪಟ್ಟು ಶಿಕ್ಷಿಸಲ್ಪಡುತಿದ್ದನೊ, ಮತ್ತು ಯಾವದರ ಬಗ್ಗೆ ಅವನು ಎಕ್ಸ್‌ಟ್ರಾಡಿಶನಿಗೆ (ತಪ್ಪಿತಸ್ಥರನ್ನು ಅನ್ಯ ಸಂಸ್ಥಾನಗಳಿಗೆ ಒಪ್ಪಿಸಿಕೊಡುವದರ ಕುರಿತು) ಸಂಬಂಧಿಸುವ ಯಾವದೊಂದು ನಿಬಂಧನೆಗನುಗುಣವಾಗಿ ಮೈಸೂರಲ್ಲಿ ಹಿಡಿಯಲ್ಪಟ್ಟು ಶೆರೆಯಲ್ಲಿ ಇಡಲ್ಪಡಲಿಕ್ಕೆ ಗುರಿಯಾಗುತ್ತಾನೊ ಅಂಥಾ ಕೃತ್ಯ ಅಥವಾ ಲೋಪವು, ಮೈಸೂರು ಹೊರಗೆ ನಡೆದಿರುವದಾಗಿ ಹೇಳೋಣಾಗುವಲ್ಲಿ ಅದು ಸಹ ಅಡಗಿರುತ್ತದೆ; ಮತ್ತು ಅಂಥಾ ಪ್ರತಿ ಕೃತ್ಯವು ಅಥವಾ ಲೋಪವು, ಅಪಾದನೆ ಪಟ್ಟ ಮನುಷ್ಯನು ಮೈಸೂರಲ್ಲಿ ಅದರ ಕುರಿತು ತಪ್ಪಿತಸ್ಥನಾಗಿದ್ದರೆ ಹ್ಯಾಗೊ ಹಾಗೆಯೇ ಶಿಕ್ಷೆಗೆ ಗುರಿಯಾಗತಕ್ಕದ್ದೆಂಬದಾಗಿ ಈ ಪ್ರಕರಣದ ಉದ್ದೇಶಾರ್ಥವಾಗಿ ಎಣಿಸಲ್ಪಡತಕ್ಕದ್ದು."

21. ಸದರೀ ಕೋಡಿನ 216ನೇ ಪ್ರಕರಣದ ತರುವಾಯ ಈ ಕೆಳಗೆ ಬರುವದನ್ನು ಇಡತಕ್ಕದ್ದು; ಏನಂದರೆ :—

ಜೋರಿ ನಡಿಸಿದಂಥಾವರಿಗೆ ಅಥವಾ ದರೋಡೆ ಕಳ್ಳರಿಗೆ ಆಸರೆ ಕೊಟ್ಟ ಬಗ್ಗೆ ಶಿಕ್ಷೆ.

"216 A. ಯಾರಾಗಲಿ ಜೋರಿ ಅಥವಾ ದರೋಡೆ ಕಳವು ನಡಿಸಲಿಕ್ಕುದ್ಯುಕ್ತರಾಗಿದ್ದಾರೆ ಅಥವಾ ಇತ್ತಲಾಗಿ ನಡಿಸಿದ್ದಾರೆ ಎಂಬದನ್ನು ತಿಳದು ಅಥವಾ ನಂಬಲಿಕ್ಕೆ ಕಾರಣವಿದ್ದು ಅಂಥಾ ಜೋರಿ ಅಥವಾ ದರೋಡೆ ಕಳವು ಮಾಡುವಂಥಾದ್ದನ್ನು ಸುಲಭ ಪಡಿಸುವ ಅಥವಾ ಅವರನ್ನು ಅಥವಾ ಅವರ ಪೈಕಿ ಯಾರನ್ನಾಗಲಿ ಶಿಕ್ಷೆಯಿಂದ ತಪ್ಪಿಸುವ ಅಭಿಪ್ರಾಯದಿಂದ ಅವರಿಗೆ ಅಥವಾ ಅವರ ಪೈಕಿ ಯಾರಿಗಾಗಲಿ ಯಾವನು ಆಸರೆ ಕೊಡುತ್ತಾನೊ ಅಂಥಾ ಮನುಷ್ಯನು ಏಳು ಸಂವತ್ಸರಗಳವರೆಗೆ ವ್ಯಾಪಿಸಬಹುದಾದಂಥಾ ಒಂದು ವಾಯಿದೆ ಪರ್ಯಂತ ಕಠಿಣ ಕೈದಿನ ಮೂಲಕವಾಗಿ ಶಿಕ್ಷಿಸಲ್ಪಡತಕ್ಕದ್ದು; ಮತ್ತು ಜುಲುಮಾನೆಗೆ ಸಹಾ ಗುರಿಯಾಗತಕ್ಕದ್ದು.

"ವಿವರ.—ಈ ಪ್ರಕರಣದ ಉದ್ದೇಶಾರ್ಥಗಳ ಬಗ್ಗೆ ಜೋರಿ ಅಥವಾ ದರೋಡೆ ಕಳವು ಮಾಡಲಿಕ್ಕೆ ಯತ್ನಿಸಲ್ಪಟ್ಟದ್ದು ಅಥವಾ ಮಾಡಲ್ಪಟ್ಟದ್ದು ಮೈಸೂರಿನಲ್ಲಿಯೊ ಅಥವಾ ಮೈಸೂರು ಹೊರಗೊ ಎಂಬ ಸಂಗತಿಯು ಮುಖ್ಯವಾದದ್ದಲ್ಲ.

"ವಿನಹಾಯಿತಿ.—ಈ ನಿಯಮವು ಅಪರಾಧಿಯ ಗಂಡ ಅಥವಾ ಹೆಂಡತಿಯು ಆಸರೆ ಕೊಟ್ಟ ಸಂಗತಿಗೆ ವ್ಯಾಪಿಸುವದಿಲ್ಲ.

212, 216 ಮತ್ತು 216 Aನೇ ಪ್ರಕರಣಗಳಲ್ಲಿ "ಆಸರೆ ಕೊಡು" ಎಂಬದರ ಅರ್ಥ ವಿವರಣೆ.

"216 B. 212, 216, ಮತ್ತು 216 A ನೇ ಪ್ರಕರಣಗಳಲ್ಲಿ "ಆಸರೆ ಕೊಡು" ಎಂಬ ಮಾತು ಒಬ್ಬ ಮನುಷ್ಯನಿಗೆ ಆಶ್ರಯ, ಆಹಾರ, ಪಾನ, ಹಣ, ತೊಡಿಗೆ, ಆಯುಧ, ಕೋವಿಮದ್ದು ಅಥವಾ ಪ್ರಯಾಣ ಮಾಡುವದಕ್ಕೆ ಉಪಯೋಗಿಸುವ ವಾಹನ ವಗೈರೆಯನ್ನು ಕೊಡೋಣವನ್ನು ಮತ್ತು ಒಬ್ಬ ಮನುಷ್ಯನನ್ನು ಹಿಡಿಯೋಣದಿಂದ ತಪ್ಪಿಸಿಕೊಳ್ಳುವದಕ್ಕೆ ಯಾವವಿಧದಲ್ಲಾದರೂ ಸಹಾಯ ಮಾಡೋಣವನ್ನು ಸಹಾ ಅಡಗಿಸಿಕೊಂಡಿರುತ್ತದೆ.

22. ಸದರೀ ಕೋಡಿನ 225 A ನೇ ಪ್ರಕರಣಕ್ಕೆ ಬದಲಾಗಿ ಈ ಕೆಳಗೆ ಬರುವ ಪ್ರಕರಣಗಳನ್ನು ಇಡತಕ್ಕದ್ದು, ಏನಂದರೆ :—

ಅನ್ಯಥಾ ನಿಬಂಧಿಸೋಣಾಗದಿರುವ ಸಂಗತಿಗಳಲ್ಲಿ ಸರ್ಕಾರಿ ಉದ್ಯೋಗಸ್ಥನು ಹಿಡಿಯದೆ ಇರೋಣ ಅಥವಾ ತಪ್ಪಿಸಿಕೊಳ್ಳಲಿಕ್ಕೆ ಬಿಡೋಣ.

"225 A. ಸರ್ಕಾರಿ ಉದ್ಯೋಗಸ್ಥನಾಗಿದ್ದುಕೊಂಡು, ಹಾಗೆ ಸರ್ಕಾರಿ ಉದ್ಯೋಗಸ್ಥನಾಗಿರುವ ಕಾರಣ 221ನೇ, 222ನೇ ಅಥವಾ 223ನೇ ಪ್ರಕರಣದಲ್ಲಿ ಅಥವಾ ತಾತ್ಕಾಲಿಕವಾಗಿ ಜಾರಿಯಲ್ಲಿರುವ ಇತರ ಯಾವದಾದರೂ ನಿಬಂಧನೆಯಲ್ಲಿ ವಿಧಿಸೋಣಾಗದಿರುವ ಯಾವದೊಂದು ಸಂಗತಿಯಲ್ಲಿ ಯಾವ ಮನುಷ್ಯನನಾದರೂ ಹಿಡಿಯಲಿಕ್ಕೆ ಅಥವಾ ಕೈದಿನಲ್ಲಿ ಇಡಲಿಕ್ಕೆ ನ್ಯಾಯವಾಗಿ ಬದ್ಧನಾಗಿರುವ ಯಾವನು, ಅಂಥಾ ಮನುಷ್ಯನನ್ನು ಹಿಡಿಯದೆ ಇರುತ್ತಾನೋ ಅಥವಾ ಕೈದಿನಿಂದ ಅಂಥಾ ಮನುಷ್ಯನು ತಪ್ಪಿಸಿಕೊಳ್ಳುವದನ್ನು ಸಹಿಸುತ್ತಾನೊ ಅಂಥಾ ಪ್ರತಿ ಮನುಷ್ಯನು—

(a) ಅವನು ಮನಃಪೂರ್ವಕವಾಗಿ ಹಾಗೆ ಮಾಡುತ್ತಾನಾದರೆ, ಮೂರು ಸಂವತ್ಸರತನಕ ವ್ಯಾಪಿಸಬಹುದಾದ ಒಂದು ವಾಯಿದೆ ಪರ್ಯಂತ ಯಾವದಾದರೂ ಒಂದು ವಿಧದ ಕೈದಿನ ಮೂಲಕವಾಗಿಯಾಗಲಿ ಜುಲುಮಾನೆಯ ಮೂಲಕವಾಗಿಯಾಗಲಿ, ಈ ಎರಡು ಮೂಲಕವಾಗಿ ಯಾಗಲಿ, ಶಿಕ್ಷಿಸಲ್ಪಡತಕ್ಕದ್ದು; ಮತ್ತು

(b) ಅವನು ಅಶ್ರದ್ಧೆಯಿಂದ ಹಾಗೆ ಮಾಡುತ್ತಾನಾದರೆ, ಎರಡು ಸಂವತ್ಸರದ ತನಕ ವ್ಯಾಪಿಸಬಹುದಾದ ಒಂದು ವಾಯಿದೆ ಪರ್ಯಂತ ಬರೀ ಕೈದು ಮೂಲಕವಾಗಿಯಾಗಲಿ, ಜುಲುಮಾನೆಯ ಮೂಲಕವಾಗಿಯಾಗಲಿ, ಈ ಎರಡರ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಡತಕ್ಕದ್ದು.

"225 B. 224ನೇ ಅಥವಾ 225ನೇ ಪ್ರಕರಣದಲ್ಲಾಗಲಿ, ತಾತ್ಕಾಲಿಕವಾಗಿ ಜಾರಿಯಲ್ಲಿರುವ ಇತರ ಯಾವದಾದರೂ ನಿಬಂಧನೆಯಲ್ಲಾಗಲಿ, ವಿಧಿಸೋಣಾಗದಿರುವ ಯಾವದೊಂದು ಸಂಗತಿಯಲ್ಲಿ ಯಾವನು, ತನ್ನನ್ನು ಅಥವಾ ಇತರ ಯಾವನೊಬ್ಬ ಮನುಷ್ಯನನ್ನು ನ್ಯಾಯವಾಗಿ ಹಿಡಿಯುವಾಗ ಮನಃಪೂರ್ವಕವಾಗಿ ಎದುರಿಸುತ್ತಾನೊ, ಅಥವಾ ಅಕ್ರಮವಾಗಿ ಆತಂಕ ಪಡಿಸುತ್ತಾನೊ, ಅಥವಾ ನ್ಯಾಯಪ್ರಕಾರ ತನ್ನನ್ನು ಇಟ್ಟಿರುವ ಕೈದಿನಿಂದ ತಪ್ಪಿಸಿಕೊಳ್ಳುತ್ತಾನೊ, ಅಥವಾ ತಪ್ಪಿಸಿಕೊಳ್ಳಲಿಕ್ಕೆ ಯತ್ನಿಸುತ್ತಾನೊ, ಅಥವಾ ಮತ್ತೊಬ್ಬನನ್ನು ನ್ಯಾಯವಾಗಿ ಕೈದುಪಡಿಸಿ ಇರುವ ಕೈದಿನಿಂದ ಅವನನ್ನು ತಪ್ಪಿಸುತ್ತಾನೊ ಅಥವಾ ತಪ್ಪಿಸಲಿಕ್ಕೆ ಯತ್ನಿಸುತ್ತಾನೊ, ಅಂಥಾ ಪ್ರತಿ ಮನುಷ್ಯನು ಆರು ತಿಂಗಳಿಗೆ ಮೀರದ ಒಂದು ಮಾಯಿದೆ ಪರ್ಯಂತ ಯಾವದಾದರೂ ಒಂದು ವಿಧದ ಕೈದಿನ ಮೂಲಕವಾಗಿಯಾಗಲಿ, ಜುಲುಮಾನೆಯ ಮೂಲಕವಾಗಿಯಾಗಲಿ, ಈ ಎರಡರ ಮೂಲಕವಾಗಿಯಾಗಲಿ, ಶಿಕ್ಷಿಸಲ್ಪಡತಕ್ಕದ್ದು."

ಅನ್ಯಥಾ ವಿಧಿಸೋಣಾಗದಿರುವ ಸಂಗತಿಗಳಲ್ಲಿ ನ್ಯಾಯವಾಗಿ ಹಿಡಿಯುವಾಗ್ಯೆ ಎದುರಿಸುವದು ಅಥವಾ ಆತಂಕ ಮಾಡುವದು ಅಥವಾ ತಪ್ಪಿಸಿಕೊಂಡು ಹೋಗುವದು ಅಥವಾ ತಪ್ಪಿಸುವದು.

23. (1) ಸದರೀ ಕೋಡಿನ 230ನೆ ಪ್ರಕರಣದ ಎರಡನೆ ಕಲಮಿಗೆ ಬದಲಾಗಿ ಈ ಕೆಳಗೆ ಬರುವದನ್ನು ಇಡತಕ್ಕದ್ದು. ಏನಂದರೆ :—

"ಹಣವಾಗಿ ಉಪಯೋಗಿಸಲ್ಪಡುವ ಬಗ್ಗೆ ಮಹಾರಾಜಚಕ್ರವರ್ತಿಯವರ ಅಪ್ಪಣೆಪ್ರಕಾರ, ಅಥವಾ ಇಂಡಿಯಾಗವರನ್ಮೆಂಟಿನವರ ಅಥವಾ ಪ್ರೆಸಿಡೆನ್ಸಿ ಗವರನ್ಮೆಂಟಿನವರ ಅಪ್ಪಣೆ ಪ್ರಕಾರ ಅಥವಾ ಮಹಾರಾಜಚಕ್ರವರ್ತಿಯವರ ರಾಜ್ಯಗಳಲ್ಲಿನ ಇತರ ಗವರನ್ಮೆಂಟಿನವರ ಅಪ್ಪಣೆ ಪ್ರಕಾರ ಮುದ್ರೆ ಹಾಕೋಣವಾಗಿ ಅವರಿಂದ ಚಲಾವಣೆಗೆ ಬಿಡೋಣಾದ ಲೋಹವು ಮಹಾರಾಜರವರ ನಾಣ್ಯವಾಗಿರುತ್ತದೆ; ಮತ್ತು ಈ ಮೇರೆಗೆ ಮುದ್ರೆ ಹಾಕೋಣಾಗಿ ಚಲಾವಣೆಗೆ ಬಿಡೋಣಾದ ಲೋಹದ ತುಂಡು ಹಣವಾಗಿ ಉಪಯೋಗಿಸಲ್ಪಡುವದು ನಿಂತುಹೋಗಿದ್ದರೂ ಈ ಅಧ್ಯಾಯದ ಉದ್ದೇಶಾರ್ಥವಾಗಿ ಅದನ್ನು ಮಹಾರಾಜರವರ ನಾಣ್ಯವೆಂಬದಾಗಿ ತಿಳಕೊಳ್ಳತಕ್ಕದ್ದು."

ಮಹಾರಾಜರವರ ನಾಣ್ಯ

(2) ಅದೇ ಪ್ರಕರಣಕ್ಕೆ ಸೇರಿಸಲ್ಪಟ್ಟ ಉದಾಹರಣೆಗಳಿಗೆ ಈ ಕೆಳಗೆ ಬರುವದನ್ನು ಸೇರಿಸತಕ್ಕದ್ದು, ಏನಂದರೆ :—

(e) "ಇಂಡಿಯಾಗವರನ್ಮೆಂಟಿನವರ ಅಪ್ಪಣೆಯ ಮೇರೆಗೆ ಮುಂಚೆ ಹಣವಾಗಿ ಉಪಯೋಗಿಸಲ್ಪಟ್ಟ 'ಫರೆಕಾಬಾದ ರೂಪಾಯಿಯು ಈಗ ಆ ಮೇರೆಗೆ ಉಪಯೋಗಿಸಲ್ಪಡುವದಿಲ್ಲವಾದರೂ 'ಮಹಾರಾಜರವರ ನಾಣ್ಯವಾಗಿರುತ್ತದೆ."

24. ಸದರೀ ಕೋಡಿನ XIIನೇ ಅಧ್ಯಾಯಕ್ಕೆ ಈ ಕೆಳಗೆ ಬರುವದನ್ನು ಸೇರಿಸತಕ್ಕದ್ದು, ಏನಂದರೆ :—

"263 A. (1) ಯಾವನು:—

(a) ಯಾವದೊಂದು ಬನಾವಣಿ ಸ್ಟಾಂಪನ್ನು ಮಾಡುತ್ತಾನೊ, ತಿಳದಿದ್ದು ಚಲಾವಣಿ ಮಾಡುತ್ತಾನೊ, ಅದರ ವ್ಯಾಪಾರ ನಡಿಸುತ್ತಾನೋ ಅಥವಾ ವಿಕ್ರಯಿಸುತ್ತಾನೊ ಅಥವಾ ಯಾವದೊಂದು ಬನಾವಣಿ ಸ್ಟಾಂಪನ್ನು ತಿಳದಿದ್ದರೂ ಟಪ್ಪಾಲಿನ ಸಂಬಂಧವಾದ ಯಾವದೊಂದು ಉದ್ದೇಶದ ಬಗ್ಗೆ ಉಪಯೋಗಿಸುತ್ತಾನೊ, ಅಥವಾ

ಬನಾವಣಿ ಸ್ಟಾಂಪುಗಳನ್ನು ಮನ್ನಾಪಡಿಸೋಣ.

(b) ನ್ಯಾಯವಾದ ಕಾರಣವಿಲ್ಲದೆ ತನ್ನ ಸ್ವಾಧೀನದಲ್ಲಿ ಬನಾವಣಿ ಸ್ಟಾಂಪನ್ನು ಇಟ್ಟುಕೊಳ್ಳುತ್ತಾನೊ, ಅಥವಾ

(c) ಯಾವದೊಂದು ಬನಾವಣಿ ಸ್ಟಾಂಪನ್ನು ಮಾಡುವ ಬಗ್ಗಿನ ಯಾವದಾದರೂ ಅಚ್ಚನ್ನಾಗಲಿ, ತಗಡನ್ನಾಗಲಿ, ಯಂತ್ರವನ್ನಾಗಲಿ, ಅಥವಾ ಸಾಮಗ್ರಿಗಳನ್ನಾಗಲಿ ನಿರ್ಮಿಸುತ್ತಾನೊ. ಅಥವಾ ನ್ಯಾಯವಾದ ಕಾರಣವಿಲ್ಲದೆ ಸ್ವಾಧೀನದಲ್ಲಿಟ್ಟುಕೊಳ್ಳುತ್ತಾನೊ.

ಅಂಥಾ ಪ್ರತಿ ಮನುಷ್ಯನು ಇನ್ನೂರು ರೂಪಾಯಿಗಳ ವರೆಗಿನ ಜುಲುಮಾನೆ ಮೂಲಕ ಶಿಕ್ಷಿಸಲ್ಪಡತಕ್ಕದ್ದು.

"(2) ಯಾವದೊಂದು ಬನಾವಣಿ ಸ್ಟಾಂಪನ್ನು ಮಾಡುವ ಬಗ್ಗಿನ ಅಂಥಾ ಯಾವದೊಂದು ಮೊಹರನ್ನು, ಅಚ್ಚನ್ನು, ತಗಡನ್ನು, ಯಂತ್ರವನ್ನು ಅಥವಾ ಸಾಮಗ್ರಿಗಳನ್ನು ಯಾವನೊಬ್ಬ ಮನುಷ್ಯನ ಸ್ವಾಧೀನದಲ್ಲಿಂದ ಹಿಡಿದು ಮುಟ್ಟುಗೋಲು ವಿಧಿಸತಕ್ಕದ್ದು.

"(3) ಈ ಪ್ರಕರಣದಲ್ಲಿ "ಬನಾವಣಿ ಸ್ಟಾಂಪು" ಅಂದರೆ ಟಪ್ಪಾಲ್ ಹಾಸಲಿನ ಒಂದು ದರವನ್ನು ತೋರಿಸುವ ಬಗ್ಗೆ ಗವರ್ನಮೆಂಟಿನವರಿಂದ ಹುಟ್ಟಿಸಲ್ಪಟ್ಟಿದ್ದೆಂದು, ಸುಳ್ಳು ಭಾವನೆಯಾಗುವ ಯಾವದೊಂದು ಸ್ಟಾಂಪು. ಅಥವಾ ಗವರ್ನಮೆಂಟಿನವರಿಂದ ಆ ಉದ್ದಿಶ್ಯ ಹುಟ್ಟಿಸಲ್ಪಟ್ಟ ಯಾವದೊಂದು ಸ್ಟಾಂಪಿನ ಮಾತೃಕೆ ನಕಲು ಅಥವಾ ಪ್ರತಿ ರೂಪ ಎಂಬ ಅರ್ಥವಾಗುತ್ತದೆ, ಇದು ಕಾಗದದಮೇಲ ಇದ್ದರೂ ಅನ್ಯಥಾ ಬರೆಯಲ್ಪಟ್ಟರೂ ಸರಿಯೇ.

"(4) ಈ ಪ್ರಕರಣದಲ್ಲಿ ಮತ್ತು 255ರಿಂದ 263ರ ವರೆಗಿನ (ಎರಡು ಸೇರಿ) ಪ್ರಕರಣಗಳಲ್ಲಿ "ಗವರ್ನಮೆಂಟು" ಎಂಬ ಶಬ್ದವನ್ನು ಒಂದು ಟಪ್ಪಾಲ್ ಹಾಸಲಿನ ದರವನ್ನು ತೋರಿಸುವ ಉದ್ದಿಶ್ಯದ ಬಗ್ಗೆ ಹುಟ್ಟಿಸಲ್ಪಟ್ಟ ಯಾವದೊಂದು ಸ್ಟಾಂಪಿನ ಸಂದರ್ಭದಲ್ಲಿ ಅಥವಾ ಅದರ ವಿಷಯವಾಗಿ ಉಪಯೋಗಿಸಿದಾಗ್ಗೆ 17ನೇ ಪ್ರಕರಣದಲ್ಲಿ ಏನು ನಮೂದಿದ್ದಾಗ್ಯೂ ಇಂಡಿಯಾವಿನ ಯಾವದೊಂದು ಭಾಗದಲ್ಲಿ ಮತ್ತು ಶ್ರೀಮತ್ ಮಹಾರಾಜ ಚಕ್ರವರ್ತಿಯವರ ಸ್ವಾಸ್ಥ್ಯಗಳ ಯಾವದೊಂದು ಭಾಗದಲ್ಲಿ, ಅಥವಾ ಯಾವದೊಂದು ಪರಾಯ ದೇಶದಲ್ಲಿ ಎಕ್ಸಿಕ್ಯೂಟಿವ್ ಗವರ್ನಮೆಂಟನ್ನು ನಡಿಸಲಿಕ್ಕೆ ನಿಬಂಧನೆಯ ಮೇರೆಗೆ ಅಧಿಕಾರಗೊಳಿಸಲ್ಪಟ್ಟ ಮನುಷ್ಯನನ್ನು ಅಥವಾ ಮನುಷ್ಯರನ್ನು ಅದು ಅಡಗಿಸಿಕೊಳ್ಳುತ್ತದೆ ಎಂದು ಎಣಿಸತಕ್ಕದ್ದು."

25. ಸದರೀ ಕೋಡಿನ 294ನೇ ಪ್ರಕರಣಕ್ಕೆ ಬದಲಾಗಿ ಈ ಕೆಳಗೆ ಬರುವದನ್ನು ಇಡತಕ್ಕದ್ದು, ಏನಂದರೆ

ಅಸಹ್ಯಕರವಾದ ಕೃತ್ಯಗಳು ಮತ್ತು ಹಾಡುಗಳು.

"294. ಯಾವನು ಬೇರೆಯವರಿಗೆ ಉಪದ್ರವಾಗುವಹಾಗೆ,—

(a) ಯಾವದೊಂದು ಬಹಿರಂಗವಾದ ಸ್ಥಳದಲ್ಲಿ ಭಂಡ ಕೃತ್ಯವನ್ನು ಮಾಡುತ್ತಾನೋ, ಅಥವಾ

(b) ಯಾವದೊಂದು ಬಹಿರಂಗವಾದ ಸ್ಥಳದಲ್ಲಿ ಅಥವಾ ಅದರ ಸಮೀಪ ಭಂಡ ಪದ್ಯಗಳನ್ನು, ಹಾಡನ್ನು ಅಥವಾ ಮಾತುಗಳನ್ನು ಹಾಡುತ್ತಾನೊ, ಹೇಳುತ್ತಾನೊ ಅಥವಾ ಉಚ್ಚರಿಸುತ್ತಾನೊ, ಅವನು ಮೂರು ತಿಂಗಳುಗಳವರೆಗೆ ವ್ಯಾಪಿಸಬಹುದಾದ ಯಾವದೊಂದು ವಿಧದ ಕೈದಿನ ಮೂಲಕವಾಗಿಯಾಗಲಿ ಜುಲುಮಾನೆಯು ಮೂಲಕವಾಗಿಯಾಗಲಿ ಇವೆರಡರ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಡತಕ್ಕದ್ದು."

26. ಸದರೀ ಕೋಡಿನ 307ನೇ ಪ್ರಕರಣದ (c) ಉದಾಹರಣೆಯಲ್ಲಿ "ದ" (of) ಎಂಬುದರ ತರುವಾಯ "ಒಂದನೇ ಕಲಮಿನ" ಎಂಬ ಪದಗಳನ್ನು ಇಡತಕ್ಕದ್ದು.

27. ಸದರೀ ಕೋಡಿನ 309ನೇ ಪ್ರಕರಣದಲ್ಲಿ ಕಡೇ* ಏಳು ಪದಗಳಿಗೆ ಬದಲಾಗಿ "ಜುಲುಮಾನೆಯ ಮೂಲಕವಾಗಿಯಾಗಲಿ ಈ ಎರಡರ ಮೂಲಕವಾಗಿಯಾಗಲಿ" ಎಂಬ ಪದಗಳನ್ನು ಇಡತಕ್ಕದ್ದು.

28. ಸದರೀ ಕೋಡಿನ 335ನೇ ಪ್ರಕರಣದಲ್ಲಿ "ಮಾಡುತ್ತಾನೋ" ಎಂಬ ಪದಕ್ಕೆ ಮುಂಚೆ "ಮನಃಪೂರ್ವಕವಾಗಿ" ಎಂಬ ಪದವನ್ನು ಇಡತಕ್ಕದ್ದು.

29. ಸದರೀ ಕೋಡಿನ 375ನೇ ಪ್ರಕರಣದಲ್ಲಿ ಐದನೇದು ಎಂದು ಸೂಚಿಸಲ್ಪಟ್ಟ ಕಲಮಿನಲ್ಲಿಯೂ ಮತ್ತು ವಿನಹಾಯಿತಿ ಯಲ್ಲಿಯೂ "ಹತ್ತು" ಎಂಬ ಪದಕ್ಕೆ ಬದಲಾಗಿ "ಹನ್ನೆರಡು" ಎಂಬ ಪದವನ್ನು ಇಡತಕ್ಕದ್ದು.

30. (1) ಸದರೀ ಕೋಡಿನ 410ನೇ ಪ್ರಕರಣದಲ್ಲಿ "ವಿಶ್ವಾಸ ಘಾತಕ ತಪ್ಪಿತ" ಎಂಬ ಪದಗಳ ಮುಂದೆ ಬರುವ "ಅಪರಾಧವಾಗಿರುವ" ಎಂಬ ಪದವನ್ನು ರದ್ದು ಮಾಡಲ್ಪಟ್ಟಿರುತ್ತೆ.

(2) ಅದೇ ಪ್ರಕರಣದಲ್ಲಿ "'ಚೋರಿಮಾಲು' ಎಂದು ಅನ್ನಿಸಿ ಕೊಳ್ಳುತ್ತದೆ" ಎಂಬಪದಗಳ ತರುವಾಯ ಈ ಕೆಳಗೆ ಬರುವ ಪದಗಳನ್ನು ಇಡತಕ್ಕದ್ದು, ಏನಂದರೆ:—

"ಆ ಸೊತ್ತು ಮೈಸೂರೊಳಗಾಗಿ ಅಥವಾ ಮೈಸೂರು ಹೊರಗೆ ಪರಭಾರೆಯನ್ನು ಮಾಡಿದ್ದಾಗ್ಯೂ ಅಥವಾ ದುರುಪಯೋಗವನ್ನು ಅಥವಾ ವಿಶ್ವಾಸಘಾತಕವನ್ನು ನಡಿಸಿದ್ದಾಗ್ಯೂ."

31. ಸದರೀ ಕೋಡಿನ 435ನೇ ಪ್ರಕರಣದಲ್ಲಿ "ಅಥವಾ ಅದಕ್ಕೆ ಮೇಲ್ಪಟ್ಟ" ಎಂಬ ಪದಗಳ ತರುವಾಯ ಈ ಕೆಳಗೆ ಬರುವ ಪದಗಳನ್ನು ಇಡತಕ್ಕದ್ದು, ಏನಂದರೆ:—

"ಅಥವಾ (ಸೊತ್ತು ವ್ಯವಸಾಯದ ಫಲವಾಗಿದ್ದರೆ) ಹತ್ತು ರೂಪಾಯಿ.........ಅಥವಾ ಅದಕ್ಕೆ ಮೇಲ್ಪಟ್ಟ......"

32. ಸದರೀ ಕೋಡಿನ 477ನೆ ಪ್ರಕರಣದ ತರುವಾಯ ಈ ಕೆಳಗೆ ಬರುವದನ್ನು ಸೇರಿಸತಕ್ಕದ್ದು, ಏನಂದರೆ:—

ಸುಳ್ಳು ಲೆಕ್ಕಗಳನ್ನು ಮಾಡೋಣ.

"477-A. ಯಾವನು ಬ್ಬು ಗುಮಾಸ್ತೆ, ಆಫಿಸರ್ ಅಥವಾ ಉದ್ಯೋಗಸ್ಥನಾಗಿದ್ದು ಅಥವಾ ಬ್ಬು ಗುಮಾಸ್ತನ, ಆಫಿಸರನ ಅಥವಾ ಉದ್ಯೋಗಸ್ಥನ ಉದ್ಯೋಗದಲ್ಲಿ ನೇಮಕಪಟ್ಟದ್ದು ಅಥವಾ ಕೆಲಸ ನೋಡುತ್ತಿದ್ದು ಮನಃಪೂರ್ವಕವಾಗಿ ಮತ್ತು ವಂಚನೆ ಮಾಡುವ ಅಭಿಪ್ರಾಯದಿಂದ ತನ್ನ ಯಜಮಾನನಿಗೆ ಸಮ್ಮಂಧಿಸುವ ಅಥವಾ ಆತನ ಸ್ವಾಧೀನದಲ್ಲಿರುವ ಅಥವಾ ತನ್ನ ಯಜಮಾನನ ಬಗ್ಗೆ ಅಥವಾ ಆತನ ಕಡೆಯಿಂದ ತಾನು ಪಡಕೊಂಡ ಯಾವದಾದರೂ ಪುಸ್ತಕವನ್ನು, ಕಾಗದವನ್ನು, ಪತ್ರವನ್ನು, ಬೆಲೆಯುಳ್ಳ ಸಾಧನವನ್ನು ಅಥವಾ ಲೆಕ್ಕವನ್ನು ನಾಶಪಡಿಸುತ್ತಾನೊ, ಬದಲಾಯಿಸುತ್ತಾನೊ, ವಿರೂಪ ಪಡಿಸುತ್ತಾನೊ, ಅಥವಾ ಸುಳ್ಳು ಮಾಡುತ್ತಾನೋ ಅಥವಾ ಮನಃಪೂರ್ವಕವಾಗಿ ಮತ್ತು ವಂಚನೆ ಮಾಡಬೇಕೆಂಬ ಅಭಿಪ್ರಾಯದಿಂದ ಅಂಥಾ ಯಾವದಾದರೂ ಪುಸ್ತಕ, ಕಾಗದ, ಪತ್ರ, ಬೆಲೆಯುಳ್ಳ ಸಾಧನ ಅಥವಾ ಲೆಕ್ಕದಲ್ಲಿ ಸುಳ್ಳು ಖತಾಯಿತಿಯನ್ನು ಮಾಡುತ್ತಾನೊ ಅಥವಾ ಮಾಡಲಿಕ್ಕೆ ಸಹಾಯ ಮಾಡುತ್ತಾನೊ ಅಥವಾ ಅದರಿಂದ ಅಥವಾ ಅದರಲ್ಲಿ ಯಾವದೊಂದು ಮುಖ್ಯವಾದ ವಿಷಯವನ್ನು ಲೋಪಿಸುತ್ತಾನೊ ಅಥವಾ ಬದಲಾಯಿಸುತ್ತಾನೊ ಅಥವಾ ಲೋಪಿಸಲಿಕ್ಕೆ ಅಥವಾ ಬದಲಾಯಿಸಲಿಕ್ಕೆ ಸಹಾಯ ಮಾಡುತ್ತಾನೊ, ಅಂಥಾ ಪ್ರತಿ ಮನುಷ್ಯನು ಏಳು ವರುಷಗಳ ವರಿಗೆ ವ್ಯಾಪಿಸಬಹುದಾದ ಯಾವದೊಂದು ವಿಧದ ಕೈದಿನ ಮೂಲಕವಾಗಲಿ, ಜುಲುಮಾನೆಯು ಮೂಲಕವಾಗಲಿ, ಇವೆರಡರ ಮೂಲಕವಾಗಲಿ ಶಿಕ್ಷಿಸಲ್ಪಡತಕ್ಕದ್ದು.

"ವಿವರ.—ಈ ಪ್ರಕರಣಕ್ಕನುಗುಣವಾದ ಯಾವದೊಂದು ಆಪಾದನೆಯಲ್ಲಿ, ಫಲಾನೆ ಬ್ಬು ಮನುಷ್ಯನನ್ನು, ಅಥವಾ ಫಲಾನೆ ಒಂದು ಮೊಬಲಗಿನ ವಿಷಯವಾಗ್ಗಿ, ವಂಚಿಸುವ ಅಭಿಪ್ರಾಯ ಇತ್ತು ಅಥವಾ ಫಲಾನೆ ಒಂದು ದಿವಸದಲ್ಲಿ ಅಪರಾಧ ಮಾಡಲ್ಪಟ್ಟಿತು ಎಂದು ನಮೂದಿಸದೇನೆ ವಂಚಿಸುವದಕ್ಕೆ ಸಾಮಾನ್ಯ ಅಭಿಪ್ರಾಯವಿತ್ತು ಎಂದು ಸಾಧಿಸಿದರೆ ಸಾಕು."

33. ಸದರೀ ಕೋಡಿನ 489ನೆ ಪ್ರಕರಣಕ್ಕೆ ತರುವಾಯ ಈ ಕೆಳಗೆ ಬರುವ ಪ್ರಕರಣಗಳನ್ನು ಸೇರಿಸತಕ್ಕದ್ದು, ಏನಂದರೆ:—

* ಇಂಗ್ಲಿಷ್ ಕೋಡಿನಲ್ಲಿರುವ ಪ್ರಕಾರ ಕಡೆ ಏಳು ಪದಗಳೆಂದು ತಿಳಿಯತಕ್ಕದ್ದು.

"ಕರೆನ್ಸಿ ನೋಟುಗಳ ಮತ್ತು ಬ್ಯಾಂಕ್ ನೋಟುಗಳ ಕುರಿತು.

ಕರೆನ್ಸಿ ನೋಟುಗಳನ್ನು ಅಥವಾ ಬ್ಯಾಂಕ್ ನೋಟುಗಳನ್ನು ಬನಾವಣಿ ಮಾಡೋಣ.

"489 A. ಯಾವನು ಯಾವದೊಂದು ಕರೆನ್ಸಿ ನೋಟನ್ನಾಗಲಿ, ಬ್ಯಾಂಕ್ ನೋಟನ್ನಾಗಲಿ ಬನಾವಣಿ ಮಾಡುತ್ತಾನೊ ಅಥವಾ ಬನಾವಣಿ ಮಾಡುವ ಕೆಲಸವನ್ನು ಎಷ್ಟುಮಾತ್ರವಾದರೂ ತಿಳಿದು ನಡಿಸುತ್ತಾನೊ ಅಂಥಾ ಮನುಷ್ಯನು ಯಾವಜ್ಜೀವವೂ ನೀರಿನಮೇಲೆ ಕಳುಹಿಸಲ್ಪಡುವದರ ಮೂಲಕವಾಗಿಯಾಗಲಿ, ಅಥವಾ ಹತ್ತು ವರುಷಗಳ ವರಿಗೆ ವ್ಯಾಪಿಸಬಹುದಾದ ಒಂದು ವಾಯಿದೆ ಪರ್ಯಂತ ಯಾವದಾದರೂ ಒಂದು ವಿಧದ ಕೈದಿನ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಟ್ಟು ಜುಲುಮಾನೆ ತೆರಲಿಕ್ಕೆ ಸಹಾ ಗುರಿಯಾಗಿರತಕ್ಕದ್ದು.

"ವಿವರ.—ಈ ಪ್ರಕರಣದ ಮತ್ತು 489 B, 489 C ಮತ್ತು 489 Dನೇ ಪ್ರಕರಣಗಳ ಉದ್ದೇಶಗಳ ಬಗ್ಗೆ 'ಬ್ಯಾಂಕ್ ನೋಟ್' ಎಂಬ ಪದವು ಹಾಜರು ಮಾಡುವವನಿಗೆ ಕೇಳಿದ ಕೂಡಲೆ ಹಣ ಕೊಡುವದಾಗಿ ಒಪ್ಪಿಕೊಂಡು, ಲೋಕದ ಯಾವಕಡೆಯಲ್ಲಾಗಲಿ ಹಣ ಬಡ್ಡಿಗೆ ಕೊಡುವ ಕಸಬು ನಡಿಸುತ್ತಿರುವ ಯಾವನೊಬ್ಬ ಮನುಷ್ಯನಿಂದ ಬರೆದು ಕೊಡಲ್ಪಟ್ಟು, ಅಥವಾ ಯಾವದೊಂದು ಸಂಸ್ಥಾನದವರಿಂದ ಅಥವಾ ಸರ್ಕಾರದವರಿಂದ ಅಥವಾ ಅವರ ಅಪ್ಪಣೆ ಮೇರೆಗೆ ಬರೆದು ಕೊಡಲ್ಪಟ್ಟು, ಹಣಕ್ಕೆ ಸಮಾನವಾಗಿ ಅಥವಾ ಬದಲಾಗಿ ಉಪಯೋಗಿಸಲ್ಪಡತಕ್ಕದ್ದೆಂದು ಉದ್ದೇಶಿಸಲ್ಪಟ್ಟ ಒಂದು ಪ್ರಾಮಿಸರಿ ನೋಟು ಅಥವಾ ಒಡಂಬಡಿಕೆ ಎಂದು ಅರ್ಥ ಕೊಡುತ್ತದೆ.

ಸೃಷ್ಟನೆಯಾದ ಅಥವಾ ಬನಾವಣಿಯಾದ ಕರೆನ್ಸಿ ನೋಟುಗಳನ್ನು ಅಥವಾ ಬ್ಯಾಂಕ್ ನೋಟುಗಳನ್ನು ನಿಜವಾದ್ದೆಂತ ಉಪಯೋಗಿಸೋಣ.

"489 B. ಯಾವನು, ಸೃಷ್ಟನೆಯಾದದ್ದು ಅಥವಾ ಬನಾವಣಿಯಾದದ್ದು ಎಂದು ತಿಳಿದು ಅಥವಾ ನಂಬಲಿಕ್ಕೆ ಕಾರಣವಿದ್ದು, ಸೃಷ್ಟನೆಯಾದ ಅಥವಾ ಬನಾವಣಿಯಾದ ಯಾವ ಕರೆನ್ಸಿ ನೋಟನ್ನಾಗಲಿ, ಬ್ಯಾಂಕ್ ನೋಟನ್ನಾಗಲಿ, ಇತರ ಯಾವನೊಬ್ಬ ಮನುಷ್ಯನಿಗೆ ಮಾರುತ್ತಾನೊ ಅಥವಾ ಅವನಿಂದ ಕೊಂಡುಕೊಳ್ಳುತ್ತಾನೊ, ಇಸುಕೊಳ್ಳುತ್ತಾನೊ, ಅಥವಾ ಇತರ ವಿಧವಾಗಿ ಅವುಗಳ ವ್ಯಾಪಾರ ಮಾಡುತ್ತಾನೊ ಅಥವಾ ವಾಸ್ತವಿಕವಾದದ್ದೆಂಬದಾಗಿ ಉಪಯೋಗಿಸುತ್ತಾನೊ ಅಂಥಾ ಮನುಷ್ಯನು ಯಾವಜ್ಜೀವವೂ ನೀರಿನಮೇಲೆ ಕಳುಹಿಸಲ್ಪಡುವದರ ಮೂಲಕವಾಗಿಯಾಗಲಿ, ಹತ್ತು ವರುಷಗಳ ವರಿಗೆ ವ್ಯಾಪಿಸಬಹುದಾದ ಒಂದು ವಾಯಿದೆ ಪರ್ಯಂತ ಯಾವದಾದರೂ ಒಂದುವಿಧದ ಕೈದಿನ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಟ್ಟು ಜುಲುಮಾನೆ ತೆರಲಿಕ್ಕೆ ಸಹಾ ಗುರಿಯಾಗತಕ್ಕದ್ದು.

ಸೃಷ್ಟನೆಯಾದ ಅಥವಾ ಬನಾವಣಿಯಾದ ಕರೆನ್ಸಿ ನೋಟನ್ನು ಅಥವಾ ಬ್ಯಾಂಕ್ ನೋಟನ್ನು ಸ್ವಾಧೀನದಲ್ಲಿಟ್ಟುಕೊಳ್ಳೋಣ.

"489 C. ಯಾವನು, ಸೃಷ್ಟನೆಯಾದದ್ದು ಅಥವಾ ಬನಾವಣಿಯಾದದ್ದು ಎಂದು ತಿಳಿದು ಅಥವಾ ನಂಬಲಿಕ್ಕೆ ಕಾರಣವಿದ್ದು, ಸೃಷ್ಟನೆಯಾದ ಅಥವಾ ಬನಾವಣಿಯಾದ ಯಾವ ಕರೆನ್ಸಿ ನೋಟನ್ನು ಅಥವಾ ಬ್ಯಾಂಕ್ ನೋಟನ್ನು, ಅದು ವಾಸ್ತವಿಕವಾದದ್ದೆಂಬದಾಗಿ ಉಪಯೋಗಿಸುವ ಅಭಿಪ್ರಾಯದಿಂದ ಅಥವಾ ವಾಸ್ತವಿಕವಾದದ್ದೆಂಬದಾಗಿ ಉಪಯೋಗಿಸಲ್ಪಡಬಹುದೆಂಬ ಅಭಿಪ್ರಾಯದಿಂದ ಸ್ವಾಧೀನದಲ್ಲಿ ಇಟ್ಟುಕೊಂಡು ಇರುತ್ತಾನೊ ಅಂಥಾ ಮನುಷ್ಯನು ಏಳು ವರುಷಗಳ ವರಿಗೆ ವ್ಯಾಪಿಸಬಹುದಾದ ಒಂದು ವಾಯಿದೆ ಪರ್ಯಂತ ಯಾವದಾದರೂ ಒಂದು ವಿಧದ ಕೈದಿನ ಮೂಲಕವಾಗಿಯಾಗಲಿ, ಜುಲುಮಾನೆ ಮೂಲಕವಾಗಿಯಾಗಲಿ, ಇವೆರಡರ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಡತಕ್ಕದ್ದು.

ಕರೆನ್ಸಿ ನೋಟುಗಳನ್ನು ಅಥವಾ ಬ್ಯಾಂಕ್ ನೋಟುಗಳನ್ನು ಸೃಷ್ಟನೆ ಅಥವಾ ಬನಾವಣಿ ಮಾಡುವ ಬಗ್ಗೆ ಸಾಧನಗಳನ್ನು ಅಥವಾ ಸಾಮಗ್ರಿಗಳನ್ನು ಮಾಡೋಣ ಅಥವಾ ಸ್ವಾಧೀನದಲ್ಲಿ ಇಟ್ಟುಕೊಳ್ಳೋಣ.

"489 D. ಯಾವನು, ಯಾವದಾದರೂ ಕರೆನ್ಸಿ ನೋಟನ್ನು ಅಥವಾ ಬ್ಯಾಂಕ್ ನೋಟನ್ನು ಸೃಷ್ಟನೆ ಅಥವಾ ಬನಾವಣಿ ಮಾಡುವದರಲ್ಲಿ ಉಪಯೋಗಿಸುವ ಬಗ್ಗೆ ಅಥವಾ ಉಪಯೋಗಿಸಲು ಉದ್ದೇಶಿಸಲ್ಪಟ್ಟಿದೆ ಎಂತ ತಿಳಿದು ಅಥವಾ ನಂಬಲಿಕ್ಕೆ ಕಾರಣವಿದ್ದು ಯಾವದೊಂದು ಯಂತ್ರ ಸಾಮಗ್ರಿ, ಸಾಧನ, ಅಥವಾ ಸಾಮಾನನ್ನು ಮಾಡುತ್ತಾನೊ ಅಥವಾ ಮಾಡುವ ಕೆಲಸವನ್ನು ಎಷ್ಟುಮಾತ್ರವನ್ನಾದರೂ ನಡಿಸುತ್ತಾನೊ ಅಥವಾ ಕೊಂಡುಕೊಳ್ಳುತ್ತಾನೊ ಅಥವಾ ವಿಕ್ರಯಿಸುತ್ತಾನೊ ಅಥವಾ ವಿನಿಯೋಗಿಸುತ್ತಾನೊ ಅಥವಾ ಸ್ವಾಧೀನದಲ್ಲಿ ಇಟ್ಟುಕೊಳ್ಳುತ್ತಾನೊ ಅಂಥಾ ಮನುಷ್ಯನು ಯಾವಜ್ಜೀವವೂ ನೀರಿನಮೇಲೆ ಕಳುಹಿಸಲ್ಪಡುವದರ ಮೂಲಕವಾಗಿಯಾಗಲಿ, ಹತ್ತು ವರುಷಗಳ ವರಿಗೆ ವ್ಯಾಪಿಸಬಹುದಾದ ಒಂದು ವಾಯಿದೆ ಪರ್ಯಂತ ಯಾವದಾದರೂ ಒಂದು ವಿಧದ ಕೈದಿನ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಟ್ಟು, ಜುಲುಮಾನೆ ತೆರಲಿಕ್ಕೆ ಸಹಾ ಗುರಿಯಾಗಿರತಕ್ಕದ್ದು.

34. ಸದರೀ ಕೋಡಿನ 505ನೇ ಪ್ರಕರಣವು ಈ ಮೂಲಕ ರದ್ದು ಮಾಡಲ್ಪಟ್ಟು ಅದರ ಬದಲಾಗಿ ಈ ಕೆಳಗೆ ಬರುವ ಪ್ರಕರಣವು ಇಡಲ್ಪಟ್ಟಿದೆ, ಯಾವದಂದರೆ:—

"505. ಯಾವನು,—

ಪ್ರಜಾಜನಕ್ಕೆ ಕೇಡನ್ನು ಉಂಟು ಮಾಡುವ ಹೇಳಿಕೆಗಳು.

(a) ಮಹಿಮೆಯುಳ್ಳ ಶ್ರೀ ಮಹಾರಾಜ ಚಕ್ರವರ್ತಿಯವರ ದಂಡಿನಲ್ಲಿ ಅಥವಾ ನಾವೇದಂಡಿನಲ್ಲಿ ಅಥವಾ ರೋಯಲ್ ಇಂಡಿಯನ್ ಮೆರೀನ್ ಎಂಬ ನಾವೇ ದಂಡಿನಲ್ಲಿ ಅಥವಾ ಇಂಪೀರಿಯಲ್ ಸರ್ವಿಸ್ ಟ್ರೂಪ್ಸ್ ಎಂಬ ದಂಡಿನಲ್ಲಿ ಇರುವ ಯಾವನೊಬ್ಬ ಆಫಿಸರನನ್ನು, ಸೋಲ್ಜರನನ್ನು ಅಥವಾ ಸೈಲರನನ್ನು ಸರ್ಕಾರದವರ ಮೇಲೆ ತಿರಿಗಿ ಬೀಳುವದಾಗಿ ಅಥವಾ ಆತನ ಉದ್ಯೋಗ ಪ್ರಯುಕ್ತವಾದ ಕೆಲಸವನ್ನು ಅನ್ಯಥಾ ಅಲಕ್ಷಿಸುವ ಅಥವಾ ನಡಿಸದಹಾಗೆ ಮಾಡಬೇಕೆಂಬ ಅಭಿಪ್ರಾಯದಿಂದ ಅಥವಾ ಹಾಗೆ ಮಾಡುವ ಸಂಭವವುಳ್ಳ; ಅಥವಾ

(b) ಸರ್ವ ಜನರಿಗೆ ಅಥವಾ ಅವರ ಪೈಕಿ ಒಂದು ಭಾಗದವರಿಗೆ ಭಯವನ್ನು ಅಥವಾ ದಿಗಲನ್ನು ಹುಟ್ಟಿಸಿ ತದ್ವಾರಾ ಒಬ್ಬನಿಂದ ಸರಕಾರದವರಿಗೆ ವಿರೋಧವಾದ ಅಥವಾ ಜನಗಳ ನೆಮ್ಮದಿಗೆ ವಿರೋಧವಾದ ಅಪರಾಧವನ್ನು ಮಾಡಿಸಬೇಕೆಂಬ ಅಭಿಪ್ರಾಯದಿಂದ ಅಥವಾ ಹಾಗೆ ಮಾಡಿಸುವ ಸಂಭವವುಳ್ಳ ; ಅಥವಾ,

(c) ಒಂದು ಜಾತಿ ಅಥವಾ ಸಮಾಜದ ಜನರು ಇನ್ನೊಂದು ಜಾತಿಯ ಅಥವಾ ಸಮಾಜದವರ ಮೇಲೆ ಯಾವದೊಂದು ಅಪರಾಧವನ್ನು ನಡಿಸುವಂತೆ ಅವರನ್ನು ಪ್ರೇರೇಪಿಸುವ ಅಭಿಪ್ರಾಯದಿಂದ ಅಥವಾ ಹಾಗೆ ಪ್ರೇರೇಪಿಸುವ ಸಂಭವವುಳ್ಳ ಯಾವದೊಂದು (ಹೇಳಿಕೆ) ವರ್ತಮಾನವನ್ನು, ಸುದ್ದಿಯನ್ನು ಅಥವಾ ವದಂತಿಯನ್ನು ಕೊಡುತ್ತಾನೊ ಅಥವಾ ಬಹಿರಂಗ ಪಡಿಸುತ್ತಾನೊ ಅಥವಾ ಘೋಷಿಷ್ ಮಾಡುತ್ತಾನೊ ಅಂಥಾ ಪ್ರತಿ ಮನುಷ್ಯನು ಎರಡು ವರುಷಗಳ ವರೆಗಿನ ಕೈದಿನ ಮೂಲಕವಾಗಿಯಾಗಲಿ, ಜುಲುಮಾನೆಯ ಮೂಲಕವಾಗಿಯಾಗಲಿ, ಇವೆರಡರ ಮೂಲಕವಾಗಿಯಾಗಲಿ ಶಿಕ್ಷಿಸಲ್ಪಡತಕ್ಕದ್ದು.

“ವಿನಹಾಯಿತಿ.—ಅಂಥಾ ಯಾವದೊಂದು ವರ್ತಮಾನವನ್ನು, ಸುದ್ದಿಯನ್ನು ಅಥವಾ ವದಂತಿಯನ್ನು ಕೊಡುವ, ಬಹಿರಂಗಪಡಿಸುವ ಅಥವಾ ಘೋಷಿಷ್ ಮಾಡುವ ಮನುಷ್ಯನಿಗೆ ಅಂಥಾ ವರ್ತಮಾನವು, ಸುದ್ದಿಯು ಅಥವಾ ವದಂತಿಯು ನಿಜವಾದದ್ದೆಂತ ನಂಬಲಿಕ್ಕೆ ನ್ಯಾಯವಾದ ಕಾರಣಗಳಿದ್ದು ಮೇಲೆ ನಮೂದಿಸಲ್ಪಟ್ಟ ಯಾವದೊಂದು ಅಭಿಪ್ರಾಯ ಇಲ್ಲದೇನೆ ಅದನ್ನು ಕೊಟ್ಟರೆ, ಬಹಿರಂಗ ಪಡಿಸಿದರೆ ಅಥವಾ ಘೋಷಿಷ್ ಮಾಡಿದರೆ ಅದು ಈ ಪ್ರಕರಣದ ಅರ್ಥಕ್ಕೊಳಪಡುವ ಒಂದು ಅಪರಾಧವಾಗುವದಿಲ್ಲ.”

ಈ ರೆಗ್ಯುಲೇಷನಿನ ಆರಂಭ.

35. ಈ ರೆಗ್ಯುಲೇಷನ್ 1904ನೇ ವರುಷದ ಏಪ್ರೆಲ್ ಮೊದಲನೇ ದಿವಸದಿಂದ ಜಾರಿಗೆ ಬರತಕ್ಕದ್ದು.

ಪಿ. ಎನ್. ಕೃಷ್ಣಮೂರ್ತಿ,
ಮೈಸೂರು ದಿವಾನರು.

Mysore Government Central Press, Bangalore—1903.

ಮೈಸೂರ ಗೆಜೆಟ್.

ಸಂ. 39. ಸರ್ಕಾರದಿಂದ ಛಾಯಿಪ್ ಆದ್ದು. [ನಂ. 23.

ಬೆಂಗಳೂರು, ಗುರುವಾರ, ಜೂ॰ ತಾ॥ 9, ಸ॰ 1904.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡಲ್ಪಟ್ಟಾದ ಇಸ್ತಿಹಾರ್‌ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ ಆಫೀಸರಗಳು, ಫಾರೆಸ್ಟ್, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ ಪ್ರೆಸಿಡೆಂಟರು ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜಿರು, ಡಿಸ್ಟ್ರಿಕ್ಟ್, ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟ್ ಆಫೀಸರಗಳು ಇವರುಗಳಿಂದ ಕೊಡಲ್ಪಟ್ಟಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸಗಳು.

3ನೆ ಭಾಗ—ಲೆಜಿಸಲೇಟಿವ್ ರೆಗ್ಯುಲೇಷನಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲಾ.

4ನೆ ಭಾಗ—ಸರ್ಕಾರೀ ಕಾಗದಪತ್ರಗಳು—ಇಲ್ಲಾ.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡಲ್ಪಟ್ಟಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 28ನೆ ಮೇ 1904.

ನಂ. ಲೋ. ಬೋ. ಪಿ. 1485, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ ಅನುಸಂಗ 1898ನೆ ಫೆಬ್ರವರಿ 10ನೆ ಮಾರ್ಕು 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನಗಳ ಉದ್ದೇಶಗಳಿಗೋಸ್ಕರ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳವು ರೋಗಗ್ರಸ್ತವಾದ ಪ್ರದೇಶವಾಗಿ ಎಣಿಸಲ್ಪಡತಕ್ಕದ್ದು.

ಸ್ಥಳ.	ತಾಲ್ಲೂಕು.
ನೇರ್ಲಕಟ್ಟೆ	ಹೊಳಲಕೆರೆ.

ತಾರೀಖು 4ನೆ ಜೂನ್ 1904.

ನಂ. ಲೋ. ಬೋ. ಪಿ. 1495, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ರೋಗ ತಗಲಿದ ಪ್ರದೇಶಗಳಾಗಿ ಆಗಿಂದಾಗ್ಯೆ ಪ್ರಸಿದ್ಧಪಡಿಸಲ್ಪಟ್ಟ ಇದರಡೀ ಕಂಡ ಸ್ಥಳಗಳು ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ:—

ತುಮಕೂರು ಡಿಸ್ಟ್ರಿಕ್ಟ.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
ಚೆನ್ನೇನಹಳ್ಳಿ ..	ತುಮಕೂರು	ನಾಲಹಳ್ಳಿ ..	ತುಮಕೂರು.
ಹೆರೆಗೊಂಡಕಲ್ ..	ಡಿಟೋ	ತಿಮ್ಮಲಾಪುರ (ತುಮಕೂರು ಹೋಬಳಿ).	ಡಿಟೋ
ಸೋಮನಹಳ್ಳಿ ..	ಡಿಟೋ	ಬಳ್ಳಾಪುರ ..	ಡಿಟೋ
ತಾರೂರು ..	ಡಿಟೋ	ದಿಬ್ಬೂರು ..	ಡಿಟೋ
ಅರಳಕಟ್ಟೆ ...	ಡಿಟೋ	ಕುಚ್ಚಂಗಿ ..	ಡಿಟೋ
ಸಿದ್ಧಪ್ಪನ ಪಾಳ್ಯ ..	ಡಿಟೋ	ಪೇರಮಾನಹಳ್ಳಿ ..	ಡಿಟೋ
ಕಲ್ಲಹಳ್ಳಿ ...	ಡಿಟೋ	ಲಿಂಗವಹಳ್ಳಿ ..	ತಿಪಟೂರು.
ದೇವರಾಯಪಟ್ಟಣ ...	ಡಿಟೋ	ಮಾದೇನೂರು	ಡಿಟೋ
ಸತ್ಯಮಂಗಲ ..	ಡಿಟೋ	ಕಾಂತೂರು	ಡಿಟೋ
ನಾಗಣ್ಣನಹಳ್ಳಿ ...	ಡಿಟೋ	ಗೋಪಾಲಪುರ ..	ಡಿಟೋ
ಹಿರೆತೊಟ್ಲುಕೆರೆ ...	ಡಿಟೋ	ಮತ್ತಿಘಟ್ಟ ...	ಡಿಟೋ
ಹೆಗ್ಗೆರೆ ...	ಡಿಟೋ	ಮಾಕನಹಳ್ಳಿ ...	ಡಿಟೋ
ಕಟ್ಟಿಗೇನಹಳ್ಳಿ ..	ಡಿಟೋ	ಗೋಬಿಗೌಡನಪಾಳ್ಯ	ಡಿಟೋ
ರಂಗಾಪುರ ..	ಡಿಟೋ	ಅಲಬೂರು ..	ಡಿಟೋ
ಮಲ್ಲೇನಹಳ್ಳಿ ..	ಡಿಟೋ	ಹಡಲೂರು ..	ಗುಬ್ಬಿ.
ಅಂತರಸನಹಳ್ಳಿ ...	ಡಿಟೋ	ರಾಯಪುರ ...	ಡಿಟೋ
ಕುಪ್ಪೂರು ...	ಡಿಟೋ	ಮಾರಕನಹಳ್ಳಿಪಟ್ಣ ...	ಡಿಟೋ
ಸಿಂಗಾಪುರ ...	ಡಿಟೋ	ಸಿಂಗೋನಹಳ್ಳಿ ..	ಡಿಟೋ
ಮಾಚನಪುರ	ಡಿಟೋ	ಹರವೇಸಂದ್ರ ...	ಡಿಟೋ
ಮಜ್ಜಿಗೆಕೆಂಪನಹಳ್ಳಿ ...	ಡಿಟೋ	ಚಿಂದಗೆರ ..	ಡಿಟೋ
ನೇರಳಾಪುರ ...	ಡಿಟೋ	ಹಿಂಡಿಸಿಗೆರೆ ..	ಡಿಟೋ
ಕಮಲಾಪುರ ..	ಡಿಟೋ	ಮಲ್ಲೇಕಾವು ..	ಡಿಟೋ
ತಿಮ್ಮಲಾಪುರ (ಬೆಳ್ಳಾವಿ ಹೋಬಳಿ)	ಡಿಟೋ		

ತಾರೀಖು 7ನೆ ಜೂನ್ 1904.

ನಂ. ಲೋ. ಬೋ. ಪಿ. 1518, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಾತ್ರೆ ವ ಉತ್ಸವಕ್ಕೆ ರೋಗತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮದರಾಸು ಗವರ್ನಮೆಂಟಿನವರು ಅಡ್ಡೀ ಪಡಿಸುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟ.	ತಾರೀಖು. ಯಾವ ಲಾಗಾಯತು.	ತಾರೀಖು. ಯಾವ ವರಿವಿಗೆ.	ಅಥಾರಿಟಿ.
*ಗುರುನಾಥಸ್ವಾಮಿಯು ಉತ್ಸವದ ಕುಗ್ರಾಮ ಮತ್ತು ದನಗಳ ಪರಸ	ಗಟ್ಟಿಸಮುದ್ರವಾದ ಪುದುಪಾಳಯಂ	ಭವಾನಿ ..	ಕೋಯಿಮುತ್ತೂರು	1904ನೆ ಜುಲೈ 19ರ ಲಾಗಾಯತು ಆಗಸ್ಟ್ 10ರ ವರಿವಿಗೆ (ಉಭಯ ದಿನಗಳು ಸೇರಿ)		ಆನರಬಲ್ ರೆಸಿಡೆಂಟರವರ ಫಸ್ಟ್ ಅಸಿಸ್ಟೆಂಟರ ಮೆಮೊ ನಂ. 784 ತಾ 4—6—04

* 1904ನೆ ಆಗಸ್ಟ್ 9ರ ಲಾಗಾಯತು 13ರ ವರಿವಿಗೆ ದನಗಳ ಪರಸೆ ನಡೆಯುವದನ್ನು ಸಹಾ ಅಡ್ಡೀಪಡಿಸಲ್ಪಟ್ಟಿರುತ್ತೆ.

ತಾರೀಖು 28ನೆ ಮೇ 1904.

ನಂ. 2558—ಜು., ಸನ್ 1890ನೆ ಇಸವಿಯ VIನೆ ನಂಬರ ಮೈಸೂರ ಆರಂಸ್ ರೆಗ್ಯುಲೇಷನಿನ 22ನೆ ಸೆಕ್ಷನ್ನಿಂದ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮತ್ತು ಸದರೀ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ Iನೆ ರೂಲಿನ (8)ನೆ ಕ್ಲಾಜ್ ಕುರಿತು, ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ದರೋಬಸ್ತು ಮೆಂಬರುಗಳಿಗೆ, ಅವರು ಅಂಥಾ ಮೆಂಬರುಗಳಾಗಿರುವ ವರಿವಿಗೂ, ಮೇಲ್ಕಂಡ ರೆಗ್ಯುಲೇಷನಿನ 8, 9, 10 ವ 11ನೆ ಸೆಕ್ಷನ್‌ಗಳಲ್ಲಿರುವ ಫಿರಂಗಿ, ಟಾರ್ಪಿಡೊ ಸರ್ವಿಸಗೋಸ್ಕರ ಉದ್ದೇಶಿಸಲ್ಪಟ್ಟ ಸಾಮಾನುಗಳು, ಯುದ್ಧದ ಬಾಣಗಳು ಮತ್ತು ಆಯುಧಗಳು ವ ಮದ್ದು ತಯಾರು ಮಾಡುವ ಬಗ್ಗೆ ಬೇಕಾದ ಯಂತ್ರ ಸಾಹಿತ್ಯ ಇವುಗಳಿಗೆ ಸಂಬಂಧಪಟ್ಟದ್ದು ವಿನಾ ಮಿಕ್ಕ ವಿಶಿಷ್ಟ ಆಟಂಕಗಳು ವ ಅಪ್ಪಣೆಗಳು ಚಲಾಯಿಸೋಣದರಿಂದ ಮೈಸೂರು ಸೀಮೆಯಲ್ಲಿ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಮನ್ನಾ ಮಾಡಿರುತ್ತಾರೆ:—

2. ಸನ್ 1895ನೆ ಫೇಬ್ರುವರಿ ಮಾರ್ಕ್ 1ನೆ ನಂಬರ ಇಸ್ತಿಹಾರ್ನಾಮೆಯಲ್ಲಿ ಮಂಜೂರಾದ ರೂಲುಗಳ Iನೆ ಭಾಗದ (8)ನೆ ಕ್ಲಾಜಿನಲ್ಲಿ ಪ್ರಜಾ ಪ್ರತಿನಿಧಿ ಸಭೆಯ ಮೆಂಬರುಗಳಿಗೆ ಸಂಬಂಧಪಟ್ಟದ್ದನ್ನು ವಜಾ ಮಾಡತಕ್ಕದ್ದು ಮತ್ತು ಇದರಡೀ ಕಂಡದ್ದನ್ನು (20)ನೆ ಕ್ಲಾಜಾಗಿ ಸೇರಿಸತಕ್ಕದ್ದು:—

"ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ದರೋಬಸ್ತು ಮೆಂಬರುಗಳು ಅಂಥಾ ಮೆಂಬರುಗಳಾಗಿರುವ ವರಿವಿಗೂ."

ತಾರೀಖು 1ನೆ ಜೂನ್ 1904.

ನಂ. 4692—ಲೋ. ಫಂ. 81–03, ಸನ್ 1902ನೆ ಇಸವಿಯ IIನೆ ನಂಬರ ಲೋಕಲ್ ಬೋರ್ಡ್ಸ್ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ಮತ್ತು 1903ನೆ ಸೆಪ್ಟಂಬರ್ 9ನೆ ಮುರ್ಕಂ 30—ಲೆಜಿಸ್. 4—03ನೆ ನಂಬರ ಇಸ್ತಿಹಾರ್ನಾಮೆಯೊಡನೆ ಷಾಯಿಯಾದ ರೂಲುಗಳ 21ನೆ ಪ್ಯಾರಾ ಅನುಸರಿಸಿ, ಸದರೀ ರೂಲುಗಳ 7ನೆ ಪ್ಯಾರಾವಿನಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಕೆಳಗೆ ನಮೂದು ಮಾಡಲ್ಪಟ್ಟ ತಾಲ್ಲೂಕು ಬೋರ್ಡುಗಳ ಇದರಡೀ ಕಂಡ ಮೆಂಬರುಗಳ ಪಟ್ಟಿಯು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಷಾಯಿಸಲ್ಪಟ್ಟಿರುತ್ತೆ:—

ಕುಂಸಿ ಸಬ್ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ಸಬ್ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮೀಷನರು ... ಪ್ರೆಸಿಡೆಂಟರು.
2. ಡೆಪ್ಯುಟಿ ಅಮಲ್ದಾರು ... .. ವೈಸ್ ಪ್ರೆಸಿಡೆಂಟರು.
3. ಕುಂಸಿಯಲ್ಲಿರುವ ಲೋಕಲ್ ಫಂಡ್ ಡಿಸ್ಪೆನ್ಸರಿ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಓವರ್ಸಿಯರು .... ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5. ಮ|| ಷರಾಫ್ ಹನುಮಂತರಾಯರು, ಜಮೀನ್ದಾರು ವ ಸಾಹುಕಾರು .. ಡಿಟೋ
6. ,, ನಾಡಿಗ ಗುರುರಾಯರು, ಶ್ಯಾನಭೋಗರು ... .. ಡಿಟೋ
7. ,, ನಾಡಿಗ ಸಣ್ಣ ರಾಘವೇಂದ್ರಪ್ಪನವರು, ಶ್ಯಾನಭೋಗರು .. ಡಿಟೋ
8. ,, ದುರ್ಗಾಪ್ರಸಾದರು, ಪಟೇಲರು ... .. ಡಿಟೋ

(f) ಕ್ಲಾಜ್ ಅನುಸರಿಸಿ.

9. ,, ರಾಮಚಂದ್ರಪ್ಪನವರು ... .. ಡಿಟೋ

(g) ಕ್ಲಾಜ್ ಅನುಸರಿಸಿ.

10. ,, ದಿಮ್ಮಿ ಮುರಿಗಪ್ಪನವರು, ಜಮೀನ್ದಾರು ಮತ್ತು ಸಾಹುಕಾರು .. ಡಿಟೋ
11. ,, ವೆಂಕಟಾಚೆಟ್ಟಿಯವರು, ಜಮೀನ್ದಾರು .. ಡಿಟೋ
12. ,, ಬದ್ರುದ್ದೀನ್ ಸಾಹೇಬರು, ಜಮೀನ್ದಾರು .. .. ಡಿಟೋ

2. ಸಾಗರ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮೀಷನರು .. ... ಪ್ರೆಸಿಡೆಂಟರು.
2. ಅಮಲ್ದಾರು ... ... ವೈಸ್ ಪ್ರೆಸಿಡೆಂಟರು.
3. ಸಾಗರದಲ್ಲಿರುವ ಲೋಕಲ್ ಫಂಡ್ ಡಿಸ್ಪೆನ್ಸರಿ ಚಾರ್ಜಿನಲ್ಲಿರುವ ಮೆಡಿಕಲ್ ಆಫಿಸರು ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಸಬ್ ಡಿವಿಜನ್ ಆಫಿಸರು .. .... ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5. ಮ|| ತೊರೆಮನೆ ಪರಮೇಶ್ವರಭಟ್ಟರು, ಜಮೀನ್ದಾರು .. .. ಡಿಟೋ
6. ,, ಶಿರವಂತಿ ಕಮಲಯ್ಯನವರು ಡಿಟೋ ... ... ಡಿಟೋ
7. ,, ಹಸ್ಸೆ ಬಸಪ್ಪ ಬಿನ್ ದ್ಯಾವಪ್ಪನವರು ಡಿಟೋ ... ... ಡಿಟೋ
8. ,, ಶಾಮರಾಯರು, ಜಮೀನ್ದಾರು ವ ಪ್ಲೀಡರು ... ... ಡಿಟೋ

(f) ಕ್ಲಾಜ್ ಅನುಸರಿಸಿ.

9. ,, ಎ. ನರಸಿಂಹಯ್ಯಂಗಾರ್ರು, ಜಮೀನ್ದಾರು ಮತ್ತು ಪಟೇಲರು ... ಡಿಟೋ

(g) ಕ್ಲಾಜ್ ಅನುಸರಿಸಿ.

10. ,, ಮಾಲೂರು ನ್ಯಾಮಯ್ಯಗೌಡರು, ಜಮೀನ್ದಾರು .. ಡಿಟೋ
11. ,, ಕೋಗೋಡ್ ಗುರುಮಯ್ಯಗೌಡರು, ಡಿಟೋ .. ಡಿಟೋ
12. ,, ಯಾಗೆಯ್ಯನ ಸುಬ್ಬರಾಯರು, ಜಮೀನ್ದಾರು ಮತ್ತು ಸಾಹುಕಾರು ಡಿಟೋ

3. ಶಿಕಾರಿಪುರ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1.	ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು	ಪ್ರೆಸಿಡೆಂಟರು.
2.	ಅಮಲ್ದಾರು	ವೈಸ್ ಪ್ರೆಸಿಡೆಂಟರು.
3.	ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು ..	ಮೆಂಬರು.
4.	ಪಬ್ಲಿಕ ವರ್ಕ್ಸ ಇಲಾಖೆಯ IV ಸಬ್ ಡಿವಿಜನಿನ ಓವರ್ಸಿಯರು ..	ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5.	ಮೆ॥ ಇಸೂರು ಶಿವಪ್ಪನವರು, ಪಟೇಲರು	ಡಿಟೋ
6.	,, ತ್ಯಾಗರ್ತಿ ದ್ಯಾವಪ್ಪನವರು, ಡಿಟೋ . ..	ಡಿಟೋ
7.	,, ಉಡಗಣಿ ನಾಡಿಗ ಕೃಷ್ಣಪ್ಪನವರು, ಶಾನಭೋಗರು ಮತ್ತು ಜಮೀನ್ದಾರು	ಡಿಟೋ
8.	,, ತೊಗರ್ಸಿ ಮಹಂತದೇಸಿಕರ್ ಯವರು, ಜಮೀನ್ದಾರು ..	ಡಿಟೋ

(f) ಕ್ಲಾಜ್ ಅನುಸರಿಸಿ.

9.	,, ದೀಕ್ಷಿತರ ಶಿವಪ್ಪನವರು	ಡಿಟೋ

(g) ಕ್ಲಾಜ್ ಅನುಸರಿಸಿ.

10.	,, ಹೊಸೂರು ವೀರಭದ್ರಪ್ಪನವರು, ಪಟೇಲರು	ಡಿಟೋ
11.	,, ಬಿಳಕಿ ಬಸಪ್ಪನವರು, ಪಟೇಲರು	ಡಿಟೋ
12.	,, ಸಂದದ ಮಲ್ಲಾರಪ್ಪನವರು, ಶಾನಭೋಗರು	ಡಿಟೋ

4. ಹೊನ್ನಾಳಿ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1.	ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು	ಪ್ರೆಸಿಡೆಂಟರು.
2.	ಅಮಲ್ದಾರು	ವೈಸ್ ಪ್ರೆಸಿಡೆಂಟರು.
3.	ಲೋಕಲ್ ಫಂಡ್ ಡಿಸ್ಪೆನ್ಸರಿ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು ..	ಮೆಂಬರು.
4.	ಪಬ್ಲಿಕ ವರ್ಕ್ಸ ಇಲಾಖೆ ಹೊನ್ನಾಳಿ ರೇಂಜಿನ ಸಬ್ ಡಿವಿಜನ್ ಆಫಿಸರು .	ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5.	ಮೆ॥ ನರಸಿಂಗಪ್ಪನವರು, ಶಾನಭೋಗರು	ಡಿಟೋ
6.	,, ನಾಡಿಗ ಸಿದ್ದಪ್ಪ ಬಿನ್ ಸಿದ್ದಲಿಂಗಪ್ಪನವರು, ಶಾನಭೋಗರು ..	ಡಿಟೋ
7.	,, ಸೊರತೂರು ಚನ್ನಪ್ಪನವರು, ಪಟೇಲರು	ಡಿಟೋ
8.	,, ಚಿನ್ನಿಕಟ್ಟೆ ಹಾಲಪ್ಪನವರು, ಡಿಟೋ	ಡಿಟೋ

(f) ಕ್ಲಾಜ್ ಅನುಸರಿಸಿ.

9.	,, ನಾಡಿಗ ಗೋಪಾಲಪ್ಪನವರು	ಡಿಟೋ

(g) ಕ್ಲಾಜ್ ಅನುಸರಿಸಿ.

10.	,, ಎಚ್. ಬಾಲಕೃಷ್ಣರಾಯರು, ಪ್ಲೀಡರು ಮತ್ತು ಪೆನ್ಷನ್ ಷಿರಸ್ತೆದಾರು...	ಡಿಟೋ
11.	,, ಅರುಂಡಿ ಮೊಸೂಂಖಾನ್ ಸಾಹೇಬರು, ಜಮೀನ್ದಾರು ಮತ್ತು ವರ್ತಕರು.	ಡಿಟೋ
12.	,, ಲತೀಫ್‌ಖಾನ್ ಸಾಹೇಬರು, ಸಾಹುಕಾರು	ಡಿಟೋ

5. ಚನ್ನಗಿರಿ ತಾಲ್ಲೂಕು.

ಎಕ್ಸ್ ಅಫೀಷಿಯೋ ಮೆಂಬರುಗಳು.

1.	ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು	ಪ್ರೆಸಿಡೆಂಟರು.
2.	ಅಮಲ್ದಾರು	ವೈಸ್ ಪ್ರೆಸಿಡೆಂಟರು.
3.	ಲೋಕಲ್ ಫಂಡ್ ಡಿಸ್ಪೆನ್ಸರಿ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು ..	ಮೆಂಬರು.
4.	ಪಬ್ಲಿಕ ವರ್ಕ್ಸ ಇಲಾಖಾ ಹೊನ್ನಾಳಿ ರೇಂಜಿನ ಸಬ್ ಡಿವಿಜನ್ ಆಫಿಸರು ..	ಡಿಟೋ

953

ಇತರ ಮೆಂಬರುಗಳು.

(*e*) ಕ್ಲಾಜ್ ಅನುಸರಿಸಿ.

5. ಮ॥ ಹೊಡಿಗೆರೆ ಅಡಿವಪ್ಪನವರು, ಸಾಹುಕಾರು ಮತ್ತು ಜಮೀನ್ದಾರು .. .. ಮೆಂಬರು.
6. ,, ಕಾಮಸಾಗರದ ಈಡಪ್ಪನವರು, ಜಮೀನ್ದಾರು .. .. ಡಿಟೋ
7. ,, ನಲ್ಲೂರು ಹಾಲಪ್ಪನವರು, ಡಿಟೋ .. .. ಡಿಟೋ
8. ,, ಬಸವಾಪುರದ ಗಿರಿಯಪ್ಪನವರು, ಡಿಟೋ .. .. ಡಿಟೋ

(*f*) ಕ್ಲಾಜ್ ಅನುಸರಿಸಿ.

9. ,, ವಿಭೂತಿ ನಂಜುಂಡಪ್ಪನವರು, ವರ್ತಕರು .. .. ಡಿಟೋ

(*g*) ಕ್ಲಾಜ್ ಅನುಸರಿಸಿ.

10. ,, ಖಲಂದರ್ ಖಾನ್ ಸಾಹೇಬರು, ಜಮೀನ್ದಾರು .. .. ಡಿಟೋ
11. ,, ತಾವರೆಕೆರೆ ಈರಪ್ಪನವರು, ಡಿಟೋ .. .. ಡಿಟೋ
12. ,, ನಾಡಿಗ ಭೀಮರಾಯರು, ಶ್ಯಾನಭೋಗರು .. .. ಡಿಟೋ

ತಾರೀಖು 2ನೆ ಜೂನ್ 1904.

ನಂ. 4696—ಲೋ. ಫಂ. 77–03, ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸರಿಸಿ ಮಾಡಲ್ಪಟ್ಟ ಮತ್ತು 1903ನೆ ಸೆಪ್ಟಂಬರ್ 9ನೆ ಮಾರ್ಕ್ಕಂ 30–ಲೆಜಿಸ್. 4–03ನೆ ನಂಬರ್ ಇಸ್ತಿಹಾರ್ನಾಮೆಯೊಡನೆ ಪ್ರಕಾಯಿಷಾದ ರೂಲುಗಳ 7ನೆ ಪ್ಯಾರಾವಿನಲ್ಲಿರುವ ನಿಯಮಗಳನುಸಾರವಾಗಿ ಮಾಡಲ್ಪಟ್ಟ ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಚಿಂತಾಮಣಿ ತಾಲ್ಲೂಕಿನ ತಾಲ್ಲೂಕು ಬೋರ್ಡಿಗೋಸ್ಕರ ಮೊಕರರ್ಮಾಡಲ್ಪಟ್ಟ ಮೆಂಬರುಗಳ ಇದರಡೀ ಕಂಡ ಪಟ್ಟಿಯು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಕಾಯಿಷ್ಮಾಡಲ್ಪಟ್ಟಿರುತ್ತೆ :—

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರು .. ... ಪ್ರೆಸಿಡೆಂಟರು.
2. ಅಮಲ್ದಾರು .... ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸೆರಿ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು .. ಮೆಂಬರು.
4. ಪಬ್ಲಿಕ್ ವರಕ್ಸ್ ಇಲಾಖೆಯ ಸಬ್ ಡಿವಿಜನ್ ಆಫಿಸರು .. ಡಿಟೋ

ಇತರ ಮೆಂಬರುಗಳು.

(*e*) ಕ್ಲಾಜು ಅನುಸರಿಸಿ.

5. ಮ॥ ಲಕ್ಷ್ಮಿನಾರಣಪ್ಪ ಉರುಫ್ ಯಗವಕೋಟೆ ಅಪ್ಪಾಜಪ್ಪನವರು .. ಡಿಟೋ
6. ,, ವೀರಭದ್ರಪ್ಪನವರು, ಶಾನಭೋಗರು .. .. ಡಿಟೋ
7. ,, ಕೈವಾರದ ಕೃಷ್ಣಪ್ಪನವರು .. ಡಿಟೋ
8. ,, ಮಾಲಪಲ್ಲಿ ಚೌಡರೆಡ್ಡಿಯವರು .. .. ಡಿಟೋ

(*f*) ಕ್ಲಾಜ್ ಅನುಸರಿಸಿ.

9. ,, ಅಡಿಕೆ ನಂಜುಂಡಪ್ಪನವರು .. .. ಡಿಟೋ

(*g*) ಕ್ಲಾಜ್ ಅನುಸರಿಸಿ.

10. ,, ಸೈಯದ್ ಬುರ್ಹಾನ್ ಸಾಹೇಬರು, ಉಪ್ಪಾರಪೇಟೆಯ ಪೆನ್ಷನ್ ಜಮಾದಾರು .. ಡಿಟೋ
11. ,, ಕೋಗಟ ಅಪ್ಪಾಜಿರೆಡ್ಡಿಯವರು .. .. ಡಿಟೋ
12. ,, ಕೋನಪಲ್ಲಿ ವೆಂಕಟರಾಮರೆಡ್ಡಿಯವರು .. .. ಡಿಟೋ

ತಾರೀಖು 6ನೆ ಜೂನ್ 1904.

ನಂ. 2629—ಜು., ಕ್ರಿಮಿನಲ್ ಪ್ರೊಸೀಜರ್ ಕೋಡಿನ 12ನೆ ಸೆಕ್ಷನ್ ಅನುಸರಿಸಿ, ಬೆಂಗಳೂರು ತಾಲ್ಲೂಕಿನಲ್ಲಿ ಕೆಲಸ ಮಾಡುತಲಿರುವ ರೆವಿನ್ಯೂ ಇಲಾಖೆಯ ಪ್ರೊಬೇಷನರಾದ ಮ॥ ಸಿ. ರಂಗನಾಥರಾವ್ ಸಾಹೇಬ್, ಬಿ. ಎ., ಬಿ. ಎಲ್., ಯವರು ಮೂರನೇ ಕ್ಲಾಸಿನ ಮ್ಯಾಜಿಸ್ಟ್ರೇಟರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 6ನೆ ಜೂನ್ 1904.

ನಂ. 2631—ಜು., ಫಾರಿನ್ ಇಲಾಖಾ ಇಂಡಿಯಾ ಗವರ್ನಮೆಂಟಿನ ಇದರಡೀ ಕಂಡ ಇಸ್ತಿಹಾರ್ನಾಮೆಯು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಮರಳೀ ಪ್ರಕಾಯಿಷ್ಮಾಡಲ್ಪಟ್ಟಿರುತ್ತೆ :—

ಇಸ್ತಿಹಾರ್ನಾಮೆ.

ತಾರೀಖು 12ನೆ ಮೇ 1904.

ನಂ. 1823–I—ಎ., ಸನ್ 1902ನೆ ಸಂತ್ರಾಲೋಚಕ ಸಮಾಜದೊಳಗಣ ಇಂಡಿಯನ್ (ಫಾರಿನ್ ಎಖ್ಯಾರಿ) ಆರ್ಡರಿನಿಂದ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, ಮಂತ್ರಾಲೋಚಕ ಸಮಾಜದೊಳಗಣ ಗವರ್ನರ್ ಜನರಲ್ ಯವರು ಮೈಸೂರು ಸೀಮೆಯಲ್ಲಿ ಜಸ್ಟಿಸ್ ಆಫ್ ಪೀಸಾಗಿರುವ ಬಗ್ಗೆ ಮ॥ ಜೆ. ಇ. ಡನ್ನಿಂಗ್ ಯವರನ್ನು ಮೊಕರರ್ಮಾಡಿರುತ್ತಾರೆ.

B

ತಾರೀಖು 7ನೆ ಜೂನ್ 1904.

ನಂ. 2642—ಜ್ಯು., ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ—ಷಿಕಾರಿಪುರ, ಆಲೂರು, ಸೊರಬ ಮತ್ತು ನಗರ ಈ ಸ್ಥಳಗಳಲ್ಲಿ 1904ನೆ ಜುಲೈ ಗುರ್ರೆ ತಾರೀಖಿನಾರಭ್ಯ ಅಜಮಾಯಿಷಿ ತಲಾಶು ಸ್ಪೆಷಿಯಲ್ ಸಬ್ ರಿಜಿಸ್ಟ್ರಿ ಆಫೀಸುಗಳು ಸ್ಥಾಪಿಸಲ್ಪಡುವವು.

ತಾರೀಖು 7ನೆ ಜೂನ್ 1904.

ನಂ. 4765—ಲೋ. ಫಂ. 116–03, ಸನ್1902ನೆ ಇಸವಿಯ IIನೆ ನಂಬರ್ ಮೈಸೂರು ಲೋಕಲ್ ಬೋರ್ಡುಗಳ ರೆಗ್ಯುಲೇಷನ್ 2ನೆ ಸೆಕ್ಷನಿನ 4ನೆ ಕ್ಲಾಜ್‌ನಿಂದ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಚಿಕ್ಕನಾಯಿಕನಹಳ್ಳಿ ತಾಲ್ಲೂಕು ಹುಳಿಯಾರದ ಮೈನರ್ ಮ್ಯುನಿಸಿಪಾಲಿಟಿಯನ್ನು ಗ್ರಾಮ ಸಂಘವನ್ನಾಗಿ 1904ನೆ ಜುಲೈ ಗುರ್ರೆ ತಾರೀಖಿನಾರಭ್ಯ ಬದಲಾಯಿಸಿರುತ್ತಾರೆ.

ತಾರೀಖು 7ನೆ ಜೂನ್ 1904.

ನಂ. 4767—ಲೋ. ಫಂ. 81–03, ಸನ್ 1902ನೆ ಇಸವಿಯ IIನೆ ನಂಬರ್ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ಮತ್ತು 1903ನೆ ಸೆಪ್ಟಂಬರ್ 9ನೆ ಮಾರ್ಸ್ಟಂ 30—ಲೆಜಿಸ್. 4–03ನೆ ನಂಬರ್ ಇಸ್ತಿಹಾರ್ನಾಮೆಯೊಡನೆ ಘಾಯಿಷಾದ ರೂಲುಗಳ 21ನೆ ಪ್ಯಾರಾ ಅನುಸರಿಸಿ, ಸದರೀ ರೂಲುಗಳ 7ನೆ ಪ್ಯಾರಾವಿನಲ್ಲಿರುವ ನಿಯಮಗಳನುಸರಿಸಿ ಮಾಡಲ್ಪಟ್ಟ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಸೊರಬ ತಾಲ್ಲೂಕು ಬೋರ್ಡಿನ ಮೆಂಬರುಗಳ ಇದರಡೀ ಕಂಡ ಪಟ್ಟಿಯು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಘಾಯಿಷ್ಮಾಡಲ್ಪಟ್ಟಿರುತ್ತೆ :—

ಎಕ್ಸ್ ಅಫೀಷಿಯೋ ಮೆಂಬರುಗಳು.

1. ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟಂಟ್ ಕಮಿಷನರು .... ಪ್ರೆಸಿಡೆಂಟರು.
2. ಅಮಲ್ದಾರು ... ... ವೈಸ್ ಪ್ರೆಸಿಡೆಂಟರು.
3. ಲೋಕಲ್ ಫಂಡ್ ಡಿಸ್ಪೆನ್ಸೆರಿ ಚಾರ್ಜಿನಲ್ಲಿರುವ ಆಸ್ಪತಲ್ ಅಸಿಸ್ಟೆಂಟರು ... ಮೆಂಬರು.
4. ಪಬ್ಲಿಕ್ ವರ್ಕ್ಸ್ ಇಲಾಖೆಯ ಓವರ್ಸೀರು .. .. ಡಿಟೋ

ಇತರ ಮೆಂಬರುಗಳು.

(e) ಕ್ಲಾಜ್ ಅನುಸರಿಸಿ.

5. ಮೆ॥ ನಾಡಿಗ ಶಾಸ್ತ್ರಿರಾಯರು, ಜಮೀನ್ದಾರು ವ ಶ್ಯಾನಭೋಗರು ... ಡಿಟೋ
6. ,, ಚಿಂತಪ್ಪ ಜೋಯಿಸರು, ಜಮೀನ್ದಾರು, ... ಡಿಟೋ
7. ,, ಲಿಂಗಪ್ಪಗೌಡರು, ಜಮೀನ್ದಾರು ವ ಪಟೇಲರು .. ಡಿಟೋ
8. ,, ಕೆಂಚಯ್ಯಗೌಡರು, ಜಮೀನ್ದಾರು ವ ವರ್ತಕರು .. .. ಡಿಟೋ

(f) ಕ್ಲಾಜ್ ಅನುಸರಿಸಿ.

9. ,, ಪೆನ್ನೂರು ಲಕ್ಷ್ಮೀಕಾಂತಪ್ಪನವರು .. ... ಡಿಟೋ

(g) ಕ್ಲಾಜ್ ಅನುಸರಿಸಿ.

10. ,, ಹೊಸಬಲೆ ರಾಮಪ್ಪನವರು, ಜಮೀನ್ದಾರು ವ ಸಾಹುಕಾರು .. ಡಿಟೋ
11. ,, ಮಾಗೂರು ಕೃಷ್ಣಾಚಾರ್ರು, ಜಮೀನ್ದಾರು ವ ಇನಾಂದಾರು ... ಡಿಟೋ
12. ,, ಅಣವಟ್ಟಿ ವಿರೂಪಾಕ್ಷಪ್ಪನವರು, ಜಮೀನ್ದಾರು ವ ಸಾಹುಕಾರು .. ಡಿಟೋ

ತಾರೀಖು 7ನೆ ಜೂನ್ 1904.

ನಂ. 4769—ಲೋ. ಫಂ. 82–03, ಸನ್1902ನೆ ಇಸವಿಯ IIನೆ ನಂಬರ್ ಲೋಕಲ್ ಬೋರ್ಡುಗಳ ರೆಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ಮತ್ತು 1903ನೆ ಸೆಪ್ಟಂಬರ್ 9ನೆ ಮಾರ್ಸ್ಟಂ 30—ಲೆಜಿಸ್. 4-03ನೆ ನಂಬರ್ ಇಸ್ತಿಹಾರ್ನಾಮೆಯೊಡನೆ ಘಾಯಿಷಾದ ರೂಲುಗಳ 21ನೆ ಪ್ಯಾರಾ ಅನುಸರಿಸಿ, ಹಾಲಿ ಇರುವ ಖಾಲಿಗಳನ್ನು ಭರ್ತಿ ಮಾಡುವ ಬಗ್ಯೆ ಎಡಹಳ್ಳಿ ತಾಲ್ಲೂಕು ಬೋರ್ಡಿನ ಮೆಂಬರುಗಳಾಗಿ ಇದರಡೀ ಕಂಡ ದೊಡ್ಡ ಮನುಷ್ಯರು ಮೊಕರರ್ಮಾಡಲ್ಪಟ್ಟಿರುತ್ತಾರೆ :—

ಇತರ ಮೆಂಬರುಗಳು.

7ನೆ ರೂಲು (e) ಕ್ಲಾಜ್ ಅನುಸರಿಸಿ.

ಮೆ॥ ರಾಪುರು ಶೇಷಣ್ಣನವರು, ಪಟೇಲರು ವ ಜಮೀನ್ದಾರು . ... ಮೆಂಬರು.

(f) ಕ್ಲಾಜ್ ಅನುಸರಿಸಿ.

ಮೆ॥ ಇಂಗ್ಲಗೊಂದಿ ಶಾಂತಪ್ಪ ಶೆಟ್ಟರು . ... ಡಿಟೋ

2. ಚಿಕ್ಕಮಗಳೂರ ತಾಲ್ಲೂಕು ಬೋರ್ಡಿನ ವೈಸ್ ಪ್ರೆಸಿಡೆಂಟರಾಗಿ ಚಿಕ್ಕಮಗಳೂರಲ್ಲಿರುವ ಪಬ್ಲಿಕ್ ವರ್ಕ್ಸ್ ಸಬ್ ಡಿವೀಜನ್ ಆಫೀಸರಾದ ಮೆ॥ ಸಿ. ಕೆ. ಸ್ವಾಮಿನಾಥ ಐಯ್ಯರ್ ರವರ ಚುನಾವಣೆಯನ್ನು ಕುರಿತು ಮತ್ತು ಮೂಡಗೆರೆ ತಾಲ್ಲೂಕು ಬೋರ್ಡಿನ ವೈಸ್ ಪ್ರೆಸಿಡೆಂಟರಾಗಿ ಮೂಡಗೆರೆಯ ಚಂದ್ರಾಪುರ ಎಸ್ಟೇಟಿನ ಶಾಫಿಪ್ಲಾಂಟರಾದ ಮೆ॥ ಜೆ. ಜೆ. ಹ್ಯಾಮಿಲ್ಟನ್ ಯವರ ಚುನಾವಣೆಯನ್ನು ಕುರಿತು ರೂಲುಗಳ 9ನೆ ಪ್ಯಾರಾ ಅನುಸರಿಸಿ ಗವರ್ನ್ಮೆಂಟಿನವರು ಕಾಯಂ ಮಾಡಿರುತ್ತಾರೆ.

955

ತಾರೀಖು 8ನೆ ಜೂನ್ 1904.

ನಂ. ಜ. 6190, ಸನ್ 1903ನೆ ಫೆಬ್ರವರಿ 23ನೆ ಮಾರ್ಚ್ 12248-9—ಮಿ. 1973ನೆ ನಂಬರಿ ಗವರ್ನ್ಮೆಂಟಿನ ಪ್ರೊಸೀಡಿಂಗ್ಸಿನಲ್ಲಿ ಎರಡನೇ ಕ್ಲಾಸಿನ ಹಂಗಾಮಿ ಆಸ್ಪಟಲ್ ಅಸಿಸ್ಟೆಂಟರಾಗಿ ನೇಮಕರನ್ನಾಗಿ ಮಾಡಲ್ಪಟ್ಟ ಎಂ. ಸವಾಸಿರ್ವ ಯವರು 1903ನೆ ಮಾರ್ಚಿ 19ನೆ ತಾರೀಖಿನಾರಭ್ಯ ತಮ್ಮ ಕೆಲಸದಲ್ಲಿ ಕಾಯಂ ಮಾಡಲ್ಪಟ್ಟಿರುತ್ತಾರೆ.

ತಾರೀಖು 18ನೆ ಮೇ 1904.

ನಂ. ರ. 3511, ಸನ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಗಾಂಠಾಣ ಯಾ ಗ್ರಾಮವನ್ನು ಉಂಟುಮಾಡಲಿಕ್ಕೆ ಬೇಕಾಗಿರುತ್ತದೆ. ಮತ್ತು ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಆಫೀಸರವರು ಮೇಲ್ಕಂಡ ರೆಗ್ಯುಲೇಷನಿನ 3 (c) ವ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿ(ದಾರ) ಹೆಸರು.	ಬೇಕಾಗಿರುವ ಜಮೀನಿನ ವಿವರ.			ಚೆಕ್ಕುಬಂದಿ.			
					ಸರ್ವೆ ನಂ.	ವಿಸ್ತೀರ್ಣ.	ದಾಮಾಷಾ ಆಕಾರ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕೋಲಾರ	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ಲಿಂಗಸೆಟ್ಟಿಪುರ	ಪಟೇಲ್ ನಲ್ಲಪ್ಪ	28ರ ಭಾಗ	ಎ. ಗು. 2—0	ರೂ. ಆ. ಪೈ. 3—0—0	ಸರ್ವೆ ನಂ. 29	ಸರ್ವೆ ನಂ. 31 ಮತ್ತು ಹಳೇ ಗಾಂಠಾಣ	ಸರ್ವೆ ನಂ. 26 ವ 27	ಸರ್ವೆ ನಂ. 30

ತಾರೀಖು 18ನೆ ಮೇ 1904.

ನಂ. ರೆ. 3513, ಸನ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಶಿವಸಮುದ್ರಂ ಜಹಗೀರಿಗೆ ಸೇರಿದ ಬೆಳಕವಾಡಿಯಲ್ಲಿ ಕಾವೇರಿ ಪವರ್ ಕೆಲಸಗಳಿಗೋಸ್ಕರ ಬೇಕಾಗಿರುತ್ತವೆ. ಮತ್ತು ಮೈಸೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಮಾಲೀಕರ ಹೆಸರು.	ವಿವರ.	ಸರ್ವೆ ನಂ.	ಜಮೀನಿನ ತಪಸೀಲು.		ತೆಗದುಕೊಳ್ಳಬೇಕಾಗಿರು ಜಮೀನು.	ಚೆಕ್ಕುಬಂದಿ.			
							ವಿಸ್ತೀರ್ಣ.	ಆಕಾರ.		ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಮಳವಳ್ಳಿ	ಪುರಗಳಿ	ಸರ್ವಮಾನ್ಯ ಬೆಳಕವಾಡಿ	ಶಿವಸಮುದ್ರದ ಜಹಗೀರ್ದಾರಾದ ಮೆ॥ ಆನಂದರಾಯ ಮೊದಲಿಯಾರು	ಖರಾಬ್	371	ಎ. ಗು. 492—29	...	ಎ. ಗು. 32—0	ಕಾವೇರಿನದಿ ಮತ್ತು ಸರ್ವೆ ನಂ. 371ರ ಭಾಗ	ಸರ್ವೆ ನಂ. 371ರ ಭಾಗ	ಸರ್ವೆ ನಂ. 371 ವ 374ರ ಭಾಗ	ಸರ್ವೆ ನಂ. 371ರ ಭಾಗ

ತಾರೀಖು 18ನೆ ಮೇ 1904.

ನಂ. 3517, ಸರ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷರ್ ರೆಗ್ಯುಲೇಷನಿನ 6ನೆ ಸೆಕ್ಷರ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜವಿಾನು ಸರ್ಕಾರ ಕೆಲಸಕ್ಕೆ ಅಂದರೆ, ಕೋಲಾರ ತಾಲ್ಲೂಕು ಚಲ್ಲಹಳ್ಳಿ, ಹೊಸ ಗ್ರಾಮ ನಿವೇಶನಕ್ಕೋಸ್ಕರ ಬೇಕಾಗಿರುತ್ತದೆ. ಮತ್ತು ಕೋಲಾರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಾಷನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷರ್ ಅನುಸರಿಸಿ ಸದರೀ ಜವಿಾನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ: —

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಮಾಲೀಕರ ಹೆಸರು.	ಸರ್ವೆ ನಂ. ಮತ್ತು ತರಹೆ.	ವಿಸ್ತೀರ್ಣ.	ಆಕಾರ.	ಬೇಕಾಗಿರುವ ವಿಸ್ತೀರ್ಣ.	ಚಕ್ಕುಬಂದಿ.			
									ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕೋಲಾರ	ಕೋಲಾರ	ವಕ್ಕಲೇರಿ	ಚಲ್ಲಹಳ್ಳಿ	ಮುನಿಯಪ್ಪ ಬಿನ್ ಬೈರಪ್ಪ	69—2 ಖುಷ್ಕಿ	ಎ. ಗು. 2—20	ರೂ. 5—0—0	ಎ. ಗು. 1—20	ಮುನಿಕೊಂಡನ ಕಂದಾಯದ ಜವಿಾನು	ತೋಟಿ ಇನಾಂ ಸರ್ವೆ ನಂ. 68	ರಾಮಣ್ಣನ ಕಂದಾಯದ ಜವಿಾನ ಸರ್ವೆ ನಂ. 7	ಸರ್ವೆ ನಂ. 70 ಸರ್ಕಾರಿ

ತಾರೀಖು 18ನೆ ಮೇ 1904.

ನಂ. 3519, ಸರ್1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷರ್ ರೆಗ್ಯುಲೇಷನಿನ 6ನೆ ಸೆಕ್ಷರ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜವಿಾನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಮಂಡ್ಯದ ತಾಲ್ಲೂಕು ಕೀಲಘಟ್ಟ ಗ್ರಾಮದಲ್ಲಿರುವ ಅಣೆ ಕಾಲವೆ ವಿಾಯು ಕಾಪಾಡುವದಕ್ಕೋಸ್ಕರ ನೀರು ಹರಿದುಹೋಗುವ ಮಾರ್ಗವನ್ನು ಸಮಿಾಪದಲ್ಲಿರುವ ಕಾಡುಹೊಳೆಗೆ ತಿರುಗಿಸುವ ಬಗ್ಗೆ ಬೇಕಾಗಿರುತ್ತವೆ. ಮತ್ತು ಮೈಸೂರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಾಷನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷರ್ ಅನುಸರಿಸಿ ಸದರೀ ಜವಿಾನುಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಮಾಲೀಕರ ಹೆಸರು.	ವಿವರ.	ಸರ್ವೆ ನಂ.	ಜವಿಾನಿನ ವಿವರ.					ಬೇಕಾಗಿರುವ ಜವಿಾನು.	ಚಕ್ಕುಬಂದಿ.			
							ವಿಸ್ತೀರ್ಣ.		ಆಕಾರ.				ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ.	ಗು.	ರೂ.	ಆ.	ಪೈ.					
ಮೈಸೂರು.	ಮಂಡ್ಯ	ಅಣೆ	ಕೀಲಘಟ್ಟ	ಮುಟ್ಟಿ ಲಿಂಗೆಗೌಡ.	ಬಾಗಾಯ್ತು	201	1	33	10	0	0	20 ಗುಂಟೆಗಳು	ಸರ್ವೆ ನಂ. 202	ಸರ್ವೆ ನಂ. 197	ಹಳ್ಳ	ಹಳ್ಳ
					ಡಿಟೋ	...	1	25	8	0	0		ಸರ್ವೆ ನಂ. 201	ಸರ್ವೆ ನಂ. 199 ಮತ್ತು ಹಳ್ಳ	ಸರ್ವೆ ನಂ. 200	ಡಿಟೋ
				ಮಲ್ಲೆಗೌಡ.	ಖುಷ್ಕಿ	197	0	17	0	8	0					
					ಬಾಗಾಯ್ತು	..	0	21	3	0	0					
					ಖುಷ್ಕಿ	199	0	17	0	8	0		ಸರ್ವೆ ನಂ 197	ಹಳ್ಳ	ಹಳ್ಳ	ಸರ್ವೆ ನಂ 197

ತಾರೀಖು 25ನೆ ಮೇ 1904.

ನಂ. ರೆ. 3616, ಸನ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಬೆಂಗಳೂರು ಡಿಸ್ಟ್ರಿಕ್ಟು ನೆಲಮಂಗಲ ತಾಲ್ಲೂಕಿನಲ್ಲಿರುವ ಹೆಸರಘಟ್ಟದ ಕೆರೆಗೆ ಹೊಸ ಕೋಡಿಯನ್ನು ಕಟ್ಟುವ ಬಗ್ಗೆ ಬೇಕಾಗಿರುತ್ತವೆ. ಮತ್ತು ಬೆಂಗಳೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರ್ರ ಹೆಸರು.	ಜಮೀನಿನ ವಿವರ.						ಚಕ್ಕುಬಂದಿ.			
				ಸರ್ವೆ ನಂ.	ವಿಸ್ತೀರ್ಣ.		ಆಕಾರ.			ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
					ಎ.	ಗು.	ರೂ.	ಆ.	ಪೈ.				
ನೆಲಮಂಗಲ.	ದಾಸನಪುರ.	ಹೆಸರಘಟ್ಟ.	ನರಸಿಹ್ಮಾಚಾರ್ರು ...	88—2	1	15	1	8	0	ಸರ್ವೆ ನಂ. 95—3	ಸರ್ವೆ ನಂ. 88—2	ಕೆರೆ ನೀರಿನ ಕಾಲವೆ	ಸರ್ವೆ ನಂ. 88—4
			ಬೈರಪ್ಪ ...	88—4	1	0	1	4	0	ಡಿಟೋ	ಸರ್ವೆ ನಂ. 88—4	ಸರ್ವೆ ನಂ. 88—2	ಸರ್ವೆ ನಂ. 90—3
			ಮಾರಹನುಮಯ್ಯ ...	90—3	1	13	2	4	0	ಕೋಡಿ ಕಾಲವೆ	ಸರ್ವೆ ನಂ. 90—3 ಮಿಕ್ಕಭಾಗ	ಸರ್ವೆ ನಂ. 90—4	ಸರ್ವೆ ನಂ. 91—3
			ಡಿಟೋ ...	90—4	1	39	2	8	0	ಡಿಟೋ	ಡಿಟೋ	ಸರ್ವೆ ನಂ. 88—4	ಸರ್ವೆ ನಂ. 90—3
			ಮೂಡ್ಲಪ್ಪ ...	91—2	2	0	2	8	0	ಡಿಟೋ	ಸರ್ವೆ ನಂ. 91—2	ಸರ್ವೆ ನಂ. 91—3	ಸರ್ವೆ ನಂ. 91—1
			ರಾಮನ ಹೆಂಡತಿ ಕೆಂಪಿ ...	91—3	1	19	1	12	0	ಡಿಟೋ	ಮಿಕ್ಕಭಾಗ ಡಿಟೋ	ಸರ್ವೆ ನಂ. 90—4	ಸರ್ವೆ ನಂ. 91—2
			ವೆಂಕಟನಾರಾಯಣಶಾಸ್ತ್ರಿ (ಅನುಭವದಾರ್) ವಿಶ್ವನಾಥಶಾಸ್ತ್ರಿ.	95—2	4	14	5	4	0	ಕೆರೆಯ ಬಡಲು	ಸರ್ವೆ ನಂ. 88—1	ದಾಸರಹಳ್ಳಿ ಎಲ್ಲೆ	ಕೆರೆ
			ಬೆಂಗಳೂರು ಸುಬ್ಬಯ್ಯ ಮತ್ತು ವೀರರಾಘವಭಟ್ಟ ಬೈರಪ್ಪ. (ಅನುಭವದಾರ್).	95—3	1	19	1	12	0	ಕೋಡಿ ಕಾಲವೆ	ಸರ್ವೆ ನಂ. 88—4	ಕೆರೆ	ಸರ್ವೆ ನಂ. 90—3

ತಾರೀಖು 20ನೆ ಮೇ 1904.

ನಂ. ರೆ. 3554, ಸನ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಆಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕಿನ ತಮಕಾ ಗ್ರಾಮದಲ್ಲಿ ಹೊಸ ಗ್ರಾಮ ನಿವೇಶನವನ್ನುಂಟುಮಾಡಲಿಕ್ಕೆ ಬೇಕಾಗಿರುತ್ತವೆ. ಮತ್ತು ಕೋಲಾರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಸದರಿ ಜಮೀನುಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ತಾಲ್ಲೂಕಿನ ಹೆಸರು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಜಮೀನಿನ ವಿವರ. ಸರ್ವೆ ನಂ.	ಎಕರೆ.	ಗುಂಟೆ.	ಆಕಾರ.	ಬೇಕಾಗಿರುವ ಜಮೀನು. ಸರ್ವೆ ನಂ.	ಎಕರೆ.	ಗುಂಟೆ.	ಆಕಾರ.	ಚಕ್ಕುಬಂದಿ. ಉತ್ತರ.	ಪೂರ್ವ.	ದಕ್ಷಿಣ.	ಪಶ್ಚಿಮ.
							ರೂ. ಆ. ಪೈ.				ರೂ. ಆ. ಪೈ.	ಸರ್ವೆ ನಂ.	ಸರ್ವೆ ನಂ.	ಸರ್ವೆ ನಂ.	ಸರ್ವೆ ನಂ.
ಕೋಲಾರ	ಕೋಲಾರ	ತಮಕಾ	ತಿಮ್ಮಯ್ಯ ಬಿನ್ ಚೆಂಗಪ್ಪ ಲಡ್ಡಿ ಖಾನ್	ಖುಷ್ಕಿ 126	4	5	8 0 0	ಖುಷ್ಕಿ 126	4	5	8 0 0	126	128	127	125
			ನರಸ ಬಿನ್ ಗಂಗ, ಚಂಬಾರ.	ಖುಷ್ಕಿ 128/1	2	24	5 8 0	ಖುಷ್ಕಿ 128	2	24	5 8 0	ಸರ್ವೆ ನಂ. 128	ಸರ್ವೆ ನಂ. 129	ಡಿಟೋ	ಸರ್ವೆ ನಂ. 126
			ವೆಂಕಟರಮಣ ಬಿನ್ ವೆಂಕಟಿಗ	ಖುಷ್ಕಿ 128/2	2	28			2	28					
					9	17	13 8 0		9	17	13 8 0				

ತಾರೀಖು 25ನೆ ಮೇ 1904.

ನಂ. ರೆ. 3320, ಸನ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಆಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡಿ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ನಂಜನಗೂಡು ತಾಲ್ಲೂಕು ಚಾಮಲಾಪುರ ಗ್ರಾಮದಲ್ಲಿ ಫಾರೆಸ್ಟು ಡಿಪೋವಿಗೋಸ್ಕರ ಬೇಕಾಗಿರುತ್ತೆ. ಮತ್ತು ಮೈಸೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರವರು ಮೇಲ್ಕಂಡ ರೆಗ್ಯುಲೇಷನಿನ VIIನೆ ಸೆಕ್ಷನ್ ಅನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರರ ಹೆಸರು.	ಬೇಕಾಗಿರುವ ಜಮೀನಿನ ವಿವರ. ಸರ್ವೆ ನಂ.	ವಿಸ್ತೀರ್ಣ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ನಂಜನಗೂಡು	ನಂಜನಗೂಡು	ಚಾಮಲಾಪುರ	ಪಟ್ಟೇದಾರ್ ಅಣ್ಣೆ ದೇವೆ ಗೌಡ ಮತ್ತು ಕಾಯಂಗಡಿ ಅಂಕೆಗೌಡ. 1. ಅಂಣೆ ದೇವೆ ಗೌಡ, 2. ಚಿಕ್ಕ ಪುಟ್ಟೆಗೌಡ, 3. ಅಂಕಪ್ಪ ಉರ್ಫ್ ಮುನಿಗ ಇವರ ಸ್ವಾಧೀನ ಮತ್ತು ಅನುಭವದಲ್ಲಿರುತ್ತೆ.	78	ಎ. ಗು. ಖುಷ್ಕಿ 4—11 ಖರಾಬಿಗೋಸ್ಕರ 30 ಗುಂಟೆಗಳು ವಜಾ.	ಸರ್ಕಾರಿ ಹಳ್ಳ ಮತ್ತು ಸರ್ವೆ ನಂ. 73 ಮತ್ತು 77	ಸರ್ವೆ ನಂ. 80	ಹಳ್ಳಿ ಕಾಲು ದಾರಿ ಮತ್ತು ಸರ್ವೆ ನಂ. 40 (ಹೊಲ)	ಕೆರೆ ಹಳ್ಳ ಮತ್ತು ಸರ್ವೆ ನಂ. 32

ತಾರೀಖು 25ನೆ ಮೇ 1904.

ನಂ. ರೆ. 3618, ಸನ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡಿ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ, ಅಂದರೆ, ಮಂಡ್ಯದ ತಾಲ್ಲೂಕು ಹಿಂದುಬಾಳು ಗ್ರಾಮದಲ್ಲಿ 271 – 10ನೆ ಮೈಲಿಯಲ್ಲಿರುವ ಪರಿಯನ್ನು ಪುನಃ ಏರಿಸುವ ಬಗ್ಗೆ ದಕ್ಷಿಣ ಮಹರಾಟಾ ರೈಲ್ವೆ ಕಂಪನಿಯವರಿಂದ ಬೇಕಾಗಿರುತ್ತವೆ. ಮತ್ತು ಮೈಸೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟ್.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಖುಷ್ಕಿ + ತರಿ.	ಸರ್ವೆ ನಂ.	ಜಮೀನಿನ ವಿವರ.		ಹೊಂದಬೇಕಾಗಿರುವ ಜಮೀನಿನ ವಿವರ.	ಚಕ್ಕುಬಂದಿ.			
							ವಿಸ್ತೀರ್ಣ.	ಆಕಾರ.	ವಿಸ್ತೀರ್ಣ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.	ರೂ. ಆ.	ಎ. ಗು.				
ಮೈಸೂರು	ಮಂಡ್ಯ	ಕೊತ್ತತಿ	ಹಿಂದುಬಾಳು	ತಿಮ್ಮೆಗೌಡನ ಮಗ ಹೊನ್ನಗೇರಿ ಗೌಡ.	ಖುಷ್ಕಿ	5	5—18	5— 8	.. 1—52	ಬಸವಾಚಾರಿಯ ಹೊಲ	ದೇವ ಹೊನ್ನನ ಹೊಲ	ರೈಲ್ ರಸ್ತೆ	ಹೊನಗೇರಿ ಗೌಡನ ಜಮೀನು
				ಬೋರ, ಕಾಳ.	ಡಿಟೋ	36/2	1—8	0—12	... 1—21	ಗೆರಗಿ ಚೆನ್ನನ ಹೊಲ	ಗರಗಿ ಹೊನ್ನನ ಹೊಲ.	ಬೋರ ಮತ್ತು ಕಾಳನ ಜಮೀನು	ರೈಲ್ ರಸ್ತೆ
				ಗೆರಗಿದೇವನ ಮಗ ಚಾಮ.	ಡಿಟೋ	36/3	2—16	2— 0	.... 3—07	ಡಿಟೋ	ಗಿರಿಯದಾಸ, ಮತ್ತು ಮಾಯಿಯ ಹೊಲ	ಚಾಮನ ಹೊಲ	ಡಿಟೋ
				ಬೋರ, ಮೂಲೆಹಳ್ಳಿ ಚವುಡನ ಮಗ ಕಾಳ.	ಡಿಟೋ	43/1	1—22	1—12	.. 2—15	ಬಸರ ಜಟ್ಟಯ ಹೊಲ	ಹೊನ್ನಗೇರಿ ಗೌಡನ ಹೊಲ	ರೈಲ್ ರಸ್ತೆ	ಬೋರ ಮತ್ತು ಕಾಳನಿಗ ಸೇರಿದ ಜಮೀನು

ತಾರೀಖು 31ನೆ ಮೇ 1904.

ನಂ. ರೆ. 3681, ಸನ್ 1888ನೆ ಇಸವಿಯ IVನೆ ನಂಬರ್ ರೆಗ್ಯುಲೇಷನ್ ಆದ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 236ನೆ ಸೆಕ್ಷನ್ ಅನುಸರಿಸಿ ಸದರೀ ಕೋಡಿನ VIII ರಿಂದ Xರ ವರೆಗಿನ ಅಧ್ಯಾಯಗಳ ನಿಯಮಗಳನ್ನು ಶಿವಮೊಗ್ಗ ತಾಲ್ಲೂಕು ಬೆಂಕಿಪುರ ಮಾಗಣಿಯಲ್ಲಿರುವ ದೇವರ್‌ನರಸೀಪುರ ಜೋಡಿ ಗ್ರಾಮಕ್ಕೆ ಲಗುವು ಮಾಡುವ ಬಗ್ಗೆ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಅಪ್ಪಣೆ ಕೊಡುತ್ತಾರೆ.

ತಾರೀಖು 31ನೆ ಮೇ 1904.

ನಂ. ರೆ. 3688—ರೆಂ ಫೈ. 70 - 1896, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಕೋಲಾರ ತಾಲ್ಲೂಕಿನ ಅಮಲ್‌ದಾರ್‌ರಾದ ಮ॥ ಎ. ಕೃಷ್ಣಸ್ವಾಮಯ್ಯಂಗಾರ್, ಬಿ. ಎ., ಯವರಿಗೆ 1904ನೆ ಫೆಬ್ರವರಿ 24ನೆ ತಾರೀಖಿನ ಲಾಗಾಯತು 7 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು. ತಾಲ್ಲೂಕಿನ ಷಿರಸ್ತೆದಾರ್ರು, ಸದರೀ ರಜಾ ಕಾಲದಲ್ಲಿ, ತಾಲ್ಲೂಕಿನ ಚಾರ್ಜಿನಲ್ಲಿದ್ದರು.

ತಾರೀಖು 6ನೆ ಜೂನ್ 1904.

ನಂ. ರೆ. 3809, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟ್ ಚಿಂತಾಮಣಿ ತಾಲ್ಲೂಕಿನ ಆಕ್ಟಿಂಗ್ ಅಮಲ್ದಾರ್‌ರಾದ ಮ॥ ಬಿ. ಎನ್. ಚೆನ್ನಿಗಪ್ಪ, ಬಿ. ಎ., ಯವರಿಗೆ 1904ನೆ ಏಪ್ರೆಲ್ 3ನೆ ತಾರೀಖಿನಾರಭ್ಯ 12 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

2. ಮೇಲ್ಕಂಡ ರಜಾ ಕಾಲದಲ್ಲಿ ತಾಲ್ಲೂಕು ಷಿರಸ್ತೇದಾರ್‌ರಾದ ಲಕ್ಷ್ಮೀನಾರಣಪ್ಪನವರು ತಾಲ್ಲೂಕಿನ ಚಾಲ್ತಿ ಕೆಲಸಗಳ ಚಾರ್ಜಿನಲ್ಲಿದ್ದರು.

ತಾರೀಖು 4ನೆ ಜೂನ್ 1904.

ನಂ. ರೆ. 3795, ಸನ್ 1894ನೆ ಇಸವಿಯ VIIನೆ ನಂಬರ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಸೀರಾ ತಾಲ್ಲೂಕಿನಲ್ಲಿರುವ ಚಿಕ್ಕಸಂದ್ರದ ಒಳಕೆರೆಗೆ ಸೇರಿಸಿಕೊಳ್ಳುವ ಬಗ್ಗೆ ಬೇಕಾಗಿರುತ್ತವೆ. ತುಮಕೂರ ಡಿಸ್ಟ್ರಿಕ್ಟಿನ ಮೊದಲನೆ ಅಸಿಸ್ಟೆಂಟ್ ಕಮಿಷನರವರು ಮೇಲ್ಕಂಡ ರೆಗ್ಯುಲೇಷನಿನ 3 (ಸಿ) ವ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳೀದಾರರ ಹೆಸರು.	ಜಮೀನಿನ ತಪಶೀಲು.			ಚೆಕ್ಕುಬಂದಿ.			
					ಸರ್ವೆ ನಂ.	ಬೇಕಾಗಿರುವ ಜಮೀನಿನ ವಿವರ.	ಬೇಕಾಗಿರುವ ಜಮೀನು.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ.—ಗು.				
ತುಮಕೂರು	ಸೀರಾ	ಸೀರಾ	ಲಿಂಗದಹಳ್ಳಿ	ಬಿಂಧು ಮಧ್ವಾಚಾರ್ರು.	16ರ ಭಾಗ	ಖುಷ್ಕಿ	2—36	ಸರ್ವೆ ನಂ. 16ರ ಭಾಗ	ಸರ್ವೆ ನಂ. 17ರ ಭಾಗ	ಸರ್ವೆ ನಂ. 16ರ ಭಾಗ	ಹಳ್ಳ
				ಹನುಮಂತಾಚಾರ್ರು.	17ರ ಭಾಗ	ಡಿಟೋ	1—10	ಡಿಟೋ	ಸರ್ವೆ ನಂ. 18ರ ಭಾಗ	ಡಿಟೋ 17ರ ಭಾಗ	ಡಿಟೋ
				ಕೃಷ್ಣಾಚಾರ್ರು...	...	ಬಾಗಾಯತು	6—26				
							7—36				
					18ರ ಭಾಗ	ಖುಷ್ಕಿ	7—38	ಎಸ್ ನಂ. 17	ಎಸ್ ನಂ. 21	ಡಿಟೋ ನಂ. 18	ಡಿಟೋ
						ಬಾಗಾಯತು	7—28				
							15—26				
					20ರ ಭಾಗ	ಖುಷ್ಕಿ	9—6	ಡಿಟೋ 19	ಡಿಟೋ	ಡಿಟೋ 22	ಸರ್ವೆ ನಂ. 18ರ ಭಾಗ
					21	ಡಿಟೋ	48—30	ಡಿಟೋ 18 ವ 20	ಹೊನ್ನೇನಹಳ್ಳಿ ಎಲ್ಲೆ	ಡಿಟೋ	ಹೊನ್ನೇನಹಳ್ಳಿ ಎಲ್ಲೆ
					22ರ ಭಾಗ	ಡಿಟೋ	9—39	ಸರ್ವೆ ನಂ. 23	ಸರ್ವೆ ನಂ. 21	ಚಿಕ್ಕಸಂದ್ರ ಕೆರೆ	ಸರ್ವೆ ನಂ. 20 ವ 21
					ಜುಮ್ಲಾ	...	94—7				
						ಖುಷ್ಕಿ	79—33				
						ಬಾಗಾಯತು	14—14				

ತಾರೀಖು 6ನೆ ಜೂನ್ 1904.

ನಂ. ರೆ. 3839—ರೆ. ಫೈ. 8-1902, ಸನ್ 1901ನೆ ಜುಲೈ 12ನೆ ಮಧ್ಯಕಂ 264—122ನೆ ನಂಬರ ಇಸ್ತಿಹಾರ್ನಾಮೆಯನ್ನನುಸರಿಸಿ ಖಾಯಿಮಾದ ಮೈಸೂರು ಲ್ಯಾಂಡ್ ರೆವಿನ್ಯೂ ರೂಲುಗಳ 5ನೆ ರೂಲಿನ ಉದ್ದೇಶಗಳಿಗೋಸ್ಕರ, ಸರ್ವೆ ವ ಸೆಟ್ಲ್‌ಮೆಂಟ್ ಕಮಿಷನರವರಿಂದ ಮಾಡಲ್ಪಟ್ಟ ಗ್ರಾಮ ಆಫೀಸರುಗಳ ಮ್ಯಾನುಯಲನ್ನು 1904ನೆ ಜುಲೈ ಗುರ್ರೆ ತಾರೀಖಿನಾರಭ್ಯ ಜಾರೀಲಿ ತರಲ್ಪಡುವದು.

ತಾರೀಖು 30ನೆ ಮೇ 1904.

ನಂ. ರೆ. 3665, ಸನ್ 1894ನೆ ಇಸವಿಯ VIIನೆ ನಂಬರ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ತುಮಕೂರು ಡಿಸ್ಟ್ರಿಕ್ಟು ತುಮಕೂರು ತಾಲ್ಲೂಕು ಗೂಳೂರು ಹೋಬಳಿಯಲ್ಲಿರುವ ಅರಿಯೂರು ಗ್ರಾಮದಲ್ಲಿ ಮನೆಗಳನ್ನು ಕಟ್ಟುವ ಬಗ್ಗೆ ಬೇಕಾಗಿರುತ್ತವೆ. ಮತ್ತು ಎರಡನೇ ಜನರಲ್ ಅಸಿಸ್ಟೆಂಟ್ ಕಮಿಷನರಾದ ಮ॥ ಪಿ. ಶ್ರೀನಿವಾಸರಾಯರು ಮೇಲ್ಕಂಡ ರೆಗ್ಯುಲೇಷನಿನ 3 (c) ವ 7ನೆ

ಸೆಕ್ಷನ್‌ಗಳನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳೀದಾರರ ಹೆಸರು.	ಸರ್ವೆ ನಂ.	ಜಮೀನಿನ ವಿಸ್ತೀರ್ಣ ಖರಾ ಮತ್ತು ವಿವರ.		ಬೇಕಾಗಿರುವ ಜಮೀನಿನ ವಿವರ.		ಚಕ್ಕುಬಂದಿ. ಉತ್ತರ.	ಪೂರ್ವ.	ದಕ್ಷಿಣ.	ಪಶ್ಚಿಮ.
						ಎ.	ಗು.	ಎ.	ಗು.				
ತುಮಕೂರು	ತುಮಕೂರು	ಗೂಳೂರು	ಅರಿಯೂರು	ಭದ್ರಮ್ಮ	3	19	ಖುಷ್ಕಿ 9	8	8	ಸರ್ವೆ ನಂ. 3ರ ಭಾಗ ಮತ್ತು ವೈದ್ಯನಾಥೇಶ್ವರ ದೇವರ ಹೆಸರಿನಲ್ಲಿರುವ ಇನಾಂ ಜಮೀನು	ಹಳೆಗ್ರಾಮ ನಿವೇಶನ ಮತ್ತು ಸಿದ್ದಲಿಂಗ ವ ಬಾಲೀಗೌಡನ ಖಾತೆಯಲ್ಲಿರುವ ಜಮೀನುಗಳು	ನರಸಯ್ಯನ ಖಾತೆಯಲ್ಲಿರುವ ಸರ್ವೆ ನಂ. 8ರ ಭಾಗ ಮತ್ತು ಸರ್ವೆ ನಂ. 3ರ ಭಾಗ	ಗ್ರಾಮನಿವೇಶನವಾಗಿ ಈಗ ಜಾನಾಯಿಸಲ್ಪಟ್ಟ ಸರ್ವೆ ನಂ. 6, 7 ವ 8 ಇವುಗಳ ಭಾಗ.
				ನರಸ ಬಿನ್ ನರಸಿಂಹ	6—1	3	ಡಿಟ್ಟೋ 23	1	25				
				ಹೊನ್ನ	6—2	4	ಡಿಟ್ಟೋ 30	1	3				
				ಈರಣ್ಣ ಬಿನ್ ಹೊನ್ನಯ್ಯ	6—3	3	ಡಿಟ್ಟೋ 5	..	..				
				ಸಿದ್ಧಲಿಂಗೇಗೌಡ	7	5	ಡಿಟ್ಟೋ 21	1	7				
				ತಿಮ್ಮಯ್ಯ ಬಿನ್ ಚಿಕ್ಕಣ್ಣ	ಡಿಟ್ಟೋ	5	ಡಿಟ್ಟೋ 24	1	2				
				ವೆಂಕಟ ಕೋಂ ವೆಂ	8	6	ಡಿಟ್ಟೋ 9	1	8				
				ಕಟವರವಾಣ (ಹಿಡುವಳೀದಾರ್ ಗುರುಮಲ್ಲಪ್ಪ) ನರಸಯ್ಯ	ಡಿಟ್ಟೋ	5	ಡಿಟ್ಟೋ 14	...	..				
								14	13				

ಹುಕುಂ ಬಮೋಜೀಬ್,
ಎಲ್. ಅನಂತಸ್ವಾಮಿರಾವ್,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಅಫಿಷಿಯೇಟಿಂಗ್ ಸೆಕ್ರೆಟರಿ.

ಫಾರೆಸ್ಟ್.

ಇಷ್ತಿಹಾರ್‌ನಾಮೆ.

ತಾರೀಖು 6ನೆ ಜೂನ್ 1904.

ನಂ. 907—10136, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 218ನೆ ಆರ್ಟಿಕಲ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟಿನ ಫಾರೆಸ್ಟು ಡೆಪ್ಯುಟಿ ಕನ್‌ಸರ್ವೇಟರಾದ ಮೆ|| ಎಸ್. ಎ. ಬಾಪೂರಾಯರಿಗೆ 1904ನೆ ಮೇ 26ನೆ ತಾರೀಖಿನ ಲಾಗಾಯತು ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ನಾಲ್ಕು ವಾರಗಳ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 7ನೆ ಜೂನ್ 1904.

ನಂ. 912—10165, ಶಿವಮೊಗ್ಗ ಡಿಸ್ಟ್ರಿಕ್ಟಿನ ಫಾರೆಸ್ಟು ಸಬ್ ಅಸಿಸ್ಟೆಂಟ್ ಕನ್‌ಸರ್ವೇಟರಾದ ಮೆ|| ಎಂ. ಶ್ರೀನಿವಾಸರಾಯರು ಮೈದಾನ ಪ್ರದೇಶದಲ್ಲಿ ಕೆಲಸಕ್ಕೆ ಲಾಯಖಾಗಿರುತ್ತಾರೆಂದು ಡಿಸ್ಟ್ರಿಕ್ಟು ಸರ್ಜನರವರು ಹೇಳಿರುವದ್ದರಿಂದ, 1904ನೆ ಮಾರ್ಚಿ 28ನೆ ಮರ್ಕೂಂ 747—7918ನೆ ನಂಬರ್ ಇಷ್ತಿಹಾರ್‌ನಾಮೆಯಲ್ಲಿ ಅವರಿಗೆ ಕೊಟ್ಟಿದ್ದ ರಜಾದಿಂದ 1904ನೆ ಮೇ 28ನೆ ತಾರೀಖಿನಾರಭ್ಯ ಅವರು ಕೆಲಸಕ್ಕೆ ವಾಪಸು ಕರೆಯಿಸಲ್ಪಟ್ಟು, ಮೆ|| ಎಸ್. ಎ. ಬಾಪೂರಾಯರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನ ಚಾರ್ಜಿಗೋಸ್ಕರ ಕೋಲಾರಿಗೆ ನೇಮಿಸಲ್ಪಟ್ಟಿರುತ್ತಾರೆ. ಉಪಯೋಗಿಸಿಕೊಳ್ಳದ ರಜಾ ಭಾಗವು ರದ್ದು ಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಎಂ. ಮುತ್ತಣ್ಣ,
ಫಾರೆಸ್ಟ್ ಇಲಾಖೆಯ ಗವರ್ನಮೆಂಟ್ ಅಫಿಷಿಯೇಟಿಂಗ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ.

ಇಸ್ತಿಹಾರ್ನಾಮೆ.

ತಾರೀಖು 2ನೆ ಜೂನ್ 1904.

ನಂ. 572–3252, ಮೈಸೂರು ಪಬ್ಲಿಕ ವರಕ್ಸ ಇಲಾಖೆಯ ಅಪ್ಪರ್ ಸಬಆರ್ಡಿನೇಟ್ ಸಿಬ್ಬಂದಿಯಲ್ಲಿ ಇದರಡಿ ಕಂಡ ಬದಲಿಗಳು ಮಾಡಲ್ಪಟ್ಟಿರುತ್ತವೆ:—

ಹೆಸರು.	ಎಲ್ಲಿಂದ.	ಎಲ್ಲಿಗೆ.	ಯಾವ ಲಾಗಾಯತು.	ಷರಾ.
ಎಚ್. ಎಸ್. ಕೃಷ್ಣಯ್ಯಂಗಾರ್ರು.	ಹಂಗಾಮಿ ಎರಡನೇ ಕ್ಲಾಸಿನ ಓವರ್ಸೀರು.	ಕಾಯಂ ಎರಡನೇ ಕ್ಲಾಸಿನ ಓವರ್ಸೀರು.	5 4 1904	ಮೃತಪಟ್ಟ ಎರಡನೇ ಕ್ಲಾಸಿನ ಓವರ್ಸೀರಾದ ಮೆ|| ಎಂ. ಆರ್. ಬ್ಯಾರೆಟೊ ಯವರಿಗೆ ಬದಲಾಗಿ.
ಎಂ. ಎಸ್. ನರಸಿಂಹಯ್ಯಂಗಾರ್ರು.	ಹಂಗಾಮಿ ಮೂರನೇ ಕ್ಲಾಸಿನ ಓವರ್ಸೀರು.	ಕಾಯಂ ಮೂರನೇ ಕ್ಲಾಸಿನ ಓವರ್ಸೀರು.	30 12 1903	ಮೃತಪಟ್ಟ ಮೂರನೇ ಕ್ಲಾಸಿನ ಓವರ್ಸೀರಾದ ಪಿ. ಶ್ರೀನಿವಾಸ ರಾಯರಿಗೆ ಬದಲಾಗಿ.

ಹುಕುಂ ಬಮೋಜಬ್,
ಡಬ್ಲ್ಯು. ಮೆಕ್‌ಹಚೀನ್,
ಪಬ್ಲಿಕ್ ವರ್ಕ್ಸ ಇಲಾಖಾ, ಮೈಸೂರು ಗವರ್ನ್ಮೆಂಟ್ ಸೆಕ್ರೆಟರಿ.